ಡಾ|| ದೇ. ಜವರೇಗೌಡ

ಜಾನಪದ ಅಧ್ಯಯನ

ಜನಪದಗೀತೆ • ಜನಪದಕಥೆ • ಜನಪದ ಕಥನ ಕಾವ್ಯ
ಐತಿಹ್ಯ-ಪುರಾಣಗಳು • ಕುಣಿತ ಮತ್ತು ಬಯಲಾಟ
ಗಾದೆಗಳು • ಒಗಟುಗಳು • ಮಾಟ-ಮಂತ್ರ • ನಂಬಿಕೆಗಳು
ಸಂಪ್ರದಾಯಗಳು ಮತ್ತು ಹಬ್ಬಗಳು • ಸಸ್ಯ ಜಾನಪದ
ಪ್ರಾಣಿ ಜಾನಪದ

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : ಮೈಸೂರು-೪

ಡಾ|| ದೇ. ಜವರೇಗೌಡ

ಜಾನಪದ ಅಧ್ಯಯನ

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : ಮೈಸೂರು-೪

JANAPADA ADHYAYANA: Studies in Folklore in Kannada by Dr. D. Javare Gowda, Professor of Kannada and Folklore, University of Mysore. Published by D. V. K. Murthy, Mysore-4. First Edition 1976; pp. xxiv + 380

ಮೊದಲ ಮುದ್ರಣ: ೧೯೭೬

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಅರ್ಪಣೆ

ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ

ಹಾಗೂ

ಕುಲಪತಿ ಡಾ. ಆರ್. ಸಿ. ಹಿರೇಮಠ ಅವರಿಗೆ

ಪರಿವಿಡಿ

ಜಾನಪದ ಅಧ್ಯಯನ

ಪೀಠಿಕೆ

೧

ಪ್ರಾಯಶಃ ಜಾನಪದದಷ್ಟು ವಿಶಾಲವೂ, ವ್ಯಾಪಕವೂ, ಸರ್ವಾತ್ಮಕವೂ ಆದ ಮತ್ತೊಂದು ಪದವಿಲ್ಲವೆಂದು ತೋರುತ್ತದೆ. ಹರಿಯ ಬಸುರಲ್ಲಿ ಬ್ರಹ್ಮಾಂಡವಡಗಿರುವಂತೆ ಜಾನಪದದ ಕುಕ್ಷಿಯಲ್ಲಿ ಜಗತ್ತೆಲ್ಲ ಹುದುಗಿದೆ. ಪ್ರಾಚೀನ ಅರ್ವಾಚೀನಗಳೆರಡೂ ಅದರಲ್ಲಿ ಸಂಧಿಸಿ ಪರಸ್ಪರ ಕೈಕುಲುಕುತ್ತವೆ. ಅದಕ್ಕೆ ಆದಿಅಂತ್ಯಗಳಿಲ್ಲ. ಅದರ ಅವಶೇಷಗಳಿಗೆ ಸಾವಿಲ್ಲ. ಆಧುನಿಕ ಮಾನವನಲ್ಲಿ ಆದಿಮಾನವತನ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುವಂತೆ, ಬೀಜದಲ್ಲಿ ವೃಕ್ಷವಡಗಿರುವಂತೆ, ಆಧುನಿಕ ಕಲೆ ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನಗಳಲ್ಲಿ ಜಾನಪದ ಚೈತನ್ಯ ಸುಪ್ತವಾಗಿರುತ್ತದೆ; ಒಮ್ಮೊಮ್ಮೆ ಲಾವಾರಸದಂತೆ ಹೊರಸಿಡಿಯುವುದೂ ಉಂಟು.

ಅದು ಆದಿಮಾನವನ ಅಥವಾ ಅನಾಗರಿಕ ಮಾನವನ ಸೃಷ್ಟಿಯೆಂಬ ಕಾರಣದಿಂದ ದೂಷ್ಯವಲ್ಲ. ಆಧುನಿಕ ಮಾನವನ ಮೂಲಪುರುಷನನ್ನು ಹಿಂದುಹಿಂದಕ್ಕೆ ಹುಡುಕಿಕೊಂಡು ಹೋದದ್ದಾದರೆ, ಕೊನೆಗೆ ದೃಷ್ಟಿಗೋಚರವಾಗುವವನು ಆದಿಮಾನವ. ಅಂತೆಯೆ ವೈಜ್ಞಾನಿಕ ನಾಗರಿಕತೆಯ ಹಾಗೂ ಅರ್ವಾಚೀನ ಕಲೆಗಳ ತಾಯಿಬೇರುಗಳನ್ನು ಪ್ರಾಚೀನ ಜಾನಪದದಲ್ಲಿ ಗುರುತಿಸಬಹುದು. ಮುತ್ತಜ್ಜನೆಂತು ಮುಮ್ಮಗನಿಗೆ ಪೂಜ್ಯನೋ ಅಂತೆಯೇ ಶಿಷ್ಟಪದಕ್ಕೆ ಜಾನಪದ ಆರಾಧ್ಯವಾಗುತ್ತದೆ. ಇಂದು ಮಾನವ ಜೀವನವನ್ನು ನಡೆಯಿಸುತ್ತಿರುವ ಚೈತನ್ಯವೇ ಅಂದೂ ನಡೆಯಿಸುತ್ತಿತ್ತು. ಜೀರ್ಣಗೊಂಡ ವೃಕ್ಷ ಮಣ್ಣುಪಾಲಾದರೂ, ಹೂವು ದೂಳಿನಲ್ಲಿ ದೂಳಾದರೂ ಅದರ ಬೀಜದಿಂದಲೇ ಮುಂದಿನ ಪೀಳಿಗೆ ಅಭಿವೃದ್ಧಿ ಹೊಂದಬೇಕಾಗಿದೆ. ಆದ್ದರಿಂದ ಜಾನಪದ ಶಿಷ್ಟಪದಗಳಿಗೆರಡಕ್ಕೂ ಸಮಾನ ಸ್ಥಾನಮಾನಗಳು ಸಲ್ಲಬೇಕಾಗುತ್ತದೆ.

ಹಳೆಯ ಬಿತ್ತನೆಗಳನ್ನು ನಾನಾ ಸಂಸ್ಕಾರಗಳಿಗೊಡ್ಡಿ ಹೊಸ ತಳಿಗಳನ್ನು ಸೃಷ್ಟಿಸಿಕೊಳ್ಳುವಂತೆ ಜಾನಪದ ಸಂಸ್ಕಾರಗೊಂಡು ಶಿಷ್ಟಪದವಾಗುತ್ತದೆ. ಸಂಸ್ಕಾರವಶಾತ್ ಅವೆರಡೂ ಭಿನ್ನವಾಗುತ್ತವೆ, ತಂದೆಯಿಂದ ಮಗ ಪ್ರತ್ಯೇಕವಾಗುವಂತೆ. ವಿಕಾಸವೇ ನಿಸರ್ಗದ ನಿಯಮವಷ್ಟೆ. ಇಂದು ಶಿಷ್ಟಪದವೆನಿಸಿಕೊಂಡದ್ದು ನಾಳೆ ಜಾನಪದವಾಗಬಹುದು; ನಿನ್ನೆ ಜಾನಪದವೆನಿಸಿಕೊಂಡಿದ್ದದ್ದು ಇಂದು ಶಿಷ್ಟಪದವಾಗಬಹುದು. ಒಂದಾನೊಂದು ಕಾಲದಲ್ಲಿ ಸುಪ್ರಸಿದ್ಧ ಜ್ಞಾನಶಾಖೆಯಾಗಿದ್ದ ಜ್ಯೋತಿಶ್ಶಾಸ್ತ್ರ ಜಾನಪದವಾಗಿ, ಶುದ್ಧ ಜಾನಪದವಾಗಿದ್ದ ಸ್ವಪ್ನಶಾಸ್ತ್ರ ಶಿಷ್ಟಪದದ ಸ್ಥಾನಮಾನಗಳನ್ನು

ಪಡೆಯಬಹುದು.[1] ಜಾನಪದ ಕಲೆಯಿಂದ ಪಿಕಾಸೋ ಅಂಥವರು, ಜಾನಪದ ಕಥೆಗಳಿಂದ ಪುಷ್ಕಿನ್ ಅಂಥವರು ಸ್ಫೂರ್ತಿ ಪಡೆಯುವುದಲ್ಲದೆ, ಅವುಗಳಿಗೆ ಹೊಸರೂಪ ಕಲ್ಪಿಸಬಹುದು.

ತಾಯಿ ತೊಟ್ಟಿಲು ತೂಗುತ್ತ, ಗರತಿ ರಾಗಿ ಬೀಸುತ್ತ, ರಸಿಕ ಗಾಡಿ ಹೊಡೆಯುತ್ತ, ಗಂಡುಹೆಣ್ಣುಗಳು ನಾಟಿ ಹಾಕುತ್ತ, ಸ್ತ್ರೀಯರು ರಾಟೆ ತಿರುಗಿಸುತ್ತ, ಮಕ್ಕಳು ಕುಣಿಯುತ್ತ ಹಾಡುವುದೆಲ್ಲ ಜನಪದಗೀತೆಯಾಗುತ್ತದೆ. ಸಾಮಾನ್ಯಜನ ಚಳಿಗಾಲದಲ್ಲಿ ಬೆಂಕಿಯ ಸುತ್ತ ಕುಳಿತು, ಬೇಸಗೆಯ ಬೆಳುದಿಂಗಳಲ್ಲಿ ಬೀದಿಯ ಪಡಸಾಲೆಗಳ ಮೇಲೆ ನೆರೆದು, ಹಬ್ಬಹರಿದಿನ ಮದುವೆಗಳಲ್ಲಿ ಒಂದೆಡೆ ಕಲೆತು ಹರಟೆ ಹೊಡೆಯುವಾಗ, ಅಂತೆಯೇ ಉತ್ಸಾಹದ ಭರದಲ್ಲಿ ಕುಣಿಯುವಾಗ ಕತೆಗಳ ಲಹರಿ ಉಕ್ಕುತ್ತದೆ; ಗಾದೆಗಳು ಒಗಟುಗಳು ಹೊರಸೂಸುತ್ತವೆ; ತಾಯಿ ರಂಗವಲ್ಲಿ ಬಿಡುವಾಗ, ಚಾಪೆ ಹೆಣೆಯುವಾಗ, ಬಟ್ಟೆ ಹೊಲಿಯುವಾಗ, ಕಸೂತಿ ಹಾಕುವಾಗ ಮಗಳು ನೋಡಿ ಕಲಿಯುತ್ತಾಳೆ; ತಂದೆ ಕೃಷಿ ಮಾಡುವಾಗ, ಪಶುಗಳನ್ನು ಸಾಕುವಾಗ, ಗೃಹಕೃತ್ಯಗಳನ್ನು ನಡೆಸುವಾಗ ಮಗ ನೋಡಿ ತಿಳಿಯುತ್ತಾನೆ; ಅಂತೆಯೇ ಮರಗೆಲಸ, ಚಿನ್ನದ ಕೆಲಸ, ಕಬ್ಬಿಣಗೆಲಸ, ಚಮ್ಮಾರಿಕೆ, ಮೊದಲಾದ ಕಸಬುಗಳು ತಂದೆಯಿಂದ ಮಗನಿಗೆ ಪಿತ್ರಾರ್ಜಿತ ಆಸ್ತಿಯಂತೆ ವರ್ಗವಾಗುತ್ತವೆ. ಆದರೆ ಇವೆಲ್ಲ ಓದಿ ಕಲಿತುವಲ್ಲ. ಆಡಿದ್ದನ್ನು ಕೇಳಿ, ನೋಡಿದ್ದನ್ನು ಮಾಡಿ ಕಲಿತದ್ದು. ಮುತ್ತಜ್ಜನಿಂದ ಅಜ್ಜನಿಗೆ, ಅಜ್ಜನಿಂದ ತಂದೆಗೆ, ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಪರಂಪರೆಯಿಂದ ಬಂದಂಥವು. ಹಾಗೆ ಪೀಳಿಗೆ ಪೀಳಿಗೆಯಿಂದ ಬರುವಾಗ ಅವು ವ್ಯತ್ಯಾಸಗೊಳ್ಳುವುದೂ ಉಂಟು. ಇದನ್ನೆಲ್ಲ ಜಾನಪದ ಹೆಸರಿಗೆ ಜಮಾ ಮಾಡುತ್ತೇವೆ.

ಜಾನಪದ ಅಭಿವ್ಯಕ್ತಿಗೊಳ್ಳುವ ಎರಡು ಮುಖ್ಯ ಮಾಧ್ಯಮಗಳೆಂದರೆ ಮಾತು ಮತ್ತು ಕೃತಿ. ಪುರಾಣ ಐತಿಹ್ಯ ಕಥೆ ಗೀತೆ ಗಾದೆ ಒಗಟು ಮೊದಲಾದ ಶಾಬ್ದಿಕ ಪ್ರಕಾರಗಳಿಗೆ ಮಾತು ಮಾಧ್ಯಮವಾದರೆ, ನಂಬಿಕೆ ಸಂಪ್ರದಾಯ ಉಪಾಸನೆಗಳಿಗೆ ಶಿಲ್ಪ ವಾಸ್ತುಶಿಲ್ಪ ಚಿತ್ರ ನರ್ತನ ಆಟಪಾಟ ಮೊದಲಾದ ಕೃತಿಗಳು ಮಾಧ್ಯಮವಾಗುತ್ತವೆ. ಜಾನಪದ ವಲಯದೊಳಗೆ ಸೇರದ ಜಾಗತಿಕ ಸಂಗತಿಗಳೇ ಇಲ್ಲವೆನ್ನಬಹುದು. ಈ ಎಲ್ಲ ಸಂಗತಿಗಳ ಮೊತ್ತವನ್ನು ಜಾನಪದ ಸಂಸ್ಕೃತಿಯೆಂದು ಕರೆಯುತ್ತೇವೆ. ಅದು ಪ್ರಮುಖವಾಗಿ ಮೌಖಿಕ ಸಂಸ್ಕೃತಿ. ಪರಂಪರಾಗತವಾಗಿ ಬಂದದ್ದು. ಸಾಮೂಹಿಕವಾಗಿ ಸೃಷ್ಟಿಗೊಂಡದ್ದು. ಸಾಮಾನ್ಯವರ್ಗ ನಿರ್ಮಿಸಿದ್ದು. ಆ ವರ್ಗ ಅಸ್ತಿತ್ವದಲ್ಲಿರುವತನಕ ಆ ಸೃಷ್ಟಿ ಅವಿರತವಾಗಿ ಮುಂದುವರಿಯುವಂಥದು. ಅದು ಪ್ರಕೃತಿಯಂತೆ ತಾನೇತಾನಾಗಿ ಬೆಳೆಯುವಂಥದು. ಪ್ರತಿಯೊಂದು ರಾಷ್ಟ್ರವೂ ಸಮ್ಮಿಶ್ರವಲ್ಲದ ತನ್ನ ಮೂಲ ಸಂಸ್ಕೃತಿಯನ್ನು ಗುರುತಿಸಬೇಕಾದರೆ ಜಾನಪದಕ್ಕೆ ಶರಣುಹೋಗಬೇಕು; ತನ್ನ ಆಧುನಿಕತೆಯನ್ನು

[1] What was once a branch of learning, like astrology may become folklore. What was once folklore, like the Swastika motif, may be taken over and used or exploited in a nonfolk manner—M. Harmon in the *Standard Dictionary of Folklore, Mythology and Legend*, p. 400.

ವಿಶಿಷ್ಟಗೊಳಿಸಬೇಕಾದರೆ ಅದಕ್ಕೆ ಹೊಸ ತಿರುವು ನೀಡಬೇಕಾದರೆ ಜಾನಪದ ಸಹಾಯ ಪಡೆಯಬೇಕು.

೨

ಇಷ್ಟು ವ್ಯಾಪಕವೂ, ಸಕಲ ಶಾಸ್ತ್ರಗಳಿಗೆ ಮಾತೃಪ್ರಾಯವೂ ಆದ ಜಾನಪದ ಇತ್ತೀಚಿನ ತನಕ ಶಾಲಾಕಾಲೇಜುಗಳಲ್ಲಿ ಅಧ್ಯಯನ ವಿಷಯವಾಗದಿದ್ದುದು ಶೈಕ್ಷಣಿಕ ವ್ಯವಸ್ಥೆಯಲ್ಲೊಂದು ಕೊರತೆಯೆಂದೇ ಹೇಳಬೇಕು. ಅದನ್ನು ಸಂಪೂರ್ಣವಾಗಿ ಮರೆತ ಮಾನವಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ವಿಷಯಗಳ ಅಧ್ಯಯನ ಸಮರ್ಪಕವಾಗುವುದಿಲ್ಲ. ಮಾನವಶಾಸ್ತ್ರಕ್ಕಂತು ಅದೇ ಜೀವಾಳ. ಸಾಂಸ್ಕೃತಿಕ ಮಾನವಶಾಸ್ತ್ರ ಮಾತ್ರವಲ್ಲ ಭೌತಿಕ ಮಾನವಶಾಸ್ತ್ರವೂ ಅದರ ನೆರವನ್ನಪೇಕ್ಷಿಸುತ್ತದೆ. ಶಾರೀರಕ ರಚನೆಗೆ ಸಂಬಂಧಿಸಿದ ಕೆಲವು ಉಲ್ಲೇಖಗಳನ್ನಾದರೂ ಜಾನಪದದಲ್ಲಿ ಗುರುತಿಸಬಹುದು. ವಾಂಶಿಕ ಶಾಸ್ತ್ರ ಪ್ರತಿಪಾದಿಸುವ ಬಹುಪಾಲು ವಿಷಯಗಳಿಗೆ ಜಾನಪದವೇ ಆಕರ. ಕುಣಿತ, ಮಾಟ, ಮಂತ್ರ, ನಂಬಿಕೆ, ಸಂಪ್ರದಾಯ, ಬೇಸಾಯ, ವಿರಾಸುಗಾರಿಕೆ, ಕುಶಲ ಹಾಗೂ ಉಪಯುಕ್ತ ಕಲೆಗಳು, ಮನೆ ಗುಡಿ ಗುಡಿಸಿಲುಗಳ ಶಿಲ್ಪ, ಮೂರ್ತಿಶಿಲ್ಪ, ಮರಗೆಲಸ, ಲೋಹಗೆಲಸ, ಮಣ್ಣಿನ ಕೆಲಸ, ವಾಹನಗಳ ತಯಾರಿಕೆ, ಬಟ್ಟೆಬರೆ, ಒಡವೆಗಳು, ಅಲಂಕಾರ ವಸ್ತುಗಳು, ಪಾಕಕಲೆ, ಆಟಪಾಟಗಳು ಇವೇ ಮೊದಲಾದ ಜಾನಪದ ಸಂಗತಿಗಳನ್ನು ವಾಂಶಿಕಶಾಸ್ತ್ರ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರಗಳು ಬಹುಪ್ರಮಾಣದಲ್ಲಿ ಬಳಸಿಕೊಳ್ಳುತ್ತವೆ. ಜಾನಪದ ಸಾಹಿತ್ಯದಲ್ಲಂತು ಸಾಂಸ್ಕೃತಿಕ ಸಾಮಗ್ರಿಗಳು ಹೆಜ್ಜೆ ಹೆಜ್ಜೆಗೂ ಸಿಗುತ್ತವೆ. ಕೇವಲ ನಿದರ್ಶನಾರ್ಥವಾಗಿ ಒಂದೇ ಒಂದು ಪದವನ್ನಿಲ್ಲಿ ಉದ್ಧರಿಸಲಾಗಿದೆ:

ಅತ್ತೆ ಮಾವರ ಪಾದ ಮತ್ತೆ ಗುರುವಿನ ಪಾದ
ಸ್ವಾಮಿ ಕಾಲುಮುಟ್ಟಿ ಶಿರಬಾಗಿ—ನಮಿದಾರೆ
ಬಂದೋಟು ಪಾಪ ಪರಿಹಾರ

ಹಿಂದಿನ ಕಾಲದ ಕುಟುಂಬದ ಚಿತ್ರವಿಲ್ಲಿದೆ. ಸೊಸೆಯಾದವಳಿಗೆ ದೇವರಿಗಿಂತ ಗುರು ಹೆಚ್ಚು. ಗುರುವಿಗಿಂತ ಅತ್ತೆಮಾವರು ಹೆಚ್ಚು ಎನ್ನುವ ಭಾವನೆ ಇಲ್ಲಿದೆ; ಅತ್ತೆಮಾವಂದಿರ ಸೇವೆಯಿಂದ ಅವಳಿಗೆ ಎಲ್ಲ ಭಾಗ್ಯಗಳು ಲಭಿಸುತ್ತಿದ್ದುವು. ಹೆಣ್ಣುಮಕ್ಕಳು ಹತ್ತಿರವಿಲ್ಲದಿರುವಾಗ ಮುಪ್ಪಿನಲ್ಲಿ ಸೊಸೆಯೇ ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗಿತ್ತು. ಈಗಿನಂತೆ ಆಗ ವೃದ್ಧಾಶ್ರಮಗಳಿರಲಿಲ್ಲ. ಇದರಿಂದ ಆಗಿನ ಸೊಸೆಯ ಹೊಣೆಗಾರಿಕೆ ಸ್ಪಷ್ಟವಾಗುತ್ತದೆ. ಜಾನಪದದ ಸಂಪರ್ಕವಿಲ್ಲದ ಸಮಾಜವಿಜ್ಞಾನದ ಅಧ್ಯಯನವು ಅಪೂರ್ಣವಾಗುತ್ತದೆಂದು ಮತ್ತೆ ಹೇಳಬೇಕಾಗಿಲ್ಲ.

ಜಾನಪದ ಭಾಷಾವಿಜ್ಞಾನಗಳ ಸಂಬಂಧವೂ ಅಷ್ಟೇ ನಿಕಟವಾದುದು. ವಿವರಣಾತ್ಮಕ, ಐತಿಹಾಸಿಕ ಹಾಗೂ ತೌಲನಿಕ ಭಾಷಾವಿಜ್ಞಾನಕ್ಕೆ ಜನಪದ ಸಾಹಿತ್ಯ

ಸಾಮಗ್ರಿಯನ್ನೊದಗಿಸಬಲ್ಲುದು. ಸಾಮಾನ್ಯ ಜನರ ಭಾಷೆ ಗ್ರಾಮ್ಯ, ಅಸಂಸ್ಕೃತವೆಂದು ಶಿಷ್ಟಜನ ಮೂಗು ಮುರಿಯುತ್ತಿದ್ದಾಗ ಭಾಷೆಯ ಮೂಲಸ್ವರೂಪ ಆಡುಮಾತಿನಲ್ಲಿ ಪ್ರತಿಬಿಂಬಗೊಳ್ಳುತ್ತದೆ, ಗ್ರಾಮ್ಯಭಾಷೆ ಅಸಂಸ್ಕೃತವಲ್ಲವೆಂದು ಹೇಳಿದ್ದು ಭಾಷಾವಿಜ್ಞಾನ. ಶಾಸನ ಭಾಷೆಯ ಅಧ್ಯಯನ ಎಷ್ಟು ಮುಖ್ಯವೋ ಎಷ್ಟು ಉಪಯುಕ್ತವೋ, ಈ ಸಾಹಿತ್ಯ ಭಾಷೆಯ ಅಧ್ಯಯನವೂ ಅಷ್ಟೇ ಪ್ರಯೋಜನಕಾರಿ; ಅಷ್ಟೇ ಅಲ್ಲ, ಅದಕ್ಕಿಂತಲೂ ಇದು ಒಂದು ಕೈ ಮೇಲೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಶಾಸನದ ಭಾಷೆ ಆಡುಮಾತಿಗೆ ಹತ್ತಿರವೆನ್ನಬಹುದಾದರೂ, ಅದು ಆಡುಮಾತಲ್ಲ. ಆಡುಮಾತಿನ ವ್ಯಾಪಕತೆಯಾಗಲೀ ವೈವಿಧ್ಯವಾಗಲೀ ಅಥವಾ ಜೀವಂತಿಕೆಯಾಗಲಿ ಅಲ್ಲಿ ಕಾಣುವುದಿಲ್ಲ. ನೂರಾರು ಇನ್ನೂರು ವರ್ಷಗಳ ಭಾಷೆಯ ವಿಕಾಸವನ್ನಿಲ್ಲಿ ಗುರುತಿಸಬಹುದು. ವಿನೂತನವಾದ ವ್ಯಾಕರಣ ಪ್ರಯೋಗಗಳ ಜತೆಗೆ ಕಿಟ್ಟೆಲ್ ಕಾಣದ, ಕುಮಾರವ್ಯಾಸ ವಚನಕಾರರಿಗೂ ದಕ್ಕದ ಪದಸಂಪತ್ತಿನ ಗಣಿಯದು. ಈ ಸಾಹಿತ್ಯವನ್ನಾಧರಿಸಿ ವ್ಯಾಕರಣವೊಂದು ರಚನೆಗೊಂಡದ್ದಾದರೆ ಕನ್ನಡದ ಜಾಯಮಾನ ಮತ್ತಷ್ಟು ಸ್ಫುಟವಾಗುತ್ತವೆ; ಹೊಸ ವ್ಯಾಕರಣ ಸೂತ್ರಗಳು ಬೆಳಕಿಗೆ ಬರುತ್ತವೆ. ಚುಂಗು, ಅಚ್ಚಕ್ಕಿ, ಗೆಣೆಯ, ಬಿಮ್ಮನ್ನೆ, ವರಿ ಮೊದಲಾದ ಸುಂದರವಾದ ಪದಗಳು ಹೇರಳವಾಗಿ ಸಿಗುತ್ತವೆ. ನವ್ಯರೀತಿಯ ಉಪಮೆ ರೂಪಕಗಳಂತು ಭಾಷೆಯ ಅಗ್ಗಳಿಕೆಗೆ ಸ್ತಂಭದೀಪವಾಗಿವೆ. ಸಂಸ್ಕೃತ ಪದಗಳನ್ನು ಅಚ್ಚಗನ್ನಡ ರೂಪಕ್ಕೆ ಪರಿವರ್ತಿಸುವಲ್ಲಿ ಈ ಸಾಮಾನ್ಯರ ಜಾಣ್ಮೆ ಎದ್ದು ಕಾಣುತ್ತದೆ. ಜೋತುರ, ಮದ್ದೀನ (ಮಧ್ಯಾಹ್ನ), ರುತಿ (ರುಚಿ), ಯಾಪಗಾರ (ವೇಷಗಾರ), ಅನ್ನೇಕಾರ (ಅನ್ಯಾಯಕಾರ), ರತ (ವ್ರತ), ಪರಸೆ (ಪರಿಷೆ), ರಾಕಾಸಿ (ರಾಕ್ಷಸಿ)—ಈ ಮೊದಲಾದ ಪದಗಳು ಮೇಲುನೋಟಕ್ಕೆ ಅನ್ಯಭಾಷಾಜನ್ಯವೆಂದು ತೋರುವುದಿಲ್ಲ. ಅಚ್ಚಗನ್ನಡವನ್ನು ಹೊರವಾಗಿ ಬೆಳೆಸಬಲ್ಲವರು ಸಾಮಾನ್ಯರೇ ಹೊರತು ಪಂಡಿತರಲ್ಲವೆಂಬುವಕ್ಕೆ ಈ ಮತ್ತು ಇಂಥ ಸಾವಿರಾರು ಪದಗಳೇ ಸಾಕ್ಷಿ. ಈ ಸಾಮಾನ್ಯರ ಭಾಷೆಯೇ ಕುಮಾರವ್ಯಾಸನಿಗೆ ಮಾದರಿ ಎಂದು ಬೇಕಾದರೂ ಹೇಳಬಹುದು.

ಧರ್ಮ ಅಥವಾ ಕಾನೂನುಶಾಸ್ತ್ರಗಳಿಗೆ ಮೂಲ ಆಕರವೇ ಜಾನಪದ. ಇತ್ತೀಚಿನ ತನಕ ಕೋರ್ಟುಗಳಾಗಲೀ ಪಂಚಾಯಿತಿಗಳಾಗಲಿ ತೀರ್ಪು ನೀಡುವಾಗ ನಂಬಿಕೆ ಮತ್ತು ಸಂಪ್ರದಾಯಗಳನ್ನನುಸರಿಸುತ್ತಿದ್ದುದುಂಟು. ಎಂದು ಇಬ್ಬರು ವ್ಯಕ್ತಿಗಳು ಒಟ್ಟಿಗೆ ವಾಸ ಮಾಡಲು ಅಥವಾ ವ್ಯವಹಾರ ನಡೆಸಲು ಪ್ರಾರಂಭಿಸಿದರೋ ಅಂದಿನಿಂದ ಧರ್ಮ ಮತ್ತು ಕಾನೂನುಗಳು ಅಸ್ತಿತ್ವಕ್ಕೆ ಬಂದಿರಬೇಕು. ಪರಸ್ಪರ ಸಂಬಂಧವನ್ನು ನಿರ್ಣಯಿಸುವ, ನಿಯಂತ್ರಿಸುವ, ಹಕ್ಕುಬಾಧ್ಯತೆಗಳನ್ನು ನಿರ್ಧರಿಸುವ, ವಿಧಿನಿಷೇಧಗಳನ್ನು ಕಾರ್ಯಗತಗೊಳಿಸುವ ವ್ಯವಸ್ಥೆಯೇ ಕಾನೂನು. ಮೂಲದಲ್ಲಿ ಧರ್ಮ ಮತ್ತು ಕಾನೂನುಗಳು ಒಂದೆಯಾಗಿದ್ದುವು. ಅವು ದೀರ್ಘಾನುಭವದ ಮತ್ತು ಪರಸ್ಪರ ಸಮ್ಮತಿಯ ಫಲ. ಅವನ್ನೇ ಕಟ್ಟುಕಟ್ಟಳೆಗಳೆಂದು ಹಿಂದಿನವರು ಕರೆಯುತ್ತಿದ್ದುದು. ಜಿಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದ ಅವುಗಳನ್ನು ಒಬ್ಬ ಮನುವೋ ಒಬ್ಬ ವಿಜ್ಞಾನೇಶ್ವರನೋ ಸಂಗ್ರಹಿಸಿ, ಸಂಕಲಿಸಿ,

ಸಂಪಾದಿಸಿ, ಅವಕ್ಕೊಂದು ವ್ಯವಸ್ಥಿತರೂಪವನ್ನು ಕೊಟ್ಟಿದ್ದುಂಟು. ಇಂಗ್ಲೆಂಡಿನ ಸಾಮಾನ್ಯ ಕಾನೂನಿಗೂ ಸಂಪ್ರದಾಯಗಳೇ ಆಧಾರ. ಹಿಂದೂಗಳ ಕಾನೂನಾಗಲಿ, ಮುಸ್ಲಿಮರ ಕಾನೂನಾಗಲಿ ಕೇವಲ ಸಂಪ್ರದಾಯಗಳನ್ನನುಸರಿಸಿ ರಚನೆಗೊಂಡಂಥವು. ಕಾನೂನಿನ ಇತಿಹಾಸ ಬರೆಯುವವರು ಜಾನಪದ ಸಂಪ್ರದಾಯ ಹಾಗೂ ಸಾಹಿತ್ಯಗಳಲ್ಲಿ ಹಾಸುಹೊಕ್ಕಾಗಿ ಹುದಿದಿರುವ, ಪ್ರಾಚೀನಕಾಲದಿಂದ ಜಾನಪದರ ಮಾತ್ರವಲ್ಲ, ಇಂದಿನ ಶಿಷ್ಟಪದರ ಜೀವನವನ್ನು ರೂಪಿಸಿರುವ ಕಾನೂನಿನ ಅಂಶಗಳನ್ನು ಗಮನಿಸಲೇಬೇಕು.

ಧರ್ಮ ಕಾನೂನುಗಳಿಗೆ ನಿಕಟವರ್ತಿಯಾದ, ಮಾನವನ ಲೌಕಿಕ ಜೀವನವನ್ನು ತಿದ್ದಿ ಪಾರಮಾರ್ಥಿಕ ಜೀವನಕ್ಕೂ ಅನುವು ಮಾಡಿಕೊಡುವ ಸಂಗತಿಯೇ ನೀತಿ. ಈ ನೀತಿಶಾಸ್ತ್ರದ ತಾಯಿಬೇರು ಜಾನಪದ ಸಾಹಿತ್ಯದಲ್ಲಿ ಭದ್ರವಾಗಿ ಚಾಚಿಕೊಂಡಿದೆ. ನೈತಿಕ ಮೌಲ್ಯಗಳು ಪರಿಸರಜನ್ಯವಾದರೂ ಕಾಲಧರ್ಮಾನುಸಾರಿಯಾದರೂ ಅವುಗಳ ಪ್ರಯೋಜನವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಕಾನೂನು ಕೆಲವರ ಸೃಷ್ಟಿಯಾದರೆ, ನೀತಿ ಹಲವರ ಸೃಷ್ಟಿ. ಕಾನೂನಿಗೆ ಹಿಡಿಮಂದಿಯ ಸಮ್ಮತಿ ಸಾಕು, ನೀತಿಗೆ ಇಡೀ ಸಮಾಜದ ಸಮ್ಮತಿ ಬೇಕು. ಒಂದು ಬಲಾತ್ಕಾರದ ಮೂಲಕ ಜಾರಿಕೊಂಡರೆ, ಮತ್ತೊಂದು ಸ್ವಪ್ರೇರಣೆಯಿಂದ ಕಾರ್ಯಗತಗೊಳ್ಳುತ್ತದೆ. ನಿಜವಾದ ಅರ್ಥದಲ್ಲಿ ನೀತಿ ಸರ್ವಸಮ್ಮತವಾದ ಕಾನೂನೆಂದು ಹೇಳಬಹುದು. ಸಮಾಜದಲ್ಲಿ ಭದ್ರತೆ ಸಾಮರಸ್ಯಗಳು ನೆಲಸಿ, ಕ್ಷೇಮಶಾಂತಿಗಳು ಸ್ಥಿರಗೊಳ್ಳಬೇಕಾದರೆ ನೀತಿಪಾಲನೆ ಅತ್ಯವಶ್ಯ. ಜಾನಪದಸಾಹಿತ್ಯದಲ್ಲಿ ನೈತಿಕಮೌಲ್ಯಗಳ ಪ್ರತಿಪಾದನೆ ಮೇಲಿಂದಮೇಲೆ ಬರುತ್ತದೆ. ನೀತಿಪ್ರಜ್ಞೆ ಜನ-ಜೀವನದ ಜೀವಾತುವಾಗಿತ್ತು. ಭಾರತೀಯ ನೀತಿಶಾಸ್ತ್ರಕ್ಕೆ ಜಾನಪದ ಅತ್ಯಪೂರ್ವವೂ ಅತ್ಯಮೂಲ್ಯವೂ ಆದ ಕಾಣಿಕೆ ನೀಡಬಹುದಾಗಿದೆ.

ಸಿರಿಬಂದ ಕಾಲಕ್ಕೆ ತಲೆವಾಗಿ ನಡೆಯಮ್ಮ
ಮನೆಗೆ ಬಂದವರ ಕೂಡ್ರ ಹೇಳು। ಮಕ್ಕಳ
ಒಡನೆ ಬಂದರ್ಗೆ ವುಣಬಡಿಸು

ಸಿರಿವಂತಿಕೆಯಿಂದ ಕಣ್ಣು ಕೊಬ್ಬಬಾರದು, ಅತಿಥಿಗಳನ್ನು ವಿನಯದಿಂದ ಬರಮಾಡಿಕೊಳ್ಳಬೇಕು, ಹಸಿದ ಮಕ್ಕಳಿಗೆ ಅಶನವೀಯಬೇಕು ; ಇದು ಸಭ್ಯತೆಯ ಸಂಸ್ಕೃತಿಯ ಲಕ್ಷಣ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ಜಾನಪದರ ಮನಸ್ಸು ಹೆಚ್ಚುಕಡಮೆ ಒಂದೇ ರೀತಿ ಮಿಡಿಯುತ್ತಿದೆಯೆನ್ನುವುದಕ್ಕೆ ಛತ್ತೀಸ್‌ಗರ್ ಜಾನಪದ ಹಾಡುಗಳಿಂದ ಒಂದೇ ಒಂದು ಪದ ಕೆಳಗೆ ಕೊಡಲಾಗಿದೆ :

The house is broken when scandal is repeated
So the cowife is an enemy and the husband goes away.[1]

ಮನೋವಿಜ್ಞಾನಿಗಳ ಸಂಶೋಧನೆಗಂತು ಇದೊಂದು ಕನ್ಯಾಕ್ಷೇತ್ರವಾಗಿದೆ. ಮಾಟ ಮಂತ್ರತಂತ್ರ ಸಂಪ್ರದಾಯ ಆಚರಣೆ ಉಪಾಸನೆ ಮುಂತಾದ ಜಾನಪದ ಚಟುವಟಿಕೆ

1 *Folk Songs of Chattisgar* by Verrier Elwin, p. 96.

ಗಳ ಹಿಂದಿರುವ ಚಿತ್ತಪ್ರವೃತ್ತಿಗಳನ್ನು ಶೋಧಿಸಿದ್ದಾದರೆ ಅವಿ ಮತ್ತು ಅನಾಗರಿಕ ಮಾನವರ ಮನಸ್ಸಿನ ವಿಲಾಸಗಳನ್ನು ತಿಳಿಯಲನುಕೂಲವಾಗುತ್ತದೆ. ಅವುಗಳ ಉಗಮ ವನ್ನು ಕುರಿತ ವಿಷಯದಲ್ಲಿ ಮನೋವೈಜ್ಞಾನಿಕ ಸಂಶೋಧನೆ ಅಪಾರ ಬೆಳಕು ಬೀರ ಬಹುದಾಗಿದೆ. ಸಾಮಾನ್ಯಮಾನವನ ಭಾವಜೀವನದ ವಿಶ್ಲೇಷಣೆಗೆ ಕಥೆಗೀತೆಗಳು ವಿಶೇಷ ಸಾಮಗ್ರಿಯನ್ನೊದಗಿಸುತ್ತವೆ. ಕೆಲವು ವೇಳೆ ರೋಗಿಗಳಿಗೆ ಮದ್ದಿಗಿಂತ ಮಂತ್ರ ಹೆಚ್ಚು ಪ್ರಯೋಜನಕಾರಿಯಾಗುವಂತೆ ತೋರುತ್ತದೆ. ತೆರೆದ ಮನಸ್ಸಿನ ಮನೋವಿಜ್ಞಾನಿಗಳು ಅಂಥ ಸಂದರ್ಭಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಗುಮಾಡಬೇಕಾಗುತ್ತದೆ. ಪರಾಮನೋವೈಜ್ಞಾನಿಕ ಸಂಶೋಧಕರನ್ನು ಈ ಕ್ಷೇತ್ರ ಕೈ ಬೀಸಿ ಕರೆಯುತ್ತಿದೆ. ಉಪ ಲಬ್ಧ ಸಾಮಗ್ರಿಯ ಆಧಾರದ ಮೇಲೆ ಪಾಶ್ಚಾತ್ಯ ಮನೋವಿಜ್ಞಾನಿಗಳು ಜಾನಪದ ಸಂಸ್ಕೃತಿಯ ಉಗಮವಿಕಾಸಗಳ ಬಗ್ಗೆ ಈಗಾಗಲೇ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಅಡಾಲ್ಫ್ ಬಾಸ್ಟಿಯನ್ (Adolf Bastian)[1] ಜಾನಪದರ ಭಾವನೆಗಳಿಗೆ ಮಾನಸಿಕ ವ್ಯಾಪಾರಗಳ ಜತೆಗೆ, ಸುಪ್ತಪ್ರಜ್ಞೆಯ ಪ್ರಭಾವವೂ ಕಾರಣ ಎನ್ನುತ್ತಾನೆ. ಫ್ರಾಯ್ಡ್ ಮತ್ತು ಅವನ ಅನುಯಾಯಿಗಳು ಪ್ರಾಚೀನ ಪುರಾಣಗಳನ್ನು ಅವುಗಳಿಗೂ ಕನಸುಗಳಿಗೂ ಇರುವ ಸಂಬಂಧಗಳನ್ನು ಕುರಿತು ವಿಶೇಷಾಭ್ಯಾಸ ನಡಸಿದ್ದಾರೆ; ಕನಸು ಗಳ ಸಂಕೇತಗಳನ್ನು ವಿವರಿಸಿದ್ದಾರೆ.[2] ಆ್ಯಡ್ಲರ್, ಯೂಂಗ್,[3] ಫ್ರೆಡ್ರಿಕ್ ವಾನ್‌ಡೆರ್ ಲಿಯನ್ ಮೊದಲಾದವರು[4] ಜನಪದ ಕಥೆಗಳಲ್ಲಿ ಹಾಗೂ ಪುರಾಣಗಳಲ್ಲಿ ಬರುವ ಘಟನೆ ಗಳಿಗೆ ಕನಸುಗಳೇ ಕಾರಣವೆಂದು ವೈಜ್ಞಾನಿಕವಾಗಿ ತೋರಿಸಿಕೊಟ್ಟಿದ್ದಾರೆ.

ವೈದ್ಯವಿಜ್ಞಾನಕ್ಕೆ ಜಾನಪದ ನೀಡಬಹುದಾದ ಕೊಡುಗೆ ಕಡಮೆಯದಾಗಲಾರದು. ನಾಟಿವೈದ್ಯರು ಕೊಡುವ ಮದ್ದುಗಳು ನಂಬಿಕೆಗಳನ್ನವಲಂಬಿಸಿಲ್ಲ; ದೀರ್ಘಾನುಭವ ಪ್ರಯೋಗಗಳ ಪ್ರತಿಫಲಗಳೇ ಅವು. ಭಾರತಕ್ಕೆ ಸೀಮೆವೈದ್ಯ ಬಂದು ನೂರೈವತ್ತುವರ್ಷ ಗಳಾಗಿದ್ದಿರಬಹುದು. ಆ ಮುಂಚೆ ಸಾವಿರಾರು ವರ್ಷಗಳಕಾಲ ಇಲ್ಲಿಯ ಜನರ ಆರೋಗ್ಯ ವನ್ನು ಕಾಪಾಡುತ್ತಿದ್ದವರು ನಾಟಿವೈದ್ಯರೆಂಬುದನ್ನು ಮರೆಯಲಾಗದು. ಭಾರತೀಯ ವೈದ್ಯಪದ್ಧತಿ ನೂರಾರು ವರ್ಷಗಳ ಹಿಂದೆಯೇ ಅರೇಬಿಯಾದ ಮೂಲಕ ಪಾಶ್ಚಾತ್ಯ ರಾಷ್ಟ್ರಗಳನ್ನು ಪ್ರವೇಶಿಸಿತೆಂಬುದನ್ನೂ, ಆಯುರ್ವೇದದ ಮೂಲಗಳನ್ನು ಸೋಸುವಾಗ ಜಾನಪದ ವೈದ್ಯ ಕಣ್ಮುಂದೆ ನಿಲ್ಲುತ್ತದೆಂಬುದನ್ನೂ ತಜ್ಞರು ನೆನೆಸಿಕೊಳ್ಳುವುದೊಳ್ಳೆಯದು. ಇಂದಿಗೂ ಸೀಮೆವೈದ್ಯಕ್ಕೆ ಜಗ್ಗದ ಕೆಲವು ರೋಗಗಳು ನಾಟಿವೈದ್ಯಕ್ಕೆ ಬಗ್ಗುತ್ತವೆಂಬುದು ಸರ್ವವೇದ್ಯ ಸಂಗತಿಯಾಗಿದೆ.

ತಾಂತ್ರಿಕ ವಿಜ್ಞಾನದ ಇಂದಿನ ಪ್ರಗತಿಯ ಬುಡದಲ್ಲಿ ಜಾನಪದ ತಂತ್ರವಿದೆಯೆನ್ನು ವುದು ಕುರುಡನಿಗೂ ಹೊಳೆದೀತು. ಸಾವಿರಾರು ವರ್ಷಗಳ ಹಿಂದೆ ಕೃಷಿಸಂಸ್ಕೃತಿ

---

[1] *Social Anthropology* by paul Radin, p 7.
[2] Ibid p. 15.
[3] Ibid ; 16
[4] *Folktale* by Stith Thompson, p 385.

ಪ್ರಾರಂಭವಾದಾಗ ಕೃಷಿವಿದ್ಯಾಸಿಲಯಗಳೇ ಇರಲಿಲ್ಲ. ಆಧುನಿಕ ಕೃಷಿವಿಜ್ಞಾನ ಹಿಂದಿನ ಜಾನಪದ ಸಂಶೋಧನೆಗಳನ್ನೆಲ್ಲ ಗರ್ಭೀಕರಿಸಿಕೊಂಡು. ಅದರ ಮೇಲೂ ತನ್ನ ಮುದ್ರೆಯನ್ನು ಒತ್ತಿದೆ. ನೇಗಿಲು, ಕೂರಿಗೆ, ಹಲುಬೆ, ಕುಂಟೆ, ಬಂಡಿ, ಗುದಲಿ, ಹಾರೆ, ಕುಡುಗೋಲು, ಚೆಟ್ಟುಗತ್ತಿ, ಕೊಡಲಿ, ಕೊಳಗ, ಗಳಗೆ, ವಾಡೆ, ಹೆರಬಿ, ಇವೇ ಮೊದಲಾದ ವ್ಯವಸಾಯದ ಮುಟ್ಟುಗಳೆಲ್ಲ ನಮ್ಮ ಪೂರ್ವಜರಿಗೆ ತಿಳಿದಿದ್ದುವೇ ಆಗಿವೆ. ಇಂದಿನ ಯಂತ್ರಗಳು ಅವುಗಳ ಪರಿಷ್ಕೃತ ರೂಪಗಳೇ ಹೊರತು ಬೇರೆಯಲ್ಲ. ಅಂತೆಯೇ ತಕಲಿ, ರಾಟೆ, ನೇಯ್ಗೆ ಮುಟ್ಟುಗಳು: ಕೂಳಿ ಬಲೆ ಮೊದಲಾದ ಬೇಟೆಯ ಸಾಮಾನುಗಳು: ಇವಕ್ಕೆಲ್ಲ ಮೂಲ ಜಾನಪದಯಂತ್ರಗಳೇ. ಹಿಂದಿನ ಹಲವು ಯಂತ್ರಗಳು ಸಂಪೂರ್ಣ ರೂಪಾಂತರಗೊಂಡಿದ್ದರೂ ಬಂಡಿ ಕೂಳಿ ಬಲೆ ಮೊದಲಾದ ಮುಟ್ಟುಗಳು ಪ್ರಾಚೀನ ಸ್ಥಿತಿಯಲ್ಲಿಯೇ ಇರುವುದು ಜಾನಪದರ ಯಂತ್ರಕೌಶಲಕ್ಕೂ ಅವುಗಳ ಉಪಯುಕ್ತತೆಗೂ ಸಾಕ್ಷಿಯಾಗಿವೆ. ಆದ್ದರಿಂದ ಆಧುನಿಕ ತಂತ್ರಜ್ಞರು ಮತ್ತು ಶಿಲ್ಪಿಗಳು ಜಾನಪದ ತಂತ್ರವಿಜ್ಞಾನವನ್ನು ಅತ್ಯವಶ್ಯವಾಗಿ ಅಧ್ಯಯನಮಾಡಬೇಕಾಗುತ್ತದೆ.

ಇಂದು ನಾವು ಶಾಲಾಕಾಲೇಜುಗಳಲ್ಲಿ ಕಲಿಸುತ್ತಿರುವ ಗೃಹವಿಜ್ಞಾನ ಸಾಮಾನ್ಯವಾಗಿ ವಿದೇಶೀಯವಾದದ್ದು. ಅಂಥ ಅತ್ಯಂತ ಸಾಮಾನ್ಯವಾದ, ಆರ್ಷೇಯಕಾಲದಿಂದ ಚಾಲ್ತಿಯಲ್ಲಿರುವ ಸ್ವದೇಶೀ ವಿಜ್ಞಾನವನ್ನು ಮರೆತದ್ದು ನಮ್ಮ ತಜ್ಞರ ದಾಸ್ಯ ಮನೋಭಾವವನ್ನೆತ್ತಿ ತೋರಿಸುತ್ತದೆ. ಸಾದಾ ಮತ್ತು ಸರಳವಾದ ಗೃಹೋಪಕರಣಗಳನ್ನು ಬಳಸುವ ಕಲೆಯನ್ನು ಗೃಹವಿಜ್ಞಾನ ಬೋಧಿಸುತ್ತಿಲ್ಲ; ನಮ್ಮ ಪರಿಸರಕ್ಕೆ ಹೊಂದಿಕೊಳ್ಳುವಂಥ, ನಮ್ಮ ಆರ್ಥಿಕಸ್ಥಿತಿಗೆ ಒಗ್ಗುವಂಥ ಅಡಳಿತ ಕಲೆಯನ್ನದು ಕಲಿಸುತ್ತಿಲ್ಲ. ಪುರಾತನಕಾಲದಿಂದ ಇಲ್ಲಿಯ ಸಮಾಜಕ್ಕೊಗ್ಗಿ ಬಂದಿರುವ ಪಾಕಕಲೆ ಆಧುನಿಕ ವಿಜ್ಞಾನಕ್ಕೆ ಬೇಡವಾಗಿದೆ. ಈ ಸಮಾಜಕ್ಕೆ ಬೇಕಾದ್ದು ಅಮೆರಿಕೆಯ ತಿನಿಸುಗಳಲ್ಲ; ಇಲ್ಲಿಯೇ ಸಿಗುವ ಧಾನ್ಯಗಳಿಂದ ತಯಾರಿಸಬಹುದಾದ ಭಕ್ಷ್ಯಭೋಜ್ಯಗಳು. ಹೊಲದಲ್ಲಿ ಸಿಕ್ಕುವ ಸೊಪ್ಪು ಬೇಯಿಸಿ ತಿಂದು, ಅಂಬಲಿ ಕುಡಿದು ಎಂಬತ್ತು ವರ್ಷ ಜೀವಿಸಿಕೊಂಡಿರುವ ಜನ ಹಳ್ಳಿಗಾಡಿನಲ್ಲಿ ಲೆಕ್ಕವಿಲ್ಲದಷ್ಟಿದ್ದಾರೆ. ಪೌಷ್ಟಿಕಾಹಾರದ ಬಗ್ಗೆ ಮಾತಾಡುವ ಜನ ಇಲ್ಲಿಯ ಆಹಾರದ ಬಗ್ಗೆ ಸಂಶೋಧನೆ ನಡೆಸಿ, ಇದ್ದದ್ದನ್ನು ಪರಿಷ್ಕರಿಸಿ ಬಳಸುವಂತೆ ಜನರಿಗೆ ಬೋಧಿಸಬೇಕಾಗುತ್ತದೆ. ಸಾಮಾನ್ಯರ ವೇಷಭೂಷಣಗಳನ್ನೂ ಆಹಾರ ವಿಹಾರಗಳನ್ನೂ, ರೀತಿನೀತಿಗಳನ್ನೂ ಆಮೂಲಾಗ್ರವಾಗಿ ಅಧ್ಯಯನಮಾಡುವುದಾದರೆ, ಗೃಹವಿಜ್ಞಾನ ಅತ್ಯಾಧುನಿಕವಾಗುವುದಲ್ಲದೆ, ಇಲ್ಲಿಯ ಜನರಿಗೆ ತುಂಬ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ.

ರಸವಿದ್ಯೆಗೆ ಮೂಲ ಮಾಟ. ಕೀಳು ಲೋಹಗಳನ್ನು ಉತ್ತಮ ಲೋಹಗಳಾಗಿ ಪರಿವರ್ತಿಸುವ ಕಲೆ ರಸವಿದ್ಯೆಗೆ ತಿಳಿದಿತ್ತು. ರಸಾಯನ ವಿಜ್ಞಾನದ ಆದಿ ಹಾಗೂ ಹಾದಿಗಳನ್ನಲ್ಲಿ ಗುರುತಿಸಬಹುದಾಗಿದೆ. ಅಂತೆಯೇ ಲೋಹವಿದ್ಯೆ. ಸಸ್ಯಜ್ಞಾನ, ಪ್ರಾಣಿ

ವಿಜ್ಞಾನ ಮೊದಲಾದುವುಗಳ ಪರಿಚಯ ಪ್ರಾಚೀನಮಾನವನಿಗಿತ್ತು. ಆಧುನಿಕೋಪಕರಣ ಗಳ ಸಹಾಯವಿಲ್ಲವೆಯೇ ಅವನು ಹವಾಮಾನದ ಭವಿಷ್ಯವನ್ನು ವಾಚಿಸುತ್ತಿದ್ದನು. ಪಶು ಪಕ್ಷಿಗಳ ವರ್ತನೆಯಿಂದ, ಗಾಳಿಯ ಚಲನೆಯಿಂದ, ಮುಗಿಲಿನ ಲಕ್ಷಣದಿಂದ ವರ್ಷಾಗಮನ ವನ್ನವನು ಕಂಡುಕೊಳ್ಳುತ್ತಿದ್ದನು. ಭೂಕಂಪದ ಮುನ್ಸೂಚನೆ ಕೆಲವು ಪ್ರಾಣಿಗಳ ಗಮನಕ್ಕೆ ಬರುತ್ತದೆಂಬ ವಿಷಯ ಅವನಿಗೆ ಬಹು ಹಿಂದೆಯೇ ತಿಳಿದಿತ್ತು. ಅವನಿಗೆ ತಕ್ಕಮಟ್ಟಿನ ಖಗೋಲಜ್ಞಾನವೂ ಇತ್ತು. ಈ ವಿವಿಧ ವಿಜ್ಞಾನಿಗಳು ಜಾನಪದದ ಕಡೆಗೆ ಗಮನ ಹರಿಸುವುದಾದರೆ ಅವರ ಜ್ಞಾನ ವರ್ಧಿಸೀತು.

ಇತಿಹಾಸಕಾರ ಜಾನಪದದ ಕಡೆಗೆ ಲಕ್ಷ್ಯವೀಯದಿರುವುದಂತು ಅಕ್ಷಮ್ಯ ವಿಚಾರ ವಾಗಿವೆ. ಗೀತೆ, ಕಥೆ, ಗಾದೆ, ಒಗಟು, ಬಯಲಾಟ, ಐತಿಹ್ಯ, ಪುರಾಣ, ಸಂಪ್ರದಾಯ ಇವೇ ಮೊದಲಾದ ಜಾನಪದ ಪ್ರಕಾರಗಳಲ್ಲಿ ಐತಿಹಾಸಿಕಾಂಶಗಳು ಸಾಂದ್ರವಾಗಿ ಸಮಾವೇಶಗೊಂಡಿವೆ. ಅನೇಕ ಕಥನ ಕಾವ್ಯಗಳು ಕೆಂಪೇಗೌಡ, ಮಲ್ಲಸರ್ಜನಾಯಕ, ಚನ್ನಮ್ಮ, ರಾಯಣ್ಣ ಮೊದಲಾದ ವೀರರ ಮತ್ತು ವೀರಮಾತೆಯರ ಸುತ್ತ ನೇಯ್ಗೆ ಗೊಂಡಿರುವುದರಿಂದ, ಅವು ಒಂದೊಂದೂ ಐತಿಹಾಸಿಕ ಕೃತಿಗಳೆಂದೇ ಹೇಳಬಹುದು. ಪ್ರತಿಯೊಂದು ಪುರಾಣ ಅಥವಾ ಐತಿಹ್ಯದ ಹಿಂದೆ ಚಾರಿತ್ರಿಕ ಘಟನೆಯೊಂದು ಇದ್ದೇ ಇರುತ್ತದೆ; ಅವು ಪ್ರಚ್ಛನ್ನ ಇತಿಹಾಸಗಳು. ಕರಿಬಂಟನ ಕಾಳಗವಾಗಲಿ, ಸಾರಂಗಧರ ನಾಟಕವಾಗಲಿ ನಡೆದ ಸಂಗತಿಯೊಂದರ ಚಪ್ಪರದ ಮೇಲೆ ಕವಿ ಹಬ್ಬಿಸಿರುವ ಕಲಾಲತೆ. ಒಂದು ನಾಡಿನ ಪ್ರಾಮಾಣಿಕವಾದ ಸಾಂಸ್ಕೃತಿಕ ಚರಿತ್ರೆಗೆ ಬೇಕಾದ ಸಾಮಗ್ರಿಯನ್ನು ಜಾನಪದದಿಂದ ಪಡೆಯಬೇಕಾಗುತ್ತದೆ. ಚರಿತ್ರೆಯಲ್ಲಿ ಕಾಣಬಹುದಾದ ಹಲವು ಪಿಗ್ಗ ಗಳನ್ನು ಜಾನಪದದ ನೆರವಿನಿಂದ ತುಂಬಬಹುದಾಗಿದೆ. ಲಿಖಿತಶಾಸನಗಳಂತೆಯೇ ಈ ಅಲಿಖಿತ ಶಾಸನಗಳಿಗೂ ಚರಿತ್ರಕಾರ ಬೆಲೆಕೊಟ್ಟದ್ದಾದರೆ ಇತಿಹಾಸದ ಅಧ್ಯಯನ ಪೂರ್ಣ ವಾಗುತ್ತದೆ.

ಜ್ಞಾನವಿಜ್ಞಾನಗಳು ಪ್ರತ್ಯೇಕಗೊಂಡಾಗ, ಎಂದರೆ ಜ್ಞಾನ ಅನುಭವವಾಗದಿದ್ದಾಗ ಅಥವಾ ಪ್ರಾಯೋಗಿಕವಾಗದಿದ್ದಾಗ ಅದು ಅಸಾರ್ಥಕವಾಗುತ್ತದೆ. ನಮ್ಮ ಶಿಕ್ಷಣ ಪದ್ಧತಿಯ ನ್ಯೂನತೆಯೇ ಇದು. ಕೃಷಿಕ ತಂದೆ ನಾಲ್ಕುಗೋಡೆಗಳ ನಡುವೆ ಮಗನನ್ನು ಕೂರಿಸಿಕೊಂಡು ಪಾಠ ಹೇಳುತ್ತಿರಲಿಲ್ಲ. ಪಾಠ ಮತ್ತು ಅಭ್ಯಾಸಗಳು ಜತೆಜತೆಯಾಗಿಯೇ ಸಾಗುತ್ತಿದ್ದುವು. ಆದ್ದರಿಂದಾಗಿ ಪ್ರತಿಯೊಬ್ಬ ವೃತ್ತಿಜೀವಿಯೂ ತನ್ನ ಉದ್ಯೋಗದಲ್ಲಿ ಪರಿಣತಿ ಪಡೆಯುತ್ತಿದ್ದನಲ್ಲದೆ, ಹೊಸ ಹೊಸ ಸಂಶೋಧನೆಗಳನ್ನು ನಡಸುವ ಸಾಮರ್ಥ್ಯ ವನ್ನು ಪಡೆಯುತ್ತಿದ್ದನು. ಪ್ರಯೋಗಶಾಲೆಯಲ್ಲಿ ಕಲಿತಾಗ ಮಾತ್ರ ವೈಜ್ಞಾನಿಕ ಶಿಕ್ಷಣ ಸಾರ್ಥಕವಾಗುತ್ತದೆ. ಬರಿಯ ತತ್ವಜ್ಞಾನದಿಂದ ಏನೇನೂ ಪ್ರಯೋಜನ ಲಭಿಸುವುದಿಲ್ಲ. ಅದು ಕ್ರಿಯಾರೂಪವನ್ನು ತಳೆದಾಗ ಮಾತ್ರ ಅದರ ಇರವು ಅರ್ಥವಾಗುತ್ತದೆ. ಜ್ಞಾನದ ಪ್ರಾಯೋಗಿಕ ಮಹತ್ವಕ್ಕೆ ಜಾನಪದವಲ್ಲಿ ಸಾಕಷ್ಟು ಸಾಕ್ಷಿ ದೊರೆಯುತ್ತದೆ. ಶಿಕ್ಷಣ ತಜ್ಞರು ವೃತ್ತಿಜಾನಪದ ಮೊದಲುಗೊಂಡು ಸಾಹಿತ್ಯ ಗಾದೆ ಒಗಟು ಮೊದಲಾದ

ಜಾನಪದ ಪ್ರಕಾರಗಳ ಕಡೆಗೆ ಗಮನಹರಿಸಿದ್ದಾದರೆ ನೂತನ ಶಿಕ್ಷಣ ತತ್ತ್ವಶಾಸ್ತ್ರವನ್ನು ರೂಪಿಸಲು ಸಾಧ್ಯವಾಗುತ್ತದೆ.

ಸಾಹಿತ್ಯಕಲೆಗಳಿಗೂ ಜಾನಪದಕ್ಕೂ ಇರುವ ಸಂಬಂಧ ಅತ್ಯಂತ ಗಾಢವಾದದ್ದು; ಅಷ್ಟೇ ಅಲ್ಲ, ಜಾನಪದ ಸಾಹಿತ್ಯಕ್ಕೂ ಶಿಷ್ಟಸಾಹಿತ್ಯಕ್ಕೂ ನಡುವೆ ಹೊಕ್ಕುಳಬಳ್ಳಿ ನಂಟಿದೆಯೆಂಬ ಸಿದ್ಧಾಂತವನ್ನು ಹೊಸದಾಗಿ ಸ್ಥಾಪಿಸಬೇಕಾಗಿಲ್ಲ. ಒಂದಿದ್ದದ್ದು ಎರಡಾಗಿ, ಎರಡೂ ಅನಂತರ ಸಮಾನಾಂತರವಾಗಿ ಬೆಳೆಯುತ್ತ, ಪರಸ್ಪರ ಪ್ರಭಾವದಿಂದ ವೃದ್ಧಿ ಹೊಂದುತ್ತವೆಯೆಂಬ ಅಂಶ ಯಾವ ಭಾಷೆಯ ಸಾಹಿತ್ಯಚರಿತ್ರೆಯನ್ನೋದಿದರೂ ಸುಸ್ಪಷ್ಟವಾಗುತ್ತದೆ. ಯಾವ ಸಾಹಿತ್ಯಕೃತಿಯನ್ನು ಬಿಚ್ಚಿದರೂ ಅಲ್ಲಿ ಜಾನಪದೀಯಾಂಶಗಳು ಅಲ್ಲಲ್ಲಿ ಮಿನುಗುವುದನ್ನು ಗಮನಿಸಬಹುದು. ಶಿಷ್ಟಸಾಹಿತ್ಯದಲ್ಲಿ ಕಾಣೆಯಾದ ಸಾಹಿತ್ಯದ ಕೆಲವು ಮುಖಗಳನ್ನು ಜಾನಪದದಲ್ಲಿ ಕಾಣಬಹುದಾಗಿದೆ. ಆದ್ದರಿಂದ ಅವೆರಡೂ ಪರಸ್ಪರ ಪೂರಕವೆಂದು ಧಾರಾಳವಾಗಿ ಹೇಳಬಹುದು. ಮಾನವನ ಹುಟ್ಟಿನೊಂದಿಗೆ ಕುಣಿತ ಮೆರೆಯಿತು; ಭಾವವೇ ರಾಗವಾಗಿ ಹರಿಯಿತು. ಆ ಕುಣಿತ ನಾಟ್ಯಕ್ಕೂ, ಆ ರಾಗಗಳು ಸಂಗೀತಕ್ಕೂ, ಅವನ ಆಗಿನ ಆಟಪಾಟಗಳೇ ಈಗಿನ ಕ್ರೀಡಾವಿನೋದಗಳಿಗೂ ಗಂಗೋತ್ರಿಯಾದುವೆಂಬುದು ಸಂದೇಹದೂರವಾದ ಐತಿಹಾಸಿಕ ಸತ್ಯವಾಗಿದೆ. ನವಿಲಿನ ಅಂದಚಂದಗಳು, ಮುಗಿಲಿನ ಮಾಯಾಲೋಕ, ನಿಸರ್ಗದ ನಗ್ನಸೌಂದರ್ಯ ಮಾನವನ ಸುಪ್ತ ಚಿತ್ರಪ್ರಜ್ಞೆಯನ್ನು ಜಾಗೃತಗೊಳಿಸಿದಂತೆ, ಹಕ್ಕಿಯ ಗೂಡು, ಮರದಪೊಟರೆ ಹಾಗೂ ಪ್ರಕೃತಿಸಹಜವಾದ ಗುಹೆಗಳು ಅವನ ವಾಸ್ತು ಹಾಗೂ ಶಿಲ್ಪ ಪ್ರಜ್ಞೆಯನ್ನು ಎಚ್ಚರಗೊಳಿಸಿರಬೇಕು. ಸೃಷ್ಟಿಯಲ್ಲೆಲ್ಲ ಮನುಷ್ಯ ಸೃಷ್ಟಿಯೇ ಅತ್ಯದ್ಭುತವಾದದ್ದು. ಸಾಂಸ್ಕೃತಿಕ ಇತಿಹಾಸ ಹಾಗೂ ವೈಜ್ಞಾನಿಕ ಪ್ರಗತಿಗಳು ಈ ಮಾತಿನ ಯಥಾರ್ಥತೆಯನ್ನು ಸಿದ್ಧಗೊಳಿಸುತ್ತವೆ. ಅವನ ಬುದ್ಧಿಪ್ರತಿಭೆಗಳು, ಅವನ ಶಕ್ತಿಸಾಮರ್ಥ್ಯಗಳು ಅಮೇಯವಾದುವು. ಆದಿಮಾನವನಿಂದ ಹಿಡಿದು ಆಧುನಿಕ ಮಾನವನತನಕ ಅವು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಸುಪ್ತಸ್ಥಿತಿಯಲ್ಲಿ ನಿಹಿತವಾಗಿರುತ್ತವೆ. ಪರಿಸರ ಪ್ರೇರಣೆಗಳಿಂದ ಅವು ಉದ್ಬೋಧವಾಗುತ್ತವೆ. ಅವು ಮೊದಲೇ ಇಲ್ಲದಿದ್ದರೆ, ಯಾವ ಪ್ರೇರಣೆಯೂ ಪ್ರಯೋಜನವಾಗುತ್ತಿರಲಿಲ್ಲ. ಕಾಷ್ಠದಲ್ಲಿ ಅಗ್ನಿಶಕ್ತಿ ಮೊದಲೇ ಅಂತರ್ನಿಹಿತವಾಗಿರುವುದರಿಂದ, ತಿಕ್ಕಿದಾಗ ಕಿಡಿ ಸಿಡಿಯುತ್ತದೆ. ವಿದ್ಯುಚ್ಛಕ್ತಿ ಪರಿಸರಕ್ಕೆ ತಕ್ಕಂತೆ ನಾನಾ ರೂಪ ಪಡೆಯುವಂತೆ ಬುದ್ಧಿಪ್ರತಿಭೆಯೂ ಆಯಾಯ ಸನ್ನಿವೇಶಕ್ಕೆ ತಕ್ಕಂತೆ ಅನೇಕ ರೂಪಗಳನ್ನು ತಾಳುತ್ತವೆ. ಅದು ಒಬ್ಬರಲ್ಲಿ ಕಲೆಯಾಗಿ ಹೊಮ್ಮಿದರೆ, ಮತ್ತೊಬ್ಬನಲ್ಲಿ ವಿಜ್ಞಾನವಾಗಿ ಪ್ರಕಟವಾಗುತ್ತದೆ. ಆದ್ದರಿಂದಲೇ ಆಧುನಿಕ ಜಗತ್ತಿಗೆ ಆದಿಮಾನವನ ಕೊಡುಗೆ ಸಾಮಾನ್ಯವಾದದ್ದಲ್ಲ ಎಂದು ಹೇಳುವುದು.

೨

ಈ ದಿಶೆಯಲ್ಲಿ ಕರ್ನಾಟಕದಲ್ಲಾಗಲೀ ಭಾರತದ ಉಳಿದೆಡೆಗಳಲ್ಲಾಗಲೀ ಏನೇನೂ ಕೆಲಸ ನಡೆದಿಲ್ಲವೆಂದೇ ಹೇಳಬೇಕು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜಾನಪದ ಪ್ರಜ್ಞೆ ಮೂಡಿ

ಸುಮಾರು ಇನ್ನೂರು ವರ್ಷಗಳ ಮೇಲಾಯಿತು. ಈ ನಾಡಿನಲ್ಲಿ ಈ ಬಗ್ಗೆ ಆಸಕ್ತಿ ಚಿಗುರಿದ್ದು ಕೇವಲ ಐವತ್ತು-ಅರುವತ್ತು ವರ್ಷಗಳ ಹಿಂದೆ. ಅಲ್ಲೊಬ್ಬರು ಇಲ್ಲೊಬ್ಬರು ಒಂಟೊಂಟಿಯಾಗಿ ಕೆಲಸ ಪ್ರಾರಂಭಿಸಿದರು. ಅವರಿಗೆ ಪಂಡಿತರ ಪ್ರೋತ್ಸಾಹವಂತು ದೊರೆಯಲಿಲ್ಲ. ವಿದ್ವಾಂಸರ ಮತ್ತು ವಿಶ್ವವಿದ್ಯಾನಿಲಯಗಳ ಗಮನ ಆ ಕಡೆಗೆ ಹರಿದದ್ದು ಸ್ವಾತಂತ್ರ್ಯಾನಂತರ. ಆದರೂ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನಗಳಿಗೆಷ್ಟು ಪುರಸ್ಕಾರ ಸಿಗಬೇಕೋ ಅಷ್ಟು ಸಿಕ್ಕಿಲ್ಲ. ಯಾನ ಸೌಲಭ್ಯಗಳು ಯಥೇಚ್ಛವಾಗಿರುವ, ದೇಶ ವಿದೇಶಗಳ ಜನರ ಸಂಪರ್ಕ ಮಿಗಿಲಾಗುತ್ತಿರುವ ಹಾಗೂ ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಕೃತಿ ತೀವ್ರಗತಿಯಲ್ಲಿ ವ್ಯಾಪಿಸುತ್ತಿರುವ ಈ ಕಾಲದಲ್ಲಿ ಶಿಷ್ಟರ ತಿರಸ್ಕಾರಕ್ಕೆ ಪಾತ್ರವಾಗಿರುವ ಜಾನಪದ ಸಂಸ್ಕೃತಿ ಬಹುಬೇಗನೆ ಮರೆಯಾಗಿ, ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳು ನಿರ್ನಾಮಗೊಳ್ಳುವ ಸಂಭವವಿದೆ. ಸಂಸ್ಕೃತಿಯೆಂಬುದು ಹರಿವ ನದಿಯೇ ಹೊರತು, ನಿಂತ ಮಡುವಲ್ಲ ನಿಜ. ನವೋನವವಾಗುತ್ತಿರುವ ಸಂಸ್ಕೃತಿ ಜೀವಂತ ಜನಾಂಗದ ಲಕ್ಷಣ. ಆದರೆ ತನ್ನ ಸಂಸ್ಕೃತಿಯ ಇತಿಹಾಸವನ್ನು ರಕ್ಷಿಸಿಕೊಳ್ಳಬೇಕಾದ್ದು ಪ್ರತಿಯೊಂದು ಜನಾಂಗದ ಪ್ರಥಮ ಕರ್ತವ್ಯವಾಗಬೇಕು. ಸಂಸ್ಕೃತಿಯ ನವೀಕರಣಕ್ಕು ಅದು ಸಹಾಯವಾಗುತ್ತದೆ. ಪ್ರತಿಯೊಂದು ರಾಜ್ಯದಲ್ಲಿ ನಾಲ್ಕಾರು ಜಾನಪದ ವಸ್ತು ಸಂಗ್ರಹಾಲಯಗಳು ವ್ಯವಸ್ಥೆಗೊಂಡು, ವಿವಿಧ ವೃತ್ತಿಗಳಿಗೆ ಹಾಗೂ ನಾನಾಕಲೆಗಳಿಗೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಬೇಕು. ಒಂದಾದರೂ ಬಯಲು ವಸ್ತು ಸಂಗ್ರಹ ಕ್ಷೇತ್ರವನ್ನೇರ್ಪಡಿಸಿ, ಹಳ್ಳಿಗಳಿಗೆ, ಬುಡಕಟ್ಟು ಜನರಿಗೆ, ಅಂಥದೇ ವಿಶಿಷ್ಟ ವ್ಯಕ್ತಿತ್ವವುಳ್ಳ ಇತರ ಸಮಾಜಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಆಯಾಯ ಜನರ ಜೀವನ ಎದ್ದು ಕಾಣುವಂತೆ, ಹಳ್ಳಿಯ ಅಥವಾ ಬುಡಕಟ್ಟು ಜನರ ಹಾಡ್ಯಗಳ ಚಿತ್ರ ಕಣ್ಣಿಗೆ ಕಟ್ಟುವಂತೆ ಪರಿಸರವನ್ನು ಸೃಷ್ಟಿಸಬೇಕು.

ಜಾನಪದ ಸಂಗ್ರಹವೆಂದರೆ ಬರಿಯ ಸಾಹಿತ್ಯ ಸಂಗ್ರಹವಲ್ಲ ; ಜಾನಪದ ಸಂಸ್ಕೃತಿಗೆ ಸಂಬಂಧಿಸಿದ ಸಕಲಸಾಮಗ್ರಿಗಳ ಸಂಗ್ರಹ. ಈ ದೃಷ್ಟಿಯಿಂದ ಭಾರತದಲ್ಲಿ ನೂರರಲ್ಲೊಂದು ಭಾಗದಷ್ಟಾದರೂ ಕೆಲಸವಾಗಿಲ್ಲವೆಂದು ಹೇಳಬಹುದು. ಮೀನುಗಾರರ, ಬೇಟೆಗಾರರ, ಇಂತೆಯೇ ವಿವಿಧ ವೃತ್ತಿಜೀವಿಗಳ ವೃತ್ತಿವಿಧಾನಗಳನ್ನಾಗಲೀ ಅವರ ಉಪಕರಣಗಳನ್ನಾಗಲೀ ಸಂಗ್ರಹಿಸಿದಂತೆ ಕಾಣುವುದಿಲ್ಲ. ಅದೂ ಇರಲಿ, ಉಡುಗೆ ತೊಡುಗೆಗಳ ಮಾದರಿಗಳನ್ನು ಒಟ್ಟೈಸಿದಂತೆಯೂ ತೋರುವುದಿಲ್ಲ. ಮಾನವನ ಕಲಾಭಿರುಚಿ ಅವನ ಪ್ರತಿಯೊಂದು ಕ್ರಿಯೆಯಲ್ಲಿಯೂ ಅಭಿವ್ಯಕ್ತಗೊಳ್ಳುತ್ತದೆ. ಆಧುನಿಕ ಮಾನವನಂತೆಯೇ ಆದಿಮಾನವನೂ ಕಲಾಪ್ರಿಯ. ಕಲಾಭಿವ್ಯಕ್ತಿಯ ಮಾಧ್ಯಮ ಈಗೊಂದಾದರೆ ಆಗ ಮತ್ತೊಂದಿರುತ್ತಿತ್ತು. ಈಗಿನಂತೆ ಆಗ ಉಣ್ಣೆ ಹತ್ತಿ ನೈಲಾನ್ ಮೊದಲಾದ ಸಾಮಗ್ರಿಗಳಿರಲಿಲ್ಲ, ಲೋಹಗಳಿರಲಿಲ್ಲ, ಮುತ್ತುರತ್ನಗಳಿರಲಿಲ್ಲ ; ಅಷ್ಟೇ ಅಲ್ಲ, ಮೈ ಮುಚ್ಚಿಕೊಳ್ಳುವ ಗೋಜಿಗೂ ಹೋಗುತ್ತಿರಲಿಲ್ಲ. ಹಸಿವು ನೀಗಿತೆಂದರೆ ಅವನಿಗೆ ಬೇರೆ ಕೆಲಸವೇ ಇಲ್ಲ. ಉಳಿದ ಸಮಯವನ್ನು ಆಟಪಾಟಗಳಲ್ಲಿ ಕುಣಿತದಲ್ಲಿ ಕಳೆಯುತ್ತಿದ್ದ. ಮುಣ್ಣಿಂದ ಮರದ

ಮೇಲೆ ಬಂಡೆಯ ಮೇಲೆ ಚಿತ್ರ ಬರೆಯುತ್ತಿದ್ದ. ಅದೇ ಚಿತ್ರಗಳು ಅವನ ಮೈಯನ್ನು ಸಿಂಗರಿಸುತ್ತಿದ್ದುವು. ಹೂಲಿಹಣ್ಣಿನದೋ ಗೋರಂಟಿ ಎಲೆಯದೋ ರಸವನ್ನು ಚಿತ್ರ ವಿಚಿತ್ರವಾಗಿ ಮೈಮೇಲೆಲ್ಲ ಬಳಿದುಕೊಳ್ಳಲಾರಂಭಿಸಿದ. ಸಾಹಸದ ಕುರುಹಾಗಿ ತಾನು ಕೊಂದ ಪ್ರಾಣಿಯ ರಕ್ತವನ್ನು ಮೈಮೇಲೆ ಬಳಿದುಕೊಳ್ಳುತ್ತಿದ್ದ. ಕೊಲೆಯಾದ ಶತ್ರುವಿನ ರಕ್ತವನ್ನು ಕುಡಿದು, ಮೈಗೂ ಲೇಪಿಸಿಕೊಳ್ಳುತ್ತಿದ್ದ. ಮಹಾಭಾರತದಲ್ಲಿ ಭೀಮ ದುಶ್ಶಾಸನನನ್ನು ಕೊಂದು, ಅವನ ರಕ್ತವನ್ನು ಕುಡಿದು ದ್ರೌಪದಿಯ ಮುಡಿಗೂ ಹಚ್ಚಿ ಬಾಚಿದ್ದನ್ನು ನೆನೆಸಿಕೊಳ್ಳಬಹುದು. ಕಾದಾಟದಲ್ಲಿ ಗಾಯಗೊಂಡ ಮೈಮೇಲಿನ ರಕ್ತದ ಕಲೆಗಳು ವೀರರ ಕುರುಹು ಮಾತ್ರವಲ್ಲ, ಸೌಂದರ್ಯವರ್ಧಕ ಚಿಹ್ನೆಗಳೆಂದು ತೋರಿದ್ದೂ ಉಂಟು. ಆದ್ದರಿಂದ ಅವುಗಳನ್ನವರು ತೊಳೆಯುತ್ತಿರಲಿಲ್ಲ. ದೈಹಿಕ ಶಕ್ತಿಯೇ ಯೋಗ್ಯತೆಯ ಅಳತೆಯಾಗಿದ್ದ ಆ ಕಾಲದಲ್ಲಿ ಅಂಥವರಿಗೆ ಸಮಾಜದಲ್ಲಿ ವಿಶೇಷಗೌರವ ಸ್ಥಾನಮಾನಗಳು ದೊರಕುತ್ತಿದ್ದುವು: ಬೇಟೆಯಿಂದಲೋ ಯುದ್ಧದಿಂದಲೋ ಯಶಸ್ವಿಯಾಗಿ ಹಿಂದಿರುಗಿದವರಿಗೆ ವೀರೋಚಿತ ಸ್ವಾಗತ ಸಿಗುತ್ತಿತ್ತು.

ಬರಬರುತ್ತ ಶರೀರವನ್ನು ಜೇಡಿಯಿಂದಲೋ ಗಿಡಗಳ ರಸದಿಂದಲೋ ಸಿಂಗರಿಸಿಕೊಳ್ಳುವುದೇ ಒಂದು ಹವ್ಯಾಸವಾಯಿತು. ಆದರೆ ಆ ಸಿಂಗಾರ ಹೆಚ್ಚುದಿನ ಬಾಳಿಕೆ ಬರುತ್ತಿರಲಿಲ್ಲ. ಮೂಳೆಗಳಿಂದಲೋ ಕಲ್ಲುಗಳಿಂದಲೋ ಮಾಡಿದ ಚಾಕುಗಳಿಂದ ಕಣ್ಣಿಗೆ ಚೆಂದ ಕಾಣುವಂತೆ ಚರ್ಮದ ಮೇಲೆ ಗೆರೆ ಎಳೆಯುತ್ತಿದ್ದರು. ಗೆರೆ ಒಣಗಿದ ಮೇಲೆ ನಿಂತ ಮಚ್ಚೆಗಳು ಸಾಯುವತನಕ ಅಳಿಯುತ್ತಿರಲಿಲ್ಲ. ಕೊನೆಗೆ ಬಣ್ಣವನ್ನು ಸೇರಿಸಿ, ಹಚ್ಚೆ ಹುಯ್ಯಿಸಿಕೊಳ್ಳುವ ಪದ್ಧತಿ ರೂಢಿಗೆ ಬಂತು.

ಚಳಿ ಅಧಿಕವಾದಾಗ ಮರದ ತೊಗಟೆಯನ್ನೋ, ಗಿಡದ ಗರಿ ಎಲೆಗಳನ್ನೋ ಗುಹಾಮಾನವ ಮೈಮೇಲೆ ಮುಚ್ಚಿಕೊಂಡಿರಬೇಕು. ಕೊನೆಕೊನೆಗೆ ಅದೊಂದು ಶೋಕಿಯಾಗಿ ಕಂಡು, ವೀರರನ್ನು ಸ್ವಾಗತಿಸುವಾಗ ಹೂದಂಡೆಯನ್ನೋ ತಳಿರ ಹಾರವನ್ನೋ ಅವರ ಕೊರಳಿಗೆ ಹಾಕಿರಬೇಕು. ಕೊಂದ ಅಥವಾ ಸತ್ತ ಪ್ರಾಣಿಗಳ ಚರ್ಮವನ್ನು ಚಳಿಗಾಲದಲ್ಲಿ ಬಳಸಿಕೊಂಡಿರಬೇಕು. ಸತ್ತ ಮನುಷ್ಯ ಪ್ರೇತವಾಗುತ್ತಾನೆ, ಗಿಡಗಂಟೆಗಳಲ್ಲಿ ನೆಲಸುತ್ತಾನೆ, ಅಥವಾ ಮೂಳೆಗಳಲ್ಲಿ ಹುದುಗಿಕೊಂಡಿರುತ್ತಾನೆ ಎಂಬ ವಿಚಿತ್ರ ಕಲ್ಪನೆಗಳಿಂದಾಗಿ. ಅವನ ಮೂಳೆಗಳ ಹಾರವನ್ನು ಕೊರಳಿಗೆ ನೇತುಹಾಕಿಕೊಂಡದ್ದೂ ಉಂಟು. ಕಾಲಕ್ರಮೇಣ ಪ್ರಾಣಿಗಳ ಎಲುಬಿನಿಂದ ಮರದ ತುಂಡುಗಳಿಂದ ಆಭರಣ ಮಾಡಿಸಿಕೊಂಡು ಕೊರಳು ಕಿವಿ ಮೂಗು ನಡುಗಳಿಗೆ ತೊಟ್ಟುಕೊಳ್ಳುತ್ತಾನೆ. ಯುದ್ಧದಲ್ಲಿ ಸತ್ತ ಶತ್ರುಗಳ ಹಲ್ಲುಗಳ ಸರವನ್ನು, ಎಲುಬುಗಳಿಂದ ತಯಾರಿಸಿದ ಒಡವೆಗಳನ್ನು ಧರಿಸುವುದು ಸಾಹಸದ ಮತ್ತು ಹೆಮ್ಮೆಯ ಸಂಕೇತವಾಗುತ್ತದೆ. ಅಂಥವನು ಆರಾಧ್ಯದೇವತೆಯಾಗುವುದೂ ಉಂಟು. ಭೌಗೋಳಿಕ ಅಥವಾ ಹವಾಮಾನ ಪರಿಸ್ಥಿತಿ ಬದಲಿಗೆ ತೊಡುಗೆಗಳ ರೀತಿ ನೀತಿಗಳನ್ನು ನಿರ್ಧರಿಸುವಂತಾಗುತ್ತದೆ.

ಕೃಷಿಸಂಸ್ಕೃತಿ ವಿಕಾಸಗೊಂಡನಂತರ ಹತ್ತಿಯ ಬಳಕೆ ರೂಢಿಗೆ ಬಂದಿತೆಂದು

ಸ್ಪಷ್ಟ. ಪ್ರಾಯಶಃ ಜೇಡನ ಬಲೆ, ಜೇನುಹಲ್ಲೆ ಮತ್ತು ಪಶುಪಕ್ಷಿಗಳ ಗೂಡುಗಳು ಮಾನವನ ಭೋಗೋಪಕರಣಗಳ ತಯಾರಿಕೆಗೆ ಪ್ರೇರಣೆ ನೀಡಿರಬೇಕು. ಚಾಪೆಹೆಣಿಗೆಯಿಂದ ನೇಯ್ಗೆ ಪ್ರಾರಂಭವಾಗಿರಬೇಕು. ಅವರವರ ವೃತ್ತಿಗಳಿಗೆ ತಕ್ಕಂತೆ ವೇಷಭೂಷಣಗಳು ರೂಪುಗೊಂಡಿರಬೇಕು. ರೈತನಿಗೆ ಕೌಪೀನ, ಹೆಚ್ಚೆಂದರೆ ನಡುದಟ್ಟಿ ಸಾಕಾಗುತ್ತಿತ್ತು, ಯೋಧನಿಗೆ ಶಿರಸ್ತ್ರಾಣ ದೇಹತ್ರಾಣಗಳೆಲ್ಲ ಬೇಕಾಗುತ್ತಿದ್ದುವು; ರಾಜನಿಗೆ ಆಡಂಬರದ ವೇಷಭೂಷಣಗಳು ಅತ್ಯವಶ್ಯವಾಗಿದ್ದುವು. ಷರಾಯಿ ಪೌರ್ವಾತ್ಯ, ಅದರಲ್ಲಿಯೂ ಮಧ್ಯ ಏಷಿಯಾದ ವಸ್ತ್ರವಿಶೇಷ. ಅಂಥ ವಸ್ತ್ರಭೂಷಿತರನ್ನು ರೋಮನ್ನರು ಷರಾಯಿಯ ಬರ್ಬರರೆಂದು ಕರೆಯುತ್ತಿದ್ದರಂತೆ. ಜನಸಂಪರ್ಕ ಗಾಢವಾದಂತೆಲ್ಲ ವಸ್ತ್ರಭೂಷಣಗಳ ಕೊಳುಕೊಡೆ ವಿಶೇಷವಾಗಿ ಜರುಗುವಂತಾಗುತ್ತದೆ. ದೇವಾಲಯ ಮಠ ಮಸೀದಿಗಳಲ್ಲಿ ಕಾಣುವ ಚಿತ್ರ ಹಾಗೂ ವಿಗ್ರಹಗಳಿಂದ, ಮತ್ತು ಜಾನಪದ ಹಾಗೂ ಶಿಷ್ಟ ಸಾಹಿತ್ಯಗಳಲ್ಲಿ ಸಿಗುವ ವರ್ಣನೆಗಳಿಂದ ಪ್ರಾಚೀನಕಾಲದ ವಸ್ತ್ರಭೂಷಣಗಳ ವಿವರಗಳನ್ನರಿಯಬೇಕಾಗಿದೆ. ಆಧುನಿಕಯುಗದಲ್ಲಂತು ತಾಂತ್ರಿಕ ವಿಜ್ಞಾನದ ತೀವ್ರ ಪ್ರಗತಿಯಿಂದಾಗಿ, ಸಿನಿಮಾಗಳ ಪ್ರಾಬಲ್ಯದಿಂದಾಗಿ, ಹಾಗೂ ಭಿನ್ನ ನಾಗರಿಕತೆಗಳ ಸಂಸರ್ಗದಿಂದಾಗಿ ಹಳೆಯ ಮೌಲ್ಯಗಳು ಬಹುಬೇಗನೆ ವ್ಯತ್ಯಸ್ತಗೊಂಡು, ಜನರ ರುಚಿ ಅಭಿರುಚಿಗಳು ಶೀಘ್ರವಾಗಿ ಬದಲಾವಣೆಯಾಗುತ್ತಿವೆ. ಮುರಾವು, ಕಡಕು, ಒಂಟೆ, ತೋಡ, ಬಳೆ, ಮುರಿ, ಉಂಗುರ, ಕಡಗ, ದೊಡ್ಡಗುಂಡು, ಮೂಗುಬಟ್ಟು, ಕೆನ್ನೆಸರ, ಗುಬ್ಬಿ, ಪಿಲ್ಲಿ ಮೊದಲಾದ ಆಭರಣಗಳು ಕಾಣೆಯಾಗುತ್ತಿವೆ. ಸೀರೆ ಲಂಗ ಲುಂಗಿಗಳು ಸಹ ಪಲ್ಲಟಗೊಳ್ಳುವ ಅಥವಾ ರೂಪಾಂತರಗೊಳ್ಳುವ ಚಿಹ್ನೆಗಳು ಕಾಣುತ್ತಿವೆ. ಅದೇನೇ ಆಗಲಿ, ಹಳೆಯ ಉಡುಗೆತೊಡುಗೆಗಳ ಮಾದರಿಗಳನ್ನು ಸಂಗ್ರಹಿಸಿ ಅಧ್ಯಯನ ನಡಸಬೇಕಾದ್ದು ಜಾನಪದ ವಿದ್ವಾಂಸರ ಹಾಗೂ ಮಾನವಶಾಸ್ತ್ರಜ್ಞರ ಆದ್ಯಕರ್ತವ್ಯವಾಗಬೇಕು.

ಜಾನಪದ ನಾಗರಿಕತೆಯ ಹರಹನ್ನು ತಿಳಿಯಲು ಉಡುಗೆತೊಡುಗೆಗಳ ಇತಿಹಾಸವೆಂತು ಮುಖ್ಯವೋ, ಜಾನಪದ ಸಂಸ್ಕೃತಿಯ ಮೆರುಗನ್ನರಿಯಬೇಕಾದರೆ ವಿವಿಧ ಕಲೆಗಳ ವಿವರಗಳನ್ನರಿಯಬೇಕಾಗುತ್ತದೆ. ಆಧುನಿಕತೆಯ ಹಾವಳಿಯಿಂದಾಗಿ ಇತ್ತೀಚೆಗೆ ಲುಪ್ತವಾಗುತ್ತಿರುವ ಹರಿಕಥೆ ಕೀರ್ತನೆ ಮತ್ತು ಗಮಕಕಲೆಗಳನ್ನಿಲ್ಲಿ ಹೆಸರಿಸಬಹುದಾಗಿದೆ. ಅವು ಕಣ್ಮರೆಯಾಗುತ್ತವೆಂದು ಯಾರೂ ಚಿಂತಿಸಬೇಕಾಗಿಲ್ಲ. ಲೋಕದಲ್ಲಿ ಯಾವ ವ್ಯವಸ್ಥೆಯೂ ಶಾಶ್ವತವಲ್ಲ. ಆದರೆ ಅವುಗಳ ಸ್ಥಾನದಲ್ಲಿ ಪರ್ಯಾಯ ವ್ಯವಸ್ಥೆಗಳು ಏರ್ಪಾಡಾಗಿದ್ದರೆ ಚೆನ್ನಾಗಿರುತ್ತಿತ್ತು. ಈಗ ರೇಡಿಯೋ ಇದೆ, ಟೆಲಿವಿಷನ್ ಬರುತ್ತದೆ; ಹೇಗೂ ಅವುಗಳ ಮೂಲಕ ಸಂಸ್ಕೃತಿ ಪ್ರಚಾರ ನಡೆಯುತ್ತದೆ. ಆದರೆ ಅಂಥ ಕಲೆಗಳು ಒಂದಾನೊಂದು ಕಾಲದಲ್ಲಿ ಬಹುಜನಪ್ರಿಯವಾಗಿದ್ದುವು, ಅವು ಪ್ರಬಲ ಸಂಪರ್ಕಮಾಧ್ಯಮಗಳಾಗಿದ್ದುವು, ಅವುಗಳ ರೂಪಸ್ವರೂಪಗಳು ಇವು, ಅವುಗಳ ಇತಿಹಾಸವಿದು ಎನ್ನುವುದನ್ನು ತೋರಿಸುವ ಪತ್ರಾಗಾರವೋ, ಧ್ವನಿಮುದ್ರಾಗಾರವೋ

ವ್ಯವಸ್ಥೆಗೊಳ್ಳಬಾರದೇ? ಅವುಗಳ ಬಗೆಗೆ ಸಂಶೋಧನೆ ನಡೆಯಬೇಡವೆ? ಮುಂದೆ ಎಂದಾದರೊಂದು ದಿನ ಅವುಗಳನ್ನು ಸ್ಮರಿಸಿಕೊಳ್ಳಬೇಕಾದ ಮತ್ತು ಅವುಗಳಿಂದ ಸ್ಫೂರ್ತಿ ಪಡೆಯಬೇಕಾದ ಸಂದರ್ಭವೊದಗೀತೆಂದು ಕಣಿ ನುಡಿಯಬೇಕಾಗಿಲ್ಲ.

ಈ ಕಲೆಗಳು ಎಂಥ ಮಹತ್ವಪೂರ್ಣವಾದುವೆನ್ನುವುದನ್ನು ತೋರಿಸಲು ಗಮಕಕಲೆಯೊಂದೇ ಜನ ಮನಸ್ಸಿನಮೇಲೆ ಅಚ್ಚೊತ್ತಿದ್ದ ಪ್ರಭಾವಮುದ್ರೆಯ ಕಡೆಗೆ ನೆನಹುಗಣ್ಣು ತುಸು ಹೊರಳಿಸಬಹುದು. ಪದರಚನೆಯ ರಹಸ್ಯವನ್ನರಿತು, ಛಂದಸ್ಸಿನ ಬೆಡಗು ಬಿನ್ನಾಣಗಳನ್ನೂ ವೈವಿಧ್ಯವನ್ನೂ ಗ್ರಹಿಸಿ, ಭಾವಾರ್ಥಲಯಗಳನ್ನು ಮಾನ್ಯಮಾಡಿ, ರಸಧ್ವನಿ ರೀತಿ ಮೊದಲಾದ ಕಾವ್ಯಾಂಗಗಳು ಪ್ರಸ್ಫುಟವಾಗುವಂತೆ, ಕವಿವಾಣಿಯಲ್ಲಿ ರಾಗದ ಮೋಹಕತೆಯನ್ನು ತುಂಬಿ, ಶ್ರೋತೃವೃಂದದ ಬುದ್ಧಿ ಹೃದಯಗಮ್ಯವಾಗುವಂತೆ, ಅವರ ಮನಸ್ಸನ್ನು ಸಮ್ಮೋಹಿಸುವಂತೆ, ಹಾಡುವ ಧಾಟಿಯಲ್ಲಿಯೇ ಮಾತಿನ ಮೋಡಿ, ಭಾವದ ಬಣ್ಣ, ಅರ್ಥಕಾಂತಿಗಳು ಹೊರಹೊಮ್ಮುವಂತೆ ವಾಚಿಸುವುದೇ ಗಮಕ. ಸಮಾಜದಲ್ಲಿ ಕವಿಗಿದ್ದ ಮಾನ್ಯತೆ ಗಮಕಿಗೂ ಇತ್ತು. ಅಷ್ಟೇ ಅಲ್ಲ, ಕವಿಯನ್ನು ಮರೆಯಿಸುವ ಶಕ್ತಿ ಸಹ ಗಮಕಿಗಿತ್ತು. ಸಾಮಾನ್ಯಜನ ಗಮಕವನ್ನು ಕೇಳುವಾಗ, ಅವರ ಮುಂದಿರುವವನು ಗಮಕಿಯೇ ಹೊರತು ಕವಿಯಲ್ಲ. ಕಾವ್ಯನಿರ್ಮಿತಿಯನಂತರ ಕವಿ ಕಾರ್ಯ ಮುಗಿಯಿತು; ಆ ಕಾವ್ಯದ ಮುಂದಿನ ಯಶಸ್ಸು ಗಮಕಿಗೆ ಬಿಟ್ಟದ್ದು. ಕುಮಾರವ್ಯಾಸ ಲಕ್ಷ್ಮೀಶ ಷಡಕ್ಷರಿಯರು ಇಂದಿಗೂ ಸಾಮಾನ್ಯ ಜನತೆಯ ಹೃದಯದಲ್ಲಿ ಮಂಡಿಸಿದ್ದರೆ ಗಮಕಿಗಳೇ ಕಾರಣ. ಗಮಕಿಯಿಲ್ಲದ ಕಾವ್ಯ ಸಾರಥಿಯಿಲ್ಲದ ತೇರಾಗುತ್ತದೆ. ಗಮಕಿ ಕೇವಲ ವಾಚಕನಲ್ಲ: ಅವನು ವ್ಯಾಖ್ಯಾನಕಾರನೂ ಅಹುದು. ಅವನು ಸಹೃದಯನಾಗದಿದ್ದರೆ, ಉತ್ತಮ ವಿಮರ್ಶಕನಾಗದಿದ್ದರೆ, ಪರಕಾಯಪ್ರವೇಶ ಸಾಮರ್ಥ್ಯವನ್ನು ಪಡೆಯಲಾಗದಿದ್ದರೆ, ಉತ್ತಮ ಗಮಕಿಯಾಗಲಾರ. ಆದ್ದರಿಂದಲೇ ಹಿಂದಿನ ರಾಜಾಸ್ಥಾನಗಳಲ್ಲಿ ಕವಿ ವಾದಿ ಗಾಯಕ ಸಚಿವರ ಸಾಲಿನಲ್ಲಿ ಗಮಕಿಗಳಿಗೂ ಸಮಾನ ಸ್ಥಾನವಿರುತ್ತಿತ್ತು. ಗಮಕ ಪ್ರಧಾನವಾಗಿ ಜಾನಪದ ಕಲೆ. ಮುಂದೆ ಅದರ ಅವಶೇಷಗಳು ಉಳಿಯಲಿ, ಅಳಿಯಲಿ, ವಿಶ್ವವಿದ್ಯಾನಿಲಯಗಳಲ್ಲಿ, ಅಥವಾ ಜಾನಪದ ಸಂಸ್ಥೆಗಳಲ್ಲಿ ಅದರ ಅಧ್ಯಯನ ಮತ್ತು ಸಂಶೋಧನೆಗಳು ಅತ್ಯವಶ್ಯವಾಗಿ ನಡೆಯಬೇಕಾಗಿದೆ.

ಜಾನಪದದ ಮತ್ತೊಂದು ಪ್ರಕಾರ ಆಟಪಾಟಗಳು. ಅವುಗಳಿಗೆ ನೂರಾರು ಸಾವಿರಾರು ವರ್ಷಗಳ ಪರಂಪರೆಯಿದೆ. ಆಟಪಾಟಗಳಿಲ್ಲದ ಸಮಾಜವಿಲ್ಲ. ಜನಾಂಗವಿಲ್ಲ: ಅಂತೆಯೇ ಅವುಗಳ ಸಂಖ್ಯೆಯೂ ಕಿರಿದಲ್ಲ. ಕನ್ನಡನಾಡಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರವಾಸ ಕೈಗೊಂಡದ್ದಾದರೆ ನೂರಾರು ಆಟಗಳು ಕಣ್ಣಿಗೆ ಬೀಳುತ್ತವೆ. ಅವುಗಳ ತಂತ್ರಕೌಶಲವನ್ನೂ, ಅವುಗಳ ಹಿನ್ನೆಲೆಯಲ್ಲಿರುವ ಉತ್ಸಾಹವನ್ನೂ, ಆಟಗಾರರ ಮತ್ತು ಪ್ರೇಕ್ಷಕರ ದೇಹ ಮನಸ್ಸುಗಳ ಮೇಲೆ ಅವು ಬೀರುವ ಪ್ರಭಾವವನ್ನೂ ನೋಡಿದಾಗ ಆಶ್ಚರ್ಯವಾಗುತ್ತದೆ. ಕುಮಾರವ್ಯಾಸ ಹತ್ತಾರು ಆಟಗಳನ್ನು ಹೆಸರಿಸುತ್ತಾನೆ. ಆ

ಆಟಗಳ ತಂತ್ರಕೌಶಲ, ಮನೋವೈಜ್ಞಾನಿಕ ಹಿನ್ನೆಲೆ, ಅವುಗಳಿಂದೊದಗುವ ದೈಹಿಕ ಹಾಗೂ ಮಾನಸಿಕ ಪ್ರಯೋಜನಗಳು—ಹೀಗೆ ನಾನಾ ದೃಷ್ಟಿಕೋನಗಳಿಂದ ಅವುಗಳನ್ನು ಅಧ್ಯಯನ ಮಾಡಬಹುದಾಗಿದೆ.

ಇಂಥದೇ ಮತ್ತೊಂದು ಫಲವತ್ತಾದ ಕ್ಷೇತ್ರ ಪಾಕಕಲೆಗೆ ಸಂಬಂಧಿಸಿದ್ದು. ಅದು ಕಲೆ ಮಾತ್ರವಲ್ಲ, ವಿಜ್ಞಾನವೂ ಅಹುದು. ಭಾರತೀಯ ಪಾಕಕಲೆಯಂಥ ವೈವಿಧ್ಯಮಯವೂ ವ್ಯಾಪಕವೂ ಆದ ಪಾಕಕಲೆ ಬೇರೆ ದೇಶಗಳಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಒಂದು ಸೊಪ್ಪಿನಲ್ಲಿ ಹಲವು ಅಡುಗೆಗಳು, ಒಂದರ ರುಚಿ ಮತ್ತೊಂದರಂತಿಲ್ಲ. ಒಂದು ದೇವರಿಗೆ ಒಂದು ತಿನಿಸು ಇಷ್ಟ, ಮತ್ತೊಂದಕ್ಕೆ ಮಗುದೊಂದು. ಗಣೇಶನ ಹಬ್ಬದಲ್ಲಿ ತಯಾರಿಸುವ ಪಾಕವೇ ಬೇರೆ. ಯುಗಾದಿಯಲ್ಲಿ ಕೃಷ್ಣಜನ್ಮಾಷ್ಟಮಿಯಲ್ಲಿ ಅಣಿಗೈಯುವ ಅಡುಗೆಯೇ ಬೇರೆ. ಹಳ್ಳಿಯ ಅಡುಗೆಗಳೊಂದು ತೆರನಾದರೆ, ನಗರದ ಪಾಕಗಳು ಬೇರೆ ತೆರ. ಜಾತಿ ಜಾತಿಗೂ ಅಡುಗೆಗಳ ಭೇದಕಾಣುವಂತೆ, ಪ್ರಾದೇಶಿಕ ವ್ಯತ್ಯಾಸಗಳು ನೂರಾರು. ಬಯಲುಸೀಮೆಯ ರುಚಿ ಒಂದಾದರೆ, ಮಲೆಸೀಮೆಯ ರುಚಿ ಮತ್ತೊಂದು, ಕರಾವಳಿಯ ರುಚಿ ಮಗುದೊಂದು, ಉತ್ತರ ಕರ್ನಾಟಕದ ರುಚಿ ಇನ್ನೊಂದು. ಇಂತೆಯೇ ದಕ್ಷಿಣಭಾರತಕ್ಕೂ ಉತ್ತರಭಾರತಕ್ಕೂ ಅಜಗಜಾಂತರ. ಭಾರತೀಯರು ಎಷ್ಟು ರಸಿಕರೆಂಬುದಕ್ಕೆ, ಅವರೆಂಥ ಕಲಾಪ್ರಿಯರೆಂಬುದಕ್ಕೆ ಈ ಕ್ಷೇತ್ರವೊಂದೇ ಸಾಕ್ಷಿ ಸಾಕು. ಇಂಥ ಶ್ರೇಷ್ಠ ಕಲೆಯ ಅಧ್ಯಯನ ಬೇಡವೆ?

ಹೀಗೆಯೇ ನೆನೆಸಿಕೊಳ್ಳುತ್ತಹೋದರೆ ಇಂಥ ನೂರಾರು ಸಂಗತಿಗಳನ್ನು ಹೆಸರಿಸಬೇಕಾಗುತ್ತದೆ. ಜಾನಪದದ ಬೃಹತ್ತು ಮಹತ್ತುಗಳನ್ನು ಸೂಚಿಸುವ ಸಲುವಾಗಿ ಒಂದೆರಡು ಮಾತು ಮೇಲೆ ಹೇಳಬೇಕಾಯಿತು. ನಾಡಿನ ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲಿ ಹತ್ತಾರು ವಿದ್ವಾಂಸರು ಐವತ್ತು ವರ್ಷ ಅವಿರತವಾಗಿ ದುಡಿದರೂ ಈ ಕ್ಷೇತ್ರದಲ್ಲಿ ಜರೂರಾಗಿ ಮಾಡಿ ಮುಗಿಸಬೇಕಾದ ಕೆಲಸ ಪೂರೈಸುವಂತಿಲ್ಲ. ಸಂಗ್ರಹಕಾರ್ಯವಂತು ಪಂಡಿತರಿಗೆ ಮಾತ್ರವೇ ವಿಹಾಸಲಾದದ್ದಲ್ಲ, ವಿಶ್ವವಿದ್ಯಾಲಯಕ್ಕೆ ಮಾತ್ರವೇ ಸೀಮಿತವಾದದ್ದಲ್ಲ. ಪುರಾತತ್ವ ಸಂಶೋಧನೆಯೆಷ್ಟು ಮಹತ್ವಪೂರ್ಣವಾದುದೋ ಜಾನಪದಸಂಗ್ರಹವೂ ಅಷ್ಟೇ ಮಹತ್ವಪೂರ್ಣವಾದುದೆನ್ನುವ ತಿಳಿವಳಿಕೆ ಸರ್ಕಾರಕ್ಕೆ ಬರದಿದ್ದಲ್ಲಿ ಈ ಕಾರ್ಯ ಸಮರ್ಪಕವಾಗಿ ನಡೆಯುವುದಿಲ್ಲ. ಪ್ರತಿಯೊಬ್ಬ ಅಧ್ಯಾಪಕನೂ ಸಂಗ್ರಹಕಾರನಾದ ಪಕ್ಷಕ್ಕೆ ಹತ್ತಾರು ವರ್ಷಗಳಲ್ಲಿ ಸಂಗ್ರಹಕಾರ್ಯ ತೃಪ್ತಿಕರವಾಗಿ ನಡೆದೀತು ಎಂದುಕೊಂಡಿದ್ದೇನೆ.

೪

ಕರ್ನಾಟಕದಲ್ಲಿ ಸಂಗ್ರಹಕಾರ್ಯ ತುಸ್ವಲ್ಪ ನಡೆದಿದೆ; ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಸಂಶೋಧನೆಗಳು ಈಗತಾನೆ ಪ್ರಾರಂಭವಾಗಿವೆ. ಆಗಬೇಕಾಗಿರುವ ಕೆಲಸವನ್ನು ನೆನೆಸಿಕೊಂಡಾಗ, ಆಗಿರುವ ಕೆಲಸ ಅತ್ಯಲ್ಪವೆನಿಸದಿರಲಾರದು. ಇಷ್ಟಾದದ್ದೂ

ಕನ್ನಡನಾಡಿನ ಭಾಗ್ಯವೆಂದೇ ಹೇಳಬೇಕು. ಪ್ರಭುತ್ವ ಹಾಗೂ ಸಮಾಜದ ಪ್ರೋತ್ಸಾಹವಿಲ್ಲದೆ, ಅಧಿಕಾರದ ಆಸೆಯಿಲ್ಲದೆ, ಜೀವನಯಾಪನೆಯ ಭರವಸೆಯಿಲ್ಲದೆ ಈ ತನಕ ಈ ಕ್ಷೇತ್ರದಲ್ಲಿ ದುಡಿದ ಮಹನೀಯರು ಅಭಿನಂದನೀಯರು. ಕನ್ನಡ ಸಂಸ್ಕೃತಿಯ ಸ್ವರೂಪವನ್ನೂ ಅದರ ಹಿರಿಮೆಯನ್ನೂ ಅದರ ಆಳ ಹರಹುಗಳನ್ನೂ ಅರಿಯುವ ಕುತೂಹಲದಿಂದ ನನ್ನ ಗಮನ ಜಾನಪದದ ಕಡೆಗೆ ಹರಿಯಿತು. ನನಗೆ ನಿಜವಾದ ಭಾರತೀಯ ಸಂಸ್ಕೃತಿಯ ದರ್ಶನವಾದದ್ದೂ ಜಾನಪದದ ಮೂಲಕ. ಅದರಿಂದಾಗಿ ನಾನು ಲೋಕದ ಅನೇಕ ಗಣ್ಯ ವಿದ್ವಾಂಸರ ಸಂಶೋಧನ ಸಾಹಿತ್ಯವನ್ನು ಓದಿಕೊಳ್ಳಬೇಕಾಯಿತು. ಯೂರೋಪು ಮತ್ತು ಅಮೆರಿಕೆಗಳಲ್ಲಿ ನಡೆದಿರುವ ಕೆಲಸವನ್ನು ನೆನೆದಾಗ ವಿಸ್ಮಯವಾಗುತ್ತದೆ. ದಿಗ್ಭ್ರಮೆಯಾಗುತ್ತದೆ. ಜಾನಪದದ ವಿಶ್ವರೂಪದರ್ಶನದಿಂದ ವಿಸ್ಮಯವಾದರೆ, ಅಲ್ಲಿ ನಡೆದಿರುವ ಕೆಲಸದೊಡನೆ ನಮ್ಮಲ್ಲಾಗಿರುವ ಕೆಲಸವನ್ನು ಹೋಲಿಸಿಕೊಂಡಾಗ ದಿಗ್ಭ್ರಮೆಯಾಗುತ್ತದೆ. ಜೇಮ್ಸ್ ಫ್ರೇಸರ್, ಸ್ಟಿತ್ ಥಾಂಪ್ಸನ್, ಆಂಟಿ ಆರ್ನೆ ಮೊದಲಾದವರ ಕಾರ್ಯ ಪರಿಪೂರ್ಣವಾಗಬೇಕಾದರೆ ಭಾರತ ಮತ್ತು ಆಫ್ರಿಕಾಖಂಡಗಳ ಜಾನಪದ ಪೂರ್ಣ ಸಂಗ್ರಹಗೊಂಡು, ವ್ಯಾಪಕವಾದ ಅಧ್ಯಯನ ನಡೆಯಬೇಕಾಗುತ್ತದೆ. ಪ್ರತಿಯೊಂದು ಭಾಷೆಯಲ್ಲಿ ಹುದುಗಿರುವ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ, ಸಂಪಾದಿಸಿ, ಭಾಷಾಂತರಿಸಿ, ವಿಶ್ಲೇಷಿಸಿ, ಸಂಶೋಧನೆ ನಡೆಸಿದಾಗ ತೌಲನಿಕ ವ್ಯಾಸಂಗ ಸಾಧ್ಯವಾಗುತ್ತದೆ. ಅಂಥ ತೌಲನಿಕ ವ್ಯಾಸಂಗ ನಡೆಯುವ ತನಕ ಜಾಗತಿಕ ಜಾನಪದ ವ್ಯಾಸಂಗ ಕೊರೆಯಾಗಿಯೇ ಉಳಿಯುತ್ತದೆ.

ಜಾನಪದಸಂಗ್ರಹ ಮತ್ತು ಅಧ್ಯಯನಗಳು ವೈಜ್ಞಾನಿಕವಾಗಿ ನಡೆಯಬೇಕಾದರೆ ಅದಕ್ಕೆ ಸಂಬಂಧಿಸಿದ ನಿಯಮಸೂತ್ರ ಹಾಗೂ ತತ್ತ್ವಗಳ ಪರಿಚಯ ಅತ್ಯಗತ್ಯ. ಅವುಗಳ ಪರಿಚಯವಿಲ್ಲದೆ ವಿದ್ಯಾರ್ಥಿಗಳಾಗಲೀ ಕ್ಷೇತ್ರ ಸಂಶೋಧಕರಾಗಲೀ ಮುಂದೆ ಹೆಜ್ಜೆ ಇಡುವಂತಿಲ್ಲ. ಆ ಪರಿಚಯಕ್ಕನುವಾಗುವ ಸಾಹಿತ್ಯವಂತೂ ಕನ್ನಡದಲ್ಲಿ ಸಾಕಷ್ಟು ಪ್ರಕಟವಾಗಿಲ್ಲ. ಎಲ್. ಗುಂಡಪ್ಪ, ಗೊರೂರು, ಬೆಟಗೇರಿ, ಶಿವೇಶ್ವರ ದೊಡ್ಡಮನಿ, ಹಾ. ಮಾ. ನಾಯಕ್, ಸುಂಕಾಪುರ, ಜೀಶಂಪ, ಕಂಬಾರ್, ಕಲ್ಬುರ್ಗಿ, ದೇಂಡಿ, ಲತ್ತಿ, ಲಿಂಗಣ್ಣ, ಸಿ.ಪಿ.ಕೆ., ರಾಗೌ, ಲಕ್ಕಪ್ಪಗೌಡ, ಶಿವರಾಮು ಐತಾಳ, ಮತಿಘಟ್ಟ ಕೃಷ್ಣಮೂರ್ತಿ, ದಾಸೇಗೌಡ, ತೀನಂ ಶಂಕರನಾರಾಯಣ, ಎಲ್. ಆರ್. ಹೆಗ್ಡೆ ಮೊದಲಾದವರ ಲೇಖನ ಮತ್ತು ಗ್ರಂಥಗಳು ವಿಸ್ತೃತಪೂರ್ಣವಾಗಿದ್ದು ಅತ್ಯಮೂಲ್ಯವಾದ ಮಾರ್ಗದರ್ಶಿಗಳಾಗಿವೆ. ಆದರೂ ಜಾನಪದದ ಸಮಗ್ರ ಚಿತ್ರವನ್ನು ಪರಿಚಯ ಮಾಡಿಕೊಡುವ ಗ್ರಂಥ ನನ್ನ ಕಣ್ಣಿಗೆ ಬಿದ್ದಿಲ್ಲ. ಎ. ಎಚ್. ಕ್ರಾಪೆಯವರ *The Science of Folk-lore* ಎಂಬ ಗ್ರಂಥವನ್ನು ನೋಡಿದ ಮೇಲಂತೂ ಅಂಥದೊಂದು ಗ್ರಂಥವನ್ನು ರಚಿಸಬೇಕೆಂಬ ಆಸೆ ಹತ್ತು ವರ್ಷಗಳ ಹಿಂದೆಯೇ ನನ್ನ ಮನಸ್ಸನ್ನಾವರಿಸಿಕೊಂಡಿತು. ಈ ನನ್ನ ಗ್ರಂಥ ಪರಿಪೂರ್ಣವಾದದ್ದೆಂದು, ಸರ್ವಸಮರ್ಪಕವೆಂದು ನಾನು ಹೇಳಲಾರೆ. ನನ್ನ [illegible] ಕೈಗೊಂಡಿದ್ದೇನೆ. ಮುಂದಿನ ಈ ಕೆಲಸ ಮತ್ತು [illegible]

ಗ್ರಂಥಗಳಿಗೆ ಇದು ನಾಂದಿಯಾದೀತೆಂಬ ತೃಪ್ತಿ ಮಾತ್ರ ನನಗಿದೆ. ಈ ಗ್ರಂಥ ಹಲವು ವಿದ್ವತ್ಕೃತಿಗಳಿಗೆ ಋಣಿಯಾಗಿದೆ ಎಂಬ ವಿಷಯವನ್ನೂ ನಾನು ಮರೆಯಲಾರೆ.

ಈ ಗ್ರಂಥವನ್ನು ಬರೆದು ಮುಗಿಸಿದನಂತರ ಪ್ರಕಟನೆಯ ಚಿಂತೆ ಶುರುವಾಯಿತು. ಮುದ್ರಣವೆಚ್ಚ ತುಟ್ಟಿಯಾಗಿರುವ, ಕೊಳ್ಳುವ ಗಿರಾಕಿಗಳು ಅಭಾವವಾಗಿರುವ, ಕನ್ನಡದ ಪ್ರೋತ್ಸಾಹ ಬಾಯುಪಚಾರವಾಗಿರುವ ಈ ಕಾಲದಲ್ಲಿ ಬರೆದದ್ದನ್ನೆಲ್ಲ ಸಂಘಸಂಸ್ಥೆಗಳು ನಡೆಸುತ್ತಿರುವ ಹಸ್ತಪ್ರತಿ ಭಂಡಾರದಲ್ಲಿಡಬೇಕಾದ ಪರಿಸ್ಥಿತಿ ಬಹುಬೇಗನೆ ಒದಗಬಹುದೆಂದು ಊಹಿಸಲು ಸಾಕಷ್ಟು ಸಾಕ್ಷಿಗಳಿವೆ. ಇಂಥಾದ್ದರಲ್ಲಿಯೂ ಈ ಕೃತಿಯನ್ನು ತಾವು ಪ್ರಕಟಿಸುವುದಾಗಿ ಶ್ರೀ ಡಿ. ವಿ. ಕೆ. ಮೂರ್ತಿಯವರು ಮುಂದೆ ಬಂದದ್ದು ಅದೃಷ್ಟವೆಂದೇ ಹೇಳಬೇಕು. ಅವರು ಪ್ರಕಟನಕ್ಷೇತ್ರದ ತೇನ್‌ಸಿಂಗರು. ಅಂಥ ಕೆಲವರ ಪ್ರೋತ್ಸಾಹ ಇಲ್ಲದಿದ್ದಲ್ಲಿ ಕನ್ನಡ ಸಾಹಿತ್ಯ ಬೆಳೆಯುತ್ತಿರಲಿಲ್ಲ, ಬಹುಮಂದಿ ಬರಹಗಾರರು ತಯಾರಾಗುತ್ತಿರಲಿಲ್ಲ. ಸ್ವೀಡನ್ ಕರ್ಣಾಟಕದಷ್ಟು ದೊಡ್ಡದಲ್ಲ. ಸ್ವೀಡಿಷ್ ಭಾಷೆ ಮಾತಾಡುವ ಜನ ಎಂಬತ್ತು ಲಕ್ಷಕ್ಕಿಂತ ಹೆಚ್ಚಾಗಿಲ್ಲ. ಸರ್ಕಾರ ಸುಮಾರು ಒಂದುಸಾವಿರದ ನಾನೂರು ಮಂದಿಗೆ ವರ್ಷಕ್ಕೆ ತಲಾ ಐವತ್ತು ಸಾವಿರ ರೂಪಾಯಿ ಜೀವನಾಂಶ ನೀಡಿ, ಇತರ ಸೌಲಭ್ಯಗಳನ್ನೊದಗಿಸುವುದರ ಮೂಲಕ ಸಾಹಿತ್ಯಪ್ರಗತಿಗೆ ಪ್ರೋತ್ಸಾಹ ನೀಡುತ್ತಿದೆ. ನಮ್ಮ ಬರಹಗಾರರಿಗೆ ಇದೆಲ್ಲ ಕನಸು. ಅದಂತಿರಲಿ, ಈ ಗ್ರಂಥ ಪ್ರಕಟನೆಯ ಭಾರವನ್ನು ಹೊತ್ತಿರುವ ಮೂರ್ತಿಯವರಿಗೆ ನನ್ನ ವಂದನೆಗಳು ಸಲ್ಲಬೇಕಾಗಿದೆ.

ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರೊಡನೆ ಮುದ್ರಣ ವ್ಯವಹಾರ ನಡಸುವುದೊಂದು ಆನಂದದ ಸಂಗತಿ. ಅವರ ಇನಿವಾತು, ನಗುಮುಖ ಮತ್ತು ಸಭ್ಯವರ್ತನೆಗಳು ಯಾರನ್ನಾದರೂ ಮರುಳುಗೊಳಿಸುವಂಥವು. ಮುದ್ರಣದ ಅಂದಚೆಂದಗಳಿಗಂತು ಆ ಅಚ್ಚುಕೂಟ ಹೆಸರಾದದ್ದು. ಪರೋಕ್ಷವಾಗಿ ಅವರು ಮಾಡುತ್ತಿರುವ ಸಾಹಿತ್ಯಸೇವೆ ಅಮೂಲ್ಯವಾದದ್ದು. ಅವರಿಗೆಷ್ಟು ಕೃತಜ್ಞತೆಗಳನ್ನರ್ಪಿಸಿದರೂ ಕಡಮೆಯೇ. ಇದು ಸಿದ್ಧಗೊಂಡಾಗ ಒಮ್ಮೆ ರಾಗೌ ಮನೆಗೆ ಬಂದಿದ್ದು ಕೆಲವು ಕಾಲ ಇವರ ಮೇಲೆ ಕಣ್ಣಾಡಿಸಿ, ಜಾಗ್ರತೆ ಅಚ್ಚುಮಾಡಿಸಬೇಕೆಂದು ಒತ್ತಾಯಪಡಿಸಿದರು. ಇದು ಅಚ್ಚಾಗುವಾಗ ಆಗಾಗ್ಗೆ ಶ್ರೀ ಎನ್. ಎಸ್. ತಾರಾನಾಥರು ಕರಡು ಓದುವುದರ ಮೂಲಕ ಸಹಾಯ ಮಾಡಿದ್ದಾರೆ. ಈ ಸಂದರ್ಭದಲ್ಲಿ ಈ ಇಬ್ಬರನ್ನೂ ನೆನೆಸಿಕೊಳ್ಳುತ್ತೇನೆ.

ದೇಜಗೌ

ನವೆಂಬರ್ ೧, ೧೯೭೬
ಪ್ರಾಧ್ಯಾಪಕಭವನ, ೧
ಮಾನಸಗಂಗೋತ್ರಿ

ಜನಪದ ಗೀತೆ

ಪ್ರವೇಶ

ಸಹಸ್ರಾರು ವರ್ಷಗಳ ಹಿಂದೆ ಜಗತ್ತಿನಲ್ಲೆಲ್ಲ ಇದ್ದದ್ದು ಜನಪದ ಸಾಹಿತ್ಯವೊಂದೇ. ಆಗ ಶಿಷ್ಟ ಮತ್ತು ಜನಪದ ಸಾಹಿತ್ಯಗಳೆಂಬ ಭೇದವಿರಲಿಲ್ಲ. ಕ್ರಿಸ್ತಶಕೆಯ ಪ್ರಾರಂಭದಲ್ಲಿ, ಅಥವಾ ಇನ್ನೂ ಹಿಂದೆ ಬಳಕೆಗೆ ಬಂದ ಶಿಷ್ಟಸಾಹಿತ್ಯ ಜನಪದ ಸಾಹಿತ್ಯದ ಪರಿಷ್ಕೃತರೂಪ. ಅನಂತರ ಸಾಹಿತ್ಯದ ಈ ಎರಡು ಕವಲುಗಳೂ ಸಮಾನಾಂತರವಾಗಿ, ಪರಸ್ಪರಾಶ್ರಯಾತ್ಮಕವಾಗಿ, ಪರಸ್ಪರ ಪೂರಕವಾಗಿ, ಪರಸ್ಪರ ಪ್ರಭಾವಕಾರಿಯಾಗಿ ಬಹುಕಾಲ ಮುಂದುವರಿದದ್ದುಂಟು. ಬರಬರುತ್ತ ಶಿಷ್ಟಸಾಹಿತ್ಯ ನಿರ್ಮಾಪಕರಾದ ಪಂಡಿತರು ಮತ್ತು ಅವರ ಹಿಂಬಾಲಕರು ಅಹಂಕಾರ ಪ್ರತಿಷ್ಠೆಗಳಿಗೆ ಬಲಿಯಾಗಿ, ಜನಪದ ಸಾಹಿತ್ಯವನ್ನು ಮರೆತರು ; ಮರೆತದ್ದು ಮಾತ್ರವಲ್ಲ ಅದನ್ನು ನಿಕೃಷ್ಟವೆಂದು ಕಡೆಗಣಿಸಿದರು; ಅಸ್ಪೃಶ್ಯವೆಂದು ತೆಗಳಿದರು. ಹೋಮರ್ ವಾಲ್ಮೀಕಿ ವ್ಯಾಸಾದಿ ಮಹಾಕವಿಗಳೆಲ್ಲರು ಅಜ್ಞಾತ ಜನಪದ ಕವಿಗಳಿಗೆ ನಾನಾ ರೀತಿಯಲ್ಲಿ ಋಣಿಗಳಾಗಿದ್ದಾರೆನ್ನುವುದು ಸರ್ವವೇದ್ಯವಾದ ಸಂಗತಿಯಾಗಿದೆ. ಶಿಷ್ಟಸಾಹಿತ್ಯ ಮಡುಗೊಂಡು, ಪಾಚಿ ಬೆಳೆದು, ಜಗ್ಗಡಗೊಂಡು ನಾರುವಂತಾದಾಗ, ಜಾನಪದಸಾಹಿತ್ಯವಾಹಿನಿ ಅದರ ಮೇಲೆಹರಿದು ಪಾಚಿಕೊಳಕುಗಳನ್ನು ಕೊಚ್ಚಿ, ನೂತನ ಜೀವನವನ್ನು ನೀಡಿದ್ದುಂಟು. ವೊರ್ಡ್ಸ್‌ವರ್ತ್, ಬರ್ನ್ಸ್, ಸ್ಕಾಟ್, ಪುಷ್ಕಿನ್, ಕುಮಾರವ್ಯಾಸ, ವಚನಕಾರರೇ ಈ ಮಾತಿಗೆ ಸಾಕ್ಷಿಯಾಗಿದ್ದಾರೆ. ಈ ಎರಡು ಕ್ಷೇತ್ರಗಳ ನಡುವೆ ಆದಾನಪ್ರದಾನಗಳು ಸ್ಫೂರ್ತಿ ಪ್ರೇರಣೆಗಳು ನಿರಂತರವಾಗಿ ನಡೆಯುತ್ತಿದ್ದರೂ, ಮೇಲಿಂದ ಮೇಲೆ ಸೀಮೋಲ್ಲಂಘನೆಯಾಗುತ್ತಿದ್ದರೂ, ಅವು ಪ್ರತ್ಯೇಕವಾಗಿಯೇ ಉಳಿದುಕೊಂಡು ಬಂದಿವೆ. ಶಿಷ್ಟಸಾಹಿತ್ಯ ಬಹುವರ್ಣಾಕೀರ್ಣವಾಗಿದ್ದರೂ, ಸರ್ವಾನುಕೂಲಗಳನ್ನು ಪಡೆದಿದ್ದರೂ ಪ್ರಚಾರಸೌಲಭ್ಯಗಳನ್ನು ಹೊಂದಿದ್ದರೂ, ಸರ್ವತ್ರ ಆದರದೇ ಮೆರಿತವಾಗಿದ್ದರೂ ಅದರ ವ್ಯಾಪ್ತಿ ಸೀಮಿತ, ಪ್ರಯೋಜನ ಬಹುಮಿತ. ಅದು ಶಿಷ್ಟಸಮಾಜದಲ್ಲಿ ಉದ್ಭವಿಸಿ, ಅಲ್ಲಿಯೇ ಪರ್ಯವಸಾನಗೊಳ್ಳುತ್ತದೆ. ಜಾನಪದದ ತಳಹದಿಯುಳ್ಳ ವಚನ ಸಾಹಿತ್ಯ ಅಥವಾ ಕುಮಾರವ್ಯಾಸ ಭಾರತ ಶ್ರೀಸಾಮಾನ್ಯನನ್ನು ಮುದ್ದಿಸಿ ರಮಿಸಿ ಉದ್ಧರಿಸಿದಂತೆ ಪಂಪ ರನ್ನ ಷಡಕ್ಷರಿಯರ ಸಾಹಿತ್ಯ ಅವರಿಗೆ ತುಷ್ಟಿಪುಷ್ಟಿಗಳನ್ನು ನೀಡಲಿಲ್ಲ ; ನೀಡದಿರುವುದಿರಲಿ, ಅದು ಅವರ ಬಳಿಯೂ ಸುಳಿಯಲಿಲ್ಲ. ಅವ

ರಿಂದಲೇ ಶ್ರೀ ಕುವೆಂಪು ಅವರು ನುಡಿದದ್ದು, ಕುಮಾರವ್ಯಾಸ ಭಾರತ ಕಲಿಯದವರಿಗೂ ಕಾಮಧೇನು ಎಂದು. ಹಳ್ಳಿಗರ ನಾಲಗೆಯಲ್ಲಿ ಸದಾ ನರ್ತಿಸುವ ರಾಮಾಯಣ ಭಾರತ ಕಥೆಗಳು ಶಿಷ್ಟಪದೀಯವಲ್ಲವೆ ಎಂದು ಯಾರಾದರೂ ಉದ್ಗಾರ ತೆಗೆಯಬಹುದು. ಅಲ್ಲ ವೆಂದೇ ಉತ್ತರ. ಸಮುದ್ರದ ನೀರು ಮೋಡವಾಗಿ ಮತ್ತೆ ಮಳೆಯ ಮೂಲಕ ಸಮುದ್ರಕ್ಕೆ ಬಂದಂತೆ, ಜನತೆಯ ರಾಮಾಯಣ ಶಿಷ್ಟಕಾವ್ಯದ ಮೂಲಕ ಮತ್ತೆ ಜಾನಪದಕ್ಷೇತ್ರಕ್ಕೆ ಹರಿದು ಬರುತ್ತದೆ. ಅಷ್ಟೇ ಅಲ್ಲ, ಶ್ರೀಸಾಮಾನ್ಯ ಅವನ್ನು ತನ್ನ ಪ್ರತಿಭೆಗೆ ತೋರಿದಂತೆ ಪುನಸ್ಸೃಷ್ಟಿಸಿಕೊಳ್ಳುತ್ತಾನೆ. ಅನೇಕ ಮಾಧ್ಯಮಗಳ ಮೂಲಕ, ಶಿಷ್ಟಸಾಹಿತ್ಯ ಪ್ರಚಾರ ವಾಗುತ್ತಿದ್ದರೂ, ಶಾಲಾಕಾಲೇಜುಗಳ ಮೂಲಕ ಅದಕ್ಕೆ ವಿಶಿಷ್ಟ ಸ್ಥಾನಮಾನಗಳು ಲಭಿಸುತ್ತಿದ್ದರೂ, ಇಂದಿಗೂ ಸಾಮಾನ್ಯ ಜನರ ಬಾಯಲ್ಲಿರುವುದು ಜನಪದಗೀತೆ ಮತ್ತು ಕಥೆ. ರಾಗಿ ಬೀಸುವ ತಾಯಿ, ಗಾಡಿ ಹೊಡೆಯುವ ತಮ್ಮ, ಕಳೆಕಿತ್ತು ನಾಟಿಹಾಕುವ ಅಕ್ಕತಂಗಿಯರು, ಉಳುವ ಬಿತ್ತುವ ಮರಹತ್ತುವ ನೇಯುವ ಅಣ್ಣತಮ್ಮಂದಿರು ಹಾಡುವ, ಕುರುಕುಸ ಗೀತೆ ಪಂಪನದಲ್ಲ, ಷಡಕ್ಷರಿಯದಲ್ಲ, ಅಜ್ಞಾತ ಕವಿಯ ಪಾಸುರಗೀತೆ. ಅದೇ ಅವನ ಗೀತೆ, ವೇದೋಪನಿಷತ್ತು ಹಾಗೂ ಬ್ರಹ್ಮಸೂತ್ರ. ಅದು ಅಪ್ರಜ್ಞಾಪೂರ್ವಕ ವಾಗಿ ಊಟೆಯಂತೆ ಹೃದಯದಿಂದ ಚಿಮ್ಮಿದ್ದು; ಶಿಷ್ಟಸಾಹಿತ್ಯವಾದರೋ ಪ್ರಜ್ಞಾ ಪೂರ್ವಕವಾಗಿ ವರ್ಷಾಕಾಲದ ನದಿಯಂತೆಯೋ ಅಣೆಕಟ್ಟಿನ ಕಾಲುವೆಯಂತೆಯೋ ಹರಿದದ್ದು.

ರವೀಂದ್ರನಾಥಠಾಕೂರರು ಜನಪದ ಸಾಹಿತ್ಯದ ಬಗ್ಗೆ ಹೇಳಿದ ಮಾತಗಳು ಮನ ನೀಯವಾಗಿವೆ: "ಎಲ್ಲ ಕಾವ್ಯಗಳಂತೆ ಜನಪದ ಗೀತೆಗಳ ಗುಣದಲ್ಲಿ ಬೇರೆ ಬೇರೆ ಮಟ್ಟ ಗಳಿವೆ. ಪೌರಾಣಿಕ ನದಿ ಮಂದಾಕಿನಿಯಂತೆ ನಿಜವಾದ ಕವಿಯ ಪ್ರತಿಭೆಯಿಂದ ಹೊರ ಹೊಮ್ಮುವ ಜೀವವಾಹಿನಿ ಅಪ್ರಾಪ್ಯಲೋಕದಲ್ಲಿ ಉಗಮಗೊಳ್ಳುತ್ತದೆ. ಅನಂತರ ಬಂದ ವರು ಗದ್ದೆಗಳಿಗೆ ನೀರು ಸಾಗಿಸಲು ನಾಲೆಗಳನ್ನಗೆಯುತ್ತಾರೆ. ಅವರು ಕಷ್ಟಪಟ್ಟು ದುಡಿಯುತ್ತಾರೆ. ಆದರೆ ಅವರ ಕೈಗಾರಿಕೆಯಲ್ಲಿ ಕೃತಕತೆಯ ಸೋಗು ಎದ್ದುಕಾಣು ತ್ತದೆ."[1]

"ಭೂತಕಾಲದ ಅಜ್ಞಾತ ನಿರಕ್ಷರಕುಕ್ಷಿ ರಚಿಸಿರುವ, ಬಹುಕಾಲದಿಂದ ಮೌಖಿಕ ಸಂಪ್ರದಾಯದಲ್ಲುಳಿದು ಬಂದಿರುವ, ಮಧುರವೂ, ರಾಗಾತ್ಮಕವೂ ಆದ ಹಾಡೇ ಭಾವ ಗೀತೆ" ಎಂದು[2] ಎ. ಎಚ್. ಕ್ರಾಪೆಯವರು ಅದರ ಲಕ್ಷಣವನ್ನು ನಿರೂಪಿಸಿದ್ದಾರೆ. ಅದರ ರಚನೆ ತುಂಬ ಸರಳ. ಸಾಮಾನ್ಯವಾಗಿ ನಾಲ್ಕು ಸಾಲುಗಳುಳ್ಳ ಪದ್ಯಗಳೇ[3] ಹೆಚ್ಚು. ಕೆಲವೊಮ್ಮೆ ಪ್ರತಿ ಪದ್ಯದ ಕೊನೆಯಲ್ಲಿ ಚರಣ ಪುನರಾವರ್ತನೆಗೊಳ್ಳುತ್ತದೆ. ಪ್ರಾಸ ನಿಯತವಾಗಿಲ್ಲವಾದರೂ, ಲಯದ ನಿಯಮ ಸಡಿಲಗೊಳ್ಳುವಂತಿಲ್ಲ. ಪ್ರಾಸದ ಬದಲಿಗೆ

---

1 Quoted by Devendra Satyarthi in his book *Meet My People*, p. 95.

2 *The Science of Folklore*, p. 153.

3 ಆಂಗ್ಲಭಾವಗೀತೆಗಳ ಆಕಾರ ಮಾತ್ರ ಈ ಸಂದರ್ಭದಲ್ಲಿ ಗಮನದಲ್ಲಿದೆ.

ಧ್ವನಿಸಾಮ್ಯವಿದ್ದರೆ ಸಾಕು. ಹಾಡುವ ಧಾಟಿ ಪರಿಸರಕ್ಕನುಗುಣವಾಗಿ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗಬಹುದು.

ಜನಪ್ರಿಯ ಗೀತೆಗಳೆಲ್ಲ ಜನಪದ ಗೀತೆಗಳಾಗಲಾರವೆಂಬ ಮಾತೂ ಇದೆ. ಸಾಹಿತ್ಯಿಕ ಮೂಲವ ಜನಪ್ರಿಯಗೀತೆ ನಿರಕ್ಷರಕುಕ್ಷಿಗಳ ನಾಲಗೆಯಲ್ಲಿ ಸದಾ ತಾಂಡವವಾಡುತ್ತಿದ್ದರೂ, ಅವರಿಗೆ ಅದರ ಕರ್ತೃವಿನ ಹೆಸರು ಕುಲ ತಿಳಿಯದಿದ್ದರೂ, ಅದು ಜನಪದ ಗೀತೆಯಾಗಲಾರದು. ಅವರಿಗೆ ಹಾಡು ಮುಖ್ಯವೇ ಹೊರತು, ಅದರ ಕರ್ತೃವಲ್ಲ. ರಚನೆ ಸರಳವಾಗಿದ್ದು, ಧಾಟಿ ಹಿತವಾಗಿದ್ದು, ಭಾವ ಹೃದಯಸ್ಪರ್ಶಿಯಾಗಿದ್ದರೆ ಸಾಕು, ಅದು ಅವರ ಸ್ವತ್ತಾಗುತ್ತದೆ. ಕಾಲಾನಂತರದಲ್ಲಿ ಅದರ ಹುಟ್ಟು ಬೆಳವಣಿಗೆ ಕರ್ತೃತ್ವ ವಿಷಯಗಳೆಲ್ಲ ಸಂಪೂರ್ಣ ಮರೆತುಹೋಗಿ ಜನಪದ ಸಾಹಿತ್ಯದ ಗುಂಪಿಗೆ ದಾಖಲುಗೊಳ್ಳಬಹುದು. ಹೀಗಾಗಿ ಅವೆರಡರ ನಡುವೆ ಗಡಿರೇಖೆ ಎಳೆಯುವುದು ಕಷ್ಟವಾಗುತ್ತದೆ. ಮೂವತ್ತು ನಲವತ್ತು ವರ್ಷಗಳ ಹಿಂದೆ ಚಾಲ್ತಿಯಲ್ಲಿದ್ದ "ಹೊಗೆಯ ಬಂಡಿಯು ಹೋಗುತಿಹುದೀಗ", "ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ", "ಯಾಕಳುವೆ ಎಲೆ ರಂಗ ಬೇಕಾದ್ದು ನಿನಗಿದೆ" ಇವೇ ಮೊದಲಾದ ಗೀತೆಗಳು ಶಿಷ್ಟಕವಿಗಳಿಂದ ರಚನೆಗೊಂಡಿದ್ದರೂ ಅವುಗಳ ಜನಪ್ರಿಯತೆಯಿಂದಾಗಿ ಜಾನಪದ ದರ್ಜೆಗೇರಿರುವುದುಂಟು.[1] ಗೋವಿನ ಹಾಡೂ ಇಂಥದೊಂದು ಜನಪ್ರಿಯ ಗೀತೆ. ಜನಪ್ರಿಯ ಗೀತೆಗಳ ಧಾಟಿಯಲ್ಲಿ ಜನಪದ ಗೀತೆಗಳೂ ಹುಟ್ಟಿಕೊಳ್ಳುವುದುಂಟು. ಸರ್ವಜ್ಞನವಲ್ಲದ, ಆದರೆ ಅವನ ಹೆಸರಿನಲ್ಲಿ ಪ್ರಚಾರದಲ್ಲಿರುವ ಎಷ್ಟೋ ತ್ರಿಪದಿಗಳು ಈ ಮಾತಿಗೆ ಸಾಕ್ಷಿಯಾಗಿವೆ. ಜನಪ್ರಿಯ ಗೀತೆಗಳ ರೂಪರಚನೆ ಒಳಪಿಡಿಗಳು ಕಾಲಕಾಲಕ್ಕೆ ರೂಪಾಂತರಗೊಳ್ಳದೆ ಸ್ಥಿರವಾಗಿರುತ್ತವೆ; ಜನಪದ ಗೀತೆಗಳ ರೂಪ ಮತ್ತು ಆಂತರಿಕ ವಿಷಯಗಳು ವ್ಯತ್ಯಾಸ ಹೊಂದಬಹುದು. ಇವೆರಡಕ್ಕೂ ಇರುವ ಪ್ರಮುಖ ವ್ಯತ್ಯಾಸಗಳಿವು.

ಶಿಷ್ಟಸಾಹಿತ್ಯವನ್ನು ಸಪ್ರಾಣಿಸುವ ಸಲುವಾಗಿ ಕವಿಗಳು ಜನಪದ ಸಾಹಿತ್ಯಕ್ಕೆ ಶರಣುಹೊಗುವುದುಂಟಷ್ಟೆ. ಕೆಲವೊಮ್ಮೆ ಅವರು ಸಾಹಿತ್ಯಿಕವಾದ ಮೆರುಗನ್ನವುಗಳಿಗೆ ನೀಡಿ, ಪುನರ್ಸೃಷ್ಟಿಸುವುದುಂಟು. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನ ಕವಿಗಳು ಕೆಲವು ಜನಪದ ಗೀತೆಗಳ ರೂಪಸ್ವರೂಪಗಳನ್ನು ಇದೇ ರೀತಿ ಬದಲಾಯಿಸಿದರೆನ್ನುವುದಕ್ಕೆ ರಾಬರ್ಟ್ಸ್ ಬರ್ನ್ಸ್ ಸಾಕ್ಷಿ.

ಅನಾಮಕತೆಯೊಂದರಿಂದಲೇ ಜನಪ್ರಿಯ ಗೀತೆ ಜನಪದ ಗೀತೆಯಾಗಲಾರದು. ಆಂಗ್ಲ ರಾಷ್ಟ್ರಗೀತೆ ಅನಾಮಕವಾದುದಾದರೂ ಜನಪದಗೀತೆ ಎನ್ನಿಸಿಕೊಳ್ಳಲಾರದು. ಅದಕ್ಕೆ ರಾಜಮುದ್ರೆ ಬಿದ್ದು, ಸಾರ್ವಭೌಮತ್ವದ ಪ್ರತಿಷ್ಠೆ ಪ್ರಾಪ್ತವಾಗಿರುವುದೇ ಕಾರಣ. ಜನಪದ ಗೀತೆಗೆ ರಾಜರ, ನವಾಬರ, ಶ್ರೀಮಂತರ ಹಂಗು ಬೇಕಿಲ್ಲ; ಅಧಿಕಾರದ ಅಮ್ಮಾರಿ ಅದಕ್ಕಾಗದು; ಮೆರವಣಿಗೆ ಬಾಜಾಭಜಂತ್ರಿಗೂ ಅದಕ್ಕೂ ಬಹು ದೂರ. ಕಾಡಿನ

---

1 **Home, Sweet Home, Love's Sweet Song** ಮೊದಲಾದವು ಇಂಥ ಜನಪ್ರಿಯ ಗೀತೆಗಳು.

ಕುಸುಮವಂತೆ ಹಳ್ಳಿಯ ಮುಗ್ಧೆಯಂತೆ ಅದಕ್ಕೂ ನಾಚಿಕೆ. ಅಧಿಕಾರ ಮುದ್ರೆಯೋ ಕೃತಕವೂ ಬಹು ಗಂಭೀರವೂ ಆದ ಪರಿಸರದ ಸಂಪರ್ಕವೋ ದೊರೆಕೊಂಡಕೂಡಲೇ ಅವರ ಮೊದಲ ಸೊಗಡೆಲ್ಲ ಮಾಸಿಹೋಗುತ್ತದೆ. ಆದ್ದರಿಂದ ಮೂಲತಃ ಜಾನಪದಸೃಷ್ಟಿಯಾಗಿ ಬೆಳಕಿಗೆ ಬಂದ ಕೆಲವು ರಾಷ್ಟ್ರಗೀತೆಗಳು ಜಾನಪದಕ್ಷೇತ್ರದ ಹೊರವಳಯದಲ್ಲಿಯೇ ನಿಲ್ಲುತ್ತವೆ.

ಶುದ್ಧ ಜನಪದ ಕಾವ್ಯದ ಸೃಷ್ಟಿ ಕೆಲವು ಸಂದರ್ಭಗಳಲ್ಲಿ ಮಾತ್ರ ಸಾಧ್ಯವೆಂಬುದು ಕ್ರಾಪೆಯವರ ಅಭಿಪ್ರಾಯ. ಉತ್ತಮ ವರ್ಗದ ಜನ ಶ್ರೀಸಾಮಾನ್ಯನ ಭಾಷೆಯನ್ನು ಬಳಸದಿದ್ದಾಗ, ಅದು ಸಾಹಿತ್ಯದ ಭಾಷೆಯಾಗದಿರುವಾಗ, ಅಥವಾ ವಿಶೇಷ ಶಿಕ್ಷಣವಿಲ್ಲದೆ ಅರ್ಥಮಾಡಿಕೊಳ್ಳಲಾಗದಷ್ಟು ಕೃತಕವೂ ಕ್ಲಿಷ್ಟವೂ ಪಾಂಡಿತ್ಯಪೂರ್ಣವೂ ಆದ ಸಾಹಿತ್ಯಕೃತಿಗಳು ಹುಟ್ಟಿಕೊಂಡಾಗ ಜನಪದಸಾಹಿತ್ಯ ಹೊರವಾಗಿ ಬೆಳೆಯುತ್ತದೆ. ನಾರ್ಮನ್ ಜನ ಇಂಗ್ಲೆಂಡಿನ ಮೇಲೆ ವಿಜಯಕೇತನವನ್ನು ಹಾರಿಸಿದಾಗಿನಿಂದ ಚಾಸರ್ ಯುಗದತನಕ ಅಲ್ಲಿ ಅಂಥ ಪರಿಸ್ಥಿತಿ ಅಸ್ತಿತ್ವದಲ್ಲಿತ್ತೆಂದು ಹೇಳುತ್ತಾರೆ. ಈ ತತ್ವ ಎಲ್ಲ ಕಾಲಗಳಿಗೂ ಎಲ್ಲ ದೇಶಗಳಿಗೂ ಏಕರೀತಿಯಾಗಿ ಅನ್ವಯಿಸುತ್ತದೆಂದು ತಿಳಿಯಲಾಗದು. ಅದು ಭಾಗಶಃ ನಿಜವಾಗಬಹುದು. ಜನಭಾಷೆಯೊಂದಾಗಿ, ರಾಜಭಾಷೆ ಮತ್ತೊಂದಾಗಿ, ಎರಡನೆಯದು ಅದ್ದೂರಿಯಿಂದ ವಿಜೃಂಭಿಸುವಾಗ, ಮೊದಲನೆಯದು ಮೂಲೆಗುಂಪಾಗಿ, ಶ್ರೀಸಾಮಾನ್ಯರನ್ನಾಶ್ರಯಿಸಿ, ಅವರ ಅಭೀಪ್ಸೆಗೆ ಅಭಿವ್ಯಕ್ತಿಮಾಧ್ಯಮವಾಗಿ ಪರಿಣಮಿಸಬಹುದು. ಸಂಸ್ಕೃತವೋ, ಪರ್ಷಿಯನ್ನೋ ಅಥವಾ ಆಂಗ್ಲವೋ ಭಾರತ ವರ್ಷದಲ್ಲಿ ಮೆರೆಯುವಾಗ, ಶಿಷ್ಟಜನ ಆ ಭಾಷೆಗಳ ಉಪಾಸಕರಾಗಿರುವಾಗ, ಅವರ ಸಾಹಿತ್ಯಸೃಷ್ಟಿ ಕೆಳಗಣವರಿಗೆ ನಿಲುಕದಿದ್ದಾಗ, ಆ ಕೆಳಗಣವರು ತಮಗೆ ಬೇಕಾದ ಸಾಹಿತ್ಯವನ್ನು ನಿರ್ಮಿಸಿಕೊಳ್ಳಬೇಕಾದ್ದು ಅನಿವಾರ್ಯವಾಗುತ್ತದೆ.

ಆದರೆ ರಾಜಭಾಷೆಯೂ ಜನಭಾಷೆಯೂ ಒಂದೇ ಆದಾಗ ಅದರಲ್ಲಿ ಜಾನಪದಸಾಹಿತ್ಯ ಸೃಷ್ಟಿಸಾಧ್ಯವಿಲ್ಲವೆನ್ನುವುದು ವಿಶ್ವಸತ್ಯವಾಗಲಾರದು. ಭಾಷೆಯ ಒಳವಿಭೇದಗಳು ಯಾವಾಗಲೂ ಇರುತ್ತವೆ. ಅವುಗಳ ಗಣನೆ ಇಲ್ಲಿ ಅನಾವಶ್ಯಕ. ಆದರೆ ಒಂದೇ ಭಾಷೆಯನ್ನು ಮಾತಾಡುವವರಲ್ಲಿ ಯಾವಾಗಲೂ—ಅದರಲ್ಲಿಯೂ ಕಲಿತವರ ಮತ್ತು ಕಲಿಯದವರ ನಡುವಣ ಕಂದಕ ಅಗಾಧವಾಗಿರುವಾಗ ಮತ್ತು ಕಲಿಯದವರ ಸಂಖ್ಯೆ ಬೃಹತ್ಪ್ರಮಾಣದಲ್ಲಿರುವಾಗ—ಮೇಲು ಕೀಳುವರ್ಗಗಳು ಇದ್ದೇ ಇರುತ್ತವೆ. ಶಿಷ್ಟಕವಿಗಳಿಗೆ ಸಾಮಾನ್ಯರ ಸಮಸ್ಯೆಗಳಾಗಲೀ, ಅವರ ಆಶೋತ್ತರಗಳಾಗಲೀ, ಅವರ ಭಾವನೆಗಳಾಗಲೀ, ಅರ್ಥವಾಗುವುದಿಲ್ಲ; ಅವರು ರಚಿಸುವ ಕಾವ್ಯ ಇವರಿಗೆ ಅರ್ಥವಾಗುವುದೂ ಇಲ್ಲ. ಅವರು ಬರೆದದ್ದು ಕೇವಲ ಆಸ್ಥಾನಿಕರಿಗೆ, ಪಂಡಿತಮಂಡಲಿಗೆ, ಮತ್ತು ಉಪಕುಲ ಸಮಿತಿಗೆ. ಶ್ರೀಸಾಮಾನ್ಯ ಕಣ್ಣುಕಿವಿಗಳಿಂದ ಆ ಕಾವ್ಯಗಳನ್ನು ಮುಟ್ಟದೆ, ತಮ್ಮವರೇ ರಚಿಸಿದ ಹಾಡುಗಳನ್ನು ಹೇಳಿಕೊಳ್ಳುವಾಗ ಮಧುರನಂಥ ಪಂಡಿತ ಕವಿಗಳ ಹೊಟ್ಟೆ ಉರಿದು ಹೋಗಿರಬೇಕು. ಯಾವಾಗ ಪಂಡಿತಕಾವ್ಯಗಳ ಬೆಲೆ ಇಳಿದು ಹೋಗುತ್ತದೆಯೋ,

ಮಾನವೀಯತಾವೃಷ್ಟಿಯುಳ್ಳ ಸಾಹಿತ್ಯಕ್ಕೆ ಕ್ಷಾಮ ಪ್ರಾಪ್ತವಾಗುತ್ತದೆಯೋ ಆಗ ಶಿವಶರಣರಂಥ ಕವಿಗಳು ಜಾನಪದ ಸಾಹಿತ್ಯವನ್ನು ಸೂರೆಗೊಂಡು, ಸಾಹಿತ್ಯಕ್ಷೇತ್ರದಲ್ಲಿ ಕ್ರಾಂತಿಗೆ ಕಾರಣರಾಗುತ್ತಾರೆ. ಅಂಥ ಸಮಯದಲ್ಲಿ ಮಾತ್ರ ಜನಪದ ಕಾವ್ಯದ ಬೆಳೆವಣಿಗೆ ತಾತ್ಕಾಲಿಕವಾಗಿ ನಿಲ್ಲಬಹುದು. ಶಿಷ್ಟಸಾಹಿತ್ಯ ಮತ್ತೆ ಪಂಡಿತ ಕವಿಗಳ ಕೈಗೆ ಸಿಕ್ಕಿಕೊಂಡು ಬರಲುವಾಗ, ಜನಪದ ಸಾಹಿತ್ಯ ತಲೆಯೆತ್ತುತ್ತದೆ. ನಿರಕ್ಷರಕುಕ್ಷಿಗಳ ತವರಾದ ಭರತಖಂಡದಂಥ ರಾಷ್ಟ್ರಗಳಲ್ಲಿ ಜನಪದ ಸಾಹಿತ್ಯದ ಒರತೆ ಬಹುಕಾಲ ಬತ್ತುವಂತಿಲ್ಲ.

ಓಮುಬರಹ ಬಾರದ, ಬೆಳಗಿನಿಂದ ಇರುಳಿನವರೆಗೆ ಮನೆಮಾರು ಹೊಲಗದ್ದೆಗಳಲ್ಲಿ ದುಡಿಯುವ, ನಿಸರ್ಗದೊಡನೆ ತಮ್ಮ ಬದುಕನ್ನು ಬೆಸೆದುಕೊಂಡಿರುವ ಸಾಮಾನ್ಯ ಜನರು ಸಾಧಾರಣವಾಗಿ ಭಾವಜೀವಿಗಳು. ವಿಚಾರವಿವೇಕಗಳ ಹಿಡಿತವಿಲ್ಲದ್ದರಿಂದ ಅವರು ಬಹು ಬೇಗನೆ ಉದ್ವೇಗಕ್ಕೊಳಗಾಗುತ್ತಾರೆ; ಎಷ್ಟು ಬೇಗನೆ ಉದ್ವೇಗ ಕುದಿಯುತ್ತದೆಯೋ ಅಷ್ಟೇ ಬೇಗನೆ ಅದರ ಕಾವು ಇಳಿಯುತ್ತದೆ. ಕಾವಿಳಿದನಂತರ ಅವರ ಹೃದಯ ಶುದ್ಧವಾಗುತ್ತದೆ. ಶೋಕವೋ ರೌದ್ರವೋ ಶೃಂಗಾರವೋ ಕರುಣವೋ ಯಾವುದಾದರೂ ಸರಿಯೇ, ಅದು ಅತಿರೇಕದಿಂದ ಕೂಡಿರುತ್ತದೆ. ಯಾವುದಾದರೂ ಅನಿಷ್ಟ ಸಂಭವಿಸಿದಾಗ ಗೋಳಾಡುತ್ತಾರೆ; ಹಣೆ ಬಡಿದುಕೊಳ್ಳುತ್ತಾರೆ, ಬಟ್ಟೆ ಕೂದಲು ಹರಿದುಕೊಳ್ಳುತ್ತಾರೆ; ಕೋಪ ಬಂದಾಗ ಹಾರಿ ಕುಪ್ಪಳಿಸುತ್ತಾರೆ; ಕೈಗೆ ಸಿಕ್ಕಿದ ಆಯುಧದಿಂದ ಎದುರು ಬಂದವರನ್ನು ಇರಿಯುತ್ತಾರೆ; ಮನೆಯ ಗಳು ಸೂರುಗಳು ಸಹ ಅವರ ಕೈದುವಾದಾವು. ಅವರ ನುಡಿಯಲ್ಲಿ ಒರಟುತನವುಂಟು, ಕಪಟವಿಲ್ಲ; ನಡೆಯಲ್ಲಿ ಕಾಠಿನ್ಯವುಂಟು, ದುರುದ್ದೇಶವಿಲ್ಲ. ಆಧುನಿಕ ಸುಸಂಸ್ಕೃತವ್ಯಕ್ತಿಯ ನಯ ನವುರು ನಾಜೋಕುಗಳು ಅವರಿಗೆ ವಿದೇಶೀಯವಾಗಿ ತೋರುತ್ತವೆ. ಅವುಗಳಿಗೆ ಅವರು ಎರವಾಗಿದ್ದರೂ, ಪಂಡಿತರ ದೃಷ್ಟಿಯಲ್ಲಿ ಅವುಗಳ ಅಭಾವ ದೋಷವೆಂದು ತೋರಿದರೂ, ಅವುಗಳ ಗೈರುಹಾಜರಿಯೇ ಅವರ ವಿಶಿಷ್ಟಲಕ್ಷಣ, ಅದೇ ಅವರ ಭಾಗ್ಯ. ನಾಜೋಕು ನಯಗಾರಿಕೆಗಳು ವಂಚನೆ ಕುಟಿಲತೆ ದೌಷ್ಟ್ಯಗಳನ್ನು ಮುಚ್ಚುವ ಲೇಪವಾಗಬಹುದು. ಇರುವೆ ಕಚ್ಚಿದ ಕೂಡಲೇ ಮನುಷ್ಯ ಅರಚಿಕೊಳ್ಳುತ್ತದೆ. ಅಂತೆಯೇ ಭಾವ ಕಾವೇರಿದಾಗ ನಡೆನುಡಿಗಳ ಮೂಲಕ ಒಡನೆಯೇ ಪ್ರಕಟಗೊಳ್ಳುತ್ತದೆ. ಪ್ರೇಮ ಕನಿಕರ ದಯೆ ಔದಾರ್ಯ ಮೊದಲಾದ ಸಾತ್ವಿಕ ಗುಣಗಳು ಸಹ ಅತಿರೇಕಕ್ಕೆ ಹೋಗುವುದುಂಟು. ಅಷ್ಟೇ ಅಲ್ಲ, ಅವು ದೋಷವಿಮುಕ್ತವಾದುವು. ಒಟ್ಟಿನಲ್ಲಿ ಅವರದು ಹಸುಳೆಯ ಮನಸ್ಸು.

ಗ್ರಾಮೀಣ ಅಜ್ಞಾತ ಕವಿಯ ಅನುಭವಪ್ರಪಂಚ ಮಿತವಾದದ್ದು : ಅವನ ವ್ಯವಹಾರ ಕ್ಷೇತ್ರ ಸೀಮಿತವಾದದ್ದು : ಅವನ ಜನಸಂಪರ್ಕದ ವ್ಯಾಪ್ತಿ ಬಹು ಸಂಕುಚಿತವಾದದ್ದು : ಅವನ ಕಲಿಕೆಯ ಸಮುದ್ರಗಳಂತು ಕೆಲವೇ ಕೆಲವು. ಅವನ ಸಂಸಾರ, ಗ್ರಾಮ, ಹಬ್ಬ ಹರಿದಿನಗಳಲ್ಲಿ ಸೇರುವ ಜನಸಮಾಜ, ಸುತ್ತಮುತ್ತಣ ದೇವರು ದಿಂಡರು, ಮಳೆ ಬೆಳೆ, ರೋಗ ರುಜಿನಗಳು, ಮುಡಿಪು ಹರಕೆ ಇತ್ಯಾದಿ ನಂಬಿಕೆಗಳು, ಕನಸುಗಳು, ಆಸೆಗಳು, ಸ್ಮೃತಿಗಳು, ಇವೇ ಅವನ ಕವಿತಾಬಳ್ಳಿಯನ್ನು ಪೋಷಿಸುವ ಶಕ್ತಿಗಳು. ಇಷ್ಟಾದರೂ ಅವನ ಅನುಭವ

ಸಂಪತ್ತು ಗುಣಗಾತ್ರಗಳಲ್ಲಿ ಕಡಮೆಯೇನಲ್ಲ. ಚಿಂತನಮಂಥನದ ಫಲವಾಗಿ, ಅವುಗಳಿಗಿಂತ ಹೆಚ್ಚು ಆಂತರಿಕ ಪ್ರೇರಣೆಯಿಂದಾಗಿ ಗಟ್ಟಿಯಾದ ಸ್ವಚ್ಛವಾದ ಅನುಭವಗಳು ಹಿಂಡುಹಿಂಡಾಗಿ ಹೊರಹೊಮ್ಮುತ್ತವೆ. ಆದಿಮಾನವನ ಮೂಲಗುಣಗಳು ಇನ್ನೂ ಗ್ರಾಮೀಣ ಮುಗ್ಧರಲ್ಲಿ ನಿಬಿಡವಾಗಿವೆ. ಈ ಗುಣಗಳೇ ಇಡೀ ಜನಪದ ಕಾವ್ಯಸೃಷ್ಟಿಯನ್ನು ನಿರ್ಧರಿಸುತ್ತವೆ, ಮತ್ತು ಆಳುತ್ತವೆಂಬುದನ್ನು ಮರೆಯಬಾರದು.

ಈ ದೃಷ್ಟಿಯಿಂದ ಜನಪದ ಕಾವ್ಯವನ್ನು ಪರಿಶೀಲಿಸಿದಾಗ, ಅದರಲ್ಲಿ ಅಭಿವ್ಯಕ್ತಗೊಳ್ಳುವ ಭಾವಸಮುದಾಯದಲ್ಲಿ ನವುರು, ನಾಜೋಕು ಕಡಮೆ. ಭಾವನಾರೂಪವರ್ಣಗಳಲ್ಲಿ ಗಡಸುದಪ್ಪಗಳು ಜಾಸ್ತಿ ಎಂದು ಹೇಳಬೇಕಾಗುತ್ತದೆ. ಭಾವಾತಿರೇಕ ಅನೇಕ ಜನಪದ ಗೀತೆಗಳಲ್ಲಿ ಕಾಣುವ ಲಕ್ಷಣ. ಜೀವನದ ಗೋಳುಬೀಳುಗಳು ಕಹಿಕೊರೆಗಳು ಅಸರು ಬೇಸರುಗಳಲ್ಲಿ ಯಥೇಚ್ಛವಾಗಿವೆ. ಭಾವಾತಿರೇಕವಿದ್ದರೂ ಗೊಂದಲಕ್ಕಾಗಲೀ ಸಮಸ್ಯೆಗಾಗಲೀ ಅವಕಾಶವಿಲ್ಲ. ಪ್ರಾಮಾಣಿಕತೆ ಎಲ್ಲ ಜನಪದ ಕಾವ್ಯಗಳ ಪ್ರಧಾನಲಕ್ಷಣ. ಭಾವಾತಿರೇಕದಲ್ಲಿ ಕಾಪಟ್ಯವಿಲ್ಲ, ಮೊಸಳೆಗಣ್ಣೀರಿಲ್ಲ. ನಿಜಭಾವವನ್ನು ಮರೆಸಿ, ಸೋಗುಭಾವವನ್ನು ಮಾತ್ರ ಪ್ರಕಟಿಸುವ ಯುಕ್ತಿ ಅಥವಾ ಕುಯುಕ್ತಿ ಗ್ರಾಮೀಣ ಜನರಿಗೆ ಬಂದದ್ದಲ್ಲ. ಅವರ ಹೃದಯದ ಭಾವತರಂಗವೇ ಕಾವ್ಯದ ಹೊನಲಾಗಿ ಹರಿಯುತ್ತದೆ. ಆ ಹೊನಲಿನಲ್ಲಿ ಅವರ ವ್ಯಕ್ತಿತ್ವ ಲಯವಾಗುತ್ತದೆ. ವ್ಯಕ್ತಿತ್ವ ಲಯವೇ ಅಥವಾ ಸಮಾಧಿಯೇ ನಿಜವಾದ ಕಾವ್ಯದ ಲಕ್ಷಣ. ಜನಪದಕಾವ್ಯದ ಹೆಚ್ಚುಗಾರಿಕೆಗೆ ಇದೇ ಪ್ರಬಲ ಕಾರಣ. ಈ ಗುಣವುಳ್ಳ ಕಾವ್ಯ, ಶಿಷ್ಟಪದೀಯವಾಗಲಿ ಜಾನಪದೀಯವಾಗಲಿ, ಯಾವುದಾದರೂ ಒಂದೆಯೆ, ಅದು ಮಹತ್ವಪೂರ್ಣವಾದದ್ದು ಎಂಬ ಸಂಗತಿಯನ್ನು ಮರೆಯಲಾಗದು.

ಭಾವಾತಿರೇಕವೆನ್ನುವುದು 'ವಿವೇಕಿ'ಗಳೆನಿಸಿಕೊಂಡಿರುವವರ, 'ಸ್ಥಿತಪ್ರಜ್ಞ'ರ ಮಾತು, ನಿರ್ಭಾವಜೀವಿಗಳು ಭಾವಜೀವಿಗಳಿಗೆ ಆರೋಪಿಸುವ ಕಳಂಕ. ಅದು ಈ ಯುಗದ ವಿಮರ್ಶಕರು ಕಂಡುಹಿಡಿದಿರುವ ನೂತನ ತತ್ವ. ಭಾವವಿಲ್ಲದವರ ಬಾಳು ಹಾಳು; ಬಾಳು ಕಳೆಯಾಗಬೇಕಾದರೆ ಭಾವದ ಸಂಯೋಗ ಅತ್ಯವಶ್ಯ. ಅತಿಯಾಗಿ ಪ್ರೀತಿಸಿದರೆ ಭಾವಾತಿರೇಕ, ಅತಿಯಾಗಿ ಕೋಪಿಸಿಕೊಂಡರೆ ಭಾವಾತಿರೇಕ. ಪ್ರೀತಿ ಇಲ್ಲದಿದ್ದರೆ ಷಂಡ ಎನ್ನುತ್ತಾರೆ. ಕೋಪವಿಲ್ಲದಿದ್ದರೆ ಹೇಡಿ ಎನ್ನುತ್ತಾರೆ. ಪ್ರಬಲನಿಗೆ ಹೆದರಿ ದುರ್ಬಲ ಭಾವಸಂಯಮ ಮಾಡಿಕೊಳ್ಳುವುದೂ ಉಂಟು. ಬಹುಕಾಲದ ಸಾಧನೆಯಿಂದ ಭಾವಗೋಪನ ಮಾಡಿಕೊಳ್ಳುವವನು ವಿವೇಕಿ ನಿಜ; ಅವನಿಗಿಂತ ಇಂದ್ರಿಯ ವಿಜಯದ ಮೂಲಕ ಭಾವಸಂಹರಣ ಮಾಡಿಕೊಳ್ಳುವವನೇ ನಿಜವಾದ ಸ್ಥಿತಪ್ರಜ್ಞ. ನಿರಾಶಾವಾದಿಯ, ನಿರ್ಘೃಣನ, ನಿಶ್ಶಕ್ತನ ಭಾವಗೋಪನ ನಿಜವಾದ ಸಂಯಮವಲ್ಲ ಎಂದು ತಿಳಿಯಬೇಕಾಗುತ್ತದೆ. ಸ್ವಂತ ಮಕ್ಕಳನ್ನಾಗಲೀ ಮಡದಿಯನ್ನಾಗಲೀ ಕಂಡಾಗ ಹೊರಹೊಮ್ಮುವ ಭಾವತೀವ್ರತೆ ಸಹಜವಾದದ್ದೇ ಹೊರತು ಅದು ಭಾವಾತಿರೇಕವೆಂದು ಹೇಳಲಾಗದು. ಏನೇ ಇರಲಿ, ಭಾವಾತಿರೇಕವೆನ್ನುವುದು ಮಾನವನ ಮೂಲಸತ್ವವೆಂದೇ ಎಣಿಸಬೇಕಾಗುತ್ತದೆ.

ಜನಪದಗೀತೆ ಒಂದು ರೀತಿಯಲ್ಲಿ ಆಶುಕವಿತೆ. ಯಾವುದೋ ಒಂದು ಕ್ಷಣದಲ್ಲಿ ಆನಂದ ತುಂಬಿ ತುಳುಕಿದಾಗ, ನೋವು ಮನಸ್ಸನ್ನೆಲ್ಲ ಹಿಂಡಿದಾಗ, ಗಾನಲಹರಿ ಹರಿಯುತ್ತದೆ. ಅವನ ಹಾಡೇ ಹಾಡಾಗುತ್ತದೆ. ಅದು ಆಕರ್ಷಕವಾಗಿದ್ದಲ್ಲಿ ಬೇರೆಯವರು ಅದನ್ನು ಹೇಳಿಕೊಳ್ಳುತ್ತಾರೆ; ಇತರರಿಗೂ ಹೇಳಿಕೊಡುತ್ತಾರೆ. ಬಾಯಿಂದ ಬಾಯಿಗೆ ಹರಿಯುವ ಗುಣ ಈ ಕಾವ್ಯದ ಪ್ರಮುಖ ಲಕ್ಷಣವಾದ್ದರಿಂದ, ಅದು ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ರೂಪಾಂತರವಾಗುವುದುಂಟು. ಅಂದಮೇಲೆ, ಅದು ಆಗಾಗ್ಗೆ ಪುನಸ್ಸೃಷ್ಟಿಗೊಳ್ಳುತ್ತದೆಂದಾಯಿತು. ಹತ್ತಾರು ನೂರಾರು ಸಾವಿರಾರು ಜನರ ಭಾವಕೋಶದಲ್ಲಿ ನೆನೆದು, ಬಹುಜನರ ಬುದ್ಧಿಯಲ್ಲಿ ಸಾದಿ ಬರುತ್ತದೆಯಾದ್ದರಿಂದ ಅದು ಸಾಮುದಾಯಕ ಸೃಷ್ಟಿಯಾಗುತ್ತದೆ. ಅದು ಪ್ರಥಮತಃ ಯಾವನೋ ಒಬ್ಬ ಜಾಣ ಅನುಭವಿ ಕಟ್ಟಿದ್ದು. ಕಟ್ಟಿ ಗಾಳಿಯಲ್ಲಿ ತೇಲಿಬಿಟ್ಟನಂತರ, ಅದು ಪುನಸ್ಸೃಷ್ಟಿ ಮತ್ತು ಸಾಮುದಾಯಕ ಸೃಷ್ಟಿಯ ಮೂಲಕ ಸಮಾಜದ, ಜನಾಂಗದ ಅಥವಾ ಜಗತ್ತಿನ ಆಸ್ತಿಯಾಗುತ್ತದೆ. ಪಾಠಾಂತರಗಳನ್ನೆಲ್ಲ ವಿಶ್ಲೇಷಿಸಿ, ತಾಳೆಹಿಡಿದು, ಪರಿಷ್ಕರಿಸಿದಾಗ ಮೂಲಪಾಠ ಸಿಕ್ಕಿದರೂ ಸಿಕ್ಕಬಹುದು. ಆದರೂ ಮೂಲಪಾಠದ ರಚನೆಯ ಕಾಲದೇಶಗಳ ನಿರ್ಧಾರ ಕಠಿನವಾಗಬಹುದು. ರಚನೆಗಳ ಭಾಷೆ ಸಹ ಕಾಲಕಾಲಕ್ಕೆ ಬದಲಾವಣೆಯಾಗುವುದರಿಂದ, ಅದು ಕಾಲನಿರ್ಣಯಕ್ಕೆ ಸಹಕಾರಿಯಾಗಲಾರದು. ಜನ ತಮಗೆ ತಿಳಿಯದ ನುಡಿ ಮತ್ತು ನುಡಿಗಟ್ಟುಗಳನ್ನು ತಮಗೆ ಬೇಕಾದಂತೆ ಮಾರ್ಪಡಿಸಿಕೊಳ್ಳುತ್ತಾರೆ. ಉದ್ದೇಶಪೂರ್ವಕವಾಗಿಯೋ ವಿಸ್ಮೃತಿಯಿಂದಲೋ ಒಂದು ಸಾಲಿಗೆ ಬದಲಾಗಿ ಮತ್ತೊಂದು ಸಾಲು ಸೇರಿಸುತ್ತಾರೆ; ಒಂದು ಪದ್ಯದ ಸಾಲನ್ನು ಮತ್ತೊಂದು ಪದ್ಯದ ಸಾಲಿನೊಡನೆ ಅದಲುಬದಲು ಮಾಡುತ್ತಾರೆ. ಹೀಗಾಗುವಾಗ ಅನೇಕ ಪುನರಾವರ್ತನೆಗಳು ಕೂಡಿಕೊಳ್ಳುವುದುಂಟು.

ಜನಪದ ಕಾವ್ಯ ಮೌಖಿಕ ವಿಧಾನದ ಮೂಲಕ ಪ್ರಸಾರವಾಗುತ್ತದಷ್ಟೇ. ಪ್ರಸಾರದ ವಿಷಯ ತಲೆಯೆತ್ತಿದಾಗ ಸಾಮಾನ್ಯವಾಗಿ ಕವಿ ಗಮಕಿ ಶ್ರೋತೃಗಳು ನೆನಪಿಗೆ ಬರುತ್ತಾರೆ. ಶ್ರೋತೃಗಳು ಒಂದು ಗುಂಪಿಗೆ ಸೇರಿದವರಾದ್ದರಿಂದ ಅವರ ಕುಲಗೋತ್ರ ಪ್ರವರಗಳು ತಿಳಿಯುವಂತಿಲ್ಲ, ತಿಳಿಯಬೇಕಾದ್ದೂ ಇಲ್ಲ. ಆದರೆ ಕವಿಗಮಕಿಗಳು ನಿರ್ದಿಷ್ಟ ವ್ಯಕ್ತಿಗಳಾದ್ದರಿಂದ ಅವರಿಗೊಂದು ಹೆಸರಿದೆ, ಬದುಕಿದೆ, ಇತಿಹಾಸವಿದೆ. ಹೆಸರಿಗೋಸ್ಕರ ರಚನೆಗೊಳ್ಳದೆ ಅಪ್ರಜ್ಞಾಪೂರ್ವಕವಾಗಿ ಮೂಡಿಬಂದಪ್ಪಾದ್ದರಿಂದ, ಕವಿಯ ಹೆಸರು ಅನಾಮಕವಾಗಿಯೇ ಉಳಿಯುತ್ತದೆ. ಮತ್ತೊಬ್ಬ ಆ ಹಾಡನ್ನು ಮತ್ತೆ ಹಾಡಿದಾಗ ಅವನು ಚಾರಣ ಅಥವಾ ಗಮಕಿಯಾಗುತ್ತಾನೆ; ಪುನಸ್ಸೃಷ್ಟಿಕರ್ತನೂ ಆಗುತ್ತಾನೆ. ಅವನಿಗೂ ಅದರ ಬಗ್ಗೆ ಮಮಕಾರವಿಲ್ಲ. ಹೀಗಾಗಿ ಅವರಿಬ್ಬರೂ ಅಜ್ಞಾತವಾಗುಳಿಯುವುದರಿಂದ "ಕವಿಗೂ ಗಾಯಕನಿಗೂ ಇರುವ ಅಂತರವಂತೂ ಬಹುಸೂಕ್ಷ್ಮವಾದುದು"[1]

1 ಸಿ.ಪಿ.ಕೆ., ಜನಪದಗೀತೆ, ಪು. ೯.

ಎಂದು ಹೇಳುವುದುಂಟು. "ಶಿಷ್ಟಕಾವ್ಯದಲ್ಲಿ ಕವಿ, ಗನುಕಿ, ವಾಚಕ ಬೇರೆ ಬೇರೆಯಾಗಿರುತ್ತಾರೆ. ಸಂಗೀತದಲ್ಲಿ ರಚನಕಾರ, ಗಾಯಕ, ಶ್ರೋತೃಗಳ ನಡುವೆ ಭೇದವಿದೆ. ಜನಪದ ಗೀತೆಯುಲ್ಲಾದರೆ ಇಂಥ ಅಂತರ ಕಡಿಮೆ. ಮೂವರೂ ಒಂದೇ ಘಟಕವಾಗಿರುತ್ತಾರೆ." ಸಿ.ಪಿ.ಕೆ.ಯವರ ಈ ಹೇಳಿಕೆ ಬಹುಮಟ್ಟಿಗೆ ನಿಜ. ಅವರೇ ಹೇಳುವಂತೆ ಅಂತರ ಕಡಮೆಯೇ ಹೊರತು, ಅದು ಗುಪ್ತಸ್ಥಿತಿಯಲ್ಲಿಪೆಯೇ ವಿನಾ ಅಂತರವೇ ಇಲ್ಲವೆನ್ನಲಾಗದು. ಎಲ್ಲ ಸಾಹಿತ್ಯದ, ಮುಖ್ಯವಾಗಿ ಜನಪದ ಸಾಹಿತ್ಯದ ಪ್ರಸಾರಕಾರ್ಯ ನಡೆಯುವುದು ಗನುಕಿ ಅಥವಾ ಶ್ರೋತೃಗಳ ಮೂಲಕ ಎಂಬುವದನ್ನು ನಿರ್ಲಕ್ಷಿಸಲಾಗದು. ಶ್ರೋತೃಗಳು ಸಹ ಗನುಕಿಗಳಾಗುವುದುಂಟು; ಆ ಗನುಕಿಗಳೇ ಕರ್ತೃಗಳಾಗುವುದೂ ಉಂಟು. ಜನಪದ ಸಾಹಿತ್ಯದ ಬೆಳೆವಣಿಗೆ ಮತ್ತು ಪ್ರಸಾರಗಳಿಗೆ ಈ ಮೂರು ಶಕ್ತಿಗಳೂ ಕಾರಣವಾಗಿ, ಅದು ಸಮಷ್ಟಿ ಕರ್ತೃಕವೆನಿಸಿಕೊಳ್ಳುತ್ತದೆ.

ಕೆಲವು ದೇಶಗಳ ಜನಪದ ಗೀತೆಗಳ ಛಂದೋರೂಪಗಳಲ್ಲಿ ವೈವಿಧ್ಯವಿರುವುದಿಲ್ಲ. ಭಾರತೀಯ ಜನಪದ ಗೀತೆಗಳ—ಅದರಲ್ಲಿಯೂ ಕನ್ನಡ ಜನಪದ ಗೀತೆಗಳ ಛಂದಸ್ಸಿನಲ್ಲಿ ಅಪಾರ ವೈವಿಧ್ಯವಿದೆ. ದ್ವಿಪದಿ, ತ್ರಿಪದಿ, ಚೌಪದಿ, ರಗಳೆ ಮೊದಲಾದುವೆಲ್ಲ ಅಲ್ಲಿ ಬಳಕೆಗೊಂಡಿವೆ. ಲಯಪ್ರಾಸ ಯತಿಗಳಿಗೂ ಅಲ್ಲಿ ಗೌರವವುಂಟು. ಅಂಶಗಣಘಟಿತವಾದ ಛಂದಸ್ಸು ಹಾಡುಗಾರಿಕೆಗೆ ತುಂಬ ಅನುಕೂಲವಾದದ್ದು. ಭಾವಪ್ರವಾಹ ಹಾಗೂ ಆಲೋಚನಾಲಹರಿ ಅಡೆತಡೆಗಳಿಲ್ಲದೆ ಹರಿಯಲಿಕ್ಕೆ, ಮತ್ತು ಪದಗಳ ಅಖಂಡತ್ವವನ್ನು ಕಾಪಾಡಲಿಕ್ಕೆ ಅಂಶಗಣದಷ್ಟು ಸುಕರವಾದ ಗಣರಚನೆ ಮತ್ತೊಂದಿಲ್ಲವೆಂದು ತೋರುತ್ತದೆ. ಅಕ್ಷರಗಳನ್ನೆಳೆದು ಅಥವಾ ಮೊಟಕಿಸಿ ಹಾಡಲು ಈ ವ್ಯವಸ್ಥೆಯಿಂದ ಸಾಧ್ಯವಾಗುತ್ತದೆ. ಪದಗಳ ಅಥವಾ ಸಾಲುಗಳ ಅದಲುಬದಲಿಗಂತು ಇದು ಅನುವಾಗುತ್ತದೆ. ಆದರೆ ಅವುಗಳನ್ನು ಹಾಡುವ ಧಾಟಿ ಮಾತ್ರ ಮಾತ್ರಾಗಣದ್ದೆಂಬುದನ್ನೂ ತಾಳಲಯಗಳು ಮುಖ್ಯವೆಂಬುದನ್ನೂ ಮರೆಯಲಾಗದು. ಒಂದು ರೀತಿಯಲ್ಲಿ ಅಂಶಗಣಘಟಿತವಾದ ಛಂದಸ್ಸು ಸ್ವಚ್ಛಂದ ಛಂದಸ್ಸೆಂದು ಹೇಳಬಹುದು. ಗ್ರಾಮೀಣರಿಗೆ ಛಂದಸ್ಸಿನ ಅನುಭವವೇ ಇಲ್ಲ. ಭಾವಲಯಪ್ರಜ್ಞೆ ಅವರಿಗೆ ಸಹಜವಾಗಿ ಒದಗಿಬರುವಂಥ ಗುಣ. ಅಂಶಗಣದ ನಿಯಮಕ್ಕನುಸಾರವಾಗಿ ಅವರ ಹಾಡನ್ನು ವಿಶ್ಲೇಷಿಸಬಹುದೇ ಹೊರತು ಅನ್ಯಥಾ ಸಾಧ್ಯವಿಲ್ಲ. ಪ್ರಾಯಶಃ ಆದಿಮಾನವನ ಮೂಲ ಛಂದಸ್ಸೇ ಆ ರೀತಿ ಸಾಕಾರತೆ ಪಡೆದಿರಬೇಕೆಂದು ತೋರುತ್ತದೆ.

ಜನಪದ ಸಾಹಿತ್ಯದ ಭಾಷೆ ಗ್ರಾಮೀಣವಾದರೂ, ಅಶ್ಲೀಲವಲ್ಲ, ಅಶುದ್ಧವಲ್ಲ, ಅನಾಗರಿಕವಲ್ಲ. ಭಾಷೆಯಲ್ಲಿ ಶುದ್ಧಾಶುದ್ಧಗಳ ಪ್ರಶ್ನೆಯೇ ಏಳುವುದಿಲ್ಲ. ಅದು ಶಿಷ್ಟ ಮತ್ತು ಜನಪದದ ನಡುವಣ ತಿಕ್ಕಾಟವಷ್ಟೆ. ಆದು ತಿಕ್ಕಾಟವೂ ಅಲ್ಲ. ಏಕೆಂದರೆ ಅಂಥ ಕ್ರಿಯೆಗೆ ಎರಡು ಗುಂಪುಗಳಿರಬೇಕು. ಶಿಷ್ಟರ ಗುಂಪಂತೂ ಇದ್ದೇ ಇದೆ ಆದರೆ ಜನಪದರಿಗೆ ಈ ಶುದ್ಧಾಶುದ್ಧಗಳ, ಶೂದ್ರತೆ ಅಶೂದ್ರತೆಗಳ ಕಲ್ಪನೆಯೇ ಇಲ್ಲ. ಆದ್ದರಿಂದ ಅವರಲ್ಲಿ ಗುಂಪಿನ ವಿಷಯವೇ ಬರುವುದಿಲ್ಲ. ಶಿಷ್ಟರು ಪ್ರತಿಷ್ಠೆಗಾಗಿ ಇದು ಶಿಷ್ಟ,

ಅದು ಅಶಿಷ್ಟ, ಇದು ಗ್ರಾಹ್ಯ, ಅದು ಅಗ್ರಾಹ್ಯ ಎಂದು ವಿಶ್ಲೇಷಣೆ ಮಾಡುವುದುಂಟು. ಆದರೆ ಗ್ರಾಮೀಣ ಭಾಷೆಯೇ ಶಿಷ್ಟಭಾಷೆಗೆ ಮೂಲ, ಅದರ ಬೆಳವಣಿಗೆಗೆ ಪ್ರೇರಕ ಎಂಬುದನ್ನು ಮರೆಯುತ್ತಾರೆ. ಅನ್ಯಭಾಷೆಯ ಮಾತುಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳುವಾಗ ಗ್ರಾಮೀಣರು ತಮ್ಮತನವನ್ನು ಮೆರೆಯುತ್ತಾರೆ; ತಮ್ಮ ನುಡಿಯ ಜಾಯಮಾನಕ್ಕೆ ಹೊಂದಿಕೊಳ್ಳುವಂತೆ ರೂಪಾಂತರಿಸಿಕೊಳ್ಳುತ್ತಾರೆ. ಸೋಬಾನೆ ಎನ್ನುವ ಪದವನ್ನೇ ನೋಡಬಹುದು. ಸೋಬಾನೆ ಪದಗಳು ಮದುವೆಯಲ್ಲಿ ಹೇಳುವಂಥವು; ಅವುಗಳನ್ನು ಶಾಸ್ತ್ರದ ಹಾಡುಗಳೆಂದು ಕರೆವುದೂ ಸಲ್ಲುತ್ತದೆ. ಅವು ಶುಭಕಾರ್ಯಗಳಲ್ಲಿ ಮಾತ್ರ ಹಾಡುವಂಥವು. ಸಂಸ್ಕೃತದ ಶೋಭನದಿಂದ ಸೋಬಾನ < ಸೋಬಾನೆ ಸಿದ್ಧವಾಗುತ್ತದೆ. ಮೊದಮೊದಲು ಅದು ಯಾವ ಮಂಗಳಕಾರ್ಯಕ್ಕಾದರೂ ಅನ್ವಯವಾಗುವಂತಿದ್ದು, ಕಾಲಕ್ರಮದಲ್ಲಿ ಮದುವೆಗೆ ಮತ್ತು ಪ್ರಸ್ತಕ್ಕೆ ಮಾತ್ರ ಬಳಕೆಗೊಳ್ಳತೊಡಗಿದುವು. ಹೀಗೆ ಅನ್ಯಭಾಷೆಯ ಪದಗಳು ಗ್ರಾಮೀಣ ಭಾಷೆಯ ಕೋಶವನ್ನು ಸೇರುವಾಗ ರೂಪಾಂತರ ಹೊಂದುವುವರ ಜತೆಗೆ ಅರ್ಥಾಂತರವನ್ನು ಸಹ ಹೊಂದುತ್ತವೆ. ಪಂಡಿತರ ದೃಷ್ಟಿಯಲ್ಲಿ ಯಾವುದು ವ್ಯಾಕರಣ ದೋಷವಾಗುತ್ತದೆಯೋ ಸಾಮಾನ್ಯರ ಭಾಷೆಯಲ್ಲಿ ದೋಷವಾಗುವುದಿಲ್ಲ. ಶುದ್ಧಾಶುದ್ಧಗಳು ಸ್ಥಿರವೂ ಅಲ್ಲ; ಒಂದು ಕಾಲದ ಶುದ್ಧ ಮತ್ತೊಂದು ಕಾಲಕ್ಕೆ ಅಶುದ್ಧವಾಗಬಹುದು; ಒಂದು ಜನದ ಅಶುದ್ಧರೂಪ ಕಾಲಕ್ರಮೇಣ ಶುದ್ಧವೆಂದು ಪರಿಗಣನೆಗೊಳ್ಳಬಹುದು. ಉಪಭಾಷೆಗಳ ಅಧ್ಯಯನಕ್ಕೆ ಈ ಸಾಹಿತ್ಯ ವಿಪುಲಸಾಮಗ್ರಿಯನ್ನೊದಗಿಸುತ್ತದೆ.

ಈ ಕಾವ್ಯದ ಶಿಲ್ಪ ಅತ್ಯಂತ ಸರಳವಾದುದು: ಶೈಲಿ ಅಕೃತಕವಾದುದು. ಜನಪದ ಕವಿಗಳ ಮಾತು ಅಲಂಕಾರದೂರವಾದದ್ದು: ಮರೆಮೋಸ ಮರಳುಗಳಿಂದ ಮುಕ್ತವಾದದ್ದು. ಅವರು ಆಡುವುದೆಲ್ಲ ಸ್ವಭಾವೋಕ್ತಿಯೇ. "ಹತ್ತೀ ಹೂವಿನ ಹಾಗೆ ಹತ್ತಡಕು ಇಕ್ಕೊಂಡು ಹಟ್ಟೀಲಿ ಮಣ್ಣ ತುಳಿಯೋನೆ" ಎನ್ನುವಾಗ ಅವನಿಗೆ ಹತ್ತ ಕಡುಕು ಹತ್ತಿಹೂವೇ ಆಗಿದೆ. ಅಲಂಕಾರವಾಗಿ ಅದನ್ನು ಬಳಸಿದ್ದಲ್ಲ; ತನಗೆ ಕಂಡಂತೆ ಬಣ್ಣಿಸಿದ್ದಾನೆ; ಬಣ್ಣಿಸಿದ್ದಾನೆ ಎನ್ನುವುದಕ್ಕಿಂತ ಹಾಡಿದ್ದಾನೆ, ಅಥವಾ ಹೇಳಿದ್ದಾನೆ ಎಂದು ಹೇಳುವುದೇ ಉಚಿತ. ದೇವರುಗಳನ್ನು ಕುರಿತ ಹಾಡುಗಳನ್ನು ನೋಡುವಾಗ ಈ ಮಾತಿನ ಸತ್ಯ ಸ್ಪಷ್ಟವಾಗಿ ವೇದ್ಯವಾಗುತ್ತದೆ. ಬಿಳಿಗಿರಿ ರಂಗಸ್ವಾಮಿ ಹೊರಗೆ ಹೊರಟಾಗ, ಅವನಿಗೆ ಬಿಸಿಲಾಗುತ್ತದೆಂದು "ಸೋಲಿಗರು ಗಂಧಾದ ಶೆಳೆಯ ಹಿಡಿದಾರು." ರಂಗಸ್ವಾಮಿಯ ಉತ್ಸವಮೂರ್ತಿ ಮೆರವಣಿಗೆಗಾಗಿ ಹೊರಟಿದೆ. ಸೋಲಿಗರು ಚಳೆಯ ಹಿಡಿದಿದ್ದಾರೆ. ಅದನ್ನು ನೋಡಿದ ಜನಪದ ಕವಿ ತನ್ನೊಳಗೆ ಮೂಡಿದ ಭಕ್ತಿಭಾವವನ್ನು ಈ ಹಾಡಿನಲ್ಲಿ ಹರಿಸುತ್ತಾನೆ. ಆ ಉತ್ಸವಮೂರ್ತಿ ಅವನ ದೃಷ್ಟಿಯಲ್ಲಿ ಜಡವಸ್ತುವಲ್ಲ, ತನ್ನಂತೆಯೇ ಅದರಲ್ಲಿ ಪ್ರಾಣವಿದೆ, ಬಿಸಿಲಿಗೆ ಅದು ಕಂದುತ್ತದೆ, ಕುಸಿಯುತ್ತದೆ ಎಂದು ತಿಳಿದಿದ್ದಾನೆ. ಬಿಳಿಗಿರಿರಂಗ ಲೋಕಗುರು, ಮಹಾಮಹಿಮ, ಜಗದ್ರಕ್ಷಕ. ಅವನಿಗೆ ಆಯಾಸವಾಗಬಹುದೆ? ಕೃಷ್ಣನಿಗೆ ನೋವಾದಾಗ ಯಶೋಧರೆಗೆಷ್ಟು ಸಂಕಟವಾಗು

ತ್ತಿತ್ತೋ ಅದಕ್ಕಿಂತ ಮಿಗಿಲಾಗಿ ಈ ರಂಗನಿಗೆ ಆಯಾಸವಾವರೆ ಭಕ್ತಕವಿ ತರಹರಿಸು ತ್ತಾನೆ. ಆದ್ದರಿಂದ ಅವನ ಮುಗ್ಧಭಕ್ತಿ ಚಳೆಯ ಹಿಡಿಯುವ ಕ್ರಿಯೆಯಾಗಿ ಪರಿಣಮಿಸು ತ್ತದೆ. ಲಕ್ಷಣಕಾರನಿಗೆ ವಿವಿಧಾಲಂಕಾರಗಳಾಗಿ ಕಾಣುವ ಉಕ್ತಿವೈಚಿತ್ರ್ಯಗಳು ಅವನಲ್ಲಿ ಸ್ವಭಾವೋಕ್ತಿಯಾಗಿ ಹೊರಹೊಮ್ಮುತ್ತವೆ.

ಜನಪದ ಸಾಹಿತ್ಯ ಹೇಗೆ ಉಗಮಗೊಂಡಿತೆಂದು ಊಹಿಸಬಹುದಾದರೂ, ಎಂದು ಎಂಬ ಪ್ರಶ್ನೆಯನ್ನುತ್ತರಿಸುವುದು ಕಷ್ಟವಾಗುತ್ತದೆ. ಮಾತಿಗಿಂತ ಮುಂಚೆಯೇ ಹಾಡು ಹುಟ್ಟಿಕೊಂಡಿರಬೇಕು. ಆ ಹಾಡಿನ ಮೂಲಕವಾಗಿಯೆ ಮಾತು ಹೊರಹೊಮ್ಮಿರಬೇಕು. ಮೊವಮೊದಲ ಮಾತು ಭಾವಾತ್ಮಕವಾಗಿದ್ದಿರಬೇಕು. ಆಲೋಚನೆ ವಿಚಾರಗಳು ಸಂಯಮಕ್ಕೊಳಪಡುವಂಥವು; ಭಾವ ಅದಮ್ಯವಾದದ್ದು. ವಿಚಾರವೇ ಶೂನ್ಯವಾಗಿ ದ್ದಾಗ ಭಾವತರಂಗಗಳನ್ನಡಗಿಸುವುದು ದುಸ್ತರ. ಅವು ಯಾವುದಾದರೂ ಅಭಿವ್ಯಕ್ತಿ ಮಾಧ್ಯಮದ ಮೂಲಕ ಹೊರಗೆ ಬರದಿದ್ದರೆ ಮನಸ್ಸಿಗೆ ಆಘಾತವೊದಗುತ್ತದೆ. ಆದ್ದರಿಂದ ಕೇವಲ ಭಾವಜೀವಿಯಾದ ಆದಿಮಾನವ ಭಾವಾವೇಶ ವಶನಾದಾಗ ಕುಣಿಯುತ್ತಾನೆ, ಕೇಕೆ ಹಾಕುತ್ತಾನೆ, ಹಾಡುತ್ತಾನೆ. ವಿಚಾರಶಕ್ತಿ ಮೂಡಿದಂತೆಲ್ಲ ಮಾತು ಬಲಿಯು ತ್ತದೆ, ಬೆಳೆಯುತ್ತದೆ. ಮಾತು ಬೆಳೆದಂತೆ ವಿಚಾರಶಕ್ತಿಯೂ ಪ್ರಬಲವಾಗುತ್ತದೆ. ಹಾಡೂ ಮಾತೂ ಎರಡೂ ಮೇಳವಿಸಿದಾಗ ಸಾಹಿತ್ಯದ ಉಗಮವಾಗುತ್ತದೆ. ಇದೆಲ್ಲ ಕನಸಿನಲ್ಲಿ ಸಹ ಎಣಿಸಲಾಗದ ಹಿಂದಿನ ಕಾಲದ ಮಾತು. ಆ ಕಾಲವನ್ನು ಗುರುತಿಸುವ ಸಾಹಸ ವ್ಯರ್ಥ. ಏಕೆಂದರೆ ಅದನ್ನು ಗುರುತಿಸಲು ಬೇಕಾದ ಸಾಮುಗ್ರಿ ಈಗ ದೊರಕು ವುದಿಲ್ಲ. ಬಹು ಹಿಂದಿನದು ಬೇಡ, ಒಂದು ಸಾವಿರ ವರ್ಷಾವಧಿಯ ಜನಪದಸಾಹಿತ್ಯವೂ ಕೈಗೆ ಸಿಗುವುದಿಲ್ಲ. ಎಷ್ಟೋ ಗಾಳಿಯಲ್ಲಿ ತೇಲಿಹೋಗಿದೆ, ಎಷ್ಟೋ ಶಿಷ್ಟಸಾಹಿತ್ಯಕುಕ್ಷಿ ಯಲ್ಲಿ ವಿಲಯನಗೊಂಡಿದೆ.

ಈ ಸಾಹಿತ್ಯದ ಒಂದು ಮುಖ್ಯ ಗುಣವೆಂದರೆ ವಿಶ್ವಮೌಲಿಕತೆ. ಅದು ಯಾವುದೋ ಒಂದು ಮೂಲೆಯಲ್ಲಿ ಯಾವುದೋ ಕಾಲದಲ್ಲಿ ಮೈದೋರಿದರೂ, ಕಾಲದೇಶಾಬಾಧಿತವಾಗಿ ನಿಲ್ಲುತ್ತದೆ. ಯಾವುದು ಹಾಗೇ ನಿಲ್ಲಲಾರದೋ ಅದು ಹುಟ್ಟಿದಲ್ಲಿಯೇ ಹುಟ್ಟಿದ ಕೂಡಲೇ ಸತ್ತುಹೋಗುತ್ತದೆ. ಸಮಷ್ಟಿರೂಪದ ಸೃಷ್ಟಿಕಾರ್ಯ ವಿಧಾನವೂ ಈ ವಿಶ್ವಮೌಲಿಕತೆಗೆ ಕಾರಣವಾಗಿದೆ. ಅದು ಅನೇಕ ಕಾಲದ ಬಹುಜನರ ಅನುಭವ ರಸಾಯನವಾದ್ದರಿಂದ ಅದಕ್ಕೆ ಚಿರಂಜೀವಿತನ ಲಭಿಸುತ್ತದೆ. "ಆಚಾರಕರಸಾಗು, ನೀತಿಗೆ ಪ್ರಭುವಾಗು", "ಅತ್ತೆ ಮಾವಾಗಂಜಿ ಸುತ್ತೇಳು ನೆರೆಗಂಜಿ", "ತೊಟ್ಟೇಲ ಹೊತ್ಕೊಂಡು, ತವರ್ಬಣ್ಣ ಉಟ್ಕೊಂಡು" ಈ ಮೊದಲಾದ ಸಾಲುಗಳಿಂದ ಪ್ರಾರಂಭವಾಗುವ ತ್ರಿಪದಿಗಳು ತ್ರಿವಿಕ್ರಮರಾಗಳೇ ಆಗಿವೆ. ಹಿಂದಿನ ಕೆಲವು ಶಿಷ್ಟಸಾಹಿತ್ಯ ಕೃತಿಗಳು ಇಂದು ಮರೆತುಹೋಗಿವೆ, ಅವು ಗ್ರಂಥಾ ಲಯದ ಸಾಮುಗ್ರಿಯಾಗುಳಿದಿವೆ. ಕೆಲವು ಮತೀಯ ಗ್ರಂಥಗಳಂತು ಆಯಾಯ ಮತೀಯ ರಿಗೂ ದೂರವಾಗಿವೆ. ಆದರೆ ಮೇಲಿನಂಥ ತ್ರಿಪದಿಗಳು ಸದಾ ಯೌವನಸಂಪದ್ಯುಕ್ತ ವಾಗಿದ್ದು, ಜಾತಿ ಕುಲ ಮತಭೇದವಿಲ್ಲದೆ, ಕೇಳಿದವರಿಗೆಲ್ಲ ತುಷ್ಟಿ ಕೊಡುತ್ತಿವೆ.

ಸಾಮಾಜಿಕ ಪರಿಸ್ಥಿತಿ ಹಾಗೂ ಕೌಟುಂಬಿಕ ಪದ್ಧತಿ ಬದಲಾವಣೆಯಾದನಂತರವೂ ಅವನ್ನೋದಿದಾಗ ಅಥವಾ ಕೇಳಿದಾಗ ಏಕರೀತಿಯ ಅನುಭವಾನಂದಗಳು ಸ್ಫುರಿಸುತ್ತವೆ. ಇವುಗಳಲ್ಲಿ ಮಾನವನ ರೂಕ್ಷರಮಣೀಯವಾದ ಪ್ರಾಕೃತಿಕ ಮೂಲಗುಣ, ಹಾಗೂ ಸರ್ವಸಾಧಾರಣವೂ ಸರ್ವವ್ಯಾಪಕವೂ ಆದ ಅಂತಸ್ಸತ್ವಗಳು ನಿಹಿತಗೊಂಡಿವೆ.

ಜನಪದ ಸಾಹಿತ್ಯದಲ್ಲಿರುವುದೆಲ್ಲ ಗಟ್ಟಿಯಾದದ್ದು ಅತ್ಯುತ್ತಮವಾದದ್ದು, ಅದರಲ್ಲಿ ಜಳ್ಳುಪೊಳ್ಳುಗಳಿಲ್ಲವೆಂದು ಹೇಳುವಂತಿಲ್ಲ. ಅಸಾರವಾದದ್ದು ಅನುಪಯುಕ್ತವಾದದ್ದು ಆಧುನಿಕಾಭಿರುಚಿಗೆ ಹಿಡಿಸದ್ದು ಬೇಕಾದಷ್ಟಿದೆ. ಆಧುನಿಕಾಭಿರುಚಿ ಶ್ರೇಷ್ಠವಾದದ್ದೆಂದು ಭಾವಿಸಬೇಕಾಗಿಲ್ಲ. ಜನಪದ ಸಾಹಿತ್ಯದ ಹೆಸರೆತ್ತಿದ ಕೂಡಲೇ ಮೂಗುಮುರಿಯುವಂಥ ಆಧುನಿಕರು ಬಹುಮಂದಿ ಇದ್ದಾರೆ. ಯಾವುದೇ ಸಾಹಿತ್ಯವನ್ನಾಗಲೀ ಅದು ಹುಟ್ಟಿದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭ್ಯಸಿಸಬೇಕಾಗುತ್ತದೆ. ಅದರ ಹುಟ್ಟಿಗೆ ಪ್ರೇರಕವಾಗಿರಬಹುದಾದ ಕವಿಯ ಮನೋಧರ್ಮ ಧ್ಯೇಯಾದರ್ಶಗಳನ್ನು ಗಮನಿಸಬೇಕಾಗುತ್ತದೆ. ಆಗ ನಿಸ್ಸಾರವಾದದ್ದೆಂದು, ಬರಿಯ ಸಿಪ್ಪೆಯೆಂದು, ನಿರ್ಜೀವವಾದದ್ದೆಂದು ತೋರುವ ಸಾಹಿತ್ಯದಲ್ಲಿಯೂ ಕೆಲವು ಸದ್ಗುಣಗಳನ್ನು ಕಾಣಬಹುದು. ಆ ಸಾಹಿತ್ಯವನ್ನು ಆಧುನಿಕ ದೃಷ್ಟಿಯಿಂದ ಸಮೀಕ್ಷಿಸಬಾರದೆಂಬುದು ಈ ಮಾತಿನ ಅರ್ಥವಲ್ಲ: ಆಗಿನ ಕಾಲದ ಸ್ಫೂರ್ತಿಪ್ರೇರಣೆಗಳನ್ನು ಮರೆಯಬಾರದೆಂಬುದೇ ಅದರ ಉದ್ದೇಶ.

ಜೀವನಸಮಸ್ತವನ್ನು ವಸ್ತುವಾಗುಳ್ಳ ಬಹು ವಿಸ್ತಾರವಾದ ಜನಪದ ಸಾಹಿತ್ಯದ ವಿಂಗಡಣೆ ಕಠಿನವಾದ ವಿಷಯ. ಅದರಲ್ಲಿ ಗದ್ಯಪದ್ಯವಿದೆ: ದೇವದಾನವರ ಕಿನ್ನರ ಕಿಂಪುರುಷರ ಯಕ್ಷಗಂಧರ್ವರ ಭೂತಭೇತಾಳಗಳ ಕತೆಗಳಿವೆ: ಮಾನವಜೀವನದ ಸಕಲ ಮುಖಗಳೂ ಅಲ್ಲಿ ಪ್ರತಿಫಲಿಸಿವೆ: ಪೂರ್ವಕಾಲದ ಜ್ಞಾನವಿಜ್ಞಾನಗಳೆಲ್ಲ ಅದರಲ್ಲಿ ಅಡಕಗೊಂಡಿವೆ; ಆದಿಮಾನವನ ಮಾತ್ರವಲ್ಲ, ಎಲ್ಲ ಕಾಲದ ಸಾಮಾನ್ಯ ಜನರ ಕಲ್ಪನೆಗಳು, ನಂಬಿಕೆಗಳು, ಆಶೋತ್ತರಗಳು ಎಲ್ಲವೂ ಅದರಲ್ಲಿ ಸೇರಿಕೊಂಡಿವೆ. ನಿಜಕ್ಕೂ ಅದು ಇತಿಹಾಸಪೂರ್ವಯುಗದ ಹಾಗೂ ಸಾರ್ವಕಾಲಿಕ ಸಾಮಾನ್ಯರ ವೇದ ಮಾತ್ರವಲ್ಲ, ವಿಶ್ವಕೋಶವಾಗಿದೆ. ಬಹು ಸಂಕೀರ್ಣವೂ ಅಪಾರ ವೈವಿಧ್ಯಮಯವೂ ಆದ ಸಾಹಿತ್ಯವನ್ನು ಯಾವ ಆಧಾರದ ಮೇಲೆ ವಿಂಗಡಿಸಿದರೂ ಅಸಮರ್ಪಕತೆಯ ದೋಷವನ್ನು ಪರಿಹರಿಸುವುದು ಸಾಧ್ಯವಿಲ್ಲ. ದೇವುಡು ಅವರು ಒಟ್ಟು ಜನಪದ ಸಾಹಿತ್ಯವನ್ನು ಹಾಡು, ಕಥೆ, ಒಗಟು, ಗಾದೆ ಎಂದು ವಿಭಜಿಸಿ, ಹಾಡುಗಳನ್ನು ಗಂಡುಸರ ಮತ್ತು ಹೆಂಗುಸರ ಹಾಡುಗಳೆಂದು ಎರಡು ವಿಭಾಗವಾಗಿ ವಿಂಗಡಿಸಿ, ಗಂಡುಸರ ಹಾಡುಗಳಲ್ಲಿ ಲಾವಣಿ, ವಿನೋದದ ಪದಗಳು, ವಿಶೇಷ ಪದಗಳು ಎಂದು ಮೂರು ಒಳಗುಂಪುಗಳನ್ನೂ ಹೆಂಗುಸರ ಹಾಡುಗಳಲ್ಲಿ ಬ್ರಾಹ್ಮಣಿ ಹಾಗೂ ಶೂದ್ರಾಣಿಯರ ಹಾಡುಗಳೆಂದು ಎರಡು ಒಳಗುಂಪುಗಳನ್ನೂ ಹೆಸರಿಸುತ್ತಾರೆ. ವಿನೋದದ ಪದಗಳನ್ನು ಮತ್ತೆ ಆರು ಭಾಗಗಳಾಗಿ ವಿಂಗಡಿಸಿ, ಅವುಗಳನ್ನು ಅರ್ಥವಿಲ್ಲದ ಹಾಡುಗಳು, ಜಗಳಗಳು, ತಂದನಾನಾ ಪದಗಳು, ಕೋಲಾಟದ ಪದಗಳು,

ತುಂಡು ಪದಗಳು, ಹಾಸ್ಯದ ಹಾಡುಗಳು ಎಂದು ಕರೆಯುತ್ತಾರೆ. ವಿಶೇಷ ಪದಗಳ ಕೆಳಗೆ ಜಾತ್ರೆಯ ಪದಗಳು, ಕಾಮನ ಪದಗಳು, ಮಾರ್ನಮಿಯ ಪದಗಳು ಬರುತ್ತವೆ. ದಾಸರ ಪದಗಳು ಮತ್ತು ತತ್ವಗಳನ್ನು ಸಹ ಇಲ್ಲಿಯೇ ಮೇಳವಿಸುತ್ತಾರೆ. ಬ್ರಾಹ್ಮಣಿಯ ಮತ್ತು ಶೂದ್ರಾಣಿಯ ಹಾಡುಗಳು ನಿತ್ಯವರ್ಗ ನೈಮಿತ್ತಿಕವರ್ಗವೆಂದು ಮರುವಿಂಗಡಣೆಗೊಳ್ಳುತ್ತವೆ. ಶಾಸ್ತ್ರದ ಹಾಡುಗಳು ನೈಮಿತ್ತಿಕವರ್ಗದಲ್ಲಿ ಸೇರುತ್ತವೆ. ಗಂಡುಸರ ಹಾಡು ಲಯಪ್ರಧಾನವಾದುವೆಂದೂ, ಹೆಂಗುಸರ ಹಾಡು ರಾಗಪ್ರಧಾನವಾದುವೆಂದೂ, ಕೊರವಂಜಿ ಯಕ್ಷಗಾನಗಳು ಚಂಪೂ ಜಾತಿಗೆ ಸೇರಿದ ಪ್ರಬಂಧಗಳಾಗಿ ರಾಗವೈವಿಧ್ಯ ತಾಳವೈವಿಧ್ಯಗಳುಳ್ಳುವೆಂದೂ ಹೇಳುತ್ತಾರೆ.[1]

ಹಾಡುಗಳನ್ನು ಗಂಡಸರವು ಹೆಂಗಸರವು ಎಂದು ಸ್ಥೂಲವಾಗಿ ವಿಂಗಡಿಸಿರುವುದೇನೋ ಸರಿ. ಎರಡು ಜಾತಿಯವರೂ ಹಾಡುವ ಹಾಡುಗಳು ಸಹ ಇವೆ ಎಂಬುದನ್ನು ಮರೆಯಬಾರದು. ದೇವುಡು ಅವರು ಉತ್ತರ ಕರ್ನಾಟಕದ ಹಾಡುಗಳನ್ನು ಲಕ್ಷಿಸಿದಂತಿಲ್ಲ. ಕೊಣವೇಗೌಡನ ಕಥೆಯಂಥ ಕಥನಕವನಗಳನ್ನು ಹಾಡುಗಳ ಗುಂಪಿನಲ್ಲಿ ಸೇರಿಸಿದ್ದು ಸರಿಯೆನಿಸದು. ಕೊರವಂಜಿ ಪದಗಳು ಸಾಮಾನ್ಯವಾಗಿ ಕೊರವರ ಹೆಂಗಸರು ಹಾಡುವಂಥವಾದ್ದರಿಂದ ಅವುಗಳನ್ನು ಬ್ರಾಹ್ಮಣಿಯರ ಹಾಡುಗಳೊಡನೆ ಸೇರಿಸುವುದು ಉಚಿತವಲ್ಲವೆನಿಸುತ್ತದೆ. ಅಷ್ಟೇ ಅಲ್ಲ, ಶೂದ್ರ ಬ್ರಾಹ್ಮಣ ಎಂಬ ಆಧಾರದ ಮೇಲೆ ಮಾಡಿರುವ ವಿಂಗಡಣೆ ಅಸಾಧುವೆಂದು ತೋರದಿರಲಾರದು.

ಎಂ. ಜಿ. ಬಿರಾದಾರ ಅವರು ಉತ್ತರ ಕರ್ನಾಟಕದ ಜನಪದ ಸಾಹಿತ್ಯಪ್ರಕಾರಗಳನ್ನು ಭಾಷಾದೃಷ್ಟಿಯಿಂದ ಗದ್ಯಪದ್ಯ ಹಾಗೂ ಮಿಶ್ರ ಎಂದು ವಿಭಜಿಸಬಹುದಾದರೂ ಸಾಹಿತ್ಯದೃಷ್ಟಿಯಿಂದ ವಿಂಗಡಿಸುವುದೇ ಮೇಲೆಂದು ತಿಳಿಸಿ, ಕಥೆ, ಹಾಡು, ಒಡಪು, ಗಾದೆ, ಕುಣಿತ, ಬಯಲಾಟ, ಪಡೆನುಡಿ ಎಂದು ಏಳು ಪ್ರಕಾರಗಳನ್ನು ಹೆಸರಿಸುತ್ತಾರೆ. ಕುಣಿತ ಮತ್ತು ಪಡೆನುಡಿಗಳು ಸಾಹಿತ್ಯದ ಸೀಮೆಯಲ್ಲಿ ಬರಲಾರವೆಂಬುದನ್ನಿಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಹಾಡುಗಳನ್ನು ಒಟ್ಟಾರೆ ಗಂಡಸರವು ಹೆಂಗಸರವು ಎಂದು ಹೇಳಿ, ಒಳವಿಭಾಗಗಳನ್ನು ವಿವರಿಸಿದ್ದಾರೆ: ಬೀಸುವ ಕುಟ್ಟುವ ಹಾಡು, ಮಗುವನ್ನು ತೊಟ್ಟಿಲಿಗೆ ಹಾಕುವಾಗ ಸಾಮೂಹಿಕವಾಗಿ ಹಾಡುವ ಬಾಗೀಣದ ಹಾಡು, ಜೋಗುಳ (ಲಾಲಿ) ಹಾಡು, ಹೆಣ್ಣು ಮೈನೆರೆದಾಗ ಹಾಡುವ ಸೋಬಾನದ ಹಾಡು, ಮದುವೆಯ ಹಾಡು, ಯಾವಾಗಬೇಕಾದರೂ—ಆದರೆ ಗೌರಿ ಹುಣ್ಣಿಮೆ ತಿಂಗಳಲ್ಲಿ ವಿಶೇಷವಾಗಿ—ಹಾಡುವ ಶೀಗೀ ಗೌರೀ ಹಾಡು, ಮಣ್ಣು ಪೂಜೆಯ ಕಾಲದಲ್ಲಿ ಹಾಡುವ ಗುಳ್ಳವ್ವನ ಹಾಡು, ಮಳೆರಾಯ ಅಥವಾ ಜೋಕುಮಾರನ ಹಾಡು, ಚೌಡಕಿ ಹಾಡು, ಕೊರವಂಜಿ ಹಾಡು. ಅಂತೆಯೇ ಗಂಡಸರ ಹಾಡುಗಳನ್ನು ನಿರೂಪಿಸುತ್ತಾರೆ: ಹೋಳೀ ಹಾಡು, ಹಂತಿಯ ಅಥವಾ ಕಣದ ಹಾಡು, ಕಾಳನ್ನು ಮನೆಗೆ ತರುವಾಗ ಗೀತಿಸುವ ಬಲೋರಿ ಹಾಡು,

[1] ವಿವರಗಳಿಗೆ 'ಕರ್ಣಾಟಕ ಸಂಸ್ಕೃತಿ' ಎಂಬ ಅವರ ಗ್ರಂಥವನ್ನು ನೋಡಬಹುದು.

ನೀರೆತ್ತುವ ಅಥವಾ ನೇಗಿಲು ಹೊಡೆಯುವ ಕಾಲದಲ್ಲಿ ಹಾಡುವ ಮಟ್ಟಿಯ ಹಾಡು, ದೀಪಾವಳಿಯ ಕಾಲದಲ್ಲಿ ದನಕಾಯುವ ಹುಡುಗರು ಹಾಡುವ ಪೀಡೆಯ ಹಾಡು, ಡೊಳ್ಳಿನ ಹಾಡು, ಶ್ರೀಶೈಲ ಯಾತ್ರೆಯ ಕಾಲದಲ್ಲಿ ಹಾಡುವ ಕಂಬಿಯ ಹಾಡುಗಳು, ಕರಪಲ್ಲವದ ಹಾಡು, ಬೆಡಗಿನ ಪದಗಳು, ಗೊಂದಲಿಗರ ಹಾಡು, ಕೊರವಂಜಿ ಹಾಡಿನಂಥ ಬುಡಬುಡಕ್ಯಾನ ಹಾಡು, ಮೊಹರಂ ಹಾಡು, ಭಜನಿಯ ಪದ, ಲಾವಣಿ, ಸ್ವಾತಂತ್ರ್ಯ ಸಂಗ್ರಾಮದ ಜನಪದ ಹಾಡು, ಮಂಗಳಾರತಿಯ ಪದಗಳು, ಮಕ್ಕಳ ಹಾಡು. ಇಷ್ಟೇ ಅಲ್ಲ, "ಇನ್ನೂ ಹಲವಾರು ಪ್ರಕಾರದ ಹಾಡುಗಳು ಬಳಕೆಯಲ್ಲಿವೆ" ಎಂದು ಹೇಳುತ್ತಾರೆ.[1] ಚೌಡಿಕೆ ಕಾವ್ಯ ಸಾಮಾನ್ಯವಾಗಿ ಕಥನಾತ್ಮಕವಾದದ್ದು. ಗೊಂದಲಿಗರ ಹಾಡುಗಳಲ್ಲಿ ಭಾವಾತ್ಮಕವಾದುವೂ ಇವೆ, ಕಥನಾತ್ಮಕವಾದುವೂ ಇವೆ. ಜತೆಗೆ ಅವು ಯಾವುದೋ ಒಂದು ಜಾತಿಯವರು ಮಾತ್ರ ಹಾಡುವಂಥವು. ಡೊಳ್ಳಿನ ಹಾಡು ಎಂಬ ಹೆಸರು ಬಂದದ್ದು ಹಾಡು ಹೇಳುವಾಗ ಬಳಸುವ ವಾದ್ಯೋಪಕರಣದ ಬಳಕೆಯಿಂದಾಗಿ. ಹಂತಿಯ ಹಾಗೂ ಮಟ್ಟಿಯ ಹಾಡು ಬೇಸಾಯಗಾರರು ಹಾಡುವಂಥವು. ಆದ್ದರಿಂದ ಈ ವಿಭಜನೆ ಎಲ್ಲ ಹಾಡುಗಳಿಗೂ ಅನ್ವಯಿಸಬಹುದಾದ ಸಾಮಾನ್ಯಲಕ್ಷಣವನ್ನು ದೃಷ್ಟಿಯಲ್ಲಿಟ್ಟು ಕೊಂಡು ಮಾಡಿದುದಲ್ಲ.

ಕರಾವಳಿ ಪ್ರದೇಶದ ಜನಪದ ಸಾಹಿತ್ಯವನ್ನು ಎನ್. ಆರ್. ನಾಯಕ ಅವರು ಗೀತೆ, ಕತೆ, ರೂಪಕ, ಗಾದೆ, ಒಗಟು ಎಂದು ಮುಂತಾಗಿ ವಿಭಜಿಸುತ್ತಾರೆ. ಹೆಂಗಸರ ಹಾಡುಗಳಲ್ಲಿ ಭಾವಗೀತಾತ್ಮಕ ತ್ರಿಪದಿಗಳು, ಭಕ್ತಿಯ ಹಾಡುಗಳು, ಶಾಸ್ತ್ರದ ಹಾಡು ಗಳು, ಆರತಿಯ ಹಾಡುಗಳು, ರಾಮಾಯಣ ಮಹಾಭಾರತದ ಹಾಡುಗಳು, ಕಥೆಯ ಹಾಡುಗಳು ಮತ್ತು ಕುಣಿತದ ಹಾಡುಗಳು ಎಂಬ ಪ್ರಕಾರಗಳನ್ನು ಗುರುತಿಸುತ್ತಾರೆ. ಸಿಡುಬು ಮೊದಲಾದ ಸಾಂಕ್ರಾಮಿಕ ರೋಗಗಳನ್ನು ಊರಿಂದ ಹೊರಡಿಸುವ ಸಲುವಾಗಿ ಹಾಡಿಕೊಂಡು ಕುಣಿಯುವ ಕಾಡ್ಯಾಕುಣಿತ, ಸುಗ್ಗಿ ಕುಣಿತ, ತುಳಸಿ ಪೂಜಾ ಕುಣಿತ, ಗುಮಟೆಪದ, ಭಾರತ ರಾಮಾಯಣಗಳನ್ನು ಕುರಿತು ಹಾಡುವ ವೃತ್ತಿಗಾಯಕರ ಜೋಗಿ ಪದ, ಶ್ರಮಪರಿಹಾರದ ಪದ, ಮಕ್ಕಳ ಗೀತೆಗಳು–ಇವು ಗಂಡಸರ ಹಾಡುಗಳಲ್ಲಿ ಗುರುತಿ ಸಿರುವ ಶಾಖೆಗಳು.[2] ಆರತಿಯ ಹಾಡುಗಳನ್ನು ಭಕ್ತಿಯ ಹಾಡುಗಳಲ್ಲಿ; ಕಥೆಯ ಹಾಡು ಗಳನ್ನು ರಾಮಾಯಣ ಮಹಾಭಾರತದ ಹಾಡುಗಳಲ್ಲಿ ಸಂಲಗ್ನಗೊಳಿಸಬಹುದೆಂದು ತೋರು ತ್ತದೆ. ಅಂತೆಯೇ ಮಕ್ಕಳ ಹಾಡುಗಳು ಪ್ರತ್ಯೇಕ ಪ್ರಕಾರವಾಗಿ ಎಣಿಕೆಗೊಳ್ಳಬೇಕಾಗು ತ್ತದೆ.


---

1 ವಿವರಗಳಿಗೆ 'ಜಾನಪದ ಸಾಹಿತ್ಯ ದರ್ಶನ' (ಸಂ. ಡಾ. ಆರ್. ಸಿ. ಹಿರೇಮಠ ಅವರು) ದಲ್ಲಿ ಪ್ರಕಟವಾಗಿರುವ "ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಪ್ರಕಾರಗಳು" ಎಂಬ ಲೇಖನ ಓದಬಹುದು.

2 ಡಾ. ಆರ್. ಸಿ. ಹಿರೇಮಠ ಅವರಿಂದ ಸಂಪಾದಿತವಾಗಿರುವ 'ಜಾನಪದ ಸಾಹಿತ್ಯ ದರ್ಶನ' ಎಂಬ ಗ್ರಂಥದಲ್ಲಿ ಅಚ್ಚಾಗಿರುವ "ಕರಾವಳಿ ಪ್ರದೇಶದ ಜನಪದ ಸಾಹಿತ್ಯ ಪ್ರಕಾರಗಳು" ಎಂಬ ಲೇಖನವನ್ನೋದಿ ವಿವರವನ್ನರಿಯಬಹುದು.

ಕಲ್ಬುರ್ಗಿಯವರು ಜನಪದ ಸಾಹಿತ್ಯವನ್ನು ಗದ್ಯ ಪದ್ಯ ದೃಶ್ಯಪ್ರಕಾರಗಳೆಂದು ವರ್ಗೀಕರಿಸಿ, ಪದ್ಯಪ್ರಕಾರದಲ್ಲಿ ಉಪಜೀವನದ ಹಾಡು, ಉತ್ಸಾಹದ ಹಾಡು, ಉತ್ಸವದ ಹಾಡು ಎಂದು ಮೂರು ಉಪವರ್ಗಗಳನ್ನು ಹೆಸರಿಸಿ, ಲಾವಣಿಗಳನ್ನು ಉಪಜೀವನದ ಹಾಡುಗಳೆಂದು ಕರೆಯುತ್ತಾರೆ. ಲಾವಣಿಗಳನ್ನುಳಿದ ಪದ್ಯಜಾತಿಗಳನ್ನೆಲ್ಲ ಮಿಕ್ಕೆರಡು ವರ್ಗಗಳಲ್ಲಿ ಇರುಕಿಸುವುದು ಕಷ್ಟವಾಗುತ್ತದೆ.

ಆರ್. ಎಸ್. ಬಾಗ್ಸ್ ಅವರು ಜನಪದ ವಾಙ್ಮಯದಲ್ಲಿ ಪುರಾಣ, ಐತಿಹ್ಯ, ಕಟ್ಟುಕಥೆ ಮತ್ತು ಗೀತೆಗಳನ್ನು ಮಾತ್ರ ಸೇರಿಸಿ ಗಾದೆ ಒಗಟುಗಳನ್ನು ಭಾಷಿಕ ವರ್ಗದಲ್ಲಿ ಜೋಡಿಸುತ್ತಾರೆ. ಸಾಮಾಜಿಕ ವಿಜ್ಞಾನದ ಅಂತರರಾಷ್ಟ್ರೀಯ ವಿಶ್ವಕೋಶ ಕತೆ ಐತಿಹ್ಯ ಪುರಾಣ ಗಾದೆ ಒಗಟು ಮತ್ತು ಕಾವ್ಯಗಳನ್ನು ಜನಪದ ಸಾಹಿತ್ಯದ ಪರಿಧಿಯಲ್ಲಿಯೇ ಪರಿಗಣಿಸುತ್ತದೆ. ಜಗತ್ತಿನ ಶ್ರೇಷ್ಠ ವಿದ್ವಾಂಸರ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿರಿಸಿ ಕೊಂಡು ಜನಪದ ಸಾಹಿತ್ಯವನ್ನು ಕೆಳಕಂಡಂತೆ ವರ್ಗೀಕರಿಸಬಹುದು.



ಗೀತೆ

ಜನಪದ ಸಾಹಿತ್ಯದಲ್ಲಿ ಗೀತೆಯೊಂದು ಪ್ರಮುಖ ಪ್ರಕಾರ. ಅದು ಮುಟ್ಟದ ವಸ್ತು ವಿಲ್ಲ,ರಟ್ಟುಮಾಡದ ಬದುಕಿಲ್ಲ. ಸಂಸಾರದ ಎಲ್ಲ ಮುಖಗಳೂ ಅಲ್ಲಿ ಚಿತ್ರಣಗೊಂಡಿವೆ. ಅತ್ತೆ ಸೊಸೆ, ತಾಯಿ ಮಗಳು, ಅಣ್ಣ ತಂಗಿ, ಅತ್ತಿಗೆ ನಾದಿನಿ ಮೈದುನರು, ಸವತಿ ಓರಗಿತ್ತಿ ಯರು, ಪತಿ ಪತ್ನಿಯರು, ತಂದೆ ಮಗ, ತವರು, ಸೂಳೆಗಾರಿಕೆ, ಹೆಣ್ಣುಜನ್ಮ, ಮಕ್ಕಳು ಮೊಮ್ಮಕ್ಕಳು, ಬಸಿರು ಬಯಕೆ, ಬಡತನ, ವಿಧವೆಯ ಗೋಳು, ಗೆಣೆಯ ಗೆಣತಿಯರು, ಸಾವು ನೋವು, ಬಾಣಂತಿತನ, ನೆಂಟರು, ಬಂಜೆ, ಪ್ರೇಮ ದ್ವೇಷ, ಮುನಿಸು ಜಗಳ, ಒಂದೇ ಎರಡೇ, ನೂರಾರು ಸಂಗತಿಗಳು, ಇಡೀ ಹಳ್ಳಿಯ ಬದುಕಿನ ಉಸಿರು ಹಾಡಾಗಿ ಹೊರಹೊಮ್ಮುತ್ತವೆ. ಹಾಡಿನ ಜೋಡಿಯಿಲ್ಲದೆ ಯಾವ ಕೆಲಸವೂ ಸಾಗುವುದಿಲ್ಲ. ಕುಟ್ಟುವುದು, ಬೀಸುವುದು, ಮೊಸರು ಕಡೆಯುವುದು, ಅಡಿಕೆ ಸುಲಿಯುವುದು, ಹಚ್ಚೆ ಹೊಯ್ಯುವುದು, ಮಗು ಮಲಗಿಸುವುದು, ಯಾವ ಕೆಲಸವೇ ಆಗಲಿ, ಹಾಡು ಕಲೆತರೆ ಸರಾಗವಾಗಿ ಸರಿಯುತ್ತದೆ. ಬೇಸಾಯ ನೇಯ್ಗೆ ಮೊದಲಾದ ವೃತ್ತಿಗಳ, ಕುಣಿತಗಳ

ಒಂದು ಅನಿವಾರ್ಯ ಅವಿಭಾಜ್ಯ ಭಾಗವಾಗಿ ಹಾಡು ಬರುತ್ತವೆ. ಬಿತ್ತನೆ ಮಾಡುವಾಗ, ಕೂರಿಗೆ ಹೊಡೆಯುವಾಗ, ನಾಟಿ ಹಾಕುವಾಗ, ಕಳೆ ಕೀಳುವಾಗ, ಹೊಲ ಕೊಯ್ಯುವಾಗ, ಕಾಳು ಒಕ್ಕುವಾಗ, ಮಣ್ಣು ಹೊರುವಾಗ, ಗಾಡಿ ಹೊಡೆಯುವಾಗ ಸಾಮೂಹಿಕವಾಗಿಯೋ ವೈಯಕ್ತಿಕವಾಗಿಯೋ ಗೀತಾಪ್ರವಾಹ ಹರಿಯಬೇಕು. ಹಬ್ಬಹರಿದಿನ ಮದುವೆಯೊಸಗೆ ಯಾವ ಶುಭಕಾರ್ಯವೇ ಆಗಲೀ ಶಾಸ್ತ್ರವೇ ಆಗಲೀ, ದೇವರ ಕಾರ್ಯವೇ ಆಗಲೀ ಹಾಡಿನಿಂದ ಮೊದಲಾಗಬೇಕು, ಹಾಡಿನಿಂದ ಅಂತ್ಯಗೊಳ್ಳಬೇಕು. ಬಹುತೇಕವಾಗಿ ಜನಪದ ಗೀತೆಗಳೆಲ್ಲ ಕ್ರಿಯಾತ್ಮಕವಾದುವು; ಯಾವುದಾದರೂ ಕ್ರಿಯೆಯ ಪ್ರೇರಣೆಯಿಂದ ಉಗಮಗೊಳ್ಳುತ್ತವೆ, ಕ್ರಿಯೆಯ ತೀವ್ರಸಾಧನೆಗೆ ಸಹಾಯಕವಾಗುತ್ತವೆ. ಕ್ರಿಯೆ ಮತ್ತು ಗೀತೆಗಳೆರಡೂ ಪರಸ್ಪರ ಪೂರಕ ಮತ್ತು ಪ್ರೇರಕಗಳೆನ್ನಬಹುದು. ಹಳ್ಳಿಗರ ಆಸರು ಬೇಸರುಗಳಿಗೆ ನೋವು ನರಳುಗಳಿಗೆ ಇವು ಹಿರಿಮದ್ದು; ಅವುಗಳನ್ನು ಹಾಡಿಕೊಂಡಾಗ ತೀರ್ಥಸ್ನಾನದ ಫಲ ಅವರಿಗಾಗುತ್ತದೆ. ಜನಪದ ಗೀತೆಗಳನ್ನು ಸಂಸಾರ ಸಂಹಿತೆಗಳೆಂದು, ಸಂಸ್ಕೃತಿ ಮೀಮಾಂಸೆಯ ಭಾಷ್ಯಗಳೆಂದು ಧಾರಾಳವಾಗಿ ಹೇಳಬಹುದು. ಇಲ್ಲಿಯ ವೈವಿಧ್ಯವಾಗಲಿ ಜೀವಂತಿಕೆಯಾಗಲಿ ಅನೇಕ ಶಿಷ್ಟಕಾವ್ಯಗಳಲ್ಲಿ ಕಾಣುವುದಿಲ್ಲ. ಅಷ್ಟೇ ಅಲ್ಲ, ಶಿಷ್ಟಕಾವ್ಯ ಕಾಣದ ಲೋಕ ಜೀವನದ ಮತ್ತೊಂದು ಶ್ರೀಮುಖ ಇಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ಈ ಸಂಗತಿಗಳಲ್ಲಿ ಯಾವುದೊಂದೂ ಬಿಟ್ಟುಹೋಗದಂತೆ ವರ್ಗೀಕರಣ ಮಾಡುವುದು ದುಸ್ತರವಾದ ಕೆಲಸ. "ಗೀತೆಗಳಲ್ಲಿ ಮತ್ತೆ ಭಾವಗೀತೆಗಳು, ಧಾರ್ಮಿಕ ಗೀತೆಗಳು, ಮಾಂತ್ರಿಕ ಗೀತೆಗಳು, ಕಾಯಕ ಗೀತೆಗಳು, ಕ್ರೀಡಾ ಗೀತೆಗಳು, ನಾಟ್ಯ ಗೀತೆಗಳು, ಶಿಶು ಗೀತೆಗಳು ಇತ್ಯಾದಿಯಾಗಿ ಭೇದ ಕಲ್ಪಿಸಬಹುದು. ಕುಣಿತದ ಹಾಡುಗಳು, ರಾಜಕೀಯ ಸ್ವರೂಪದ ವಿಡಂಬನ ಗೀತೆಗಳು, ಗದ್ಯಮಿಶ್ರಿತ ಗೀತೆಗಳು, ಬೀದಿಹೋಕ ವ್ಯಾಪಾರಿಗಳ ಗೀತೆಗಳು ಮುಂತಾದುವೂ ಉಂಟು. ಭಾವಗೀತೆಗಳನ್ನು ಪುನಃ ಪ್ರೇಮ ಗೀತೆಗಳು, ಶೋಕಗೀತೆಗಳು, ಹಾಸ್ಯಗೀತೆಗಳು, ಭಕ್ತಿಗೀತೆಗಳು, ದೇಶಭಕ್ತಿಗೀತೆಗಳು ಇತ್ಯಾದಿಯಾಗಿ ವಿಂಗಡಿಸಬಹುದು"[1] ಎಂದು ಸಿ.ಪಿ.ಕೆ ನುಡಿದಿದ್ದಾರೆ. 'ಇತ್ಯಾದಿಯಾಗಿ' 'ಮುಂತಾದುವೂ' ಎಂದು ಹೇಳುವಲ್ಲಿ ಪಟ್ಟಿ ಅಸಂಪೂರ್ಣವೆಂಬ ಅವರ ಅಭಿಪ್ರಾಯವಿದ್ದಂತೆ ತೋರುತ್ತದೆ. ಯಾವ ರೀತಿ ವಿಂಗಡಣೆ ಮಾಡಿದರೂ ಅವ್ಯಾಪ್ತಿ, ಅತಿವ್ಯಾಪ್ತಿ, ಮೇಲ್ಮಡಿಕೆ, ಪುನರುಕ್ತಿ, ಅಸ್ಪಷ್ಟತೆಯ ದೋಷಗಳು ಮುಖದೋರುವ ಸಂಭವ ಉಂಟು. ಜನಪದಗೀತೆಗಳ ಸಂಕೀರ್ಣತೆಯೇ ಈ ಕ್ಲೇಶಕ್ಕೆ ಕಾರಣ. ಗದ್ದಿಗಿ ಮಠ ಅವರು ಈ ಮೇಲೆ ಹೆಸರಿಸಿರುವ ಗೀತಾಪ್ರಕಾರಗಳ ಜತೆಗೆ ದೋಣಿ ಹಾಡು, ದುಂದುಭಿ ಹಾಡುಗಳನ್ನು ಸೇರಿಸಿರುವವರಾದರೂ[2], ಸ್ತುತಿಪದಗಳು, ಸುಗ್ಗಿಯ ಹಾಡುಗಳು, ಹಳ್ಳಿಯ ಕುಣಿತಗಳು, ಮಕ್ಕಳ-ಆಟ-ಹಾಡುಗಳು, ಹಾಸ್ಯದ ಹಾಡುಗಳು, ರಸ

1 ಜನಪದ ಗೀತೆ, ಪುಟ ೧೨.

2 ಕನ್ನಡ ಜಾನಪದ ಗೀತೆಗಳು, ಪು. ೧೦.

ನಿಮಿಷಗಳು, ರಸಾವೇಶದ ಹಾಡುಗಳು, ಬಾಳಿನಲ್ಲಿ ಆಸರಿಕೆ–ಬೇಸರಿಕೆ, ಪ್ರಣಯ ಹಾಗೂ ದಾಂಪತ್ಯ, ಸುಗ್ಗಿಯ ಸಂಪ್ರದಾಯ, ಹಳ್ಳಿಗರ ಹಬ್ಬಗಳು, ಹಂತಿಯ ಹಾಡುಗಳು, ಎಂಬ ಹನ್ನೆರಡು ವಿಭಾಗಗಳಲ್ಲಿ ಜನಪದ ಗೀತೆಗಳ ಅಧ್ಯಯನ ನಡೆಸಿದ್ದಾರೆ. ಸಿ.ಪಿ.ಕೆ ಯವರು ಹೆಸರಿಸಿರುವ ಧಾರ್ಮಿಕ ಗೀತೆಗಳನ್ನು ಭಕ್ತಿಗೀತೆಗಳಲ್ಲಿಯೂ, ಕ್ರೀಡಾ ಹಾಗೂ ನಾಟ್ಯಗೀತೆಗಳನ್ನು ಕುಣಿತದ ಹಾಡುಗಳಲ್ಲಿಯೂ ಸಮಾವೇಶಗೊಳಿಸಬಹುದು. ಗದ್ದಿಗಿ ಮಠ ಅವರ ಸುಗ್ಗಿಯ ಹಾಡುಗಳಲ್ಲಿ ಹಾಸ್ಯದ ಹಾಡುಗಳಾಗಲೀ, 'ರಸನಿಮಿಷಗಳು' ಆಗಲಿ, ರಸಾವೇಶದ ಹಾಡುಗಳಾಗಲಿ, 'ಬಾಳಿನಲ್ಲಿ ಆಸರಿಕೆ–ಬೇಸರಿಕೆಗಳಾಗಲಿ' ಸೇರಬಾರ ದೆಂದಿಲ್ಲ.

ಸುಪ್ರಸಿದ್ಧ ಸಂಗೀತ ಶಾಸ್ತ್ರಜ್ಞರಾದ ಪಿ. ಸಾಂಬಮೂರ್ತಿಯವರು ಇವನ್ನು ಸಂಗೀತ ಪದ್ಧತಿಗನುಗುಣವಾಗಿ ಮೂರು ಪ್ರಮುಖ ವಿಭಾಗಗಳಾಗಿ ವರ್ಗೀಕರಿಸಿ, ಒಳವಿಭಾಗ ಗಳನ್ನು ಸಹ ಹೆಸರಿಸಿದ್ದಾರೆ. (i) ೧. ಗ್ರಾಮ್ಯ ಪದ್ಧತಿ (ಬುಡಕಟ್ಟಿನ ಹಾಡುಗಳು) ೨. ನಾಗರಿಕ ಪದ್ಧತಿ (ಮದುವೆಯ ಹಾಡುಗಳು); (ii) ೧. ಏಕಾಕಿಯ ಹಾಡುಗಳು, ಸಂವಾದದ ಹಾಡುಗಳು, ಗೋಷ್ಠಿ ಗೀತಗಳು; (iii) ವಿಷಯ ವೈವಿಧ್ಯಕ್ಕನುಸಾರವಾಗಿ : ನೀತಿಯ ಹಾಡುಗಳು, ತತ್ವದ ಹಾಡುಗಳು, ಗಾದೆಯ ಹಾಡುಗಳು, ಹಬ್ಬದ ಹಾಡುಗಳು, ಔದ್ಯಮಿಕ ಹಾಡುಗಳು, ಬೇಸಾಯದ ಹಾಡುಗಳು, ಪ್ರಾರ್ಥನಾ ಗೀತೆಗಳು, ಗ್ರಾಮ ದೇವತೆಗಳ ಬಗ್ಗೆ ಗೀತೆಗಳು, ಪಂಗಡಗಳ ಹಾಡುಗಳು, ಪೌರಾಣಿಕ ಗೀತೆಗಳು, ಕಥಾ ಕಾಲಕ್ಷೇಪದ ಹಾಡುಗಳು, ಜೋಗುಳ, ಲಾವಣಿಗಳು, ವೀರರ ಗುಣಕಥನಗಳು, ಗಾಡಿ ಯವನ ಗೀತೆಗಳು, ಒಗಟಿನ ಹಾಡುಗಳು, ಹಾಸ್ಯದ ಹಾಡುಗಳು, ಆಟದ ಹಾಡುಗಳು, ಔಷಧಿ ಹಾಡುಗಳು, ಚರಮ ಗೀತೆಗಳು, ವಿನೋದ ಗೀತೆಗಳು, ಕಾವಡಿ ಚೆಂದು, ಅಂಬಿಗರ ಹಾಡುಗಳು, ಯಾತ್ರಿಕರ ಹಾಡುಗಳು, ದೆವ್ವದ ಆರಾಧನೆಯ ಹಾಡುಗಳು, ಕಾಳಿಪೂಜೆಯ ಹಾಡುಗಳು—ಹೀಗೆ ಅವರು ಪಟ್ಟಿಯನ್ನು ಬೆಳಸುತ್ತಾರೆ.[1] ಇಲ್ಲಿಯೂ ಅತಿವ್ಯಾಪ್ತಿ, ಅಸಮಗ್ರತೆ, ಪುನರಾವೃತ್ತಿ ಮೊದಲಾದ ದೋಷಗಳಿವೆ.

ಭಾವಗೀತೆಗಳಲ್ಲಿ ನಿಜವಾಗಿ ವಸ್ತುವಿಲ್ಲ. ಆದರೂ ಭಾವದ ಬಳ್ಳಿ ಹಬ್ಬಲು ಏನಾದ ರೊಂದು ಊರೆ ಬೇಕಲ್ಲವೆ? ಅದನ್ನೇ ಸಂಗತಿ ಎಂದು ಕರೆಯಬಹುದು. ಆ ಸಂಗತಿಗಳ ಆಧಾರದ ಮೇಲೆ ಗೀತೆಗಳನ್ನು ಹತ್ತು ಬಗೆಯಾಗಿ ವಿಂಗಡಿಸಬಹುದು : ಕುಣಿತದ ಹಾಡು, ಭಕ್ತಿಗೀತೆ, ಶಾಸ್ತ್ರದ ಹಾಡು, ಕಾಯಕಗೀತೆ, ಒಗತನದ ಹಾಡು, ಯುದ್ಧಗೀತೆ, ಶಿಶು ಗೀತೆ, ನೀತಿಗೀತೆ, ವರ್ಣಕಗೀತೆ, ಮತ್ತು ಸಂಕೀರ್ಣಗೀತೆ.

ಗೀತೆಗಳಲ್ಲೆಲ್ಲ ಕುಣಿತದ ಹಾಡೇ ಪ್ರಪ್ರಾಚೀನವಾದುದೆಂದು ತೋರುತ್ತದೆ. ಕಲೆಗಳ ಲ್ಲೆಲ್ಲ ನೃತ್ಯವೇ ಮೊದಲು ಹುಟ್ಟಿದ್ದಷ್ಟೆ. ಭಾವಾಭಿವ್ಯಕ್ತಿಯ ಮೊದಲ ಮಾಧ್ಯಮವದು. ಕುಣಿತದೊಡನೆಯ ಉದ್ಗಾರಗಳೇ ಮಾತಾದುವು. ಆ ಉದ್ಗಾರ ಭಾವಾತ್ಮಕವಾದವು.

[1] ವಿನೀತ ರಾಮಚಂದ್ರ ರಾಯರ 'ಹಳ್ಳಿಯ ಹಾಡುಗಳು' ಎಂಬ ಸಂಕಲನಕ್ಕೆ ಬರೆದ ಮುನ್ನುಡಿ, ಪು. ೧೧–೧೨.

ಅಂದರೆ ಮೊದಲ ಮಾತುಗಳೆಲ್ಲ ಭಾವಗಳ ಅರಳುಗಳು. ಒಂದೇ ಭಾವದ ಕವಲುಗಳಾಗಿ ಕುಣಿತ ಮತ್ತು ಹಾಡುಗಳು ಹೊರಹೊಮ್ಮಿದುವು. ಅವೆರಡೂ ಒಮ್ಮೆಯ್ಯ ಅವಳಿಗಳು. ಸಂಗೀತ ನೃತ್ಯದಿಂದ ಪ್ರತ್ಯೇಕವಾದನಂತರವೂ ನೃತ್ಯ ಅದರಿಂದ ದೂರವಾಗಲಿಲ್ಲ. ವ್ಯಕ್ತಿ ನೃತ್ಯವಾಗಲಿ, ವೃಂದನೃತ್ಯವಾಗಲಿ ಸಂಗೀತ ಅನಿವಾರ್ಯ. ಪೂಜೆ ಕುಣಿತವಾಗಲಿ, ನಂದಿ ಕುಣಿತವಾಗಲಿ ಅದರ ಜತೆಗೆ ವಾದ್ಯ ಅನಿವಾರ್ಯವಷ್ಟೆ. ಆ ವಾದ್ಯದ ಜತೆಗೆ ಹಾಡೂ ಬರುತ್ತದೆ. ಕಂಸಾಳೆ ಕುಣಿತದಲ್ಲಿ ಹಾಡು ಅನಿವಾರ್ಯ. ಕುಣಿತದ ಹಾಡುಗಳಲ್ಲೆಲ್ಲ ಕೋಲಾಟದ ಪದಗಳು ದಕ್ಷಿಣ ಭಾರತದಲ್ಲಿ ಬಹು ಜನಪ್ರಿಯವಾದುವು. ಕೋಲಾಟ ಮುಖ್ಯವಾಗಿ ಗಂಡಸರ ಆಟ. ಹೆಂಗಸರು, ಅದರಲ್ಲಿಯೂ ಹೆಣ್ಣುಮಕ್ಕಳು ಆಡಬಾರ ದೆಂದಿಲ್ಲ. ಇದು ಗುಜರಾತಿನ ಗಾರ್ಭಾನೃತ್ಯವನ್ನು ಹೋಲುತ್ತದೆ. ಇದು ಕೋಲಾಹಲ ವಿಲ್ಲದ ಆಡಂಬರವಿಲ್ಲದ ಸರಳ ಸುಂದರ ಕಲೆ. ಆದ್ದರಿಂದ ಅದು ಮೆರೆದಾಡದ ಹಳ್ಳಿಯೇ ಇಲ್ಲವೆನ್ನಬಹುದು. ಹಳ್ಳಿಗರ ಬದುಕಿನೊಂದಿಗೆ ಬೆಳೆದಿರುವ, ಅವರ ಆಸರು ಬೇಸರುಗಳನ್ನು ನೀಗುವ ಸತ್ಕಲೆ. ಆ ಆಟ ಉತ್ಸವಗಳಲ್ಲಿ ಅನಿವಾರ್ಯವಾದರೂ, ಯಾವಾಗ ಬೇಕಾದರೂ ಬಳಸುವಂಥದು. ಪದಗಳಿಲ್ಲದೆ ಕೋಲಾಟವೇ ಇಲ್ಲ. ಶಿವಪಾರ್ವತಿಯರಂತೆ ಅವೆಂದೂ ಅಗಲುವುದಿಲ್ಲ. ಅವೆರಡರ ಸಮ್ಮಿಲನದಿಂದಾಗಿ ಕೋಲಾಟ ಮೇಳವೆಂಬ ಹೆಸರೂ ಆ ಕಲೆ ಗೊದಗಿದೆ. ಆಟದಲ್ಲೆಷ್ಟು ವೈವಿಧ್ಯತೆಯಿದೆಯೋ, ಅದಕ್ಕಿಂತ ಮಿಗಿಲಾಗಿ ಆ ವೈವಿಧ್ಯತೆ ಹಾಡುಗಳಲ್ಲಿದೆ.

ಒಂದೇ ಕೋಲಿಗೆ ಹಲವು ಬಗೆಯ ಹಾಡುಗಳಿರಬಹುದು. ಪ್ರಾಸಾನುಪ್ರಾಸಗಳು, ಪಲ್ಲವಿ ಮತ್ತು ಅನುಪಲ್ಲವಿಗಳು ಈ ಪದಗಳ ವೈಶಿಷ್ಟ್ಯ. ಭಕ್ತಿ ಹಾಗೂ ವೀರರಸ ಪ್ರಧಾನವಾದ ಹಾಡುಗಳದೇ ಇಲ್ಲೆಲ್ಲ ಮೇಲುಗೈ. ಈ ಪದಗಳಲ್ಲಿ ಗೇಯತೆ ಪ್ರಧಾನಾಂಶ ವಾದ್ದರಿಂದ ಕಾವ್ಯಾಂಶ ದಟ್ಟವಾಗಿರುವುದಿಲ್ಲ. ಅಷ್ಟೇ ಅಲ್ಲ, ಉತ್ಸಾಹದ ಭರದಲ್ಲಿ ಸಾಲು ಗಳು ಪುನರಾವೃತ್ತಿಯಾಗುತ್ತವೆ, ಇಲ್ಲವೆ ಬೇರೆ ಬೇರೆ ಗೀತೆಗಳ ಭಾಗಗಳು ಕಲಸು ಮೇಲೋಗರವಾಗುವುದುಂಟು. ಕೋಲಾಟ ಮುಗಿಯದೆ ಸಾಗುತ್ತಿದ್ದಾಗ, ಒಂದು ಗೀತೆ ಮುಕ್ತಾಯಗೊಂಡದ್ದಾದರೆ, ಬೇರೆ ಗೀತೆಯ ಸಾಲುಗಳನ್ನು ಪೋಣಿಸಿ ಮಾಡುತ್ತಾರೆ, ಇಲ್ಲವೆ ಹೊಸ ಸಾಲುಗಳನ್ನು ಹೊಸೆದು ಸೇರಿಸುತ್ತಾರೆ. ಹೊಸೆದು ಸೇರಿಸುತ್ತಾರೆಂದರೆ ಅದು ಪ್ರಯಾಸದ ಪ್ರಯತ್ನವಲ್ಲ: ಲೀಲಾಜಾಲವಾಗಿ ಅಪ್ರಯತ್ನಪೂರ್ವಕವಾಗಿ, ಹೊರ ಹೊಮ್ಮುವಂಥದು. ಆಟಗಾರರಿಗೆ "ರಾಗ ಮುಖ್ಯವೇ ಹೊರತು ಹಾಡಲ್ಲ"[1]. 'ರಾಗಕ್ಕೆ ತಕ್ಕ ರಚನೆ' ಎನ್ನುವ ಮಾತು ತಕ್ಕಮಟ್ಟಿಗೆ ನಿಜ. "ತಂದನ್ನೊ ತಾನಾನ, ತಂದನ್ನೊ ತಾನಾನ, ತಾನು ತಂದನಿ ತಂದೆ ತಾನಾನ। ತಂದನ್ನೊ ತಾನ, ತಂದನ್ನೊ ತಾನ". "ಕೋಲೂ ಕೋಲನ್ನ ಕೋಲು ಕೋಲೆ, ಕೋಲನ್ನ ಕೋಲೆ-ಕೋಲೂ ಕೋಲನ್ನ ಕೋಲು ಕೋಲೆ" ಎಂಬ ಪಲ್ಲವಿಗಳು ಪ್ರಾರಂಭದಲ್ಲಿ ಬಂದು, ನಾಲ್ಕು ಸಾಲುಗಳ

---

1 ವಿವರಗಳಿಗೆ ಎಂ. ಬಿ. ವಸಂತಕುಮಾರ್ ಅವರು ತಮ್ಮ 'ಕೋಲು ಪದಗಳು' ಸಂಗ್ರಹಕ್ಕೆ ಬರೆದಿರುವ ಪ್ರಸ್ತಾವನೆ ನೋಡಿ.

ಗೊಮ್ಮೆಯೋ ಎರಡು ಸಾಲುಗಳಿಗೊಮ್ಮೆಯೋ ಪುನರಾವರ್ತನೆಯಾಗುತ್ತವೆ.

ದ್ವಿಪದಿ ತ್ರಿಪದಿ ಚೌಪದಿ ರಗಳೆ ಮೊದಲಾದ ಕನ್ನಡ ಛಂದಸ್ಸುಗಳಲ್ಲಿ ಈ ಪದಗಳು ರಚನೆಗೊಳ್ಳುವುವಾದರೂ; ಅವುಗಳನ್ನು ಹಾಡುಗಾರರು ಯಾವ ದಾಟಿಗಳಿಗಾದರೂ ಒಗ್ಗಿಸಿಕೊಳ್ಳುತ್ತಾರೆ. ಸರಳ ರಗಳೆಯಂತೆ ಹರಿಯುವ ಒಂದು ಪದ್ಯದ ಪಲ್ಲವಿಯನ್ನು ತೆಗೆದರೆ ತ್ರಿಪದಿ ಮೈದೋರುತ್ತದೆಂಬುದನ್ನು ಜೀಶಂಪ ಅವರು ವಿಶ್ಲೇಷಿಸಿ ತೋರಿಸಿದ್ದಾರೆ.

ಕೋಲೆ ಕೋಲೆ ಕೋಲು ಕೋಲಣ್ಣ ಕೋಲೆ।
ಕೋಲೇ ಕೋಲೇ ಕೋಲು ಕೋಲಣ್ಣ ಕೋಲೆ॥

ಹೊತ್ನಾಂತೆ ಎದ್ದು ಯಾರ್ಯಾರ ನೆನೆದೇವು।
ಕಲ್ಲೂ ಕಾವೇರೀ ಕಪಿನೀಯ ಕೋಲೆ॥
ಕಲ್ಲೂ ಕಾವೇರಿ: ಕಪ್ನೀಯ ಬಸವಣ್ಣ;
ಹೊತ್ನಂತೆ ಎದ್ದು ನೆನೆದೇವು ಕೋಲೆ॥

ಇವರೊಳಗೆ ಜನಪ್ರಿಯವಾದ ಕಪಿನಿ ಬಸವಣ್ಣನ ಸ್ತುತಿ ಅಡಕಗೊಂಡಿರುವುದು ಮೇಲು ನೋಟಕ್ಕೆ ಸ್ಪಷ್ಟವಾಗಿ ಗೋಚರಿಸುತ್ತದೆ.[1]

ಜೀಶಂಪ ಅವರು ಕೋಲಾಟದ ಪದಗಳ ವಿಶಿಷ್ಟಗುಣ ಲಕ್ಷಣಗಳನ್ನು ಗುರುತಿಸಿದ್ದಾರೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು : (೧) ಕೋಲಾಟದ ಪದಗಳಲ್ಲಿ ಒಗಟಿನ ಪದಗಳ ಪ್ರಾಚುರ್ಯ ಹೆಚ್ಚು. (೨) ಕೆಲವು ಸಂದರ್ಭಗಳಲ್ಲಿ ಸುದೀರ್ಘಲಾವಣಿಗಳನ್ನೇ ಕೋಲಾಟಕ್ಕಾಗಿ ಸಂಗ್ರಹಿಸಿ ಅಡಕಗೊಳಿಸಿ ಹಾಡುವುದುಂಟು. (೩) ಕೆಲವು ಹಾಡುಗಳು ಕೇವಲ ಶಬ್ದ ಮೇಳವಾಗುತ್ತವೆ. ಮರಗಳನ್ನು ವರ್ಣಿಸುವ ಎರಡು ಸಾಲುಗಳಿವೆ ಎಂದಿಟ್ಟುಕೊಳ್ಳೋಣ. ಒಂದು ಮರದ ಹೆಸರಿನ ಬದಲಿಗೆ ಮತ್ತೊಂದು ಮರದ ಹೆಸರು ಸೇರಿಸಿ ಆ ಹಾಡನ್ನು ಎಷ್ಟು ಹೊತ್ತಾದರೂ ಎಳೆಯುತ್ತಾರೆ. (೪) ಕೆಲವೆಡೆ ಆಟ ಮುಖ್ಯ; ಹಾಡು ಅಮುಖ್ಯ. ನಾಲ್ಕೇ ಸಾಲಿನ ಹಾಡನ್ನು ಕುಣಿತದುದ್ದಕ್ಕೂ ಜಗ್ಗುತ್ತಾರೆ. (೫) ಐತಿಹಾಸಿಕ ಗೀತೆಗಳೂ ಆಗಾಗ್ಗೆ ಕಾಣುವುದುಂಟು. (೬) ಹೆಂಗಸರ ಹಾಡುಗಳನ್ನೂ ಕೋಲಾಟಕ್ಕೆ ಬಳಸಿಕೊಳ್ಳುವುದುಂಟು. (೭) ಮುಂದಿನ ಹಾಡಿಗಿಂತ ಪಲ್ಲವಿಗಳು ಕಾವ್ಯಾತ್ಮಕವಾಗಿದ್ದು ಆಕರ್ಷಣೀಯವಾಗುತ್ತವೆ. (೮) ಗಾಂಧಿ ಜೀವನದಂಥ ಆಧುನಿಕ ವಸ್ತುಗಳನ್ನೆತ್ತಿಕೊಂಡು ಸಮಯಸ್ಫೂರ್ತಿಯಿಂದ ಆಟಗಾರರು ಹಾಡು ಕಟ್ಟಬಲ್ಲರು.[2]

ಪ್ರಾರ್ಥನೆ. ವರ್ಣನೆ, ಪ್ರೇಮ, ಪ್ರಣಯಲೀಲೆ, ಕಾಳಗ, ವಿಡಂಬನೆ, ನೀತಿ, ಹಾಸ್ಯ. ಈ ಎಲ್ಲ ಸಂಗತಿಗಳೂ ಈ ಪದಗಳ ವಸ್ತುವಾಗುತ್ತವೆ. ಒಗತನ ಒಸಗೆ ಮೊದಲಾದ ಜಾತಿಯ ಪದಗಳು ಕೋಲಾಟದಲ್ಲಿ ಮೇಳವಿಸಬಾರದೆಂದಿಲ್ಲ. "ಬಾಯಾರಿ ಬಂದೆ ನೀಕೊಡೆ ನೀರ", "ನಿಲ್‌ಪದ" "ಹುಡುಗ ಹುಡುಗಿ[3]" "ಭಾವನಾದಿಸಿಯರ ಸರಸ"

1 ಕೋಲಾಟದ ಪದಗಳು, ಸಂ. ಡಿ. ಕೆ. ಈರೇಗೌಡ, ಪುಟ xiv.

2 ಅದೇ, ಪುಟ xvi–xx.

3 ಈ ಮೂರೂ ಅದೇ ಗ್ರಂಥದಲ್ಲಿವೆ.

"ಮಾವನ ಮಗಳೆ"[1] ಇಂಥ ಸಂಭಾಷಣ ರೂಪದ, ಅಂದರೆ ಸವಾಲ್ ಜವಾಬು ವಿಧಾನದ ಹಾಡುಗಳಂತು ಜನಮನವನ್ನು ಹಿರಿದಾಗಿ ರಂಜಿಸುವುದಲ್ಲದೆ, ಕುಣಿತಗಾರರಿಗೆ ಅಪಾರವಾದ ಸ್ಫೂರ್ತಿ ನೀಡುತ್ತವೆ.

ಛಂದೋಬದ್ಧವಲ್ಲದ ಹಾಡಿನ ಧಾಟಿಯ ಗದ್ಯವೂ ವಿರಳವಾಗಿ ಕುಣಿತಗಳಲ್ಲಿ ಬಳಕೆಯಾಗುವುದುಂಟು. ಪುರವಂತರು ತಾವೂ ಕುಣಿಯುತ್ತ, ವೀರಭದ್ರಾವತಾರದ ಪಲ್ಲವಿಗಳನ್ನು ಹೇಳಿ ಕುಣಿತಗಾರರಲ್ಲಿ ಆವೇಶ ಬರಿಸುತ್ತಾರೆ. "ಪಂಚಾಂಗ ಕೇಳಿದ ಬ್ರಹ್ಮ ವಿಷ್ಣು ಇಂದ್ರ ಮೊದಲಾದ ಮೂವತ್ತು ಮೂರು ಕೋಟಿ ದೇವತೆಗಳು ತಾರಕಾಸುರನ ಅಜ್ಞೆಯಿಂದ ಕಂಗೆಟ್ಟು ಶಿವನ ಮರೆಹೊಕ್ಕರ್ಯಾಕೆ? ಹಾ! ಹಾ! ವೀರ...." ಆವೇಶದಿಂದ ಮೈಮರೆತಾಗ ಗದ್ಯವೂ ಪದ್ಯವಾಗುತ್ತದೆ.[2]

ಹೋಳಿ ಹಬ್ಬ ಭಾರತಾದ್ಯಂತ ನಡೆಯುವಂಥದು. ಹಾಡುಗಳೊಡಗೂಡಿದ ಕುಣಿತ ಆ ಸಮಯದಲ್ಲಿ ಸರ್ವೇಸಾಧಾರಣ. ಗುಂಪುಗುಣಿತವೇ ಹೆಚ್ಚು. ಶೃಂಗಾರಪ್ರಧಾನವಾದ ಹಾಡುಗಳೇ ಜಾಸ್ತಿ. ಸಂವಾದರೂಪದ ಚಮತ್ಕಾರವಾದ ಹಾಡುಗಳನ್ನು ಹಾಡುತ್ತ, ಕೈಕಟ್ಟಿಕೊಂಡು ಹೆಣ್ಣು ಗಂಡುಗಳು ಕುಣಿಯುತ್ತಾರೆ:

ಮಾತಾಡ ಮಾನಿನೀ
ಯಾವನಾಡ ದೊರೆಶ್ಯಾನಿ
ನಿನ ಮೂಗ ಸಂಪಿಗೀ ತೆನೀ
ನಿನ ತುರುಬ ನಾಗರ ಹೆಣೀ
ನಿನ ಹೆರಳ ಬಾಳೆಯ ಗೊನೀ
ಇಲ್ಲಿಗ್ಯಾಕ ಬಂದಿನೀ ॥

ಗಂಡು ಹೆಣ್ಣನ್ನು ಕರೆಕರೆದು ಹಾಡುತ್ತಾ ಹೆಣ್ಣಿನ ಕೈಹಿಡಿಯಲು ಹೋದಾಗ ಹೆಣ್ಣು

ಸರಿ ಸರಿ ದೂರ ಸರಿ
ಸರಿ ಸರಿ ದೂರ ಸರಿ
ಮುಟ್ಟೊದು ತರವಲ್ಲ । ಮತಿವಂತ ॥

ಎಂದು ಹಾಡಿ ಕುಣಿಯುತ್ತ ಅವನ ಕೈ ಕೊಸರುತ್ತಾಳೆ.[3]

ಮಾಘ ವೈಶಾಖಗಳು ಭಾರತೀಯ ರೈತರಿಗೆ ಆಶಾದಾಯಕವೂ ಆನಂದದಾಯಕವೂ ಆದ ಮಾಸಗಳು. ಅವರ ಹಬ್ಬಹರಿದಿನ ಜಾತ್ರೆ ಯಾತ್ರೆಗಳು ನಡೆಯುವುದು ಆ ಕಾಲದಲ್ಲಿಯೇ. ವಸಂತಮಾಸದ ಹೊಸ ಮಳೆ ಹೂ ತಳಿರು ಚೆಲುವುಗಳು ಅವರಲ್ಲಿ ಅವ್ಯಕ್ತವಾದ ಆನಂದವನ್ನುಂಟುಮಾಡಿದರೆ, ಸುಗ್ಗಿಯ ಕಾಲ ಸಂತೋಷೋನ್ಮಾದವನ್ನು ಕೆರಳಿಸು

1 ಈ ಎರಡು ಎಲ್. ಗುಂಡಪ್ಪನವರಿಂದ ಸಂಪಾದಿತವಾದ "ನಾಡ ಪದಗಳು" ಎಂಬ ಸಂಕಲನದಲ್ಲಿವೆ.

2 ಕನ್ನಡ ಜಾನಪದ ಗೀತಗಳು : ಬಿ. ಎಸ್. ಗದ್ದಿಗಿಮಠ, ಪುಟ ೩೦.

3 ಅದೇ, ಪುಟ ೩೧–೩೨.

ತ್ತದೆ. ಕುಣಿದು ಕುಪ್ಪಳಿಸಿ ಹಾಡಿ ಕೇಕೆ ಹಾಕಿದಾಗಲೇ ಆ ಆನಂದೋನ್ಮಾದ ಇಳಿಯುವುದು. ಅಸ್ಸಾಮಿನ ಬಿಹು ನೃತ್ಯದಲ್ಲಿ ಮತ್ತು ನೃತ್ಯಗೀತೆಗಳಲ್ಲಿ ಈ ಸಡಗರ ಸಂಭ್ರಮಗಳನ್ನು ಕಾಣಬಹುದು. ನೃತ್ಯ ಹಾಗೂ ಸಂಗೀತಗಳ ಸೇವೆಯ ಮೂಲಕ ನೈಸರ್ಗಿಕ ಶಕ್ತಿಗಳನ್ನು ಮೆಚ್ಚಿಸಿಕೊಳ್ಳಬೇಕೆಂಬುದೇ ಹಳ್ಳಿಗರ ಉದ್ದೇಶ. ಈ ಸಂದರ್ಭ ಗಂಡು ಹೆಣ್ಣುಗಳ ಪರಸ್ಪರ ಆಯ್ಕೆಗೂ ಅನುವಾಗುವುದುಂಟು. ಹಾಡುಗಳಿಂದ ಈ ಸಂಗತಿ ವೇದ್ಯವಾಗುತ್ತದೆ :

ಓಗೆಳೆಯ, ದಿನವಿಡೀ ನರ್ತಿಸುವೆ
ದಿನವಿಡೀ ನರ್ತಿಸುವೆ,
ಬೇಡಪಹರಣ ಕುಣಿವಾಗ
ತೆರ ಭಾರವಾದೀತು, ಜೋಕೆ[1]

ಇಂಥ ಸಮಾರಂಭಗಳಲ್ಲಿ ಸುತ್ತಮುತ್ತಣ ಪ್ರದೇಶದ ತರುಣ ತರುಣಿಯರು ನೆರೆಯುವುದು ಸಹಜವಷ್ಟೆ. ಅವು ಸ್ವಯಂವರ ಸಭೆಗಳಾಗಿ ಪರಿಣಮಿಸುವುದೂ ಉಂಟು. ತಮ್ಮ ಮುಂದಿನ ಸಂಗಾತಿಗಳನ್ನಾಯ್ಕೆಮಾಡಿಕೊಳ್ಳಲಿಕ್ಕೆ ಅದೊಂದು ಸುವರ್ಣಾವಕಾಶ. ಗೋಂಡಿ ಜನಾಂಗದಲ್ಲಿ ಈ ಸಂಪ್ರದಾಯ ವ್ಯಾಪಕವಾಗಿ ರೂಢಿಯಲ್ಲಿದೆ. ಇದೇ ಪದ್ಧತಿ ಆಫ್ರಿಕಾದ ಜನರಲ್ಲಿಯೂ ಕಂಡುಬರುತ್ತದೆ. ನೈರುತ್ಯ ಚೀನಾ ಮತ್ತು ಟಿಬೆಟ್ಟುಗಳಲ್ಲಿ ಇಂಥ ವೇಳೆಯಲ್ಲಿ ಸಂಗೀತ ಸ್ಪರ್ಧೆ ಏರ್ಪಡುವುದುಂಟು. ತರುಣ ತನ್ನ ಮನವನ್ನರ್ಪಿಸುವ ಹೆಣ್ಣಿನ ಮುಂದೆ ಒಂದು ಹಾಡು ಪಲುಕಿಸುತ್ತಾನೆ. ಆ ಹೆಣ್ಣು ಉತ್ತರ ರೂಪವಾಗಿ ಮತ್ತೊಂದು ನುಡಿಯಲೇ ಬೇಕು. ಅವಳು ನುಡಿಯಲಿಲ್ಲ, ಅಸಂಸ್ಕೃತೆಯೆಂಬ ಆರೋಪ ಹೊರಬೇಕಾಗುತ್ತದೆ. ಆಮೇಲೆ ಅವನು ಬೇರೆ ಹೆಣ್ಣಿನ ಕಡೆಗೆ ತನ್ನ ನೋಟ ಹರಿಸುತ್ತಾನೆ. ಒಗಟು ತೆರನ ಹಾಡುಗಳು ಅಪರೂಪವೇನಲ್ಲ. ಈ ಗೀತೆಗಳ ಪ್ರಧಾನ ಪ್ರೇರಕ ಶಕ್ತಿಗಳಲ್ಲೊಂದು ಶೃಂಗಾರ. ಸಾಮಾನ್ಯರ ಪ್ರೇಮಗೀತೆಗಳು ಯಾವ ಶಿಷ್ಟಸಂಪ್ರದಾಯದ ರಚನೆಗಳಿಗೂ ಕಡಮೆಯಿಲ್ಲವೆನ್ನುವುದನ್ನು ಮುಂದಿನ ಗೀತೆಯಿಂದರಿಯಬಹುದು :

ನಾನೊಂದು ಖಗವಾಗಿ ನಿನ ಕೊಳಕೆ ಹಾರುವೆನು
ನಿನ್ನ ಮೇಲೊದರುವೆನು ರೆಕ್ಕೆ ಹಾರಿವವಾಗಿ
ನಿನ್ನ ಮೈಮೇಲೆ ಬೆವರಾಗಿ ಹರಿವೆನು ನಾನು
ಕೂರುವೆನು ನಿನ್ನ ಕೆನ್ನೆಯ ಮೇಲೆ ನೊಣವಾಗಿ[2]
ದೇವರು ಲೋಕವ ಸೃಷ್ಟಿಸಿದ
ಖಗಮೃಗ ನರರನು ಹುಟ್ಟಿಸಿದ
ಅವನೇ ಪ್ರೇಮದ ಪಥವನು ತೋರಿಸಿದ
ನಮಗೂ ಬೇಡವೆ ಆ ಪ್ರೇಮ ?[3]

---

1 *Bihu Songs of Assam* by P. Goswami, p. 22.

2 ಅದೇ, ಪು. ೩೨.

3 ಅದೇ, ಪು. ೫೩.

ಕರಮ್ ಅಥವಾ ಕರ್ಮ ನೃತ್ಯ ಛೋಟಾನಾಗಪುರ ಮತ್ತು ಒರಿಸ್ಸಾ ಸೀಮೆಗಳಲ್ಲಿ ಸಾರ್ವತ್ರಿಕವಾಗಿ ರೂಢಿಯಲ್ಲಿವೆ. ಇದೂ ಒಂದು ಫಲಶಕ್ತಿ ಸಂವರ್ಧಕ ವಿಧಾನವ ನೃತ್ಯ. ಮಳೆ ಬರಿಸುವ ವಿಧಿಯಾಗಿಯೂ ಇದನ್ನು ಬಳಸುವುದುಂಟು. ಉರೌನ್ (Uraon) ಜನಾಂಗದಲ್ಲಿ ಪ್ರಸಿದ್ಧವಾಗಿರುವ ಕರಮ್ ಕುಣಿತದ ವಿವರ ಹೀಗಿದೆ. ಬೆಳಗಿನಿಂದ ಉಪವಾಸವಿದ್ದ ತರುಣ ತರುಣಿಯರು ಸಂಜೆಯ ವೇಳೆಗೆ ಕಾಡಿಗೆ ಹೋಗಿ ಎಳೆಯ ಕರಮ್ ವೃಕ್ಷದ ಕೊಂಬೆಯನ್ನು ಕುಣಿತ ಹಾಡುಗಳ ಮೇಳ ನಡೆಯುವಾಗ ಕಡಿಯುತ್ತಾರೆ. ಅವರ ತಲೆಯೊಳೊಬ್ಬ ಅದನ್ನು ಹೊತ್ತು ಮೆರವಣಿಗೆಯ ಮುಂಚೂಣಿಯಲ್ಲಿ ಕುಣಿಯುತ್ತ, ಮುಂದೆ ಮುಂದೆ ಸಾಗುತ್ತಾನೆ. ಉಳಿದವರು ನಗಾರಿ ಬಾರಿಸುತ್ತಾರೆ, ಹಾಡು ಹೇಳುತ್ತಾರೆ, ಕುಣಿಯುತ್ತಾರೆ. ಕೊಂಬೆಯನ್ನು ರಂಗಭೂಮಿಯ ನಡುವೆ ನೆಡುತ್ತಾರೆ. ಕರ್ಮದೇವತೆಗೆ ಬಲಿ ಅರ್ಪಿಸಿದನಂತರ ಹಳ್ಳಿಗರು ತಣಿಯುಂಡು, ರಾತ್ರಿಯೆಲ್ಲ ಕುಣಿತ ಮೆರೆತಗಳಲ್ಲಿ ಮಗ್ನರಾಗುತ್ತಾರೆ. ಈ ಹಬ್ಬ ಎರಡು ಮೂರು ದಿನ ಅತ್ಯಂತ ವೈಭವದಿಂದ ಜರುಗುತ್ತದೆ.[1] ಕುಣಿತಕ್ಕೆ ತಕ್ಕಂತೆ ಕರ್ಮ ಸಂಗೀತಗಳನ್ನು ಅಳವಡಿಸಿಕೊಳ್ಳುತ್ತಾರೆ. ಈ ಹಾಡುಗಳಲ್ಲಿ ಮೂರು ಭಾಗಗಳಿವೆ: ರಾಗ್, ತೇಕ್ ಮತ್ತು ಅದ್. ಲಯ ಅಥವಾ ಧಾಟಿಯನ್ನು ಕುಣಿತಗಾರರಿಗೆ ಮನಗಾಣಿಸುವುದೇ ರಾಗದ ಗುರಿ. ಅಹೋ ಹೈ, ಅಹೋ ಹೋ ಹೈ ಎನ್ನುವ ಉದ್ಗಾರಗಳಿಂದ ಹಾಡು ಪ್ರಾರಂಭವಾಗುತ್ತದೆ. ಅದು ಪುನರುಚ್ಚಾರಗೊಳ್ಳುವುದಿಲ್ಲ. ಕುಣಿತಗಾರರು ಚಲನೆಯಲ್ಲಿರುವಾಗ ತೇಕ್ ಬಳಕೆಯಾಗುತ್ತದೆ. ಅದು ಒಂದು ರೀತಿಯ ಮೇಳ. ಮತ್ತೆ ಮತ್ತೆ ಅದನ್ನು ಹೇಳುವುದುಂಟು. ಕುಣಿತಗಳ ನಡುವೆ, ನಿಂತಿರುವಾಗ, ಹಾಡುವಂಥದು ಅದ್. ಆಗಲೂ ಅವರ ಮೈ ಹಿಂದಕ್ಕೂ ಮುಂದಕ್ಕೂ ಬಳುಕುತ್ತದೆ. ಒಂದು ಗುಂಪು ಹಾಡಿದ್ದನ್ನು ಎರಡನೆಯ ಗುಂಪು ಪುನರಾವರ್ತನೆ ಮಾಡುತ್ತದೆ. ಈ ಹಾಡುಗಳಲ್ಲಿ ಪ್ರಾಸಾನುಪ್ರಾಸಗಳು ಪ್ರತಿಧ್ವನಿಗಳು, ಧ್ವನ್ಯನುಕರಣ ಶಬ್ದಗಳು, ಭಲೆ ಭಲೆ, ಝೀ ಜೋಲೋ ಮೊದಲಾದ ಸಮೆದ ನುಡಿಗಳು ಧಾರಾಳವಾಗಿ ಬರುತ್ತವೆ. ಇಂಥ ಉತ್ಸಾಹ ವರ್ಧಕವಾದ ಉದ್ಗಾರಗಳು ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಸಾಮಾನ್ಯ. ಕೇವಲ ನಿದರ್ಶನಾರ್ಥವಾಗಿ ಒಂದು ಹಾಡಿನ ತುಂಡನ್ನಿಲ್ಲಿ ಉದ್ಧರಿಸಿದೆ:

ಅರಳುತ್ತವೆ ಗುಲಾಬಿ
ಲೋಕವ್ಯಾಪಿಯದರ ಸಂಗೀತ
ಕುಸುಮವಿದೆ ನಿನ್ನ ಮೊಗದೊಳ್
ನಿನ್ನ ಹಾಸುಗೆಯ ತೋಟದಲಿ
ಅರಳುತ್ತವೆ ಗುಲಾಬಿ[2]

---

1 ವಿವರಗಳಿಗೆ ವೆರಿಯರ್ ಎಲ್ವಿನ್ ಮತ್ತು ಶಾಮ್‌ರಾವ್ ಹಿವಾಲೆಯವರು ಸಂಪಾದಿಸಿರುವ *Folk Songs of the Maikal Hills* ಎಂಬ ಗ್ರಂಥದಲ್ಲಿ The Karam Dance ಪ್ರಕರಣ ನೋಡಿ.

2 ಅದೇ, ಪು. ೧೬.

ಕರ್ಮ ನೃತ್ಯಗಳಂತೆ ರೀನಾ, ಸೂಅ ಮತ್ತು ತಪದಿ ನೃತ್ಯಗಳೂ ಸ್ತ್ರೀವರ್ಗದಲ್ಲಿ ಚಾಲ್ತಿಯಲ್ಲಿವೆ. ಹೆಚ್ಚಾಗಿ ಹೆಂಗಸರಿಂದಲೇ ರಚಿತವಾದ ಹಾಡುಗಳು ಅವುಗಳೊಡನೆ ಸೇರಿಕೆಯಾಗುತ್ತವೆ.

ದೇವರು ಮತ ಧರ್ಮ ಭಕ್ತಿ ತತ್ವ ಮುಂತಾದ ವಿಷಯಗಳು ಪರಸ್ಪರ ಸಂಬಂಧವುಳ್ಳವಾದ್ದರಿಂದ, ಅವುಗಳನ್ನು ಕುರಿತ ಗೀತೆಗಳನ್ನೆಲ್ಲ ಭಕ್ತಿಯ ಧ್ವಜದಡಿ ಅಧ್ಯಯನ ಮಾಡುವುದು ಸೂಕ್ತ. ಇಹಪರಗಳಲ್ಲಿ ಸುಖ ಕಾಣಬೇಕೆಂಬುದೇ ಆ ಎಲ್ಲ ಪ್ರಯತ್ನಗಳ ಗುರಿ. ಸರ್ವಾಂತರ್ಯಾಮಿಯಾದ ಭಗವಂತನನ್ನು ಕುರಿತ ಆರ್ತನ ತೀವ್ರಭಾವಾಭಿವ್ಯಕ್ತಿಯೇ ಭಕ್ತಿ. ಭಾವಪ್ರಧಾನವಾದದ್ದು ಗೀತೆ: ಅಂತೆಯೇ ಭಕ್ತಿ. ದೇವರನ್ನು ಕುರಿತ ಸ್ತುತಿಗಳೆಲ್ಲ ಭಾವಪೂರ್ಣವಾದುವಷ್ಟೆ. ಮತೀಯ ಧಾರ್ಮಿಕ ಹಾಗೂ ತಾತ್ವಿಕ ಸಂಗತಿಗಳು ಅನುಭಾವವಾಗಿ, ಭಾವತೀಕ್ಷ್ಣತೆಯನ್ನು ಪಡೆದು. ಹಾಡಿನ ರೂಪದಲ್ಲಿ ಹೊರಹೊಮ್ಮಿದಾಗ ಮಾತ್ರ ಭಕ್ತಿಗೀತೆಯಾಗುತ್ತವೆ.

ಮಾನವನ ಬಾಳಿನಲ್ಲಿ ದೇವರು ಮತ ಭಕ್ತಿ ತತ್ವಗಳು ಭಾರಿ ಹಳೆಯ ಸರಕುಗಳು. ವೈಜ್ಞಾನಿಕದೃಷ್ಟಿ ಮತ್ತು ವೈಚಾರಿಕ ಪ್ರಜ್ಞೆಗಳು ವಿಕಾಸವಾದಂತೆಲ್ಲ ಅನೇಕ ಹಳೆಯ ಸರಕುಗಳು ಸಂಪೂರ್ಣವಾಗಿ ಅಳಿಸಿಹೋದದ್ದುಂಟು. ಆದರೆ ಪೂರ್ವೋಕ್ತ ಸಂಗತಿಗಳು ಒಂದಲ್ಲ ಒಂದು ರೂಪದಲ್ಲಿ ಇಂದಿಗೂ ಉಳಿದುಬಂದಿರುವುದು ಮಾತ್ರವಲ್ಲ, ಮಾನವ ಜನಾಂಗವನ್ನು ರೂಪಿಸುವ, ಅದರ ಗತಿಗಮನಗಳನ್ನು ನಿಯಂತ್ರಿಸುವ ಶಕ್ತಿಯಾಗಿ ಮುಂದುವರಿಯುತ್ತಿವೆ. ನಿಸರ್ಗ ವ್ಯಾಪಾರಗಳು, ಅದರ ಚೇಷ್ಟಿತಗಳಿಂದಾಗಿ ತನಗೊದಗಿದ ಅಪಾಯ ಪರಂಪರೆಗಳು, ತನ್ನ ಮುಂದಿನ ಭವಿಷ್ಯ, ಇವುಗಳ ಬಗೆಗಿನ ಮಾನವನ ಭೀತಿಯೇ ದೇವರು ಹಾಗೂ ಮತಗಳ ಕಲ್ಪನೆಗೆ ಕಾರಣವಾಯಿತೆಂದು ಮಾನವ ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಸರ್ವಭೂತ ಅಥವಾ ಸರ್ವಚೇತನ ಪ್ರಜ್ಞೆ ಮಾನವನ ಮನಸ್ಸಿನಲ್ಲಿ ಮೂಡುವುದಕ್ಕೆ ಮುಂಚೆ ಸುತ್ತಮುತ್ತಣ ನಿಸರ್ಗ ಅವನ ಚಿತ್ತದಲ್ಲಿ ಮೂಡಿಸಿದ ಭಾವನೆಗಳೇನೆಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಅವನ ಮನಸ್ಸು ಬೆಳೆದಂತೆ ದೇವರಿಗೆ ಮನುಷ್ಯತನವನ್ನಾರೋಪಿಸಿಕೊಂಡ. ಯಾವುದೋ ಲೋಕದಲ್ಲಿರುವ ಶಕ್ತಿಗಳು ತನ್ನ ಹಣೆಬರಕ್ಕೆ ಕಾರಣವೆಂದು, ತನ್ನ ಬಾಳನ್ನು ನಿಯಂತ್ರಿಸುತ್ತಿವೆಯೆಂದು ಊಹಿಸಿಕೊಂಡ. ಅವುಗಳೊಡನೆ ಹೋರಾಟ ನಡೆಸಿ ವಿಫಲವಾದಾಗ, ಅವುಗಳ ಪ್ರೀತಿವಿಶ್ವಾಸಗಳನ್ನು ಗಳಿಸಲು ನಾನಾ ರೀತಿಯಲ್ಲಿ ಸನ್ನಹ ಮಾಡಿದ, ವಿವಿಧೋಪಾಯಗಳನ್ನು ರೂಪಿಸಿಕೊಂಡ. ಅನೇಕ ಬುಡಕಟ್ಟುಗಳ ಕುಲ ಲಾಂಛನ ಸಂಪ್ರದಾಯ, ಮೃತ ವೀರರ ಹಾಗೂ ಸಾಧುಸಂತರ ಆರಾಧನೆ ಮತ್ತು ಪಿತೃಪೂಜಾ ಪದ್ಧತಿಗಳು ಬಹುದೇವತೋಪಾಸನೆಗೆ ಅಡಿಗಲ್ಲಾದುವು. 'ಸರ್ವಂ ಖಲ್ವಿದಂ ಬ್ರಹ್ಮ', 'ಏಕಂ ಸತ್ ಬಹುಧಾ ವಿಪ್ರಾ ವದಂತಿ', 'ಈಶ್ವರ ಅಲ್ಲಾ ತೇರೇನಾಮ್' ಎನ್ನುವ ಸ್ಥಿತಿಯನ್ನು ಅಥವಾ ಸಿದ್ಧಿಯ ಘಟ್ಟವನ್ನು ಮನುಷ್ಯ ಮುಟ್ಟುವ ವೇಳೆಗೆ ಸಹಸ್ರ ಸಹಸ್ರ ವರ್ಷಗಳೇ ಸಂದಿವೆ. ಮಾನವ ಬುದ್ಧಿಮಟ್ಟವನ್ನು ಮುಟ್ಟಿದ್ದಾನೆಂದುಕೊಂಡರೂ, ಆದಿಮಾನವನ ಮೂಲ

ಗುಣಗಳು. ಅಂದರೆ ಪಳೆಯುಳಿಕೆಗಳು ಆಧುನಿಕ ಮಾನವನ ಸುಪ್ತಪ್ರಜ್ಞೆಯಲ್ಲಿ ಭದ್ರವಾಗಿ ನೆಲೆಗೊಂಡಿವೆ ಎಂಬುದಕ್ಕೆ ಭೂತಾರಾಧನೆ, ಮಾರಿ ಮಸಣಿಯರ ಉಪಾಸನೆ ಮತ್ತು ಪಿತೃಪೂಜೆಗಳೇ ಸಾಕ್ಷಿಯಾಗಿವೆ. ಬಲಿ, ಯಂತ್ರ ಮಂತ್ರ ವಿವಿಧಾರ್ಚನೆಗಳೇ ಮೊದಲಾದ ಪೂಜಾವಿಧಾನಗಳಲ್ಲಿ ಪ್ರಾಚೀನಾವಶೇಷಗಳನ್ನು ಗುರುತಿಸಬಹುದು.

ಧರ್ಮದ ಸ್ವರೂಪವನ್ನಾಗಲೀ ತಾತ್ವಿಕ ಸೂಕ್ಷ್ಮತೆಗಳನ್ನಾಗಲೀ ಸಾಮಾನ್ಯ ಮತಿ ಗ್ರಹಿಸಲಾರದು. ಅವನು ದೇವರ ಕಲ್ಪನೆಯಲ್ಲಿ ಧರ್ಮ ತತ್ವ ಅಧ್ಯಾತ್ಮ ಎಲ್ಲವನ್ನು ಕಾಣುತ್ತಾನೆ: ತನ್ನ ಕಾಣ್ಕೆಯನ್ನು ಮೂರ್ತಿಯನ್ನಾಗಿ ಪರಿವರ್ತಿಸುತ್ತಾನೆ. ಗಾಢವಾದ ನಂಬಿಕೆ ಮತ್ತು ಶ್ರದ್ಧೆಗಳು ಅವನನ್ನು ಬಾಳಿಸುತ್ತಿವೆ. ರೂಪಿಸುತ್ತಿವೆ. ತನ್ನ ಉಪಾಸನಾಮೂರ್ತಿಯಲ್ಲಿ ಸರ್ವೇಶ್ವರನನ್ನು ಸರ್ವಶಕ್ತನನ್ನು ಸರ್ವ ತತ್ವಗಳನ್ನು ಕಾಣುತ್ತಾನೆ. ವಿದ್ಯಾವಂತರಾದ ಶಿಷ್ಟ ಜನರ ರೀತಿಯೇ ಬೇರೆ. ಅವರು ರಾಮ ಹೆಚ್ಚು ಶಿವ ಹೆಚ್ಚು, ಇವನು ಮ್ಲೇಂಛರ ದೇವರು. ಅಸ್ಪೃಶ್ಯ, ಎಂದು ಮುಂತಾಗಿ ಕಾದಾಡುತ್ತ, ಭಗವಂತನ ಅಸ್ತಿತ್ವವನ್ನೇ ಅಲುಗಾಡಿಸುತ್ತಿದ್ದರೆ. ಸಾಮಾನ್ಯಜನ ಹರಿಯೋ ಹರನೋ, ಏಸುವೋ, ಅಲ್ಲಾನೋ, ಮಾರಿಯೋ, ಭೂತವೋ ಎಲ್ಲರಲ್ಲಿಯೂ ಸರ್ವೇಶ್ವರನೊಬ್ಬನನ್ನೇ ನೋಡುತ್ತಾನೆ. ಅವನು ನಾಮವನ್ನೂ ಧರಿಸುತ್ತಾನೆ, ವಿಭೂತಿಯನ್ನೂ ಇಟ್ಟುಕೊಳ್ಳುತ್ತಾನೆ; ತುಲಸಿಯನ್ನೂ ಮುಡಿಯುತ್ತಾನೆ, ಬಿಲ್ವವನ್ನೂ ಸಿಕ್ಕಿಸಿಕೊಳ್ಳುತ್ತಾನೆ. ಅವನಲ್ಲಿ ಭೇದಭಾವನೆಯಾಗಲಿ ಅಸ್ಪೃಶ್ಯ ಬುದ್ಧಿಯಾಗಲೀ ಇಲ್ಲ. ತನ್ನಿಷ್ಟದೈವದಲ್ಲಿ ಅವನಿಗೆ ಅತೀವ ಶ್ರದ್ಧೆ: ಆದರೆ ಅದೆಂದೂ ಮತಾಂಧತೆಯಾಗಿ ಪರಿಣಮಿಸುವುದಿಲ್ಲ. ಊರಿಗೆ ಯಾವ ಮತದ ಸ್ವಾಮಿಯೇ ಬರಲಿ, ಅವರಿಗೆಲ್ಲ ಅಡ್ಡಬೀಳುತ್ತಾನೆ.

ಪ್ರತಿಯೊಬ್ಬ ಹಳ್ಳಿಗನೂ ಕನಿಷ್ಠ ಪಕ್ಷ ಮೂರು ಬಗೆಯ ಶಕ್ತಿಗಳನ್ನು ಪೂಜಿಸಬೇಕು: ಮನೆದೇವರು, ಊರದೇವರು. ಜತೆಗೊಂದು ಭೂತ. ಹನುಮ ಗಣಪತಿಯರಂತು ಕನ್ನಡ ನಾಡಿನ ಬಹು ಜನಪ್ರಿಯ ದೇವರುಗಳು. ಇಷ್ಟೇ ಅಲ್ಲ, ನಾಗನನ್ನು ಪೂಜಿಸುತ್ತಾನೆ. ತಾನು ಬೆಳೆಯುವ ಪೈರುಪಚ್ಚೆಗಳನ್ನು ಪೂಜಿಸುತ್ತಾನೆ. ತನ್ನ ಹುಟ್ಟುಸಾವುಗಳಿಗೆ, ರೋಗರುಜಿನಗಳಿಗೆ, ಕಷ್ಟಕಾರ್ಪಣ್ಯಗಳಿಗೆ, ಪಾಪಪುಣ್ಯಗಳಿಗೆ, ಸಿರಿತನ ಬಡತನಗಳಿಗೆ, ತನ್ನ ಸಾಕುಪ್ರಾಣಿಗಳ ಶುಭಾಶುಭಗಳಿಗೆ, ತನ್ನ ಹೊಲದ ಮತ್ತು ಹಿತ್ತಲ ಬೆಳೆಗಳ ಲೇಸು ಕೇಡುಗಳಿಗೆ, ತನ್ನ ಕುಟುಂಬದ ಹಾನಿ ವೃದ್ಧಿಗಳಿಗೆ ಭಗವಂತನ ಕೋಪಕಾರುಣ್ಯಗಳೇ ಕಾರಣವೆಂದು ಪ್ರಾಮಾಣಿಕವಾಗಿ ತ್ರಿಕರಣಶುದ್ಧಿಯಾಗಿ ನಂಬಿದಂಥ ವ್ಯಕ್ತಿಯವನು. ಆದ್ದರಿಂದ ಹಾಸುಗೆ ಬಿಡುವಾಗಲೇ

ಏಳುತಾವೇ ಎದ್ದು ಯಾರ್ಯಾರ ನೆನೆಯಾಲಿ
ಎಳ್ಳುಜೀರಿಗೆ ಬೆಳೆಯೋಳಾ | ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ಎನ್ನುತ್ತಾನೆ. ಈ ಭೂಪ್ರಜ್ಞೆ ಇರುವಂಥ ಜನ ಲೋಕದಲ್ಲಿ ವಿರಳ. ಮಾನವನ ಬದುಕಿಗೆ ಭೂಮಿಯೇ ಸರ್ವಸ್ವ: ಸರ್ವ ಸುಖಗಳೂ ಅವಳಿಂದಲೇ ಲಭಿಸಬೇಕು. ಧರೆ ಬಂಜೆ

ಕರ್ಮ ನೃತ್ಯಗಳಂತೆ ರೀನಾ, ಸೂಳಿ ಮತ್ತು ತಪದಿ ನೃತ್ಯಗಳೂ ಸ್ತ್ರೀವರ್ಗದಲ್ಲಿ ಚಾಲ್ತಿಯಲ್ಲಿವೆ. ಹೆಚ್ಚಾಗಿ ಹೆಂಗಸರಿಂದಲೇ ರಚಿತವಾದ ಹಾಡುಗಳು ಅವುಗಳೊಡನೆ ಸೇರಿಕೆಯಾಗುತ್ತವೆ.

ದೇವರು ಮತ ಧರ್ಮ ಭಕ್ತಿ ತತ್ವ ಮುಂತಾದ ವಿಷಯಗಳು ಪರಸ್ಪರ ಸಂಬಂಧವುಳ್ಳವಾದ್ದರಿಂದ, ಅವುಗಳನ್ನು ಕುರಿತ ಗೀತೆಗಳನ್ನೆಲ್ಲ ಭಕ್ತಿಯ ಧ್ವಜದಡಿ ಅಧ್ಯಯನ ಮಾಡುವುದು ಸೂಕ್ತ. ಇಹಪರಗಳಲ್ಲಿ ಸುಖ ಕಾಣಬೇಕೆಂಬುದೇ ಆ ಎಲ್ಲ ಪ್ರಯತ್ನಗಳ ಗುರಿ. ಸರ್ವಾಂತರ್ಯಾಮಿಯಾದ ಭಗವಂತನನ್ನು ಕುರಿತ ಆರ್ತನ ತೀವ್ರಭಾವಾಭಿವ್ಯಕ್ತಿಯೇ ಭಕ್ತಿ. ಭಾವಪ್ರಧಾನವಾದದ್ದು ಗೀತೆ: ಅಂತೆಯೇ ಭಕ್ತಿ. ದೇವರನ್ನು ಕುರಿತ ಸ್ತುತಿಗಳೆಲ್ಲ ಭಾವಪೂರ್ಣವಾದುವಷ್ಟೆ. ಮತೀಯ ಧಾರ್ಮಿಕ ಹಾಗೂ ತಾತ್ವಿಕ ಸಂಗತಿಗಳು ಅನುಭಾವವಾಗಿ, ಭಾವತೀಕ್ಷ್ಣತೆಯನ್ನು ಪಡೆದು. ಹಾಡಿನ ರೂಪದಲ್ಲಿ ಹೊರಹೊಮ್ಮಿದಾಗ ಮಾತ್ರ ಭಕ್ತಿಗೀತೆಯಾಗುತ್ತವೆ.

ಮಾನವನ ಬಾಳಿನಲ್ಲಿ ದೇವರು ಮತ ಭಕ್ತಿ ತತ್ವಗಳು ಭಾರಿ ಹಳೆಯ ಸರಕುಗಳು. ವೈಜ್ಞಾನಿಕದೃಷ್ಟಿ ಮತ್ತು ವೈಚಾರಿಕ ಪ್ರಜ್ಞೆಗಳು ವಿಕಾಸವಾದಂತೆಲ್ಲ ಅನೇಕ ಹಳೆಯ ಸರಕುಗಳು ಸಂಪೂರ್ಣವಾಗಿ ಅಳಿಸಿಹೋದದ್ದುಂಟು. ಆದರೆ ಪೂರ್ವೋಕ್ತ ಸಂಗತಿಗಳು ಒಂದಲ್ಲ ಒಂದು ರೂಪದಲ್ಲಿ ಇಂದಿಗೂ ಉಳಿದುಬಂದಿರುವುದು ಮಾತ್ರವಲ್ಲ, ಮಾನವ ಜನಾಂಗವನ್ನು ರೂಪಿಸುವ, ಅದರ ಗತಿಗಮನಗಳನ್ನು ನಿಯಂತ್ರಿಸುವ ಶಕ್ತಿಯಾಗಿ ಮುಂದುವರಿಯುತ್ತಿವೆ. ನಿಸರ್ಗ ವ್ಯಾಪಾರಗಳು, ಅದರ ಚೇಷ್ಟಿತಗಳಿಂದಾಗಿ ತನಗೊದಗಿದ ಅಪಾಯ ಪರಂಪರೆಗಳು, ತನ್ನ ಮುಂದಿನ ಭವಿಷ್ಯ, ಇವುಗಳ ಬಗೆಗಿನ ಮಾನವನ ಭೀತಿಯೇ ದೇವರು ಹಾಗೂ ಮತಗಳ ಕಲ್ಪನೆಗೆ ಕಾರಣವಾಯಿತೆಂದು ಮಾನವ ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಸರ್ವಭೂತ ಅಥವಾ ಸರ್ವಚೇತನ ಪ್ರಜ್ಞೆ ಮಾನವನ ಮನಸ್ಸಿನಲ್ಲಿ ಮೂಡುವುದಕ್ಕೆ ಮುಂಚೆ ಸುತ್ತಮುತ್ತಣ ನಿಸರ್ಗ ಅವನ ಚಿತ್ತದಲ್ಲಿ ಮೂಡಿಸಿದ ಭಾವನೆಗಳೇನೆಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಅವನ ಮನಸ್ಸು ಬೆಳೆದಂತೆ ದೇವರಿಗೆ ಮನುಷ್ಯತನವನ್ನಾರೋಪಿಸಿಕೊಂಡ. ಯಾವುದೋ ಲೋಕದಲ್ಲಿರುವ ಶಕ್ತಿಗಳು ತನ್ನ ಹಣೆಬರಕ್ಕೆ ಕಾರಣವೆಂದು, ತನ್ನ ಬಾಳನ್ನು ನಿಯಂತ್ರಿಸುತ್ತಿವೆಯೆಂದು ಊಹಿಸಿಕೊಂಡ. ಅವುಗಳೊಡನೆ ಹೋರಾಟ ನಡೆಸಿ ವಿಫಲವಾದಾಗ, ಅವುಗಳ ಪ್ರೀತಿವಿಶ್ವಾಸಗಳನ್ನು ಗಳಿಸಲು ನಾನಾ ರೀತಿಯಲ್ಲಿ ಸನ್ನಹ ಮಾಡಿದ, ವಿವಿಧೋಪಾಯಗಳನ್ನು ರೂಪಿಸಿಕೊಂಡ. ಅನೇಕ ಬುಡಕಟ್ಟುಗಳ ಕುಲ ಲಾಂಛನ ಸಂಪ್ರದಾಯ, ಮೃತ ವೀರರ ಹಾಗೂ ಸಾಧುಸಂತರ ಆರಾಧನೆ ಮತ್ತು ಪಿತೃಪೂಜಾ ಪದ್ಧತಿಗಳು ಬಹುದೇವತೋಪಾಸನೆಗೆ ಅಡಿಗಲ್ಲಾದುವು. 'ಸರ್ವಂ ಖಲ್ವಿದಂ ಬ್ರಹ್ಮ', 'ಏಕಂ ಸತ್ ಬಹುಧಾ ವಿಪ್ರಾವದಂತಿ', 'ಈಶ್ವರ ಅಲ್ಲಾ ತೇರೇನಾಮ್' ಎನ್ನುವ ಸ್ಥಿತಿಯನ್ನು ಅಥವಾ ಸಿದ್ಧಿಯ ಘಟ್ಟವನ್ನು ಮನುಷ್ಯ ಮುಟ್ಟುವ ವೇಳೆಗೆ ಸಹಸ್ರ ಸಹಸ್ರ ವರ್ಷಗಳೇ ಸಂದಿವೆ. ಮಾನವ ಉಚ್ಚಮಟ್ಟವನ್ನು ಮುಟ್ಟಿದ್ದಾನೆಂದುಕೊಂಡರೂ. ಆದಿಮಾನವನ ಮೂಲ

ಗುಣಗಳು, ಅಂದರೆ ಪಳೆಯುಳಿಕೆಗಳು ಆಧುನಿಕ ಮಾನವನ ಸುಪ್ತಪ್ರಜ್ಞೆಯಲ್ಲಿ ಭದ್ರವಾಗಿ ನೆಲೆಗೊಂಡಿವೆ ಎಂಬುದಕ್ಕೆ ಭೂತಾರಾಧನೆ, ಮಾರಿ ಮಸಣಿಯರ ಉಪಾಸನೆ ಮತ್ತು ಪಿತೃಪೂಜೆಗಳೇ ಸಾಕ್ಷಿಯಾಗಿವೆ. ಬಲಿ. ಯಂತ್ರ ಮಂತ್ರ ವಿವಿಧಾರ್ಚನೆಗಳೇ ಮೊದಲಾದ ಪೂಜಾವಿಧಾನಗಳಲ್ಲಿ ಪ್ರಾಚೀನಾವಶೇಷಗಳನ್ನು ಗುರುತಿಸಬಹುದು.

ಧರ್ಮದ ಸ್ವರೂಪವನ್ನಾಗಲೀ ತಾತ್ವಿಕ ಸೂಕ್ಷ್ಮತೆಗಳನ್ನಾಗಲೀ ಸಾಮಾನ್ಯ ಮತಿ ಗ್ರಹಿಸಲಾರದು. ಅವನು ದೇವರ ಕಲ್ಪನೆಯಲ್ಲಿ ಧರ್ಮ ತತ್ವ ಅಧ್ಯಾತ್ಮ ಎಲ್ಲವನ್ನು ಕಾಣುತ್ತಾನೆ; ತನ್ನ ಕಾಣ್ಕೆಯನ್ನು ಮಾಳ್ಕೆಯನ್ನಾಗಿ ಪರಿವರ್ತಿಸುತ್ತಾನೆ. ಗಾಢವಾದ ನಂಬಿಕೆ ಮತ್ತು ಶ್ರದ್ಧೆಗಳು ಅವನನ್ನು ಬಾಳಿಸುತ್ತಿವೆ. ರೂಪಿಸುತ್ತಿವೆ. ತನ್ನ ಉಪಾಸನಾಮೂರ್ತಿಯಲ್ಲಿ ಸರ್ವೇಶ್ವರನನ್ನು ಸರ್ವಶಕ್ತನನ್ನು ಸರ್ವ ತತ್ವಗಳನ್ನು ಕಾಣುತ್ತಾನೆ. ವಿದ್ಯಾವಂತರಾದ ಶಿಷ್ಟ ಜನರ ರೀತಿಯೇ ಬೇರೆ. ಅವರು ರಾಮ ಹೆಚ್ಚು ಶಿವ ಹೆಚ್ಚು, ಇವನು ಮ್ಲೇಂಚ್ಛರ ದೇವರು. ಅಸ್ಪೃಶ್ಯ, ಎಂದು ಮುಂತಾಗಿ ಕಾದಾಡುತ್ತ, ಭಗವಂತನ ಅಸ್ತಿತ್ವವನ್ನೇ ಅಲುಗಾಡಿಸುತ್ತಿದ್ದರೆ. ಸಾಮಾನ್ಯಜನ ಹರಿಯೋ ಹರನೋ. ಏಸುವೋ. ಅಲ್ಲಾನೋ, ಮಾರಿಯೋ, ಭೂತವೋ ಎಲ್ಲರಲ್ಲಿಯೂ ಸರ್ವೇಶ್ವರನೊಬ್ಬನನ್ನೇ ನೋಡುತ್ತಾನೆ. ಅವನು ನಾಮವನ್ನೂ ಧರಿಸುತ್ತಾನೆ, ವಿಭೂತಿಯನ್ನೂ ಇಟ್ಟುಕೊಳ್ಳುತ್ತಾನೆ; ತುಲಸಿಯನ್ನೂ ಮುಡಿಯುತ್ತಾನೆ, ಬಿಲ್ವವನ್ನೂ ಸಿಕ್ಕಿಸಿಕೊಳ್ಳುತ್ತಾನೆ. ಅವನಲ್ಲಿ ಭೇದಭಾವನೆಯಾಗಲಿ ಅಸ್ಪೃಶ್ಯ ಬುದ್ಧಿಯಾಗಲೀ ಇಲ್ಲ. ತನ್ನಿಷ್ಟದೈವದಲ್ಲಿ ಅವನಿಗೆ ಅತೀವ ಶ್ರದ್ಧೆ: ಆದರೆ ಅದೆಂದೂ ಮತಾಂಧತೆಯಾಗಿ ಪರಿಣಮಿಸುವುದಿಲ್ಲ. ಊರಿಗೆ ಯಾವ ಮತದ ಸ್ವಾಮಿಯೇ ಬರಲಿ, ಅವರಿಗೆಲ್ಲ ಅಡ್ಡಬೀಳುತ್ತಾನೆ.

ಪ್ರತಿಯೊಬ್ಬ ಹಳ್ಳಿಗನೂ ಕನಿಷ್ಠ ಪಕ್ಷ ಮೂರು ಬಗೆಯ ಶಕ್ತಿಗಳನ್ನು ಪೂಜಿಸಬೇಕು: ಮನೆದೇವರು, ಊರದೇವರು. ಜತೆಗೊಂದು ಭೂತ. ಹನುಮ ಗಣಪತಿಯರಂತು ಕನ್ನಡ ನಾಡಿನ ಬಹು ಜನಪ್ರಿಯ ದೇವರುಗಳು. ಇಷ್ಟೇ ಅಲ್ಲ, ನಾಗನನ್ನು ಪೂಜಿಸುತ್ತಾನೆ, ತಾನು ಬೆಳೆಯುವ ಪೈರುಪಚ್ಚೆಗಳನ್ನು ಪೂಜಿಸುತ್ತಾನೆ. ತನ್ನ ಹುಟ್ಟುಸಾವುಗಳಿಗೆ, ರೋಗರುಜಿನಗಳಿಗೆ, ಕಷ್ಟಕಾರ್ಪಣ್ಯಗಳಿಗೆ, ಪಾಪಪುಣ್ಯಗಳಿಗೆ, ಸಿರಿತನ ಬಡತನಗಳಿಗೆ, ತನ್ನ ಸಾಕುಪ್ರಾಣಿಗಳ ಶುಭಾಶುಭಗಳಿಗೆ, ತನ್ನ ಹೊಲದ ಮತ್ತು ಹಿತ್ತಲ ಬೆಳೆಗಳ ಲೇಸು ಕೇಡುಗಳಿಗೆ, ತನ್ನ ಕುಟುಂಬದ ಹಾನಿ ವೃದ್ಧಿಗಳಿಗೆ ಭಗವಂತನ ಕೋಪಕಾರುಣ್ಯಗಳೇ ಕಾರಣವೆಂದು ಪ್ರಾಮಾಣಿಕವಾಗಿ ತ್ರಿಕರಣಶುದ್ಧಿಯಾಗಿ ನಂಬಿದಂಥ ವ್ಯಕ್ತಿಯವನು. ಅಪ್ಪರಿಂದ ಹಾಸುಗೆ ಬಿಡುವಾಗಲೇ

ಏಳುತಾವೇ ಎದ್ದು ಯಾರ್ಯಾರ ನೆನೆಯಾಲಿ
ಎಳ್ಳುಜೀರಿಗೆ ಬೆಳೆಯೋಳಾ । ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ಎನ್ನುತ್ತಾನೆ. ಈ ಭೂಪ್ರಜ್ಞೆ ಇರುವಂಥ ಜನ ಲೋಕದಲ್ಲಿ ವಿರಳ. ಮಾನವನ ಬದುಕಿಗೆ ಭೂಮಿಯೇ ಸರ್ವಸ್ವ: ಸರ್ವ ಸುಖಗಳೂ ಅದರಿಂದಲೇ ಲಭಿಸಬೇಕು. ಧರೆ ಬಂಜೆ

ಯಾಯಿತೆಂದರೆ ಮನುಷ್ಯ ಮಾತ್ರವಲ್ಲ, ಇಡೀ ಜೀವಕೋಟಿಯೇ ನಿರ್ನಾಮವಾಗುತ್ತದೆ. ತಾಯಿ ತನ್ನನ್ನು ಒಂಬತ್ತು ತಿಂಗಳ ಕಾಲ ತನ್ನ ಗರ್ಭದಲ್ಲಿರಿಸಿಕೊಂಡು ಸಾಕಿದರೆ, ತಿರೆ ತಾಯಿ ಅನೇಕ ವರ್ಷಗಳ ಕಾಲ ತನ್ನ ಮಡಿಲಲ್ಲಿರಿಸಿಕೊಂಡು ಸಾಕುತ್ತಾಳೆಂಬ ಕೃತಜ್ಞತೆ ಅವನ ನಾಡಿ ನಾಡಿಗಳಲ್ಲಿ ತುಂಬಿಕೊಂಡಿದೆ. ಆದ್ದರಿಂದಲೇ ಅವನು ಹಾಸುಗೆ ಬಿಡುತ್ತಿದ್ದಂತೆ ಆ ತಾಯಿಯನ್ನು ಮೊದಲು ಸ್ಮರಿಸಿಕೊಳ್ಳುತ್ತಾನೆ. ತನ್ನೆಲ್ಲ ಸುಖಸಂಪತ್ತುಗಳಿಗೆ ಕಾರಣವಾದ ಆ ತಾಯಿಯನ್ನು ಮರೆತರೆ ಕ್ರೂರ ಪಾಪವೊದಗುತ್ತದೆಂದು ಆತ ತಿಳಿದುಕೊಂಡಿದ್ದಾನೆ.

ಅಚಿಂತ್ಯವಾದ ವಸ್ತುವಾಗಲಿ, ತರ್ಕಸಮೃದ್ಧವಾದ ತಾತ್ವಿಕತೆಯಾಗಲಿ, ತಪಸ್ಸಾಧ್ಯವಾದ ದಾರ್ಶನಿಕತೆಯಾಗಲಿ ಸಾಮಾನ್ಯ ಮಾನವನಿಗೆ ಎಟುಕುವಂಥದಲ್ಲ; ಅದೆಲ್ಲ ಅವನ ಊಹೆಗೂ ಮೀರಿದ್ದು. ತನ್ನ ಕಣ್ಮುಂದಿರುವ ಖಗ ಮೃಗ ತರುಗಳ ರೂಪದಲ್ಲಿ ಅಥವಾ ತನಗೆ ಗಾಢ ಪರಿಚಯವಿರುವ ಮಾನುಷ ರೂಪದಲ್ಲಿ ದೇವರನ್ನವನು ಕಲ್ಪಿಸಿಕೊಳ್ಳಬಲ್ಲನೇ ಹೊರತು, ಅಮೂರ್ತಸ್ವರೂಪದಲ್ಲಿ ಊಹಿಸಿಕೊಳ್ಳುವುದು ಕಷ್ಟವಾಗುತ್ತದೆ. ನಿರಾಕಾರದ ಭಾವ ಪೂಜೆ ಅವನಿಗೆ ಸಾಧ್ಯವಿಲ್ಲ. ಶಿಲೆಯಾದರೂ ಸರಿಯೆ, ಸಾಕಾರತೆವೆತ್ತ ದೇವರೇ ಅವನಿಗೆ ಬೇಕು. ಅವನ ದೃಷ್ಟಿಯಲ್ಲಿ ದೇವರು ತನ್ನಂತೆಯೇ ಸರಸಿ ವಿರಸಿ, ಕರುಣಿ ಕ್ರೂರಿ; ಉಣ್ಣುತ್ತಾನೆ ಉಡುತ್ತಾನೆ; ಮದುವೆಯಾಗುತ್ತಾನೆ: ಪ್ರಣಯಲೀಲೆಯಲ್ಲಿ ತೊಡಗುತ್ತಾನೆ; ಓಡಾಡಿದರೆ ಆಯಾಸಗೊಳ್ಳುತ್ತಾನೆ. ಅವನ ಭಾವನೆಯಲ್ಲಿ ಲೋಹದ ಅಥವಾ ಶಿಲೆಯ ಮೂರ್ತಿ ಬರಿಯ ಜಡವಸ್ತುವಲ್ಲ. ಆ ಮೂರ್ತಿ ಬೀದಿಯಲ್ಲಿ ಮೆರೆದು ಬರುತ್ತಿದ್ದಂತೆ "ಓ, ಆ ನನ್ನೊಡೆಯ ಆ ನನ್ನಪ್ಪ ಹೇಗೆ ರಗರಗನೆ ಹೊಳೆಯುತ್ತಿದ್ದಾನೆ" ಎಂದು ಕೈಮುಗಿದು ಅಡ್ಡಬೀಳುತ್ತಾನೆ. ಅವನಿಗೆ ಆ ದೇವರು ತಂದೆ, ಒಡೆಯ, ತಾಯಿ, ಒಡತಿ, ದಾನಿ ಜ್ಞಾನಿ, ನೆರೆ ಹೊರೆ, ಮಳೆ ಬೆಳೆ ಕೊಡುವವನು, ಎಲ್ಲ ಅವನೇ. ಮಗನಿಗೆ ತಂದೆಯಲ್ಲಿರುವಷ್ಟೇ ಸದರ, ಸಲುಗೆ, ಅವನಿಗೆ ದೇವರಲ್ಲಿ. ಅರ್ಜುನನ ಸಖ್ಯಭಾವ, ಹನುಮಂತನ ದಾಸ್ಯಭಾವ, ಗೋಪಿಯರ ವಾತ್ಸಲ್ಯಭಾವ, ಇವೆಲ್ಲ ಆ ಮುಗ್ಧ ಜನರ ಭಕ್ತಿಯಲ್ಲಿ ಅಭಿವ್ಯಕ್ತವಾಗುತ್ತವೆ. ಅವನು ದೇವರೊಡನೆ ಸಲುಗೆಯಿಂದ ಮಾತಾಡುತ್ತಾನೆ. ಕಾಡಿನಲ್ಲಿ ಏಕಾಕಿಯಾಗಿರುವ ದೇವರ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾನೆ; ಹೊಳೆಯಂಚಿನಲ್ಲಿ ನೆಲಸಿರುವ ದೇವರ ಕಾಲಿಗೆ ಕಲ್ಲು ತಗುಲೀತು, ಮರಳು ಒತ್ತೀತು ಎಂದು ಕನಿಕರ ಪಡುತ್ತಾನೆ. ಕೃಷ್ಣ ಮಲಪ್ರಭೆಗಳ ಕೂಡಲಿಯಲ್ಲಿ ನೆಲೆಸಿರುವ ಸಂಗಯ್ಯನನ್ನು ಕುರಿತು ಮುಗ್ಧ ಭಕ್ತನೊಬ್ಬನು ತೋರಿಸುವ ಮರುಕವನ್ನು ಗಮನಿಸಬಹುದು :

ಕೂಡಲ ಸಂಗಯ್ಯ, ಹೊಳಿಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ ಸಣ್ಣ ಮಳಲೊತ್ತಿ । ಗಂಗೀಯ
ನೀರೊತ್ತಿ ಲಿಂಗ ನೆನೆದಾನ॥

ಅವನ ಭಕ್ತಿ ಮರುಕ ಕನಿಕರ ಕಳವಳ ಸೋಜಿಗ ಮೊದಲಾದ ಭಾವಗಳ ಮೂಲಕ

ಹೊರಹೊಮ್ಮುತ್ತದೆ. ಪ್ರಪಂಚವನ್ನೆಲ್ಲ ರಕ್ಷಿಸಬೇಕಾದ ದೇವರ ಹೊಣೆಗಾರಿಕೆ ಸಾಮಾನ್ಯವಾದದ್ದಲ್ಲ. ಗಳಿಗೆ ಗಳಿಗೆಗೂ ಭಕ್ತರು ಅವನ ಸಹಾಯವನ್ನಪೇಕ್ಷಿಸುತ್ತಾರೆ. ಕರೆದ ಕಡೆಯೆಲ್ಲ ಹಗಲಾಗಲಿ ಇರುಳಾಗಲಿ ಅವನು ಹೋಗಬೇಕು. ಅವನಿಗೂ ದಣಿವಾಗುವುದಿಲ್ಲವೆ? ಅಂದಮೇಲೆ ಅವನು ಏಳುವುದು ನಿಧಾನವಾಗುತ್ತದೆ. ಭಕ್ತರು ನುತಿಯ ಮೂಲಕ ಅವನನ್ನೆಬ್ಬಿಸಬೇಕು. ಇಂದಿಗೂ ತಿರುಪತಿ ಮೊದಲಾದ ಕಡೆಗಳಲ್ಲಿ ದೇವರನ್ನೆಬ್ಬಿಸುವ ಆಚರಣೆ ಜಾರಿಯಲ್ಲಿದೆ. ಅದು ಒಂದು ಸೇವೆಯೇ ಸರಿ! ಅಂತೆಯೇ ಎಲ್ಲಮ್ಮನನ್ನೂ ಎಬ್ಬಿಸುತ್ತಾರೆ.

> ಏಳೆ ಯಲ್ಲವ್ವ ತಾಯಿ, ಎಷ್ಟೊತ್ತು ಮಲಗೀದೆ
> ಹೂವೆಂಜಲಾಗಿ ಹುಳು ಮುಟ್ಟಿ । ಕೊಳ್ಳದ
> ನೀರೆಂಜಲಾಗಿ ಗಿಳಿ ಕುಡಿದು ॥

ಅವಳು ಎಷ್ಟು ಹೊತ್ತು ಮಲಗಿದರೂ ಭಕ್ತರಿಗೆ ಕೋಪವಿಲ್ಲ. ನೇಸರು ಮೂಡಿ ಹೂವು ನೀರುಗಳು ಎಂಜಲಾಗಬಾರದಷ್ಟೆ. ಆ ಎಂಜಲನ್ನು ದೇವರಿಗರ್ಪಿಸುವಂತಿಲ್ಲ. ಅದಕ್ಕಾಗಿ ಅವರಿಗೆ ಕಾತರ. ಇಂಥದೇ ಮತ್ತೊಂದು ಗೀತೆಯ ಭಾಗದಲ್ಲಿ ಭಕ್ತೆ ಯಶೋದೆಯ ರೀತಿಯಲ್ಲಿ ಸ್ವಾಮಿಯನ್ನೇಳಿಸಿ, ಮುಖ ತೊಳಿಸಿ, ಕಸ್ತೂರಿ ತಿಲಕವನ್ನಿಡುವ ವಿಷಯ ಬರುತ್ತದೆ:

> ಎದ್ದು ಮುಖ ತೊಳೆಯೇಳು । ತಿದ್ದು ಕಸ್ತೂರಿ ತಿಲಕ ।
> ಮುದ್ದೆ ಬೆಣ್ಣೆಯ ನಿನಗೆ ನಾನು ಕೊಡುವೆ ॥
> ಹೊದ್ದಿದೆ ಕತ್ತಲು ಬೆಳಕು ಹರಿಯಲೊ ರಂಗ ।
> ನಿದ್ದೆ ತಿಳಿದೆದ್ದು ನೀನೆದ್ದು ಕುಂಡ್ರೈಯ್ಯ ಸ್ವಾಮಿ

ಇದರಲ್ಲಿಯ ಮಾತೃವಾತ್ಸಲ್ಯದ ಉಕ್ಕಿಂದ ಯಾರನ್ನಾದರೂ ಭಾವವಶರನ್ನಾಗಿ ಮಾಡದಿರದು.

ದೇವರಿಗೂ ಮನುಷ್ಯರಂತೆಯೇ ಮದುವೆಯುಂಟು, ಸಂಸಾರವುಂಟು. ತಾನೊಂದು ಹೆಣ್ಣು ಸಂಪಾದಿಸಬೇಕಾದರೆ ಶಿವ ಎಷ್ಟು ಕಷ್ಟಪಡಬೇಕಾಯಿತೆನ್ನುವುದು ಶಿವಗಿರಿಜೆಯರಿಗೆ ಸಂಬಂಧಿಸಿದ ಗೀತೆಗಳಿಂದ ವ್ಯಕ್ತವಾಗುತ್ತದೆ. ಅವನ ವಿಚಿತ್ರವಾದ ವೇಷಭೂಷಣಗಳನ್ನು, ಅವನ ಸ್ಮಶಾನಾವಾಸವನ್ನು ಅವನ ಭಿಕ್ಷುಕ ವೃತ್ತಿಯನ್ನು ಮುಂದಿಟ್ಟು, ಅವನನ್ನು ಮದುವೆಯಾಗದಿರುವುದೊಳಿತೆಂದು ಬಂಧುಗಳು ಗಿರಿಜೆಯನ್ನು ರೇಗಿಸುವುದುಂಟು. ಅವರ ಮದುವೆಯ ವೈಭೋಗವಂತು ಹೇಳತೀರದು. ಗಂಗೆ ಗೌರಿಯರ ಜಗಳವಂತು ಎಂದೂ ಬಗೆಹರಿಯದ ಕತೆ. ತನ್ನ ಹೆಂಡತಿಗೆ ತಿಳಿಯದಂತೆ ನಂಜುಂಡ ಬೆಟ್ಟದ ಚಾಮುಂಡಿಯ ಅರಮನೆಗೆ ಹೋದ ಕತೆ ಜಗತ್ತಿನ ಶ್ರೇಷ್ಠತಮ ಪ್ರಣಯ ಕಥೆಗೆ ಸರಿಸಾಟಿಯಾಗುವಂಥದು. ಅವರ ಮಾತುಕತೆ, ಚಾಮುಂಡಿಯ ಮುನಿಸು, ಮಡದಿಯ ನೆನಪಾಗಿ ನಂಜುಂಡನ ಭಯ ಇವೆಲ್ಲ ಮಾನವ ಸಹಜ ರೀತಿಯಲ್ಲಿ ತೋರುವಂಥವು. ದೇವರ ಸೂಳೆಗಾರಿಕೆ ಭಕ್ತನಿಗೆ ಅಹಿತದ, ಅಸಹ್ಯದ ವಿಚಾರವಲ್ಲ. ದೇವರು ಏನು

ಮಾಡಿದರೂ ಭಕ್ತನಿಗೆ ಒಪ್ಪು. "ಸೂಳೇರಿಗೊಲಿಯೋ ಸುಗುಣಾನೆ ಸೋಲಿಗರ ಸ್ವಾಮಿ ಸಿರಿಹರಿ ಸೋಲಿಸಬೇಡ ಗೆಲಿಸಯ್ಯ" ಎಂದು ಹೇಳುವಾಗ ಅವನ ಮನಸ್ಸಿನಲ್ಲಿ ಶುದ್ಧ ಪವಿತ್ರ ಭಾವನೆ ವಿನಾ ಅನ್ಯಭಾವನೆ ಸುಳಿಯಲಾರದು.

ತಿರೆಯ ಹೊರೆ ಹೊತ್ತಿರುವ ಪರಮ ಪುರುಷನಿಗೊಂದು ನಿಲಯ ಬೇಡವೇ? ಆ ನಿಲಯ ಸಾಧಾರಣವಾಗಬಾರದು. ಅದು ಊರಿನ ಕಣ್ಮಣಿಯಾಗಬೇಕು. ಭಗವಂತ ನಿಗೆ ಏಕಾಂತವಾಸ, ಕಾಡಿಡಿದ ಗಿರಿನೆತ್ತಿ, ಹೊಳೆಯದಡ ಸೊಗಸು. ಅಂಥ ಕಡೆ ಅವನ ಗುಡಿ ಕಟ್ಟಬೇಕು. ಹಬ್ಬಹರಿದಿನಗಳಲ್ಲಿ ಅವನು ಊರಿನ ಕೇರಿಗಳಲ್ಲಿ ಮೆರೆಯಬೇಕು; ಪ್ರತಿ ಗೃಹದಿಂದಲೂ ಆರತಿ ಬೆಳಗಿಸಿಕೊಂಡು ಹರಸಬೇಕು. ಉತ್ಸವಮೂರ್ತಿಗೆ ಸೊಗ ಸಾದ ವೇಷಭೂಷಣಗಳನ್ನು ತೊಡಿಸುವ ಮೂಲಕ, ಮೆರವಣಿಗೆಯಲ್ಲಿ ಕಲ್ಪನಾಸಾಧ್ಯ ವಾದ ವೈಭವ ವೈವಿಧ್ಯವನ್ನು ಪ್ರದರ್ಶಿಸುವ ಮೂಲಕ ತನ್ನ ಬಯಕೆಗಳನ್ನು ಈಡೇರಿಸಿ ಕೊಳ್ಳುತ್ತಾನೆ. ಆ ಉತ್ಸವಮೂರ್ತಿಯನ್ನು ನೋಡುವಾಗ ಭಾವಾವೇಶವಶನಾಗಿ ಹಾಡುತ್ತಾನೆ, ಮೈಮೇಲೆ ಪ್ರಜ್ಞೆಯಿಲ್ಲದೆ ಕುಣಿಯುತ್ತಾನೆ, ಬೆಂಕಿಯ ಮೇಲೆ ನಡೆಯು ತ್ತಾನೆ. ಆಗವನಿಗೆ ಹತ್ತಾಳಿನ ಶಕ್ತಿ ಬರುತ್ತದೆ. ಕುಣಿತ ಹಾಡುಗಳು ನಾನಾ ರೂಪ ವನ್ನು ತಳೆದದ್ದೇ ಹೀಗೆ. ಚಿತ್ರಕಲೆ, ಶಿಲ್ಪಕಲೆ, ನಾಟ್ಯಕಲೆಗಳು ಬೆಳೆದದ್ದೇ ಇಂಥ ಸಂದರ್ಭದಲ್ಲಿ. ಇವೆಲ್ಲವೂ ಭಕ್ತಿಯ ವಿವಿಧ ತರಂಗಗಳು: ಭಗವತ್ಸೇವಾವಿಧಾನಗಳು. ಜಾತ್ರೆಗಳ ಮೂಲೋದ್ದೇಶವೂ ಅದೇಯೆ. ಅವನ ರಸಿಕತೆ, ಉತ್ಸಾಹ, ಉಲ್ಲಾಸಗಳಿಗೆ ಈ ಜಾತ್ರೋತ್ಸವಗಳು ತವರಾಗುತ್ತವೆ. ಎಲ್ಲಮ್ಮ, ಮಾದೇಶ್ವರ, ಬಿಳಿಗಿರಿರಂಗ, ಸಂಗ ಮೇಶ್ವರ, ಬನಶಂಕರಿ ಮೊದಲಾದವರ ಜಾತ್ರೆಗೆ ಹೋಗುವಾಗ ಭಕ್ತರ ಬಾಯಿಗಳಲ್ಲಿ ಭಕ್ತಿಗೀತೆಗಳು ಅವಿಚ್ಛಿನ್ನವಾಗಿ ಮೊಳಗುತ್ತವೆಯೇ ಹೊರತು ಕೆಟ್ಟ ಅಥವಾ ಕಾಡು ಹರಟೆಗೆ ಅವಕಾಶವೇ ಇಲ್ಲ. ಭಾವ ಕಾವೇರಿದಾಗ ಅವರು ಉನ್ಮತ್ತರಾಗುತ್ತಾರೆ. ಇಹ ಲೋಕದ ಕಷ್ಟಕಾರ್ಪಣ್ಯಗಳನ್ನು ಮರೆಯುತ್ತಾರೆ. ಕೆಲವು ಕಾಲವಾದರೂ ಕಲ್ಪನೆಯ ಪರಲೋಕದಲ್ಲಿ ಪ್ರವಾಸಿಗಳಾಗುತ್ತಾರೆ.

ಅವರ ಲೋಕಾನುಭವ ಅಥವಾ ವಿಚಾರಶಕ್ತಿ ಪರಿಮಿತವಾದುದಾದರೂ ಅವರ ಅನುಭಾವ ಮಹತ್ವಪೂರ್ಣವಾದುದು. ಸಾಧುಸಿದ್ಧರು ಪರ್ವತಗುಹಾಂತರಗಳಲ್ಲಿ ಅನೇಕ ವರ್ಷ ತಪಸ್ಸು ಮಾಡಿ ಪಡೆಯುವ ಸಿದ್ಧಿಗೂ ಸಾಮಾನ್ಯರು ಮುಗ್ಧ ಭಕ್ತಿಯ ಮೂಲಕ ಪಡೆಯುವ ಸಿದ್ಧಿಗೂ ವಿಶೇಷಾಂತರವಿರಲಾರದು. ಅವರ ಭಕ್ತಿ ಐಹಿಕ ಸುಖವನ್ನು ಅಪೇಕ್ಷಿಸುವಂಥದಲ್ಲ: ಭಗವಂತನಿಂದ ಪ್ರತಿಫಲವನ್ನು ಬಯಸುವ ವಾಣಿಜ್ಯ ಸ್ವರೂಪ ದ್ದಲ್ಲ: ಅದು ಕೊಡು ಇದು ಬಿಡು ಎನ್ನುವ ಚೌಕಾಶಿ ವ್ಯಾಪಾರದ ಸ್ವಭಾವದ್ದಲ್ಲ. ಅದೊಂದು ನಿರ್ವ್ಯಾಜಪ್ರೇಮ.

ಕರುಣ ಬಂದರೆ ಕಾಯೊ, ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣ ಬಸವಣ್ಣ | ಶಿವಲಿಂಗ
ಕಡೆತನಕ ಕಾಯೊ ಅಭಿಮಾನ

ಅವರು ಬಡತನಕ್ಕಾಗಲಿ ಸಾವಿಗಾಗಲಿ ಅಂಜುವವರಲ್ಲ. ಹುಟ್ಟು ಸಾವುಗಳು ತಮ್ಮ ಕೈಯಲ್ಲಿಲ್ಲವೆನ್ನುವುದೂ ಗೊತ್ತು. ಯಾವುದು ತಮ್ಮ ಹತೋಟಿಯಲ್ಲಿಲ್ಲವೋ ಅದರ ಚಿಂತೆ ತಮಗೇಕೆನ್ನುವ ಅರುಹಿನ ಜಾಣರು, ವಾಸ್ತವವಾದಿಗಳು. ಅಂಥ ಜನ ಪರರ ಹಂಗಿನಲ್ಲಿ ಬಾಳುವವರಲ್ಲ. ಹರನನ್ನು ನಂಬಿದವರು ನರನನ್ನು ನಂಬಬೇಕಾಗಿಲ್ಲ. ನರರಿಂದಾಗುವುದಾದರೂ ಏನು?

ಮಂದ್ಯೇನ ಕೊಟ್ಟೇತು ಮನವೇನು ದಣಿದೀತು
ಮುಂಜಾನೆಯಾಗ ಗಿರಿಮಲ್ಲ । ಕೊಟ್ಟರೆ
ಮನೆ ತುಂಬ ನಮ್ಮ ಮನೆ ತುಂಬ

ಸಾಮಾನ್ಯರೆಂದ ಕೂಡಲೇ ಅವರಿಗೂ ತತ್ವದರ್ಶನಗಳಿಗೂ ಬಹುದೂರವೆಂದು ತಿಳಿಯುವ ಶಿಷ್ಟ ಮಹಾಜನರು ವಿರಳವೇನಲ್ಲ. ತತ್ವವಾಗಲಿ, ದರ್ಶನವಾಗಲಿ ಭಾವದ ಜೋಣಿಯಲ್ಲಿಯೇ ಹರಿದು ಬರಬೇಕು; ಭಾವದ ಮರೆಯಲ್ಲಿಯೇ ಪ್ರಕಟವಾಗಬೇಕು. ಎಲ್ಲೆಲ್ಲಿ ಚೆಲುವು ಸೊಂಪಾಗಿದೆಯೋ ಅಲ್ಲೆಲ್ಲ ಲಿಂಗಯ್ಯನ ಜ್ಯೋತಿಯನ್ನೇ ಕಾಣುತ್ತಾರೆ; ಅಂಥ ಜ್ಯೋತಿಯ ದರ್ಶನದಿಂದ ಅಜ್ಞಾನವೆಂಬ ನಿದ್ದೆ ಹರಿದುಹೋಗುತ್ತದೆಂಬ ತತ್ವ ಕೆಳಗಣ ಗೀತೆಯಲ್ಲಿ ಸೊಗಸಾಗಿ ಪ್ರಕಾಶಿಸುತ್ತದೆ:

ಹೂವಿನ್ಯಾಗ ಹುಡುಗ್ಯಾನ, ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರೆದಾನ । ಲಿಂಗಯ್ಯ
ನೋಡಟಿಗೆ ನಿದ್ದಿ ಬಯಲಾಗಿ ॥

ಇಂತೆಯೇ ಹರ ವೇಶಿನಾಗೇಶಿಯರ ಲಾವಣಿಗಳಲ್ಲಿಯೂ ತತ್ವಪ್ರಧಾನವಾದ ಗಹನ ವಿಚಾರಗಳನ್ನು ಗಮನಿಸಬಹುದು. ಉಪನಿಷತ್ಸಾರವನ್ನೂ ಜೀವನದರ್ಶನವನ್ನೂ ನಿರೂಪಿಸುವ ಗೀತೆಗಳು ಸ್ತ್ರೀಯರಬಾಯಲ್ಲಿಯೂ ನರ್ತಿಸುವುದುಂಟು.

ದೇವರ ಮಹಿಮೆಯ ಸಂಸ್ತವನವೇ ಭಕ್ತಿಗೀತೆಯಾಗುತ್ತದೆ. ಭಕ್ತಿಗೀತೆಗಳ ಪ್ರಪಂಚ ಬಹು ವಿಸ್ತಾರವಾದದ್ದು. ದೇವ ದೇವರುಗಳ ಸಂಖ್ಯೆ ಮಿತಿಯಿಲ್ಲದ್ದು: ಅಂತೆಯೇ ಭಕ್ತಿ ಗೀತೆಗಳ ಸಂಖ್ಯೆ. ಭಾರತವೊಂದನ್ನೇ ಲಕ್ಷ್ಯದಲ್ಲಿರಿಸಿಕೊಂಡರೂ ಲಕ್ಷಾಂತರ ಗೀತೆಗಳು ಲಭ್ಯವಾಗುತ್ತವೆ. ಪ್ರಾಯಶಃ ಇಲ್ಲಿರುವಷ್ಟು ಹುಲುಸು ಬೆಳೆ ಬೇರೆ ದೇಶಗಳಲ್ಲಿದ್ದಿರಲಾರದು. ಇದಕ್ಕೆ ಕಾರಣ ಇಲ್ಲಿಯ ಜನರ ಮನೋಧರ್ಮ: ಮತೀಯ ಶ್ರದ್ಧೆ: ಹಾಗೂ ಬಹು ದೇವತೋಪಾಸನೆ. ಭಾರತ ಸರ್ವ ಮತಗಳ ಸಂಗಮಸ್ಥಾನ. ಈ ಮತಗಳ ಪರಸ್ಪರ ಪ್ರಭಾವ ಹಾಗೂ ಸ್ಪರ್ಧೆಯಿಂದಾಗಿ ಜನರಲ್ಲಿ ಶ್ರದ್ಧಾವೇಶಗಳು ಮಿಗಿಲಾಗುವುದುಂಟು. ಯಂತ್ರ ವಿಜ್ಞಾನ ಮತ್ತು ವಿಜ್ಞಾನಗಳು ಸಾಮಾನ್ಯರಿರಲಿ, ವಿದ್ಯಾವಂತರ ಸಾಂಪ್ರದಾಯಿಕ ಮನೋಧರ್ಮವನ್ನು ಎಳ್ಳಷ್ಟೂ ಅಲುಗಿಸಿಲ್ಲ. ಅದೇನೇ ಇರಲಿ. ಈ ನಾಡಿನಲ್ಲಿ ಸಾಧು ರುವಷ್ಟು ಅವತಾರ ಪುರುಷರು, ದೇವರುಗಳು, ದೇವತೆಗಳು; ದಾಸರು, ಶರಣರು,

ಸತ್ಪುರುಷರು, ಭೂತಗಳು, ಪಿತೃದೇವತೆಗಳು ಮತ್ತೆಲ್ಲಿಯೂ ಇಲ್ಲ. ಆದರೂ ಈ ವೈವಿಧ್ಯತೆಯ ಬಸಿರಿನಲ್ಲಿ ಏಕಾಖಂಡವಾದ ಶಕ್ತಿಯೊಂದು ಪ್ರವಹಿಸುತ್ತದೆನ್ನುವ ಸಂಗತಿ ಈ ಗೀತೆಗಳಲ್ಲಿ ನಿಚ್ಚಳವಾಗಿ ವ್ಯಕ್ತಗೊಳ್ಳುತ್ತವೆ.

ಮಾಟದ ಒಂದು ಶಾಖೆ ವಿಜ್ಞಾನವಾಗಿ ಮುಂಬರಿದರೆ, ಮತ್ತೊಂದು ಶಾಖೆ ಮತವಾಗಿ ಜನಜೀವನವನ್ನೆಲ್ಲ ಆಕ್ರಮಿಸಿಕೊಂಡಿರುವ ಸಂಗತಿ ಸರ್ವವೇದ್ಯ. ವಿಜ್ಞಾನ ರಾಜಕೀಯಗಳೂ ಮತಕ್ಕೆ ಅಡಿಯಾಳಾಗಿದ್ದ ಕಾಲವೊಂದಿತ್ತು ; ಈ ಹೊತ್ತಿಗೂ ಅವು ಅದರ ಧೃತರಾಷ್ಟ್ರ ಮುಷ್ಟಿಯಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಿದಂತಿಲ್ಲ. ರಾಜಕೀಯ ಕ್ಷೇತ್ರದಲ್ಲಂತು ಮತದ ದುಷ್ಪ್ರಭಾವ ಇದ್ದೇ ಇದೆ. ರಾಜಕೀಯ ನಾಯಕರ ಸಂಹಾರಕ್ಕಾಗಿ ಮತಕ್ಕೆತಾಯಿಯಂತಿರುವ ಮಾಟದ ಸಹಾಯವನ್ನುಪಡೆಯುವುದುಂಟು. ಹೀಗಿರುವಾಗ ಆದಿಮಾನವನ ಜೀವನವನ್ನು ಮಂತ್ರ, ಯಂತ್ರ, ಮಾಟ ಮಾಯಗಳೇ ಆವರಿಸಿಕೊಂಡಿದ್ದುದರಲ್ಲಿ ಆಶ್ಚರ್ಯವಿಲ್ಲ. ಪ್ರತಿಯೊಂದು ಅನಿಷ್ಟ ಪರಿಹಾರಕ್ಕೆಂದು ಅವನೊಂದು ತಂತ್ರವನ್ನು ಕಲ್ಪಿಸಿಕೊಂಡು, ಯಂತ್ರ ಮಂತ್ರ ವಿಧಾನಗಳ ಮೂಲಕ ತೃಪ್ತಿಪಡೆಯುತ್ತಿದ್ದ. ಆ ವಿಧಾನಗಳೇ ಕಾಲಾನಂತರದಲ್ಲಿ ವಿಧಿಯ ಸ್ಥಾನಮಾನಗಳನ್ನು ಪಡೆದುವು. ಮುಂದಿನ ಮಾಟಗಾರರ, ಮಂತ್ರಗಾರರ ಮತ್ತು ಪುರೋಹಿತರ ಭ್ರಾಂತಿ ಕಲ್ಪನೆಗಳಿಗನುಗುಣವಾಗಿ ಅವುಗಳಿಗೆ 'ಶಾಸ್ತ್ರ'ದ ಗತ್ತುಗಾರಿಕೆ ಪ್ರಾಪ್ತವಾಯಿತು. ಯಾರು ಯಾವ ಕಾರ್ಯವನ್ನೇ ಕೈಗೊಳ್ಳಲಿ, ಅದು ವಿಧಿವತ್ತಾಗಿ, ಶಾಸ್ತ್ರೋಕ್ತವಾಗಿ ಪ್ರಾರಂಭ ಹಾಗೂ ಮುಕ್ತಾಯಗೊಳ್ಳಬೇಕಾದ್ದು ಅನಿವಾರ್ಯ ಪರಿಪಾಠವಾಯಿತು. ರೈತ ಹೊಸ ಮಳೆ ಬಿದ್ದು ನೇಗಿಲು ಹೂಡುವ ಮೊದಲು ಹೊನ್ನಾರು ಶಾಸ್ತ್ರವಾಗಬೇಕು; ಸುಗ್ಗಿಯ ಬೆಳೆಯನ್ನು ಮನೆಗೆ ತರಬೇಕಾದರೆ ಕೆಲವು ವಿಧಿಗಳನ್ನನುಸರಿಸಬೇಕು; ನೇಯ್ಗೆಯವ ಮಗ್ಗಕ್ಕೆ ಆಗಾಗ್ಗೆ ವಿಧ್ಯುಕ್ತವಾಗಿ ಪೂಜೆಪುನಸ್ಕಾರಗಳನ್ನು ಸಲ್ಲಿಸಬೇಕು; ಮನೆಗೆ ತಳಹದಿ ಹಾಕುವಾಗ ಕೆಲವು ಸಂಸ್ಕಾರಗಳು ಜರುಗಲೇಬೇಕು. ಮಡದಿ ಗರ್ಭವತಿಯಾದರೊಂದು ಸಂಸ್ಕಾರ, ಮಗು ಹಡೆದರೊಂದು ಸಂಸ್ಕಾರ; ಸತ್ತರೆ ಮತ್ತೊಂದು ಸಂಸ್ಕಾರ. ಈ ಶಾಸ್ತ್ರಗಳು ಜಾತ್ಯನುಗುಣವಾಗಿ ಮತ್ತು ಪ್ರಾದೇಶಿಕವಾಗಿ ವ್ಯತ್ಯಾಸ ಹೊಂದುವುವಾದರೂ, ಒಂದಲ್ಲ ಒಂದು ರೀತಿಯಲ್ಲಿ ಜಗತ್ತಿನ ಎಲ್ಲ ಜನಾಂಗ ಗಳಲ್ಲಿಯೂ, ಮತಗಳಲ್ಲಿಯೂ ರೂಢಿಯಲ್ಲಿವೆ.

ಪ್ರತಿಯೊಂದು ವಿಧಿ ಅಥವಾ ಸಂಸ್ಕಾರ ಇಂತಿಂತೆಯೇ ನಡೆಯಬೇಕೆಂಬ ನಿಯಮ ಇದೆ. ಆ ವಿಧಿಯ ಅವಿಭಾಜ್ಯಾಂಶ ಮಂತ್ರ. ಅನಿಷ್ಟಾರಿಷ್ಟಗಳನ್ನು ನಿವಾರಿಸುವ ಶಕ್ತಿ ಮಂತ್ರಕ್ಕಿದೆಯೆಂಬ ನಂಬುಗೆ ಜನಮನದಲ್ಲಿ ಎಂದೋ ಬೇರೂರಿತಷ್ಟೆ. ಆದ್ದರಿಂದ ಎಲ್ಲ ಶುಭಕಾರ್ಯಗಳಿಗೂ ಅದು ಅನಿವಾರ್ಯವಾಯಿತು. ಅದು ಮಾಟಗಾರರಿಂದ ಪುರೋಹಿತರ ಕೈಗೆ ಬಂದು ಅವರ ಮೀಸಲುಸೊತ್ತಾದಾಗ, ಸಾಮಾನ್ಯ ಜನ ಸೋಬಾನೆ ಯಂಥ ಪದಗಳನ್ನು ಕಟ್ಟಿಕೊಂಡಿರಬೇಕು. ಶುಭಕಾರ್ಯಗಳಲ್ಲೆಲ್ಲ ಅವುಗಳನ್ನು ಹಾಡುವ ಸಂಪ್ರದಾಯ ಬೆಳೆದುಬಂದಿರಬೇಕು. ಪುರೋಹಿತರಿಲ್ಲದೆ, ವಾದ್ಯವಿಲ್ಲದೆ ಮದುವೆ ನಡೆಯ

ಬಹೆಮ : ಸೋಬಾನೆ ಪದಗಳಿಲ್ಲವೆ ಅದು ನಡೆಯುವಂತಿಲ್ಲ. ಶಾಸ್ತ್ರದ ಹಾಡುಗಳಲ್ಲೆಲ್ಲ ಪ್ರಮುಖವಾದುವೆಂದರೆ ಮದುವೆಯ ಪದ. ಮೊದಲನೆಯ ಶಾಸ್ತ್ರದಿಂದ ಹಿಡಿದು ಕೊನೆಯ ಶಾಸ್ತ್ರದವರೆಗೆ ಹಾಡುಗಳು ಸಮೃದ್ಧವಾಗಿ ಬಳಕೆಯಾಗುತ್ತವೆ. ಅವುಗಳನ್ನು ಹಾಡುವವರು ಪ್ರಮುಖವಾಗಿ ಹೆಂಗಸರು. ಹಲವು ಹಾಡುಗಳಲ್ಲಿ ಕಾವ್ಯಾಂಶ ಹೇರಳವಾಗಿರುವುದಿಲ್ಲ : ಕೆಲವು ಹಾಡುಗಳಲ್ಲಿ ಅರ್ಥವೂ ಪ್ರಧಾನವಾಗಿಲ್ಲದಿರಬಹುದು. ಆದರೆ ಅವುಗಳಲ್ಲಿ ಮರುಕ ಕನಿಕರ ಶೋಕ ಶೃಂಗಾರ ಹಾಸ್ಯವಿಡಂಬನೆ ಕರುಣೆ ಮೊದಲಾದ ಭಾವಗಳು ಯಥೇಚ್ಛವಾಗಿ ದೊರೆಯುತ್ತವೆ. ಶುಭಕಾರ್ಯಗಳಲ್ಲಿ ಹಾಡುವಂಥವಾದ್ದರಿಂದ ಅವುಗಳಲ್ಲಿ ಹರ್ಷ ವಿನೋದಗಳೇ ಹೆಚ್ಚು.

ಹಿಂದಿನ ಕಾಲದಲ್ಲಿ ಮದುವೆಯೆಂಬುದು ದೀರ್ಘಕಾಲದ ಕಾರ್ಯ. ನೆಂಟರಿಷ್ಟರು ಬಿಡುಬೀಸಾಗಿ ನಾಲ್ಕಾರು ದಿನ ಒಂದು ಕಡೆ ಸೇರಿ ಆಟ ಊಟ ಪಾಟಗಳಲ್ಲಿ ಮಗ್ನರಾಗಿ ಬಾಳಿನ ಕಹಿ ನೋವುಗಳನ್ನು ಮರೆಯುತ್ತಿದ್ದ ಸಮಯ. ಮದುವೆಯಲ್ಲದವರಿಗೆ ನಾನಾ ಬಗೆಯ ಮನರಂಜನೆಗಳೊದಗುತ್ತಿದ್ದುವು. ಮೈಕಾಲ್ ಪರ್ವತ ಪ್ರದೇಶದಲ್ಲಿ ವಾಸಿಸುವ ಗೋಂಡಿ ಬೈಗ ಮೊದಲಾದ ಜನರಲ್ಲಿ ರೂಢಿಯಲ್ಲಿರುವ ಮದುವೆಯ ಹಾಡುಗಳನ್ನು ವೆರಿಯರ್ ಎಲ್ವಿನ್ ಮತ್ತು ಶಾಮ್‌ರಾವ್ ಹಿವಾಲೆಯವರು ಸಂಗ್ರಹಿಸಿದ್ದಾರೆ.[1] ನಿದರ್ಶನಾರ್ಥವಾಗಿ ಮಾತ್ರ ಒಂದು ಹಾಡನ್ನಿಲ್ಲಿ ಭಾಷಾಂತರಿಸಿದೆ.[1]

ಕತ್ತರಿಸು ಕತ್ತರಿಸು
ಎಲೆಯಿಡಿದ ಬಿದಿರನ್ನು
ತುಂಬೆಲೆಯ ಕೊಂಬೆಗಳ
ಕೊಂಬೆಗಳ ತಾಯಿಲ್ಲಿ
ಮದುವೆ ಚಪ್ಪರಕಾಗಿ
ಚಪ್ಪರವ ಹಾಕಿಲ್ಲಿ
ಹಾಕದಿರೆ ಬಹುಬೇಗ
ಬಿಸಿಲು ಬೆಳುದಿಂಗಳಲಿ
ಸೀಯುವಳು ನನ ಹೆಣ್ಣು
ನನ ಹೆಣ್ಣು ಸಾಯುವಳು
ನೀರಡಿಕೆಯಿಂದ

ಈ ಹಾಡು ಚಪ್ಪರದ ಶಾಸ್ತ್ರಕ್ಕೆ ಸಂಬಂಧಿಸಿದ್ದು. ಹಾಡುಗಳಲ್ಲಿ ವ್ಯತ್ಯಾಸವಿದ್ದರೂ, ಶಾಸ್ತ್ರಗಳು ಭಾರತದುದ್ದಕ್ಕೂ ಒಂದೇ ಎಂದು ತೋರುತ್ತದೆ. ಗಂಡಿನ ಮನೆಯಲ್ಲಿ ಮದುವೆ. ಚಪ್ಪರ ಸಿದ್ಧವಾಗಬೇಕು. ಚಪ್ಪರಕ್ಕೆ ಬೇಕಾದ ಮರ ಕಡಿದು ತರುವ ಸಲುವಾಗಿ ಜೋಸಿ (ಜೋಯಿಸ) ಎಡೆಹಗಲ ಸಮಯದಲ್ಲಿ ತರುಣರನ್ನು ಕಾಡಿಗೆ ಕರೆದೊಯ್ಯುತ್ತಾನೆ. ಅವರು ಸಜಾಯಿ ಎಂಬ ಮರದ ಬಳಿ ನಿಂತು "ನಿನ್ನನ್ನು ಮದುವೆಗೊಯ್ಯಲು ಬಂದಿದ್ದೇವೆ. ನಿನ್ನ ಕೊಂಬೆಗಳನ್ನು ಕೊಡುವೆಯೋ ಇಲ್ಲವೋ?" ಎಂದು

1 *Folk Songs of the Maikal Hills*, P. 180.

ಕೇಳುತ್ತಾರೆ. ಮರ ಅಲ್ಲಿದ್ದವರಲ್ಲೊಬ್ಬರ ಮೂಲಕ ಮಾತಾಡುತ್ತ "ಇಲ್ಲ, ಪಶ್ಚಿಮಕ್ಕೋ ಪೂರ್ವಕ್ಕೋ ಹೋಗಿ" ಎಂದು ನುಡಿಯುತ್ತದೆ. ಜನ ಮರದಿಂದ ಮರಕ್ಕೆ ಹೀಗೆಯೇ ಕೇಳಿಕೊಂಡು ಹೋಗುತ್ತಾರೆ. ಕೊನೆಗೊಂದು ಮರ ಹೇಳುತ್ತದೆ: "ಆಗಲಿ. ನನ್ನ ಕೊಂಬೆಗಳನ್ನು ಕೊಡುತ್ತೇನೆ." ಅನಂತರ ಅವರು ಮರವನ್ನು ಪೂಜಿಸಿ, ಕತ್ತರಿಸುತ್ತಾರೆ. ಜೋಯಿಸ ಬಂದಿದ್ದವರಿಗೆ ಊಟ ಹಾಕುತ್ತಾನೆ. ಮೇಲ್ಕಂಡ ಹಾಡನ್ನು ಹಾಡುತ್ತ, ಕೊಂಬೆಯನ್ನು ಮದುವೆ ಮನೆಗೆ ತರುತ್ತಾರೆ. ಈ ಹಾಡುಗಳಲ್ಲೆಲ್ಲ ಗೇಯತೆ ಮುಖ್ಯವೇ ಹೊರತು ಕಾವ್ಯಾಂಶವಲ್ಲ.

ಇದೇ ರೀತಿಯ ಶಾಸ್ತ್ರಗಳು ಕರ್ನಾಟಕದಲ್ಲಿ ದಟ್ಟವಾಗಿ ದೊರೆಯುತ್ತವೆ. ಇಂದಿಗೂ ಕೆಲವು ಕಡೆ ಸೋಬಾನೆ ಪದಗಳಿಲ್ಲದೆ ಮದುವೆ ನಡೆಯುವಂತೆಯೇ ಇಲ್ಲ. ಅವುಗಳ ಪ್ರಾಮುಖ್ಯತೆ ಮತ್ತು ವ್ಯಾಪಕತೆಗಳನ್ನು ಎಚ್. ಎಲ್. ನಾಗೇಗೌಡರ 'ಸೋಬಾನೆ ಚಿಕ್ಕಮ್ಮನ ಪದಗಳು' ಎಂಬ ಗ್ರಂಥದಿಂದ ಹಾಗೂ ಶಶಿಕಲಾ ಚಂದ್ರಶೇಖರ್ ಅವರ 'ಅಭ್ಯಾಸ' ಗ್ರಂಥದಲ್ಲಿಯ 'ಬಯಲುಸೀಮೆಯ ಹಾಡುಗಳು' ಎಂಬ ಲೇಖನದಿಂದ ಅರಿಯಬಹುದಾಗಿದೆ. ಈ ಎಲ್ಲ ಪದಗಳನ್ನು ಒಬ್ಬ ಹೆಂಗಸೇ ಕಲಿತಿರುವುದೂ ಉಂಟು. ಎಲ್ಲ ಹಾಡುಗಾತಿಯರು ನಿರಕ್ಷರಕುಕ್ಷಿಗಳು. ಅವರ ಸ್ಮರಣಶಕ್ತಿ ಅಸಾಧಾರಣ. ಅವರು ಹೊಸ ಹೊಸ ಪದಗಳನ್ನು ನಿರ್ಮಿಸುವುದೂ ಉಂಟು. ಇವು ಬಾಯಿಂದ ಬಾಯಿಗೆ ಊರಿಂದೂರಿಗೆ ಪ್ರಯಾಣ ಮಾಡುವಾಗ ವ್ಯತ್ಯಾಸಗಳು ಅನಿವಾರ್ಯ.

ಬ್ರಾಹ್ಮಣಿತಿಯರಲ್ಲಿಯೂ ಶಾಸ್ತ್ರದ ಹಾಡುಗಳಿವೆ. ಅವರು ಹೂಪ್ರಶ್ನೆಂದೇ ಲೆಕ್ಕ ತಾರೆ. ಉರುಟಣೆ, ಸುವ್ವಿ, ಚಿಟ್ಟು, ಎಣ್ಣೆಯೊತ್ತುವುದು, ಬಳೆ ತೊಡಿಸುವುದು, ಆರತಿ ಇವೇ ಮೊದಲಾದುವನ್ನು ದೇವುಡು ಅವರು ತಮ್ಮ 'ಕರ್ನಾಟಕ ಸಂಸ್ಕೃತಿ'ಯಲ್ಲಿ ಉದಾಹರಿಸಿದ್ದಾರೆ (ಪುಟ ೭೦–೭೨) ಬೀಗರ ಹಾಡುಗಳಂತು, ವಿನೋದ ಒಗಟುಗಳಿಂದ ಇಡಿಕಿರಿದಿರುತ್ತವೆ.

ಹಿಂದಿನ ಕಾಲದಲ್ಲಿ ಹರಿಜನರ ಮದುವೆಗಳಲ್ಲಿ ಬ್ರಾಹ್ಮಣ ಪುರೋಹಿತರು ಸೇರುತ್ತಿರಲಿಲ್ಲವಷ್ಟೆ. ಪುರೋಹಿತರ ಮಂತ್ರಗಳ ಫಲವೆಲ್ಲ ಸೋಬಾನೆ ಪದಗಳಿಂದ ಲಭಿಸುತ್ತಿತ್ತು. ಎಣ್ಣೆಶಾಸ್ತ್ರದ ಪದಗಳನ್ನು ಕುರಿತ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸ್ವಾರಸ್ಯವಾದ ವ್ಯಾಖ್ಯಾನ ಅಮೂಲ್ಯವಾದುದಾಗಿದೆ. "ಯಾವ ತಪೋವನದಲ್ಲಾಗಲಿ, ಅರಮನೆಯಲ್ಲಾಗಲಿ ಇದಕ್ಕೆ ಮೀರಿದ ಸಂಸ್ಕೃತಿ ದೊರೆಯಲಾರದು. ಮನೆಯಲ್ಲಿ ಕುಳಿತವನು ದೊರೆಯಲ್ಲ, ವಿಘ್ನೇಶ ಅಥವಾ ಸ್ಕಂದನಲ್ಲ, ಲವಕುಶನಲ್ಲ. ಆದರೆ ಇಲ್ಲಿ ಅಕ್ಷತೆ ಉಂಟು, ತಂಬಿಗೆ ಉಂಟು, ಅಕ್ಕತಂಗಿಯರ ಕೈಯ ಉಗುರೆಣ್ಣೆ ಉಂಟು, ಚೆನ್ನೆಯರು ಎರೆಯುವ ಅಗಣಿ ಉಂಟು. ಈ ಸೇವೆಯನ್ನೆಲ್ಲ ದೊರೆತನದ ಭೋಗಕ್ಕೆ ಸಮನಾಗಿ ಮಾಡುವ ಪ್ರೀತಿ ಉಂಟು, ಸಂಭ್ರಮ ಉಂಟು."[1] ಈ ಪದಗಳಲ್ಲಿರುವ ಅರ್ಥ, ಮಾಧುರ್ಯ,

---

[1] ಕರ್ನಾಟಕದ ಜನಪದ ಸಾಹಿತ್ಯ, ಪು. ೩೨. ಇಲ್ಲಿ ಕೆಲವು ಎಣ್ಣೆಶಾಸ್ತ್ರದ ಪದಗಳನ್ನು ಸಹ ಉದ್ಧರಿಸಿದೆ.

ಮಹತ್ವಗಳು ಪ್ರಾಯಶಃ ಮಂತ್ರಗಳಲ್ಲಿ ದೊರೆಯುವುದು ಕಷ್ಟ. ಅಷ್ಟೇ ಅಲ್ಲ, ಇವು ಸಾಮಾನ್ಯರಿಗೂ ಅರ್ಥವಾಗುವಂಥವು. ಅರ್ಥವಾಗದ ಮಂತ್ರಗಳಿಂದ ಸ್ವರ್ಗಪ್ರಾಪ್ತ ವಾಗುವುದಾದರೂ ಬೇಡವೆನಿಸುತ್ತದೆ.

ಎಲ್ಲ ಜನರಲ್ಲಿಯೂ ಹೆಣ್ಣು ಗಂಡುಗಳು ಸೀತಾರಾಮರಂತೆ, ಗೌರಿ ಶಂಕರರಂತೆ, ಸತ್ಯಭಾಮೆ ಕೃಷ್ಣರಿಗೆ ಸಮಾನ. "ಜಾನಕೀರಮ ವಿವಹ"ವೆಂದು ಸಾರಿಯವರು ನೆರೆಯು ತ್ತಾರೆ: ಯದುಕುಲತಿಲಕನೆಂದು ಗಂಡಿಗೆ ಎಣ್ಣೆಯೊತ್ತುತ್ತಾರೆ. 'ಶಿವನ ಕಲ್ಯಾಣ' ವೆಂದು ಊರ ಜನರಿಗೆಲ್ಲ ಸಂಭ್ರಮ. 'ಶೋಬನವೆಲ್ಲ ಶಿವನಿಗೆ' ಎನ್ನುವಲ್ಲಿ ಮದುವೆ ಸಮರ್ಪಣಭಾವದಿಂದ ನಡೆಸುವ ಮಂಗಳಕಾರ್ಯವೆಂಬುದು ಸ್ಪಷ್ಟ. ಭಾರತೀಯರಲ್ಲಿ ಮದುವೆ ಕೇವಲ ಸಾಮಾಜಿಕ ಸಂಗತಿಯಾಗಿಲ್ಲ; ಮತೀಯ ಸಂಪ್ರದಾಯವಾಗಿಲ್ಲ: ಅದೊಂದು ಸುಪವಿತ್ರವಾದ ಧಾರ್ಮಿಕ ಪದ್ಧತಿ, ಆಧ್ಯಾತ್ಮ ಸಂಗತಿ. ಸಂತಾನೋತ್ಪತ್ತಿ ಯೊಂದೇ ಅದರ ಉದ್ದೇಶವಲ್ಲ, ಲೋಕ ಕಲ್ಯಾಣ ಹಾಗೂ ಆತ್ಮಸಿದ್ಧಿ ಅದರ ಪರಮ ಗಂತವ್ಯ. ಮದುವೆಯ ಹಾಡುಗಳಲ್ಲಿ ಈ ವಿಚಾರಗಳೆಲ್ಲ ವಿವರ ವಿವರವಾಗಿ ದೊರಕುತ್ತವೆ.

ಹಬ್ಬದ ಮತ್ತು ನೋಂಪಿಯ ಹಾಡುಗಳನ್ನೂ ಶಾಸ್ತ್ರದ ಪದಗಳ ಪರಿಧಿಯಲ್ಲಿಯೇ ಪರಿ ಗಣಿಸಬಹುದು. ಹಬ್ಬಗಳು ನೋಂಪಿಗಳು ಮತ್ತು ತಿಥಿ ಮೊದಲಾದ ಸಂಸ್ಕಾರಗಳು ಮತೀಯ ಸಂಪ್ರದಾಯದ ಒಂದು ಭಾಗವಾಗಿಯೇ ಬೆಳೆದವು. ಅವುಗಳ ಆಚರಣೆಯಿಂದ ಪಿತೃಗಳು ಮತ್ತು ದೇವತೆಗಳು ಸಂತೃಪ್ತರಾಗುತ್ತಾರೆ: ತನ್ನ ಆಶೋತ್ತರಗಳು ಪೂರೈಕೆಯಾಗು ತ್ತವೆ: ಅವನ್ನು ಎಷ್ಟೆಷ್ಟು ವಿಜೃಂಭಣೆಯಿಂದ ಆಚರಿಸಿದರೆ ಅಷ್ಟಷ್ಟೂ ಫಲಗಳು ದೊರೆಯು ತ್ತವೆ ಎಂಬ ಅಭಿಲಾಷೆಯಿಂದ ವೃದ್ಧಿಪಡಿಸಿದ. ಸಂಯಮ ಶ್ರದ್ಧಾನಿಷ್ಠೆಗಳ ಮೂಲಕ ಮನುಷ್ಯನ ನಡತೆಯನ್ನು ಶುಚಿಗೊಳಿಸಲು, ನೀತಿ ಸತ್ಯ ಧರ್ಮಗಳ ಕಡೆಗೆ ಅವನ ಮನಸ್ಸನ್ನು ಜಾಗಿಸಲು ಅವು ಅನುಕೂಲವಾದದ್ದು ನಿಜ. ಅಷ್ಟೇ ಅಲ್ಲ, ಹಬ್ಬಗಳು ಕಾಲ ಕ್ರಮೇಣ ಮನರಂಜನೆಯ ಸಾಧನೆಗಳಾಗಿ; ಅನೇಕ ಕಲೆಗಳಿಗೆ ಸ್ಫೂರ್ತಿಸಕ್ತಿಯಾಗಿ, ಸಾಮಾಜಿಕಾವಶ್ಯಕತೆಯಾಗಿ ಪರಿಣಮಿಸಿದ್ದೂ ಉಂಟು. ಒಂದೊಂದು ದೇವರ ಹೆಸರಿನಲ್ಲಿ ಒಂದೊಂದು ಹಬ್ಬ: ಒಂದೊಂದು ಪ್ರದೇಶದಲ್ಲಿ ಒಂದೊಂದು ಹಬ್ಬ: ಒಂದೊಂದು ಹಬ್ಬದ ಸಮಯದಲ್ಲಿಯೂ ಬಳಸುವ ಹಾಡುಗಳು ಲೆಕ್ಕವಿಲ್ಲದಷ್ಟು.[1] ಅಂತೆಯೇ ಗಜ ಗೌರೀವ್ರತ, ಜೀವದಯಾಷ್ಟಮಿ ನೋಂಪಿ, ಕೊಂತಿಪೂಜೆ ಮೊದಲಾದ ವ್ರತಗಳ ಸಮಯದಲ್ಲಿ ಭಕ್ತಿಯ ಕಾಣಿಕೆಯಾಗಿ ಹಾಡುಗಳನ್ನು ಸಲ್ಲಿಸುವುದುಂಟು. ಹಬ್ಬ ಸಾರ್ವ ಜನಿಕವಾದ ಆಚರಣೆಯಾದರೆ, ತಿಥಿ ವ್ರತಾದಿಗಳು ಕೆಲವರಿಗೆ ಅಥವಾ ಒಂದು ಕುಟುಂಬಕ್ಕೆ ಸೀಮಿತವಾದುವು: ಹಬ್ಬದಲ್ಲಿ ಮನರಂಜನೆಗೆ ಅವಕಾಶವಿದ್ದರೆ, ವ್ರತಗಳು ಧ್ಯಾನ ಉಪವಾಸ ಮೊದಲಾದ ನೈಷ್ಠಿಕಾಚರಣೆಗಳಿಗೆ ಮಾತ್ರ ಸೀಮಿತಗೊಳ್ಳುತ್ತವೆ. ಕೊಂತಿಪೂಜೆಯಲ್ಲಿ ಕೊಂತ್ಯಮ್ಮನ ಪದಗಳಂತೂ ಇತರ ವ್ರತಗಳಲ್ಲಿ ಆಯಾಯ ದೇವ

[1] ಜಿ. ಎಸ್. ನಾಗಿರಂಗ ಅವರು ತಮ್ಮ 'ಕರ್ನಾಟಕದ ಜಾನಪದ ಗೀತೆಗಳು' ಗ್ರಂಥದಲ್ಲಿ ಕೆಲವು ಹಬ್ಬದ ಹಾಡುಗಳನ್ನು ಉದ್ಧರಿಸಿದ್ದಾರೆ.

ದೇವತೆಗಳಿಗೆ ಸಂಬಂಧಿಸಿದ ಹಾಡುಗಳು ರೂಢಿಯಲ್ಲಿವೆ. ಕೊಂತ್ಯಮ್ಮನ ಪದಗಳ ವಸ್ತು ಸಂಪೂರ್ಣವಾಗಿ ಮಹಾಭಾರತದ್ದು.[1]

ನಾಗರಿಕತೆಯ ಬೆಳವಣಿಗೆಯಲ್ಲಿ ಬೆಂಕಿಯೆಂತು ಮೂಲ ಕಾರಣವಾಯಿತೋ ಅಂತೆಯೇ ಕೃಷಿಸಾಧನೆ ಮಹಾ ಪ್ರೇರಕಶಕ್ತಿಯಾಯಿತು. ಮೊದಮೊದಲು ಮಾನವ ಸಿಕ್ಕಿದ್ದನ್ನು ತಿಂದು ಮೃಗಗಳಂತೆ ಬಾಳು ಸಾಗಿಸುತ್ತಿದ್ದ. ಬರಬರುತ್ತ ಬೇಟೆ ಅವನ ಜೀವನಯಾಪನೆಗೊಂದು ದಾರಿಯಾಯಿತು. ಪ್ರಾಯಶಃ ಅವನು ಕಂಡುಕೊಂಡ ಪ್ರಪ್ರಥಮ ಜೀವನವೃತ್ತಿ ಎಂದರೆ ಬೇಟೆ. ಒಂದು ವೃತ್ತಿ ಶುರುವಾಯಿತೆಂದರೆ, ಅದಕ್ಕೆ ಬೇಕಾದ ಸಿದ್ಧತೆಗಳು, ಆಯುಧಗಳು ಮತ್ತು ಪರಿಣಾಮಗಳಿಂದಾಗಿ ಸರಳವಾಗಿದ್ದ ಬಾಳು ಸಂಕೀರ್ಣತೆಯ ಕಡೆಗೆ ವಾಲುತ್ತದೆ. ಹಿಂದುಗಡೆಯೇ ಅನೇಕ ಆವಿಷ್ಕಾರಗಳು ಮತ್ತು ಕಲೆಗಳು ರೂಪುಗೊಳ್ಳುತ್ತವೆ. ಬೇಟೆಗೆ ಹೋಗುವಾಗ, ತೂಕದ ಬೇಟೆ ಸಿಕ್ಕಿ ಹಿಂದಿರುಗುವಾಗ ಹರ್ಷೋತ್ಸಾಹ ಮತ್ತು ವಿಜಯೋನ್ಮಾದದ ಫಲವಾಗಿ ಅವರ ಬಾಯಿಂದ ಉದ್ಗಾರಗಳ ರೂಪದಲ್ಲಿ ಹಾಡು ಹೊರಹೊಮ್ಮಿರಬೇಕು. ಕೆಲಸದ ಏಕತಾನತೆಯನ್ನು ನೀಗಲು ಮತ್ತು ಅದನ್ನು ಚುರುಕುಗೊಳಿಸಲು ಅದು ಸಹಾಯಕವಾಗಿರಬೇಕು. ಬೇಟೆಗೆ ತೆರಳುವ ಮುನ್ನ ಕೆಲವು ವಿಧಿಗಳನ್ನಾಚರಿಸುತ್ತ ಆ ಸಮಯದಲ್ಲಿ ಹಾಡನ್ನು ಬಳಕೆಗೆ ತಂದಿರಬೇಕು. ಪ್ರಾಯಶಃ ಅವೇ ಮೊದಲ ಕಾಯಕಗೀತೆಗಳಾಗಿರಬಹುದೆಂದು ತೋರುತ್ತದೆ.

ಬೇಟೆ, ಉಳುಮೆ, ಕಳೆ, ನಾಟಿ, ಬೀಸೋಣ, ಕುಟ್ಟೋಣ, ದೋಣಿಗಾರಿಕೆ, ಗಾಡಿ ಹೊಡೆಯುವುದು, ಏತ ತುಳಿಯುವುದು, ಮೇದರಿಕೆ, ನೇಯ್ಗೆ ಇವೇ ಮೊದಲಾದ ಹತ್ತಾರು ನೂರಾರು ಕಾಯಕಗಳು ಕಾಲಕ್ರಮೇಣ ಚಾಲ್ತಿಯಲ್ಲಿ ಬಂದುವು. ಕಾಯಕಗಳ ಜತೆಯಲ್ಲಿ ಹಾಡುಗಳೂ ಹೊಮ್ಮಿದುವು. ಶ್ರಮಸಂಬಂಧವಾದ ಕೆಲಸಗಳಿಗೂ ಹಾಡಿನ ಧಾಟಿಗಳಿಗೂ ಸಾವಯುವ ಸಂಬಂಧವಿದೆ. ಕೆಲಸದ ಗತಿಸ್ವರೂಪಗಳು ಹಾಡುಗಳ ಧಾಟಿಯನ್ನು ನಿರ್ಧರಿಸುತ್ತವೆ. ಪ್ರತಿಯೊಂದು ಕೆಲಸದಲ್ಲಿಯೂ ಒಂದು ಲಯವುಂಟು; ಹಾಡು ಅದನ್ನನುಸರಿಸುತ್ತದೆ. ಚರಕದ ಹಾಡು ಹಾಗೂ ನಾಟಿಯ ಹಾಡು ಸಹಜವಾಗಿಯೇ ವ್ಯತ್ಯಾಸಗೊಳ್ಳುತ್ತವೆ. ಆಯಾಯ ಕೆಲಸಗಳ ಚಲನವಲನಗಳಿಂದ ಹಾಡಿನ ಗತಿಯನ್ನು ಬೇರ್ಪಡಿಸಲಾಗದು. ಅಷ್ಟೇ ಅಲ್ಲ, ಕೆಲಸಮೊಡನೆ ಹಾಡು ಮೊದಲಾಗುತ್ತದೆ ಮತ್ತು ಮುಕ್ತಾಯಗೊಳ್ಳುತ್ತದೆ. ಕೆಲಸ ಹಾಡಿಗೆ ಸ್ಫೂರ್ತಿ ನೀಡುತ್ತದೆ, ಪ್ರೇರಣೆ ನೀಡುತ್ತದೆ. ಅದಿಲ್ಲವೆಂದರೆ ಹಾಡು ನೆನಪಿಗೆ ಸುಳಿಯುವುದಿಲ್ಲ. ಒಂದು ಪಕ್ಷ ಕೆಲವರು ಕೆಲಸವಿಲ್ಲದಾಗ ಹಾಡಬಹುದಾದರೂ, ಅದು ಕೃತಕವಾಗಿ ನೀರಸವಾಗಿ ಪ್ರಯಾಸಪೂರ್ವಕವಾಗಿ ಸಾಗುತ್ತದೆ. ಅದು ಕಾವೇರಬೇಕಾದರೆ ಕೆಲಸವನ್ನು ಜೋಡಿಸಬೇಕು.

ಈ ವಿವರಣೆಯಿಂದ ಯಾವುದೋ ಕಾಯಕ ಅಸ್ತಿತ್ವದಲ್ಲಿರುವ ತನಕ ಹಾಡುಗಳು ಹೊಸ ಹೊಸದಾಗಿ ಹುಟ್ಟಿಕೊಳ್ಳುತ್ತವೆಂಬುದೂ, ಅದು ಅಳಿದ ಬಳಿಕ ಹಾಡುಗಳು ಮರೆ

[1] ಡಿ. ಲಿಂಗಯ್ಯನವರ 'ಕೊಂತಿಪೂಜೆ'ಯನ್ನು ನೋಡಿ.

ಯಾಗುತ್ತವೆಂಬುದೂ ಸ್ಪಷ್ಟವಾಗುತ್ತದೆ. ಅವುಗಳಲ್ಲಿ ಕೆಲವು ಪರಿವರ್ತಿತ ರೂಪದಲ್ಲಿ ಇತರ ಕಾಯಕಗಳ ಜೋಡಿಯಲ್ಲಿ ಮುಂದುವರಿಯಬಹುದು. ಇಲ್ಲವೆ ಅವುಗಳ ಧಾಟಿ ಕಾಯಕೇತರ ಗೀತೆಗಳಲ್ಲಿ ಪ್ರಕಟವಾಗಬಹುದು. ಎಲ್ಲ ಗೀತೆಗಳಂತೆ ಇಲ್ಲಿಯೂ ಹೆಂಗಸರ ಹಾಗೂ ಗಂಡಸರ ಹಾಡುಗಳು ಪ್ರತ್ಯೇಕವಾಗಿವೆ. ಹೀಗಿರಲು ಕಾರಣ ಅವರು ಕೈಗೊಳ್ಳುವ, ಅವರವರ ಸ್ವಭಾವಕ್ಕನುಗುಣವಾಗಿರುವ ಕಾಯಕಗಳು. ನೂಲುಗಾರಿಕೆಯಲ್ಲಿ ಹೆಂಗಸರದು ಮೇಲುಗೈಯಾದರೆ, ಗಾಡಿ ಹೊಡೆಯುವುದರಲ್ಲಿ ಗಂಡಸರದು ಎತ್ತಿದಕೈ. ಆದ್ದರಿಂದ ಕಥಾಂಶ ಗೇಯಾಂಶಗಳೆರಡರಲ್ಲಿಯೂ ಅವರ ಹಾಡುಗಳು ಭಿನ್ನವಾಗಬಹುದು. ಕಳೆ ನಾಟಿಯಂಥ ಕೆಲಸಗಳನ್ನು ಎರಡು ವರ್ಗದವರೂ ನಡಸಬಹುದು. ಆದರೂ ಹೆಂಗಸರು ಗಂಡಸರು ಪ್ರತ್ಯೇಕವಾಗಿಯೇ ಹಾಡಬಹುದು.

ಬೇಟೆಯ ಸಮಯದಲ್ಲಿಯೇ ಆ ಸಂಬಂಧವಾದ ಗೀತೆಗಳನ್ನು ಹಾಡಬೇಕಾಗಿಲ್ಲ. ಬೇಟೆಗಾರರು ಕಾಡಿನಲ್ಲಿ ತಾವು ಕಂಡ ಸಂಗತಿಗಳನ್ನೂ ತಂತಮ್ಮ ಅನುಭವಗಳನ್ನೂ ಹಾಡಿನ ಮೂಲಕ ಅಭಿವ್ಯಕ್ತಗೊಳಿಸುತ್ತಾರೆ. ಅರಣ್ಯ ಜೀವನದ ಬಗೆಗೆ, ಬೇಟೆಯ ಬಗೆಗೆ ಎಳೆಯರಲ್ಲಿ ಆಸಕ್ತಿ ಹುಟ್ಟಿಸಲು, ಅವರಲ್ಲಿ ಧೈರ್ಯೋತ್ಸಾಹಗಳನ್ನು ತುಂಬಲು ಈ ಹಾಡುಗಳು ತುಂಬ ಅನುಕೂಲವಾಗುತ್ತವೆ. ಅಂದಮೇಲೆ ಎಲ್ಲ ಹಾಡುಗಳು ಕೆಲಸದ ಜತೆಜತೆಗೆ ನಡೆಯಬೇಕಾಗಿಲ್ಲ. ಯಾವ ಕಾಯಕದ ಹಾಡು ಕಾಯಕದ ಜತೆಯಲ್ಲಿಯೇ ಹರಿಯಬೇಕು, ಯಾವುದು ಯಾವಾಗಬೇಕಾದರೂ ನಡೆಯಬಹುದೆನ್ನುವ ಸಂಗತಿ ಆಯಾಯ ಕಾಯಕವನ್ನವಲಂಬಿಸುತ್ತದೆ. ದೋಣಿ ಹಾಡು ಹುಟ್ಟುಹಾಕುವ ಕೆಲಸದೊಂದಿಗೆ ಜರುಗಿದರೆ ಚೆನ್ನು. ಬೇಟೆಹಾಡಿನ ಒಂದು ಮಾದರಿಯನ್ನಿಲ್ಲಿ ಕೊಡಲಾಗಿದೆ:

ಮೆಲುಮೆಲ್ಲನೆ ನಡೆವುದು ಹುಲಿ
ಕಾಡಂಚಿನಲಿ
ಯಾವ ಕೊಂಬೆಯಲವಿತಿಹಳು
ಯಾವ ಮರದಿಂ ಹಾರುವಳು ?
ಪೊಟರೆಯೆ ಮರೆಯವಳಿಗೆ
ಎತ್ತರದಿಂ ದುಮುಕುವಳು
ಒಂದೇ ಹಾರಿಗೆ ಬೇಟೆಯು ದೊರೆವುದು
ಕಾಡಂಚಿನಲಿ.[1]

ಕಾಯಕ ಗೀತೆಗಳಲ್ಲಿ ಸಾಮಾನ್ಯವಾಗಿ ಸಾಮಾಜಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಗತಿಗಳು ಜತೆಗೆ ಭೌಗೋಳಿಕ ಸಂಗತಿಗಳೂ ಪ್ರತಿಫಲನಗೊಳ್ಳುತ್ತವೆ: ಆಯಾಯ ಕಾಯಕದ ಸ್ವರೂಪ ಚರಿತ್ರೆ ಹಾಗೂ ಪ್ರಯೋಜನಗಳ ವಿವರಣೆ ದೊರಕುತ್ತದೆ. ಬೇಟೆಯ ಹಾಡುಗಳು ಅರಣ್ಯಪ್ರದೇಶಗಳಲ್ಲಿ ಮಾತ್ರ ದೊರೆಯುವಂತೆ, ಜೆಸ್ತರ ಹಾಡುಗಳು ಕರಾವಳಿ ಪ್ರದೇಶದಲ್ಲಿ ಹೇರಳವಾಗಿ ಸಿಗುತ್ತವೆ. ಕುರಿಗಾಹಿ ಹಾಡುಗಳು

[1] *Folk Songs of Chhattisgrah* by Verrier Elwin, p. 135.

ಬಯಲು ಸೀಮೆಯಲ್ಲಿ ದೊರೆಯುವಂತೆ ಮಲೆಸೀಮೆಯಲ್ಲಿ ದೊರೆಯುವದಿಲ್ಲ. ರಾಗಿ ಬೆಳೆಗೆ ಸಂಬಂಧಿಸಿದ ಹಾಡುಗಳನ್ನು ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ನಿರೀಕ್ಷಿಸಬಹುದೇ ಹೊರತು ಉತ್ತರ ಭಾರತದಲ್ಲಿ ನಿರೀಕ್ಷಿಸುವಂತಿಲ್ಲ. ಅಂದಮೇಲೆ ಕೆಲವು ಕಾಯಕಗೀತೆಗಳು ಪ್ರಾದೇಶಿಕವಾದುವೆಂದೂ, ಅವು ಪ್ರದೇಶದಿಂದ ಪ್ರದೇಶಕ್ಕೆ ಪ್ರಯಾಣ ಮಾಡುವುದಿಲ್ಲವೆಂದೂ ತಿಳಿಯಬಹುದಾಗಿದೆ.

ಕೈಗಾರಿಕೀಕರಣ ಹಾಗೂ ಯಂತ್ರವಿಜ್ಞಾನದೊಡನೆ ಈ ಎಲ್ಲ ವೃತ್ತಿಗಳು ತಮ್ಮ ಸ್ವರೂಪವನ್ನು ಕಳೆದುಕೊಂಡು, ಹಾಡುಗಳು ಸಹ ಮಾಯವಾಗುತ್ತಿರುವುದೂ, ಹಾಗೆ ಮಾಯವಾಗುವಾಗ, ಕಲಾತ್ಮಕ ಜೀವನ ಮರೆಯಾಗಿ, ಎಲ್ಲೆಲ್ಲಿಯೂ ನೀರಸವಾದ ಯಾಂತ್ರಿಕತೆ ಮೈದೋರುತ್ತಿರುವುದೂ ಮೆಚ್ಚಬಹುದಾದ ಸಂಗತಿಯಲ್ಲ. ಈ ಸಂದರ್ಭದಲ್ಲಿ ಆನಂದ ಕೆ. ಕುಮಾರಸ್ವಾಮಿಯವರು ಇಂಗ್ಲೆಂಡಿನ ಕಸಬು ಹಾಡುಗಳು ಮರೆಯಾದ ಬಗ್ಗೆ ಖೇದದಿಂದ ಬರೆದಿರುವ ಕೆಲವು ಮಾತುಗಳನ್ನಿಲ್ಲಿ ಉದ್ಧರಿಸುವುದು ಸೂಕ್ತವಾಗಿದೆ: "ಕಸಬು ಹಾಡುಗಳ ಸಂಗ್ರಹವೇನೋ ಸಾಗುತ್ತಿದೆ. ಈಗ ಒಂದು ಹಾಡು ಕೈಗೆ ಸಿಕ್ಕಿತೆಂದರೆ ನೂರು ಹಾಡು ಮರೆಯಾಗಿರುವುದು ಕಂಡುಬರುತ್ತಿದೆ. ಇದು ಅತ್ಯಂತ ದುರಂತದ ಸಂಗತಿ. ಕೆಲವು ಕಸಬು ಹಾಡುಗಳು ಅಸ್ತಿತ್ವದಲ್ಲಿದ್ದುವೆನ್ನುವುದಕ್ಕೆ ದಾಖಲೆಗಳಿವೆ. ಆದರೆ ಹಾಡುಗಳು ದೊರೆಯುವುದಿಲ್ಲ. ಯಂತ್ರ ಮತ್ತು ಕೈಗಾರಿಕೆಗಳು ಅವುಗಳನ್ನಳಿಸಿಬಿಟ್ಟಿವೆ. ಅವು ಎಲ್ಲೆಲ್ಲಿ ಈಚೆಗೆ ಮೊಗದೋರಿವೆಯೋ ಅಲ್ಲೆಲ್ಲ ಹಳೆಯ ಹಾಡುಗಳು ಕೇಳಿಸುತ್ತವೆ. ಆದ್ದರಿಂದ ಬೇಸಾಯದ ಹಾಡುಗಳು ಸಮೃದ್ಧವಾಗಿ ಸಂಗ್ರಹಗೊಂಡಿವೆ. ಕಮ್ಮಾರಗಾರಿಕೆ ಇನ್ನೂ ಹಳ್ಳಿಗಳಲ್ಲಿ ಉಳಿದಿವೆಯಾದ್ದರಿಂದ ಅದಕ್ಕೆ ಸಂಬಂಧಿಸಿದ ಹಾಡುಗಳು ಸಾಕಷ್ಟು ಉಳಿದಿವೆ. ರಾಟೆ ಮತ್ತು ಕುಂಬಾರ ಚಕ್ರಗಳ ಜತೆಯಲ್ಲಿ ರಾಟೆ ಹಾಗೂ ಕುಂಬಾರಿಕೆ ಹಾಡುಗಳು ಮಣ್ಣುಗೂಡಿದುವು. ಉಳಿದ ಕಸಬುಗಳಿಗೂ ಇದೇ ಗತಿ ಸಮನಿಸಿದೆ. ನಿನ್ನ ತಲೆಯ ಮೇಲೆ ಯಂತ್ರದ ಬೆಲ್ಟುಗಳು ಕಿವುಡೇಳುವಂತೆ ಗರಗರನೆ ಸುತ್ತುತ್ತಿರುವಾಗ, ಐದು ಸಾವಿರ ಜನ ಕೆಲಸಮಾಡುತ್ತ ಹರಟೆ ಹೊಡೆಯುವಾಗ ಹಾಡು ಇಣುಕಲು ಸಾಧ್ಯವೆ? ಕೈಗಾರಿಕೀಕರಣ ಪ್ರವೇಶಿಸದ ಹಳೆಯ ಸಮಾಜಗಳಲ್ಲಿ ಮಾತ್ರ ಸಂಗೀತ ಮತ್ತು ಕೈಕಸಬುಗಳ ಅವಿಭಾಜ್ಯ ಸಂಬಂಧ ಮುಂದುವರಿಯುತ್ತಿದೆ."[1]

ಬೇಸಾಯ ಮತ್ತು ನೇಯ್ಗೆಯ ಕಲೆಗಳು ಮಾನವ ಸಮಾಜವನ್ನು ಪ್ರವೇಶಿಸಿದ ಕೂಡಲೇ ಸಂಸ್ಕೃತಿ ದಾಪುಗಾಲಿಡಲಾರಂಭಿಸಿತು. ಒಂದಾನೊಂದು ಕಾಲದಲ್ಲಿ ಮಾನವನ ಸಕಲ ಭಾಗ್ಯಗಳಿಗೂ ಇವೆರಡೇ ಆಧಾರಕಾಯಕಗಳಾಗಿದ್ದುವು. ಬೇಸಾಯವನ್ನು ಕಂಡುಕೊಂಡನಂತರ ಅವನು ಇಡೀ ವರ್ಷ ದುಡಿಯುವ ಪಾಡು ತಪ್ಪಿತು. ಉಳಿತಾಯದ ಕಾಲವನ್ನು ಇತರ ಹವ್ಯಾಸಗಳಿಗೆ ಬಳಸಿಕೊಂಡನು. ಬೇಸಾಯ ಕಾರಣವಾಗಿ ಅವನು ನಿಸರ್ಗದ ರಹಸ್ಯವನ್ನು ಭೇದಿಸಲು ಮತ್ತು ಜ್ಞಾನದ ದಿಗಂತಗಳನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಯಿತು. ವಿಜ್ಞಾನದ ಬೆಳವಣಿಗೆಗೂ ಅದೇ ಕಾರಣವಾಯಿತು. ನೇಯ್ಗೆಯಿಂದಾಗಿ

1 Quoted by Devendra Satyarthi in his book *Meet My People*, pp. 65-66.

ಕಲಾಕೌಶಲ ವಿಕಾಸಗೊಂಡಿದ್ದಲ್ಲದೆ, ಯಂತ್ರವಿಜ್ಞಾನ ಉಗಮಗೊಳ್ಳಲು ಸಾಧ್ಯವಾಯಿತು. ಜಾನಪದಸಮಾಜದ ಮೂಲಭೂತ ಕಾಯಕಗಳಂತಿರುವ, ಅವನ ಬದುಕಿನಲ್ಲಿ ಶಾಂತಿ ತೃಪ್ತಿ ಸಮಾಧಾನಗಳು ಮತ್ತು ಧಾರ್ಮಿಕ ಬುದ್ಧಿ ಹರಿಯಲು ಕಾರಣವಾಗಿದ್ದ ಈ ಎರಡು ಕಾಯಕಗಳಿಗೆ ಕೈಗಾರಿಕಾ ಕ್ರಾಂತಿ ಮೃತ್ಯುವಾಯಿತು. ತಮ್ಮ ಸಂತಾನವಂತಿರುವ ವಿಜ್ಞಾನ ಯಂತ್ರ ವಿಜ್ಞಾನಗಳೇ ಅವುಗಳ ಹಾನಿಗೆ ಮೂಲವಾದುವು ಅವುಗಳಿಂದಾಗಿ ಪ್ರಾಚೀನತಮವಾದ ಶ್ರೇಷ್ಠ ಮೌಲ್ಯಗಳೆಲ್ಲ ಮಣ್ಣುಗೂಡಿದುವು.

ಭಾರತ ಇಂದಿಗೂ ಕೃಷಿಪ್ರಧಾನವಾದ ದೇಶವೆಂದು ಗಣನೆಗೊಂಡಿದೆ. ಈ ಮಾತು ಈಗ ಸಂಪೂರ್ಣ ಸತ್ಯವಲ್ಲ. ಇಬ್ಬಂದಿತನ ಅದಕ್ಕೆ ಶಾಪವೂ ಮಾರಕವೂ ಆಗಿದೆ. ಸಂಪ್ರದಾಯ ಮತ್ತು ಆಧುನಿಕತೆಗಳ ಇಕ್ಕಳದಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದೆ. ವಿಜ್ಞಾನ ಮತ್ತು ಯಂತ್ರವಿಜ್ಞಾನಗಳು ಮೆಲ್ಲಮೆಲ್ಲಗೆ ಜನಜೀವನದ ಮೇಲೆ ಧಾಳಿ ಮಾಡುತ್ತಿವೆ. ಆದರೆ ನಿರಕ್ಷರಸ್ಥರ ಕೈಯಲ್ಲಿ ವಿಜ್ಞಾನ ಹಸುಗೂಸುಗಳ ಕೈಯಲ್ಲಿನ ಹರಿತ ಚೂರಿಯಾಗಿದೆ. ಯಂತ್ರೀಕರಣದಿಂದ ನಿರುದ್ಯೋಗ ಸಮಸ್ಯೆ ಭೂತಾಕಾರವಾಯಿತು. ಪರಿಸ್ಥಿತಿ ಪ್ರಕೋಪಕ್ಕೇರುತ್ತದೆಂದೇ ಗಾಂಧೀಜಿ ಯಂತ್ರೀಕರಣವನ್ನು ವಿರೋಧಿಸಿದರು; ಚರಕ ನೇಗಿಲುಗಳನ್ನು ಪುರಸ್ಕರಿಸಿದರು; ವಿಕೇಂದ್ರೀಕರಣವನ್ನು ಪ್ರಶಂಸಿಸಿದರು. ಅವರ ಉಪದೇಶ ಗಾಳಿಯಲ್ಲಿ ತೇಲಿಹೋಯಿತು. ಹೀಗಾಗಿ ಚರಕ ಚಾಪ್ರಟದಲ್ಲುಳಿಯಿತು, ಬಾಳಿನಿಂದ ಮರೆಯಾಯಿತು; ನೇಗಿಲಿನ ಸಂಸ್ಕೃತಿಯೂ ಹಿಮ್ಮೆಟ್ಟುತ್ತಿದೆ.

ರೈತನಾಗಲಿ, ನೇಕಾರನಾಗಲಿ, ಗೊಲ್ಲನಾಗಲಿ, ಕುರುಬನಾಗಲಿ, ಬಡಗಿಯಾಗಲಿ, ಕುಂಬಾರನಾಗಲಿ, ಅವರದು ಕೋಲಾಹಲವಿಲ್ಲದ ಏರಿಳಿತವಿಲ್ಲದ ಪ್ರಶಾಂತವಾದ ಜೀವನ. ಅವರ ಬೇಕು ಬೇಡಗಳು ಕಡಮೆ. ಅವರೆಂದೂ ಕನಸಿನ ಗೋಪುರ ಕಟ್ಟಿದವರಲ್ಲ, ಮುಗಿಲಿಗೆ ಏಣಿ ಹಾಕಿದವರಲ್ಲ, ಕೈಗೆಟುಕದುದಕ್ಕೆ ಬಾಯಾರಿಸಿಕೊಂಡವರಲ್ಲ. ಇದ್ದರೆ ಉಂಡರು ಉಟ್ಟರು; ಇಲ್ಲದಿದ್ದರೆ ಮಲಗಿದರು, ಬತ್ತಲೆ ಇದ್ದರು. ಇಂದು ಉಂಡದ್ದರಲ್ಲಿ ತೃಪ್ತಿಪಡುವಂಥವರು: ನಾಳೆ ಏನೆಂದು ಯೋಚಿಸಿದವರಲ್ಲ. ದುಡಿಮೆ ಅವರ ಬದುಕಿನ ಗುಟ್ಟು. ಹುಟ್ಟು ಸಾವುಗಳ ಬಗೆಗೆ ಹೆಚ್ಚು ತಲೆ ಕೆಡಿಸಿಕೊಂಡವರಲ್ಲ. ಕಷ್ಟ ಬಂತು, ಸಹಿಸಿದರು, ಯಾರನ್ನೂ ಶಪಿಸಲಿಲ್ಲ: ಸುಖ ಬಂತು, ಅನುಭವಿಸಿದರು, ಮೆರೆಯಲಿಲ್ಲ. ಮಳೆ ಬಂದು ಬೆಳೆಯಾದರೆ ಅವನು ಹಿಗ್ಗಿದ: ಬಡಗಿ ಕುಂಬಾರ ಮೊದಲಾದವರಿಗೆ ಕೈ ಕೊಕ್ಕರಿಸದೆ ದಾನಮಾಡಿದ: ಮಳೆ ಬೀಳದೆ ಬರ ಬಂತೆಂದರೆ, ತನ್ನ ಪಾಪಕ್ಕೆ ತನ್ನ ಶಿಕ್ಷೆ ಎಂದು ಸುಮ್ಮನಾದ. ಅವನ ನಡೆನುಡಿ ನೇರ; ಅವುಗಳಲ್ಲಿ ಕೊಂಕು ಬಿಂಕಗಳಿಲ್ಲ, ಮರೆಮೋಸಗಳಿಲ್ಲ. ದುಃಖ ಬಂದರೆ ಅತ್ತು ಬಿಡುತ್ತಾರೆ, ಹರ್ಷವಾದರೆ ನಕ್ಕುಬಿಡುತ್ತಾರೆ, ಕೋಪ ಬಂದರೆ ಮುಗಿಲೆತ್ತರ ಹಾರಾಡುತ್ತಾರೆ. ಭಾವೋದ್ರೇಗ ಅವರ ಮೂಲಗುಣ. ಪಾಪಕರ್ಮದಲ್ಲಿ ಭೀತಿ, ಭಗವದ ಕಾವಲಿಯಿತೆಂದರೆ ಹಸುಮಕ್ಕಳಂತೆ ವರ್ತಿಸುತ್ತಾರೆ. ಅವನ ಕುಟುಂಬ, ಅವನ ಬಡತನದಲ್ಲಿಯೂ ನೀತಿ ಅವನಿಗೆ ಸಹಜವಾಗಿ ಬಂದದ್ದು. ಅದರ ಹೊರಗಡೆ ಹೊಲ ಗದ್ದೆ ತೋಟಗಳು, ಹೆಚ್ಚೆಂದರೆ ಅವನ ಊರೇ ಅವನ ಜಗತ್ತು.

ಯಲಿ, ತಲೆಗಳೇ ಉರುಳಲಿ, ರಾಜ ಹೋಗಿ ರಾಜ ಬರಲಿ, ಗದ್ದುಗೆ ಮುಕುಟಗಳು ಹಾರಿ ಹೋಗಲಿ, ಅಂಗಾರ ಗ್ರಹಕ್ಕೆ ಧಾಳಿ ನಡೆಯಲಿ, ಕಾನೂನು ಹೋಗಿ ಕಾನೂನು ಬರಲಿ, ಬಂಗ್ಲಾ ಉದಿಸಲಿ ವಿಯಟ್‌ನಾಂ ಒಂದುಗೂಡಲಿ, ಕಾರ್ಟರ್‌ನ್ ಗೆಲ್ಲಲಿ ಫೋರ್ಡ್ ಸೋಲಲಿ, ಅಮೆರಿಕನ್ ನೌಕಾಬಲ ಡಿಯೋ ಗಾರ್ಸಿಯಾದಲ್ಲಿಳಿಯಲಿ, ಏನಾದರೂ ಅವನು ತಲೆಗೆ ಹಚ್ಚಿಕೊಳ್ಳುವುದಿಲ್ಲ. ಹೊಸತೇನಾದರೂ ಗೋಚರಿಸಿದರೆ ಅದೆಲ್ಲ ಕಲಿಕಾಲದ ವಿಚಿತ್ರ ಎಂಮುಬಿಡುತ್ತಾನೆ. ಬರ ಬಂದರೂ ಕಂದಾಯ ಕೊಡಬೇಕು, ಬೆಳೆ ಇಲ್ಲದಿದ್ದರೂ ಲೆವಿ ಕೊಡಬೇಕು. ಗೌಡನ ಹಿಂಸೆಯೋ, ಬಂಡವಾಳಗಾರನ ಕ್ರೌರ್ಯವೋ, ಅಧಿಕಾರಿಗಳ ಸುಲಿಗೆಯೋ, ವಿದ್ಯಾವಂತರ ಕೊಳ್ಳೆಯೋ ಯಾವುದಕ್ಕೂ ಅವನೇ ಯಜ್ಞ ಪಶು. ಆ ಹಿಂಸೆಗಳನ್ನೆಲ್ಲ ಮೌನದಿಂದ ಅನುಭವಿಸುತ್ತಾನೆ. ಗುರುಹಿರಿಯರಲ್ಲಿ ಗೌರವ, ದೇವರಲ್ಲಿ ಭಕ್ತಿ ಇವು ಅವರ ಜೀವನಸೂತ್ರಗಳು. ಅವರಲ್ಲಿ ಕೊರಗು ಕೊರತೆ ಕರುಬು ನೋವು ನರಳುಗಳು ಇಲ್ಲವೆಂದಲ್ಲ. ಇದ್ದರೂ ಅವರದು ಒಂದು ರೀತಿಯ ಅನಾಸಕ್ತಿಯೋಗ.

ಕರುಣ ಬಂದರೆ ಕಾಯೊ, ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣ ಬಸವಣ್ಣ । ಶಿವಲಿಂಗ
ಕಡೆತನಕ ಕಾಯೊ ಅಭಿಮಾನ॥

ಗ್ರಾಮೀಣ ಶ್ರೀಸಾಮಾನ್ಯರ ದರ್ಶನದ ಸಾರ, ಬದುಕಿನ ಹಿರಿಮೆ ಈ ತ್ರಿಪದಿಯಲ್ಲಿ ಭಟ್ಟಿಯಿಳಿದಿದೆಯೆಂದು ಹೇಳಬಹುದು. ಈ ಸರಳ ಸುಂದರ ನಿಷ್ಕಳಂಕ ಜೀವನ ಎಲ್ಲ ಜನಪದ ಗೀತೆಗಳಲ್ಲಿ ಸೊಗಸಾಗಿ ಸ್ವಾರಸ್ಯವಾಗಿ ಪ್ರತಿಫಲನಗೊಂಡಿದೆ.

ಈ ಎರಡು ಕಾಯಕಗಳು ಅಂದರೆ ಕೃಷಿ ಮತ್ತು ನೇಯ್ಗೆಗಳು ಇಡೀ ಜೀವನವನ್ನು ಆಕ್ರಮಿಸಿದ್ದುವೆಂದಮೇಲೆ, ಅವುಗಳಿಗೆ ಸಂಬಂಧಿಸಿದ ಭಾವಗೀತೆಗಳು ಅಸಂಖ್ಯವೆಂದೇ ಹೇಳಬೇಕು. ಬೇಸಾಯವೆಂಬುದು ಒಂದು ಕಸಬಲ್ಲ; ಹಲವು ಉಪಕಸಬುಗಳ ಪರಂಪರೆ. ಅದು ಒಂದೆರಡು ದಿನಗಳಲ್ಲಿ ಅಥವಾ ತಿಂಗಳಲ್ಲಿ ಮುಗಿಯುವಂಥದಲ್ಲ. ಅದೊಂದು ಬಹು ದೀರ್ಘಕಾಲದ ಕಾರ್ಯಗತಿ ಅಥವಾ ಸಾಗಣೆ. ಬೆಳಗಿನಿಂದ ಸಂಜೆಯವರೆಗೆ, ಚಳಿಗಾಳಿ ಮಳೆ ಬಿಸಿಲುಗಳೆನ್ನದೆ, ಹಸಿವು ನೀರಡಿಕೆಯೆನ್ನದೆ, ಫಲವನ್ನು ನಿರೀಕ್ಷಿಸದೆ, ಹೆಂಡಿರು ಮಕ್ಕಳೊಡನೆ ನಿರಂತರವಾಗಿ ದುಡಿಯಬೇಕಾದ ರಾಜಕಸಬು. ಹೊನ್ನಾರು ಕಟ್ಟಿದ ದಿನ ದಿಂದ ಮನೆಗೆ ಧಾನ್ಯ ಬರುವತನಕ ಅವನೆಷ್ಟೋ ಮಜಲುಗಳನ್ನು ದಾಟಬೇಕಾಗುತ್ತದೆ. ಉಳುವುದು, ಹಲುಬೆ ಹೊಡೆಯುವುದು, ಬಿತ್ತುವುದು, ಕುಂಟೆಹೊಡೆಯುವುದು, ಕಳೆಕೀಳುವುದು, ನಾಟಿಹಾಕುವುದು, ಕೊಯ್ಯುವುದು, ಮೆದೆಹಾಕುವುದು, ಒಕ್ಕುವುದು, ಗಾಡಿ ಹೊಡೆಯುವುದು, ಇವೆಲ್ಲ ನಾಲ್ಕಾರು ತಿಂಗಳು ಹಿಡಿಯುವ ಕೆಲಸ. ಸುಗ್ಗಿಯೊಂದೇ ಸಮಗ್ರ ಘಟಕವಾಗಿ ಕಂಡರೂ, ಅದರಲ್ಲಿ ಅನೇಕ ಒಳಪಿಡಿಗಳನ್ನು ಗುರುತಿಸಬಹುದು. ಕಣ ಮಾಡುವುದು, ಮೇಟಿ ನಾಟುವುದು, ಒಡ್ಡು ಹಾಕುವುದು, ಹೆಣೆ ಕಟ್ಟುವುದು, ಹುಲ್ಲು ಬಡಿಯುವುದು, ಕಾಳು ತೂರುವುದು, ರಾಶಿ ಮಾಡುವುದು ಇತ್ಯಾದಿ ಹಲವು ಕಾರ್ಯಕ್ರಮಗಳಿರುತ್ತವೆ. ಬೇಸಗೆ, ಮಳೆಯಿಲ್ಲವೆಂದು ಸುಮ್ಮನಿರಲಾದೀತೆ? ಹೊಲ

ಗದ್ದೆಗಳಿಗೆ ಗೋಡು ರಾಶಿ ಹಾಕಬೇಕು, ಗೊಬ್ಬರ ಕೂಡಿಹಾಕಬೇಕು, ಅದಕ್ಕಾಗಿ ಕುರಿ ಮಂದೆ ಕಾಯಬೇಕು. ಹೆಂಗಸರಂತು ಮನೆಗೆಲಸದ ಜತೆಗೆ ಹೊಲದ ಕೆಲಸದಲ್ಲಿಯೂ ಗಂಡನಿಗೆ ನೆರವಾಗಬೇಕು. ಮಕ್ಕಳು ದನ ಕುರಿ ಆಡು ಎಮ್ಮೆಗಳನ್ನು ಮೇಯಿಸಬೇಕು. ನೇಗಿಲಿಗೆ ಹೂಡಿದ ಎತ್ತುಗಳು ಮೆಲುಕು ಹಾಕುತ್ತಿರುವಾಗ, ಬಯಲ ಗಾಳಿಬಿಸಿಲುಗಳಿಗೆ ಮೆಯ್ಯೊಡ್ಡಿ, ತಂಗಳುಣ್ಣುವಾಗ ಮಡದಿಯೊಡನೆ ಸಂಸಾರದ ಸುಖದುಃಖಗಳನ್ನು ಸವಿದುಕೊಂಡು, ಸಂತೃಪ್ತಿಯನ್ನನುಭವಿಸುವ ರೈತನ ಪುಣ್ಯಕ್ಕೆ ಣೆಯೇ ಇಲ್ಲ. ಅವನದು ಅನನುಕರಣೀಯವಾದ ರಸಿಕಜೀವನ. ಒಟ್ಟಿನಲ್ಲಿ ಬೇಸಾಯ ಕೌಟುಂಬಿಕ ಕಾರ್ಯ, ಸಾಮೂಹಿಕ ವೃತ್ತಿ.

ಬೆವರು ಸುರಿಯುವ, ಮೈಮುರಿಯುವ ಕೆಲಸದಲ್ಲಿ ತೊಡಗಿದರೂ ಮೆತ್ತೆಯ ಮೇಲೆ ಮಲಗಿ ಸುಖವಾಗಿ ತಿಂದುಂಡು ಹೊಟ್ಟೆ ಬೆಳೆಸುವ, ತನ್ನ ಮೇಲೆ ಬಂದಿಳಿಕೆಗಳಾಗಿರುವ ಉಂಡಾಡಿಗಳ ಬಗ್ಗೆ ಅವನಿಗೆ ಹೊಟ್ಟೆಕಿಚ್ಚಿಲ್ಲ. ದುಡಿಮೆಯೇ ದೇವರ ಸೇವೆ, ಬೆವರೇ ದೇವರಿಗರ್ಪಿಸುವ ನೈವೇದ್ಯವೆಂದು ತಿಳಿದವನು. ತನಗೆ ಸಾಲದಿದ್ದರೂ ತಾನು ಬೆಳೆದದ್ದನ್ನು ಬೆಳೆಯದವರಿಗೆ ಧಾರಾಳವಾಗಿ ಹಂಚುವ ಲೋಕಬಂಧುವವನು. ದುಡಿಮೆಯ ಆಯಾಸವನ್ನು ಪರಿಹರಿಸಿ, ಮನಸ್ಸಿನ ಕ್ಲೇಶವನ್ನು ನೀಗಿ, ಹೃದಯಾಹ್ಲಾದವನ್ನುಂಟು ಮಾಡುವ ಮಾಧ್ಯಮವೆಂದರೆ ಹಾಡೊಂದೇ. ಅದು ಸಿನಿಮಾ ನಾಟಕಗಳಂತೆ ಅವನಿಗೆ ಶೋಕಿಯ ವಸ್ತುವಲ್ಲ, ಬೇಸಾಯದ ಕೆಲಸ ಸರಾಗವಾಗಿ ಸಾಗಲು ಅತ್ಯವಶ್ಯವಾಗಿ ಬೇಕಾಗಿರುವ ಸ್ಫೂರ್ತಿಶಕ್ತಿ. ಈ ಹಾಡುಗಳ ವಸ್ತು ಗಿಡಗೆಂಡೆ, ಧಾನ್ಯ, ಉಳುಮೆಯ ಸಾಧನಗಳು, ದನಕುರಿ ಮೊದಲಾದ ಕಾಲ್ನಡೆಗಳು, ದೇವರು, ಸತ್ಪುರುಷರ ಜೀವನ, ಇವೇ ಮೊದಲಾದವನ್ನೊಳಗೊಂಡಿರಬಹುದು. ಪೌರಾಣಿಕ ಸಂಗತಿಗಳನ್ನು ಕುರಿತ ಕಥನಗೀತಗಳೂ ಚಾಲ್ತಿಯಲ್ಲಿರುವುದುಂಟು. ಬೇಸಾಯಕ್ಕೆ ಹೊರತಾದ ವಸ್ತುವನ್ನುಳ್ಳ ಗೀತೆಗಳನ್ನು ಹಾಡಬಾರದೆಂದಿಲ್ಲ. ಅವು ಆಯಾಯ ಕೆಲಸಗಳ ಧಾಟಿಗಳಿಗೆ ಹೊಂದಿಕೊಂಡರಾಯಿತು. ಪ್ರಣಯ ಕಟಕಿ ಸರಸ ಸಲ್ಲಾಪ ವಿನೋದ ಹಾಸ್ಯಗಳಿಂದ ಕೂಡಿರುವ ಗೀತೆಗಳಂತು ಹೆಂಗಸು ಗಂಡಸರಿಗೆಲ್ಲ ಬೇಕಾಗುವಂಥವು. ತರುಣರು ತರುಣಿಯರನ್ನು, ವಯಸ್ಸಾದ ಗಂಡಸರು ವಯಸ್ಸಾದ ಹೆಂಗಸರನ್ನು ಚುಡಾಯಿಸುವುದುಂಟು. ಒಟ್ಟಿನಲ್ಲಿ ಅವರ ಬದುಕೇ ಹಾಡಾಗಿ ಹರಿಯುತ್ತದೆ; ಉಸಿರೇ ಗೀತೆಯಾಗಿ ಹೊರಹೊಮ್ಮುತ್ತದೆ. ಅವುಗಳಲ್ಲಿ ಮಣ್ಣಿನ ಸೊಗಡಿದೆ, ಬೆವರಿನ ಸಿನುಗಿದೆ, ಗೊಬ್ಬರದ ಘಾಟಿದೆ, ತೆನೆಯ ಕಂಪಿದೆ, ಹಸುರಿನ ಸೊಂಪಿದೆ, ಅವರೆ ಹುಚ್ಚೆಳ್ಳು ಹತ್ತಿ ಹೂವುಗಳ ಮೆರುಗಿದೆ, ಮುಗಿಲಿನ ಕತ್ತಲೆಯಿದೆ, ಸಗಣಿಂಘು ವಾಸನೆಯಿದೆ, ಕಾಮನಬಿಲ್ಲಿನ ಬಣ್ಣಗಳಿವೆ; ಭಗವಂತನ ಕರುಣೆಯೂ ಇದೆ; ಸಂಸಾರದ ಸಾರವೂ ಇದೆ.

ನಿಜಕ್ಕೂ ಒಕ್ಕಲಿಗ ಸೃಷ್ಟಿಕರ್ತ. ಅವನು ಉತ್ಪತ್ತಿ ಮಾಡುತ್ತಾನೆ, ಉಳಿದವರು ತಿನ್ನುತ್ತಾರೆ. ಅವನ ಕೈ ನಿಂತರೆ, ಸಾಮಾಜಿಕ ಆರ್ಥಿಕ ರಾಜಕೀಯ ಚಟುವಟಿಕೆಗಳು ಮಾತ್ರವಲ್ಲ, ಯಂತ್ರವಿಜ್ಞಾನದ ಆಡಂಬರವೂ ಸ್ಥಗಿತಗೊಳ್ಳುತ್ತದೆ. ಆಲೆಮನೆಗೆ ಹೋಗಿ

ಕಬ್ಬಿನ ಹಾಲು ಕುಡಿಯುವ, ಮುತ್ತಿ ಬಿಸಿಜೆಲ್ಲ ತಿನ್ನುವ, ನಾಲ್ಕು ಜಲ್ಲಿ ಕಬ್ಬು ಹಿಡಿದು ಕೊಳ್ಳುವ ಬರವಸರಿಲ್ಲ; ಕಣಕ್ಕೆ ಹೋಗಿ ಬೊಗಸೆ ಧಾನ್ಯವನ್ನು ಪಡೆಯುವ ಬಳಿಗ್ಗೆಯಲ್ಲಿ ಬಂದವರಿಲ್ಲ. ಅವನ್ನೇ ಇಳಿಹಾಳ ಬೊಮ್ಮಯ್ಯನ ಹಂತಿಯ ಹಾಡೊಂದು ತಿಳಿಸುತ್ತದೆ.

> ಇಳಿಹಾಳ ಬೊಮ್ಮಯ್ಯ, ಹೊಲಗೆಲಸ ಕಾಯಕವ
> ನಲುಮೆಯುಲಿ ಸುಗ್ಗಿದಾಸೋಹ। ಹರಸೇವೆ
> ಸಲಿಸಿಲಿಂಗದೊಳು ಬಯಲಾದ.[1]

ಇಂಥ ಹಂತಿಯ ಹಾಡುಗಳದೇ ವಿಸ್ತಾರವಾದ ಕ್ಷೇತ್ರ. ಗೆಣೆಯ ಗೆಣತಿಯರ ಸ್ಪರ್ಧೆಯ ಹಾಡುಗಳಿರಲಿ, ಧಾನ್ಯಗಳ ಪರಸ್ಪರ ಸಂವಾದ ಮನೋಜ್ಞವಾಗಿದೆ. ಅವರಲ್ಲಿ ವಿಡಂಬನೆ ಯಿದೆ, ರೂಪಕವಿದೆ, ಅಣಕವಿದೆ.

ಬತ್ತ ನುಡಿಯಿತಿಂತು :

> ನೀರು ಹರಿವಗದ್ದೆಯಲ್ಲಿ ಹುಟ್ಟಿದೆ
> ಸಿರಿಯು ಜನರ ಪ್ರೀತಿಯನ್ನು ಗಳಿಸಿದೆ.

ರಾಗಿ ಎದುರು ನುಡಿಯಿತಂತು :

> ಬರವೆ ಬರಲಿ ಬಂಜೆಯಿರಲಿ ನೆಲವದು
> ಬೆಳೆವೆ, ಬಡವನೆನ್ನ ಭಕ್ತ ತಪ್ಪದು
> ದೀನದಲಿತ ಪಾಪಿಗಳಿಗೆ ನಾನೆ ಮುಕ್ತಿಯೀವೆನು.[2]

ಇದೇ ರೀತಿ ಬೇರೆ ಬೇರೆ ಪ್ರದೇಶಗಳಲ್ಲಿ ಇತರ ಧಾನ್ಯಗಳ ಸ್ವಸ್ವರೂಪ ಕಥನ ಗೀತೆಗಳು ದೊರಕಬಹುದು.

ನಾಗರಿಕತೆಯ ಲಾಂಛನವಾಗಿ, ಬೇಸಾಯಕ್ಕಿಂತ ಈಚಿನದಾದ, ಅದಕ್ಕೆ ದುಹಿತೃ ಸ್ಥಾನವಲ್ಲಿರುವ ನೂಲುಗಾರಿಕೆ ಮತ್ತು ನೇಯ್ಗೆಗಳು ಪ್ರಾಚೀನ ಕಾಲದಿಂದ ಗೃಹಕೈಗಾರಿಕೆಗಳಾಗಿವೆ. ಮಾನವನನ್ನು ಅನಾಗರಿಕತೆಯಿಂದ ನಾಗರಿಕತೆಗೆ ಹಠಾತ್ತನೆ ಪರಿವರ್ತಿಸಿದ ಪ್ರಥಮ ಯಂತ್ರ ರಾಟಿ. ನೇಗಿಲು ಗಂಡಸಿನ ಆಯುಧವಾದರೆ ರಾಟಿ ಮತ್ತು ಬೀಸುಕಲ್ಲುಗಳು ಹೆಂಗಸರ ಆಯುಧಗಳು. ನೇಗಿಲಿನಲ್ಲಿ ಪೌರುಷದ ಲಕ್ಷಣಗಳಿದ್ದರೆ, ರಾಟಿ ಬೀಸುಕಲ್ಲುಗಳಲ್ಲಿ ಸ್ತ್ರೀತ್ವದ ಲಕ್ಷಣಗಳೇ ಹೆಚ್ಚು. ಇವೆರಡೂ ಸಂಸಾರದ ಕೇಂದ್ರ ಶಕ್ತಿಗಳು. ಗೃಹಕೃತ್ಯದ ಕಾರುಬಾರುಗಳನ್ನೆಲ್ಲ ಚಾಚೂತಪ್ಪದೆ ಗ್ರಹಿಸಿಕೊಂಡಿರುವ ಶಕ್ತಿಗಳವು. ಸವತಿಮಾತ್ಸರ್ಯ, ಅತ್ತೆಯ ಗಯ್ಯಾಳಿತನ, ಸೊಸೆಯ ರೋದನ, ಮಲತಾಯಿಯ ಪೀಡನೆ, ವಾರಗಿತ್ತಿಯರ ಬಡಿದಾಟ, ತಾಯಿಮಕ್ಕಳ ವಾತ್ಸಲ್ಯ, ಬಡತನದ ಗೋಳು, ಇವೆಲ್ಲವನ್ನು ಕಂಡಿರುವ ಕೇಳಿರುವ ಅದೃಶ್ಯಶಕ್ತಿಗಳವು. ಅವು ಕಂಡ ದೃಶ್ಯಗಳು ಕೇಳಿದ

---

[1] ಕನ್ನಡ ಜಾನಪದ ಗೀತೆಗಳು, ಬಿ. ಎಸ್. ಗದ್ದಗಿಮಠ, ಪುಟ ೧೩೦.

[2] ನಾನು ಚಿಕ್ಕಂದಿನಲ್ಲಿ ಕೇಳಿದ್ದು, ಮರೆತುಹೋಗಿದ್ದು, ನೆನಪಿನಿಂದ ಬರೆದ ಅಪೂರ್ಣ ಪಂಕ್ತಿಗಳು. ನವಣೆಹಾರಕಗಳ ಬಗ್ಗೆಯೂ ಇಂಥವೇ ಸಾಲುಗಳಿವೆ.

ಸಂಗತಿಗಳು ಹಾಡುಗಳಾಗಿ ಅವನ್ನಾಶ್ರಯಿಸಿವ ಹೆಂಗಳೆಯರ ಧಮನಿಧಮನಿಗಳಲ್ಲಿ ಹರಿದು ಬಾಯಿಯ ಮೂಲಕ ಹೊರಹೊಮ್ಮುತ್ತವೆ. ಹಾಡು ಹರಿಯುತ್ತಿದ್ದಂತೆ ಎಳೆಯೂ ಹರಿಯುತ್ತದೆ. ಅಷ್ಟೇ ಅಲ್ಲ, ಅವರು ಅದರೊಡನೆ ಮಾತಾಡುತ್ತಾರೆ, ತಮ್ಮ ಸುಖ ದುಃಖಗಳನ್ನು ತೋಡಿಕೊಳ್ಳುತ್ತಾರೆ; ಅದರಿಂದ ಶಾಂತಿಸಮಾಧಾನಗಳನ್ನು ಪಡೆಯುತ್ತಾರೆ. ರಾಟೆ ಬೀಸುಗಲ್ಲು ಗಾಡಿಯ ಹಾಗೂ ಕುಂಬಾರನ ಚಕ್ರಗಳು ಧರ್ಮಚಕ್ರಕ್ಕೆ ಆಧಾರವೆಂದು ಹೇಳಬಹುದು; ಅವೇ ಮುಂದಿನ ಯಂತ್ರಯುಗಕ್ಕೆ ಬುನಾದಿ ನಿರ್ಮಿಸಿದಂಥವು.

"ಸದಾ ಹೆಂಗಸರ ಸಂಗಾತಿಯಾಗಿದ್ದೂ ಸನ್ಯಾಸಿ; ಗಾಳಿಯ ವೇಗವುಳ್ಳ ಬಲಶಾಲಿಯಾದರೂ ಮುಂದೆ ಹೆಜ್ಜೆಯಿಡದವನು; ಇಡೀ ಜಗತ್ತಿಗೆ ವಸನವನ್ನೊದಗಿಸಿದರೂ ಸದಾ ಬೆತ್ತಲೆಯಾಗಿರುವ ವ್ಯಕ್ತಿ; ಪಂಚಮುಖನಾದರೂ ಏಕಹಸ್ತ."[1] ಇವನಾರು ಗೊತ್ತೆ? ಇವನೇ ಚರಕಾಭಿಧಾನದ ರಾಟೆ. ಈ ನೂಲುಗಾರಿಕೆ ಮತ್ತು ನೇಯ್ಗೆಗಳು ಮನುಷ್ಯನ ಹಣೆಬರಹಕ್ಕೆ ಸಂಕೇತವೆಂದು ಸರೋಜಿನಿನಾಯಿಡು ಹೇಳಿದ್ದುಂಟು. ರಾಟೆಯ ತಯಾರಿಕೆಯೊಂದು ಕಮ್ಮಾರರ ಕಲೆಯಾಗಿತ್ತು; ಅವರ ಕಲೆಗಾರಿಕೆಗೆ ಸಾಕ್ಷಿಯಾಗಿತ್ತು. ಮಾವನ ಮನೆಯಿಂದ ಬಳುವಳಿಯಾಗಿ ಬರುವ ವಸ್ತುಗಳಲ್ಲಿ, ತಂದೆಯಿಂದ ಮಗನಿಗೆ ಪ್ರಾಪ್ತವಾಗಬೇಕಾಗಿದ್ದ ಆಸ್ತಿಗಳಲ್ಲಿ ಅದೂ ಒಂದು. ಅದನ್ನು ವಿಶ್ವಕರ್ಮನೆ ನಿರ್ಮಿಸಿದನೆಂಬ ಪ್ರತೀತಿಯೂ ಇದೆ. ಸಾಮಾನ್ಯರ ಬದುಕನ್ನೆಲ್ಲ ಆವರಿಸಿಕೊಂಡಿದ್ದ ಚರಕ ಆರಾಧ್ಯ ವಸ್ತುವಾದದ್ದರಲ್ಲಿ ಆಶ್ಚರ್ಯವಿಲ್ಲ.

ರಾಟೆ ಮುಖ್ಯವಾಗಿ ಸ್ತ್ರೀಯರ ಆಸ್ತಿ. ನೂಲುವವರೆಲ್ಲ ಸ್ತ್ರೀಯರೇ. ನೇಯುವುದು ಪುರುಷರ ಗೆಯ್ಮೆ. ಅದರಲ್ಲಿಯೂ ಸ್ತ್ರೀಯರ ಸಹಾಯ ಅವಶ್ಯವಾಗುತ್ತದೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಕೆಲವು ಮಾತುಗಳನ್ನು ನೆನೆಯಬಹುದು: "ಅನಾದಿ ಕಾಲದಿಂದ ಸ್ತ್ರೀಪುರುಷರ ನಡುವೆ ಶ್ರಮವಿಭಜನೆ ಇದ್ದೇ ಇದೆ. ಈವ್ ನೂತರೆ, ಆದಂ ನೇಯ್ದ. ಈ ವಿಭಜನೆ ಇಂದೂ ಮುಂದುವರಿಯುತ್ತಿದೆ. ಗಂಡು ನೂಲುಗಾರರು ವಿರಳ. ನೂಲುಗಾರಿಕೆ ಸ್ತ್ರೀಯರ ವಿಶಿಷ್ಟ ವೃತ್ತಿಯಾಗುಳಿಯುತ್ತದೆಂದು ಅನುಭವದಿಂದ ಗೊತ್ತಾಗುತ್ತದೆ. ಈ ಅನುಭವದ ಹಿಂದೆ ಒಳ್ಳೆಯ ಕಾರಣವೂ ಇದೆ. ನೂಲುಗಾರಿಕೆ ನಿಧಾನವೂ ಶಾಂತಿಯುತವೂ ಆದ ಸಾಧನೆ. ಹೆಂಗಸು ತ್ಯಾಗವೇ ಮೂರ್ತಿವೆತ್ತ ವ್ಯಕ್ತಿ. ಲಿಂಗಸಮತೆ ಅನಿವಾರ್ಯವಾದರೂ ಉದ್ಯೋಗಸಮತೆ ಅನಿವಾರ್ಯವಾಗಬೇಕಾಗಿಲ್ಲ."[2]

ಆದ್ದರಿಂದ ರಾಟೆ ಹಾಡುಗಳೆಂದರೆ ಪ್ರಧಾನವಾಗಿ ಹೆಂಗಸರ ಹಾಡುಗಳು. ಚಳಿಗಾಲ ಮತ್ತು ಮಳೆಗಾಲದಲ್ಲಿ ರಾಟೆ ಕೆಲಸ ಭರಾಟೆಯಿಂದ ನಡೆಯುತ್ತದೆ. ಬೇಸಗೆ ತೀವ್ರವಾಗಿರುವ ಕಡೆ ದಾರ ಸರಿಯಾಗಿ ಬರುವುದಿಲ್ಲವಾದ್ದರಿಂದ, ಅದರ ಗತಿ ಮಂದವಾಗು

---

[1] A Panjabi Riddle quoted by Devendra Satyarthi in his book *Meet My People*, p. 47.

[2] ಅದೇ, ಪುಟ 49.

ತ್ತದೆ. ಮನೆಯ ಹೆಂಗಸರೆಲ್ಲರೂ, ಕೆಲವು ವೇಳೆ, ಬೇರೆ ಮನೆಯ ಹೆಂಗಸರು ಒಂದು ಕಡೆ ಕೂಡಿ ಚರಕಗಳನ್ನು ನಡಸುವುದುಂಟು. ಅನೇಕ ಜನ ಒಂದೆಡೆ ಸೇರಿದಾಗ ರಾಟೆಗಳು ಸ್ಪರ್ಧೆಯಿಂದ ತಿರುಗುತ್ತವೆ; ಜತೆಗೆ ಸಂಗೀತ ಸ್ಪರ್ಧೆಯೂ ನಡೆಯುತ್ತದೆ. ಕಿರಿಯರಿಗಂತು ಅದೊಂದು ಸಂಗೀತ ಶಾಲೆಯಾಗುತ್ತದೆ. ಅಷ್ಟೇ ಅಲ್ಲ, ಅವರಿಗದೊಂದು ಸರ್ವಶಿಕ್ಷಣ ಕೇಂದ್ರವಾಗುತ್ತದೆ. ಒಬ್ಬೊಬ್ಬರು ಒಂದೊಂದು ಹಾಡನ್ನು ಪರ್ಯಾಯವಾಗಿ ಹೇಳುವಾಗ ಮನೋರಂಜಕತೆ ಹಲವು ಮಡಿಯಾಗುತ್ತದೆ. ಮಾದರಿಗೆಂದು ಪಂಜಾಬೀ ಹಾಡೊಂದನ್ನಿಲ್ಲಿ ಭಾಷಾಂತರಿಸಿದೆ:

ಕೇಳು ಸೂರ್ಯನೆ ಕೇಳು ಚಂದ್ರನೆ
ಉರುಳುತಿವೆ ಎಡೆಬಿಡದೆ ಕಣ್ಣೀರು
ಸುಖದಲದ್ದಿರೆ ಬಾಹ್ಯ ಜಗವೆಲ್ಲ
ನೂಲುತಿರುವೆನು ಕಟ್ಟಳಲಕತೆಯ[1]

ಇದು ಅತ್ತೆ ಮನೆಯ ಸೊಸೆಯಳಲಾದರೆ, ಹೊಸದಾಗಿ ಮದುವೆಯಾದ ಮತ್ತು ಆಗಲಿರುವ ಹೆಣ್ಣಿನ ಮನಸ್ಸೇ ಬೇರೆ. ಆ ಮನಸ್ಸೆಲ್ಲ ಕನಸಿನಿಂದ ತುಂಬಿರುತ್ತದೆ. ಕನಸಿನಲ್ಲೆಲ್ಲ ಕೈಹಿಡಿದ ಗಂಡನ ಮತ್ತು ಭಾವೀಪತಿಯ ಚಿತ್ರ ಹೊರತು ಬೇರೊಂದಿಲ್ಲ. ಆ ಚಿತ್ರವನ್ನು ನೆನೆದು ಹಸನ್ಮುಖಿಯಾಗುತ್ತಾಳೆ, ಉಬ್ಬುತ್ತಾಳೆ, ನಲಿಯುತ್ತಾಳೆ. ಆ ಆನಂದದ ಭರದಲ್ಲಿ ಚರಕದ ವೇಗ ಯಾಂತ್ರಿಕವಾಗಿಯೇ ತೀವ್ರವಾಗುತ್ತದೆ; ಕೈ ಚುರುಕಾಗುತ್ತವೆ. ಸುತ್ತಣ ಜನನನ್ನು ಸಹ ಮರೆತು ಹಾಡು ತುಟಿಯಿಂದ ಧುಮುಕುತ್ತದೆ:

ಕಂಡೆನವರನು ಕನಸಿನಲಿ
ಕಣ್ತೆರೆದಾಗ ಕಾಣಲಿಲ್ಲ
ಆರಿಸಿ ನಿಮ್ಮಯ ಪಾದ ಧೂಳಿಯ
ಎದೆಯೊಳಗೆ ಬಚ್ಚಿಡುವೆನು

ಬರುವನು ತಿಂಗಳು ದಿನದಿನವು
ನನ್ನೊಲವು ಬಾಡಿರಲು ತಪ್ಪದುವೆ
ಧೂಳಿಯ ಮುಗಿಲು ಕವಿದಿರೆ ದಿಟ್ಟಿಯ
ನಲ್ಲನ ಚಿತ್ರ ಮರೆಯಾಗುವುದು
ಪತ್ರವಿಪ್ಪತ್ತು ಬಂದುವು ನಿಮ್ಮಿಂದ
ಬರಲಿಲ್ಲ ಬಪ್ಪೆನೆನ್ನುವ ಪತ್ರ
ಹಣ್ಣಿನ ಗಿಡದಿ ಪರಾಗವಣೆಯಿದೆ
ಎದೆದೊರೆ ಬರಲಿಲ್ಲವಿನ್ನೂ[2]

ಹೆಣ್ಣಾಗಲಿ ಗಂಡಾಗಲಿ ಐದು ವರ್ಷ ತುಂಬುತ್ತಿರುವಾಗಲೇ ದುಡಿಮೆಗೆ ಕೈಮೈ ಹೆಗಲು ಕೊಡಬೇಕು. ಮಣ್ಣು ಸೇರುವತನಕ ಅದು ತಪ್ಪಿದ್ದಲ್ಲ. ಅದರೂ ಅವಳು ದುಡಿಮೆಯಲ್ಲಿ

[1] ಅದೇ, ಪುಟ 50.

[2] ಅದೇ, ಪುಟ 60.

ಸುಖ ಕಾಣುತ್ತಾಳೆ. ಅಸ್ಸಾಮಿ ಹುಡುಗಿಯೊಬ್ಬಳ ಪ್ರಣಯಾಭೀಪ್ಸೆಯನ್ನು ಮುಂದಿನ ಸಾಲುಗಳಲ್ಲಿ ಗುರುತಿಸಬಹುದು :

ಮುಗುವುತನದಲಿ ಕಾಯ್ದಿ ಗೋವ್ಗಳನು
ಕುಳಿತು ಮುಗ್ಗದ ಮುಂದೆ ಬಾಲ್ಯದೊಳು
ಲಾಳಿಯನೆಸೆದೆನೆಡಬಲಕೆ ಬಿಸದೆ
ನಲ್ಲನೊಲ್ಮೆಯ ಕರೆಗೆ ಕಾದಿಹೆನು[1]

ಜೈತ್ಯಯಂತ್ರಗಳ ಧಾಳಿಯಿಂದ ರಾಟೆಗಳೆಲ್ಲ ಮೂಲೆಗುಂಪಾದುವು; ಅಷ್ಟು ಮಾತ್ರವಲ್ಲ, ಅವುಗಳ ಅವಶೇಷ ಸಹ ಉಳಿದಿಲ್ಲ. ಅಂತೆಯೇ ಅನೇಕ ಕಡೆ ಹಾಡುಗಳ ಕುರುಹುಗಳೂ ಕಾಣುವಂತಿಲ್ಲ. ಆ ರಸಿಕತೆಯ ತುಂಬುಬಾಳು ಇನ್ನೆಲ್ಲಿ ? ಇದು ಕಾಲಚಕ್ರದ ಗತಿ !

ಕುರುಬ ಕುಂಬಾರ ಗೊಲ್ಲ ಕಮ್ಮಾರ.ಅಗಸ ಬೆಸ್ತ ಮೊದಲಾದವರ ಹಲವು ವೃತ್ತಿಗಳಿಗೆ ಸಂಬಂಧಿಸಿದ ಹಾಡು ಇಲ್ಲದಿಲ್ಲ. ಬೆಸ್ತರ ವೃತ್ತಿಯಂತು ಅಪಾಯಕಾರಿಯಾದದ್ದು : ಅಷ್ಟೇ ಅಲ್ಲ, ದಿನಗಟ್ಟಳೆ ಅವರು ಚಳಿ ಮಳೆ ಎನ್ನದೆ ಬಿರುಗಾಳಿ ಎನ್ನದೆ ಪ್ರವಾಹ ದೊಡನೆಯೋ ಕಡಲ ಅಲೆಗಳೊಡನೆಯೋ ಹೋರಾಡಬೇಕು. ಹೋರಾಟದ ಬೇಸರಕ್ಕೆ ಮದ್ದೆಂದರೆ ಹಾಡು. ಕಲ್ಲೆತ್ತುವಾಗ ಮರವೆತ್ತುವಾಗ ಶ್ರಮಜೀವಿಗಳ ಉತ್ಸಾಹವನ್ನು ಕೊನರಿಸುವ ಹಾಡುಗಳೂ ಉಂಟು. ಅವುಗಳಲ್ಲಿ ಸಾಹಿತ್ಯಾಂಶ ಇಲ್ಲವೇ ಇಲ್ಲ. ಎತ್ತುವ ಕ್ರಿಯೆಯೊಡನೆ ಮೇಳವಾಗುವ ಪ್ರಾಸಬದ್ಧವಾದ ನಾದವೇ ಮುಖ್ಯ ಶ್ರಮಪರಿಹಾರ, ಮನೋರಂಜನೆ, ಕ್ರಿಯಾತೀವ್ರತೆ, ಜೀವನ ಶಿಕ್ಷಣ, ಇವು ಎಲ್ಲ ಕಾಯಕಗೀತೆ ಗಳಿಂದೊದಗುವ ಫಲೈಶ್ವರ್ಯ.

ಗೀತಾಪ್ರಕಾರಗಳಲ್ಲಿ ಒಗತನದ ಹಾಡು ಅಥವಾ ಸಂಸಾರಗೀತೆಗಳು ಬಹುವ್ಯಾಪಕ ವಾದುವು, ಅತ್ಯಂತ ರಮಣೀಯವಾದುವು ಹಾಗೂ ಶೀಘ್ರ ಪರಿಣಾಮಕಾರಿಯಾದುವು ಎಂದು ಧಾರಾಳವಾಗಿ ಹೇಳಬಹುದು. ಕಾಲಮಾನದ ದೃಷ್ಟಿಯಿಂದ ಸಂಸಾರವ್ಯವಸ್ಥೆ ಕೃಷಿನಾಗರಿಕತೆಗಿಂತ ಬಹು ಪ್ರಾಚೀನವಾದುದು. ಆದರೆ ಅದು ಕೃಷಿನಾಗರಿಕತೆಯೊಡನೆ ಸಂಲಗ್ನಗೊಂಡನಂತರ ಪೂರ್ಣವಾಗಿ ಫುಲ್ಲವಿಸಿ, ಮುಗಮುಗಿಸಲಾರಂಭಿಸಿತು ; ಜಗತ್ತಿನ ಸಕಲ ವ್ಯವಹಾರಗಳಿಗೂ ಅದೇ ಸ್ಫೂರ್ತಿಶಕ್ತಿ. ಮಾನವನ ಸುಖದುಃಖಗಳಿಗೆಲ್ಲ ಅದೇ ಕಾರಣ. ಜಗತ್ತಿನ ಪ್ರಗತಿಗೆ ಅದೆಂತು ಕಾರಣವಾಯಿತೋ, ಮಾನವನ ಮಾನವೀಯ ಗುಣಗಳ ವಿಕಾಸಕ್ಕೂ ಅದೇ ನಿಮಿತ್ತವಾಯಿತು. ಅವನಲ್ಲಿಯ ಆಸುರೀಗುಣಗಳು ದೈವೀ ಗುಣಗಳಾಗಿ ಪರಿವರ್ತನೆ ಹೊಂದುವಲ್ಲಿ ಅದು ಮಹತ್ತರ ಪಾತ್ರ ವಹಿಸಿದೆ. ಅವನನ್ನು ಅನಾಗರಿಕತೆಯಿಂದ ಸಂಸ್ಕೃತಿಯ ಕಡೆಗೆ ಹೊರಳಿಸಿದ್ದೇ ಅದು. ಒಗತನವೊಂದು ಸಣ್ಣ ಮಾರು. ತಂದೆ ತಾಯಿ ಅಣ್ಣ ತಂಗಿ ಅಜ್ಜ ಅಜ್ಜಿ ಗಂಡ ಹೆಂಡತಿ ಮಾವ ಅಳಿಯ ಸವತಿ ವಾರಗಿತ್ತಿ ಅತ್ತಿಗೆ ನಾದಿನಿ ಬಂಧುಬಳಗ, ಇವರೆಲ್ಲ ಸೇರಿ ಅದೊಂದು ಸಣ್ಣ ಪ್ರಪಂಚ ವಾಗುತ್ತದೆ. ಗಂಡಹೆಂಡತಿ ಮಕ್ಕಳು ಸೇರಿ ಒಂದು ಸಂಸಾರ ಅಥವಾ ಕುಟುಂಬವಾಗ

1 BIHU *Songs of Assam* by P. Goswami, p. 36.

ಬಹುದು; ಆಫ್ರಿಕಾದಲ್ಲಿರುವಂತೆ ಗಂಡ ಮತ್ತು ಅವನ ಅನೇಕ ಹೆಂಡಿರು, ಮಕ್ಕಳು ಸೇರಿ ಒಂದು ಕುಟುಂಬವಾಗಬಹುದು; ಹಿಂದೆ ಭರತಖಂಡದಲ್ಲಿದ್ದಂತೆ ಅವಿಭಕ್ತ ಕುಟುಂಬವಿರಬಹುದು.

ಕೈಗಾರಿಕೀಕರಣ ಮತ್ತು ವಿಜ್ಞಾನಗಳ ಪ್ರಾಬಲ್ಯದಿಂದಾಗಿ ಜಗತ್ತಿನಲ್ಲೆಲ್ಲ ಸಂಸಾರದ ಕಲ್ಪನೆ ಹಾಗೂ ಸ್ವರೂಪಗಳು ವ್ಯತ್ಯಾಸಗೊಳ್ಳುತ್ತಿವೆ. ಪಾಶ್ಚಾತ್ಯರಲ್ಲಂತು ಸಂಸಾರ ಸಹಕಾರಸಂಘ ಅಥವಾ ವಾಣಿಜ್ಯ ಕಂಪೆನಿಯ ಸ್ವರೂಪವನ್ನು ಪಡೆದಿದೆ. ಪಾಶ್ಚಾತ್ಯ ಪ್ರಭಾವದಿಂದಾಗಿ ಇಲ್ಲಿಯ ಕುಟುಂಬ ವ್ಯವಸ್ಥೆ ಶಿಥಿಲಗೊಳ್ಳುತ್ತಿದೆ. ಅದರ ಬಗೆಗಿನ ಹಿಂದಿನ ಪವಿತ್ರಭಾವನೆ ಲುಪ್ತವಾಗಿದೆ. ತಂದೆ ಸಂಜೆ ಮನೆಗೆ ಬರುವ ಹೊತ್ತಿಗೆ ಮಕ್ಕಳು ಮಲಗಿರುವುದರಿಂದ, ಅವನು ಬೆಳಗ್ಗೆ ಮನೆ ಬಿಡುವ ಹೊತ್ತಿಗೆ ಅವರು ಮಲಗಿರುವುದರಿಂದ, ಅಷ್ಟೇ ಅಲ್ಲ, ಅವರನ್ನು ವಿದ್ಯಾರ್ಥಿನಿಲಯಗಳಿಗಟ್ಟುವುದರಿಂದ, ತಂದೆಮಕ್ಕಳ ಹೃತ್ಸಂಬಂಧ ಬಿರುಕುಗೊಳ್ಳುತ್ತಿದೆ. ಅದೂ ಇರಲಿ, ಗಂಡಹೆಂಡಿರು ದಿನಕ್ಕೊಂದು ಗಂಟೆ ಒಂದು ಕಡೆ ಕುಳಿತು ಹರಟೆ ಹೊಡೆಯುವಷ್ಟು ವ್ಯವಧಾನವಿಲ್ಲ. ನಾಗರಿಕತೆಯ ವೈಪರೀತ್ಯದಿಂದಾಗಿ ಆದಿಮಾನವ ಯುಗದ ಸಾಂಸಾರಿಕ ಮೌಲ್ಯಗಳು ಹಿಮ್ಮರಳುವಂತಿವೆ. ಇಷ್ಟಾದರೂ ಗ್ರಾಮೀಣ ಕುಟುಂಬ ಪದ್ಧತಿಯ ಮೂಲಸ್ವರೂಪವಳಿದಿಲ್ಲ; ಅದರ ತಳಹದಿ ಶಿಥಿಲಗೊಂಡಿದ್ದರೂ, ಸೌಧ ಜೀರ್ಣವಾದಂತೆ ತೋರಿದರೂ ಇನ್ನೂ ಕೆಲವು ದಿನ ಅದು ಬಾಳಬಹುದಾದ ಸೂಚನೆಗಳು ಕಂಡುಬರುತ್ತಿವೆ. ಮುಂದಿನ ದಿನಗಳಲ್ಲಿ ಆದರ್ಶ ಸಂಸಾರದ ಆದರ್ಶಗಳನ್ನೂ ಮಾಧುರ್ಯಪರಿಮಳಗಳನ್ನೂ ಕಾಣಬೇಕೆನ್ನುವವರು ಜಾನಪದ ಗೀತೆಗಳಿಗೆ ಶರಣು ಹೋಗಬೇಕಾಗುತ್ತದೆ. ಜಾನಪದಗೀತೆಗಳು ಗತಕಾಲದ ಸಂಸಾರ ವೈಭವದ ಮ್ಯೂಸಿಯಮ್ಮುಗಳಾಗುಳಿಯುವ ಕಾಲ ಸನ್ನಿಹಿತವಾಗುತ್ತಿದೆ.

ಸಂಸಾರವೆಂದ ಕೂಡಲೇ ಮೊದಲು ನೆನಪಿಗೆ ಬರುವಂಥ ವ್ಯಕ್ತಿಗಳು ಗಂಡಹೆಂಡಿರು. ಸಂಸಾರದ ಆರೋಗ್ಯಾನಾರೋಗ್ಯಗಳು ಅವರ ಬಾಂಧವ್ಯದ ಸರಸ ವಿರಸಗಳನ್ನವಲಂಬಿಸುತ್ತವೆ. ಗಂಡಹೆಂಡಿರ ಹೃದಯಗಳನ್ನೊಂದುಗೂಡಿಸುವ ಪರಮ ಮಾಂತ್ರಿಕ ಶಕ್ತಿಯೇ ಪ್ರೇಮ. ಅವರ ಪ್ರೇಮ ರೈಲು ಕಾಲೇಜುಗಳಲ್ಲಿ ಮೊಳೆತು, ಸಿನಿಮಾ ನಾಟಕಗಳಲ್ಲಿ ವೃದ್ಧಿಗೊಂಡು, ಹೋಟಲುಗಳಲ್ಲಿ ಹ್ರಾಸಗೊಳ್ಳುವಂಥದಲ್ಲ. ಪೂರ್ವಪರಿಚಯ ಪೂರ್ವಸಿದ್ಧತೆಗಳೆಂಬ ಆಧುನಿಕ ಕಲ್ಪನೆಯ ಪ್ರಣಯ ಪ್ರಕರಣಗಳ ಕೋಲಾಹಲವಿಲ್ಲದೆಯೇ, ಸರಸ ಸಲ್ಲಾಪ ಶಬ್ದಾಡಂಬರಗಳ ಅಬ್ಬರವಿಲ್ಲದೆಯೇ, ತಂದೆತಾಯಿಯರ, ಅವಿಭಕ್ತ ಕುಟುಂಬದ ಸಂಯಮದ ವಾತಾವರಣದಲ್ಲಿ ಅವರ ಪ್ರೇಮ ಮೌನವಾಗಿ ನಿಶ್ಚಲವಾಗಿ ಸ್ಥಿರವಾಗಿ ಬಲಿಯುವಂಥದು; ಅನೇಕ ಕಷ್ಟಕ್ಲೇಶಗಳ ಹಾಗೂ ಕಿರುಕುಳಗಳ ಮೂಸೆಯಲ್ಲಿ ಬೆಂದು ಕಾಂತಿಗೊಳ್ಳುವಂಥದು, ಉಜ್ವಲಗೊಳ್ಳುವಂಥದು. ಅನೇಕ ವೇಳೆ ಆ ಪ್ರೇಮಪಥ ನಿಷ್ಕಂಟಕವಾದದ್ದೆಂದು ಹೇಳುವಂತಿಲ್ಲ. ಕಂಟಕಮಯವಾದದ್ದರಿಂದಲೇ ಅದು ತ್ಯಾಗ ಸಹನಶೀಲಗಳ ಬೆಳವಣಿಗೆಗೆ ಅನುಕೂಲವಾಗಿದೆ. ಪ್ರೇಮವರ್ಣನೆಯಲ್ಲಿ ಕವಿಸಮಯವಲ್ಲದ, ಶಿಷ್ಟಕಾವ್ಯಗಳಲ್ಲಿ ಕಾಣಲಾಗದ ನೂತನ ರೂಪಕೋಪಮೆ ಪ್ರತಿಮೆ

ಗಳು ಸಹಜವಾಗಿ ಬರುತ್ತವೆ. ಅಲ್ಲಿ ಬಳಸುವ ಭಾಷೆ ಹಲವು ವೇಳೆ ಸಾಂಕೇತಿಕವಾಗುವುದೂ ಉಂಟು. ಬಹು ಜನಪ್ರಿಯವಾದ ಭಾವನಾದಿನಿಯರ ಪ್ರಣಯ ಕಥೆಯೇ ಸಾಂಕೇತಿಕತೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಭಾವನ ಸಂಪರ್ಕದಿಂದ ನಾದಿನಿಯ ಮುಖ ಮೈಗಳಲ್ಲಿ ಹೊಸ ರಂಗು ಬಂದಿದೆ. ಈ ರಂಗನ್ನು ಬೇರೆ ಹೆಂಗಸರಿಂದ ಬಚ್ಚಿಡಲು ಸಾಧ್ಯವಿಲ್ಲ. ಅಕ್ಕ ತನ್ನ ಸಂಶಯವನ್ನು ವ್ಯಕ್ತಪಡಿಸಿದಾಗ ತಂಗಿ ಕೊಡುವ ಉತ್ತರವಿದು:

ನಿಜಗೆಂಪು ಎಂದು ಗಜಗೋಪುರಗೊಡದಿರೆ
ವಿಜಯನಗರದ ಅರಿಸಿನವ ಮಿಂದಿದಿನಿ
ನಿಜವಾಗಿ ಕಾಣೆ ಹಿರಿಯಕ್ಕ[1]

ಹೆಣ್ಣಿನ ನೆರೆತಪ್ಪೊಂದು ಸಹಜಕ್ರಿಯೆಯಾದರೂ, ಅವಳ ದೇಹದಲ್ಲಿ ಕಣ್ಣುಕುಕ್ಕುವ ಮಾರ್ಪಾಡುಗಳಾಗಿ, ಅವಳ ಬಾಳಿನಲ್ಲಿ ಹೊಸ ತಿರುವಿಗೆ ನಾಂದಿಯಾಗುತ್ತದೆ; ಇದ್ದಕ್ಕಿದ್ದಂತೆ ಅವಳ ದೇಹದಲ್ಲಿ ಮನ್ಮಥನ ಆಯುಧಗಳು ಕಾಣಿಸಿಕೊಳ್ಳುತ್ತವೆ. ಜಾನಪದ ಕವಿಯ ಕಣ್ಣಿಗೆ ಅವಳು ಹೇಗೆ ಕಾಣಿಸಿಕೊಳ್ಳುತ್ತಾಳೆನ್ನುವುದನ್ನು ಗಮನಿಸಬಹುದು.

ಕೆಂಪು ಹೂ
ಅರಳಿದೆ
ಕೊಳದ ದಡ
ಒಡೆದಿದೆ
ನಿಂಬೆಹಣ್
ಮಾಗಿದೆ
ಮೆದು ಗೋಧಿರೊಟ್ಟಿ
ಊಟಕಣಿಯಾಗಿದೆ[2]

ಅವಳನ್ನು ನೋಡಿದಾಗ ಹಳ್ಳಿಯ ಯಾವ ತರುಣನಿಗಾದರೂ ಮೈ ಜುಮ್ಮೆನ್ನದಿರದು. ದಿನದಿನವೂ ಅವಳಿಗೆ ಅವರ ದಿಟ್ಟಿಪೂಜೆ ಸಲ್ಲುತ್ತದೆ; ಅವರು ನಿದ್ದೆಯನ್ನು ಬಲಿಗೊಡುತ್ತಾರೆ; ಊಟಪಾಟಗಳನ್ನು ತ್ಯಜಿಸುತ್ತಾರೆ. ಒಂದಲ್ಲ ಒಂದು ದಿನ ಅವಳು ಅವರಲ್ಲೊಬ್ಬನಿಗೆ ದಕ್ಕುತ್ತಾಳೆ. ಅವನಿಗವಳು ಕಾಣಿಸುವ ಬಗೆ ಹೇಗೆ?

ಮಾಗಿದ ನಿಂಬೆಯನವಳಾ ಮರದಲಿ ಕಂಡೂ
ಹಸಿವನು ತಡೆವನದೆಂತು?
ಕೀರನು ಕೊಟ್ಟನು ನೋಡುತಲವುಗಳ
ಅವಳಾ ಹೊಟ್ಟೆಯ ತುಂಬಿದನದರಿಂ[3]

---

1 ಸಿ.ಪಿ.ಕೆ.ಯವರ 'ಜಾನಪದ ಸರಸ್ವತಿ' ಗ್ರಂಥದಲ್ಲಿ ಬರುವ 'ಜನಪದ ಕಾವ್ಯದಲ್ಲಿ ಭಾವನಾದಿನಿಯರ ಎರಡು ಪ್ರಸಂಗಗಳು' ಎಂಬ ಸೊಗಸಾದ ಲೇಖನವನ್ನೋದಿ ವಿವರಗಳನ್ನರಿಯಬಹುದು.

2 *Folk Songs of Chhattisgarh*, by Verrier Elwin, p. 15.

3 *Folk Songs of the Maikal Hills* by Elwin and Hiwale, p. 116.

ಇಂತೆಯೇ ಬಸಿರಿ ಹಾಡುಗಳೂ ಉಂಟು.

ತುಂಬು ತಿಂಗಳು ಮೂಡಿದೆ
ನನ್ನ ಮೈತಲೆ ಮಡಿಯಿದೆ
ಬಾವಿ ಬಳಿ ಹೋಗುವೆನು ನಾನು
ತುಂಬುತಿಂಗಳು ಮೂಡಿದೆ
ಮಡುವಿನಾಳದಿ ಮೀನು ನಲಿದಿದೆ
ಮಾವುತೋಪಿನ ಕೊಂಬೆ ಬಾಗಿದೆ ಭೂಮಿಗೆ[1]

ಜಾನಪದ ಗೀತೆಗಳಲ್ಲಿ ಪ್ರೇಮ ಕಾಮಗಳ ನಡುವೆ ಗಡಿರೇಖೆ ಎಳೆಯುವುದು ಕಷ್ಟವಾಗುತ್ತದೆ. ಅಲ್ಲಿ ಶೀಲಾಶ್ಲೀಲಗಳ ಪ್ರಶ್ನೆಯೂ ಏಳುವುದಿಲ್ಲ. ನಿಷ್ಕಲ್ಮಷವೂ ನಿಷ್ಕಪಟವೂ ಆದ ಮುಗ್ಧಜೀವಿಗಳು ಬಾಯಿಗೆ ಬಂದದ್ದನ್ನು ತಡೆಹಿಡಿಯುವುದಿಲ್ಲ. ಅವರ ಬೈಗುಳ ಅರ್ಥಹೀನವಾದ ಶಬ್ದಮಂಜರಿ. ಮೊಲೆಗಳನ್ನು ಬುಗುರಿಗೆ ಹೋಲಿಸುವಾಗ ಮುಚ್ಚುಮರೆಯಿಲ್ಲದೆ ತನ್ನ ಹೃದಯವನ್ನು ಬಿಚ್ಚುತ್ತಾನಲ್ಲದೆ ಮರೆಮಾಡುವುದಿಲ್ಲ. ಹೃದಯದಿಂದ ನೇರವಾಗಿ ಹೊರಹೊಮ್ಮುವುದೇ ಸ್ವಭಾವೋಕ್ತಿ. ಮರೆಯಲ್ಲಿ ಅನೀತಿಯನ್ನನುಷ್ಠಾನಗೈಯುವ ನಾಗರಿಕ ರಸಿಕನಿಗೆ ಆ ಮಾತು ನಾಚಿನುಡಿಯಾಗಿ ತೋರಬಹುದು. ಬುಗುರಿಯೆನ್ನುವಾಗ ಹೆಣ್ಣಿನ ಅಂಗಾಕೃತಿಯೊಂದೇ ಅಲ್ಲ ಹೋಲಿಕೆಗೊಳ್ಳುವುದು, ನೋಡುವವನ ಮನಸ್ಸು ಸಹ ಹೇಗಾಗುತ್ತದೆನ್ನುವುದು ಧ್ವನಿತವಾಗುತ್ತದೆ. ಇದೆಲ್ಲ ಮಾನವನ ಸಹಜಪ್ರವೃತ್ತಿ. ಇದರಲ್ಲಿ ಕೃತಕತೆಯಿಲ್ಲ, ಜುಗುಪ್ಸೆಯಿಲ್ಲ, ಅಸಹ್ಯವಿಲ್ಲ.

ಈಟೀಟ ಮೊಲೆಯವಳೆ ಚೀಟ ಕುಪ್ಪಸದವಳೆ
ಬ್ಯಾಟೆ ಹೋಗತೀನಿ ಕೈಬೀಡ। ಮಲ್ಲಾಡ
ಜೇನ ತರತೀನಿ ಸವಿನೋಡೆ[2]

ಈ ಮಾತುಗಳು ಅವನ ರಸಿಕತೆಗೆ, ಸೌಂದರ್ಯಾನುಭವಕ್ಕೆ ನಿದರ್ಶನವಾಗಿವೆಯೇ ಹೊರತ ಅವುಗಳಲ್ಲಿ ಮೂಗುಮುಚ್ಚುವಂಥದು ಮನಮುರಿಯುವಂಥದು ಏನೂ ಇಲ್ಲ.

ಹಳ್ಳಿಯ ತರುಣ ಓದುಬಲ್ಲವನಲ್ಲದಿದ್ದರೂ ಜಾಣ; ಸಂಸಾರ ಸಂಹಿತೆಯನ್ನು ಬಲ್ಲವನು; ಸಂಸಾರ ಹಾಲಿನಂತಾಗಬೇಕಾದರೆ ಏನು ಮಾಡಬೇಕೆಂಬುದು ಅವನಿಗೆ ಗೊತ್ತು. ಅವನಲ್ಲಿ ದುಡ್ಡಿಗೆ ಬಡತನವಿದ್ದರೂ ಪ್ರೇಮಕ್ಕೆ ಬಡತನವಿಲ್ಲ. ಅವನ ಅಂಗಾಂಗಗಳಲ್ಲಿ, ನಡೆನುಡಿಗಳಲ್ಲಿ ಪ್ರೇಮವೊಸರುತ್ತದೆ. ಅವನು ಕೂತಲ್ಲಿ ನಿಂತಲ್ಲಿ ತನ್ನ ಮಡದಿಯನ್ನೆ ಕಾಣುತ್ತಾನೆ; ತಾನು ಬೆಳೆದ ಹಸುರು ಪೈರಿನಲ್ಲಿ, ಗಿಡದ ಹೂಗಳಲ್ಲಿ, ತುಂಬಿದ ತೆನೆಯಲ್ಲಿ, ಮರದ ಹಣ್ಣುಗಳಲ್ಲಿ ಅವಳ ಮೈಸಿರಿ ಮನಸಿರಿಗಳನ್ನುದರ್ಶಿಸುತ್ತಾನೆ. ಅವನೆಲ್ಲಿಯೋ ಒಂದೆರಡು ದಿನ ಊರ ಹೊರಗೆ ಹೋಗಿದ್ದಾನೆ. ಅವನು ಹಿಂದಿರುಗುವ

---

[1] *Folk Songs of Chhattisgarh*, p. 4. ಇಲ್ಲಿ ಮಾನುಷ ಲಶಕ್ತಿಯ ಸಂಕೇತ. ಹಣ್ಣು ತುಂಬಿದಾಗ ಮಾವಿನ ಕೊಂಬೆಗಳು ಭೂಮಿಗೆ ಮಣಿಯುತ್ತವಷ್ಟೆ.

[2] ಕನ್ನಡ ಜಾನಪದ ಗೀತೆಗಳು, ಗದ್ದಿಗಿಮಠ, ಪು. ೧೧೮.

ವೇಳೆಗೆ ತವರಿನವರು ಬಂದು ಮಗಳನ್ನು ಕರೆದೊಯ್ದಿದ್ದಾರೆ. ಹೊಸ್ತಿಲ ಮೇಲೆ ಕಾಲಿಡುತ್ತಿರುವಾಗಲೇ ಮನೆ ಮನಗಳೆಲ್ಲ ಬಿಕೋ ಎನ್ನುತ್ತವೆ. ಎಲ್ಲಿ ನೋಡಿದರೆ ಅಲ್ಲಿ ಶೂನ್ಯ ತುಂಬಿ ತುಳುಕುತ್ತದೆ. ಮಡದಿಯ ನಗುವಿನಿಂದ ಬೆಳಕಾಗುತ್ತಿದ್ದ ಮನೆಯಲ್ಲಿ ಕತ್ತಲು ತುಂಬಿಕೊಂಡಿವೆ. ಕೈಕಾಲುಗಳಿಗೆ ನೀರು ತರುವಾಗ ನುಡಿಯುತ್ತಿದ್ದ ಬಳೆಯ ಸಂಗೀತ ಕಾಣೆಯಾಗಿವೆ. ಊಟಕ್ಕೆ ಕುಳಿತಾಗಪಿಲ್ಲಿಯ ತಾಳವೂ ಕೇಳಿಸದು, ಬಿಸುಸುಯ್ಲಿನ ನರುಗಂಪೂ ಮೂಗಿಗಡರದು. ಅವ್ವನನ್ನು ಕೇಳಿಯೇ ಬಿಡುತ್ತಾನೆ:

ಅಡಗೀಯ ಮನೆಯಾಗ ಮಡದಿಯ ಸುಳಿವಿಲ್ಲ
ಅಡುಗೆ ಬಾಯಿಗೆ ರುಚಿಯಿಲ್ಲ। ಹಡೆದವ್ವ
ಮಡದಿ ಹೋಗ್ಯಾಳ ತವರೀಗೆ.

ಅವನ ಪ್ರೇಮಾಧಿಕ್ಯ ಕಾತರತೆ ಉದ್ವೇಗ ನಿರಾಶೆ ಮೊದಲಾದ ಸಹಜಪ್ರವೃತ್ತಿಗಳಿಲ್ಲಿ ಸ್ವಾಭಾವಿಕವಾಗಿ ಹೊರಹೊಮ್ಮಿವೆ.

ಅತ್ತೆಯ ಮನೆಯೆಂದರೆ ಹೆಣ್ಣಾದವಳಿಗೆ ಅತ್ತೆ ನಾದಿನಿಯರಿಂದ ಮೈದುನ ಓರಗಿತ್ತಿಯರಿಂದ ಏನಾದರೂ ಕಾಟವಿರುತ್ತದೆಂಬ ಭಾವನೆ ಸಾರ್ವತ್ರಿಕವಾದುದು. ಆ ಭಾವನೆ ನಿರಾಧಾರವಾದದ್ದಲ್ಲ. ಆದರೆ ಅವಳಿಗದು ಗಂಡನ ಮನೆ, ತನ್ನ ಮನೆ. ತವರೆಂದೂ ಅವಳಿಗೆ ಸ್ಥಿರವಲ್ಲ; ಅತ್ತಿಗೆ ನಾದಿನಿಯರು ಬಂದ ಮೇಲೆ ಅದೂ ಮುಳ್ಳಿನ ಹಾಸುಗೆಯಾಗುತ್ತದೆ. ಗಂಡನ ಮನೆಗೆ ಮುಂದೆ ತಾನು ಒಡತಿಯಷ್ಟೇ ಅಲ್ಲ, ಅದು ತನ್ನ ಮಕ್ಕಳ ಗೋಕುಲವೂ ಆಗುತ್ತದೆಂಬುದನ್ನವಳು ಬಲ್ಲಳು. ಅತ್ತೆ ನಾದಿನಿಯರಿಂದ ಎಷ್ಟೇ ಕಿರುಕುಳಗಳೊದಗಲಿ ಗಂಡನ ಪ್ರೇಮ ಶ್ರೀಮಂತಿಕೆಯಿಂದಾಗಿ ಅವೆಲ್ಲವನ್ನು ಸಹಿಸಿಕೊಳ್ಳುತ್ತಾಳೆ. "ಗಂಜೀಯ ಕುಡಿದರು ಗಂಡನ ಮನೆ ಲೇಸು....ಹಂಗೀನ ತವರಮನೆಸಾಕು" ಎನ್ನುತ್ತಾಳೆ.

ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ
ಬಿಚ್ಚಿ ನನಮೇಲೆ ಒಗೆವಂಥ ರಾಯರನ
ಬಿಟ್ಟ್ಯಾಂಗ ಬರಲಿ ಹಡೆದವ್ವ.

ಗಂಡನ ಮನೆಯನ್ನು ಬಿಟ್ಟು ಹೋಗಲಿಕ್ಕವಳಿಗೆ ಮನಸ್ಸಿಲ್ಲದಿದ್ದರೂ ಚೊಚ್ಚಲ ಹೆರಿಗೆಗಾಗಿ ತವರಿಗೆ ಹೋಗಬೇಕಾದ್ದು ಸತ್ಸಂಪ್ರದಾಯ. ತಂದೆತಾಯಿ ಕಡುಬಡವರಾದರೂ ಮಗಳನ್ನು ಕರೆಸಿಕೊಳ್ಳಬೇಕು, ಬಸಿರಿ ಬಯಕೆಯನ್ನು ತೀರಿಸಬೇಕು, ಯಾರ ಅಂಜಿಕೆಯೂ ಇಲ್ಲದೆ ಮನಸ್ಸಿಗೆ ಯಾವ ಕ್ಲೇಶವೂ ಇಲ್ಲದೆ, ಗರ್ಭದಲ್ಲಿರುವ ಮಗುವಿಗೆ ತೊಂದರೆಯಾಗದಂತೆ ನಾಲ್ಕಾರು ದಿನ ಸುಖವಾಗಿ ಬಾಳು ಸಾಗಿಸಬೇಕು. ಸರಾಗವಾಗಿ ಹೆರಿಗೆಯಾಗಬೇಕು. ಅವಳು ಅತ್ತೆಯ ಮನೆಯಲ್ಲಿಯೇ ಇರುವುದಾದರೆ ಸಿಡುಕು ಮುನಿಸುಗಳ ಕಾಟ ತಪ್ಪದು, ಕೆಲಸದ ಬಳಲಿಕೆ ತಪ್ಪದು. ಸಲುಗೆಯಿಂದ ಬೇಕಾದ್ದನ್ನು ಮಾಡಿಸಿಕೊಂಡು ತಿನ್ನುವಂತಿಲ್ಲ. ಬೇಸರಾಸರುಗಳಿಗೆ ಸಮವಿಲ್ಲ. ಒತ್ತಡ ಕಳವಳಗಳಿಗೆಡೆಯಿಲ್ಲ. ತುಸು ಬಳಲಿದರೂ ಕಣ್ಣೀರಿಡುವ ತಂದೆಯ ವಾತ್ಸಲ್ಯದ ತೆಕ್ಕೆಯಲ್ಲಿ ತನ್ನೆಲ್ಲ ಸೌಖ್ಯವನ್ನು

ಸೂರೆಗೊಟ್ಟು, ಮಗಳ ಸಂತೋಷವೊಂದೇ ಗುರಿಯಾಗಿರುವ ತಾಯಿಯ ಪ್ರೇಮದ ಮಡಿಲಿನಲ್ಲಿ, ತಂಗಿಯ ಯೋಗಕ್ಷೇಮಕ್ಕಾಗಿ ತನ್ನೆಲ್ಲ ಸ್ವಾರ್ಥವನ್ನು ತ್ಯಾಗಮಾಡಲು ಸದಾ ಸಿದ್ಧನಾಗಿರುವ ಅಣ್ಣನ ಅಕ್ಕರೆಯ ತೊಟ್ಟಿಲಲ್ಲಿ ಅವಳ ಪ್ರಸವವೇದನೆ ಮರೆಯಾಗುತ್ತದೆ. ಇಂಥ ಸಂಭ್ರಮದಲ್ಲಿ ಹುಟ್ಟುವ ಮಗುವಿನ ಭಾಗ್ಯ ಹಿರಿದಾಗುತ್ತದೆ. ಹೆರಿಗೆಯನಂತರ ನಾಲ್ಕಾರು ತಿಂಗಳು ತವರಿನ ತಂಪಿನಲ್ಲಿ ಯಾವ ಚಿಂತೆಯೂ ಇಲ್ಲದೆ ತನ್ನ ಕರುಳಸಿರಿಯೊಡನೆ ಕಾಲ ಹಾಕುತ್ತಾಳೆ. ತಂದೆತಾಯಿಯರೆಷ್ಟೇ ಪ್ರೀತಿಸಲಿ, ಒಂದು ದಿನ ಅವಳು ಗಂಡನ ಮನೆಗೆ ಹೋಗಲೇಬೇಕು. ತವರೂರಿನಿಂದಾಚೆ ಊರಿನ ಗಡಿಯೆಂಬಂತೆ ಒಂದು ತಿಟ್ಟು. ಆ ತಿಟ್ಟಿನತನಕ ಅವಳನ್ನು ಕಳಿಸಿಕೊಡುವ ಸಲುವಾಗಿ ಅಣ್ಣ ತಂದೆತಾಯಿಯರೆಲ್ಲ ಹೋಗುತ್ತಾರೆ. ಅಲ್ಲಿ ತುಸು ಹೊತ್ತು ನಿಲ್ಲುತ್ತಾರೆ. ಮಾತು ಅಂಜುತ್ತದೆ; ಎದೆಯ ದನಿ ಕೇಳಿಸುತ್ತದೆ; ದಿಟ್ಟದಿಟ್ಟಿಯನ್ನು ಮುಟ್ಟುತ್ತವೆ; ಕಣ್ಣೀರು ಕೋಡಿ ಹರಿಯುತ್ತದೆ. ಆತನಕ ಹೊತ್ತುಕೊಂಡು ಬಂದ ತೊಟ್ಟಿಲನ್ನು ತಾಯಿ ಮಗಳ ತಲೆಯ ಮೇಲಿಡುತ್ತಾಳೆ; ಅಣ್ಣ ಎಮ್ಮೆಯ ಹಗ್ಗವನ್ನು ತಂಗಿಯ ಕೈಗೆ ಕೊಡುತ್ತಾನೆ. ಮಗಳು ತಂದೆತಾಯಿಯರನ್ನೂ ಅಣ್ಣನನ್ನೂ ನೋಡಲಾರದೆ, ಅತ್ತೆಯೂರಿನ ಕಡೆಗೆ ಮುಖವಾಗುತ್ತಾಳೆ. ಕಾಲು ಕಿತ್ತುಹಾಕುವುದೇ ಕಷ್ಟ. ಕಣ್ಣೀರು ಸಶಬ್ದವಾಗಿ ಹರಿಯುತ್ತದೆ. ಆಗ

ತೊಟ್ಟಿಲ ಹೊತ್ಕೊಂಡು ತವರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು । ತೌರೂರ
ತಿಟ್ಹತ್ತಿ ತಿರುಗಿ ನೋಡ್ಯಾಳೊ

ಮಗಳ ಗೋಳನ್ನು ಸಹಿಸಲಾರದೆ ತಂದೆತಾಯಿಯರು ತಮ್ಮೂರಿನ ಕಡೆಗೆ ಹೆಜ್ಜೆ ಹಾಕುತ್ತಾರೆ. ಮಗಳೋ, ಕಾಲೆಳೆಯುತ್ತ, ಹೆಜ್ಜೆಹೆಜ್ಜೆಗೂ ನಿಂತು ತವರೂರಿನ ಕಡೆಗೆ ನೋಡುತ್ತಾಳೆ. ತವರ್ಬಣ್ಣ, ಅಪ್ಪ ಕೊಟ್ಟೆಮ್ಮೆ, ತಿಟ್ಟು ಈ ಮೂರು ಪದಗಳಲ್ಲಿ ಆ ತಾಯಿ ಮಕ್ಕಳ ಗೋಳು ಕೊಳಗೊಂಡಿದೆ. ಮದುವೆಯಾದನಂತರ ಹೆಣ್ಣು ಮೊದಲ ಮಗು ಜನಿಸುವ ತನಕ ಗಂಡನ ಮನೆ ಮತ್ತು ತಂದೆಯ ಮನೆಗಳ ನಡುವೆ ಓಡಾಡುತ್ತಿರುತ್ತಾಳೆ. ಚೊಚ್ಚಲ ಮಗುವಿನೊಡನೆ ಗಂಡನ ಮನೆಗೆ ಬಂದಳೆಂದರೆ ಮತ್ತೆ ತವರು ಮನೆಗೆ ಹೋಗುವುದು ಅಪರೂಪ. ಆ ತನಕ ಅವಳುಡುತ್ತಿದ್ದ ಬಟ್ಟೆಯೆಲ್ಲ ತಾಯಿ ಅಣ್ಣ ಕೊಟ್ಟದ್ದೇ. ಈಗವಳು ಉಟ್ಟದ್ದೇ ಕೊನೆಯ 'ತವರ್ಬಣ್ಣ.' ಮಗುವಿನ ಹಾಲಿಗೆಂದು ತಂದೆ ಎಮ್ಮೆ ಹೊಡೆದಿದ್ದಾನೆ. ತವರಿನ ಸುಖವನ್ನು ಅತ್ತೆಯ ಮನೆಯ ಕೋಟಲೆಗಳನ್ನು ನೆನೆಯುತ್ತ ತಿಟ್ಟಿನ ಮೇಲಿದ್ದಾಗ ತವರಿನ ಕಡೆಗೊಮ್ಮೆ ದಿಟ್ಟಿ ತಿರುಗಿಸುತ್ತಾಳೆ. ಪೂರ್ವಕಾಲದ ಸಾಮಾಜಿಕ ಸಂಪ್ರದಾಯಗಳ ಹಿರಿಮೆ ಮತ್ತು ಅವುಗಳಲ್ಲಿ ಪಡಿಮೂಡಿರುವ ಮನೋವೈಜ್ಞಾನಿಕ ಸಂಗತಿಗಳು ಅಧ್ಯಯನಾರ್ಹವಾದುವು. ಇಂಥ ಭಾವಶ್ರೀಮಂತಿಕೆಯ ರಸವೈಭವವುಳ್ಳ ಕಾವ್ಯಪಂಕ್ತಿಗಳು ಜಗತ್ತಿನ ಶಿಷ್ಟಸಾಹಿತ್ಯದಲ್ಲಿಯೇ ವಿರಳ. ಇಲ್ಲಿ ಕಣ್ಣು

ಮಾತ್ರ ಮಾತಾಡುತ್ತವೆ. ಒಬ್ಬನಲ್ಲ. ಹತ್ತಾರು ಋಷಿಗಳ ಬುದ್ಧಿವಾದ ಈ ತ್ರಿಪದಿಯಲ್ಲಿ ಅಡಕಗೊಂಡಿದೆ.

ಕಷ್ಟಸಹಿಷ್ಣುತೆ ತ್ಯಾಗ ಪ್ರೇಮಗಳ ಸಾಕಾರಮೂರ್ತಿಯಾದ ಈ ಗರತಿ ಅತ್ತೆಯ ಮನೆಯ ಕಿರುಕುಳಗಳನ್ನೊಂದೂ ಮನಸ್ಸಿನಲ್ಲಿ ಕೊಳಿಸುವವಳಲ್ಲ. ತನ್ನ ನೋಡಿ ತವರು ಮರೆ ಎನ್ನುವ, ತನಗೆ ಮುತ್ತೈದೆ ಸ್ಥಾನವನ್ನೂ ನೀಡಿರುವ ಗಂಡನಿರುವಾಗ, ಹವಳದಂತಿರುವ ತುಟಿಯುಳ್ಳ, ಬೇವಿನೆಸಳಿನಂತಿರುವ ಕುಡಿಹುಬ್ಬುಳ್ಳ, ಬಾಳೆಹಣ್ಣಿನಂತಿರುವ ಮೈಯುಳ್ಳ, ತೊಳೆದ ಮುತ್ತಿನಂಥ ಮಗುವಿರುವಾಗ ಅವಳಿಗೆ ಸ್ವರ್ಗವೂ ಬೇಡ. ಆ ಮಗು ಚಂಡಿ ಮಾಡಿದರೆ ಬೇಸರವಿಲ್ಲ. ಬಡತನವಿದ್ದರೂ ಮಕ್ಕಳಲ್ಲಿ ಸಂಪತ್ತನ್ನು ಕಾಣುವವಳು: 'ಬಡತನ ನನಗಿರಲಿ, ಬಹಳ ಮಕ್ಕಳಿರಲಿ, ಮೇಲೆ ಗುರುವಿನ ದಯೆಯಿರಲಿ' ಎನ್ನುವವಳು. ಅವನು ಹೊರಗೆ ಆಡಿಕೊಂಡು ಬಂದಾಗ ಎಳನೀರಿನಲ್ಲಿ ಮುಖ ಕೈಕಾಲು ತೊಳೆಯುವ ಮನೋಧರ್ಮ ಪವಿತ್ರಭಾವನೆಯಿಂದ ಕೂಡಿದ್ದಾಗಿದೆ. ಮಗು ಶ್ರೀಕೃಷ್ಣನ ಪ್ರತೀಕ. ಕೆರೆಬಾವಿಗಳ ಎಂಜಲು ನೀರಿನಲ್ಲಿ ಕೈಕಾಲು ತೊಳೆಯುವುದು ತರವಲ್ಲ. ಎಳನೀರು ದೇವಗಂಗೆ. ಅವಳ ಕಲ್ಪನೆ ಎಷ್ಟು ಮಹತ್ವಪೂರ್ಣವಾದದ್ದೆಂಬುದು ಈ ಮಾತಿನಿಂದ ಅರ್ಥವಾಗುತ್ತದೆ. ಅದೂ ಇರಲಿ,

ತೋಳುದ್ದ ತಲೆದಿಂಬು ಮಾರುದ್ದ ಹಾಸಿಗೆ
ಮಾಣಿಕ್ಯದಂಥ ಮಗ ಮುಂದೆ ಮಲಗಿರಲು
ಮಾರಾಯ್ರ ಗೊಡವಿ ನನಗೇನ

ಎಂದು ಹೇಳಿಕೊಳ್ಳುವಲ್ಲಿ ಪತಿಭಕ್ತಿ ಮತ್ತು ಪುತ್ರಾಭಿಮಾನಗಳು ಎದ್ದು ಕಾಣುತ್ತವೆ. ತನ್ನ ಮಗುವಿನಲ್ಲಿ ಗಂಡನ ಪ್ರತಿಬಿಂಬವನ್ನು ಕಾಣುತ್ತಾಳೆ. ಮಗುವನ್ನು ನೋಡಿದರೆ ಸಾಕು ಗಂಡನನ್ನು ನೋಡಿದಂತಾಗುತ್ತದೆ. ಗಂಡ ಹಾದಿತಪ್ಪಿದರೂ ಅವಳು ಚಿಂತಿಸುವವಳಲ್ಲ. ಆದರೂ ಒಂದು ಬುದ್ಧಿಯ ಮಾತು ವಿನಯವಾಗಿ ಹೇಳಬೇಕಾದ್ದು ಅವಳ ಕರ್ತವ್ಯ.

ಅಂಗೀಯ ಮ್ಯಾಲಂಗಿ ಚಂದೇನೋ ನನರಾಯ
ರಂಬಿ ಮ್ಯಾಲ ಪ್ರತಿರಂಬಿ। ಬಂದರ
ಚಂದೇನೋ ರಾಯ ಮನಿಯಾಗ

ಅವಳ ಈ ಮಾತಿನಲ್ಲಿ ಎಚ್ಚರಿಕೆಯಿದೆ, ಮರುಕವಿದೆ. ಸಹಾನುಭೂತಿಯಿದೆ: ಕ್ರೋಧವಿಲ್ಲ, ಸಂಕಟವಿಲ್ಲ. ಹೇಗೂ ಹೆಣ್ಣು ಜನ್ಮ ಬಂದದ್ದನ್ನೆಲ್ಲ ಅನುಭವಿಸಲೇ ಬೇಕೆನ್ನುವ ಕ್ಷಮಾ ಮೂರ್ತಿ ಅವಳು; ಪಾವಿತ್ರ್ಯದಲ್ಲಿ ಸೀತೆ ದ್ರೌಪದಿಯರನ್ನು ವಿಡಂಬಿಸಿದ ಮಹಾನುಭಾವೆ ಈ ಗ್ರಾಮೀಣ ಮುಗ್ಧೆ. ಕೊನೆಗೆ ನಿರಾಶಳಾದಾಗ ಹೆಣ್ಣಾಗುವುದಕ್ಕಿಂತ ಮಣ್ಣಾಗಿದ್ದರೆ, ಮಣ್ಣಲ್ಲಿ ಹುಟ್ಟಿದ ಮರವಾಗಿದ್ದರೆ ಲೇಸಾಗುತ್ತಿತ್ತೆಂದು ಬಿಸುಸುಯ್ಯುತ್ತಾಳೆ.

ಮಕ್ಕಳು ಹಡೆಯುವುದರಲ್ಲಿ ಹೆಣ್ಣಿನ ಸಾರ್ಥಕ್ಯವಿದೆ. ಸಂತಾನಾಭಿವೃದ್ಧಿಯಿಂದ ಹಿರಿಯರು ಸ್ವರ್ಗವೇರುವುದಿರಲಿ, ಉತ್ತಮ ಸಂತಾನದಿಂದ ಲೋಕ ಕಲ್ಯಾಣವಾಗುವ

ದಂತು ಖಂಡಿತ; ಅಂಥವರಿಂದ ಪಡೆವ ತಂದೆತಾಯಿಯರಿಗೆ ಹೆಸರು ಹೆಮ್ಮೆ. ಗೊಡ್ಡಾಕಳಿಂದ, ಬಂಜೆಮರದಿಂದೇನು ಪ್ರಯೋಜನ? ಆದ್ದರಿಂದ ಬಂಜೆ ಲೋಕಾಪವಾದಕ್ಕೆ ಗುರಿಯಾಗುತ್ತಾಳೆ; ಕಾಲಕಸವಾಗುತ್ತಾಳೆ: ಅವಳ ಬಾಳು ಕಣ್ಣೀರಿನ ಮಡುವಾಗುತ್ತದೆ; ಸವತಿ ಮನೆಗೆ ಬಂದು, ಅವಳಿಗೆ ಮಕ್ಕಳಾದರಂತು ಗಂಡನ ಮನೆ ನರಕವಾಗುತ್ತವೆ; ಜೀತಗಾತಿಯ ಜೀವನಕ್ಕಿಂತಲೂ ಅವಳ ಬಾಳು ಕಡೆಯಾಗುತ್ತದೆ.

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ। ಬಾಳೆಲೆಯು
ಹಾಸ್ಯುಂಡು ಬೀಸಿ ಒಗೆದಾಂಗ.

ರಾಟೆ ಮತ್ತು ಬೀಸುವ ಕಲ್ಲುಗಳಂತೆ ತೊಟ್ಟಿಲು ಸಹ ಒಗತನದ ಒಂದು ಅಮೂಲ್ಯ ಆಸ್ತಿ. ಚಿನ್ನ ಬೆಳ್ಳಿಗಿಂತಲೂ ಬೆಲೆಯುಳ್ಳ, ತಮ್ಮ ಜೀವಕ್ಕಿಂತಲೂ ಮಿಗಿಲಾದ ಕಂದನನ್ನು ಬೆಳೆಸುವ ವಸ್ತುವದು. ಅವನ್ನು ಯಾರೂ ಕಾಲಿಂದ ಮುಟ್ಟುವುದಿಲ್ಲ; ಅಕಸ್ಮಾತ್ ಕಾಲು ತಗುಲಿದರೆ ಸಣ್ಣಮಾಡಿಕೊಳ್ಳುತ್ತಾರೆ. ಹಸುಗೂಸುಗಳ ಕಿವಿ ಇತರ ಇಂದ್ರಿಯಗಳಿಗಿಂತ ಚುರುಕೆಂದು ತೋರುತ್ತದೆ. ತುಸು ಶಬ್ದವಾದರೂ ಅದು ಬೆಚ್ಚುತ್ತದೆ. ಅದಕ್ಕೆ ಹಾಡಿಗಿಂತ ಪ್ರಿಯವಾದ ವಸ್ತು ಮತ್ತೊಂದಿಲ್ಲ. ಅದೊಂದು ನಿದ್ದೆಗುಳಿಗೆ. ಚಂಡಿ ಹಿಡಿದದ್ದಾದರೆ, ದೈಹಿಕ ಕ್ಲೇಶದಿಂದ ನರಳುತ್ತಿದ್ದರೆ ಹಾಡು ಅದನ್ನು ಸುಮ್ಮನಿರಿಸುತ್ತದೆ. ಪ್ರಾಯಶಃ ಜೋಗುಳದ ಹಾಡುಗಳಿಲ್ಲದ ಭಾಷೆಯಿರಲಾರದು; ಅವುಗಳಿಂದ ಆನಂದಗೊಳ್ಳದ ಮನೆಯಿರಲಾರದು; ಅಂಥ ಮನೆಯೊಂದಿದ್ದರೆ ಅದು ಬಂಜೆಗಾಡೇ ಆಗಿರಬೇಕು. ಅವು ಬಹು ಪ್ರಾಚೀನವಾದುವಲ್ಲವೆಂದು ಕೆಲವರು ಹೇಳುವುದುಂಟು.[1] ಈ ಮಾತನ್ನೊಪ್ಪುವುದು ಕಷ್ಟವಾಗುತ್ತದೆ. ಕುಣಿತದ ಹಿಂದೆಯೇ ಹಾಡು ಪ್ರಾರಂಭವಾಯಿತಷ್ಟೆ. ಆಗಲೇ ತೊಟ್ಟಿಲ ಹಾಡು ಶುರುವಾಗಿರಬಹುದು. ಆದರೆ ಪ್ರಾರಂಭದ ಹಾಡೆಂದರೆ ಪ್ರಾಯಶಃ ಬರಿಯ ಝೇಂಕಾರವಾಗಿರಬೇಕು; ಮೂಗಿನಲ್ಲಿಯೇ ದೀರ್ಘವಾಗಿ ಹ್ಞೂಗರೆದ ದನಿಯಿರಬೇಕು. ಅನಂತರ ಅದು ರಾಗದ ರೂಪಕ್ಕೆ ತಿರುಗಿ, ಕಾಲಕ್ರಮೇಣ ಧ್ವನ್ಯನುಕರಣ ಸಂಬಂಧಿಯಾದ ಮಾತುಗಳನ್ನು ಜೋಡಿಸಿಕೊಂಡದ್ದರಿಂದ ಅವು ಹಾಡಾಗಿ ಪರಿಣಮಿಸಿರಬೇಕು. ಪ್ರಾರಂಭದ ಹಾಡುಗಳಲ್ಲಿ ಅರ್ಥಕ್ಕೆ ಪ್ರಾಮುಖ್ಯವಿರಲಿಲ್ಲ; ಅದಿರಲಿಲ್ಲವೆಂದರೂ ಸಲ್ಲುತ್ತದೆ. ತಿಳುವಾದ ಅರ್ಥವುಳ್ಳ ಹಾಡುಗಳು ಬಂದದ್ದು ಈಚೆಗಿರಬೇಕು. ಆಗಲೂ ಅದು ಪಲ್ಲವಿಯ ರೂಪದಲ್ಲಿ ಹೊರಹೊಮ್ಮಿ, ಪುನರಾವರ್ತನೆಗೊಳ್ಳುತ್ತಿದ್ದು ಆ ಮೇಲೆ ಮಿಕ್ಕಿನ ಚರಣಗಳು ಕೂಡಿಕೊಂಡಿರಬೇಕು. ಹೆಂಗಸರೇ ಕಟ್ಟುವ ಮತ್ತು ಹಾಡುವ ಈ ಹಾಡುಗಳಲ್ಲಿ ಪ್ರತಿ ಚರಣದಲ್ಲಿಯೋ ತ್ರಿಪದಿಯ ಅಂತ್ಯದಲ್ಲಿಯೋ ಜೋ ಜೋ ಎಂಬ ಪದ ಪುನರಾವರ್ತಿಯಾಗುತ್ತದೆ. ಹಾಡುವ ಈ ಹಾಡುಗಳಲ್ಲಿ ಪ್ರತಿ ಚರಣ

[1] The Present Writer has heard it pronounced that antiquity lacked the cradle song—*The Science of Folklore* by A. H. Krappe, p. 65.

ದಲ್ಲಿಯೋ, ತ್ರಿಪದಿಯ ಅಂತ್ಯದಲ್ಲಿಯೋ ಜೋ ಜೋ ಎಂಬ ಪದ ಪುನರಾವರ್ತನೆಯಾಗುತ್ತದೆ.

ಅಚ್ಚಮುದ್ದಂಗಿ ವಜ್ರದ ಮೇಲಂಗಿ
ಮಾರೀವ್ರೋ ನಿನ್ನ ಮೈಯ್ಯಂಗಿ । ಕಂದಯ್ಯ
ಮುದ್ದೂರ ಸಂತೆ ಮಳಿಗೇಲಿ, ಜೋ ಜೋ.

ವಿಷಯ ಯಾವುದೇ ಆಗಲಿ, ಹಾಡು ಎಂಥದೇ ಆಗಲಿ, ಇಲ್ಲೆಲ್ಲ ರಾಗವೊಂದೇ ಮುಖ್ಯವಾದದ್ದು.

ಕಾಯಕದ ಮಹತ್ವವನ್ನು ಕಂಡುಕೊಂಡು ಬದುಕಿನಲ್ಲಿ ಕ್ರಿಯಾಂತರಗೊಳಿಸಿಕೊಂಡು, ದುಡಿಮೆಯೇ ದೈವವೆಂದು ಹಗಲಿರುಳೂ ಶರೀರವನ್ನು ತೇಯ್ದು ಕರ್ಮಯೋಗಿನಿಯಾಕೆ. ನಡೆನುಡಿ ಸಾಧನೆಗಳಿಂದ ಅವಳ ಬದುಕೇ ಭಗವದ್ಗೀತೆಯಾಗುತ್ತದೆ. ಮನೆಯಲ್ಲಿ ಹೊತ್ತಿಗೆ ಮುಂಚೆ ಏಳುವವಳು ಅವಳು; ಕಸಕಡ್ಡಿ ಗುಡಿಸಿ, ನೀರುನಿಡಿ ತಂದು, ಮುಸುರೆ ತಿಕ್ಕಿ ಮಗುವಿಗೆ ಮೊಲೆಕೊಟ್ಟು, ಹಿರಿಯರನ್ನುಪಚರಿಸಿ, ಹೊಲಕ್ಕೆ ಹೋಗಬೇಕು: ಅಲ್ಲಿಂದ ಬಂದು ಅಡುಗೆ ಬೇಯಿಸಬೇಕು; ಮತ್ತೆ ಹೊಲದ ಕೆಲಸ; ರಾತ್ರಿ ಎಲ್ಲರಿಗಿಂತ ಕೊನೆಯಲ್ಲಿ ಮಲಗುವವಳೂ ಅವಳೇ. ಗಂಡ ಪೋಲಿಯಾದರಂತು ಅವಳ ಗೋಳು ಹೇಳತೀರದು. ಸಂಸಾರ ಭಾರದ ಜತೆಗೆ ಅವನ ಭಾರ ಸಹ ಹೊತ್ತುಕೊಂಡು ಬೇಯಬೇಕಾಗುತ್ತದೆ. ಒಟ್ಟಿನಲ್ಲಿ ಅವಳು ಭೂಮಾತೆಯ ನಂತರ ಸಮಾಜಕ್ಕೆ ಎರಡನೆಯ ತಾಯಿ.

ಹಳ್ಳಿಯ ಗರತಿಯದು ಹೋರಾಟದ ಬದುಕು. ದಿನದಿನವೂ ಅವಳ ಸತ್ವಪರೀಕ್ಷೆಯಾಗುತ್ತದೆ. ಅವಳು ತುಸು ಸೆಸವಾಗಿದ್ದರೆ, ಚೆಲುವಾಗಿದ್ದರೆ ಊರ ಗೌಡ ಅವಳ ಮರ್ಯಾದೆ ಕಳೆಯಲು ಕಾತರನಾಗಿರುತ್ತಾನೆ; ನೆರೆಹೊರೆಯ ಹೆಂಗಸರ ಕಣ್ಣಿಗೆ ಮುಳ್ಳಾಗಿ, ಹೊಟ್ಟೆಕಿಚ್ಚಿನ ವಸ್ತುವಾಗುತ್ತಾಳೆ. ಅತ್ತೆಮಾವರಿಗಂಜಿ ಸುತ್ತೇಳು ನೆರೆಗಂಜಿ ಪತಿಯ ದನಿಗಂಜಿ ನಡೆಯಬೇಕೆಂದು ತಂದೆತಾಯಿರು ಹೇಳಿದ ಬುದ್ಧಿವಾದವನ್ನು ಮರೆಯುವುದಿಲ್ಲ. ಅದು ಅವಳ ಬದುಕಿನ ತಾರಕಮಂತ್ರವಾಗುತ್ತದೆ. ಧರ್ಮಭೀರುತ್ವ ಮತ್ತು ದೈವಭಕ್ತಿಗಳು ಅವಳಿಗೆ ರಕ್ಷೆಯಾಗುತ್ತವೆ. ಆ ಮುಗ್ಧೆಗೆ ಗುಡಿಯ ಲಿಂಗ ಬರಿಯ ಕಲ್ಲಲ್ಲ; ತನ್ನಂತೆಯೇ ಉಸಿರಿರುವ, ಚೈತನ್ಯವಿರುವ, ಆದರೆ ಲೋಕರಕ್ಷಣೆಯ ಭಾರ ಹೊತ್ತಿರುವ ಮಹಾದೇವ. ಏನೇ ಕಷ್ಟವೊದಗಿದರೂ ಅವನ ಪೂಜೆಯನ್ನು ಮಾತ್ರ ಮರೆಯುವುದಿಲ್ಲ. ಹೊತ್ತು ಮುಳುಗಲಿ ಕತ್ತಲಾಗಲಿ ಚಳಿಯಿರಲಿ ಮಳೆಯಿರಲಿ, ಕೊನೆಗೆ ಕಾಯಿಲೆಯಿಂದ ನರಳುತ್ತಿರಲಿ, ಅವನ ಗುಡಿಗೆ ಹೋಗಲೇಬೇಕು.

ರಾಟೆ ಮತ್ತು ಬೀಸುವ ಕಲ್ಲು ನಿಕಟ ಸಂಗಾತಿಗಳೆಂದು ಮೇಲೆ ಹೇಳಿತು. ರಾಟೆ ಎಲ್ಲ ಕಡೆಯೂ ಇದ್ದಿರಲಾರದು; ಬೀಸುವ ಕಲ್ಲಂತು ಪ್ರತಿಯೊಂದು ಮನೆಯಲ್ಲಿಯೂ ಅನಿವಾರ್ಯವಾಗಿ ಇರಬೇಕಾದ ಉಪಕರಣ. ಅದು ಶಿಲಾಯುಗದಷ್ಟೇ ಪ್ರಾಚೀನ. ಪಾಶ್ಚಾತ್ಯ ದೇಶಗಳಲ್ಲಿ ಆಧುನಿಕ ಯಂತ್ರಗಳ ಧಾಳಿಯಿಂದಾಗಿ ಬೀಸುವ ಕಲ್ಲು ಎಂದೋ ಮಂಗಮಾಯವಾಯಿತು. ಅದು ಬಳಕೆಗೆ ಬಂದಾಗಲೇ, ಬೀಸುವ ಹಾಡುಗಳು ಸಹ ಚಿಲುಮೆ

4

ಗೊಂಡಿರಬೇಕು. ಆದರೆ ಅವೆಲ್ಲ ಕಾಲಗರ್ಭದಲ್ಲಿ ಹೂತುಕೊಂಡಿವೆ. ಈಗ ರೂಢಿಯಲ್ಲಿರುವ ಹಾಡುಗಳು ತುಂಬ ಹಳೆಯವಲ್ಲ. ಜನಪದಗೀತೆಯ ಮಾದರಿಯಲ್ಲಿ ಜನಪ್ರಿಯ ಗೀತೆಯಾಗಿ ಹುಟ್ಟಿದ ಐರಿಷ್ ಗೀತೆಯೊಂದನ್ನಿಲ್ಲಿ ಉದ್ಧರಿಸಬಹುದು. ಹೆಂಗಸಿನ ನೋವು ನಲಿವುಗಳು ಕಷ್ಟನಿಷ್ಠುರಗಳು ಎಲ್ಲ ಸಮಾಜಗಳಲ್ಲಿಯೂ ಒಂದೇ ಎನ್ನುವುದು ಅದರಿಂದ ಗೊತ್ತಾಗುತ್ತದೆ.

ಮುದುಕನೊಬ್ಬನೆನ್ನ ಮೋಹಿಸಿದನು ಪ್ರೀತಿಯಿಂದಲಿ
ಮುದುಕನೊಬ್ಬನೆನ್ನ ಮೋಹಿಸಿದನು ನಂಬು ನಿಜವಿದು
ಮುದುಕನೊಬ್ಬನೆನ್ನ ಮೋಹಿಸಿದನು, ಮದುವೆಯಾದೆನಯ್ಯೊ ಬರಿಯಗೋಳು
ಮುದುಕನೊಡನೆ ಮದುವೆ ಬೇಡ, ಜೋಕೆ, ಹೆಣ್ಣುಗಳಿರ ಬದುಕಿರೆ.

ಹಳ್ಳಿಯ ಹೆಣ್ಣಿನಪಾಲಿಗೆ ಬೀಸುವಕಲ್ಲು ಜಡವಸ್ತುವಲ್ಲ; ಅವಳು ಕಲ್ಲಮ್ಮ, ಮಾತಾಯಿ. ಬೈಗ ಜನರ ಪ್ರಕಾರ ಕೆಳಗಣ ಕಲ್ಲು ತಾಯಿ, ಮೇಲಣ ಕಲ್ಲು ತಂದೆ. ಮೊದಲು ರಾಗಿ ಬೀಸಿದವಳು ಸಿರಿಗೌರಿ: ಹಾಡು ಕಲಿಸಿದವಳು ಕೃಷ್ಣನ ತಂಗಿ ಸುಭದ್ರೆ. ಬೆಳಗಿನ ಜಾವ ಕಲ್ಲಿನ ಶ್ರುತಿಯೊಂದಿಗೆ ಹೆಣ್ಣು ಮಕ್ಕಳು ಹಾಡುವಾಗ ಗಂಡಸು ಒಮ್ಮೊಮ್ಮೆ ಗಂಧರ್ವಲೋಕದಲ್ಲಿ ವಿಹರಿಸುತ್ತಾನೆ. ಮಕ್ಕಳಿಗಂತು ಆ ಹಾಡು ಸಮ್ಮೋಹನಾಸ್ತ್ರ.

ಸ್ವಾತಿ ಮಳೆಗಾಗಿ ಕಾಯುವುದು ಚಿಪ್ಪು
ಕಾದಿದೆ ಚಕಾ[1]ವಿ ರವಿಯುದಯಕಾಗಿ
ಯುದ್ಧಸನ್ನದ್ಧ ಸತತರಜಪೂತ
ವೀರನಂ ಪಡೆಯೆ ಕಾದಿಹಳು ಕನ್ಯೆ
ಪರಕೀಯರಿಗೊಪ್ಪಿಸದಿರು ತಾಯ್ನಾಡ
ಧೀರನೊಲು ಹೋರಾಡು ರಣರಂಗದಲ್ಲಿ
ಬಾಳಿನಲಿ ಸಾವಿನಲಿ ಗೌರವವ ಕಾಯಿ
ತಾಯಿ ಹಾಡುವಳಿಂತು ತೊಟ್ಟಿಲನು ತೂಗಿ.[2]

ಪ್ರತಿ ರಜಪೂತಮಾತೆಯ ಮತ್ತು ಕನ್ಯೆಯ ಹೃದಯದಲ್ಲಿ ಸದಾ ಹೊಂಚುಹಾಕುತ್ತಿರುವ ಹಾಗೂ ಹೊಳಲುಗೊಡುವ ಭಾವನೆಗಳಿವು. ಹೋರಾಟವೇ ರಜಪೂತರ ನಿತ್ಯಕರ್ಮ: ವೀರಶೌರ್ಯಾದಿ ಕ್ಷಾತ್ರಗುಣಗಳೇ ಅವರ ಜೀವನಧರ್ಮ. ಅವರ ಹೋರಾಟ ದ್ವಿಮುಖವಾದದ್ದು: ಒಂದು ಪ್ರಕೃತಿಯೊಡನೆ, ಮತ್ತೊಂದು ಶತ್ರುಗಳೊಡನೆ. ವೀರಪುತ್ರನನ್ನು ಪಡೆಯುವ ಬಯಕೆ ಅಲ್ಲಿಯ ತಾಯಂದಿರದು, ವೀರಪತಿಯನ್ನು ಹೊಂದುವಾಸೆ ಯುವತಿಯರದು. ಯುದ್ಧದಲ್ಲಿ ಹಿಮ್ಮೆಟ್ಟಿದ ಗಂಡ ಅಥವಾ ಮಗ ಯೋಗ್ಯನಲ್ಲವೆಂಬ ಎಣಿಕೆ ಅವರದು; ಗೆಲ್ಲಲಿ ಸಾಯಲಿ ಅವನಿಗೆ ವೀರೋಚಿತ ಸನ್ಮಾನ ಸಲ್ಲುತ್ತದೆ.

ರಾಜಪುತ್ರ ಸ್ಥಾನದ ಜನರ ದೇಶಾಭಿಮಾನ ಅಪ್ರತಿಹತವಾದದ್ದು, ತ್ಯಾಗಮಯ

---

[1] ಒಂದು ತೆರನ ಹಕ್ಕಿ.

[2] *Meet my people* by Devendra Satyarthi, pp. 62–63.

ವಾದವು. ಪ್ರತಿಯೊಬ್ಬ ಪ್ರಜೆಯೂ ಯುದ್ಧದ ಸಮಯದಲ್ಲಿ ತನುಮನಧನಗಳನ್ನರ್ಪಿಸಲು ಸಿದ್ಧನಾಗಿದ್ದಾನೆ. ಸೈನಿಕರಿಗಾಗಿ ರೈತ ಧಾನ್ಯ ಬೆಳೆಯುತ್ತಾನೆ, ನೇಕಾರ ಬಟ್ಟೆ ನೇಯುತ್ತಾನೆ: ಕುರುಬ ಕುರಿ ಕಾಯುತ್ತಾನೆ. ಪ್ರತಿ ಕುಟುಂಬದಲ್ಲಿಯೂ ಆಯುಧಗಳುಂಟು: ಪ್ರತಿ ಸಂಸಾರವೂ ಸೈನ್ಯಕ್ಕಾಗಿ ಒಬ್ಬ ಮಗನನ್ನು ಧಾರೆಯೆರೆಯುವುದುಂಟು. ಚಾರಣರಂತು ಯುದ್ಧಕ್ಕೆಂದೇ ತಮ್ಮನ್ನು ಅರ್ಪಿಸಿಕೊಂಡವರು. ಅವಶ್ಯವಾದರೆ ಅವರೂ ಕೈದು ಹಿಡಿದಾರು. ಆದರೆ ಅವರ ಪ್ರಮುಖ ಕರ್ತವ್ಯ ವೀರ ಅಥವಾ ಯುದ್ಧಗೀತೆಗಳನ್ನು ಕಟ್ಟುವುದು, ಮರುಧರೆ ಪ್ರತಿಧ್ವನಿಸುವಂತೆ ಹಾಡುವುದು, ಮತ್ತು ಸೈನಿಕರನ್ನು ಹುರಿದುಂಬಿಸುವುದು. ಆತ್ಮಗೌರವಪ್ರಜ್ಞೆ, ಸ್ವಾತಂತ್ರ್ಯ ರಕ್ಷಣೆಯ ಕಾತರತೆ, ವೀರೋತ್ಸಾಹಗಳಿಂದ ಕುದಿಯುವ ರಕ್ತವೇ ಹಾಡಾಗಿ ಹರಿಯುತ್ತದೆ.

ಸಾಮಾನ್ಯವಾಗಿ ಈ ಹಾಡುಗಳೆಲ್ಲ ದೋಹೆ ಛಂದಸ್ಸಿನಲ್ಲಿವೆ. ಹೆಸರೇ ಸೂಚಿಸುವಂತೆ ಅವರಲ್ಲಿ ಎರಡು ಸಾಲುಗಳಿರುತ್ತವೆ. ಬೇರೆ ಛಂದೋ ಪ್ರಕಾರಗಳನ್ನು ಬಳಸುವುದೂ ಉಂಟು. ಮನೆಮನೆಯಲ್ಲಿಯೂ ಪ್ರಚಾರವಾಗಿರುವ ಈ ಹಾಡುಗಳು ನಿರಂತರ ಪರಿವರ್ತನೆಗೆ ಪಕ್ಕಾಗಿವೆ. ಮುಖ್ಯವಾಗಿ ಚಾರಣರು ಅವನ್ನು ಹಾಡುವವರಾದರೂ, ಹೆಂಗಸರು ಮಕ್ಕಳು ಸರದಾರರು ಮತ್ತು ಸೈನಿಕರು ಹಾಡಬಾರದೆಂದಿಲ್ಲ. ಉತ್ಸಾಹದ ಕಾವು ಇಳಿಯಬಾರದೆಂದರೆ, ಅವರು ಅತ್ಯವಶ್ಯವಾಗಿ ಹಾಡಲೂಬೇಕು. ಹೀಗಾಗಿ ಪಾಠಾಂತರಗಳು ಬೆಳೆಯುತ್ತವೆ. ಅನೇಕವೇಳೆ ಮೂಲಪಾಠಗಳು ಸಂಪೂರ್ಣವಾಗಿ ಮರೆತುಹೋಗಬಹುದು. ಅವು ಒಟ್ಟಿನ ಮೇಲೆ ಮೌಖಿಕ ಸಂಪ್ರದಾಯದಲ್ಲುಳಿದುಕೊಂಡು ಬಂದದ್ದುಂಟು.

ಚಾರಣರಲ್ಲದೆ ಸರದಾರರು ಮತ್ತು ದೊರೆಗಳು—ಒಟ್ಟಿನಲ್ಲಿ ಯಾರು ಬೇಕಾದರೂ ಕಟ್ಟಬಹುದಾದ ಮತ್ತು ಹಾಡಬಹುದಾದ ಗೀತೆಗಳಾದ್ದರಿಂದ ಇವನ್ನು ಶುದ್ಧ ಜಾನಪದ ಗೀತೆಗಳೆಂದು ಕರೆಯಬಹುದೇ ಎಂಬ ಸಂಶಯವುಳಿಯುತ್ತದೆ. ಆದರೆ ಚಾರಣರು ಕಟ್ಟಿದ ಗೀತೆಗಳನ್ನು ಅವರು ಹಾಡುವುದರಿಂದ ಮತ್ತು ಕೆಲವೊಮ್ಮೆ ಅದೇ ಧಾಟಿಯಲ್ಲಿ ಕಟ್ಟುವುದರಿಂದ, ಅವುಗಳ ಮೂಲಸ್ವರೂಪಕ್ಕೆ ಭಂಗ ಬರದಿರುವುದರಿಂದ ಅವುಗಳನ್ನು ಜಾನಪದ ಸಂಪ್ರದಾಯದ ಪರಿಧಿಯಲ್ಲಿ ಪರಿಗಣಿಸುವುದು ತಪ್ಪಲ್ಲವೆಂದು ತೋರುತ್ತದೆ. ಬದಲಾದ ಸಂಪ್ರದಾಯದ ಪರಿಧಿಯಲ್ಲಿ ಪರಿಗಣಿಸುವುದು ತಪ್ಪಲ್ಲವೆಂದು ತೋರುತ್ತದೆ. ಬದಲಾದ

ಭರತಖಂಡದ ಬೇರೆಡೆಗಳಲ್ಲಿ ಪಿರಿಯಪಟ್ಟಣದ ಕಾಳಗದಂಥ ವೀರಗೀತೆಗಳು ದೊರೆಯುವ ಸಂಭವವುಂಟು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ದೇಶವೆಲ್ಲೆಲ್ಲ ಲಾವಣಿ ರೂಪದ ಹಾಡುಗಳು ಹುಟ್ಟಿಕೊಂಡದ್ದುಂಟು. ಕೊಳುಗುಳ ಸಮನಿಸದಿದ್ದರೂ, ವೀರೋತ್ಸಾಹವನ್ನುಕ್ಕಿಸುವಂಥ ತ್ಯಾಗ ಬಲಿದಾನಗಳನ್ನು ಪ್ರೇರಿಸುವಂಥ ಹಾಡುಗಳು ಲಾವಣಿಗಳು ಆಗಿನ ಕಾಲದಲ್ಲಿ ನಾಡಿನಲ್ಲೆಲ್ಲ ಹರಿದಾಡಿದುವು. ಆದರೆ ಅವುಗಳಲ್ಲಿ ರಕ್ತವನ್ನು ಕುದಿಸುವ, ಅಂಗಾಂಗಗಳಲ್ಲಿ ಚೈತನ್ಯವನ್ನುಕ್ಕಿಸುವ, ಶೌರ್ಯ ಪ್ರತಾಪಾದಿ ಕ್ಷಾತ್ರಗುಣಗಳನ್ನು ಕೆರಳಿಸುವ, ಮೈನವಿರೇಳಿಸುವ ಗುಣಗಳು ಕಡಮೆ. ಅಷ್ಟೇ ಅಲ್ಲ, ಉತ್ತರಭಾರತದಂತೆ ದಕ್ಷಿಣ ಭಾರತದಲ್ಲಿ ಯುದ್ಧದ ಬಿಸಿ ಮನೆಮನೆಗೂ ತಾಕಲಿಲ್ಲ; ಯುದ್ಧವೆನ್ನು

ಗೊಂಡಿರಬೇಕು. ಆದರೆ ಅವೆಲ್ಲ ಕಾಲಗರ್ಭದಲ್ಲಿ ಹೂತುಕೊಂಡಿವೆ. ಈಗ ರೂಢಿಯಲ್ಲಿರುವ ಹಾಡುಗಳು ತುಂಬ ಹಳೆಯವಲ್ಲ. ಜನಪದಗೀತೆಯ ಮಾದರಿಯಲ್ಲಿ ಜನಪ್ರಿಯಗೀತೆಯಾಗಿ ಹುಟ್ಟಿದ ಐರಿಷ್ ಗೀತೆಯೊಂದನ್ನಿಲ್ಲಿ ಉದ್ಧರಿಸಬಹುದು. ಹೆಂಗಸಿನ ನೋವುನಲಿವುಗಳು ಕಷ್ಟನಿಷ್ಠುರಗಳು ಎಲ್ಲ ಸಮಾಜಗಳಲ್ಲಿಯೂ ಒಂದೇ ಎನ್ನುವುದು ಅದರಿಂದ ಗೊತ್ತಾಗುತ್ತದೆ.

ಮುದುಕನೊಬ್ಬನೆನ್ನ ಮೋಹಿಸಿದನು ಪ್ರೀತಿಯಿಂದಲಿ
ಮುದುಕನೊಬ್ಬನೆನ್ನ ಮೋಹಿಸಿದನು ನಂಬು ನಿಜವಿದು
ಮುದುಕನೊಬ್ಬನೆನ್ನ ಮೋಹಿಸಿದನು, ಮದುವೆಯಾದೆನಯ್ಯೊ ಬರಿಯುಗೋಳು
ಮುದುಕನೊಡನೆ ಮದುವೆ ಬೇಡ, ಜೋಕೆ, ಹೆಣ್ಣುಗಳಿರ ಬದುಕಿರೆ.

ಹಳ್ಳಿಯ ಹೆಣ್ಣಿನಪಾಲಿಗೆ ಬೀಸುವಕಲ್ಲು ಜಡವಸ್ತುವಲ್ಲ; ಅವಳು ಕಲ್ಲಮ್ಮ, ಮಾತಾಯಿ. ಬೈಗ ಜನರ ಪ್ರಕಾರ ಕೆಳಗಣ ಕಲ್ಲು ತಾಯಿ, ಮೇಲಣ ಕಲ್ಲು ತಂದೆ. ಮೊದಲು ರಾಗಿ ಬೀಸಿದವಳು ಸಿರಿಗೌರಿ: ಹಾಡು ಕಲಿಸಿದವಳು ಕೃಷ್ಣನ ತಂಗಿ ಸುಭದ್ರೆ. ಬೆಳಗಿನ ಜಾವ ಕಲ್ಲಿನ ಶ್ರುತಿಯೊಂದಿಗೆ ಹೆಣ್ಣು ಮಕ್ಕಳು ಹಾಡುವಾಗ ಗಂಡಸು ಒಮ್ಮಿಂದೊಮ್ಮೆಗೆ ಗಂಧರ್ವಲೋಕದಲ್ಲಿ ವಿಹರಿಸುತ್ತಾನೆ. ಮಕ್ಕಳಿಗಂತು ಆ ಹಾಡು ಸಮ್ಮೋಹನಾಸ್ತ್ರ.

ಸ್ವಾತಿ ಮಳೆಗಾಗಿ ಕಾಯುವುದು ಚಿಪ್ಪು
ಕಾದಿದೆ ಚಕಾವಿ[1] ರವಿಯುದಯಕಾಗಿ
ಯುದ್ಧಸನ್ನದ್ಧ ಸತತರಜಪೂತ
ವೀರನಂ ಪಡೆಯೆ ಕಾದಿಹಳು ಕನ್ಯೆ
ಪರಕೀಯರಿಗೊಪ್ಪಿಸದಿರು ತಾಯ್ನಾಡ
ಧೀರನೊಲು ಹೋರಾಡು ರಣರಂಗದಲ್ಲಿ
ಬಾಳಿಸಲಿ ಸಾವಿನಲಿ ಗೌರವವ ಕಾಯಿ
ತಾಯಿ ಹಾಡುವಳಿಂತು ತೊಟ್ಟಿಲನು ತೂಗಿ.[2]

ಪ್ರತಿ ರಜಪೂತಮಾತೆಯ ಮತ್ತು ಕನ್ಯೆಯ ಹೃದಯದಲ್ಲಿ ಸದಾ ಹೊಂಚುಹಾಕುತ್ತಿರುವ ಹಾಗೂ ಹೊಳಲುಗೊಡುವ ಭಾವನೆಗಳಿವು. ಹೋರಾಟವೇ ರಜಪೂತರ ನಿತ್ಯಕರ್ಮ: ವೀರಶೌರ್ಯಾದಿ ಕ್ಷಾತ್ರಗುಣಗಳೇ ಅವರ ಜೀವನಧರ್ಮ. ಅವರ ಹೋರಾಟ ದ್ವಿಮುಖವಾದದ್ದು: ಒಂದು ಪ್ರಕೃತಿಯೊಡನೆ, ಮತ್ತೊಂದು ಶತ್ರುಗಳೊಡನೆ. ವೀರಪುತ್ರನನ್ನು ಪಡೆಯುವ ಬಯಕೆ ಅಲ್ಲಿಯ ತಾಯಂದಿರದು, ವೀರಪತಿಯನ್ನು ಹೊಂದುವಾಸೆ ಯುವತಿಯರದು. ಯುದ್ಧದಲ್ಲಿ ಹಿಮ್ಮೆಟ್ಟಿದ ಗಂಡ ಅಥವಾ ಮಗ ಯೋಗ್ಯನಲ್ಲವೆಂಬ ಎಣಿಕೆ ಅವರದು; ಗೆಲ್ಲಲಿ ಸಾಯಲಿ ಅವನಿಗೆ ವೀರೋಚಿತ ಸನ್ಮಾನ ಸಲ್ಲುತ್ತದೆ.

ರಾಜಪುತ್ರ ಸ್ಥಾನದ ಜನರ ದೇಶಾಭಿಮಾನ ಅಪ್ರತಿಹತವಾದದ್ದು, ತ್ಯಾಗಮಯ

---

1 ಒಂದು ತೆರನ ಹಕ್ಕಿ.

2 *Meet my people* by Devendra Satyarthi, pp. 62–63.

ವಾದದ್ದು. ಪ್ರತಿಯೊಬ್ಬ ಪ್ರಜೆಯೂ ಯುದ್ಧದ ಸಮಯದಲ್ಲಿ ತನುಮನಧನಗಳನ್ನರ್ಪಿಸಲು
ಸಿದ್ಧನಾಗಿದ್ದಾನೆ. ಸೈನಿಕರಿಗಾಗಿ ರೈತ ಧಾನ್ಯ ಬೆಳೆಯುತ್ತಾನೆ, ನೇಕಾರ ಬಟ್ಟೆ ನೇಯು
ತ್ತಾನೆ; ಕುರುಬ ಕುರಿ ಕಾಯುತ್ತಾನೆ. ಪ್ರತಿ ಕುಟುಂಬದಲ್ಲಿಯೂ ಆಯುಧಗಳುಂಟು:
ಪ್ರತಿ ಸಂಸಾರವೂ ಸೈನ್ಯಕ್ಕಾಗಿ ಒಬ್ಬ ಮಗನನ್ನು ಧಾರೆಯೆರೆಯುವುದುಂಟು. ಚಾರಣ
ರಂತು ಯುದ್ಧಕ್ಕೆಂದೇ ತಮ್ಮನ್ನು ಅರ್ಪಿಸಿಕೊಂಡವರು. ಅವಶ್ಯವಾದರೆ ಅವರೂ ಕೈದು
ಹಿಡಿದಾರು. ಆದರೆ ಅವರ ಪ್ರಮುಖ ಕರ್ತವ್ಯ ವೀರ ಅಥವಾ ಯುದ್ಧಗೀತೆಗಳನ್ನು
ಕಟ್ಟುವುದು, ಮರುಧರೆ ಪ್ರತಿಧ್ವನಿಸುವಂತೆ ಹಾಡುವುದು, ಮತ್ತು ಸೈನಿಕರನ್ನು ಹುರಿ
ದುಂಬಿಸುವುದು. ಆತ್ಮಗೌರವಪ್ರಜ್ಞೆ, ಸ್ವಾತಂತ್ರ್ಯ ರಕ್ಷಣೆಯ ಕಾತರತೆ, ವೀರೋತ್ಸಾಹ
ಗಳಿಂದ ಕುದಿಯುವ ರಕ್ತವೇ ಹಾಡಾಗಿ ಹರಿಯುತ್ತದೆ.

ಸಾಮಾನ್ಯವಾಗಿ ಈ ಹಾಡುಗಳೆಲ್ಲ ದೋಹೆ ಛಂದಸ್ಸಿನಲ್ಲಿವೆ. ಹೆಸರೇ ಸೂಚಿಸುವಂತೆ
ಅದರಲ್ಲಿ ಎರಡು ಸಾಲುಗಳಿರುತ್ತವೆ. ಬೇರೆ ಛಂದೋ ಪ್ರಕಾರಗಳನ್ನು ಬಳಸುವುದೂ
ಉಂಟು. ಮನೆಮನೆಯಲ್ಲಿಯೂ ಪ್ರಚಾರವಾಗಿರುವ ಈ ಹಾಡುಗಳು ನಿರಂತರ ಪರಿವರ್ತ
ನೆಗೆ ಪಕ್ಕಾಗಿವೆ. ಮುಖ್ಯವಾಗಿ ಚಾರಣರು ಅವನ್ನು ಹಾಡುವವರಾದರೂ, ಹೆಂಗಸರು
ಮಕ್ಕಳು ಸರದಾರರು ಮತ್ತು ಸೈನಿಕರು ಹಾಡಬಾರದೆಂದಿಲ್ಲ. ಉತ್ಸಾಹದ ಕಾವು ಇಳಿಯ
ಬಾರದೆಂದರೆ, ಅವರು ಅತ್ಯವಶ್ಯವಾಗಿ ಹಾಡಲೂಬೇಕು. ಹೀಗಾಗಿ ಪಾಠಾಂತರಗಳು
ಬೆಳೆಯುತ್ತವೆ. ಅನೇಕವೇಳೆ ಮೂಲಪಾಠಗಳು ಸಂಪೂರ್ಣವಾಗಿ ಮರೆತುಹೋಗಬಹುದು.
ಅವು ಒಟ್ಟಿನ ಮೇಲೆ ಮೌಖಿಕ ಸಂಪ್ರದಾಯದಲ್ಲುಳಿದುಕೊಂಡು ಬಂದದ್ದುಂಟು.

ಚಾರಣರಲ್ಲದೆ ಸರದಾರರು ಮತ್ತು ದೊರೆಗಳು—ಒಟ್ಟಿನಲ್ಲಿ ಯಾರು ಬೇಕಾದರೂ ಕಟ್ಟ
ಬಹುದಾದ ಮತ್ತು ಹಾಡಬಹುದಾದ ಗೀತೆಗಳಾದ್ದರಿಂದ ಇವನ್ನು ಶುದ್ಧ ಜಾನಪದ
ಗೀತೆಗಳೆಂದು ಕರೆಯಬಹುದೇ ಎಂಬ ಸಂಶಯವುಳಿಯುತ್ತದೆ. ಆದರೆ ಚಾರಣರು ಕಟ್ಟಿದ
ಗೀತೆಗಳನ್ನು ಅವರು ಹಾಡುವುದರಿಂದ ಮತ್ತು ಕೆಲವೊಮ್ಮೆ ಅದೇ ಧಾಟಿಯಲ್ಲಿ ಕಟ್ಟು
ವುದರಿಂದ, ಅವುಗಳ ಮೂಲಸ್ವರೂಪಕ್ಕೆ ಭಂಗ ಬರದಿರುವುದರಿಂದ ಅವುಗಳನ್ನು ಜಾನಪದ
ಸಂಪ್ರದಾಯದ ಪರಿಧಿಯಲ್ಲಿ ಪರಿಗಣಿಸುವುದು ತಪ್ಪಲ್ಲವೆಂದು ತೋರುತ್ತದೆ. ಬದಲಾದ
ಪರಿಸ್ಥಿತಿಯಿಂದಾಗಿ ಚಾರಣರು ಮರೆಯಾಗಿ, ಗೀತೆಗಳ ಬೆಳವಣಿಗೆ ಕುಂಠಿತಗೊಂಡಿದೆ.

ಭರತಖಂಡದ ಜೀರೆಡೆಗಳಲ್ಲಿ ಪಿರಿಯಪಟ್ಟಣದ ಕಾಳಗದಂಥ ವೀರಗೀತೆಗಳು ದೊರೆ
ಯುವ ಸಂಭವವುಂಟು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ದೇಶದಲ್ಲೆಲ್ಲ ಲಾವಣಿ
ರೂಪದ ಹಾಡುಗಳು ಹುಟ್ಟಿಕೊಂಡದ್ದುಂಟು. ಕೊಳುಗುಳ ಸಮನಿಸದಿದ್ದರೂ, ವೀರೋ
ತ್ಸಾಹವನ್ನುಕ್ಕಿಸುವಂಥ ತ್ಯಾಗ ಬಲಿದಾನಗಳನ್ನು ಪ್ರೇರಿಸುವಂಥ ಹಾಡುಗಳು ಲಾವಣಿ
ಗಳು ಆಗಿನ ಕಾಲದಲ್ಲಿ ನಾಡಿನಲ್ಲೆಲ್ಲ ಹರಿದಾಡಿದುವು. ಆದರೆ ಅವುಗಳಲ್ಲಿ ರಕ್ತವನ್ನು
ಕುದಿಸುವ, ಅಂಗಾಂಗಗಳಲ್ಲಿ ಚೈತನ್ಯವನ್ನುಕ್ಕಿಸುವ, ಶೌರ್ಯ ಪ್ರತಾಪಾದಿ ಕ್ಷಾತ್ರಗುಣ
ಗಳನ್ನು ಕೆರಳಿಸುವ, ಮೈನವಿರೇಳಿಸುವ ಗುಣಗಳು ಕಡಮೆ. ಅಷ್ಟೇ ಅಲ್ಲ, ಉತ್ತರಭಾರತ
ದಂತೆ ದಕ್ಷಿಣ ಭಾರತದಲ್ಲಿ ಯುದ್ಧದ ಬಿಸಿ ಮನೆಮನೆಗೂ ತಾಕಲಿಲ್ಲ; ಯುದ್ಧವೆನ್ನು

ವುದು ಜನತಾ ಜೀವನದ ಒಂದು ಭಾಗವಾಗಲಿಲ್ಲ. ಆದ್ದರಿಂದ ಈ ಭಾಷೆಗಳಲ್ಲಿ ರಣಗೀತೆಗಳು ಇಲ್ಲವೆಂದರೂ ತಪ್ಪಾಗುವುದಿಲ್ಲ.

ಹಾಡುಗಳು ದೊಡ್ಡವರಿಗೆ ಮಾತ್ರವೇ ಸೀಮಿತವಾದುವಲ್ಲ. ಅವರಿಗಿಂತ ಮಿಗಿಲಾಗಿ ಅವು ಮಕ್ಕಳಿಗೆ ಬೇಕು. ಆಟಪಾಟಗಳು ಯಾವಾಗಲೂ ಜತೆಜತೆಯಾಗಿಯೇ ಸಾಗುವಂಥವು. ಆಟವಿದ್ದ ಕಡೆ ಪಾಟವಿರಲೇಬೇಕು. ಮಾತುಕಲಿಕೆಯೂ ಮಕ್ಕಳಿಗೊಂದು ಆಟ. ಅವರವೇ ಒಂದು ಶಬ್ದಕೋಶವಿರುತ್ತದೆ. ಅವನ ಬಾಯಲ್ಲಿ ಹಾಲು 'ಆಯಿ'ಯಾಗುತ್ತದೆ, ಪಾರ್ವತಿ 'ತಾಪಿ'ಯಾಗುತ್ತದೆ. ಮನಸ್ಸಿನ ಭಾವನೆಗಳಿಗೆ ಮಾತೊಂದು ಸಂಕೇತವೆಂಬುದು ನಿದರ್ಶನಗಳಿಂದ ತಿಳಿಯುತ್ತದೆ. ಹಿರಿಯರ ಅನುಕರಣದಿಂದ ಈ ಮಾತುಗಳು ಕಾಲಕ್ರಮೇಣ ಮರೆತುಹೋಗುತ್ತವೆ. ತಾಯಿಯ ಜೋಗುಳದ ಮೂಲಕ ಮೊಟ್ಟಮೊದಲಿಗೆ ಅವನ ಕಿವಿಯ ಮೇಲೆ ಬೀಳುವ ಭಾಷೆ ಗೇಯಾತ್ಮಕವಾದುದು. ಮಾತು ಕಲಿಯುವುದಕ್ಕೆ ಮುಂಚೆ ಮಗು ತನ್ನ ಭಾವನೆಗಳನ್ನು ಉದ್ಗಾರ ಹಾಗೂ ಕಾಕು ಕೇಕೆಗಳ ಮೂಲಕ ಅಭಿವ್ಯಕ್ತಪಡಿಸುತ್ತಾನೆ. ಕೆಲವು ವೇಳೆ ಅಸ್ಪಷ್ಟವಾದ ದನಿಗಳು ಎಳೆಯುಂತೆ ಹರಿದು ರಾಗದ ಭಾವನೆಯನ್ನು ತಂದುಕೊಡುತ್ತವೆ. ಗಿಲಿಕೆ ಚೆಂಡು ಮೊದಲಾದ ಆಟದ ವಸ್ತುಗಳನ್ನು ಕೊಟ್ಟರೆ ಜೊಲ್ಲು ಸುರಿಸುತ್ತ ರಾಗವೆಳೆಯುತ್ತ ಸ್ವೇಚ್ಛೆಯಾಗಿ ಆಡುತ್ತಾನೆ. ನಡೆಯುವಂತಾದಾಗ ಓರಗೆಯ ಮಕ್ಕಳು ಸಿಕ್ಕಿದರೆ ಅವನ ಆನಂದ ಹೇಳತೀರದು: ಸಿಗಲಿಲ್ಲ, ಮಂಕಾಗುತ್ತಾರೆ. ಆಟವಾಡುತ್ತಿರುವಾಗಲೇ ಮಾತುಗಳು ಪ್ರಾಸಬದ್ಧವಾಗಿ ನಿರರ್ಗಳವಾಗಿ ಹರಿಯುತ್ತವೆ. ಅಸ್ವೈಚ್ಛಿಕವಾಗಿಯೇ ತುಂಡು ಪ್ರಾಸಗಳು[1] ಸೃಷ್ಟಿಯಾಗುತ್ತವೆ. ಒಬ್ಬ ಮಾತಿನ ನಡುವೆ 'ತಿಮ್ಮ' ಎಂದರೆ ಮತ್ತೊಬ್ಬ 'ಗುಮ್ಮ' ಎನ್ನುತ್ತಾನೆ. 'ರೂಪಾಯಿ' ಎಂದರೆ 'ಸಿಮ್ಮಪ್ಪ ಸಿಪಾಯಿ' ಎನ್ನುತ್ತಾನೆ. ಇದೂ ಒಂದು ಆಟ, ದೊಡ್ಡ ಹುಡುಗರಲ್ಲಿ ಇಂಗ್ಲಿಷ್ ಪದದಾಟವಿದ್ದಂತೆ. ಇದು ಸ್ಪರ್ಧೆಯಿಂದ ನಡೆಯುತ್ತದೆ. ಇಲ್ಲಿ ಅರ್ಥಮೇಳ ಅಥವಾ ಸುಸಂಬದ್ಧತೆ ಮುಖ್ಯವಲ್ಲ, ಶಬ್ದಚಮತ್ಕಾರವೇ ಪ್ರಾಧಾನ್ಯ. ಬರಬರುತ್ತ ದೊಡ್ಡವರ ಹಾಡುಗಳನ್ನು ಅನುಕರಿಸುತ್ತ, ಅವುಗಳನ್ನು ಮಾದರಿಯಾಗಿಟ್ಟುಕೊಂಡು, ತಮ್ಮ ಅಭಿರುಚಿಗೆ ತಕ್ಕಂತೆ ಪದಗಳನ್ನು ಹೆಣೆದುಕೊಳ್ಳುತ್ತಾರೆ. ಹಿರಿಯರು, ಅವರಲ್ಲಿಯೂ ಅವರಿಗೆ ವಯಸ್ಸಿನಲ್ಲಿ ಹೆಚ್ಚು ಅಂತರವಿರದ ಹುಡುಗರು ಹಾಡು ಕಟ್ಟುವುದರಲ್ಲಿ ನೆರವು ನೀಡಬಹುದು. ಒಟ್ಟಿನಲ್ಲಿ ಶಿಶುಗೀತೆಗಳು ಆಕಸ್ಮಿಕವಾಗಿ ಪರಿಸರದ ಸ್ಫೂರ್ತಿಯಿಂದ, ಆಟಗಳ ಪ್ರಚೋದನೆಯಿಂದ ಹಾಗೂ ಅಂತಃಪ್ರೇರಣೆಯಿಂದ ಮೂಡಿದುವೆಂದು ಹೇಳಬಹುದಾಗಿದೆ.

---

[1] ಇಂಗ್ಲಿಷಿನ Nursery rhymes ಎನ್ನುವ ಅರ್ಥದಲ್ಲಿ ಹಾ. ಮಾ. ನಾಯಕರು 'ಶಿಶುಪ್ರಾಸ' ಎಂಬ ಮಾತನ್ನು ಬಳಸಿದ್ದಾರೆ. ಮಕ್ಕಳ ಹಾಡುಗಳ ಸ್ವರೂಪವನ್ನು ಗಮನಿಸಿದಾಗ ಈ ಮಾತು ಅವುಗಳಿಗೆ ಅತ್ಯುಚಿತವಾಗಿ ಸಲ್ಲುತ್ತದೆ. ಗೀತೆ ಅಥವಾ ಹಾಡು ಎಂಬ ಪದವನ್ನು ಇತರ ಪ್ರಕಾರಗಳಿಗೆ ಬಳಸಿರುವುದರಿಂದ ಏಕರೂಪತೆಗಾಗಿ ಮಕ್ಕಳ ಹಾಡು ಅಥವಾ ಶಿಶುಗೀತೆ ಎಂಬ ಹೆಸರನ್ನು ಉಳಿಸಿಕೊಂಡಿದೆ.

ಮಕ್ಕಳ ಅನುಕರಣ ಸಾಮರ್ಥ್ಯ ಅದ್ಭುತವಾದದ್ದು, ಅದ್ವಿತೀಯವಾದದ್ದು. ಮೊದಲನೆಯ ವರ್ಷ ತುಂಬುತ್ತಿದ್ದಂತೆಯೇ ಅವರ ಅನುಕರಣ ಶಕ್ತಿ ಕಣ್ಣುಬಿಟ್ಟು, ನಾಲ್ಕೈದು ವರ್ಷಗಳಲ್ಲಿ ವಿಶ್ವವನ್ನೇ ನುಂಗುವಂಥ ವಿಕ್ರಮವನ್ನು ಪಡೆಯುತ್ತದೆ. ದೊಡ್ಡವರು ಮಾಡುವುದನ್ನೆಲ್ಲ ಅವರು ಪುನರಭಿನಯಿಸುತ್ತಾರೆ. ಮನೆ ಕಟ್ಟಿಕೊಳ್ಳುತ್ತಾರೆ, ಒಲೆ ಹೂಡುತ್ತಾರೆ, ಮದುವೆ ಮಾಡುತ್ತಾರೆ, ಗಂಡಹೆಂಡಿರಂತೆ ವರ್ತಿಸುತ್ತಾರೆ, ಹೊಲ ಉಳುತ್ತಾರೆ, ಸಂತೆಗೆ ಹೋಗಿ ಸಾಮಾನು ತರುತ್ತಾರೆ: ಅವರು ಆಡುವ ಈ ಆಟಗಳು ಒಂದೇ, ಎರಡೇ, ಹಲವಾರು. ಪ್ರೌಢವಯಸ್ಸಿನಲ್ಲಿ ಸಂಸಾರಿಗಳಾಗುವ ಮುನ್ನವೇ ಆ ನಾಟಕವನ್ನಾಡಿ ಪೂರೈಸಿರುತ್ತಾರೆ. ಎರಡು ವರ್ಷದ ಮಗು ಗೊಂಬೆಗೆ ಮಾಡುವ ಉಪಚಾರ ತಾಯಿ ತಂದೆಯರ ಲಾಲನೆಗಿಂತ ಮಿಗಿಲಾಗಿರುತ್ತದೆ. ಅವನು ಅದಕ್ಕೆ ಸ್ನಾನ ಮಾಡಿಸುತ್ತಾನೆ, ಮಡಿಯುಡಿಸುತ್ತಾನೆ, ಹಾಸಿ ಹಾಡಿ ಮಲಗಿಸುತ್ತಾನೆ, ತಿಂಡಿ ತಿನಿಸುತ್ತಾನೆ. ಈ ಚೇಷ್ಟೆಗಳಿಗೆ ಅನುಕರಣವೊಂದೇ ಅಲ್ಲ, ಸಹಜಪ್ರವೃತ್ತಿಗಳೂ ಕಾರಣವೆಂದು ತೋರುತ್ತದೆ. ಅಂತು ಮಕ್ಕಳು ಒಟ್ಟಿಗೆ ಆಡಿಕೊಳ್ಳುವಾಗ ಗೀತೆಗಳು ಜನ್ಮಧಾರಣೆ ಮಾಡುತ್ತವೆ.

ಒಟ್ಟಿನ ಆಟಗಳು ಈ ಪಾಟಗಳ ಉಗಮ ಮಾಧ್ಯಮಗಳಲ್ಲೊಂದಾಗಿರಬೇಕೆನ್ನುವುದರಲ್ಲಿ ಸಂಶಯವಿಲ್ಲ. ಆಟದ ಬಯಲಿನಲ್ಲಿ, ನಿಸರ್ಗದ ಮಡಿಲಿನಲ್ಲಿ ಮೋಳೆಗಳಂತೆ ಉಕ್ಕುತ್ತವೆ. ಹಲವು ಮಕ್ಕಳ ಹಾಡುಗಳು ಕ್ರಿಯಾತ್ಮಕವಾದುವೆನ್ನುವುದನ್ನು ಮರೆಯುವಂತಿಲ್ಲ. ಒಂದೊಂದು ನಿರ್ದಿಷ್ಟಕ್ರೀಡೆಗಳ ಜತೆಯಲ್ಲಿ ಹಾಡುವಂಥವು.

ಗರಗರ ಗಟ್ಟಿ
ಕೋಳಿ ಮೊಟ್ಟೆ
ಸಾಲ ಕೊಟ್ಟೆ
ನೀನೇ ಕೆಟ್ಟೆ.

ಇದು ಗೋಲಿ ಆಟದಲ್ಲಿ ಮಾತ್ರ ಬಳಸುವಂಥದು. ಗಣೇಶನ ಹಬ್ಬದಲ್ಲಿ ಹಾಡುವಂಥದು 'ಗಣೇಶ ಬಂದ, ಕಾಯಿ ಕಡಬು ತಿಂದ' ಎನ್ನುವ ಹಾಡು ವರ್ತುಲಾಕಾರವಾಗಿ ಕುಳಿತು ಆಡುವ ಆಟವೊಂದರಲ್ಲಿ 'ಕ್ಯೆಕ್ಯೆ ಎಲ್ಲಿಗೋದ್ಯೋ, ಕಸದ ಮೂಲೆಗೋದ್ಯೊ' ಎನ್ನುವ ಸಂವಾದರೂಪದ ಹಾಡು ಪ್ರವೇಶಿಸುತ್ತದೆ. ಸಂಖ್ಯೆಯ ಆಟದಲ್ಲಿ 'ಒಂದು ಸೀಬಿ ಸೀಬಿ ಎರಡು ಗರಡಾಳ' ಎಂದು ಆರಂಭವಾಗುವ ಹಾಡು ಕಾಣಿಸಿಕೊಳ್ಳುತ್ತದೆ. 'ಕಪ್ಪೆ ಕರ ಕರ ತುಪ್ಪ ಜಲಜಲ' ಎನ್ನುವುದು ಮದುವೆಯ ಆಟದಲ್ಲಿ ಬರುತ್ತದೆ.[1]

ಈ ರಚನೆಗಳನ್ನು ಲಕ್ಷಿಸುವಾಗ ಕೆಲವು ಲಕ್ಷಣಗಳು ಎದ್ದು ಕಾಣುತ್ತವೆ. ಇತರ ಜನಪದ ಸಾಹಿತ್ಯ ಪ್ರಕಾರಗಳಂತೆ ಇವು ಸಹ ಸಮಷ್ಟಿಸೃಷ್ಟಿ. ಇವುಗಳಲ್ಲಿ ಅರ್ಥಕ್ಕಿಂತ ಶಬ್ದ ಚಮತ್ಕಾರಕ್ಕೆ ಪ್ರಾಶಸ್ತ್ಯ. ಅರ್ಥವಿರುವೆಡೆಯಲ್ಲಂತು ಅದು ನೇರ ಮತ್ತು ಸರಳ. ಅವುಗಳ

1 ಜಿ. ಎಸ್. ಗದ್ದಗಿಮಠ ಅವರು ತಮ್ಮ 'ಕನ್ನಡ ಜಾನಪದ ಗೀತೆಗಳು' ಗ್ರಂಥದಲ್ಲಿ ಮಕ್ಕಳ ಆಟ-ಹಾಡುಗಳನ್ನು ಕುರಿತು ಕೂಲಂಕಷವಾಗಿ ಚರ್ಚಿಸಿದ್ದಾರೆ. ಆಟ ಪಾಟಗಳು ಹೇಗೆ ಅಪ್ರತ್ಯೇಕವಾಗಿ ಏಕದೇಹ ನ್ಯಾಯದಂತೆ ವರ್ತಿಸುತ್ತವೆನ್ನುವುದನ್ನು ಅವರು ಸನಿದರ್ಶನವಾಗಿ ತೋರಿಸಿದ್ದಾರೆ. ಪುಟ ೩೬-೪೮.

ಕಟ್ಟಡದಲ್ಲಿ ಶಿಥಿಲತೆಯಿಲ್ಲದಿಲ್ಲ. ಸಾಲುಗಳು ನಿರಂತರವಾಗಿ ಹರಿಯುತ್ತವೆ. ಪ್ರಾಸ ಅನಿವಾರ್ಯ. ಕಲ್ಪನಾಚಾತುರ್ಯ ಪ್ರಶಂಸಾರ್ಹವಾದದ್ದು. ಅಸಂಬದ್ಧತೆ ಮತ್ತು ಅನೌಚಿತ್ಯಗಳು ಇಣುಕುವುದುಂಟು. ಏಕನಾದತೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಮನೋರಂಜನೆ ಅವುಗಳ ಗುರಿ. ಆಟಗಳಂತು ಪಾಟಗಳ ಮಾಧ್ಯಮವಲ್ಲ; ಪಾಟಗಳು ಸಹ ಆಟದ ಸಾಮಗ್ರಿಯಾಗುತ್ತವೆ. ಪ್ರಾದೇಶಿಕತೆಯ ಮುದ್ರಾಂಕನದಿಂದ ಅವು ಪಾರಾಗುವಂತಿಲ್ಲ.

ಮಕ್ಕಳ ಹಾಡುಗಳು ಸಾಮಾನ್ಯವಾಗಿ ದೇಶದಿಂದ ದೇಶಕ್ಕೆ ಸಂಚರಿಸುವುದಿಲ್ಲ. ಸಂಚರಿಸುವುದಾದರೂ ನಿಧಾನ. ಅವುಗಳಿಗೊಂದು ಪರಂಪರೆಯಿರುವುದಾದರೂ ರಚನೆಯ ಶಿಥಿಲತೆ ಹಾಗೂ ಸಂಗತಿಗಳ ಅಸಾಮಂಜಸ್ಯದಿಂದಾಗಿ, ವೈಶಿಷ್ಟ್ಯಗಳ ಅಭಾವದಿಂದಾಗಿ ಮತ್ತು ಪರಿಸರದ ಪ್ರಭಾವದಿಂದಾಗಿ ಒಂದೊಂದು ಹಾಡಿಗೂ ಅನೇಕ ಪಾಠಾಂತರಗಳು ದೊರೆಯುತ್ತವೆ. ಮದುವೆ ಆಟದ ಪದ್ಯವೊಂದರಲ್ಲಿ[1] 'ಮರದಲಿ ಪೋಟೆ' ಎಂಬ ಸಾಲಿನ ನಂತರ 'ಕಾಗೆ ಕೈಲಿ ಕಂಕಣ ಕಟ್ಟಿಸಿ' ಎಂಬ ಸಾಲಿಗೆ ಮುಂಚೆ 'ಹದ್ದಿನ ಕೈಲಿ ಸುದ್ದಿ ಕಳಿಸಿ, ನಳ್ಳಿ ಕೈಲಿ ನಗಾರಿ ಬಡಿಸಿ' ಎನ್ನುವ ಪಂಕ್ತಿಗಳು ಕೆಲವು ಕಡೆ ಸಿಗುತ್ತವೆ. ಬೇರೆ ಕೆಲವು ಕಡೆ ಪಂಕ್ತಿಗಳ ಸ್ಥಾನ ಪಲ್ಲಟಿಸುವುದುಂಟು. ಕೆಲವು ಸಾಲುಗಳಂತು ಕಾಲಕ್ರಮೇಣ ಮರವೆಯ ಬಸಿರಲ್ಲಿ ಹೂತು ಹೋಗಬಹುದು. ಏನೇ ಇರಲಿ, ಮಕ್ಕಳ ಕಲ್ಪನಾವೈಭವಕ್ಕೆ ಈ ಹಾಡು ಸಾಕ್ಷಿಯಾಗಿದೆ.

ಮನೆಮಠಗಳೆರಡರಲ್ಲಿಯೂ ಮಕ್ಕಳು ಹಾಡು ಕಲಿಯುವ, ಅಥವಾ ಕಟ್ಟುವ ಅವಕಾಶವುಂಟು. ಹಿರಿಯರ ಸಾನ್ನಿಧ್ಯ ಸಂಪರ್ಕಗಳಲ್ಲಿ ಕಲಿಯುವ ಗೀತೆಗಳಿಗೂ ಶಾಲೆಯ ಮಕ್ಕಳ ಸಂಸರ್ಗದಲ್ಲಿ ಕಲಿಯುವ ಹಾಡುಗಳಿಗೂ ವ್ಯತ್ಯಾಸವಿರುವುದು ಸಹಜ. ಮೊದಲನೆಯ ಬಗೆಯ ಹಾಡುಗಳಲ್ಲಿ ಸಂಯಮವೂ, ಎರಡನೆಯ ಬಗೆಯ ಹಾಡುಗಳಲ್ಲಿ ಸ್ವಾತಂತ್ರ್ಯವೂ ಮೊಗದೋರುವ ಸಂಭವವುಂಟು.[2]

ಲಾಲಿಪದ, ದೂರಿಪದ, ಒಗಟು ಪ್ರಾಸ, ಚಾರಿತ್ರಿಕ ಪ್ರಾಸ, ವ್ಯಕ್ತಿಯ ಪ್ರಾಸ, ವಿಡಂಬನ ಪ್ರಾಸ, ಅಸಂಬದ್ಧ ಪ್ರಾಸ, ಚತುರೋಕ್ತಿ ಪ್ರಾಸ, ಪ್ರತ್ಯುಕ್ತಿ ಪ್ರಾಸ, ಗಣಿತ ಪ್ರಾಸ, ಸಂಚಿತ ಪ್ರಾಸ, ಸಂಖ್ಯಾಪ್ರಾಸ, ಗುಣವಾಚಕ ಪ್ರಾಸ, ಕ್ರೀಡಾ ಪ್ರಾಸ, ಸ್ಥಳೀಯ ಪ್ರಾಸ—ಹೀಗೆ ರಾಗೌ ಅವರು ಶಿಶುಪ್ರಾಸಗಳನ್ನು ವರ್ಗೀಕರಿಸಿದ್ದಾರೆ. "ಕೆಲವೊಮ್ಮೆ ವರ್ಗವರ್ಗಗಳ ನಡುವಣದ ಅಂತರ ತುಂಬ ಸೂಕ್ಷ್ಮವಾದುದಾಗಿರುತ್ತದೆ"[3] ಎಂದು ಅವರೇ ಶಂಕೆ ವ್ಯಕ್ತಪಡಿಸಿ, ವರ್ಗೀಕರಣ ಸುಲಭಸಾಧ್ಯವಲ್ಲ ಎಂದು ನುಡಿದಿದ್ದಾರೆ. ಆಟಗಳಿಗೂ ಹಾಡುಗಳಿಗೂ ನಿಕಟಸಂಬಂಧವಿರುವುದರಿಂದ ಆಟಗಳನ್ನಾಧರಿಸಿ, ವರ್ಗಗಳನ್ನು ವಿಂಗಡಿಸುವ ಸಾಧ್ಯತೆಯೂ ಉಂಟು. ಮಕ್ಕಳ ಹಾಡುಗಳಲ್ಲಿ ಒಗಟುಗಳು

[1] ಕನ್ನಡ ಶಿಶುಪ್ರಾಸಗಳು, ರಾಗೌ, ಪು. ೩೫

[2] ರಾಗೌ ಅವರು ಇವುಗಳನ್ನು ಶಿಶುಪ್ರಾಸ ಮತ್ತು ಶಾಲಾಪ್ರಾಸ ಎಂಬ ಹೆಸರುಗಳಿಂದ ಕರೆದಿದ್ದಾರೆ. ವಿವರಣೆಗಳಿಗೆ ಅದೇ ಗ್ರಂಥದ ಪ್ರಸ್ತಾವನೆಯನ್ನೋದಬಹುದು.

[3] ಅದೇ, ಪು. ೧೩.

ಅಧಿಕವಾಗಿ ಕಾಣುವುದಿಲ್ಲವಾದ್ದರಿಂದ ಆ ವರ್ಗವನ್ನು ಮರೆಯಬಹುದು. ಕೆಲವು ಹಾಡುಗಳಲ್ಲಿ ಕಥೆ ಪ್ರಧಾನವಾದ್ದರಿಂದ ಅವುಗಳನ್ನು ಕಥನ ಪ್ರಾಸವೆಂದು ಕರೆದು, ಚಾರಿತ್ರಿಕ ವ್ಯಕ್ತಿಪ್ರಾಸಗಳನ್ನು ಅದರಡಿಯಲ್ಲಿ ಗುರುತಿಸಬಹುದು. ವಿಡಂಬನ, ಅಸಂಬದ್ಧ, ಪ್ರತ್ಯುಕ್ತಿ ಪ್ರಾಸಗಳನ್ನು ಚತುರೋಕ್ತಿಯಲ್ಲಿ, ಸಂಖ್ಯಾಪ್ರಾಸವನ್ನು ಗಣಿತಪ್ರಾಸದಲ್ಲಿ ವಿಲಯನಗೊಳಿಸಬಹುದೆಂದು ತೋರುತ್ತದೆ. ಉಳಿದುವನ್ನು ಕೈಬಿಡಬಹುದು.

ಇಲ್ಲಿ ಮತ್ತೊಂದು ಮುಖ್ಯ ಸಮಸ್ಯೆ ತಲೆಯೆತ್ತುತ್ತದೆ. ಲಾಲಿಪದ, ದೂರಿಪದಗಳನ್ನು ಕಟ್ಟಿದವರು ಹೆಂಗಸರೆ ಅಥವಾ ಮಕ್ಕಳೆ, ಹೆಂಗಸರು ಕಟ್ಟಿರುವುದಾದರೆ ಅವಕ್ಕೆಲ್ಲಿ ಸ್ಥಾನವುಂಟೆ ಎಂಬುದೇ ಆ ಪ್ರಶ್ನೆ. ಹಾಗೌ ಅವರು ಈ ಸಮಸ್ಯೆಯನ್ನು ಗಮನಿಸಿದಾರೆ. "ಏಕಳುವೆ ಎಲೆರಂಗ, ಬೇಕಾದ್ದು ನಿನಗಿದೆ" ಎನ್ನುವ ಹಾಡಿನ ಕೊನೆಗೆ ಜೋ ಜೋ ಸೇರಿಸಿ ತೊಟ್ಟಿಲು ತೂಗುವಾಗ ಹಾಡುವುದುಂಟಷ್ಟೆ. ಇದು ಮಕ್ಕಳ ಹಾಡಾದರೂ, ಮಕ್ಕಳು ಕಟ್ಟಿದ್ದಲ್ಲ: ಮಕ್ಕಳಿಗಾಗಿ ದೊಡ್ಡವರು ಕಟ್ಟಿದ್ದು. ಪ್ರಾಸಾನುಪ್ರಾಸಗಳಿಂದ ಘಟಿತವಾದ ಅರ್ಥವಿಲ್ಲದ ಪದಗುಂಫನಗಳಿಂದ ಕೂಡಿದ ಪಂಕ್ತಿಗಳು ಎಷ್ಟೇ ಸುಂದರವಾಗಿದ್ದರೂ ಬೆಳೆದ ಮನಸ್ಸಿನ ತಾಯಂದಿರಿಗೆ ಪೂರ್ಣತೃಪ್ತಿ ನೀಡಲಾರವು. ಹೃದಯದಲ್ಲಿ ತುಂಬಿಕೊಂಡಿರುವ ವಾತ್ಸಲ್ಯವನ್ನು ತೋಡಿಕೊಳ್ಳದ ಹೊರತು ಅವರಿಗೆ ತೃಪ್ತಿಯಿಲ್ಲ, ಆನಂದವಿಲ್ಲ. ಆ ವಾತ್ಸಲ್ಯಾಭಿವ್ಯಕ್ತಿಗೆ ಅರ್ಥಪೂರ್ಣ ಪದ ಬೇಕು. ಅರ್ಥವುಳ್ಳ ಅಂಥ ಪದಗಳನ್ನು ತೊಟ್ಟಿಲು ಹಾಡುಗಳ ಗುಂಪಿಗೆ ಸೇರಿಸಿಬಿಡಬಹುದು. ಅವು ಮಕ್ಕಳನ್ನು ಕುರಿತು ಕಟ್ಟಿದ ಹಾಡುಗಳೇ ಹೊರತು, ಮಕ್ಕಳಿಗಾಗಿ ಕಟ್ಟಿದುವಲ್ಲ. ಅವುಗಳ ರಾಗಾಂಶ ಮಾತ್ರ ಮಕ್ಕಳಿಗೆ ಬೇಕಾದ್ದು. ಉಳಿದದ್ದೆಲ್ಲ ಅವರಿಗೆ ಹೊರೆ. ಅವರಿಗದು ಹೊರೆ ಎಂದೂ ಅನಿಸುವುದಿಲ್ಲ. ಏಕೆಂದರೆ ಅವರ ಮನಸ್ಸು ಗ್ರಹಿಸುವುದು ಶ್ರವಣೇಂದ್ರಿಯದ ಮೂಲಕ ಹರಿದು ಬರುವ ನಾದ ಲಹರಿಯನ್ನು ಮಾತ್ರ.

ಕೇವಲ ನಾದಪ್ರಧಾನವಾದ ತೊಟ್ಟಿಲು ಹಾಡುಗಳನ್ನು ಶಿಶುಗೀತೆಗಳ ಗುಂಪಿಗೆ ಸೇರಿಸಬಹುದು. ಏಕೆಂದರೆ ಅವು ದೊಡ್ಡವರು ಮಕ್ಕಳಿಗಾಗಿ ರಚಿಸಿದಂಥವು. ಮಕ್ಕಳು ಹಾಡು ಕಟ್ಟಲಿಕ್ಕೆ ಅವುಗಳಿಂದ ಸ್ಫೂರ್ತಿಯೊದಗುತ್ತದೆ. ಅಷ್ಟೇ ಅಲ್ಲ. ಮಕ್ಕಳೇ ಕಟ್ಟುವ ಕೆಲವು ಪ್ರಾಸಗಳಲ್ಲಿ ದೊಡ್ಡವರ ಕೈವಾಡವೂ ಇದೆ ಎನ್ನುವುದನ್ನೊಪ್ಪಿಕೊಳ್ಳಬೇಕಾಗುತ್ತದೆ. ಮಕ್ಕಳಲ್ಲಿ ಕುತೂಹಲಾಸಕ್ತಿಗಳನ್ನು ಕೆರಳಿಸಲು, ಅವರ ಬುದ್ಧಿಯನ್ನು ಚುರುಕುಗೊಳಿಸಲು ಅವರ ನೆರವು ಅತ್ಯಗತ್ಯ. ಅವರ ಆಟಪಾಟಗಳಲ್ಲಿ ಓದುಬರಹಗಳಲ್ಲಿ ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಸ್ವತಂತ್ರ ವಾತಾವರಣದಲ್ಲಿ ಮಾತ್ರ ಅವರ ಬುದ್ಧಿಭಾವಗಳು ಪೂರ್ಣವಾಗಿ ವಿಕಾಸಗೊಳ್ಳುತ್ತವೆ. ಆದರೆ ದೊಡ್ಡವರ ಮಾರ್ಗದರ್ಶನ ಬೇಕೇ ಬೇಕು.

ದೂರಿಪದಗಳಂತು ತಾಯಂದಿರು ಮಕ್ಕಳ ಸಂತೋಷಕ್ಕಾಗಿ ಕಟ್ಟಿದಂಥವು. ತೊಡೆಯ ಮೇಲೆಯೋ ಮಂಡಿಯ ಮೇಲೆಯೋ ಕೂಸುಗಳನ್ನು ಕೂರಿಸಿಕೊಂಡು, ಕೈಯಲ್ಲಿ ಹಿಡಿದುಕೊಂಡು ಹಿಂದಕ್ಕೂ ಮುಂದಕ್ಕೂ ತೂಗುವುದುಂಟು. ಹಾಗೆ ತೂಗುವಾಗ ಅಥವಾ

ಆಡಿಸುವಾಗ—ಏಕೆಂದರೆ ವಾಸ್ತವವಾಗಿ ಅದೊಂದು ಆಟ–ದೂರಿಪದಗಳನ್ನು ಹಾಡುವ ರೂಢಿಯುಂಟು. ಹಾಡಿಲ್ಲದೆ ದೂರಿಯಿಲ್ಲ. ಈ ಆಟ ತಾಯಿ ಮಕ್ಕಳಿಬ್ಬರಿಗೂ ಚೆನ್ನ. ಈ ಹಾಡುಗಳ ಹಿನ್ನೆಲೆಯಲ್ಲಿ ತೆಳ್ಳನೆಯ ಕತೆಯಿದ್ದರೂ ಇರಬಹುದು; ಇರಲೇಬೇಕೆಂಬ ನಿಯಮವಿಲ್ಲ. ಅವುಗಳಲ್ಲಿ ವಿರಳವಾದ ಆದರೆ ಅಸಂಗತವಾದ ವರ್ಣನೆಯುಂಟು, ಅರ್ಥ ವಿಲ್ಲದ ಮಾತುಗಳುಂಟು. ಮಕ್ಕಳಿಗದು ಅರ್ಥವಾಗುವುದೂ ಇಲ್ಲ. ಪ್ರಾಸಗಳಂತು ಇರಲೇಬೇಕಾದುವು. ಪ್ರತಿ ಪಂಕ್ತಿಯ ಕೊನೆಯಲ್ಲಿಯೂ 'ದೂರಿ' ಪದ ಎರಡು ಮೂರು ಸಾರಿ ಪುನರಾವರ್ತನೆಗೊಳ್ಳುತ್ತದೆ. ನಿದರ್ಶನಾರ್ಥವಾಗಿ ಒಂದು ಹಾಡನ್ನಿಲ್ಲಿ ಕೊಟ್ಟಿದೆ.

ದೂರಿ ದೂರಿ ದುಗ್ಗಲಮ್ಮ
ದೂರಿ ದೂರಿ ದೂರಿಯಾಡೇ
ದೂರಿ ದೂರಿ ದೂರು ತಂದ
ದುಡ್ಡನ್ಬಿದ್ದ ದೂರಿ ದೂರಿ
ದಡ್ಡನೆದ್ದ ದೂರಿ ದೂರಿ
ಆತುಕೊಳ್ಳೆ ದೂರಿ ದೂರಿ
ಭೂಮಿತಾಯಿ ದೂರಿ ದೂರಿ
ಅತ್ತೇಯಮಗಳ ದೂರಿ ದೂರಿ
ನೆತ್ತೀಯ ಸೆಳೆದ ದೂರಿ ದೂರಿ
ಮಾವನ ಮಗಳ ದೂರಿ ದೂರಿ
ಮಂಡೆಯ ಸೆಳೆದ ದೂರಿ ದೂರಿ
ನಿನ್ನ ಕಣ್ಣು ಕಾಮಣ್ಣ ದೂರಿ ದೂರಿ
ನಿನ್ನ ಬೆನ್ನು ಭೀಮಣ್ಣ ದೂರಿ ದೂರಿ
ನಿನ್ನ ತುಟಿ ತೊಂಡೆಹಣ್ಣು ದೂರಿ ದೂರಿ
ನಿನ್ನ ಹಲ್ಲು ಮಲ್ಲಿಗೆ ಮೊಗ್ಗು ದೂರಿ ದೂರಿ
ನಿನ್ನ ಹೊಟ್ಟೆ ಚಿಟ್ಟುಂಡೆ ಹಣ್ಣು ದೂರಿ ದೂರಿ
ನಿನ್ನ ಬಾಯಿ ಬಳ್ಳಗಲ ದೂರಿ ದೂರಿ
ನಿನ್ನ ಮೂಗು ಸಂಪಗೆ ಹೂವು ದೂರಿ ದೂರಿ[1]

ಹೀಗೆ ಸಾಲುಗಳು ಆಂಜನೇಯನ ಬಾಲದಂತೆ ಬೆಳೆಯುತ್ತವೆ. ಇಲ್ಲಿ ವರ್ಣನೆಯುಂಟು, ಅರ್ಥವಿಲ್ಲದ ಪಂಕ್ತಿಗಳುಂಟು. ರಗಳೆಯ ಧಾಟಿಯಲ್ಲಿ ಮೂರು ಮಾತ್ರೆಗಳ ಗಣಗಳ ನಡಗೆ ಯಲ್ಲಿ ಸಾಲುಗಳು ಹರಿಯುತ್ತವೆ.

ಮಕ್ಕಳ ಹಾಡುಗಳನ್ನು ನೋಡುವಾಗ ಅವರದ್ದೇ ಒಂದು ಪ್ರತ್ಯೇಕ ಸಂಸಾರ, ಅವರದ್ದೇ ಒಂದು ಜಗತ್ತು ಎಂದೆನಿಸದಿರದು. ಅವರ ಸಾಹಿತ್ಯದಲ್ಲಿ ನೀತಿ ಅಲಂಕಾರಾದಿ ಸಾಹಿತ್ಯಾಂಶಗಳ ಕೊರತೆಯಿರಬಹುದಾದರೂ, ಅವರ ಕಲ್ಪನಾವೈಭವ ಆ ಕೊರತೆಯನ್ನು ಮರೆಸುತ್ತದೆ; ಅಲ್ಲಲ್ಲಿ ಎದ್ದು ಕಾಣಬಹುದಾದ ಅಸಾಂಗತ್ಯಗಳನ್ನು ಅವರ ಮುಗ್ಧ

[1] ಇದು ನನ್ನ ಮಡದಿ ಸಾವಿತ್ರಮ್ಮ ಹಾಡಿದ್ದು.

ಮನಸ್ಸಿನ ಶುದ್ಧ ಭಾವನೆಗಳು ಅಳಿಸಿಬಿಡುತ್ತವೆ. ಅವರ ಜೊಲ್ಲಿನಲ್ಲಿ ಅಮೃತವಿರುವಂತೆ, ಅವರ ತೊದಲಿನಲ್ಲೊಂದು ಮೋಹಕತೆಯಿರುವಂತೆ, ಅವರ ಆಟಗಳಲ್ಲಿ ಸ್ವರ್ಗೀಯಸುಖವಿರುವಂತೆ, ಅವರ ಹಾಡಿನಲ್ಲಿ ಅವರ್ಣನೀಯವಾದ ಮಾದಕತೆಯಿದೆ. ಆ ಹಾಡುಗಳು ಅವರ ಬೌದ್ಧಿಕ ಚಟುವಟಿಕೆಗಳನ್ನು ಪ್ರತಿಬಿಂಬಿಸುವಂತೆಯೇ, ಅವರ ಪ್ರತಿಭಾವಿಕಾಸಕ್ಕೆ, ಭಾವಪರಿಪಕ್ವತೆಗೆ ಹೃದಯ ಶುದ್ಧಿಗೆ, ಮಾನಸಿಕ ಆರೋಗ್ಯಕ್ಕೆ ಕಲಾಭಿರುಚಿ ಸಂವರ್ಧನೆಗೆ, ಮಾನವೀಯ ಗುಣಗಳ ಪೋಷಣೆಗೆ, ಭಾಷಾಕೃಷಿಗೆ ತುಂಬ ಅನುವಾಗುತ್ತವೆ.

ಜನಪದ ಸಮಾಜದ ಕಟ್ಟುಕಟ್ಟಳೆಗಳನ್ನು ಪ್ರತಿಬಿಂಬಿಸಿ ಸಾಮಾನ್ಯ ಜನರ ಬದುಕನ್ನು ಹಸನುಗೊಳಿಸುವ ನೀತಿಗೀತೆಗಳು ಮಾಗಿದ ಬದುಕಿನ ಅನುಭವದ ಹರಳುಗಳು. ಒಂದೊಂದು ತ್ರಿಪದಿಯೂ ಸ್ವಯಂಪೂರ್ಣವಾದುದರಿಂದ ಅವನ್ನು ಬಿಡಿಹಾಡು ಅಥವಾ ಮುಕ್ತಕಗಳೆಂದೂ ಕರೆಯಬಹುದು.[1] ಇವನ್ನು ಇಂಥ ಸಂದರ್ಭದಲ್ಲಿಯೇ ಹಾಡಬೇಕೆಂಬ ನಿಯಮವಿಲ್ಲ. ರಾಗಿ ಬೀಸುವಾಗ, ಬತ್ತ ಕುಟ್ಟುವಾಗ, ವಿಶ್ರಾಂತಿ ತೆಗೆದುಕೊಳ್ಳುವಾಗ, ಬೆಳುದಿಂಗಳಿನಲ್ಲಿ ಹರಟೆ ಹೊಡೆಯುವಾಗ, ಹಬ್ಬಹರಿದಿನಗಳಲ್ಲಿ ಒಂದು ಕಡೆ ಸೇರಿದಾಗ. ಮಾತುಕತೆ ನಡೆಯುವಾಗ ಈ ಗೀತೆಗಳು ಉದ್ಧೃತಗೊಳ್ಳಬಹುದು. ಬದುಕಿನ ಸಮಸ್ತ ಮುಖಗಳೂ ಅವುಗಳಲ್ಲಿ ಕನ್ನಡಿಗೊಳ್ಳಬಹುದು. ಜನಮನದಲ್ಲಿ ನಾಟುವಂತೆ ಜೀವನದಿಂದ, ನಿಸರ್ಗದಿಂದ, ಪುರಾಣಗಳಿಂದ ನಿದರ್ಶನಗಳನ್ನು ಕೊಟ್ಟು ನಡತೆಯನ್ನು ಬೋಧಿಸಬಹುದು, ಧರ್ಮವನ್ನುಪದೇಶಿಸಬಹುದು.

ಕೆಂಪು ಹೆಂಡತಿಯೆಂದು ಸುಮ್ಮಾನಗೊಳಬೇಡ
ಅತ್ತಿಯ ಹಣ್ಣು ಬಲುಕೆಂಪು। ನನ ಕಂದ
ಸುಲಿದು ನೋಡಿದರೆ ಹುಳು ಭಾಳ.
ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ ಕಂದಯ್ಯಾ
ಜೂಜಿಗೆ ಮನವ ಬಿಡದೀರು.

ಇದು ತಾಯಿ ಮಗನಿಗೆ ಹೇಳುವ ಬುದ್ಧಿವಾದ. ಸಂಸಾರ ಗೀತೆಗಳು ಇಂಥ ಮುಕ್ತಕಗಳನ್ನೊಳಗೊಳ್ಳಬಹುದಾದರೂ ಪ್ರಭುಸಮ್ಮಿತ ಲಕ್ಷಣದಿಂದಾಗಿ ಅವುಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವುದು ಸೂಕ್ತವೆನಿಸಿದೆ.

ಹುಲ್ಲು ಕೊಯ್ಯೋನಿಗೆ ಹುವ್ವಿನುಂಗುರವೇಕೆ
ಜಲ್ಲಿ ಮಲ್ಲೀಗೆ ನಿನಗೇಕೆ। ನನ ಗೆಣೆಯ
ಹುಲ್ಲು ತತ್ತ ನನ್ನ ಕುದುರೇಗೆ[2]

ಇಂಥ ಬಿಡಿ ಪದ್ಯಗಳಂತು ನಿಸ್ಸಂದೇಹವಾಗಿ ಬೇರೆ ಗುಂಪಾಗತಕ್ಕಂಥವು.

---

[1] ಎಚ್. ಎಂ. ಶಂಕರನಾರಾಯಣರಾಯರ 'ಜನಪದ ಮುಕ್ತಕಗಳು' ಎಂಬ ಕಿರುಹೊತ್ತಗೆಯನ್ನು ನೋಡಿ.

[2] ಹಳ್ಳಿಯ ಪದಗಳು, ಬಿ. ಎಸ್. ರಂಗಸ್ವಾಮಿ, ಪು. ೭೫.

ಭಾವಪ್ರಾಧಾನ್ಯವಿಲ್ಲದ, ಕಥೆಯ ಸುಳಿವಿರದ, ವರ್ಣನೆಯೇ ಮಿಗಿಲಾಗಿರುವ ಹಾಡುಗಳನ್ನು ವರ್ಣಕ ಗೀತೆಗಳೆಂದು ಕರೆಯಲಾಗಿದೆ. ಇವು ಬಂಡಿ ಹೊಡೆಯುವಾಗಲೋ, ಪ್ರಯಾಣ ಕಾಲದಲ್ಲಿಯೋ, ವಿರಾಮ ಸಮಯದಲ್ಲಿಯೋ ಹಾಡಿಕೊಳ್ಳುವಂಥವು. ಅವುಗಳಲ್ಲಿ ಹಲವು ನಾಲ್ಕಾರು ತ್ರಿಪದಿಗಳನ್ನೋ, ಹತ್ತಾರು ಸಾಲುಗಳನ್ನೋ ಒಳಗೊಂಡಿದ್ದು, ಮೇಲಿನ ವರ್ಗಗಳಲ್ಲಿ ಸೇರದಂಥವು. "ಹಾರವಿತಿ ಉಟ್ಟವಳೆ ಹಾಲು ಹೂವಿನ ಬಣ್ಣ ಆಸಗಿತ್ತಿ ಕಂಡು ಮನಸಾದ ಆ ಸೀರೆ ಹಾಲುಗೊಳದಲ್ಲಿ ಹಲಕೀತು", "ಚಿತ್ತೆ ಮಳೆ ಹುಯ್ದು ಚಂದ್ರಾನ ಕೊಳ ತುಂಬಿ, ಚಿಕ್ಕ ತಮ್ಮಯ್ಯ ಮಡಿ ಮಾಡ್ದ ನೀರಲ್ಲಿ ನಾಹೋಗಿ ಸೀರೆ ಅಲುಬ್ಯೇನು"[1] ಇಂತೆಯೇ 'ಮೈಸೂರು–ಬೆಂಗಳೂರು' ಸಂಬಂಧವಾದ ವರ್ಣನೆಗಳಿವೆ: "ಮೈಸೂರು ಸುತ್ತಾ ಸಾಲು ತೆಂಗಿನ ಮರವು, ಓಲಾಡಿ ಬೆಳೆದ ಗಜನಿಂಬೆ, ಘಮನಾಕೆ ಗೂಡು ಕಟ್ಟಿದವು ಗರಗೀಣಿ"; "ನಾಗಮಂಗಲದಲ್ಲಿ ನಾಕ್ಕಣದ ಹೆಣ್ಣಿಲ್ಲ, ನಾಗಸರದಂತ ದನಿಯಿಲ್ಲ, ಮೈಸೂರು ಚಾಮರಾಜರಂಥ ದೊರೆಯಿಲ್ಲ."[2] ಈ ಪದ್ಯಗಳಲ್ಲಿ ಅಲಂಕಾರವಿಲ್ಲ, ರಸವಿಲ್ಲ; ಆದರೂ ಪ್ರಕೃತಿವರ್ಣನೆಯಲ್ಲಿ, ವಾಸ್ತವಿಕ ಚಿತ್ರಗಳಲ್ಲಿ ಅಂದಚೆಂದಗಳಿವೆ, ಮೋಹಕ ಗುಣವಿದೆ.[3]

ಈ ತನಕ ವಿವರಿಸಿರುವ ವರ್ಗೀಕರಣ ಸರ್ವಸಮರ್ಪಕವೆಂದು ದೋಷರಹಿತವಾದ್ದೆಂದು ಹೇಳಲಾಗದು. ಗಾಳಿ ಬೆಳಕುಗಳಂತೆ, ಮಲೆನಾಡಿನ ಕಾನನದಂತೆ ಸ್ವೇಚ್ಛೆಯಾಗಿ ಹರಿಯುತ್ತಿರುವ, ಬೆಳೆಯುತ್ತಿರುವ ಹಳ್ಳಿಯ ಬದುಕಿನ ನಾನಾ ಮುಖಗಳನ್ನು ಚಿತ್ರಿಸುವ ಹಾಡುಗಳನ್ನೆಲ್ಲ ಕೇವಲ ಕೆಲವು ಗುಂಪುಗಳಾಗಿ ವಿಂಗಡಿಸುವುದು ಕಠಿನವಾಗುತ್ತದೆ. ಪೂರ್ವೋಕ್ತ ವರ್ಗಗಳಲ್ಲಿ ಸೇರ್ಪಡೆಗೊಳ್ಳದ ಎಷ್ಟೋ ಪದಗಳು ಅವುಗಳ ಹೊರಗೆ ನಿಲ್ಲಬೇಕಾಗುತ್ತದೆ. ಸದ್ಯಕ್ಕೆ ಅವುಗಳನ್ನೆಲ್ಲ ಸಂಕೀರ್ಣಗೀತೆಗಳೆಂದು ಕರೆಯಬಹುದೆನಿಸುತ್ತದೆ. ಕತೆಯೇ ಇಲ್ಲದ, ಹಾಸ್ಯಪ್ರಧಾನವಾದ ಸಂವಾದರೂಪದ ಹಾಡುಗಳನ್ನು ಇಲ್ಲಿಯೇ ಸೇರಿಸಬೇಕಾಗುತ್ತದೆ. ಆ ಹಾಡುಗಳಲ್ಲಿ ಸರಸವಿದೆ, ಜಾಣ್ಮೆಯಿದೆ, ರಸಿಕತೆಯಿದೆ, ಚುರುಕಿದೆ, ಸ್ಪರ್ಧಾಮನೋಭಾವವಿದೆ. "ಮಾತಾಡು ಮಲ್ಲಿಗೆ" "ನೂಲಲ್ಯಾಕ ಚೆನ್ನಿ" ಇವೇ ಮೊದಲಾದುವು ಕರ್ಣಾಟಕದ ಎಲ್ಲೆಡೆಯೂ ಬಹು ಜನಪ್ರಿಯವಾಗಿವೆ. "ನಿದ್ದಿ ಬಾರದ ಕಣ್ಗೆ ಮದ್ದ್ಯಾವ್ದೆ ಬಲ್ಲರು, ಗೆದ್ದಿಯ ಬದಿಯ ಗರುಗನ, ಕೊಡಿತಂದು ಭದ್ರಿ, ಕಾಡಿಗಿಯ ಹಿಡಿದ್ದಚ್ಚು"[4] —ಇಂಥ ಲೋಕಾನುಭವದ ಪದಗಳಿಗೆ ಬೇರೆ ಕಡೆ ಎಡೆಯಿರದು. "ಕೆರೆಯ ಕೋಡೀಲಿ ಹದಿನೆಂಟು ಬ್ರಾಹ್ಮಣರು ಜಲದಲ್ಲಿ ನೀರ ಮೊಗೆಯುವಳ ಬಾಲೆಯಕಂಡು ಜಗದೀಶ್ವರನ

---

1 ಅದೇ, ಪು. ೬೫.

2 ಹಳ್ಳಿಯ ಹಾಡುಗಳು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪು. ೨೦.

3 ಗುಂಡ್ಮಿ ಚಂದ್ರಶೇಖರ ಐತಾಳರು "ಮುದ್ದಂಟಿ ಜನನ ಮರಣಕ್ಕೆ" ಎಂಬ ತಮ್ಮ ಗ್ರಂಥದ 'ವರ್ಣನೆ' ಎಂಬ ವಿಭಾಗದಲ್ಲಿ ಇಂಥ ಹಲವಾರು ವರ್ಣಕ ಗೀತೆಗಳನ್ನು ಸಂಗ್ರಹಿಸಿದ್ದಾರೆ.

4 ಅದೇ, ಪು. ೩೦೫.

ಜಸವ ಮರೆತಾರೊ"[1]—ಇಂಥ ವಿಡಂಬನೆಯ ಪದಗಳೂ ಇಲ್ಲಿಯೇ ಇರಬೇಕಾಗುತ್ತದೆ. ಒಗಟುಗಳು, ನಂಬಿಕೆಗಳು, ತಿಂಡಿತಿನಸುಗಳು, ಇವೇ ಮೊದಲಾದ ಸಂಕೀರ್ಣ ವಿಷಯಗಳಿಗೆ ಸಂಬಂಧಿಸಿದ ಸಂಗತಿಗಳಿಗೂ ಇಲ್ಲಿಯೇ ಜಾಗಮಾಡುವುದು ಸೂಕ್ತವಾಗುತ್ತದೆ.

"ಇಪ್ಪತ್ತೇಳು ವರ್ಷಗಳ ಹಿಂದೆ ಮಧ್ಯಪ್ರದೇಶದ ಬುಡಕಟ್ಟು ಜನರ ಹಳ್ಳಿಗೆ ಮೊಟ್ಟ ಮೊದಲು ಹೋದಾಗ, ದಾರಿದ್ರ್ಯ ರೋಗ ಮತ್ತು ಅಜ್ಞಾನಗಳ ಘೋರರೌರವನ್ನೆದುರಿಸ ಬೇಕೆಂದು ನಿರೀಕ್ಷಿಸಿದ್ದೆ. ಅಲ್ಲಿ ಕಾವ್ಯಪ್ರತಿಭೆ ಉಕ್ಕುತ್ತಿದೆಯೆಂದಾಗಲಿ, ಇತ್ತೀಚಿನ ನನ್ನ ಜೀವನಾವಧಿಯಲ್ಲಿ ಆ ಕಾವ್ಯಗಳು ನನ್ನನ್ನು ಸ್ಫೂರ್ತಿಸುತ್ತವೆ, ಆನಂದಗೊಳಿಸುತ್ತವೆಯೆಂದಾಗಲಿ ಅಂದುಕೊಂಡಿರಲಿಲ್ಲ. ನಾನು ಆಕ್ಸ್‌ಫರ್ಡಿನಲ್ಲಿ ಆಂಗ್ಲ ಸಾಹಿತ್ಯವನ್ನೋದಿದ್ದೆ. ನನ್ನ ಬಾಳಿನುದ್ದಕ್ಕೂ ಕಾವ್ಯ ಎಂದರೆ ನನಗೆ ಪ್ರಾಣ. ಈ ಹಿಂದುಳಿದ—ಹಾಗೆ ಕರೆಯುವುದೇ ತಪ್ಪು—ಜನರಲ್ಲಿ ಸರಳವೂ ಮೋಹಕವೂ ಸೂಕ್ಷ್ಮಸಂವೇದನಶೀಲವೂ ಆದ ಕಾವ್ಯರಾಶಿಯನ್ನು ಕಂಡಾಗ ವಿಸ್ಮಯಚಕಿತನಾದೆ. ಈ ಕಾವ್ಯ ಜಗತ್ತಿನ ಉತ್ತಮ ಕಾವ್ಯಸಂಪ್ರದಾಯದಲ್ಲಿ ಸ್ಥಾನಪಡೆಯುವ ಅರ್ಹತೆಯನ್ನುಳ್ಳದಾಗಿದೆ"[2] ಎಂದು ವೆರಿಯರ್ ಎಲ್ವಿನ್ ಅವರು ಹೇಳಿರುವ ಮಾತು ಸಕಲ ಜನಪದ ಸಾಹಿತ್ಯಪ್ರಕಾರಗಳಿಗೆ ಅನ್ವಯಿಸುವಂಥದಾಗಿದೆ.

ಸಾಗರೋಪಮವಾದ ಜನಪದ ಸಾಹಿತ್ಯರಾಶಿಯ ಕಡೆಗೆ ಕಣ್ಣು ಹಾಯಿಸಿ. ಅದರ ಬೆಡಗು ಬಿನ್ನಾಣಗಳನ್ನು ಒನಪು ಒಯ್ಯಾರಗಳನ್ನು, ನಿಷ್ಕಪಟವೂ ನಿರ್ಮಲವೂ ಆದ ಭಾವನೆಗಳನ್ನು, ವಿಶ್ವತೋಮುಖವಾದ ಅನುಭವ ವೈವಿಧ್ಯವನ್ನು, ಸರಳತೆಯನ್ನು, ಜೀವನ ದರ್ಶನವನ್ನು ಮನಗಂಡಾಗ ಯಾರಿಗಾದರೂ ದಿಗ್ಭ್ರಮೆಯಾಗದಿರದು. ಅಂಥ ಮಹತ್ತರವಾದ ಸಾಹಿತ್ಯವನ್ನು ಸೃಷ್ಟಿಸಿದ ಜನ ಎಂಥವರು? ಹಲಗೆ ಬಳಪದ ಹಿಡಿಯದವರು; ಶಿಷ್ಟಸಂಪ್ರದಾಯದಿಂದ ಬಹುದೂರ ಸರಿದು ನಿಂತವರು; ಶೂದ್ರರು ಅಸ್ಪೃಶ್ಯರು ನಿಕೃಷ್ಟರು ಎಂಬ ಉಪೇಕ್ಷೆಗೆ ಗುರಿಯಾಗಿದ್ದವರು; ವಿದ್ಯಾವಂತರಿಂದ ಪಂಡಿತ ಪುರೋಹಿತರಿಂದ ಶ್ರೀಮಂತರಿಂದ ನಿರಂತರವಾದ ಸುಲಿಗೆಗೆ ಪಾತ್ರರಾದವರು: ಸಾವಿರಾರು ವರ್ಷಗಳಿಂದ ಗುಲಾಮರಂತೆ ದುಡಿದವರು; ರಾಜಮಹಾರಾಜರ ಶೋಷಣೆಗೆ ಬಲಿಯಾದವರು: ಲಕ್ಷ್ಮಿ ಕೈಬಿಟ್ಟವರೂ. ಸರಸ್ವತಿಯ ವರಪ್ರಸಾದಕ್ಕೆ ಪಾತ್ರರಾದವರು: ಕಾವ್ಯದ ಊಟೆ ನಿಷ್ಕಲ್ಮಷ ಹೃದಯದಿಂದ ಮಾತ್ರ ಚಿಮ್ಮುವಂಥದು ಎಂಬ ಕಟುಸತ್ಯವನ್ನು ತೋರಿಸಿಕೊಟ್ಟವರು. ಊರೂರಿಗೂ ಅಂಥ ಕವಿಗಳಿದ್ದರು, ಒಂದಾನೊಂದು ಕಾಲದಲ್ಲಿ. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಹೊಂದಾಣಿಕೆಯಿದ್ದದ್ದು ಅವರಲ್ಲಿ ಮಾತ್ರ. ಅವರ ನಡೆಯೇ ನುಡಿರೂಪ ತಾಳಿತು. ಕೈಕಾಲು ಮೈ ಕೆಲಸಮಾಡುತ್ತಿದ್ದಂತೆ, ಅದಕ್ಕನುಗುಣವಾಗಿ ಎಂಬಂತೆ, ಅವರ ಒಡಲಿನಿಂದ ಮೂಡಿತೆಂಬಂತೆ ಹಾಡು ಹೊರಹೊಮ್ಮಿತು.

---

1 ಜಾನಪದ ಗೀತೆಗಳು, ಎಂ. ಜೀವನ, ಪು. ೨೨೩.

2 'Indian Folk Poetry' by Verrier Elwin, Akashvani, March 15, 1959 Quoted by Shyam Parmar in his *Folklore of Madhya Pradesh*, p. 95.

ತಲೆಕ್ಕೈಗಳ ಸಾಮರಸ್ಯದ ಅಭಿವ್ಯಕ್ತಿ ಶಿಷ್ಟಸಾಹಿತ್ಯದಲ್ಲಿ ಕಾಣುವುದಿಲ್ಲ. ಆಯಾಯ ಪರಿಸರದ ಅಥವಾ ಕಾಯಕದ ಪ್ರಭಾವದಿಂದ, ಸಮಯಸ್ಫೂರ್ತಿಯಿಂದ ಹುಟ್ಟಿದ್ದು ಜನಪದಸಾಹಿತ್ಯ. ಅದು ದೀರ್ಘಕಾಲದ ಚಿಂತನ ಮಂಥನಗಳಿಂದ ಸಿದ್ಧವಾದದ್ದಲ್ಲ; ಅನುಭವದ ಉತ್ಕಟತೆಯಿಂದ ಹಾಗೂ ಭಾವತೀವ್ರತೆಯಿಂದ ತಾನಾಗಿಯೇ ಮೈದೋಳೆ ಗೊಂಡದ್ದು.

ಈ ಸಾಹಿತ್ಯ ಸಾಮೂಹಿಕ ಸೃಷ್ಟಿಯಾದ್ದರಿಂದ ಇಡೀ ಸಮಾಜದ ಅನುಭವಸಂಪತ್ತು ಅದರಲ್ಲಿ ಅಡಕವಾಗಿದೆಯೆಂದು ಹೇಳಬಹುದು. ಒಂದು ಪದ ಪೂರ್ಣರೂಪ ಪಡೆಯುವ ವೇಳೆಗೆ ಅದು ಎಷ್ಟೋ ಪೀಳಿಗೆಯ ಜನರ ಹೃದಯದಲ್ಲಿ ಮಿಂದು, ಬಾಯಲ್ಲಿ ಹರಿದು, ನಾನಾರೀತಿಯ ಸಂಸ್ಕಾರವನ್ನು ಪಡೆದು ಹೊರಗೆ ಹೊರಳುತ್ತದೆ. ಕಥನಗೀತೆ ಲಾವಣಿ ಮೊದಲಾದ ಪ್ರಕಾರಗಳಂತಿರಲಿ, ಭಾವಗೀತೆಯೂ ಇಂಥ ಸಂಸ್ಕಾರದಿಂದಲೇ ಸಿದ್ಧ ಗೊಂಡದ್ದು. ಅಂದಮೇಲೆ ಭಾವಗೀತೆ ಅನೇಕ ಹೃದಯಗಳು ಏಕೀಭವಿಸಿ, ಒಟ್ಟಾಗಿ ಲಯಹೊಂದಿ, ಎರಡು ಅನಿಲಗಳು ಬೆರೆತು ಆದ ನೀರಿನಂತೆ, ಅಥವಾ ಅನೇಕ ಹಸುಗಳ ಹಾಲಿನಿಂದ ತೆಗೆದ ಬೆಣ್ಣೆಯನ್ನು ಕಾಯಿಸಿದಾಗ ಪರಿಣಮಿಸಿದ ತುಪ್ಪದಂತೆ ಒಂದಾಗಿ ರೂಪಗೊಂಡದ್ದು. ಶಿಷ್ಟಭಾವಗೀತೆಯಲ್ಲಿ ವ್ಯಕ್ತಿಯ ಆತ್ಮಪ್ರಕಾಶನವನ್ನು ಕಾಣಬಹು ದಾದರೆ, ಜನಪದ ಭಾವಗೀತೆಯಲ್ಲಿ ಸಮಾಜದ ಆತ್ಮಪ್ರಕಾಶನವನ್ನು ದರ್ಶಿಸಬಹುದು. ಅದು ಸಮಷ್ಟಿಚಿಂತನೆಯ ಮೂರ್ತರೂಪವೂ ಅಹುದು, ಅಂತೆಯೇ ಸಾಮುದಾಯಕ ಸಾಮರ್ಥ್ಯದ ಸ್ಫೂರ್ತಿಶಕ್ತಿಯೂ ಅಹುದು.

ಶಿಷ್ಟಸಾಹಿತ್ಯ ಸುಸಂಸ್ಕೃತವೆನಿಸಿಕೊಂಡಿರುವ ಸಮಾಜದ, ರಾಜಮಹಾರಾಜರುಗಳ, ಶ್ರೀಮಂತರ, ಪೌರಾಣಿಕ ಸಮಾಜದ, ನಾಗರಿಕ ಜೀವನದ, ಒಂದು ಬಿಡಿ ಅಂಕಣದ ಚಿತ್ರಣವಾಗಿದೆಯೇ ಹೊರತು ನಾಡಿನ ಇಡೀ ಜೀವನದ ಸಮಗ್ರ ನಿರೂಪಣೆಯಾಗಿಲ್ಲ. ಕಷ್ಟಕ್ಲೇಶಗಳಿದ್ದರೂ ಕೃತ್ರಿಮತೆಯನ್ನು ಕಾಣದ, ದಾರಿದ್ರ್ಯವಿದ್ದರೂ ಪ್ರಕ್ಷುಬ್ಧಗೊಳ್ಳದ, ಅಜ್ಞಾನವಿದ್ದರೂ ಸತ್ಯನಿಷ್ಠೆ ಪ್ರಾಮಾಣಿಕತೆಗಳಿಂದ ವರ್ತಿಸುವ, ಶೀಘ್ರಕ್ರೋಧಕ್ಕೆ ಈಡಾ ಗಾಗುವವರಾದರೂ ಪ್ರೇಮೌದಾರ್ಯಗಳ ಗಣಿಯಾಗಿರುವ, ಥಳುಕುಪಳುಕುಗಳನ್ನು ಕಾಣದ ಮುಗ್ಧಗ್ರಾಮೀಣ ಜೀವನವನ್ನು, ಶಿಷ್ಟಸಮಾಜದಲ್ಲಿಯೂ ಕಾಣಲಾರದ ಸುಗಂಧ ಸಂಸಾರವನ್ನು ನೋಡಬೇಕಾದರೆ ಜನಪದ ಸಾಹಿತ್ಯವನ್ನೇ ಮರೆಹೊಗಬೇಕು. ಸಾಮಾನ್ಯ ಜನರ ಆಶೋತ್ತರಗಳೇನು, ಜೀವನ ದರ್ಶನವೇನು, ಅವರ ಸಾಮಾಜಿಕ ಬಾಂಧವ್ಯ ಗಳೆಂಥವು, ಅವರ ರೀತಿನೀತಿ ನಂಬಿಕೆ ಹವ್ಯಾಸಗಳೆಂಥವು, ಅವರ ಮನೋಧರ್ಮವೆಂಥದು, ಅವರ ಸಂಸ್ಕೃತಿಯ ವೈಶಿಷ್ಟ್ಯವೇನು ಎಂಬೆಲ್ಲ ವಿಷಯಗಳನ್ನು ತಿಳಿಯಬೇಕಾದರೆ ಜನಪದ ಸಾಹಿತ್ಯವೇ ಗತಿ.

ಅನ್ನಬಟ್ಟೆಗಾಗಿ ಮಾತ್ರವೇ ಜನಪದರು ಬದುಕಿದವರಲ್ಲ. ಕುಳಿತಾಗ ನಿಂತಾಗ, ಗುಂಪಿನಲ್ಲಿ ನೆರೆದಾಗ ಕುಣಿಯಬೇಕು, ಹಾಡಬೇಕು, ಕತೆ ಹೇಳಬೇಕು ಎಂಬ ಭಾವನೆ ಅವರನ್ನು ಪೀಡಿಸುತ್ತಿದ್ದುದುಂಟು. ಬಯಲಾಟ ಆಡಬೇಕು, ಆಡಿಸಬೇಕೆಂಬ ಚಟ

ಅವರದು. ಹಬ್ಬಹರಿದಿನಗಳಲ್ಲಿ ಪೂಜೆಪೊತ್ತು ಮೆರೆದು, ಲಗೆ ಚೆಂಡಾಟ ಕೋಲಾಟ ಕತ್ತಿವರಸೆ ದೊಣ್ಣೆವರಸೆಗಳ ಮೂಲಕ ಜೀವನದ ಜಂಝಾಟವನ್ನು ಮರೆಯುತ್ತಿದ್ದರು: ಕಲೆಯ ಹಸಿವನ್ನು ನೀಗಿಕೊಳ್ಳುತ್ತಿದ್ದರು, ವಿನೋದವಾಗಿ ಕಾಲಕಳೆಯುತ್ತಿದ್ದರು. ಅವರು ಪ್ರತಿನಿತ್ಯ ಬಳಸುವ ಕೃಷಿಕ ಅಥವಾ ಗೃಹೋಪಕರಣಗಳ ಕಲೆಗಾರಿಕೆಯನ್ನು ನೋಡಿದರೆ ಅವರ ಕಲಾಭಿರುಚಿ ಅಭಿವ್ಯಕ್ತವಾಗುತ್ತದೆ. ಕುಡುಗೋಲಿನ ಮತ್ತು ಮೇಳಿಯ ಹಿಡಿಕೆಗಳಲ್ಲಿ, ಗಾಡಿಯ ಮೂಕಿಯಲ್ಲಿ, ಮನೆಯ ತೊಲೆಬೋದಿಗೆ ಬಾಗಿಲ ಚೌಕಟ್ಟುಗಳಲ್ಲಿ, ನಶ್ಯದ ಹಾಗೂ ಸುಣ್ಣದ ಭರಣಿಗಳಲ್ಲಿ, ಮಣೆತೌಟಿಗೆಗಳಲ್ಲಿ, ದನಕರುಗಳಿಗೆ ಮಾಡುವ ಸಿಂಗಾರದಲ್ಲಿ ಕಣ್ಣುಹಾಯಿಸಿದ ಕಡೆಯಲ್ಲೆಲ್ಲ ಅವರ ಮನೋಧರ್ಮ ಕಲಾತ್ಮಕವಾಗಿ ತೆರೆಂಬುದು ಸ್ಪಷ್ಟಗೊಳ್ಳುತ್ತದೆ. ತೋರಿಕೆ ಅವರ ಕಲೆಯ ಉದ್ದೇಶವಾಗಿಲ್ಲ: ಅವರಿಗೆ ಬದುಕೇ ಒಂದು ಕಲೆ. ನೋವಿನಲ್ಲಿ ನಲವನ್ನು, ಕಷ್ಟದಲ್ಲಿ ಸುಖವನ್ನು, ಬೆವರಿನಲ್ಲಿ ಬದುಕಿನ ಮರ್ಮವನ್ನು ಕಂಡವರವರು.

ರಸಿಕತೆ ಅವರ ಬದುಕಿನ ಬಹು ಮುಖ್ಯಲಕ್ಷಣ. ಅದು ಅವರ ಪ್ರತಿಯೊಂದು ಕ್ರಿಯೆಯಲ್ಲಿಯೂ ಎದ್ದುಕಾಣುತ್ತದೆ. ಅವರ ಹಾಡುಗಳಿಂದ, ಕತೆಗಳಿಂದ ಇದು ಸ್ಪಷ್ಟವಾಗುತ್ತದೆ. ಬಿನ್ನಾಣಗಾತಿ ಹೆಣ್ಣನ್ನು ನೋಡಿದಾಗ ಅವನ ಮನಸ್ಸಿನಲ್ಲಿ ಮೂಡುವ ಪ್ರತಿಮೆಗಳಿಂದ ಅದು ವ್ಯಕ್ತವಾಗುತ್ತದೆ. "ಕಾಡಿಗೆಗಣ್ಣಿನೋಳ, ಕೂಡಿದ್ದುಬ್ಬಿನೋಳ, ಕೋಡೀಲಿ ನೀರ ಮೊಗೆಯೋಳ, ಕಣ್ಕೊಂಡು ಕೋಗಿಲೆ ಮೇವ ಮರೆತಾವ"[1] ಎಂದು ಅವಳನ್ನು ವರ್ಣಿಸಲಾಯಿಸುತ್ತಾನೆ. "ಭತ್ತಕುಟ್ಟೋಣ ಬಾರೆ, ಇಕ್ಕೊಂಡುಣ್ಣನ ಬಾರೆ, ಹಿತ್ತಿಲಲ್ಲಿರುವ ಗಜನಿಂಬೆ, ಹಣ್ಣಲ್ಲಿ ಇಟ್ಟಾಡು ಬಾರೆ, ಗೆಣಕಾತಿ"[2] ಎಂದು ಕರೆಯುತ್ತಾನೆ. ಭತ್ತ ಕುಟ್ಟುವಾಗ, ನಾಟಿ ಹಾಕುವಾಗ, ಸೊಪ್ಪು ಕೀಳುವಾಗ, ನೀರು ಹೊರುವಾಗ ಅವಳ ರೂಪವನ್ನು ಕಣ್ಣಲ್ಲಿ ಹೀರಿಕೊಳ್ಳುತ್ತಾನೆ, ಮನದಲ್ಲಿ ತೂಪಿರಿಯುತ್ತಾನೆ. ಗಾಳಿ ಬಂದರೆ ಅವಳು ಬಳುಕುತ್ತಾಳೆ; ಅವಳ ಮುಂದೆ ಎಳನಾಗರ ತೆಕ್ಕೆಯಂತಿದೆ: ಅವಳ ವೇಗ ಸೂಜಿಯ ಮೊನೆಯಂತಿದೆ. ತನ್ನ ಸುತ್ತಮುತ್ತಣ ವಸ್ತುಗಳೊಡನೆ ಅವಳ ಅಂಗಾಂಗಗಳನ್ನು ಹೋಲಿಸಿ ನೋಡುತ್ತಾನೆ. ಅವನ ತಾಂಬೂಲಚರ್ವಣವಂತು ರಸಿಕತೆಗೆ ಮುಡಿಸಿದ ಕಿರೀಟವಾಗಿದೆ. ಹಬ್ಬಹರಿದಿನಗಳಲ್ಲಿ ಮಿಂದು, ಮಡಿವಸ್ತ್ರ ತೊಟ್ಟು, ಎಲೆಯಡಿಕೆ ಹಾಕಿಕೊಂಡು, ತುರುಬಿಗೆ ಹೂಮುಡಿದು, ಗಿಲಕಿ ಚಡಾವು ಮೆಟ್ಟಿಕೊಂಡು ಹೆಂಡತಿಯೊಡನೆ ಜಾತ್ರೆಗೋ ದೇವರಿಗೋ ಹೊರಟನೆಂದರೆ ಮನ್ಮಥನೂ ಅವನ ಮುಂದೆ ನಿಲ್ಲಲಾರ: ಊರಿನ ಕೋರಿಯರೆಲ್ಲರೂ ಅವನನ್ನೇ ನೋಡಿಯಾರು. ಅವನು ಧರಿಸುವ ಆಭರಣಗಳಂತು ಅವನ ಕಲಾಭಿರುಚಿಯನ್ನು ಪ್ರತಿಬಿಂಬಿಸುವ ಕನ್ನಡಿಗಳಾಗಿವೆ.

ಹೊಲಮನೆಗಳೇ ಹಳ್ಳಿಗನ ಬದುಕು: ಆ ಬದುಕನ್ನು ನಡೆಸುವ ಶಕ್ತಿಗಳೆಂದರೆ ಅವನು ಪೂಜಿಸುವ ದೇವತೆಗಳು ಮತ್ತು ಆಚರಿಸುವ ನಂಬಿಕೆಗಳು. ದೇವರ ಬಗ್ಗೆ ನಾಗರಿಕರಲ್ಲಿ

---

1 ಹಳ್ಳಿಯ ಹಾಡುಗಳು : ಸಂ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪು. ೪೦.

2 ಅದೇ, ಪು. ೩೯.

ಮತ್ತು ಪಂಡಿತರಲ್ಲಿರುವ ಅಸಡ್ಡೆ ಗೊಂದಲಗಳು, ವಿರಸವೈಷಮ್ಯಗಳು, ತರ್ಕಸಂದೇಹಗಳು ಅವನಲ್ಲಿಲ್ಲ. ಯಾವ ದೇವರಾಗಲಿ ಯಾರ ದೇವರಾಗಲಿ ಅವನಿಗೆ ಒಂದೇ. ಇದು ತನ್ನ ದೇವರು, ಅದು ಅನ್ಯರ ದೇವರು ಎಂದು ಪಕ್ಷಪಾತವಿಲ್ಲ. ತುರುಕರ ದೇವರಿಂದ ತನಗೆ ಒಳ್ಳೆಯದಾದೀತೆಂದು ಮನದಟ್ಟಾದರೆ, ಅದಕ್ಕೂ ಒಂದು ಕಾಯಿ ಒಡೆಸುತ್ತಾನೆ, ಭಕ್ತಿಯಿಂದ ನಡೆದುಕೊಳ್ಳುತ್ತಾನೆ. ಏನೇ ಕಷ್ಟಪರಂಪರೆಗಳೊದಗಿದರೂ,ದೇವರಿಗೊಪ್ಪಿಸಿಬಿಟ್ಟರೆ ಮುಗಿಯಿತು ಅವನ ಕೆಲಸ. ತಾನು ಇಚ್ಛಿಸಿದ ಕೆಲಸವಾಗಲಿಲ್ಲ, ಅದಕ್ಕಾಗಿ ವ್ಯಥೆ ಪಡುವವನಲ್ಲ. ದೇವರನ್ನವನು ಬಯ್ಯುವುದೂ ಉಂಟು, ತಾಯಿತಂದೆಯರನ್ನು ಬಯ್ಯುವಂತೆ. ತನಗೆ ಬೇಕಾದ ಕೆಲಸವನ್ನು ಮಾಡಿಕೊಡದಿದ್ದಾಗ ಬಯ್ಯುವುದಾದರೂ, ಮರುಗಳಿಗೆಯಲ್ಲಿಯೇ ಅವನ ಗುಡಿಗೆ ಹೋಗಿ ಕರ್ಪೂರಹಚ್ಚಿ, ಮಂಗಳಾರತಿ ಎತ್ತಿ ಅಡ್ಡಬೀಳುತ್ತಾನೆ. ಭಕ್ತಿಯ ಆವೇಶದಲ್ಲಿ ಅವನು ಕಲ್ಲುಮುಳ್ಳು ಕೊರಕಲು ಬೆಂಕಿ ಗುಡುಗು ಸಿಡಿಲು ಏನನ್ನೂ ಲೆಕ್ಕಿಸದೆ ಎಷ್ಟು ದೂರವಾದರೂ ನಡೆದುಹೋಗುತ್ತಾನೆ. ಅವನ ದೃಷ್ಟಿಯಲ್ಲಿ ದೇವರಿಲ್ಲದ ಜಾಗವೇ ಇಲ್ಲ, ವಸ್ತುವೇ ಇಲ್ಲ. ಅವನು ಬಂಡಿಯ ಮೂಕಿಯಲ್ಲಿ, ಕೂರಿಗೆಯಲ್ಲಿ, ನೇಗಿಲಿನಲ್ಲಿ, ರಾಟೆಯಲ್ಲಿ, ಮೇಟಿಯಲ್ಲಿ, ಮೊರದಲ್ಲಿ, ಪೊರಕೆಯಲ್ಲಿ ತಾನು ಜೀವನಯಾಪನೆಗಾಗಿ ಬಳಸುವ ಪ್ರತಿಯೊಂದು ವಸ್ತುವಿನಲ್ಲಿಯೂ ದೇವರನ್ನು ಕಾಣುತ್ತಾನೆ. ಕೆಲಸಕ್ಕೆ ಮೊದಲು ಅವುಗಳಿಗೆ ಸಣ್ಣ ಮಾಡುತ್ತಾನೆ. ಸೃಷ್ಟಿಯ ಸಮಸ್ತ ವಸ್ತುಗಳೂ ಭಗವಂತನ ಗರ್ಭಗುಡಿಗಳಾಗಿವೆ. ಅವನು ನದಿಯಲ್ಲಿ ನೀರಾಗಿ, ಆಗಸದಲ್ಲಿ ಚುಕ್ಕಿಯಾಗಿ, ಗಿಡಗಳಲ್ಲಿ ಹಣ್ಣಾಗಿ, ಪೈರಿನಲ್ಲಿ ತೆನೆಯಾಗಿ, ಹೂವಿನಲ್ಲಿ ಕಂಪಾಗಿ ಅಭಿವ್ಯಕ್ತವಾಗುತ್ತಾನೆನ್ನುವುದು ಅವರ ಕಲ್ಪನೆ. ಶಿವಗಂಗೆ ಬೆಟ್ಟ ಅವನಿಗೆ ಲಿಂಗಾಕಾರವಾಗಿ ಕಾಣಿಸುತ್ತದೆ. ಲಿಂಗಯ್ಯ "ಹೂವಿನಾಗ ಹುದುಗ್ಯಾನ, ಮಾಲ್ಯಾಗ ಮಲಗ್ಯಾನ, ಮೊಗ್ಯಾಗ ಕಣ್ಣು ತೆರೆದಾನ" ಎಂದು ಹೇಳುವಾಗ ಅವರಿಗದು ಬರಿಯ ಕಲ್ಪನೆಯಲ್ಲ. ಶಿವಾನುಭವದಿಂದ ಅವರ ಹೃದಯ ಪವಿತ್ರವಾಗಿದೆ. ಮುಟ್ಟುಚಿಟ್ಟು ಕಟ್ಟುನಿಟ್ಟುಗಳೆಂದರೆ ಅವನಿಗೆ ಭಯ. ಅವನ್ನು ಶ್ರದ್ಧೆಯಿಂದನುಸರಿಸದಿದ್ದರೆ ದೇವರು ಕೋಪಿಸಿಕೊಳ್ಳುತ್ತಾನೆಂಬ ಭೀತಿ ಅವನಿಗೆ. ಈ ಭೀತಿ ಅವನನ್ನು ಸದಾ ನೀತಿಯ ದಾರಿಯಲ್ಲಿ ನಡೆಸುತ್ತದೆ. ಕುಡಿದರೆ, ಸೂಳೆಗಾರಿಕೆ ಮಾಡಿದರೆ, ಕಳ್ಳತನ ಮಾಡಿದರೆ ದೇವರಿರಲಿ, ನೆರೆಹೊರೆಯವರು ಏನೆಂದುಕೊಂಡಾರೆಂಬ ಅಂಜಿಕೆ ಯಾವಾಗಲೂ ಇದ್ದದ್ದೇ. ಈ ಅಂಜಿಕೆ ಅವನ ನಡೆನುಡಿಗಳನ್ನು ತಿದ್ದುತ್ತದೆ. ವೈಜ್ಞಾನಿಕ ಮಾನವ ಮಂಗಳಗ್ರಹದಲ್ಲಿ ಹೋಗಿ ನೆಲಸುವುದಾದರೂ ಅವನು ಪರಂಪರಾಗತವಾದ ನಡಾವಳಿಗಳಿಂದ ವಿಮುಖನಾಗಲಾರ. ಅಂಥ ವಿಮುಖತೆಯೇ ಅವನಿಗೆ ಮೃತ್ಯುವಾಗುತ್ತದೆ.

"ಸೂಳೇಗೆ ಹೋದವನು ಕಾಡುನಾಯಾದ ಕಪಿಯಾದ, ಸೂಳೆ ಕಾಲೀಗೆ ಕೆರವಾದ"; "ಸೂಳೆಯ ನಂಬಿದವಗುಂಟೆ ಸಂಸಾರ"; "ಆಚಾರಕರಸಾಗು, ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು, ಜ್ಯೋತಿಯೇ ಆಗು ಜಗಕೆಲ್ಲ"; "ಜೂಜಾಡಿ ಪಾಂಡವರು ರಾಜ್ಯವ ಸೋತರು, ಜೂಜೀಗೆ ಮನವ ಬಿಡದಿರು": "ಹುಟ್ಟುವಾಗ ತರಲಿಲ್ಲ, ಹೋಗು

ವಾಗ ಒಯ್ಯಾರೆ"—ಇಂಥ ನೀತಿಸೂಕ್ತಿಗಳು ಹಲವು ಗೀತೆಗಳಲ್ಲಿ ಮಿಂಚುತ್ತವೆ. "ಕಣ್ಣು ಕಳೆಯುತ ನೀನು ಮಾನ ಕಾಯಣ್ಣ, ಹೆಣ್ಣು ಹೊನ್ನು ಮಣ್ಣು ಕಾಣದಂತೆ ಕಣ್ಣು ಕಳೆಯಣ್ಣ, ಕೆಟ್ಟಾಡದಂತೆ ಸೂಕನ ಮಾಡಣ್ಣ: ಬಾಯ ಕಳೆಯುತ ನೀನು ಬದುಕ ಕಾಯಣ್ಣ; ಕೈಕಾಲು ಮುರಿಯುತ ಹೆಳವನ ಮಾಡಣ್ಣ, ಸಂದಿಯ ಗಂಟಿಗೆ ಮುಂದರಿಯದಂತೆ"[1]—ವೇದೋಪನಿಷತ್ತುಗಳ ಸಾರವೇ ಭಟ್ಟಿಯಿಳಿದಂತಿರುವ ಈ ರಚನೆಯಲ್ಲಿ ಹಳ್ಳಿಯ ಸೋದರರ ಜೀವನದರ್ಶನ ಮೂರ್ತಿವೆತ್ತಿದೆ. ತಂದೆತಾಯಿಯರು ಗಂಡನ ಮನೆಗೆ ಹೋಗುವ ಮಗಳಿಗೆ ಹೇಳುವ ಬುದ್ಧಿವಾದವಂತು ಶಿಷ್ಟಸಾಹಿತ್ಯದಲ್ಲಿಯೂ ಕಾಣದಂಥದು. "ಜಾಲೀಯ ಮರವು ನೆರಳಲ್ಲ, ನನಮಗಳೆ. ತಾಯೀಯ ಮನೆಯು ಸ್ಥಿರವಲ್ಲ", "ಅತ್ತೆ ಮಾವಾಗಂಜಿ, ಸುತ್ತೇಳು ನೆರೆಗಂಜಿ, ಮತ್ತೆ ಆಳುವ ದೊರೆಗಂಜಿ, ನನಮಗಳೆ, ಅತ್ತೀಮನೆಯಾಗ ಬಾಳವ್ವ": "ಮನಿಯಾಗ ಭೇದ ಬಗಿಬ್ಯಾಡ. ಕಂದವ್ವ, ತುಂಬಿದ ಮನಿಯನ್ನು ಒಡಿಬ್ಯಾಡ"[2] ಇಂಥವು ಈ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ. ಜನಪದ ಸಾಹಿತ್ಯ ಸೌಗಂಧಿಕಾ ಪುಷ್ಪದಲ್ಲಿ ಹೆಣ್ಣಿನ ಪರವಾದ ಹಾಡುಗಳು ಎಂದೂ ಅಳಿಯದ, ಇಡೀ ಬದುಕನ್ನೆಲ್ಲ ಮುಸುರುವ ಪರಿಮಳ. "ಗಂಜೀಯ ಕುಡಿದರು ಗಂಡನ ಮನೆ ಲೇಸು" ಎಂಬ ಸ್ವಾಭಿಮಾನ ಆ ಹೆಣ್ಣುಗಳದು. ಗಂಡಸರೂ ಹಾಗೆಯೇ. "ತಾಯವ್ವ ಎಂಬೋಳು ದೇವಲೋಕದ ಮನುಸಾಳು, ಕಾಲು ಸೋಕಿದರೆ ಕರ್ಮವು, ತಾಯವ್ವ, ಕಾಶಿಗ್ಹೋದರು ಕಳಿಯೂದು"[3] ಈ ಜನಪದ ಸಂಸ್ಕೃತಿಯ ಕೇಂದ್ರಬಿಂದು ಸ್ತ್ರೀ ಎಂಬ ಸಂಗತಿ ಯಾವ ಕಡೆ ಕಣ್ಣು ಹೊರಳಿಸಿದರೂ ಸ್ಪಷ್ಟವಾಗುತ್ತದೆ.

ಜನಪದ ಸಂಸ್ಕೃತಿಯ ಮತ್ತೊಂದು ಮುಖ್ಯ ಲಕ್ಷಣವೆಂದರೆ ಸಹಬಾಳ್ವೆ. ಹಿಂದಿನ ಕಾಲದಲ್ಲಿ ಮನೆಗೊಬ್ಬ ವಾರದಲ್ಲೊಂದು ದಿನ ಊರೊಟ್ಟಿನ ಕೆಲಸದಲ್ಲಿ ಭಾಗಿಯಾಗಬೇಕಾಗುತ್ತಿತ್ತು. ಕೆರೆ ಮರಮ್ಮತ್ತು, ರಸ್ತೆ ರಿಪೇರಿ, ಸಾಲುಮರಗಳ ಆರೈಕೆ, ದೇವರ ಕೆಲಸ. ಇವನ್ನೆಲ್ಲ ಊರವರೇ ಒಟ್ಟಾಗಿ ಮಾಡಿಕೊಳ್ಳುತ್ತಿದ್ದರು. ಊರಿನ ಸೌಕರ್ಯಗಳಿಗಾಗಿ ಈಗಿನಂತೆ ಅವರು ಸರ್ಕಾರದ ಇಲಾಖೆಗಳಿಗೆ ಕೈಮುಗಿಯುತ್ತಿರಲಿಲ್ಲ. ಕಳೆ ನಾಟಿ ಹಗಣೆ ಕೊಯ್ಯಲು ಕಟ್ಟಣೆ ಕಾಲದಲ್ಲಿ ಒಂದು ಮನೆಯವರು ಮತ್ತೊಂದು ಮನೆಯವರಿಗೆ ನೆರವು ನೀಡುತ್ತಿದ್ದರು. ಇದರಿಂದಾಗಿ ಯಾರ ಕೆಲಸವೂ ಯಾವ ಕಾರಣಕ್ಕಾದರೂ ನಿಲ್ಲುತ್ತಿರಲಿಲ್ಲ. ಹಬ್ಬಹರಿದಿನಗಳಲ್ಲಿ ಹೊರಗಿನಿಂದ ಬಂದ ಅತಿಥಿಗಳನ್ನು ಎಲ್ಲರೂ ಹಂಚಿಕೊಂಡು ಉಪಚರಿಸುತ್ತಿದ್ದರು. ಯಾರ ಮನೆಯಲ್ಲಿ ಮದುವೆ ತಿಥಿ ನಡೆದರೂ, ಊರವರೆಲ್ಲ ತಮ್ಮ ಮನೆಯ ಕಾರ್ಯಗಳೆಂದೇ ಬಗೆದು, ಅವು ಮುಕ್ತಾಯಗೊಳ್ಳುವ ತನಕ ಮನೆಯವರ

---

1 ಕೆ. ವಿರೂಪಾಕ್ಷಗೌಡರ ಸಂಗ್ರಹದಲ್ಲಿನ ಈ ರಚನೆಯನ್ನು ಗೊರೂರರವರು ತಮ್ಮ 'ಜನಪದ ಜೀವನ ಮತ್ತು ದರ್ಶನ' ಎಂಬ ಗ್ರಂಥದಲ್ಲಿ ಉದ್ಧರಿಸಿದ್ದಾರೆ, ಪು. ೧೪೨.

2 ಇವುಗಳಲ್ಲಿ ಕೆಲವನ್ನು ಎಂ. ಜೀವನ ಅವರ 'ಜಾನಪದ ಗೀತೆಗಳು' ಎಂಬ ಸಂಕಲನದಿಂದ ಆಯ್ದುಕೊಂಡಿದೆ.

3 ಜನಪದ ಜೀವನ ಮತ್ತು ದರ್ಶನ: ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪು. ೧೧೭.

ನೆರವಿಗೆ ನಿಲ್ಲುತ್ತಿದ್ದರು. ಕಾನೂನಿನ ತೊಡಕೇ ಇಲ್ಲದೆ ಸಹಕಾರ ತತ್ವ ಹಳ್ಳಿಯ ಬದುಕಿನ ಮಂತ್ರವಾಗಿತ್ತು. ಕಾನೂನಿನ ಯುಗದಲ್ಲಂತು ಅದು ದುರುಪಯೋಗಕ್ಕೆ ಗುರಿಯಾಗಿದೆ. ಸಾಂಸ್ಕೃತಿಕ ಮೌಲ್ಯಗಳು ಕ್ಷಿಪ್ರವಾಗಿ ಬದಲಾಗುತ್ತಿರುವಾಗ, ಹಳ್ಳಿಯ ಬದುಕು ಛಿದ್ರ ವಿಚ್ಛಿದ್ರವಾಗುವಂತೆ ತೋರುತ್ತಿದೆ. ಮುಂಡೆ ತುರುಬು ನೆನೆದಂತಾಗಿದೆ ಇಂದಿನ ಪರಿಸ್ಥಿತಿ.

ಮಮ್ಮಟ ಆನಂದವರ್ಧನರನ್ನೋದಿ ಜನಪದ ಕವಿಗಳು ಗೀತೆಗಳನ್ನು ರಚಿಸಿದವರಲ್ಲ. ಕಾವ್ಯಲಕ್ಷಣಗಳನ್ನರಿಯದೆಯೇ, ರೀತಿ ರಸಧ್ವನಿ ಮುಂತಾದ ಕಾವ್ಯತತ್ವಗಳ ಪರಿಚಯುವೇ ಇಲ್ಲದೆ, ಉಪಮಾದ್ಯಲಂಕಾರಗಳ ಗಂಧವೇ ಗೊತ್ತಿಲ್ಲದೆ, ಅವುಗಳಿಗೆ ಲಕ್ಷ್ಯಗಳನ್ನೊದಗಿಸುವ ಗೀತೆಗಳನ್ನವರು ರಚಿಸಿದರು. "ತಿಟ್ಟತ್ತಿ ತಿರುಗಿ ನೋಡ್ಯಾಳೋ" ಎನ್ನುವಲ್ಲಿ ಧ್ವನಿಯುಂಟು; "ಅಳುವ ಕಂದನ ತುಟಿಯು ಹವಳದ ಕುಡಿಹಂಗೆ," "ಆಡೀನ ಮೊಲೆಹಾಂಗ ಜೋಡ ನಾವಿಬ್ಬರ", "ಬಾಳೀಯ ಗೊನೆಹಂಗ ತೋಳ ತಿರುವುತ" ಎನ್ನುವಾಗ ಅಲಂಕಾರವುಂಟು; "ಹೆಣ್ಣು ಮಕ್ಕಳ ಕಳುಹಿ, ಕಣ್ಣು ನೀರುತಂದು, ಸಣ್ಣ ಶಲ್ಯದಲಿ ಮುಸುಕ್ಹಾಕಿ ಹಡೆದಪ್ಪ ಹೆಣ್ಣು ಸಾಕೆಂದ ಜನುಮಾಕ" ಎಂಬಲ್ಲಿ ಕರುಣರಸ ಜೊರತೆಯೇ ಉಕ್ಕುತ್ತದೆ: "ಇಬ್ಬರ್ಹೆಂಡೀರ ಕಾಟ, ಇರುಳ ತಿಗಣೆಯಕಾಟ", "ಈರುಳ್ಳಿ ಮೊಗ್ಗು ಮುಖದವನ", "ಮಾವಿನ ಹೋಳು ನಿನಕಣ್ಣು"—ಇಂಥ ರೂಪಕಗಳಂತು ಮಾಲೆಮಾಲೆಯಾಗಿ ಬರುತ್ತವೆ. ಕೆಲವು ಸಾರಿಯಂತು ಶೃಂಗಾರರಸ ಹಾಗೂ ತಾತ್ವಿಕ ವಿಷಯುಗಳನ್ನು ಹೇಳುವಾಗ ಅವರ ಭಾಷೆ ಸಾಂಕೇತಿಕ ರೂಪವನ್ನು ಧರಿಸುತ್ತದೆ: "ಬರುವೇನು ಜಾಣ, ಬರುವ ದಾರಿ ಕಾಯೋ, ಬತ್ತಿದ ಬಾಯಿಗೆಳನೀರು, ನಿಂಬೆಹಣ್ಣ ತರುವೇನು ಜಾಣ ತಡಮಾಡೋ" ಎಂದು ಒಬ್ಬಳು ಒನಪುಗಾತಿ ನುಡಿದರೆ "ಬಾಳೆ ಹಣ್ಣಿಗೆ ಬಂದೆ, ಜೇನುತುಪ್ಪಕೆ ಬಂದೆ, ಬಾಯಾರಿ ಬಂದೆ ನಿನ ಮನೆಗೆ ಎಲೆ ಹೆಣ್ಣೆ, ಬೇಗ ತೀರ್ಥವ ಕೊಡುಬಾರೆ" ಎಂದೊಬ್ಬ ರಸಿಕ ತನ್ನ ಕಾತರತೆಯನ್ನು ವ್ಯಕ್ತಪಡಿಸುತ್ತಾನೆ. ಇಷ್ಟೇ ಚೆನ್ನಾದ ಸಂವಾದರೂಪದ ತ್ರಿಪದಿಗಳು ಸಾಕಷ್ಟು ಸಿಗುತ್ತವೆ.

ಅಲಂಕಾರಗಳನ್ನು ಬಳಸುವಲ್ಲಿ ಕವಿಸಮಯಗಳಾಗಲಿ, ಚರ್ವಿತಚರ್ವಣವಾಗಲಿ, ಕೃತಿಚೌರ್ಯವಾಗಲಿ, ಹಳಸಲು ಸರಕಾಗಲಿ ಕಾಣುವುದಿಲ್ಲ. "ಬೀಸಣಿಗೆ ನೆರಿಗ್ಯೋಳೆ, ಜಾಲದ್ಹೂವಿನ ಜಡೆಯೊಳೆ" ಎನ್ನುವಲ್ಲಿ ಹೋಲಿಕೆ ಹೊಚ್ಚಹೊಸದು. ತಾವು ಕಾಣದ ವಸ್ತುಗಳನ್ನವರು ಹೋಲಿಕೆಗೆ ಬಳಸುವುದು ಅಪರೂಪ. ಪರಿಚಯುವ ವಸ್ತುಗಳನ್ನು ಬಳಸುವಾಗಲೂ ಅವರ ಕಲ್ಪನಾಪ್ರತಿಭೆ ಅದ್ವಿತೀಯವಾಗಿ ಮೆರೆಯುತ್ತದೆ. "ಸಂಗಾತಿ ಹೆಣ್ಣು ಜಂಬು ನೇರಿಳೆ ಹಣ್ಣು, ಮುಂಗೈಯ ಹಿಡಿದು ನಗಿಸುವಳು, ಮುಖಭಾವ ಮುಂಗಾರಿ ಮಿಂಚು ಹೊಳೆದ್ಹಾಂಗ." ಎಳೆಬಿಸಿಲಿನಲ್ಲಿ ತಳತಳಿಸುವ ಜಂಬುನೇರಿಳೆ ಹಣ್ಣನ್ನೂ ಮುಂಗಾರ ಮುಗಿಲಿನಲ್ಲಿ ಸುಳಿಯುವ ಕುಡಿಮಿಂಚಿನ ಸೊಗಸನ್ನೂ ಗಮನಿಸಿದವರಿಗೆ ಇಲ್ಲಿಯ ರೂಪಕಗಳ ಸ್ವಾರಸ್ಯ ಸಾರ್ಥಕ್ಯಗಳೂ, ಆ ಹೆಣ್ಣಿನ ಚೆಲುವೂ ಗ್ರಹಿಕೆಯಾಗುತ್ತವೆ. ಅವಳ ಬಣ್ಣ ಕಪ್ಪಾದರೂ, ಮಿಂಚಿನಂತೆ ರಗರಗನೆ ಹೊಳೆಯುತ್ತಾಳೆ. ಗಂಡ ಮಗ್ಗುಲಲ್ಲಿರುವಾಗ ಹೆಣ್ಣನ್ನು ಗೆಳೆಯನ ನೆನಪು, ಮಡದಿಯು ಮಗ್ಗುಲಲ್ಲಿರುವಾಗ ಗೆಳೆಯ

ನನ್ನು ಹೆಣ್ಣಿನ ನೆನಪು ಕಾಡುತ್ತದೆ. "ಎಲೆ ಗೆಣೆಯ, ಪೊಗಾಗಿ ಬಾರೊ ತುರುಬಿಗೆ" ಎಂದು ಹೆಣ್ಣು ಕರೆದರೆ, "ಸಂಗಾತಿ, ಸಂಜೇಗೆ ಬಾ ಗೆಳತಿ ಕನಸೀಗೆ" ಎಂದು ಗೆಣೆಯ ಕರೆಯುತ್ತಾನೆ. ಈ ಕಲ್ಪನೆ ಅದ್ಭುತವಾದದ್ದು: ಚಪ್ಪರಿಸಿದಷ್ಟು ಸ್ವಾರಸ್ಯ ಹೆಚ್ಚುತ್ತದೆ. ಇದಕ್ಕಿಂತ ಉತ್ತಮ ಶೃಂಗಾರ ಬೇರೆಲ್ಲಿಯೂ ದೊರೆಯಲಾರದು. "ಹಳ್ಳಿಕಾರರ ಹುಡುಗ ಇರುಳೆದ್ದು ಬರುವಾಗ, ಬೆಳ್ಳಿಯುಂಗುರದ ಬೆಳಕೀಗೆ, ಬರುವಾಗ ಬೆಕ್ಕು ಹಿಂಡು ಬೆದರ್ಯಾವೋ": "ಬಿಳಿಗಿರಿರಂಗ ಬಿಳಿಯ ತೇಜಿಯನೇರಿ ಬೆಳಗಾನ ಬೆಳಕಲ್ಲಿ ತೆರಟಾನೋ, ಕತ್ತಿಯ ಹೊಳಪಲ್ಲಿ ಮುಖವ ತೊಳೆದಾನೊ"—ಈ ಕಲ್ಪನೆಯ ಶ್ರೀಮಂತಿಕೆಯಲ್ಲಿ ವಸ್ತುರಸಾಲಂಕಾರಗಳು ಧ್ವನಿತಗೊಳ್ಳುತ್ತವೆ. "ಮಂಜು ಮನೆಮಾಡಿ, ಮರಳು ಗೋಡೆ ಹಾಕಿ, ತಿಂಗಳ ಬೆಳಕ ಕದಮಾಡಿ—ಹೋದವನ ಹೆಜ್ಜೆ ಹೊರಗಾಯ್ತು ಮರಳಲ್ಲಿ" ಮಂಜು ಮನೆ ಮತ್ತು ಮರಳು ಗೋಡೆ ಹೊಸವಲ್ಲ. ತಿಂಗಳ ಬೆಳಕಿನ ಕದದ ವೈಶಿಷ್ಟ್ಯವನ್ನಿಲ್ಲಿ ಗಮನಿಸಬಹುದು.

ಸಾಮಾನ್ಯರ ದೃಷ್ಟಿಯಲ್ಲಿ ಅತ್ಯುಕ್ತಿ ಉತ್ಪ್ರೇಕ್ಷೆಗಳೇ ಇಲ್ಲ. ತಿಂಗಳ ಬೆಳಕಿನ ಕವ ಅವರ ಅನುಭವದ ಕುಲುಮೆಯಲ್ಲಿ ಹಾದುಬಂದದ್ದು. ಸರಸೋತಿ ಬೇರೊಂದು ಲೋಕದಲ್ಲಿದ್ದುಕೊಂಡು, ಜನರನ್ನು ಹರಸುವ ಅಥವಾ ಶಪಿಸುವ ದೇವತೆಯಲ್ಲ. ಅವಳು ಇವರ ನೆರೆಯಲ್ಲಿ ಸದಾ ಇರುವವಳು. "ಎಂಟೆಲೆ ಮಾವಿನ ದಂಟಿನಲ್ಲಿರುವವಳು; ಗಂಟೆಯ ಗತಿಗೆ ನಲಿಯುವವಳು." ಬಿಳಿಗಿರಿರಂಗ, ಮಾದಯ್ಯ ಮೊದಲಾದ ಎಲ್ಲ ದೇವರು ಅವರಿಗೆ ಅಣ್ಣನ ಸಮಾನ, ಅಪ್ಪನಿಗೆಣೆ. ಅಷ್ಟು ನಿಕಟಬಾಂಧವ್ಯ ಅವರಿಗೂ ದೇವರಿಗೂ. ಈ ಭಾವನೆಯಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ಸ್ವಭಾವೋಕ್ತಿಯೇ ಅವರ ಕಾವ್ಯದ ಜೀವಾಳ. ಹೋಲಿಕೆಗೆ ನಿತ್ಯ ಪರಿಚಯದ ವಸ್ತುಗಳನ್ನು ಬಳಸಿಕೊಳ್ಳುವಾಗಲೂ ಅವರ ಅನುಭವವೇ ಕೇಂದ್ರಸ್ಥಾನದಲ್ಲಿರುತ್ತದೆ. "ಕುಂಬಳಕಾಯಿ ಒಯ್ದು ಕುಡುಗೋಲ್ಗೆ ಕೊಟ್ಟಂಗ, ಇಂದು ನಮ್ಮಗಳ ಕೊಡತೇವಿ" ಆ ಜನರ ಅನುಭವ ಇಲ್ಲಿ ಹೆಪ್ಪುಗಟ್ಟಿದೆ. ಅಲಂಕಾರವೆಂದ ಕೂಡಲೇ ಕೃತಕತೆ ನುಸುಳುವ ಸಂಭವವುಂಟು. ಇಲ್ಲಿಯ ಚಿತ್ರ ನೂರಕ್ಕೆ ನೂರು ಭಾಗ ಸಹಜ. ಅಲಂಕಾರಗಳ ಬೆಡಗು ಬಿನ್ನಾಣಗಳಿಲ್ಲದೆ ಕೇವಲ ನಿತ್ಯಬಳಕೆಯ ಮಾತುಗಳಿಂದಲೇ ಕರುಣರಸವನ್ನೆಂತು ಉಕ್ಕಿಸಬಲ್ಲರೆಂಬುದನ್ನು ಕೆಳಗಿನ ತ್ರಿಪದಿಯಿಂದರಿಯಬಹುದು.

ಹೋಗ್ತೀನಿ ಹೊಸ್ತೀಲೆ ಹೋಗ್ತೀನಿ ಬಾಗೀಲೆ
ಹೋಗ್ತೀನಿ ಹೊನ್ನ ನಡುಮನೆಯೆ—ತಾಯಿಲ್ದ
ತವರೀಗಿ ಸಾವು ಬರಬಾರ್ದು.

ಭೌತಿಕ ಸಂಪತ್ತಿಲ್ಲದಿದ್ದರೂ ತಾಯಿಯಿರುವ ಮನೆ ಪ್ರೇಮೈಶ್ವರ್ಯದಿಂದ ತುಂಬಿರುತ್ತದೆ. ಗಂಡನ ಮನೆಗೆ ಹೋದ ಹೆಣ್ಣಿಗೆ ತವರುಮನೆಯ ಪ್ರತಿಯೊಂದು ವಸ್ತುವೂ ಕಾಡುತ್ತದೆ. ಗಂಡನ ಮನೆಗೆ ಹೋದ ಹೆಣ್ಣಿಗೆ ತವರುಮನೆಯ ಪ್ರತಿಯೊಂದು ವಸ್ತುವಿನಲ್ಲಿಯೂ ಆತ್ಮೀಯತೆಯುಂಟು. ಅವು ಬರಿಯ ಜಡವಸ್ತುಗಳಲ್ಲ. ಅದೆಷ್ಟು ಬಾರಿ ಅವಳು ಹೊಸ್ತಿಲ ಮೇಲೆ ಕುಳಿತು ಬೀದಿಯ ಕಡೆಗೆ ನೋಡುತ್ತಿದ್ದಳೋ. ನೇಹಕ್ಕೆ ಕಣ್ಣಿದ್ದಂತೆ

ಮನೆಗೆ ಬಾಗಿಲು. ಮನೆಗೆ ಬಂದವರಿಗೆ ಮೊದಲು ಸ್ವಾಗತ ನೀಡುವ ಚೇತನವದು. ನಡುಮನೆಯಲ್ಲಿ ಆಕೆ ಹೊರಳಾಡಿದ್ದುಂಟು, ಉಂಡದ್ದುಂಟು, ಮಲಗಿದ್ದುಂಟು, ಅತ್ತದ್ದುಂಟು, ನಕ್ಕಿದ್ದುಂಟು ; ಅಲ್ಲಿ ಎಲ್ಲ ಸುಖದುಃಖಗಳನ್ನನುಭವಿಸಿದ್ದುಂಟು. ತಾಯಿ ಬದುಕಿದ್ದಾಗ ಆಗಾಗ್ಗೆ ಬಂದು, ಪೂರ್ವಪರಿಚಿತ ವಸ್ತುಗಳ ಸಂಪರ್ಕದಲ್ಲಿದ್ದು, ತನ್ನ ಮನೆಗೆ ಮರಳಬಹುದಿತ್ತು. ತಾಯಿ ಸತ್ತನಂತರ ತವರು ಅತ್ತಿಗೆ ನಾದಿನಿಯರ ಮನೆ ಯಾಗಿದೆ. ಅವರು ಅವಳನ್ನು ಹೇಗೆ ಪ್ರೀತಿಸುತ್ತಾರೆ, ಅವಳಿಲ್ಲದಾಗ ಅವಳ ಬಗ್ಗೆ ಏನೆಂದುಕೊಳ್ಳುತ್ತಾರೆ ಎನ್ನುವುದೆಲ್ಲ ಆ ವಸ್ತುಗಳಿಗೆ ಗೊತ್ತು. ಅವಳ ಬಗ್ಗೆ ಅವಕ್ಕೂ ಕನಿಕರ. ಆದ್ದರಿಂದ ಕೊಟ್ಟಕೊನೆಯದಾಗಿ ಅವಳು ಅವುಗಳಿಗೆ ಹೇಳಿ ಹೊರಟುಹೋಗು ತ್ತಾಳೆ. ತವರಿನ ಬಗೆಗಿದ್ದ ಅವಳ ಉತ್ಕಟವಾದ ಪ್ರೇಮ ಇಲ್ಲಿ ಹೊನಲಾಗಿ ಹರಿದಿದೆ. ಜಡವಸ್ತುಗಳಲ್ಲಿ ಚೈತನ್ಯ ಉಕ್ಕುತ್ತಿದೆ. ಜನಪದಕಾವ್ಯರೀತಿಯಿದು.

ಜನಪದ ಕಥೆ

೧. ಪ್ರವೇಶ

ಚೊಚ್ಚಲು ಬಸಿರಿನ ತಂಗಿ ಸುಭದ್ರೆಯನ್ನು ದ್ವಾರಾವತಿಗೆ ಕರೆದೊಯ್ಯುವ ಸಲುವಾಗಿ ಶ್ರೀಕೃಷ್ಣ ತಾನಾಗಿಯೇ ಹಸ್ತಿನಾವತಿಗೆ ಬರುತ್ತಾನೆ. ಸುಭದ್ರೆ ಪೂರ್ಣ ಗರ್ಭಿಣಿಯಾದ್ದರಿಂದ ಪ್ರಯಾಣ ಕಾಲದಲ್ಲಿ ನಡುನಡುವೆ ವಿಶ್ರಾಂತಿಯನ್ನಪೇಕ್ಷಿಸುತ್ತಾಳೆ. ನದಿಯ ದಡದಲ್ಲಿಯೋ ಮರದಡಿಯೋ ಸತ್ರದಲ್ಲಿಯೋ ಬೀಡುಬಿಟ್ಟಾಗ ಅವಳ ಬೇಸರವನ್ನು ಪರಿಹರಿಸುವ ಸಲುವಾಗಿ ಕೃಷ್ಣ ಕಥೆ ಹೇಳುತ್ತಾನೆ. ಒಂದಾದ ಮೇಲೊಂದು ಕತೆ ಹೇಳಿ, ಮಹಾಭಾರತದಲ್ಲಿ ಅಭಿಮನ್ಯುವಿನ ಚಕ್ರವ್ಯೂಹ ಪ್ರವೇಶ ಪ್ರಸಂಗವನ್ನು ತಲುಪಿದಾಗ ಅವನ ದೃಷ್ಟಿ ಸುಭದ್ರೆಯ ಕಡೆಗೆ ಹೊರಳುತ್ತದೆ. ಸುಭದ್ರೆ ಗಾಢನಿದ್ರೆಯಲ್ಲಿದ್ದೂ ಅವಳ ಕಡೆಯಿಂದ ಹೂಂಕಾರ ಶಬ್ದ ಬರುತ್ತಿದ್ದುದನ್ನು ಕೇಳಿ ಆಶ್ಚರ್ಯಚಕಿತನಾಗುತ್ತಾನೆ. ಕಿವಿಗೊಟ್ಟು ಆಲಿಸಿದಾಗ ಆ ಶಬ್ದ ಅವಳ ಹೊಟ್ಟೆಯಲ್ಲಿದ್ದ ಮಗುವಿನಿಂದ ಬರುತ್ತಿದ್ದುದಾಗಿ ತಿಳಿಯಿತು. ತಾಯಿ ನಿದ್ರಾಲಿಂಗನದಲ್ಲಿದ್ದಾಗ ಆ ಮಗು ಹೂಂಗೊಳ್ಳುತ್ತಿತ್ತು. ಆ ಮಗು ಬಹುಬಾಹುವಾಗಿ ಜನಿಸಿದ್ದಾದರೆ, ಅವನ ಪ್ರತಾಪದೆದುರಿಗೆ ನಿಲ್ಲಬಲ್ಲಂಥ ಧೀರರಿರಲಾರರೆಂದೂ, ಅವನಿಂದಾಗಿ ತನ್ನ ಹಿರಿಮೆಗೂ ಕುಂದುಂಟಾಗುತ್ತದೆಂದೂ ಬಗೆದ ಕೃಷ್ಣ ದಿವ್ಯ ಬಾಣಗಳಿಂದ ಆ ಮಗುವಿನ ಬಹುಬಾಹುಗಳನ್ನು ಕತ್ತರಿಸಿ, ಎರಡು ಮಾತ್ರ ಉಳಿಸಿದನಂತೆ. ಹೊಟ್ಟೆಕಿಚ್ಚಿನಿಂದ, ಸ್ವಾರ್ಥ ಲಾಭಕ್ಕಾಗಿ ತಂಗಿ ಅಥವಾ ತಂಗಿಯ ಮಕ್ಕಳನ್ನು ಕೊಲ್ಲುವ ಆಶಯ ಜಾನಪದೀಯವಾದದ್ದೆಂಬುದರಲ್ಲಿ ಲವಲೇಶವೂ ಸಂದೇಹವಿಲ್ಲ.

ತೊಟ್ಟಿಲಲ್ಲಿರುವ ಮಗು ಮಾತ್ರವಲ್ಲ; ಹೊಟ್ಟೆಯಲ್ಲಿರುವ ಮಗು ಸಹ ಕಥಾಸಕ್ತಿ ಹೊಂದಿರುತ್ತದೆಂಬುದಕ್ಕೆ ಮೇಲಣ ಕಥೆಯೇ ಸಾಕ್ಷಿ. ಚಂಡಿಹಿಡಿಯುವ, ಕಣ್ಣಿಗೆ ನಿದ್ದೆ ಹತ್ತದಿರುವ, ದೇಹಾಲಸ್ಯದಿಂದ ನರಳುವ ಮಗುವಿಗೆ ಕಥೆ ಸಮ್ಮೋಹನಾಂಜನವಾಗುತ್ತದೆ. ಕಥಾಶ್ರವಣ ರೋಗಿಗೆ ವೈದ್ಯವಾಗುತ್ತದೆ; ದಡ್ಡನಿಗೆ ವಿದ್ಯೆಯಾಗುತ್ತದೆ, ದುಡಿಮೆಗಾರನಿಗೆ ಚೇತೋಹಾರಿಯಾಗುತ್ತದೆ; ಭಕ್ತನಿಗೆ ಶಿವಶಕ್ತಿಯಾಗುತ್ತದೆ, ಸೋಮಾರಿಗೆ ಚೈತನ್ಯದಾಯಿಯಾಗುತ್ತದೆ, ರಸಿಕನಿಗೆ ರಸಾಯನವಾಗುತ್ತದೆ. ಒಡೆಯ ಆಳು, ದೊರೆ ಮಂತ್ರಿ, ರೈತ ಯೋಧ, ಸನ್ಯಾಸಿ ಸಂಸಾರಿ, ಹೆಂಗಸು ಗಂಡಸು ಎಂಬ ಭೇದವಿಲ್ಲದೆ

ಕಥೆ ಸರ್ವರನ್ನು ಏಕ ರೀತಿಯಾಗಿ ತೃಪ್ತಿಪಡಿಸುತ್ತದೆ. ಅದು ಬಾಳಿನ ಬವಣೆಯನ್ನು ಮರೆಸುತ್ತದೆ, ಮಾನಸಿಕ ಯಾತನೆಯನ್ನು ಒರಸುತ್ತದೆ. ಕೇಳುಗನಿಗೆ ಕೇಳುವ ಕುತೂಹಲ ವಿರುವಂತೆಯೇ ಹೇಳುಗನಿಗೆ ಹೇಳುವ ಹವ್ಯಾಸ. ಕೇಳುಗನ ಆಸಕ್ತಿ ಹೇಳುಗನ ಸೃಜನ ಶೀಲವನ್ನು ಕೆರಳಿಸುತ್ತದೆ. ಒಬ್ಬನ ಮೆಚ್ಚುಗೆ ಮತ್ತೊಬ್ಬನ ಹುಚ್ಚಿಗೆ ನಿಮಿತ್ತವಾಗು ತ್ತದೆ. ಹೇಳೋಣ ಕೇಳೋಣವೆರಡೂ ಒಂದೇ ಸೃಜನ ಸಾಮರ್ಥ್ಯದ ಎರಡು ಮುಖ ಗಳು. ಆದ್ದರಿಂದ ಎರಡೂ ಮಾನವ ಸಹಜವಾದ ಕ್ರಿಯೆಗಳು.

ಕಥನಕಲೆ ಮಾನವ ಸಹಜವಾದ ಪ್ರವೃತ್ತಿ ಎನ್ನೋಣದರಿಂದ ಅದು ಎಲ್ಲ ಕಾಲ ಗಳಲ್ಲಿಯೂ ಎಲ್ಲ ದೇಶಗಳಲ್ಲಿಯೂ ಇದ್ದದ್ದೇ ಆಗಿದೆ. ಹೇಳುವ ಕಥೆ ವಾಸ್ತವ ಘಟನೆ ಯನ್ನವಲಂಬಿಸಿರಲಿ, ಹಳೆಗಾಲದ ಐತಿಹ್ಯವನ್ನೇ ನೆಮ್ಮಿರಲಿ ಅಥವಾ ಕಟ್ಟುಕತೆಯೇ ಆಗಿರಲಿ ಜನ ಅದಕ್ಕಾಗಿ ದುಂಬಾಲು ಬೀಳುತ್ತಾರೆ. ಅಲ್ಲಿಯ ಘಟನೆಗಳು ನಡೆದದ್ದು ನಿಜವೆ, ಹೆಂಗಸು ಕಪ್ಪೆಯಾಗುತ್ತಾಳೆಯೇ, ಕೀಲುಕುದುರೆಯ ಮೇಲೆ ಕುಳಿತು ಎಲ್ಲಿಂದ ಎಲ್ಲಿಗೆ ಹಾರಿ ಹೋಗುವುದುಂಟೆ, ಅಲ್ಲಿಯ ಗಂಧರ್ವಲೋಕ ಸತ್ಯವೆ ಎಂದು ಯಾರೂ ಪ್ರಶ್ನಿಸುವುದಿಲ್ಲ. ಅವುಗಳನ್ನು ಕೇಳುವುದರಿಂದ ಮನರಂಜನೆಯ ಜತೆಗೆ ಸಾಹಸ ಸ್ಫೂರ್ತಿಯೂ, ಜ್ಞಾನಾರ್ಜನೆಯೂ, ಧರ್ಮಬುದ್ಧಿಯೂ ಒದಗಬಹುದು. ಕಥೆಗಾರ ಜಾಣನಾದದ್ದರಿಂದ, ಅವನಿಗೆ ಶ್ರೋತೃಗಳ ಅಭಿರುಚಿ ಮನೋಧರ್ಮಗಳ ಪರಿಚಯವಿದೆ. ಅವರ ಎದೆಯ ದನಿ ಅವನೆದೆಯಲ್ಲಿ ಮಾರ್ದನಿಸುತ್ತದೆ: ಸಮಾಜದ ನಾಡಿಯ ಮಿಡಿತ ಅವನೆದೆಗಿವಿಗೆ ಕೇಳಿಸುತ್ತದೆ. ಒಂದು ರೀತಿಯಲ್ಲಿ ಕಥೆ ಪ್ರಾಚೀನ ಮಾನವನ ಜ್ಞಾನ ಸಂಗ್ರಹಾಲಯವೂ ಅಹುದು, ಸಾಂಸ್ಕೃತಿಕ ವಸ್ತುಸಂಗ್ರಹಾಲಯವೂ ಅಹುದು.

ಮೊದಲೇ ತಿಳಿಸಿದಂತೆ ಕಥನಕಲೆ ಸಾರ್ವಜನಿಕ ಆಸ್ತಿಯಾಗಿತ್ತು; ಎಲ್ಲ ಸಾಮಾಜಿಕ ಸ್ತರಗಳಲ್ಲಿಯೂ ಅದು ಜನಪ್ರಿಯವಾಗಿತ್ತು. ಒಡೆಯನಂತೆ ಆಳೂ ಕಥೆ ಹೇಳುವ ಕಲೆ ಯನ್ನು ಬಲ್ಲವನಾಗಿದ್ದ. ಸೃಷ್ಟಿಕರ್ತರು ಕೆಲವರಾದರೂ, ಹೇಳುವವರು ಹಲವರು, ಬಲ್ಲವರು ಎಲ್ಲರು. ಕಥೆಯ ಬಗ್ಗೆ ನಿರಾಸಕ್ತರಾದ ಜನರೇ ಇರಲಿಲ್ಲ. ಒಡಿಸ್ಸಿಯಸ್ ತನ್ನ ಸಾಹಸಾದ್ಭುತ ಕಥೆಗಳನ್ನು ವಿವರಿಸುವಾಗ ಆಸ್ಥಾನ ಶ್ರೋತೃವೃಂದದಿಂದ ಕಿಕ್ಕಿರಿದಿರುತ್ತಿತ್ತು. ಪಾಂಡವರ ವನವಾಸದ ಆಸರನ್ನು ನೀಗುವ ಸಲುವಾಗಿ ಋಷಿಗಳು ಕಥಾಕಾಲಕ್ಷೇಪಕ್ಕೆ ತೊಡಗುತ್ತಿದ್ದರು. ಮತಪ್ರವರ್ತಕರು, ಆಚಾರ್ಯರು, ಸಾಧುಸಂತ ಪರಮಹಂಸರು ಕಥೆಗಳ ಮೂಲಕ ಧರ್ಮಬೋಧೆ ಮಾಡುತ್ತಿದ್ದರು. ಅವರು ಹೊಸ ಕಥೆ ಗಳನ್ನು ಕಟ್ಟುತ್ತಿದ್ದರು, ಇಲ್ಲವೆ ಜನಸಾಮಾನ್ಯನಲ್ಲಿ ರೂಢಿಯಲ್ಲಿದ್ದ ಕಥೆಗಳಿಗೆ ತಮ್ಮ ಉದ್ದೇಶಕ್ಕನುಗುಣವಾಗಿ ನೂತನ ರೂಪ ಕೊಡುತ್ತಿದ್ದರು. ಯೇಸು ಬುದ್ಧ ರಾಮಕೃಷ್ಣ ಪರಮಹಂಸರು ಕಥೆಗಳ ಮಹಾ ಸಂಪತ್ತನ್ನು ಮುಂದಿನ ಪೀಳಿಗೆಗಾಗಿ ಬಿಟ್ಟುಹೋದರು. ನಡುಗಾಲದ ಯೂರೋಪೀಯ ಪಾದರಿಗಳಂತು ಅನೇಕ ಆಖ್ಯಾನಗಳ ಮೂಲಕ ಮತೀಯ ತತ್ತ್ವಗಳನ್ನು ಪ್ರಸಾರ ಮಾಡುತ್ತಿದ್ದರು. ಶಿಕ್ಷಣ ಸಹ ಕಥಾಮಾಧ್ಯಮದ ಮೂಲಕ ನಡೆಯುತ್ತಿದ್ದ ಸಂಗತಿ ಪಂಚತಂತ್ರದಿಂದ ತಿಳಿಯುತ್ತದೆ. ದೀರ್ಘ ಚಳಿಗಾಲದ ರಾತ್ರಿ

ಕಳೆಯಲು ಕತೆಯಿಲ್ಲದಿದ್ದರೆ ಮನುಷ್ಯ ಮಾನಸಿಕ ರೋಗಗಳಿಗೆ ತುತ್ತಾಗುತ್ತಿದ್ದ. ಪ್ರಯಾಣದ ಪ್ರಯಾಸ ಕ್ಲೇಶಗಳಿಗೂ ಕಥೆಯೇ ತಾರಕಶಕ್ತಿ.

ಈ ಮೌಖಿಕ ಕಥನಕಲೆ ಪ್ರಾಯಶಃ ಅತ್ಯಂತ ಪ್ರಾಚೀನವಾದುದಾಗಿರಬೇಕು. ಕತೆಗಾರ ಹುಟ್ಟಿ ಪ್ರಬುದ್ಧಾವಸ್ಥೆಯನ್ನು ಮುಟ್ಟಿದಾಗಲೂ ಚರಿತ್ರಕಾರ ಹುಟ್ಟಿರಲಿಲ್ಲ. ಕಥೆಗಳ ವಸ್ತು ಮತ್ತು ಉದ್ದೇಶ ಕಾಲ ದೇಶ ಪರಿಸರಗಳಿಗನುಗುಣವಾಗಿ ವ್ಯತ್ಯಸ್ತವಾದರೂ ಅವುಗಳ ಸಾಮಾಜಿಕ ಹಾಗೂ ವೈಯಕ್ತಿಕ ಅವಶ್ಯಕತೆಗಳ ಮೂಲಭೂತ ಗುಣ ಮಾತ್ರ ಬದಲಾಯಿಸಿಲ್ಲ. ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಕೃತಿ ದಟ್ಟವಾಗಿ ಹರಡಿರುವ ಸಮಾಜ ವಿನಾ ಉಳಿದೆಡೆಗಳಲ್ಲಿ ಇಂದಿಗೂ ಕಾಲ್ಪನಿಕ ಕಥೆಗಳ ಬಗೆಗೆ ಕುತೂಹಲ ತೀವ್ರವಾಗಿದೆ. ಪೂರ್ವಾರ್ಜಿತ ಆಸ್ತಿಯಂತಿರುವ ಕಥಾಕೋಶ, ಅದರಿಂದ ಅಭಿವ್ಯಕ್ತಗೊಳ್ಳುವ ಜಾನಾಂಗಿಕ ಗುಣಮಹಿಮೆಗಳಿಂದ ಅದರ ವಾರಸುದಾರರಿಗೆ ಹೆಮ್ಮೆಯುಂಟಾಗಬಹುದು. ಇತಿಹಾಸ ಪೂರ್ವಕಾಲದ ಮಾನವನ ಇತಿಹಾಸವನ್ನು ತಿಳಿಯಲಿರುವ ಅಮೂಲ್ಯ ಸಾಧನಗಳಿವು. ವೀರಗತೆಗಳು, ಕಾರಣಕಾರ್ಯ ಕಥೆಗಳು ಮತ್ತು ಪ್ರಾಣಿ ಕಥೆಗಳು ಇಂದಿಗೂ ಶ್ರೋತೃಗಳ ಕುತೂಹಲವನ್ನು ಕೆರಳಿಸಬಹುದು.

ಜಗತ್ತಿನ ಕಥೆಗಳನ್ನೆಲ್ಲ ತಾಳೆ ಹಿಡಿದು ನೋಡುವಾಗ ಅವುಗಳಲ್ಲಿ ಕಾಣುವ ಸಾದೃಶ್ಯಗಳು ಗ್ರಾಹಕರನ್ನು ಚಕಿತಗೊಳಿಸುತ್ತವೆ. ಬೇರೆ ಬೇರೆ ಭೌಗೋಳಿಕ ಪರಿಸರಗಳಲ್ಲಿ, ಭಿನ್ನ ಭಿನ್ನ ನಾಗರಿಕತೆಗಳ ಹಿನ್ನೆಲೆಗಳಲ್ಲಿ ಉದ್ಭವಗೊಂಡ ಕಥೆಗಳಲ್ಲೆಲ್ಲ ಪ್ರವಹಿಸುತ್ತಿರುವ ಮನೋಧರ್ಮ ಒಂದೇ ಎಂಬುದು ಸ್ಪಷ್ಟವಾಗುತ್ತದೆ. ಒಂದೇ ಬಗೆಯ ಕಥಾವರ್ಗಗಳು ಮತ್ತು ಒಂದೇ ತೆರನ ಆಶಯಗಳು ಆ ಕಥೆಗಳಲ್ಲಿ ಸಮಾವೇಶಗೊಂಡಿರುವ ಸಂಗತಿ ಮಾನವನ ಸೋಜಿಗಗೊಳಿಸದಿರಲಾರದು. ಅವುಗಳ ವ್ಯವಸ್ಥಿತವಾದ ವ್ಯಾಸಂಗದಿಂದ ಮಾನವನ ಮೂಲ ಸ್ವರೂಪ ತೆರೆಯುತ್ತದೆ; ಪ್ರಾಚೀನ ಸಂಸ್ಕೃತಿಯನ್ನು ಮುಸುಕಿರುವ ಪಾಚಿಯನ್ನು ಬಿಡಿಸಿದಂತಾಗುತ್ತದೆ.

ಈ ಕಥೆಗಳನ್ನು ಒಂದೊಂದು ದೇಶದಲ್ಲಿ ಒಂದೊಂದು ಹೆಸರಿಂದ ಕರೆಯುತ್ತಾರೆ. ಆ ಕಥೆಗಳ ಗುಣಲಕ್ಷಣಗಳನ್ನು ಪ್ರತಿಬಿಂಬಿಸುವ ಒಂದು ಹೆಸರು ಯಾವ ಭಾಷೆಯಲ್ಲಿಯೂ ಇಲ್ಲ; ಅಂಥ ಪದವನ್ನರಸುವ ಶ್ರಮ ಸಹ ಸಫಲವಾಗುವುದಿಲ್ಲ. ಜರ್ಮನ್ ಭಾಷೆಯ ಮಾರ್ಷೆನ್ (Marchen) ಇದ್ದುದರಲ್ಲಿ ತೃಪ್ತಿಕರವಾದ ಪದವೆಂದು ಹೇಳಲಾಗಿದೆ. ಅದನ್ನು ಆಂಗ್ಲಭಾಷೆಯಲ್ಲಿ ಕಿನ್ನರ ಕತೆ (fairy tale) ಅಥವಾ ಮನೆಗತೆ (House-hold tale) ಎಂದು ಕರೆಯುತ್ತಾರೆ. ಕೇವಲ ಕೆಲವು ಕಥೆಗಳಲ್ಲಿ ಮಾತ್ರ ಕಿನ್ನರರ ಪ್ರವೇಶವಿರುವುದರಿಂದ ಅವುಗಳನ್ನು ಆ ಹೆಸರಿನಿಂದ ಕರೆಯುವುದು ಸೂಕ್ತವಲ್ಲವೆಂಬ ಅಭಿಪ್ರಾಯವೂ ಉಂಟು. ವಿಶಾಲಾರ್ಥ ಹೊಂದಿರುವ, ಜಗತ್ತಿನ ಜನಪದ ಹಾಗೂ ಶಿಷ್ಟಪದ ಕಥೆಗಳನ್ನೆಲ್ಲ ಒಳಗೊಳ್ಳುವಂಥ ಪದ ಮನೆಗತೆ. ಸೀಮಿತಾರ್ಥವುಳ್ಳ ಕೇವಲ ಮೌಖಿಕ ಸಂಪ್ರದಾಯದ ಕಾಲ್ಪನಿಕ ಕಥೆಗಳಿಗೆ ಈ ಮಾತಿನ ಅನ್ವಯ ಉಚಿತವಾಗಲಾರದು. ಆಶಯ ಅಥವಾ ಘಟನೆಗಳ ಪರಂಪರೆಯಿಂದ ಕೂಡಿದ ಸುಮಾರು ಉದ್ದವ

ಕಥೆಯನ್ನು ಮಾರ್ಷೆನ್ ಎಂದು ಕರೆಯುತ್ತಾರೆ. ಅದು ಯಾವುದೋ ಒಂದು ಪ್ರದೇಶಕ್ಕೆ ಸೀಮಿತವಾದದ್ದಲ್ಲ: ನಿರ್ದಿಷ್ಟ ಪಾತ್ರಗಳಿಂದ ಕೂಡಿದ್ದಲ್ಲ. ಅತಿಮಾನುಷ ವಾತಾವರಣದ ಕಾಲ್ಪನಿಕ ಪ್ರಪಂಚದಲ್ಲಿ ಅದು ಸುಳಿದಾಡುತ್ತದೆ. ತಳಬುಡವಿಲ್ಲದ ಈ ಪ್ರಪಂಚದಲ್ಲಿ ಅತಿ ಸಾಮಾನ್ಯರು ಪ್ರಬಲ ವಿರೋಧಿಗಳನ್ನು ಕೊಂದು, ಅವರ ಹೆಣ್ಣುಮಕ್ಕಳನ್ನು ಮದುವೆಯಾಗಿ, ಅವರ ರಾಜ್ಯಗಳನ್ನು ಕಸಿದುಕೊಂಡು ಆಡಳಿತ ನಡೆಸುತ್ತಾರೆ. ಪ್ರಾರಂಭದಲ್ಲಿ ರಿಕ್ತರೋ ಅನಾಥರೋ ಆಗಿದ್ದು ಕಾಲಾನಂತರದಲ್ಲಿ ಅತಿಮಾನುಷವಾದ ಸಾಹಸಗಳ ಮೂಲಕ ಮಹತ್ಪದವಿಯನ್ನು ಪಡೆದು ಸುಖ ಸಂತೋಷಪಡುವ ನಾಯಕ ಅಥವಾ ನಾಯಿಕೆಯ ಸುತ್ತ ಕಥೆ ತಿರುಗುತ್ತದೆ. ಮಾರ್ಷೆನ್‌ಗೆ ಸಂವಾದಿಯಾಗಿ ಕಿಮೀರತ್ ಎಂಬ ಪದ ಬಳಸಬಹುದೆಂದು ಸ್ಟಿತ್ ಥಾಂಪ್ಸನ್ ಅಭಿಪ್ರಾಯಪಡುತ್ತಾರೆ. ಕಿಮಾರ (Chimera) ಎಂದರೆ ಸಿಂಹದ ತಲೆಯೂ ಆಡಿನ ಹೊಟ್ಟೆಯೂ ಹಾವಿನ ಬಾಲವೂ ಉಳ್ಳ ಒಂದು ರಾಕ್ಷಸಾಕಾರದ ಪ್ರಾಣಿ. ವಿಚಿತ್ರ ಕಥೆಗೆ ವಿಚಿತ್ರ ಪ್ರಾಣಿಯ ಹೆಸರು ಸೂಕ್ತವೆಂದು ಅವರಿಗನಿಸಿರಬಹುದು. ಅಂಥ ಕಥೆಗಳನ್ನು ಕನ್ನಡದಲ್ಲಿ ವಿಚಿತ್ರ ಕಥೆ ಅಥವಾ ಕಷ್ಟ ಕಥೆಯೆಂದು ಕರೆಯಬಹುದು.

ನಾವು ಐತಿಹ್ಯಗಳೆಂದು ಕರೆಯುವ ಕಥೆಗಳನ್ನು ಜರ್ಮನ್ ಭಾಷೆಯಲ್ಲಿ ಸಾಗೆ (Sage) ಗಳೆಂದೂ, ಆಂಗ್ಲ ಭಾಷೆಯಲ್ಲಿ ಲೆಜಂಡ್ (legend)ಗಳೆಂದೂ ಕರೆಯುವುದುಂಟು. ಈ ತೆರನ ಕಥೆಗಳಲ್ಲಿ ಅವಾಸ್ತವಿಕ ಹಾಗೂ ಅದ್ಭುತ ಘಟನೆಗಳು ಹೆಣಿಗೆಗೊಂಡಿದ್ದರೂ ಅವು ವಾಸ್ತವವಾಗಿ ನಡೆದಿರಬಹುದಾದ ಸಂಗತಿಗಳೆನ್ನುವ ನಂಬಿಕೆಯಿದೆ. ಹಿಂದಿನ ಕಾಲದಲ್ಲಿ, ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ನಡೆದಿರಬಹುದಾದ ಆ ಘಟನೆ ಬೇರೊಂದು ಸ್ಥಳದಲ್ಲಿಯೂ ಸಂಭವಿಸಿತೆಂದು ಹೇಳಲೂ ಅವಕಾಶವುಂಟು. ಚಾರಿತ್ರಿಕ ವ್ಯಕ್ತಿಯ ಸುತ್ತ ರಮ್ಯಾದ್ಭುತವಾದ ಸಂಗತಿಗಳು ಸಂಗ್ರಹಗೊಂಡು ಪುರಾಣ ಕಥೆಯಾಗಿ ವಿಕಾಸಗೊಳ್ಳಬಹುದು. ಹೀಗಾಗಿ ಐತಿಹ್ಯ ಮತ್ತು ಪುರಾಣ ಕಥೆಗಳ ನಡುವಣ ಸಂಬಂಧ ತೀರ ನಿಕಟವಾಗಿದ್ದು, ಅವು ಒಂದೆ ಎಂಬಂತೆ ತೋರುವುದೂ ಉಂಟು. ಸೃಷ್ಟಿಯ ಚೂಲ ಮೂಲಗಳನ್ನು, ದೇವಾಧಿದೇವತೆಗಳನ್ನು, ದೇವಮಾನವರನ್ನು ಕುರಿತ ಕಥೆಗಳು ಪುರಾಣ ಕಥೆ (Myths) ಎನಿಸಿಕೊಳ್ಳುತ್ತವೆ. ಮತೀಯ ಪ್ರಕ್ರಿಯೆಗಳು ಮತ್ತು ನಂಬಿಕೆಗಳು ಸಹ ಈ ಕಥೆಗಳಲ್ಲಿ ಬಳಕೆಯಾಗುತ್ತವೆ. ವೀರಗಥೆಗಳೇ ಕಾಲಾನುಕ್ರಮದಲ್ಲಿ ಪುರಾಣ ಕಥೆಗಳಾಗಿ ಪರಿಣಮಿಸಿರುವುದೂ ಉಂಟು. ಇಲ್ಲಿಯ ನೀರು ನೊರೆ ನೊರೆಯಾಗಿದೆ. ಇದಕ್ಕೆ ಕಾರಣ ಸೀತೆ ಸ್ನಾನ ಮಾಡಿದ ಜಾಗ ಇದು; ಅಣ್ಣ ತಮ್ಮಂದಿರು ರಾಗಿ ಹಂಚಿಕೊಳ್ಳುವಾಗ ಅಣ್ಣ ತಮ್ಮನಿಗೆ ವಂಚನೆ ಮಾಡಿದ್ದರ ಫಲವಾಗಿ ತಮ್ಮನ ಗುಡ್ಡ ಬೆಳೆಯುತ್ತ, ಅಣ್ಣನ ಗುಡ್ಡ ಕುಗ್ಗುತ್ತಿರುವುದರಿಂದ ಅಣ್ಣ ತಮ್ಮರ ಗುಡ್ಡ ಎಂದಾಯಿತು; ಸಾರಂಗಧರನ ಕೈಕಾಲು ಕೊಯ್ದುದರಿಂದ ಬಂಡೆಯೆಲ್ಲ ಲೋಹಿತವರ್ಣವಾಯಿತು—ಇಂಥ ಕಥೆಗಳನ್ನು ಕಾರಣಕಾರ್ಯ ಕಥೆಗಳೆಂದು (Aetiological) ಕರೆಯುವುದಾದರೂ ಐತಿಹ್ಯಗಳ ಗುಂಪಿಗೆ ಸೇರಿಸಿಬಿಡಬಹುದು. ಏಕೆಂದರೆ, ಇವುಗಳ ರಚನೆ ಸರಳವಾಗಿದ್ದು, ಏಕಾಶಯ

ದಿಂದ ಕೂಡಿರುವ, ಒಬ್ಬಾನೊಬ್ಬ ವ್ಯಕ್ತಿಯ ಸುತ್ತ ಬೆಳೆವ ಕಥೆ.

ತನ್ನಂತೆಯೇ ಪ್ರಾಣಿಗಳೂ ಮಾತಾಡುತ್ತವೆ, ತನ್ನಂತೆಯೇ ವ್ಯವಹರಿಸುತ್ತವೆ, ಸತ್ತ
ಮಾನವರು ಪ್ರಾಣಿಗಳ ದೇಹವನ್ನು ಸೇರುತ್ತಾರೆ ಎಂಬುದು ಆದಿಮಾನವನ ನಂಬಿಕೆ. ಆ
ನಂಬಿಕೆ ಪ್ರಬಲವಾಗಿದ್ದ ದಿನಗಳಲ್ಲಿ ಪ್ರಾಣಿಕಥೆಗಳು ಉಗಮಗೊಂಡಿರಬೇಕೆಂದು ತೋರು
ತ್ತದೆ. ಪ್ರಾಣಿಗಳ ಸ್ವಭಾವ ವರ್ತನೆಗಳನ್ನೂ, ಮುಖ್ಯವಾಗಿ ಕೆಲವು ಪ್ರಾಣಿಗಳ ಬುದ್ಧಿ
ವಂತಿಕೆಯನ್ನೂ ಇತರ ಪ್ರಾಣಿಗಳ ದಡ್ಡತನವನ್ನೂ ತೋರಿಸುವ ಸಲುವಾಗಿ ಅಂಥ ಕಥೆ
ಗಳನ್ನು ಕಟ್ಟುತ್ತಾರೆ. ನೀತಿ ಪ್ರಚಾರಕ್ಕಾಗಿ ರಚನೆಗೊಂಡ ಪ್ರಾಣಿ ಕಥೆಗಳನ್ನು ಪ್ರಾಣಿ
ನೀತಿ ಕಥೆಗಳೆಂದು ಕರೆಯಬಹುದು. ಈಸೋಪನ ಮತ್ತು ಪಂಚತಂತ್ರದ ಕಥೆಗಳೆಲ್ಲ
ಅಂಥವೇ.

ವಿನೋದವೇ ಮುಖ್ಯೋದ್ದೇಶವಾಗುಳ್ಳ ಕಥೆಗಳು ವಿನೋದ ಕಥೆಗಳು ಎಂಬ ಹೆಸರಿ
ನಿಂದ ಪ್ರಸಿದ್ಧವಾಗಿವೆ. ನಿತ್ಯ ಜೀವನದ ಘಟನೆಗಳು, ಅವುಗಳ ವಸ್ತುವಾಗುತ್ತವೆ. ಅತಿ
ಮಾನುಷ ವ್ಯಾಪಾರಗಳಲ್ಲಿ ವಿರಳ: ಅವು ಆಗಾಗ್ಗೆ ಕಾಣಿಸಿಕೊಂಡರೂ ಹಿನ್ನೆಲೆಯಲ್ಲಿ
ನಿಲ್ಲುತ್ತವೆ. ಆಶಯಗಳು ಒಂದೋ ಎರಡೋ ಇರುತ್ತವೆ. ಕೆಲವು ವೇಳೆ ಕ್ರಿಯೆಗೂ ಇಲ್ಲಿ
ಪ್ರಾಮುಖ್ಯತೆಯಿಲ್ಲ. ಅನೇಕ ವೇಳೆ ಅದು ಕಿರುಗತೆಯ (anecdote) ರೂಪಕ್ಕೂ
ತಿರುಗಬಹುದು. ಸಾಗಾಗಳೆಂದು ಹೆಸರುವಾಸಿಯಾದ ಕಥೆಗಳು ಐರ್ಲೆಂಡ್ ನಾರ್ವೆ
ಮೊದಲಾದ ಕೆಲವು ದೇಶಗಳಲ್ಲಿ ಮಾತ್ರ ಚಾಲ್ತಿಯಲ್ಲಿವೆ. ಅವು ಮುಖ್ಯವಾಗಿ
ಕೌಟುಂಬಿಕ ಕಥೆಗಳು. ವಂಶವೃತ್ತಾಂತ ಅವುಗಳ ವಸ್ತು. ಪಿತೃಪೂಜೆ ಪ್ರಧಾನ ಸ್ಥಾನ
ಪಡೆದಿರುವ ಸಮಾಜದಲ್ಲಿ ಅಂಥ ಕಥಾನಕಗಳು ವಿಶೇಷವಾಗಿ ಲಭಿಸುತ್ತವೆಂದು ಹೇಳು
ವುದುಂಟು. ಅಲ್ಲಿಯೂ ಅವೂ ಶ್ರೀಮಂತ ಕುಟುಂಬಗಳಲ್ಲಿ ಮಾತ್ರ ಕಾಣುವಂಥವು.
ಇವುಗಳಲ್ಲಿ ಚಾರಿತ್ರಕ ಸತ್ಯ ದಟ್ಟವಾಗಿದ್ದರೂ ಐತಿಹ್ಯಗಳು, ಕೌಟುಂಬಿಕ ಸಂಪ್ರದಾಯ
ಮತ್ತು ಆಚರಣೆಗಳು ಸಮಾವೇಶಗೊಳ್ಳುತ್ತವೆ. ಇವುಗಳಲ್ಲಿ ರಂಜನೀಯಾಂಶಗಳು ತುಂಬ
ತೆಳ್ಳೆಯಾಗಿರುವುದರಿಂದ—ಕೆಲವು ಕಡೆ ಅವೂ ಇಲ್ಲದಿರಬಹುದು. ಇವು ಕಥಾ ಪ್ರಕಾರ
ಗಳ ಭಾಗಗಳೆಂದು ವರ್ಣಿಸಲು ಸಾಧ್ಯವೆ ಎಂದು ಯೋಚಿಸಬೇಕಾಗಿದೆ. ಅಧ್ಯಯನದ
ಅನುಕೂಲಕ್ಕಾಗಿ ಕಥೆಗಳನ್ನು ಮೇಲಿನಂತೆ ವಿಂಗಡಿಸಬಹುದಾದರೂ ಅವುಗಳ ನಡುವೆ
ಖಚಿತವಾಗಿ ಗಡಿರೇಖೆಯನ್ನೆಳೆಯಲಾಗದು. ಕೆಲವು ವೇಳೆ ಇದು ಕಾಲ್ಪನಿಕ ಕಥೆ. ಇದು
ಐತಿಹ್ಯ ಎಂದು ಗುರುತು ಹಚ್ಚುವುದೂ ಕಠಿನವಾಗುತ್ತದೆ.

ಕಥೆಗಳ ವಿಂಗಡಣೆ ಸುಲಭಕಾರ್ಯವಲ್ಲ. ಯಾವ ರೀತಿ ವಿಂಗಡಿಸಿದರೂ ಒಂದರ ಗಡಿ
ಮತ್ತೊಂದರ ಗಡಿಯೊಳಗೆ ಮೈಗರೆದಿರುತ್ತದೆ. ಬ್ರಿಟನ್ನಿನ ವಿಶ್ವಕೋಶ ಎಲ್ಲ ಕಥೆಗಳನ್ನು
ಪುರಾಣ, ಐತಿಹ್ಯ ಮತ್ತು ಜನಪ್ರಿಯ ಕಥೆಗಳು ಎಂದು ಮೂರು ಭಾಗಗಳಾಗಿ ವಿಂಗಡಿಸು
ತ್ತದೆ.[1] ಪುರಾಣ ಐತಿಹ್ಯಗಳು ಸಾಹಿತ್ಯಿಕ ವರ್ಗಕ್ಕೆ ಸೇರುತ್ತವೆಯೆ ಎಂಬ ಪ್ರಶ್ನೆಯೂ
ಇದೆ. ಅವು ಮುಖ್ಯವಾಗಿ ಸಂಸ್ಕೃತಿಗೆ ಸಂಬಂಧಿಸಿದುವು. ಮನರಂಜನೆ ಅವುಗಳ ಗುರಿ

[1] *Encyclopaedia Britannica*, Vol, 9, p. 519-20.

ಯಲ್ಲ. ಜನಪ್ರಿಯ ಕಥೆಗಳಲ್ಲಿ ಮಾತ್ರ ರಂಜನೀಯಾಂಶವುಂಟು. ಆದರೆ ವಿಶಿಷ್ಟ ಲಕ್ಷಣ ಗಳುಳ್ಳ ಕಥಾ ಪ್ರಕಾರಗಳಿಗೆ ಇಲ್ಲಿ ಸ್ಥಾನವಿಲ್ಲದಿರುವುದರಿಂದ ಈ ವಿಂಗಡಣೆ ಅಸಮರ್ಪಕ ವೆಂದೇ ಹೇಳಬೇಕು. ಸ್ಟಿತ್ ಥಾಂಪ್ಸನ್ ಅವರು ಸಂಕೀರ್ಣ ಹಾಗೂ ಸರಳ ಎಂದು ಎರಡು ಮುಖ್ಯ ವಿಭಾಗಗಳನ್ನು ರಚಿಸಿಕೊಂಡು, ಸಂಕೀರ್ಣ (Complex) ಕಥೆಗಳ ಕೆಳಗೆ ಕಾಲ್ಪನಿಕ ಕಥೆಗಳನ್ನೂ, ಸರಳ (Simple) ಕಥೆಗಳ ಕೆಳಗೆ ಪ್ರಾಣಿ ಕಥೆ, ನೀತಿ ಕಥೆ, ಪುರಾಣ ಕಥೆ, ಸೂತ್ರ ಕಥೆ ಮತ್ತು ಐತಿಹ್ಯಗಳನ್ನು ತರುತ್ತಾರೆ. ಪುರಾಣ ಮತ್ತು ಐತಿಹ್ಯ ಅಥವಾ ದಂತಕಥೆಗಳನ್ನು ಪ್ರತ್ಯೇಕಗೊಳಿಸಿದ್ದರೆ ಯುಕ್ತವಾಗುತ್ತಿತ್ತೆಂದು ತೋರು ತ್ತದೆ. ಎ. ಎಚ್. ಕ್ರಾಪೆಯವರು ಕಾಲ್ಪನಿಕ, ವೈನೋದಿಕ ಮತ್ತು ಪ್ರಾಣ್ಯಾತ್ಮಕ ಎಂದು ಅವುಗಳನ್ನು ವಿಂಗಡಿಸಿ, ಐತಿಹ್ಯ ಮತ್ತು ಪುರಾಣಗಳನ್ನು ಬೇರ್ಪಡಿಸುತ್ತಾರೆ. "ಶಾಸನಾದಿಗಳಲ್ಲಿ, ಗ್ರಂಥಾದಿಗಳಲ್ಲಿ, ನಡೆದವು ಎಂದೇ ಉಲ್ಲೇಖವಿರುವ ಕಥೆ"ಗಳನ್ನು ನಡೆದ ಕಥೆಗಳೆಂದೂ, "ಸ್ಥಳ ಮಾಹಾತ್ಮ್ಯ, ದೇವತಾ ಪ್ರಭಾವಾದಿ ಕಥೆ"ಗಳನ್ನು ಪುರಾಣ ಕಥೆಗಳೆಂದೂ, "ಹೊತ್ತು ಕಳೆಯುವ ಉದ್ದೇಶದಿಂದ ಒಬ್ಬರಿಗೊಬ್ಬರು ಹೇಳಿಕೊಳ್ಳುವ ಕಥೆ"ಗಳನ್ನು ವಿನೋದ ಕಥೆಗಳೆಂದೂ ದೇವುಡು ಅವರು ಮೂರು ವಿಭಾಗಗಳಾಗಿ ವಿಂಗಡಿಸುತ್ತಾರೆ.[1] "ಕನ್ನಡ ಕತೆಗಳ ಜಾಯಮಾನದ ಹಿನ್ನೆಲೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವನ್ನು ಮಾಡಿಕೊಳ್ಳಲಾಗಿದೆ"[2] ಎಂದು ಹೇಳುತ್ತ ಜೀಶಂಪ ಅವರು ಅತಿ ಮಾನುಷ ಪತ್ನಿಯರು, ಅತಿಮಾನುಷ ಪತಿಗಳು, ಅತಿಮಾನುಷ ವಿರೋಧಿಗಳು, ರಮ್ಯ ಕಥೆಗಳು, ಅದ್ಭುತ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ಹಾಸ್ಯ ಕಥೆಗಳು, ಪ್ರಾಣಿ ಕಥೆಗಳು ಎಂದು ತಮ್ಮ ಸಂಗ್ರಹದ ಕಥೆಗಳನ್ನು ವಿಂಗಡಿಸಿಕೊಂಡಿದ್ದಾರೆ. ಆದರೆ ಅವೆಲ್ಲ ವನ್ನು ಕಾಲ್ಪನಿಕ, ಹಾಸ್ಯ ಮತ್ತು ಪ್ರಾಣಿಸಂಬಂಧಿಕಥೆಗಳೆಂದು ಮೂರು ಗುಂಪು ಗಳೊಳಗೆ ಸಂಗಳಿಸಬಹುದು. ರಾಗೌ ಅವರು ಆರು ಪ್ರಕಾರಗಳನ್ನು ಗುರುತಿಸಿ, ಒಗಟು ಕಥೆಗಳನ್ನು ಸೇರಿಸಿದ್ದಾರೆ.[3] ಅವೆಲ್ಲವನ್ನೂ ನಾಲ್ಕು ವಿಭಾಗಗಳಲ್ಲಿ ಸಮಾವೇಶಗೊಳಿಸ ಬಹುದು. ಬರ್ಮಾದಲ್ಲಿ ಕಾನೂನು ಕಥೆಗಳೆಂಬ ಮತ್ತೊಂದು ಪಂಗಡವಿದೆ.[4] ಸ್ಟಿತ್ ಥಾಂಪ್ಸನ್ ಮೊದಲಾದ ಗಣ್ಯ ವಿದ್ವಾಂಸರು ಅವುಗಳನ್ನು ಗಮನಿಸಿದಂತೆ ತೋರುವುದಿಲ್ಲ. ಅಂಥ ಕಥೆಗಳು ಎಲ್ಲ ಕಡೆಯಲ್ಲಿಯೂ ಗಣನೀಯ ಸಂಖ್ಯೆಯಲ್ಲಿದ್ದು ಜನಪ್ರಿಯವಾಗದಿರ ಬಹುದು. ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲ ಕಥೆಗಳನ್ನು ಕಾಲ್ಪನಿಕ, ವೈನೋದಿಕ, ಪ್ರಾಣ್ಯಾತ್ಮಕ, ಗಾದೆ ಸಂಬಂಧಿ, ಒಗಟು ಸಂಬಂಧಿ ಮತ್ತು ಕಾನೂನು ಸಂಬಂಧಿಗಳಾಗಿ ವಿಭಜಿಸಬಹುದೆಂದು ತೋರುತ್ತದೆ.

ವಿದ್ವಾಂಸರು ಅಧ್ಯಯನ ಸೌಕರ್ಯಕ್ಕಾಗಿ ಕಥೆಗಳನ್ನು ವಿಭಜಿಸುತ್ತಾರೆಯೇ ಹೊರತಾಗಿ

---

1 ಕರ್ಣಾಟಕ ಸಂಸ್ಕೃತಿ, ದೇವುಡು; ಪುಟ 88–89.

2 ಕನ್ನಡ ಜನಪದ ಕಥೆಗಳು, ಜೀ. ಶಂ. ಪರಮಶಿವಯ್ಯ, ಪು. lxvi.

3 ಅವರ 'ಕರ್ಣಾಟಕ ಜಾನಪದ ಕಥೆಗಳು' ಗ್ರಂಥದ ಪ್ರಸ್ತಾವನೆ ನೋಡಿ.

4 Vide *Burmese Law Tales* by Maung Htin Aung.

ಸಾಮಾನ್ಯ ಜನರು ಈ ವರ್ಗಭೇದಗಳನ್ನು ಗಮನಿಸುವುದಿಲ್ಲ. ಸಾಮಾನ್ಯರೇಕೆ. ಯಾವ ಓದುಗರೂ ಇಂಥ ವಿಶ್ಲೇಷಣೆಗೆ ತವಕಿಸುವುದಿಲ್ಲ. ಅವರಿಗೆ ಬೇಕಾದ್ದು ಮನರಂಜನೆ, ನೀತಿಬೋಧೆ ಅಥವಾ ಲೋಕಾನುಭವ ಸಂಗ್ರಹ. ಕತೆಗಾರನ ಲಕ್ಷ್ಯವೂ ವಿಭಜನೆಯ ತೊಡಕಿನಲ್ಲಿ ಸಿಕ್ಕಿಕೊಳ್ಳುವುದಿಲ್ಲ. ಕತೆ ಕಟ್ಟುವವರೂ ಅಷ್ಟೇಯೆ. ಕತೆಯಲ್ಲಿ ಇಷ್ಟು ಆಶಯಗಳಿರಬೇಕು, ರಚನೆ ಹೀಗಿರಬೇಕು, ನಾಯಕ ಹಾಗಿರಬೇಕು, ಪಾತ್ರಗಳು ಇಷ್ಟೇ ಇರಬೇಕು, ವಸ್ತು ಅದಿರಬೇಕು, ಎಂದೆಲ್ಲ ಯೋಚಿಸುವುದೇ ಇಲ್ಲ. ಸಾಹಿತ್ಯ ಮೀಮಾಂಸೆ ಅವನಿಗೆ ಅಪರಿಚಯದ ಸಂಗತಿ. ಅದರ ಮೇಲೆ, ಮೂಲ ಸೃಷ್ಟಿಕರ್ತ ಒಬ್ಬನಾದರೂ ಅದನ್ನು ಬೆಳೆಸಿ ಉಳಿಸುವವರು ಹಲವರಾದ್ದರಿಂದ, ಅವರೆಲ್ಲರ ಭಾಷೆ ಭಾವನೆಗಳು ಅವುಗಳಲ್ಲಿ ಅಡಕಗೊಳ್ಳುವುದರಿಂದ ಬಹುತೇಕ ಕಥೆಗಳು ಸಮ್ಮಿಶ್ರಗುಣವುಳ್ಳವಾಗಿರುತ್ತವೆ. ಆದ್ದರಿಂದಲೇ ವರ್ಗೀಕರಣದಲ್ಲಿ ಮತಭೇದ ಅನಿವಾರ್ಯ.

೨. ಕಾಲ್ಪನಿಕ ಕಥೆಗಳು

ಸಂಕೀರ್ಣ ಕಥೆಗಳಲ್ಲಿ ಸಂಘರ್ಷಣೆ ಅನಿವಾರ್ಯ. ನಾಯಕ ಸಾಮಾನ್ಯವಾಗಿ ಭಾವೋದ್ರೇಕ ನಾಟಕದ ನಾಯಕನಂತಿರುತ್ತಾನೆ. ಸುತ್ತಮುತ್ತಣವರ ತಿರಸ್ಕಾರಕ್ಕೆ ಪಾತ್ರನಾದವನು ; ಸ್ವಶಕ್ತಿಯಿಂದ ಮೇಲೆ ಬಂದವನು. ಅವನು ನಾನಾ ಅಡ್ಡಿ ಆತಂಕಗಳನ್ನೆದುರಿಸಬೇಕಾಗುತ್ತದೆ. ಸಾಮಾನ್ಯವಾಗಿ ಅವು ಅತಿಮಾನುಷ ವ್ಯಕ್ತಿಗಳಿಂದ ಸಂಭವಿಸುತ್ತವೆ. ಆ ವ್ಯಕ್ತಿಗಳು ರಾಕ್ಷಸರ ಭೂತಗಳ ಅಥವಾ ಭಯಂಕರ ಪ್ರಾಣಿಗಳ ರೂಪದಲ್ಲಿರಬಹುದು. ಇದಕ್ಕೆ ನಿದರ್ಶನವಾಗಿ ರಾಂಕೆಯವರಿಂದ ಪುನರ್ರಚಿತವಾಗಿರುವ ರಾಕ್ಷಸ ಪ್ರಾಣಿಯ ಕೊಲೆಗಾರ (The Dragon Slayer) ಎಂಬ ಕತೆಯನ್ನು ನೋಡಬಹುದು. ಒಂದಾನೊಂದು ಊರಿನಲ್ಲಿ ಇಬ್ಬರು ದರಿದ್ರ ದಂಪತಿಗಳು. ಅವರಿಗೆ ಹೆಣ್ಣು ಗಂಡು ಇಬ್ಬರು ಮಕ್ಕಳು. ತಂದೆ ತಾಯಿ ತೀರಿಕೊಂಡಾಗ ಅವರಿಗಿದ್ದ ಆಸ್ತಿ ಎಂದರೆ ಒಂದು ಸಣ್ಣ ಮನೆ ಮತ್ತು ಮೂರು ಕುರಿಗಳು. ಮಗಳು ಮನೆಯನ್ನೂ ಮಗ ಕುರಿಗಳನ್ನೂ ಹಂಚಿಕೊಳ್ಳುತ್ತಾರೆ. ಹುಡುಗ ಕುರಿಗಳಿಗೆ ಬದಲಾಗಿ ಮೂರು ಅದ್ಭುತ ಶುನಕಗಳನ್ನು ಪಡೆದುಕೊಂಡು ಗೊತ್ತುಗುರಿಯಿಲ್ಲದೆ ಅಲೆದಾಡುತ್ತಾನೆ. ಅನುನಯದ ಪರಿಣಾಮವಾಗಿ ದಾರಿಯಲ್ಲಿ ಸಂದರ್ಶಿಸಿದ ಮುದುಕಿಯೊಬ್ಬಳಿಂದ ಮಾಯಾದಂಡವನ್ನು ಪಡೆಯುತ್ತಾನೆ. ಅದು ಮುಟ್ಟಿದ್ದೆಲ್ಲ ಸಾಯುತ್ತದೆ.

ಅವನು ಮುಂದೆ ಮುಂದೆ ಗಮಿಸಿದಾಗ ದುಃಖದ ವಾತಾವರಣದಿಂದ ಕೂಡಿದ ರಾಜಧಾನಿ ಸಿಗುತ್ತದೆ. ತಾನಿಳಿದುಕೊಂಡಿದ್ದ ಸತ್ರದ ಯಜಮಾನನಿಂದ ದುಃಖಕಾರಣವನ್ನರಿಯುತ್ತಾನೆ. ಪಕ್ಕದ ಬೆಟ್ಟದಲ್ಲಿ ಏಳು ತಲೆಯ ರಾಕ್ಷಸನಿದ್ದುದಾಗಿಯೂ, ಸರದಿಯ ಮೇಲೆ ಅವನಿಗೆ ಆಗಿಂದಾಗ್ಗೆ ಕನ್ಯೆಯೊಬ್ಬಳನ್ನು ಬಲಿಕೊಡಬೇಕಾಗಿತ್ತೆಂದೂ, ಬಲಿ ಕೊಡಲು ತಪ್ಪಿದಲ್ಲಿ ಇಡೀ ದೇಶವನ್ನೇ ಅವನು ಸುಟ್ಟು ಬೂದಿ ಮಾಡುವುದೆಂದೂ, ಅವನಿಗೂ ದೊರೆಗೂ ಒಪ್ಪಂದವಾಗಿದ್ದುದಾಗಿಯೂ, ಆ ಒಪ್ಪಂದದ ಪ್ರಕಾರ ದೊರೆಮಗಳ ಸರದಿ

ಒಂದಿದ್ದುದಾಗಿಯೂ ಅವನಿಗೆ ವಿಷಯ ತಿಳಿಯುತ್ತದೆ. ಸಂಪ್ರಾಪ್ತವಾಗಿದ್ದ ಗಂಡಾಂತರದಿಂದ ಪಾರು ಮಾಡಿದವರಿಗೆ ಮಗಳನ್ನೂ ಅರ್ಧ ರಾಜ್ಯವನ್ನೂ ವೀರಗಾಣಿಕೆ ನೀಡುವುದಾಗಿ ರಾಜ ಮಾಡಿದ್ದ ವಾಗ್ದಾನವೂ ಅವನ ಗಮನಕ್ಕೆ ಬರುತ್ತದೆ.

ಯುವಕ ತನ್ನ ನಾಯಿಗಳೊಡನೆ ರಾಕ್ಷಸನಿದ್ದ ಪರ್ವತಕ್ಕೆ ಹೋಗುತ್ತಾನೆ. ಆ ಹೊತ್ತಿಗೆ ದೋಣಿಯ ಕಡೆಯುವವರು ರಾಜಕುಮಾರಿಯನ್ನಲ್ಲಿಗೆ ಕರೆತರುತ್ತಾರೆ. ಅವನು ಅವಳ ಸನಿಹಕ್ಕೆ ತೆರಳಿ, ರಾಕ್ಷಸನನ್ನು ಸದೆಬಡಿಯುವುದಾಗಿ ಹೇಳಿ ಅವಳನ್ನು ಸಂತೈಸುತ್ತಾನೆ. ರಾಕ್ಷಸ ಭಯಂಕರವಾಗಿ ಗರ್ಜಿಸುತ್ತ ಯುವಕನ ಕಡೆಗೆ ಧಾವಿಸುತ್ತಾನೆ. ನಾಯಿಗಳು ಅವನನ್ನು ಬಲವಾಗಿ ಹಿಡಿದುಕೊಳ್ಳಲಾಗಿ ಯುವಕ ತನ್ನ ಕತ್ತಿಯಿಂದ ಅವನ ತಲೆಗಳನ್ನುರುಳಿಸುತ್ತಾನೆ; ಏಳು ನಾಲಗೆಗಳನ್ನು ಕತ್ತರಿಸಿ ಜೇಬಲ್ಲಿರಿಸಿಕೊಳ್ಳುತ್ತಾನೆ. ವೀರಗಾಣಿಕೆ ಪಡೆಯುವ ಸಲುವಾಗಿ ತನ್ನೊಡನೆ ಬರುವಂತೆ ರಾಜಕುಮಾರಿ ಅವನಲ್ಲಿ ಬಿನ್ನವಿಸಿಕೊಳ್ಳುತ್ತಾಳೆ. ತನ್ನ ಸಾಹಸಯಾತ್ರೆ ಮುಗಿದ ನಂತರ ಗೊತ್ತಾದ ದಿನ ಹಿಂದಿರುಗುವುದಾಗಿ ತಿಳಿಸಿ, ಅತನಕ ನಡೆದ ಸಂಗತಿಗಳನ್ನು ಗುಟ್ಟಾಗಿಡಬೇಕೆಂದು ಹೇಳಿ ಅವನು ಹೊರಟುಹೋಗುತ್ತಾನೆ.

ಅವರ ಮಾತುಕತೆಗಳನ್ನು ಕದ್ದು ಕೇಳಿಸಿಕೊಂಡ ಸೂತ ತಾನೇ ರಾಕ್ಷಸನನ್ನು ಕೊಂದನೆಂದು ರಾಜನಿಗೆ ಹೇಳಬೇಕೆಂದೂ, ಹಾಗೆ ಹೇಳದಿದ್ದರೆ ಅವನನ್ನು ಕೊಲ್ಲುವುದಾಗಿಯೂ ಬೆದರಿಕೆ ಹಾಕುತ್ತಾನೆ. ರಾಕ್ಷಸನ ರುಂಡಗಳನ್ನು ದೊರೆಯ ಮುಂದಿರಿಸಿ, ತಾನೇ ಅವನನ್ನು ಕೊಂದವನೆಂದೂ, ರಾಜ ತನ್ನ ವಾಗ್ದಾನವನ್ನೀಡೇರಿಸಬೇಕೆಂದೂ ಒತ್ತಾಯಪಡಿಸುತ್ತಾನೆ. ರಾಜ ಒಪ್ಪಿಗೆ ನೀಡುತ್ತಾನೆ. ರಾಜಕುಮಾರಿ ಸೂಚಿಸಿದ ದಿನದಂದು ಮದುವೆ ನಿಶ್ಚಯವಾಗುತ್ತದೆ.

ಮದುವೆಯ ದಿನವೇ ಸಾಹಸೀ ಯುವಕ ರಾಜಧಾನಿಗೆ ಬರುತ್ತಾನೆ. ನಗರ ಶೃಂಗಾರವನ್ನು ಕಂಡು ಆಶ್ಚರ್ಯಚಕಿತನಾಗಿ, ಸಡಗರದ ಕಾರಣವನ್ನು ಪರಿಚಯದ ಸತ್ರದಲ್ಲಿ ವಿಚಾರಿಸುತ್ತಾನೆ. ಒಂದು ಹಾಳೆಯಲ್ಲಿ ಸಂದೇಶವನ್ನು ಬರೆದು ತನ್ನದೊಂದು ನಾಯಿಯ ಕುತ್ತಿಗೆಗೆ ಕಟ್ಟಿ ಮದುವೆ ಮನೆಗೆ ಕಳಿಸುತ್ತಾನೆ. ರಾಜಕುಮಾರಿ ಅದನ್ನೋದಿಕೊಂಡು ತಂದೆಗೆ ತಿಳಿಸುತ್ತಾಳೆ. ರಾಜನ ಆಹ್ವಾನದ ಮೇರೆಗೆ ಯುವಕ ಅರಮನೆಗೆ ಬರುತ್ತಾನೆ. ರಾಕ್ಷಸನ ನಾಲಗೆಗಳನ್ನು ತೆಗೆದು ರುಂಡಗಳ ಬಾಯಿಗಿಟ್ಟಾಗ ಅವನೇ ನಿಜವಾದ ರಾಕ್ಷಸಾಂತಕ ಎಂದು ರಾಜ ತೀರ್ಮಾನಿಸಿಕೊಂಡು, ಮಗಳನ್ನು ಮದುವೆ ಮಾಡಿಕೊಡುತ್ತಾನೆ.

ಈ ಕಥೆಯ ಮೊದಲ ಭಾಗ ಏಕಚಕ್ರಪುರದ ಬಕಾಸುರನ ಕಥೆಯನ್ನು ತಕ್ಕಮಟ್ಟಿಗೆ ಹೋಲುತ್ತದಲ್ಲವೆ? ಈ ಕಥೆಯ ರೂಪಾಂತರಗಳು ಹಲವಾರಿವೆ.

ಅತಿಮಾನುಷ ವ್ಯಕ್ತಿಗಳಿಂದ ನಾಯಕ ಅಥವಾ ನಾಯಿಕೆಗೆ ಸಹಾಯ ದೊರೆಯುವುದೂ ಉಂಟು. ಅವರು ಗುಜ್ಜಾರಿ ಕಿನ್ನರ, ಪ್ರೇತ, ಪ್ರಾಣಿಗಳ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ನೇಯ್ಗೆಯವನ ಮನೆಯ ಸೊಸೆ ಎಂಥವಳಿರಬೇಕು? ಹೆಚ್ಚು ಬಡಿವಾರ

ತೆಗೆಯುವವಳಿರಬೇಕು. ಹೆಣ್ಣಿನ ತಾಯಿ ಹೇಳುತ್ತಾಳೆ: "ನನ್ನ ಮಗಳು ಈ ರಾತ್ರಿ ಹತ್ತು ಲಡಿದಾರ ತೆಗೆದಳು" ಎಂದು. ವರ ಖುಷಿಯಿಂದ ಆ ಹೆಣ್ಣನ್ನು ಮದುವೆಯಾಗುತ್ತಾನೆ. ಮೊದಲನೆ ದಿನವೇ ಅವಳನ್ನು ಪರೀಕ್ಷೆಗೆ ಗುರಿ ಮಾಡುತ್ತಾನೆ. ಅವಳು ಚಿಂತಾಕ್ರಾಂತಳಾಗುತ್ತಾಳೆ. ಕೊನೆಗೆ ಗುಜ್ಜಾರಿಯೊಂದು ಪ್ರತ್ಯಕ್ಷವಾಗಿ, ತನ್ನ ಹೆಸರು ಹೇಳುವುದಾದರೆ ಹತ್ತಲ್ಲ ಹನ್ನೆರಡು ಲಡಿದಾರ ತೆಗೆದುಕೊಡುವುದಾಗಿ ವಾಗ್ದಾನ ಮಾಡುತ್ತದೆ. ಹೀಗೆ ಹೆಣ್ಣಿನ ಸಂಕಟ ನಿವಾರಣೆಯಾಗುತ್ತದೆ.[1]

ಮಾಟ, ಮಾಟದ ವಸ್ತುಗಳು, ಪ್ರಾಣಿಭಾಷೆಯ ಅರಿವು, ಇವೇ ಮೊದಲಾದ ಅದ್ಭುತ ಸಂಗತಿಗಳು ಕಥಾಕ್ರಿಯೆಯ ಬೆಳವಣಿಗೆಗೆ ಮತ್ತು ನಾಯಕನ ಪಾತ್ರ ಪೋಷಣೆಗೆ ನೆರವಾಗುತ್ತವೆ. ತಂದೆ ಮಾಟಗಾರನ ಶಾಲೆಗೆ ಮಗನನ್ನು ಕಳಿಸುತ್ತಾನೆ. ವರ್ಷಾಂತ್ಯದಲ್ಲಿ ಪ್ರಾಣಿರೂಪದಲ್ಲಿರುವ ಮಗನನ್ನು ಗುರುತಿಸುವುದಾದರೆ ಅವನನ್ನು ತಂದೆ ಪುನಃ ಪಡೆಯಬಹುದೆಂದು ಮಾಟಗಾರ ಷರತ್ತು ವಿಧಿಸುತ್ತಾನೆ. ಹುಡುಗ ಗುಟ್ಟಾಗಿ ಮಾಟ ಕಲಿತುಕೊಂಡು, ಮಾಟಗಾರನಿಗೆ ಕೈಕೊಟ್ಟು ಪರಾರಿಯಾಗುತ್ತಾನೆ. ಮಾಟಗಾರ ತಂದೊಡ್ಡುವ ಅಡಚಣೆಗಳನ್ನು ನಿವಾರಿಸಿಕೊಂಡು, ತಂದೆಯ ಬಳಿ ಬರುತ್ತಾನೆ. ನಾಯಿ ಎತ್ತು ಕುದುರೆಗಳ ರೂಪಗಳನ್ನು ತಾಳಿದ ಮಗನನ್ನು ಮಾರಿ ತಂದೆ ದುಡ್ಡು ಮಾಡಿಕೊಳ್ಳುತ್ತಾನೆ. ಕೊನೆಗೆ ಕುದುರೆಯ ರೂಪದ ಮಗನನ್ನು ಮಾಟಗಾರನೇ ಕೊಂಡುಕೊಳ್ಳುತ್ತಾನೆ. ಮಗ ಕೊಟ್ಟಿದ್ದ ತಿಳುವಳಿಕೆಯನ್ನು ಮರೆತು ತಂದೆ ಮಾಟಗಾರನಿಗೆ ಕಡಿವಾಣ ಸಹ ಕೊಟ್ಟಿದ್ದರಿಂದ, ಮಗ ಮಾಟಗಾರನಿಗೆ ವಶವಾಗಬೇಕಾಗುತ್ತದೆ. ಹುಡುಗ ಕಡಿವಾಣವನ್ನು ಕಿತ್ತೊಗೆದು, ರೂಪ ಪರಾವರ್ತನ ಸ್ಪರ್ಧೆಯಲ್ಲಿ ಮಾಟಗಾರನನ್ನು ಸೋಲಿಸುತ್ತಾನೆ.[2] ಮಾಯದ ಉಂಗುರ, ದೀಪ, ದಂಡ ಮೊದಲಾದ ವಸ್ತುಗಳ ಸಹಾಯದಿಂದ ನಾಯಕ ತನ್ನ ಗುರಿ ತಲುಪುವುದುಂಟು. ಒಬ್ಬ ಹುಡುಗ ಕೊಲೆಯಾಗುತ್ತಿದ್ದ ನಾಯಿ ಬೆಕ್ಕು ಹಾವುಗಳನ್ನು ಬದುಕಿಸುತ್ತಾನೆ. ಕೃತಜ್ಞತೆಯ ಸಂಕೇತವಾಗಿ ಹಾವು ನೀಡಿದ ಉಂಗುರದ ಸಹಾಯದಿಂದ ಅವನು ಅರಮನೆಯನ್ನು ಕಟ್ಟಿ, ರಾಜಕುಮಾರಿಯನ್ನು ವಿವಾಹವಾಗುತ್ತಾನೆ. ಆ ಉಂಗುರ ಅಪರಿಚಯಸ್ಥನೊಬ್ಬನಿಗೆ ಸಿಕ್ಕಿ, ಅರಮನೆ ರಾಜಕುಮಾರಿ ಅವನ ಪಾಲಿಗೆ ಇಲ್ಲವಾಗುತ್ತಾರೆ. ನಾಯಿ ಬೆಕ್ಕುಗಳ ಸಹಾಯದಿಂದ ಅವನು ಕಳೆದುಕೊಂಡಿದ್ದ ಸ್ವತ್ತನ್ನೆಲ್ಲ ಮರಳಿ ಪಡೆಯುತ್ತಾನೆ.[3] ಅಲ್ಲಾವುದ್ದೀನನ ಮಾಯಾದೀಪ ಇಂಥದೇ ಶಕ್ತಿಯನ್ನು ಪಡೆದಿತ್ತು. ಮುಟ್ಟಿದ ಕೊಡಲೇ ಇಚ್ಛೆಪಟ್ಟಲ್ಲಿಗೆ ಕೊಂಡೊಯ್ಯುವ ಮಾಯದ ಹಾವುಗೆಗಳ ಕತೆಗಳೂ ಇವೆ; ಬೇಕಾದ ಆಹಾರ ನೀಡುವ

1 *The Folk Tale* by Stith Thomspson, P. 48. ಇವನ್ನು ಹೋಲುವ ಕತೆಗಳು ನಮ್ಮಲ್ಲಿಯೂ ಇವೆ.

2 ಅದೇ ಪುಟ P. 69–70.

3 ಅದೇ ಪುಟ 70. ಇದೇ ಸಂದರ್ಭದಲ್ಲಿ ಕನ್ನಡದ ನೀಲದುಂಗುರದ ಕತೆಯನ್ನು ನೋಡಬಹುದು.

ಹೆಸುಬೆ ಚೀಲದ ಹಾಗೂ, ಅಕ್ಷಯ ಪಾತ್ರೆಯ ಕತೆಗಳೂ ಇವೆ; ಅಂಜನದ ಮೂಲಕ ಹೆಣ್ಣುಗಳನ್ನೊಲಿಸಿಕೊಳ್ಳುವ ಕತೆಗಳಿಗೂ ಬರಗಾಲವಿಲ್ಲ. ಕಥಾನಾಯಕನ ಬದುಕಿನಲ್ಲಿ ಪ್ರಧಾನ ಪಾತ್ರವಹಿಸುವ ಪ್ರಾಣಿ ಭಾಷೆಗಳ ಅರಿವೇ ಕೇಂದ್ರವಾಗುಳ್ಳ ಕಥೆಗಳು ಜಗತ್ತಿನಲ್ಲೆಲ್ಲ ವ್ಯಾಪಕವಾಗಿ ಹರಡಿವೆ. ಒಂದು ಕತೆ ಹೀಗಿದೆ: ತನಗೆ ಮಾಡಿದ ಉಪಕಾರಕ್ಕಾಗಿ ಹಾವು ಪ್ರಾಣಿಗಳ ಭಾಷೆಯನ್ನು ಮನುಷ್ಯನೊಬ್ಬನಿಗೆ ಕಲಿಸುತ್ತದೆ. ಪ್ರಾಣಿಗಳಿಂದ ಕೇಳಿಸಿಕೊಂಡದ್ದನ್ನು ಯಾರಿಗಾದರೂ ಉಸಿರಿದ್ದಾದರೆ ಸಾವಿಗೆ ಗುರಿಯಾಗಬೇಕಾಗುತ್ತದೆಂದು ಅದು ಅವನಿಗೆ ಎಚ್ಚರಿಕೆ ನೀಡುತ್ತದೆ. ಒಂದು ದಿನ ಆ ಮನುಷ್ಯ ಎರಡು ಪ್ರಾಣಿಗಳ ಸಂವಾದವನ್ನು ಕೇಳಿ ನಗುತ್ತಾನೆ. ಮಡದಿ ನಕ್ಕಿದ್ದೇಕೆಂದು ಕೇಳುತ್ತಾಳೆ. ಕಾರಣ ಹೇಳಿದರೆ ತಾನು ಸಾಯಬೇಕಾಗುತ್ತದೆಂದು ನುಡಿಯುತ್ತಾನೆ. ಏನೇ ಆಗಲಿ, ಕಾರಣ ತಿಳಿಯಲೇಬೇಕೆಂದು ಮಡದಿ ಒತ್ತಾಯಪಡಿಸುತ್ತಾಳೆ. ಗಂಡ ಸಾಯಲು ನಿರ್ಧರಿಸಿ, ಮಡದಿಯ ಕುತೂಹಲವನ್ನು ತಣಿಸಲು ಸಿದ್ಧನಾಗುತ್ತಾನೆ. ಅಷ್ಟರಲ್ಲಿ ಅವನಿಗೆ ಹುಂಜ ಹೇಟೆಗಳ ಸಂವಾದ ಕೇಳಿಸುತ್ತದೆ. ಮನೆಯಲ್ಲಿ ಶಿಸ್ತಿಲ್ಲದಿದ್ದರೆ ಹೆಂಡತಿಯ ಮಾತು ಕಟ್ಟಿಕೊಂಡು ಸಾಯಬೇಕಾಗುತ್ತದೆಂದು ಹುಂಜ ಹೇಟೆಗೆ ಎಚ್ಚರಿಕೆ ನೀಡುತ್ತದೆ. ಆ ಮಾತು ಕೇಳಿಸಿ ಕೊಂಡಾಗ ಆ ಮನುಷ್ಯನಿಗೆ ವಿವೇಕ ಮೂಡುತ್ತದೆ. ಮಡದಿಗೆ ಪ್ರಾಣಿ ಸಂವಾದದ ವಿವರ ಹೇಳುವುದಿಲ್ಲ.[1] ಗ್ರಿಮ್ ಕಥಾಗುಚ್ಛದಲ್ಲಿಯ ಒಂದು ಕಥೆ[2] ಸ್ವಾರಸ್ಯವಾಗಿದೆ. ಒಬ್ಬ ತಂದೆ ತನ್ನ ದಡ್ಡ ಮಗನನ್ನು ಶಾಲೆಗೆ ಕಳಿಸುತ್ತಾನೆ. ಅವನಲ್ಲಿ ಕಲಿತದ್ದು ನಾಯಿ ಹಕ್ಕಿ ಕಪ್ಪೆಗಳ ಭಾಷೆ. ಅವನ ದಡ್ಡತನಕ್ಕೆ ಹೇಸಿದ ತಂದೆ ಮಗನನ್ನು ಕೊಲ್ಲುವಂತೆ ಸೇವಕನೊಬ್ಬನಿಗೆ ಆಜ್ಞಾಪಿಸುತ್ತಾನೆ. ಸೇವಕ ಆ ಹುಡುಗನ ಮೇಲಣ ಮರುಕದಿಂದ ಕೊಲ್ಲುವುದಿಲ್ಲ. ಪ್ರಾಣಿಯೊಂದರ ಹೃತ್ಕೋಶವನ್ನು ತಂದೆಗೆ ತೋರಿಸಿ, ಮಗ ಸತ್ತದ್ದಕ್ಕೆ ಅದೇ ಸಾಕ್ಷಿ ಎಂದು ಹೇಳುತ್ತಾನೆ. ಹುಡುಗ ಪ್ರಾಣಿಭಾಷಾ ಜ್ಞಾನದ ಸಹಾಯದಿಂದ ರಾಜಕುಮಾರನೊಬ್ಬನ ಖಾಯಿಲೆಯನ್ನು ಗುಣಪಡಿಸುತ್ತಾನೆ: ಒಂದು ನಿಧಿಯನ್ನು ಪಡೆಯುತ್ತಾನೆ ಮತ್ತು ರಾಜಕುಮಾರಿಯೊಬ್ಬಳನ್ನು ಮದುವೆಯಾಗುತ್ತಾನೆ. ಭೀಮಶಕ್ತಿಯ ವ್ಯಕ್ತಿಗಳಂತೆಯೆ ಕಿರುಬೆರಳು ಗಾತ್ರದ ವ್ಯಕ್ತಿಗಳೂ ಕಥಾನಾಯಕರಾಗಿ ಸಾಹಸ ಯಾತ್ರೆ ಕೈಗೊಳ್ಳುತ್ತಾರೆ. ಯಾರಾದರೂ ಹಿಡಿಸಿಕೊಂಡು ಬಂದಾಗ ಅವನು ಬಸವನ ಮೂಗಿನಲ್ಲಿ ಹೊಕ್ಕಿಕೊಳ್ಳಬಹುದು; ಹಸುವಿನ ಹೊಟ್ಟೆಯನ್ನು ಹೊಕ್ಕು ನಿರಂತರವಾಗಿ ಕೂಗಿಕೊಳ್ಳುತ್ತ, ಹಸುವಿನ ಕೊಲೆಗೆ ಕಾರಣನಾಗುತ್ತಾನೆ; ಕುದುರೆಯ ಕಿವಿ ಹೊಕ್ಕು, ಅದು ರಾಡಿಮಾಡಿದಾಗ ಅವನ ತುಂಟತನಕ್ಕೆ ಹೇಸಿ ಜನ ಅವನ್ನು ಕೊಂದು ಬಿಡಬಹುದು.

---

[1] ಭಾರತೀಯ ಪುರಾಣೇತಿಹಾಸಗಳಲ್ಲಿ ಮತ್ತು ಜಾತಕಾದಿ ಕಥೆಗಳಲ್ಲಿ ಇಂಥ ಆಶಯಗಳು ಸಿಗುತ್ತವೆ.

[2] *The Three Languages* (Type 671): Quoted by Stith Thompson in his *The Folk Tale*, P. 84.

[3] Ibid, P. 150–151 (Type 752 A)

ಪೂರ್ವೋಕ್ತ ನಿದರ್ಶನಗಳಲ್ಲಿ ಪ್ರಣಯ ಪ್ರಸಂಗಗಳ ಮತ್ತು ಅವುಗಳಿಗೆ ಸಂಬಂಧಿಸಿದ ಸೋಲುಗೆಲುವುಗಳ ನಿರೂಪಣೆ ಇರುವುದಾದರೂ ಅವುಗಳು ತೀರ ಗೌಣ; ಅಲ್ಲಿಲ್ಲ ಅಮಾನುಷ ವ್ಯಾಪಾರಗಳಿಗೇ ಪ್ರಧಾನಸ್ಥಾನ. ಪ್ರಣಯಿ ಹಾಗೂ ದಂಪತಿಗಳೇ ಕೇಂದ್ರಸ್ಥಾನದಲ್ಲಿರುವ ಕಥೆಗಳೂ ಉಂಟು. ನಿರ್ಗತಿಕ ನಾಯಕ ಅಥವಾ ನಾಯಿಕೆಯರು ರಾಜಸಂಬಂಧವನ್ನು ಪಡೆದು ಅದೃಷ್ಟವಂತರಾಗುತ್ತಾರೆ. ಇಲ್ಲಿಯೂ ಮಾಟ ಮತ್ತು ಅಮಾನುಷ ವ್ಯಾಪಾರಗಳಿಗೆ ಸ್ಥಾನವುಂಟು. ಅವು ಪ್ರಣಯಿ, ಅಥವಾ ದಂಪತಿಗಳ ಉದ್ದೇಶಸಾಧನೆಗೆ ಸಹಾಯಕವಾಗಿ ಬರುತ್ತವೆ. ಇಲ್ಲಿಯ ನಾಯಕ ನಾಯಿಕೆಯರಲ್ಲಿಯೇ ಅದ್ಭುತಶಕ್ತಿ ನಿಹಿತಗೊಂಡಿರುತ್ತದೆ. 'ಹಂಸಕನ್ನಿಕೆ' ಎಂಬ ಕಥೆಯ ನಾಯಕ ಎಲ್ಲಿಯತನಕ ರೆಕ್ಕೆ ರಕ್ಕೆಯನ್ನು ಮುಚ್ಚಿಟ್ಟಿರುತ್ತಾನೆಯೋ ಅಲ್ಲಿಯತನಕ ತನ್ನನ್ನು ಕೂಡಿದ ಹೆಣ್ಣು ಮಾನವಿಯಾಗಿಯೇ ಉಳಿಯುತ್ತಾಳೆ. ರೆಕ್ಕೆ ರಕ್ಕೆ ಸಿಕ್ಕಿದ ಕೂಡಲೇ ಅವಳು ಅವನಿಂದ ತಲೆತಪ್ಪಿಸಿಕೊಳ್ಳುತ್ತಾಳೆ. ಮಾಟಗಾತಿಯಿಂದ ಕೊಲೆಯಾಗಲಿದ್ದ ಹೆಣ್ಣುಮಗಳೊಬ್ಬಳನ್ನು ತೋಳ ರಕ್ಷಿಸಿ, ತಾನು ಮಾನವನಾಗಿ ರೂಪಾಂತರ ಹೊಂದಿ, ಅವಳನ್ನೇ ಮದುವೆಯಾಗುವ ಹಾಗೂ ಇಂಥವೇ ಆಶಯಗಳುಳ್ಳ ಕಥೆಗಳು ವಿರಳವೇನಲ್ಲ. ಕನ್ಯೆಯ ಸಹವಾಸದಿಂದ, ಅಥವಾ ಅವಳ ಚುಂಬನದಿಂದ ಕಪ್ಪೆ ರಾಜಕುಮಾರನಾಗಿ ಪರಿವರ್ತನೆ ಹೊಂದಬಹುದು.

ಕಠಿಣ ಕಾರ್ಯಗಳಲ್ಲಿ ತೊಡಗುವುದು ಮತ್ತು ಅಸಾಧ್ಯವಾದ ಜಾಡುಗಳಲ್ಲಿ ಮುನ್ನುಗ್ಗುವುದು ಕಥಾನಾಯಕರ ಲಕ್ಷಣ. ನಾಯಕ ಭಯದ ವಿಷಯ ಕೇಳಿದ್ದಾನೆ: ಆದರೆ ಅದರ ಅನುಭವವಿಲ್ಲ. ಆ ಅನುಭವ ಸಂಪಾದನೆಗಾಗಿ ಅಕ್ಕಪಕ್ಕದವರು ನೀಡಿದ ಸಲಹೆಗಳನ್ನು ಕಾರ್ಯಗತಗೊಳಿಸುತ್ತಾನೆ. ಚರ್ಚಿನಲ್ಲಿ ಭೂತದೊಡನೆ ಇಸ್ಪೀಟಾಡುತ್ತಾನೆ: ಇರುಳುಗಳನ್ನು ಜೈಲು ಸ್ಮಶಾನಗಳಲ್ಲಿ ಕಳೆಯುತ್ತಾನೆ: ದೆವ್ವದ ಮನೆಗಳಲ್ಲಿ ವಾಸಿಸುತ್ತಾನೆ: ಭೂತದ ಉಗುರುಗಳನ್ನು ಕತ್ತರಿಸುತ್ತಾನೆ: ನಾಯಿಂದನ ಪ್ರೇತದಿಂದ ಕ್ಷೌರ ಮಾಡಿಸಿಕೊಳ್ಳುತ್ತಾನೆ. ಇಷ್ಟಾದರೂ ಅವನಿಗೆ ಭಯದ ಕಲ್ಪನೆ ಬರಲಿಲ್ಲ. ಲಗ್ನದ ನಂತರ ಯಾರೋ ಅವನ ಮುಖದ ಮೇಲೆ ತಣ್ಣೀರು ತಾಡಿಸಲಾಗಿ ಅವನಿಗೆ ಭಯದ ಅನುಭವವಾಯಿತಂತೆ. ಸಾವಿನ ಗುಟ್ಟು ತಿಳಿಯಲು ನಚಿಕೇತನೂ ಯಮಲೋಕಕ್ಕೆ ಹೋದದ್ದುಂಟು. ಕನ್ಯೆಯನ್ನು ವರಿಸಬೇಕಾದರೂ ಯುವಕರು ಅವಳು ಮತ್ತು ಅವಳ ತಂದೆಯೊಡ್ಡುವ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ಸ್ವರ್ಗದ ಸೌಗಂಧಿಕಾಪುಷ್ಪವನ್ನು, ಹುಲಿಯಹಾಲನ್ನು, ಆದಿಶೇಷನ ಫಣಾಮಣಿಯನ್ನು ತರುವಂತೆ ಕನ್ಯಾಪಿತೃ ಶರತ್ತು ವಿಧಿಸಬಹುದು.

ಕಥೆಯ ಕ್ರಿಯೆ ಮುಂದೆ ಮುಂದೆ ಸಾಗಬೇಕಾದರೆ ದ್ವಂದ್ವಗಳ ಸಂಘರ್ಷ ಅತ್ಯಾವಶ್ಯ. ಈ ಘರ್ಷಣೆಯಲ್ಲಿ ಒಳ್ಳೆಯದಕ್ಕೆ, ವಿಶ್ವಾಸಕ್ಕೆ, ಉಪಕಾರಕ್ಕೆ ಸದಾ ಜಯ ಲಭಿಸುತ್ತದೆ. ಪ್ರಣಯಿಗಳ, ಗಂಡ ಹೆಂಡಿರ, ಅಣ್ಣ ತಂಗಿಯರ, ಗೆಳೆಯರ, ಆಳು ಒಡೆಯರ ಪರಸ್ಪರ ವಿಶ್ವಾಸ ಎಂಥ ಕಠಿಣ ಸಾಹಸಕ್ಕಾದರೂ ಪ್ರೇರಿಸುತ್ತದೆ. ದೂರದೇಶಕ್ಕೆ ಹೋಗುವುದಾಗಿ

ನೆಪವೊಡ್ಡಿ ವೇಷಾಂತರದಿಂದ ಮಡದಿಯ ನಿಷ್ಠೆಯನ್ನು ಪರೀಕ್ಷಿಸುವ ಗಂಡ, ಪಶುಪಕ್ಷಿಗಳಾಗಿ ರೂಪಾಂತರ ಹೊಂದಿದ ಅಣ್ಣಂದಿರನ್ನು ಹುಡುಕುವ ತಂಗಿ, ತನ್ನ ಒಡೆಯ ಪ್ರೀತಿಸುವ ಹೆಣ್ಣು ದಕ್ಕುವಂತೆ ಶ್ರಮಪಡುವ ಸೇವಕ-ಇಂಥ ನಂಬಿಕಸ್ತರು, ಅಂತೆಯೇ ವಿಶ್ವಾಸಾರ್ಹರಲ್ಲದ ತಾಯಿಯರು, ತಂಗಿಯರು ಮತ್ತು ಮಡದಿಯರು ಕೆಲವು ಕತೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಬೇರೊಬ್ಬನಲ್ಲಿ ಆಸಕ್ತಳಾಗಿ ಮಾಯಾಸ್ತ್ರಗಳ ಮತ್ತು ಸಂಚುಗಳ ಮೂಲಕ ಗಂಡನನ್ನು ಕೊಲ್ಲುವ ರಾಜಕುಮಾರಿ, ಮಂತ್ರಗಾರನಿಂದ ರೂಪಪರಾವರ್ತನ ವಿದ್ಯೆಯನ್ನು ಕಲಿತು ಅವಳನ್ನು ಅಟಕಾಯಿಸುವ, ಕೊನೆಗೆ ಸೇವಕಿಯೊಬ್ಬಳ ಸಹಾಯದಿಂದ ಹೆಂಡತಿಯನ್ನೂ ಅವಳ ಮಿಂಡನನ್ನೂ ಕೊಂದು, ಸೇವಕಿಯನ್ನು ಮದುವೆಯಾಗುವ ಗಂಡ ಕೆಲವು ಕತೆಗಳಲ್ಲಿ ಗೋಚರಿಸುತ್ತಾರೆ. ಮಲತಾಯಿಯರ ಕ್ರೌರ್ಯವಂತು ಜನಪದ ಕಥೆಗಳಲ್ಲೆಂತೋ ಅಂತೆಯೇ ಶಿಷ್ಟಸಾಹಿತ್ಯದಲ್ಲಿಯೂ ಆಗಾಗ್ಗೆ ಕಾಣಿಸಿಕೊಳ್ಳುವ ಸಾಮಾನ್ಯ ಸಂಗತಿ. ಮಲಮಕ್ಕಳಿಗೆ ವಿಷವೂಡುವ, ಮಲಮಗಳು ದೊರೆಯನ್ನು ಮದುವೆಯಾಗಿ ಮಗುವನ್ನು ಪಡೆದು ಸುಖವಾಗಿರುವಾಗ ತಾಯಿಮಕ್ಕಳನ್ನು ಕೊಂದು, ಅವಳ ಬದಲಿಗೆ ತನ್ನ ಮಗಳನ್ನು ಕಳಿಸುವ ಮಲತಾಯಿಯರು ಅಪರೂಪವಲ್ಲ.

ದುಶ್ಶಕ್ತಿ ಸತ್ಶಕ್ತಿಗಳ ನಡುವೆ ಹೋರಾಟವಿರುವಾಗ, ದುಶ್ಶಕ್ತಿಗಳಿಗೆ ಕ್ರೂರಶಿಕ್ಷೆಯಾಗಿ. ಸಚ್ಛಕ್ತಿಗಳು ವಿಜಯಶೀಲರಾಗುವುದು ಸಹಜ. ದೇವತೆಗಳು ಸಹ ಸಚ್ಛಕ್ತಿಗಳ ಪರ ವಹಿಸುವುದುಂಟು. ಅಧಿಕಾರ ಯೌವನ ಸಂಪತ್ತುಗಳು ಕೂಡಿದಾಗ ಮನುಷ್ಯ ಒಳ್ಳೆಯವನೋ ಕೆಟ್ಟವನೋ ಗೊತ್ತಾಗುತ್ತದೆ. ಅತಿ ಆಸೆ ಗತಿಗೇಡಿಗೂ ಕಾರಣವಾಗುವುದುಂಟು. ಒಬ್ಬ ಸಾಮಾನ್ಯ ವ್ಯಕ್ತಿ ತನಗೆ ದ್ರವ್ಯ ಬೇಕು, ರಾಜಕುಮಾರಿ ಬೇಕು, ಅರಮನೆ ಬೇಕು ಎಂದು ಆಶಿಸುತ್ತಾನೆ; ಆಶಿಸಿದ್ದೆಲ್ಲ ಸಿಗುತ್ತದೆ; ತಾನು ಯಾರನ್ನಾದರೂ ದುರುಗುಟ್ಟಿಕೊಂಡು ನೋಡಿದ್ದಾದರೆ ಅವರು ಸಾಯಬೇಕೆಂದು ಇಚ್ಛಿಸುತ್ತಾನೆ; ಕೊನೆಗೆ ಅವನೇ ವಿನಾಶ ಹೊಂದುತ್ತಾನೆ. ಮಿಥ್ಯೆಯನ್ನು ಬಚ್ಚಿಡುವುದು ಸಾಧ್ಯವಿಲ್ಲ: ಎಂದಿದ್ದರೂ ಸತ್ಯ ಪ್ರಕಾಶಕ್ಕೆ ಬರಬೇಕೆನ್ನುವುದು ಜನಪದ ಕತೆಗಾರರ ನಂಬಿಕೆ. ಕಾಡಿಗೆ ಹೋಗಿದ್ದಾಗ ಅಕ್ಕ ತಂಗಿಯನ್ನು ಕೊಂದು ಹೂತು ಬರುತ್ತಾಳೆ. ಹುಲಿ ಅವಳನ್ನು ತಿಂದುಬಿಟ್ಟಿತೆಂದೂ, ತಾನು ಹೇಗೊ ತಪ್ಪಿಸಿಕೊಂಡು ಬಂದುದಾಯಿತೆಂದೂ ಸುಳ್ಳು ಹೇಳುತ್ತಾಳೆ. ತಂದೆ ಒಂದು ದಿನ ಕಾಡಿಗೆ ಹೋಗಿದ್ದಾಗ ಪೊದೆಯಿಂದ ಹಾಡು ಕೇಳಿಸುತ್ತದೆ. ಕಿವಿಗೊಟ್ಟು ಆಲಿಸಿದಾಗ ಅದು ತನ್ನ ಚಿಕ್ಕಮಗಳದ್ದೆಂದೂ, ಆಕೆಯನ್ನು ಕೊಂದವಳು ಹಿರಿಯ ಮಗಳೆಂದೂ ಗೊತ್ತಾಗುತ್ತದೆ. ಕೆಲವು ವೇಳೆ ಸತ್ತ ವ್ಯಕ್ತಿಯ ಎಲುಬುಗಳಿಂದ ಮಾಡಿದ ಕೊಳಲಿನಿಂದ ಹಾಡು ಹೊರಹೊಮ್ಮುವಂತೆ ಸಮಾಧಿಯ ಕಡೆಯಿಂದ ಸದ್ದು ಕೇಳಿಸುತ್ತದಂತೆ. ಹುಟ್ಟಿದಾಗಲೇ ಮುಂದಾಗುವುದನ್ನು ತಿಳಿಯುವುದು, ಕಣಿ ಕೇಳುವುದು. ಅದೃಷ್ಟದಲ್ಲಿ ನಂಬಿಕೆ ಇಡುವುದು—ಇವುಗಳಿಗಂತು ಕಥೆಗಳಲ್ಲಿ ಸ್ಥಾನ ನಿಶ್ಚೇ ಇದೆ.

ಕೆಲವು ನಾಯಕರು ತ್ರಿಲೋಕ ಸಂಚಾರಿಗಳಾಗಿ ಸಾಹಸಪ್ರವೃತ್ತರಾಗುತ್ತಾರೆ. ಸಾಧುಸಂತರು ಮಾತ್ರವೇ ಅಲ್ಲ, ದೇವತೆಗಳೂ ಮರ್ತ್ಯಲೋಕದಲ್ಲಿ ಅಜ್ಞಾತವಾಗಿ ಪರ್ಯಟನ ಮಾಡುವುದುಂಟು. ಅಂಥ ಸಂದರ್ಭದಲ್ಲಿ ಜನ ಅಜ್ಞಾನವಶರಾಗಿ ಅವರಿಗೆ ತೊಂದರೆ ಕೊಡುವುದುಂಟು. ಮನೆಯ ಹೊರಗಡೆ ಮಲಗಲು ಜಾಗ ಕೊಟ್ಟದ್ದಕ್ಕಾಗಿ, ಬೆಳಗಾಗುತ್ತಲೆ ಯಜಮಾನ ಯೇಸುಪೀಟರರಿಂದ ಒಕ್ಕಣೆ ಮಾಡಿಸಿದನಂತೆ. ಅಗ್ನಿಯ ಸಹಾಯದಿಂದ ಏಸು ಕಾಳನ್ನು ಹುಲ್ಲಿನಿಂದ ಬೇರ್ಪಡಿಸಿದನಂತೆ. ರೈತ ಯೇಸುವಿನ ಉಪಾಯವನ್ನೇ ಅನುಕರಿಸಿ, ಮಡದಿಯನ್ನು ಸುಟ್ಟುಕೊಂಡನಂತೆ. ಇಂಥ ಕಥೆಗಳು ಪಾದ್ರಿಗಳಿಂದ ಸೃಷ್ಟಿಯಾದುವೋ ಏನೋ.

ಅತಿಮಾನುಷದೂರವಾದ, ವಾಸ್ತವಿಕ ಘಟನೆಗಳಿಂದಲೇ ಸಂಘಟಿತವಾದ ಕಥೆಗಳೂ ಇವೆ. ಇಂಥ ಕಡೆ ಕುಯುಕ್ತಿ ಮರೆ ಮೋಸ ಸುಳ್ಳು, ಕಳ್ಳತನ ಸಂಚುಹೊಂಚುಗಳ ಪರಿ ತಕ್ಕವಕಾಶವುಂಟು. ಹಿಂದೆ ಅತಿಮಾನುಷ ಸಂಗತಿಗಳ ಪ್ರಭಾವ ರಾಜಕುಮಾರಿಯ ಕೈಹಿಡಿಯಲು ಕಾರಣವಾಗಿದ್ದರೆ, ಇಲ್ಲಿ ವಾಕ್ಚಾತುರ್ಯ ಸಮಯಸ್ಫೂರ್ತಿಗಳೇ ಉಪ ಪತ್ತಿಯಾಗುತ್ತವೆ. ಮಾಟವಾಗಲಿ ಅದ್ಭುತ ಘಟನೆಯಾಗಲೀ ನಡೆಯಬಾರದೆಂದಿಲ್ಲ. ಅವು ನೆರವಿಗೆ ಬರಬಹುದು. ಒಬ್ಬ ದೊರೆ. ತನ್ನ ಮೊಲಗಳನ್ನೆಲ್ಲ ಒಟ್ಟುಗೂಡಿಸಿ ಕಾಯುವವನಿಗೆ ತನ್ನ ಮಗಳನ್ನು ಮದುವೆಮಾಡಿಕೊಡುವುದಾಗಿ ಘೋಷಿಸುತ್ತಾನೆ. ನಾಯಕ ಸವಾಲನ್ನಂಗೀಕರಿಸುತ್ತಾನೆ. ಅವನು ಮೊಲಗಳನ್ನೊಡ್ಡು ಮಾಡಿದರೆ, ದೊರೆ ತನ್ನ ಮಾಯದ ಕೊಳಲಿನ ಸಹಾಯದಿಂದ ಅವನ್ನೆಲ್ಲ ಹಿಂದಕ್ಕೆ ಕರೆಯುತ್ತಾನೆ. ನಾಯಕ ಮುದುಕಿಯೊಬ್ಬಳಿಂದ ಕೊಳಲೊಂದನ್ನು ಪಡೆಯುತ್ತಾನೆ. ಅದು ಮಾಯಾ ಶಕ್ತಿಯಲ್ಲಿ ದೊರೆಯ ಕೊಳಲನ್ನು ಮೀರಿಸುತ್ತದೆ. ಅದರ ಸಹಾಯದಿಂದ ನಾಯಕ ಮೊಲಗಳನ್ನೆಲ್ಲ ಮತ್ತೆ ಒಟ್ಟುಗೂಡಿಸುತ್ತಾನೆ. ದೊರೆ ತನಗೆ ತಿಳಿದ ಕುಯುಕ್ತಿಗಳನ್ನೆಲ್ಲ ಬಳಸುತ್ತಾನೆ. ಆದರೆ ನಾಯಕನ ಚಾತುರ್ಯದ ಮುಂದೆ ಅವು ಅಸಾರ್ಥಕವಾಗುತ್ತವೆ. ದೊರೆ ತನ್ನ ವಾಗ್ದಾನವನ್ನು ನೆರವೇರಿಸಬೇಕಾಗುತ್ತದೆ.[1] ಒಗಟನ್ನು ಬಿಡಿಸುವುದರ ಮೂಲಕವೂ ನಾಯಕ ತನ್ನ ಇಷ್ಟಾರ್ಥವನ್ನು ಸಾಧಿಸಿಕೊಳ್ಳಬಹುದು. ಗಾದೆ ಒಗಟು ಗಳನ್ನಾಧರಿಸಿದ ಕಥೆಗಳು ಶಿಷ್ಟಪದದಲ್ಲಿ ಉಗಮಗೊಂಡು, ಸಾಮಾನ್ಯ ಜನರ ಬಾಯಲ್ಲಿ ಬಿದ್ದು, ಕೊನೆಗೆ ಜಾನಪದವಾಯಿತೆಂದು ಕೆಲವು ತಜ್ಞರು ಅಭಿಪ್ರಾಯಪಡುತ್ತಾರೆ. ಕಳ್ಳರ ಮತ್ತು ದರೋಡೆಕಾರರ ಸಾಹಸಮಯ ಕಥೆಗಳು ಅರೇಬಿಯನ್ ನೈಟ್ಸ್ ಮತ್ತು ಕಥಾ ಸರಿತ್ಸಾಗರದಲ್ಲಿ ದೊರೆಯುತ್ತವೆ.

ಜನಪದ ಕಾಲ್ಪನಿಕ ಕಥೆಗಳಲ್ಲಿ ದೊರಕುವ ಸಾಮಗ್ರಿಯನ್ನು ಸಮೀಕ್ಷಿಸಿದಾಗ ಅವುಗಳ ಸ್ವರೂಪ ಮನದಟ್ಟಾಗುತ್ತದೆ. ಅನೇಕಾಂಶಯುಗಳು ಕ್ರಮವಾಗಿ ಜೋಡಣೆ ಗೊಂಡು, ಅವುಗಳ ಆಧಾರದ ಮೇಲೆ ಕಥೆಗಳೆಲ್ಲ ಕೆಲವು ವರ್ಗಗಳಾಗಿ ವಿಂಗಡಣೆಗೊಳ್ಳು

[1] *The Folk Tale* by Stith Thompson, P. 154–155. (The Rabbit Herd-Type 570)

ತ್ತವೆ. ಒಂದೇ ಮಾದರಿಯ ಕಥೆಗಳಲ್ಲಿ ಆಶಯಗಳ ಭಿನ್ನ ಭಿನ್ನ ಪಾಠಾಂತರಗಳು ದೊರೆಯುವುದುಂಟು. ಅವುಗಳ ತರ್ಕಬದ್ಧ ಹಾಗೂ ಸ್ಥಿಮಿತ ಸರಣಿಯಿಂದಾಗಿ ಅವು ಯಾವುದೋ ಒಂದು ನಿರ್ದಿಷ್ಟ ಪ್ರದೇಶದಲ್ಲಿ, ನಿರ್ದಿಷ್ಟ ಸಮಯದಲ್ಲಿ, ಒಬ್ಬಾನೊಬ್ಬ ವ್ಯಕ್ತಿಯಿಂದ ರಚನೆಯಾದುವೆಂದು ಹೇಳಬಹುದಾಗಿದೆ. ಅನಂತರ ಅವು ಕಿವಿಯಿಂದ ಕಿವಿಗೆ ಹರಿಯುತ್ತ, ಕಾಲದೇಶ ಭಾಷೆಗಳ ಗಡಿಯನ್ನು ಮೀರಿ, ಪ್ರಸಾರಗೊಂಡುವು. ಹೀಗೆ ಅವು ವಲಸೆ ಹೋಗುವಾಗ ವ್ಯತ್ಯಾಸ ಅನಿವಾರ್ಯ: ಕೆಲವು ಆಶಯಗಳು ಕಳೆದುಹೋಗಿ, ಹೊಸ ಆಶಯಗಳು ಕೂಡಿಕೊಳ್ಳುತ್ತವೆ. ಕಾಲಾಂತರದಲ್ಲಿ ಇವು ಲಿಖಿತದ ಮೂಲಕ ಸ್ಥಿರರೂಪವನ್ನು ಪಡೆಯುತ್ತವೆ. ಕೆಲವಂತು ಪುರಾಣ ಕಾವ್ಯಗಳಲ್ಲಿ ನುಸುಳಿಕೊಳ್ಳುತ್ತವೆ.

ಆಲದ ಬೀಜ ಗಾಳಿಯಲ್ಲಿ ತೂರಿಕೊಂಡು, ಮೈಲಿ ಮೈಲಿಗಳಾಚೆಯ ಪ್ರದೇಶದಲ್ಲಿ ಚೆದರಿಬಿದ್ದು, ಸಸಿಯಾಗಿ ಹುಟ್ಟಿ ಮರವಾಗಿ ಬೆಳೆದಾಗ ಅದರ ಮಾತೃಸ್ಥಾನ ಯಾವುದು, ಆ ಬೀಜ ಸಿಡಿದು ಚೆದರಿದ್ದು ಯಾವಾಗ ಎಂದು ಹೇಳಲಾಗದು. ಅಂತೆಯೇ ಕಥೆಗಳ ಉಗಮ ವಿಕಾಸ ಪ್ರಸಾರಗಳನ್ನು ಕುರಿತು ಖಚಿತವಾಗಿ ತೀರ್ಪು ನೀಡುವುದು ಕಷ್ಟವಾಗುತ್ತದೆ. ಆ ಬಗ್ಗೆ ಮೊಟ್ಟಮೊದಲು ವಿಚಾರಮಾಡಿ, ಅಭಿಪ್ರಾಯ ಸೂಚಿಸಿದವರು ಗ್ರಿಮ್ ಸಹೋದರರು. ಸಮೀಪದ ಕತೆಗಳಿರಲಿ, ದೂರದೇಶಗಳ ಕಥೆಗಳಲ್ಲಿ ತಾವು ಕಂಡ ಅಪಾರ ಸಂಖ್ಯೆಯ ಸಾದೃಶ್ಯಗಳಿಂದ ಅವರು ಚಕಿತರಾದರು. ಎಲ್ಲ ಜನಾಂಗಗಳಲ್ಲಿಯೂ ಹೋಲಿಕೆಯುಳ್ಳ ಆಲೋಚನೆಗಳು ಗೋಚರವಾಗುವಂತೆ, ಎಲ್ಲ ದೇಶಗಳಲ್ಲಿಯೂ ಸಾದೃಶ್ಯವಿರುವ ಕಥೆಗಳು ಸ್ವತಂತ್ರವಾಗಿ ಜನ್ಮತಾಳಿದ್ದರೆ ಆಶ್ಚರ್ಯಪಡಬೇಕಾಗಿಲ್ಲವೆಂದು ಅವರು ಅಭಿಪ್ರಾಯಪಟ್ಟರು. ಅವುಗಳ ಪ್ರಸರಣ ಪ್ರವೃತ್ತಿಯನ್ನೂ ಅವರು ತಳ್ಳಿಹಾಕುವುದಿಲ್ಲ. ಭೂಗರ್ಭಾಂತರಾಳದಲ್ಲಿ ಪ್ರವಹಿಸುತ್ತಿರುವ ಜಲಸಂಪತ್ತು ಅಲ್ಲಲ್ಲಿ ಚಿಲುಮೆಗಳಾಗಿ ಚಿಮ್ಮುವಂತೆ ಏಕರೀತಿಯ ಪ್ರತಿಭೆ ಅಲ್ಲಲ್ಲಿ ಕತೆಗಳ ರೂಪದಲ್ಲಿ ಹೊರಹೊಮ್ಮಿರಬಹುದು. ಮಾನವನ ಮೂಲಭೂತ ಗುಣಗಳಾದ ಮನಸ್ಸು ಹೃದಯ ಬುದ್ಧಿ, ದೈಹಿಕ ಸ್ವಭಾವ ರಚನೆಗಳು ಎಲ್ಲೆಡೆಯೂ ಒಂದೇನೇ; ಅವುಗಳ ಕ್ರಿಯೆಯೂ ಏಕರೀತಿಯದಾಗಿರುತ್ತದೆ. ಅವರು ಕಟ್ಟಿದ ಮನೆಗಳ ರಚನೆ ಹಾಗೂ ಕಟ್ಟಡಗಳಿಗೆ ಬಳಸಿದ ವಸ್ತುಗಳಲ್ಲಿ ವ್ಯತ್ಯಾಸ ಕಂಡುಬಂದರೂ, ಕಟ್ಟಡದ ಗುರಿ ಮತ್ತು ಬಳಕೆ ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿಯವಾಗಿವೆ. ಅದೇ ಧಾನ್ಯ, ಅದೇ ಉಪಕರಣಗಳೂ ಅದೇ ಕಾಲ್ನಡೆಗಳು, ಅದೇ ಮರಮುಟ್ಟು ಅದೇ ಆಯುಧಗಳು ಎಲ್ಲ ಕಡೆಯೂ ದೊರಕುತ್ತವೆ. ಅವು ಮಾನವನ ದಿನಬಳಕೆಯ ಅಗತ್ಯಗಳು. ತೀರ ಕೆಳಗಿನ ಸ್ತರದ ಕತೆಗಳಲ್ಲಿ ಪ್ರಾಚೀನ ಮಾನವನ ಆಧ್ಯಾತ್ಮಿಕ ಸಂಗತಿಗಳು ಹಾಗೂ ನಂಬಿಕೆಗಳು ಆಲಂಕಾರಿಕ ಭಾಷೆಯಲ್ಲಿ ಅಭಿವ್ಯಕ್ತಗೊಳ್ಳುತ್ತಿದ್ದುವು. ಪೌರಾಣಿಕಾಂಶಗಳು ವಿರಳವಾಗಿದ್ದು ಹರಿತವಾದ ಹುಡುಕುಗಣ್ಣಿಗೆ ಮಾತ್ರ ಹೊಳೆಯುವಂತಿದ್ದುವು. ಮಾನವನಲ್ಲಿ ಮಾನವೀಯತೆ ಮತ್ತು ಭಾವುಕತೆಗಳು ವಿಕಾಸಗೊಂಡಂತೆಲ್ಲ, ಪೌರಾಣಿಕಾಂಶಗಳು ಹಿನ್ನೆಲೆಗೆ ಸರಿದು, ಕಾಲ್ಪನಿಕಾಂಶಗಳು ಮುನ್ನೆಲೆಯಲ್ಲಿ ಪ್ರಖರವಾಗಿ ಮೈದೋರಿದುವು. ಭಿನ್ನವಿಚ್ಛಿನ್ನ ಪುರಾಣಗಳೇ ಕಥೆಗಳು.

ಅವು ಇಂಡೋ-ಯೂರೋಪೀಯ ಮೂಲವಾದುವು ಎಂಬ ಸಿದ್ಧಾಂತಗಳನ್ನು ೧೮೫೬ರಲ್ಲಿ ವಿಲ್‌ಹೆಲ್ಮ್ ಗ್ರಿಮ್ ಮಂಡಿಸಿದನಂತರ ಆ ವಿಷಯದ ಮೇಲೆ ವಾದವಿವಾದಗಳು ಪ್ರಾರಂಭವಾದುವು.

ಗ್ರಿಮ್ಮನ ಇಂಡೋ ಯೂರೋಪೀಯ ಸಿದ್ಧಾಂತಕ್ಕೆ ಭಾಷಾವಿಜ್ಞಾನಕ್ಷೇತ್ರದ ಅಮೂಲ್ಯ ಸಂಶೋಧನೆಗಳು ನೆರವಾಗುತ್ತವೆ. ತೌಲನಿಕಭಾಷಾವಿಜ್ಞಾನದ ಪಿತಾಮಹನೆನಿಸಿ ಕೊಂಡಿರುವ ಫ್ರಾಂಜ್ ಬಾಪ್ ಸಂಸ್ಕೃತ ಹಾಗೂ ಯೂರೋಪೀಯ ಭಾಷೆಗಳ ಅಧ್ಯಯನದ ಫಲವಾಗಿ ಅವುಗಳ ಬಾಂಧವ್ಯವನ್ನು ಸ್ಪಷ್ಟಪಡಿದನು. ಅಷ್ಟೇ ಅಲ್ಲ, ಅನಂತರ ಆ ಕ್ಷೇತ್ರದಲ್ಲಿ ಕಾಲಿರಿಸಿದ ವಿದ್ವಾಂಸರು ಅವುಗಳ ಮೂಲಭಾಷೆಯನ್ನು ರಚಿಸಲು ಪ್ರಯತ್ನ ನಡಸಿದರು. ಇಂಡೋ ಯೂರೋಪೀಯ ಜನಾಂಗದ ಮೂಲಸ್ಥಾನದ ಬಗ್ಗೆ ಏಕಾಭಿಪ್ರಾಯ ಮೂಡದಿದ್ದರೂ ಅವರು ಸಾವಿರಾರು ವರ್ಷಗಳ ಹಿಂದೆ ಒಂದೇ ಕಡೆ ಒಟ್ಟಾಗಿ ವಾಸಿಸುತ್ತಿದ್ದರೆಂಬ ಸಿದ್ಧಾಂತವಂತು ಸ್ಥಿರವಾಯಿತು. ಸರಿಸುಮಾರು ಅದೇ ಕಾಲಕ್ಕೆ ಪೂರ್ವ ಕಾಲದ ಆರ್ಯಜನಾಂಗದ ಮತದ ಮೂಲಸ್ವರೂಪದ ಬಗೆಗೂ ಸಂಶೋಧನೆ ನಡೆಯುತ್ತಿತ್ತು. ತೌಲನಿಕ ಪುರಾಣಶಾಸ್ತ್ರಕ್ಕೆ ಭದ್ರವಾದ ತಳಹದಿ ಹಾಕಿದವರು ಮ್ಯಾಕ್ಸ್ ಮುಲ್ಲರ್, (Max Muller), ಅಂಜಿಲೋ ಡಿ ಗೂಬರ್ ನೇಟಿಸ್ (Angelo de Gubernatis), ಜಾನ್ ಫಿಸ್ಕೆ (John Fiske), ಜಾರ್ಜ್ ಕಾಕ್ಸ್ (Gorge Cox) ಮೊದಲಾದ ಪ್ರಭೃತಿಗಳು. ಪುರಾಣಗಳು ಆರ್ಯಜನಾಂಗದ ವಿಶಿಷ್ಟ ಸ್ವತ್ತಾದ್ದರಿಂದ, ಕತೆಗಳು ಪುರಾಣಗಳ ಸಂತಾನವಾದ್ದರಿಂದ, ಅವುಗಳಿಗೆ ಆರ್ಯ ಜನಾಂಗವೇ ಮೂಲವೆಂದು ಅವರು ಶ್ರುತಪಡಿಸಿದರಲ್ಲದೆ, ಪುರಾಣ ಮೂಲ ಸಿದ್ಧಾಂತವನ್ನು ಪ್ರಚುರಪಡಿಸಿದರು.

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಈ ಸಿದ್ಧಾಂತಗಳು ಅಭದ್ರವೆಂದು ಗೊತ್ತಾಯಿತು. ಆರ್ಯೇತರ ಪಾಠಾಂತರಗಳು ಯೂರೋಪೀಯ ಕಥೆಗಳಲ್ಲಿ ದೊರೆತದ್ದು ಆ ಅಭದ್ರತೆಗೆ ಕಾರಣವಾಯಿತು. ಅಷ್ಟೇ ಅಲ್ಲ, ಸಂಸ್ಕೃತ ವ್ಯಾಸಂಗದ ಫಲವಾಗಿ ಭಾರತೀಯ ಕಥಾಸಂಗ್ರಹಗಳಲ್ಲಿ ಯೂರೋಪೀಯ ಕಥೆಗಳನ್ನು ಗುರುತಿಸಲಾಯಿತು. ೧೮೫೯ರಲ್ಲಿ ಥಿಯೋಡೋರ್ ಬೆನ್‌ಫಿ (Theodore Benfey) ಭಾರತೀಯ ಮೂಲ ಸಿದ್ಧಾಂತವನ್ನು ಪ್ರಚುರಪಡಿಸಿದನು. ಅವನಿಗಿಂತ ಹಿಂದೆಯೇ ಮತ್ತೊಬ್ಬ ವಿದ್ವಾಂಸ[1] ಅದೇ ಅಭಿಪ್ರಾಯ ವ್ಯಕ್ತಪಡಿಸಿದ್ದನು. ಬೆನ್‌ಫಿ ಪಂಚತಂತ್ರಕ್ಕೆ ಬರೆದ ಮುನ್ನುಡಿಯಲ್ಲಿ ಅಲ್ಲಿಯ ಹಲವು ಕಥೆಗಳು ಈಸೋಪನ ಕಥೆಗಳ ಅನುಕರಣವೆಂದೂ, ಅವುಗಳಲ್ಲಿ ಕೆಲವು ಮತ್ತು ಕಾಲ್ಪನಿಕ ಕಥೆಗಳಲ್ಲಿ ಹಲವು ಭರತಖಂಡದಲ್ಲಿ ಹುಟ್ಟಿದುವೆಂದೂ, ಪ್ರವಾಸಿಗಳ ವರ್ತಕರ ಮತ್ತು ವಲಸೆಗಾರರ ಮೂಲಕ ಮೌಖಿಕವಾಗಿ ಅವು ಹತ್ತನೆಯ ಶತಮಾನಕ್ಕೆ ಮುಂಚೆಯೇ ಯೂರೋಪಿಗೆ ಯಾತ್ರೆ ನಡೆಸಿದವೆಂದೂ, ಇಸ್ಲಾಂ ಸಂಪರ್ಕದ ನಂತರ ಕೆಲವು ಕಡೆ ಅವುಗಳ ಅರಬ್ಬೀ ಭಾಷೆಯ ಮುಖಾಂತರ ಅವು ಪ್ರಸರಣಗೊಂಡುವೆಂದೂ, ಪಾಶ್ಚಾತ್ಯರಿಗೆ ಧಾರಗಳ ಹಬ್ಬುಗೆಗೆ ಬೌದ್ಧಮತ ಬಹುಮಟ್ಟಿಗೆ ಕಾರಣವಾಯಿತೆಂದೂ.

[1] Loiseleur Deslong Champ (1838) ; Vide Ibid, p. 376.

ಮೂಲಕ ಪ್ರಸಿದ್ಧಪಡಿಸಿದನು. ಆತನ ನಂತರ ಅನೇಕ ವಿದ್ವಾಂಸರು ಈ ಸಿದ್ಧಾಂತದ ಕಡೆಗೆ ತೀವ್ರವಾಗಿ ಗಮನ ಹರಿಸಿದರು. ಅವರಲ್ಲಿ ವೇಮಾರಿನ (Weimar) ರೀನ್ಹಾಲ್ಡ್ ಕೋಹ್ಲರ್ (Reinhold Kohler) ಮತ್ತು ಇಮ್ಯಾನ್ಯುಯಲ್ ಕಾಸ್ಕ್ವಿನ್ (Emmanuel Casquin) ಮುಖ್ಯರಾದವರು.

ಇಷ್ಟರಲ್ಲಿ ಇಂಗ್ಲೆಂಡಿನಲ್ಲೊಂದು ನೂತನ ಪಂಥ ಪ್ರಾರಂಭವಾಯಿತು. ಆಂಡ್ರ್ಯೂ ಲಾಂಗ್ (Andrew Lang)ನ ನೇತೃತ್ವದಲ್ಲಿ, ಸರ್ ಜಾರ್ಜ್ ಲಾರೆನ್ಸ್ ಗೋಮ್ (Sir George Lawrence Gomme) ಮತ್ತು ಡಾ. ಜೆ. ಎ. ಮ್ಯಾಕ್ಕುಲಕ್ (Dr. J.A.Macculloch) ಪ್ರಭೃತಿಗಳು ಹಿಂದಿನ ಸಿದ್ಧಾಂತಗಳನ್ನೆಲ್ಲ ಪುನರ್ವಿಮರ್ಶಿಸಿ, ತಮ್ಮ ಸಂಸ್ಕೃತಿ ಮೂಲ ಸಿದ್ಧಾಂತವನ್ನು ರೂಪಿಸಿದರು. ಇವರಿಗಿಂತ ಹಿಂದೆಯೇ ಜೋಸೆಫ್ ಬೇಡಿಯರ್ (Joseph Bedier) ಎನ್ನುವವನು ೧೮೯೩ರಲ್ಲಿ ಬೆನ್ಫಿಯ ಸಿದ್ಧಾಂತವನ್ನು ಖಂಡಿಸಿ, ಬಹುಮೂಲ ಸಿದ್ಧಾಂತವನ್ನು ಮಂಡಿಸಿದ್ದನು. ಕಥೆಗಳಲ್ಲಿ ಬರುವ ಆಶಯಗಳು ಮತ್ತು ಸಂದರ್ಭಗಳು ಇಂದಿನ ಸಮಾಜದಲ್ಲಿ ಕಾಣದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪದ್ಧತಿಗಳನ್ನು ಸೂಚಿಸುತ್ತವೆ; ಬಹು ಪ್ರಾಚೀನಕಾಲದ ಪ್ರಾಥಮಿಕತೆ ಮತ್ತು ಅನಾಗರಿಕತೆಗಳ ಸೊಗಡು ಆ ಕಥೆಗಳಲ್ಲಿ ಎರಚುತ್ತದೆ—ಎಂಬುದು ಲಾಂಗ್ ಮೊದಲಾದವರ ವಾದ. ಪ್ರಸರಣ ತತ್ವದ ಕಡೆಗೆ ಅವರ ಗಮನ ಹರಿಯಲಿಲ್ಲ. ಖಡಾಖಂಡಿತವಾಗಲ್ಲವಾದರೂ, ಅರೆ ಮನಸ್ಸಿನಿಂದ ಬಹುಮೂಲ ಸಿದ್ಧಾಂತವನ್ನವರು ಒಪ್ಪಿಕೊಳ್ಳುತ್ತಾರೆ. ಕಥೆಗಳಲ್ಲಿ ಬರುವ ಮಾಟ, ನರಭಕ್ಷಕರು, ಮಾತಾಡುವ ಪ್ರಾಣಿಗಳು, ಪ್ರಾಣಿ ದೇವತೆಗಳು—ಇಂಥವೆಲ್ಲ ಬರ್ಬರಯುಗದ ಅವಶೇಷಗಳೆಂದೂ, ಭಿನ್ನ ಭಿನ್ನ ಸಂಸ್ಕೃತಿಗಳ ಮೂಲಕ ಅವು ಹಾದುಹೋಗುವಾಗ, ಆಯಾಯ ಸಂಸ್ಕೃತಿಗಳ ಬಣ್ಣಗಳನ್ನು ಪಡೆಯುತ್ತವೆಂದೂ ಲಾಂಗ್ ವಾದಿಸುತ್ತಾನೆ. ಜನ ನಾಗರಿಕರಾದಂತೆಲ್ಲ ಬರ್ಬರತ್ವ ಕಥೆಗಳಿಂದ ದೂರವಾಗುತ್ತದೆ. ಅಲ್ಲಿ ಚಿತ್ರಿತವಾಗಿರುವ ಅರಮನೆಯೇ ಬೇರೆ, ಉಪಕರಣಗಳೇ ಬೇರೆ, ವೇಷಭೂಷಣಗಳೇ ಬೇರೆ, ಆಹಾರ ವಿಹಾರಗಳೇ ಬೇರೆ. ಕಥಾಪ್ರಸರಣ ಯಾವುದೋ ಒಂದು ಯುಗಕ್ಕೆ ಸೀಮಿತವಾದದ್ದಲ್ಲ, ಎಲ್ಲ ಯುಗಗಳಲ್ಲಿಯೂ ನಡೆಯುತ್ತಿತ್ತೆಂಬುದು ಸ್ಪಷ್ಟ. ಈ. ಬಿ. ಟೈಲರ್ (E. B. Tylor) ಅಂಥ ಮಾನವಶಾಸ್ತ್ರಜ್ಞರ ಪ್ರಭಾವಕ್ಕೊಳಗಾಗಿದ್ದ ಲಾಂಗ್ ಸಹಜವಾಗಿ ಆದಿಮಾನವನ ಪ್ರಾಥಮಿಕಾವಸ್ಥೆಯ ಹಾಗೂ ವರ್ತನೆಯ ಕಡೆಗೆ ಗಮನ ಹರಿಸಿದನು. ಅಮೆರಿಕವೋ, ಆಸ್ಟ್ರೇಲಿಯವೋ, ಆಫ್ರಿಕೆಯೋ ಯಾವ ದೇಶವೇ ಆಗಲಿ, ಅಲ್ಲಿಯ ಆದಿಮಾನವನ ಆಚರಣೆಗಳು ನಂಬಿಕೆಗಳು ಆಶಯಗಳು ಅಭಿನ್ನ ಎನ್ನುವುದನ್ನು ಫ್ರೇಜರ್ ತನ್ನ ಸುಪ್ರಸಿದ್ಧ 'ಗೋಲ್ಡನ್ ಬೋ' ಗ್ರಂಥದಲ್ಲಿ ತೋರಿಸಿದ್ದು ಜಾನಪದ ತಜ್ಞರಿಗೆ ಮಹದುಪಕಾರವಾಯಿತು. ಕಥಾನಾಯಕ ಸಾಮಾನ್ಯವಾಗಿ ರಾಜಕುಮಾರಿಯನ್ನು ವಿವಾಹವಾಗಿ, ಮಾವನ ರಾಜ್ಯಕ್ಕೆ ವಾರಸುದಾರನಾಗುತ್ತಿದ್ದುದರಿಂದ ಹಿಂದಿನಕಾಲದಲ್ಲಿ ಅಳಿಯ ಸಂತಾನ ಪದ್ಧತಿ ರೂಢಿಯಲ್ಲಿದ್ದಿರಬೇಕೆಂದು ಮಾನವಶಾಸ್ತ್ರಜ್ಞರು ಊಹಿಸುತ್ತಾರೆ. ಆಗಿನಕಾಲದ ರಾಜ್ಯಗಳು ತುಂಬ

ಸಣ್ಣದಾಗಿರಬೇಕು. ಕನ್ಯಾರ್ಥಿಗಳೆಲ್ಲ ದೂರದವರಾದ್ದರಿಂದ ಆ ಕಾಲಕ್ಕೆ ಸಗೋತ್ರ ವಿವಾಹ ಚಾಲ್ತಿಯಲ್ಲಿರಲಿಲ್ಲ. ಕುಲಲಾಂಛನ ಸಂಪ್ರದಾಯವನ್ನು ಕಾಲ್ಪನಿಕ ಕಥೆಗಳಲ್ಲಿ ಗುರುತಿಸುವುದುಂಟು. ಸಂಸ್ಕೃತಿಗಳ ಸಮಾನಾಂತರ ವಿಕಾಸ ಹಾಗೂ ಅವಶೇಷ ಸಿದ್ಧಾಂತಗಳ ಪರಿಣಾಮವಾಗಿ ಮ್ಯಾಕುಲ್ಲಕ್ ಮೊದಲಾದ ಜಾನಪದ ವಿದ್ವಾಂಸರು ಜಾನಪದ ಕಥೆಗಳು ಆದಿಮಾನವ ಸಂಸ್ಕೃತಿಯ ಸಂತಾನವೆಂದು ಪರಿಗಣಿಸಿ ಅವುಗಳನ್ನು ಅಧ್ಯಯನ ಮಾಡಿದ್ದು ಸರಿ. ಆದರೆ ಈ ಇಬ್ಬರು ಮಹನೀಯರು ಪ್ರಸರಣ ತತ್ವವನ್ನು ನಿರ್ಲಕ್ಷಿಸಿದರೆಂಬುದು ವಿಚಾರಣೀಯ ವಿಷಯ. ಒಟ್ಟಿನಲ್ಲಿ ಬ್ರಿಟಿಷ್ ಜಾನಪದಜ್ಞರು ಸಮಗ್ರ ಕಥೆಗಳಿಗಿಂತ, ಅವುಗಳಲ್ಲಿ ಕಂಡುಬರುವ ಆಶಯಗಳ ಕಡೆಗೆ ವಿಶೇಷ ಗಮನಹರಿಸಿದರು. ಇದರಿಂದಾಗಿ ಅವರ ವಿಶ್ಲೇಷಣ ಕಾರ್ಯ ಸುಲಭವಾಯಿತು.

ಫಿನ್‌ಲೆಂಡಿನಲ್ಲಿ ಕಳೇವಲದ ಅಧ್ಯಯನದಲ್ಲಿ ನಿರತನಾದ ಜೂಲಿಯಸ್ ಕ್ರಾನ್ (Julius Krohn), ಅವನನಂತರ ಆ ಅಧ್ಯಯನವನ್ನು ಮುಂದುವರಿಸಿದ ಅವನ ಮಗ ಡಾ. ಕಾರ್ಲೆ ಕ್ರಾನ್ (Kaarle Krohn) ಮತ್ತು ಡಾ. ಆಂಟಿ ಆರ್ನೆ (Antti Arne) ಅವರು ಭೌಗೋಳಿಕ-ಚಾರಿತ್ರಿಕ ತತ್ವವನ್ನು ಮಂಡಿಸಿದರು. ಪಾಠಾಂತರಗಳ ಸೂಕ್ಷ್ಮ ವಿಶ್ಲೇಷಣೆಯ ಆಧಾರದಮೇಲೆ ಭೌಗೋಳಿಕ ವಿನ್ಯಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಥಾವರ್ಗದ ಭಿನ್ನ ಪಾಠಗಳನ್ನು ತುಲನಾತ್ಮಕವಾಗಿ ಅಭ್ಯಸಿಸುವುದೇ ಆ ತತ್ವ. ಹೀಗೆ ಅಭ್ಯಸಿಸುವಾಗ ಮಾದರಿ ಪಾಠವೊಂದು ಸಿದ್ಧವಾಗುತ್ತದೆ. ಚಾರಿತ್ರಿಕ ಭೇದಗಳೊಡನೆ ಈ ಮಾದರಿಯನ್ನು ಹೋಲಿಸುವುದರ ಮೂಲಕ. ಮೂಲಪಾಠ ನಿರ್ಧರಿಸುವುದು ಸಾಧ್ಯವಾಗುತ್ತದೆ.

ಜನಪದ ಕಥೆಗಳಲ್ಲಿನ ಅನೇಕ ಘಟನೆಗಳ ಉಗಮಕ್ಕೆ ಸ್ವಪ್ನಗಳನ್ನಾರೋಪಿಸುವುದೂ ಉಂಟು. ಈ ಸ್ವಪ್ನಸಿದ್ಧಾಂತದ ಆದ್ಯಪ್ರವರ್ತಕರಲ್ಲೊಬ್ಬ ಜರ್ಮನಿಯ ಫ್ರೀಡ್‌ರೀಚ್ ವಾನ್‌ಡರ್ ಲೇಯೆನ್ (Friedrich Vonder Leyen) ಎಂಬುವರು ಕಥೆ ಐತಿಹ್ಯ ಪುರಾಣ ಸಂಪ್ರದಾಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಕನಸುಗಳನ್ನು ಕುರಿತ ತಿಳಿವಳಿಕೆ ಅತ್ಯಗತ್ಯವೆಂದು ಲಡ್‌ವಿಗ್ ಲಯಿಸ್ತನರ್ (Ludivig Laistner) ಮೊದಲೇ ಸ್ಪಷ್ಟಪಡಿಸಿದ್ದರು. ಅದುಮಿದ ಬಯಕೆಗಳು ಕನಸಿನಲ್ಲಿ ಕಾಣಿಸಿಕೊಳ್ಳುತ್ತವೆಂದು ಫ್ರಾಯ್ಡ್ ಪಂಥೀಯರೂ ವಿವರಣೆ ನೀಡಿದ್ದಾರೆ. ಕಥೆ ಎಂದು ಯಾರಿಂದ ಎಲ್ಲಿ ರಚಿತವಾಯಿತೆನ್ನುವುದು ಸ್ಪಷ್ಟವಾಗಿಲ್ಲದ ಕಾರಣದಿಂದ ಈ ಸಿದ್ಧಾಂತವೂ ಟೀಕೆಗೆ ಗುರಿಯಾಗುತ್ತದೆ. ಒಂದು ಹಕ್ಕಿ ನಾಯಕನನ್ನು ಸ್ವರ್ಗಕ್ಕೊಯ್ಯುತ್ತದೆ. ಅವನು ನಿಷಿದ್ಧ ಕವಾಟವನ್ನು ತೆರೆಯುತ್ತಾನೆ. ಅದೇ ಹಕ್ಕಿ ಅವನನ್ನು ಹಿಂದಕ್ಕೆ ತಂದು ಬಿಟ್ಟಾಗ, ಅವನೊಂದು ಕಣ್ಣು ಇಲ್ಲವಾಗುತ್ತದೆ. ಮಾನಸಿಕ ಕ್ಲೇಶ ಕನಸಿನಲ್ಲಿ ಮೈದೋರಿ, ಕಥೆಯ ಘಟನೆಗಳನ್ನು ಪ್ರೇರಿಸುತ್ತದೆ. ತಾನು ಹಾಕಿದ ಮೂರು ಪ್ರಶ್ನೆಗಳಿಗೆ ಉತ್ತರ ಹೇಳಲಿಲ್ಲವಾದರೆ ಕೊಂದುಬಿಡುವುದಾಗಿ ಗಂಡ ಬೆದರಿಸಿದಂತೆ ಹೊಸದಾಗಿ ಮದುವೆಯಾದ ಹೆಣ್ಣಿಗೆ ಕನಸು ಬೀಳುವುದು ಒಂದು ಕಥೆಯಲ್ಲಿ ನಡೆಯುವ ಘಟನೆ. ಸ್ವಪ್ನ ಪಿಶಾಚಿಯು

ಭಯ ಅಂಥ ಘಟನೆಗೆ ಪ್ರೇರಕವಾಗುತ್ತವೆ.

ನೀತಿಬೋಧೆ ಹಿಂದಿನ ಪುರಾಣ ಮತ್ತು ಕತೆಗಳ ಉದ್ದೇಶವಾಗಿತ್ತು. ಬುಡಕಟ್ಟುಗಳ ಶಿಸ್ತನ್ನು ಕಾಪಾಡುವುದರಲ್ಲಿ ಅವು ತುಂಬ ಉಪಯುಕ್ತವಾಗುತ್ತಿದ್ದುವು. ಇದು ನೀತಿ ವಾದಿಗಳ ಸಿದ್ಧಾಂತ. ಆಗ ಪುರಾಣ ಕಥೆ ಐತಿಹ್ಯಗಳ ನಡುವೆ ಹೆಚ್ಚು ಅಂತರವೂ ಇರ ಲಿಲ್ಲ ; ಜತೆಗೆ ಅವೆಲ್ಲ ಪ್ರಾದೇಶಿಕವಾಗಿದ್ದುವು. ಕಥೆ ಮತ್ತು ಪುರಾಣಗಳ ಹೂರಣವೆಲ್ಲ ಒಂದೆ; ಈ ಹೂರಣ ಕಥೆಗಳಿಂದ ಪುರಾಣಗಳಿಗೆ ಪುರಾಣಗಳಿಂದ ಕಥೆಗಳಿಗೆ ವಿನಿಮಯ ವಾಗುತ್ತದೆಂದು ಫ್ರಾಂಜ್ ಬೋ ಆಸ್ (Franz Boas) ಹೇಳುತ್ತಾರೆ.[1] ಮಾಟ ಆದಿಮಾನವ ಸಮಾಜದಲ್ಲಿ ಬಲವಾಗಿ ಬೇರೂರಿದ್ದ ಆಚರಣೆ. ಕಥೆಗಳಲ್ಲಿ ಪ್ರಖರವಾಗಿ ಕಾಣುವ ಅತಿಮಾನುಷತೆಗೆ ಅದೂ ಒಂದು ಕಾರಣ. ನಂಬಿಕೆಗಳಂತು ಅವುಗಳ ತಿರುಳು. ಅಲ್ಲಿ ಬರುವ ಭೂತಪ್ರೇತಗಳು ಸತ್ತವರ ಕರಿನೆರಳು. ನಾಯಕ ಅವುಗಳನ್ನು ಗೆಲ್ಲಬೇಕು ; ಮತ್ತು ಇತರರಿಗೆ ಅವುಗಳಿಂದ ಅಪಾಯವಾಗದಂತೆ ರಕ್ಷೆಯಾಗಬೇಕು. ಹನ್ಸ್ ನೂಮನ್ (Hans Nauman) ಸಂಸ್ಕಾರ ವಿಧಿ ತತ್ವದ ಅಥವಾ ಮತ ಪ್ರಕ್ರಿಯಾ ಸಿದ್ಧಾಂತದ ಪ್ರವರ್ತಕ. ಆದರೆ ಆಚರಣೆಯೊಂದೇ ಎಲ್ಲ ಕಥೆಗಳ ಉಗಮಕ್ಕೆ ನಿಮಿತ್ತ ವಾಗಲಾರದು. ಪ್ರಯೋಗಕ್ಕೆ ಸಾಕಷ್ಟು ಪುರಾವೆಗಳೊದಗುವುದಿಲ್ಲವಾಗಿ ಮನೋ ವಿಶ್ಲೇಷಣ ಸಿದ್ಧಾಂತವೂ ಸರ್ವಸಮ್ಮತವಾಗಿಲ್ಲ.

ಜನಪದ ಕಥೆಗಳ ತಲಕಾವೇರಿಯನ್ನು ಶೋಧಿಸುವ ಪ್ರಯತ್ನಗಳು ಜಯಪ್ರದ ವಾಗಿಲ್ಲ. ಪೂರ್ವೋಕ್ತ ಸಿದ್ಧಾಂತಗಳು ಒಂದೊಂದೂ ಪಾರ್ಶ್ವಿಕ ಸತ್ಯವನ್ನು ಹೊರ ಸೂಸುತ್ತವೆಯೇ ಹೊರತು, ಪೂರ್ಣ ಸತ್ಯವನ್ನಲ್ಲ. ಯಾವೊಂದು ಸಿದ್ಧಾಂತವೂ ಇದ ಮಿತ್ಥಂ ಎಂದು ನಿರ್ಣಯಿಸಲಾರದು. ಜೀವನ ಸಂದರ್ಭಗಳ ಹಿನ್ನೆಲೆಯಲ್ಲಿ ಕಲ್ಪನಾ ಪ್ರತಿಭೆ ಕುಂಚಿಸಿದ ಚಿತ್ರಗಳೇ ಕಥೆಗಳು. ಜೀವನವೆಷ್ಟು ವೈವಿಧ್ಯಮಯವೋ ಅವು ಅಷ್ಟೇ ವರ್ಣಮಯ. ಮ್ಯಾಲಿನೋವ್‌ಸ್ಕಿ (Malinowski) ಯವರ ಮಾತಿನಲ್ಲಿ ಹೇಳುವು ದಾದರೆ, ಅವುಗಳ ಉದ್ದೇಶ ಮನರಂಜನೆಗಿಂತ ಮಿಗಿಲಾದದ್ದು ; ಆದಿಮಾನವನ ವಿಜ್ಞಾನ ವೈದ್ಯ ಮತ ಕಾನೂನು ಕೃಷಿ, ಒಟ್ಟಿನಲ್ಲಿ ಸಕಲ ಜೀವನ ವ್ಯಾಪಾರಗಳ ಒಂದು ಭಾಗ ವಾಗಿವೆ ಅವು[1]. ಈ ಎಲ್ಲ ಸಿದ್ಧಾಂತಗಳು ಚರ್ಚೆಯಲ್ಲಿ ಪರ್ಯವಸಾನವಾಗುತ್ತವೆ, ಅಥವಾ ತುಸುದೂರ ಅನ್ವೇಷಕರನ್ನು ಕರೆದೊಯ್ಯುತ್ತವೆಯೇ ಹೊರತು, ಸಮಸ್ಯೆಯ ತಳವನ್ನು ಮುಟ್ಟಲು ಸಾಧ್ಯವಾಗಿಲ್ಲ.

ಜನಪದ ಕಥೆಗಳಲ್ಲಿ ನೀತಿಯ ಬಗ್ಗೆ ಒತ್ತು ಇರುವುದಾದರೂ ದೈವಶಾಸ್ತ್ರಕ್ಕೆ ಸಂಬಂಧಿ ಸಿದ ಕಲ್ಪನಾ ಸಂಗತಿಗಳು ಅಲ್ಲಿ ಬರುವುದಿಲ್ಲ. ತಾತ್ವಿಕ ವಿಷಯಗಳ ನಿರೂಪಣೆಗೂ ಅಲ್ಲಿ ಅವಕಾಶವಿಲ್ಲ. ವಿಧಿ ಅಥವಾ ಅದೃಷ್ಟವಾದ ಎಲ್ಲ ಕಡೆಯೂ ಕಾಣಿಸಿಕೊಳ್ಳುತ್ತದೆ. ಯಾರೆಷ್ಟೇ ಅಡ್ಡಿ ತಂದೊಡ್ಡಲಿ, ಬಡಹುಡುಗ ದೊರೆಯ ಅಥವಾ ಶ್ರೀಮಂತನ ಅಳಿಯ ನಾಗುವುದು ಮಾತ್ರ ತಪ್ಪುವುದಿಲ್ಲ. ತನ್ನ ಹಣೆಬರಹ ಸರಿಯಾಗಿಲ್ಲವೆಂದು ಗಂಡ

[1] Quoted by Stith Thompson in *The Folk Tale*, p. 389

ಆಸ್ತಿಪಾಸ್ತಿಯನ್ನು ಹೆಂಡತಿಯ ಹೆಸರಿಗೆ ವರ್ಗಮಾಡಿದನಂತರ, ಕ್ಷೀಣಿಸುತ್ತಿದ್ದ ಆಸ್ತಿ ದಿನೇ ದಿನೇ ಕುದುರುವಂತಾಗುತ್ತದೆ. ಸೋದರಳಿಯನಿಂದ ಸಾವು ಸಂಭವಿಸುತ್ತದೆಂದು ಜ್ಯೋತಿಷರಿಂದ ತಿಳಿದ ಮನುಷ್ಯ ತಂಗಿಯಲ್ಲಿ ಮಕ್ಕಳಾಗದಂತೆ, ಆದರೂ ಅವರುಳಿಯ ದಂತೆ ನಡಸಿದ ಪ್ರಯತ್ನಗಳೆಲ್ಲ ಕೊನೆಗೂ ವಿಫಲಗೊಳ್ಳುತ್ತವೆ. ಭೂತಶಾಸ್ತ್ರಕ್ಕೆ ಸಂಬಂಧಿ ಸಿದ ಸಂಗತಿಗಳು ವಿನಾ, ಮತೀಯ ವಿಚಾರಗಳಿಗಿಲ್ಲಿ ಎಡೆಯಿಲ್ಲ.

ಸಾಮಾನ್ಯವಾಗಿ ಜನಪದ ಕಥೆಗಳೆಲ್ಲ ಗದ್ಯಾತ್ಮಕವಾದುವು. ಈ ನಿಯಮಕ್ಕೆ ಅಪ
ವಾದವಾಗಿ ಮತ್ತು ಅಪರೂಪವಾಗಿ ಪದ್ಯರೂಪದ ಕಥೆಗಳು ದೊರೆಯುತ್ತವೆ. ದಕ್ಷಿಣ
ಸೈಬೀರಿಯಾದ ಮತ್ತು ಪಂಜಾಬಿನ ಕಥೆಗಳಲ್ಲಿ ಇಂಥವು ಕೆಲವಿವೆ. ಇಲ್ಲಿಯ ಗದ್ಯದ
ಬನಿ ಬಿಗಿ ಸೊಗಸುಗಳು ಹೇಳುವವರ ಸಾಮರ್ಥ್ಯವನ್ನವಲಂಬಿಸಿದೆ. ಆದರೆ ಅದರಲ್ಲಿ
ಒರಟುತನವಿದ್ದರೂ ಗಂಡುತನವಿದೆ, ಸಡಿಲತೆಯಿದ್ದರೂ ಬನಿಯಿದೆ, ನಯವಿಲ್ಲದಿದ್ದರೂ
ಕೃತಕತೆಯಿಲ್ಲ, ನುಣುಪಿಲ್ಲದಿದ್ದರೂ ಮಣ್ಣಿನ ವಾಸನೆಯಿದೆ. ಕ್ಷೇತ್ರಕಾರ್ಯನಿರ್ವಾಹಕರು
ಎಷ್ಟರಮಟ್ಟಿಗೆ ಮೂಲಭಾಷೆಯನ್ನುಳಿಸಿದ್ದಾರೆನ್ನುವುದು ಸಂದೇಹಾಸ್ಪದವಾದ ವಿಚಾರ.
ಕಥೆಗಳ ಆದ್ಯಂತಗಳು ರೂಢಿಯ ಸೂತ್ರಗಳನ್ನನುಸರಿಸುತ್ತವೆ. ಕಥೆ "ಒಂದು ಊರಿನಲ್ಲಿ
ಒಬ್ಬ ರಾಜನಿದ್ದ" ಎಂದೋ, "ಒಂದು ದೇಶ, ಆ ದೇಶದಲ್ಲೊಂದು ಗ್ರಾಮ. ಆ ಗ್ರಾಮ
ದಲ್ಲೊಬ್ಬ ರೈತ" ಎಂದೋ ಆರಂಭವಾಗುತ್ತದೆ; "ನಾಯಕ ಮಡದಿ ಮಕ್ಕಳೊಡನೆ
ಸುಖವಾಗಿದ್ದ" ಎಂದು ಅಂತ್ಯಗೊಳ್ಳುತ್ತದೆ. ನಾಯಕನ ಸಾಹಸಯಾತ್ರೆ, ಅವನೆದುರಿಸ
ಬೇಕಾದ ಎಡರು ತೊಡರುಗಳು ಈ ಎರಡರ ನಡುವೆ ಬರುತ್ತವೆ. ಎರಡು ಮೂರು
ನಲವತ್ತು ಮೊದಲಾದ ನಿಯತ ಸಂಖ್ಯೆಗಳು ಮೇಲಿಂದ ಮೇಲೆ ಉಲ್ಲೇಖಗೊಳ್ಳುತ್ತವೆ.
ಕಥಾಸಾಮಗ್ರಿಯನ್ನು ಪರಿಶೀಲಿಸುವಾಗ ವಿಮರ್ಶಕರು ಅವಶೇಷ ಸಿದ್ಧಾಂತವನ್ನು ಬಳಸಿ
ಕೊಳ್ಳುವುದುಂಟು. ಇಲಿಯಡ್ ಭಾರತದಂಥ ಮಹಾಕಾವ್ಯಗಳಲ್ಲಿಯೂ ಪಳೆಯುಳಿಕೆ
ಗಳು ತಲೆದೋರುತ್ತವೆ. ಪ್ರಾಚೀನತೆಯ ಸಂಸ್ಕಾರವನ್ನೊದಗಿಸುವ ಸಲುವಾಗಿ ಕವಿಗಳೇ
ಇಂಥ ಪಳೆಯುಳಿಕೆಗಳನ್ನು ಅಳವಡಿಸುತ್ತಾರೆಂದು ವಿಮರ್ಶಕರು ನಿರ್ಣಯಿಸುತ್ತಾರೆ.
ಆದರೆ ನಮ್ಮ ಜೀವನವೇ ಪಳೆಯುಳಿಕೆ, ಹಳತು ಮತ್ತು ಹೊಸತುಗಳ ಸಂಗಮ ಸ್ಥಾನ
ವಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಜನಪದ ಕಥೆಗಳು ತುಂಬ ಹಳೆಯವಾದ್ದ
ರಿಂದ ಅವುಗಳಲ್ಲಿ ಪಳೆಯುಳಿಕೆಗಳ ಪ್ರಶ್ನೆ ಬರುತ್ತದೆಯೇ ಯೋಚಿಸಬೇಕಾಗಿದೆ. ಕೆಲವು
ಕಥೆಗಳು ಈಚಿನವಾದರೂ ಅವು ಜೀವನದ ಒಂದು ಭಾಗವಾಗಿವೆ, ಜೀವನವನ್ನು ಪ್ರತಿ
ಬಿಂಬಿಸುತ್ತವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ.

ಕಾಲ್ಪನಿಕ ಸಾಹಿತ್ಯ ಪ್ರಕಾರಗಳಲ್ಲಿ ಕಥೆಯೇ ಪ್ರಾಯಶಃ ಕೊನೆಯದೆಂದೂ, ಜಾನ
ಪದ ಪ್ರತಿಭೆ ಸೃಷ್ಟಿಸಿರುವ ಪ್ರಕಾರಗಳಲ್ಲಿ ಅದೇ ಅತ್ಯಂತ ಶ್ರೇಷ್ಠವಾದದ್ದೆಂದೂ ಎ.ಎಚ್.
ಕ್ರಾಪೆ ಹೇಳುತ್ತಾರೆ.[1] ಅಷ್ಟೇ ಅಲ್ಲ, ಈ ಕಥೆಗಳಲ್ಲಿ ಪ್ರತಿಬಿಂಬಿತವಾಗಿರುವ ಸಮಾಜ

1 The fairy tale is then most probably the youngest of the different types of popular fiction...from an artistic and literary view-point the fairy tale

ನಾಗರಿಕವಾದದ್ದೆಂದು ಮಾತ್ರವಲ್ಲ, ಶ್ರೇಷ್ಠತಮ ನಾಗರಿಕತೆಯಿಂದ ಕೂಡಿದ್ದೆಂದು ಅವರು ಉದ್ಗಾರ[1] ತೆಗೆಯುತ್ತಾರೆ. ಭೂಮಿಯ ಮೇಲೆ ಸೃಷ್ಟಿಯಾದ ಎಲ್ಲ ಕಾಲ್ಪನಿಕ ಕಥೆಗಳು ಈಗ ಗೊತ್ತಿರುವ ವರ್ಗಗಳಲ್ಲಿ ಸೇರ್ಪಡೆಯಾಗಿವೆ ಎಂದೂ ಹೇಳುವಂತಿಲ್ಲ. ಎಷ್ಟು ಕಥೆಗಳು ಗಾಳಿಯಲ್ಲಿ ತೇಲಿಹೋದುವೋ, ಎಷ್ಟು ಕಾಲಗರ್ಭದಲ್ಲಿ ಹೂತುಹೋದುವೋ ಬಲ್ಲವರು ಯಾರು? ಮಾಯಾ ಮತ್ತು ಇಂಕ ನಾಗರಿಕತೆಗೆ ಸಂಬಂಧಿಸಿದ ಕತೆಗಳು ಏನಾದುವು? ಭಾರತದಲ್ಲಿಯೋ ಆಫ್ರಿಕಾದಲ್ಲಿಯೋ ಹುಟ್ಟಿದ ಎಲ್ಲ ಕಥೆಗಳು ಲಿಖಿತ ರೂಪವನ್ನು ಪಡೆದಿವೆ ಎಂದು ಹೇಳುವಂತಿಲ್ಲ. ಹುಟ್ಟಿದ ದೇಶವಲ್ಲಿಯೇ ಅವು ಕಣ್ಮರೆಯಾಗುವುದುಂಟು.

ಕ್ರಾಪೆ ಎರಡು ರೀತಿಯ ಪ್ರಸರಣ ಮಾರ್ಗಗಳನ್ನು ಸೂಚಿಸುತ್ತಾರೆ: ಒಂದು ಭೂಮಿಯ ಮೂಲಕ, ಮತ್ತೊಂದು ಸಾಗರದ ಮೂಲಕ. ಅವರ ಪ್ರಕಾರ ಭೂಮಾರ್ಗದ ಪ್ರಸರಣ ತರಂಗರೂಪದ್ದು; ಕೇಂದ್ರ ಬಿಂದುವಿನ ಸುತ್ತಲೂ ಹರಡುತ್ತದೆ; ಬಿಂದುವಿನಿಂದ ದೂರ ಹರಿದಂತೆಲ್ಲ ಪಾಠಾಂತರಗಳು ದೂರದ ಪ್ರಮಾಣಕ್ಕನುಗುಣವಾಗಿ ಹೆಚ್ಚುತ್ತವೆ. ಪೂರ್ವ ಯೂರೋಪಿನ ಕಥೆಗಳಲ್ಲಿ ಬರುವ ಪ್ರೇತ ಪಶ್ಚಿಮಕ್ಕೆ ಸರಿದಂತೆಲ್ಲ ಮಾಯವಾಗಿ, ಕೊನೆಗೆ ಮಹಾತಸ್ಕರ ಅದರ ಜಾಗವನ್ನಾಕ್ರಮಿಸಿಕೊಳ್ಳುತ್ತಾನೆ. ಆಯಾಯ ಜನಾಂಗದ ಮನೋಧರ್ಮಕ್ಕನುಗುಣವಾಗಿ ಅವು ರೂಪಾಂತರ ಹೊಂದುತ್ತವೆ. ಸಾಗರಮಾರ್ಗದ ಪ್ರಸರಣದಲ್ಲಿ ಪಾಠಾಂತರಗಳು ಕಡಮೆ; ಇಲ್ಲವೆಂದರೂ ತಪ್ಪಾಗದು. ಗ್ರೀಸ್‌ನಿಂದ ಇಂಡಿಯಾವನ್ನಾಗಲಿ, ಇಂಡಿಯಾದಿಂದ ಗ್ರೀಸ್‌ದೇಶವನ್ನಾಗಲೀ ಮುಟ್ಟಿದ ಕಥೆ ಮೂಲವನ್ನೆ ಹೋಲುತ್ತದೆ. ಇದರ ಕಾರಣ ಸ್ಪಷ್ಟ. ರೂಪಾಂತರಕ್ಕೆ ನಿಮಿತ್ತವಾಗಬಹುದಾದ ಮಾಧ್ಯಮಗಳು ದಾರಿಯಲ್ಲಿ ಗೈರುಹಾಜರು. ಒಂದು ಕಥೆ ಒಂದು ದಿಕ್ಕಿನಲ್ಲಿ ಒಂದುಸಾರಿ ಮಾತ್ರ ಪ್ರಯಾಣ ಮಾಡುತ್ತದೆಯೇ ಹೊರತು, ಎರಡನೆಯ ಸಾರಿ ಆ ಕಡೆ ಮುಖ ಹಾಕುವುದಿಲ್ಲವೆಂದು ಹೇಳುವಂತಿಲ್ಲ. ಅದು ಮತ್ತೆ ಮತ್ತೆ ಯಾತ್ರೆ ಕೈಗೊಳ್ಳಬಹುದು. ಆದರೆ ಪ್ರತಿಸಾರಿಯೂ ಅದು ಭಿನ್ನ ಭಿನ್ನ ರೂಪಗಳನ್ನು ಪಡೆಯಬಹುದು. ಅಷ್ಟೇ ಅಲ್ಲ, ಅದು ರೂಪಾಂತರ ಹೊಂದಿ ಮೂಲಸ್ಥಾನಕ್ಕೆ ಹಿಂದಿರುಗಬಹುದು. ಜನಪದ ಸಾಹಿತ್ಯ ಪ್ರಕಾರಗಳಲ್ಲೆಲ್ಲ ಕಥೆಗಳ ಪ್ರಸರಣವೇ ಅತ್ಯಧಿಕ ಪ್ರಮಾಣದಲ್ಲಿ ಜರುಗುತ್ತದೆಂದು ಕಾಣುತ್ತದೆ.

೩. ವಿನೋದ ಕಥೆಗಳು

ಮೊದಮೊದಲು ಕಾಲ್ಪನಿಕ ಕಥೆಗಳಿಗಿದ್ದ ಬೆಲೆ ವಿನೋದ ಕಥೆಗಳಿಗಿರಲಿಲ್ಲ. ಅವು

---

is probably the most perfect creation of the popular, ie. non-literary, genium—*The Science of Folklore* by **A. H.** Krappe, p. 37–38

[1] We reach here the conclusion to which we came after glancing over the nature of the human institutions revealed in fairy tales namely, that this type presupposes not only a civilized but even a highly civilised, I am almost tempted to say a sophisticated, society—Ibid, p. 37

ಕೀಳ್ಪಟ್ಟಿದವೆಂಬ ಅಭಿಪ್ರಾಯವೂ ವಿದ್ವಾಂಸರಲ್ಲಿತ್ತು. ಆದರೂ ಸಾಮಗ್ರ್ಯದ ದೃಷ್ಟಿಯಿಂದಲೋ ಏನೋ ಗ್ರಿಮ್ ಸೋದರರು ತಮ್ಮ ಸಂಗ್ರಹದಲ್ಲಿ ಈ ಕೆಲವು ಕಥೆಗಳನ್ನು ಸೇರಿಸಿದರು. ಹದಿನಾರನೆಯ ಶತಮಾನದ ವಿನೋದ ಕಥಾವಳಿಗಳಿಂದ ಪ್ರಾತಿನಿಧಿಕವಾಗಿ ಕೆಲವನ್ನಾಯ್ದುಕೊಂಡರು. ಬೆನ್‌ಫೀ ಈ ಎರಡು ವರ್ಗದ ಕಥೆಗಳಲ್ಲಿ ಭೇದಮಾಡಲಿಲ್ಲ. ಮನರಂಜನೆಯೇ ಮುಖ್ಯೋದ್ದೇಶವಾಗುಳ್ಳ ಇಂಥ ಕಥೆಗಳು ಪ್ರತಿಯೊಂದು ದೇಶದಲ್ಲಿಯೂ ವಿಪುಲವಾಗಿರುವುದಲ್ಲದೆ, ಬಹು ಜನಪ್ರಿಯವಾಗಿರುವುದರಿಂದ ಅವುಗಳ ಸಂಗ್ರಹ ಹಾಗೂ ಅಧ್ಯಯನ ಅತ್ಯವಶ್ಯ.

ವಿನೋದ ಕಥೆ ಗಾತ್ರದಲ್ಲಿ ತುಂಬ ಸಣ್ಣದು. ಅದು ಗದ್ಯ ಅಥವಾ ಪದ್ಯದಲ್ಲಿರಬಹುದು. ಘಟನೆಗಳ ಸಂತಾನದ ಮೂಲಕ ಕಥೆ ವಿಕಾಸಗೊಳ್ಳುತ್ತ ವಿನೋದದಲ್ಲಿ ಅಂತ್ಯಗೊಳ್ಳುತ್ತದೆ. ಜೀವನ ವ್ಯಾಪಾರಗಳೆಲ್ಲ ಅದಕ್ಕೆ ಸಾಮಗ್ರಿಯೊದಗಿಸುತ್ತವೆ. ಅತಿಮಾನುಷ ಸಂಗತಿಗಳು ಇಲ್ಲಿ ಅಪರೂಪ; ಅವು ಕ್ವಚಿತ್ತಾಗಿ ಬಂದರೂ ಸನ್ನಿವೇಶಕ್ಕೆ ಹಿನ್ನೆಲೆಯಾಗಿ ಬರುತ್ತವೆಯೇ ಹೊರತು, ಅವೇ ಪ್ರಮುಖ ಸನ್ನಿವೇಶಗಳಾಗಿ ಅರಳುವುದಿಲ್ಲ. ಅವುಗಳ ಆಕಾರ ಚಿಕ್ಕದಾದ್ದರಿಂದ ಆಶಯಗಳು ಕಡಮೆ, ಘಟನೆಗಳು ಹೆಚ್ಚಿಲ್ಲ. ಸಾಮಾನ್ಯವಾಗಿ ಒಂದು ಕಥೆಯಲ್ಲಿ ಒಂದು ಆಶಯವಿರುತ್ತದೆ. ಇಲ್ಲಿ ಕ್ರಿಯಾಧಿಕ್ಯವಿಲ್ಲ; ವಸ್ತು ಅಥವಾ ಸನ್ನಿವೇಶವೇ ಕ್ರಿಯೆಯಾಗುತ್ತದೆ, ಅಥವಾ ಕಥೆಯ ಸರ್ವಸ್ವವಾಗುತ್ತದೆ. ಆದ್ದರಿಂದ ಅವನ್ನು ಕಥೆ ಎನ್ನುವುದಕ್ಕಿಂತ ಹನಿಗತೆ ಎನ್ನಬೇಕಾಗುತ್ತದೆ.

ಬಹು ಮೂಲ ಸಿದ್ಧಾಂತ ಏಕಾಣುಜೀವಿಯಂತಿರುವ ಈ ಕಥಾವರ್ಗಕ್ಕೆ ಸುಸಂಗತವಾಗಿ ಒಪ್ಪುತ್ತದೆಂಬುದು ಕ್ರಾಪೆಯವರ ಅಭಿಪ್ರಾಯ. ಕಾಲ್ಪನಿಕ ಕಥೆಯಂಥ ಅಧಿಕಾಶಯಗಳುಳ್ಳ ಸಂಕೀರ್ಣಪ್ರಕಾರ ನಾನಾದೇಶಗಳಲ್ಲಿ ವಿಕಾಸಗೊಂಡು ಪರಿಪೂರ್ಣತೆ ಪಡೆಯಿತೆನ್ನುವುದರಲ್ಲಿ ಅರ್ಥವಿಲ್ಲ. ಒಂದು ನಾಡಿನಲ್ಲೊಂದು ಘಟನೆ, ಮತ್ತೊಂದರಲ್ಲಿ ಜತೆಗೊಂದು ಘಟನೆ, ಮಗುದೊಂದರಲ್ಲಿ ಬೇರೊಂದು ಘಟನೆ ಸೇರಿ ಒಂದು ಕಥೆ ಬೆಳೆಯುವುದಾದರೆ ಸಾಂಗತ್ಯವೆಂತು ಸಿದ್ಧಿಸುತ್ತದೆ? ಇದು ಅವರ ವಾದ. ಇದು ಭಾಗಶಃ ನಿಜ. ಸರಳತೆಯೇ ಪ್ರಧಾನ ಧರ್ಮವಾದ ವಿನೋದಕಥೆಯ ಬಗ್ಗೆ, ಅವರು ಹೇಳಿರುವ ಮಾತು ಸಹ ಅಷ್ಟೇ ಸತ್ಯ. ಒಂದು ಆಶಯ ಬೇರೆ ಬೇರೆ ನಾಡುಗಳಲ್ಲಿ ಮೊಳೆತು ಅಸ್ತಿತ್ವದಲ್ಲಿರಬಹುದು. ಯಾವುದೇ ಆಶಯ ಯಾವುದೇ ಗೊತ್ತಾದ ಪರಿಸರದಲ್ಲಿ, ಅಥವಾ ಜನಾಂಗದಲ್ಲಿ ಮಾತ್ರ ಉಗಮಗೊಳ್ಳಬೇಕು, ಬೇರೆಡೆ ಸಾಧ್ಯವಾಗದು ಎಂದು ಹೇಳಲಾಗದು. ಈ ವಿಷಯವನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ.

ಕಾಲ್ಪನಿಕ ಕಥೆ ಒಂದು ರೀತಿಯಲ್ಲಿ ಜೀವನ ಚರಿತ್ರೆಯ ಸ್ವರೂಪವುಳ್ಳದ್ದು: ಅಲ್ಲಿ ನಾಯಕನ ಪಾತ್ರ ವಿಕಾಸವೊಂದೇ ಮುಖ್ಯ. ಹುಟ್ಟಿನಿಂದ ಹಿಡಿದು ಸಿದ್ಧಿ ಪಡೆಯುವ ತನಕ ಅವನ ಬಾಳು ಚಿತ್ರಣಗೊಳ್ಳುತ್ತದೆ. ಸಿದ್ಧಿ ಪಡೆಯುವಲ್ಲಿಗೆ ಕಥೆಯೂ ಮುಕ್ತಾಯಗೊಳ್ಳುತ್ತವೆ. ವಿನೋದ ಕಥೆಯಲ್ಲಿ ಘಟನೆಯೇ ಪ್ರಧಾನವಾದದ್ದರಿಂದ ಅದು ಇಡೀ ಕಥೆಯನ್ನು ಆಕ್ರಮಿಸಿಕೊಳ್ಳುತ್ತದೆ. ಕಾಲ್ಪನಿಕ ಕಥೆಯ ಉದ್ದೇಶ ನೀತಿ ಬೋಧೆ

ಯಾದರೆ, ವಿನೋದ ಕಥೆಯ ಉದ್ದೇಶ ಮನರಂಜನೆ. ಅದರ ನಾಡಿ ನಾಡಿಗಳಲ್ಲಿ ಹಾಸ್ಯ ರಸ ಚಿಮ್ಮುತ್ತಿರಬೇಕು. ಅಲ್ಲಿಯ ವಾತಾವರಣ ಗಂಭೀರವಾದದ್ದು, ಇಲ್ಲಿಯದು ಲಘು ವಾದದ್ದು. ಇಲ್ಲಿಯ ಅತಿಮಾನುಷತೆ ಗಮನಾರ್ಹವಾದದ್ದಲ್ಲ. ಮಾನವರ ಚಟುವಟಿಕೆ ಗಳ ಅಥವಾ ದೌರ್ಬಲ್ಯಗಳ ಫಲವಾಗಿ ಹಾಸ್ಯ ಪಿಚಕಾರಿಸುತ್ತದೆ.

ವಿನೋದ ಕಥೆಗಳಲ್ಲಿ ಪಾತ್ರಗಳು ತುಂಬ ಕಡಮೆ. ಒಂದೊಂದು ಪಾತ್ರವೂ ಜೀವಂತ ವ್ಯಕ್ತಿಗಳಂತೆ ಮಿಡಿಯಬೇಕು.ಅವರು ಸಪ್ಪೆಯ ಆದರ್ಶವ್ಯಕ್ತಿಗಳಾಗದೆ ಸಮಾಜದಿಂದ ಸಿಡಿ ದವರಾಗಬೇಕು, ಘಳಿಗೆ ಘಳಿಗೆಗೂ ಏಳುವ ಸಮಸ್ಯೆಗಳನ್ನು ಎದುರಿಸುವಂಥವರಾಗಬೇಕು. ಕಥೆ ಮುಖ್ಯವಾಗಿ ಘಟನಾತ್ಮಕವಾದ್ದರಿಂದ, ಪಾತ್ರ ತುಂಬಿಕೊಂಡು ಬೆಳೆಯುವುದಿಲ್ಲ; ಬೆಳೆಯಲವಕಾಶವೂ ಇಲ್ಲ. ಆದರೆ ಇಲ್ಲಿಯೂ ನೈತಿಕ ಮೌಲ್ಯಗಳನ್ನು ನಿರ್ಲಕ್ಷಿಸುವುದಿಲ್ಲ; ದೌಷ್ಟ್ಯಕ್ಕೆ ತಕ್ಕ ಶಿಕ್ಷೆ ಅನಿವಾರ್ಯ. ಘಟನೆಗಳು ಹೆಚ್ಚಿಲ್ಲದೆ, ಪಾತ್ರಗಳ ಬೆಳೆವಣಿಗೆಯಲ್ಲಿ ಜಟಿಲತೆಯೂ ಇಲ್ಲದ್ದರಿಂದ ಕಥಾಸಂವಿಧಾನದಲ್ಲಿ ಕೌಶಲ್ಯದ ಆವಶ್ಯಕತೆಯಿರುವುದಿಲ್ಲ.

ಕಥಾಸಾಮಗ್ರಿ, ರಚನಾವಿಧಾನ, ಆಶಯ ಸ್ವರೂಪ, ಸಾಮಾಜಿಕ ಹಿನ್ನೆಲೆಗಳ ಆಧಾರದ ಮೇಲೆ ಕಾಲ್ಪನಿಕ ಕಥೆಯ ಔಗಮಿಕ ದೇಶದ ಸುಳಿವನ್ನು ತಿಳಿಯಬಹುದಷ್ಟೆ. ವಿನೋದ ಕಥೆಯ ಔಗಮಿಕ ಪರಿಸರವನ್ನು ಅವೇ ರೀತಿ ಗುರುತಿಸುವುದು ತುಸು ಕಷ್ಟ ವಾಗಬಹುದು. ಇದರ ಸರಳತೆಯೇ ಅದಕ್ಕೆ ಕಾರಣ. ಊರಿನ, ಪರಿಸರದ, ಅಥವಾ ವ್ಯಕ್ತಿನಾಮಗಳ ಆಧಾರದಿಂದ ಅವುಗಳ ಜನನ ಮೂಲ ದೇಶವನ್ನು ಪತ್ತೆಹಚ್ಚಬೇಕಾಗು ತ್ತದೆ. ಕಥೆಯೊಳಗಣ ನಂಬಿಕೆ, ಸಾಮಾಜಿಕ ಸ್ಥಿತಿಗತಿ, ಭಾಷೆ, ವೇಷಭೂಷಣಗಳ ಪರಿಶೀಲನೆಯಿಂದ ಅವುಗಳ ಕಾಲವನ್ನು ನಿರ್ಣಯಿಸಬಹುದು.

ಬುದ್ಧಿವಂತಿಕೆ ಅಥವಾ ಯುಕ್ತಿ ಕೆಲವು ಕಥೆಗಳ ಜೀವಾಳ. ದಡ್ಡ ಮತ್ತು ಬುದ್ಧಿ ವಂತರನ್ನು ಪರಸ್ಪರ ಹೋಲಿಸಿ, ಬುದ್ಧಿವಂತಿಕೆಯ ಮಹತ್ವವನ್ನು ಎತ್ತಿ ತೋರಿಸುವು ದುಂಟು. ಬುದ್ಧಿವಂತಿಕೆಯ ಪ್ರದರ್ಶನದಲ್ಲಿ ಕುಟಿಲತೆ, ವಂಚನೆ, ಸುಳ್ಳುಗಾರಿಕೆಗಳು ಅಭಿವ್ಯಕ್ತವಾಗಬಹುದು. ಬುದ್ಧಿವಂತರು ಎಂದೂ ನೇರವಾಗಿ ವರ್ತಿಸುವವರಲ್ಲ. ದಡ್ಡ ರಂತು ಕೋಡಂಗಿಗಳಂತೆ ವರ್ತಿಸುತ್ತಾರೆ. ಅವನು ಬೂದುಗುಂಬಳಕಾಯಿಯ ಮೇಲೆ ಕುಳಿತಿರುವಾಗ, ಮೊಟ್ಟೆಯ ಮೇಲೆ ಕಾವು ಕುಳಿತಿರುವುದಾಗಿ ಹೇಳುತ್ತಾನೆ. ಪಕ್ಕದಲ್ಲಿ ಮೊಲಓಡಿಹೋದರೆ, ಅದು ಮೊಟ್ಟೆಯೊಳಗಿನಿಂದ ಬಂದುದೆಂದೂ,ಅದು ಮೊಲವಲ್ಲ ಕುದುರೆ ಮರಿಯೆಂದೂ ಕೂಗಿಕೊಳ್ಳುತ್ತಾನೆ. ಹಸು ಮೆಲುಕು ಹಾಕುತ್ತಿದ್ದರೆ, ತನ್ನನ್ನಣಕಿಸುತ್ತ ದೆಂದು ತಿಳಿಯುತ್ತಾನೆ. ಅವನ ಬುದ್ಧಿಕ್ಷೇತ್ರ ವಿಚಿತ್ರವಾದುದು, ಕಲ್ಪನಾ ಸಾಮರ್ಥ್ಯ ಅದ್ಭುತವಾದುದು. ಮೂಕಪ್ರಾಣಿಗಳು ತನ್ನಂತೆಯೇ ವರ್ತಿಸುತ್ತವೆಂದು ತಿಳಿದುಕೊಂಡಿರು ತ್ತಾನೆ. ಬತ್ತ ಚೆಲ್ಲಿದರೆ ಬತ್ತ ಬೆಳೆಯುತ್ತದೆ, ಅನ್ನ ಚೆಲ್ಲಿದರೆ ಅನ್ನ ಬೆಳೆಯುತ್ತದೆಂದು ನಂಬುತ್ತಾನೆ. ಅವನು ಅಜ್ಞಾನದಿಂದಲೋ ಮರೆವಿನಿಂದಲೋ ಹೀಗೆಲ್ಲ ವರ್ತಿಸುತ್ತಾನೆ. ಮನೆಯಲ್ಲಿ ಇಲಿ ಹೆಚ್ಚಿದರೆ ಅದಕ್ಕೆ ಬೆಂಕಿ ಹಚ್ಚಬೇಕೆನ್ನುವ ಬುದ್ಧಿ ಅವನದು. ಮುಂದೆ ತುಂಟತನ ಮಾಡಿಯಾರೆಂಬ ಕಾರಣಕ್ಕಾಗಿ ಮಕ್ಕಳನ್ನು ಮೊದಲೇ ದಂಡಿಸುವ

ಮೂಸ್ತರು ಈ ವರ್ಗಕ್ಕೆ ಸೇರಿದವರು. ಮೈಸೂರು ದೊರೆಯ ಆಸ್ಥಾನದಲ್ಲಿ ವಿಪ್ರಮಣಿ
ಗಳು ಸಭೆ ಸೇರಿದ್ದರಂತೆ. ದೊರೆಗಳು ಎಷ್ಟು ತಡೆದರೂ ಅಪಾನವಾಯು ಸಶಬ್ದವಾಗಿ
ಹೊರಗೆ ಬಂತು. ವಿದ್ವಾಂಸರಲ್ಲೊಬ್ಬ ಮೇಲೆದ್ದು ರಾಜರ ಗೌರವವನ್ನು ಕಾಪಾಡುವ
ಸಲುವಾಗಿ "ಮಹಾಪ್ರಭೋ, ತಪ್ಪಾಯಿತು, ಕ್ಷಮಿಸಬೇಕು" ಎಂದ. ಸಭೆಯನಂತರ
ರಾಜರು ಆ ವಿದ್ವಾಂಸನನ್ನು ಪ್ರತ್ಯೇಕವಾಗಿ ಕರೆಸಿಕೊಂಡು ಬೇಕಾದಷ್ಟು ವಿಲ್ಲತ್ತು
ಗಳನ್ನು ಕೊಟ್ಟು ಕಳಿಸಿದರಂತೆ. ಪಕ್ಕದ ಮನೆಯ ವಿಪ್ರನ್ಮಣಿಗೂ ರಾಜನಿಂದ ಉಡುಗೊರೆ
ಪಡೆಯುವ ಆಸೆಯಾಗಿ, ಸಾಲಮಾಡಿ ಅವರೆಕಾಯಿ ತಂದು ಗುಗ್ಗರಿಮಾಡಿಸಿ ತಿಂದು,
ಆಸ್ಥಾನವಲ್ಲಿದ್ದಾಗ ಹೂಸು ಬಿಟ್ಟು, ರಾಜರ ದುರಾಗ್ರಹಕ್ಕೆ ಪಾತ್ರನಾದನಂತೆ. ಇದು
ಜ್ಞಾನಿಯ ಹೆಡ್ಡತನಕ್ಕೆ ಒಳ್ಳೆಯ ನಿದರ್ಶನ. ಕೊಂಬೆಯ ಮೇಲೆ ನಿಂತು ಮರದ ಬುಡ
ಕಡಿಯುವ ಕಾಳಿದಾಸನೂ ಇಂಥವನೇ.

ಬುದ್ಧಿವಂತ ಜನ ಮೋಸದಿಂದ ಶಿಕ್ಷೆ ಮತ್ತು ಮರಣದಂಡನೆಗಳನ್ನು ತಪ್ಪಿಸಿಕೊಳ್ಳು
ತ್ತಾರೆ. ಇವರು ಲೈಂಗಿಕಾಪರಾಧಗಳಲ್ಲಿಯೂ ನಿಸ್ಸೀಮರು. ಅವರು ಮೋಸದಿಂದ
ಹೆಣ್ಣನ್ನು ಹಾರಿಸಿಕೊಂಡು ಹೋಗಬಹುದು. ಇಂಥ ಸಾಹಸದಲ್ಲಿ ಅವರು ಬೇರೊಬ್ಬ
ಹೆಣ್ಣಿನ ಸಹಾಯ ಪಡೆದುಕೊಳ್ಳಬಹುದು. ದುರ್ಬಲರು ಬುರುಡೆ ಹೊಡೆದು ಸಬಲರನ್ನು
ಬುಟ್ಟಿಗೆ ಹಾಕಿಕೊಳ್ಳುತ್ತಾರೆ. ರಾಜನೇ ಆಸ್ಥಾನಕ್ಕೆ ತನ್ನನ್ನು ಕರೆಸಿಕೊಂಡಿದ್ದನೆಂಬುದಾಗಿ
ದುರ್ಬಲ ವ್ಯಕ್ತಿ ಪ್ರಚಾರಮಾಡಿಕೊಂಡದ್ದಾದರೆ ದುಷ್ಟ ಶ್ರೀಮಂತರೂ ಹೆದರುತ್ತಾರೆ.
ಗೂಂಡಾಗಳು ಮತ್ತು ನಿರಕ್ಷರಕುಕ್ಷಿಗಳು ಅಭ್ಯುದಯದ ಏಣಿಯನ್ನೇರುವುದು, ಮಂತ್ರಿ
ಸುಮಂತ್ರಿಗಳಾಗುವುದು ಹೀಗೆಯೇ. ಅನಾಮಧೇಯನಾದೊಬ್ಬ ವ್ಯಕ್ತಿ ಶೋಕಾಗಿ
ಉಡುಪು ಧರಿಸಿ, ಹೊಸದಾಗಿ ನೇಮಕಗೊಂಡ ದಿವಾನರನ್ನು ಮದರಾಸಿನಲ್ಲಿಯೇ ಭೇಟಿ
ಮಾಡಿ, ತಾನು ಒಂದು ದೊಡ್ಡ ಕೋಮಿನ ನಾಯಕನೆಂದು ಹೇಳಿಕೊಂಡು, ಆಳುದ್ದದ
ಹೂಹಾರ ಹಾಕುತ್ತಾನೆ. ದಿವಾನರು ಬೆಂಗಳೂರು ನಿಲ್ದಾಣದಲ್ಲಿ ಬಂದಿಳಿದೊಡನೆಯೇ
ದೂರದಲ್ಲಿ ನಿಂತಿರುವ ಎರವಲು ವಸ್ತ್ರಗಳಿಂದ ಭೂಷಿತನಾದ ಅನಾಮಧೇಯ ನಾಯಕನ
ಕೈಕುಲುಕುತ್ತಾರೆ. ಹಿರಿಯ ಅಧಿಕಾರಿಗಳು ಅವಾಕ್ಕಾಗಿ, ಅವನನ್ನು ಓಲೈಸುತ್ತಾರೆ.
ಅಂದಿನಿಂದ ಅವನ ಕೀರ್ತಿ ರಾಜ್ಯದಲ್ಲೆಲ್ಲ ಹಬ್ಬುತ್ತದೆ; ಖ್ಯಾತನಾಮನಾಗುತ್ತಾನೆ. ಇಂಥ
ಜನ ಆದಿಮಾನವಯುಗದಿಂದ ಈ ತನಕ ಇದ್ದವರೇ; ಮುಂದೆಯೂ ಇರುವವರೇ. ಪ್ರಣ
ಯಾರ್ಥಿಗಳನ್ನು ಆಟವಾಡಿಸುವ ಸೋಗುಗಾತಿಯರು ವಿನೋದ ಕಥೆಗಳಲ್ಲಿ ಸಾಕಷ್ಟಿದ್ದಾರೆ.
ದ್ರೋಹಿಗಳು, ದುಷ್ಟರು, ನಟನೆಗಾರರು, ಚೋರರು, ಎಲ್ಲ ತರಹೆಯ ಜನ ಇಲ್ಲಿ ಸಿಗು
ತ್ತಾರೆ; ಉಂಡಾಡಿಗುಂಡರು ವಿನೋದದ ವಸ್ತುವಾಗುತ್ತಾರೆ; ಅಂಗವಿಕಲರ ವರ್ತನೆ
ಯಿಂದ ಹಾಸ್ಯ ಹೊರಹೊಮ್ಮುತ್ತದೆ. ಒಂದು ವೃತ್ತಿಯ ಜನ ಬೇರೊಂದು ವೃತ್ತಿಯನ್ನು
ಕೈಗೆತ್ತಿಕೊಂಡದ್ದಾದರೆ ತಮಾಷೆ ಅನಲಾಗಬಹುದು. ವೇಷಭೂಷಣಗಳು ನಕಲಿಯ
ವಸ್ತುಗಳಾಗಬಹುದು. ಅತ್ಯುಕ್ತಿ ಉತ್ಪ್ರೇಕ್ಷೆಗಳು ಬೆಪ್ಪುತನ ಉತ್ತರತನಗಳು ಈ ಕಥೆ
ಗಳಿಗೆ ಸಾಮಗ್ರಿಯಾಗುತ್ತವೆ.

೪. ಪ್ರಾಣಿ ಮತ್ತು ನೀತಿ ಕಥೆಗಳು

ಪ್ರಾಣಿಕಥೆ ಹಿಂದಿನ ಎರಡು ಕಥೆಗಳಿಗಿಂತಲೂ ಪ್ರಾಚೀನವಾದದ್ದು. ಸದಾ ಪ್ರಾಣಿಗಳ ನಡುವೆ ಬೆಳೆದ ಮಾನವ ತನ್ನ ಗುಣಗಳನ್ನೇ ಅವುಗಳಿಗೂ ಆರೋಪಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಈ ಹೊತ್ತಿಗೂ ಅಷ್ಟೇ, ರೈತ ತನ್ನ ಸಾಕುಪ್ರಾಣಿಗಳನ್ನು ಉಪಚರಿಸುವಾಗ, ಅವುಗಳೊಡನೆ ಮಾತಾಡುವಾಗ ಅವನ ಭಾವುಕತೆಯನ್ನು ಗಮನಿಸಬೇಕು. ಆದ್ದರಿಂದ ಆದಿಮಾನವ ಪ್ರಾಣಿಗಳನ್ನು ಕುರಿತು ಕಥೆಗಳನ್ನು ಕಟ್ಟಿದ್ದರಲ್ಲಿ, ಪ್ರಾಣಿಗಳನ್ನು ಮಾನವ ಪಾತ್ರಗಳಂತೆಯೇ ಆಡಿಸಿದ್ದರಲ್ಲಿ ಅವನಿಗೂ ಅವುಗಳಿಗೂ ಇದ್ದ ಸಮೀಪ ಸಂಬಂಧ ಸ್ಪಷ್ಟವಾಗುತ್ತದೆ.

ಪ್ರಾಣಿಕಥೆ ಮುಖ್ಯವಾಗಿ ಕಾರ್ಯಕಾರಣ ಕಥೆ. ಮನುಷ್ಯ ನಿಸರ್ಗ ವ್ಯಾಪಾರಗಳನ್ನು ಗಮನಿಸಿದಾಗ ಅವುಗಳಿಗೆ ಕಾರಣವೇನೆನ್ನುವುದನ್ನು ವೀಕ್ಷಣೆ, ಊಹನೆ, ತಾರ್ಕಣೆಗಳ ಮೂಲಕ ನಿರ್ಣಯಿಸಲು ಹವಣಿಸುತ್ತಾನೆ; ವೀಕ್ಷಣೆಗೆ ನಿಲುಕದಿದ್ದಾಗ ಕಲ್ಪನೆಯ ಮೂಲಕ ಕಾರಣವನ್ನೂಹಿಸಿಕೊಳ್ಳುತ್ತಾನೆ. ಪ್ರಾಣಿಪ್ರಪಂಚವನ್ನು ನೋಡಿದಾಗಲೂ ಅವನಲ್ಲಿ ಅಂಥದೇ ಕುತೂಹಲ ಮೊಳೆಯುತ್ತದೆ. ಹಸುವಿಗೆ ಕೊಂಬಿದೆ, ಕುದುರೆಗಿಲ್ಲ, ಏಕೆ? ನರಿಗೆ ಬಾಲವಿದೆ, ಕರಡಿಗೇಕಿಲ್ಲ? ಕೋಗಿಲೆ ಕಪ್ಪು, ಗಿಣಿ ಹಳದಿಗೆಂಪು, ಏಕೆ? ಆನೆ ಶಾಖಾಹಾರಿ, ಹುಲಿ ಮಾಂಸಾಹಾರಿ, ಇದಕ್ಕೆ ಕಾರಣವೇನು? ಇಂದಿನ ವೈಜ್ಞಾನಿಕ ಮಾನವ ಈ ಪ್ರಶ್ನೆಗಳಿಗೆ ಕರಾರುವಾಕ್ಕಾಗಿ ಉತ್ತರ ಹೇಳುತ್ತಾನೆ. ಆದಿಮಾನವ ತನ್ನ ಕಲ್ಪನೆ ಕಟ್ಟಿದ ಕಥೆಗಳ ಮೂಲಕ ಕಾರ್ಯಕಾರಣ ಸಂಬಂಧವನ್ನು ಸಂಸ್ಥಾಪಿಸಿಕೊಂಡು ತೃಪ್ತಿಪಟ್ಟುಕೊಳ್ಳಬೇಕಾಗಿತ್ತು. ಉತ್ತರ ಯೂರೋಪಿನಲ್ಲಿ ಹುಟ್ಟಿತೆಂದು ಹೇಳಲಾದ ಬಾಲವಿಲ್ಲದ ಕರಡಿಯ ಕಥೆಯನ್ನೇ ನೆನೆಸಿಕೊಳ್ಳಬಹುದು. ಒಂದು ದಿನ ನರಿಯಣ್ಣ ಕರಡಿರಾಯರಿಗೆ ಹೇಳಿತಂತೆ, "ಇಲ್ಲಿಯ ಸಮುದ್ರದಲ್ಲಿ ಭಾರಿ ಮೀನುಗಳಿವೆ. ಜತೆಗೆ ತುಂಬ ರುಚಿಯಾಗಿವೆ. ರಾತ್ರಿಯ ವೇಳೆ ಅವು ದಡಕ್ಕೆ ಬಂದುಬಿಡುತ್ತವೆ. ನೀನು ಬೇಕಾದರೆ ನಿನ್ನ ಬಾಲವನ್ನು ನೀರೊಳಗೆ ಇಳಿಬಿಟ್ಟರೆ, ಮೀನು ಅದನ್ನು ತಬ್ಬಿಕೊಳ್ಳುತ್ತವೆ. ಬಾಲವನ್ನು ಹೊರಗೆ ತೆಗೆದಾಗಲೂ ಕಚ್ಚಿಕೊಂಡಿರುತ್ತವೆ" ಎಂದು. ಆ ಕಾಲಕ್ಕೆ ಕರಡಿಗಳಿಗೆ ಬಾಲವಿತ್ತು. ಕರಡಿರಾಯ ಬಾಲವನ್ನು ನೀರೊಳಗದ್ದುತ್ತಿದ್ದಂತೆ, ಅದು ಘನೀಭೂತವಾಗಿ, ಬಾಲವನ್ನು ಬಿಗಿಯಾಗಿ ಹಿಡಿದುಕೊಂಡಿತಂತೆ. ರಾಯ ಅದನ್ನೆಳೆದಾಗ ಬುಡಕ್ಕೆ ಕಿತ್ತುಹೋಯಿತು. ಅಲ್ಲಿಂದೀಚೆಗೆ ಕರಡಿಗಳೆಲ್ಲ ತಮ್ಮ ಬಾಲಗಳನ್ನು ಕಳೆದುಕೊಂಡುವಂತೆ. ಬಾಲವಿಲ್ಲದ ಇತರ ಪ್ರಾಣಿಗಳ ಬಗೆಗೂ ಇಂಥದೇ ಕಥೆಗಳನ್ನು ಕಟ್ಟಬಹುದು ತಾನೆ?

ಭೂಲೋಕದ ಪ್ರಾಣಿ ಹಾಗೂ ಮನುಷ್ಯ ವರ್ಗಗಳಿಗೆ ಮಾತು ಕಲಿಸುವ ಸಲುವಾಗಿ ಬ್ರಹ್ಮ ಬ್ರಾಹ್ಮಿಯನ್ನು ಕಳಿಸಿಕೊಡುತ್ತಾನೆ. ಆನೆ ಹುಲಿ ಸಿಂಹ ಮೊದಲಾದ ಬಲಿಷ್ಠ ಪ್ರಾಣಿಗಳು ಮಾನವನಸಿಗಿಂತ ವೇಗವಾಗಿ ಮಾತು ಕಲಿತು, ಪರಸ್ಪರ ವೈರವನ್ನು ತೊರೆದು, ಐಕ್ಯದ ಸೂತ್ರವನ್ನು ಮನನ ಮಾಡಿಕೊಂಡು ಗುಂಪು ಕಟ್ಟಿಕೊಳ್ಳುತ್ತವೆ.

ಮನುಷ್ಯರ ಸಂಖ್ಯೆಗಿಂತ ಪ್ರಾಣಿಗಳ ಸಂಖ್ಯೆ ನೂರುಪಟ್ಟು ಹೆಚ್ಚಾಗಿದ್ದುದರಿಂದ ಮಾನವನಿಗೆ ತುಂಬ ದಿಗಿಲಾಗುತ್ತದೆ. ಮೊದಲೇ ಅವು ತನಗಿಂತ ಶಕ್ತಿಯುತವಾಗಿದ್ದುದರಿಂದ, ತನ್ನ ಆಜ್ಞೆಯನ್ನು ಪರಿಪಾಲಿಸುವುದಿರಲಿ, ತನಗೆ ಕೈಂಕರ್ಯವೆಸಗುವುದಿರಲಿ, ತನ್ನ ವಂಶವೇ ನಾಶವಾಗಬಹುದೆಂದು ಹಲವು ವಿಧವಾಗಿ ಆಲೋಚಿಸುತ್ತಾನೆ. "ಆನೆ ಹುಲಿಗಳೆಲ್ಲ ಗುಂಪು ಕಟ್ಟಿಕೊಂಡು ನಿಮ್ಮನ್ನು ಕೊಲೆ ಮಾಡಬೇಕೆಂದು ಸಂಚು ಹೂಡುತ್ತಿವೆ. ನಮಗೆ ನೀವು ಪಕ್ಷಪಾತ ತೋರಿಸುತ್ತಿದ್ದೀರೆಂದು ಅವುಗಳ ದೂರು. ದೇವಲೋಕದವರಿಗೆ ನಾವೇನು ಕಡಮೆ. ಅಲ್ಲಿಯ ಜನರನ್ನು ನಾವೇಕೆ ಪೂಜಿಸಬೇಕು? ನಾವೇ ನಮಗೆ ಬೇಕಾದ ದೇವರುಗಳನ್ನಿಲ್ಲಿಯೇ ಸೃಷ್ಟಿಮಾಡಿಕೊಳ್ಳೋಣ ಎಂದು ಹೊಂಚು ಹಾಕುತ್ತಿವೆ" ಎಂದು ಮಾನವರ ಪ್ರತಿನಿಧಿಗಳು ಬ್ರಾಹ್ಮಿಯ ಬಳಿ ಹೋಗಿ ಗೋಗರೆದು ಬಾಯಿಬಡಿದುಕೊಳ್ಳುತ್ತಾರೆ. ಬ್ರಾಹ್ಮಿ ಅವರನ್ನು ಕರೆದುಕೊಂಡು ಬ್ರಹ್ಮದೇವರ ಮುಂದೆ ಅವರ ಮನವಿ ಸಲ್ಲಿಸಿ, ಅವರ ಪರವಾಗಿ ವಾದ ಮಾಡುತ್ತಾಳೆ. ಆಗ ಬ್ರಹ್ಮ ಅಲ್ಪ ಸಂಖ್ಯಾತರ ಕ್ಷೇಮ ಸಾಧನೆಗಾಗಿ ಪ್ರಾಣಿಗಳೆಲ್ಲ ಮೂಕವಾಗಲೆಂದೂ, ಒಂದೊಂದು ಪ್ರಾಣಿಯ ಭಾಷೆ ಬೇರೆ ಪ್ರಾಣಿಗಳಿಗೆ ಅರ್ಥವಾಗಕೂಡದೆಂದೂ ಶಾಪ ಕೊಡುತ್ತಾನೆ. ಇದೆಲ್ಲ ನಡೆದದ್ದು ಆದಿಮಾನವ ಯುಗದಲ್ಲಿ. ಆ ಹಿಂದೆ ಎಲ್ಲ ಪ್ರಾಣಿಗಳಿಗೂ ಮಾತು ಬರುತ್ತಿತ್ತು.

ಪುರಾಣಗಳಿಂದ ಕಾಲ್ಪನಿಕ ಕಥೆಗಳು ಒಗೆಯುವಂತೆ, ಪ್ರಾಣಿ ಕಥೆಗಳಿಂದ ಪುರಾಣಗಳು ವಿಕಾಸಹೊಂದಲವಕಾಶವಿದೆ. ಹಾವು ಪೊರೆ ಬಿಡುವುದರಿಂದ ಅವುಗಳಿಗೆ ಮರಣವಿಲ್ಲ ಎಂಬ ನಂಬಿಕೆ ಕೆಲವು ಜನಾಂಗಗಳಲ್ಲುಂಟು. ಪೊರೆ ಬಿಟ್ಟಂತೆಲ್ಲ ಅವು ನವಚೈತನ್ಯ ಪಡೆಯುತ್ತವೆಂಬುದು ಅವರ ಅಭಿಪ್ರಾಯ. ಮಾನವನನ್ನು ವಂಚಿಸಿ, ಸರ್ಪ ಚಿರಂಜೀವತ್ವವನ್ನು ತಾನೇ ಪಡೆದುಕೊಂಡಿತು. ಮಾನವ ಪತನಕ್ಕೆ ಸಂಬಂಧಿಸಿದ ಪುರಾಣ ಕಥೆಗೆ ಇದೇ ಮೂಲ.

ಕೆಂಪೆದೆಯ ರಾಬಿನ್ ಹಕ್ಕಿ (Robin Redbreast) ಅಗ್ನಿದೇವತೆಯಾಗಿ ಬಡ್ತಿ ಹೊಂದಿದ ಕಥೆಯೂ ಇಂಥದೇ. ನಚಿಕೇತನಂತೆ ಆ ಹಕ್ಕಿ ಮಾನವನ ಉಪಯೋಗಕ್ಕಾಗಿ ಸ್ವರ್ಗದಿಂದ ಭೂಮಿಗೆ ಅಗ್ನಿಯನ್ನು ತಂದಿತಂತೆ. ಅದು ಯಾವಾಗಲೂ ಎದೆಯಲ್ಲಿ ಬೆಂಕಿ ಇಟ್ಟುಕೊಂಡಿರುವುದರಿಂದ ಅದರ ಎದೆ ಕೆಂಪಗಿದೆಯಂತೆ. ಕ್ಯೂಟಾನಿಕ್ ಜನ ಕಾಲಾನಂತರದಲ್ಲಿ ಅದು ಸಿಡಿಲು ಗುಡುಗುಗಳ ದೇವತೆಯೆಂದು ಪರಿಗಣಿಸಿದರು.

ಪ್ರಾಣಿಕಥೆ ಸಾಧಾರಣವಾಗಿ ಇತರ ಕಥೆಗಳಿಗಿಂತ ಚಿಕ್ಕದು; ಅಂದ ಮೇಲೆ ಅಲ್ಲಿ ಬರುವ ಆಶಯಗಳ ಸಂಖ್ಯೆಯೂ ಕಡಮೆ. ದೂರಸ್ಥವಾದ ದೇಶಗಳಲ್ಲಿ ಹುಟ್ಟಿದ ಕಥೆಗಳಲ್ಲಿ ಕಾಣುವ ಸಾದೃಶ್ಯಗಳನ್ನು ನೋಡುವಾಗ ಬಹುಮೂಲವಾದ ಇವುಗಳಿಗೂ ಭಾಗಶಃವಾದರೂ ಅನ್ವಯವಾಗುತ್ತದೆಂದು ತಿಳಿಯಬೇಕಾಗುತ್ತದೆ. ಹಂಗೇರಿಯಲ್ಲಿ ಪ್ರಚಲಿತವಾಗಿರುವ ಒಂದು ಕಥೆ ಹೀಗಿದೆ:

ದೇವರು ಜಗತ್ತನ್ನು ಸೃಷ್ಟಿಸಿದಾಗ ಕುದುರೆಗೆ ಹಲ್ಲು ಕೊಡದೆ ಎರಡು ಕೊಂಬುಗಳನ್ನು ಮಾತ್ರ ದಯಪಾಲಿಸಿದನು. ಹಸುವಿಗೆ ಎರಡು ಸಾಲು ಹಲ್ಲುಗಳಿದ್ದುವೇ

ಹೊರತು ಕೊಂಬುಗಳಿರಲಿಲ್ಲ. ಹೀಗಾಗಿ ಹಸುವಿನ ಸ್ವರಕ್ಷಣೆಗೆ ಸಾಧನಗಳೇ ಇರಲಿಲ್ಲ. ಕುದುರೆಯಾದರೂ ಕಾಲಿಂದ ಒದೆಯಬಹುದಿತ್ತು. ಹಸು ದೇವರ ಬಳಿ ಹೋಗಿ ಈ ರೀತಿ ನೊರೆಯಿಟ್ಟಿತಂತೆ: "ಸ್ವಾಮಿ, ಯಾರಾದರೂ ನನ್ನ ಮೇಲೆ ಬಿದ್ದರೆ ನಾನು ರಕ್ಷಣೆ ಮಾಡಿ ಕೊಳ್ಳಲಾರೆ. ಕೊಂಬುಗಳಿಲ್ಲವಾದರೂ ಕುದುರೆ ಕಾಲಿನ ಸಹಾಯದಿಂದ ಆತ್ಮರಕ್ಷಣೆ ಮಾಡಿಕೊಳ್ಳಬಹುದು. ಆದ್ದರಿಂದ ಕುದುರೆಯ ಕೊಂಬನ್ನು ನನಗೆ ಕೊಟ್ಟುಬಿಡಿ. ಕೊಂಬಿಗೆ ಪ್ರತಿಯಾಗಿ ನನ್ನ ಮೇಲ್ದವಡೆಯ ಹಲ್ಲುಗಳನ್ನು ಕೊಟ್ಟುಬಿಡುತ್ತೇನೆ" ಎಂದು. ದೇವರು ಹಸುವಿನ ವಾದದಿಂದ ಸುಪ್ರೀತನಾದ. ಕುದುರೆಯೂ ವಿಧಿಯಿಲ್ಲದೆ ಒಪ್ಪಿ ಕೊಂಡಿತು. ಅಲ್ಲಿಂದೀಚೆಗೆ ಯಾರಾದರೂ ಬಳಿ ಹೋದರೆ, ಕುದುರೆ ತನ್ನ ಹಲ್ಲು ತೋರಿಸು ತ್ತದೆ, ಹಸು ಕೊಂಬು ಅಲ್ಲಾಡಿಸುತ್ತದೆ.

ಅಣ್ಣಾಂನಲ್ಲಿ ರೂಢಿಯಲ್ಲಿರುವ ಕಥೆಯಿದು: ಹಿಂದಿನ ಕಾಲದಲ್ಲಿ ಎಮ್ಮೆಗೆ ಎರಡು ಸಾಲು ಹಲ್ಲಿದ್ದುವಂತೆ. ಕುದುರೆಗೆ ಹಲ್ಲೇ ಇರಲಿಲ್ಲ. ಒಂದು ದಿನ ಎಮ್ಮೆ ಮತ್ತು ಕುದುರೆ ಭೆಟ್ಟಿಯಾದುವು. ಹಬ್ಬದೂಟ ಮಾಡಬೇಕಾದ ಸಂದರ್ಭವೊದಗಿದ್ದುದರಿಂದ ಮೇಲ್ದವಡೆಯ ಹಲ್ಲುಗಳನ್ನು ತಾತ್ಕಾಲಿಕವಾಗಿ ಕೊಟ್ಟಿದ್ದಾದರೆ, ಊಟ ಮುಗಿದ ಕೂಡಲೇ ಅವನ್ನು ಹಿಂದಿರುಗಿಸುವುದಾಗಿ ಕುದುರೆ ಎಮ್ಮೆಯನ್ನು ಕೇಳಿಕೊಂಡಿತು. ಎಮ್ಮೆ ತನ್ನ ಹಲ್ಲನ್ನು ಕುದುರೆಗೆ ನೀಡಿತು. ಆದರೆ ಕುದುರೆ ತನ್ನ ಕೆಲಸವಾದನಂತರ ಹಲ್ಲು ಹಿಂದಿರುಗಿಸಲಿಲ್ಲ. ತನ್ನನ್ನು ಓಟದ ಜೂಜಿನಲ್ಲಿ ಗೆದ್ದದ್ದಾದರೆ, ಹಲ್ಲು ಹಿಂದಿರುಗಿಸುವುದಾಗಿ ಎಮ್ಮೆಗೆ ಕುದುರೆ ಷರತ್ತು ಹಾಕಿತು. ಎಮ್ಮೆ ಜೂಜಿನಲ್ಲಿ ಸೋತದ್ದರಿಂದ ತನ್ನ ಮೇಲ್ದವಡೆಯ ಹಲ್ಲುಗಳನ್ನು ಮತ್ತೆ ಪಡೆಯಲಾಗಲಿಲ್ಲ.

ಈ ಎರಡು ಕಥೆಗಳಲ್ಲಿ ಕೆಲವು ವ್ಯತ್ಯಾಸಗಳೇನೋ ಇವೆ. ಕುದುರೆ ಹಲ್ಲು ಪಡೆದದ್ದೇ ಇಲ್ಲಿಯ ಮುಖ್ಯಾಶಯ. ಈ ಕಥೆಯನ್ನು ಅಲೆಮಾರಿ ಜಿಪ್ಸಿಗಳು ಅಣ್ಣಾಂನಿಂದ ಹಂಗೆರಿ ಗೊಯ್ದರೆಂದು ತಜ್ಞರು ಅಭಿಪ್ರಾಯಪಡುತ್ತಾರೆ.[1] ಬೇರಾವ ಕಾರಣಗಳೂ ಹೊಳೆಯ ದಿದ್ದಾಗ, ಸಾಧುಸಂತರ, ದೇವರುಗಳ ಶಾಪವನ್ನು ಈಡುಮಾಡುವುದುಂಟು. ನಾರದ ನೊಮ್ಮೆ ವೈಕುಂಠಕ್ಕೆ ತೆರಳಿದ್ದಾಗ, ನಾರಾಯಣನ ಆಸ್ಥಾನಿಕರಲ್ಲಿ ಕೆಲವರು ಅವನನ್ನು ನೋಡಿ ನಕ್ಕರಂತೆ. ಆಗ ನಾರದ ಅವರಿಗೆ ಶಾಪ ಕೊಡಲಾಗಿ, ಅವರು ಭೂಲೋಕದಲ್ಲಿ ಕಪಿಗಳಾಗಿ ಜನಿಸಿದರಂತೆ.

ಈತನಕ ನೋಡಿದಂತೆ, ಆದಿಮಾನವ ಪ್ರಾಣಿಗಳ ದೇಹರಚನೆ ಸ್ವಭಾವಾದಿಗುಣ ಗಳನ್ನು ಕುರಿತು ಅವನ ಶಕ್ತಿಗನುಗುಣವಾಗಿ ನಡಸಿದ ವಿಚಾರ ಪ್ರಾಣಿಕಥೆಯು ರೂಪ ತಾಳಿತು. ಧರ್ಮೋಪದೇಶವಾಗಲಿ ನೀತಿಪ್ರಸಾರವಾಗಲಿ ಅವರ ಉದ್ದೇಶವಾಗಿರಲಿಲ್ಲ. ಸರಿ ಸುಮಾರು ಅದೇ ಕಾಲಕ್ಕೆ ಕೆಲವು ಕಥೆಗಳಲ್ಲಾದರೂ ನೈತಿಕಾಂಶಗಳು ಮೊದಮೊದಲು ಗುಪ್ತರೂಪದಲ್ಲಿದ್ದು, ಅನಂತರ ಸ್ಪಷ್ಟವಾಗಿ ಮೈದೋರಿ ಜಂತೂಪದೇಶ ಕಥೆಗಳಾಗಿ (Fables) ಮೈದೋರಿರಬೇಕು. ತೀರಿಕೊಂಡ ಹಿರಿಯರು ಪ್ರಾಣಿಗಳ ದೇಹಗಳಲ್ಲಿ

[1] *The Science of Folklore* by A. H. Krappe, P. 62.

ವಾಸಿಸುತ್ತಾರೆ, ಮಾನವನಂತೆಯೇ ಪ್ರಾಣಿಗಳೂ ವರ್ತಿಸುತ್ತವೆ ಎಂಬ ಭಾವನೆ ಈ ನೀತಿಕಥೆಗಳಿಗೆ ಪ್ರೇರಣೆ ನೀಡಿರಬೇಕು. ಕಾರ್ಯಕಾರಣಕಥೆ (Animal tale) ಮೊದಲು ಹುಟ್ಟಿರಬೇಕು, ಅನಂತರ ನೀತಿಕಥೆ (Fable) ವಿಕಾಸಗೊಂಡಿರಬೇಕೆಂಬ[1] ಅಭಿಪ್ರಾಯ ಸಂಪೂರ್ಣ ಸತ್ಯವೆಂದು ಹೇಳಲಾಗದು.

ಭಾರತ ಮೂಲ ಸಿದ್ಧಾಂತ ಪುರಸ್ಕರ್ತರಾದ ಬೆನ್‌ಫಿಯೇ ಜಂತೂಪದೇಶ ಕಥೆ ಈಸೋಪನ ಕಥೆಗಳ ಮೂಲಕ ಗ್ರೀಸ್‌ನಲ್ಲಿ ಜನ್ಮತಾಳಿ ಭಾರತದಲ್ಲಿ ಹಬ್ಬುಗೆಗೊಂಡಿತೆಂದು ಹೇಳುತ್ತಾರೆ. ಆದರೆ ಇ. ರೋಡ್ (E. Rohde) ಎಂಬ ವಿದ್ವಾಂಸರು ಅವು ಭಾರತದಲ್ಲಿಯೇ ಮೊದಲು ಉಗಮಗೊಂಡಿರಬೇಕೆಂದು ವಾದಿಸುತ್ತಾರೆ.[2] ಈಸೋಪ ಐತಿಹಾಸಿಕ ವ್ಯಕ್ತಿಯಲ್ಲವೆಂಬ ಮಾತೂ ಇದೆ. ಅಷ್ಟೇ ಅಲ್ಲ, ಅವನು ಗ್ರೀಕನಲ್ಲ, ಅಯೋನಿಯಾದಲ್ಲಿದ್ದ ಸೆಮಿಟಿಕ್ ಜನಾಂಗಕ್ಕೆ ಸೇರಿದ ಗುಲಾಮನೆಂಬ ಪ್ರತೀತಿಯೂ ಇದೆ. ಹಳೆಯ ಬೈಬಲ್ಲಿನ ಅತ್ಯಂತ ಪ್ರಾಚೀನ ಭಾಗಗಳಲ್ಲಿ ಈ ಕಥೆಗಳು ದೊರೆಯುತ್ತವೆ. ಅವು ಸೆಮಿಟಿಕ್ ಜನಾಂಗದಲ್ಲಿ ಮೊದಲು ಉಗಮಗೊಂಡಿರಬೇಕು, ಮೆಸೆಪೊಟೇಮಿಯಾ ನಾಗರಿಕತೆಯೊಂದಿಗೆ ಪೂರ್ವಪಶ್ಚಿಮಾಭಿಮುಖವಾಗಿ ಹಬ್ಬಿ ಗ್ರೀಸ್ ಮತ್ತು ಭಾರತಗಳಲ್ಲಿ ಪ್ರಸಿದ್ಧಿ ಪಡೆದಿರಬೇಕು ಎಂದು ಕ್ರಾಪೆ ವಾದಿಸುತ್ತಾರೆ.[3] ಕಾವ್ಯವಾಗಲಿ ಕಥೆಯಾಗಲಿ ನಾಟಕವಾಗಲಿ, ಯಾವುದೇ ಸಾಂಸ್ಕೃತಿಕ ಸಂಗತಿಯಾಗಲಿ, ಕೊನೆಗೆ ಭಾಷೆಯಾಗಲಿ, ಜಗತ್ತಿನಲ್ಲಿ ಯಾವುದೋ ಒಂದು ಪ್ರದೇಶದಲ್ಲಿ, ಯಾವುದೋ ಒಂದು ಜನಾಂಗದಲ್ಲಿ ಉಗಮಗೊಂಡು, ಬೇರೆ ಕಡೆ ಹಬ್ಬಿರಬೇಕೆಂಬ ಪಕ್ಷಪಾತಯುತವಾದ ಸಿದ್ಧಾಂತ ಇಷ್ಟೆಲ್ಲ ಕೋಲಾಹಲಕ್ಕೆ ಕಾರಣವಾಗುತ್ತದೆ. ಮನುಷ್ಯರು ಒಂದೇ ಜಾಗದಲ್ಲಿ ಹುಟ್ಟಿರಲಾರರು; ಬೇರೆ ಬೇರೆ ಕಡೆಗಳಲ್ಲಿಯೂ ಹುಟ್ಟಿರುವುದಾದರೆ ಬುದ್ಧಿಶಕ್ತಿಯಲ್ಲಿ ಪ್ರತಿಭೆಯಲ್ಲಿ ಹಾಗೂ ಆಲೋಚನಾವಿಧಾನದಲ್ಲಿ ಸಾದೃಶ್ಯಗಳಿರಲೇಬೇಕು. ಈ ಪ್ರಮೇಯವನ್ನೊಪ್ಪಿಕೊಂಡದ್ದಾದರೆ, ಯಾವುದೇ ಕಥೆಯಾಗಲೀ ಬೇರೆ ಬೇರೆ ದೇಶಗಳಲ್ಲಿ ಅಷ್ಟಿಷ್ಟಾದರೂ ಇದ್ದಿರಬೇಕೆಂದು ಸ್ಪಷ್ಟವಾಗುತ್ತದೆ.

ಮೇಲಣ ಎರಡು ಗುಂಪಿನ ಪ್ರಾಣಿಕಥೆಗಳ ಜತೆಗೆ ಪ್ರಾಣಿ ಮಹಾಕಾವ್ಯವನ್ನೂ ಹೆಸರಿಸಬೇಕು. ತೆಳ್ಳನೆಯ ಸೂತ್ರದಲ್ಲಿ ಪೋಣಿಕೆಗೊಂಡ ಅನೇಕ ಪ್ರಾಣಿಕಥೆಗಳ ಗುಚ್ಛವೇ ಮಹಾಕಾವ್ಯ. ಪಂಚತಂತ್ರದಲ್ಲಿರುವಂತೆ ಇಬ್ಬರು ಗುರು ಶಿಷ್ಯರು ಅಥವಾ ಕೆಲವು ಪ್ರಾಣಿ ಗಳು ಕೊನೆಯ ತನಕ ಕಥೆಗಳ ಹಿನ್ನೆಲೆಯಲ್ಲಿದ್ದು ಕೊಂಡು, ಬಯಲಾಟದ ಹಿಮ್ಮೇಳದಂತೆ,

---

1 Ibid, P. 65.

2 Ibid, P. 65.

3 Fables occur in the oldest portions of the Old Testament, which leads one to suspect that the whole type came to the Ionians from the Semitic East, whence it was also carried to India with so many other elements of Mesopotamian civilisation—*The Science of Folklore* by A. H. Krappe, P. 65.

ಬಿಡಿಕತೆಗಳಿಗೆ ಸಂಬಂಧವನ್ನು ಕಲ್ಪಿಸಿ ಇಡಿತನವನ್ನು ಕಾಪಾಡುತ್ತವೆ. ಉತ್ತರಯೂರೋಪಿನ ಪ್ರಾಣಿ ಚಕ್ರ ಮತ್ತು ರೀನಾರ್ಡ್ ದಿ ಫಾಕ್ಸ್ (The Northern Animal Cycle and Reynard the Fox) ಎಂಬ ಮಧ್ಯಕಾಲೀನ ವಿಡಂಬನ ಪ್ರಾಣಿ ಮಹಾಕಾವ್ಯ (Satirical Beast Epic) ಜಗತ್ತಿನಲ್ಲೆಲ್ಲ ಬಹು ಪ್ರಸಿದ್ಧಿಯಾಗಿದೆ. ನರಿಯಂಥ ಕುಶಾಗ್ರಬುದ್ಧಿಯ ಪ್ರಾಣಿಯ ಸುತ್ತ ನೂರಾರು ಕಥೆಗಳು ಹೆಣಿಗೆಗೊಂಡು, ರಾಜನೀತಿ, ತತ್ವ, ಲೋಕಾನುಭವ ಮೊದಲಾದ ವಿಷಯಗಳನ್ನೊಳಗೊಂಡಿರುತ್ತವೆ. ವ್ಯಂಗ್ಯ ಕಟಕಿ ವಿನೋದ ಮೊದಲಾದ ವಿಡಂಬನ ಸಂಗತಿಗಳಿಗೂ ಇಲ್ಲಿ ಅವಕಾಶವುಂಟು.

೫. ಇತರ ಕಥೆಗಳು

ಸರಳ ಕಥೆಗಳ ಗುಂಪಿನಲ್ಲಿಯೇ ಸೇರಿಸಬಹುದಾದ ಸೂತ್ರಕಥೆಗಳಲ್ಲಿ ಕಥಾಸಂವಿಧಾನದ ಸಂಕೀರ್ಣತೆಯಾಗಲೀ, ಪಾತ್ರಗಳ ಬೆಳವಣಿಗೆಯಾಗಲೀ ಮುಖ್ಯವಲ್ಲ. ಇಲ್ಲಿ ಕಥಾರೂಪವೊಂದೇ ಪ್ರಧಾನವಾದದ್ದು. ಇಲ್ಲಿಯ ಸನ್ನಿವೇಶ ಅಥವಾ ಘಟನೆ ತುಂಬ ಸರಳವಾದುದಾದರೂ ಅದನ್ನು ಬಳಸುವ ತಂತ್ರ ಅಥವಾ ಕೌಶಲ ಮುಖ್ಯ. ಕಥೆಯಲ್ಲಿ ಏನು ನಡೆಯಿತೆಂಬುದು ದೊಡ್ಡದಲ್ಲ; ಅದು ಹೇಗೆ ನಡೆಯಿತೆಂಬುದು ಗಮನೀಯವಾದ ಅಂಶ. ಕಥೆಯ ಚೌಕಟ್ಟು ಒಂದೆಯಾಗಿದ್ದು, ಅದರಲ್ಲಿ ಯಾವುದೇ ಘಟನೆಯನ್ನಾಗಲೀ, ಪಾತ್ರವನ್ನಾಗಲೀ ಅಳವಡಿಸಬಹುದು, ತೆಗೆಯಬಹುದು ಹಾಗೂ ಮತ್ತೆ ಸೇರಿಸಬಹುದು. ಅದೊಂದು ವಿಧವಾದ ಆಟವೆಂದರೂ ಸಲ್ಲುತ್ತದೆ. 'ಗಿಣಿಯ ಮರಿ'[1] ಕಥೆ ಈ ಮಾದರಿಗೆ ಒಳ್ಳೆಯ ಉದಾಹರಣೆ. ಈ ಚೌಕಟ್ಟಿನ ಕತೆಯಂತೆಯೇ ಸರಗತೆಯೂ ತುಂಬ ಸರಳವಾದುದು. ಇದರಲ್ಲಿ ಪರಸ್ಪರ ಸಂಬಂಧವಿಲ್ಲದ ಘಟನೆಗಳು ಒಂದಾದ ಮೇಲೊಂದು ಬರುತ್ತವೆ. ಇದೂ ಮಕ್ಕಳ ಆಟದೊಂದಿಗೆ ಮುಂದೆ ಮುಂದೆ ಹರಿಯುವ ಕಥೆ. ನಾಲ್ಕಾರು ಮಕ್ಕಳು ವೃತ್ತಾಕಾರದಲ್ಲಿ ಕುಳಿತು ತಂತಮ್ಮ ಕೈಗಳನ್ನು ನೆಲದ ಮೇಲೊಡ್ಡುತ್ತಾರೆ. ನಾಯಕ ಶಿಶು ಒಂದು ಎರಡು ಮೂರು ಎಂದು ಕೈಗಳನ್ನೆಣಿಸುತ್ತಾನೆ. ಹತ್ತರ ಸಂಖ್ಯೆಯ ಕೈ ಹಿಂದಕ್ಕೆ ಹೋಗುತ್ತದೆ. ಎಲ್ಲ ಕೈಗಳೂ ಬೆನ್ನು ಹಿಂದಕ್ಕೆ ಹೋದಾಗ, ನಾಯಕ ಶಿಶು ಪ್ರಶ್ನೆ ಕೇಳುತ್ತಾನೆ: "ಕೈ ಕೈ ಎಲ್ಲಿಗ್ಹೋದೋ ?" ಯಾವ ಮಗು ಬೇಕಾದರೂ ಉತ್ತರ ಹೇಳಬಹುದು. "ಕಸದ ಮೂಲೆಗೋದೋ" ಎಂದು ಒಂದು ಮಗು ಉತ್ತರ ಕೊಡುತ್ತಾನೆ. "ಮೂಲೆ ಏನ್ಮಾಡ್ತು ?" ಎಂದು ಮುಂದಿನ ಪ್ರಶ್ನೆ ಹರಿಯುತ್ತದೆ. "ಕಸ ಕೊಡ್ತು." "ಕಸ ಏನ್ ಮಾಡ್ತೆ ?" "ತಿಪ್ಪೆ ಗುಂಡೀಗಾಕ್ದೆ" "ತಿಪ್ಪೆ ಏನ್ಮಾಡ್ತು?" "ಗೊಬ್ಬರ ಕೊಡ್ತು." "ಗೊಬ್ಬರ ಏನ್ಮಾಡ್ದೆ ?" "ಹೊಲಕ್ಹಾಕ್ದೆ" "ಹೊಲ ಏನ್ಮಾಡ್ತು?" "ಎಳ್ಳ್ಕೊಡ್ತು." "ಎಳ್ಳೇನ್ಮಾಡ್ದೆ ?" "ಗಾಣಿಗ್ತಿತ್ತೀಗ್ ಕೊಟ್ಟೆ" "ಗಾಣಿಗ್ತಿತ್ತೇನ್ಕೊಟ್ಲು ?" "ಎಣ್ಣೆ ಕೊಟ್ಲು"—ಈ ಸರಪಳಿ ಹೀಗೆಯೇ ಮುಂದುವರಿಯು

---

[1] ಕನ್ನಡ ಜನಪದ ಕಥೆಗಳು, ಡಾ. ಜೀ. ಶ. ಪರಮಶಿವಯ್ಯ, ಪು. 233–34.

ತ್ತದೆ. ಉತ್ತರ ಹೇಳಿದ ಮಗು ಬೆನ್ನ ಹಿಂದೆ ಅವಿಸಿದ್ದ ಕೈಯನ್ನು ಮುಂದಕ್ಕೊಯ್ಯು ತ್ತಾನೆ. ಇಲ್ಲೆಲ್ಲ ಒಂದರಿಂದ ಮತ್ತೊಂದು ಘಟನೆ ಮೂಡುತ್ತದೆ. ಅವುಗಳಿಗೊಂದು ಗುರಿ ಇಲ್ಲದ್ದರಿಂದ ಸಮಯಸ್ಫೂರ್ತಿ ಪ್ರೇರಿಸಿದ ಯಾವ ಘಟನೆಯಾದರೂ ಸಾಲಿನಲ್ಲಿ ಬಂದು ನಿಲ್ಲಬಹುದು. ಮಕ್ಕಳ ಜಾಣ್ಮೆಯ ಪರೀಕ್ಷೆಗೆ ಇದೊಂದು ಸಾಧನ. ಇಲ್ಲಿ ಯಾವೊಬ್ಬ ವ್ಯಕ್ತಿಯೂ ಮುಖ್ಯವಲ್ಲ. ಘಟನೆಯೂ ಮುಖ್ಯವಲ್ಲ. ರಚನೆ ಮತ್ತು ಘಟನೆಗಳ ದಾವಣಿ ಎರಡೇ ಮುಖ್ಯ. ಗುರಿಯಿಲ್ಲದ್ದರಿಂದ ಅವೂ ಮುಖ್ಯವಲ್ಲ. ಅವುಗಳಿಂದ ತೋರುವ ಜಾಣ್ಮೆ ಮುಖ್ಯ.

ಈ ಸರಗತೆಗಳು[1] ಕೇವಲ ಮಕ್ಕಳ ಆಟಗಳಿಗೆ ಸೀಮಿತಗೊಂಡಿಲ್ಲ. ಇವುಗಳ ಮೂಲಕವೂ ವಯಸ್ಸಾದವರ ಜಾಣ್ಮೆ ಅಥವಾ ಬೆಪ್ಪುತನ ಅಭಿವ್ಯಕ್ತಗೊಳ್ಳುತ್ತದೆ. ತಿರುಕ ಹೆಂಡತಿ ಕಟ್ಟಿಕೊಂಡ ಕಥೆ ಇಂಥದು. ಅವನು ತಿರುಪೆ ಮಾಡಿ ತಂದ ಅಕ್ಕಿಯನ್ನು ಇಲಿ ತಿಂದು ಹಾಕುತ್ತಿತ್ತು. ಇಲಿಯ ನಾಶಕ್ಕಾಗಿ ಬೆಕ್ಕು ಕೊಂಡ. ಬೆಕ್ಕು ಸಾಕಲಿಕ್ಕಾಗಿ ಹಸು ತಂದ. ಹಸು ನೋಡಿಕೊಳ್ಳುವ ಸಲುವಾಗಿ ಮದುವೆಯಾದ. ಮದುವೆಯಾದದ್ದರಿಂದ ಮಕ್ಕಳಾದುವು. ಮಕ್ಕಳಾದದ್ದರಿಂದ ಆಸ್ತಿ ಬೇಕಾಯಿತು. ಆಸ್ತಿ ಸಂಪಾದಿಸಿದ್ದರಿಂದ ನೆರೆಹೊರೆಯವರೊಡನೆ ವ್ಯಾಜ್ಯ ಮಾಡಬೇಕಾಯಿತು. ವ್ಯಾಜ್ಯದ ಸಲುವಾಗಿ ಆಸ್ತಿ ಕಳೆದುಕೊಂಡ. ಆಸ್ತಿ ಹೋದದ್ದರಿಂದ ಮತ್ತೆ ತಿರುಕನಾದ.

ಒಗಟು ಮತ್ತು ಗಾದೆ ಕತೆಗಳನ್ನು ಕುರಿತು ಎರಡು ಮಾತು ಅತ್ಯವಶ್ಯ. ನಿಜವಾಗಿ ನೋಡಿದರೆ ಬಾಳೇ ಒಂದು ಒಗಟು. ಪ್ರತಿಕ್ಷಣವೂ ಮಾನವನ ಮುಂದೆ ಅನೇಕ ಸಮಸ್ಯೆ ಗಳು ಕಣೆಗೆದರಿ ನಿಲ್ಲುತ್ತವೆ. ಒಗಟು ಕತೆಯ ಮುಖವಾಡವನ್ನು ಧರಿಸಿದಾಗ ಒಗಟುಗಥೆ ಯಾಗುತ್ತದೆ. ಇದು ಸಹ ಎಲ್ಲ ಕತೆಗಳಂತೆ "ಒಂದು ಹಳ್ಳಿಯಲ್ಲಿ ಒಬ್ಬ ಗಂಡಸು" "ಒಬ್ಬ ಹಾರೂರ ಹುಡುಗ" ಎಂಬೀ ರೀತಿಗಳಲ್ಲಿ ಮೊದಲಾಗುತ್ತದೆ. ಕಥೆಯ ಘಟನೆಗಳು ಹಾಗೂ ಸನ್ನಿವೇಶಗಳು ಸಮಸ್ಯೆಯ ನಿರೂಪಣೆಯಲ್ಲಿ ಪರ್ಯವಸಾನವಾಗಬೇಕು. ಪ್ರಶ್ನೆಯಲ್ಲಿ ಕತೆ ಮುಕ್ತಾಯ ಕಾಣಬೇಕು. ಇಂಥ ಕಥೆಗಳು ತ್ರಿಷಷ್ಠಿ ಶಲಾಕಾಪುರುಷ ಚರಿತ ಮತ್ತು ಭೇತಾಲ ಪಂಚವಿಂಶತಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಸಾಹಿತ್ಯಿಕವಾಗಿದ್ದು, ಮಧ್ಯ ಕಾಲೀನ ಕೃತಿಗಳಲ್ಲಿ ಲಭ್ಯವಾಗಿದ್ದು, ಜನಪದ ಸಾಹಿತ್ಯವನ್ನು ಪ್ರವೇಶಿಸಿರಬೇಕೆಂದು ಸ್ಟಿತ್ ಥಾಂಪ್ಸನ್[2] ಮೊದಲಾದ ವಿದ್ವಾಂಸರು ಊಹಿಸುತ್ತಾರೆ. ಇವು ಸಂವಾದರೂಪ ದಲ್ಲಿರಬಹುದು, ಪದ್ಯ ಅಥವಾ ಗದ್ಯಕಥನರೂಪವಲ್ಲಿರಬಹುದು. ಮತತತ್ವ ವಿನೋದ, ಈ ಎಲ್ಲ ವಿಷಯಗಳೂ ಇವುಗಳಿಗೆ ಗ್ರಾಸವಾಗಬಹುದು.[3]

1 ಇದನ್ನು ಜೀಶಂಪ ಅವರು 'ಕೊನೆಯಿಲ್ಲದ ಕತೆ' ಎಂದು ಕರೆದಿದ್ದಾರೆ.

2 *The Folk Tale*, Stith Thompson, P. 158.

3 ಟಿ. ಎಸ್. ರಾಜಪ್ಪನವರು ಸಂಪಾದಿಸಿರುವ ಧಾರವಾಡ ಜಿಲ್ಲೆಯ ಜನಪದ ಕಥೆಗಳು ಎಂಬ ಗ್ರಂಥದ ಕೊನೆಯಲ್ಲಿ ಎರಡು ಒಗಟು ಕಥೆಗಳಿವೆ. ರಾಗೌ ಅವರು ಸಂಪಾದಿಸಿರುವ 'ಕರ್ನಾಟಕ ಜಾನಪದ ಕಥೆಗಳು' ಎಂಬ ಗ್ರಂಥದಲ್ಲಿ ಎರಡಿವೆ.

ಗಾದೆಗಳು ದೀರ್ಘಾನುಭವದ ಘಟಿಕೆಗಳಾದ್ದರಿಂದ, ಅವುಗಳ ಮೂಲದಲ್ಲಿ ಯಾವುದೋ ಘಟನೆ, ಸನ್ನಿವೇಶ ಇದ್ದೇ ಇರಬೇಕು. 'ಹಾಕ್ಮಣೆ ನೂಕ್ಮಣೆ ಯಾಕ್ಮಣೆ' ಎನ್ನುವ ಪ್ರಸಿದ್ಧ ಗಾದೆಯ ಹಿಂದೆ ಅತ್ತೆಯೊಬ್ಬಳು ಅಳಿಯನನ್ನು ಬೇರೆ ಬೇರೆ ಕಾಲಗಳಲ್ಲಿ ಹೇಗೆ ಕಂಡಳೆಂಬ ಕಥೆಯಿರುವುದು ಸ್ಪಷ್ಟ. ಆ ಕತೆಯನ್ನು ಕೇಳಿದವನೋ, ಅಥವಾ ಅಂಥ ಘಟನೆಗಳನ್ನು ಕಂಡವನೋ ಆ ಗಾದೆಯನ್ನು ಕಟ್ಟಿರಬೇಕು. ಹಳ್ಳಿಗಳಲ್ಲಿ ರೂಢಿಯಲ್ಲಿರುವ ಮತ್ತೊಂದು ಗಾದೆ 'ಮಗನಿಗೆ ಒಡೆತನ ಕೊಟ್ಟರೆ ಹೊಡೆ ಗದ್ದೆ ಕುಯ್ದು ಮೆದೆ ಹಾಕಿದ' ಎಂಬುದು. ಒಂದೂರಿನಲ್ಲೊಬ್ಬ ರೈತ. ಅವನಿಗೊಬ್ಬನೇ ಮಗ. ಪ್ರಾಪ್ತವಯಸ್ಸಿಗೆ ಬಂದ ಕೂಡಲೇ ಮಗ ಭಾಗ ಕೇಳಿದ. ತಂದೆ ತಾಯಿ ಎಷ್ಟು ಬುದ್ಧಿ ಹೇಳಿದರೂ ಕೇಳಲಿಲ್ಲ ಮಗ. ಮಗನಿಗೆ ನೆರೆಹೊರೆಯವರ ಪ್ರೇರಣೆ ಪ್ರಬಲವಾಗಿತ್ತು. ಪಾಲು ಮಾಡಿಕೊಳ್ಳುವುದು ಬೇಡ ಎಂದು ಯೋಚಿಸಿದ ತಂದೆ ಮಗನಿಗೆ ಯಾಜಮಾನ್ಯ ವಹಿಸಿ ಕೊಟ್ಟ. ಮಗನಿಗೆ ವ್ಯವಸಾಯದ ಅನುಭವ ಸಾಲದು. ಬತ್ತ ಹೊಡೆ ಬಂದ ಕೂಡಲೇ ಪೈರು ಕೊಯ್ಯಿಸಿ ಮೆದೆ ಹಾಕಿದ. ಅದನ್ನು ಬಡಿದಾಗ ಒಂದು ಕಾಳೂ ಸಿಗಲಿಲ್ಲ. ಸಿಕ್ಕಿದ್ದು ಬರಿ ಹುಲ್ಲು. ಹಳ್ಳಿಯ ರೈತರು ಪ್ರತಿಯೊಂದು ಗಾದೆಗೂ ಒಂದೊಂದು ಕತೆ ಹೇಳುತ್ತಾರೆ. ಒಂದೊಂದು ಗಾದೆಯ ಬಸಿರಲ್ಲಿ ಒಂದೊಂದು ಕತೆ ಬೀಜರೂಪದಲ್ಲಿ ನಿದ್ರಿಸುತ್ತಿರುತ್ತದೆ. ಈ ಕಥೆಗಳೆಲ್ಲ ಸಾಮಾನ್ಯವಾಗಿ ಚಿಕ್ಕವು; ಒಂದೇ ಆಶಯವುಳ್ಳವು. ಸೂತ್ರಕತೆಗಳಲ್ಲಿರುವಂತೆ ಇಲ್ಲಿಯ ರಚನೆಯ ಎರಕದಲ್ಲಿ ಬೇರೆ ಪಾತ್ರ ಘಟನೆಗಳನ್ನು ಅಳವಡಿಸಬಹುದು. ಅನುಭವವಿಲ್ಲದವನಿಗೆ ಜವಾಬ್ದಾರಿ ಕೊಡಬಾರದೆನ್ನುವುದು ಎರಡನೆಯ ಗಾದೆಯಲ್ಲಿ ಅಡಕವಾಗಿರುವ ತತ್ವ. ಅಂಥ ನಿರನುಭವಿಗಳು ಯಾವ ಕ್ಷೇತ್ರದಲ್ಲಾದರೂ ಇರಬಹುದು. ಅಂಥವರನ್ನು ಕುರಿತು ಇಂಥ ಕಥೆಗಳು ರಚನೆಗೊಳ್ಳಬಹುದು.

ಬರ್ಮಾಯ ಜಾನಪದ ವಿದ್ವಾಂಸರಾದ ಮೌಂಗ್ ತಿನ್ ಆಂಗ್ ಅವರು ಬರ್ಮಾಯ ಸಾಹಿತ್ಯದಲ್ಲಿ ಒಂದು ಸಾವಿರ ಗಾದೆಯ ಕಥೆಗಳಿವೆ ಎಂದು ಹೇಳಿ, ಅವುಗಳ ಸ್ವರೂಪವನ್ನು ವಿಶದೀಕರಿಸುತ್ತಾರೆ. ಗಾದೆಯ ಕಥೆ ನೀತಿಕಥೆಯಲ್ಲ....ಅದು ಗಾದೆಯ ಹುಟ್ಟಿಗೆ ಕಾರಣವಾದ ಸಂಗತಿಗಳನ್ನು ವಿವರಿಸುತ್ತದೆ. ಅಂಗುಲ ತೋರಿದರೆ ಅಡಿಯನ್ನೇ ನುಂಗುತ್ತಾನೆನ್ನುವುದೊಂದು ಗಾದೆ. ಒಡೆಯನ ಗೂಡಾರದಲ್ಲಿ ತಲೆಯಿಟ್ಟುಕೊಳ್ಳಲು ಅವಕಾಶ ಕೇಳಿದ ಈಸೋಪನ ಒಂಟೆಯ ಕತೆ ಮೇಲಣ ಗಾದೆಗೆ ವಿವರಣೆಯಂತಿದೆ. ಅಂಗುಲ ತೋರಿದ್ದು ಹೇಗೆ, ಅಡಿಯನ್ನು ನುಂಗಿದ್ದು ಹೇಗೆ ಎನ್ನುವುದನ್ನು ಗಾದೆಯ ಕತೆ ನಿರೂಪಿಸಬೇಕು.[1]

ಮೌಂಗ್ ತಿನ್ ಆಂಗ್ (Maung Htin Aung) ಅವರು ೧೯೪೮ರಲ್ಲಿ ಬರ್ಮಾಯ ಜನಪದ ಕಥೆಗಳು ಎಂಬ ಸಂಗ್ರಹವನ್ನು ಪ್ರಕಟಿಸಿದರು. ಆಗವರು ಆ ಕಥೆಗಳನ್ನು

1 A Burmese proverbial tale is not a fable . . . a proverbial tale narrates the particular set of circumstances which gave rise to a proverb or a saying . . . But a proverbial tale to illustrate the saying would nartrate how one inch was actually given and how one ell was actually taken--*Burmese Law Tales* by Maung Htin Aung, P. 2.

ಮೂರು ಭಾಗಗಳನ್ನಾಗಿ ವಿಂಗಡಿಸಿದರು: (೧) ಜನಪದ ಕಥೆಗಳು, (೨) ಜನಪದ ಐತಿಹ್ಯಗಳು ಮತ್ತು (೩) ಜಾತಕ ಕಥೆಗಳು. ಆಂಗ್ಲರ ಸಾರ್ವಜನಿಕ ಕಾನೂನಿನಂತೆ (Common Law), ಬರ್ಮೀಯರ ಕಾನೂನು ಪದ್ಧತಿ ಮೂಲವಾದದ್ದು. ಪದ್ಧತಿಗಳು ಸಾಮಾನ್ಯವಾಗಿ ಕಾನೂನು ಕಥೆಗಳಲ್ಲಿ ಸಮಾಹಿತವಾಗಿವೆ. ಈ ಕಥೆಗಳು ಜಾನಪದೀಯ ವಾದುವು, ಇಲ್ಲವೆ ಶಿಷ್ಟರಿಂದ ಪರಿಷ್ಕಾರಗೊಂಡ ಜನಪದ ಕಥೆಗಳು. ಮನುಧರ್ಮಶಾಸ್ತ್ರ ಬರ್ಮೀಯರ ಕಾನೂನಿಗೆ ಮೂಲವೆಂಬ ಅಭಿಪ್ರಾಯವಿದ್ದರೂ. ಕೆಲವಂತು ಜಾನಪದ ಮೂಲವಾದುವೆಂಬ ವಾದವಿದ್ದೇ ಇದೆ. ಇದರಿಂದ ಕಾನೂನು ಕಥೆಗಳು ಸಂಸ್ಕೃತ ಅಥವಾ ಪಾಳಿಯಿಂದ ಭಾಷಾಂತರಗೊಂಡುವಲ್ಲವೆಂಬ ಸಂಗತಿ ದೃಢವಾಗುತ್ತದೆ. ಒಗಟು ಅಥವಾ ಸಮಸ್ಯೆಗಳನ್ನು ಅವುಗಳಿಗೆ ಪರಿಹಾರಗಳನ್ನು ಒದಗಿಸುವ ಜಾತಕಕಥೆಗಳು ಈ ಕಾನೂನು ಕಥೆಗಳ ಮೇಲೆ ಪ್ರಭಾವ ಬೀರಿವೆ ಎಂದು ಹೇಳುವುದುಂಟು. ಹಾಗಿರಬಹುದೆನ್ನಲು ಒಂದು ನಿದರ್ಶನ ಕಥೆಯನ್ನಿಲ್ಲಿ ಉದ್ಧರಿಸಲಾಗಿದೆ:

ಮತ್ತೊಂದು ದಿನ ಮುನಿಯನ್ನು ಪರೀಕ್ಷಿಸುವ ಸಲುವಾಗಿ ಅರಸು ಹಳ್ಳಿಗರಿಗೊಂದು ಸಂದೇಶ ಕಳಿಸಿದರು: "ದೊರೆ ಜೂಜಾಡಬೇಕೆಂದಿದ್ದಾರೆ. ಹಳೆಯ ಹಗ್ಗ ಕಿತ್ತು ಹೋಗಿದೆ. ನೀವೀಗ ಮರಳಿನ ಹಗ್ಗ ಹೊಸೆದು ಕಳಿಸಬೇಕು. ಇಲ್ಲವಾದರೆ ಒಂದು ಸಾವಿರ ಹೊನ್ನು ಜುಲ್ಮಾನೆ ಕೊಡಬೇಕಾಗುತ್ತದೆ." ಹಳ್ಳಿಗರು ಕಕ್ಕಾಬಿಕ್ಕಿಯಾಗಿ ಮುನಿಯ ಬಳಿ ತಮ್ಮ ವಿಪತ್ತನ್ನು ನಿವೇದಿಸಿಕೊಂಡರು. ಮುನಿ ಆ ಹಳ್ಳಿಗರಲ್ಲಿ ಬುದ್ಧಿವಂತರಾದವರನ್ನು ಹತ್ತಿರ ಕರೆದು, ಅವರ ಮೂಲಕ ದೊರೆಗೊಂದು ವಿಚಾರ ಹೇಳಿ ಕಳಿಸಿದನು. "ಮಹಾಸ್ವಾಮಿಗಳೆ, ಹುರಿ ದಪ್ಪಗಿರಬೇಕೋ ಸಣ್ಣಗಿರಬೇಕೋ ಹಳ್ಳಿಗರಿಗೆ ಗೊತ್ತಾಗುತ್ತಿಲ್ಲ. ಒಂದು ಗೇಣು ಹಳೆಯ ತುಂಡನ್ನು ಕಳಿಸಿಕೊಟ್ಟರೆ, ಅದರಂತೆಯೇ ಹೊಸೆದು ಕೊಡುತ್ತಾರೆ." ಮರಳಿನ ಹಗ್ಗ ತನ್ನಲ್ಲಿಲ್ಲವೆಂದು ದೊರೆ ಉತ್ತರ ಕೊಟ್ಟದ್ದಾದರೆ "ಮಹಾಪ್ರಭು, ತಮ್ಮಂಥವರೇ ಮರಳಿನಿಂದ ಹಗ್ಗ ಹೊಸೆಯಲಾಗದಿದ್ದರೆ ಹಳ್ಳಿಯ ಗಮಾರರಿಂದ ಹೇಗೆ ಸಾಧ್ಯವಿದೆ?" ಎಂದು ಪ್ರತ್ಯುತ್ತರ ಕೊಡಬೇಕೆಂದು ಸಂದೇಶವಾಹಕರಿಗೆ ಎಚ್ಚರಿಕೆ ನೀಡಿದ್ದನು. ಆ ಪ್ರತ್ಯುತ್ತರದಿಂದ ದೊರೆ ಸಮಾಧಾನಗೊಂಡು ಮುನಿಯ ಜಾಣ್ಮೆಯನ್ನು ಕೊಂಡಾಡಿದನಂತೆ.

ಬರ್ಮೀಯ ಕಾನೂನು ಕಥೆಗಳೆಲ್ಲ ಬೌದ್ಧಮತ ಬರ್ಮಾದೇಶದಲ್ಲಿ ಕಾಲಿಡುವುದಕ್ಕೆ ಮುಂಚೆಯೇ (೧೦೫೭) ಚಾಲ್ತಿಯಲ್ಲಿದ್ದುವೆಂದು ಅಲ್ಲಿಯ ವಿದ್ವಾಂಸರ ಅಭಿಪ್ರಾಯ ವಾಗಿದೆ. ಅವು ಸಾಮಾನ್ಯವಾಗಿ ಗ್ರಾಮಪಂಚಾಯಿತಿಯ ಅಧಿಕಾರಿಗಳ ಉಪಯೋಗಕ್ಕೆ ವಿಧಾಸಲಾಗಿದ್ದುವೇ ಹೊರತು, ಸುಶಿಕ್ಷಿತ ನ್ಯಾಯಾಧೀಶರಿಗಲ್ಲ. ಆದರೆ ಸಂದೇಹವೊದಗಿ ದಾಗ ನ್ಯಾಯಾಧೀಶರು ಆ ಕಡೆಗೆ ಲಕ್ಷ್ಯ ಹರಿಸಿದ್ದುಂಟು. ಜನಪದ ಕಥೆಗಳಲ್ಲಿ ಕಾಣುವ ಆಹ್ಲಾದಕರವೂ ಲಾಘವವೂ ಹಾಗೂ ಸ್ವಚ್ಛಂದಪೂರ್ಣವೂ ಆದ ವಾತಾವರಣ ಈ ಕಾನೂನು ಕಥೆಗಳಲ್ಲಿಯೂ ಇದೆ. ಕಥೆಗಳಲ್ಲಿ ಬರುವ ಘಟನೆಗಳು ವಾಸ್ತವವಾಗಿ ನಡೆದು ವೆಂದೂ, ಇಲ್ಲವೆ ನಡೆದ ಸಂಗತಿಗಳ ಆಧಾರದ ಮೇಲೆ ರಚನೆಗೊಂಡುವೆಂದೂ ನಂಬ

ಕಾರರು ಹೇಳುತ್ತಾರೆ. ಆ ಕಥೆಗಳಿಂದ ಚಿಮ್ಮುವ ಕಾನೂನಿನ ಮೂಲಭೂತಾಂಶಗಳು ಆಧುನಿಕ ಸಮಾಜಕ್ಕೆ ಹೊರತಾಗಿಲ್ಲವೆಂಬುದು ಗಮನಿಸಬೇಕಾದ ವಿಚಾರ. ಅವುಗಳ ಸ್ವರೂಪ ನಿರ್ಣಯಕ್ಕೆ ಅನುವಾಗಲೆಂದು ಕೆಳಗೆ ಮೂರು ಕಥೆಗಳನ್ನು ವಿವರಿಸಿದೆ :

(೧) ಒಂದಾನೊಂದು ಕಾಲದಲ್ಲಿ ಒಬ್ಬ ದೊರೆ ಮಾನವರನ್ನೂ ಪ್ರಾಣಿಗಳನ್ನೂ ಏಕ ಪ್ರಕಾರವಾಗಿ ಆಳುತ್ತಿದ್ದನು. ಅವನು ನ್ಯಾಯಪಕ್ಷಪಾತಿ. ಅವನ ಅರಮನೆಯ ಮುಂದೆ ದೊಡ್ಡದೊಂದು ನಗಾರಿಯಿತ್ತು. 'ನನ್ನ ನ್ಯಾಯಾಧೀಶರಿಂದ ಸರಿಯಾದ ತೀರ್ಪು ದೊರೆಯದಿದ್ದಾಗ, ಈ ನಗಾರಿಯನ್ನು ಬಡಿದದ್ದಾದರೆ ನಾನದನ್ನು ಪುನರ್ವಿಮರ್ಶಿಸುತ್ತೇನೆ' ಎಂಬ ರಾಜಶಾಸನ ಅದರ ಮೇಲೆ ಅಂಕಿತಗೊಂಡಿತ್ತು. ಇದರಿಂದಾಗಿ ಸರ್ವರಿಗೂ ನ್ಯಾಯ ದೊರಕುತ್ತಿತ್ತು. ಒಂದು ದಿನ ಬೆಳಗ್ಗೆ ದೊರೆ ದರ್ಬಾರಿನಲ್ಲಿದ್ದಾಗ ಹಿರಿಯ ರಾಣಿ ಗಂಡು ಮಗನನ್ನು ಹಡೆದುದಾಗಿ ಸುದ್ದಿ ಬಂತು. "ಈ ಮಗು ನನ್ನ ಬಳಿಕ ದೊರೆಯಾಗುತ್ತಾನೆ" ಎಂದು ರಾಜ ಹರ್ಷದಿಂದ ಘೋಷಿಸಿದನು. ಮತ್ತೆ ಕೆಲವು ನಿಮಿಷಗಳಲ್ಲಿ ಕಿರಿಯ ರಾಣಿ ಗಂಡುಮಗು ಹೆತ್ತಳೆಂದು ಸಮಾಚಾರ ಬಂತು. "ಅವನು ರಾಜಕುಮಾರನಾಗುತ್ತಾನೆ" ಎಂದು ದೊರೆ ಪ್ರಕಟಿಸಿದನು. ತಂದೆ ಇಬ್ಬರು ಮಕ್ಕಳಿಗೂ ಉತ್ತಮ ಶಿಕ್ಷಣ ಏರ್ಪಡಿಸಿದನು. ಅವರಿಬ್ಬರಿಗೂ ಹದಿನೆಂಟು ವರ್ಷವಾದಾಗ ತಾನು ಸಿಂಹಾಸನ ತ್ಯಾಗ ಮಾಡುವುದಾಗಿಯೂ, ಹಿರಿಯ ಮಗನಿಗೆ ರಾಜ್ಯಾಭಿಷೇಕವನ್ನು ಕಿರಿಯ ಮಗನಿಗೆ ಯೌವರಾಜ್ಯಾಭಿಷೇಕವನ್ನು ನೆರವೇರಿಸುವುದಾಗಿಯೂ ರಾಜಪ್ರಕಟಣೆ ಹೊರಬಿತ್ತು. ಇಬ್ಬರು ಮಕ್ಕಳೂ ಸ್ವರ್ಣರಥದಲ್ಲಿ ಕುಳಿತು ಚಿನ್ನದ ಅರಮನೆಗೆ ಹೋಗುವಾಗ, ಪ್ರಖರವಾಗಿ ಉರಿಯುತ್ತಿದ್ದ ಸೂರ್ಯನ ಕಡೆಗೆ ಬಾಣವನ್ನು ಗುರಿಯಿಟ್ಟು "ನನ್ನ ತಂದೆಗಿಂತ ಈ ಸೂರ್ಯ ಹೆಚ್ಚು ಶಕ್ತಿಶಾಲಿಯೆ ?" ಎಂದು ಪ್ರಶ್ನಿಸಿದನು. "ಮಹಾಪ್ರಭು, ಈ ಸೂರ್ಯನೇ ನಿಮ್ಮ ಪೂರ್ವಜ. ಬಾಣ ತಡೆಯಿರಿ. ಅವನಿಗೆ ನಮಸ್ಕಾರ ಮಾಡಿ" ಎಂದು ಸೂತ ಸಲಹೆ ನೀಡಿದನು. ಅವನು ಅದೇ ರೀತಿ ಮಾಡಿದನು. ಕೆಲವು ನಿಮಿಷಗಳನಂತರ ಒಂದು ಕೊಕ್ಕರೆ ಮೇಲೆ ಹಾರಿ ಹೋಗುತ್ತಿತ್ತು. ಅದು ರಾಜಕುಮಾರರಿಗಿಂತ ದೊಡ್ಡದಲ್ಲ, ಮೇಲೆ ಹಾರಲು ಅದಕ್ಕೆಷ್ಟು ಸೊಕ್ಕು ಎಂದು ಕಿರಿಯವನು ಬಾಣವನ್ನೆಸೆದು ಕೊಂದನು. ಮುಂಡೆಯಾದ ಹೆಣ್ಣು ಕೊಕ್ಕರೆ ನ್ಯಾಯಾಧಿಪತಿಗಳ ಮುಂದೆ ದೂರು ಸಲ್ಲಿಸಿತು. ಅವರು ರಾಜಕುಮಾರನ ಮೇಲೆ ಅಪರಾಧ ಹೊರಿಸಲು ಹೆದರಿದರು. ಹೆಣ್ಣು ಕೊಕ್ಕರೆ ದುಃಖಾರ್ತತೆಯಿಂದ ನಗಾರಿ ಬಾರಿಸಿತು. ದೊರೆ ದೂರನ್ನು ವಿಚಾರಿಸಿ, ಯಾವ ರೀತಿಯ ಪರಿಹಾರ ಬೇಕೆಂದು ಕೇಳಿದನು. "ತನ್ನ ಪತಿಯ ಹಂತಕ ನೆಲದ ಮೇಲೆ ರಕ್ತದ ಮಡುವಿನಲ್ಲಿ ಮುಳುಗಬೇಕು" ಎಂದು ಕೊಕ್ಕರೆ ಪಡಿನುಡಿಯಿತು. ಮಕ್ಕಳಿಗೊದಗಿದ ದುರ್ವಿಧಿಗಾಗಿ ವ್ಯಾಕುಲಚಿತ್ತನಾದರೂ ದೊರೆ ಧೃತಿಗೆಡದೆ ಅಂತೆಯೇ ತೀರ್ಪು ನೀಡಿದನು. "ಪ್ರಭೂ, ನನ್ನ ತಮ್ಮ ತಪ್ಪಿತಸ್ಥನಾದರೆ ನಾನೂ ತಪ್ಪಿತಸ್ಥನೆ. ಸೂರ್ಯನ ಕಡೆಗೆ ಬಾಣ ಗುರಿಯಿಟ್ಟು ತಪ್ಪು ದಾರಿ ತೋರಿಸಿದ್ದು ನಾನು" ಆದ್ದರಿಂದ ನನ್ನನ್ನೂ ಗಲ್ಲಿಗೇರಿಸಬೇಕು ಎಂದು ಹಿರಿಯಮಗ ನುಡಿದನು.

ಸೂರ್ಯಾಸ್ತ ಸನ್ನಿಹಿತವಾದಾಗ ಊರ ಹೊರಗೆ ಇಬ್ಬರು ದೊರೆ ಮಕ್ಕಳನ್ನು ಕೊಲ್ಲುವ ಸಲ್ಲುವಾಗಿ ಕಟುಕರು ಕತ್ತಿ ಹಿಡಿದು ನಿಂತಿದ್ದರು. ತಮ್ಮ ಮಕ್ಕಳನ್ನು ಕೊಲ್ಲಬಾರದೆಂದೂ, ಅವರ ಉಪಕಾರಕ್ಕೆ ಪ್ರತಿಯಾಗಿ ತಮ್ಮ ಆಭರಣಗಳನ್ನೆಲ್ಲ ಕೊಡಲು ಸಿದ್ಧವೆಂದೂ ಇಬ್ಬರು ರಾಣಿಯರು ಕಟುಕರಿಗೆ ಆಸೆ ತೋರಿಸಿದರು. ಅವರು ಆ ಆಸೆಗೆ ಮರುಳಾಗದೆ ಕತ್ತಿ ಮೇಲೆತ್ತಿದಾಗ ಸುತ್ತಮುತ್ತ ನಿಂತಿದ್ದ ಸಹಸ್ರ ಸಹಸ್ರ ಪ್ರಜೆಗಳು ಮುನ್ನುಗ್ಗಿ ಕಟುಕರಿಂದ ಕತ್ತಿಗಳನ್ನು ಕಸಿದುಕೊಂಡು "ದೊರೆ ನಮ್ಮನ್ನೂ ಕೊಲ್ಲಲಿ" ಎಂದು ಭಾವೋದ್ರೇಕದಿಂದ ನುಡಿದರು. ಕಟುಕರನ್ನು ಕತ್ತಿಗಳಿಂದ ತಿವಿದರು. ಅವರ ಮೈಯಿಂದ ರಕ್ತ ಚಿಮ್ಮಿ, ದೊರೆ ಮಕ್ಕಳು ರಕ್ತಸಿಕ್ತರಾದರು. ನೆಲದಮೇಲೆ ರಕ್ತಸಿಕ್ತರಾಗಿ ಬಿದ್ದಿದ್ದ ದೊರೆಮಕ್ಕಳನ್ನು ನೋಡಿ ಕೊಕ್ಕರೆಗೆ ಸಮಾಧಾನವಾಯಿತು.

(೨) ಒಬ್ಬ ಹಣವಂತ. ಅವನಿಗೊಬ್ಬಳೇ ಮಗಳು. ಮಗಳು ತುಂಬ ಸುಂದರಿ. ಅವಳನ್ನು ನೋಡಿದವರೆಲ್ಲ ಹುಚ್ಚರಾದರು. ದೊರೆ ಮಕ್ಕಳು, ಸಿರಿವಂತರ ಮಕ್ಕಳು ಅವಳನ್ನು ಪಡೆಯುವ ಸಲುವಾಗಿ ಸಾಲುಸಾಲಾಗಿ ಅವನ ಮನೆಯ ಮುಂದೆ ನಿಂತರು. "ನನ್ನ ಮಗಳಿನ್ನೂ ಚಿಕ್ಕವಳು. ಈಗಲೇ ಮದುವೆಮಾಡುವುದಿಲ್ಲ" ಎಂದು ಹಣವಂತ ಎಲ್ಲರಿಗೂ ಹೇಳಿದನು. ಅವರಲ್ಲಿ ಮೂವರು ಮಾತ್ರ "ಸ್ವಾಮಿ, ನಾವು ನಿಮ್ಮ ಬಳಿ ನಿಂತು ಸೇವೆ ಸಲ್ಲಿಸುತ್ತೇವೆ. ಆಗಾಗ್ಗೆ ಸುಂದರಿಯ ಮುಖಾರವಿಂದವನ್ನು ನೋಡಿ ಆನಂದಪಡುತ್ತೇವೆ. ಮೂರುವರ್ಷದ ನಂತರ ನಿಮ್ಮ ಮಗಳು ನಮ್ಮಲ್ಲಿ ಯಾರನ್ನಾದರೂ ಮದುವೆಯಾಗಬಹುದು" ಎಂದರು. ಸಿರಿವಂತ ಅವರನ್ನು ತನ್ನ ಬಳಿಯಿರಿಸಿಕೊಂಡ. ಮೂರು ವರ್ಷದ ಕೊನೆ ಬಳಿಸಾರುತ್ತಿದ್ದಂತೆ, ಹುಡುಗಿ ತೀರಿಕೊಂಡಳು. ಪ್ರಣಯಾರ್ಥಿಗಳು ಹತಾಶರಾದರು.

"ಹಿರಿಯರೆ, ನಿಮ್ಮ ಮಗಳ ಮೇಲಣ ಪ್ರೇಮದಿಂದ ಈ ಮೂರು ವರ್ಷ ನಿಮ್ಮಲ್ಲಿ ಸೇವೆಮಾಡಿದೆ. ನಾನಿನಳ ಶವವನ್ನು ಮಣ್ಣುಮಾಡುವ ಅವಕಾಶ ಕೊಡಿ" ಎಂದು ಅವರಲ್ಲೊಬ್ಬ ಸಿರಿವಂತನಿಂದ ಹಕ್ಕು ಪಡೆದು, ಮಣ್ಣು ಮಾಡಿ, ಈ ಲೋಕದ ಹಂಗೇ ಬೇಡವೆಂದು ಬೈರಾಗಿಯಂತೆ ಪರ್ಯಟನಕ್ಕಣಿಯಾದನು. "ನಾನೂ ನಿಮ್ಮನ್ನು ನಿಷ್ಠೆಯಿಂದ ಸೇವಿಸಿದ್ದೇನೆ. ನಿಮ್ಮ ಮಗಳ ಎಲುಬಿನ ಹಾರವನ್ನು ಅವಳ ನೆನಪಿಗಾಗಿ ನನ್ನ ಕೊರಳಲ್ಲಿ ತೊಟ್ಟುಕೊಳ್ಳಲು ಅನುಮತಿ ನೀಡಿ" ಎಂದು ಇನ್ನೊಬ್ಬ ಸಿರಿವಂತನಲ್ಲಿ ಬಿನ್ನವಿಸಿಕೊಂಡನು. "ನಾನು ನಿಮ್ಮ ಮಗಳ ಸಮಾಧಿಯನ್ನು ಕಾಯಲು ಸಮ್ಮತಿ ಕೊಡಿ" ಎಂದು ಅದೇ ರೀತಿ ಮೂರನೆಯವನು ತನ್ನ ಹಂಬಲ ತೋಡಿಕೊಂಡನು. ಆ ಮೂವರು ತರುಣರ ಬೇಡಿಕೆಗಳೆಲ್ಲ ಸಂದುವು.

ಕಾಲ ಸರಿಯಿತು. ಪರ್ಯಟನ ಕಾಲದಲ್ಲಿ ಮೊದಲನೆಯ ತರುಣನಿಗೊಬ್ಬ ರಸತಜ್ಞ ಗೆಳೆಯನಾದ. "ಮಿತ್ರನೆ, ಕಾವಿ ನಿನ್ನ ಉಡುಪು. ಆದರೂ ಆಗಾಗ್ಗೆ ಕಣ್ಣೀರು ಸುರಿಸುತ್ತೀಯೆ. ನೀನು ತೊಂದರೆಯಲ್ಲಿದ್ದರೆ ಹೇಳು. ನಾನು ಸಹಾಯ ಮಾಡುತ್ತೇನೆ" ಎಂದು ಆ ರಸತಂತ್ರಿ ಕೇಳಿದನು. "ನಾನು ಪ್ರೀತಿಸಿದ್ದ ಹೆಣ್ಣು ತೀರಿಕೊಂಡಳು. ಅವಳಿಗಾಗಿ

ನನ್ನನೆ ಜೀಯುತ್ತಿದೆ" ಎಂದು ಆ ತರುಣ ನಿವೇದಿಸಿಕೊಂಡನು. "ಇಗೋ ಇದು ಮಂತ್ರಜಲ. ಹುಡುಗಿಯ ಎಲುಬನ್ನು ಸಮಾಧಿಯ ಮೇಲಿಟ್ಟು ಈ ನೀರನ್ನು ಪ್ರೋಕ್ಷಿಸು. ಅವಳು ಸಮಾಧಿಯಿಂದ ಹೊರಗೆ ಬರುತ್ತಾಳೆ" ಎಂದು ರಸತಂತ್ರಿ ಮಂತ್ರಜಲವನ್ನವನಿಗೆ ಕೊಟ್ಟನು. ಪಾತ್ರೆಯನ್ನು ಜೋಪಾನವಾಗಿಟ್ಟುಕೊಂಡು, ರಸತಂತ್ರಿಗೆ ಧನ್ಯವಾದ ಹೇಳಿ, ಆ ತರುಣ ಶ್ರೀಮಂತನ ಬಳಿಗೆ ಬಂದು "ನಿಮ್ಮ ಮಗಳ ಎಲುಬುಗಳೆಲ್ಲಿ? ಅವಳ ಸಮಾಧಿಯ ಜಾಗ ತೋರಿಸಿ" ಎಂದು ನುಡಿದನು. "ಮೂಳೆ ದ್ವಿತೀಯ ತರುಣನ ಕೊರಳಲ್ಲಿವೆ. ಮೂರನೆಯವನು ಅವಳ ಸಮಾಧಿ ಕಾದುಕೊಂಡಿದ್ದಾನೆ" ಎಂದು ಸಿರಿವಂತ ವಿವರಿಸಿದನು. ಅನಂತರ ಮೊದಲನೆಯ ತರುಣ, ಎರಡನೆಯವನನ್ನು ಕರೆಸಿಕೊಂಡು, ಸಿರಿವಂತನೊಡನೆ ಸಮಾಧಿಯ ಬಳಿ ಹೋದನು. ಸಮಾಧಿಯ ಮೇಲೆ ಮೂಳೆಯನ್ನು ಇಟ್ಟು, ಮಂತ್ರಜಲವನ್ನು ಚಿಮುಕಿಸಿದ ಕೂಡಲೇ ತರುಣಿ ನಗುನಗುತ್ತ ಮೇಲೆದ್ದು ನಿಂತಳು.

"ಮಾನ್ಯರೆ, ನಿಮ್ಮ ಮಗಳನ್ನು ಮದುವೆಯಾಗುವ ಹಕ್ಕು ನನಗೊಬ್ಬನಿಗೆ ಮಾತ್ರ ಸಲ್ಲುತ್ತದೆ. ನಾನವಳನ್ನು ತಂದೆಯಂತೆ ಬದುಕಿಸಿದ್ದೇನೆ" ಎಂದು ಮೊದಲನೆಯವನು ನುಡಿದನು. "ತಾಯಿ ಹಲವಾರು ತಿಂಗಳು ತನ್ನ ಬಸಿರಲ್ಲಿ ಮಗುವನ್ನು ಬೆಳೆಸುವಂತೆ, ಅವಳ ಎಲುಬುಗಳನ್ನು ರಕ್ಷಿಸಿದ್ದೇನೆ. ನಾನವನ್ನು ರಕ್ಷಿಸದಿದ್ದಲ್ಲಿ ಮಂತ್ರಜಲವಿದ್ದರೂ ಅವಳನ್ನು ಸಜೀವಗೊಳಿಸಲಾಗುತ್ತಿರಲಿಲ್ಲ." ಎಂದು ಎರಡನೆಯವನು ತನ್ನ ಹಕ್ಕನ್ನೆತ್ತಿ ತೋರಿಸಿದನು. "ನಾನು ಸಮಾಧಿಯ ಜಾಗವನ್ನು ರಕ್ಷಿಸದಿದ್ದರೆ ಮೂಳೆ ಮಂತ್ರಜಲಗಳು ಪ್ರಯೋಜನಕ್ಕೆ ಬರುತ್ತಿರಲಿಲ್ಲ. ಅವರಿಬ್ಬರೂ ತಂದೆ ತಾಯಿಯರಂತೆ ವರ್ತಿಸಿದುದಾಗಿ ಹೇಳಿಕೊಂಡಿದ್ದಾರೆ. ಮಲಗಿರುವ ಮಡದಿಯನ್ನು ಕಾಯ್ದುಕೊಳ್ಳುವ ಗಂಡನಂತೆ ನಾನಿಲ್ಲಿ ಕಾವಲುಕೂತದ್ದರಿಂದ ನಾನೇ ಇವಳಿಗೆ ಯೋಗ್ಯ ವರ" ಎಂದು ಮೂರನೆಯಾತ ತನ್ನ ನಿಲುವನ್ನು ಸ್ಪಷ್ಟಪಡಿಸಿದನು. "ಮಿತ್ರರೆ, ನನ್ನ ಮಗಳನ್ನು ಬದುಕಿಸಿದ್ದಕ್ಕಾಗಿ ನಾನು ನಿಮಗೆ ಋಣಿ. ನಿಮ್ಮಲ್ಲಿ ಯಾರನ್ನು ವರನನ್ನಾಗಿ ಆಯ್ಕೆಮಾಡಿಕೊಳ್ಳುವುದೋ ನನಗೆ ತಿಳಿಯದು. ನೀವು ಮೂವರೂ ನನಗೆ ಆತ್ಮೀಯರು. ಕಾನೂನು ಬಲ್ಲ [illegible] ಬಳಿ ಹೋಗೋಣ. ಅವರ ತೀರ್ಪಿನಂತೆ ನಾವೆಲ್ಲರೂ ನಡೆದುಕೊಳ್ಳೋಣ" ಎಂದು ಸಿರಿವಂತ ಸಲಹೆಮಾಡಿದನು.

ಅವರೆಲ್ಲರೂ ಕಾನೂನು ವೇತ್ತರ ಬಳಿ ಹೋಗಿ ತಂತಮ್ಮ ವಾದಗಳನ್ನು ಮಂಡಿಸಿದರು. ಕೊನೆಗೆ ಆ ವೇತ್ತ ಕೊಟ್ಟ ತೀರ್ಪಿದು: "ತರುಣಿ ಬದುಕಿಕೊಳ್ಳಲು ಮೂರು ಸಂಗತಿಗಳು ಅನಿವಾರ್ಯವಾಗಿದ್ದುವು: ಒಬ್ಬೊಬ್ಬರಿಂದ ಆ ಒಂದೊಂದು ಸಂಗತಿ ಪ್ರಾಪ್ತಿಕೆಯಾದ್ದರಿಂದ ಮೂವರ ಶ್ರಮವೂ ಸಮಸಮನಾಗಿದೆ. ಅವಳು ಸಾಯುವ ಮುನ್ನ ನೀವು ಮೂವರೂ ಸಿರಿವಂತನಿಗೆ ನಿಷ್ಠೆಯಿಂದ ಕೈಂಕರ್ಯವೆಸಗಿದಿರಿ. ಅಲ್ಲಿಯೂ ನಿಮ್ಮ ಕೊಡುಗೆ ಸಮನಾಗಿದೆ. ಅವಳು ಸತ್ತನಂತರ ಅವಳನ್ನು ಯಾರು ಹೆಚ್ಚು ಪ್ರೀತಿಸಿದಿರಿ ಎನ್ನುವ ವಿಷಯ ಈಗ ಮುಖ್ಯ. ಮೊದಲನೆಯ ತರುಣ ಆತ್ಮಸಿದ್ಧಿಗಾಗಿ ಸಾಧು ಜೀವನವನ್ನು

ಸ್ವೀಕರಿಸಿ, ಪರ್ಯಟನಕ್ಕೆ ಹೊರಟ. ಎರಡನೆಯವನು ಮೂಳೆಯ ಸರವನ್ನು ಕೊರಳಿಗೆ ಹಾಕಿಕೊಂಡು ಜನರ ಅಪಹಾಸ್ಯಕ್ಕೆ ಗುರಿಯಾದ, ನಿಜ. ಆದರೆ ಅವನು ತಂದೆಯ ಮನೆಯಲ್ಲಿ ಸುಖವಾಗಿದ್ದ. ಮೂರನೆಯವನು ಚಂಡಾಲನಂತೆ ಸ್ಮಶಾನವನ್ನು ಕಾಯ್ದ; ಬಹಿಷ್ಕೃತನಾಗಿ ಸಾಮಾಜಿಕ ಸ್ಥಾನವನ್ನು ಕಳೆದುಕೊಂಡ. ಅವನ ಪ್ರೀತಿಯೇ ಹೆಚ್ಚಿನದು. ಆದ್ದರಿಂದ ಈ ಹೆಣ್ಣು ಅವನಿಗೆ ಸಲ್ಲಬೇಕು."

(೩) ಒಂದು ಹಳ್ಳಿಯಲ್ಲಿ ನಾಲ್ವರು ತರುಣರಿದ್ದರು. ವಿಚಿತ್ರವಾದ ಮತ್ತು ಅಸಾಧ್ಯವಾದ ಕತೆಗಳನ್ನು ಕಟ್ಟುವುದೇ ಅವರ ಕೆಲಸ. ಒಂದು ದಿನ ಅವರು ಊರ ಹೊರಗಿನ ವಿಶ್ರಾಂತಿಗೃಹದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಪ್ರಯಾಣಿಕನನ್ನು ಕಂಡರು. ಅವನು ಬೆಲೆಯಾದ ಉಡುಪು ಧರಿಸಿದ್ದ. ಹೇಗಾದರೂ ಮಾಡಿ ಆ ಉಡುಪನ್ನು ಕಸಿದುಕೊಳ್ಳಬೇಕೆಂದು ಅವರು ತೀರ್ಮಾನಿಸಿಕೊಂಡರು. ಅವನನ್ನು ಮಾತಿಗೆಳೆದರು. "ಈಗೊಂದು ಪಂದ್ಯ ಕಟ್ಟೋಣ. ನಾವು ನಮ್ಮ ಅದ್ಭುತ ಸಾಹಸವನ್ನು ವರ್ಣಿಸೋಣ. ಕಥೆಯ ಸತ್ಯವನ್ನು ಸಂದೇಹಿಸುವ ವ್ಯಕ್ತಿ ಕತೆಗಾರನಿಗೆ ಗುಲಾಮನಾಗಬೇಕು" ಎಂದು ಅವರೆಲ್ಲರೂ ಸೂಚಿಸಿದರು. ಅವನ ಸಮ್ಮತಿಯಿಂದ ಪ್ರಯಾಣಿಕ ಶಿಷ್ಯನಾಗಬೇಕೆಂದು ನಾಲ್ವರೂ ಯೋಚಿಸಿಕೊಂಡರು. ಅವರಿಗೆ ಬೇಕಾಗಿದ್ದುದು ಬಟ್ಟೆ. ಗುಲಾಮ ಒಡೆಯನ ಆಸ್ತಿಯಾದ್ದರಿಂದ, ಅವನ ಮೈಮೇಲಿನ ಬಟ್ಟೆಗಳೂ ತಮ್ಮ ವಶಕ್ಕೆ ಬರುತ್ತವೆಂದು ಅವರು ನಿರ್ಧರಿಸಿಕೊಂಡರು.

ಮೊದಲನೆಯವನು ತನ್ನ ಕತೆ ಪ್ರಾರಂಭಿಸಿದ. "ನಾನು ತಾಯಿಯ ಗರ್ಭದಲ್ಲಿದ್ದಾಗ ಮನೆಯ ಮುಂದಿದ್ದ ಮರದಿಂದ ಪ್ಲಮ್ ಹಣ್ಣುಗಳನ್ನು ಕಿತ್ತುಕೊಡುವಂತೆ ನನ್ನ ತಾಯಿ ತಂದೆಯ ಮುಂದೆ ಬಯಕೆ ವ್ಯಕ್ತಪಡಿಸಿದಳು. ಮರ ಎತ್ತರವಾಗಿದ್ದುದರಿಂದ ಆ ಕೆಲಸ ತನ್ನಿಂದ ಸಾಧ್ಯವಿಲ್ಲವೆಂದು ತಂದೆ ಹೇಳಿಬಿಟ್ಟ. ನನ್ನ ಅಣ್ಣಂದಿರೂ ಅದೇ ಉತ್ತರ ಹೇಳಿಬಿಟ್ಟರು. ನರಳಿಕೊಂಡಿದ್ದ ತಾಯಿಯ ಸಂಕಟವನ್ನು ನಾನು ತಾಳಲಾರದೆ ಹೋದೆ. ನಾನು ಮೆಲ್ಲನೆ ಅವಳ ಬಸಿರಿಂದ ಜಾರಿ, ಮರ ಹತ್ತಿ, ಹಣ್ಣು ಕಿತ್ತುಕೊಂಡುಬಂದು, ಅಡಿಗೆ ಮನೆಯಲ್ಲಿಟ್ಟು, ಮತ್ತೆ ತಾಯಿಯ ಗರ್ಭಕೋಶವನ್ನು ಹೊಕ್ಕೆ. ಅವು ಹೇಗೆ ಅಡುಗೆಮನೆಗೆ ಬಂದುವೆಂಬುದರ ಬಗ್ಗೆ ಮನೆಯವರ ಊಹಾಶಕ್ತಿ ವಿಫಲಗೊಂಡಿತು. ತಾಯಿ ತಾನೂ ಆ ಹಣ್ಣು ತಿಂದು, ಮನೆಯವರಿಗೆ, ನೆರೆಹೊರೆಯವರಿಗೆ ಹಲವು ಹಣ್ಣುಗಳನ್ನು ಹಂಚಿದರೂ, ರಾಶಿ ಕರಗಲಿಲ್ಲ. ಅವುಗಳನ್ನು ಬಾಗಿಲ ಮುಂದೆ ಸುರಿಯಲಾಗಿ ಜೋಡಿಸಲು ವೇದಿಕೆಯಿಂದ ಬಾಗಿಲು ಮರೆಯಾಯಿತು." ಕಥೆ ಮುಗಿದನಂತರ ಮೆಚ್ಚುಗೆಗಾಗಿ ಎಲ್ಲರೂ ತಲೆ ಅಲ್ಲಾಡಿಸಿದರು.

ಈಗ ಎರಡನೆಯವನ ಸರದಿ: "ನಾನು ಏಳು ದಿನದ ಮಗುವಾಗಿದ್ದಾಗ ಕಾಡಿನಲ್ಲಿ ಆಟವಾಡುತ್ತಿದ್ದೆ. ಹುಣಿಸೆಮರ ಹತ್ತಿ ಹಣ್ಣು ಕಿತ್ತು ತಿಂದೆ. ಭರ್ತಿ ತಿಂದದ್ದರಿಂದ ಕಣ್ಣಿಗೆ ಮಂಪರು ಬಂದು, ಮರದ ಕೆಳಗಿಳಿಯುವುದು ಕಷ್ಟವಾಯಿತು. ಆದ್ದರಿಂದ ಹಳ್ಳಿಗೆ ಹೋಗಿ, ಏಣಿ ತಂದು, ಅದರ ಸಹಾಯದಿಂದ ಕೆಳಗಿಳಿದೆ. ಅದು ಸಿಗದಿದ್ದರೆ ನಾನು

ಮೇಲೆಯೇ ಉಳಿಯಬೇಕಾಗುತ್ತಿತ್ತು" ಕತೆ ಒಪ್ಪಿಗೆಯಾಯಿತೆಂದು ಎಲ್ಲರೂ ತಲೆ ಕುಣಿಸಿದರು.

ಮುಂದೆ ಮೂರನೆಯವ ತನ್ನ ಪ್ರವರ ಪ್ರಾರಂಭಿಸಿದ: "ನಾನು ಒಂದು ವರ್ಷದವನಾಗಿದ್ದಾಗ ಮೊಲದಂತಿದ್ದ ಪ್ರಾಣಿಯೊಂದನ್ನು ಅಟ್ಟಿಸಿಕೊಂಡು ಹೋದೆ. ಅದು ಪೊದೆಯೊಳಗೆ ನುಸುಳಿಕೊಂಡಿತು. ನಾನೂ ಪೊದೆಯೊಳಗೆ ತೆವಳಿ ನೋಡುವಾಗ ಅದು ನಿಜಕ್ಕೂ ಹುಲಿಯಾಗಿತ್ತು. ನನ್ನನ್ನು ನುಂಗಲೆಂಬಂತೆ ಆ ಪ್ರಾಣಿ ಬಾಯಿ ಹಿಗ್ಗಲಿಸಿತು. ನನಗೆ ಬೇಕಾಗಿದ್ದದ್ದು ಮೊಲವೇ ಹೊರತು ಹುಲಿಯಲ್ಲವೆಂದು ನಾನು ಪ್ರತಿಭಟಿಸಿದೆ. ನನ್ನ ಪ್ರತಿಭಟನೆಯನ್ನು ಲೆಕ್ಕಿಸದೆ ಹುಲಿ ಮೇಲೆ ಹಾಯಿತು. ನಾನು ಎಡಗೈಯಿಂದ ಮೇಲ್ದವಡೆಯನ್ನು ಹಿಡಿದು ಅಲುಗಾಡಿಸಿದ ಕೂಡಲೇ ಅದು ಎರಡು ಹೋಳಾಗಿ ಸತ್ತಿತು." ಉಳಿದ ನಾಲ್ವರಿಗೂ ಆ ಕತೆ ಕೇಳಿ ಹರ್ಷವಾಯಿತು.

ನಾಲ್ಕನೆಯವನು ತನ್ನ ಕತೆ ಬಿಚ್ಚಿದ: "ಕಳೆದ ವರ್ಷ ಮೀನು ಬೇಟೆಗೆಂದು ದೋಣಿಯಲ್ಲಿ ಹೊರಟೆ. ಒಂದು ಮೀನೂ ಸಿಗಲಿಲ್ಲ. ಇತರ ಬೆಸ್ತರನ್ನು ಕೇಳಲಾಗಿ ತಮಗೂ ಮೀನು ಸಿಗಲಿಲ್ಲವೆಂದು ತಿಳಿಸಿದರು. ನದಿಯ ನೀರಿನಡಿಯಲ್ಲಿ ಏನೋ ವಿಚಿತ್ರ ನಡೆದಿರಬೇಕೆಂದು ನಾನು ದೋಣಿಯಿಂದ ದುಮುಕಿ, ತಳ ಮುಟ್ಟಿದೆ. ಪರ್ವತಗಾತ್ರದ ಮತ್ಸ್ಯಭೂತವೊಂದು ಮೀನುಗಳನ್ನೆಲ್ಲ ಕಬಳಿಸುತ್ತಿದ್ದುದನ್ನು ಕಂಡೆ. ಮುಷ್ಟಿಯಿಂದ ಅದನ್ನು ಗುದ್ದಿ ಕೊಂದುಹಾಕಿದೆ. ನನಗೆ ಹಸಿವಾಗುತ್ತಿದ್ದುದರಿಂದ, ಅಲ್ಲಿಯೇ ಬೆಂಕಿ ಹಚ್ಚಿ, ಮೀನು ಹುರಿದು, ಕೂತೇಟಿಗೆ ಮುಗಿಸಿಬಿಟ್ಟೆ. ಅನಂತರ ನಾನು ಮೇಲೆ ಬಂದು, ದೋಣಿ ಸೇರಿದೆ." ಎಲ್ಲರೂ ಕತೆಗಾರನಿಗೆ ಶಹಭಾಸ್‌ಗಿರಿ ಕೊಟ್ಟರು.

ಕೊನೆಗೆ ಬಂತು ಪ್ರಯಾಣಿಕನ ಸೂಳು: "ಕೆಲವು ವರ್ಷಗಳ ಹಿಂದೆ ನನ್ನ ಬಳಿ ಹತ್ತಿಯ ಹೊಲವೊಂದಿತ್ತು. ಅಲ್ಲಿ ಮುಗಿಲುದ್ದದ ಹತ್ತಿಯ ಮರವೊಂದಿತ್ತು. ಅದರ ಬಣ್ಣ ಹೊಳೆಗೆಂಪು. ಎಷ್ಟೋ ವರ್ಷಗಳ ತನಕ ಅದರಲ್ಲಿ ಎಲೆಯಾಗಲಿ ಕೊಂಬೆಯಾಗಲಿ ಕಾಣಲಿಲ್ಲ. ಕೊನೆಗೆ ನಾಲ್ಕು ರೆಂಬೆಗಳು ಗೋಚರಿಸಿದುವು. ರೆಂಬೆಗಳಲ್ಲಿ ಎಲೆಗಳಿರಲಿಲ್ಲ; ಆದರೆ ಪ್ರತಿಯೊಂದರಲ್ಲಿಯೂ ಒಂದೊಂದು ಹಣ್ಣಿದ್ದುವು. ನಾಲ್ಕನ್ನು ಕಿತ್ತುಕೊಂಡು, ಚಾಕುವಿನಿಂದ ಕತ್ತರಿಸಿದಾಗ, ಒಂದೊಂದರಿಂದಲೂ ಒಬ್ಬೊಬ್ಬ ತರುಣ ಹೊರಗೆ ಜಿಗಿದ. ಅವರು ನನ್ನ ಮರದಲ್ಲಿ ಹುಟ್ಟಿದವರಾದ್ದರಿಂದ ಸಹಜವಾಗಿಯೇ ನನಗೆ ಗುಲಾಮರಾದರು. ಅವರನ್ನು ಹೊಲದ ಕೆಲಸಕ್ಕೆ ಹಾಕಿದೆ. ಅವರು ಶುದ್ಧ ಸೋಮಾರಿಗಳಾದ್ದರಿಂದ, ಕೆಲವು ವಾರಗಳಲ್ಲಿಯೇ ಓಡಿಹೋದರು. ಅಲ್ಲಿಂದೀಚೆಗೆ ಅವರನ್ನು ಹುಡುಕಿಕೊಂಡು ದೇಶವನ್ನೆಲ್ಲ ಅಲೆಯಬೇಕಾಯಿತು. ಅವರು ಈಗ ತಾನೆ ನನ್ನ ಕೈಗೆ ಸಿಕ್ಕಿಬಿದ್ದಿದ್ದಾರೆ. ತರುಣರೆ, ನಿಮಗೀಗ ಗೊತ್ತಾಗಿರಬೇಕು. ನೀವೇ ನಾನು ಹಿಂದೆ ಕಳೆದುಕೊಂಡ ಗುಲಾಮರು. ಹೊಲಕ್ಕೆ ಹೋಗೋಣ. ನನ್ನ ಹಿಂದೆ ಬನ್ನಿ."

ನಾಲ್ವರು ತರುಣರಿಗೂ ತಲೆತಗ್ಗಿಸುವಷ್ಟು ನಾಚಿಕೆಯಾಯಿತು. ಏನು ಹೇಳಿದರೂ ಕಷ್ಟ. ಕತೆ ನಿಜವೆಂದು ನಂಬಿಕೊಂಡರೆ, ಪ್ರಯಾಣಿಕ ಹಿಂದೆ ಕಳೆದುಕೊಂಡ ಗುಲಾಮರೇ

ತಾವೆಂದು ಒಪ್ಪಿಕೊಂಡಂತಾಗುತ್ತದೆ; ಅದು ಸುಳ್ಳೆಂದು ಹೇಳಿದರೆ ಪಂದ್ಯದ ಪ್ರಕಾರವೂ ಅವನಿಗೆ ಗುಲಾಮರಾಗಬೇಕಾಗುತ್ತದೆ. ಕತೆಯ ಬಗ್ಗೆ ಅವರ ಅಭಿಪ್ರಾಯವೇನೆಂದು ಪ್ರಯಾಣಿಕ ಮೂರುಸಾರಿ ಅವರನ್ನು ಪ್ರಶ್ನಿಸಿದ. ಅವರು ಉಸಿರೆತ್ತಲಿಲ್ಲ. ತಾನು ಗೆದ್ದುದಾಗಿ ಪ್ರಯಾಣಿಕ ಘೋಷಿಸಿದ. ಆದರೂ ಆ ತರುಣರು ಸೋಲನ್ನೊಪ್ಪಿಕೊಳ್ಳದೆ, ಊರ ಗೌಡನ ಮುಂದೆ ದೂರು ಹೊತ್ತರು. "ಅಸಾಧ್ಯವಾದ ಘಟನೆಗಳನ್ನವಲಂಬಿಸಿ ಪಂದ್ಯ ನಡೆದಿದೆ. ಅದು ಮೂರ್ಖರ ಪಂದ್ಯ. ಕಾನೂನಿನ ಪ್ರಕಾರ ಅದು ನಿಲ್ಲುವುದಿಲ್ಲ" ಎಂದು ಗೌಡ ತೀರ್ಪುಕೊಟ್ಟನು. ಪ್ರಯಾಣಿಕ ಆ ತೀರ್ಪನ್ನೊಪ್ಪಿಕೊಳ್ಳದೆ ಕಾನೂನು ದೇವತೆಯ ಸಮ್ಮುಖದಲ್ಲಿ ಮೊಕದ್ದಮೆ ಹೂಡಿದ ಅವಳು ತೀರ್ಪು ಕೊಟ್ಟದ್ದು ಹೀಗೆ:

"ಪ್ರಯಾಣಿಕನ ಹಾಗೂ ನಾಲ್ವರು ತರುಣರ ಕತೆಗಳು ದೋಷಯುಕ್ತವಾಗಿರುವುದು ನಿಜ. ಜತೆಗೆ ಈ ಹುಸಿಗತೆಗಳ ಹೇಳೋಣವೇ ಒಂದು ಆಟವಾಗಿದೆ. ಇದೊಂದು ಚದುರಂಗದಾಟ ಇದ್ದ ಹಾಗೆ. ಆ ಆಟ ಎಂತು ಕಾನೂನುಬಾಹಿರವಲ್ಲವೋ ಹುಸಿಗತೆಯಾಟವೂ ಕಾನೂನುಬಾಹಿರವಲ್ಲ. ಅಂತೆಯೇ ಪಂದ್ಯ ಕಟ್ಟುವುದೂ ಅಪರಾಧವಲ್ಲ. ಆದರೆ ಕುಳಿತ ಜಾಗದಲ್ಲಿ ಸೋತವನು ಏನು ಪಣತೊಡಬಹುದೋ ಅಷ್ಟಕ್ಕೆ ಮಾತ್ರ ಗೆದ್ದವನು ಅರ್ಹ. ಪಂದ್ಯದ ಷರತ್ತುಗಳ ಪ್ರಕಾರ ಆ ಯುವಕರು ಕುಳಿತೆಡೆ ಏನು ಸೇವೆ ಮತ್ತು ಆಸ್ತಿಗಳನ್ನು ಸಲ್ಲಿಸಬಹುದೋ ಅಷ್ಟೇ ಪ್ರಯಾಣಿಕನಿಗೆ ಸಲ್ಲತಕ್ಕದ್ದು. ಆಟದ ಸಮಯದಲ್ಲಿ ಅವರ ಮೈಮೇಲಿರಬಹುದಾದ ಬಟ್ಟೆ ಮತ್ತು ಹಣವನ್ನು ಮಾತ್ರ ಅವನು ಪಡೆಯಲರ್ಹ."[1]

ಈ ಕಥೆಗಳನ್ನೋದಿದನಂತರ ಇವು ಸಹ ಕಾಲ್ಪನಿಕ ಕಥೆಗಳೇನೋ ಎಂಬ ಭ್ರಮೆ ಮೂಡದಿರದು. ಇಲ್ಲಿಯೂ ಅಮಾನುಷ ಘಟನೆಗಳು ನಡೆಯುತ್ತವೆ. ಮಾಟ ಮಂತ್ರಗಳುಂಟು; ಸತ್ತವರ ಎಲುಬಿಗೆ ಜೀವವುಂಟು. ಪ್ರಾಣಿ ಪಕ್ಷಿಗಳೂ ಕಥೆಯಲ್ಲಿ ಪಾತ್ರವಹಿಸುತ್ತವೆ. ಒಂದೆರಡು ಆಶಯಗಳ ಸುತ್ತ ಕಥೆ ಹರಿಯುತ್ತದೆ. ಪ್ರೇಯಸಿಗಾಗಿ ಪ್ರಿಯಕರರ ನಡುವೆ ಸ್ಪರ್ಧೆ ನಡೆಯುತ್ತದೆ. ಮೋಸ ಕುಯುಕ್ತಿಯ ಸನ್ನಿವೇಶಗಳೂ ದೊರೆಯುತ್ತವೆ. ಪ್ರತಿಯೊಂದು ಕಥೆಯ ಕೊನೆಯಲ್ಲಿ ಬರುವ ತೀರ್ಪಿನ ವಿಷಯ ಮಾತ್ರ ಬೇರೆ ಕಥೆಗಳಲ್ಲಿಲ್ಲದ್ದು. ಇಲ್ಲಿ ಸಹಜವಾಗಿಯೇ ನೀತಿಧರ್ಮಗಳ ವಿಷಯ ಮಿಂಚುತ್ತದೆ. ಮನರಂಜನೆಯ ಗುಣವಂತೂ ಇದ್ದೇ ಇದೆ. ವಿಚಾರಣೆಯ ಕಾಲದಲ್ಲಿ ನ್ಯಾಯಾಲಯದಲ್ಲಿ ನಿಂತ ಕಕ್ಷಿ, ಪ್ರತಿ ಕಕ್ಷಿಗಳ ಹಾಗೂ ಶ್ರೋತೃಗಳ ಹೃದಯದಲ್ಲಿ ಭಾವತುಮುಲ ಉಕ್ಕುವಂತೆ, ಪ್ರತಿಯೊಬ್ಬರೂ ಕುತೂಹಲದ ತುದಿಗಾಲಿನ ಮೇಲೆ ನಿಂತಿರುವಂತೆ ಈ ಕತೆಗಳನ್ನೋದುವಾಗ ಹೆಜ್ಜೆಹೆಜ್ಜೆಗೂ ಕಾತರತೆ ಕಾಣೇರಿ, ನ್ಯಾಯಾಧಿಪತಿಯ ಸಮ್ಮುಖವನ್ನು

1 ಈ ಕತೆಗಳನ್ನು Maung Htin Aung ಅವರು ಸಂಗ್ರಹಿಸಿರುವ *Burmese Law Tales* ಎಂಬ ಗ್ರಂಥದಿಂದ ಅನುವಾದಿಸಿದೆ. ಈ ಗ್ರಂಥದಲ್ಲಿ ೬೫ ಕಥೆಗಳಿವೆ. ಒಂದೊಂದೂ ತುಂಬ ಸ್ವಾರಸ್ಯವಾಗಿವೆ.

ಮುಟ್ಟುವ ಹೊತ್ತಿಗೆ ಅದು ಶಿಖರಕ್ಕೇರುತ್ತದೆ. ಇಲ್ಲಂತು ಉತ್ತಮ ಕಥೆಯ ಲಕ್ಷಣಗಳನ್ನು ಸುಲಭವಾಗಿ ಗುರುತಿಸಬಹುದು.

೬. ಇತರ ವಿಷಯಗಳು

ಯಾವ ವಿಷಯವೇ ಆಗಲಿ, ಅದರ ವೈಜ್ಞಾನಿಕ ವ್ಯಾಸಂಗಕ್ಕೆ ವರ್ಗೀಕರಣ ಅತ್ಯವಶ್ಯ. ವಿಜ್ಞಾನ ಬೆಳೆದಷ್ಟೇ ಹೀಗೆ. ಒಂದೊಂದು ಕ್ಷೇತ್ರವೂ ಜಗತ್ತಿನಷ್ಟೇ ವಿಶಾಲವಾದದ್ದರಿಂದ, ವರ್ಗೀಕರಣ ಬಾಹಿರವಾದ ಅಧ್ಯಯನ ಗೊಂದಲಕ್ಕೆ ಕಾರಣವಾಗಿ, ಗುರಿತಪ್ಪಿ, ವಿಷಯದ ತಳಬುಡ ಯಾವುದೂ ಸಿಗದೆ, ಸರಳವಾದ ಸಮಸ್ಯೆಗಳನ್ನು ಸಹ ಬಿಡಿಸಲಾಗದು. ಪ್ರತಿಯೊಂದು ಅಧ್ಯಯನಕ್ಕೂ ವ್ಯವಸ್ಥೆ ಮುಖ್ಯ. ವ್ಯವಸ್ಥೆಯ ಒಂದು ಮುಖ ವರ್ಗೀಕರಣ. ಜಾನಪದವೊಂದು ಸಮ್ಮಿಶ್ರ ಸಂಕೀರ್ಣ ವಿಶ್ವವ್ಯಾಪೀ ಜ್ಞಾನಕ್ಷೇತ್ರ. ಅಸಂಖ್ಯಾತ ಜಟಿಲ ಸಮಸ್ಯೆಗಳನ್ನೊಳಗೊಂಡಿರುವ ಜನಪದ ಕಥಾ ಕ್ಷೇತ್ರದಲ್ಲಿ ಕಳೆದ ಶತಮಾನದಿಂದ ಕಾರ್ಯಪ್ರವೃತ್ತರಾಗಿರುವ ವಿದ್ವಾಂಸರು ವರ್ಗೀಕರಣ ಶಾಸ್ತ್ರವನ್ನು ಉಪಯುಕ್ತರೀತಿಯಲ್ಲಿ ರೂಪಿಸಿದ್ದಾರೆ.

ಜಾನಪದ ಕ್ಷೇತ್ರದಲ್ಲಿ—ಅದರಲ್ಲಿಯೂ ಜಾನಪದ ಕಥಾಕ್ಷೇತ್ರದಲ್ಲಿ—ಪ್ರಾದೇಶಿಕತೆ, ರಾಷ್ಟ್ರೀಯತೆ ಮೊದಲಾದ ಸಂಕುಚಿತ ಮನೋಭಾವನೆಗಳಿಗೆಡೆಯಿಲ್ಲ. ಆ ಕಥೆಗಳಂತು ವಿಶ್ವಾಂಕಷ ಗುಣಗಳಿಂದಾಗಿ ಅಂತರರಾಷ್ಟ್ರೀಯ ಸ್ಥಾನಮಾನಗಳನ್ನು ಪಡೆದಿವೆ. ಎಲ್ಲ ದೇಶಗಳ ಕಥೆಗಳನ್ನು ಸಂಗ್ರಹಿಸಿ, ಪಟ್ಟಿಮಾಡಿ, ತರ್ಕಬದ್ಧವಾಗಿ ವಿಂಗಡಣೆಮಾಡದಿದ್ದರೆ ಅವುಗಳ ಅಧ್ಯಯನ ಕ್ರಮಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ೧೮೬೪ರಲ್ಲಿ ನಾಂದಿ ಪ್ರಯತ್ನಮಾಡಿದವರು ಜೆ. ಜಿ. ವಾನ್ ಹಾನ್ (J. G. Von Hahn) ಅವರು. ಅವರ ಅಧ್ಯಯನಕ್ಕೆ ಕೆಲವು ಕಥೆಗಳೇ ಆಧಾರವಾದ್ದರಿಂದ ಹಾಗೂ ಗ್ರೀಕ್ ಪುರಾಣ ಕಥೆಗಳಿಗೆ ಅವನ್ನು ಗಂಟುಹಾಕಲು ಪ್ರಯತ್ನಿಸಿದ್ದರಿಂದ, ಅವರ ಸಾಧನೆಯಲ್ಲಿ ಅಸಮರ್ಪಕತೆ ಮತ್ತು ನ್ಯೂನತೆಗಳು ಮೈದೋರಿದುವು. ಆಶಯ ಮತ್ತು ವರ್ಗಗಳ ನಡುವಣ ಭೇದದ ಕಡೆಗೆ ಅವರ ಗಮನ ಹರಿಯಲಿಲ್ಲ. ಆದ್ದರಿಂದ ಮುಂದಿನ ಜಾನಪದ ವಿದ್ವಾಂಸರು ಹಾನ್ ವ್ಯವಸ್ಥೆಯನ್ನು ಲಕ್ಷಿಸದೆ, ಸಿಂಡೆರೆಲಾ, ಸ್ನೋ ವೈಟ್ ಮೊದಲಾದ ಸುಪ್ರಸಿದ್ಧ ಕಥೆಗಳ ಹೆಸರುಗಳಿಂದ ಅಥವಾ ಪ್ರಸಿದ್ಧ ಕಥಾಸಂಗ್ರಹಗಳಲ್ಲಿಯ ಕಥೆಗಳ ಅಂಕಿಗಳಿಂದ ಅವನ್ನು ಗುರುತಿಸುತ್ತಿದ್ದರು. ಕೋಹ್ಲರ್ ಮೊದಲಾದವರು ಆಶಯ ಅಥವಾ ಘಟನೆಗಳನ್ನು ಸೂಚಿಸುವಂಥ ಪದಗುಚ್ಛಗಳನ್ನು ಆಧಾರೋದ್ಧರಣೆ (Reference) ಗಳಿಗಾಗಿ ಬಳಸುತ್ತಿದ್ದರು. ಈ ಮೂರು ವಿಧಾನಗಳು ಬಹುಕಾಲದ ತನಕ ರೂಢಿಯಲ್ಲಿದ್ದುವು. ಆದರೆ ಇವು ಯೂರೋಪೀಯ ಕಥೆಗಳಿಗೆ ಮಾತ್ರ ಸೀಮಿತವಾಗಿದ್ದುವೆನ್ನುವುದನ್ನು ಮರೆಯುವಂತಿಲ್ಲ. ರಾಬರ್ಟ್ ಎಚ್. ಲೋವೀ (Robert H. Lowie) ಮತ್ತು ಎ. ಎಲ್. ಕ್ರೋಬರ್ (A. L. Kroeber) ಅಮೆರಿಕೆಯ ಆದಿವಾಸಿ ಜನಾಂಗಗಳ ಕಥೆಗಳಿಗೆ ಸಂಬಂಧಿಸಿದಂತೆ ೧೯೦೮ರಲ್ಲಿ ಅಕಾರಾದಿ ಪಟ್ಟಿಗಳನ್ನು ತಯಾರಿಸಿದರು. ಕಾಲಕ್ರಮೇಣ

ಫ್ರಾಂಜ್ ಬೋಅಸ್ (Franz Broas) ಮೊದಲಾದ ವಿದ್ವಾಂಸರು ಈ ಪಟ್ಟಿಯನ್ನು ಕಾಲಕ್ರಮೇಣ ಬೆಳೆಸಿದ್ದುಂಟು. ವರ್ಗ ಮತ್ತು ಆಶಯಗಳ ಬಗೆಗೆ ಈ ಪಟ್ಟಿಯಲ್ಲಿಯೂ ಗೊಂದಲವಿಲ್ಲದಿಲ್ಲ.

ಪರಸ್ಪರ ಹೊಂದಾಣಿಕೆಯುಳ್ಳ ಘಟನೆ ಮತ್ತು ಸನ್ನಿವೇಶಗಳಿಂದ ಕಥೆ ಅಸ್ತಿತ್ವಕ್ಕೆ ಬರುತ್ತದೆ ಮತ್ತು ವಿಕಾಸಗೊಳ್ಳುತ್ತದೆ. ಆ ಘಟನೆಗಳು ತಾನಾಗಿಯೇ ಉದ್ಭವವಾಗು ವುದಿಲ್ಲ. ಚಾಲಕ ಅಥವಾ ಚಾಲಕಶಕ್ತಿಯಿಲ್ಲದಿದ್ದರೆ ವಾಹನವೆಂತು ಮುಂದೆ ಸಾಗುವು ದಿಲ್ಲವೋ ಅಂತೆಯೇ ಮನುಷ್ಯನೋ ಪ್ರಾಣಿಯೋ ಭೂತವೋ ಪ್ರೇತವೋ ಸಚರಾಚರ ವಸ್ತುವೋ ಇಲ್ಲದಿದ್ದರೆ, ಒಟ್ಟಿನಲ್ಲಿ ಕರ್ತೃ-ಕರಣಗಳಿಲ್ಲದಿದ್ದರೆ ಘಟನೆ ಸಂಭವಿಸುವುದಿಲ್ಲ: ಅವುಗಳ ಕಲ್ಪನೆಯೂ ಸಾಧ್ಯವಿಲ್ಲ. ಒಂದು ಬಿಟ್ಟು ಮತ್ತೊಂದು ನಡೆಯುವಂತಿಲ್ಲ. ಆ ಎಲ್ಲ ಶಕ್ತಿಗಳ ನೆರವಿನಿಂದ ಮತ್ತು ಪ್ರೇರಣೆಯಿಂದ ಕಥೆ ಬೆಳೆಯುತ್ತದೆ. ಆ ಒಂದೊಂದು ಚಾಲಕ ಅಥವಾ ಪ್ರೇರಕ ಶಕ್ತಿಯೂ ಕಥೆಯ ಘಟಕಗಳು. ಆ ಘಟಕಗಳನ್ನು ಆಶಯ ಗಳೆಂದು ಕರೆಯುತ್ತಾರೆ. ಆದರೆ ಕಥೆಯಲ್ಲಿ ಬರುವ ಎಲ್ಲ ಘಟನೆಗಳೂ ಎಲ್ಲ ವ್ಯಕ್ತಿಗಳೂ ಆಶಯವಾಗಲಾರವು. ವಿಶಿಷ್ಟವೂ ವಿಚಿತ್ರವೂ ಆಕರ್ಷಕವೂ ಅಸಾಧಾರಣವೂ ಆದ ಗುಣಗಳುಳ್ಳ ಘಟನೆ ಮತ್ತು ವ್ಯಕ್ತಿಗಳು ಮಾತ್ರ ಆಶಯಗಳಾಗುವ ಯೋಗ್ಯತೆ ಪಡೆಯು ತ್ತವೆ. ಇವುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯ ಗುಂಪಿ ನಲ್ಲಿ ದೇವತೆಗಳು, ಅಸಾಧಾರಣ ಪ್ರಾಣಿಗಳು, ಮಾಟಗಾರರು, ಭೂತಪ್ರೇತಗಳು, ಕಿನ್ನರರು, ಅಸಾಮಾನ್ಯ ರೀತಿಯ ಕನಿಷ್ಠಪುತ್ರ, ಮಲತಾಯಿ ಮೊದಲಾದವರು ಸೇರುತ್ತಾರೆ. ಕಥಾಕ್ರಿಯೆಗೆ ಹಿನ್ನೆಲೆಯಾಗಿ ಬರುವ ಮಾಟದ ವಸ್ತುಗಳು, ಸಾಮಾನ್ಯ ರೂಢಿಯಲ್ಲಿಲ್ಲದ ಸಂಪ್ರದಾಯಗಳು, ವಿಚಿತ್ರ ನಂಬಿಕೆಗಳು ಎರಡನೆಯ ಗುಂಪಿನಲ್ಲಿ ಸೇರುತ್ತವೆ. ಉಳಿದ ಘಟನೆಗಳೆಲ್ಲ ಮೂರನೆಯ ಗುಂಪಿನಲ್ಲಿ ಬರುತ್ತವೆ. ಜಗತ್ತಿನ ಕಥೆ ಗಳಲ್ಲಿರುವ ಮೂಲಾಂಶಗಳನ್ನು ತಿಳಿಯುವುದರಿಂದ ಅಧ್ಯಯನಕ್ಕೆ ಅನುಕೂಲವಾಗುತ್ತದೆ.

ಸ್ವತಂತ್ರವಾದ ಅಸ್ತಿತ್ವವುಳ್ಳ ಪರಂಪರಾಗತವಾದ ಕಥೆ ಮಾದರಿಯೆಂದೋ ವರ್ಗ ವೆಂದೋ ಕರೆಯುವುದುಂಟು. ಅದರಲ್ಲಿ ಆಶಯ ಒಂದಿರಬಹುದು, ಅಥವಾ ಹಲವಾರಿರ ಬಹುದು. ಸಮಗ್ರತೆಗೆ ಅಥವಾ ಅರ್ಥವಿಶದತೆಗೆ ಅದು ಬೇರೊಂದು ಕಥೆಯನ್ನವಲಂಬಿಸ ಬೇಕಾಗಿಲ್ಲ. ಭಿನ್ನ ಪಾಠಾಂತರಗಳಿರುವ ಕಥೆಗಳು ಒಂದೇ ವರ್ಗ ಅಥವಾ ಮಾದರಿಗೆ ಸೇರುತ್ತವೆ. ಮೂಲ ಕಥೆಯ ಸ್ವರೂಪ ತಿಳಿಯಲು ಮತ್ತು ಆನುವಂಶಿಕ ಸಂಬಂಧವನ್ನು ಸ್ಥಾಪಿಸಲು ಈ ಮಾದರಿಗಳು ಉಪಯುಕ್ತವಾಗುತ್ತವೆ.

ಆಶಯ ಹಾಗೂ ಮಾದರಿಗಳನ್ನು ಸಂಗ್ರಹಿಸಿ, ಅಧ್ಯಯನಮಾಡಿ, ತರ್ಕಬದ್ಧವಾಗಿ ವರ್ಗೀಕರಿಸಿ, ಅವುಗಳ ಸೂಚಿಯನ್ನು ಸಿದ್ಧಪಡಿಸುವುದು ಮುಂದಿನ ಕೆಲಸ. ಸ್ಟಿತ್ ಥಾಂಪ್ಸನ್ನರೂ, ಕ್ರಾನ್ ಮೊದಲಾದವರ ನೆರವಿನೊಡನೆ ಅಂಟಿ ಆರ್ನೆ ಅವರೂ ಈ ಕೆಲಸ ವನ್ನು ಅತ್ಯಂತ ಸಮರ್ಪಕವಾಗಿ ನೆರವೇರಿಸಿದ್ದಾರೆ. ಆದರೆ ಹೊಸ ಕಥೆಗಳು ದೊರೆತಂತೆಲ್ಲ ಹೊಸ ಮಾದರಿ ಹಾಗೂ ಆಶಯಗಳನ್ನು ಸೂಚಿಗಳಲ್ಲಿ ಸೇರಿಸಬೇಕಾಗಬಹುದು.

ಈ ವರ್ಗೀಕರಣದಿಂದ ಹಾಗೂ ಚಾರಿತ್ರಕ-ಭೌಗೋಳಿಕ ವಿಧಾನದಿಂದ ಜನಪದ ಕಥೆಗಳ ಹುಟ್ಟು ಬೆಳವಣಿಗೆಗಳನ್ನೂ ಅವುಗಳ ಮೂಲ ಸ್ವರೂಪವನ್ನು ತಿಳಿಯಲನುಕೂಲ ವಾಗಿದೆ. ಮೊವಲು ಮೌಖಿಕ ಸಂಪ್ರದಾಯದ ಕಥೆಗಳು ಹೇಗೆ ಬಾಯಿಂದ ಬಾಯಿಗೆ ಹೊರಳುತ್ತವೆ, ಹಾಗೆ ಹೊರಳುವಾಗ ಆಗುವ ರೂಪಾಂತರಗಳೇನೆನ್ನುವುದನ್ನು ಸ್ಪಷ್ಟ ಪಡಿಸಿಕೊಳ್ಳಬೇಕು; ಚಾರಿತ್ರಕ-ಭೌಗೋಳಿಕ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಪಾಠಾಂತರಗಳನ್ನು ವಿಶ್ಲೇಷಿಸಬೇಕು. ಈ ಅಧ್ಯಯನದಿಂದ ಪಾಠಾಂತರಗಳ ಕಾರಣ ಗಳನ್ನು ನಿರ್ಣಯಿಸುವುದರ ಜತೆಗೆ ಅವು ಹುಟ್ಟಿದ ಜಾಗ ಮತ್ತು ಕಾಲಗಳನ್ನು ಕಂಡು ಹಿಡಿಯಬಹುದು.[1] ಕಥೆಗಳು ಊರಿಂದೂರಿಗೆ, ನಾಡಿನಿಂದ ನಾಡಿಗೆ ಯಾತ್ರೆ ಮಾಡು ವಾಗ ಅನೇಕ ಬದಲಾವಣೆಗಳು ಸಂಭವಿಸುತ್ತವಷ್ಟೆ. ಅವುಗಳ ಸ್ವರೂಪವನ್ನು ತಿಳಿಯ ಲನುಕೂಲವಾಗುವಂತೆ ಆರ್ನೆ ಅವರೊಂದು ಪಟ್ಟಿಯನ್ನು ಸಿದ್ಧಗೊಳಿಸಿದ್ದಾರೆ. ಅದನ್ನಿಲ್ಲಿ ಉದ್ಧರಿಸಲಾಗಿದೆ.[2]

(೧) ವಿವರಗಳು, ಅದರಲ್ಲಿಯೂ ಅಮುಖ್ಯವಾದವುಗಳು, ಮರೆತುಹೋಗುತ್ತವೆ. ಕಥೆಗಳಲ್ಲಾಗುವ ರೂಪಾಂತರಗಳಿಗೆ ಈ ಸಂಗತಿ ಬಹು ಮುಖ್ಯ ಕಾರಣ.
(೨) ಮೂಲದಲ್ಲಿಲ್ಲದ ವಿವರಗಳು ಕಥೆಯೊಳಗೆ ಸೇರಿಕೊಳ್ಳುತ್ತವೆ. ಹೀಗೆ ಸೇರಿ ಕೊಳ್ಳುವ ವಿವರಗಳಲ್ಲಿ ಬೇರೊಂದು ಕಥೆಯ ಆಶಯಗಳೇ ಹೆಚ್ಚು. ಕೆಲವು ವೇಳೆ ಹೊಸ ಆಶಯಗಳು ಸೃಷ್ಟಿಗೊಳ್ಳುವುದೂ ಉಂಟು. ಅಂಥ ಸೇರಿಕೆಗಳು ಮೊದಲು ಮತ್ತು ಕೊನೆಗಳಲ್ಲಿ ಸಂಭವಿಸುತ್ತವೆ.
(೩) ಎರಡು ಅಥವಾ ಹೆಚ್ಚು ಕಥೆಗಳನ್ನು ಪೋಣಿಸಿ ಒಂದೆ ಎಂಬಂತೆ ಹೇಳಿಬಿಡುವು ದುಂಟು. ಸಾಮಾನ್ಯವಾಗಿ ಹೀಗೆ ಪೋಣಿಕೆಗೊಳ್ಳುವಂಥವು ಪ್ರಾಣಿಕಥೆ ಗಳೋ ಭೂತಕಥೆಗಳೋ ತಂತ್ರಕಥೆಗಳೋ ಆಗಿರುತ್ತವೆ.
(೪) ಹೆಚ್ಚಿಗೆ ವಿವರಗಳ ಪ್ರಮಾಣ ಮೂರರಷ್ಟಿರಬಹುದು.
(೫) ಮೂಲಕಥೆಯಲ್ಲಿ ಘಟನೆ ಪುನರಾವರ್ತನೆಗೊಳ್ಳಬಹುದು; ಅಥವಾ ಅಂಥದೇ ಮತ್ತೊಂದು ಘಟನೆಯು ಸೃಷ್ಟಿಯಾಗಬಹುದು.
(೬) ಸರ್ವಸಾಧಾರಣವಾದ ಸಂಗತಿ ವಿಶಿಷ್ಟೀಕರಣಗೊಳ್ಳಬಹುದು; ವಿಶಿಷ್ಟ ಸಂಗತಿ ಸಾಧಾರಣೀಕರಣಗೊಳ್ಳಬಹುದು. ಉದಾಹರಣೆಗೆ, ಮೂಲದಲ್ಲಿ ಹಕ್ಕಿಯ ಉಲ್ಲೇಖವಿರುವುದಾದರೆ ಅದರ ಬದಲಿಗೆ ಗುಬ್ಬಚ್ಚಿಯನ್ನು ಸೇರಿಸ ಬಹುದು: ಗುಬ್ಬಚ್ಚಿಯ ಉಲ್ಲೇಖವಿರುವುದಾದರೆ, ಅದರ ಬದಲಿಗೆ 'ಹಕ್ಕಿ' ಎಂಬ ಪದ ಸೇರಿಸಬಹುದು.

---

1 ಮಿಕ್ಕಿನ ವಿವರಗಳಿಗೆ Stith Thopmson ಅವರ *The Folk Tale* ಗ್ರಂಥದ 'The Life History of a Folk Tale ಎನ್ನುವ ಪ್ರಕರಣವನ್ನು ನೋಡಬಹುದು.
2 ಅದೇ, ಪು. 436.

(೭) ಕಥೆಯ ಕೊನೆಯಲ್ಲಿ ಬೇರೊಂದು ಕಥೆಯ ಸಾಮಗ್ರಿಯನ್ನು ಸಂಗಳಿಸಬಹುದು.

(೮) ಪರಸ್ಪರ ವಿರುದ್ಧ ಸ್ವಭಾವದ ಪ್ರಾಣಿ ಅಥವಾ ಮನುಷ್ಯರ ಪಾತ್ರಗಳು ಅದಲುಬದಲಾಗಬಹುದು. ಉದಾಹರಣೆಗೆ, ಕುಯುಕ್ತಿ ನರಿಯ ಮತ್ತು ದಡ್ಡ ಕರಡಿಯ ಪಾತ್ರಗಳ ಸ್ಥಾನಾಂತರ.

(೯) ಪ್ರಾಣಿಕಥೆಗಳಲ್ಲಿ ಪ್ರಾಣಿಗಳ ಸ್ಥಾನವನ್ನು ಮನುಷ್ಯರು ಆಕ್ರಮಿಸಿಕೊಳ್ಳಬಹುದು.

(೧೦) ಮಾನನ್ಯ ಕಥೆಗಳಲ್ಲಿ ಹೆಂಗಸರು ಗಂಡಸರ ಸ್ಥಾನಗಳಲ್ಲಿ ಪ್ರಾಣಿಗಳು ಬರಬಹುದು.

(೧೧) ಅಂತೆಯೇ ಪ್ರಾಣಿಗಳು ಭೂತಪ್ರೇತಾದಿಗಳು ಅವಲುಬದಲಾಗಬಹುದು.

(೧೨) ತಾನೂ ಒಂದು ಪಾತ್ರವೆಂಬಂತೆ ಕತೆಗಾರ ಉತ್ತಮ ಪುರುಷದಲ್ಲಿ ಕತೆ ಹೇಳಬಹುದು.

(೧೩) ಒಂದೇ ಒಂದು ಬದಲಾವಣೆಯಾದರೂ ಕಥೆ ಹಾಳತ ತಪ್ಪದಿರಬೇಕಾದರೆ ಇತರ ಸಂಗತಿಗಳು ಅದರೊಡನೆ ಹೊಂದಿಕೊಳ್ಳುವಂತಾಗಬೇಕು.

(೧೪) ಕಥೆ ಅಲೆದಾಡುವಾಗ ಹೊಸ ಹೊಸ ವಾತಾವರಣಕ್ಕೆ ತಕ್ಕಂತೆ ಹೊಂದಿಕೊಳ್ಳಬೇಕಾಗುತ್ತದೆ. ಅಲ್ಲಿರುವ ಅಪರಿಚಯ ವಸ್ತು ಅಥವಾ ಸಂಪ್ರದಾಯಗಳಿಗೆ ಬದಲಾಗಿ ಪರಿಚಯದ ವಸ್ತು ಸಂಪ್ರದಾಯಗಳು ಬಂದು ನಿಲ್ಲುತ್ತವೆ. ರಾಜಕುಮಾರ ಮತ್ತು ರಾಜಕುಮಾರಿಯರು ಅಮೆರಿಕೀಯ ಇಂಡಿಯನ್ನರ ಕಥೆಗಳಲ್ಲಿ ಕುಲದ ಯಜಮಾನನ ಮಕ್ಕಳಾಗಿ ಪರಿವರ್ತನೆಗೊಳ್ಳುತ್ತಾರೆ.

(೧೫) ರೂಢಿಯಲ್ಲಿಲ್ಲದ ಪ್ರಾಚೀನ ಸಂಗತಿಗಳ ಸ್ಥಾನದಲ್ಲಿ ಆಧುನಿಕ ಸಂಗತಿಗಳು ಬರಬಹುದು. ನಾಯಕ ತನ್ನ ಸಾಹಸ ಯಾತ್ರೆಗೆ ರೈಲು ಬಳಸಬಹುದು.

ಈ ಪಟ್ಟಿ ಸಮಗ್ರವೆಂದು ಹೇಳಲಾಗದು. ಬಾಯಿಕತೆ ಜೀವಂತವಾದ್ದರಿಂದ ಬದಲಾವಣೆಗಳು ಅನಿವಾರ್ಯ. ಇನ್ನೂ ಅಕ್ಷರಸ್ಥವಾಗದ, ಬಾಯಿ ಮೂಲಕವೇ ಚಲಾವಣೆಯಲ್ಲಿರುವ ಕತೆಗಳನ್ನೆಲ್ಲ ಒಟ್ಟುಗೂಡಿಸಿದಾಗ ಇವರ ಸಮಗ್ರಸಾಧನೆ ಸಾಧ್ಯವಾಗುತ್ತದೆ. ಭಿನ್ನಪಾಠಗಳಿಗೇನು ಕಾರಣವೆಂಬುದೂ, ಅವುಗಳಿಗೂ ಮೂಲಪಾಠಕ್ಕೂ ಇರುವ ಬಾಂಧವ್ಯವೆಂಥದೆಂಬುದೂ ಈ ಪಟ್ಟಿಯಿಂದ ಬಹುಮಟ್ಟಿಗೆ ಗ್ರಾಹ್ಯವಾಗುತ್ತದೆ. ವಾಲ್ಟರ್ ಆಂಡರ್‌ಸನ್ (Walter Anderson) ಎನ್ನುವವರು ಈ ಬದಲಾವಣೆಗಳಿಗೆ ಮತ್ತೆ ಕೆಲವು ಕಾರಣ ಕೊಡುತ್ತಾರೆ. (೧) ವಿವರಗಳಲ್ಲಿ ಏನಿಸುಯು ಅಥವಾ ವ್ಯತ್ಯಾಸ ತೋರ್ಪಡುವುದಾದರೂ ಮೂಲಕಥೆಯ ತಿರುಳು ಅಬಾಧಿತವಾಗಿರುತ್ತದೆ. ಅಬಾಧಿತತೆಗೆ ಅನಕ್ಷರಸ್ಥ ಕತೆಗಾರನ ಸ್ಮೃತಿಶಕ್ತಿ ಕಾರಣವಲ್ಲ. ಏಕೆಂದರೆ ನಾಲ್ಕಾರು ಜನ ಹೇಳುವ ಒಂದೇ ಕತೆಯಲ್ಲಿ ವ್ಯತ್ಯಾಸಗಳು ಕಾಣುತ್ತವೆ. ಮೂಲಸ್ವರೂಪದ ಸ್ಥಿರತೆಗೆ ಮುಖ್ಯ ಕಾರಣ ಕತೆಗಾರ ಒಂದೇ ಕತೆಯನ್ನು ಅನೇಕ ಸಾರಿ ಅನೇಕರಿಂದ ಕೇಳುವಂಥದ್ದು.

ಹಾಗೆ ಕೇಳುವಾಗ ಅವನು ವ್ಯತ್ಯಾಸಗಳನ್ನು ಗಮನಿಸಿರುತ್ತಾನೆ. ಆದರೆ ಬುದ್ಧಿವಂತ ನಾದವನು ಕತೆ ಹೇಳಿಕೊಳ್ಳುವಾಗ ತಪ್ಪೊಪ್ಪುಗಳನ್ನು ಗಮನಿಸಿ, ತಪ್ಪುಗಳನ್ನು ತಿದ್ದಿ, ಪಾಠವನ್ನು ಪರಿಷ್ಕರಿಸುವುದುಂಟು. ಕೆಲವರು ಆ ಪಾಠಾಂತರಗಳನ್ನು ಬೆರಸಿ, ಸಂಸ್ಕರಿಸಿ, ಬೇರೆಬೇರೆಯಾಗಿಯೇ ಅವನ್ನು ಕಥಿಸುವುದುಂಟು. ಯಾವ ಕಥೆಯೇ ಆಗಲಿ ದೀರ್ಘ ಕಾಲ ಬಾಳಬೇಕಾದರೆ ಅದರಲ್ಲಿ ತಾರ್ಕಿಕತೆಯೂ ಕಲಾತ್ಮಕತೆಯೂ ಹಾಳತವೂ ಇರಬೇಕು. ಜಾಣ ಕತೆಗಾರ ತಾನು ಹೇಳಿದ ಕತೆಗಳಲ್ಲಿ ಈ ಗುಣಗಳನ್ನರ ಸುತ್ತಾನೆ; ಅವು ಕಾಣದಿದ್ದಾಗ ಮೂಲ ಕಥೆಗೆ ಭಂಗಬರದಂತೆ ಪಾಠವನ್ನು ಪರಿಷ್ಕರಿ ಸುತ್ತಾನೆ. ಅಂಥವರಿಂದ ಕಥಾಪರಂಪರೆ ಅವಿಚ್ಛಿನ್ನವಾಗಿ ಮುಂದುವರಿಯುತ್ತದೆ. ಇಂಥ ಸಂಪ್ರದಾಯ ರಕ್ಷಣೆಯ ಮಾರ್ಗವನ್ನು ಆಂಡರ್‌ಸನ್ ಸ್ವಯಂ ಪರಿಷ್ಕಾರಣ ನಿಯಮ ವೆಂದು ಕರೆಯುತ್ತಾರೆ.

(೨) ಕಥೆಯಲ್ಲಾದ ಬದಲಾವಣೆ ಕೇಳುಗರಿಗೆ ಹಿತವಾಗುವುದಾದರೆ ಅದು ತಪ್ಪಾಗಿದ್ದರೂ ಪುನರಾವರ್ತನೆಗೊಳ್ಳುತ್ತದೆ. ಅದು ಜನಪ್ರಿಯವಾದಂತೆಲ್ಲ ಮೂಲಪಾಠ ಮರೆತುಹೋಗುತ್ತದೆ. ಕೆಲವೊಮ್ಮೆ ಎರಡು ಪಾಠಗಳೂ ಮುಂದುವರಿಯಬಹುದು, ಅಥವಾ ತನ್ನ ಸೀಮೆಯ ಎಲ್ಲೆಗಳಲ್ಲಿ ಮಾತ್ರ ಮೂಲಪಾಠ ಬದುಕಿಗೊಂಡಿರಬಹುದು. ಇಂಥ ನೂತನ ಪಾಠಾಕ್ರಮಣ ವಿಶಿಷ್ಟ ಪಾಠ ಪರಿಷ್ಕರಣ ವಿಧಾನವೆಂದು ಹೆಸರು ಪಡೆದಿದೆ.

ಆಂಡರ್‌ಸನ್ನನ ಈ ಎರಡು ತತ್ವಗಳು ನಿಸ್ಸಂಶಯವಾಗಿ ಅಂಗೀಕಾರಾರ್ಹವಾದುವು. ಆದರೆ ಅವರ ಪ್ರಸರಣಮಾರ್ಗತತ್ವವನ್ನೊಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಕಥೆಗಳು ಉನ್ನತ ಸಂಸ್ಕೃತಿಯಿಂದ ಕನಿಷ್ಠ ಸಂಸ್ಕೃತಿಯ ಕಡೆಗೆ ಹರಿಯುತ್ತವೆನ್ನುವುದು ಅವರ ವಾದ. ಸ್ಮಿತ್ ಥಾಂಪ್ಸನ್ನರು ಈ ವಾದವನ್ನೊಪ್ಪುವುದಿಲ್ಲ. ಇಲ್ಲಿ ಸಂಸ್ಕೃತರು ಯಾರು, ಅಸಂಸ್ಕೃತರು ಯಾರು ಎಂಬ ಪ್ರಶ್ನೆ ಏಳುತ್ತದೆ. ನಿರಕ್ಷರಿಗಳನ್ನು ಅಸಂಸ್ಕೃತರ ಸಾಲಿಗೆ ಸೇರಿಸಲಾಗುವುದೆ? ಕಥೆಗಳ ಸೃಷ್ಟಿ ಕೇವಲ ಕೆಲವರಿಗೆ, ಉನ್ನತ ವರ್ಗದವರಿಗೆ ಮಾತ್ರ ಮೀಸಲಾಗಿದೆಯೆ? ಈ ಪ್ರಶ್ನೆಗಳಿಗೆ ಉತ್ತರ ಅಹುದಾತ್ಮಕವಾಗುವುದಾದರೆ ಹಾಗೂ ಭಾರತೀಯ ಮೂಲ ಸಿದ್ಧಾಂತವನ್ನೊಪ್ಪಿಕೊಳ್ಳುವುದಾದರೆ, ಭಾರತೀಯ ಸಂಸ್ಕೃತಿ ಉಚ್ಚ ಮಟ್ಟದ್ದು, ಉಳಿದವು ಅಲ್ಲ ಎಂದು ಹೇಳಬೇಕಾಗುತ್ತದೆ. ಹಾಗೆ ಹೇಳುವುದು ಸರಿಯಲ್ಲ. ಕಥೆ ಎಲ್ಲರಿಗೂ ಬೇಕು. ಆದ್ದರಿಂದ ರಾಜಕೀಯ, ಭೌತಿಕ, ಭಾಷಿಕ, ಸಾಂಸ್ಕೃತಿಕ ಹಾಗೂ ಮತೀಯ ಪ್ರತಿಬಂಧಕಗಳನ್ನು ದಾಟಿ ಅವು ಹೊಸ ಕ್ಷೇತ್ರಗಳನ್ನು ಆಕ್ರಮಿಸಿಕೊಳ್ಳುತ್ತವೆ.

ಜಗತ್ತಿನ ಎಲ್ಲ ಜನಪದ ಕಥೆಗಳ ಇತಿಹಾಸ ಸಂಸಿದ್ಧವಾದರೆ ಮಾನವ ವಿಜ್ಞಾನಿ, ಮನಶ್ಶಾಸ್ತ್ರಜ್ಞ ಮತ್ತು ಸಮಾಜ ವಿಜ್ಞಾನಿಗಳ ಕಾರ್ಯಕ್ಷೇತ್ರ ವಿಶಾಲಗೊಳ್ಳುತ್ತದೆ. ಮಾನವನ ಬುದ್ಧಿ ಮನಸ್ಸುಗಳು ಈ ಎರಡುಮೂರು ಸಾವಿರ ವರ್ಷಗಳಲ್ಲಿ ಹೇಗೆ ವಿಕಾಸ ಗೊಂಡಿವೆ ಎಂಬುದು ಅದರ ಅಧ್ಯಯನದಿಂದ ಖಚಿತವಾಗುತ್ತದೆ. ಸಾಂಸ್ಕೃತಿಕ ಪರಂ

ಪರಿಯ ವ್ಯಾಸಂಗಕ್ಕಂತು ಅವು ಸಾಕಷ್ಟು ಸಾಮಗ್ರಿಯನ್ನೊದಗಿಸುತ್ತವೆ. ಈ ಕಥೆಗಳು ಜಗತ್ತಿನ ಯಾವುದೋ ಒಂದು ಕೇಂದ್ರದಲ್ಲಿ ಮಾತ್ರ ಹುಟ್ಟಿ ಬೆಳೆದು, ಹರಡಲಿಲ್ಲ; ಬಹುಕ್ಷೇತ್ರಗಳಲ್ಲಿ ಜನಿಸಿ, ಸುತ್ತಮುತ್ತ ವ್ಯಾಪಿಸಿವೆ: ಪರಸ್ಪರ ವಿನಿಮಯ ಕಾರ್ಯವೂ ನಡೆದಿದೆ: ಮೇಲಾಗಿ ಮಾನವ ಎಲ್ಲಿದ್ದರೂ ಅವನ ಮೂಲಭೂತ ಗುಣಗಳು ಒಂದೇ, ಅವನ ಆಲೋಚನಾವಿಧಾನ ಒಂದೇ ಎಂಬ ಸಂಗತಿ ಅವುಗಳ ಇತಿಹಾಸ ವ್ಯಾಸಂಗದಿಂದ ವಿಶದವಾಗುತ್ತವೆ.

ಆಧುನಿಕ ವೈಜ್ಞಾನಿಕ ಯುಗದಲ್ಲಿಯೂ ಜನಪದ ಕಥೆಗಳ ಬಗ್ಗೆ ಆಸಕ್ತಿ ಕುಂದಿಲ್ಲ. ಸಾಮಾನ್ಯರಿಗಂತು ಅವು ಮನರಂಜನೆಯ ಹಾಗೂ ಶೈಕ್ಷಣಿಕ ಮಾಧ್ಯಮಗಳಾಗಿವೆ. ವಿದ್ವಾಂಸರಿಗೂ ಅವುಗಳ ವಿಷಯದಲ್ಲಿ ಕುತೂಹಲ ತೀವ್ರವಾಗುತ್ತಿದೆ. ಶಿಷ್ಟಸಾಹಿತ್ಯ, ರೇಡಿಯೋ, ಸಿನಿಮಾ, ನಾಟಕ, ಟೆಲಿವಿಷನ್ ಮೊದಲಾದವುಗಳಿಂದ ಅವುಗಳಿಗೆ ಬಾಧಕವುಂಟಾಗಿಲ್ಲ. ಅಷ್ಟೇ ಅಲ್ಲ, ಸಾಹಿತಿಗಳು, ಸಿನಿಮಾ ತಯಾರಕರು, ನಾಟಕಕರ್ತರು ತಂತಮ್ಮ ಕ್ಷೇತ್ರಗಳಿಗೆ ಅವುಗಳನ್ನು ಸಾರ್ಥಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಮಕ್ಕಳ ಉಪಯೋಗಕ್ಕಾಗಿ ಸಚಿತ್ರ ಕಥೆಗಳ ಸಂಗ್ರಹ ಪ್ರಕಟವಾಗುತ್ತಿವೆ. ಇದರಿಂದಾಗಿ ಚಿತ್ರಕಲೆಗೆ ಅವುಗಳಿಂದ ಅಪೂರ್ವ ಪ್ರೇರಣೆ ದೊರೆಯುತ್ತಿದೆ. ಆ ಕಥೆಗಳನ್ನು ಆಧರಿಸಿ, ರಚನೆಗೊಂಡ ನಾಟಕಗಳು ರಂಗಮಂಟಪದ ಹಾಗೂ ರಜತ ಪರದೆಯ ಮೇಲೆ ಬಂದು ವಿಜಯ ಡಂಗುರವನ್ನು ಬಾರಿಸಿವೆ. ಸೂತ್ರದ ಬೊಂಬೆಯಾಟಕ್ಕೆ ಮತ್ತು ಹಾಸ್ಯ ಅಥವಾ ವ್ಯಂಗ್ಯ ಚಿತ್ರಗಳಿಗೆ ಇವು ಹೊಸ ಚೈತನ್ಯವನ್ನೊದಗಿಸುತ್ತವೆ. ಅನೇಕ ದೇಶಗಳಲ್ಲಿ ಕಥೋಪಜೀವಿಗಳ ತಂಡಗಳು ಈಗಲೂ ಜನಾದರಕ್ಕೆ ಪಾತ್ರವಾಗಿವೆ. ರಷ್ಯ ಮೊದಲಾದ ಮಹಾರಾಷ್ಟ್ರಗಳಲ್ಲಿ ಕಥೆಗಳು ರಾಷ್ಟ್ರೀಯತೆಯ ಸಂಕೇತವಾಗಿವೆ. ಐರ್ಲೆಂಡಿನ ಕಥೆಯ ಗೀಳು ಸಾಂಕ್ರಾಮಿಕವಾಗಿರುವುದೂ ಉಂಟು. ಇದರಿಂದ ಜಗತ್ತಿನ ಮುಂದುವರಿದ ರಾಷ್ಟ್ರಗಳೆಲ್ಲೆಲ್ಲ ಸಂಗ್ರಹ ಹಾಗೂ ಸಂಶೋಧನ ಕಾರ್ಯ ಅತ್ಯಂತ ತೀವ್ರಗತಿಯಲ್ಲಿ ಸಾಗುತ್ತಿದೆ. ಫ್ರಾನ್ಸಿನ ಎಮಾನ್ಯುಯಲ್ ಕಾಸ್ಕಿನ್ (೧೮೪೧–೧೯೧೯); ಬ್ರಿಟನ್ನಿನ ಆಂಡ್ರ್ಯೂ ಲ್ಯಾಂಗ್ (೧೮೪೪–೧೯೧೨), ಸಿಡ್ನಿ ಹಾರ್ಟ್‌ಲ್ಯಾಂಡ್ (೧೮೪೮–೧೯೨೭). ಜರ್ಮನಿಯ ಜೋಹಾನೆಸ್ ಬೋಲ್ಟೆ (Johannes Bolte 1858-1937); ಡೆನ್ಮಾರ್ಕಿನ ಏಕ್ಸೆಲ್ ಓಲ್ರಿಕ್ (Axel Olrik). ಫಿನ್‌ಲೆಂಡಿನ ಎಲಿಯಾಸ್ ಲಾನ್ರಾಟ್ (Elias Lonnrot)[1] ಮತ್ತು ಅವನ ಶಿಷ್ಯರು; ನಾರ್ವೆಯ ಆರ್. ಟಿ.ಎಚ್. ಕ್ರಿಶ್ಚಿಯನ್‌ಸೆನ್ (R. Th. Chritiansen) ಅಮೆರಿಕೆಯ ಫ್ರಾನ್ಸಿಸ್ ಜೇಮ್ಸ್ ಚೈಲ್ಡ್ (೧೮೨೫–೧೮೯೬); ಆರ್ಚರ್ ಟೇಲರ್ (Archer Taylor); ರಾಲ್ಫ್ ಎಸ್. ಬಾಗ್ಸ್ (Ralph S. Boggs), ಇಂತೆಯೇ ಇನ್ನೂ ಹಲವಾರು ಮಂದಿ ವಿದ್ವಾಂಸರು ತಮ್ಮ ಜೀವನವನ್ನೇ ಈ ಕಾರ್ಯಕ್ಕಾಗಿ ಸಮರ್ಪಿಸಿಕೊಂಡಿದ್ದಾರೆ. ಪರಕೀಯರ ದಾಸ್ಯದಿಂದ ವಿಮುಕ್ತಗೊಂಡ ರಾಷ್ಟ್ರಗಳಲ್ಲಿ ಈಗತಾನೇ ಜನ ಎಚ್ಚೆತ್ತಿದ್ದು, ಈ ಕಥೆ [illegible]

1 ೧೮೩೫ರಲ್ಲಿ ಪ್ರಕಟವಾದ ಕಲೇವಲಕ್ಕೆ ಆಧಾರ ಇವನು ಸಂಗ್ರಹಿಸಿದ ಲಾವಣಿಗಳು.

ನೋಡುತ್ತಿದ್ದಾರೆ.[1] ವಿಶ್ವಸಂಸ್ಥೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನೆರವಿಗೆ ನಿಲ್ಲುವುದಾದರೆ ಈ ಕಾರ್ಯ ತ್ವರಿತಗತಿಯಿಂದ ಸಾಗೀತು.

ಪ್ರಪಂಚದಲ್ಲಿ ಅತ್ಯಂತ ಜನಪ್ರಿಯ ಜನಪದ ಸಾಹಿತ್ಯಪ್ರಕಾರವೆಂದರೆ ಕಥೆ. ಈ ಜನಪ್ರಿಯತೆಗೆ ಅವುಗಳ ಗುಣಗಳೇ ಕಾರಣ. ಆ ಗುಣಗಳು ಕಾಲದೇಶಭೇದವಿಲ್ಲದೆ ಎಲ್ಲ ಕಥೆಗಳಲ್ಲಿಯೂ ಕಾಣುವಂಥವು. ಯಾವ ದೇಶದ ಕಥೆಯನ್ನು ಎಲ್ಲಿಯವರೇ ಓದಲಿ ಅದು ಕೂಡಲೇ ಅವನನ್ನು ಆಕರ್ಷಿಸುತ್ತದೆ; ಆತ್ಮೀಯತೆಯನ್ನು ಮೂಡಿಸುತ್ತದೆ; ವಶಪಡಿಸಿಕೊಳ್ಳುತ್ತದೆ. ಎಲ್ಲ ಕಥಾ ಪ್ರಕಾರಗಳಿಗೂ ಅನ್ವಯವಾಗುವಂಥ ಕೆಲವು ಗುಣಗಳನ್ನು ಏಕ್ಸೆಲ್ ಆಲ್‌ರಿಕ್ ಅವರು ಪಟ್ಟಿ ಮಾಡಿದ್ದಾರೆ.[2] ಆ ಪಟ್ಟಿಯನ್ನುದ್ಧರಿಸಿ, ಕಥಾ ಸಮೀಕ್ಷೆಯನ್ನು ಕೊನೆಗೊಳಿಸಬಹುದು.

೧. ಕಥೆ ಬಹು ಮುಖ್ಯ ಕ್ರಿಯೆಯಿಂದ ಪ್ರಾರಂಭವಾಗುವುದಿಲ್ಲ ಮತ್ತು ಹಠಾತ್ತನೆ ಕೊನೆಗೊಳ್ಳುವುದಿಲ್ಲ. ಪೂರ್ವರಂಗ ಸಾವಕಾಶವಾಗಿ ತೆರೆಯುತ್ತದೆ. ಕಥೆ ಶಿಖರ ಮುಟ್ಟಿದ ನಂತರವೂ ವಿಶ್ರಾಮ ಸ್ಥಾನದವರೆಗೂ ಮುಂದುವರಿಯುತ್ತದೆ.

೨. ಪುನರಾವರ್ತನೆ ಎಲ್ಲ ಕಡೆಯೂ ಕಂಡುಬರುತ್ತದೆ. ಕಥೆಗೆ ನಿರೀಕ್ಷೆಯ ಕಾವು ಸಮನಿಸಲು ಮತ್ತು ಅದರ ಶರೀರ ತುಂಬಿಕೊಂಡು ಬೆಳೆಯಲು ಅದು ಅವಶ್ಯಕ. ಅದು ಬಹುತೇಕವಾಗಿ ಮೂರು ಮಡಿಯಿರುತ್ತದೆ. ಕೆಲವು ದೇಶಗಳಲ್ಲಿ ಮತೀಯ ಸಂಕೇತಕ್ಕಾಗಿ ಅದು ನಾಲ್ಮಡಿಯಾಗುತ್ತದೆ.

೩. ಸಾಮಾನ್ಯವಾಗಿ ಒಂದು ದೃಶ್ಯದಲ್ಲಿ ಇಬ್ಬರು ವ್ಯಕ್ತಿಗಳು ಮಾತ್ರ ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತಾರೆ. ಇಬ್ಬರಿಗಿಂತ ಹೆಚ್ಚಿರುವುದಾದರೆ, ಆ ಇಬ್ಬರು ಮಾತ್ರ ಏಕಕಾಲದಲ್ಲಿ ಚುರುಕಾಗಿರುತ್ತಾರೆ.

೪. ನಾಯಕ-ಖಳನಾಯಕ, ಶಿಷ್ಟ-ದುಷ್ಟ, ಹೀಗೆ ಪರಸ್ಪರ ವಿರುದ್ಧ ಸ್ವಭಾವದ ಪಾತ್ರಗಳ ನಡುವೆ ಹೋರಾಟ ನಡೆಯುತ್ತದೆ.

೫. ಒಂದೇ ಪಾತ್ರದಲ್ಲಿ ಇಬ್ಬರು ಕಾಣಿಸಿಕೊಳ್ಳುವುದಾದರೆ ಅವರು ಸಣ್ಣವರಂತೆ ಅಥವಾ ದುರ್ಬಲರಂತೆ ಚಿತ್ರಿತರಾಗುತ್ತಾರೆ. ಅವರು ಸಾಮಾನ್ಯವಾಗಿ ಅವಳಿ ಮಕ್ಕಳು. ಅವರು ಬಲಸಂತರಾದಾಗ ವಿರೋಧಿಗಳಾಗುವ ಸಾಧ್ಯತೆಯುಂಟು.

---

[2] ಈ ಪಟ್ಟಿ ಪರಿಪೂರ್ಣವಲ್ಲ. ಎಷ್ಟೋ ಮುಖ್ಯವಾದ ಹೆಸರುಗಳು ಬಿಟ್ಟುಹೋಗಿವೆ. ಜಗತ್ತಿನ ವಿವಿಧ ಭಾಗಗಳಲ್ಲಿ ನಡೆದಿರುವ ಕೆಲಸವನ್ನು ಸ್ಥೂಲವಾಗಿ ತಿಳಿಯಲಪೇಕ್ಷಿಸುವವರು ಸ್ಟಿತ್ ಥಾಂಪ್ಸನ್ನರ *The Folk Tale* ಗ್ರಂಥದಲ್ಲಿಯ 'International Organisation of Folk-lore Study' ಎಂಬ ಪ್ರಕರಣವನ್ನೂ, ಡಾ. ಜೀ. ಶಂ. ಪರಮಶಿವಯ್ಯನವರ 'ಕನ್ನಡ ಜನಪದ ಕಥೆಗಳು' ಗ್ರಂಥದ ಪ್ರಸ್ತಾವನೆಯನ್ನೂ ನೋಡಬಹುದು.

[3] ಈ ಪಟ್ಟಿಯನ್ನು ಸ್ಟಿತ್ ಥಾಂಪ್ಸನ್ನರ *The Folk Tale* ಎಂಬ ಗ್ರಂಥದಿಂದ ಉದ್ಧರಿಸಿದೆ. P. 456.

೬. ಒಂದು ಸಮೂಹದಲ್ಲಿ ಅತ್ಯಂತ ದುರ್ಬಲ ಅಥವಾ ಕನಿಷ್ಠನೆನಿಸಿಕೊಂಡವನು ಉತ್ತಮನಾಗುತ್ತಾನೆ. ಕಿರಿಯ ಸೋದರ ಅಥವಾ ಸೋದರಿ ಸಾಮಾನ್ಯವಾಗಿ ವಿಜಯ ಗಳಿಸುವುದುಂಟು.

೭. ಪಾತ್ರರಚನೆ ಸರಳ. ಕಥೆಯ ಮೇಲೆ ನೇರ ಪರಿಣಾಮವುಂಟುಮಾಡುವ ಗುಣಗಳು ಮಾತ್ರ ಉಲ್ಲೇಖಗೊಳ್ಳುತ್ತವೆ. ಪಾತ್ರಗಳ ಜೀವನ ವ್ಯಾಪಾರ ಯಾವುದೇ ಆಗಲಿ, ಕಥೆಗೆ ಬಾಹಿರವಾದದ್ದಾದರೆ, ಅದರ ಸೂಚನೆಯೂ ಸುಳಿಯುವುದಿಲ್ಲ.

೮. ವಸ್ತು ಸರಳವಾದದ್ದು. ಒಂದು ಸಾರಿ ಒಂದೇ ಒಂದು ಕಥೆ ಹೇಳಲಾಗುತ್ತದೆ. ಎರಡು ಅಥವಾ ಹೆಚ್ಚು ಉಪಕಥೆಗಳು ಸೇರಿಕೊಂಡಿದ್ದರೆ ಅದು ಶಿಷ್ಟ ಸಾಹಿತ್ಯದ ಲಕ್ಷಣಗಳನ್ನೊಳಗೊಂಡಿವೆ ಎಂದು ಹೇಳಬೇಕಾಗುತ್ತದೆ.

೯. ಪ್ರತಿಯೊಂದು ಘಟನೆ ಅಥವಾ ಸನ್ನಿವೇಶ ಸರಳವಾಗಿ ನಿರೂಪಣೆಗೊಳ್ಳುತ್ತವೆ. ಒಂದೇ ಜಾತಿಯ ವಿಷಯಗಳು ಹೆಚ್ಚು ಕಡಮೆ ಏಕರೀತಿಯಾಗಿ ವರ್ಣನೆಗೊಳ್ಳುತ್ತವೆ. ವೈವಿಧ್ಯವನ್ನು ಸಾಧಿಸುವ ಪ್ರಯತ್ನ ಇಲ್ಲಿ ನಡೆಯುವುದಿಲ್ಲ.

ಇವು ಜನಪದ ಕಥೆಗಳ ವಿಶಿಷ್ಟ ಲಕ್ಷಣಗಳೂ ಅಹುದು. ಅವುಗಳಿಂದ ಶಿಷ್ಟಪದ ಕತೆಗಳನ್ನು ಬೇರ್ಪಡಿಸುವ ಭೇದಗಳೂ ಅಹುದು. ಈ ಗುಣಗಳಿಂದಾಗಿ ಜನಪದ ಕಥೆ ಶ್ರೇಷ್ಠ ಸಾಹಿತ್ಯಪ್ರಕಾರವಾಗಿ, ಆದಿಮಾನವ ಹಾಗೂ ಆಧುನಿಕ ಮಾನವರ ನಡುವಣ ಅಂತರವನ್ನು ಅಳಿಸಿ, ಅಂದಿನಿಂದ ಇಂದಿನ ತನಕ ಏಕಪ್ರಕಾರವಾಗಿ ವಿಜೃಂಭಿಸುತ್ತಿದೆ.

ಜನಪದ ಕಥನ ಕಾವ್ಯ

ಅ. ಪ್ರವೇಶ

ಜಾನಪದ ಸಾಹಿತ್ಯಕ್ಷೇತ್ರದಲ್ಲಿ ಕಥನ ಕಾವ್ಯವೊಂದು ಪ್ರಮುಖ ಪ್ರಕಾರ. ಹೆಸರೇ ಸೂಚಿಸುವಂತೆ ಕಥೆಯೇ ಇಲ್ಲಿ ಪ್ರಧಾನ. ಭಾವಾಂಶಕ್ಕೆ ಇಲ್ಲಿ ಎಡೆಯಿರುವುದಾದರೂ ಅದು ಗೌಣ. ಭಾವಗೀತೆಯಲ್ಲಿ ಕತೆಯ ಅಂಶ ಇರಬಾರದೆಂದಿಲ್ಲ. ಆದರೆ ಅದು ಭಾವದ ಪೂರ ಬಂದಾಗ ಹಿಂದಾಗುತ್ತದೆ. ಕಥನಕಾವ್ಯದಲ್ಲಿ ಕವಿ ಕಾವ್ಯದ ಹೊರಗೆ ನಿಂತು, ತಾನೇ ಮಾತಾಡದೆ ಬೇರೆಯವರ ಮೂಲಕ ಮಾತಾಡುತ್ತಾನೆ. ಪಾತ್ರ ರಚನೆ ಮತ್ತು ಕ್ರಿಯೆಗಳಿಗೆ ಇಲ್ಲಿ ಅಗ್ರಸ್ಥಾನವೇ ಹೊರತು ವರ್ಣನೆಗಳಿಗಲ್ಲ. ಘಟನೆಯಿಂದ ಘಟನೆಗೆ ಸನ್ನಿವೇಶದಿಂದ ಸನ್ನಿವೇಶಕ್ಕೆ ಕತೆ ಸುಲಭವಾಗಿ, ಅಡೆತಡೆಗಳಿಲ್ಲದೆ ಹರಿಯಬೇಕು. ಅಲ್ಲಿ ಒಂದು ಪಾತ್ರ ಪ್ರಧಾನವಾಗಿದ್ದು, ಉಳಿದುವೆಲ್ಲ ಪ್ರಧಾನ ಪಾತ್ರಕ್ಕೆ ಪೋಷಕವಾಗಿ ಬರುತ್ತವೆ. ಯಾವುದೋ ಒಂದು ಘಟನೆ, ಒಂದು ಸನ್ನಿವೇಶ, ಒಂದು ತತ್ವ ದೃಷ್ಟಿ ಕೇಂದ್ರವಾಗಿದ್ದು, ಉದ್ದಿಷ್ಟ ಗುರಿ ಸ್ಪಷ್ಟವಾಗಿದ್ದು, ಪರಿಣಾಮವೊಂದೇ ಚರಮಗಂತವ್ಯವಾಗಿರುತ್ತದೆ. ವಸ್ತು ಸಂವಿಧಾನದಲ್ಲಿ ಜಟಿಲತೆಯಾಗಲೀ ಸಂಕೀರ್ಣತೆಯಾಗಲೀ ಇರುವುದಿಲ್ಲ. ನಡುನಡುವೆ ರಾಜಕೀಯ ಲಕ್ಷಣಗಳು ಇಣುಕಬಹುದು. ಪದ್ಯಮಾಧ್ಯಮದ ಕಥೆಯೇ ಕಥನ ಕಾವ್ಯವೆಂದು ಹೇಳುವುದೇನೋ ಸುಲಭ. ಪದ್ಯ ಅಥವಾ ಗದ್ಯಮಾಧ್ಯಮ ಮಾತ್ರ ಕಥೆ ಮತ್ತು ಕಥನಕಾವ್ಯಗಳಿಗಿರುವ ಪರಸ್ಪರ ವ್ಯತ್ಯಾಸವೆಂದು ಹೇಳಲಾಗದು. ಗದ್ಯಕಥೆ ನೆಲದಲ್ಲಿ ಹರಿಯುವ ತೇರು: ಪದ್ಯಕತೆ ಆಕಾಶದಲ್ಲಿ ಹಾರಾಡುವ ಪುಷ್ಪಕ. ಅಂದಮೇಲೆ ಅಲ್ಲಿ ಕಲ್ಪನೆಗೆ ಮತ್ತು ವರ್ಣನೆಗಳಿಗೆ ಅವಕಾಶವಿದೆ ಎಂದು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ, ಬಹು ಜಟಿಲವಲ್ಲದ ಸಂಕೀರ್ಣತೆಗೂ ಎಡೆಯುಂಟು.

ವರ್ಧಮಾನದ ದೃಷ್ಟಿಯಿಂದ ಮೊದಲು ಕಥೆ; ಆಮೇಲೆ ಕಥನಕಾವ್ಯ ಹುಟ್ಟಿರಬೇಕೆಂದು ತೋರುತ್ತದೆ. ಭಾವಗೀತೆಯಂತು ಕತೆಗಿಂತ ಮೊದಲೇ ಇತ್ತು. ನಾಟಕವೂ ಪ್ರಾಯಶಃ ಕತೆಗಿಂತ ಮೊದಲೋ ಅಥವಾ ಅದರ ಜತೆಗೋ ಅವತರಿಸಿರಬೇಕೆಂದು ಊಹಿಸಬಹುದಾಗಿದೆ. ಈ ಮೂರೂ ಪ್ರಕಾರಗಳ ಕೆಲಕೆಲವು ಅಂಶಗಳನ್ನು ಮೈಗೂಡಿಸಿಕೊಂಡು ಕಥನಕಾವ್ಯ ಆವಿರ್ಭವಿಸಿರಬೇಕು. ಅಮೂರ್ತಸ್ವರೂಪದ ಭಾವಗೀತೆ ದುರವಗಾಹ್ಯವಾದದ್ದು : ಸಾಮಾನ್ಯನಿಗೆ ನಿಲುಕುವುದು ಕಷ್ಟ : ಕಥನಕಾವ್ಯದ ವಸ್ತು ಮುಷ್ಟಿ

ಗ್ರಾಹ್ಯವಾದ್ದರಿಂದ ಯಾರು ಬೇಕಾದರೂ ಅರ್ಥಮಾಡಿಕೊಳ್ಳಬಹುದು. ಒಂದು ಕ್ಷಣದ ಭಾವ ಅಥವಾ ಅನುಭವ ಭಾವಗೀತೆಯ ಸಾಮಗ್ರಿಯಾಗುತ್ತದೆ; ಅದು ಕಾಲದೇಶಾತೀತ, ಅಂದರೆ ಅದಕ್ಕೆ ಕಾಲದ ಪ್ರಜ್ಞೆಯಿರುವುದಿಲ್ಲ; ಕ್ರಿಯಾತ್ಮಕವಾದ ಘಟನೆಗಳು ಕಥನಕಾವ್ಯದ ಗ್ರಾಸ; ಅದು ಕಾಲದೇಶನಿಬದ್ಧವಾದದ್ದು, ಅಂದರೆ ಅದರ ಕ್ರಿಯೆ ಯಾವುದೋ ದೇಶದಲ್ಲಿ, ಎರಡು ಕಾಲಗಳ ಗಡಿಯೊಳಗೆ ನಡೆಯುವಂಥದು.

ಕಥನಕಾವ್ಯವೆಂದ ಕೂಡಲೇ ಹರಿಹರ ಚಾಸರರ ನೆನಪಾಗುತ್ತದೆ. ಆದರೆ ಅವರು ಶಿಷ್ಟ ಸಾಹಿತ್ಯಕ್ಷೇತ್ರದಲ್ಲಿ ಅದರ ಆದ್ಯಪ್ರವರ್ತಕರೆನಿಸಿಕೊಂಡರೂ ಆ ಪ್ರಕಾರಮೊದಲೇ ಜಾನಪದ ಕ್ಷೇತ್ರದಲ್ಲಿ ರೂಹಿಕ್ಕಿರಬೇಕು, ಜನಪ್ರಿಯವಾಗಿರಬೇಕು. ಮಾನವ ಜೀವನ ಸಂಕೀರ್ಣವಾದ್ದರಿಂದ, ಅವನ ಅನುಭವಗಳು ಆಶೋತ್ತರಗಳು ಆಲೋಚನೆಗಳು ಅನಂತವಾದ್ದರಿಂದ, ಅವನ ಕಾರ್ಯಕ್ಷೇತ್ರ ವಿಸ್ತಾರವಾದ್ದರಿಂದ ಅವನ್ನೆಲ್ಲ ಯಾವುದೋ ಒಂದು ಅಥವಾ ಎರಡು ಕಲಾಪ್ರಕಾರಗಳು ಅಥವಾ ಸಾಹಿತ್ಯಪ್ರಕಾರಗಳು ಪ್ರತಿಬಿಂಬಿಸಬಲ್ಲವೆಂದು, ಅವನ ಅಗತ್ಯಗಳನ್ನೆಲ್ಲ ಅವು ಪೂರೈಸಬಲ್ಲುವೆಂದು ಹೇಳಲಾಗದು. ಅವನ ಅಗತ್ಯಗಳಿಗೆ ತಕ್ಕಂತೆ ಅಪ್ರಜ್ಞಾಪೂರ್ವಕವಾಗಿಯೇ ಅನೇಕ ಕಲಾಪ್ರಕಾರಗಳು, ಅನೇಕ ಜ್ಞಾನ ಶಾಖೆಗಳು ಹುಟ್ಟಿಕೊಂಡದ್ದುಂಟು. ಕಥನ ಕಾವ್ಯ ಉದಿಸಿದ್ದೂ ಹಾಗೆಯೇ. ಮದುವೆ. ಹಬ್ಬಹರಿದಿನಗಳು, ನಾಟಿ ಕಳೆ ಒಕ್ಕಣೆ ಮೊದಲಾದ ಕೃಷಿಕರ್ಮಗಳು, ಅಡಿಕೆ ಸಿಪ್ಪೆ ಸುಲಿಯೋಣ, ಹಗ್ಗ ಹೊಸೆಯೋಣ, ಪುಟ್ಟಿ ಹೆಣೆಯೋಣ ಮೊದಲಾದ ವೃತ್ತಿಗಳು ನೂಲೋಣ ಬೀಸೋಣ ಮೊದಲಾದ ಗೃಹಕೃತ್ಯಗಳು ವಿರಾಮವಾಗಿ ನಡೆಯುವಂಥವು. ಭಾವಗೀತೆಯ ಹಾಡುಗಾರಿಕೆ ಕ್ಷಿಪ್ರದಲ್ಲಿ ಮುಗಿದುಹೋಗುತ್ತದೆ. ಜತೆಗೆ ಕೆಲವು ವೇಳೆ ಕುಣಿತ ಹಾಡುಗಾರಿಕೆಯಿಲ್ಲದೆ ನಡೆಯುವಂತಿಲ್ಲ; ಹಾಡಿನಿಂದ ಆವೇಶ ಬರುತ್ತದೆ, ಅದಕ್ಕೆ ಶೋಭೆ ಕಟ್ಟುತ್ತದೆ. ಲಯಪ್ರಾಸಗಳಿಂದಾಗಿ ಪದ್ಯ ತೀವ್ರವಾಗಿ ಮನಸ್ಸನ್ನು ವಶಪಡಿಸಿಕೊಳ್ಳುತ್ತದೆ, ಅಲ್ಲಿ ಬಹುಕಾಲ ನಿಲ್ಲುತ್ತದೆ, ಅದನ್ನು ಮತ್ತೆ ಕುರುಕಿಕೊಳ್ಳು ವಾಗ ಆನಂದವಾಗುತ್ತದೆ. ಒಂಟಿತನಕ್ಕೆ ಹಾಡು ಶ್ರೇಷ್ಠ ಸಂಗಾತಿಯಾಗುತ್ತದೆ. ವಿರಾಮ ಕಾಲವನ್ನು ತುಂಬುವಂಥ, ಮನೋಲ್ಲಾಸವನ್ನುಂಟುಮಾಡುವಂಥ, ಸರ್ವಗ್ರಾಹ್ಯವಾಗು ವಂತೆ ಚಿತ್ರ ದೃಶ್ಯಗಳ ಮೆರವಣಿಗೆಯನ್ನು ಸಾಧ್ಯವಾಗಿಸುವಂಥ ಪ್ರಕಾರ ಕಥನ ಕಾವ್ಯ. ಅದರಲ್ಲಿ ಗದ್ಯದ ಸೊಗಸು ಸೊಗಡು ಹರಿವುಗಳಿರುತ್ತವೆ, ಪದ್ಯದ ಕಾವು ಜಿಗಿತ ಪೆಂಪು ಗಳಿರುತ್ತವೆ. ಇತರ ಪ್ರಕಾರಗಳ ಗುಣಗಳೂ ಅದರಲ್ಲಿ ಅಡಕವಾಗಿರುವುದರಿಂದ ಅದರ ಉತ್ಕೃಷ್ಟತೆ ತಾನಾಗಿಯೇ ಸಂಸ್ಥಾಪಿತವಾಗುತ್ತದೆ.

ಜಾನಪದ ಕಥನ ಕಾವ್ಯ ಬಹು ಸಂಕೀರ್ಣವಾದ, ವರ್ಗೀಕರಣಕ್ಕೆ ಸುಲಭವಾಗಿ ಸಗ್ಗದ, ವೈವಿಧ್ಯತೆಯ ವೈಭವದಿಂದ ಬೆರಗುಗೊಳಿಸುವ ಪ್ರಕಾರ. ಅರ್ಧಗಂಟೆಯಲ್ಲಿ ಹಾಡಬಹುದಾದ ಪದಗಳಿಂದ ಹಿಡಿದು ಇಡೀ ರಾತ್ರಿ, ಒಂದು ರಾತ್ರಿ ಏಕೆ ಅನೇಕ ರಾತ್ರಿಗಳ ತನಕ ಹಾಡುವಷ್ಟು ಪದಗಳು ಅದರ ಬಸಿರಲ್ಲಿ ಹುದುಗಿವೆ. ವಸ್ತುವೈವಿಧ್ಯ ನೋಡಿದರೆ ಅದರದೇ ಒಂದು ವಿಶ್ವವಾಗುತ್ತದೆ. ಪುರಾಣ. ಇತಿಹಾಸ. ಯುದ್ಧ.

ಸಾಹಸಕಾರ್ಯ, ದೇವಮಾನವ ಸಂಸಾರ, ಸಾಮಾಜಿಕ ಜೀವನ, ಅಮಾನುಷ ಘಟನೆಗಳು, ಸಾಧುಸಂತ ವೀರರ ಜೀವನ, ವಿನೋದ ಸಂಗತಿಗಳು ; ಐತಿಹ್ಯ, ದಂತಕಥೆ, ತತ್ವ ವಿಚಾರ, ನೀತಿ, ಸ್ವಾತಂತ್ರ್ಯ ಚಳುವಳಿ, ದೇಶಾಭಿಮಾನಿಗಳ ತ್ಯಾಗ, ಪ್ರಾಣಿಕಥೆ, ಹೀಗೆ ಒಂದೇ ಎರಡೇ, ಸರ್ವಜಗದ್ವಸ್ತುಗಳು ಹಾಗೂ ವ್ಯಾಪಾರಗಳು ಅದಕ್ಕೆ ಗ್ರಾಸವಾಗುತ್ತವೆ. ಹಿಂದೀ ಭಾಷೆಯಲ್ಲಿ ಕಥನಕಾವ್ಯ ಅಥವಾ ಬ್ಯಾಲೆಡ್ಡುಗಳಿಗೆ ಸಂವಾದಿಯಾಗಿ ಲೋಕಗಾಥಾ ಎಂಬ ಪದವನ್ನು ಬಳಸುತ್ತಾರೆ. ಅವರ ಪ್ರಕಾರ ಲೋಕಗಾಥಾಗಳ ಲಕ್ಷಣಗಳಿವು: ಅಜ್ಞಾತ ಕರ್ತೃತ್ವ, ಮೂಲ ಪಾಠದ ಅಭಾವ, ಸಂಗೀತ ನೃತ್ಯಗಳ ಸಾಹಚರ್ಯ, ಸ್ಥಳೀಯ ಪ್ರಭಾವಮುದ್ರೆ, ಉಪದೇಶ ಪ್ರವೃತ್ತಿಯ ಗೈರುಹಾಜರಿ, ಸಾಲಂಕೃತ ಶೈಲಿಯ ಅಭಾವ, ಕವಿ ವ್ಯಕ್ತಿತ್ವದ ಅಪ್ರಾಧಾನ್ಯ, ದೀರ್ಘತೆ, ಪಲ್ಲವಿಯ ಪುನರಾವರ್ತನೆ.[1] ಅವುಗಳನ್ನು ವಿವರಿಸಿದ ನಂತರ, ಗಾಥಾಗಳ ವರ್ಗೀಕರಣ ವಿಧಾನವನ್ನು ವಿಸ್ತರಿಸುತ್ತಾರೆ. ಕೆಲವರು ಅವನ್ನು ಪ್ರೇಮಕಥಾತ್ಮಕ, ವೀರಕಥಾತ್ಮಕ ಮತ್ತು ರೋಮಾಂಚಕಥಾತ್ಮಕವೆಂದು ಮೂರು ವಿಭಾಗವಾಗಿಯೂ, ಮತ್ತೆ ಕೆಲವರು (ಪಾಶ್ಚಾತ್ಯರು) ಪ್ರಾಚೀನತಮ, ಕೌಟುಂಬಿಕ, ಶೋಕಪೂರ್ಣ ಹಾಗೂ ಅಲೌಕಿಕ, ಐತಿಹ್ಯಾತ್ಮಕ, ಸೀಮಾಂತ, (Border land), ಆರಣ್ಯಕ (Greenwood) ಎಂದು ಆರು ಬಗೆಯಾಗಿಯೂ ವಿಂಗಡಿಸುತ್ತಾರೆಂದು ಆ ವಿದ್ವಾಂಸರು ತಿಳಿಸುತ್ತಾರೆ.[2] ಈ ವರ್ಗೀಕರಣವೇ ಕೊನೆಯೇನಲ್ಲ. ಈ ವರ್ಗಗಳಲ್ಲಿ ನಮ್ಮಲ್ಲಿರುವ ಎಲ್ಲ ಕಥನಕಾವ್ಯಗಳನ್ನು ಅಳವಡಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಗಾತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಥನಕಾವ್ಯವನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದೆಂದು ತೋರುತ್ತದೆ. ಲಾವಣಿ, ಕಥನಗೀತೆ, ಅಥವಾ ನೀಳ್ಗವನ ಖಂಡ ಕಾವ್ಯ ಮತ್ತು ಮಹಾಕಾವ್ಯಗಳ ಚೌಕಟ್ಟಿನಲ್ಲಿ ಎಲ್ಲ ಕಥನಕಾವ್ಯಗಳನ್ನು ಅಳವಡಿಸುವುದು ಸಾಧ್ಯವಾಗುತ್ತದೆ.

ಆ. ಬ್ಯಾಲೆಡ್ಡು

ಇಂಗ್ಲಿಷಿನ Ballad ಎನ್ನುವ ಪದಕ್ಕೆ ಸಂವಾದಿಯಾಗಿ 'ಲಾವಣಿ' ಎಂಬ ಪದ ಈಗ ಬಳಕೆಯಲ್ಲಿದೆ. ೧೯೧೯ರಲ್ಲಿ ನಡೆದ ಐದನೆಯ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಶ್ರೀ ಹನುಮಂತ ಗೌಡರು'ಲಾವಣಿಗಳು' ಎಂಬ ವಿಷಯವನ್ನು ಕುರಿತು ಉಪನ್ಯಾಸ[3] ಮಾಡಿದಾಗ 'Ballad' ಎನ್ನುವ ಅರ್ಥದಲ್ಲಿಯೇ ಆ ಮಾತನ್ನು ಬಳಸಿರಬೇಕು. ೧೯೩೬ರಲ್ಲಿ 'ಕನ್ನಡನಾಡಿನ ಲಾವಣಿ ಸಾಂಗತ್ಯಗಳು'[4] ಎಂಬ ಪ್ರಬಂಧವನ್ನು ಬರೆದು ಮಾಸ್ತಿ

---

[1] ಹಿಂದೀ ಸಾಹಿತ್ಯಕಾ ಬೃಹದ್ ಇತಿಹಾಸ, ಸಂ: ರಾಹುಲ ಸಾಂಕೃತಾಯನ ಮತ್ತು ಕೃಷ್ಣದೇವ್ ಉಪಾಧ್ಯಾಯ, ಷೋಡಶ ಭಾಗ, ಪು. 57.

[2] ಅದೇ., ಪು. 106.

[3] ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. 2–3.

[4] ವಿಮರ್ಶೆ, ಭಾಗ ೧.

ಯವರು ಜಾನಪದ ಸಾಹಿತ್ಯದ ಪ್ರಾಶಸ್ತ್ಯವನ್ನು ಕೊಂಡಾಡುವಾಗ ಲಾವಣಿಗಳನ್ನೇ ಪ್ರಧಾನವಾಗಿ ತಮ್ಮ ಕಣ್ಮುಂದಿರಿಸಿಕೊಂಡಿದ್ದಾರೆ. ಗಾಡಿ ಹೊಡೆಯುವವರ ಸವಾಲ್ ಜವಾಬು, ಶ್ರೀರಂಗಪಟ್ಟಣದ ಲಾವಣಿ, ಮಲೆನಾಡಿನ ದೀಪಾವಳಿ ಸಂಬಂಧದ ಹಾಡುಗಳು, ಜೋಗಿ ಹಾಡು ಮೊದಲಾದುವನ್ನು ಅವರಲ್ಲಿ ಉಲ್ಲೇಖಿಸಿದ್ದಾರೆ. ತಲೆ ಹೆಸರಿನಲ್ಲಿ 'ಸಾಂಗತ್ಯಗಳು' ಎಂಬ ಪದವಿದ್ದರೂ, ಪ್ರಬಂಧದುದ್ದಕ್ಕೂ 'ಲಾವಣಿ' ಎಂಬ ಪದವನ್ನೇ ಬಳಸಿದ್ದಾರೆ. 'ಪಿರಿಯಾಪಟ್ಟಣದ ಲಾವಣಿ ಹೇಳತೀನಿ ಕೇಳಿರಿ ಮಾಸಭೆಯೆಲ್ಲ[1]' ಎಂಬ ವಾಕ್ಯದಿಂದ 'ಪಿರಿಯಾಪಟ್ಟಣದ ಲಾವಣಿ ಪ್ರಾರಂಭವಾಗುತ್ತದೆಂಬುದನ್ನು ಗಮನಿಸಿದಾಗ ಆ ಪದ ಬಹು ಹಿಂದೆಯೇ ರೂಢಿಯಲ್ಲಿತ್ತೆಂದು ತೋರುತ್ತದೆ. ಉತ್ತರ ಕರ್ನಾಟಕದಲ್ಲಿ ಸಂವಾದ ಪ್ರಧಾನವಾದ ತುರಾಕಲ್ಗಿ ಲಾವಣಿಗಳು ಪ್ರಸಿದ್ಧವಾಗಿವೆ ಎಂಬ ಸಂಗತಿಯನ್ನೂ ಇಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. ತುರಾಕಲ್ಗಿ ಸಂಪ್ರದಾಯವನ್ನು ಹೆರದೇಶಿ–ನಾಗೇಶಿ ಎಂಬ ಹೆಸರಿಂದ ಕರೆಯುವುದೂ ಉಂಟು. ಸಾಮಾನ್ಯವಾಗಿ ಗರುಡಿಯ ಮನೆಯವರಲ್ಲಿ ಬಳಕೆಯಲ್ಲಿರುವುವೇ[2] ಲಾವಣಿಗಳೆಂದು ಅವುಗಳ ಕ್ಷೇತ್ರವನ್ನು ಸೀಮಿತಗೊಳಿಸುವುದು ಸರಿಯಲ್ಲ. ಸ್ವಾತಂತ್ರ್ಯೋತ್ಸವ ಸಮಯದಲ್ಲಿ ಅವುಗಳ ಭರಾಟೆ ನಾಡುಬೀಡುಗಳನ್ನೆಲ್ಲ ವ್ಯಾಪಿಸಿತ್ತು.

ಕೆಲವು ಗುಣಗಳಲ್ಲಿ ಬ್ಯಾಲೆಡ್ ಮತ್ತು ಲಾವಣಿಗಳು ಒಂದೆಯಾಗಿ ತೋರಿದರೂ, ಆಳವಾಗಿ ಹೊಕ್ಕು ನೋಡಿದಾಗ ಅವು ಭಿನ್ನವಾಗಿ ಕಾಣುತ್ತವೆ. ಜತೆಗೆ ಲಾವಣಿ ಎನ್ನುವ ಪದಕ್ಕೂ, ಅದು ಸೂಚಿಸುವ ಕಾವ್ಯಪ್ರಕಾರದ ಲಕ್ಷಣಗಳಿಗೂ ಏನೇನೂ ಸಂಬಂಧವಿಲ್ಲ; ಅಷ್ಟೇ ಅಲ್ಲ, ಉತ್ತರ ಕರ್ನಾಟಕದಲ್ಲಿ ಲಾವಣಿ ಎಂಬ ಪದವನ್ನು ವಿಶಿಷ್ಟ ಜಾತಿಯ ಕಥನಕಾವ್ಯಪ್ರಕಾರಕ್ಕೆ ಅನ್ವಯಿಸುತ್ತಾರೆಂಬ ಮಾತಿನಲ್ಲಿ ಹುರುಳಿಲ್ಲದಿಲ್ಲ. ಡಾ. ಎಂ. ಎಂ. ಕಲ್ಬುರ್ಗಿಯವರು ಡಾ. ಜೀ. ಶಂ. ಪರಮಶಿವಯ್ಯನವರ 'ಜನಪದ ಕಾವ್ಯಕಥೆಗಳು' ಎಂಬ ಗ್ರಂಥದ ಪ್ರಸ್ತಾವನೆಯನ್ನು ಕುರಿತು ಪ್ರಸ್ತಾಪಿಸುತ್ತ "ಜನಪದ ಸಾಹಿತ್ಯವನ್ನು ವೈಜ್ಞಾನಿಕವಾಗಿ ವರ್ಗೀಕರಿಸಬೇಕಾದ, ಹೆಸರಿಸಬೇಕಾದ ಈ ಕಾಲದಲ್ಲಿ ಶ್ರೀ ಜೀ.ಶಂ.ಪ ಅವರು ಈ ಹೊಸ ಪ್ರಯೋಗದಿಂದ ಮುಂದಿನ ಸಂಶೋಧಕ ರಿಗೆ ತಿಳಿದೂ ತಿಳಿದೂ ಹೊಸದೊಂದು ತೊಡಕನ್ನು ಹುಟ್ಟಿಸಿಕೊಟ್ಟಂತಾಗಿದೆ. ಏನೆಲ್ಲ ಪಕ್ಕೂ ಇಂಗ್ಲಿಷಿನ ಬೆನ್ನು ಹತ್ತಿ ಅಲ್ಲಿರುವ ಪ್ರಕಾರಗಳಿಗೆ, ಹೆಸರುಗಳಿಗೆ ನಮ್ಮಲ್ಲಿಯ ಪ್ರಕಾರಗಳನ್ನು, ಹೆಸರುಗಳನ್ನು ಹೊಂದಿಸಿ ನೋಡುವ ಜುಲುಮೆಯ ಪ್ರಯತ್ನವನ್ನು ಬಿಟ್ಟುಕೊಟ್ಟು ನಮ್ಮ ಜನಪದ ಸಾಹಿತ್ಯವನ್ನು ನಮ್ಮ ಪರಂಪರೆಯಲ್ಲಿ ನೋಡುವುದು ಲೇಸು. ಒಂದು ವೇಳೆ ಇಂಗ್ಲಿಷ್ Balladಗಳಿಗೆ ಸಮನಾಗಿ ನಮ್ಮಲ್ಲಿರುವ ಹಾಡು ಗಳಿಗೆ ಕನ್ನಡ ಹೆಸರು ಕೊಡುವುದಿದ್ದರೆ ಜಾನಪದ ವಿಶಿಷ್ಟ ಪ್ರಕಾರಕ್ಕೆ ಸೀಮಿತವಾಗಿರುವ

---

1 'ಪಿರಿಯಾಪಟ್ಟದ ಜಗಳವು ಹೇಳುತೀನಿ ಕೇಳಿರಣ್ಣ ನೀವ್ ಸಭೆಯೆಲ್ಲ' ಎಂಬ ಪಾಠಾಂತರವೂ ಉಂಟು. ಕರ್ನಾಟಕ ಸಂಸ್ಕೃತಿ, ಜೇವುಡು, ಪುಟ 22.

2 ಅದೇ, ಪುಟ 15.

'ಲಾವಣಿ' ಎಂಬ ಪದವನ್ನು ಬಿಟ್ಟು ಅವರು ಬೇರೊಂದು ಪದವನ್ನು ಸೃಷ್ಟಿಸಲಿ. ಇಲ್ಲವಾದರೆ Balladದ ಒಂದು ಪ್ರಭೇದವೆನಿಸುವ ಲಾವಣಿಯನ್ನೇ Balladಗೆ ಸಂವಾದಿಯಾಗಿ ಬಳಸಿದಂತಾಗುತ್ತದೆ"[1] ಎಂದು ಹೇಳಿರುವುದು ಯುಕ್ತವಾಗಿದೆ. ತಮ್ಮ ವಾದ ಸಮರ್ಥನೆಗೆ ಅವರು ಮಂಡಿಸಿರುವ ಕಾರಣಗಳೂ ಸಮ್ಮತಾರ್ಹವಾಗಿವೆ. ಅವನ್ನು ಹೀಗೆ ಸಂಗ್ರಹಿಸಬಹುದು : ಲಾವಣಿಗಳಲ್ಲಿ ಬಯಲು ಲಾವಣಿ, ಮೇಳ ಲಾವಣಿ ಎಂದು ಎರಡು ಪ್ರಕಾರ. ಒಬ್ಬ ಹಾಡುವುದು ಬಯಲು ಲಾವಣಿ, ಕನಿಷ್ಠ ಪಕ್ಷ ಇಬ್ಬರು ಹಾಡುವುದು ಮೇಳಲಾವಣಿ. ಒಬ್ಬನಿರುವಾಗ ಗೆಜ್ಜೆ ಕಟ್ಟಿಕೊಳ್ಳುತ್ತಾನೆ; ಹೆಚ್ಚು ಜನರಿರುವಾಗ ದಪ್ಪು ತುಂತುಣಿ ತಾಳ ಮೊದಲಾದ ವಾದ್ಯಗಳನ್ನು ಬಳಸುತ್ತಾರೆ. ಮೇಳ ಲಾವಣಿಗಳಲ್ಲಿ ಸ್ತ್ರೀ ಪಕ್ಷ ಪುರುಷ ಪಕ್ಷಗಳ ನಡುವೆ ಸ್ಪರ್ಧೆ ನಡೆಯುತ್ತದೆ. ಆರಂಭದ ಹಾಡು ಸಖಿ, ಕೊನೆಯ ಹಾಡು ಖ್ಯಾಲಿ, ಮಧ್ಯದ ಹಾಡು ಲಾವಣಿ. ಕಂಚಿಯ ಹಾಡು, ಡೊಳ್ಳಿನ ಹಾಡು, ಗೊಂದಲ ಹಾಡು, ಚೌಡಕಿ ಹಾಡು, ಕರ್ಬಲ ಹಾಡು, ಗೌರಿ-ಸೀಗಿ ಹಾಡು, ಇವೆಲ್ಲವನ್ನು ಲಾವಣಿಯಲ್ಲಿ ಅಂತರ್ಗತಗೊಳಿಸುವುದರಿಂದ ಗೊಂದಲವುಂಟಾಗುವುದಲ್ಲದೆ, ಆ ಹಾಡುಗಾರರಿಗೆ ಅಪಮಾನ ಮಾಡಿದಂತಾಗುತ್ತದೆ. ಈ ವಿವರಣೆಯಲ್ಲಿ ಲಾವಣಿಯ ಲಕ್ಷಣಗಳೂ ಅಡಕಗೊಂಡಿವೆ. ಕಲ್ಬುರ್ಗಿಯವರು ಹೊಸ ಹೆಸರು ಸೂಚಿಸಿಲ್ಲವಾದರೂ, ಸತತಾಭ್ಯಾಸದ ಮತ್ತು ಸೂಕ್ಷ್ಮಾನುಭವದ ಅವರ ಮಾತುಗಳನ್ನು ನಿರ್ಲಕ್ಷಿಸುವಂತಿಲ್ಲ.

ಉತ್ತರ ಕರ್ನಾಟಕದ ಮತ್ತೊಬ್ಬ ವಿದ್ವಾಂಸರು ಶ್ರೀ ಪ್ರಹ್ಲಾದಕುಮಾರ ಭಾಗೋಜಿಯವರು ಹೆಚ್ಚುಕಡಮೆ ಇದೇ ಅಭಿಪ್ರಾಯವುಳ್ಳವರಾದರೂ, ಲಾವಣಿ ಪದವನ್ನು ಸಂಪೂರ್ಣವಾಗಿ ತಿರಸ್ಕರಿಸಿದಂತಿಲ್ಲ. "ಅದರ ಛಂದಸ್ಸು, ಹಾಡಿನ ಗತಿ, ಕಥಾನಿರೂಪಣೆಗಳಲ್ಲಿರುವ ವಿಶಿಷ್ಟತೆಯಿಂದಲೇ ಅದು ಗುರುತಿಸಲ್ಪಡುತ್ತದೆ....ಇದಕ್ಕೆ (Ballad) ಸಂವಾದಿಯಾಗಿ 'ಗೀತಕಥನ'ವೆಂದೂ, 'ಜನಪದ ಕಥನಗೀತ'ವೆಂದೂ ಪದಗಳನ್ನು ಬಳಸಬಹುದು. ಲಾವಣಿ ಎಂಬುದನ್ನು ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಸಾಹಿತ್ಯರೂಪಕ್ಕೆ ಮಾತ್ರ ಬಳಸುವುದು ಉಚಿತ."[2] ಎಂದು ಹೇಳಿದವರೆ ಲಾವಣಿಗಳನ್ನು (೧) ಕಲ್ಗಿ-ತುರಾಯಿ ಲಾವಣಿ (೨) ಕಥಾಸಾರ ಲಾವಣಿ (೩) ನೀತಿಸಾರ ಲಾವಣಿ (೪) ತತ್ವಸಾರ ಲಾವಣಿ ಎಂದು ವಿಭಾಗ ಮಾಡಿದ್ದಾರೆ. ಕಥಾಸಾರ ಲಾವಣಿಗಳಡಿಯಲ್ಲಿ ಸಂಗೊಳ್ಳಿರಾಯಣ್ಣ, ಕೃಷ್ಣಲೀಲೆ ಮೊದಲಾದುವನ್ನು ಹೆಸರಿಸಿದ್ದಾರೆ. ಜಾತ್ರೆಗಳ ವರ್ಣನೆಗಳೂ, ಸಾಮಾಜಿಕ ಘಟನೆಗಳೂ, ಮಾನವ ಮನೋಧರ್ಮದ ವಿವಿಧ ಬಗೆಗಳೂ, ಹಾಸ್ಯ ವಿನೋದಗಳೂ ಲಾವಣಿಯ ರೂಪತಾಳಿವೆ. ಆರೂಢಸ್ವಾಮಿ ಜಾತ್ರೆ, ಹುಬ್ಬಳ್ಳಿ ಮಾರ್ಕೆಟ್ ಸುಟ್ಟಪದ, ಸವತಿಮಾತ್ಸರ್ಯ, ಧಾನ್ಯ-ಬಂಗಾರಗಳ ಸಂವಾದ, ಬಸಿದ್ದೇನೆ ಹೆಸರಿನ್ನೇನಿಡೂನ? ಇಂತಹ ಲಾವಣಿಗಳು ಈ ವೈವಿಧ್ಯವನ್ನು ತೋರು

[1] ಲಾವಣಿ : ಒಂದು ಸ್ಪಷ್ಟನೆ (ಮಂಥನ); ಸಾಧನೆ ೨-೨.

[2] ಲಾವಣಿ : ಜಾನಪದ ಸಾಹಿತ್ಯ ದರ್ಶನ, ಸಂ. ಡಾ. ಆರ್. ಸಿ. ಹಿರೇಮಠ, ಪು. 219-220.

ತ್ತವೆ."[1] ನರಗುಂದ ಬಾಬಾಸಾಹೇಬನ ಲಾವಣಿಯಂಥವು ವೀರಗೀತೆಗಳೆನ್ನುತ್ತಾರೆ. ಇಂದು "ಕುಟುಂಬ ಯೋಜನೆ, ಸುಧಾರಿಸಿದ ಒಕ್ಕಲುತನ, ರೈತನ ಉದ್ಧಾರ, ಸಾಕ್ಷರತಾ ಪ್ರಚಾರ, ಮೊದಲಾದುವು ಲಾವಣಿಯ ವಿಷಯಗಳಾಗಿವೆ....ಗೀತ ಕಥನಗಳ ಸಮುದ್ರದಲ್ಲಿ ಒಂದಾಗಿರುವ ಲಾವಣಿಯು ಅಲ್ಲಿಯ ಒಂದು ಹಿರಿಯ ತೆರೆಯಾಗಿದೆ."[2] "ಹೋಳಿಯ ಪದಗಳು, ಗೊಂದಲಿಗರ ಹಾಡುಗಳು, ಕುಮಾರರಾಮನ ಸಾಂಗತ್ಯ ಮೊದಲಾದುವು ಲಾವಣಿಯೆಂದು ಹೇಳಲ್ಪಡುವುದಿಲ್ಲ."[3] ಸಂಗೊಳ್ಳಿರಾಯಣ್ಣನ ಕತೆ ಲಾವಣಿಯಾದರೆ ಕುಮಾರರಾಮನ ಸಾಂಗತ್ಯ ಏಕೆ ಲಾವಣಿಯಾಗಬಾರದು ? ಹೋಳೀ ಹಾಡೆಂದು ಎಣಿಕೆಗೊಂಡಿರುವ ವೀರ ಅಭಿಮನ್ಯು, ಕೃಷ್ಣಾರ್ಜುನರ ಕಾಳಗಗಳು ಲಾವಣಿ ಏಕಾಗಬಾರದು ?

ಮೇಲಣ ವಿವರಣೆಯಿಂದ ಉತ್ತರ ಕರ್ನಾಟಕದಲ್ಲಿ ಲಾವಣಿ ಎಂಬುದು ಒಂದು ವಿಶಿಷ್ಟ ಪ್ರಕಾರ ಎಂಬುದು ನಿಜ. "ಮಹಾರಾಷ್ಟ್ರದಲ್ಲಿ ಉತ್ತರ ಪೇಶವಾಯಿ ಕಾಲದಲ್ಲಿ ಮೊಟ್ಟಮೊದಲಿಗೆ ಬಳಕೆಯಲ್ಲಿ ಬಂದ ಪದ 'ಲಾವಣಿ'" ಶೃಂಗಾರಪ್ರಧಾನವಾದದ್ದು ಲಾವಣಿ ಎಂದೂ, ವೀರರಸಪ್ರಧಾನವಾದದ್ದು ಪೋವಾಡಾ (<ಪವಾಡ) ಎಂದೂ ಅಲ್ಲಿ ರೂಢಿ. ಮರಾಠಿಯ ಸಂಪರ್ಕದಿಂದಾಗಿ ಪ್ರಾಯಶಃ ಉತ್ತರ ಕರ್ನಾಟಕದಲ್ಲಿ ಆ ಪದ ಮೊದಲು ಚಾಲ್ತಿಯಲ್ಲಿ ಬಂದಿರಬೇಕು. ಗೀಗೀಪದ, ಕಲಿ ತುರಾಯಿಗಳಿಗೆ ಅದು ಆಗ ಅನ್ವಯವಾಗಿದ್ದಿರಬೇಕು. ಆ ಪದ ದಕ್ಷಿಣ ಕರ್ನಾಟಕಕ್ಕೆ ಬಂದಾಗ ವೀರಗೀತೆಗಳಿಗೆ ಸರಿಗೊಳಿಸಿರಬೇಕು. ಹೊರಗಿನಿಂದ ಬಂದ ಪದ ಒಂದೇ ಭಾಷೆಯಲ್ಲಿ ಬೇರೆ ಬೇರೆ ಕಡೆ ಭಿನ್ನಾರ್ಥದಲ್ಲಿ ಬಳಕೆಯಾಗುವುದು ವಿಚಿತ್ರವೇನಲ್ಲ. ಎರಡು ಜಾತಿಗಳಲ್ಲಿಯೂ ಕಥೆ ಮತ್ತು ಗೇಯತೆ ವಿಶಿಷ್ಟ ಲಕ್ಷಣಗಳಾದ್ದರಿಂದ 'ಲಾವಣಿ' ಎನ್ನುವ ಪದವನ್ನು ಕಥನ ಗೀತೆಗಳಿಗೆ ಅನ್ವಯಿಸುವುದರಲ್ಲಿ ತಪ್ಪೇನಿಲ್ಲ. ಕಾದಂಬರಿ ಪದ ಕನ್ನಡಕ್ಕೆ ಬಂದದ್ದಾದರೂ ಹೇಗೆ? ನಾಟಕ ಎನ್ನುವುದು ರೂಪಕಗಳಲ್ಲೊಂದು ಪ್ರಭೇದ. ಕಾಲಾನಂತರದಲ್ಲಿ ಅದನ್ನು ಎಲ್ಲ ಜಾತಿಯ ನಾಟಕಗಳಿಗೆ ಅನ್ವಯಿಸಲಾಯಿತು. ಯಾವುದೊಂದು ಪದವೇ ಆಗಲಿ, ಅದು ಯಾವ ವಸ್ತುವನ್ನು ಪ್ರತಿನಿಧಿಸುತ್ತದೆಯೋ, ಆ ವಸ್ತುವಿನ ಸರ್ವಲಕ್ಷಣಗಳನ್ನು ಪ್ರತಿಬಿಂಬಿಸುವುದಿಲ್ಲ. ಆದ್ದರಿಂದ ಈ ಪದವನ್ನು ಕಥನಗೀತೆಗಳಿಗೆ ಅನ್ವಯಿಸಬಹುದಾದರೂ, ಗೊಂದಲ ಕಡಮೆಮಾಡುವ ದೃಷ್ಟಿಯಿಂದ ಅದನ್ನು ಸೀಮಿತಗೊಳಿಸುವುದು ಮೇಲೆಂದು ತೋರುತ್ತದೆ. ಕನ್ನಡದಲ್ಲಿ ರೂಢಿಯಲ್ಲಿರುವ ನಾನಾವಿಧದ ಕಥನಕಾವ್ಯ ಜಾತಿಗಳಿಗೆ ಬ್ಯಾಲಡ್ ಲಕ್ಷಣಗಳನ್ನು ಅನ್ವಯಿಸಲಾಗದು. ಮಹಾದೇವ್ಯರ ಕಾವ್ಯವನ್ನಾಗಲೀ, ಗುಣಸಾಗರಿ ಕಥನವನ್ನಾಗಲೀ ಬ್ಯಾಲೆಡ್ ಎಂದು ಕರೆಯುವುದು

1 ಅದೇ, ಪು. 222
2 ಅದೇ, ಪು. 225
3 ಅದೇ, ಪು. 219

ತಪ್ಪು. ಆದ್ದರಿಂದ ಬಹು ತೃಪ್ತಿಕರವಲ್ಲದಿದ್ದರೂ, ಸದ್ಯಕ್ಕೆ ಬ್ಯಾಲೆಡ್ ಎಂಬ ಪದಕ್ಕೆ ಸಂವಾದಿಯಾಗಿ ಲಾವಣಿ ಎಂದಿಟ್ಟುಕೊಳ್ಳಬಹುದಾಗಿದೆ.

Ballad ಎನ್ನುವ ಪದ ಲ್ಯಾಟಿನ್ನಿನಿಂದ ಬಂದದ್ದು. ಇಟಾಲಿಯನ್ ಭಾಷೆಯಲ್ಲಿ Ballata ಎಂಬ ಪದವಿದೆ. ಅದು ಭಾವಗೀತಾತ್ಮಕವಾದ ನೃತ್ಯ ಸಂಗೀತ. ಆದ್ದರಿಂದ Ballad ಮತ್ತು Ballataಗಳಲ್ಲಿ ಸಾಮ್ಯಕ್ಕಿಂತ ವೈಷಮ್ಯಗಳೇ ಹೆಚ್ಚು. ಕುಣಿತದ ಜತೆಯ ಹಾಡಿಗೆ Ballad ಎನ್ನುವ ಹೆಸರು ಅನ್ವಯವಾದದ್ದು ಇತ್ತೀಚೆಗೆ. ೧೭೬೧ ರ ಸುಮಾರಿಗೆ ವಿಲಿಯಂ ಷೆನ್‌ಸ್ಟೋನ್ ಬಿಷಪ್ ಪರ್ಸಿಯವರಿಗೆ ಬರೆದ ಪತ್ರವೊಂದರಲ್ಲಿ Ballad ಎಂಬ ಪದವನ್ನು ಕಥನಗೀತೆಗಳಿಗನ್ವಯಿಸಬಹುದೆಂದು ತಿಳಿಸಿದನು. ಅದು ಫ್ರೆಂಚ್ ಭಾಷೆಯ Ballade ಎನ್ನುವ ಪದದ ರೂಪಾಂತರ. ಅವಕ್ಕೆ ಮೂಲ ನೃತ್ಯ ಎನ್ನುವ ಅರ್ಥ ಬರುವ Baller ಪದ. ಜರ್ಮನ್ ಭಾಷೆಯ Ballade ಹದಿನೆಂಟನೆಯ ಶತಮಾನದಲ್ಲಿ ಆಂಗ್ಲದಿಂದ ಎರವಲು ಪಡೆದದ್ದು. ಜಾನಪದ ಸಂಗೀತ ಎನ್ನುವ ಅರ್ಥದಲ್ಲಿ ಸ್ಕ್ಯಾಂಡಿನೇವಿಯಾದ ಜನ ಕಥನಗೀತೆಗಳಿಗೆ folkevisor ಎನ್ನುವ ಪದ ಬಳಸುತ್ತಾರೆ. ಸ್ಪ್ಯಾನಿಷ್ ಮತ್ತು ಫ್ರೆಂಚ್ ಜನ ಲ್ಯಾಟಿನ್ ಭಾಷೆಯಲ್ಲಲ್ಲದೆ, ದೇಶೀಯ ಭಾಷೆಯಲ್ಲಿ ಸಿದ್ಧಗೊಳ್ಳುತ್ತಿದ್ದ ರಚನೆಗಳಿಗೆ Romance ಎಂದು ಹೆಸರಿಟ್ಟರು. ಕಂಠಸ್ಥ ಸಂಪ್ರದಾಯದ ಕಥನ ಗೀತೆಗಳಿಗೆ Ballad ಎನ್ನುವ ಪದ ಅನ್ವಯಗೊಂಡಿತೆಂಬುದು ಮಾತ್ರ ಸುಸ್ಪಷ್ಟ. ರಷ್ಯನ್ ಭಾಷೆಯ Byliny ಇದಕ್ಕೆ ಹತ್ತಿರವಾದದ್ದೆಂದು ಹೇಳಬಹುದು.

ಬ್ಯಾಲೆಡ್ ಪ್ರಕಾರದ ಲಕ್ಷಣಗಳನ್ನು ನಿರೂಪಿಸುವಲ್ಲಿ ತಜ್ಞರೊಡನೆ ಒಮ್ಮತದ ಅಭಿಪ್ರಾಯವಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅದನ್ನು ವಿವರಿಸಲು ಪ್ರಯತ್ನಿಸಿದ್ದಾರೆ. "ಚಿಕ್ಕ ಚಿಕ್ಕ ಪದ್ಯಗಳಲ್ಲಿ ಜನಪ್ರಿಯ ಕಥೆಯನ್ನೊಳಗೊಂಡ ಸರಳವೂ ಶಕ್ತಿಯುತವೂ ಆದ ಕಾವ್ಯವೇ ಬ್ಯಾಲೆಡ್"[1] ಎಂಬುದಾಗಿ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು ಅದರ ಲಕ್ಷಣವನ್ನು ನಿರೂಪಿಸುತ್ತದೆ. "ಉಗಮ ಮತ್ತು ಪ್ರಸಾರಗಳ ದೃಷ್ಟಿಯಿಂದ ಜಾನಪದೀಯವಾಗಿಯೂ, ಮೌಖಿಕ ಪದ್ಧತಿಗನುವಾಗಿಯೂ ಇರುವ, ಭಾವಾತ್ಮಕ ಮನೋಧರ್ಮದ ಮಾಧ್ಯಮದ ಮೂಲಕ ಅಭಿವ್ಯಕ್ತಗೊಳ್ಳುವ, ಶೌರ್ಯಾತ್ಮಕವೂ ಸಾಹಸಾತ್ಮಕವೂ ಆದ ಘಟನೆಗಳನ್ನು ವಿವರಿಸುವ ಸರಳ ಕಥನಕಾವ್ಯವೇ ಜನಪ್ರಿಯ ಬ್ಯಾಲೆಡ್" ಎಂದು[2] ಎ. ಎಚ್. ಕ್ರಾಪೆಯವರು ವಿವರಣೆ ನೀಡಿದ್ದಾರೆ. "ಕವಿಯ ಅಥವಾ ಹಾಡುಗಾರನ ವ್ಯಕ್ತಿತ್ವ ವಿಮುಕ್ತವಾದ, ಸಂಗೀತಕ್ಕೊಳಪಟ್ಟ, ಸರಳ ವಸ್ತು

[1] A Simple spirited poem in short stanzas, narratting some popular story—*Oxford English Dictionary*.

[2] The Popular ballad is a simple narrative poem relating epic events as seen through the medium of a lyrical temperament, popular in origin or by transmission, and fitted for oral circulation—*The Science of Folklore*, P. 173.

ಸಂವಿಧಾನವುಳ್ಳ, ಸುಲಭ ಛಂದಸ್ಸಿನ ಹಲವು ಪದ್ಯಗಳುಳ್ಳ ಚಿಕ್ಕ ಕಥನಕಾವ್ಯವೇ ಬ್ಯಾಲೆಡ್"[1] ಎಂದು ಜಿ. ಎಲ್. ಕಿತ್ರೆಜ್ (G. L. Kittredge) ಅಭಿಪ್ರಾಯಪಟ್ಟಿದ್ದಾರೆ. "ಆದರೆ ಬ್ಯಾಲೆಡ್ ಸಂಗೀತವಲ್ಲ. ಸಾಮಾನ್ಯವಾಗಿ ಅದರ ಮಡಿಲಲ್ಲೊಂದು ಕಥೆಯಿರುತ್ತದೆ. ಅದು ಮಹಾಕಾವ್ಯವೊಂದರ ಚಿಕ್ಕೆಯಾಗಿರಬಹುದು. ಕೆಲವೊಮ್ಮೆ ಅದು ಸಾಹಸಾತ್ಮಕ, ರೋಮಾಂಚಕಾರಕವಾದ ಕಾವ್ಯಗಳ ಸಂಗ್ರಹವಾಗಿದ್ದು, ಹ್ರಸ್ವಾವಧಿಯ ವಾಚನಕ್ಕಾಗಿ ಹಾಗೂ ಸಾಮಾನ್ಯ ಜನರ ಮನಸ್ಸಿನ ಮೇಲೆ ಬಹು ಬೇಗನೆ ಪ್ರಭಾವ ಬೀರುವ ಸಲುವಾಗಿ ಅಳವಡಿಸಿಕೊಂಡದ್ದು."[2] "ಅದೊಂದು ಜಾನಪದ ಕಥನ ಗೀತ. ಕಥಾಂಶ ಇಲ್ಲಿ ಮುಖ್ಯ. ಮೊದಲಿಂದ ಕೊನೆಯ ತನಕ ಕತೆ ಹೇಳದ ಗೀತೆಯನ್ನು ಬ್ಯಾಲೆಡ್ ಎಂದು ಕರೆಯಲಾರೆ. ಕತೆ ಹೇಳುವ, ಆದರೆ ಹಾಡಲು ಬಾರದ ಕಾವ್ಯವನ್ನು ಸಹ ಬ್ಯಾಲೆಡ್ ಎಂದು ಹೆಸರಿಸಲಾರೆ. ಬೇರೆ ರೀತಿಯಲ್ಲಿಯೂ ಆ ಪದವನ್ನು ಸೀಮಿತಗೊಳಿಸುತ್ತೇನೆ. ಕಾವ್ಯದಲ್ಲಿ ಸಾಂಪ್ರದಾಯಕ ಜೀವನದ ನಿರೂಪಣೆಯಿರಬೇಕು. ಅಂದರೆ ಅದು ಪ್ರಧಾನವಾಗಿ ಜನತೆಯ ಸ್ಮೃತಿಕೋಶದಲ್ಲಿ ಜೀವಂತವಾಗಿರಬೇಕು: ಗಾಯಕನಿಂದ ಗಾಯಕನಿಗೆ ಮೌಖಿಕವಾಗಿ ಹರಡಬೇಕು"[3] ಎಂದು ಜಿ. ಮಾಲ್ಕಮ್ ಲಾಸ್ ಅವರು ತಮ್ಮ 'Stories told in Songs: The Ballads of America' ಎಂಬ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ.

ಈ ಎಲ್ಲ ಅಭಿಪ್ರಾಯಗಳನ್ನು ಸಮೀಕ್ಷಿಸುವಾಗ ಸಾಮಾನ್ಯ ಜನ ಅವನ್ನು ಕಟ್ಟಿದ್ದು ಮತ್ತು ಹಾಡಿದ್ದು; ಅವು ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುತ್ತವೆ; ಇವನ್ನು ಹಾಡಿಕೊಂಡು ಕುಣಿಯುವುದೂ ಉಂಟು; ಇವುಗಳ ತಂತ್ರ ಸರಳ; ರಚನೆ ವಸ್ತುನಿಷ್ಠ ಎಂದು ಸ್ಪಷ್ಟವಾಗುತ್ತದೆ. ಸುಪ್ರಸಿದ್ಧ ಬ್ಯಾಲೆಡ್ ತಜ್ಞರಾದ ಮ್ಯಾಕ್ ಎಡ್ವರ್ಡ್ ಲೀಚ್ (Mac Edward Leach) ಅವರು ಹೇಳುವ ಲಕ್ಷಣಗಳು ಪಾಶ್ಚಾತ್ಯ ಬ್ಯಾಲೆಡ್‌ಗಳಿಗೆ ಸಮುಚಿತವಾಗಿ ಅನ್ವಯಿಸುತ್ತವೆಂದು ಹೇಳಬಹುದಾಗಿದೆ: ಕಥನಾಂಶ, ಗೇಯಾಂಶ, ಜಾನಪದೀಯವಾದ ವಸ್ತು ಶೈಲಿ ರೂಪರಚನೆ, ಏಕಘಟನಾತ್ಮಕತೆ, ವಸ್ತುನಿಷ್ಠೆ, ಘಟನೆ ಮತ್ತು ಸಂಭಾಷಣೆಗಳ ಮೂಲಕದ ಕ್ರಿಯಾತ್ಮಕತೆ."[4]

ಮಹಾಕಾವ್ಯ ಮೊದಲು, ಬ್ಯಾಲೆಡ್ ಆಮೇಲೆ, ಮೊದಲನೆಯದಿಲ್ಲದೆ ಎರಡನೆಯದು ಆವಿರ್ಭವಿಸಲಾರದು ಎಂಬ ಅಭಿಪ್ರಾಯವೂ ಇದೆ. ಆ ಅಭಿಪ್ರಾಯದ ಪ್ರಕಾರ

---

1 A ballad. . . a short narrative poem, adapted for singing, simple in plot and metrical structure, divided into stazas, and characterised by complete impersonatity so far as the author or singer is, concerned– Quoted in foot notes by Albert B. Friedman in *The Ballad Revival*, P. 7. *History of English Literature* by Legouis and Cazamian, P. 175.

2 *American Folklore*, Ed by Tristram Coffin, III, 93.

3 *Standard Dictionary of Folklore. Mythology and Legend*, P. 106.

4 *The Science of Folklore* by A. H. Krappe, P. 174.

ಜರ್ಮನಿಯಿಂದ ಡೆನ್ಮಾರ್ಕಿಗೆ ಆಮದಾದ ನಿಬೆಲುಂಗ್ (Nibelungs) ಕಾವ್ಯಪರಂಪರೆಯ ರೂಪಾಂತರಗಳೇ ಡೆನ್ಮಾರ್ಕಿನ ಬ್ಯಾಲೆಡ್‌ಗಳು. ಅಂತೆಯೇ ಆಧುನಿಕ ಗ್ರೀಕ್ ಬ್ಯಾಲೆಡ್‌ಗಳಲ್ಲಿ ಕೆಲವು ಬೈಜಾಂಟಿನ್ ಮಹಾಕಾವ್ಯದಿಂದ ನಿಷ್ಪನ್ನಗೊಂಡಂಥವು. ಎಲ್ಲ ಲಾವಣಿಗಳು ಇದೇ ರೀತಿ ಹುಟ್ಟಿದುವು ಎಂದು ಹೇಳಲಾಗದು. ಯಾವುದಾದರೂ ಮಹಾಕಾವ್ಯದ ಆಧಾರದ ಮೇಲೆ ಒಂದು ಬ್ಯಾಲೆಡ್ ಹುಟ್ಟಿತೆಂದರೆ, ಅನಂತರ ಅದೇ ಮಾದರಿಯಲ್ಲಿ ಹಲವು ಬ್ಯಾಲೆಡ್‌ಗಳು ಹುಟ್ಟಿಕೊಳ್ಳಬಹುದು. ಯಾವ ವಿಷಯವಾದರೂ ಅದರ ವಸ್ತುವಾಗಬಹುದು. ಬ್ಯಾಲೆಡ್‌ಗಳೇ ಮಹಾಕಾವ್ಯಕ್ಕೆ ಮೂಲ ಎನ್ನುವ ಅಭಿಪ್ರಾಯವೂ ಇದೆ. "ಕವಿಕುಲಗುರು ಆರ್ಯ ಹೋಮರ್ ಕುರುಡ. ಅವನು ಬ್ಯಾಲೆಡ್ ಗಾಯಕ. ಟ್ರಾಯ್ ಆಕ್ರಮಣ ಮತ್ತು ಯೂಲಿಸಸ್‌ನ ಸಾಹಸ ಕೃತ್ಯಗಳನ್ನು ಕುರಿತು ಹಾಡು ಕಟ್ಟಿದ. ಹಾರ್ಪ್ ಎಂಬ ತಂತಿವಾದ್ಯದ ಜತೆಯಲ್ಲಿ ಹಾಡುತ್ತಿದ್ದ. ಸಾಯುವ ತನಕ ಮನೆಯಿಂದ ಮನೆಗೆ ಹಾಡುತ್ತ ಹೋಗುತ್ತಿದ್ದ. ಅವನು ಸತ್ತನಂತರ ಅವನ ಬ್ಯಾಲೆಡ್‌ಗಳನ್ನೆಲ್ಲ ಸಂಗ್ರಹಿಸಿ, ಬೇಕೆನಿಸಿದ ಕಡೆ ಕೊಂಡಿ ಬೆಸೆದು, ಇಲಿಯಡ್ ಮತ್ತು ಒಡಿಸ್ಸಿ ಎಂಬ ಮಹಾಕಾವ್ಯಗಳನ್ನು ದೊರಕಿಸಿಕೊಟ್ಟನು."[1] ವರ್ಜಿಲನ ಬಗೆಗೂ ಇಂಥದೊಂದು ಅಭಿಪ್ರಾಯವುಂಟು: "ರೋಮನ್ ಯುವಕರ ಉಪಯೋಗಕ್ಕೆಂದು ಹೋಮರನ ಇಲಿಯಡ್ಡನ್ನು ಅನುಕರಿಸಿ ರಚಿಸಿದ ಬ್ಯಾಲೆಡ್‌ಗಳೇ ಈನಿಯಡ್ ರೂಪವನ್ನು ತಾಳಿದುವು."[2] ಫಿನ್‌ಲೆಂಡಿನ ಕಳೇವಲ ಸಹ ಒಂದು ಕಾವ್ಯಸಂಗ್ರಹವೇ ಆಗಿದೆ. ಬೆಂಕಿ ಕಾಯಿಸಿಕೊಳ್ಳುತ್ತ ಚಳಿಗಾಲದ ದೀರ್ಘರಾತ್ರಿಗಳನ್ನು ಕಳೆಯುವಾಗ ಬೇಸರ ಪರಿಹಾರಕ್ಕಾಗಿ ಈ ಹಾಡುಗಳನ್ನು ಹೇಳಿಕೊಳ್ಳುತ್ತಾರೆ. ಮಹಾಭಾರತದಂಥ ಜಗತ್ತಿನ ಮಹಾಕಾವ್ಯಗಳೆಲ್ಲ ಹುಟ್ಟಿದ್ದೇ ಹೀಗೆ ಎನ್ನುವ ಅಭಿಪ್ರಾಯದಲ್ಲಿ ತಥ್ಯಾಂಶವಿಲ್ಲದಿಲ್ಲ.

ಪೂರ್ವೋಕ್ತ ಅಭಿಪ್ರಾಯ ಸಮೂಹದಿಂದ ಬ್ಯಾಲೆಡ್ ಮತ್ತು ಮಹಾಕಾವ್ಯ (Epic)ಗಳ ಪರಸ್ಪರ ಬಾಂಧವ್ಯ ಸಹಜ, ಸಂದೇಹಾತೀತ ಮತ್ತು ಅನಿವಾರ್ಯ ಎಂಬ ಒಂದಂಶವಂತು ಸುಸ್ಪಷ್ಟ. ಈ ತಥ್ಯಾಂಶವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆ ಎರಡು ಪ್ರಕಾರಗಳ ನಡುವಣ ಕೊಳುಕೊಡೆ ಪ್ರಾಚೀನವಾದುದು. ಬ್ಯಾಲೆಡ್ಡುಗಳು ಮೊದಲು, ಆಮೇಲೆ ಹುಟ್ಟಿದ್ದು ಮಹಾಕಾವ್ಯ. ಬ್ಯಾಲೆಡ್ಡುಗಳನ್ನೆಲ್ಲ ಒಟ್ಟುಗೂಡಿಸಿದವನು ಸಾಮಾನ್ಯನಲ್ಲ; ಅವನು ಮತಿವಂತ, ವಿದ್ಯಾವಂತ. ಆತನೂ ಕೆಲವನ್ನು ರಚಿಸಿ ಮಹಾ

[1] The very prince of poets, old Homer, if we may trust ancient records, was nothing more than a blind Ballad-Singer, who writ songs of the seige of Troy, and the Adventures of Ulysses, and playing the tunes upon his Harp, sung from door to door, till at his death somebody thought fit to collect all his ballads, and by a little connecting e'm gave us the Iliad and Odyssey-Quoted by Albert B. Friedman in his *The Ballad Revival*, p. 148.

[2] His Aeneids, which he wrote in imitation of Homer's Illiad, were certainly nothing else but half a score Ballads for the use of the Roman youth." Ibid, p. 149.

ಕಾವ್ಯದೊಳಗೆ ಸೇರಿಸಿರಬೇಕು. ಮಹಾಕಾವ್ಯವನ್ನೋದಿಸಿ ಕೇಳಿದ ಜಾನಪದ ಕವಿ ಅದರ ಆಧಾರದ ಮೇಲೆ ಬ್ಯಾಲಡ್ಡುಗಳನ್ನು ರಚಿಸಿರಬೇಕು. ಕಾಲಾನಂತರದಲ್ಲಿ ಪಂಡಿತರು ಸಂಕಲನ ವ್ಯವಕಲನಗಳ ಮೂಲಕ ಮಹಾಕಾವ್ಯವನ್ನು ಪರಿಷ್ಕರಿಸಿರಬೇಕು. ಅದರ ಬೆಳವಣಿಗೆ ನಿಂತುಹೋದ ನಂತರ, ಅಂದರೆ ಅದು ಇಂದಿನ ರೂಪವನ್ನು ಪಡೆದನಂತರ ಹುಟ್ಟಿದ ಬ್ಯಾಲಡ್ಡುಗಳೆಲ್ಲ ಪ್ರತ್ಯೇಕವಾಗಿ ಉಳಿದುಕೊಳ್ಳಬೇಕಾಯಿತು.

ಪದ್ಯರೂಪದ ಕಥೆಯೇ ಬ್ಯಾಲಡ್ಡೆನ್ನುವ ಪಕ್ಷಕ್ಕೆ ಅದ್ಭುತ ಕಥೆಯು ಮತ್ತು ತಂತ್ರದಲ್ಲಿ ಬ್ಯಾಲಡ್ಡಿನ ನಿಕಟ ಸಾಮ್ಯವಿದೆಯೆಂದೊಪ್ಪಿಕೊಳ್ಳಬೇಕಾಗುತ್ತದೆ. ಅದ್ಭುತ ಕಥೆಯಲ್ಲಿರುವಂತೆಯೇ ಬ್ಯಾಲಡ್ಡಿನಲ್ಲಿಯೂ ಸ್ಥಿರಸೂತ್ರ ಮತ್ತು ಸಂಖ್ಯೆಗಳಿರುತ್ತವೆ. ಏಕ ರೀತಿಯ ಕ್ರಿಯೆ ಮೂರು ಸಲ ನಡೆಯುತ್ತದೆ. ಕೋಳಿ ಕೂಗಿದ ಕೂಡಲೇ ಭೂತಗಳು ನಿರ್ಗಮಿಸುತ್ತವಷ್ಟೆ. ಮೊದಲು ಕಪ್ಪು ಹುಂಜ, ಆ ಮೇಲೆ ಕೆಂಪು ಹುಂಜ ಕೂಗುತ್ತವೆ. ಆದರೂ ಭೂತಚೇಷ್ಟೆ ಕೊನೆಗೊಳ್ಳುವುದಿಲ್ಲ. ಮುಂಜಾನೆ ಬಂದಿತೆನ್ನುವ ಕುರುಹಾಗಿ ಬಿಳಿ ಹುಂಜ ಕೂಗಿದ ಕೂಡಲೇ ಭೂತಗಣ ಮರೆಯಾಗುತ್ತದೆ. ನಾಯಕ ನಾಯಿಕೆಯರು ಅಪಾಯದಿಂದ ಪಾರಾಗುತ್ತಾರೆ. ಚೆಲುವೆಯರ ಮೆರವಣಿಗೆ ಬರುತ್ತದೆಂದಿಟ್ಟುಕೊಳ್ಳೋಣ. ಮೊದಲನೆಯ ಸಾಲಿನಲ್ಲಿಯೇ ರಾಣಿಯಿರಬಹುದೆಂದು ನಿರೀಕ್ಷಿಸಿದರೆ, ಅಲ್ಲಿರುವವರೆಲ್ಲ ಪರಿವಾರ ಸ್ತ್ರೀಯರು; ಎರಡನೆಯ ಸಾಲಿನಲ್ಲಿ ಸ್ವರ್ಗಸುಂದರಿಯರಿದ್ದಾರೆ, ಆದರೆ ಅಲ್ಲಿಯೂ ರಾಣಿ ಕಾಣುವುದಿಲ್ಲ; ಕೊನೆಯ ಹಂತದಲ್ಲಿ ಅವಳೊಬ್ಬಳೇ ಬರುತ್ತಾಳೆ. ಅವಳು ಅದ್ವಿತೀಯ ಸುಂದರಿ. ಅದ್ಭುತ ಕಥೆಯ ಈ ತಂತ್ರ ಬ್ಯಾಲಡ್ಡಿನಲ್ಲಿಯೂ ಗೋಚರಿಸುತ್ತದೆ. ವೈಭವಾಡಂಬರಗಳ ಪ್ರದರ್ಶನ ಅದ್ಭುತ ಕಥೆಯಲ್ಲೆಂತೋ ಬ್ಯಾಲಡ್ಡಿನಲ್ಲಿಯೂ ಸಾಮಾನ್ಯ. ಕಥಾನಾಯಕ ನಾಯಿಕೆಯರು ರಾಜರಾಗಲಿ ಮಂತ್ರಿಯಾಗಲಿ ಕಾಣುತ್ತದೆ. ಅವರ ಉಡುಪು ರಾಗಲಿ, ಅವರ ಮನೆ ಹಾಲ್ಗಲ್ಲು ಚಿನ್ನಗಳಿಂದ ನಿರ್ಮಾಣಗೊಂಡವು; ಅವರ ಉಡುಪು ರೇಷ್ಮೆ ಮಕಮಲ್ಲಿನದು; ಅವರ ಆಟದ ಮಣೆ ಚಿನ್ನ ಬೆಳ್ಳಿಯದು; ಅವರು ಸವಾರಿ ಮಾಡುವಂಥವು ಚಿನ್ನದ ಗೊರಸಿನ ಅರಬ್ಬಿ ಕುದುರೆಗಳು; ಉತ್ಪ್ರೇಕ್ಷಾಲಂಕಾರ ಸಾಮಾನ್ಯ. ಶಕುನ ಮತ್ತು ಸ್ವಪ್ನಗಳಿಗೂ ಇಲ್ಲಿ ಸ್ಥಾನವುಂಟು. ಹಳೆಯ ಬ್ಯಾಲಡ್ಡುಗಳಲ್ಲಿ ನೀತಿಬೋಧೆಗೆ ಪ್ರಾಶಸ್ತ್ಯವಿಲ್ಲ; ಸುಖಾಂತವೇ ಗುರಿಯಲ್ಲ.[1]

ಯೂರೋಪಿನಲ್ಲಿ ಬ್ಯಾಲಡ್ಡುಗಳು ಹನ್ನೆರಡನೆಯ ಶತಮಾನಕ್ಕಿಂತ ಹಿಂದೆ ಉಗಮಗೊಂಡ ಕಲಾಪ್ರಕಾರವೆಂದು ಹೇಳಲಾಗಿದೆ[2]. ಆದರೆ ಅವು ಹದಿನೈದನೆಯ ಶತಮಾನದ ತನಕ ಲಿಪಿರೂಪವನ್ನು ತಾಳಲಿಲ್ಲ. ಬ್ಯಾಲಡ್ ಸಂಗ್ರಹಕಾರರಲ್ಲಿ ಸುಪ್ರಸಿದ್ಧರೆನಿಸಿಕೊಂಡಿರುವ ಎಫ್. ಜೆ. ಚೈಲ್ಡ್ ಅವರ ಪ್ರಕಾರ ಅತ್ಯಂತ ಪ್ರಾಚೀನವಾದ ಬ್ಯಾಲಡ್ಡು ಹದಿಮೂರನೆಯ ಶತಮಾನದ ಕೊನೆಯ ಭಾಗದ್ದು[3]. ಅದಾವುದು ಯಾರು ಹಾಡಿದ್ದು?

1 ಇಲ್ಲಿಯ ಕೆಲವು ಅಭಿಪ್ರಾಯಗಳು ಎ. ಎಚ್. ಕ್ರಾಪೆಯವರ ಗ್ರಂಥದಿಂದ ಸಂಗ್ರಹಿಸಿದುವು.

2 *The Ballad Revival* by A. B. Friedman, p. 14.

3 Ibid, p. 15.

ಬ್ಯಾಲೆಡ್ ಪ್ರಸಾರಕಾರ್ಯವಲ್ಲಿ ನಾಲ್ವರು ವ್ಯಕ್ತಿಗಳು ಎದ್ದು ಕಾಣುತ್ತಾರೆ; ನಿರಕ್ಷರ ಕುಕ್ಷಿಯಾದ ಮೂಲ ಆಶುಕವಿ, ವೃತ್ತಿ ಗಾಯಕ, ಶ್ರೋತೃ ಮತ್ತು ಸಂಗ್ರಹಕಾರ. ಈ ಸಂಗ್ರಹಕಾರ ಕಣ್ಣಿಗೆ ಬೀಳುವುದು ಇತ್ತೀಚೆಗೆ. ಅಂದರೆ ಬ್ಯಾಲೆಡ್ಡು ಹುಟ್ಟಿ ಎಷ್ಟೋ ವರ್ಷಗಳಾದ ನಂತರ. ಆ ಹೊತ್ತಿಗೆ ಅದು ಬಾಯಿಂದ ಬಾಯಿಗೆ ಹೊರಳಿ ಅನೇಕ ರೂಪಾಂತರಗಳನ್ನು ಪಡೆಯುತ್ತದೆ. ನುಡಿ ಜಾಣನಾದ ವೃತ್ತಿ ಗಾಯಕನ ಕೈಗೆ ಸಿಕ್ಕಿದ ನಂತರ ಅದು ಮತ್ತಷ್ಟು ವಿಕಾರ ಹೊಂದುತ್ತದೆ. ಏನೇ ಇರಲಿ, ಮೊದಲ ಬ್ಯಾಲೆಡ್ಡು ಹುಟ್ಟಿದ್ದು ಕೃಷಿಕ ಸಮಾಜದಲ್ಲೆಂದು ತೋರುತ್ತದೆ.[1] ಆ ಕಾಲಕ್ಕೆ ಹಳ್ಳಿ ಪಟ್ಟಣಗಳ ನಡುವೆ ಹೆಚ್ಚು ವ್ಯತ್ಯಾಸಗಳೂ ಇರಲಿಲ್ಲ. ವೃತ್ತಿಗಳು ಗುಣಕರಿಸಿದಂತೆಲ್ಲ ನಾನಾ ವಿಧದ ಬ್ಯಾಲೆಡ್ಡುಗಳು ಕಾಲಕ್ರಮದಲ್ಲಿ ಹುಟ್ಟಿಕೊಂಡುವು. ಬರಬರುತ್ತ ಐತಿಹಾಸಿಕ ಸಂಗತಿಗಳು ಐತಿಹ್ಯಗಳು ಕಲ್ಪನಾಕಥೆಗಳು ಅವುಗಳಿಗೆ ಸಾಮಗ್ರಿಯೊದಗಿಸುತ್ತವೆ. ಅಷ್ಟೇ ಅಲ್ಲ, ಅವು ಭಾಷೆ ದೇಶಗಳ ಗಡಿ ದಾಟಿ ದೂರ ದೇಶಗಳಿಗೆ ಪಯಣಿಸುವುದುಂಟು. ಹೀಗಾಗಿ ವಿದೇಶಗಳಿಂದ ಆ ವಲಸೆ ಬಂದ ಬ್ಯಾಲೆಡ್ಡುಗಳು ಸ್ಥಳೀಯ ರೂಪರೇಷೆ ವರ್ಣಗಳಿಂದ ಮರುಹುಟ್ಟು ಪಡೆದು ಜನಪ್ರಿಯವಾಗಬಹುದು.

ಬ್ಯಾಲೆಡ್ಡು ವ್ಯಷ್ಟಿಸೃಷ್ಟಿಯೇ ಅಥವಾ ಸಮಷ್ಟಿಸೃಷ್ಟಿಯೇ ಎನ್ನುವುದರ ಬಗೆಗೆ ಸಾಕಷ್ಟು ವಾದವಿವಾದಗಳು ನಡೆದಿವೆ. ಅದು ಸಮಷ್ಟಿ ಸೃಷ್ಟಿಯೆಂದು ವಾದಿಸಿದವರಲ್ಲಿ ಜರ್ಮನರು ಮೊದಲನೆಯವರು. ಹಬ್ಬಹರಿದಿನ, ಜಾತ್ರೆ, ಆಟಪಾಟ ಮೊದಲಾದ ಸಾಮೂಹಿಕ ಚಟುವಟಿಕೆಗಳು ನಡೆಯುವಾಗ ಅದು ಮೊಳೆಯುತ್ತದೆ. ಗುಂಪಿನಲ್ಲಿ ಉತ್ಸಾಹಶಾಲಿಯೂ ನುಡಿಜಾಣನೂ ಆದ ವ್ಯಕ್ತಿಯೊಬ್ಬ ವಾದ್ಯದ ಜತೆಯಲ್ಲಿ ಕುಣಿಯುವಾಗ ಭಾವಾವೇಗದ ಭರದಲ್ಲಿ ಅವನ ಮಾತು ಲಯಬದ್ಧವಾಗಿ, ಛಂದೋಬದ್ಧವಾಗಿ ಹೊರಹೊಮ್ಮುತ್ತದೆ. ತಾನು ಕಂಡು ಕೇಳಿದ ಕತೆಯೇ ಸಂಗೀತದ ರೂಪವನ್ನು ತಾಳುತ್ತದೆ. ಇತರರು ಅವನ ಹಾಡನ್ನು ಪುನರುಚ್ಚರಿಸುತ್ತ ಕುಣಿಯುತ್ತಾರೆ. ಅವನೊಡನೆ ಕುಣಿಯುವ ಮತ್ತೊಬ್ಬ ಗೆಳೆಯ ಸಮಯಸ್ಫೂರ್ತಿಯಿಂದ ಮತ್ತೊಂದು ಪದ ಕಟ್ಟುತ್ತಾನೆ. ಅದನ್ನೂ ಹಿಂದಿನವರೊಡನೆ ಸೇರಿಸಿಕೊಂಡು ಎಲ್ಲರೂ ಹಾಡುತ್ತಾರೆ. ಇದೇ ಪರಿಪಾಠ ಮೇಲಿಂದ ಮೇಲೆ ಸಾಗುತ್ತದೆ. ಮತ್ತೊಮ್ಮೆ ಅಂಥ ಚಟುವಟಿಕೆ ನಡೆಯುವಾಗ ಮೊದಲು ಕಲಿತ ಪದಗಳ ಜತೆಗೆ ಮತ್ತೊಬ್ಬ ತಾನೇ ಕಟ್ಟಿದ ಕೆಲವು ಪದಗಳನ್ನು ಸೇರಿಸುತ್ತಾನೆ. ಆ ಪದಗಳನ್ನು ಬೇರೊಂದು ಗುಂಪಿನ ಜನ ಕಲಿತು ಉತ್ಸವ ಸಂದರ್ಭಗಳಲ್ಲಿ ಹಾಡುತ್ತಾರೆ. ಅಲ್ಲಿ ಇನ್ನಷ್ಟು ಪದಗಳು ಪೋಣಿಕೆಗೊಳ್ಳುತ್ತವೆ. ಗುಂಪಿನಿಂದ ಗುಂಪಿಗೆ ಹರಿದಾಗ, ಬಾಯಿಂದ ಬಾಯಿಗೆ ಹೊರಳಿದಾಗ ಅವು ನೂತನ ಸ್ಫೂರ್ತಿ ಪ್ರತಿಭೆಗಳಲ್ಲಿ ಮಿಂದು, ಹರಳುಗಳಂತೆ ಬೆಳೆಯುತ್ತವೆ. ಇದು ಗುಮರೆ ಕಿತ್ರೆಜ್ ಮೊದಲಾದ ವಿದ್ವಾಂಸರ ಅಭಿಪ್ರಾಯ.

[1] We take it for granted that the traditional ballad, being a folk art, would be mainly by an agrarian phenomenon, Ibid, p. 27.

ಹಲವು ವ್ಯಕ್ತಿಗಳು ಸೇರಿ ಸಾಮೂಹಿಕವಾಗಿ ಒಂದು ಕಾವ್ಯವನ್ನು ಸೃಷ್ಟಿಸಿದರೆನ್ನು ವುದರಲ್ಲಿ ಅರ್ಥವಿಲ್ಲ, ಒಬ್ಬನೇ ಅದನ್ನು ರಚಿಸಿರಬೇಕೆಂದು ಪೌಂಡ್ ಮೊದಲಾದವರ ವಾದ. ನಾಲ್ಕು ಜನ ಸೇರಿ ಒಂದು ಮರ ಕಡಿದು ಕೆಡವಬಹುದು; ಹತ್ತು ಜನ ಸೇರಿ ಪಾಕ ಕಾರ್ಯ ನೆರವೇರಿಸಬಹುದು. ದೈಹಿಕಕ್ರಿಯೆ ಪ್ರಧಾನವಾಗಿರುವ ಕಡೆಗಳಲ್ಲಿ ದುಡಿಮೆಯ ಹಂಚಿಕೆ ಸಾಧ್ಯವಾಗುತ್ತದೆ; ಬೌದ್ಧಿಕ ಕ್ರಿಯೆಯೇ ಮೂಲವಾಗಿರುವ ಕಡೆ ಈ ಸಾಹಕಾರಿಕ ಪ್ರಯತ್ನಸಾಧ್ಯವಾಗಲಾರದು. ಬುದ್ಧಿ ಒಂದೆ ಅಲ್ಲ, ಅದಕ್ಕಿಂತ ಮಿಗಿಲಾಗಿ ಭಾವದ ಸಾಂಗತ್ಯವಿರಬೇಕು. ಇಬ್ಬರ ಅಥವಾ ಹಲವಾರು ವ್ಯಕ್ತಿಗಳ ಬುದ್ಧಿಭಾವಗಳಲ್ಲಿ ಸಾಂಗತ್ಯವಿಲ್ಲದಿರುವಾಗ, ಅವು ಏಕಮುಖವಾಗಿಲ್ಲದಿರುವಾಗ ಕಾವ್ಯಹೇಗೆ ಹುಟ್ಟುತ್ತದೆಂಬ ಶಂಕೆ ಸಹಜವಾದದ್ದೇ. ದೀರ್ಘಾಲೋಚನೆಯಿಂದ ಹಿಂದಿನ ಸಮಷ್ಟಿತತ್ವ ಅಸಂಭವ ನೀಯವೆಂಬ ಮಾತಿನಲ್ಲಿ[1]ಯೂ ತಥ್ಯಾಂಶವಿದೆ. ಯಾರೋ ಒಬ್ಬ ಮೊದಲು ಬ್ಯಾಲೆಡ್ಡನ್ನು ಸೃಷ್ಟಿಸುತ್ತಾನೆ. ಅವನು ಸೃಷ್ಟಿಸಿದ್ದು ಸ್ವಸಂತೋಷಕ್ಕಿಂತ ಮಿಗಿಲಾಗಿ ಪರರ ಸಂತೋಷ ಕ್ಕಾಗಿ. ಅಂದ ಮೇಲೆ ಅವನದನ್ನು ನಾಲ್ಕು ಜನರ ನಡುವೆ ಹಾಡುತ್ತಾನೆ. ಅದರಿಂದ ಆಕರ್ಷಿತರಾದ ಜನ ಗಟ್ಟಿಮಾಡಿಕೊಂಡು ಮೇಲಿಂದ ಮೇಲೆ ಮಣಕಿಸಿಕೊಳ್ಳುತ್ತಾರೆ. ಅದು ಜನದಿಂದ ಜನಕ್ಕೆ ಊರಿಂದೂರಿಗೆ ಪಯಣಿಸುವಾಗ ಹೊಸ ಹೊಸ ಕಾಂತಿಯನ್ನು ಪಡೆಯುತ್ತದೆ; ಪುನರ್ಸೃಷ್ಟಿಯಾಗುತ್ತದೆ. ಒಂದು ಶಬ್ದಕ್ಕೆ ಬದಲಾಗಿ ಮತ್ತೊಂದು ಶಬ್ದ ಬಂದು ಸೇರಿಕೊಳ್ಳುತ್ತದೆ: ಒಂದು ಸಾಲಿಗೆ ಬದಲಾಗಿ ಮತ್ತೊಂದು ಸಾಲು ನುಸುಳುತ್ತದೆ; ಕೆಲವು ಪದ್ಯ ಬಿಟ್ಟುಹೋಗಿ ಹೊಸ ಪದ್ಯಗಳು ಸೇರಿಕೊಳ್ಳಬಹುದು; ಅಲಂಕಾರಗಳು ಅದಲು ಬದಲಾಗಬಹುದು; ಭಾವಾಲೋಚನೆಗಳೂ ವ್ಯತ್ಯಾಸವಾಗ ಬಹುದು; ವ್ಯಾಕರಣ ನಿಯಮಗಳೂ ಗಾಳಿಗೆ ತೂರಿಹೋಗಬಹುದು. ಮೂಲ ಕೃತಿಗೂ ಅಂತಿಮ ಕೃತಿಗೂ ತಾಳೆ ಇಲ್ಲದಷ್ಟು ವ್ಯತ್ಯಾಸಗಳಾಗಬಹುದು. ಚಲಾವಣೆಯಲ್ಲಿರುವ ನಾಣ್ಯದಂತೆ, ಅದು ಕಾಲಕ್ರಮೇಣ ಮೂಲ ಮುದ್ರೆಯನ್ನು ಕಳೆದುಕೊಳ್ಳುತ್ತದೆ; ಅದರ ಬಾಗುಗಳು ಸವೆಯುತ್ತವೆ; ಮೂಲದಲ್ಲಿಲ್ಲದ ಹೊಳಪು ದೀರ್ಘ ಬಳಕೆಯಿಂದ ಪ್ರಾಪ್ತ ವಾಗುತ್ತದೆ.[2] ಅದರ ಹುಟ್ಟು ಕಾಲಗರ್ಭದ ಮಂಜಿನಲ್ಲಿ ಮರೆಯಾಗುತ್ತದೆ. ವ್ಯಷ್ಟಿತನ ಸಂಪೂರ್ಣವಾಗಿ ಮರೆಯಾಗಿ ಸಮಷ್ಟಿತನ ಸಮನಿಸುತ್ತದೆ. ಕೊನೆಗುಳಿಯುವುದು ಜನ ಹೃದಯ ಮುದ್ರೆ. ಆಗ ಅದು ಇಡೀ ಜನಾಂಗದ ಆಸ್ತಿಯಾಗುತ್ತದೆ. ಮ್ಯಾಕ್ ಎಡ್ವರ್ಡ್ ಲೀಚ್ ಮೊದಲಾದವರು ಈ ತತ್ವದ ಪ್ರತಿಪಾದಕರು. ಈ ತತ್ವವನ್ನು ಗಮನ ದಲ್ಲಿಟ್ಟುಕೊಂಡು ಜೀಶಂಪ ಅವರು ಬ್ಯಾಲೆಡ್ಡಿನ ಸೃಷ್ಟಿಯಲ್ಲಿ ನಾಲ್ಕು ಹಂತಗಳನ್ನು ಗುರುತಿಸಿದ್ದಾರೆ: (೧) ಮೂಲ ರಚನೆ. (೨) ಜನಪದದಿಂದ ಮೂಲ ರಚನೆಯ

Reflexion shows, however, that this theory has little plausibility—
1 History of English Literature by Legouis and Cazamian, p. 174.
2 Like money in circulation, it lost, little by little, its imprint; its salient curves erew blunted; and long use gave it a polish it didnot have originally—Ibid, p. 175.

ಸ್ವೀಕರಣ. (೩) ಮೂಲ ರಚನೆಯನ್ನು ಜನಪದಗೀತೆಯಾಗಿ ಜನಪದ ಮತ್ತೆ ಸೃಷ್ಟಿಸುವಿಕೆ. (೪) ಜನಪದಗೀತೆಯ ಸಾಮಾಜೀಕರಣ.[1] ಈ ಪಟ್ಟಿಯಲ್ಲಿ ವೃತ್ತಿ ಗಾಯಕನ ಪಾತ್ರವನ್ನು ಸಹ ಸೇರಿಸಬೇಕಾಗುತ್ತದೆ. ಎಷ್ಟೋ ಸಾರಿ ಅವರು ತಮ್ಮ ರಚನೆಗಳನ್ನು ಎಡೆ ಎಡೆಯಲ್ಲಿ ನುಗ್ಗಿಸುವುದುಂಟು. ಒಟ್ಟಿನಲ್ಲಿ ಅದು ವ್ಯಷ್ಟಿ ಸಮಷ್ಟಿಗಳ ಸಂಯುಕ್ತ ರಚನೆ ಎಂದು ಹೇಳಬಹುದು.

ಯೂರೋಪಿನ ಲಾವಣಿಗಳನ್ನು ಸಮೀಕ್ಷಿಸಿದಾಗ ನಾಲ್ಕು ತೆರನ ಲಾವಣಿ ವಿಷಯಗಳನ್ನು ಗುರುತಿಸಬಹುದು. ಅವು ನಾಲ್ಕು ಭೌಗೋಲಿಕ ವಲಯಗಳಲ್ಲಿ ಗೋಚರವಾಗುತ್ತವೆ. ಲ್ಯಾಟಿನ್ ಸುತ್ತು[2] ಎಂದು ಹೇಳುವಂಥದು ಫ್ರಾನ್ಸ್, ಕ್ಯಾಟಲೋನಿಯ ಕ್ಯಾಸ್ಟಿಲೆಯ ಕೆಲವು ಭಾಗಗಳು, ಪೋರ್ಚುಗಲ್ ಮತ್ತು ಉತ್ತರ ಇಟಲಿಯಲ್ಲಿ ಚಾಲ್ತಿಯಲ್ಲಿವೆ. ಟ್ಯೂಟಾನಿಕ್ ಸುತ್ತಿನದು ಬ್ರಿಟಿಷ್ ದ್ವೀಪ, ಜರ್ಮನಿ, ನೆದರ್‌ಲ್ಯಾಂಡ್ಸ್, ಸ್ಕಾಂಡಿನೇವಿಯಾ ಮತ್ತು ಪೋಲೆಂಡುಗಳಲ್ಲಿ ರೂಢಿಯಲ್ಲಿದೆ. ಕ್ಯಾಸ್ಟಿಲೆಯ ರೊಮಾನ್ಸ್‌ಗಳು ಮೂರನೆಯ ಸುತ್ತಿನಲ್ಲಿ ಸೇರುತ್ತವೆ. ನಾಲ್ಕನೆಯ ಸುತ್ತು ಬಾಲ್ಕನ್ನಿನ ಬ್ಯಾಲೆಡ್ಡುಗಳನ್ನೂ ರಷ್ಯಾದ ಬೈಲಿನಿಗಳನ್ನೂ (Byliny) ಒಳಗೊಳ್ಳುತ್ತದೆ. ಮೊದಲನೆಯ ಮತ್ತು ಎರಡನೆಯ ಗುಂಪುಗಳಲ್ಲಿ ಪರಸ್ಪರ ಸಂಬಂಧವಿದೆ; ಉಳಿದೆರಡರಲ್ಲಿ ಏನೇನೂ ಸಾಮ್ಯವಿಲ್ಲವೆನ್ನಬಹುದು.

ಬ್ಯಾಲೆಡ್ ಹೇಗೆ ಬೆಳೆಯುತ್ತವೆನ್ನುವುದನ್ನು ತೋರಿಸುವ ಸಲುವಾಗಿ ಇಂಗ್ಲೆಂಡ್ ಮತ್ತು ಅಮೇರಿಕಗಳಲ್ಲಿ ಅವು ವಿಕಾಸಗೊಂಡ ಕ್ರಮವನ್ನು ಸ್ಥೂಲವಾಗಿ ಗುರುತಿಸಬಹುದಾಗಿದೆ. ಇಂಗ್ಲೆಂಡಿನಲ್ಲಿ ಸಾಮಾನ್ಯವಾಗಿ ಎರಡು ಬಗೆಯ ಬ್ಯಾಲೆಡ್ಡುಗಳನ್ನು ಗಣನೆಗೆ ತೆಗೆದುಕೊಳ್ಳುವುದುಂಟು. ಮೂಲ ಅಥವಾ ಹಳೆಯ ಬ್ಯಾಲೆಡ್ಡುಗಳು ಹನ್ನೆರಡನೆಯ ಶತಮಾನದಲ್ಲಿ ಉಗಮಗೊಂಡಿರಬಹುದಾದರೂ ಅವು ಬೆಳಕಿಗೆ ಬಂದದ್ದು ಹದಿನಾರನೆಯ ಶತಮಾನದಲ್ಲಿ. ಅಂದರೆ ಈ ನಡುಗಾಲದಲ್ಲಿ ಅವು ಇರಲಿಲ್ಲವೆಂದಲ್ಲ. ನಾಗರಿಕ ಅವಜ್ಞೆಗೆ ಗುರಿಯಾಗಿ, ಎಲ್ಲಿಂದರಲ್ಲಿ ಓಡಾಡಲು ನಾಚಿ, ಹಳ್ಳಿಗಳಲ್ಲಿಯೇ ಗುಪ್ತ ಸೇವೆ ಸಲ್ಲಿಸುತ್ತಿದ್ದುವು. ಅವುಗಳ ನಿರಾಭರಣ ಸೌಂದರ್ಯಕ್ಕೆ, ನಗ್ನ ಭಾವಾರ್ಥಗಳಿಗೆ, ಸರಳತೆಗೆ, ಸಂವೇದನಾ ಸಾಮರ್ಥ್ಯಕ್ಕೆ, ಚಾರುತ್ವಕ್ಕೆ ಮರುಳಾದ ಕೆಲವು ಜನ ಅವುಗಳನ್ನು ಸಂಗ್ರಹಿಸಲು ತೊಡಗಿದಾಗ ಅವುಗಳ ಇತಿಹಾಸಕ್ಕೊಂದು ಉಪಪತ್ತಿಯನ್ನು ಕಲ್ಪಿಸಿದಂತಾಯಿತು. ಬ್ಯಾಲೆಡು ನಗರಗಳನ್ನು ಪ್ರವೇಶಿಸಿದ್ದು ವೃತ್ತಿಗಾಯಕರ ಮೂಲಕ ಎನ್ನುವುದು ನಿಜ. ಅವರು ಸಾಹಸಪ್ರಿಯರು, ಯಾತ್ರಾಸಕ್ತರು. ಅವರ ಹಾಡು ಕೆಲವರಿಗೆ ಹಿಡಿಸದಿದ್ದರೂ, ಮತ್ತೆ ಕೆಲವರಿಗೆ ಹಿಡಿಸಿರಬೇಕು. ಅವರ ಗುಂಗು ಕೆಲವರ ಕಿವಿಯಲ್ಲಿ ನಿನದಿಸುತ್ತಿದ್ದಿರಬೇಕು. ಅವುಗಳನ್ನನುಕರಿಸಿ, ಪ್ರಸಕ್ತ ವಿಷಯಗಳನ್ನು ಕುರಿತು ಕೆಲವರು

---

1 ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು (ಅಪ್ರಕಟಿತ ನಿಬಂಧ), ಪು. 105.

2 ಇಲ್ಲಿ 'ಸುತ್ತು' ಎನ್ನುವ ಪದವನ್ನು 'Cycle' ಎನ್ನುವ ಅರ್ಥದಲ್ಲಿ ಬಳಸಿದೆ.

ವಿನೋದಕ್ಕಾಗಿ ಲಾಘವವಾಗಿ ಪದ್ಯಗಳನ್ನು ರಚಿಸಿ ವಾಚಿಸಿದ್ದುಂಟು. ರಾಜಕೀಯ ಹಾಗೂ ಚರ್ಚಿನ ಮಹತ್ವದ ಪ್ರಚಾರಕ್ಕಾಗಿ ಹೊಸ ಬ್ಯಾಲೆಡ್ ಮಾಧ್ಯಮವನ್ನು ಬಳಸಿಕೊಳ್ಳಲಾಯಿತು. ತಂತಮ್ಮ ಪ್ರತಿಷ್ಠೆಯನ್ನು ಸ್ಥಾಪಿಸುವ ಸಲುವಾಗಿ ದೊರೆ ಪುರೋಹಿತರಿಬ್ಬರೂ ಈ ಮೂಲಕ ಮೇಲಾಟ ನಡೆಸುತ್ತಿದ್ದುದೂ ಉಂಟು. ಅಗಲವಾದ ಹಾಳೆಗಳ ಮೇಲೆ ಅವನ್ನು ಮುದ್ರಿಸುತ್ತಿದ್ದುದರಿಂದ ಬ್ರಾಡ್ ಸೈಡ್ (Broad Side) ಬ್ಯಾಲೆಡ್ಡುಗಳೆಂದು ಪ್ರಸಿದ್ಧಗೊಂಡವು. ವರ್ತಮಾನ ಪತ್ರಿಕೆಗಳು ಚಾಲ್ತಿಯಲ್ಲಿಲ್ಲದಿದ್ದಾಗ ಇವು ಅವುಗಳ ಕಾರ್ಯವನ್ನು ನಿರ್ವಹಿಸುತ್ತಿದ್ದುವು. ಇವನ್ನು ರಚಿಸುವ ಮತ್ತು ಹಾಡುವ ವೃತ್ತಿಗಾರರ ಜಾತಿಯೊಂದು ನಿರ್ಮಾಣಗೊಂಡಿತು. ತಾವು ರಚಿಸಿದ್ದನ್ನು ಬೀದಿ ಬೀದಿಗಳಲ್ಲಿ ಜಾತ್ರೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಹಾಡುತ್ತಿದ್ದರಲ್ಲದೆ, ಅವುಗಳ ಸ್ಪಷ್ಟೀಕರಣಕ್ಕಾಗಿ ವಸ್ತ್ರಭಿತ್ತಿಯ ಮೇಲೆ ಚಿತ್ರಗಳನ್ನು ಬರೆದು ತೋರಿಸುತ್ತಿದ್ದರು. ಹದಿನಾರನೆಯ ಶತಮಾನದ ಆದಿಭಾಗದಲ್ಲಿ ಪ್ರಾದುರ್ಭವಿಸಿದ ಅವು ಹದಿನೇಳು ಹದಿನೆಂಟನೆಯ ಶತಮಾನಗಳಲ್ಲಿ ತುಂಬ ಜನಪ್ರಿಯವಾದುವು. ಯುದ್ಧ ಪ್ರವಾಹ ರಾಜಕೀಯ ಘಟನೆ ಭೂಕಂಪ ಮೊದಲಾದ ವಿಷಯಗಳು ಜನಸಾಮಾನ್ಯರಿಗೆ ತಿಳಿಯುತ್ತಿದ್ದುದೇ ಹೀಗೆ. ಪ್ರಾಟೆಸ್ಟಾಂಟ್ ಮತದ ಪ್ರಚಾರಕ್ಕಂತು ಈ ನೂತನ ಮಾಧ್ಯಮವೊಂದು ವರವಾಗಿ ಪರಿಣಮಿಸಿತು. ಈ ಜಾತಿಯ ಕಾವ್ಯ ಮೊದಮೊದಲು ರೂಕ್ಷವಾಗಿ ತೋರಿದರೂ, ಆಮೇಲಾಮೇಲೆ ಪರಿಷ್ಕಾರಗೊಂಡು ಗೇಯಾಂಶವನ್ನು ಳವಡಿಸಿಕೊಂಡಿತು. ಅದು ಹೆಚ್ಚಿಗೆ ಸಿಕ್ಕಿದುದರಿಂದ ಗಾಯಕನ ನೆರವೂ ಕೊನೆಕೊನೆಗೆ ಬೇಡವಾಯಿತು. ಈ ನಾಗರಿಕ ಬ್ಯಾಲಿಡ್ಡುಗಳು ಬಹು ಬೇಗನೆ ಗ್ರಾಮಾಂತರ ಜನರ ಮನಸ್ಸನ್ನು ಸಹ ಗೆದ್ದು ಕೊಂಡುವು. ಇವು ಮುಂದೆ ಬಾಯಿಂದ ಬಾಯಿಗೆ ಹರಿಯತೊಡಗಿದುವು. ಇವು ಜನಪ್ರಿಯ ವಾದಂತೆಲ್ಲ, ಮೂಲ ಬ್ಯಾಲಿಡ್ಡುಗಳ ಪ್ರಸಾರ ಕಡಮೆಯಾಗತೊಡಗಿತು. ಇಲ್ಲವೆ ಅವು ಇವುಗಳ ಪ್ರಭಾವಕ್ಕೆ ಮಣಿಯಬೇಕಾಯಿತು.

ಮೂಲ ಬ್ಯಾಲಿಡ್ಡುಗಳೇ ಬೀದಿ ಬ್ಯಾಲಿಡ್ಡುಗಳೇ ಶಿಷ್ಟಸಾಹಿತಿಗಳಿಗೆ ಹಿಡಿಸಲಿಲ್ಲ. ಮಧುರನಂಥ ಪಂಡಿತ ಕವಿಗಳು ಎಲ್ಲ ನಾಡುಗಳಲ್ಲಿಯೂ ಇದ್ದವರೇ. ಜಾನಪದ ಕವಿಗಳು ಮತ್ತು ಗಾಯಕರು, ಕುಡುಕರು, ತಿರುಕರು, ತಿಕಾಣಿಯಿಲ್ಲದ ಅಲೆಮಾರಿಗಳು ಎಂದೆಲ್ಲ ದೂರಿ ಅವರನ್ನು ದೂರವಿಡುತ್ತಿದ್ದರು. "ಸಾಹಿತಿ ಬ್ಯಾಲಿಡ್ ಜನಕನನ್ನು ಉಪೇಕ್ಷಿಸಬೇಕು" ಎಂದು ಬೆನ್‌ಜಾನ್‌ಸನ್[1] ಸೋದರ ಕವಿಗಳಿಗೆ ಕಲಿಕೊಟ್ಟಿದ್ದುಂಟು. ಡಾ. ಜಾನ್‌ಸನ್ ಅವರನ್ನು ಆಗಾಗ್ಗೆ ಅಣಕಿಸುತ್ತಿದ್ದನು. ಕವಿಗಳು ಅವರನ್ನು ತಿರಸ್ಕಾರದಿಂದ ಕಾಣುತ್ತಿದ್ದರೂ, ಅವರ ರಚನೆಗಳನ್ನು ಉದ್ಧರಿಸುತ್ತಿದ್ದುದುಂಟು. ೧೭೬೫ರಲ್ಲಿ ಥಾಮಸ್ ಪರ್ಸಿ (Reliques of Ancient English poetry) ಎಂಬ ಸಂಕಲನವನ್ನು ಪ್ರಕಟಿಸಿದ ನಂತರ ಶಿಷ್ಟ ಕವಿಗಳ ಮನಸ್ಸು ಪರಿವರ್ತನೆಗೊಂಡಿತು. ವರ್ಡ್ಸ್‌ವರ್ತ್, ಸ್ಕಾಟ್

---

1 "A poet should detest a ballad—maker"—Quoted by Albert B. Friedman in *The Ballad Revival*, p. 65.

ಮೊದಲಾದ ಕವಿಗಳು ಅವುಗಳಿಗೆ ಮರುಳಾದದ್ದಲ್ಲದೆ, ಅವುಗಳನ್ನನುಕರಿಸಲು ಮತ್ತು ಸಂಗ್ರಹಿಸಲು ತೊಡಗಿದರು. ಮುಂದೆ ಜೆ. ಡಬ್ಲ್ಯು. ಹೇಲ್ಸ್ ಮತ್ತು ಎಫ್. ಜೆ. ಫರ್ನಿವಲ್ ಇಬ್ಬರೂ ಪರ್ಸಿಯ ಲಾವಣಿಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಲಾವಣಿಗಳನ್ನು ಕುರಿತು ವಿಮರ್ಶೆ ಬರೆದ ಜೋಸೆಫ್ ರಿಸ್ಟನ್ ಮತ್ತು ವೈಜ್ಞಾನಿಕ ರೀತಿಯಲ್ಲಿ ಲಾವಣಿಗಳ ಸಂಗ್ರಹವನ್ನು ಬೆಳಕಿಗೆ ತಂದ ಎಫ್. ಜೆ. ಚೈಲ್ಡ್ ಅವರು ಈ ಕ್ಷೇತ್ರದಲ್ಲಿ ಖ್ಯಾತನಾಮರಾಗಿದ್ದಾರೆ. ೧೭೧೧ರ ಸುಮಾರಿನಲ್ಲಿಯೇ ಚೆವಿಚೇಸ್ (Chevy chase) ಎಂಬ ಬ್ಯಾಲೆಡ್ಡನ್ನು[1] ಕುರಿತು ಪ್ರಶಂಸಿಸಿ, ಬ್ಯಾಲೆಡ್ ವಂಶಕ್ಕೇ ಶಾಶ್ವತವಾದ ಕೀರ್ತಿಯನ್ನೊದಗಿಸಿದ ಜೋಸೆಫ್ ಅಡಿಸನ್ನನಿಗೆ ಜಾನಪದ ತಜ್ಞರೆಲ್ಲರೂ ಕೃತಜ್ಞರಾಗಿರಬೇಕಾಗಿದೆ. ಆ ಕಾವ್ಯದಲ್ಲಿಯ ಪದ್ಯವೊಂದನ್ನೆತ್ತಿಕೊಂಡು, ಅಲ್ಲಿ ಅಭಿವ್ಯಕ್ತಗೊಂಡಿರುವ ಆಲೋಚನೆ ಬೇರೆ ಕವಿಗಳಲ್ಲಿಲ್ಲದ್ದು, ಹೋಮರ್ ವರ್ಜಿಲರಲ್ಲಿ ಮಾತ್ರ ನೋಡಬಹುದಾದಂಥದು ಎಂದು ಘೋಷಿಸಿದ್ದಾನೆ.[2] ಬೆನ್‌ಜಾನ್‌ಸನ್ ಅಂಥವನೇ ಆ ಕಾವ್ಯವನ್ನು ಕುರಿತು, ಬೇರೆ ಕೃತಿಗಳನ್ನು ರಚಿಸುವುದಕ್ಕಿಂತ ಅಂಥದೊಂದು ಕೃತಿಯನ್ನು ರಚಿಸಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಿದುದಾಗಿ ಅಡಿಸನ್ ತಿಳಿಸಿದ್ದಾನೆ.[3] ಅನಂತರ ಈಲಿಯಟ್‌ರ ತನಕ ಬ್ಯಾಲೆಡ್ಡು ಪರೋಕ್ಷವಾಗಿಯೋ ಪ್ರತ್ಯಕ್ಷವಾಗಿಯೋ ಶಿಷ್ಟ ಕವಿಗಳ ಮೇಲೆ ಪ್ರಭಾವ ಬೀರುವಂತಾಯಿತು. ಕೋಲರಿಜ್, ಕೀಟ್ಸ್, ರಾಸೆಟಿ ಮೊದಲಾದವರು ಬ್ಯಾಲೆಡ್ಡಿನ ತಿರುಳನ್ನು ಜೀರ್ಣಿಸಿಕೊಂಡು ತಮ್ಮ ಕಾವ್ಯಗಳನ್ನು ರಚಿಸಿದರು. ವಿದ್ಯಾರ್ಥಿದೆಶೆಯಲ್ಲಿದ್ದಾಗ ಗೋಲ್ಡ್‌ಸ್ಮಿತ್ ಬೀದಿ ಬ್ಯಾಲೆಡ್ಡು ಬರೆದು ಎರಡು ಕಾಸು ದುಡಿಯುತ್ತಿದ್ದ. ಮುಂದೆ ಅವನ ಶೈಲಿಗೆ ಚಾರುತ್ವ ಮತ್ತು ಚಮತ್ಕಾರಗಳು ಪ್ರಾಪ್ತವಾದದ್ದು ಅಂಥ ಬರಹಗಳಿಂದ ಎಂದು ಹೇಳುತ್ತಾರೆ. ಲ್ಯೂಯಿ ಕೆರೋಲನ ಅಣಕ ಬರಹಗಳಿಗೂ ಬ್ಯಾಲೆಡ್ಡುಗಳೇ ಸ್ಫೂರ್ತಿ ನೀಡಿದುವು. ಜನರಿಗೆ ಅರ್ಥವಾಗುವಂತೆ ಜನ ಭಾಷೆಯಲ್ಲಿ ಕಾವ್ಯ ರಚನೆ ಮಾಡಬೇಕೆನ್ನುವ ವರ್ಡ್ಸ್‌ವರ್ತ್‌ನ ಮೇಲೆ ಜಾನಪದ ಪ್ರಭಾವ ಅದಮ್ಯವಾಗಿತ್ತು. ಯೇಟ್ಸ್ ಅಂತು ಜನಪದ ಸಾಹಿತ್ಯದ ಸಮ್ಮೋಹಕತೆಗೆ ಮರುಳಾಗಿ, ಅಲ್ಲಿಯ ಶೈಲಿ ತಂತ್ರಗಳನ್ನು ತನ್ನ ಕಾವ್ಯದಲ್ಲಿ ಬಳಸಿಕೊಂಡನು. ಅವನದಕ್ಕೆ ಜೋಲುಬಿದ್ದದ್ದು ಕೇವಲ ತಂತ್ರಕ್ಕೆ ಮರುಳಾಗಿ ಅಲ್ಲ; ಅವನ ದೃಷ್ಟಿಯಲ್ಲಿ ಅದು ಆದಿಕಾಲದ ಮೂಲಭೂತ ರಾಗಭಾವಗಳ ತವನಿಧಿ, ವಿಶ್ವಾನುಭವದ ಸಂಕೇತ. ಕಿಪ್ಲಿಂಗ್ ಬ್ಯಾಲೆಡ್ ಕವಿ ಎಂದು ಟಿ. ಎಸ್. ಈಲಿಯಟ್ ಅಂಕಿತಗೊಳಿಸುತ್ತಾನೆ.[4] ಕಾವ್ಯಕ್ಷೇತ್ರದ ಸಾರ ಕ್ಷಯಿಸಿ,

---

1 *English Critical Essays*, xvi–xvii *Centuries*, Ed by Edmund D. Jones, p.p. 228–240.

2 The thought in the third stanza was never touched by any other poet, and is such a one as would have shined in Homer of Virgil, Ibid, p. 237.

3 Ibid, p. 229.

4 He is a ballad-writer, Eliot insists, because he writes with the same intention as the naive balladists: to create Verses "immediately apprehensible" that concentrate on the story or characters and forego "Metri-

ಅನಾರೋಗ್ಯ ಆವರಿಸಿ, ಬೆಳೆ ಕಡಮೆಯಾಗಿ ಕಳೆ ಹೆಚ್ಚಿಕೊಂಡಾಗ ಜಾನಪದ ಸಾಹಿತ್ಯದ ಮೂಲಕ ಕಾಯಕಲ್ಪ ಚಿಕಿತ್ಸೆ ನಡೆಯಬೇಕಾಗುತ್ತದೆ, ಆರೋಗ್ಯವನ್ನು ಕುದುರಿಸ ಬೇಕಾಗುತ್ತದೆ.

ಅತ್ಯಾಧುನಿಕ ರಾಷ್ಟ್ರವಾದ ಅಮೆರಿಕೆಯಲ್ಲಿ[1] ಬ್ಯಾಲೆಡ್ಡುಗಳ ಪುನರೋದ್ಧರಣದಿಂದ ಅದ್ಭುತ ಫಲ ದೊರಕಿದೆ. ಅಲ್ಲಿ ಬ್ಯಾಲೆಡ್ಡುಗಳನ್ನು ಮೂರು ಗುಂಪಾಗಿ ವಿಂಗಡಿಸುತ್ತಾರೆ. ಸಾಂಪ್ರದಾಯಿಕವಾದ ಚೈಲ್ಡ್ ಬ್ಯಾಲೆಡ್ಡುಗಳದು ಒಂದು ಗುಂಪು.[2] ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ರಚನೆಗೊಂಡು, ಉತ್ತರ ಅಮೆರಿಕೆಯಲ್ಲಿ ಸಂಪಾದನೆಗೊಂಡು ಪ್ರಕಟವಾದ ೨೭೫ ಬ್ರಾಡ್‌ಸೈಡ್ ಬ್ಯಾಲಡ್ಡುಗಳು ಎರಡನೆಯ ಗುಂಪಿಗೆ ಸೇರುತ್ತವೆ. ಕಳೆದ ಶತಮಾನದ ದ್ವಿತೀಯಾರ್ಧದಲ್ಲಿ ಅಮೇರಿಕೆಯಲ್ಲಿಯೇ ರಚನೆಗೊಂಡು ಗಾಯನ ಮತ್ತು ಮುದ್ರಣಗಳ ಮೂಲಕ ಪ್ರಸಾರಗೊಂಡಿರುವ ೩೦೦ ಸ್ವದೇಶೀ ಬ್ಯಾಲೆಡ್ಡುಗಳು ಮೂರನೆಯ ಗುಂಪಾಗಿ ಪ್ರಸಿದ್ಧಿಹೊಂದಿವೆ. ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮ ಸಮಾಜದಲ್ಲಿಯೂ ಒಬ್ಬರೋ ಇಬ್ಬರೋ ಗಾಯಕರಿರುತ್ತಾರೆ; ಅವರು ಕೆಲವೊಮ್ಮೆ ಬ್ಯಾಲೆಡ್ಡುಗಳನ್ನು ರಚಿಸುವುದೂ ಉಂಟು. ನಗರಗಳಿಂದ ದೂರ ವಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಈ ಹವ್ಯಾಸೀ ಗಾಯಕರಿಗೆ ಸದಾ ಸ್ವಾಗತವುಂಟು.

ಈ ಬ್ಯಾಲೆಡ್ಡುಗಳಲ್ಲಿ ಸಾಮಾನ್ಯವಾಗಿ ಹತ್ತರಿಂದ ಇಪ್ಪತ್ತರವರೆಗೆ ಪ್ರಾಸಬದ್ಧವಾದ ಪದ್ಯಗಳಿರುತ್ತವೆ. ಶೈಲಿ ಸರಳ ಮತ್ತು ನೇರ; ವ್ಯಾಕರಣ ಶುದ್ಧಿ ಅನಿಶ್ಚಿತ. ಅಲ್ಲಿ ಬರುವ ಪಾತ್ರ ಸನ್ನಿವೇಶಗಳು ಮತ್ತು ಅಭಿವ್ಯಕ್ತಿ ರೀತಿ ಸಾಮಾನ್ಯವಾಗಿ ಎಲ್ಲರಿಗೂ ಸುಪರಿಚಿತ. ನಾಟಕೀಯತೆ ಅದರ ಪ್ರಧಾನ ಗುಣ. ಗಾಯಕರ ಮರೆವು ಮತ್ತು ಸೃಜನ ಶೀಲತೆಯಿಂದಾಗಿ ಭಿನ್ನ ಭಿನ್ನ ಪಾಠಾಂತರಗಳು ಅನಿವಾರ್ಯ. ಬ್ಯಾಲೆಡ್ಡು ದೀರ್ಘವಾದಷ್ಟೂ ಹಾಡುವ ಜನರ ಭಾಷಾಶೈಲಿಗಳು ಹಾಸುಹೊಕ್ಕಾಗಿ ಸೇರಿಕೊಳ್ಳುತ್ತವೆ. ಅಮೆರಿಕೆಯಲ್ಲಿ ಬಹು ಜನಪ್ರಿಯವಾಗಿರುವ ಚೈಲ್ಡ್ ಬ್ಯಾಲೆಡ್ಡುಗಳಲ್ಲಿ ಪ್ರಣಯ ಕಥೆ ಮತ್ತು ಗಾರ್ಹ ದುರಂತ ಸಾಮಗ್ರಿಯೇ ಅಧಿಕ. ಪಾಳೆಯಗಾರಿಕೆ ಸಮಾಜದ ಶ್ರೀಮಂತರೇ ಅಲ್ಲಿಯ

---

cal complications corresponding to subleties of feeling that cannot be immediately responded to." If "so little of private extasies and despairs" appears in his poems, it is because he regards himself as s public spokesman and wishes "to elicit the same response from all readers, and only the responses they can make in common. . . ." *The Ballad Revival* by A. B. Friedman, p. 338

1 ಅಮೆರಿಕೆಯ ಬ್ಯಾಲಿಡ್ಡುಗಳಿಗೆ ಸಂಬಂಧಿಸಿದ ವಿವರಗಳಿಗೆ ಈ ಪ್ರಬಂಧ *American Folklore* ಸಂಗ್ರಹದಲ್ಲಿ ಅಚ್ಚಾಗಿರುವ ಜಿ. ಮಾಲ್ಕಮ್ ಲಾಸ್ ಅವರ *Stories in Song ! The Ballads of America* ಎಂಬ ಲೇಖನಕ್ಕೆ ಋಣಿಯಾಗಿದೆ.

2 ಹಾರ್ವರ್ಡ್ ವಿಶ್ವವಿದ್ಯಾನಿಲಯದ ಎಫ್. ಜೆ. ಚೈಲ್ಡ್ ವಿದ್ವಾಂಸರು 1880–1890ರಲ್ಲಿ *The English and Certtish Popular Ballads*ಗಳನ್ನು ಸಂಪಾದಿಸಿ, ಐದು ಸಂಪುಟಗಳ ಪ್ರಕಟಿಸಿದರು. ಅಲ್ಲಿ ಅಚ್ಚಾಗಿರುವ ಬ್ಯಾಲೆಡ್ಡುಗಳ ಸಂಖ್ಯೆ 305.

ಪ್ರಧಾನ ಪಾತ್ರಗಳು. ಚಿನ್ನ ಬೆಳ್ಳಿ ಆಳುಕಾಳು ಭೂಮಿಭವನಗಳ ವರ್ಣನೆಗೆ ಪ್ರಾಮುಖ್ಯವುಂಟು. ದ್ವೇಷ ಮಾತ್ಸರ್ಯಾದಿ ಮೂಲಭೂತವಾದ ಭಾವಾತಿರೇಕದಿಂದಾಗಿ ಫಲಿಸುವ ಕೊಲೆ ಮೊದಲಾದ ಅಪರಾಧಗಳ ವಿಷಯ ಕಥಾ ಸಾಮಗ್ರಿಯಾಗುತ್ತದೆ. ಪ್ರಾಚೀನ ಬ್ರಿಟಿಷ್ ಪಾಠಗಳಲ್ಲಿ ಮೇಲಿಂದ ಮೇಲೆ ಬರುವ ಅಮಾನುಷ ಘಟನೆಗಳು ಆಧುನಿಕ ಅಮೆರಿಕೆಯ ಬ್ಯಾಲೆಡ್ಡುಗಳಲ್ಲಿ ಅಪರೂಪ; ಭೂತಗಳು ಮಾತ್ರ ಕ್ವಚಿತ್ತಾಗಿ ಕಾಣಿಸಿಕೊಳ್ಳುತ್ತವೆ.

ಯೂರೋಪಿನ ಬೇರೆ ಬೇರೆ ಭಾಷೆಗಳಲ್ಲಿ ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುವ 'The two sisters' ಎಂಬ ಬ್ಯಾಲೆಡ್ಡು ಅಮೆರಿಕೆಯಲ್ಲಿಯೂ ಜನಪ್ರಿಯವಾಗಿದೆ. ಮಾತ್ಸರ್ಯ ಮತ್ತು ಕೊಲೆಗಳೇ ಅಲ್ಲಿಯ ಸರಕು. ತಂಗಿ ಅಕ್ಕನಿಗಿಂತ ಚೆಲುವೆ. ಯುವಕನೊಬ್ಬ ಅವಳನ್ನು ಪ್ರೀತಿಸಿ, ಬೆಲೆಯುಳ್ಳ ಕಾಣಿಕೆಗಳನ್ನವಳಿಗೆ ನೀಡುತ್ತಾನೆ. ಹೊಟ್ಟೆಕಿಚ್ಚಿನ ಅಕ್ಕ ತಂಗಿಯನ್ನು ಮೋಸದಿಂದ ಕೆರೆಯಬಳಿಗೊಯ್ದು, ನೀರಿಗೆ ನೂಕುತ್ತಾಳೆ. ಯಾರೋ ಅವಳ ಹೆಣವನ್ನು ಹೊರಗೆ ತೆಗೆಯುತ್ತಾರೆ. ವಾದ್ಯ ವರ್ಧಕಿ ಅವಳ ಕೂದಲನ್ನು ತಂತಿಗೆ ಬದಲಾಗಿ ಬಳಸುತ್ತಾನೆ. ತಂತಿವಾದ್ಯ ಆತ್ಮಕಥೆಯನ್ನು ಹೇಳಿಕೊಳ್ಳುತ್ತದೆ. ಈ ಕಥೆಗೆ ಅನೇಕ ಪಾಠಾಂತರಗಳಿವೆ. ಇಲ್ಲಿಯ ಅಕ್ಕತಂಗಿಯರು ರಾಜಕುಮಾರಿಯರಲ್ಲ; ಯುವಕ ತನ್ನ ಪ್ರೇಯಸಿಗೆ ನೀಡುವುದು ಆಭರಣಗಳಲ್ಲ, ಬೀವರ್ ಚರ್ಮದ ಟೋಪಿ; ಮಿಲ್ ಮಾಲೀಕನೊಬ್ಬ ಅಕ್ಕನ ಚಿತಾವಣೆಗೆ ಮರುಳಾಗಿ ತಂಗಿಯನ್ನು ಕೊಲ್ಲುತ್ತಾನೆ. 'Fair Margaret and sweet william' ಎಂಬುದು ಭೂತಕಥೆಯನ್ನು ಸಾಮಗ್ರಿಯಾಗುಳ್ಳ ಬ್ಯಾಲೆಡ್ಡು. ತನ್ನ ಪ್ರಿಯಕರ ಬೇರೊಬ್ಬಳನ್ನು ಮದುವೆಯಾದನೆಂಬ ತಪ್ಪು ಸುದ್ದಿ ಕೇಳಿದ ಮಾರ್ಗರೆಟ್ ದುಃಖದಿಂದ ಸಾಯುತ್ತಾಳೆ. ಅವಳ ಭೂತ ವಿಲಿಯಮ್ಮನ ಹಾಸುಗೆಯ ಬಳಿ ಗೋಚರಿಸಿ, ತಮ್ಮ ಹಿಂದಿನ ಪ್ರಣಯ ಬಾಂಧವ್ಯವನ್ನು ನೆನಪಿಗೆ ತಂದುಕೊಡುತ್ತದೆ. ತಾನು ಕಂಡದ್ದು ಸ್ವಪ್ನವೆಂದು ತಿಳಿದು, ಅವನು ಮಾರ್ಗರೆಟ್ಟಳನ್ನು ಹುಡುಕಿಕೊಂಡುಹೋಗುತ್ತಾನೆ. ಅವಳ ಶವವನ್ನು ನೋಡಿ, ಅವಳ ತಣ್ಣನೆಯ ತುಟಿಗಳಿಗೆ ಮುತ್ತಿಟ್ಟು ಸಾಯುತ್ತಾನೆ. ಬ್ಯಾಲೆಡ್ಡುಗಳ ದೃಷ್ಟಿಯಿಂದ ಪ್ರೇಮವಂಚನೆಯಂಥ ಅಪರಾಧ ಮತ್ತೊಂದಿಲ್ಲ; ಅದಕ್ಕೆ ಮರಣವೇ ಉಚಿತ ಶಿಕ್ಷೆ.

ಸಾಮಾನ್ಯ ಜನಜೀವನಕ್ಕೆ ಸಂಬಂಧಿಸಿದ ಕಥೆಗಳು ಬ್ರಾಡ್‌ಸ್ಟೈಡ್ ಬ್ಯಾಲೆಡ್ಡುಗಳ ವಸ್ತು. ಅಲ್ಲಿ ಬರುವ ಪಾತ್ರಗಳೆಂದರೆ ಸೈನಿಕರು, ನಾವಿಕರು, ಕವಾಡಿಗಿತ್ತಿಯರು ಮತ್ತು ವರ್ತಕರು. ಇಲ್ಲಿಯ ಶ್ರೀಮಂತ ಕನ್ಯೆ ಬಡ ರೈತನ ಮಗನನ್ನೋ ನಾವಿಕನನ್ನೋ ಪ್ರೀತಿಸಿ, ಅವನ ಹಿಂದೆ ಓಡಿಹೋಗಿ, ತನ್ನ ಕುಟುಂಬದ ಕೋಪಕ್ಕೆ ತುತ್ತಾಗುತ್ತಾಳೆ. ಅಥವಾ ಒಬ್ಬ ಹುಡುಗಿ ಹುಡುಗನ ವೇಷ ಧರಿಸಿ, ತನ್ನ ಪ್ರಿಯಕರನ ಸಾಮೀಪ್ಯ ಪಡೆಯುವ ಸಲುವಾಗಿ ಸೈನ್ಯವನ್ನು ಸೇರುತ್ತಾಳೆ. ಇಂಥ ಬ್ಯಾಲೆಡ್ಡುಗಳನ್ನು ರೈತರೋ ಸೈನಿಕರೋ ಸೃಷ್ಟಿ ಮಾಡಿರಬೇಕೆಂಬ ಊಹೆ ಸತ್ಯದೂರವಾಗಲಾರದು. ದೂರ ದೇಶಕ್ಕೆ ಹೋಗಿ ಬಹುಕಾಲಾನಂತರ ಹಿಂದಿರುಗಿದ ಪ್ರೇಮಿಯೊಬ್ಬ ವೇಷ ಮರೆಸಿಕೊಂಡು ತನ್ನ

ಪ್ರೇಯಸಿಯ ನಿಷ್ಠೆಯನ್ನು ಪರೀಕ್ಷಿಸುವ ಕಥೆಗಳು ವಿರಳವೇನಲ್ಲ. **'The Banks of claudy'** ಎನ್ನುವುದು ಅಂಥದೊಂದು ಬ್ಯಾಲೆಡ್ಡು. ಹುಡುಗಿ ತನ್ನ ಪ್ರಿಯತಮ ಜಾನಿಯನ್ನು ಹುಡುಕುತ್ತ ಅಲೆಯುತ್ತಾಳೆ. ಹಡಗು ಮುಳುಗಿ ಅವನು ತೀರಿಕೊಂಡನೆಂಬ ಸುದ್ದಿ ತಿಳಿದಾಗ, ಅವಳು ತಲೆಕೂದಲು ಕಿತ್ತುಕೊಂಡು, ಮತ್ತೆ ಯಾರನ್ನೂ ಮದುವೆಯಾಗುವುದಿಲ್ಲವೆಂದು ಸಂಕಲ್ಪ ತೊಡುತ್ತಾಳೆ. ಆಗ ಜಾನಿ ನಿಜವೇಷದಲ್ಲಿ ಪ್ರತ್ಯಕ್ಷನಾಗಿ, ಕ್ಲಾಡಿ ದಡಗಳಾಣೆ ನಾವಿನ್ನೆಂದೂ ಅಗಲುವುದಿಲ್ಲವೆಂದು ಅವಳನ್ನು ಸಮಾಧಾನಪಡಿಸುತ್ತಾನೆ.

ವೃತ್ತಿಸಂಬಂಧವಾದ ಅಮೆರಿಕೆಯ ಜೀವನ ಮತ್ತು ಸ್ಥಳೀಯ ಸನ್ನಿವೇಶಗಳು ಸ್ವದೇಶೀ ಬ್ಯಾಲೆಡ್ಡುಗಳ ವಸ್ತುವಾಗುತ್ತವೆ. ಪಶುಪಾಲನೆಯೇ ಮುಖ್ಯ ವೃತ್ತಿಯಾಗುಳ್ಳ ಪಶ್ಚಿಮ ಅಮೆರಿಕೆಯ ಗೋಪಾಲರು ತಮ್ಮ ಜೀವನವನ್ನು ಕುರಿತು ಹಾಡು ಕಟ್ಟಿಕೊಂಡು, ಕುಣಿದಾಡುತ್ತಾರೆ. ನಾಟ ಸಾಗಾಣಿಕೆಯ ಕಸಬುದಾರರೂ ತಮ್ಮ ಬಾಳಿನ ಗೋಳನ್ನು ಹಾಡಿನ ರೂಪದಲ್ಲಿ ಹರಿಸಿದ್ದುಂಟು. ದಿಮ್ಮಿಯಡಿಯಲ್ಲಿ ಸಿಕ್ಕಿ ಕೈಕಾಲು ಕಳೆದುಕೊಂಡ ತರುಣರ ಸಂಕಟ, ಆ ವೃತ್ತಿಯ ಅಪಾಯಗಳಿಗೆ ತುತ್ತಾದವನ ವಿಧವೆಯ ಗೋಳು ಕಥನಗೀತೆ ಅಥವಾ ನೀಳ್ಗವನಗಳ ವಸ್ತುವಾಗುತ್ತವೆ. ಕಲ್ಪನೆಯ ನೀಹಾರಿಕೆಯಿಂದ ಗೊಂದಲಗೊಳ್ಳದ, ಕೃತಕತೆಯಿಂದ ದೂರವಾದ, ಭಾವತೀವ್ರತೆಯ ಮೆರುಗಿನಿಂದ ಹೊಳೆಯುವ ಬೀದಿ ಬ್ಯಾಲೆಡ್ಡುಗಳು ಸ್ವದೇಶೀ ಬ್ಯಾಲೆಡ್ಡುಗಳಿಗೆ ಮಾದರಿಯಾಗುತ್ತವೆ. ಹೊಲ ಕೊಯ್ಯುವಾಗ ರೈತಯುವಕನನ್ನು ಬುಡುಬುಡಿಕೆ ಹಾವು ಕಚ್ಚುತ್ತದೆ. ಅವನು ಕೂಡಲೇ ಕೂಗಿಕೊಳ್ಳುತ್ತಾನೆ. ಮಗನಿಗೆ ಕಾದಿದ್ದ ದುರ್ವಿಧಿ ತಂದೆಗೆ ಅರ್ಥವಾಗುವುದಿಲ್ಲ. ಅವನು ನಿಧಾನವಾಗಿ ಬರುತ್ತಾನೆ. ಬರುವ ಹೊತ್ತಿಗೆ ಮಗನ ಪ್ರಾಣಪಕ್ಷಿ ಹಾರಿಹೋಗಿದೆ. ಅವನ ಪರಾಕಾಷ್ಠೆ ಕೇವಲ ಎರಡು ಸರಳ ಪಂಕ್ತಿಗಳಲ್ಲಿ ವರ್ಣನೆಗೊಂಡಿದೆ. ಎಂಥ ವರಕವಿಯೂ ಇದಕ್ಕಿಂತ ಮಿಗಿಲಾಗಿ ಭಾವತೀವ್ರತೆಯನ್ನು ಅಭಿವ್ಯಕ್ತಗೊಳಿಸಲಾರನು[1]; ಈ ಬ್ಯಾಲೆಡ್ಡಿಗೆ **'Springfield Mountain'** ಎಂದು ಹೆಸರು. ಇಂತೆಯೇ ರೈಲುರಸ್ತೆ ಹಾಗೂ ಗಣಿಗಳ ಅಪಘಾತಗಳು, ಪ್ರವಾಹಾಗ್ನಿಗಳಿಂದುಂಟಾದ ಅನಾಹುತಗಳು, ಆಸ್ತಿಪಾಸ್ತಿ ಪ್ರಣಯ ಪ್ರಕರಣಗಳಿಗೆ ಸಂಬಂಧಿಸಿದ ಖೂನಿಗಳು ಈ ಬ್ಯಾಲೆಡ್ಡುಗಳಿಗೆ ಆಹಾರವಾಗುತ್ತವೆ. ನೀಗ್ರೋಜೀವನವನ್ನು ಚಿತ್ರಿಸುವ ಬ್ಯಾಲೆಡ್ಡುಗಳಂತು ಹೊಸಹೊಸದಾಗಿ ಸೃಷ್ಟಿಯಾಗು

---

1 ಈ ಹೃದಯವಿದ್ರಾವಕ ಸನ್ನಿವೇಶ ಹಾಗೂ ಮುದಿರೈತನ ಸಂಕಟಗಳಿಗೆ ಕನ್ನಡಿಯಾಗಿರುವ ನಾಲ್ಕು ಪಂಕ್ತಿಗಳನ್ನಿಲ್ಲಿ ಉದ್ಧರಿಸಿದೆ:

"He took him up and he carried him home
And on the way did lament and mourn,
Saying, "I heard but did not come
And now I am left alone to mourn."

—*American Folklore*, Ed. by Tristram Coffin III, p. 101.

ತ್ತವೆ. ಇವುಗಳಲ್ಲಿ ಒರಟುತನ ಕಂಡುಬಂದರೂ, ವಾಸ್ತವತೆಯ ಕಠೋರಸತ್ಯವಿದೆ; ಆ ಸತ್ಯದಿಂದಾಗಿ ಅವುಗಳಲ್ಲಿ ರೋಚಕತೆಯಿದೆ.

ಇ. ಲಾವಣಿ

ಇಂಗ್ಲೆಂಡು ಮತ್ತು ಅಮೆರಿಕೆಗಳಲ್ಲಿ ಜನ್ಮವೆತ್ತಿದ ಬ್ಯಾಲೆಡ್ಡಿನ ಸ್ವರೂಪೋದ್ದೇಶ ವಿಕಾಸಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದು ಮತ್ತು ಲಾವಣಿ ಒಂದೆ ಅಲ್ಲ, ಗುಣಧರ್ಮಗಳಲ್ಲಿ ಸಾದೃಶ್ಯಗಳಿರುವಂತೆ ವೈದೃಶ್ಯಗಳೂ ಇವೆ ಎಂಬುದು ಸ್ಪಷ್ಟವಾಗುತ್ತದೆ. ಬ್ಯಾಲೆಡ್[1] ಎಂಥ ಪ್ರಬಲವೂ ಆಕರ್ಷಣೀಯವೂ ಆದ ಸಾಹಿತ್ಯಪ್ರಕಾರವೆಂಬುದು ಮೇಲಿನ ವಿವರಣೆಯಿಂದ ವೇದ್ಯವಾಗುತ್ತದೆ. ಈ ಸಮೀಕ್ಷೆಯಿಂದ ಲಾವಣಿಗಳ ಲಕ್ಷಣ ಹಾಗೂ ವಿಕಾಸಕ್ರಮಗಳನ್ನರಿಯುವುದು ಸುಲಭವಾಗುತ್ತದೆ.

ಆ ವಿವರಗಳ ಕಡೆಗೆ ಗಮನ ಹರಿಸುವ ಮೊದಲು ಲಾವಣಿಪದದ ನಿಷ್ಪತ್ತಿಯನ್ನರಿಯುವುದು ಸೂಕ್ತ. ಸಂಸ್ಕೃತದಲ್ಲಿ ಲಾವ ಎಂಬೊಂದು ಪದವಿದೆ. ಅದರ ಅರ್ಥ cutting, plucking, gathering ಎಂದು. ಲಾವಣಿಗೆ A mass, a collection, an assembly, a throng (ಗೊನ್ದಣಿ, ಸನ್ದಣಿ) ಎಂದು ಅರ್ಥ ಹೇಳಿ, ಮರಾಠಿಯ ಲಾವಣೇಂ ಎನ್ನುವ ಪದ ಲಾಗಣೇಂ ಎಂಬ ಪದದಿಂದ ಬಂದಿದೆಯೆಂದೂ, ಅಲ್ಲಿ ಅದರ ಅರ್ಥ to place in contact or connection, join together ಎಂದೂ ಕಿಟೆಲ್ ತಿಳಿಸುತ್ತಾನೆ. ಹಿಂದಿನ ಕಾವ್ಯಗಳಲ್ಲಿ 'ಲಾವಣಿ' ಎನ್ನುವ ಪದ ಬಳಕೆಯಲ್ಲಿದ್ದು ಅದಕ್ಕೆ 'ಯುದ್ಧದ ಕುಣಿತ, ಸೌಂದರ್ಯ, ಕೌಶಲ್ಯ, ಪ್ರಯೋಗ ಚಾತುರ್ಯ' ಎಂಬ ಅರ್ಥವಿದ್ದಂತೆ ತೋರುತ್ತದೆ. "ಲಾವಣಿ ಎಂದರೆ ಕಳನಹಾಡು, ಸೈನ್ಯವಾಟಿಕೆಯಲ್ಲಿ ಉತ್ಸಾಹ ವಿಜೃಂಭಣಕ್ಕಾಗಿ, ವಿಜಯಾನಂದ ವಿವರ್ಧನಕ್ಕಾಗಿ ಕುಣಿಯುತ್ತ ಹಾಡುತ್ತಿದ್ದ ಲಯ ಪ್ರಧಾನವಾದ ರಣಗೀತಗಳು ಎನ್ನುತ್ತೇವೆ" ಎಂಬುದು ದೇವುಡು ಅವರ ವಿವರಣೆ.[2] "ಲಾವಣಿ ಎಂಬುದು ಗರಡಿಯವರು ಹಾಡುವ ಹಾಡು....ಇದನ್ನು ಈಗಲೂ ಲಾವಣ್ಯ, ಸಂವಾದ, ಪವಾಡ ಎಂದು ಕರೆಯುವುದೂ ಉಂಟು" ಎಂದು ಅವರೇ ಹೇಳುತ್ತಾರೆ.[3] ಇಷ್ಟಾದರೂ ಯಾವ ಕನ್ನಡ ನಿಘಂಟುಗಳಲ್ಲಿಯೂ ಇದರ ವ್ಯುತ್ಪತ್ತಿ ಸಿಗುವುದಿಲ್ಲ. ಇದು ಕಥನಗೀತೆ ಎಂಬರ್ಥದಲ್ಲಿ, ತುಸು ಅರ್ಥವ್ಯತ್ಯಾಸದೊಡನೆ ಮರಾಠಿಯಿಂದ ಕನ್ನಡಕ್ಕೆ ಬಂದ ಪದವಿರಬೇಕು. ಶೃಂಗಾರ ರಸಪ್ರಧಾನವಾದ ಹಾಡುಗಳನ್ನಲ್ಲಿ ಲಾವಣಿ ಎಂಬ ಹೆಸರಿನಿಂದ ಕರೆಯುತ್ತಾರೆ. ಅವು ವೀರರಸಪ್ರಧಾನವಾದ ಪೋವಾಡಾಗಳಿಂದ ಭಿನ್ನವಾದುವು. ಕೆಲವು ಕಾವ್ಯಗಳಿಗೂ ಲಾವಣಿ ಎಂಬ ನಾಮಾಂತರವುಂಟು. ಮ.ವಾ. ಧೋಂಡ

---

[1] ಬ್ಯಾಲೆಡ್ಸ್ ಮತ್ತು ಲಾವಣಿಗಳು ಒಂದೆ ಅಲ್ಲ ಎಂಬುದನ್ನು ತೋರಿಸುವ ಸಲುವಾಗಿಯೇ ಇಂಗ್ಲೆಂಡು ಅಮೆರಿಕೆಗಳಲ್ಲಿ ಅಸ್ತಿತ್ವದಲ್ಲಿರುವ ಈ ಪ್ರಕಾರಗಳನ್ನು ಉದ್ದಕ್ಕೂ ಬ್ಯಾಲೆಡ್ ಎಂದೇ ಕರೆದಿದ್ದೇನೆ.

[2] ಕರ್ಣಾಟಕ ಸಂಸ್ಕೃತಿ, ದೇವುಡು, ಪು. ೧೮.

[3] ಅದೇ, ಪುಟ ೧೬

ಎನ್ನುವವರು 'ಮರ್ಹಾಟೀ ಲಾವಣ್ಯಾ' ಎಂಬ ತಮ್ಮ ಪುಸ್ತಕದ ಪ್ರಸ್ತಾವನೆಯಲ್ಲಿ ಈ ಪದದ ವ್ಯುತ್ಪತ್ತಿಯನ್ನು ಕುರಿತು ಚರ್ಚಿಸಿದ್ದಾರೆ. ಪ್ರ. ಕು. ಭಾಗೋಜಿಯವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿರುವ ಚರ್ಚೆಯ[1] ಭಾಗವನ್ನಿಲ್ಲಿ ಉದ್ಧರಿಸಲಾಗಿದೆ:

(೧) ಹೃದಯಾಲಾ ಚಟಕಾಲಾವತೇ ತೀ ಲಾವಣೀ (ಹೃದಯಕ್ಕೆ ತೀವ್ರ ಆಘಾತ ಉಂಟುಮಾಡುವುದು, ಚುರುಕು ಹೆಚ್ಚುವುದು)

(೨) ಶೇತಾತ ಲಾವಣೀ ಕರತಾನಾ ಮ ಟಲೇ ಜಾತೇ ತೇ ಲಾವಣೀ ಗೀತ (ಹೊಲದಲ್ಲಿ ಬಿತ್ತಿಗೆ ಮಾಡುವಾಗ ಹೇಳುವ ಹಾಡು)

(೩) ಲೂ (ಸಂಸ್ಕೃತ) ಅಂದರೆ ಕೊಯ್ಯುವುದು. ಇದರಿಂದ ಲಾವಣಿ ಬೆಳೆ ಕೊಯ್ಯುವಾಗ ಹೇಳುವ ಹಾಡು.

(೪) ಲವಣ ಎಂದರೆ ಸುಂದರ; ಇದರಿಂದ ಭಾವವಾಚಕ ನಾಮ 'ಲಾವಣೀ.' ಲಾವಣಿಗಳಲ್ಲಿ ಸೌಂದರ್ಯ–ವಿಶೇಷವಾಗಿ ಸ್ತ್ರೀಸೌಂದರ್ಯದ ವರ್ಣನೆ ಇರುವುದರಿಂದ ಲಾವಣಿ ಎಂಬ ಹೆಸರು ಬಂದುದು.

(೫) ಸಂಸ್ಕೃತದ ಶಬ್ದ 'ಲಾಪನಿಕಾ' ಇದರಿಂದ ಲಾವಣಿ.

ಇಷ್ಟೆಲ್ಲ ವ್ಯಾಖ್ಯಾನ ಮಾಡಿದನಂತರ ಈ ಪದದ ವ್ಯುತ್ಪತ್ತಿಯನ್ನು ಸಂಸ್ಕೃತದಲ್ಲರಸಬೇಕಾಗಿಲ್ಲವೆಂದು ಧೋಂಡ ಅವರೇ ಅಭಿಪ್ರಾಯಪಟ್ಟು ಅದನ್ನು ಮರಾಠಿಯ ಮೂಲಕವೇ ವಿವರಿಸುತ್ತಾರೆ. ಲಾವಣಿ ಎಂಬ ಪದಕ್ಕೇ 'ಮಾಂಡಣೀ' ಎಂದು ಅರ್ಥ, ಅಂದರೆ ವ್ಯವಸ್ಥಿತ ರಚನೆ ಮಾಡುವುದು. ಪದರಚನೆಯ ತಂತ್ರವೇ ಪ್ರಧಾನವಾದ್ದರಿಂದ ಲಾವಣಿ ಆಯಿತೆನ್ನುವುದು ಅವರ ಅಭಿಪ್ರಾಯ. ಭಾಗೋಜಿಯವರು ಕೊನೆಯ ವ್ಯುತ್ಪತ್ತಿಯನ್ನು ಅಂಗೀಕರಿಸಿದಂತಿದೆ. ಆದರೆ ಸಂಸ್ಕೃತದಲ್ಲಿರುವ ಅರ್ಥಗಳೆಲ್ಲ ಈ ಪ್ರಕಾರಕ್ಕೊಪ್ಪುತ್ತವೆಯಾದ್ದರಿಂದ ಮರಾಠಿಯ ಮೂಲಕ ಕನ್ನಡಕ್ಕೆ ಬಂದ ಸಂಸ್ಕೃತ ಪದವೆಂದು ಸದ್ಯಕ್ಕೆ ಸ್ವೀಕರಿಸಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಲವಕುಶರೂ ವೃತ್ತಿಗಾಯಕರು, ಅವರು ಹಾಡುತ್ತಿದ್ದುದು ಲಾವಣಿಯ ಧಾಟಿಯಲ್ಲಿದ್ದಿರಬಹುದು ಎನ್ನುವುದನ್ನೂ, ಲವ ಲವಕ್ಕೂ ಲಾವಣಿಗೂ ಏನಾದರೂ ಸಂಬಂಧವಿದೆಯೇ ಎನ್ನುವುದನ್ನೂ ಪರಿಕಿಸಬೇಕಾಗಿದೆ.

"ಲಾವಣಿಯ ಉಗಮ ಆಗಮಗಳ ವಿಷಯ ಇನ್ನೂ ಅನಿಶ್ಚಿತದಲ್ಲಿ ನಿಂತಿದೆ.... ಲಾವಣಿ ರಗಳೆಯಂತೆ ಛಂದೋಪ್ರಕಾರವೂ ಹೌದು; ಸಾಹಿತ್ಯಪ್ರಕಾರವೂ ಹೌದು. ಈವರೆಗೆ ವಿದ್ವಾಂಸರು ಲಾವಣಿಯ ಲಕ್ಷಣವನ್ನು ಅದರ ನಾಮ ಮತ್ತು ಶಿಲ್ಪಗಳನ್ನು ಗುರಿ ಇಟ್ಟು ಹೇಳುತ್ತ ಬಂದಿದ್ದಾರೆ.... ಲಾವಳಿ > ಲಾವಣಿ = ಸಮೂಹ, ಗುಂಪು—ಈ ಅರ್ಥಪರಂಪರೆಯಲ್ಲಿ ಈ ಹೆಸರು ಹುಟ್ಟಿರಬೇಕೆನಿಸುತ್ತದೆ.... ಶಿಲ್ಪದೃಷ್ಟಿಯಿಂದ ಲಾವಣಿಯನ್ನು 'ಛಂದೋಶಿಲ್ಪ' 'ಸಂಗೀತಶಿಲ್ಪ' ಎಂಬ ಎರಡು ಮಗ್ಗಲುಗಳಿಂದ ಲಕ್ಷಣಿಸಬಹುದಾಗಿದೆ.... ಲಾವಣಿ

[1] 'ಲಾವಣಿ' ಎಂಬ ಲೇಖನ: ಆಕರ—ಜಾನಪದ ಸಾಹಿತ್ಯದರ್ಶನ, ಸಂ: ಆರ್. ಸಿ. ಹಿರೇಮಠರು, ಪು. ೨೨೪.

ಎನ್ನುವುದು ಛಂದಸ್ಸು ಮತ್ತು ಸಂಗೀತ ವಿಶಿಷ್ಟವಾದ ಪ್ರಕಾರವೇ ಹೊರತು, ವಸ್ತು ವಿಶಿಷ್ಟ ಪ್ರಕಾರವಲ್ಲ."[1]—ಎಂ. ಎಂ. ಕಲ್ಬುರ್ಗಿಯವರ ಈ ವಿಶ್ಲೇಷಣೆ ತುಂಬ ಆಕರ್ಷಕ ವಾಗಿದೆ. ಆದರೆ 'ಸಮೂಹ' ಎನ್ನುವ ಅರ್ಥ ಇಲ್ಲಿಗೆಂತು ಒಪ್ಪುತ್ತದೆ? "ಲಾವಳಿ ಕೃತಿಗಳ ಪಾಡಿ" ಎನ್ನುವ ಗುಣಚಂದ್ರನ[2] ಮಾತು ಕಲ್ಬುರ್ಗಿಯವರು ಹೇಳುವಂತೆ ಲಾವಣಿಯೊಂದು ಸಂಗೀತವಿಶಿಷ್ಟವಾದ ಪ್ರಕಾರವೆಂಬುದನ್ನು ಸೂಚಿಸುತ್ತದೆ. ಗೇಯತೆ ಪಾಶ್ಚಾತ್ಯ ಲಾವಣಿಗಳ ಪ್ರಮುಖಲಕ್ಷಣವೆನ್ನುವುದನ್ನು ಮರೆಯುವಂತಿಲ್ಲ. ಅಂತು ಈ ವಿದ್ವಾಂಸರ ಅಭಿಪ್ರಾಯ ವಿಚಾರಣೀಯವಾಗಿದೆ.[3]

ಲಾವಣಿ ಆದಿಮಾನವ ಯುಗದ ಸಾಮುದಾಯಕ ಸೃಷ್ಟಿ ಎಂದು ಹರ್ಡರ್ ಗ್ರಿಮ್ ಗುಮ್ಮರೆ ಮೊದಲಾದವರೂ, ವ್ಯಷ್ಟಿ ಸಮಷ್ಟಿಗಳ ಸಹಕಾರೀ ಸೃಷ್ಟಿಯೆಂದು ಕಿಟ್ರಿಜ್ ಮುಂತಾದ ವಿದ್ವಾಂಸರೂ, ಅದು ಮಧ್ಯಯುಗದ ಕಾಣಿಕೆ ಮತ್ತು ವ್ಯಷ್ಟಿ ಸೃಷ್ಟಿ ಎಂದು ಆಧುನಿಕ ವಿದ್ವಾಂಸರೂ ಪಾಶ್ಚಾತ್ಯ ಲಾವಣಿಗಳ ಹುಟ್ಟಿನ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆಂಬ ವಿಷಯವನ್ನು ಈ ಹಿಂದೆ ನೋಡಲಾಗಿದೆ. ಇಲಿಯಡ್ ಒಳ್ಳೇವಲ ಮಹಾಭಾರತದಂಥ ನೈಸರ್ಗಿಕ ಮಹಾಕಾವ್ಯಗಳು ಲಾವಣಿಗಳ ಗುಚ್ಛವೆಂಬುದನ್ನೊಪ್ಪಿಕೊಂಡರೆ, ಲಾವಣಿ ಪ್ರಕಾರ ಬಹುಪ್ರಾಚೀನವಾದದ್ದೆಂಬ ಸಂಗತಿ ಸಿದ್ಧವಾಗುತ್ತದೆ. ಯಾವ ಲಾವಣಿಯೇ ಆಗಲಿ ಒಂದು ದಿನದಲ್ಲಿ ರಚನೆಗೊಂಡು ನಾಲ್ಕು ದಿನಗಳಲ್ಲಿ ಜನಪ್ರಿಯವಾಗಿ ಲೋಕವ್ಯಾಪಿಯಾಯಿತೆಂದು ಹೇಳಲಾಗದು. ಅದು ರೂಪಿಕ್ಕಿ, ಮೊಳೆತು, ಸುತ್ತಮುತ್ತಣ ಪರಿಸರದ ಶಕ್ತಿಸಾರವನ್ನು ಹೀರಿಕೊಂಡು, ಸರ್ವಾಂಗ ಪರಿಪುಷ್ಟವಾಗಿ ಬೆಳೆಯಬೇಕಾದರೆ, ನಾಡಿನಲ್ಲಿ ಹರಡಿ ಜನಪ್ರಿಯವಾಗಬೇಕಾದರೆ ಹತ್ತಾರಲ್ಲ, ನೂರಾರು ವರ್ಷಗಳೇ ಬೇಕಾಗುತ್ತದೆ. ಅದು ವೇದಗಳ ಕಾಲದಲ್ಲಿಯೇ ಜನ್ಮತಾಳಿದ ಬಹುಪ್ರಾಚೀನ ಪ್ರಕಾರವೆಂದು ವಿಂಟರ್‌ನಿಟ್ಸ್ ಮೊದಲಾದ ವಿದ್ವಾಂಸರು ಒಪ್ಪಿಕೊಂಡಿದ್ದಾರೆ :

"ಋಗ್ವೇದದಲ್ಲಿ ಸಂವಾದ ಆಖ್ಯಾನ ಇತಿಹಾಸ ಎಂಬ ಹೆಸರಿನಿಂದ ಬರುವ ಸುಮಾರು ೨೦ ಸೂಕ್ತಗಳುಂಟು....ಈ ಸಂವಾದಗಳು ಪುರಾತನ ಕಾಲದ 'ಲಾವಣಿ' (Ballad)

[1] ನಿಂಗಣ್ಣ ಸಣ್ಣಕ್ಕಿಯವರು ಸಂಪಾದಿಸಿರುವ 'ಕವಿಬಾಳ ಗೋಪಾಳನ ಲಾವಣಿಗಳು' ಎಂಬ ಗ್ರಂಥಕ್ಕೆ ಬರೆದಿರುವ ಮುನ್ನುಡಿಯಿಂದ ಉದ್ಧರಿಸಿದೆ.

[2] ಅದೇ ಮುನ್ನುಡಿಯಲ್ಲಿ ಕಲ್ಬುರ್ಗಿಯವರು ಉದ್ಧರಿಸಿರುವ ಪದ್ಯವಿದು :

ಲಘುಗಳ ಮಿಳಿತವ ಮಾಡಿ
ಕೊನೆಯಲಿ ಗುರುಗಳ ಹೂಡಿ
ಅರ್ಥದ ಸಾರವ ನೋಡಿ,
ಪ್ರಾಸನು ಕೊನೆಯಲಿ ಕೂಡಿ
ಪಾದಮಿತಿಯ ಬೀಸಾಡಿ
ಲಾವಳಿಕೃತಿಗಳ ಪಾಡಿ.

[3] ಸಿಂಪಿ ಲಿಂಗಣ್ಣನವರ 'ಜನಾಂಗದ ಜೀವಾಳ' ಎಂಬ ಗ್ರಂಥದ "ಲಾವಣಿ ಹಾಡುಗಳು" ಎಂಬ ಅಧ್ಯಾಯವನ್ನು ಓದಬಹುದು.

ಗಳೆಂದು ನನ್ನ ಅಭಿಪ್ರಾಯ. ಇಂತಹವು ಇತರ ಪ್ರಾಚೀನ ಸಾಹಿತ್ಯಗಳಲ್ಲಿಯೂ ಉಂಟು. ಈ ಪ್ರಾಚೀನ ಸಂವಾದಗಳಿಂದಲೇ ಮಹಾಕಾವ್ಯವೂ ನಾಟಕವೂ ಹುಟ್ಟಿದುದು. ಇವುಗಳಲ್ಲಿ ದೃಶ್ಯದ ಅಂಶವೂ ಉಂಟು, ಶ್ರಾವ್ಯದ ಅಂಶವೂ ಉಂಟು. ಈ ಸಂವಾದಗಳು ಸಮಗ್ರವಾಗಿ ಪದ್ಯವಾಗಿಯೇ ಇರಬೇಕೆಂಬ ನಿಯಮವಿರಲಿಲ್ಲ; ಅಲ್ಲಲ್ಲಿ ಗದ್ಯ ಬರುತ್ತಿದ್ದುದುಂಟು. ಬಹುಪರವಾಗಿ, ಅಷ್ಟು ಕಾವ್ಯದಂತೆ ಶ್ರಾವ್ಯವಾಗಿ, ಇನ್ನಷ್ಟು ನಾಟಕದಂತೆ ದೃಶ್ಯವಾಗಿ ಇವೆ.

"ಮುಂದೆ ಬೌದ್ಧರ ತ್ರಿಪಿಟಕಗಳಲ್ಲಿಯೂ ಈ ಸಂವಾದಗಳು ಬಂದಿವೆ. ಬುದ್ಧನ ಜೀವನ ಚರಿತ್ರೆಯು ಗ್ರಂಥಸ್ಥವಾಗುವುದಕ್ಕಿಂತ ಮುಂಚೆ, ಆತನ ಜೀವನದ ಮುಖ್ಯ ಮುಖ್ಯ ವಿಷಯಗಳು ಸಂವಾದ ರೂಪದಲ್ಲಿದ್ದುವು. ಅವು ಈಗಲೂ ಪಾಳಿಯ 'ತ್ರಿಪಿಟಕ'ದಲ್ಲಿಯೂ 'ಮಹಾವಸ್ತು', 'ಲಲಿತ ವಿಸ್ತರ'ಗಳಲ್ಲಿಯೂ ದೊರೆಯುತ್ತವೆ.

"ಬೌದ್ಧ ಗ್ರಂಥಗಳಲ್ಲಿ ಇತರ ಸಂಗತಿಗಳನ್ನೊಳಕೊಂಡ ಸಂವಾದಗಳೂ ಉಂಟು. 'ಮಜ್ಝಿಮನಿಕಾಯ'ದ ತಸ್ಕರ ಅಂಗುಲಿಮಾಲನ ಕಥೆ, ಮಖಾಸೇನನ ಕಥೆ, 'ರತ್ಥಪಾಲ ಸುತ್ತ'ದ ರತ್ಥಪಾಲನ ಕಥೆ ಮೊದಲಾದುವುಗಳು ಇಂಥ ಸಂವಾದಗಳಿಗೆ ಅತ್ಯುತ್ತಮ ಉದಾಹರಣೆಗಳು. ಮಾರನು ಭಿಕ್ಷುಣಿಯರಿಗೆ ದುರಾಶೆ ತೋರಿಸಲು ಯತ್ನಿಸಿ ವಿಫಲನಾಗುವ ಕಥೆಗಳನ್ನು ಹೇಳುವ ಸಂವಾದಗಳಂತೂ ಪ್ರಾಚೀನ ಭಾರತದ ಕಾವ್ಯಕಲೆಯ ಪರಮಶ್ರೇಷ್ಠ ರತ್ನಗಳು ಎನ್ನಬಹುದು.

"ಜಾತಕಗಳಲ್ಲೂ ಥೇರೀ ಗಾದೆಗಳಲ್ಲಿಯೂ ಇಂತಹ ಸಂವಾದಗಳು ಅಸಂಖ್ಯಾತವಾಗಿವೆ. ಇವೆಲ್ಲವೂ ಸಂವಾದರೂಪವಾಗಿಯೇ ಇದ್ದು, ಕೇಳುತ್ತಿದ್ದಹಾಗೆಯೇ ಅರ್ಥವಾಗುವಷ್ಟು ಸುಲಭವಾಗಿವೆ. ಒಂದು ವೇಳೆ ಥಟ್ಟನೆ ಅರ್ಥವಾಗದಿದ್ದರೆ ಅಲ್ಲಲ್ಲಿ ಅಷ್ಟಿಷ್ಟು ಗದ್ಯವನ್ನು ಸೇರಿಸುವುದೂ ಉಂಟು. ಸಂವಾದಗಳ ಬೆಳೆವಣಿಗೆಯಲ್ಲಿ ಇದು ಮೊದಲನೆಯ ಹಂತ. ಸಂವಾದ ಮಧ್ಯದಲ್ಲಿ (ಇತರ) ಪದ್ಯಗಳನ್ನು ಸೇರಿಸಿ ಕಥೆಯನ್ನು ಹೇಳುವುದು ಎರಡನೆಯ ಹಂತ. ಬೌದ್ಧಗ್ರಂಥಗಳೆಲ್ಲ ಈ ಹಂತದಲ್ಲಿವೆ. ಇಲ್ಲಿಂದ ಮುಂದಿನ ಹಂತವೇ ಪುರಾಣ, ಮಹಾಕಾವ್ಯಗಳು."[1]

ವೈದಿಕ ಸಾಹಿತ್ಯದಲ್ಲಿ ಬರುವ ಗಾಥಾಗಳು ಭಾರತೀಯ ಲಾವಣಿಗಳ ಅತ್ಯಂತ ಪ್ರಾಚೀನ ರೂಪಗಳೆಂದು ಘುರ್ಗಾಭಾಗವತರೂ ಅಭಿಪ್ರಾಯಪಡುತ್ತಾರೆ. ಜೈಮಿನೀಯ ಉಪನಿಷತ್ ಬ್ರಾಹ್ಮಣ ಗಾಥಾ, ನಾರಾಶಂಸೀ ಮತ್ತು ರೈಭ್ಯಾ ಎಂಬುದಾಗಿ ಮೂರು ವಿಧವಾದ ಗಾಥಾಗಳನ್ನು ಹೆಸರಿಸುತ್ತದೆಂದೂ, ಅವು ಲೌಕಿಕ ಸಾಹಿತ್ಯವಾದ್ದರಿಂದ ಅವುಗಳನ್ನು ಹಾಡುವ ಜನರನ್ನು ಕಡೆಗಣಿಸಲಾಗಿತ್ತೆಂದೂ, ತ್ಯಾಗವೀರರ ನಾಯಕ ದಾನಿಗಳ ಪ್ರಶಂಸೆ ಮತ್ತು ಅವರ ಸತ್ಕರ್ಮಗಳ ವಿವರಣೆ ನಾರಾಶಂಸಿಯ ವಸ್ತುವಾಗಿದ್ದು ಅದು ಭಾರತೀಯ ಲಾವಣಿಗೆ ನಾಂದಿಯಾಯಿತೆಂದೂ ಅರ್ಥವೇದದಲ್ಲಿ ಕಾಣಸಿಕೊಳ್ಳುವ ... ಉದ್ಧರಣೆಗಳಿಂದಿವೆ. ಅವುಗಳ ... ಸಂಕಲನಮಾಡಿಕೊಂಡಿವೆ.

1 ನೇಪ್ರದು ಅವರ 'ಕರ್ಣಾಟಕ ಸಂಸ್ಕೃತಿ'ಯಲ್ಲಿ ಈ ಭಾಗ ... ಆ ಗ್ರಂಥದ ೧೬-೧೭ನೆಯ ಪುಟಗಳನ್ನು ನೋಡಿ.

ಪರೀಕ್ಷಿತ ಗಾಥಾಗಳಲ್ಲಿಯ ಪರೀಕ್ಷಿತ ಮಹಾರಾಜ ಭಾರತೀಯ ಲಾವಣಿ ಸಾಹಿತ್ಯದ ಪ್ರಥಮ ನಾಯಕನೆಂದೂ ಅವರು ತಿಳಿಸುತ್ತಾರೆ.[1]

ಸಂಸ್ಕೃತ ಎಂದು ಶ್ರೀಸಾಮಾನ್ಯನ ಭಾಷೆಯಾಗಿತ್ತೆಂದು ಹೇಳುವುದು ಕಷ್ಟ. ಲಾವಣಿ ಸಾಮಾನ್ಯ ಜನತೆಯ ಸೃಷ್ಟಿ ಎನ್ನುವ ಪಕ್ಷಕ್ಕೆ, ಪ್ರಾಚೀನಕಾಲದಲ್ಲಿ ಪ್ರಚಾರದಲ್ಲಿದ್ದ ದೇಶಭಾಷೆಗಳ ಲಾವಣಿಗಳು ಅನುವಾದ ರೂಪಾಂತರಗಳ ಮೂಲಕ ಮಹಾಭಾರತಾದಿ ಪುರಾಣೇತಿಹಾಸ ಕಾವ್ಯಗಳಲ್ಲಿ ಸೇರ್ಪಡೆಗೊಂಡಿರಬೇಕೆಂದು ಊಹಿಸಲವಕಾಶವಿದೆ. ಪ್ರೇಮಯುದ್ಧಗಳನ್ನು ವಸ್ತುವಾಗುಳ್ಳ ತಮಿಳಿನ ಅಗಂ ಮತ್ತು ಪುರಂ (ಪೊರಳ್) ಗಳು ವೈದಿಕ ಸಂವಾದಗೀತೆಗಳಂತೆಯೇ ಲಾವಣಿಗಳ ಆದಿಯಾಗಿರಬಹುದೆಂಬ ದೇವುಡು[2] ಅವರ ಮಾತು ಮೇಲಣ ಊಹೆಗೆ ಉಪಷ್ಟಂಭಕವಾಗಿ ನಿಲ್ಲುತ್ತದೆ. ಅಂದಮೇಲೆ ಭಾರತದ ಎಲ್ಲ ಪ್ರೌಢ ದೇಶಭಾಷೆಗಳಲ್ಲಿಯೂ ಈ ಪ್ರಕಾರ ಬಹುಹಿಂದೆಯೇ ಮೊಳೆದೋರಿರಬೇಕು. ಕಲಿತುರಾಗಳ ಹೆಸರು ಇತ್ತೀಚಿನವಾದರೂ, ಅಂಥ ಸಂವಾದಗಳು ಪೂರ್ವಕಾಲದಲ್ಲಿ ಪ್ರಚಲಿತವಿದ್ದಿರಬೇಕು. ಪೌರಾಣಿಕ ಕಥೆಗಳು, ಐತಿಹ್ಯಗಳು, ವೀರರ ಸಾಹಸಗಳು, ದಾನವೀರರ ಕೊಡುಗೈತನ, ಮಾಸತಿಯರ ಪ್ರಾಣಾರ್ಪಣೆ, ಪ್ರಣಯ ಸಂಗತಿಗಳು ಆ ಲಾವಣಿಗಳ ಸಾಮಗ್ರಿಯಾಗಿದ್ದಿರಬೇಕು. ಮೂಲಸಂಸ್ಕೃತ ಕಾವ್ಯಗಳಲ್ಲಿಲ್ಲದೆ ಕನ್ನಡದ ಪ್ರಾಚೀನ ಕಾವ್ಯಗಳಲ್ಲಿಯೇ ದೊರೆಯಬಹುದಾದ ಕರ್ಣಭಾನುಮತಿಯರ ಚಿತ್ತದ ಪ್ರಸಂಗದಂಥ ಪ್ರಕರಣಗಳು ಜಾನಪದದಿಂದ ಆಯ್ದುವಾಗಿರಬೇಕು. ಶಾಸನಗಳಲ್ಲಿ ಬರುವ ಕಪ್ಪೆ ಅರಭಟ್ಟನಂಥ ವ್ಯಕ್ತಿಗಳು, ನಾಯಿಗೆ ಸಮಾಧಿ ನಿರ್ಮಿಸಿದ ಪ್ರಕರಣಗಳು ಲಾವಣಿಗಳಿಗೆ ವಸ್ತುವಾಗಲರ್ಹವಾಗಿವೆ. ಹರಿಹರನಿಗೆ ಪೆರಿಯ ಪುರಾಣ ಸಾಮಗ್ರಿ ಒದಗಿಸಿದಂತೆ, ಲಾವಣಿಗಳು ತಂತ್ರಶೈಲಿಗಳಿಗೆ ಸಂಬಂಧಿಸಿದಂತೆ ಸ್ಫೂರ್ತಿ ನೀಡಿರಬಹುದು. ಮೌಖಿಕ ಸಾಹಿತ್ಯವಾದ್ದರಿಂದ ಅನೇಕ ಲಾವಣಿಗಳು ಕಣ್ಮರೆಯಾಗಿರಬಹುದು. ಬಸವ ಕುಮಾರರಾಮಾದಿ ಮಹಾಪುರುಷರನ್ನು ಕುರಿತಾದ ಲಾವಣಿಗಳು ಅವರಳಿದನಂತರ ಎಷ್ಟೋ ವರ್ಷಗಳ ಮೇಲೆ ಹುಟ್ಟಿರಬೇಕು. ಸಂಗೊಳ್ಳಿರಾಯಣ್ಣ, ಕಿತ್ತೂರು ಚೆನ್ನಮ್ಮ, ಪಿರಿಯಾಪಟ್ಟದ ಕಾಳಗ ಮೊದಲಾದುವುಗಳಿಗೆ ಸಂಬಂಧಿಸಿದ ಲಾವಣಿಗಳು ಅವರು ತೀರಿಕೊಂಡ ಅಥವಾ ಅದು ನಡೆದ ಸನಿಹದಲ್ಲಿಯೇ ಮೂಡಿರಬೇಕೆಂದು ತೋರುತ್ತದೆ. ಫ್ಲೀಟ್ ಅವುಗಳಲ್ಲಿ ಕೆಲವನ್ನು ಸಂಗ್ರಹಿಸುವ ವೇಳೆಗೆ ಅವು ತುಂಬ ಜನಪ್ರಿಯವಾಗಿದ್ದಿರಬೇಕು. ಏನೇ ಇರಲಿ, ಕವಿರಾಜಮಾರ್ಗಕಾರ ಹೆಸರಿಸುವ ಚತ್ತಾಣ ಬೆದಂಡೆಗಳಿಗೆ ಮೂಲದಲ್ಲಿ ಲಾವಣಿಯಂಥ ಪ್ರಕಾರಗಳಿದ್ದಿರಬಹುದೆಂದು ಊಹಿಸಬಹುದಾದರೆ, ಅದು ಪ್ರಾಚೀನಕಾಲದ ಕರ್ನಾಟಕದಲ್ಲಿ ರೂಢಿಯಲ್ಲಿತ್ತೆಂದೂ, ೧೫ ಅಥವಾ ೧೬ನೆಯ ಶತಮಾನದ ನಂತರ ಸೃಷ್ಟಿಯಾದ ಲಾವಣಿಗಳು ಮಾತ್ರ ಈಗ ಸಂಲಬ್ಧವಾಗಿವೆಯೆಂದೂ ಹೇಳಬಹುದಾಗಿದೆ. ಅಮ್ಮ, ಅಸಗ ಮೊದಲಾದ ಪದಪ್ರಯೋಗವಿರುವ ಕವನಗಳನ್ನು ಹಳಗನ್ನಡ

[1] *An Outline of Indian Folklore* by Durga Bhagwat, p. 61.

[2] ಕರ್ಣಾಟಕ ಸಂಸ್ಕೃತಿ, ಪು. ೧೭.

ಕಾಲಕ್ಕೊಯ್ಯಬಹುದೆಂದು ಕೆಲವರು[1] ತರ್ಕಿಸುವುದುಂಟು. ಅವುಗಳ ಮೂಲ ಪ್ರಾಚೀನತೆಯ ಗರ್ಭದಲ್ಲಿ ನೆಲಸಿದೆಯೆಂದೂ, ಕಾಲಾನಂತರದಲ್ಲಿ ಅವುಗಳ ಭಾಷೆ ಬದಲಾವಣೆ ಹೊಂದಿದೆಯೆಂದೂ ಹೇಳಲವಕಾಶವಿದ್ದರೂ ಆ ಎರಡು ಪದಗಳನ್ನೇ ನೆಮ್ಮಿಕೊಂಡು ಪ್ರಾಚೀನತೆಯನ್ನು ಸಂಸ್ಥಾಪಿಸುವುದು ಕಷ್ಟವಾಗುತ್ತದೆ. "ದುಂದುಮೆ ಪದಗಳು ಹನ್ನೆರಡನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದುವೆಂಬುದಕ್ಕೆ ಅಲ್ಪಸ್ವಲ್ಪ"[2] ಆಧಾರ ದೊರೆಯುತ್ತವೆನ್ನುವ ಡಾ. ಸುಂಕಾಪುರ ಅವರ ಹೇಳಿಕೆ ವಿಚಾರಣೀಯವಾಗಿದೆ. ಆದರೆ ಆಗ ಪ್ರಚಾರದಲ್ಲಿದ್ದ ದುಂದುಮೆಗಳು ಮಾತ್ರ ಈಗ ಸಿಗುತ್ತಿಲ್ಲ. ಪ್ರೌಢದೇವರಾಯನ ಕಾಲದ ಕರಸ್ಥಲ ನಾಗಿದೇವನ ಕಾಲಜ್ಞಾನದ "ಹಾಡು ದುಂದುಮೆಯ ಪದಗಳಾಗಿರುವುದು ಗಮನಾರ್ಹ ಸಂಗತಿ" ಎಂಬ ಅವರ ಮಾತಿಗೆ ತುಂಬ ಬೆಲೆಯಿದೆ. ಏಕೆಂದರೆ ಈ ಎಲ್ಲ ವಾದಗಳು ಮೇಲಿನ ತೀರ್ಮಾನವನ್ನೇ ಸಮರ್ಥಿಸುತ್ತವೆಂದು ಹೇಳಬಹುದು. ಭಾಷೆಯ ಆಧಾರದ ಮೇಲೆ ಅವುಗಳ ಭೌಗೋಳಿಕ ಹಾಗೂ ಸಾಮಾಜಿಕ ಸ್ಥಾನಮಾನಗಳನ್ನು ಕರಾರುವಾಕ್ಕಾಗಿ ಸ್ಥಾಪಿಸಬಹುದೆನ್ನುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಇತರ ಭಾರತೀಯ ಭಾಷೆಗಳಲ್ಲಿಯೂ ಹದಿನೈದನೆಯ ಶತಮಾನಕ್ಕಿಂತ ಹಿಂದಿನ ಲಾವಣಿಗಳು ದೊರೆತಂತೆ ಕಾಣುವುದಿಲ್ಲ. ೧೯೨೩ರಲ್ಲಿ ಮೈಮೆನ್‌ಸಿಂಹ ಗೀತಿಕೆಗಳನ್ನು ಡಿ. ಸಿ. ಸೇನ್ ಅವರು ಅವು ಹದಿನಾಲ್ಕನೆಯ ಶತಮಾನದವೆಂದು ಹೇಳುತ್ತಾರೆ.[3] ಅವರ ಸಂಗ್ರಹವನ್ನು ಕುರಿತು ವಿಮರ್ಶೆ ಬರೆದ ದೂಸನ್ ಬವಿತೇಲ್ (Dusan Zbavitel) ಅವರು ಆ ಗೀತಿಕೆಗಳನ್ನು ಕುರಿತು ಹೇಳಿರುವ ಸಂಗತಿಗಳಿವು: ಅವುಗಳ ಒಂದು ಭಾಗವನ್ನೊಬ್ಬ ಬರೆದು, ಮತ್ತೊಂದು ಭಾಗವನ್ನು ಬೇರೊಬ್ಬ ಬರೆದಿರಬಹುದು; ಅವುಗಳಲ್ಲಿಷ್ಟು ಭಾಗ ಮೂಲಕವಿಯದು, ಎಷ್ಟು ಭಾಗ ಹಾಡುಗಾರನದು, ಮತ್ತೆಷ್ಟು ಭಾಗ ಶ್ರೋತೃಗಳದು ಎಂದು ನಿಖರವಾಗಿ ಹೇಳುವಂತಿಲ್ಲ; ಅಲ್ಲಿ ಬರುವ ಉಪಮಾ ರೂಪಕಗಳು ಮತ್ತು ನುಡಿಗಟ್ಟುಗಳು ಸಾಮಾನ್ಯರು ಬಳಸುವಂಥವು; ಕೆಲವು ಕಡೆ ಶಿಷ್ಟಪ್ರಭಾವ ಇದ್ದೇ ಇದೆ. ಸೇನ್ ಅವರಿಗೆ ಸಂಗ್ರಹಕಾರ್ಯದಲ್ಲಿ ನೆರವು ನೀಡಿದ ಚಂದ್ರಕುಮಾರ್ ಡೇ ಅವರು ಲಾವಣಿಗಳ ವಿನಾಶಕ್ಕೆ ನಾಲ್ಕು ಕಾರಣಗಳನ್ನು ಕೊಡುತ್ತಾರೆ: ಅವು ಅಚ್ಚಾಗದಿದ್ದುದು; ಜನರಿಗೆ ಅವುಗಳ ಬಗ್ಗೆ ಗೌರವವಿಲ್ಲದಿದ್ದುದು; ಅವುಗಳ ಭಾಷೆ ಅರ್ಥವಾಗದಿದ್ದುದು; ಹಾಡುಗಾರರು ಇತರರಿಗೆ ತಾವು ಕಲಿತದ್ದನ್ನು ಹೇಳಿಕೊಡದಿದ್ದುದು.

ತೌಲನಿಕ ಅಧ್ಯಯನಕ್ಕೆ ಅನುಕೂಲವಾಗಲೆಂದು 'ಮಹೂಯಾ' ಎಂಬೊಂದು ಲಾವಣಿಯನ್ನಿಲ್ಲಿ ಸಂಗ್ರಹಿಸಿದೆ. ಮಹೂಯಾ ಕಾಂಚನಪುರದ ಬ್ರಾಹ್ಮಣನ ಮಗಳು.

---

1 ಹಾಡಿಗೆ ಹನ್ನೆರಡು ಕಬರು : ಕುಂಜಿಬೆಟ್ಟು ಸುಬ್ರಹ್ಮಣ್ಯ ಕೆದ್ಲಾಯ, ಪು. ೫೭.

2 ಜೀವನಜೋಕಾಲಿ, ದುಂದುಮೆಯ ಪದ : ಸಂ: ಡಾ. ಸುಂಕಾಪುರ ಅವರು, ಪು. ೩.

3 '*Bengali Folk Ballads From Mymensingh*' ಎಂಬ ವಿಮರ್ಶನ ಗ್ರಂಥವನ್ನು ಬರೆದಿರುವ ಡಾ. ದೂಸನ್ ಬವಿತೆಲ್ (Dusan Zbavitel) ಎಂಬ ಮಹನೀಯರು ಅಷ್ಟು ಪ್ರಾಚೀನವಲ್ಲವೆಂದು ಅಭಿಪ್ರಾಯಪಡುತ್ತಾರೆ.

ಜಿಪ್ಸಿ ತಂಡದ ಹೊಮ್ರಾ ಎಂಬುವನಿಂದ ಆರು ತಿಂಗಳವಳಾಗಿದ್ದಾಗ ಕಳವುಗೊಳ್ಳುತ್ತಾಳೆ. ಅವಳು ಬೆಳೆಬೆಳೆಯುತ್ತ ನೃತ್ಯ ವಾದ್ಯ ಹಗ್ಗನಡೆ ಮೊದಲಾದ ಕಲೆಗಳಲ್ಲಿ ನಿಷ್ಣಾತಳಾಗುತ್ತಾಳೆ. ದೊರೆ ಮಗ ನಾದಿರ್‌ಚಾಂದ್ ಅವಳ ಪ್ರದರ್ಶನ ನೋಡಿ ಅವಳಲ್ಲಿ ಮೋಹಗೊಳ್ಳುತ್ತಾನೆ. ಹೊಮ್ರಾನಿಗೆ ಅವರ ಪ್ರಣಯಲೀಲೆಯ ಸುಳುಹು ಗೊತ್ತಾಗಿ ಆ ಊರು ಬಿಡುತ್ತಾನೆ. ಉತ್ತರದ ಪರ್ವತಸೀಮೆಯಲ್ಲಿ ಸ್ಥಾನಮಾನಗಳ ಅಥವಾ ಜಾತೀಯತೆಯ ಪ್ರಶ್ನೆ ಏಳುತ್ತಿರಲಿಲ್ಲವಾಗಿ ತಮ್ಮ ತಂಡವನ್ನು ಹಿಂಬಾಲಿಸುವಂತೆ ಮಹೂಯಾ ನಾದಿರ್‌ಚಾಂದ್‌ನನ್ನು ಕೇಳಿಕೊಳ್ಳುತ್ತಾಳೆ. ಅವನನ್ನು ಕೊಲ್ಲುವಂತೆ ಹೊಮ್ರಾ ಮಹೂಯಾಗಳಿಗೆ ತಾಕೀತು ಮಾಡುತ್ತಾನೆ. ಆಗ ಪ್ರಣಯಿಗಳಿಬ್ಬರೂ ಗುಟ್ಟಾಗಿ ಓಡಿಹೋಗುತ್ತಾರೆ. ದಾರಿಯಲ್ಲಿ ನದಿ ಅಡ್ಡವಾಗುತ್ತದೆ. ತಮ್ಮನ್ನು ನದಿ ದಾಟಿಸುವಂತೆ ವರ್ತಕನೊಬ್ಬನನ್ನು ಕೇಳಿಕೊಳ್ಳುತ್ತಾರೆ. ವರ್ತಕ ಮಹೂಯಾಳನ್ನು ಪಡೆಯುವ ಸಲುವಾಗಿ ನಾದಿರ್‌ಚಾಂದನನ್ನು ನದಿಗೆ ಬಿಸಾಡುತ್ತಾನೆ. ಮಹೂಯಾ ವರ್ತಕನಿಗೂ ಅಂಬಿಗನಿಗೂ ವಿಷಕೊಟ್ಟು, ತಪ್ಪಿಸಿಕೊಂಡು, ತನ್ನ ಕಾಂತನನ್ನು ಹುಡುಕುತ್ತಾಳೆ. ಮೂರ್ಛೆಗೊಂಡಿದ್ದ ನಾದಿರ್‌ಚಾಂದನನ್ನು ಹೇಗೋ ಪ್ರಯಾಸಪಟ್ಟು ಸಾಧುವೊಬ್ಬನ ಬಳಿಗೆ ತರುತ್ತಾಳೆ. ನಾದಿರ್‌ಚಾಂದನನ್ನು ಕೊಂದು ಅವಳನ್ನಪಹರಿಸಬೇಕೆಂದು ಸಾಧು ಯೋಚಿಸುತ್ತಾನೆ. ಆ ಯೋಚನೆಯ ಸುಳುಹು ಗೊತ್ತಾಗಿ, ಆ ಹುಡುಗಿ ನಾದಿರ್‌ಚಾಂದನನ್ನು ಹೊತ್ತುಕೊಂಡೇ ಓಡುತ್ತಾಳೆ. ಅವನಿಗೆ ಪ್ರಜ್ಞೆ ಬರುತ್ತದೆ. ಇಬ್ಬರೂ ಕೆಲದಿನ ಸುಖವಾಗಿರುತ್ತಾರೆ. ಒಂದು ದಿನ ಕೊಳಲ ಗಾನ ಕೇಳಿಸುತ್ತದೆ. ಅದು ತನ್ನ ಸಖಿ ಪಾಲಂಕಳದೆಂದು ಮಹೂಯಾಳಿಗೆ ಗೊತ್ತಾಗುತ್ತದೆ. ಕೊಳಲ ಗಾನ ತಮಗೆ ಸನ್ನಿಹಿತವಾಗಲಿದ್ದ ಅಪಾಯವನ್ನು ಸೂಚಿಸುತ್ತದೆ. ಬೆಂಗಡೆಯಲ್ಲಿಯೇ ಹೊಮ್ರಾ ಬರುತ್ತಾನೆ. ತನ್ನನ್ನು ಹಿಂಬಾಲಿಸುವಂತೆ ಮಹೂಯಾಳಿಗೆ ಆಜ್ಞೆಮಾಡುತ್ತಾನೆ. ನಾದಿರ್‌ಚಾಂದ್‌ನನ್ನು ಕೊಲ್ಲುವಂತೆ ವಿಷದ ಕತ್ತಿಯನ್ನವಳಿಗೆ ಕೊಡುತ್ತಾನೆ. ಮಹೂಯಾ ತನ್ನನ್ನು ತಾನೇ ಕೊಂದುಕೊಳ್ಳುತ್ತಾಳೆ. ನಾದಿರ್‌ಚಾಂದನೂ ಅವಳ ದಾರಿ ಹಿಡಿಯುತ್ತಾನೆ. ಅವರಿಬ್ಬರ ಶವಗಳನ್ನು ಒಂದೆಡೆ ಸಮಾಧಿ ಮಾಡಲಾಗುತ್ತದೆ. ಹೊಮ್ರಾ ಹೊರಟುಹೋಗುತ್ತಾನೆ. ಪಾಲಂಕ ಮಾತ್ರ ತನ್ನ ಗೆಳತಿಯ ದುರಂತಕ್ಕಾಗಿ ಸಮಾಧಿಯ ಮೇಲೆ ಬಿದ್ದು ಒದ್ದಾಡುತ್ತಾಳೆ.

ಈ ಹಿಂದೆ ಹೇಳಿದಂತೆ ಪ್ರಣಯಭಂಗ ಮತ್ತು ದುರಂತ ಜಗತ್ತಿನ ಅನೇಕ ಲಾವಣಿಗಳ ವಸ್ತುವಾಗಿದೆ. ಜಾತೀಯ ವ್ಯವಸ್ಥೆಯ ಸಡಿಲಿಕೆ, ವಿಷಮ ಪ್ರಣಯ, ಹಿಂದೂ ಮುಸ್ಲಿಮ್ ಸಂಪ್ರದಾಯಗಳ ಕಲಬೆರಕೆ, ಹಾಡುಗಾರ, ವ್ಯಾಖ್ಯಾನಕಾರ ಮತ್ತು ಸಂಪಾದಕರ ಒಮ್ಮೆಯ್ಯಾದ ಏಕಪಾತ್ರಾಭಿನಯ, ಸರಳ ನಿಸರ್ಗವರ್ಣನೆ, ಗಾದೆ ನೀತಿ ಸೂತ್ರ ಮತ್ತು ಸಮಾಪ್ತಿವಚನ ಅಥವಾ ಮುದ್ರಾಂಕಿತಗಳ ಸೇರ್ಪಡೆ ಮತ್ತು ಉಪಮಾ ರೂಪಕಾದಿ ಅಲಂಕಾರಗಳ ಪ್ರವೇಶಿಕೆ—ಇವು ಈ ಬಂಗಾಳಿ ಲಾವಣಿಗಳ ಸಾಮಾನ್ಯ ಲಕ್ಷಣಗಳು. ಇವು ಪಾಶ್ಚಾತ್ಯ ಲಾವಣಿಗಳಂತೆ ಹ್ರಸ್ವವಾದುವಲ್ಲ: ಒಂದೆರಡು ಗಂಟೆ

ಹಾಡಬಹುದಾದಂಥವು. ಪಲ್ಲವಿ ಪುನರಾವರ್ತನೆಗಳಿಂದ ಇವು ಪಾರಾಗಿಲ್ಲ. ಸಾಮಾನ್ಯ ಜನತೆಗೆಂದು, ಸಾಮಾನ್ಯರು ಕಟ್ಟಿದ ಈ ಲಾವಣಿಗಳಲ್ಲಿ ಇವು ಅನಿವಾರ್ಯವಾದುವು. ಲಾವಣಿಗಳ ಪ್ರಭಾವ ಅಚ್ಚೊತ್ತಿದಂತಾಗಬೇಕಾದರೆ ಈ ಪುನರಾವರ್ತನೆ ಅವಶ್ಯವಾಗಿ ಕಂಡಿರಬೇಕು. ಜತೆಗೆ ಇವು ಬಾಯಿಂದ ಬಾಯಿಗೆ ದಾಟುವಾಗ ಪ್ರಕ್ಷೇಪಗಳೂ ಪುನರಾವರ್ತನೆಗಳೂ ಒಳಗೆ ನುಸುಳಿಕೊಳ್ಳುವುದು ಸಹಜ.

ಪಾಶ್ಚಾತ್ಯ ಬ್ಯಾಲಡ್ಡುಗಳ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಈ ಮೇಲಿನದು ಲಾವಣಿಯಾಗಲಾರದು; ಖಂಡಕಾವ್ಯವಾದೀತು. ಕಾಳೇಗೌಡ ನಾಗವಾರ ಅವರು ಸಂಗ್ರಹಿಸಿರುವ ಬಯಲುಸೀಮೆಯ ಲಾವಣಿಗಳು ಹೆಚ್ಚುಕಡಿಮೆ ಪಾಶ್ಚಾತ್ಯ ಮಾದರಿಯನ್ನು ಹೋಲುತ್ತವೆಂದು ಹೇಳಬಹುದಾಗಿದೆ. ಹೆಣ್ಣಿನ ಶೀಲದ ಬಗ್ಗೆ ಶಂಕೆಯುಂಟಾಗಿ, ದಂಡಿನಿಂದ ಬಂದ ಬಿರುಸಿನಲ್ಲಿಯೇ ಅವಳ ಕೈಕಾಲು ಕಡಿದ ಕೆಂಡದರಾಯ; ಅಣ್ಣಂದಿರ ಅಸೂಯೆಯಿಂದಾಗಿ ಓಡುಬಿಟ್ಟು, ಅವರೊಡ್ಡಿದ ಕುಟಿಲಗಳಿಂದ ಪಾರಾಗಿ ದೈವ ಕೃಪೆಯ ರಕ್ಷೆಯಲ್ಲಿ ಬೆಳೆದ ಬಿಲ್ಲಾಳರಾಯ; ಸೋದರಮಾವಂದಿರು ಮತ್ತು ಅತ್ತೆಯರು ಅಸೂಯೆಯಿಂದ ಹೆತ್ತತಾಯಿ ಕಾಣದಂತೆ ಬಾವಿಗೆ ಬಿಸಾಡಿದ ಕೂಸು ಚಂದ್ರಸೂರನಾಗಿ ಬೆಳೆದು, ಸೋದರಮಾವಂದಿರನ್ನೆಲ್ಲ ಕೊಂಡು, ತಂದೆಯನ್ನು ಬದುಕಿಸಿಕೊಂಡು, ಕೊನೆಗೆ ಸೋದರಮಾವಂದಿರನ್ನು ಬದುಕಿಸಿಕೊಂಡ ಅದ್ಭುತ ಕಥೆಯನ್ನೊಳಗೊಂಡ ತಬ್ಬಲಿರಾಯ; ಸೋದರಮಾವಂದಿರ ಪಟ್ಟಣಕ್ಕೆ ಹೊರಟು, ದಾರಿತಪ್ಪಿ ರಾಕ್ಷಸಿಯ ಪಟ್ಟಣ ಸೇರಿ, ತನ್ನ ಮಗಳು ಅವನಲ್ಲಿ ಮೋಹಗೊಂಡದ್ದನ್ನು ಕಂಡ ರಾಕ್ಷಸಿಯಿಂದ ಹತನಾಗಿ ಮತ್ತೆ ಅವಳ ಮಗಳಿಂದ ಬದುಕಿದ ಕರಿರಾಯ ಬಂಟ; ದನಗಾಹಿ ಗೊಲ್ಲರ ಹುಡುಗ ತನ್ನ ಮೋಹ ಜಾಲಕ್ಕೆ ಬೀಳಲಿಲ್ಲವೆಂದು, ಊರಗೌಡನ ಮಗಳು ಅವನ ಮೇಲೆ ಚಾಡಿ ಹೇಳಿ ತಂದೆಯಿಂದ ಅವನನ್ನು ಕೊಲ್ಲಿಸಿದಾಗ, ಆ ಹುಡುಗನ ಕಾಳುನಾಯಿ ಜೂಲುನಾಯಿಗಳು ದನಗಳೊಡನೆ ಕೂಡಿಕೊಂಡು ಗೌಡನ ಮಗಳ ಜೀವವನ್ನು ತೆಗೆದು ತಮ್ಮ ಒಡೆಯನನ್ನು ಬದುಕಿಸಿಕೊಂಡ ಕಥೆಯೇ ವಸ್ತುವಾಗುಳ್ಳ ಬಯಲುಸೀಮೆ ಗೌಡನ ಮಗಳು; ಮದುವೆಯಾದ ತರುಣದಲ್ಲಿಯೇ ಗಂಡ ರಣರಂಗಕ್ಕೆ ಹೋಗಿ ಮಡಿಯಲು ಬಾಲವಿಧವೆಯಾಗಿಯೇ ರೋದಿಸುತ್ತ ಅಗ್ನಿಚಿತೆಯನ್ನೇರುವ ನಡ್ಡಗೆರೆ ನಾಗಮ್ಮ; ಹುಟ್ಟು ಬಂಜೆ ತುಳಿದ ನೆಲ ಬಂಜೆಯಾಗುತ್ತದೆ, ಕೆರೆ ಬತ್ತುತ್ತದೆಂದು ಸಾರಿ ಬೀದಿಯ ಜನರ ತಿರಸ್ಕಾರಕ್ಕೆ ಗುರಿಯಾಗಿ, ತಾನಿಳಿದ ಕೊಳದ ನೀರೂ ಹಿಂದು ಹಿಂದಕ್ಕೆ ಸರಿಯಲಾಗಿ, ಕಾಲನೇ ಕನಿಕರಯಾಗಿ, ತಾನಿಳಿದ ಕೊಳದ ನೀರೂ ಹಿಂದು ಹಿಂದಕ್ಕೆ ಸರಿಯಲಾಗಿ. ಕಾಲನೇ ಕನಿಕರಗೊಳ್ಳುವಂತೆ ರೋದಿಸಿದಾಗ ಶಿವಪಾರ್ವತಿಯರು ಪ್ರತ್ಯಕ್ಷರಾಗಿ, ಅವರ ವರದಿಂದ ಮಗತೆ ಯಾಗುವ ಪುಣ್ಯಭಾಗಿನಿ ಬಂಜೆ ಹೊನ್ನಮ್ಮ; ಗಂಡ ರಂಗಯ್ಯ ದಂಡಿಗೆ ಹೋಗಲಾಗಿ, ಅತ್ತೆ ನಾದಿನಿಯರ ಕಿರುಕುಳ ತಾಳಲಾರದೆ, ಮೈದುನನಿಗೆ ಬಸಿರಾದಳೆಂಬ ಅಪಮಾನವನ್ನು ತಡೆಯಲಾರದೆ ಕೊರಗುತ್ತಿದ್ದು, ಶಿವಪಾರ್ವತಿಯರ ಇಚ್ಛೆಯಂತೆ ಅರಣ್ಯದ ನಡುವಿನ ಅರಮನೆಯಲ್ಲಿರಲಾಗಿ, ಆ ಕಡೆ ಕೆಟ್ಟ ಕನಸು ಬಿದ್ದು ಊರಿಗೆ ಬಂದು ಹೆಂಡತಿಯನ್ನು ಕಾಣದೆ, ತಾಯಿಯಿಂದ ಸರಿಯಾದ ಉತ್ತರವನ್ನು ಪಡೆಯದೆ ಬೇಗಾದ ದಿನದಲ್ಲಿ

ಊರೂರು ತಿರುಗುವಾಗ ತಾನು ಹಿಂದೆ ಕೊಟ್ಟಿದ್ದ ಉಂಗುರದ ಕುರುಹಿನಿಂದ ಹೆಂಡತಿಯೆಂದು ಗುರುತುಹಿಡಿಯಲಾಗಿ ಅವನನ್ನು ಮತ್ತೆ ಸ್ವೀಕರಿಸಿದ ಜಾಗಾಲೆ; ದೊರೆ ಮಗನ ಪ್ರಲೋಭನೆಗಳಿಗೊಳಗಾಗವೆ, ತನ್ನನ್ನು ನೆನೆದರೆ ಸಾಕೆಂದು ಅಂಗಲಾಚಿ ಬೇಡಿಕೊಂಡರೂ ಜಗ್ಗದೆ ಒರಟು ಬಟ್ಟೆಯ ಹೊಲ ಉಳುವ ಒಕ್ಕಲನುಗನೇ ತನ್ನ ಸರ್ವಸ್ವವೆಂದು ನಂಬಿದ ಒಕ್ಕಲುಗಿತ್ತಿಯ ಶ್ರದ್ಧೆ ದೃಢತೆಗಳೇ ವಿಷಯವಾಗುಳ್ಳ ಒಬ್ಬರಿಟ್ಟಡುಗೆ; ದಂಡಿನಲ್ಲಿದ್ದವನ ಹೆಂಡತಿ ಕೆರೆ ನೀರಿಗೆ ಹೋದಾಗ ಸಲುಗೆಯಿಂದ ಮಾತಾಡಿಸಿ, ಅವಳು ಆ ವಿಷಯ ತಿಳಿಸಿ ಓಲೆ ಬರೆದಾಗ ಹಿಂತಿರುಗಿದ ಗಂಡ ವಿಚಾರಿಸಲಾಗಿ ತಂಗಿಯಲ್ಲಿ ಸಲುಗೆ ಬೆಳೆಸಿದರೆ 'ತಪ್ಪೇನು ಎಂದು ಉತ್ತರ ನೀಡಿದ ಮುತ್ತಿನ ಶೆಟ್ಟಿ; ಜಿಪುಣತನಕ್ಕೆ ಮತ್ತೊಂದು ಹೆಸರಾದ ಕೊಣವೇಗೌಡ; ಕೊರವಂಜಿಯ ವೇಷದಲ್ಲಿ ರುಕ್ಮಿಣಿಯ ಕೈ ನೋಡಿ ಭವಿಷ್ಯ ನುಡಿದು, ಕೊನೆಗೆ ನಿಜರೂಪಿನಲ್ಲಿ ಪ್ರತ್ಯಕ್ಷವಾಗಿ ಅವಳನ್ನು ಮದುವೆಯಾದ ಕೃಷ್ಣಕೊರವಂಜಿ; ತನ್ನ ಹನ್ನೆರಡು ಮಕ್ಕಳು ಮತ್ತು ಹೆಂಡತಿ ದೇವಮ್ಮನನ್ನು ಬಿಟ್ಟು ಮತ್ತೆ ಮತ್ತೆ ಸೂಳೆಯ ಮನೆಯಲ್ಲಿ ತಂಗಿದಾಗ, ಮಳೆಯಿಲ್ಲದೆ ಬಡತನವಡಸಲು, ಸ್ವಂತ ಮನೆಗೆ ಬರುವಾಗ ಮಳೆಯನ್ನು ತಂದ ಮಳೆರಾಯ; ಉತ್ತರ ರಾಮಾಯಣದ ಸುಪ್ರಸಿದ್ಧವಾದ ಲವಕುಶರ ಕಥೆ—ಹೀಗೆ ಒಟ್ಟು ಹದಿನಾಲ್ಕು-ಹದಿನೈದು ಲಾವಣಿಗಳು ಈ ಸಂಗ್ರಹದಲ್ಲಿವೆ.

ಪ್ರೇಮ, ತ್ಯಾಗ, ಮಾತ್ಸರ್ಯ, ಸಾಹಸ ಪ್ರಿಯತೆ, ಸೇಡು, ಬಂಜೆತನ, ಅತ್ತೆನಾದಿನಿಯರ ಪಾತಿವ್ರತ್ಯ, ಜಿಪುಣತನ, ಸೂಳೆಗಾರಿಕೆ ಇವೇ ಮೊದಲಾದ ಸಾಮಾನ್ಯ ಜನ ಜೀವನದಲ್ಲಿ ದಿನ ಬೆಳಗಾದರೆ ಕಾಣುವಂಥ ಬಹಿರಂಗದ ಹಾಗೂ ಅಂತರಂಗದ ವ್ಯಾಪಾರಗಳು, ಅವರ ಭಾವನೆಗಳು ಕಲ್ಪನೆಗಳು ನಂಬಿಕೆಗಳು ಇಲ್ಲಿ ಪ್ರತಿಫಲನಗೊಂಡಿವೆ. ನೀತಿ ಬೋಧೆ ಎಲ್ಲ ಕಡೆಯೂ ಹಾಸುಹೊಕ್ಕಾಗಿ ಹರಿದಿದೆ. ಸತ್ಯಕಾಮರಿಗೆ ಮತ್ತು ಧರ್ಮನಿಷ್ಠರಿಗೆ ಮೊದಲು ಕಷ್ಟಕ್ಲೇಶಗಳು ಪ್ರಾಪ್ತವಾದರೂ ತುದಿಗೆ ಸುಖಸಂಪತ್ತುಗಳೊದಗುತ್ತವೆ, ಭಗವತ್ಕೃಪೆ ತಾನಾಗಿಯೇ ಹುಡುಕಿ ಬರುತ್ತದೆಂಬ ವಿಶ್ವಾಸ ಉದ್ದಕ್ಕೂ ಎದ್ದು ಕಾಣುತ್ತದೆ. ಪರಸ್ತ್ರೀ ಶ್ರೀಮಂತ ಪುತ್ರಿಯಾದರೂ ತಾನಾಗಿಯೇ ಮೇಲೆ ಬಿದ್ದರೂ ಅವಳ ಶೀಲಭಂಗಮಾಡ ಬಾರದೆನ್ನುವ ದನಗಾಹಿಯೊಬ್ಬನ ಶೀಲ ವೈಭವ, ತನ್ನ ಗಂಡ ಕಡು ಬಡವನಾದರೂ ದೊರೆಮಗನ ಪ್ರಲೋಭನಕ್ಕೊಳಗಾಗದ ಒಕ್ಕಲಗಿತ್ತಿಯ ಪ್ರೇಮನಿಷ್ಠೆ ಈ ಕವನಗಳಲ್ಲಿ ಮೂರ್ತತ್ವ ಪಡೆದಿವೆ. ಐತಿಹಾಸಿಕ ಪೌರಾಣಿಕ ಮತ್ತು ಸಾಮಾಜಿಕ ಸಂಗತಿಗಳು, ಜತೆಗೆ ಜೀವನದ ವೃತ್ತಾಂತಗಳು ಈ ಕಾವ್ಯಗಳ ವಸ್ತು. ಒಂದೆರಡು ಕಡೆ ತ್ರಿಪದಿ, ಉಳಿದೆಡೆ ರಗಳೆ ವಿಜೃಂಭಿಸುತ್ತಿರುವ ಈ ಕಾವ್ಯಗಳಲ್ಲಿ ಅನಿಯತ ಛಂದಸ್ಸಿನ ಬಳಕೆಯೂ ಉಂಟು. ಪಲ್ಲವಿ ಪುನರಾವರ್ತನೆಗಳಿಂದಾಗಿ ಭಾಷೆ ಜಾಳು ಜಾಳಾಗಿ ತೋರುವ ಸಂಭವ ವುಂಟು. ಆದರೆ ಹಾಡುವಾಗ ಈ ಕುಂದು ನಂದಿಹೋಗುತ್ತದೆ. ಪ್ರೇಮ ಕಥೆಗಳಲ್ಲಿ ಬರುವ ನಾಯಕರು ದಂಡಿನವರಾಗಿರುತ್ತಾರೆ. ದೇವತೆಗಳಾಗಲಿ ಪೌರಾಣಿಕ ವ್ಯಕ್ತಿಗಳಾಗಲಿ ಸಾಮಾನ್ಯ ಜನರಂತೆ ನಗುತ್ತಾರೆ ಅಳುತ್ತಾರೆ, ಅವರಂತೆ ಸನ್ಮಾರ್ಗ ದುರ್ಮಾರ್ಗಗಳನ್ನನು ಸರಿಸುತ್ತಾರೆನ್ನುವ ವಿಚಾರವೂ ಈ ರಚನೆಗಳಿಂದ ವೇದ್ಯವಾಗುತ್ತದೆ. ಕಿನ್ನರ ಕಥೆಗಳಂತೆ

ದುಃಖಾಂತವಾಗಬೇಕಾಗಿದ್ದ ಕೃತಿಗಳು ಸುಖಾಂತವಾಗುತ್ತವೆ. ಭೂಲೋಕದಲ್ಲಿ ಕಾಣುವ ಸುಖವನ್ನು ಕೃತಿಲೋಕದಲ್ಲಿ ಕಾಣುವ ಹಂಬಲ, ಬಾಳು ಸುಖದುಃಖಗಳ ಮಿಶ್ರಣವಾದರೂ ಸುಖದಲ್ಲಿ ಪರ್ಯವಸಾನವಾಗಬೇಕೆಂಬ ಬಯಕೆ, ಜೀವನ ಶ್ರದ್ಧೆ ಮತ್ತು ಆಶಾವಾದಗಳು ಇಲ್ಲಿ ಕಾಣುವಂಥ ವಿಶೇಷ ಸಂಗತಿಗಳು. ಸರಳವೂ ಅಕೃತಕವೂ ಜೀವಂತವೂ ಆದ ಆಡುಭಾಷೆ ಈ ಕಾವ್ಯಶೈಲಿಯ ರಹಸ್ಯ.

"ಡೊಳ್ಳಿನ ಹಾಡುಗಳಲ್ಲಿ ಹೆಚ್ಚಾಗಿ ಪೌರಾಣಿಕ ವಸ್ತುಗಳೇ ಇರುತ್ತವೆ. ಪುರಾಣ ಕಥೆಗಳು, ನೀತಿಯ ನುಡಿಗಳು, ಧಾರ್ಮಿಕಪುರುಷರ ವೃತ್ತಾಂತಗಳು ಈ ಹಾಡುಗಾರರಿಗೆ ಮೆಚ್ಚು....ಡೊಳ್ಳಿನ ಹಾಡುಗಳನ್ನು ಭಕ್ತಿಗೀತಗಳೆಂದು ಕರೆದರೂ ತಪ್ಪಾಗಲಿಕ್ಕಿಲ್ಲ."[1] ರಗಳೆಯ ಧಾಟಿಯಲ್ಲಿ ರಚನೆಗೊಂಡಿರುವ ಮಾಳಿಂಗರಾಯನ ಕತೆ ಮತ್ತು ಶಿವಪಾರ್ವತಿಯರ ಸೋಲು ಹಾಗೂ ಚೌಪದಿಯ ಛಂದಸ್ಸಿನಲ್ಲಿ ರೂಪವೆತ್ತಿರುವ ಜಮದಗ್ನಿಯ ಶಾಪ, ತಿರುನೀಲಕಂಠ ಮತ್ತು ಚಂಗಳವ್ವ ಲಾವಣಿಗಳ ಗುಂಪಿಗೆ ಸೇರುತ್ತವೆ. ಹಿಂದೂ ಮುಸ್ಲಿಂ ಸಂಸ್ಕೃತಿಗಳ ಮಿಶ್ರತಳಿಯಂತಿರುವ ಕರ್ಬಲಾ ಹಾಡುಗಳೆಲ್ಲ—ಮುಖ್ಯವಾಗಿ ಸಿರಿಯಾಳಸೆಟ್ಟಿಯ ಕತೆಯನ್ನು ಹೋಲುವ ಬೀಬಿ ಫಾತಿಮಾಳ ಭಕ್ತಿ ಪರೀಕ್ಷೆ, ಆಕಳ ಹಾಡಿನಿಂದ ಪ್ರೇರಣೆಗೊಂಡಿರುವ ಚಿಗರಿಯ ಕಥೆ—ಸಾಮಾನ್ಯವಾಗಿ ಲಾವಣಿಗಳೇ ಆಗಿವೆ. ಗೊಂದಲಿಗರ ಹಾಡುಗಳ ಸಾಮಾನ್ಯ ಲಕ್ಷಣಗಳನ್ನು ಪಟ್ಟಿಮಾಡುವಾಗ ನಿಂಗಣ್ಣ ಸಣ್ಣಕ್ಕಿಯವರು "ಗೊಂದಲಿಗರ ಹಾಡುಗಳು ಕಥಾನಾತ್ಮಕವಾದುವು. ಇವುಗಳನ್ನು ಪೌರಾಣಿಕ, ಐತಿಹಾಸಿಕ, ಮತ್ತು ಸಾಮಾಜಿಕವೆಂದು ವರ್ಗೀಕರಿಸಬಹುದು....ಗೊಂದಲಿಗರ ಹಾಡುಗಳು ಲಾವಣಿಯಂತೆ ವಸ್ತುನಿಷ್ಠವಾದವುಗಳಾಗಿವೆ"[2] ಎಂದು ಹೇಳಿದರೂ ಭಿಕ್ಷಾ ಪ್ರಸಂಗದ ಹಾಗೂ ಗೊಂದಲ ಹಾಕುವ ಹಾಡುಗಳು ಭಾವಗೀತೆಗಳ ಅಥವಾ ನೀಳ್ಗವನಗಳ ಗುಂಪಿಗೆ ಸೇರಿದವೆಂದೇ ಹೇಳಬೇಕಾಗುತ್ತದೆ.

ಮಾರ್ಗಕ್ಕೂ ಸೇರದೆ ದೇಸಿಗೂ ಹೊಂದದೆ, ಆ ಎರಡರ ಕಸಿ ಎಂಬಂತೆ ತೋರುವ ಚೌಪದನಗಳನ್ನು ಲಾವಣಿ ಎಂದು ಕರೆಯುವುದು ಕಷ್ಟವಾಗುತ್ತದೆ. ಅವುಗಳ ನಾಜೋಕು ನಯಗಳಿಗೂ ಜಾನಪದದ ಘಾಟಿಗೂ ಹೊಂದಾವಣಿಕೆ ಇದ್ದಂತೆ ತೋರುವುದಿಲ್ಲ. ಅಲ್ಲಿಯ ಆದಿಪ್ರಾಸ ಅಂತ್ಯಪ್ರಾಸಗಳನ್ನು ಒಂದೆರಡು ಕಡೆ ವಿನಾ ಪಲ್ಲವಿಪುನರಾವರ್ತನೆಗಳ ಗೈರು ಹಾಜರಿಯನ್ನೂ ಗಮನಿಸಿದಾಗ ಶಿಷ್ಟಪದ ಕೃತಿಗಳಂತೆ ಭಾಸವಾಗುತ್ತವೆ. ಗಣೇಶ ಹಾಗೂ ಮಾನೋಮಿ ಚೌಪದನಗಳಲ್ಲಿ ಕಥೆಯ ಅಂಶವೇ ಇಲ್ಲದಿರುವುದರಿಂದ ಅವು ಕಥನಕಾವ್ಯದ ಗಡಿಯಾಚೆಯೇ ಉಳಿಯುತ್ತವೆ. ಅವು ಬಹು ಜನಪ್ರಿಯವಾಗಿರುವುದರಿಂದ ಜಾನಪದ ಸಾಹಿತ್ಯವೆನ್ನಲಾಗದು. ಜನಪ್ರಿಯತೆಯೇ ಅದರ ರಾಜಲಕ್ಷಣವಲ್ಲ. "ಇಂತಹ ಹಾಸ್ಯದ ಬಗುವಿನೊಡನೆ ಕಾವ್ಯದ ಮಾಧುರ್ಯ ಕೂಡಿಕೊಂಡಿರುವುದರಿಂದ

1 ಜೀವನಜೋಕಾಲಿ : ಡೊಳ್ಳಿನ ಹಾಡು, ಸಂ: ಡಾ. ಎಂ. ಎಸ್. ಸುಂಕಾಪುರ ಅವರು, ಪು. ix.

2 ಜಾನಪದ ಸಾಹಿತ್ಯ ದರ್ಶನ : ಸಂ: ಡಾ. ಆರ್. ಸಿ. ಹಿರೇಮಠ ಅವರು, ಪು. ೨೭೩-೨೭೪.

ಮಾರ್ಗಕಾವ್ಯದತ್ತ ಈ ಚೌಪದನ ಸಾಹಿತ್ಯವನ್ನು ಸಾಗಿಸಲು ಹಿಂದಿನವರು ಯತ್ನಿಸಿದ್ದಾರೆ"[1] ಎನ್ನುವ ಮಾತು ತುಂಬ ಬೆಲೆಯುಳ್ಳದ್ದು. ಮೇಲಿನ ವಿಚಾರ ಧೋರಣೆ ಹೋಳೀ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಕಿತ್ತೂರದುಂದುಮೆ ಮತ್ತು ವೀರರಾಣಿ ಚೆನ್ನವ್ವ ಕೃತಿಗಳಲ್ಲಿ ಲಾವಣಿಯ ವಾಸನೆ ಮೂಗಿಗಡರುತ್ತಿದ್ದರೂ ಅವು ಶಿಷ್ಟಕವಿಕೃತವೆಂಬಂತೆ ತೋರುತ್ತವೆ. ಹೋಳೀ ಹಾಡುಗಳಂತು ಶಿಷ್ಟಕೃತಿಗಳನ್ನೋದಿದಂತಾಗುತ್ತದೆ. ಆದುದರಿಂದ ಇವುಗಳನ್ನು ಮುಂದೆ ನೀಳ್ಗವನಗಳಡಿಯಲ್ಲಿ ವಿವೇಚಿಸಲಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಾಗಿರುವ, ಗುಮಟೆಯ ವಾದನದೊಂದಿಗೆ ಎರಡುಮೂರು ತಾಸಿನತನಕ ಹಾಡುವ ಕಥನ ಕಾವ್ಯಗಳು ಹಲವುಂಟು. "ಕವಿತೆಯ ಗುಣ ಇವುಗಳಲ್ಲಿ ಹೆಚ್ಚಾಗಿರುವುದಿಲ್ಲ. ಆದರೆ ಕಥನಕಲೆ ಸೊಗಸಾಗಿ ಅರಳಿರುತ್ತದೆ."[2] ಇವುಗಳಲ್ಲಿ ಕೆಲವಂತು ಹಾಡಿನ ರೂಪವನ್ನು ತಾಳಿದ ಜಾನಪದ ಕಥೆಗಳು. ತಿಮ್ಮಕ್ಕನ ಪದಗಳಲ್ಲಿ ಹಲವು, ಪರಮೇಶ್ವರಿ ಪದಗಳಲ್ಲಿ ಚಂಪಾಲುಶೆಟ್ಟಿ–ಗುಣಸಾಗರಿ ಬಿಟ್ಟು ಉಳಿದುವೆಲ್ಲ ಲಾವಣಿ ಎಂಬ ಹೆಸರಿಗೆ ತಕ್ಕುವಾಗಿವೆ. ಉತ್ತರದೇವಿ ಮತ್ತು ಜಾಯೂ–ಮಾಯೂ ಗಾಣಿಗ ಪದಗಳಂತು ಬಹು ಜನಪ್ರಿಯವಾದುವು. ಗುಮ್ಮನ ಪದಗಳು ಸಹ ಇದೇ ಮಾದರಿಯವು. "ಗದ್ದೆಯಲ್ಲಿ ಸಸಿಗಳನ್ನು ನೆಡುವ ಸಮಯದಲ್ಲಿಯೂ ಕಳೆ ಕೀಳುವಾಗಲೂ ಹೆಂಗಸರು ಅನೇಕ ಹಾಡುಗಳನ್ನು ಹೇಳಿ ಬೇಸರವನ್ನು ಕಳೆದುಕೊಳ್ಳುತ್ತಾರೆ. ಅವುಗಳಲ್ಲಿ ದೀರ್ಘವಾದ ಕಥನಗಳೇ ಹೆಚ್ಚಾಗಿರುತ್ತವೆ."[3] ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಗ್ರಹಗೊಂಡ "ಹಾಡಿಗೆ ಹನ್ನೆರಡು ಕಬರು"[4] ಎಂಬ ಗ್ರಂಥವಲ್ಲಿರುವ "ಹಾಡುಗಳೆಲ್ಲಾ ಕಥನಕವನದ ರೂಪದವುಗಳು" ಎಂದೇ ಸಂಪಾದಕರು ಸೂಚಿಸಿದ್ದಾರೆ. ಆದರೆ 'ಹಲಸಿನ ಹಕ್ಕಿಯಂಥ ಹಾಡುಗಳಲ್ಲಿ ಕಥೆಯೇ ಇಲ್ಲವಾದ್ದರಿಂದ ಅವನ್ನು ಈ ಗುಂಪಿಗೆ ಸೇರಿಸುವುದು ಕಷ್ಟವಾಗುತ್ತದೆ.

ದಕ್ಷಿಣ ಕರ್ಣಾಟಕದ ಲಾವಣಿ ಸಂಪ್ರದಾಯ ಉತ್ತರ ಕರ್ಣಾಟಕದ ಸಂಪ್ರದಾಯದಷ್ಟೇ ವೈವಿಧ್ಯಮಯವಾದದ್ದು, ಬಹು ವರ್ಣಾಕೀರ್ಣವಾದದ್ದು. ಹೆಳವರು (ಬಹುಶಃ ಹೇಳುವವರಿರಬಹುದೇನೊ?) ಹಾಡುವ ಚಾಮುಂಡಿ ಪುರಾಣ, ಯಮದಾಳು ದೇವಮ್ಮ, ಮಾವಿನಕೆರೆಯಮ್ಮ, ಹುಲಿಕೆರೆಯಮ್ಮ, ಮಲ್ಲರಾಜ, ಹೆಳವೇಗೌಡ; ಚೌಡಿಕೆ ಸಂಪ್ರದಾಯದ ಅಣ್ಣ-ತಂಗಿ, ಬಸ್ಮಾರಿ ತತ್ವ, ಆನಂದ್ರತಿ, ವಿಶ್ವಬ್ರಹ್ಮ; ದೊಂಬಿದಾಸರ ಕೆಲವು ಹಾಡುಗಳು;—ಇವೆಲ್ಲ ಲಾವಣಿಯ ಬಳಗಕ್ಕೆ ಸೇರುತ್ತವೆ. ಲಕ್ಷ್ಮಣ್ಣ ಈರಣ್ಣ, ಡೊಂಬರ ಚೆನ್ನಿ, ಹರಿಯಾಲದೇವಿ, ಮದಕರಿನಾಯಕ, ಲಿಂಗರಾಜಮ್ಮ, ರಂಗಪ್ಪನಾಯ್ಕ ಈ ಐತಿಹಾಸಿಕ ಕೃತಿಗಳನ್ನು ಲಾವಣಿಗಳೆಂದೇ ಕರೆದಿವೆ. ಟಿ. ಎಸ್. ರಾಜಪ್ಪನವರು ಸಂಪಾದಿಸಿರುವ 'ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು' ಎಂಬ ಗ್ರಂಥದಲ್ಲಿಯ

---

[1] ಜೀವನಜೋಕಾಲಿ: ಚೌಪದನಗಳು, ಸಂ: ಡಾ. ಎಂ. ಎಸ್. ಸುಂಕಾಪುರ ಅವರು, ಪು. x.

[2] ತಿಮ್ಮಕ್ಕನ ಪದಗಳು : ಸಂ: ಡಾ. ಎಲ್. ಆರ್. ಹೆಗ್ಗಡೆ, ಪು. ೧೪.

[3] ಗುಮ್ಮನ ಪದಗಳು : ಸಂ: ಡಾ. ಎಲ್. ಆರ್. ಹೆಗ್ಗಡೆ, ಪು. xxx—xxxi.

[4] ಸಂಪಾದಕರು : ಕುಂಜಿಬೆಟ್ಟು ಸುಬ್ರಹ್ಮಣ್ಯ ಕೆದ್ಲಾಯ.

ಎಲ್ಲ ಕೃತಿಗಳನ್ನು ಲಾವಣಿಗಳೆಂದೇ ಹೆಸರಿಸಿದ್ದಾರೆ. ಪಿ. ಕೆ. ರಾಜಶೇಖರ ಅವರ ಜಿಟ್ಟದ ಚಾಮುಂಡಿಯನ್ನೂ ಈ ವಿಭಾಗದಲ್ಲಿಯೇ ಸೇರಿಸಬೇಕಾಗುತ್ತದೆ.

ಟಿ. ಎಸ್. ರಾಜಪ್ಪನವರಿಂದ ಸಂಪಾದಿತವಾಗಿರುವ ಮತ್ತೊಂದು ಸಂಗ್ರಹ 'ಬೆಳಗಾಂ ಜಿಲ್ಲೆಯ ಲಾವಣಿಗಳು.' ವಸ್ತು, ತಂತ್ರ, ಮತ್ತು ಆವರಣಗಳನ್ನು ಗಮನಿಸಿದಾಗ ಅವು ಗಳಲ್ಲಿ ಕೆಲವು–'ಚಿತ್ರಮುಖದ ಹೆಣ್ಣೇ', 'ಹುಟ್ಟಿ ಬಂದಿರತಾರ ಒಂದ ಉದರದಿಂದ' 'ಕನ್ಯಾ ದಾನ', 'ಮುಪ್ಪಿನ ಕಾಲಕ್ಕೆ ಹೆಣಗಿ ಬಡಿತು ಕಲ್ಲಾ', 'ಸರಸದಿಂದ ಹೇಳುವೆ ಸ್ತ್ರೀ ನೆರೆದ ಫಲವಾ', 'ಬಸುರ ಆದಾಂತ ಹಾಕಿದಾಳ ಸೋಗ'—ಇಂಗ್ಲೆಂಡಿನ ಬ್ರಾಡ್‌ಸ್ಪೈಡ್ ಲಾವಣಿಗಳಿಗೆ ಹತ್ತಿರದಲ್ಲಿದ್ದಂತೆ ಕಾಣುತ್ತವೆ. ಫ್ಲೀಟ್ ಸಾಹೇಬರ ಸಂಗ್ರಹದಲ್ಲಿರುವ 'ಆದಾಯ ತೆರಿಗೆ'ಯಂತು ಬೀದಿಲಾವಣಿಯೇ ಆಗಿದೆ. ಸ್ವಾತಂತ್ರ್ಯ ಸಂಗ್ರಾಮ ಸಮಯ ದಲ್ಲಿ ಲಾವಣಿಕಾರರು ತಾವೇ ಕಟ್ಟಿ ಹಾಡುತ್ತಿದ್ದ ಲಾವಣಿಗಳು ಈ ಗುಂಪಿಗೆ ಸೇರತಕ್ಕವು. ಆದರೆ ಇವು ಅಲ್ಲಿಯಂತೆ ಅಗಲವಾದ ಹಾಳೆಯಮೇಲೆ ಅಚ್ಚಾದುವಲ್ಲವೆಂಬುದನ್ನು ಮಾತ್ರ ಮರೆಯಬಾರದು.

ಕನ್ನಡದ ಲಾವಣಿಗಳನ್ನು ಒಟ್ಟಾರೆ ನೋಡಿದಾಗ ಕೆಲವು ವಿಶಿಷ್ಟ ಲಕ್ಷಣಗಳು ಎದ್ದು ಕಾಣುತ್ತವೆ. ಬ್ಯಾಲಿಡ್ಡುಗಳಂತೆ ಇಲ್ಲಿ ಕುಣಿತ ಕಡ್ಡಾಯವಲ್ಲ. ಗೇಯತೆ ಅನಿವಾರ್ಯ. ಛಂದೋವೈವಿಧ್ಯ ಇಲ್ಲಿಯ ಹೆಚ್ಚುಗಾರಿಕೆ. ಒಂದೇ ಲಾವಣಿಯನ್ನು ಬೇರೆ ಬೇರೆ ರೀತಿ ಯಾಗಿ ಹಾಡಬಹುದು. ಕಥೆ ಹಠಾತ್ತನೆ ಪ್ರಾರಂಭವಾಗುತ್ತದೆ. ವರ್ಣನೆಗಳ ಭಾರವಿಲ್ಲ. ಸಾಮಾನ್ಯವಾಗಿ ಘಟನೆಗಳು ಹೆಚ್ಚಿಲ್ಲ. ಕ್ರಿಯೆ ವೇಗವಾಗಿ ಗುರಿಯ ಕಡೆಗೆ ಸಾಗುತ್ತದೆ. ಸಾರಸಂಗ್ರಹಣ ಮತ್ತು ಸಂಕ್ಷಿಪ್ತತೆ ನಾಟಕೀಯತೆಯಿಂದ ಲಾವಣಿಗೆ ಕಳೆ ಕಟ್ಟುತ್ತದೆ. ವಸ್ತುವಿನ ಸಾಮಾನ್ಯ ನಿಯಮಗಳು. ಶೃಂಗಾರ ವೀರ ಅದ್ಭುತ ಇಲ್ಲಿ ಪ್ರಧಾನರಸಗಳು. ಅವನ್ನು ಹಿಂತಿಲ್ಲ ಕುಣಿತಕ್ಕೆ ಆಯ್ಕೆಯಲ್ಲಿ ನಿರ್ಬಂಧವಿಲ್ಲ. ಭಾಷೆ ಸಾಮಾನ್ಯವಾಗಿ ದೇಶಿ. ಇಂದಿರಾಗಾಂಧಿಯನ್ನು ಹಾಡಬಹುದು. ಲಘು ಲಾವಣಿಗಳಲ್ಲಿ ಕಥಾಂಶವೂ ಕಡಿಮೆ. ಅಲ್ಲಿಕೆಯ ಪ್ರಶಂಸೆಯಲ್ಲಿ ಕಥೆ ಇರುವುದಿಲ್ಲ; ಅವರ ಸಿದ್ಧಿಗಳ ಪಟ್ಟಿ ಇರುತ್ತದೆ. ಅವು ಗಳಲ್ಲಿ ಸಾಹಿತ್ಯಾಂಶ ಸೊನ್ನೆ ಎಂಬುದು ಸತ್ಯ.

ವಸ್ತುವನ್ನು ದೃಷ್ಟಿಯಲ್ಲಿಟ್ಟುಕೊಂಡು ದೇವುಡು ಅವರು ಲಾವಣಿಗಳನ್ನು ಐದು ಪಂಗಡಗಳಾಗಿ ವಿಂಗಡಿಸಿದ್ದಾರೆ: (೧) ಐತಿಹಾಸಿಕ ಲಾವಣಿಗಳು: ವೀರರು ಮತ್ತು ರಾಜಮಹಾರಾಜರೇ ಇವುಗಳ ನಾಯಕರಾಗಬೇಕಾಗಿಲ್ಲ. ಸಂಗ್ಯಾನ ಲಾವಣಿಯಲ್ಲಿರುವಂತೆ ಒಬ್ಬ ರೈತನೂ ನಾಯಕನಾಗಬಹುದು. "ನಾಯಕನು ಯಾವನಾಗಿರಲಿ ಅವನ ಕಾರ್ಯವು ಹೊಸ ಮಾಗಿದ್ದರೆ ಸಾಕು! ಸುತ್ತ ಸುತ್ತಮುತ್ತಿನವರ ಮನಸ್ಸನ್ನು ಸೆಳೆ ಹಿಡಿಯುವಷ್ಟು ಕೆರಳಿಸುವಂತಿದ್ದರೆ ಸಾಕು! ಅದು ಸುಮಾರು ಮುತ್ತಿನವರು ಆ ವಿಷಯವನ್ನು ಹತ್ತೆಂಟು ಸಲ ಆಡುತ್ತಿದ್ದರೆ ಸಾಕು! ಅದು ಕೂಡಲೆ ಒಂದು ಲಾವಣಿಯಾಗುತ್ತದೆ."[1] (೨) ಸ್ತುತಿಯ ಲಾವಣಿಗಳು: ದೇವರು ಗುರುಹಿರಿಯರ ಸ್ತೋತ್ರಗಳಿಗೆ ಸಂಬಂಧಿಸಿದವು ಇವು. (೩) ಕಸಾಲ್ ಲಾವಣಿಗಳು: ಕಲ್ಗಿತುರಾ ಜಾತಿಗೆ

1 ಕರ್ನಾಟಕ ಸಂಸ್ಕೃತಿ, ದೇವುಡು, ಪು. ೨೦.

ಸೇರಿದವು. (೪) ರಂಗು ಲಾವಣಿಗಳು : "ಇವು ಬಹುಶಃ ತಮಿಳಿನ ಕಡೆಯಿಂದ ಬಂದವುಗಳ ಸಂತಾನವಿರಬಹುದು.[1]" ಶೃಂಗಾರವೇ ಇಲ್ಲಿಯ ಮುಖ್ಯರಸ. (೫) ವೇದಾಂತದ ಲಾವಣಿಗಳು. ಭಾವಪ್ರಧಾನವಾದ ಸ್ತುತಿ ಪದ್ಯಗಳನ್ನು ಲಾವಣಿಯೊಳಗೆ ಸೇರಿಸಿದ್ದು ಸರಿಯಲ್ಲ. ಲಾವಣಿಗಳು ಗಂಡಸರಿಗೆ ಮಾತ್ರವೇ ಹೇಳಿಸಿದ ಪ್ರಕಾರವೆಂಬ ಅಭಿಪ್ರಾಯವೂ ಸರಿಯಲ್ಲ. 'ಕೆರೆಹೊನ್ನಮ್ಮ' ಲಾವಣಿಯನ್ನು ಹೆಂಗಸರು ಗಂಡಸರೆಲ್ಲ ಹಾಡುತ್ತಾರೆ. ಜೀಶಂಪ ಅವರು ಅವನ್ನು ಧಾರ್ಮಿಕ, ಕಾಲ್ಪನಿಕ, ಮತ್ತು ಚಾರಿತ್ರಕವೆಂದು ಮೂರು ಭಾಗಗಳಾಗಿ ವಿಂಗಡಿಸುತ್ತಾರೆ. ಹೇಳುವ ರೀತಿಯಿಂದ ಅವನ್ನು ಮೇಳಲಾವಣಿ ಮತ್ತು ಬಯಲು ಲಾವಣಿಯೆಂದು ಎರಡು ಗುಂಪುಗಳಾಗಿ ವಿಂಗಡಿಸುವುದು ಉತ್ತರಕರ್ಣಾಟಕದಲ್ಲಿ ಕಂಡು ಬರುತ್ತದೆ. ವಿಂಗಡಣೆಮಾಡುವಾಗ ಯಾವುದಾದರೂ ಒಂದು ತತ್ವವನ್ನು ದೃಷ್ಟಿಯಲ್ಲಿರಿಸಿ ಕೊಳ್ಳುವುದೊಳ್ಳೆಯದು. ದೇವುಡು ಅವರು ವಸ್ತುವಿನ ಆಧಾರದ ಮೇಲೆ ಐತಿಹಾಸಿಕ ಲಾವಣಿಗಳೆಂದೂ, ರಸದ ಆಧಾರದ ಮೇಲೆ ರಂಗು ಲಾವಣಿಗಳೆಂದೂ, ಸಂವಾದದ ಆಧಾರದ ಮೇಲೆ ಸವಾಲ್ ಲಾವಣಿಗಳೆಂದೂ ವಿಂಗಡಣೆ ಮಾಡಿದಂತಿದೆ. ಚಾರಿತ್ರಕ ಅಥವಾ ತಾತ್ವಿಕ ವಿಷಯಗಳೂ ಸವಾಲ್ ಲಾವಣಿಯ ವಸ್ತುವಾಗಬಹುದಾದ್ದರಿಂದ ಈ ವಿಂಗಡಣೆಯಲ್ಲಿ ಮೇಲುಸೇರುವೆ ಎದ್ದು ಕಾಣುತ್ತದೆ. ಸ್ವಾತಂತ್ರ್ಯ ಚಳುವಳಿಯ ಕಾಲದ ಲಾವಣಿಗಳಿಗೆ ಅವರ ಪ್ರಕಾರ ಸ್ಥಾನವಿಲ್ಲ. ಅಂತೆಯೇ ಸಾಮಾಜಿಕ ವ್ಯವಹಾರಗಳನ್ನು ಕುರಿತ ಲಾವಣಿಗಳೆಲ್ಲಿ ಬರಬೇಕು? ವಿಶ್ವದ ಎಲ್ಲ ಸಂಗತಿಗಳನ್ನೊಳಗೊಳ್ಳುವಂಥ ರೀತಿಯಲ್ಲಿ ವಿಂಗಡಣೆ ಮಾಡುವುದು ಸುಲಭವಲ್ಲ. ಯಾವ ವಿಂಗಡಣೆಯೂ ಅಸಮರ್ಪಕವಾಗಿ ಕಾಣಬಹುದು.[2]

ಛಂದಸ್ಸು, ವಾದ್ಯ, ಹಾಡುವವರು, ಹಾಡುವ ಸಂದರ್ಭ, ಭೌಗೋಳಿಕ ಪರಿಸರ ಈ ಅಂಶಗಳ ಆಧಾರದ ಮೇಲೆ ಮಾಡುವ ವಿಂಗಡಣೆಯೂ ಅಸಮರ್ಪಕವಾಗುತ್ತದೆ. ಆದರೂ ಅಧ್ಯಯನದ ದೃಷ್ಟಿಯಿಂದ, ಸಾಧ್ಯವಾದಷ್ಟು ಸಾಮಗ್ರ್ಯವನ್ನು ಸಾಧಿಸುವ ಸಲುವಾಗಿ ಅವನ್ನು ಏಳು ಗುಂಪುಗಳಾಗಿ ವಿಂಗಡಿಸಬಹುದು : (೧) ಪೌರಾಣಿಕ, (೨) ಧಾರ್ಮಿಕ, (೩) ಐತಿಹಾಸಿಕ, (೪) ಸಾಮಾಜಿಕ, (೫) ಸಾಂಸಾರಿಕ, (೬) ಕಾಲ್ಪನಿಕ, ೭) ರಾಜಕೀಯಾತ್ಮಕ. ಮುಂದೆಂದಾದರೂ ವಿಜ್ಞಾನ ಸಂಬಂಧವಾದ ಲಾವಣಿಗಳು ಹುಟ್ಟುವುದಾದರೆ 'ವೈಜ್ಞಾನಿಕ' ಎಂಬ ಮತ್ತೊಂದು ವಿಭಾಗವನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಲಾವಣಿಗಳ ರಚನಾಕ್ರಮವನ್ನನುಸರಿಸಿ ದೇವುಡು ಅವರು ಎರಡು ವರ್ಗಗಳನ್ನು ಗುರುತಿಸುತ್ತಾರೆ: (೧) ಕಾವ್ಯಜಾತಿ ಮತ್ತು (೨) ಚಂಪೂಜಾತಿ. ಚಂಪೂವಿನ ಗದ್ಯವನ್ನು ಸಹ ತಾಳಲಯಬದ್ಧವಾಗಿ ಹಾಡುವುದುಂಟು. ಲಾವಣಿಗಳಲ್ಲಿರುವಷ್ಟು ಛಂದೋವೈವಿಧ್ಯ ಆಂಗ್ಲ ಬ್ಯಾಲೆಡ್ಡುಗಳಲ್ಲಿಲ್ಲ. "ಲಾವಣಿಗಳನ್ನು ಯಮುನ್, ಪೀಲು, ಪಂತುವರಾಳಿ, ಭೈರವಿ, ಶಂಕರಾಭರಣ, ಹನುಮತೋಡಿ, ಮಾಯಾಮಾಳವಗೌಳ ಮೊದಲಾದ ಪ್ರಸಿದ್ಧ ರಾಗ

[1] ಅದೇ, ಪು. ೨೭. ಈ ಹೇಳಿಕೆಗೆ ಅವರು ಆಧಾರಗಳನ್ನೊದಗಿಸಿಲ್ಲ.

[2] ವಿವರಗಳಿಗೆ ಅದೇ ಗ್ರಂಥದ ೩೦-೩೧ನೆಯ ಪುಟಗಳನ್ನು ನೋಡಿ.

ಗಳಲ್ಲಿ, ಸಂಪೂರ್ಣರಾಗ ಸಂಚಾರವಿಲ್ಲದೆ, ಅನೇಕ ವೇಳೆಗಳಲ್ಲಿ ರಾಗ ಹೋಯಿತು ಬಂದಿತು ಎಂಬ ಯೋಚನೆಯೂ ಇಲ್ಲವೆ, ಎರಡು ಮೂರು ಸ್ವರಗಳನ್ನು ಮುಟ್ಟದೆಯೇ ಹಾಡುವ ರೆಂದು ತೋರುತ್ತದೆ" ಎಂಬ ದೇವುಡು ಅವರ ಮಾತು ನಿಜ. ಲಾವಣಿಗಳ ಛಂದಸ್ಸು ಮತ್ತು ಸಂಗೀತಗಳ ಬಗ್ಗೆ ವಿಶೇಷವಾಗಿ ಸಂಶೋಧನೆ ನಡೆಯಬೇಕಾಗಿದೆ.

ಈ. ನೀಳ್ಗವನ

ಉತ್ತರ ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಎಲ್ಲ ಕಥನಕಾವ್ಯ ಪ್ರಕಾರಗಳನ್ನು ಲಾವಣಿಯ ಕುಕ್ಷಿಯೊಳಗೆ ಅಂತರ್ಗತಗೊಳಿಸುವುದು ಸರಿಯಲ್ಲವೆಂದು ಅಲ್ಲಿಯ ವಿದ್ವಾಂಸ ರೊಬ್ಬರು ಎತ್ತಿರುವ ಆಕ್ಷೇಪವನ್ನು ಹಿಂದೆ ಉದ್ಧರಿಸಿ, ಅದು ಗಮನಾರ್ಹವಾದ ಮುಖ್ಯ ಸಂಗತಿಯೆಂದು ಸೂಚಿಸಲಾಗಿತ್ತು. ಚೌಪದಿಯ ಧಾಟಿಯಲ್ಲಿ ಮೂಡಿಬಂದಿರುವ ವಿಶಿಷ್ಟ ಜಾತಿಯ ಚೌಪದನಗಳನ್ನು "ನೀಳ್ಗವನಗಳೆಂದೂ ಕಥನ ಕವನಗಳೆಂದೂ ಕರೆಯಬಹುದು. ಜನಪದ ಸಾಹಿತ್ಯದಲ್ಲಿ ಕಥನ ಕವನಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ....ನೇರವಾಗಿ ಕಥೆ ಹೇಳುತ್ತ ಹೋಗುವುದೇ ಇವುಗಳನ್ನು ರಚಿಸಿದ ಕವಿಗಳ ಗುರಿಯಾಗಿದೆ"[1] ಎಂಬ ಡಾ. ಎಂ. ಎಸ್. ಸುಂಕಾಪುರ ಅವರ ಅಭಿಪ್ರಾಯ ಗಮನಾರ್ಹವಾದದ್ದು. ಇವುಗಳಲ್ಲಿ ಕೆಲವು ಕಡೆ ಪಲ್ಲವಿ ಉಂಟು. ಗಂಗೆ-ಗೌರಿ, ಗುರುಭಕ್ತ ಅಂಡಾರಿ, ಚಿತ್ರಶೇಖರ, ಸೋಮಶೇಖರ, ವೀರಸಂಗಯ್ಯ, ಮತ್ತು ಕಂಸವಧ ಚೌಪದನಗಳಲ್ಲಿ ಕಥೆಯೇ ಪ್ರಧಾನ ವಾದರೂ, ಲಾವಣಿಯಲ್ಲಿ ತಲೆಯೆತ್ತಿಕೊಂಡು ಮೆರೆಯುವ ಸಾದಾತನ, ಅಕೃತ್ರಿಮತೆ, ರೂಕ್ಷತೆ ಮತ್ತು ಗ್ರಾಮ್ಯತೆಗಳು ಇಲ್ಲಿ ಕಾಣುವುದಿಲ್ಲ. ಹೋಳೀ ಹಾಡು ಮತ್ತು ದುಂದುಮೆ ಪದಗಳು ಹೋಳೀ ಸಾಹಿತ್ಯದ ಎರಡು ಕವಲುಗಳು. ಆದರೆ ಅವುಗಳ ಗತಿ ಭಿನ್ನ. ಹೋಳೀಹಾಡು ರಗಳೆಯಂತೆ ನೇರವಾಗಿ ಹರಿದರೆ, ದುಂದುಮೆ ಪದಪದಕ್ಕೂ ಹೊಸ ಭಂಗಿಯನ್ನು ಪ್ರಕಟಿಸುತ್ತದೆ. ದುಂದುಮೆಗೆ ಬಳಸುವ ವಾದ್ಯವೇ ಇದಕ್ಕೆ ಕಾರಣವೆಂದು ಹೇಳುತ್ತಾರೆ. "ಹೋಳೀಹಾಡು ಕಥನಕಾವ್ಯವಾಗಿ ಶೃಂಗಾರ ವೀರಗಳ ರಸದೂಟಿಯಾಗಿ ಹರಿಯುವ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ."[2] ವಿಶೇಷವಾಗಿ ಗಂಡಸರೇ ಹಾಡು ವಂಥವು. ಕೃಷ್ಣ-ಗೊಲ್ಲತಿ, ಬಾಣಾಸುರ, ಕಾಮಿನೀಶೃಂಗಾರ, ವೀರ ಅಭಿಮನ್ಯು, ಕೃಷ್ಣಾರ್ಜುನರ ಕಾಳಗ, ಧೀರ ಕುಮಾರರಾಮ, ಮಲುಹಣ ಮೊದಲಾದ ಹೋಳೀ ಹಾಡುಗಳಾಗಲೀ, ಆದಯ್ಯ, ಕೀಚಕವಧೆ, ಕಿತ್ತೂರದುಂದುಮೆ. ವೀರರಾಣಿ ಚೆನ್ನಮ್ಮ, ನುಲಿಯ ಚೆಂದಮ್ಮ, ಶ್ರೀಕೃಷ್ಣಲೀಲೆ ಮುಂತಾದ ದುಂದುಮೆ ಪದಗಳಾಗಲೀ ಗ್ರಾಮೀಣ ಕವಿಗಳಿಂದ ರಚನೆಗೊಂಡಿದ್ದರೂ ಅವುಗಳ ಮೇಲೆ ಶಿಷ್ಟಪದದ ಗಾಳಿ ಬೀಸುವಂತೆ ಕಾಣು ತ್ತದೆ. ಪ್ರತಿಯೊಂದು ಹೋಳೀಹಾಡಿನಲ್ಲಿ ಇಪ್ಪತ್ತರಿಂದ ನೂರೈವತ್ತು ಪದ್ಯಗಳಿರ

1 ಜೀವನಜೋಕಾಲಿ : ಚೌಪದನಗಳು, ಸಂ : ಡಾ. ಎಂ. ಎಸ್. ಸುಂಕಾಪುರ ಅವರು, ಪು. viii.

2 ಜೀವನಜೋಕಾಲಿ : ದುಂದುಮೆ ಪದ, ಸಂ : ಡಾ. ಎಂ. ಎಸ್. ಸುಂಕಾಪುರ ಅವರು, ಪು. ೨.

ಬಹುದಾಗಿವೆ. ಒಂದೊಂದು ಪದ್ಯದಲ್ಲಿ ಐದು ಏಳು ಅಥವಾ ಒಂಬತ್ತು ಸಾಲುಗಳಿರುತ್ತವೆ. ಪ್ರಾಸಲಯಗಳು ನಿಯತ.

> ಭೂರಮ್ಯವಾದಂಥ ಭೂಪ್ರಲತಪುರ ಸ್ಥಿರ
> ಗಾರ ಪುಣ್ಯಸ್ಥರೆಂದೆನಿಸುವರು। ಮಾತು
> ಮಾರನ ಚೆಲ್ವಿಕೆ ಮರೆಸುವರು।...[1]

ನಿರಕ್ಷರಕುಕ್ಷಿ ಇಂಥ ಸಾಲುಗಳನ್ನು ಕಟ್ಟಲಾರ; ಅಷ್ಟೇ ಅಲ್ಲ, ಅವನ್ನು ಹಾಡುವುದೂ ಕಷ್ಟವಾಗಬಹುದು. ಆದರೆ ಬುದ್ಧಿವಂತ ಗ್ರಾಮೀಣ ಕವಿ ಅವನ್ನು ಕಟ್ಟಿ, ಚಲಾವಣೆಗೆ ಬಿಟ್ಟನಂತರ, ಅವು ಜನಪದದ ಸ್ವತ್ತಾಗುತ್ತವೆ. ಈ ಗೀತೆಗಳ ಆದಿ ಮತ್ತು ಅಂತ್ಯ ಹೆಚ್ಚು ಕಡಮೆ ಶಿಷ್ಟಕಾವ್ಯಗಳ ಜಾಡನ್ನು ಹಿಡಿಯುತ್ತವೆ. ಶಿವ, ಗಣೇಶ, ಸರಸ್ವತಿಯರ ಸ್ತುತಿಗಳಿಂದ ಮೊದಲಾಗುತ್ತವೆ; ವಾಚನಲಾಭದ ವಿವರಣೆಯಿಂದ ಮುಕ್ತಾಯಗೊಳ್ಳುತ್ತದೆ.

ಈ ಗುಣಗಳ ಹಿನ್ನೆಲೆಯಲ್ಲಿ ಪರೀಕ್ಷಿಸಿದಾಗ 'ಕರಾಕೃ' ಅವರ 'ಜಾನಪದ ಕಥನಗೀತಗಳು' ಸಂಕಲನದ ಬಹುತೇಕ ರಚನೆಗಳು ಲಾವಣಿಯ ಚೌಕಟ್ಟಿನೊಳಗೆ ಬರುತ್ತವೆಯೇ ಹೊರತು, ಅವನ್ನು ನೀಳ್ಗವನ ಅಥವಾ ಕಥನಗೀತೆಗಳೆಂದು ಕರೆಯಲಾಗದು. ಆ ಸಂಕಲನದಲ್ಲಿ 'ಪಿರಿಯಾಪಟ್ಟಣದ ಕಾಳಗ'ದ ಜತೆಗೆ ಕೃಷ್ಣಕೊರವಂಜಿ, ತಬ್ಬಲಿರಾಯ ಮೊದಲಾದ ಕೃತಿಗಳೂ ಸೇರಿವೆಯೆಂಬುದು ಗಮನಾರ್ಹ ವಿಚಾರ. ಕೆ. ಶಿವರಾಮ ಐತಾಳರು ತಮ್ಮ ದಕ್ಷಿಣ ಕನ್ನಡದ ಜನಪದ ಸಾಹಿತ್ಯ ಎಂಬ ಸಂಕಲನ ಗ್ರಂಥದಲ್ಲಿ ಸೇರಿಸಿರುವ 'ಈಶ್ವರ ದೇವರು ಪಟ್ಟಿಕೊಚ್ಚಿದ ಹಾಡು, ಗೋವಿನ ಹಾಡು ಮತ್ತು ಗೌರಮ್ಮ ಅಪ್ಪನ ಮನೆಗೆ ಹೋದ ಹಾಡು' ಇವು ಮೂರೂ ಕಥನ ಗೀತೆಗಳಿಗೆ ಒಳ್ಳೆಯ ನಿದರ್ಶನಗಳು.

ಉ. ಖಂಡಕಾವ್ಯ

ಲಾವಣಿ ಅಥವಾ ನೀಳ್ಗವನಗಳು ಗಾತ್ರದಲ್ಲಿ ಚಿಕ್ಕವು; ಕಥಾಸಂವಿಧಾನ ಸರಳ ಮತ್ತು ನೇರ; ಘಟನೆಗಳ ಜಟಿಲತೆಯಿಲ್ಲ; ಪಾತ್ರಗಳು ಹೆಚ್ಚಿಲ್ಲ. ವಸ್ತು ತೂಕವಾಗಿದ್ದು, ಕಥಾಸಂವಿಧಾನ ಚಮತ್ಕಾರಯುತವಾಗಿದ್ದು, ಘಟನೆಗಳ ಸರಮಾಲೆ ನೆರಿಗೆಗೊಂಡು, ನಾಲ್ಕಾರು ಗಂಟೆಗಳ ಕಾಲ ಅಥವಾ ಇಡೀ ಇರುಳೆಲ್ಲ ಹಾಡುವಷ್ಟು ದೀರ್ಘವಾಗಿರುವ ಕೃತಿಗಳು ಪ್ರತ್ಯೇಕ ವರ್ಗವೆಂದು ಎಣಿಕೆಗೊಳ್ಳಬೇಕಾಗುತ್ತದೆ. ನಾಟಿ ಹಾಕುವಾಗ, ಕಳೆ ಕೀಳುವಾಗ, ರಾಗಿ ಬೀಸುವಾಗ, ಅಡಿಕೆ ಸುಲಿಯುವಾಗ ಪುಡಿಗಬ್ಬಗಳು ಸಾಕು; ಅವಸರದ ಮನೋಧರ್ಮದವರಿಗೆ ಮತ್ತು ಸಂತೆ ಜಾತ್ರೆಗಳಲ್ಲಿ ಲಾವಣಿಗಳು ಬೇಕು. ಹಬ್ಬಹರಿದಿನಗಳಲ್ಲಿ, ಬೇಸಗೆಯ ಸಮಯದಲ್ಲಿ ವಿರಾಮವಾಗಿ ಬೇಸರವಿಲ್ಲದೆ ಕಾಲ ಕಳೆಯಬೇಕಾದಾಗ, ಕಥಾಕಾಲಕ್ಷೇಪ ಅನಿವಾರ್ಯವಾದಾಗ ನೀಳ್ಗವನವಾಗಲಿ, ಲಾವಣಿಯಾಗಲಿ ಸಾಕಾಗುವುದಿಲ್ಲ. ಒಂದು ರಾತ್ರಿಯಲ್ಲಿ, ನಾಲ್ಕಾರು ರಾತ್ರಿಗಳ ತನಕ ಕಥೆ

[1] ಜೀವನಜೋಕಾಲಿ: ಹೋಳಿ ಹಾಡು, ಸಂ: ಡಾ. ಎಂ. ಎಸ್. ಸುಂಕಾಪುರ ಅವರು, ಪು. ೩೭

ಹರಿದರೂ ಸಮನೆ. ಸಾಮಾನ್ಯರಿಗೆ ನೀತಿಧರ್ಮ ತತ್ತ್ವಬೋಧೆ ಸೊಗಸು; ಕಥೆ ಚಮತ್ಕಾರವಾಗಿದ್ದರೆ ಅದ್ಭುತಗಳಿಂದ ಕೂಡಿದ್ದರೆ, ವೀರ ರೌದ್ರ ಕರುಣಾರಸಗಳಿಂದ ತುಂಬಿದ್ದರೆ ಅವರು ನಾಲಗೆ ಚಪ್ಪರಿಸುತ್ತಾರೆ; ಆಖ್ಯಾನ ಉಪಾಖ್ಯಾನಗಳಿದ್ದರಂತೂ ಅವರು ರೋಮಾಂಚನಗೊಳ್ಳುತ್ತಾರೆ. ಅಂಥ ದೀರ್ಘವಾದ ರಚನೆಗಳನ್ನು 'ಖಂಡಕಾವ್ಯ'ಗಳೆಂದು ಕರೆಯಬಹುದು. "ಕಂಠಸ್ಥ ಸಂಪ್ರದಾಯದಲ್ಲಿ ಉಳಿದು ಬಂದು, ಭಾವಗೀತೆಗಿಂತ ವಿಸ್ತಾರವಾದ, ಕಥನಾತ್ಮಕವಾದ, ವಿಶಿಷ್ಟ ಮಟ್ಟಿನಲ್ಲಿ ಹಾಡಲಾಗುವ ಸಾಂಪ್ರದಾಯಿಕ ಕಥನ ಕವನಗಳನ್ನು ಲಾವಣಿ ಎಂದು ಸೌಲಭ್ಯ ದೃಷ್ಟಿಯಿಂದ ಕರೆಯಬಹುದಾದರೂ ಕೆಲವು ಸುದೀರ್ಘ ರಚನೆಗಳನ್ನು ಬೇರೊಂದು ಹೆಸರಿನಿಂದಲೇ ಗುರುತಿಸುವುದು ಉಚಿತವಾಗಿದೆ"[1] ಎಂಬ ಜೀಶಂಪ ಅವರ ಮಾತು ಮೆಚ್ಚತಕ್ಕದ್ದಾಗಿದೆ. ಅಂಥ ಹಾಡುಗಳನ್ನು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಮೆರೆಯುತ್ತಾರೆ. ಅನೇಕ ಗಾಯಕರು ಹಿಮ್ಮೇಳ ಮುಮ್ಮೇಳ ಹಾಗೂ ವಾದ್ಯವೃಂದದೊಡನೆ ಅನೇಕ ರಾತ್ರಿ ಹಾಡಿ, ಕುಣಿದು, ಜನಮನವನ್ನು ತಣಿಸುವುದುಂಟು. "ಇಂಥ ಸುವಿಸ್ತಾರ ರಚನೆಗಳನ್ನು ಜನಪದಕಾವ್ಯಗಳೆಂದೂ ಖಂಡಕಾವ್ಯಗಳೆಂದೂ ಹೆಸರಿಸಬಹುದು"[2] ಎಂದು ಜೀಶಂಪ ಅವರೇ ನುಡಿದಿದ್ದಾರೆ. ಆದರೆ ಉತ್ತರದೇವಿ, ಈರೋಬಿ, ನಾಗವ್ವ, ಹುಳಿಯಾರು ಕೆಂಚಮ್ಮ, ಹೊನ್ನಮ್ಮ, ಸಂಪನ್ನ, ಚಿಕ್ಕೋಳು ಹಿರಿದಿಮ್ಮವ್ವ, ಕೊಂತ್ಯಮ್ಮ—ಈ ಕೃತಿಗಳ ಸಂಕಲನವನ್ನು 'ಜಾನಪದ ಖಂಡಕಾವ್ಯಗಳು' ಎಂದು ಕರೆದಿರುವುದು ಸಮಂಜಸವಾಗಿ ತೋರುವುದಿಲ್ಲ.

'ಜೀವನ ಜೋಕಾಲಿ–ಗರತಿಯರ ಹಿರಿಮೆ'ಯಲ್ಲಿ ಸೇರ್ಪಡೆಗೊಂಡಿರುವ ಚೆನ್ನಮ್ಮ, ಗುಣಸಾಗರಿ ಕಾವ್ಯಗಳು ಈ ವರ್ಗಕ್ಕೆ ಸೇರುತ್ತವೆ. "ಇವುಗಳನ್ನು ಜನಪದ ಮಹಾಕಾವ್ಯಗಳೆಂದು ಕರೆಯಬಹುದಾಗಿದೆ"[3] ಎನ್ನುವಷ್ಟರಮಟ್ಟಿಗೆ ವಿಮರ್ಶಕರು ಮುಂದುವರಿದಿದ್ದಾರೆ. ಇವು ಮೊತ್ತ ಸತ್ವಗಳಲ್ಲಿ ಹಿರಿದಾಗಿವೆ ಎಂಬ ಮಾತೂ ಸತ್ಯ. ಆದರೆ ಮಹಾಕಾವ್ಯದ ಔನ್ನತ್ಯಕ್ಕೇರುವ ಸತ್ವ, ಅದರಂತೆ ಮಾನವನನ್ನು ವಿಸ್ಮಯಗೊಳಿಸುವ ಭವ್ಯತೆ, ದಂಗುಬಡಿಸುವಂಥ ಬೀಸು ಈ ಕಾವ್ಯಗಳಲ್ಲಿಲ್ಲ ಎಂದು ಹೇಳಬೇಕಾಗುತ್ತದೆ. ಕೌತುಕವನ್ನು ಹುಟ್ಟಿಸುವ ಎಲ್ಲಮ್ಮನ[4] ಕಥೆ ಮಹಾಕಾವ್ಯಕ್ಕೆ ತಕ್ಕುದಾದ ವಸ್ತು

---

1 ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು (ಅಮುದ್ರಿತ ನಿಬಂಧ), ಪು. ೧೦೬.

2 ಅದೇ, ೧೦೭.

3 ಜೀವನ ಜೋಕಾಲಿ-ಗರತಿಯರ ಹಿರಿಮೆ : ಸಂ : ಡಾ. ಎಂ. ಎಸ್. ಸುಂಕಾಪುರ ಅವರು, ಪು. xxvi.

4 ಎಲ್ಲಮ್ಮ ಎನ್ನುವ ಪದ 'ಯಕ್ಷಿಣಿ'ಯಿಂದ ಸಿದ್ಧಿಸಿರುವುದಾಗಿ ಮುನ್ನುಡಿಕಾರರು (ಚಾಡಿಕೆ ಕಾವ್ಯಗಳು : ಸಂ : ಸಂ. ನಾರಾಯಣಗೌಡ, ಪು. xxxv) ಹೇಳಿದ್ದಾರೆ. ಅಂತೆಯೇ ಎಲ್ಲಿಯ + ಅಮ್ಮ ಆಗಿರಲು ಸಾಧ್ಯ ಎಂದಿದ್ದಾರೆ. (ಅದೇ, ಪು. xxxiv). ಎಲ್ಲ + ಅಮ್ಮ = ಎಲ್ಲಮ್ಮ = ಲೋಕಮಾತಾ ಎಂಬ ನಿಷ್ಪತ್ತಿಯೇ ಸರಿಯೆಂದು ನನ್ನ ಭಾವನೆ. ಅಂತೆಯೇ ಜನಾರ್ದ್ರನಿಗೆ ಎಲ್ಲಪ್ಪ ಎಂದು ಹೆಸರು. ಆ ಹೆಸರಿನ ಜನ ನಮ್ಮ ಕಡೆ ಬಹುಮಂದಿ ಇದ್ದಾರೆ. ಎಲ್ಲಮ್ಮ, ಎಲ್ಲವ್ವ ಎನ್ನುವ ಹೆಸರುಗಳ ಜನರೂ ಸಾಕಷ್ಟಿದ್ದಾರೆ.

ವಾದರೂ ಅದು ನಿಡಿದಾಗಿ ಬೆಳೆಯಲಿಲ್ಲ. ಈ ಕಥೆಯಲ್ಲಿ ಲೌಕಿಕಾಲೌಕಿಕಗಳ ಮಾನುಷ ಅತಿಮಾನುಷಗಳ ಸಮ್ಮಿಶ್ರಣವಿದೆ. ಎಲ್ಲಮ್ಮನ ಹುಟ್ಟು, ಮಾತಂಗಿ–ಮಾರ್ತಾಂಡ ಗೌಡರ ಪ್ರಸಂಗ, ಕೋಣಾಸುರ ಯುದ್ಧ, ಎಲ್ಲಮ್ಮನಿಗೆ ಓರುಗಲ್ಲು ದೊರೆಯ ಶರಣಾಗತಿ, ಈ ಒಂದೊಂದು ಘಟನೆಯೂ ಒಂದೊಂದು ಪೂರ್ಣ ಕಾವ್ಯಕ್ಕೆ ವಸ್ತುವಾಗತಕ್ಕ ಅರ್ಹತೆ ಯುಳ್ಳದು. ಜುಂಜಪ್ಪನ ಕಾವ್ಯವೂ ಇಂಥದೇ ಘನವಾದ ವಸ್ತು. ಒಂದು ಪ್ರಾಚೀನ ಜನಾಂಗದ ಸಂಸ್ಕೃತಿಯ ಚಿತ್ರಣ, ಅದರ ಆಶೋತ್ತರಗಳು, ಕಟ್ಟುಕಟ್ಟಳೆಗಳು, ನಂಬಿಕೆ ನಡಾವಳಿಗಳು, ರೀತಿನೀತಿಗಳು ಈ ಕಾವ್ಯದಲ್ಲಿ ಮಾರ್ಪೊಳೆಯುತ್ತವೆ. ಜುಂಜಪ್ಪ ವೀರ ಭದ್ರನ ಅವತಾರವೆಂಬ ಕಲ್ಪನೆ ಬೆಳೆದುಬಂದಿದ್ದರೂ ಅವನು ಮೂಲತಃ ಆ ಜನಾಂಗದ ಒಬ್ಬ ವೀರ, ಆದರ್ಶವ್ಯಕ್ತಿಯಾಗಿದ್ದಿರಬಹುದು. ಕಾಲಾನಂತರದಲ್ಲಿ ಅವನು ಅವರ ಆರಾಧ್ಯದೇವತೆಯಾಗಿ ವಿಕಾಸಗೊಂಡಿರಬಹುದು. 'ಮಾಗಡಿ ಕೆಂಪೇಗೌಡ'ನ[1] ಜೀವನ ಎಂಥ ಹಿರಿಯ ಕಾವ್ಯಕ್ಕಾದರೂ ಸಾಮಗ್ರಿಯಾಗಬಲ್ಲ ವಸ್ತು. ಆ ಬಗ್ಗೆ ರಾಗೌ ಹೇಳಿರುವ ಮಾತು ಗಮನಾರ್ಹವಾದುದು: "ಹನ್ನೊಂದು ಭಾಗಗಳಲ್ಲಿ ಹರಡಿಕೊಂಡಿರುವ ಈ ಕಥೆ ಕುತೂಹಲಕಾರಿ ಘಟನಾ ಪರಂಪರೆಯಿಂದ ರಂಜಿಸಿದೆ....ಇದನ್ನು ಐತಿಹಾಸಿಕ ವೀರಕಾವ್ಯ ಎನ್ನಬಹುದು. ಇಲ್ಲಿನ ಅಭಿಜಾತ ಕಥನಕಲೆ, ಭಾಷೆಯ ಸ್ವೋಪಜ್ಞತೆ ಹಾಗೂ ಸಾಹಿತ್ಯಿಕ ಸೊಗಸುಗಳು ಕೃತಿಯನ್ನು ದೊಡ್ಡದಾಗಿಸಲು ಕಾರಣವಾಗಿವೆ. ಆ ಕಾಲದ ಧಾರ್ಮಿಕ, ಚಾರಿತ್ರಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ವಸ್ತುವಾಗುವ ಈ ಕೃತಿ ಕನ್ನಡ ಜಾನಪದಕ್ಕೆ ಸಂದ ಒಂದು ಗಮನಾರ್ಹ ಕಾಣಿಕೆ ಎನ್ನುವುದು ನಿಶ್ಚಯ." ಯಾವ ದೃಷ್ಟಿಯಿಂದ ನೋಡಿದರೂ ಇದೊಂದು ಶ್ರೇಷ್ಠ ಖಂಡಕಾವ್ಯ ಎನ್ನುವಲ್ಲಿ ಅಡ್ಡಿಯಿಲ್ಲ. ಎಂ. ಸಿ. ವಸಂತಕುಮಾರ್ ಅವರು ಸಂಪಾದಿಸಿರುವ 'ಮಳಲಿ ಗಿಡ್ಡಮ್ಮ' ಮೇಲೆ ಹೆಸರಿಸಿರುವ ಕಾವ್ಯಗಳ ಮಟ್ಟಕ್ಕೇರದಿದ್ದರೂ ಈ ವರ್ಗದಲ್ಲಿಯೇ ದಾಖಲೆಗೊಳ್ಳಬೇಕಾಗಿದೆ. ಆ ಕಾವ್ಯಗಳಲ್ಲಿ ಕಾಣುವ ಜೀವನ ಸಂಕೀರ್ಣತೆ, ಮಿರುಗುವ ಪಾತ್ರಗಳು, ಒಂದು ಜನಪದ ಹಿರಿಮೆಯನ್ನು ಮೆರೆಯುವ ಸಂಗತಿಗಳು ಇಲ್ಲಿಲ್ಲ. ಇದೊಂದು ವಟ್ಟವಾದ ಸಂಬಂಧವಿಲ್ಲದ ಸಣ್ಣ ಸಣ್ಣ ಲಾವಣಿಗಳ ಜೊತ್ತವಿದ್ದಂತೆ ತೋರುತ್ತದೆ. ಅಷ್ಟೇ ಅಲ್ಲ, ಇಲ್ಲಿ ಪ್ರತಿಬಿಂಬಿತವಾಗಿರುವ ಜೀವನ ಕೇವಲ ಎರಡು ಮೂರು ಹಳ್ಳಿಗಳಿಗೆ ಸೀಮಿತ ವಾದದ್ದು. ವಿಸ್ತಾರ, ಕಾವ್ಯಗುಣ, ಸಾಂಸ್ಕೃತಿಕ ವಿಚಾರಗಳು—ಇವುಗಳನ್ನು ದೃಷ್ಟಿ ಯಲ್ಲಿಟ್ಟುಕೊಂಡು ವಿವೇಚಿಸಿದಾಗ, ಈ ಕೃತಿಯನ್ನು 'ಕಥನಗೀತೆ'ಯ ಗುಂಪಿಗೆ ಸೇರಿಸು ವುದಕ್ಕಿಂತ, ಖಂಡ ಕಾವ್ಯದ ಗುಂಪಿಗೆ ಸೇರಿಸುವುದೇ ಮೇಲೆಂದು ತೋರುತ್ತದೆ. ರಾಗೌ ಅವರು ಜನಪದ ರಾಮಾಯಣವನ್ನು 'ಲಾವಣಿ ಮಹಾಕಾವ್ಯ'ವೆಂದು[2] ಕರೆದಿದ್ದಾರೆ. "ಇಲ್ಲಿ ವಸ್ತುವೆಲ್ಲ ಬರಿಯ ಕ್ರಿಯೆಯೇ: ಪಾತ್ರಗಳು ಬಹುತೇಕ ಸಿದ್ಧಮಾದರಿಯವು,

---

[1] ಸಂಪಾದಕರು: ಪಿ. ಕೆ. ರಾಜಶೇಖರ, ಗುಡ್ಡೇನಹಳ್ಳಿ ಪುಟ್ಟೀರಾಜ ಮತ್ತು ಗುಡ್ಡೇನಹಳ್ಳಿ ಸಂಜಪ್ಪ.

[2] ಸಂಪಾದಕರು: ರಾಗೌ, ಪಿ. ಕೆ. ರಾಜಶೇಖರ ಮತ್ತು ಎಸ್. ಬಸವಯ್ಯ.

ವಿಕಾಸ ತೀರ ವಿರಳ."[1] ಈ ಅಭಿಪ್ರಾಯ ವ್ಯಕ್ತಪಡಿಸಿರುವವರೂ ಅವರೇ. ಇದರಲ್ಲಿ ನಾಲ್ಕು ಭಾಗಗಳಿದ್ದು, ಮೊದಲನೆಯ ಭಾಗದಲ್ಲಿ ಸೀತಾಜನನ ಸ್ವಯಂವರ ಮತ್ತು ಮದುವೆಗಳಿಗೆ ಸಂಬಂಧಿಸಿದ ವಿಷಯಗಳೂ, ಎರಡನೆಯದರಲ್ಲಿ ಶಂಬೂಕನ ಪ್ರಸಂಗವೂ, ಮೂರನೆಯದರಲ್ಲಿ ಲವಕುಶರ ಕಾಳಗವೂ, ನಾಲ್ಕನೆಯದರಲ್ಲಿ ಸಂಪೂರ್ಣ ರಾಮಾಯಣದ ಕಥೆಯೂ ನಿರೂಪಣೆಗೊಂಡಿವೆ. ಕೊನೆಯ ಭಾಗ ಗ್ರಂಥದ ಅರ್ಧದಷ್ಟಿದೆ. ಶಿಷ್ಟರಾಮಾಯಣ ಪರಂಪರೆಯಿಂದ ಭಿನ್ನವಾದ ಜನಪದ ಪರಂಪರೆ ಇಲ್ಲಿ ಹರಿಯುತ್ತಾದ್ದರಿಂದ ಇದಕ್ಕೆ ಮಹತ್ವದ ಸ್ಥಾನವುಂಟು. ಇಲ್ಲಿಯ ನಾಲ್ಕು ಭಾಗಗಳೂ ಪ್ರತ್ಯೇಕ ಘಟಕಗಳಿದ್ದಂತೆ ತೋರುವುದರಿಂದ ಇದನ್ನು ಮಹಾಕಾವ್ಯವೆಂದು ಕರೆಯುವುದು ಸರಿಯೆ ಎನಿಸುತ್ತದೆ. ಮಹಾಕಾವ್ಯವೊಂದು ಲಾವಣಿಗಳ ಚಕ್ರ ಅಥವಾ ಸರಣಿ ನಿಜ. ಆದರೆ ಆ ಸರಣಿ ಅಥವಾ ಲಾವಣಿಯಲ್ಲಿ ಅನುಸ್ಯೂತತೆ, ಹೊಂದಾಣಿಕೆ, ಅಪ್ರತ್ಯೇಕತೆ ಇರುತ್ತವೆ. ಆದರೂ ಇವುಗಳನ್ನು ಮಹಾಕಾವ್ಯಗಳ ಕೆಳಗೆ ಪರಿಶೀಲಿಸಿದೆ.

ಈ ಖಂಡಕಾವ್ಯಗಳನ್ನು ವಿಶಿಷ್ಟ ಸಂದರ್ಭಗಳಲ್ಲಿ, ಗೊತ್ತಾದ ವೃತ್ತಿಗಾಯಕರು ಹಾಡುತ್ತಾರೆನ್ನುವುದು ಗಮನೀಯವಾದ ವಿಚಾರ. ಮಂಟೇಸ್ವಾಮಿ ಕಾವ್ಯವನ್ನು ನೀಲಿಗಾರರು ಹಾಡಿದರೆ, ಮಾದೇಶ್ವರನ ಕಾವ್ಯವನ್ನು ಕಂಸಾಳೆಯವರು ಹಾಡುತ್ತಾರೆ. ಇವು ದೀರ್ಘವಾದ ಕಾವ್ಯಗಳಾದ್ದರಿಂದ, ಹಾಡುಗಾರಿಕೆಯೇ ವೃತ್ತಿಯಾಗುಳ್ಳ ಕೆಲವರು ಮಾತ್ರ ಸತತಾಭ್ಯಾಸದ ಮೂಲಕ ಅವನ್ನು ನೆನಪಿನಲ್ಲಿಟ್ಟುಕೊಳ್ಳಬಹುದೇ ಹೊರತು ಹವ್ಯಾಸಿಗಳಿಗಾಗಲೀ ಸಾಮಾನ್ಯರಿಗಾಗಲೀ ಅದು ಸಾಧ್ಯವಾಗದು. ಈ ಕಾವ್ಯಗಳ ಹಾಡುಗಾರಿಕೆಗೆ ಮೇಳ ಮುಖ್ಯ. ವಿವಿಧ ಧಾಟಿಗಳಿಂದ ಕೂಡಿದ ಛಂದೋವೈವಿಧ್ಯ ಈ ಕಾವ್ಯಗಳ ಲಕ್ಷಣಗಳಲ್ಲೊಂದು. ಶಿಷ್ಟಕಾವ್ಯಗಳಂತೆ ಪ್ರಾರಂಭದಲ್ಲಿ ದೇವಸ್ತುತಿಯ ಪದ್ಯಗಳು ಬರುತ್ತವೆ. ಪ್ರಸಂಗೋಪಾಖ್ಯಾನಗಳ ಸರಣಿಯಿಂದ ಕತೆ ಮುಂದೆ ಮುಂದೆ ಸಾಗುತ್ತದೆ. ಇವುಗಳಲ್ಲಿ ಹಲವು ಒಬ್ಬ ಕವಿಯೇ ರಚಿಸಿದುವಿರಬೇಕು; ಅಥವಾ ಭಿನ್ನ ಕರ್ತೃಕಗಳಾಗಿದ್ದು, ಮೂಲಕಥೆಗೆ ಹೊಂದಿಕೊಳ್ಳುವಂತೆ ಪೋಣಿಸಿಕೊಂಡು, ದೀರ್ಘವಾಗಿ ಬೆಳೆದುವಿರಬೇಕು. ಜನಪದ ರಾಮಾಯಣವಂತೂ ಇಂಥದೇ. ಇದು ಯಾವುದೋ ಒಂದು ಕಾಲಾವಧಿಯಲ್ಲಿ ಇಂದಿನ ರೂಪವನ್ನು ತಳೆದುದಲ್ಲ. ಆಗಾಗ್ಗೆ ಅಷ್ಟಿಷ್ಟು ಸೇರಿಕೊಂಡು, ಹತ್ತಾರು ನೂರಾರು ವರ್ಷಗಳಲ್ಲಿ ಪೂರ್ಣರೂಪವನ್ನು ಪಡೆದಂಥದು. ಹೊಸ ಸನ್ನಿವೇಶ ನೂತನ ಘಟನೆ ನವಪ್ರಸಂಗಗಳು ಸೇರಿಕೊಂಡಂತೆ ಹೊಸ ಪಾತ್ರಗಳೂ ಕೂಡಿಕೊಳ್ಳಬಹುದು. ಲಾವಣಿ ಕಥನಗೀತಗಳಲ್ಲಿ ಪೂರ್ಣಪಾತ್ರ ವಿಕಾಸಕ್ಕೆಡೆಯಿಲ್ಲ; ಒಂದು ವ್ಯಕ್ತಿಯ ಒಂದು ಮುಖ ಮಾತ್ರ ಸ್ಪಷ್ಟಗೋಚರವಾಗುತ್ತದೆ. ಖಂಡಕಾವ್ಯಗಳ ನಾಯಕ ನಾಯಿಕೆಯರ ದರ್ಶನವೂ ಸ್ಪಷ್ಟವಾಗಿ ಕಾಣುತ್ತವಲ್ಲದೆ. ಪ್ರತಿನಾಯಕ ಮೊದಲುಗೊಂಡು ಉಳಿದೆಲ್ಲ ಪಾತ್ರಗಳು ನಾಯಕನ ಪಾತ್ರಪೋಷಣೆಗೆ ತಮ್ಮತನವನ್ನು ... ಘಟಿಸುತ್ತವೆ. ಇಲ್ಲಿ ಮುಖ್ಯೇತರ ...

1 ಜನಪದ ರಾಮಾಯಣ, ಪು. xxxiii.

ವಾಗಿದ್ದು, ನಾಟಕೀಯತೆಯಿಂದ ಕಾವ್ಯಕ್ಕೆ ಕಳೆ ಕಟ್ಟುತ್ತದೆ. ನಡುನಡುವೆ ವೃತ್ತಗಂಧಿಯಂತಿರುವ ಗದ್ಯಮಾಲೆಯೂ ಇಣುಕಬಹುದು. ಗಾಯಕರು ಅದನ್ನು ಸಹ ರಾಗವಾಗಿಯೇ ಎಳೆಯುತ್ತಾರೆ. ವರ್ಣನೆಗಳಿಗೂ ಇಲ್ಲಿ ಅವಕಾಶವುಂಟು. ಒಟ್ಟಿನಲ್ಲಿ ಇವನ್ನು ಉಪಮಹಾಕಾವ್ಯ (Epic Lays)ಗಳೆಂದು ಪರ್ಯಾಯವಾಗಿ ಕರೆಯಬಹುವೆಂದು ತೋರುತ್ತದೆ.

ಊ. ಮಹಾಕಾವ್ಯ

ಕರ್ನಾಟಕದಲ್ಲಿ ಮಲೆಯ ಮಾದೇಶ್ವರ ಮತ್ತು ಮಂಟೇಸ್ವಾಮಿಯರು ಬಹು ಜನಪ್ರಿಯರಾದ ಆರಾಧ್ಯವ್ಯಕ್ತಿಗಳು. ಅವರು ಐತಿಹಾಸಿಕ ವ್ಯಕ್ತಿಗಳೂ ಅಹುದು. ಸುಮಾರು ನಾಲ್ಕೈದು ಶತಮಾನಗಳಲ್ಲಿ ಅವರು ಕನ್ನಡಿಗರ ಮಾನಸಾಬ್ಜದಲ್ಲಿ ಬೃಹತ್ತಾಗಿ, ಪುರಾಣಪುರುಷರಾಗಿ, ಅವತಾರಶಕ್ತಿಗಳಾಗಿ ವಿಕಾಸಗೊಂಡಿದ್ದಾರೆ. ಅವರ ಪಾದಯಾತ್ರೆಯಿಂದ ಸ್ಪಂದನಗೊಂಡ ಹಾಗೂ ಸ್ಫುರಣಗೊಂಡ ಇಡೀ ಕರ್ನಾಟಕ ಅವರ ಮೈಮೆಯನ್ನು ಕೊಂಡಾಡಿ, ಅವರ ಜೀವಜ್ಯೋತಿಯ ಸಂಪರ್ಕದಿಂದ, ಅವರ ಸ್ಮರಣೆಯಿಂದ ಪುನೀತವಾಗಿದೆ. ಅವರು ತುಳಿದ ನೆಲವನ್ನು ಸ್ಪರ್ಶಿಸಿದಾಗ, ಅವರನ್ನು ಕುರಿತ ಹಾಡುಗಳನ್ನು ಕೇಳಿದಾಗ ಜನ ಭಕ್ತಿಪರವಶರಾಗಿ ಕುಣಿಯುತ್ತಾರೆ: ಆಗ ಅವರ ಪ್ರತಿಭಾಸಾಮರ್ಥ್ಯ ಮಿಂಚುತ್ತದೆ, ನುಡಿಯಾಗಿ ಹರಿಯುತ್ತದೆ: ಹಳೆಯ ಹಾಡುಗಳನ್ನು ಕೇಳಿ ಹೊಸ ಹಾಡುಗಳನ್ನು ಕಟ್ಟುತ್ತಾರೆ. ನಾಟ್ಯ ಸರಸ್ವತಿಯ ಕಂಚಿನ ಪ್ರತಿಮೆಯ ನಿರ್ಮಾಣಕ್ಕೆ ನಾಗಮಂಗಲದ ಒಬ್ಬ ಓಜ ಸಾಕು; ತಂಜಾವೂರಿನ ಬೃಹದೇಶ್ವರ ದೇವಾಲಯ ರಚನೆಗೆ ಸಾವಿರಾರು ಮಂದಿ ಕುಶಲ ಶಿಲ್ಪಿಗಳು ಬೇಕು. ಅಂತೆಯೇ ಮಹದೇಶ್ವರ ಕಾವ್ಯದ ವಿಕಾಸಕ್ಕೆ ಅನೇಕ ಭಕ್ತರು, ಸಂತರು, ಗಾಯಕರು ಕಾರಣರಾಗಿದ್ದಾರೆ: ಬಹು ಜನರ ಹೃದಯಸ್ಪಂದನ ಇಲ್ಲಿ ಮಾರುಲಿದಿದೆ. ಆಸ್ತಿಕರ ಮನೋಧರ್ಮ ಮತ್ತು ಭಾವಾಲೋಚನೆಗಳು ಇಲ್ಲಿ ಹೊಸಲಾಗಿ ಹರಿದಿವೆ: ಮೂಲೆಮೂಲೆಯಲ್ಲಿ ರೂಪಿಕ್ಕಿದ ಗೀತೆಗಳು, ಐತಿಹ್ಯಗಳು, ಪುರಾಣಪ್ರಸಂಗಗಳು, ಕಥೆಗಳು ಈ ಕಾವ್ಯಶರೀರದಲ್ಲಿ ಸಾಯುಜ್ಯ ಪಡೆದಿವೆ.

ಜೀ.ಶಂ.ಪ ಅವರು ಕತೆಯ ರಚನೆಯನ್ನು ವಿಶ್ಲೇಷಿಸಿ, ತಾಳುಗತೆ, ಜುಂಜೇಗೌಡನ ಸಾಲು, ಸರಗೂರಪ್ಪನ ಸಾಲು, ಶಂಕಮ್ಮನ ಸಾಲು, ಬೇವಿನಕಾಳಿಯ ಸಾಲು, ಇಕ್ಕೇರಿ ದೇವಮ್ಮನ ಸಾಲು, ಕ್ರಪಣ ದೊರೆಯ ಸಾಲು—ಎಂದು ಏಳು ಕವಲುಗಳನ್ನು ಗುರುತಿಸಿದ್ದಾರೆ. ಒಂದು ಸಾವಿರ ಪುಟದ ಮಹಾಕಾವ್ಯವನ್ನು ಸಂಪಾದಿಸಿ, ಪ್ರಕಟಿಸಿರುವ ಪಿ. ಕೆ. ರಾಜಶೇಖರ ಅವರ ಪ್ರಕಾರ ಹನ್ನೆರಡು ಸಾಲುಗಳಿವೆ. ಬೇರೆ ಬೇರೆ ಸಂದರ್ಭಗಳಲ್ಲಿ, ವಿವಿಧ ರೀತಿಗಳಲ್ಲಿ, ಭಿನ್ನಭಿನ್ನ ರಚಕರಿಂದ ಸೃಷ್ಟಿಯಾದ ಲಾವಣಿ ಸಮುದಾಯಗಳನ್ನಿದು ಒಳಗೊಂಡಿರುವುದರಿಂದ ಏಕಸೂತ್ರತೆ ಹಾಗೂ ಹೊಂದಾಣಿಕೆ ಕಷ್ಟವಾಗುತ್ತದೆ. ಅದಕ್ಕೆ ಮುಖ್ಯ ಕಾರಣ ಆ ಕಥೆ ಒಂದು ಮುಖವಾದುದಲ್ಲ: ಏಳು ಮುಖವಾದದ್ದು. ಅದರ ವಿಸ್ತಾರ ಇನ್ನೊಂದು ಪ್ರಬಲ ಕಾರಣ. ವೃತ್ತಿ ಗಾಯಕರು ಕೆಲವು ಆಕರ್ಷಕ

ಭಾಗಗಳನ್ನು ಮೇಲಿಂದ ಮೇಲೆ ಹಾಡಿ ಜನಪ್ರಿಯಗೊಳಿಸಿರುವುದರಿಂದ ಕೆಲವು ಭಾಗಗಳು ದುರ್ಬಲವಾಗಿ ಕ್ರಮೇಣ ಮರೆತುಹೋಗಿರುವುವು.[1]" ಇಂಥ ಮಹತ್ಕೃತಿಯನ್ನು ಲಾವಣಿ ಎಂದೋ ಕಥನಗೀತೆ ಎಂದೋ ಕರೆಯುವುದು ಅನುಚಿತ. ಒಂದು ಜನಾಂಗದ ಸಂಸ್ಕೃತಿಯನ್ನು, ಅವರ ಮಾನಸಿಕ ಇತಿಹಾಸವನ್ನು ಪ್ರತಿಬಿಂಬಿಸುವ, ನೂರಾರು ವರ್ಷ ಶತಮಾನಗಳಿಂದ ಒಂದೇ ಸಮನೆ ಜನಜೀವನವನ್ನು ಹೆಣೆದುಕೊಳ್ಳುತ್ತಿರುವ, ಅವರ ಪ್ರೇಯಸ್ಸು ಶ್ರೇಯಸ್ಸುಗಳಿಗೆ ಕಾರಣವಾಗಿರುವ, ಅವರಿಗೆ ಮಾನಸಿಕ ಹಾಗೂ ಆಧ್ಯಾತ್ಮಿಕ ತೃಪ್ತಿಗಳನ್ನು ಕರುಣಿಸುತ್ತಿರುವ, ಅವರ ಗೊತ್ತು ಗುರಿಗಳಿಗೆ ಬಿಂದುಬಿಂದುಗಳಿಗೆ ಅವರ ಭುಕ್ತಿ ಮುಕ್ತಿಗಳಿಗೆ ಆಸರೆಯಾಗಿರುವ, ಅವರ ಬದುಕಿಗೆ ಪ್ರೇರಣೆ ನೀಡುತ್ತಿರುವ, ತನ್ನ ಪ್ರಭಾವ ಬೀರುತ್ತಿರುವ, ವಿಸ್ತಾರ ಔನ್ನತ್ಯಗಳಲ್ಲಿ ಮಿಂಚಿನ ಕಳೆಯನ್ನು ನೆನಪಿಗೆ ತರುವ ಕೃತಿಯನ್ನು ಮಹಾಕಾವ್ಯವೆಂದೇ ಕರೆಯಬೇಕಾಗುತ್ತದೆ. ಇದನ್ನು 'ಲಾವಣಿ ಮಹಾಕಾವ್ಯ' ಎನ್ನುವವರೂ ಉಂಟು.[2]

ಮಹಾಕಾವ್ಯ ಎಂದಕೂಡಲೇ ಇಲಿಯಡ್, ಒಡಿಸ್ಸಿ, ರಾಮಾಯಣ, ಮಹಾಭಾರತ ಮೊದಲಾದ ಮಹೋನ್ನತ ಕಾವ್ಯಗಳು ನೆನಪಿಗೆ ಬರುವುದುಂಟು. ಆದರೆ ಅವು ಇಡೀ ರಾಷ್ಟ್ರಜೀವನವನ್ನೇ ಸಮಗ್ರವಾಗಿ ಪ್ರತಿಬಿಂಬಿಸುವ ಕೃತಿಗಳೆಂಬುದನ್ನು ಮರೆಯಬಾರದು. ಜತೆಗೆ ಹೋಮರ್, ವಾಲ್ಮೀಕಿ, ವ್ಯಾಸ ಮೊದಲಾದ ಮಹಾಕವಿಗಳ ಪ್ರತಿಭಾಮೂಷೆಯಲ್ಲಿ ಬೆಂದು, ಕಾಳಿಕೆಯನ್ನೆಲ್ಲ ಕಳೆದುಕೊಂಡು, ಶುದ್ಧ ಚಿನ್ನವಾಗಿ ಪರಿವರ್ತನೆಗೊಂಡ ಸುಸಂಸ್ಕೃತ ಕೃತಿಗಳೆಂಬುದನ್ನು ನೆನೆಯಬೇಕು. ಅಲ್ಲಿಯ ಕಥೋಪಕಥೆಗಳು ಮೂಲದಲ್ಲಿ ಜಾನಪದೀಯವಾದರೂ, ಕಾಲಕ್ರಮೇಣ ವಿದ್ಯಾಸಂಪನ್ನರಿಂದ ಪರಿಷ್ಕಾರಗೊಂಡು, ವ್ಯಾಸ ವಾಲ್ಮೀಕಿಯರಂಥ ಕ್ರಾಂತದರ್ಶಿಗಳ ಚಿತ್ತಶಕ್ತಿಯ ಅಭಿರುಚಿಯಿಂದ ದೇದೀಪ್ಯಮಾನವಾಗುತ್ತವೆ. ಶಿಷ್ಟ ಮಹಾಕಾವ್ಯದ ವಸ್ತು ರಾಷ್ಟ್ರೀಯ ವ್ಯಾಪ್ತಿಯುಳ್ಳದ್ದಾದರೆ, ಜಾನಪದ ಮಹಾಕಾವ್ಯದ ವಸ್ತು ಪ್ರಾದೇಶಿಕ ವ್ಯಾಪ್ತಿಯುಳ್ಳದ್ದಾಗಿರುತ್ತದೆ. ಇದು ಜನವಾಣಿಯಾದರೆ ಅದು ಪರಿಷ್ಕಾರಗೊಂಡ ಜನವಾಣಿ. ಅದು ಶಿಷ್ಟಪದದಿಂದ ಅಂಗೀಕೃತವಾದ ಮಹಾಕಾವ್ಯವಾದರೆ ಇದು ಜನಪದರಿಂದ ಸ್ವೀಕೃತವಾದ ಮಹಾಕಾವ್ಯ.

ಜನಪದ ಮಹಾಕಾವ್ಯದ ವಸ್ತು ಮಹತ್ತದ್ದಾಗಿರಬೇಕು; ನಾಯಕ ಅತ್ಯುನ್ನತನಾಗಿರಬೇಕು, ಪವಾಡ ಪುರುಷನಾಗಿರಬೇಕು; ಭಕ್ತಜನರ ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸಿ, ಉದ್ಧಾರಮಾಡುವವನಾಗಬೇಕು. ಅವನ ಮುಂದೆ ಮತ್ತಾವ ಮಹಾಶಕ್ತಿಯೂ ಪ್ರತಿಭಟಿಸಿ ನಿಲ್ಲುವಂತಿಲ್ಲ. ಅವನು ದುಷ್ಟರಿಗೆ ದುಷ್ಟ, ಶಿಷ್ಟರಿಗೆ ಶಿಷ್ಟ. ಅಧರ್ಮವನ್ನು ವಿನಾಶಗೈದು, ಧರ್ಮವನ್ನು ಸಂಸ್ಥಾಪಿಸುವುದೇ ಅವನ ಅವತಾರದ

---

1 ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು, ಜೀ. ಶಂ. ಪರಮಶಿವಯ್ಯ, (೧೯೭೩ ಪ್ರತಿ), ಪು. ೧೬೪.

2 ಮಲೆಯ ಮಾದೇಶ್ವರ: ಸಂ: ಡಿ. ಕೆ. ರಾಜಶೇಖರ, ಪು. ೧೭.

ದ್ವೇಶ. ಅವನು ತುಳಿದ ನೆಲ ಪಾವನ, ಅವನನ್ನು ನೆನೆದ ಮನ ಪವಿತ್ರ. ಅವನು ಎಲ್ಲ ಕಾಲದ ಜನರಿಗೆ ಸ್ಫೂರ್ತಿಯ ಸೆಲೆಯಾಗಬೇಕು. ಸಾಮಾನ್ಯರಿಗೆ ದ್ರೋಣ ಅಶ್ವತ್ಥಾಮ ಕೃಪಾಚಾರ್ಯ ಸಂಜಯ ವಿಭೀಷಣ ಸುಗ್ರೀವಾದಿಗಳ ಪರಿಚಯವಿಲ್ಲದಿದ್ದರೂ ಅವನು ಸದಾ ಅವರ ಹೃದಯಪದ್ಮದಲ್ಲಿರುತ್ತಾನೆ. ಜಾನಪದ ಸಾಹಿತ್ಯದಲ್ಲಿ ಇಂಥ ವ್ಯಕ್ತಿಗಳು ಹಲವರಿಲ್ಲ. ಮಾದೇಶ್ವರನ ಜತೆಗೆ ಒಬ್ಬಿಬ್ಬರು ಸಿಗಬಹುದಾದರೂ ಅವನಿಗೆ ಹೆಗಲೆಣೆಯಾಗಿ ನಿಲ್ಲುವವರಿಲ್ಲ. ಇಡೀ ಕಾವ್ಯವನ್ನೆಲ್ಲ ಅವನ ಪ್ರಕಾಶವೇ ವ್ಯಾಪಿಸುತ್ತದೆ; ಭಕ್ತರಿಗೆ ಅವನದೇ ಧ್ಯಾನ, ವಿರೋಧಿಗಳಿಗೆ ಅವನದೇ ಚಿಂತೆ. ಅವನ ವ್ಯಕ್ತಿತ್ವ ಸಮಕಾಲೀನರನ್ನು ಮಾತ್ರವಲ್ಲ ಮುಂದಿನವರನ್ನು ಬೆರಗುಗೊಳಿಸುತ್ತದೆ. ಸೃಷ್ಟಿಯನ್ನು ಕುರಿತ ಸಾಮಾನ್ಯ ಮಾನವನ ಕಲ್ಪನೆಗಳು ಇಲ್ಲಿ ವಿವರಣೆಗೊಳ್ಳುತ್ತವೆ. ಭಾರತೀಯ ಜೀವನದ ಪ್ರಧಾನ ಮೌಲ್ಯಗಳಾದ ಧರ್ಮಾರ್ಥಕಾಮಮೋಕ್ಷಗಳ ಸಾಧನಾಮಾರ್ಗ ಕಾವ್ಯದ ಗುರಿ. ಶೈಲಿ ಶುದ್ಧ ಜಾನಪದೀಯ. ಅತಿಮಾನುಷ ಘಟನೆಗಳು ಯಥೇಚ್ಛವಾಗಿ ಸಂಗಳಿಸಿವೆ. ಅಂಥ ಘಟನೆಗಳೇ ಕ್ರಿಯೆಯ ಚಾಲಕಶಕ್ತಿಯಾಗಿವೆ. "ಜನಪದ ಮಹಾಕಾವ್ಯದ ಗಾಯಕರಲ್ಲಿ ನಿತ್ಯಸಿದ್ಧ ಪದಗುಚ್ಛಗಳಿರುತ್ತವೆ. ಪುನರಾವರ್ತನೆ ಮತ್ತೊಂದು ಲಕ್ಷಣ. ಪದ್ಯಕ್ಕೆ ಮೀಸಲಾದ ಕೆಲವು ವಿಶೇಷ ಶಬ್ದಗಳು ಈ ಕೃತಿಗಳಲ್ಲಿರುತ್ತವೆ.... ಜನಪದ ಕವಿಗೆ ಹೆಚ್ಚು ಸ್ವಾತಂತ್ರ್ಯವಿರುವುದರಿಂದ ಜನತೆಯ ಮನೋಧರ್ಮಕ್ಕೆ ತಕ್ಕಂತೆ ಅವನು ಹಾಡುತ್ತಾನೆ. ಪಾಂಡಿತ್ಯಪ್ರದರ್ಶನವಿಲ್ಲದ ಇಲ್ಲಿ ಸಡಿಲತೆ ಅನಿವಾರ್ಯವಾದರೂ ಅದೇ ದೊಡ್ಡ ದೋಷವಲ್ಲ. ನಿಷ್ಕಪಟತ್ವ ಯಥಾರ್ಥತೆ ಇದರಲ್ಲಿ ಮೈದೂಡಿ ಬಂದಿರುತ್ತವೆ. ಶೈಲಿಯಲ್ಲಾಗಲಿ ವರ್ಣನೆಯಲ್ಲಾಗಲಿ ವೈವಿಧ್ಯತೆ ಇಲ್ಲದಿರಬಹುದು....ಬೆಳೆಯುವ ಈ ಕಾವ್ಯದಲ್ಲಿ ಗಾಯಕರು ತಮ್ಮ ತಮ್ಮ ಕಾಲದ ನಡೆ, ನುಡಿ, ರೀತಿ, ನೀತಿ, ಆಚಾರ, ವಿಚಾರಗಳನ್ನೆಲ್ಲ ಸೇರಿಸುತ್ತಾ ಬಂದಿರುವುದರಿಂದ ಜನಪದ ಮಹಾಕಾವ್ಯ ಆ ಜನಾಂಗದ ಪುಸ್ತಕ ಭಂಡಾರವಾಗುತ್ತದೆ."[1]

ದಂಡಿ ಭಾಮಹಾದಿ ಭಾರತೀಯ ಲಕ್ಷಣಕಾರರೂ ಎಲ್. ಆಬರ್‌ಕ್ರಾಂಬಿ, ಸಿ. ಎಮ್. ಬೌರ, ಪಾಲ್ ಮರ್ಚೆಂಟ್, ಐ. ಬಿ. ಮಯರ್ಸ್, ಇ. ಎಮ್. ಡಬ್ಲ್ಯೂ. ಟಿಲ್ಯಾರ್ಡ್ ಮೊದಲಾದ ಪಾಶ್ಚಾತ್ಯ ಲಕ್ಷಣಕಾರರೂ ಮಹಾಕಾವ್ಯದ ಲಕ್ಷಣಗಳನ್ನು ಪಟ್ಟಿಮಾಡಿದ್ದಾರೆ. ಅವುಗಳ ಪ್ರಕಾರ, ಸರ್ಗಗಳುಳ್ಳ, ಅಸಾಧಾರಣ ರೀತಿಯಲ್ಲಿ ಹುಟ್ಟಿ, ಅದ್ಭುತಕಾರ್ಯಗಳ ಮೂಲಕ ಪುರುಷಾರ್ಥಗಳನ್ನು ಸಾಧಿಸಿದ ಮಹಾಪುರುಷನನ್ನು ಕುರಿತ, ಸಮಕಾಲೀನ ರಾಷ್ಟ್ರೀಯ ಪ್ರಜ್ಞೆಯನ್ನು ಪ್ರತಿಬಿಂಬಿಸುವ, ನಾನಾ ವರ್ಣನೆಗಳಿಂದ ಕೂಡಿದ, ಸಾಲಂಕೃತವಾದ ಭಾಷೆಯನ್ನುಳ್ಳ, ನಾನಾ ರಸಗಳಿಗೆ ಆಗರವಾದ, ಪರಂಪರಾಗತವಾದ ಪುರಾಣ ಐತಿಹ್ಯಗಳನ್ನೊಳಗೊಂಡ ಸುದೀರ್ಘವಾದ ಕಥನಕಾವ್ಯವೇ ಮಹಾಕಾವ್ಯವೆಂದು ಹೇಳಬಹುದಾಗಿದೆ; ಭಾವಗೀತೆ, ಕಥೆ, ನಾಟಕ ಮೊದಲಾದ ನಾನಾ ಸಾಹಿತ್ಯ ಪ್ರಕಾರಗಳನ್ನು ತನ್ನ ಕುಕ್ಷಿಯಲ್ಲಿ ಕೂಡಿಸಿಕೊಂಡ ಬೃಹತ್ ಕಾವ್ಯ

[1] ಅದೇ, ಪು. ೧೬.

ವದು. ಸಾಹಸಾಭಿವ್ಯಕ್ತಿಗೆ ಯುದ್ಧಗಳು ಅನಿವಾರ್ಯವಲ್ಲವೆಂದು ಡಾಂಟೆಯ ಡಿವೈನ್ ಕಾಮೆಡಿ ಮತ್ತು ಮಿಲ್ಟನ್ನನ ಪ್ಯಾರಡೈಸ್ ಲಾಸ್ಟ್ ಮಹಾಕಾವ್ಯಗಳು ಸ್ಪಷ್ಟಪಡಿಸುತ್ತವೆ. ಯಾವ ಮಹಾಕಾವ್ಯವನ್ನು ತೆಗೆದುಕೊಂಡರೂ, ಅವರಲ್ಲಿ ಸರ್ವರಸಗಳಿಗೂ ಸಮಾನ ಸ್ಥಾನವಿದೆಯೆಂದು ಹೇಳುವಂತಿಲ್ಲ; ಅದು ಸಾಧ್ಯವೂ ಅಲ್ಲ. ಎಲ್ಲ ಕಾವ್ಯಗಳಲ್ಲಿ ಈ ಎಲ್ಲ ಲಕ್ಷಣಗಳನ್ನು ಸಂಪೂರ್ಣವಾಗಿ ನಿರೀಕ್ಷಿಸುವುದೂ ಕಷ್ಟವಾಗುತ್ತದೆ. ಅಷ್ಟೇ ಅಲ್ಲ, ಇಲಿಯಡ್, ಪ್ಯಾರಡೈಸ್ ಲಾಸ್ಟ್, ಡಿವೈನ್ ಕಾಮೆಡಿ, ರಾಮಾಯಣ, ಮಹಾಭಾರತಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ನಿರೂಪಣೆಗೊಂಡಿರುವ ಲಕ್ಷಣಗಳೇ ಸರಿ, ಮಹಾಕಾವ್ಯವೆನಿಸಿಕೊಳ್ಳಬೇಕಾದರೆ ಅವುಗಳಲ್ಲೊಂದೂ ಕೊರೆಯಾಗಬಾರದೆನ್ನುವುದು ಧಾರ್ಷ್ಟ್ಯದ ಮಾತಾಗುತ್ತದೆ. ಯುಗ ಹಾಗೂ ರಾಷ್ಟ್ರಪ್ರಜ್ಞೆ ಅವುಗಳಲ್ಲಿ ಸಾಂದ್ರವಾಗಿ ಕಾಣಿಸಿಕೊಳ್ಳಬೇಕೆನ್ನುವಂತಿದ್ದರೆ ಕಾಲಕಾಲಕ್ಕೆ ಆ ಲಕ್ಷಣಗಳೂ ಮಾರ್ಪಾಡಾಗಬೇಕಾದ್ದು ಸಹಜ. ಇತಿಹಾಸವೆಂದರೆ ಬಾಹ್ಯೇತಿಹಾಸವಲ್ಲ: ಮಾನವನ ಮಾನಸಿಕ ಇತಿಹಾಸ. ಒಂದು ವಸ್ತು ಅಥವಾ ಅದರ ಜೀವಂತಿಕೆಗೆ ಕಾರಣವಾದ ನಾಯಕ ಎಷ್ಟರ ಮಟ್ಟಿಗೆ ಜನಮನದಲ್ಲಿ ರೂಢಮೂಲವಾಗಿ ನೆಲಸಿದೆ, ಅಥವಾ ನೆಲಸಿದ್ದಾನೆ, ಅವನೆಂತು ಸಮಾಜವನ್ನು ವ್ಯಾಪಿಸಿಕೊಂಡಿದ್ದಾನೆ, ರೂಪಿಸುತ್ತಿದ್ದಾನೆ ಎನ್ನುವುದೂ ಮುಖ್ಯ. ಪರಿಣತ ಪ್ರಜ್ಞೆಯ ಅಭಿವ್ಯಕ್ತಿಯ ಜತೆಗೆ ಭಾಷಾಪ್ರಯೋಗದ ಸರ್ವಸಾಧ್ಯತೆಯನ್ನು ಶ್ರೇಷ್ಠ ಕಾವ್ಯದಲ್ಲಿ ಕಾಣಬೇಕೆಂಬುದು ಕೆಲವರ ಮತ. ಈ ಮತ ಸರಿಯೆ. ಇಲ್ಲಿ ಭಾಷೆ ಎಂದರೆ ಗ್ರಾಮೀಣರದೆ? ನಾಗರಿಕರದೆ? ಗ್ರಾಮೀಣರದು ಭಾಷೆಯಲ್ಲವೆ? ನಾಗರಿಕ ಭಾಷೆಗೆ ಅದೆ ತಾನೆ ಮೂಲ, ಅಂತ್ಯ. ಗ್ರಾಮೀಣ ಭಾಷೆಯ ಸೊರೆಯೂ ಮೇಲಣ ಸೂತ್ರದಲ್ಲಿ ಅಡಕಗೊಳ್ಳಬೇಕಾಗುತ್ತದೆ. ಜೀವಂತಿಕೆ ಕಾವು ಬನಿ ತಿರುಳು ಮತ್ತು ನೆಲದ ಸೊಗಡುಗಳ ದೃಷ್ಟಿಯಿಂದ ಅದು ನಾಗರಿಕ ಭಾಷೆಯನ್ನು ಮೀರಿಸುತ್ತದೆಂದೇ ಹೇಳಬೇಕಾಗಿದೆ. ಗ್ರಾಮ್ಯ ಹಾಗೂ ಅಶ್ಲೀಲ ಭಾಷೆಯನ್ನು ಬಳಸಬಾರದೆಂದು ಭಾಮಹಾದಿ ಲಕ್ಷಣಕಾರರು ಹೇಳಿದ್ದು ಸರಿ. ಅಶ್ಲೀಲ ಭಾಷೆ ಸರ್ವತ್ರ ತ್ಯಾಜ್ಯ. ಆದರೆ ಗ್ರಾಮ್ಯವೇ ಬೇರೆ ಅಶ್ಲೀಲವೇ ಬೇರೆ. ಈ ಸೂತ್ರಗಳ ಬೆಳಕಿನಲ್ಲಿ ಮಾದೇಶ್ವರನ ಕಾವ್ಯವನ್ನು ಪರಿಕಿಸಿದಾಗ, ಅದು ಸಾಮಾನ್ಯ ಜನರಿಂದ ನಿರಂತರವಾಗಿ ಸೃಷ್ಟಿಗೊಂಡ ಕೃತಿ ಎಂಬ ಕಾರಣದಿಂದ, ಪುನರಾವರ್ತನೆ ಶೈಥಿಲ್ಯ ಮೊದಲಾದ ಕೆಲವು ದೋಷಗಳನ್ನು ಮರೆಯುವ ಪಕ್ಷಕ್ಕೆ—ಮರೆಯಲೇಬೇಕು—ಅದು ಜನಪದ ಮಹಾಕಾವ್ಯವೆಂಬ ಬಿರುದಿಗೆ ಭಾಜನವಾಗುವಂಥ ಯೋಗ್ಯತೆಯನ್ನು ಪಡೆದಿದೆ ಎಂದೇ ಹೇಳಬೇಕು.

ಮಾದೇಶ್ವರನ ಸನಿಹಕ್ಕೆ ಬರುವ ಮತ್ತೊಬ್ಬ ವ್ಯಕ್ತಿ ಧರೆಗೆ ದೊಡ್ಡವರಾದ ಮಂಟೇಸ್ವಾಮಿ. ನಾಲ್ಕು ಸಾಲು[1]ಗಳುಳ್ಳ ಈ ಕಾವ್ಯವೂ "ಅದ್ಭುತ ಕಥೆಗಳ ಚಿತ್ರಶಾಲೆ."[2]

1 ಧರೆಗೆ ದೊಡ್ಡವರ ಸಾಲು, ಸಿದ್ದಪ್ಪಾಜಿ ಸಾಲು, ರಾಚಪ್ಪಾಜಿ ಸಾಲು, ಚಿಕ್ಕಲ್ಲೂರು ಸಾಲು.

2 ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು, ಪು. ೨೯೮.

ಇಲ್ಲಿಯೂ ಪವಾಡ ಮಹಿಮೆಗಳು ಅಧಿಕ ಸಂಖ್ಯೆಯಲ್ಲಿ ಇಡಿಕಿರಿದಿವೆ. ಆದರೂ ಅವು ಕಥಾನಾಯಕರ ಅಥವಾ ಇತರ ಪಾತ್ರಗಳ ವ್ಯಕ್ತಿತ್ವವನ್ನು ಮರೆಮಾಡುವುದಿಲ್ಲ, ಅಥವಾ ಸೀಮಿತಗೊಳಿಸುವುದಿಲ್ಲ. "ಅರ್ಥಗರ್ಭಿತವಾದ, ಸ್ವಾರಸ್ಯಪೂರ್ಣವಾದ ರಮ್ಯಾದ್ಭುತ ವಾದ ವರ್ಣನೆಗಳಿಂದ, ಉನ್ನತ ವ್ಯಕ್ತಿತ್ವದಿಂದ ಶೋಭಿಸುವ ಪಾತ್ರಗಳಿಂದ, ರೋಮಾಂ ಚನವನ್ನು ತರುವ ಸನ್ನಿವೇಶಗಳಿಂದ ಮಂಟೆಸ್ವಾಮಿಯ ಕಾವ್ಯ ನಮ್ಮ ಜನಪದಕಾವ್ಯ ಗಳ ಸಾಲಿನಲ್ಲಿ ಒಂದು ಅಪ್ರತಿಮ ಕಲಾಕೃತಿಯಾಗಿದೆ. ಅದರ ಯಾವ ಭಾಗವನ್ನು ಸ್ಪರ್ಶಿಸಿದರೂ ಅಲ್ಲಿ ಭವ್ಯತೆಯ ದರ್ಶನವಾಗುತ್ತದೆ, ಅದರ ಹಾಸುಬೀಸು ನಮ್ಮನ್ನು ಮೂಕಗೊಳಿಸುತ್ತದೆ.[1]" ಮಂಟೇಸ್ವಾಮಿ ಕಥೆಯಲ್ಲಿ ಮಹಾಕಾವ್ಯದೆತ್ತರಕ್ಕೇರುವ ಸುಪ್ತಶಕ್ತಿಯಿದೆ. ಸದ್ಯಕ್ಕೆ ಮಾದೇಶ್ವರ ಕಾವ್ಯದ ಬೀಸುಬಿತ್ತರಗಳಿಲ್ಲದ್ದರಿಂದ ಅದಕ್ಕೆ ಸರಿಸಮವಾಗಿ ನಿಲ್ಲಿಸುವುದು ಕಷ್ಟವಾಗುತ್ತದೆ.[2]

ರಾಮಾಯಣ ಭಾರತಾದಿ ಪುರಾಣೇತಿಹಾಸಗಳಿಗೆ ಸಂಬಂಧಿಸಿದ ಜಾನಪದ ದೀರ್ಘ ಕಾವ್ಯಗಳನ್ನು ಈ ಗುಂಪಿನಲ್ಲಿಯೇ ಸೇರಿಸಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅವು ಮೂಲತಃ ಜಾನಪದ ಕಾವ್ಯಗಳೇ ಸರಿ. ಅವು ಶಿಷ್ಟರಿಂದ ಸಂಭಾವಿತವಾಗಿ, ಅದಕ್ಕೊಂದು ಕಟ್ಟುನಿಟ್ಟು ಏರ್ಪಟ್ಟು, ಮಹಾಕಾವ್ಯಗಳೆಂಬ ಬಿರುದಿಗೆ ಪಾತ್ರವಾದ ನಂತರವೂ, ಜಾನಪದಸಂಪ್ರದಾಯ ಸ್ಥಗಿತಗೊಳ್ಳಲಿಲ್ಲ. ಶಿಷ್ಟ ಹಾಗೂ ಜಾನಪದ ಸಂಪ್ರ ದಾಯಗಳು ಸಮಾನಾಂತರವಾಗಿ, ಕೆಲವೊಮ್ಮೆ ಪರಸ್ಪರ ಪ್ರಭಾವಕಾರಿಗಳಾಗಿ ಬೆಳೆಯ ತೊಡಗಿದುವು. ಜಾನಪದ ಪ್ರತಿಭೆಯ ವಿವಿಧ ಮುಖಗಳನ್ನು ಕಾಣಬೇಕಾದರೆ ಆ ಕಡೆಗೆ ಗಮನ ಹರಿಯಬೇಕು. ಪೌರಾಣಿಕ ಕಥೆಗಳು ಎಂದೋ ನಡೆದು ಮುಗಿದುಹೋದುವಲ್ಲ. ಆ ಕಥೆ ಇಂದಿಗೂ ನಡೆಯುತ್ತಿದೆ; ಮುಂದೆಯೂ ನಡೆಯುತ್ತದೆ. ಅಷ್ಟೇ ಅಲ್ಲ, ಅದು ನಿರಂತರವಾಗಿ ಬೆಳೆಯುವ ಕಥೆ. ಅಲ್ಲಿ ಬರುವ ಪಾತ್ರಗಳು ಯಾವುದೋ ಯುಗಕ್ಕೆ ಸೇರಿ ದವರಲ್ಲ. ಯಾವುದೋ ದೇಶಕ್ಕೆ ಸೇರಿದವರಲ್ಲ; ಅವರು ತಮ್ಮ ಕಾಲದವರು, ತಮ್ಮೂರಿ ನವರು; ತಮ್ಮಂತೆಯೇ ಉಡುವವರು, ಉಂಬುವವರು, ನಡೆಯುವವರು, ನುಡಿಯುವವರು; ಅವರೂ ಕಾಲ ಪರಿಸರಗಳಿಗೆ ತಕ್ಕಂತೆ ವಿಕಾಸ ಹೊಂದುವವರು. ಅವು ಹೇಗೆ ಬೆಳೆಯುತ್ತ ವೆನ್ನುವುದಕ್ಕೆ ಒಂದೆರಡು ಉದಾಹರಣೆಗಳನ್ನು ನೀಡಬಹುದು :

(೧) ರಾವಣ ಶಿವನಿಂದ ಕಾಣಿಕೆಯಾಗಿ ಒಂದು ಮಾವಿನ ಹಣ್ಣು ಪಡೆಯುತ್ತಾನೆ. ಅವನು ಹಣ್ಣು ತಿಂದು, ಓಟೆಯನ್ನು ತನ್ನ ಹೆಂಡತಿಗೆ ಕೊಡುತ್ತಾನೆ. ಅವನು ಬಸಿರಾಗಿ, ಸೀತೆಯನ್ನು ಹೆರುತ್ತಾನೆ. ಸೀತೆಯ ಜನನ ಶುಭವಲ್ಲವೆಂದು ಜೋಯಿಸರು ಹೇಳಿದ್ದ

[1] ಅದೇ, ಪು. ೩೨೨.

[2] ಈಗ ಶ್ರೀ ಮಂಟೇಸ್ವಾಮಿ ಕಾವ್ಯವನ್ನು ಡಾ. ಜೀ. ಶಂ. ಪರಮಶಿವಯ್ಯನವರು ಸಂಪಾದಿಸಿ, ಪ್ರಕಟಿಸಿದ್ದಾರೆ. ಇದರ ಗಾತ್ರ ಈಗ ೨೫೪ ಪುಟಗಳಷ್ಟಿದೆ. ಇದಕ್ಕೆ ಸೇರಿಸಬಹುದಾದ ಇನ್ನೂ ಕೆಲವು ಭಾಗಗಳಿವೆಯೆಂದು ಕೇಳಿದ್ದೇನೆ. ಅದು ಪೂರ್ಣರೂಪದಲ್ಲಿ ಮೈದುಂಬಿಕೊಂಡು ಹೊರ ಬಂದಾಗ ಮಾದೇಶ್ವರ ಕಾವ್ಯದ ಜತೆಯಲ್ಲಿ ಸಮಾನಸ್ಥಾನ ಪಡೆಯುತ್ತದೆಂದು ನಂಬಬಹುದಾಗಿದೆ.

ರಿಂದ, ಅವಳನ್ನು ಬ್ರಾಹ್ಮಣರಿಗೆ ಕಾಣಿಕೆಯಾಗಿ ಕೊಟ್ಟುಬಿಡುತ್ತಾನೆ. ಬ್ರಾಹ್ಮಣರ ಮೂಲಕ ಅವಳು ಜನಕರಾಜನನ್ನು ಸೇರುತ್ತಾಳೆ. ಹೇಗೆ ಸೇರಿದಳೆಂಬುದು ನಿರೂಪಣೆಗೊಂಡಿಲ್ಲ.

(೨) ರಾವಣ ಸೀತೆಯನ್ನಪಹರಿಸಿಕೊಂಡು ಹೋದನಂತರ, ಮಂಡೋದರಿಯನ್ನು ಪ್ರತ್ಯೇಕವಾದ ನಗರದಲ್ಲಿರಿಸುತ್ತಾನೆ. ಅವರು ಅನೇಕ ವರ್ಷಗಳ ತನಕ ಅವಳ ಕಡೆಗೆ ಗಮನಹರಿಸುವುದೇ ಇಲ್ಲ. ರಾಮಲಕ್ಷ್ಮಣರು ತಮ್ಮ ಅನ್ವೇಷಣೆಯ ಕಾಲದಲ್ಲಿ ಮಂಡೋದರಿಯ ನಗರಿಗೆ ಬರುತ್ತಾರೆ. ಅವಳಿಂದ ಸೀತೆಗೆ ಸಂಬಂಧಿಸಿದ ಸಮಾಚಾರಗಳನ್ನು ಪೂರ್ಣವಾಗಿ ಪಡೆಯುತ್ತಾರೆ. ಅಷ್ಟೇ ಅಲ್ಲ, ರಾವಣನ ಬಲಾಬಲಗಳ ವಿಷಯ ಸಹ ಅವಳಿಂದ ಸಂಗ್ರಹಿಸುತ್ತಾರೆ.

(೩) ರಾವಣನ ನಿಧನಾನಂತರ ಸೀತೆ ಎದುರಿಸಬೇಕಾದ ಪರೀಕ್ಷೆಗಳು ಮತ್ತೆಲ್ಲಿಯೂ ಕಾಣದಂಥವು. ಅವಳು ಮರಳಿನ ಮಡಕೆಯಲ್ಲಿ ನೀರು ಹೊರಬೇಕಾಗುತ್ತದೆ. ಕೃಷ್ಣ ಸರ್ಪನ ಸಿಂಬಿ ಇಟ್ಟುಕೊಂಡು, ಒಂದರಿಯಲ್ಲಿ ನೀರು ತರಬೇಕಾಗುತ್ತದೆ. ಮುಡಿಗೆ ಮಲ್ಲಿಗೆ ಮುಡಿದು, ಕೈಯಲ್ಲಿ ಎಳದಳಿರು ಹಿಡಿದುಕೊಂಡು, ಬೆಂಕಿಯಲ್ಲಿ ನಿಲ್ಲಬೇಕು. ನಿಂತಾಗ ಹೊತಳಿರು ಸೀರೆಗಳು ಸುಡಬಾರದು. ಈ ಪರೀಕ್ಷೆಗಳು ಮುಗಿದ ನಂತರ ದಶರಥ ಪ್ರತ್ಯಕ್ಷನಾಗಿ, ಸೀತೆ ಪುನೀತೆಯೆಂದು ಘೋಷಿಸುತ್ತಾನೆ.[1]

ಜನಪದ ರಾಮಾಯಣ ಸರಳ ರಗಳೆಯ ಧಾಟಿಯಲ್ಲಿದೆ. ಇಲ್ಲಿ ಚಿಂತನೆ ಕಡಿಮೆ; ಕಲ್ಪನೆಯೇ ಹೇರಳ. ಈ ಸನ್ನಿವೇಶ ಸಂದರ್ಭಗಳು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತವೆ. ಭಾರತ ಭಾಗವತಗಳ ಬಗ್ಗೆಯೂ ಇದೇ ಮಾತು ಹೇಳಬಹುದು. ದ್ರೌಪದಿಯನ್ನು ಕಣ್ಣು ಕಟ್ಟಿ ಕಾಡಿಗೆ ಅಟ್ಟಿದ ಕತೆ, ಕರ್ಣಜನನ ವೃತ್ತಾಂತ, ಭೀಮಾರ್ಜುನರ ಕಾಳಗ ಇವೇ ಮೊದಲಾದುವು ವ್ಯಾಸ ಕನಸಿನಲ್ಲಿಯೂ ಕಂಡರಿಯದುವು. ಪಾಂಡವರು ತಮ್ಮ ಬಾಳಿನ ಬಹುಭಾಗವನ್ನು ಒಡಿಸ್ಸದಲ್ಲಿಯೇ ಕಳೆದರೆಂದು ಅಲ್ಲಿಯ ಭಾರತ ತಿಳಿಸುತ್ತದೆ.

ಕೆಲವು ಪುರಾಣ ಕಥೆಗಳು

ಸಾಮಾನ್ಯ ಜನತೆಯ ಅದ್ಭುತ ಕಲ್ಪನಾಸಾಮರ್ಥ್ಯಕ್ಕೆ ಇವು ಸಾಕ್ಷಿಯಾಗಿ ಪುರಾಣಗಳ ಬೆಳವಣಿಗೆಯನ್ನು ತೋರಿಸುವ ಕೈಮರಗಳಾಗುತ್ತವೆ. ಜನಪದ ಸಾಹಿತ್ಯದಲ್ಲಿ ಬರುವ ನಂಜುಂಡ ಚಾಮುಂಡಿಯರ ಪ್ರಣಯ ಪ್ರಸಂಗವಂತು ಬಹು ರಸವಂತಿಕೆಯಿಂದ ಕೂಡಿದ್ದು. ಚೆಲುವರಾಯಸ್ವಾಮಿ ವರನಂದಿ ಕಲ್ಯಾಣವಂತು ಅದ್ಭುತ ರಮ್ಯ ಕಥೆ. ನಾಗರಿಕರನ್ನು ಕಾಡುವ ಜಾತಿಸೂತಕ ಸಾಮಾನ್ಯರಿಗಂಟಿಕೊಂಡಿಲ್ಲವೆಂಬುದಕ್ಕೆ ಈ ಎರಡು ಕಥೆಗಳೇ ಸಾಕ್ಷಿ. ಕುರಿ ಕೋಳಿಗಳನ್ನು ತಿನ್ನುವ ಚಾಮಾಯಿಗೆ ಜಂಗಮ

1 ವಿವರಗಳಿಗೆ ರಾಗೌ, ರಾಜಶೇಖರ ಮತ್ತು ಎಸ್. ಬಸವಯ್ಯ ಅವರು ಸಂಪಾದಿಸಿರುವ 'ಜನಪದ ರಾಮಾಯಣ'ದ ಪ್ರಸ್ತಾವನೆ ನೋಡಿ.

ನಂಜುಂಡ ಜೋತುಬೀಳುತ್ತಾನೆ. ನಂಜುಂಡನನ್ನು ಮತ್ತೆ ಸೇರಿಸಿಕೊಳ್ಳಬೇಕಾದರೆ ಪಾರ್ವತಿ ನೆಂಟರು ಬರಲಿ ಬರದಿರಲಿ, ಸಮಾಜ ನಾನಾರೀತಿಯಿಂದ ಬೆದರಿಸಲಿ ಬಿಡಲಿ, ಯಾವುದಕ್ಕೂ ಜಗ್ಗದೆ ಅವನಿಗೆ ಶುದ್ಧಿಮಾಡಿಸುತ್ತಾಳೆ, ನಿಜ. ಆದರೆ ನಂಜುಂಡ ಮೇಲಿಂದಮೇಲೆ ಚಾಮಾಯಿಯ ಬಳಿ ಹೋಗುವುದನ್ನು ಬಿಡ. ಕುಡುಕರ ಹೆಣ್ಣನ್ನು ಚೆಲುವರಾಯಸ್ವಾಮಿ ಮದುವೆಯಾಗುತ್ತಾನೆ. ತನ್ನ ತಾಯನ್ನೇ ಸಾರಥಿಯನ್ನಾಗಿ ಮಾಡಿಕೊಂಡು ಶಶಿರೇಖೆಯನ್ನು ಹಾರಿಸಿಕೊಂಡು ಬರುತ್ತಾನೆಂಬ ಶಶಿರೇಖಾ ಪರಿಣಯದ ಕಥೆ ಶುದ್ಧಾಂಗವಾಗಿ ಜಾನಪದ ಕಲ್ಪನೆಯಲ್ಲಿ ಅರಳಿದ್ದು.[1] ಇಂಥವನ್ನೆಲ್ಲ ಒಂದು ಕಡೆ ಸಂಗ್ರಹಿಸಿದ್ದಾದರೆ ಭೂಮಿಯನ್ನು ಹೊತ್ತಿರುವ ಆದಿಶೇಷನ ಹೆಡೆ ಕುಸಿಯಬಹುದು, ಕಮಠನ ಬೆನ್ನು ಊನವಾಗಬಹುದು.

ಮದುವೆಯ ಕಾಲದಲ್ಲಿ ಒಸಗೆಯ ಕಾಲದಲ್ಲಿ ಹಬ್ಬಹರಿದಿನಗಳಲ್ಲಿ ಕುಟ್ಟುವಾಗ ಬೀಸುವಾಗ ನಾಟಿ ಹಾಕುವಾಗ ಹೆಂಗಸರು ಗಂಡಸರು ಗಂಟೆಗಟ್ಟಲೆ ಈ ಕಥೆಗಳನ್ನು ಹಾಡುತ್ತಾರೆ. ಇವು ಅವರ ಜೀವನದಲ್ಲಿ ಅದನ್ಯವಾದ ಪ್ರಭಾವವನ್ನು ಬೀರಿವೆ. ಅವರ ಅಂತಸ್ಸತ್ವಕ್ಕೆ ಸಾಕ್ಷಿಗಳಾಗಿ ಅವು ಇನ್ನೂ ಜೀವಂತವಾಗುಳಿದಿವೆ. ಇವುಗಳನ್ನು ಜನಪದ ಪುರಾಣಗೀತೆಗಳೆಂದು ಕರೆಯಬಹುದಾದರೂ ನೀಳ್ಗವನಗಳ ಸಾಲಿನಲ್ಲಿ ಸೇರ್ಪಡೆಯಾಗ ಬಹುದಾದಂಥವು.

೫. ವೃತ್ತಿಗಾಯಕರು

ಮೇಲೆ ವಿವರಿಸಿರುವ ನಾಲ್ಕು ಪ್ರಕಾರದ ಕೃತಿಗಳನ್ನು ರಚಿಸಿದ (ಕೆಲವರನ್ನು ಬಿಟ್ಟರೆ) ಕೃತಿಕಾರರು ಅಜ್ಞಾತವಾಗಿಯೇ ಉಳಿದಿದ್ದಾರೆ. ಅವರು ಕಾವ್ಯ ರಚಿಸಿದ್ದು ಆತ್ಮಸುಖ ಕ್ಕಾಗಿಯೇ ಹೊರತು, ಪರರ ಉದ್ಧಾರಕ್ಕಲ್ಲ ಅಥವಾ ಪ್ರಸಿದ್ಧಿಗಲ್ಲ. ಕರ್ತೃತ್ವದ ಅನಾಮಧೇಯತೆಯೇ ಜನಪದ ಸಾಹಿತ್ಯದ ಹೆಗ್ಗುಣ ತಾನೇ. ನೂರಾರು ವರ್ಷಗಳಿಂದ ಇವನ್ನುಳಿಸಿ ಬೆಳೆಸಿಕೊಂಡು ಬಂದಿರುವ ಗಾಯಕರ ಹೆಸರುಗಳೂ ಪತ್ತೆಯಿಲ್ಲ. ಆದರೆ ಆ ಗಾಯಕರ ಸಂಪ್ರದಾಯಗಳು ಮಾತ್ರ ಅಳಿಸಿಹೋಗಿಲ್ಲ. ಜನಪದ ಕಾವ್ಯಗಳನ್ನು ಹಾಡುವ ಜನ ಹಲವರಿದ್ದಾರೆ, ಹವ್ಯಾಸಿಗಳೂ ಇದ್ದಾರೆ; ಆದರೆ ಹಾಡುಗಾರಿಕೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡು, ತಮ್ಮ ಜೀವನಕ್ಕಾಗಿ ಅದನ್ನೇ ಅವಲಂಬಿಸುವಂಥವರು ತೀರ ಕಡಮೆ. ಈ ಗಾಯನ ಕಲೆ ಅವರಿಗೆ ಗುರುಮುಖದಿಂದಲೋ ಅಥವಾ ವಂಶ ಪಾರಂಪರ್ಯವಾಗಿಯೋ ಪ್ರಾಪ್ತವಾಗುತ್ತದೆ. ಒಂದೊಂದು ಪರಂಪರೆಗೂ ನಿಗದಿಯಾದ ವೇಷಭೂಷಣಗಳುಂಟು, ವಾದ್ಯೋಪಕರಣಗಳುಂಟು.[2]

---

[1] ವಿವರಗಳಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಜನಪದ ಜೀವನ ಮತ್ತು ಪರಿಸರ' ಎಂಬ ಗ್ರಂಥದಲ್ಲಿಯ "ಜನಪದ ಸಾಹಿತ್ಯದಲ್ಲಿ ಪೌರಾಣಿಕ ಪ್ರಜ್ಞೆ ಮತ್ತು ಮೌಲ್ಯ" ಎಂಬ ಪ್ರಕರಣವನ್ನು ನೋಡಿ.

[2] ಅವರನ್ನು ವೃತ್ತಿಗಾಯಕರೆಂದು ಕರೆದು, ಅವರ ವಿವಿಧ ಸಂಪ್ರದಾಯಗಳನ್ನು ಮೊದಲು ಸ್ಪಷ್ಟವಾಗಿ ಗುರುತಿಸಿದವರು ಡಾ. ಜೀ. ಶಂ. ಪರಮಶಿವಯ್ಯನವರು. ಈ ಹಿಂದೆ ಗೋವರ್,

ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಈ ವೃತ್ತಿಗಾಯಕರ ಪರಂಪರೆಗಳನ್ನು ಕಾಣಬಹುದು. ಅವರು ತಾವೇ ರಚಿಸಿದ ಗೀತೆಗಳನ್ನು ಹಾಡಬಹುದು. ಅಥವಾ ಬೇರೆಯವರ ಕೃತಿಗಳನ್ನು ವಾಚಿಸಬಹುದು. ಡೆನ್ಮಾರ್ಕಿನಲ್ಲಿ ಇಂಥ ಗಾಯಕರಿಗೆ ಉನ್ನತ ಮಟ್ಟದ ಗೌರವ ಪ್ರಶಸ್ತಿಗಳು ಲಭಿಸುತ್ತಿದ್ದುದುಂಟು. ರಾಷ್ಟ್ರಮಟ್ಟದ ಸಮಾರಂಭಗಳಲ್ಲಿ ಇವರಿಗೂ ಅವಕಾಶ ಸಿಗುತ್ತಿತ್ತು. ಸಂತೆ ಜಾತ್ರೆಗಳಲ್ಲಿ ಊರುಗಳ ಚೌಕಗಳಲ್ಲಿ ಹಬ್ಬಹರಿದಿನಗಳಲ್ಲಿ ಅವರ ಅಬ್ಬರವೇ ಅಬ್ಬರ. ಅವರಿಲ್ಲದ ಯಾವ ಉತ್ಸವವೂ ಕಳೆಗಟ್ಟುತ್ತಿರಲಿಲ್ಲ. ಇಂಗ್ಲೆಂಡಿನಲ್ಲಿ ಲಘುಲಾವಣಿಗಳು ಹುಚ್ಚಾಬಟ್ಟೆ ಪ್ರಚಾರಕ್ಕೆ ಬಂದು, ಹಳೆಯ ಲಾವಣಿಗಳಿಂದ ಮನರಂಜನೆಯ ಜತೆಗೆ ದೊರೆಯುತ್ತಿದ್ದ ಆತ್ಮಕಲ್ಯಾಣಾಂಶ ಮರೆಯಾದ ನಂತರ, ಗಾಯಕರಿಗೆ ಸಮಾಜದಲ್ಲಿ ಮೊದಮೊದಲು ಸಿಗುತ್ತಿದ್ದ ಸ್ಥಾನಮಾನಗಳು ಕುಗ್ಗಿದುವು. ಆ ದುಸ್ಥಿತಿಗೆ ಸ್ವಯಂಕೃತಾಪರಾಧ ಕಾರಣವಾದಂತೆ ಶಿಷ್ಟಕವಿಗಣದ ಅಪಪ್ರಚಾರವೂ ನಿಮಿತ್ತವಾಗಿರಬೇಕು. ಹದಿನಾರನೆಯ ಶತಮಾನದ ಕೊನೆಕೊನೆಗೆ ಅವರು ಭಿಕಾರಿಗಳೆಂದು, ಅಲೆಮಾರಿಗಳೆಂದು ಸಮಾಜದ ಅಣಕಕ್ಕೆ ಗುರಿಯಾದದ್ದುಂಟು.

ಭರತಖಂಡದಲ್ಲಿ ರಾಜಸ್ಥಾನದ ಬೋಪರು, ಪಂಜಾಬಿನ ಭಟ್ಟರು ಮತ್ತು ಢಾದಿಗಳು, ಒರಿಸ್ಸಾದ ಯೋಗಿಗಳು, ಬಂಗಾಳದ ಬಾಉಲ್ಲರು ಕಥಕರು, ವಾಚಕರು, ಕಬಿವಾಲರು, ಅಸ್ಸಾಮಿನ ಬರಾಗಿಗಳು, ಆಂಧ್ರಪ್ರದೇಶದ ಹೆಳವರು, ದೊಂಬಿದಾಸರು ಮೊದಲಾದವರು[1] ಜನಪದ ಕಥನಕಾವ್ಯಗಳ ಹುಲುಸಿಗೂ ವ್ಯಾಪಕತೆಗೂ ಕಾರಣರಾಗಿದ್ದಾರೆ. ಕರ್ನಾಟಕದಲ್ಲಿ ಕಳೆದ ಶತಮಾನದಿಂದಲೂ ವೃತ್ತಿಗಾಯಕರಿದ್ದರೆನ್ನುವುದಕ್ಕೆ ಚಾರ್ಲ್ಸ್ ಇ. ಗೋವರ್ ಅವರ 'The Folk Songs of Southern India' ಹಾಗೂ ಜೆ. ಎಫ್. ಫ್ಲೀಟರು 'ಇಂಡಿಯನ್ ಆಂಟಿಕ್ವೆರಿ'ಯಲ್ಲಿ ಪ್ರಕಟಿಸಿದ ಲೇಖನಗಳಲ್ಲಿ ಬರುವ ಉಲ್ಲೇಖಗಳೇ ಸಾಕ್ಷಿಯಾಗಿವೆ. ದಾಸ ಎಂಬ ಹೆಸರಿನ ಗಾಯಕರು ಬಹು ಸುಲಭವಾಗಿ ಜನಸಂಪದಣೆಯನ್ನು ಆಕರ್ಷಿಸುತ್ತಿದ್ದರೆಂಬ ವಿಷಯ ಅವುಗಳಲ್ಲಿ ಉಕ್ತಗೊಂಡಿದೆ. 'ಕನ್ನಡನಾಡಿನ ಲಾವಣಿ ಸಾಂಗತ್ಯ' ಎಂಬ ಗ್ರಂಥದಲ್ಲಿಯೂ ಮಾಸ್ತಿಯವರು ಆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅಲ್ಲಿಂದೀಚೆಗೆ ಸಾಕಷ್ಟು ಅಧ್ಯಯನ ಸಂಶೋಧನೆ ಕ್ಷೇತ್ರಕಾರ್ಯಗಳು ನಡೆದು ವೃತ್ತಿಗಾಯಕರನ್ನು ಕುರಿತ ಸಾಹಿತ್ಯ ಈಗಾಗಲೇ ಪ್ರಕಟಗೊಂಡಿದೆ.

ದಕ್ಷಿಣ ಕರ್ನಾಟಕದ ವೃತ್ತಿಗಾಯಕರನ್ನು ಸ್ಥೂಲವಾಗಿ ಧಾರ್ಮಿಕ ಮತ್ತು ಲೌಕಿಕ ಕಥೋಪಜೀವಿಗಳೆಂದು[2] ಎರಡು ಗುಂಪುಗಳಾಗಿ ವಿಂಗಡಿಸುವುದುಂಟು. ಧಾರ್ಮಿಕ ವೃತ್ತಿ ಸಿಂಪಿ ಲಿಂಗಣ್ಣ, ಧೂಲಾ, ಅರ್ಚಕ ರಂಗ

ಫ್ಲೀಟ್, ಮಾಸ್ತಿ, ಮತಿಘಟ್ಟ ಕೃಷ್ಣಮೂರ್ತಿ, ಈ ವಿಚಾರ ಕುರಿತು ಸ್ವಾಮಿ, ಗದ್ದಗೀಮಠ, ಕರಾಕೃ ಮೊದಲಾದವರು ತಂತಮ್ಮ ಕೃತಿಗಳಲ್ಲಿ ಸೂಕ್ಷ್ಮವಾಗಿ ಸೂಚಿಸಿದ್ದರು.

1 ವಿವರಗಳಿಗೆ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು' ಗ್ರಂಥದಲ್ಲಿ ೧೨೨ರಿಂದ ೧೨೪ನೆಯ ಪುಟದವರೆಗೆ ನೋಡಿ.

2 ವಿವರಗಳಿಗೆ ಡಾ. ಜೀ.ಶಂ. ಪ. ಅವರ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಗ್ರಂಥವನ್ನು (ಪು. ೧೪೦-೧೪೯) ನೋಡಿ.

ಗಾಯಕರು ಧರ್ಮದೇವರುಗಳಿಗೆ ಸಂಬಂಧಿಸಿದ ಕಾವ್ಯಗಳನ್ನು ಹಾಡುತ್ತಾರೆ; ಎಲ್ಲರು ಎಲ್ಲ ದೇವರನ್ನು ಕುರಿತು ಹಾಡುವುದಿಲ್ಲ; ತಮ್ಮ ಸಂಪ್ರದಾಯದಲ್ಲಿ ಕುಲಕ್ರಮಾಗತ ವಾಗಿ ಬಂದಿರುವ ಆರಾಧ್ಯದೇವತೆಗಳ ಮೇಲಣ ಗೀತೆಗಳನ್ನು ಗಾನಿಸುತ್ತಾರೆ. ಆಯಾಯ ದೇವತೆಗಳ ಒಕ್ಕಲು ಜನ ಅವರ ಜೀವನೋಪಾಯಕ್ಕೆ ದಾರಿಮಾಡುತ್ತಾರೆ. ಕಂಸಾಳೆ ಯವರು ಅಥವಾ ಮಾದಯ್ಯನ ಗುಡ್ಡರು[1] ಮಾದೇಶ್ವರರನ್ನು ಕುರಿತು ಹಾಡಿದರೆ, ನೀಲಗಾರರು ಮಂಟೇಸ್ವಾಮಿಯನ್ನೂ, ಚೌಡಿಕೆಯವರು[2] ಅಥವಾ ಗೊಂದಲಿಗರು ಎಲ್ಲಮ್ಮನನ್ನೂ, ಗೊರವರು ಅಥವಾ ಗಡಬಯ್ಯಗಳು ಮೈಲಾರಲಿಂಗನನ್ನೂ, ಗಣೆ ಯವರು ಜುಂಜಪ್ಪನನ್ನೂ ಕುರಿತು ಸಂಗೀತಕೃಷಿಯಲ್ಲಿ ತೊಡಗುತ್ತಾರೆ. ಈ ಕಾವ್ಯಗಳನ್ನು ಇತರರು ಹಾಡಬಾರದು ಅಥವಾ ಕೇಳಬಾರದು ಎಂಬ ನಿಯಮವಿಲ್ಲ. ಅಷ್ಟೇ ಅಲ್ಲ, ಇವರು ಬೇರೆ ಬೇರೆ ಕಾವ್ಯಗಳನ್ನು ಸಹ ಹಾಡುವುದುಂಟು. ಕಂಸಾಳೆಯವರು ಚಲುವ ರಾಯನನ್ನೂ, ದೇವರಗುಡ್ಡರು ಬಿಳಿಗಿರಿ ರಂಗಯ್ಯ, ಮೈದುನ ರಾಮಣ್ಣ ಮೊದಲಾದವ ರನ್ನೂ ಕುರಿತು ಗಾನಸ್ತೋತ್ರ ಹೆಣಿಸುತ್ತಾರೆ.

ಲೌಕಿಕ ವೃತ್ತಿಗಾಯಕರು ಯಾವೊಂದು ನಿರ್ಬಂಧವೂ ಇಲ್ಲದೆ ಯಾವ ಮೇಳ ವನ್ನಾದರೂ ನಡಸಬಹುದು, ಯಾವ ಕಥೆಯನ್ನಾದರೂ ಕೇಳಿಸಬಹುದು. ಕರಪಾಲ ದವರು ಕಾಡಸಿದ್ಧ, ನೀಲಕಂಠರನ್ನು, ದೊಂಬಿದಾಸರು ಮತ್ತು ತೆಲುಗು ಜಂಗಮರು ಗಂಗೆಗೌರಿ ಜಗಳ, ಅಣ್ಣತಂಗಿ, ಮಾಗಡಿ ಕೆಂಪೇಗೌಡ, ಮತ್ತು ಬಾಲನಾಗಮ್ಮನನ್ನು, ಹೆಳವರು ಕರಿಬಂಟ ಮತ್ತು ಮಾಗಡಿ ಕೆಂಪೇಗೌಡರನ್ನು ಕುರಿತ ಕತೆಗಳನ್ನು, ಜೋಗಿ ಗಳು ಅರ್ಜುನನ ಜೋಗಿ ಹಾಡನ್ನು ಗೀತಿಸುತ್ತಾರೆ. ತಂಬೂರಿಯವರು ಮತ್ತು ವಚನ ಕಾರ್ತಿಯರು ಸೇರಿ ಹನ್ನೆರಡು ಬಗೆಯ ವೃತ್ತಿಗಾಯಕರ ಪರಂಪರೆಯನ್ನು ಜೀಶಂಪ ಅವರು ಗುರುತಿಸುತ್ತಾರೆ.

[1] ಹೆಚ್ಚಿನ ವಿವರಗಳಿಗೆ ಪಿ. ಕೆ. ರಾಜಶೇಖರ ಅವರ 'ಮಲೆಯ ಮಾದೇಶ್ವರ'ದ ಪ್ರಸ್ತಾವನೆ ನೋಡಿ.

[2] ನಂ. ನಾರಾಯಣ ಗೌಡರು ಸಂಪಾದಿಸಿರುವ 'ಚೌಡಿಕೆ ಕಾವ್ಯಗಳು' ಗ್ರಂಥಕ್ಕೆ, ಪಿ. ಕೆ. ರಾಜಶೇಖರ ಅವರು ಬರೆದಿರುವ ಮುನ್ನುಡಿಯಲ್ಲಿ ಇವರ ಬಗೆಗೆ ಸಾಕಷ್ಟು ವಿವರಗಳು ಸಿಗುತ್ತವೆ.

ಐತಿಹ್ಯ-ಪುರಾಣಗಳು

ಕಲಿಕೆ ಮತ್ತು ಕಲಿಸಿಕೆಗಳು ಕೇವಲ ಆಧುನಿಕಯುಗಕ್ಕೆ ಸೀಮಿತಗೊಂಡ ವ್ಯಾಪಾರಗಳಲ್ಲ. ಅವು ಪ್ರಾಚೀನಕಾಲದಿಂದಲೂ ಇದ್ದಂಥ ಸಂಗತಿಗಳಾಗಿವೆ. ಇಂದಿನ ಸಂಸ್ಕೃತಿ ಹಾಗೂ ನಾಗರಿಕತೆಗಳ ತಾಯಿಬೇರು ಆದಿಮಾನವನ ಚಿಂತನಮಂಥನ ಭಾವನೆ ಕಲ್ಪನೆ ಹಾಗೂ ಅವನ ಆಚರಣೆಗಳವರೆಗೆ ವ್ಯಾಪಿಸಿದೆಯೆನ್ನುವುದನ್ನು ಮರೆಯುವಂತಿಲ್ಲ. ಕಾಲಭೇದದಿಂದ, ಕೇವಲ ಸಾಪೇಕ್ಷತೆಯಿಂದ ಅಂದಿನ ಆದಿಮಾನವನಿಗೂ ಇಂದಿನ ನಾಗರಿಕನಿಗೂ ಭೇದ ಕಲ್ಪಿಸುತ್ತೇವೆಯೇ ಹೊರತು, ಅವನ ಬುದ್ಧಿ ಭ್ರೂಣಾವಸ್ಥೆಯಲ್ಲಿತ್ತು, ಚಿಂತನೆ ಶೈಶವಾವಸ್ಥೆಯಲ್ಲಿತ್ತು, ಕಲ್ಪನೆ ಅವಾಸ್ತವಿಕವಾಗಿತ್ತೆನ್ನುವ ಕಾರಣದಿಂದಲ್ಲ. ಅಂದು ಅವನು ಚಿಂತನೆ ಕಲ್ಪನೆಗಳಿಗೆ ಕಡಿವಾಣ ಹಾಕದೆ, ಅವುಗಳ ಸ್ವಚ್ಛಂದ ವಿಹಾರಕ್ಕೆ ಅವಕಾಶ ಕಲ್ಪಿಸಿದ್ದರಿಂದ, ಅಂದಿನ ಅವನ ಬೌದ್ಧಿಕ ಹಾಗೂ ಕಲ್ಪನಾ ಸಾಹಸಗಳಿಂದ ಆಧುನಿಕ ಮಾನವ ನಾಗರಿಕನೆಂದು ಕರೆದುಕೊಳ್ಳುವಂತಾಗಿದೆ. ಅಂದವನು ಕಲ್ಪನಾಪುಷ್ಪಕವನ್ನೇರಿ ಗಗನವಿಹಾರಿಯಾಗದಿದ್ದರೆ, ತನ್ನ ಸುತ್ತಮುತ್ತಣ ಪ್ರಾಣಿ ಹಾಗೂ ಸಸ್ಯಪ್ರಪಂಚದೊಡನೆ ಗಾಢ ಸಂಪರ್ಕವನ್ನೇರ್ಪಡಿಸಿಕೊಳ್ಳದಿದ್ದರೆ ನೈಸರ್ಗಿಕ ವ್ಯಾಪಾರಗಳನ್ನು ತನ್ನದೇ ಆದ ರೀತಿಯಲ್ಲಿ ಅರ್ಥಮಾಡಿಕೊಳ್ಳದಿದ್ದರೆ, ಅವನಿನ್ನೂ ಆದಿಮಾನವನಾಗಿಯೇ ಉಳಿಯುತ್ತಿದ್ದನೆಂದು ತೋರುತ್ತದೆ. ಕುತೂಹಲ ವೀಕ್ಷಣ ಕಲ್ಪನೆ ಚಿಂತನೆ ಪ್ರಯೋಗಶೀಲಗಳು ಮಾನವನ ಮೂಲ ಪ್ರವೃತ್ತಿಗಳು. ಇವುಗಳಿಂದಾಗಿ ಲೋಕಾನುಭವ ವಿಸ್ತಾರವಾಗುತ್ತದೆ, ಜ್ಞಾನಸಂಗ್ರಹ ಅಸೀಮವಾಗಿ ಸಾಗುತ್ತದೆ. ಸಿಂಹದ ಮರಿ ತಾಯಿಯ ರೀತಿ ನೀತಿ ವ್ಯವಹಾರಗಳನ್ನು ನೋಡುತ್ತ ಜೀವನ ವಿಧಾನವನ್ನು ಕಲಿತುಕೊಳ್ಳುತ್ತದೆ. ಆದಿಮಾನವನ ಸಂತಾನ ಸಹ ಅದೇ ರೀತಿ ತನ್ನ ಸುತ್ತಮುತ್ತಣ ವಾತಾವರಣವನ್ನು ನೋಡುತ್ತ, ಹಿರಿಯರ ನಡೆನುಡಿಗಳನ್ನು ಅನುಕರಿಸುತ್ತ, ಪ್ರಾಣಿ ಪಕ್ಷಿಗಳ ಚೇಷ್ಟೆಗಳನ್ನಣಕಿಸುತ್ತ, ಲೋಕಶಿಕ್ಷಣವನ್ನು ಪಡೆಯುತ್ತದೆ. ನಿಸರ್ಗದ ಪ್ರತಿಯೊಂದು ವಸ್ತುವೂ—ಸೂರ್ಯ ಚಂದ್ರ ನಕ್ಷತ್ರಗಳು, ಹುಲಿ ಸಿಂಹ ಚಿರತೆಗಳು, ಕಲ್ಲು ಮಣ್ಣುಗಳು, ಬೆಂಕಿ ನೀರು ಗಾಳಿಗಳು—ಅವನ ಕುತೂಹಲವನ್ನು ಕೆರಳಿಸುತ್ತವೆ. ಚಿಂತನೆಯನ್ನು ಪ್ರೇರಿಸುತ್ತವೆ, ಕಲ್ಪನೆಯನ್ನು ಜಗಿಸುತ್ತವೆ: ಅವು ಆತನಿಗೆ ಗೆಳೆಯರಾಗಿ, ಹಿತಚಿಂತಕರಾಗಿ, ಗುರುಗಳಾಗಿ, ಸ್ಫೂರ್ತಿಶಕ್ತಿಗಳಾಗಿ ತೋರಿ, ತಮ್ಮ ಹೃದಯ

ವನ್ನು ಅವನ ಮುಂದೆ ತೆರೆದಿರುತ್ತವೆ. ಆ ಹೃದಯದಲ್ಲವನು ತನ್ನ ಪ್ರತಿಬಿಂಬವನ್ನು ಕಾಣುತ್ತಾನೆ. ಅವುಗಳಿಗೂ ತನಗೂ ಅವಿಚ್ಛಿನ್ನವಾದ ಬಾಂಧವ್ಯವಿದೆಯೆಂದು ತಿಳಿಯುತ್ತಾನೆ. ಅವುಗಳ ರಹಸ್ಯವನ್ನರಿತಾಗ ಅವುಗಳ ಪ್ರಯೋಜನ ಪಡೆಯಬಹುದೆಂದು ತಿಳಿದು ಸದಾ ಅನ್ವೇಷಣಾಸಕ್ತನಾಗುತ್ತಾನೆ. ಈ ಅನ್ವೇಷಣೆಗೆ ಚಿಂತನೆ ಸಹಾಯಕವಾಗುತ್ತದೆ; ಚಿಂತನೆ ಸೋತಾಗ ಕಲ್ಪನೆ ನೆರವಿಗೆ ಬರುತ್ತದೆ. ವಿಶಾಲ ಪ್ರಪಂಚವೇ ಅವನ ಶಾಲೆ; ನಿಸರ್ಗವಸ್ತುಗಳೇ ಅವನ ಗುರುಗಳು; ಅಲ್ಲಿ ಕಲಿತದ್ದೇ ಅವನ ವಿದ್ಯೆ.

ಆಧುನಿಕಕಾಲದಲ್ಲಿ ಜ್ಞಾನಸಂಗ್ರಹ ಮತ್ತು ಜ್ಞಾನಪ್ರಸಾರಕ್ಕೆ ನಾನಾ ಮಾಧ್ಯಮಗಳಿರುವಂತೆ, ಪ್ರಾಚೀನಕಾಲದಲ್ಲಿಯೂ ಅನೇಕ ಮಾಧ್ಯಮಗಳಿರುತ್ತಿದ್ದುವು. ತಂದೆ ತಾಯಿಯರಿಂದ, ನೆರೆಹೊರೆಯವರಿಂದ, ಮತ್ತು ನಿಸರ್ಗದಿಂದ ಮಕ್ಕಳು ತಿಳಿವಳಿಕೆ ಪಡೆಯುತ್ತಿದ್ದರು. ಆಗಿನ ರೈತ ಕೃಷಿವಿಜ್ಞಾನ ಕಲಿತದ್ದು ಕಾಲೇಜಿನಲ್ಲಲ್ಲ; ತನ್ನ ತಂದೆಯಿಂದ. ಪೂರ್ವಿಕರ ನಂಬಿಕೆ, ಆಚರಣೆ, ಸಂಪ್ರದಾಯಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗುತ್ತಿದ್ದುವು. ಸ್ಮೃತಿಯಲ್ಲಿ ಸಂಗ್ರಹವಾದದ್ದು ಶ್ರುತಿಯ ಮೂಲಕ ಶ್ರೋತೃಗಳ ಬುದ್ಧಿಕೋಶಕ್ಕೆ ಹರಿದುಬರುತ್ತಿತ್ತು. ಲೋಕಸಂಪರ್ಕದಿಂದ ತನಗೊದಗಿದ ಅನುಭವಗಳನ್ನು, ಸಚರಾಚರ ವಸ್ತುಗಳನ್ನು ನೋಡಿದಾಗ ತನ್ನ ಮನಸ್ಸಿನಲ್ಲೆದ್ದ ಪ್ರತಿಕ್ರಿಯೆಗಳನ್ನು, ತಾನು ಕಂಡ ಕೌತುಕಗಳ ಬಗೆಗೆ ಮೂಡಿಸಿಕೊಂಡ ಕಲ್ಪನೆಗಳನ್ನು ಪ್ರಾಚೀನ ಮಾನವ ಪರಂಪರಾಗತವಾದ ಜನಪದ ಸಾಹಿತ್ಯ ಮತ್ತು ಕಲೆಗಳ ಮೂಲಕ, ವಿಧಿನಿಷೇಧ ಸಂಪ್ರದಾಯ ಆಚರಣೆಗಳ ಮೂಲಕ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುತ್ತ ಬಂದಿದ್ದಾನೆ. ಆ ಸಾಹಿತ್ಯ ಕಲೆಗಳೇ ಅವನ ವಿಶ್ವಕೋಶ, ಅವೇ ಅವನ ಚಾರಿತ್ರಿಕ ಹಾಗೂ ವೈಜ್ಞಾನಿಕ ನಿಧಿಗಳು. ಆಧುನಿಕ ಐತಿಹಾಸಿಕ ಹಾಗೂ ವೈಜ್ಞಾನಿಕ ಗ್ರಂಥಗಳು ಈಗಿನ ಜ್ಞಾನಾರ್ಥಿಗಳಿಗೆ ಪೋಷಕ ಸಾಮಗ್ರಿಯಾಗುವಂತೆ, ಆ ಜನಪದ ಸಾಹಿತ್ಯ ಕಲೆಗಳು ಆಗಿನವರಿಗೆ ಎಲ್ಲವಾಗಿದ್ದುವು. ವಿಜ್ಞಾನ ಚರಿತ್ರೆ ಭೂಗೋಳ ಇವು ಪ್ರತ್ಯೇಕವಾಗಿರಲಿಲ್ಲ. ಅವೆಲ್ಲ ಆ ಸಾಹಿತ್ಯಕಲೆಗಳಲ್ಲಿ ಒಂದುಗೂಡಿಕೊಂಡಿದ್ದುವು. ಸಾಗರತರಂಗ, ಚಂಡಮಾರುತ, ಸೂರ್ಯ-ಚಂದ್ರಗ್ರಹಣ, ನಕ್ಷತ್ರಪುಂಜ, ಇವೇ ಮೊದಲಾದ ನೈಸರ್ಗಿಕ ವ್ಯಾಪಾರಗಳ ಕಾರಣವನ್ನು ಪ್ರಾಚೀನ ಮಾನವ ತನ್ನದೇ ಆದ ರೀತಿಯಲ್ಲಿ ಕಲ್ಪಿಸಿಕೊಂಡು, ಇತರರಿಗೂ ಸ್ವಾರಸ್ಯವಾಗಿ ಹೇಳಿಕೊಡುತ್ತಿದ್ದನು. ಜಗತ್ತಿನ ಅತ್ಯಂತ ಪ್ರಾಚೀನ ವಿಶ್ವವಿದ್ಯಾನಿಲಯಗಳು ಪ್ರಾರಂಭವಾದಾಗ ದೇವತಾಶಾಸ್ತ್ರವೊಂದೇ ಪ್ರಮುಖ ವ್ಯಾಸಂಗ ವಿಷಯವಾಗಿತ್ತು. ಆಗಿನಕಾಲಕ್ಕೆ ವಿಜ್ಞಾನಶಾಖೆಗಳು ರೂಪಿಕ್ಕಿರಲಿಲ್ಲ. ಪುರಾಣಗಳನ್ನೇ ವಿಜ್ಞಾನ ಇತಿಹಾಸಗಳ ಸ್ಥಾನದಲ್ಲಿ ಕಲಿಸುತ್ತಿದ್ದುದುಂಟು. ಇದು ಕೇವಲ ಆರುನೂರು ವರ್ಷಗಳ ಹಿಂದಿನ ಮಾತು. ಅಂದಮೇಲೆ ಇನ್ನೂ ಹಿಂದೆ ಜನಪದಸಾಹಿತ್ಯ ಕಲೆಗಳೇ ಶಿಕ್ಷಣ ಸಾಧನವಾಗಿದ್ದುವೆಂದು ಹೇಳಬೇಕಾಗುತ್ತದೆ. ಅವುಗಳಲ್ಲಿ ಉಕ್ತವಾದ ಸಂಗತಿಗಳೆಲ್ಲ ನಿಜವೆಂದೇ ಆಗಿನವರು ನಂಬಿಕೊಂಡಿದ್ದರು; ಅವುಗಳ ಮಾದರಿಯಲ್ಲಿಯೇ ಹೊಸ ಸಾಹಿತ್ಯಕಲೆಗಳು ಸೃಷ್ಟಿಯಾದದ್ದುಂಟು.

ಪ್ರಾಚೀನ ನಿರಕ್ಷರಕುಕ್ಷಿಯ ಗಮನಕ್ಕೆ ಬಾರದ ವಸ್ತುವೇ ಇಲ್ಲ. ಅವನ್ನು ನೋಡಿದಾಗ ಮೂಡಿದ ಭಾವನೆಗಳು ಅವನ ಶುದ್ಧ ಸ್ವಚ್ಛಂದ ಕಲ್ಪನಾ ಪ್ರತಿಭೆಯ ಮೂಲಕ ಹೊರಬರುವಾಗ ಐತಿಹ್ಯ ಅಥವಾ ಪುರಾಣಗಳ ರೂಪ ಪಡೆಯುತ್ತವೆ. ಸೃಷ್ಟಿಯ ಬಗ್ಗೆ, ಅದರ ಹಿಂದಿರುವ ಶಕ್ತಿಯ ಬಗ್ಗೆ, ಸ್ವರ್ಗಮರ್ತ್ಯ ಪಾತಾಳಗಳ ಬಗೆ ಅವನು ಚಿಂತಿಸಿದ; ತನ್ನ ಕಲ್ಪನೆಗೆ ಹೊಳೆದಂತೆ ವಿವರಿಸಿದ; ಹಿಂದೆ ನಡೆದ ಘಟನೆಗಳನ್ನು ಸಹ ಬಣ್ಣ ಕಟ್ಟಿ ಅಕ್ಕಪಕ್ಕದವರಿಗೆ ನಿರೂಪಿಸಿದ. ಅತ್ಯುಕ್ತಿ ಉತ್ಪ್ರೇಕ್ಷೆಗಳಿಂದ ಕೂಡಿದ ಕಾವ್ಯಶೈಲಿ ಅವನ ವ್ಯಾಖ್ಯಾನದ ಪ್ರಮುಖ ಲಕ್ಷಣವಾಯಿತು. ಅವೆಲ್ಲ ಉದ್ದೇಶಪೂರ್ವಕವಾಗಿ ಸಿದ್ಧವಾದದ್ದಲ್ಲ; ಅನೈಚ್ಛಿಕವಾಗಿ, ಲಹರಿ ಲಹರಿಯಾಗಿ ಹೊರಹೊಮ್ಮಿದ್ದು. ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟುಕತೆಗಳೇ ಐತಿಹ್ಯಗಳಾಗುತ್ತವೆ; ಆ ಘಟನೆಗಳನ್ನು ಸಂಪೂರ್ಣವಾಗಿ ಮರೆಸಿ, ದೈವಿಕಾಂಶಗಳು ಕೂಡಿಕೊಂಡು, ಅದ್ಭುತವಾಗಿ ಬೆಳೆದು ಅವೆಲ್ಲ ಎಂದೋ ಒಂದು ಕಾಲದಲ್ಲಿ ನಡೆದುವೆಂಬಂತೆ ಭ್ರಮೆ ಹುಟ್ಟಿಸುವ ಕಥೆಗಳೇ ಪುರಾಣಗಳು. ಕಾಲ್ಪನಿಕ ಕಥೆ, ಐತಿಹ್ಯ ಮತ್ತು ಪುರಾಣಗಳ ಎಲ್ಲೆಗಟ್ಟನ್ನು ಕರಾರುವಾಕ್ಕಾಗಿ ನಿರ್ಧರಿಸುವುದು ಕಷ್ಟ. ಬೆಂಗಳೂರು ಸ್ಥಾಪನೆಗೆ ಸಂಬಂಧಿಸಿದ ಕಥೆ ಐತಿಹ್ಯವಾದರೆ, ಕೋಟೆಯ ಭದ್ರತೆಗಾಗಿ ತನ್ನನ್ನೇ ಆಹುತಿ ಕೊಟ್ಟುಕೊಂಡು, ದೇವತ್ವಕ್ಕೇರಿ, ಕೋರಮಂಗಲದಲ್ಲಿ ಗುಡಿ ಕಟ್ಟಿಸಿಕೊಂಡ ಅಕ್ಕಮ್ಮನ ಕಥೆ ಪುರಾಣವಾಗುತ್ತದೆ.[1] ಮತದ ಪ್ರಧಾನಾಂಗಗಳಲ್ಲಿ ಪುರಾಣವೂ ಒಂದಾಗಿ ಅದರ ವಿಕಾಸಕ್ರಮದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

"ವ್ಯಕ್ತಿಗಳಿಗೆ, ಸ್ಥಳಗಳಿಗೆ, ಘಟನೆಗಳಿಗೆ ಸಂಬಂಧಿಸಿದಂತೆ ಯಾವುದೋ ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕಥೆಗಳು ಐತಿಹ್ಯಗಳು."[2] ಇವುಗಳಲ್ಲಿ ಎರಡು ಬಗೆ: ಸ್ಥಳೀಯ ಅಥವಾ ಪ್ರಾದೇಶಿಕ ಐತಿಹ್ಯ: ಪ್ರವಾಸೀ ಐತಿಹ್ಯ. ಸ್ಥಳೀಯ ಐತಿಹ್ಯ ಸ್ವರೂಪದಲ್ಲಿ ಸಣ್ಣದು. ಆಶಯಗಳು ಕಡಮೆ. ಅವು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತಗೊಂಡಿರುತ್ತವೆ. ರಚನೆಗೆ ಸಂಬಂಧಿಸಿದಂತೆ ಅದು ಮುಖ್ಯವಾಗಿ ಘಟನಾ ಪ್ರಧಾನವಾದ ಕಥೆ. ಕೆಲವೊಮ್ಮೆ ಬಹಿಷ್ಕೃತರಿಗೆ ಸಂಬಂಧಿಸಿದ ಕಥೆಗಳಲ್ಲಿ ವ್ಯಕ್ತಿಚಿತ್ರಕ್ಕವಕಾಶವುಂಟು. ಅವುಗಳಲ್ಲಿ ಭಾವಾತಿರೇಕವಿರಬಹುದಾದರೂ, ಅವು ಸುಖದಲ್ಲಿ ಕೊನೆಗೊಳ್ಳಲೇ

---

1 ಈ ಘಟನೆ ಪುರಾತನವಾದದ್ದಲ್ಲ, ಜೊತೆಗೆ ಸ್ಥಳೀಯವಾದದ್ದು. ಆದ್ದರಿಂದ ಇದನ್ನು ಪುರಾಣವೆಂದು ಕರೆಯುವುದು ಕಷ್ಟವಾಗುತ್ತದೆ. ಪುರಾಣ ಹೇಗಾಗಬಹುದೆನ್ನುವುದಕ್ಕೆ ಇದೊಂದು ನಿದರ್ಶನವಾಗಬಹುದಷ್ಟೆ. "ಶ್ರವಣಬೆಳ್ಗೊಳದ ಗುಳಕಾಯಜ್ಜಿಯ ಐತಿಹ್ಯಕ್ಕೆ ದೇವತೆಯ ಸಂಬಂಧವನ್ನು ಕಲ್ಪಿಸಿ ಪುರಾಣವಾಗಿ ಪರಿವರ್ತಿಸಲಾಗಿದೆ" ಎಂಬ ಜೀ.ಶಂಪ ಅವರ ಉಲ್ಲೇಖ ಇದೇ ಸ್ವಾಪರಿಯದು. ಅವರು 'ಕನ್ನಡ ಜನಪದ ಕಥೆಗಳು' ಗ್ರಂಥಕ್ಕೆ ಬರೆದಿರುವ ಮುನ್ನುಡಿಯನ್ನು ನೋಡಬಹುದು (ಪುಟ ೧).

2 ಅದೇ, ಪುಟ xlvi. "A narrative supposedly based on fact, with an intermixture of traditional materials, told about a person, place or incidents—*SDFML* Ed by Maria Leach, P. 612.

ಬೇಕೆಂಬ ಕಡ್ಡಾಯವಿಲ್ಲ. ದುರಂತದ ಐತಿಹ್ಯಗಳೇ ಜಾಸ್ತಿ. ಬಲಿದಾನ ಮತ್ತು ಆಕಸ್ಮಿಕ ಮರಣಗಳು ಸಂಭವಿಸುತ್ತವೆ. ಇವುಗಳಲ್ಲಿ ನೀತಿಬೋಧೆಗೂ ಸ್ಥಾನವುಂಟು. ಅವು ಆಸುಪಾಸಿನ ಪ್ರದೇಶದಲ್ಲಿ ಪರಂಪರಾಗತವಾಗಿ ಹಬ್ಬುತ್ತವೆ ಮತ್ತು ಬದುಕುತ್ತವೆ. ತಾವು ಹುಟ್ಟಿಕೊಂಡ ಜಾಗದ ಅಸಾಧಾರಣ ಲಕ್ಷಣವನ್ನು ವಿವರಿಸುವುದೇ ಅವುಗಳ ಗುರಿ. ಈ ದೃಷ್ಟಿಯಿಂದ ಅವು ಕಾರ್ಯಕಾರಣಸಂಬಂಧಿ ಕಥೆಗಳನ್ನು ಹೋಲುತ್ತವೆಂದಾಯಿತು. ಯಾವುದಾದರೂ ಕಾರಣಕ್ಕಾಗಿ ಆ ಲಕ್ಷಣಗಳು ಮರೆಯಾದರೆ, ಆ ಐತಿಹ್ಯ ಅಗೋಚರವಾಗುತ್ತವೆ.

ಮಳೆಗಾಲದಲ್ಲಿ ಪಾಚಿಕಟ್ಟಿದ ಬಂಡೆಯಮೇಲೆ ಜನ ತಿರುಗಾಡಿದ್ದಾದರೆ, ಅವರ ಹೆಜ್ಜೆ ಮುದ್ರೆಗೊಳ್ಳುತ್ತದೆ. ಎಂದೋ ಯಾರೋ ಉಳಿಯಿಂದ ಮನುಷ್ಯನ ಹೆಜ್ಜೆಯನ್ನು ಕೊರೆದಿರುತ್ತಾನೆ. ಅದನ್ನು ನೋಡಿದ ಬೇರೆ ಜನ, ಅದು ದೇವರ ಹೆಜ್ಜೆಯೇ ಇರಬೇಕು, ಅಮಾನುಷ ವ್ಯಕ್ತಿಗಲ್ಲದೆ ಕಲ್ಲಿನ ಮೇಲೆ ಹೆಜ್ಜೆ ಊರುವ ಶಕ್ತಿ ಯಾರಿಗಿದೆ ಎಂದವರು ತರ್ಕಿಸುವುದು ಸಹಜ. ಚನ್ನಪಟ್ಟಣ ತಾಲ್ಲೂಕು ಚಕ್ಕೆರೆಯ ಬಳಿಯ ದೊಡ್ಡರೆಯ ಮೇಲೆ ಹೆಜ್ಜೆ ಗುರುತಿದೆ. ಆ ಊರಿಗೆ ಸುಮಾರು ಎರಡು ಮೈಲಿಯಾಚೆ ನರಸಿಂಹಸ್ವಾಮಿ ಬೆಟ್ಟವಿದೆ. ನರಸಿಂಹಸ್ವಾಮಿ ಮೂಡಣದಿಕ್ಕಿನಲ್ಲಿರುವ ಬೆಟ್ಟಕ್ಕೆ ಹೋಗುವ ಸಲುವಾಗಿ ಒಂದು ಹೆಜ್ಜೆ ಆ ಅರೆಯ ಮೇಲಿಟ್ಟನೆಂದು ಪ್ರತೀತಿಯುಂಟು. ಕೊಲಂಬೋದಿಂದ ಪೂರ್ವಕ್ಕೆ ೪೫ ಮೈಲಿ ದೂರದಲ್ಲಿರುವ ಆಡಮ್ ಶಿಖರದಲ್ಲಿ ಅಗಲವಾದ ಪಾದಮುದ್ರೆಯೊಂದಿದೆ. ಅದನ್ನು ಬೌದ್ಧರು, ಮುಸ್ಲಿಮರು, ಹಿಂದೂಗಳು ಕ್ರಮವಾಗಿ ಬುದ್ಧ, ಆಡಮ್, ಶಿವ—ಇವರ ಪಾದವೆಂದು ಪೂಜಿಸುತ್ತಾರೆ. ಇಂಥದೇ ಕಥೆ ಯೂರೋಪಿನ ಕೆಲವು ಭಾಗಗಳಲ್ಲಿಯೂ ಪ್ರಚಾರದಲ್ಲಿದೆ. ಭಾರತ ಮತ್ತು ಶ್ರೀಲಂಕಾದ್ವೀಪಗಳ ನಡುವಣ ಮರಳುದಿಣ್ಣೆಗಳನ್ನು ಆಡಮ್ ಅಥವಾ ರಾಮ ಸೇತುವೆ ಎಂದು ಕರೆಯುವುದುಂಟು. ರಾಮನಗರದ ಸುತ್ತಮುತ್ತಣ ಪ್ರದೇಶದಲ್ಲಿ ದೊಡ್ಡ ದೊಡ್ಡ ಬಂಡೆಗಳು ಒಂಟೊಂಟಿಯಾಗಿ ಗುಂಪುಗುಂಪಾಗಿ ಬಿದ್ದಿವೆ. ರಾಮ ರಾವಣರ ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆಗೊಂಡಾಗ ಆಂಜನೇಯ ಸಂಜೀವನ ಪರ್ವತವನ್ನು ಹೊತ್ತುಕೊಂಡು ಹೋಗುವ ಸಮಯದಲ್ಲಿ ಅವನ ವೇಗಕ್ಕೆ ಸಡಿಲಗೊಂಡು ಆ ಬಂಡೆಗಳು ಪರ್ವತದಿಂದ ಕೆಳಗುದುರಿದುವೆಂಬ ಐತಿಹ್ಯ ಇಂದಿಗೂ ಜನಮನಸ್ಸಿನಲ್ಲಿ ನೆಲೆಗೊಂಡಿದೆ. ಇಂತೆಯೇ ಗ್ರಾಮಾಂತರ ಪ್ರದೇಶಗಳಲ್ಲಿ ಒಂದೊಂದು ಕಲ್ಲಿಗೂ ಒಂದೊಂದು ಕಥೆ ಹೇಳುವುದುಂಟು; ಒಂದೊಂದು ಗುಡ್ಡಕ್ಕೂ ಒಂದೊಂದು ಕಥೆ ಕಟ್ಟಿ, ಅಲ್ಲೊಂದು ದೇವಾಲಯವನ್ನೋ ಚರ್ಚನ್ನೋ ನಿರ್ಮಿಸುವುದುಂಟು. ಮಾಸ್ತಿ ಮತ್ತು ವೀರಗಲ್ಲುಗಳ ಬಗೆಗೂ ನಾನಾ ಕಥೆಗಳು ಹುಟ್ಟಿಕೊಳ್ಳುತ್ತವೆ.

ವಿಚಿತ್ರರೂಪದ ಘಟಸರ್ಪಕಾಳಗಗಳ ವರ್ಣನೆ ಯೂರೋಪುಖಂಡದಲ್ಲಿ ಎಲ್ಲ ಕಡೆಯೂ ಸಿಗುತ್ತವೆ. ಅವುಗಳೊಡನೆ ಹೋರಾಡಿದ ವೀರರು ಸಹಜವಾಗಿಯೇ ಸಾಮಾನ್ಯರ ಕಣ್ಣಿನಲ್ಲಿ ಅದ್ಭುತ ವ್ಯಕ್ತಿಗಳಾಗಿ ತೋರಿ ಅವರ ಆರಾಧನೆಗೆ ಪಾತ್ರರಾಗುತ್ತಾರೆ. ಶತ್ರುಗಳು

ಬೆನ್ನಟ್ಟಿ ಬಂದಾಗ ವೀರನೊಬ್ಬ ಈ ಪ್ರಪಾತದಲ್ಲಿ ದುಮುಕಿದ, ದುಷ್ಟನೊಬ್ಬನ ಮುಷ್ಟಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಕನ್ಯೆಯೊಬ್ಬಳು ಆ ಕಣಿವೆಯಲ್ಲಿ ನುಸುಳಿದಳು, ಹಳ್ಳಿಯ ಪಡ್ಡೆ ಹುಡುಗನೊಬ್ಬ ದನಕರುಗಳನ್ನು ತಿನ್ನುತ್ತಿದ್ದ ಹುಲಿಯೊಡನೆ ಹೋರಾಡಿ, ಪ್ರಾಣನೀಗಿದ ಸ್ಥಳವಿದು—ಇಂಥ ಕಥೆಗಳು ಜಗತ್ತಿನಲ್ಲೆಲ್ಲಾ ಹೆಜ್ಜೆಹೆಜ್ಜೆಗೂ ಸಿಗುತ್ತವೆ. ಇಂಥ ಕಥೆಗಳನ್ನು ಕೆದಕಿ ಬೆದಕಿ ನೋಡಿದಾಗ ಅನೇಕ ಐತಿಹಾಸಿಕಾಂಶಗಳು ಪ್ರಕಾಶಕ್ಕೆ ಬರುತ್ತವೆ. ಅವು ಪ್ರಚ್ಛನ್ನ ಇತಿಹಾಸಗಳೆಂದೂ ಹೇಳುವುದುಂಟು. ನಂದಿ ಅಥವಾ ಮಡಿಕೇರಿಯ ಟಿಪ್ಪು ಪ್ರಪಾತಗಳು ಚರಿತ್ರೆ ಕಾಣದ ಅನೇಕ ಸತ್ಯಾಂಶಗಳನ್ನು ಪಿಸುಗುಟ್ಟಬಹುದು. ಆದರೆ ಐತಿಹ್ಯಗಳು ಎಂದೆಂದಿಗೂ ಇತಿಹಾಸದ ಮಟ್ಟಕ್ಕೇರಲಾರವೆಂಬುದನ್ನು ಮರೆಯಲಾಗದು. ಗಣಿಯಲ್ಲಿ ಚಿನ್ನವಿದ್ದಂತೆ, ಒಂದು ಐತಿಹ್ಯದಲ್ಲಿ ಚರಿತ್ರಾಂಶ ಮಿಗಿಲಾಗಿದ್ದರೆ, ಮತ್ತೊಂದರಲ್ಲಿ ಬಿಂದುರೂಪದಲ್ಲಿರಬಹುದು. ಬೇರೆ ಪುರಾವೆಗಳೊಡನೆ ತಾಳೆಯಾದಾಗ ಮಾತ್ರ ಅವು ಗಟ್ಟಿ ಎಂದೊಪ್ಪಿಕೊಳ್ಳಲಡ್ಡಿಯಿಲ್ಲ.

ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ಉಪಾಸನಾವಿಧಿಗಳು, ನಂಬಿಕೆ, ಸಂಪ್ರದಾಯಗಳು, ಮತಸಂಬಂಧವಾದ ಆಚರಣೆಗಳು ಈ ಐತಿಹ್ಯಗಳಲ್ಲಿ ಸೇರಿಕೊಂಡಿರುತ್ತವೆ. ಅಂಥ ಆಚರಣೆಗಳ ಮೂಲಸ್ವರೂಪ ತಿಳಿಯಲು ಇವು ಸಹಾಯಕವಾಗುತ್ತವೆ. ಸಾಧುಸಂತರ ಆವಾಡಗಳು ಇವುಗಳ ಪರಿಧಿಯಲ್ಲಿ ಬರುತ್ತವೆ. ಶರಣರ ದಾಸರ ಪುರಾತನರ ಸುತ್ತ ಹೆಣೆಗೆಗೊಂಡಿರುವ ಕಥೆಗಳೆಲ್ಲ ಈ ಜಾತಿಗೆ ಸೇರಿದುವೇ ಆಗಿವೆ. ಮಾಟಗಾರರಿಗೆ, ಮಾನಸಿಂಗನಂಥ ದರೋಡೆಕೋರರಿಗೆ, ಮಂತ್ರವಾದಿಗಳಿಗೆ, ಗುಪ್ತ ಸೌಭ್ರಾತೃ ಮಂಡಲಿಗಳಿಗೆ, ಮೂಢನಂಬಿಕೆಗಳಿಗೆ ಸಂಬಂಧಿಸಿದ ಕಥೆಗಳು ಐತಿಹ್ಯಗಳ ಮಟ್ಟಕ್ಕೇರುತ್ತವೆ. ಆ ವ್ಯಕ್ತಿಗಳ ಮಹಿಮೆಯನ್ನು ಸಾಹಸಕಾರ್ಯಗಳನ್ನು ಕೊಂಡಾಡಿ, ಅವುಗಳಿಗೆ ಯಥಾರ್ಥತೆಯ ಲೇಪವನ್ನು ಬಳಿಯುವುದೇ ಆ ಕಥೆಗಳ ಉದ್ದೇಶ. ವಿಚಿತ್ರ ಕಲ್ಪನೆ ಹಾಗೂ ಬುಡವಿಲ್ಲದ ಊಹೆಗಳಿಂದ ಅನೇಕ ಐತಿಹ್ಯಗಳು ಹುಟ್ಟಿಕೊಳ್ಳುತ್ತವೆ. ಜನತೆಯ ಮನಸ್ಸಿನಲ್ಲಿ ಕೆಲವು ವ್ಯಕ್ತಿಗಳ ಬಗ್ಗೆ ಘಟನೆಗಳ ಬಗ್ಗೆ ಗೌರವಾದರ ಭಕ್ತಿಗಳನ್ನು ಮೂಡಿಸುವುದೇ ಅವುಗಳ ಗುರಿ. ವ್ಯಾಧನಾದ ವಾಲ್ಮೀಕಿ, ಕುರುಬನಾದ ಕಾಳಿದಾಸ ಮೊದಲಾದವರು ಹೇಗೆ ಕವಿಗಳಾದರೆನ್ನುವ ಕಥೆಗಳೂ ಇಂಥವೇ. ನದೀಮೂಲ, ಗುರುಮೂಲ, ಮತ್ತು ಋಷಿಮೂಲಗಳನ್ನರಸಬಾರದೆನ್ನುವವಾಣಿಯೊಂದು ನಮ್ಮಲ್ಲುಂಟು. ಅದರ ಜತೆಗೆ ರಾಜಮೂಲವನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಕ್ಷತ್ರಿಯರೆಂದು ಹೇಳಿಕೊಳ್ಳುವ ಅರಸರ ಮೂಲಪುರುಷರೆಲ್ಲ ಸಾಮಾನ್ಯ ವಾಗಿ ರೈತ ಕುಂಬಾರ ವಡ್ಡ ಬೇಡ ಮೊದಲಾದ ಕೋಮುಗಳಿಗೆ ಸೇರಿದ ಗೂಂಡಾಗಳು. ನೆಲದ ಒಡೆತನ ಅಂದರೆ ರಾಜ್ಯಾಧಿಕಾರ ಬಲವಂತರಿಗೆ ಮೀಸಲಾದದ್ದೆಂಬ ಪುರಾತನ ಸುಭಾಷಿತವಿದೆ. ಬಲವಂತರೆಂದರೆ ಈ ಗೂಂಡಾಗಳೇ. ಅವರು ದುರ್ಯೋಧನ ದುಶ್ಶಾಸನ ರಂತೆ ದುರುದುಂಬಿತನದಿಂದ ವರ್ತಿಸಿ, ಪಾಳೆಯಗಾರರಾದನಂತರ, ಭಟ್ಟರ ಮತ್ತು ಪುರೋಹಿತರ ಕೃಪಾಕಟಾಕ್ಷಕ್ಕೊಳಗಾಗಿ, ಅನೇಕ ಬಿರುದು ಬಾವಲಿಗಳನ್ನು ಸಂಪಾದಿಸಿ ಕೊಂಡರು. ಪುರೋಹಿತರು ಸ್ವಾರ್ಥಸಾಧನೆಗಾಗಿ, ಆ ರಾಜರನ್ನು ಮಾದವಾಸ್ವಯು

11

ರೆಂದು, ಶ್ರೀವತ್ಸಗೋತ್ರರೆಂದು, ಗಂಗಾತಟಾಕದಿಂದ ಉದ್ಭವಿಸಿದವರೆಂದು ಐತಿಹ್ಯ
ಗಳನ್ನು ಹುಟ್ಟಿಸಿ, ಪುನೀತರನ್ನಾಗಿ ಮಾಡಿದರು. ಕುಲ ಕೆಟ್ಟವರ ತಲೆ ಮೇಲೆ ಗಂಜಲ
ವನ್ನು ಸಂಪ್ರೋಕ್ಷಿಸಿ, ಬೇವಿನ ಕಡ್ಡಿಯಿಂದ ನಾಲಿಗೆಯನ್ನು ಸುಟ್ಟು, ಅವರನ್ನು ಶುದ್ಧಿ
ಮಾಡುವ ಜಾನಪದ ಸಂಪ್ರದಾಯವುಂಟಷ್ಟೆ. ಅದೇ ಜಾತಿಗೆ ಸೇರಿದ್ದು ಅರಸರ ಶುದ್ಧೀ
ಕರಣಕ್ರಿಯೆ. ಇದು ಎಲ್ಲ ದೇಶಗಳಲ್ಲಿ, ಎಲ್ಲ ಕಾಲಗಳಲ್ಲಿ ನಡೆಯುವಂಥದೇ. ನಿರಕ್ಷರತೆ
ತಾಂಡವವಾಡುತ್ತಿರುವ ರಾಷ್ಟ್ರಗಳಲ್ಲಿ ನೂತನಾಭಿಧಾನ ಲಾಂಛನ ಬಿರುದಾವಳಿಗಳನ್ನು
ಧಾರಣೆಮಾಡಿರುವ ನೇತಾರರು ಅನೇಕ ಐತಿಹ್ಯಗಳ ಹುಟ್ಟಿಗೆ ಪ್ರೇರಕರಾಗಬಹುದು. ಈ
ದೃಷ್ಟಿಯಿಂದ ನಮ್ಮ ಇತಿಹಾಸಗಳ ಬಹುಭಾಗ ಐತಿಹ್ಯಗಳ ಗುಚ್ಛವಾಗಿದೆ.

ಕನಸುಗಳು ಹಗಲುಗನಸುಗಳು ಭ್ರಮೆಗಳು ಮತ್ತು ಇಂಥವೇ ಮನೋವಿಕಾರಗಳು
ಐತಿಹ್ಯಗಳ ಜನನಕ್ಕೆ ಕಾರಣವಾಗುತ್ತವೆ. ಭವಿಷ್ಯವಾದಿಗಳು, ಕಾಲಜ್ಞಾನಿಗಳು, ಕಣಿ
ಕಾರರು, ಕುಯುಕ್ತಿಗಾರರು ಜನರಿಗೆ ಮಂಕುಬೂದಿ ಎರಚುವ ಸಲುವಾಗಿ ಯಾವು
ದಾದರೂ ಒಂದು ಕಲ್ಲು ಮರ ಜಾಗ ಊರು ಕೇರಿ ಅಥವಾ ಆಳುಗಳ ಬಗ್ಗೆ ಒಳ್ಳೆಯದೋ
ಕೆಟ್ಟದ್ದೋ ಕತೆಕಟ್ಟಿ ಅವುಗಳನ್ನು ಗೌರವಕ್ಕೆ ಅಥವಾ ಅವಹೇಳನಕ್ಕೆ ಗುರಿ ಮಾಡ
ಬಹುದು. ಯಾವುದೋ ಒಂದು ಮತಕ್ಕೆ ಸೇರಿದ ಗುರು—ಗುರುವೇ ಆಗಬೇಕಾಗಿಲ್ಲ,
ಕೇವಲ ಯಃಕಶ್ಚಿತ್ತನಾದರೂ ಸಾಕು—ರಾತ್ರಾರಾತ್ರಿ ಎದ್ದ ಬೋರೆಯ ಮೇಲೆಯೋ
ಗುಡ್ಡದ ಮೇಲೆಯೋ ಒಂದು ಬಾವುಟ ಏರಿಸಿ, ಯಾರೋ ಸಂತನ ಸಮಾಧಿ ಎಂದು
ಕತೆಕಟ್ಟಿ, ಅಲ್ಲಿ ಮತೀಯ ಅಧಿಕಾರವನ್ನು ಸಂಸ್ಥಾಪಿಸಿ, ಸರಕಾರವನ್ನು ಸಹ ನಡುಗಿಸು
ತ್ತಾನೆ. ಮತ್ತೊಂದು ಕಡೆ ಒಬ್ಬ ಶಿಷ್ಯ ತೀರ್ಥಯಾತ್ರೆಗೆ ಹೋದ ತನ್ನ ಗುರುವನ್ನು
ಕೊಲ್ಲಿಗೆ ನೂಕಿ, ಆತ ಸತ್ತದ್ದಕ್ಕೊಂದು ಕತೆಕಟ್ಟಿ, ಆತನ ಪ್ರಾಣಶಕ್ತಿ ಆತನ ಕುದುರೆ
ಯಲ್ಲಿ ಸೇರಿಕೊಂಡಿದೆ ಎಂದು ಹೇಳಿ, ಅದು ಸತ್ತುಹೋದಾಗ ಸಮಾಧಿ ಮಾಡಿ, ಗುರುವಿನ
ಹೆಸರಿನಲ್ಲಿ ಅದನ್ನು ಪೂಜಿಸುವುದೂ ಉಂಟು. ಈ ದೇಶದಲ್ಲಿ ಇಂಥ ಸಮಾಧಿಗಳಿಗೆ
ಲೆಕ್ಕವೇ ಇಲ್ಲ. ಅಲೆಕ್ಸಾಂಡರ್ ಮತ್ತು ನೆಪೋಲಿಯನ್ನರಿಗೆ ಸಂಬಂಧಿಸಿದ ಅನೇಕ ಕಾಲ್ಪ
ನಿಕ ಕಥೆಗಳು ಚರಿತ್ರೆಯ ವೇಷ ಧರಿಸಿವೆ. ಅವುಗಳಲ್ಲಿ ಕೆಲವು ಆ ಮಹಾವ್ಯಕ್ತಿಗಳೇ
ಸೃಷ್ಟಿಸಿ, ಆಪ್ತಮಿತ್ರರ ಮೂಲಕ, ಪ್ರಸಾರಗೊಂಡುವೆಂದೂ ಹೇಳುತ್ತಾರೆ. ನಮ್ಮ ರಾಜ
ಮಹಾರಾಜರನ್ನು ಕುರಿತ ಇಂಥ ಕಥೆಗಳು ಸಾಕಷ್ಟಿವೆ.

ಒಮ್ಮೆ ಸೃಷ್ಟಿಗೊಂಡ ಇಂಥ ಕಥೆಗಳು ಸಮಯಾನುಸಾರಿಯಾಗಿ ಬೇರೆ ಬೇರೆ ದೊರೆ
ಗಳಿಗೆ ಗಂಟು ಹಾಕಿಕೊಳ್ಳುವುದುಂಟು. ಪುಲಿಕೇಶಿಯ ಹೆಸರಿನಲ್ಲಿರುವ ಒಂದು ಕಥೆ
ಮುಮ್ಮಡಿ ಕೃಷ್ಣನಿಗೂ ಅನ್ವಯವಾಗಬಹುದು. ಹನ್ನೆರಡನೆಯ ಚಾರ್ಲ್ಸ್ ಮತ್ತು
ಎರಡನೆಯ ಫ್ರೆಡರಿಕ್ ಅವರ ಹೆಸರಿನಲ್ಲಿರುವ ಈ ಕತೆ ನೋಡಬಹುದು. ಒಂದು ದಿನ
ಸಂಜೆ ದೊರೆಯೊಬ್ಬನ ಸರಳ ಸಮವಸ್ತ್ರವನ್ನು ತೊಟ್ಟು, ಪಟ್ಟಣದ ಹೋಟಲಿಗೆ ಬಂದನು.
ಹೋಟಲಿನಲ್ಲಿ ಜಾಗ ಖಾಲಿ ಇಲ್ಲವೆಂದು ಹೇಳಿ ಮಾಲೀಕ ಅವನನ್ನು ಸೇರಿಸಲಿಲ್ಲ.
ಧರ್ಮಿಷ್ಠಳಾದ ಪರಿಚಾರಿಕೆಯೊಬ್ಬಳು ಅವನಿಗೆ ಮನೆ ಹಿಂದಣ ಕಣಜದ ಕೋಣೆಯಲ್ಲಿ

ಜಾಗಮಾಡಿಕೊಡುತ್ತಾಳೆ. ಮಾರನೆಯ ದಿನ ಬೆಳಗ್ಗೆ ದೊರೆ ಹೋಟಲಿನ ಬಾಗಿಲ ಮೇಲೊಂದು ಪದ್ಯ ಬರೆದು ಹೊರಟು ಹೋದನಂತೆ.[1] ಇದಕ್ಕಿಂತ ಉತ್ತಮವಾದ ಕಥೆಯೊಂದು ನಾಲ್ಮಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿದೆ. ಚನ್ನಪಟ್ಟಣದ ಬಳಿ ಅಕ್ಕೂರೆಂಬ ಗ್ರಾಮ. ಆ ಊರಿನಲ್ಲೊಂದು ಕೊಲೆ ನಡೆಯಿತು. ಕೊಲೆಗೆ ಕಾರಣನಾದ ವ್ಯಕ್ತಿಗೆ ಗಲ್ಲಾಗತಕ್ಕದ್ದೆಂದು ಶ್ರೇಷ್ಠ ನ್ಯಾಯಾಲಯ ತೀರ್ಪು ನೀಡಿತು. ಅಪರಾಧಿ ಮಹಾರಾಜರ ದಯಾಭಿಕ್ಷೆಗಾಗಿ ಮನವಿ ಸಲ್ಲಿಸಿದ. ಮಹಾರಾಜರು ರೈತನಂತೆ ವೇಷ ಹಾಕಿಕೊಂಡು, ದೂರದಲ್ಲಿ ಮರೆಯಾಗಿ ಕಾರು ನಿಲ್ಲಿಸಿ, ಅಕ್ಕೂರು ಬಳಿಯ ಹೊಲದಲ್ಲಿ ಕೆಲಸಮಾಡುತ್ತಿದ್ದ ರೈತರೊಡನೆ ಕಲೆತು, ಏನೇನೋ ವಿಷಯ ಕುರಿತು ಮಾತಾಡುತ್ತಿದ್ದು, ಕೊಲೆಯ ವಿಷಯವನ್ನೆತ್ತಿದರಂತೆ. "ಇಲ್ಲೊಬ್ಬ ಮಹಾ ಘಟಿಂಗ ಇದ್ದ. ಅವನ್ಗೆ ಗಲ್ಲಾಗ್ತದಂತೆ. ಸದ್ಯ ಈ ಪ್ರಾಂತದ ಜನ ಈಗ ನೆಮ್ಮದಿಯಾಗಿ ಬಾಳಬಹುದು" ಎಂದು ಆ ರೈತರು ನುಡಿದರಂತೆ. ಅನಂತರ ಮಹಾರಾಜರು ರಾಜಧಾನಿಗೆ ಹಿಂದಿರುಗಿ ಫಾಸಿ ಶಿಕ್ಷೆಯನ್ನು ಖಾಯಂಗೊಳಿಸಿದರಂತೆ. ಅಮೆರಿಕೆಯ ಜಾರ್ಜ್ ವಾಷಿಂಗ್‌ಟನ್ನನ ಬಗೆಗೂ ಇಂಥವು ಹಲವು ಕಥೆಗಳಿವೆ. ಮಂಟೇಸ್ವಾಮಿ ಮಹದೇಶ್ವರರಿಗೆ ಸಂಬಂಧಿಸಿದ ಕಥೆಗಳೆಲ್ಲವೂ ಅನುಕ್ರಮವಾಗಿ ವಿಕಾಸಗೊಂಡ ಐತಿಹ್ಯಗಳೇ ಆಗಿವೆ. ವಿಕ್ರಮಾದಿತ್ಯನ ಸಿಂಹಾಸನವನ್ನು ಕುರಿತ, ಅಂತೆಯೇ ಗಂಡಭೇರುಂಡವನ್ನು ಕುರಿತ, ರಾಜರ ಲಾಂಛನ ಪ್ರಶಸ್ತಿ ಬಿರುದಾವಳಿಗಳನ್ನು ಕುರಿತ ಪ್ರಸಂಗಗಳು ಈ ಚೌಕಟ್ಟಿನಲ್ಲಿಯೇ ಅಡಕಗೊಳ್ಳುತ್ತವೆ. ಪ್ರಾಚೀನಕಾಲದ ಸ್ಮಾರಕಗಳು ಪ್ರತಿಮೆಗಳು ಸಮಾಧಿಗಳು ಇಂಥವೇ ಕಥೆಗಳನ್ನು ಹೇಳುತ್ತವೆ. ಶಿಲಾ ಹಾಗೂ ತಾಮ್ರಶಾಸನಗಳಲ್ಲಿಯೂ ಇವುಗಳ ಉಲ್ಲೇಖ ಸಿಗುತ್ತವೆ. ಬಂಗಾರದೊಡ್ಡಿ ನಾಲೆ ಸಹ ರಾಜರ ಪ್ರಣಯ ಲೀಲೆಯನ್ನು ನೆನಪಿಗೆ ತರುವಂಥದು. ಸುಳ್ಳೇರಿ ಸೂಳೆಕೆರೆ ಅಪ್ಪೇರಹಳ್ಳಿ ಮೊದಲಾದ ಊರ ಹೆಸರುಗಳ ಹಿಂದೆಯೂ ಇಂಥವೇ ಐತಿಹ್ಯಗಳಿವೆ.

ಗುಪ್ತನಿಧಿಯ ಬಗೆಗಿನ ಕಥೆಗಳಂತು ಪ್ರಪಂಚದಲ್ಲೆಲ್ಲ ದೊರೆಯುತ್ತವೆ. ಕೆಂಪೇಗೌಡ ಮಲಗಿದ್ದಾಗ ಹಾವು ಅವನ ತಲೆದೆಸೆಯಲ್ಲಿ ಹೆಡೆ ಆಡಿಸುತ್ತಿದ್ದುದು, ಅನಂತರ ಅವನಿಗೆ ಏಳು ಕೊಪ್ಪರಿಗೆ ಹಣ ಸಿಕ್ಕಿದ್ದು, ಆಮೇಲೆ ಬೆಂಗಳೂರು ಕಟ್ಟಿದ್ದು ಈ ಮೊದಲಾದ ಕತೆಗಳು ಗ್ರಾಮೀಣ ಜನರ ಸ್ಮೃತಿಕೋಶದಲ್ಲಿ ಇಂದಿಗೂ ಉಳಿದುಕೊಂಡು ಬಂದಿವೆ. ಹಿಂದಿನ ಕಾಲದಲ್ಲಿ ಜನ ಸಂಗ್ರಹಿಸಿದ ಹಣ ಇಡುತ್ತಿದ್ದುದು ಭೂಮಿಯೊಳಗೆ. ಕಳ್ಳಕಾಕರಿಗೆ ಹೆದರಿಕೊಂಡು ಸಂದೂಕ ಪೆಟ್ಟಿಗೆಗಳಲ್ಲಿಡುತ್ತಿರಲಿಲ್ಲ. ಶತ್ರುಗಳ ಕೈಗೆ ಸಿಕ್ಕಿ ಸೋತಾಗ ಅವರ ಕೈಗೆ ಹಣ ಸಿಗಬಾರದೆಂದು ರಾಜರು ಅದನ್ನು ನೆಲದೊಳಗೆ ಹೂಳುತ್ತಿದ್ದರು.

ಸ್ಥಳನಾಮಗಳಿಗೆ ಸಂಬಂಧಿಸಿದ ಐತಿಹ್ಯಗಳು ಜಗತ್ತಿನಲ್ಲೆಲ್ಲ ವ್ಯಾಪಕವಾಗಿ ಹರಡಿವೆ. ಆ ಐತಿಹ್ಯಗಳು ಯಥಾರ್ಥವಾಗಿರಬಹುದು, ಇಲ್ಲವೆ ಕಾಲ್ಪನಿಕವಾಗಿರಬಹುದು.

1 *The Science of Folklore*, A. H. Krappe, p. 82.

ಯಥಾರ್ಥವಾಗಿರುವೆಡೆಯಲ್ಲಿಯೂ ಚಾರಿತ್ರಿಕಾಂಶ ತೆಳ್ಳಗೆಯಾಗಿದ್ದು, ಅದರ ಸುತ್ತ ಕಾಲ್ಪನಿಕಾಂಶಗಳು ಮುತ್ತಿಕೊಂಡಿರಬಹುದು. ಹಳೆಯ ಹೆಸರಿನ ಸಮರ್ಥನೆಗಾಗಿ ಹೊಸ ಕಥೆಯನ್ನೇ ಹೊಸೆಯಬಹುದು. ಮೆಕ್ಲೆನ್‌ಬರ್ಗ್ ಎಂಬ ಜಿಲ್ಲೆಯಲ್ಲಿ ಸ್ಮೃತ್ (Smrt) ಎಂಬ ಹಳ್ಳಿ. ಆ ಹಳ್ಳಿಗೊಂದು ಬಾರಿ ಪ್ಲೇಗು ಮಾರಿ ಬಂದು, ಒಂದೂ ನರಪಿಳ್ಳೆ ಉಳಿಯದಂತೆ, ಎಲ್ಲರನ್ನೂ ಆಹುತಿ ತೆಗೆದುಕೊಂಡಿತಂತೆ. ಸ್ಲಾವ್‌ಭಾಷೆಯಲ್ಲಿ ಸ್ಮೃತ್ ಎಂದರೆ ಸಾವು. ಅಲ್ಲಿ ಸ್ಲಾವ್‌ಭಾಷೆ ಬಳಕೆಯಲ್ಲಿದ್ದಾಗ ಆ ಹಳ್ಳಿಗೆ ಆ ಹೆಸರು ಬಂದದ್ದು. ಅದು ಜರ್ಮನರ ವಶವಾದಮೇಲೂ ಅದೇ ಹೆಸರು ಉಳಿಯಿತು.[1] ಕೋಲಾರ, ಕೊಲ್ಹಾಪುರ, ಕೊಲ್ಲೂರು ಮೊದಲಾದ ಊರುಗಳು ಕೋಲರೆಂಬ ಹಿಂದಿನ ಜನಾಂಗವೊಂದನ್ನು ನೆನಪಿಗೆ ತರುತ್ತವೆ. ಉತ್ತರಭಾರತದ ಹಲವು ಊರುಗಳ ಹೆಸರುಗಳು ದ್ರಾವಿಡ ಜನಾಂಗದ ಇತಿಹಾಸವನ್ನು ಸೂಚಿಸುತ್ತವೆ.

ಭೂತಾರಾಧನೆಯಿಂದ ಪ್ರೇರಿತವಾದ ಐತಿಹ್ಯಗಳಿಗೆ ಬರವಿಲ್ಲ. ಭೂತಗಳ ಸಾಮ್ರಾಜ್ಯ ಕಾಲ್ಪನಿಕ ಕಥೆಗಳಿಗೂ ಹರಡಿದೆಯಷ್ಟೆ. ಅವು ಮೊದಮೊದಲು ಐತಿಹ್ಯಗಳ ಮೂಲಕ ತಮ್ಮ ವ್ಯಕ್ತಿತ್ವವನ್ನೂ ಮಹತ್ವವನ್ನೂ ಬೆಳೆಸಿಕೊಂಡು, ಕಾಲಕ್ರಮೇಣ ಕಥಾಕ್ಷೇತ್ರದಲ್ಲಿ ತಮ್ಮ ವಿಜಯಕೇತನವನ್ನು ಹಾರಿಸಿದುವು. "ಭೂತಾರಾಧನೆಗೂ ಬೇಸಾಯಕ್ಕೂ ನಿಕಟ ಸಂಬಂಧವಿದೆಯೆಂಬುದು ಭೂತಾರಾಧನೆಗೆ ಉಪಯೋಗಿಸುವ ಸಾಮಗ್ರಿಗಳಿಂದಲೇ ಸ್ಪಷ್ಟವಾಗುವುದು. ಭತ್ತ, ಅಕ್ಕಿ, ಭತ್ತದ ಅರಳು, ಎಳನೀರು ತೆಂಗಿನಕಾಯಿ, ಅಡಿಕೆ, ಅಡಿಕೆಯ ಹೂವು, ತೆಂಗಿನಮರದ ಗರಿಗಳು—ಇವೆಲ್ಲ ಭೂತಾರಾಧನೆಯ ಮುಖ್ಯ ವಸ್ತುಗಳು."[2] ಜಮೀನು ಅಥವಾ ಮನೆ ಹಸ್ತಾಂತರಗೊಳ್ಳುವಾಗ, ಭೂತಗಳು ಇದ್ದಲ್ಲಿಯೇ ಇರುತ್ತವಂತೆ; ಹೊಸ ಮಾಲೀಕ ಪೂಜೆಕಟ್ಟು ವರಿಗಳನ್ನು ಮುಂದುವರಿಸುತ್ತಾನೆ. ರೈತನ ಸುಖದುಃಖಗಳಿಗೆಲ್ಲ ಅವೇ ಕಾರಣ. "ಮಳೆ ಬಾರದಿದ್ದರೆ, ಭತ್ತದ ಪೈರಿಗೆ ಕೀಟಗಳ ತೊಂದರೆಯಾದರೆ, ಜಾನುವಾರು ಕಳೆದುಹೋದರೆ, ಅಡಿಕೆ ತೆಂಗಿನಕಾಯಿಗಳು ಕಳವಾಗಿ ಹೋದರೆ, ಜನಸಾಮಾನ್ಯರು ಹರಕೆ ಹೇಳುವುದು ಭೂತಗಳಿಗೆ. ಆದ್ದರಿಂದಲೇ ಇಲ್ಲಿ ಭೂತಾರಾಧನೆ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿದೆ." ಕಾಡುಮೇಡು ಬೆಟ್ಟಗುಡ್ಡಗಳಿರುವ ಪ್ರದೇಶದಲ್ಲಿ ಅವುಗಳ ಹಾರಾಟ ಜಾಸ್ತಿ ಎಂದು ತೋರುತ್ತದೆ. ಬಯಲುಸೀಮೆಯಲ್ಲಿ ಭೂತಚೇಷ್ಟೆಯಿರುವುದಾದರೂ, ಮಲೆನಾಡಿನಷ್ಟು ತೀವ್ರವಾಗಿಲ್ಲ; ಅಲ್ಲಿಯ ಜನ ಮಳೆಯ ಅಭಾವಕ್ಕಾಗಲೀ, ಬೆಳೆಗಳ ಹಾನಿಗಾಗಲೀ, ಭೂತಗಳನ್ನು ಗುರಿ ಮಾಡುವುದಿಲ್ಲ. ಅಷ್ಟೇ ಅಲ್ಲ, ಅಲ್ಲಿಯ ಭೂತಗಳು ಇಲ್ಲಿಲ್ಲ; ಇಲ್ಲಿ ಮಾತ್ರವಲ್ಲ, ಅಲ್ಲಿಯಂತೆ ವ್ಯಕ್ತಿತ್ವವನ್ನು ಪಡೆದು ಚರಿತ್ರೆಯನ್ನು ಹೇಳಿಸಿಕೊಂಡು, ಆರಾಧನೆಗೊಳ್ಳುವ ಭೂತಗಳು ಇಲ್ಲಿಲ್ಲ. ಇಲ್ಲಿ ಪ್ರೇತಗಳನ್ನೇ ಭೂತಗಳೆಂದು ತಪ್ಪಾಗಿ ಕರೆಯುವುದುಂಟು. ಹಿಂದೆ ಅವು ಇದ್ದಿರಬಹುದಾದರೂ, ಎಂದೋ ದೇವತೆಗಳ ಸ್ಥಾನಮಾನಗಳನ್ನು ಪಡೆದುಕೊಂಡಂತೆ

---

[1] Ibid, p. 84.

[2] ಭೂತಾರಾಧನೆಯ ಕಥೆಗಳು : ಕೇನಸಹಿರಾಜಮುಲ್ಲ, ಪು. ೧.

ಕಾಣುತ್ತವೆ. ಅವುಗಳಲ್ಲಿ ಕೆಲವು ಶಿವ ಅಥವಾ ಪಾರ್ವತಿಯರ ರೂಪಾಂತರಗಳೆಂದೂ ಹೇಳುವುದುಂಟು. ಶಿವ ಭೂತನಾಥ ತಾನೆ!

ಮಲೆನಾಡಿನಲ್ಲಿ ನೂರಕ್ಕಿಂತಲೂ ಹೆಚ್ಚು ಭೂತಗಳಿರಬೇಕೆಂದು ಹೇಳುತ್ತಾರೆ.[1] ಅವುಗಳಲ್ಲಿ ಕೆಲವೇ ಭೂತಗಳ ಆರಾಧನೆ ವ್ಯಾಪಕವಾಗಿ ಹರಡಿವೆ. ಪಿಲಿಚಾಮುಂಡಿ, ಬಬ್ಬರ್ಯ, ಪಂಜುರ್ಲಿ, ಕಲ್ಲುರ್ಟಿ, ಕಲ್ಕುಡ, ಮೈಸಂತಾಯ, ಕೋಟಿ–ಚೆನ್ನಯ ಮೊದಲಾದುವು ಮಲೆನಾಡಿನ ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಒಂದೊಂದು ಮನೆತನಕ್ಕೆ ಅಥವಾ ಗ್ರಾಮಕ್ಕೆ ಒಂದೊಂದು ಭೂತ ಮೀಸಲು. ಆ ಒಂದೊಂದು ಭೂತದ ಬಗೆಗೂ ಅನೇಕ ದಂತಕಥೆಗಳಿವೆ, ಪವಾಡಗಳಿವೆ. "ತುಳುನಾಡಿನಲ್ಲಿ ಪ್ರಚಲಿತವಿರುವ ಮಾತೃಮೂಲದ ಅಳಿಯ ಸಂತಾನ ಕಟ್ಟಳೆಗೂ ಭೂತವ ಮೂಲವಿದೆ. ಭೂತಾಳ ಪಾಂಡ್ಯನೆಂಬ ಅರಸು ಬಾರಕೂರಲ್ಲಿ ಆಳುತ್ತಿರುವಾಗ ಹೊಸ ಹಡಗೊಂದಕ್ಕೆ ಕುಂಡೋದರನೆಂಬ ಭೂತ ನರಬಲಿ ಕೇಳಿತಂತೆ. ಇದಕ್ಕೆ ಅವನ ಮಕ್ಕಳು ಕೂಡಾ ಸಿದ್ಧರಿಲ್ಲದಾಗ, ಅವನ ತಂಗಿಯು ತನ್ನ ಮಗನನ್ನು ಬಲಿಕೊಡಲು ಮುಂದಾದಾಗ ಅವನು ತನ್ನ ರಾಜ್ಯದಲ್ಲಿ ಅಳಿಯಕಟ್ಟಿನ ಪದ್ಧತಿಯನ್ನು ಸ್ಥಾಪಿಸಿದನು."[2] ಕೋಟಿ–ಚೆನ್ನಯರ ಕಥೆಯಂತು ವೀರಗಾಥೆಯಾಗುವ ಯೋಗ್ಯತೆಯನ್ನು ಪಡೆದಿದೆ.[3]

ಭೂತಕಥೆಗಳು ನಡುಗಾಲದ ಯೂರೋಪಿನಲ್ಲಿ, ಅವಿದ್ಯೆ ತುಂಬಿತುಳುಕುತ್ತಿರುವ ಆಧುನಿಕ ರಾಷ್ಟ್ರಗಳಲ್ಲಿ ಸಾರ್ವತ್ರಿಕ ಹರಡಿವೆ. ಮುಂದುವರಿದ ದೇಶಗಳಲ್ಲಿ ಅವುಗಳನ್ನು ನಂಬುವ ಜನ ಇಲ್ಲವೆಂದಲ್ಲ. ಅಷ್ಟೇ ಏಕೆ, ಆ ಬಗ್ಗೆ ಪ್ರಯೋಗಶಾಲೆಗಳಲ್ಲಿ ಸಂಶೋಧನೆಯೂ ನಡೆಯುತ್ತಿದೆ. ಮಹಾಸುಧಾರಕನಾದ ಮಾರ್ಟಿನ್ ಲೂಥರ್ ಸಹ ಅವುಗಳನ್ನು ಪ್ರತ್ಯಕ್ಷವಾಗಿ ಕಂಡಿದ್ದನಂತೆ. ಚರ್ಚಿನಲ್ಲಿ ಆರಾಧನೆ ಅಥವಾ ವಿಧಿವಿಹಿತವಾದ ಆಚರಣೆಗಳು ನಡೆಯುವ ಕಾಲದಲ್ಲಿ ಭೂತ ಶೀಘ್ರಲಿಪಿಗಾರನ ರೂಪದಲ್ಲಿ ಹೆಂಗಸರ ಕಾಡುಹರಟೆಯನ್ನು ಬರೆದುಕೊಳ್ಳುತ್ತಿತ್ತೆಂದು ವರದಿಯಾಗಿದೆ. ಕ್ರೈಸ್ತರು ಇಸ್ಪೀಟಾಡುವಾಗ ಅವರ ಜತೆ ಅದೂ ಸೇರಿಕೊಳ್ಳುತ್ತಿದ್ದಂತೆ. ಉಪವಾಸವ್ರತದ ದಿನ ವೀಣಾವಾದ್ಯಗಾರನಾಗಿ ಹಳ್ಳಿಗರನ್ನು ಕುಣಿಸುತ್ತಿದ್ದಂತೆ. ಹೆಣ್ಣಿನ ರೂಪದಲ್ಲಿ ಬಂದು ಗಂಡಸರನ್ನು ಮೋಹಿಸುತ್ತಿದ್ದಂತೆ.[4] ಮದುವೆಯಾಗದ ಯುವಕರನ್ನು ಮೋಹಿನಿ ಕಾಡುತ್ತಾಳೆಂಬ ನಂಬಿಕೆ ಭಾರತೀಯರಿಗೆ ಹೊಸದಲ್ಲ. ಭೂತಗಳು ಪಾದ್ರಿಗಳ ದುಶ್ಚರಿತಗಳನ್ನು ಬಯಲುಮಾಡುವುದೂ ಉಂಟಂತೆ. ಮನುಷ್ಯರು ಬಯಸಿದ ಕೆಲಸಗಳನ್ನು ಸಹ ಅವು ಪೂರೈಸಿಕೊಡುತ್ತವೆ. ಮೊದಲು ಪ್ರವೇಶಿಸಿದ ಪ್ರಾಣಿಯನ್ನು ತನಗೆ ಕೊಡುವುದಾದರೆ ಅರಮನೆಯನ್ನೋ ಸೇತುವೆಯನ್ನೋ

1 ಬೇರೆ ಬೇರೆ ದೇಶಗಳಲ್ಲಾಗಲೀ, ಭಾರತದ ಇತರ ಕಡೆಗಳಲ್ಲಾಗಲೀ [illegible] ಭೂತಾರಾಧನೆಯ ಕಥೆಗಳ ವಿಷಯ ನನಗೆ ತಿಳಿದಿಲ್ಲವಾದ್ದರಿಂದ, ಆ ಬಗ್ಗೆ [illegible] ಪ್ರಸ್ತಾಪಿಸಿಲ್ಲ.

2 ಭೂತಾರಾಧನೆಯ ಕಥೆಗಳು, [illegible], ಪು. ೪.

3 ಕೋಟಿ ಚೆನ್ನಯ ಮತ್ತು ಇತರ ಭೂತಗಳ ಕಥೆಗಳಿಗಾಗಿ ಅದೇ ಗ್ರಂಥ [illegible].

4 *The Science of Folklore* by A. H. Krappe, P. 95.

ಕಟ್ಟಿಕೊಡುವುದಾಗಿ ಭೂತ ರಾಜಕುಮಾರನೊಬ್ಬನಿಗೆ ವಾಗ್ದಾನಮಾಡುತ್ತದಂತೆ. ರಾಜಕುಮಾರ ಭೂತದ ಷರತ್ತನ್ನಂಗೀಕರಿಸುತ್ತಾನೆ. ನಿರ್ಮಾಣಕಾರ್ಯ ಮುಗಿದನಂತರ ಪ್ರಾಣಿಯೊಂದು ಮೊದಲು ಪ್ರವೇಶಿಸುವಂತೆ ರಾಜಕುಮಾರ ಏರ್ಪಾಡು ಮಾಡಿ ಜಾಣ ತನದಿಂದ ಭೂತ ಹಾಕಿದ ಷರತ್ತನ್ನು ಗೆಲ್ಲುತ್ತಾನೆ.[1]

ರಾಕ್ಷಸರು, ಪ್ರೇತಗಳು, ವನದೇವತೆ ಜಲದೇವತೆಯರು ಯೂರೋಪೀಯ ಐತಿಹ್ಯಗಳ ಬೆಳವಣಿಗೆಗೆ ಪ್ರೇರಕಶಕ್ತಿಯಾಗಿದ್ದಾರೆ. ಗ್ರೀಕ್ ಮತ್ತು ರೋಮನ್ನರ ಪುರಾಣಗಳಲ್ಲಿ ಆ ಐತಿಹ್ಯಗಳು ಸೇರಿಕೊಂಡಿವೆ. ಕುದುರೆ ಅಥವಾ ಗೂಳಿಯ ರೂಪದ ನದೀಪಿಶಾಚಿ ತನ್ನ ಮೇಲೆ ಸವಾರಿಮಾಡುವಂತೆ, ನೇಗಿಲಿಗೋ ಗಾಡಿಗೋ ಹೂಡುವಂತೆ ಮನುಷ್ಯರನ್ನು ಪುಸಲಾಯಿಸುತ್ತದಂತೆ. ಹೂಡಿದನಂತರ ಅವರನ್ನು ಹೊತ್ತುಕೊಂಡೋ ಎಳೆದುಕೊಂಡೋ ನದಿ ಅಥವಾ ಸರೋವರದ ತಳಕ್ಕೊಯ್ಯುತ್ತದಂತೆ. ದಡದ ಬಳಿ ಹೆಂಗಸರೇನಾದರೂ ಬಂದದ್ದಾದರೆ, ಅವರನ್ನು ಚಕಿತಗೊಳಿಸಿ ನೀರಿನೊಳಗೊಯ್ದು, ತಮ್ಮಂಥ ಮಕ್ಕಳನ್ನು ಅವರ ಮೂಲಕ ಪಡೆಯುತ್ತದಂತೆ. ನದಿಯಲ್ಲಿರುವ ಶಕ್ತಿಗಳು ಆಗಾಗ್ಗೆ ನರಬಲಿಯನ್ನು ತೆಗೆದುಕೊಳ್ಳುತ್ತವೆ. ಅವೇನಾದರೂ ವ್ಯಕ್ತಿಯೊಬ್ಬನನ್ನು ಆಹುತಿಗೆ ಆಯ್ದುಕೊಂಡದ್ದಾದರೆ ಬೇರಾವ ಶಕ್ತಿಯೂ ಆತನನ್ನು ರಕ್ಷಿಸಲಾರದು. ಕೆಲ್ಟಿಕ್ ಮತ್ತು ಟ್ಯೂಟಾನಿಕ್ ಐತಿಹ್ಯಗಳಲ್ಲಿ ಇಂಥ ವಸ್ತುವೇ ಅಧಿಕವಾಗಿದೆ. ಜಲಮೋಹಿನಿಯರು ಸಂಗೀತದಲ್ಲಿ ತುಂಬ ಪ್ರವೀಣೆಯರೆಂಬ, ಸರಳ ತಂತ್ರದ ಮೂಲಕ ಮನುಷ್ಯರನ್ನು ಸಂಗೀತವಿಶಾರದರನ್ನಾಗಿ ಮಾಡಬಲ್ಲರೆಂಬ, ತಮ್ಮ ಬಳಿಯಿರುವ ವಾದ್ಯವನ್ನು ನುಡಿಸಿದರೆ ಚರಾಚರವಸ್ತುಗಳು ಕುಣಿದು ಕುಪ್ಪಳಿಸುತ್ತವೆಂಬ ನಂಬಿಕೆ ಸ್ಕ್ಯಾಂಡಿನೇವಿಯಾ ಮತ್ತು ಬಾಲ್ಟಿಕ್ ಪ್ರದೇಶದ ಜನರಲ್ಲಿದೆ.

ಸ್ಲಾವ್ ಕಥೆಗಳಲ್ಲಿ ರಕ್ತಪಿಶಾಚಿಗಳ ಪಾತ್ರ ದೊಡ್ಡದು. ಸತ್ತವನ ಪಿಶಾಚಿ ತೋಳ ಅಥವಾ ಬೇರೆ ಯಾವುದಾದರೂ ಪ್ರಾಣಿಯರೂಪದಲ್ಲಿ ತನ್ನ ಪೂರ್ವಜನ್ಮದ ವಿರೋಧಿಗಳ ಮೇಲೆ ಸೇಡುತೀರಿಸಿಕೊಳ್ಳುತ್ತದಂತೆ. ಅಂಥ ನಂಬಿಕೆ ಭಾರತ ಮೊದಲುಗೊಂಡು ಅನೇಕ ದೇಶಗಳಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ರಕ್ತಪಿಶಾಚಿಗಳ ಕಥೆಗಳು ಐಸ್‌ಲೆಂಡಿನಲ್ಲಿ ಭಾರಿ ಪ್ರಮಾಣದಲ್ಲಿವೆ. ವೃಕಮನುಷ್ಯರು, ವ್ಯಾಘ್ರಮನುಷ್ಯರು, ಜತೆಗೆ ಮೂಷಿಕಮನುಷ್ಯರು ಸ್ಲಾವ್ ಕಥೆಗಳಲ್ಲಿ ಗೋಚರಿಸುತ್ತಾರೆ.

ಈತನಕ ವಿವರಿಸಿದ ಐತಿಹ್ಯಗಳು ಸ್ಥಳೀಯವಾಗಿದ್ದು, ಅವು ಅಲ್ಲಿಯೇ ಉಳಿಯುತ್ತವೆ ಅಥವಾ ನಶಿಸುತ್ತವೆ. ಅವು ಸಾಮಾನ್ಯವಾಗಿ ತಮ್ಮ ಗಡಿಯಿಂದಾಚೆಗೆ ಹೋಗುವುದಿಲ್ಲ. ತಮ್ಮ ಸೀಮೆಯನ್ನು ದಾಟಿ, ಸ್ವದೇಶವಿದೇಶಗಳಲ್ಲೆಲ್ಲ ಗರುಕೆಯಂತೆ ಹಬ್ಬುವ ಕಥೆಗಳನ್ನು ಪ್ರವಾಸೀ ಐತಿಹ್ಯಗಳೆಂದು ಕರೆಯುತ್ತಾರೆ.[2] ಕಾಲ್ಪನಿಕ ಕಥೆಗಿಂತ ಚಿಕ್ಕದಾದ, ಗದ್ಯಾತ್ಮಕ

[1] Ibid, PP. 96–97.

[2] ಜರ್ಮನ್ ಭಾಷೆಯ Wandersage ಎನ್ನುವ ಪದದ ಭಾಷಾಂತರ migratory legend.

ವಾದ, ಮಿತ ಪಾಠಾಂತರಗಳುಳ್ಳ ಕಥೆಯೇ ಪ್ರವಾಸೀ ಐತಿಹ್ಯ.[1] ಕೆಲವು ಪಾಠಾಂತರಗಳು ನಿರ್ದಿಷ್ಟ ಸ್ಥಾನಗಳಿಗೆ ಸೀಮಿತಗೊಳ್ಳಬಹುದು. ಆಶಯಗಳ ಸಂಖ್ಯೆ ಹೆಚ್ಚಾಗಿದ್ದು, ಕ್ರಮಬದ್ಧವಾಗಿ ಸ್ಥಿರಗೊಂಡಿರುವುದರಿಂದ, ಹಾಗೂ ಅವುಗಳ ಹಿನ್ನೆಲೆಯಲ್ಲಿ ಯಾವುದೋ ಒಂದು ವಾಸ್ತವಿಕಘಟನೆಯಿದ್ದು, ಅದರ ಸುತ್ತ ಕತೆ ವಿಕಾಸಗೊಳ್ಳುವುದಾದ್ದರಿಂದ, ಬಹುಮೂಲ ಸಿದ್ಧಾಂತ ಈ ಐತಿಹ್ಯಗಳಿಗೆ ಅನ್ವಯವಾಗುವುದಿಲ್ಲವೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪಾಠಾಂತರಗಳು ಸಹ ಸಾಕಷ್ಟು ಸಂಖ್ಯೆಯಲ್ಲಿಲ್ಲದಿರುವುದರಿಂದ ತೌಲನಿಕ ಅಧ್ಯಯನ ತೃಪ್ತಿಕರವಾಗಿ ನಡೆಯಲಾರದು. ಇದರಿಂದಾಗಿ ಈ ಐತಿಹ್ಯಗಳು ನಿರ್ದಿಷ್ಟ ಸ್ಥಳದಲ್ಲಿ, ನಿರ್ದಿಷ್ಟಕಾಲದಲ್ಲಿ ಉಗಮಗೊಂಡಿರಬಹುದೆಂದು ಊಹಿಸಬಹುದಾಗಿದೆ. ಆದರೆ ಆ ಸ್ಥಳಕಾಲನಿರ್ಣಯವೂ ಕಷ್ಟಸಾಧ್ಯವಾಗಿದೆ. ಯಾವುದೋ ಒಂದು ಆಚರಣೆ ಅಥವಾ ನಂಬಿಕೆ ಅವುಗಳಿಗೆ ಆಧಾರವೆಂದು ಸ್ಪಷ್ಟವಾಗಿ ಹೇಳುವಂತಿಲ್ಲ. ಏಕೆಂದರೆ ಬೇರೆಬೇರೆ ದೇಶದ ಆಚರಣೆಗಳಲ್ಲಿ ಸಾದೃಶ್ಯವಿರಬಹುದು; ಅಥವಾ ಬೇರೊಂದು ಆಚರಣೆ ಆಧಾರವಾಗಬಹುದು.

ಕೋಟೆ ಗೋಡೆಯ ಅಥವಾ ಕೆರೆ ಏರಿಯ ಭದ್ರತೆಗಾಗಿ ಮಕ್ಕಳ ಆಹುತಿ ಅತ್ಯಗತ್ಯವೆಂದು ತಿಳಿವಳಿಕೆಯಿದ್ದ ಕಾಲವೊಂದಿತ್ತು. ಇದು ಜಗತ್ತಿನ ಎಲ್ಲ ಜನಾಂಗಗಳಲ್ಲಿ ರೂಢಿಯಲ್ಲಿದ್ದ ತಿಳಿವಳಿಕೆ. ಆದ್ದರಿಂದ ಭಾರತದ ಒಂದು ಮೂಲೆಯಲ್ಲಿ ನಡೆದ ಘಟನೆಯ ಆಧಾರದಮೇಲೆ ವಿಕಾಸಗೊಂಡ ಐತಿಹ್ಯ ಆ ನಂಬಿಕೆ ಚಾಲ್ತಿಯಲ್ಲಿರುವ ಬೇರೆ ದೇಶಗಳಿಗೆ ಸುಲಭವಾಗಿ ಪ್ರಯಾಣಮಾಡುತ್ತದೆ. ಈ ಸಂದರ್ಭದಲ್ಲಿ 'ಬಲಿಶಿಶುವಿನ ಕೊನೆಯ ಮಾತು' (Victim's Last Words) ಎಂಬ ಕಥೆಯ ಉಗಮವಿಕಾಸಗಳನ್ನು ಕುರಿತು ಪರಿಶೀಲಿಸಬಹುದು. ಯೂರೋಪಿನಲ್ಲಿ ಒಂದು ಗೋಡೆಯ ತಳಹದಿಗೆ ಹಾಕುವ ಸಲುವಾಗಿ ಒಂದು ಮಗುವನ್ನು ತರಲಾಗಿತ್ತು. ಅದರ ಕೊನೆಯ ಮಾತು ನೆರವಿಯ ಕಣ್ಣುಗಳ ನೀರು ತಂದಿತು. ಮಧ್ಯಏಷಿಯಾದಲ್ಲಿ ನಡೆದ ಕಥೆ ಇವಕ್ಕಿಂತ ಭಿನ್ನವಾದದ್ದು. ಒಬ್ಬಾನೊಬ್ಬ ದೊರೆ ಕುಷ್ಠರೋಗದಿಂದ ನರಳುತ್ತಿದ್ದ. ಮಗುವೊಂದರ ರಕ್ತದಲ್ಲಿ ಮಿಂದರೆ ಅದು ವಾಸಿಯಾಗುತ್ತದೆಂದು ಕೇಳಿದ್ದ. ಹಣದಾಸೆಗೆ ಯಾರೋ ಗರೀಬ ತಂದೆತಾಯಿಯರು ತಮ್ಮ ಮಗುವನ್ನು ದೊರೆಗೊಪ್ಪಿಸಿದರು. ಸಾವಿನ ಸಮಯದಲ್ಲಿ ಆ ಮಗು ಕಿಲಕಿಲನೆ ನಕ್ಕಿತು. ನಗುವಿನ ಕಾರಣ ಕೇಳಿದಾಗ, "ಸಾಮಾನ್ಯವಾಗಿ ಮಕ್ಕಳಿಗೆ ತಂದೆತಾಯಿಯರು ಆಸರೆಯಾಗಬೇಕು; ತಬ್ಬಲಿಗಳಿಗೆ ರಾಜರ ಆಶ್ರಯ ಬೇಕು. ಇಲ್ಲಿಯ ತದ್ವಿರುದ್ಧವಾದ ಸ್ಥಿತಿಯನ್ನು ಕಂಡು ನಗು ಬಂತು" ಎಂದು ಮಗು ಉತ್ತರ ನೀಡಿತು. ಭೂತಕ್ಕೆ ಮಗುವನ್ನು ಬಲಿಕೊಡಬೇಕಾದ ಸಂದರ್ಭದಲ್ಲಿ ಪುರೋಹಿತ ಯಜ್ಞವಿಧಿಗಳನ್ನು ಪೂರೈಸುವಾಗ, ತಂದೆತಾಯಿಯರು ಮತ್ತು ದೊರೆ ಆ ಮಗುವನ್ನು ಹಿಡಿದುಕೊಂಡಿರಬೇಕಾದ ಪದ್ಧತಿ ಹಿಂದಿನ ಕಾಲದ ಭಾರತದಲ್ಲಿ

---

1 By it we mean a narrative of a certain length, usually shorter than a fairy tale, in prose, existing in a limited number of Varaints-*The Science of Folklore*, P. 101.

ರೂಢಿಯಲ್ಲಿತ್ತಂತೆ. ಆಗಲೂ ಮಗು ವ್ಯಂಗ್ಯವಾಗಿ ನಗುತ್ತಿತ್ತಂತೆ. ತಂದೆತಾಯಿಯರು, ದೊರೆ ಮತ್ತು ಪುರೋಹಿತರು ಸಾಂಪ್ರತ ಜೀವನದ ವರ್ತನೆಯನ್ನವಲಂಬಿಸಿರುವ ಮರು ಹುಟ್ಟುಗಳನ್ನು ಮರೆತು, ಇಂದಿನ ದುಃಖಕರವೂ ಕ್ಷಣಿಕವೂ ಆದ ಶರೀರಗಳನ್ನು ರಕ್ಷಿಸಿ ಕೊಳ್ಳುವ ಸಲುವಾಗಿ, ಧರ್ಮಚ್ಯುತರಾಗಿ ಹೇಯ ವರ್ತನೆಯಲ್ಲಿ ತೊಡಗುವುದು ನಾಚಿಕೆ ಗೇಡಿತನ ಎಂದು ಆ ಮಗು ಕಾರಣ ಕೇಳಿದವರಿಗೆ ಪ್ರತ್ಯುತ್ತರ ನೀಡಿತಂತೆ. ಬೌದ್ಧಮತದ ಮುಖ್ಯ ತತ್ವವೊಂದರ ಪ್ರತಿಪಾದನೆಗೆ ನಿದರ್ಶನವೊದಗಿಸುವ ಸಲುವಾಗಿ ಈ ಕಥೆ ಸೃಷ್ಟಿ ಯಾಯಿತೆಂದೂ, ಅನಂತರ ಅದು ಮಧ್ಯ ಏಷಿಯಾದ ಮೂಲಕ ಯೂರೋಪಿಗೆ ಪಯಣಿಸಿ ತೆಂದೂ, ಅಲ್ಲಿ ತಳಹದಿ-ಬಲಿಗೆ ಅದನ್ನಳವಡಿಸಿಕೊಳ್ಳಲಾಯಿತೆಂದೂ ಹೇಳಲಾಗಿದೆ. ಪ್ರಯಾಣ ಕಾಲದಲ್ಲಿ ಅದು ತನ್ನ ಮೂಲೋದ್ದೇಶವನ್ನು ಕಳೆದುಕೊಳ್ಳುವುದು ಸಹಜ.

ಭಾರತದಿಂದ ಬೇರೆ ಕಡೆಗಳಿಗೆ ಈ ಐತಿಹ್ಯಗಳು ವಲಸೆ ಹೋದಂತೆ, ಬೇರೆ ದೇಶ ಗಳಿಂದಲೂ ಕೆಲವು ಐತಿಹ್ಯಗಳು ಭಾರತಕ್ಕೆ ಬಂದಿರಬೇಕು. ಅವುಗಳಲ್ಲೊಂದು ಸೆಮಿಟಿಕ್ ಜನಾಂಗದಲ್ಲಿ ರೂಢಿಯಲ್ಲಿದ್ದ ವಿವೇಕಿ ಅಹಿಕರ್ ಕಥೆ. ನದನ್ ಎಂಬ ಕೃತಘ್ನ ದಾಯಾದಿಯ ಚಾಡಿಯಿಂದಾಗಿ ಅಹಿಕರ್ ದೊರೆಯ ಕೋಪಕ್ಕೆ ಗುರಿಯಾಗುತ್ತಾನೆ. ಅವನು ಗೆಳೆಯನೊಬ್ಬನ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದು, ಕೊನೆಗೆ ಪರಾರಿಯಾಗು ತ್ತಾನೆ. ಈ ದೊರೆಯ ಮೇಲೆ ಅಹಿಕರ್ ಕೊಲೆಯ ಅಪರಾಧವನ್ನು ಹೊರಿಸಿ, ಮತ್ತೊಬ್ಬ ದೊರೆ ಕೆಲವು ಅಸಾಧ್ಯ ಷರತ್ತುಗಳನ್ನು ಪೂರೈಸುವಂತೆ ಎಚ್ಚರಿಕೆ ನೀಡುತ್ತಾನೆ. ಅಹಿಕರ್ ಸತ್ತಿಲ್ಲವೆಂಬುದನ್ನು ತೋರಿ, ದೊರೆ ಬಚಾವಾಗುತ್ತಾನೆ, ಚಾಡಿಕೋರ ದಾಯಾದಿಯನ್ನೂ ಶಿಕ್ಷಿಸುತ್ತಾನೆ. ಇದೇ ಕಥೆ ಕೆಲವು ಬದಲಾವಣೆಗಳೊಡನೆ ನಡುಗಾಲದ ಭಾರತದಲ್ಲಿ ಕಾಣಿಸಿಕೊಳ್ಳುತ್ತದೆ.[1]

ಬೇವ್ರುಲ್ಫ್ ಕಥೆಯೂ ಪ್ರವಾಸೀ ಐತಿಹ್ಯವನ್ನಾಧರಿಸಿ ವಿಕಾಸಗೊಂಡದ್ದೆಂದು ತಜ್ಞರು ಸ್ಪಷ್ಟಪಡಿಸಿದ್ದಾರೆ. ನಾಯಕ ಮನೆಯನ್ನು ಹಾಳುಮಾಡುತ್ತಿದ್ದ ಭೂತವೊಂದರ ಮೇಲೆ ಹಾಯುತ್ತಾನೆ. ಹೋರಾಟದಲ್ಲಿ ತೋಳನ್ನು ಕಳೆದುಕೊಂಡ ಭೂತ ಕಣ್ಣಿಗೆ ಕಾಣಿಸದಂತೆ ಮರೆಯಾಗುತ್ತದೆ. ಆದರೆ ದಾರಿಯುದ್ದಕ್ಕೂ ಚೆಲ್ಲಿದ್ದ ರಕ್ತದ ನಿಶಾನಿಯನ್ನು ಹಿಂಬಾಲಿಸಿ, ಸರೋವರದ ತಳಗಿದ್ದ ಮರೆಯಲ್ಲಿ ಅವನು ವಾಸಿಸುತ್ತಿದ್ದುದಾಗಿ ನಾಯಕ ಪತ್ತೆ ಹಚ್ಚುತ್ತಾನೆ; ನೀರಿನೊಳಗೆ ಮುಳುಗಿ ಆ ಭೂತವನ್ನು ಕೊಲ್ಲುತ್ತಾನೆ. ಇದೇ ಕಥೆ ಕಥಾಸರಿತ್ಸಾಗರದಲ್ಲಿಯೂ ಸಿಗುತ್ತದೆ. ಆದರೆ ಇವೆರಡಕ್ಕೂ ಮೂಲ ಮಧ್ಯ ಏಷಿಯಾದ ಟೋಬಿತ್ ಕಥೆ. ಅದು ಪೂರ್ವ ಹಾಗೂ ಪಶ್ಚಿಮಾಭಿಮುಖವಾಗಿ ಯಾತ್ರೆ ಹೊರಟಿ ತೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ.

ಸ್ವಪ್ನದಲ್ಲಿ ಕಾಣಿಸಿದ ನಿಧಿಯನ್ನು ಬಳಸಿಕೊಂಡು ಸಾಮಾನ್ಯಜನ ರಾಜ್ಯಕಟ್ಟಿದ ಕಥೆ ಗಳು ಪ್ರತಿಯೊಂದು ದೇಶದಲ್ಲಿಯೂ ದೊರೆಯುತ್ತವೆ. ಕೆಂಪೇಗೌಡನ ಕಥೆ ಇಂಥದೊಂದು.

[1] ಈ ಭಾಗ ಬರೆಯುವಾಗ ಕ್ರಾಪೆಯವರ *The Science of Folklore* ಗ್ರಂಥದ The Migratory Legend ಎಂಬ ಪ್ರಕರಣವನ್ನು ಬಹುವಾಗಿ ಬಳಸಿಕೊಂಡಿದೆ.

ಫ್ರಾಂಕ್ ದೊರೆ ಗುಂಚ್ರಾಮ್‌ನ (Guntchram) ಕಥೆ ತುಂಬ ಸ್ವಾರಸ್ಯವಾಗಿದೆ. ಅವನೊಂದು ದಿನ ಬಯಲಿನಲ್ಲಿ ನಿದ್ದೆಮಾಡುತ್ತಿದ್ದ. ಅವನ ಬಾಯಿಂದ ಇಲಿಯೊಂದು ಜಾರಿ ಇಕ್ಕಟ್ಟಾದ ಕಂದಕದ ಕಡೆಗೆ ಓಡಿಹೋದದ್ದನ್ನು ಕಾವಲು ಸೈನಿಕ ಕಂಡ. ಅವನು ಅದರ ಮೇಲೆ ಕತ್ತಿ ಬಿಸಾಡಿದನು. ಅದು ತಪ್ಪಿಸಿಕೊಂಡು ಮತ್ತೊಂದು ಕಡೆ ಇದ್ದ ಸಮಾಧಿಗುಡ್ಡೆಯನ್ನು ಪ್ರವೇಶಿಸಿತು. ತುಸು ಹೊತ್ತಿನಲ್ಲಿ ಅದು ಹಿಂದಕ್ಕೆಬಂದು ಕತ್ತಿಯನ್ನು ದಾಟಿ, ದೊರೆಯ ಬಾಯಿಯೊಳಗೆ ಪ್ರವೇಶಿಸಿತು. ಒಡನೆಯೆ ದೊರೆ ಎಚ್ಚತ್ತು, ತಾನು ಕಂಡ ಸ್ವಪ್ನವನ್ನು ಕಾವಲಾಳಿಗೆ ವಿವರಿಸಿದನು. ಉಕ್ಕಿನ ಸೇತುವೆಯ ಮೂಲಕ ಗುಪ್ತ ನಿಧಿಯ ಬಳಿ ತಾನು ಹೋಗುವುದಾಗಿ ಅವನು ಕನಸಿನ ಅರ್ಥವನ್ನು ವಿಶದಪಡಿಸಿದನು. ಸಮಾಧಿ ಗುಡ್ಡೆಯನ್ನಗೆದಾಗ ಅವನಿಗೆ ದೊಡ್ಡ ನಿಧಿ ಪ್ರಾಪ್ತಿಸಿತು. ಈ ಕಥೆ ಅನೇಕ ಪಾಠಾಂತರಗಳೊಡನೆ ಇಂಡಿಯಾ ಮತ್ತು ಯೂರೋಪುಖಂಡಗಳಲ್ಲಿ ದೊರೆಯುತ್ತದೆ. ಹಾನ್ಸ್‌ನೂಮನ್ ಬಹುಮೂಲ ಸಿದ್ಧಾಂತವನ್ನು ಈ ಕಥೆಗನ್ವಯಿಸುತ್ತಾರೆ. ಆತ್ಮ ಇಲಿ ರೂಪದಲ್ಲಿ ಗೋಚರವಾಗುತ್ತದೆಂಬ ನಂಬಿಕೆ ಕೆಲವು ಜನಾಂಗಗಳಲ್ಲಿ ಬಳಕೆಯಲ್ಲಿತ್ತು; ಆದರೂ ಕಥೆ ಯಾವುದೋ ಒಂದು ಜಾಗದಲ್ಲಿ ಹುಟ್ಟಿ, ಸರ್ವದಿಕ್ಕುಗಳಿಗೂ ತೀವ್ರವಾಗಿ ಹರಡಿದೆ ಎಂದು ಕ್ರಾಪೆ ವಾದಿಸುತ್ತಾರೆ.[1] ಗುಪ್ತನಿಧಿಗೆ ಸಂಬಂಧಿಸಿದ ಕಥೆಗಳು ಯಾವೊಂದು ದೇಶಕ್ಕೂ ಸೀಮಿತವಾದುವಲ್ಲ. ಆದ್ದರಿಂದ ನೂಮನ್ನನ ಅಭಿಪ್ರಾಯವೇ ಸಮಂಜಸವಾದುದೆಂದು ಹೇಳಬೇಕಾಗುತ್ತದೆ.

ಪ್ರವಾಸೀ ಮತ್ತು ಸ್ಥಳೀಯ ಐತಿಹ್ಯ ಚಕ್ರಗಳು ದೊರೆ ಅರ್ಥರ್ ಅಂಥ ವೀರಾಧಿ ವೀರರ ಇತಿಹಾಸಗಳನ್ನು ಪೋಷಿಸಿವೆ. ಅವರು ಪರ್ವತದಲ್ಲಿ ಅಡಗಿದ್ದು, ಎಂದೋ ಒಮ್ಮೆ, ತಮ್ಮ ನಾಡಿನ ಗೌರವಪ್ರತಿಷ್ಠೆಗಳನ್ನು ಶಿಖರಸ್ಥಾನಕೊಯ್ಯುವ ಸಲುವಾಗಿ ಹೊರಗೆ ಬರುತ್ತಾರೆ. ಜರ್ಮನಿಯ ದ್ವಿತೀಯ ಫ್ರೆಡೆರಿಕ್‌ನ ಹೆಸರಿನೊಡನೆ ಇಂಥ ಕಥಾಚಕ್ರ ಬೆಸುಗೆ ಗೊಂಡಿರುವುದುಂಟು.

'ಅಪ್ರಾಮಾಣಿಕ ಮಡದಿ' ಎಂಬ ಕಥಾಚಕ್ರಕ್ಕೆ ಸೇರಿದ ಕಥೆಗಳಿಗೆ ಭಾರತೀಯ ಮೂಲವನ್ನು ಆರೋಪಿಸುವುದುಂಟು. La fille du comte de pontieu ಎಂಬ ಫ್ರೆಂಚ್ ಕಥೆ ಹೀಗಿದೆ: ಗಂಡಹೆಂಡಿರು ತೀರ್ಥಯಾತ್ರೆಗೆಂದು ಹೊರಡುತ್ತಾರೆ. ದಾರಿ ಯಲ್ಲಿ ದರೋಡೆಕೋರರು ಗಂಡನನ್ನು ಮರಕ್ಕೆ ಕಟ್ಟಿ, ಹೆಂಡತಿಯ ಮೇಲೆ ಅತ್ಯಾಚಾರ ವೆಸಗುತ್ತಾರೆ. ಅವರು ಆ ಜಾಗ ಬಿಟ್ಟನಂತರ ಹೆಂಡತಿ ಗಂಡನ ಕತ್ತಿಯನ್ನು ತೆಗೆದು ಕೊಂಡು ಅವನನ್ನು ಕೊಲ್ಲಲೆಳಸುತ್ತಾಳೆ. ಕತ್ತಿಯ ಏಟಿನಿಂದಾಗಿ ಹಗ್ಗ ಕತ್ತರಿಸುತ್ತದೆಯೇ ಹೊರತು ಅವನ ಕೂದಲು ಸಹ ಅಲುಗುವುದಿಲ್ಲ. ಹೀಗಾಗಿ ಅವನು ಬಿಡುಗಡೆ ಹೊಂದು ತ್ತಾನೆ. ಮೂಲಪ್ರತಿಯ ಪ್ರಕಾರ ಮಡದಿ ದರೋಡೆಕೋರರ ನಾಯಕನಲ್ಲಿ ಅನುರಕ್ತಳಾಗಿ ಗಂಡನನ್ನು ಕೊಲ್ಲಲು ಹವಣಿಸುತ್ತಾಳೆ. ಆ ಹವಣಿಕೆ ಮುಖ್ಯವಾಗುವುದಿಲ್ಲ. ಪ್ರವಾಸೀ ಐತಿಹ್ಯಗಳಲ್ಲಿ ಇದಕ್ಕೊಂದು ವಿಶಿಷ್ಟಸ್ಥಾನವಿದೆಯೆಂದು ಕ್ರಾಪೆ ಹೇಳುತ್ತಾರೆ. ಯಕ್ಷಿಣೀ

1 *Ibid*, P. 105.

ದೇವತೆ ತನ್ನ ಪ್ರಿಯಕರನನ್ನು ನಾಯಿಯಾಗಿ, ತೋಳನಾಗಿ, ಕತ್ತೆಯಾಗಿ ಅಥವಾ ಬೇರಾವುದೇ ಪ್ರಾಣಿಯಾಗಿ ಪರಿವರ್ತಿಸುವ ಕಥೆಗಳೂ ಹೇರಳವಾಗಿವೆ. ನತದ್ರಷ್ಟ ಪ್ರಿಯಕರ ಬೇರೊಬ್ಬ ಮಾಟಗಾತಿಯ ಸಹಾಯದಿಂದ ಅಥವಾ ಆಕಸ್ಮಿಕ ಘಟನೆಯಿಂದ ಮತ್ತೆ ಮಾನವರೂಪವನ್ನು, ಅನಂತರ ಯಕ್ಷಿಣೀ ದೇವತೆಯ ಮಾಟದಿಂದಾಗಿ ಪ್ರಾಣಿ ರೂಪ ತಳೆದಿದ್ದ ತನ್ನ ಹೆಂಡತಿಯನ್ನು ಅವನು ಮತ್ತೆ ಮಾನವರೂಪಕ್ಕೆ ಮರಳಿಸುತ್ತಾನೆ.

ಕಥನಕಲೆಯಲ್ಲೆಂತು ಪ್ರತಿಯೊಬ್ಬ ವ್ಯಕ್ತಿಯೂ ಸಿದ್ಧಿ ಪಡೆಯಲಾರನೋ ಅಂತೆಯೇ ಜಗತ್ತಿನ ಸಕಲ ಜನಾಂಗಗಳೂ ಸಾಫಲ್ಯಹೊಂದಲಾರವೆಂದು ಬೆನ್‌ಫಿ ಸಿದ್ಧಾಂತದ ಬಗ್ಗೆ ಸಂಶಯಗ್ರಸ್ತರಾಗಿರುವ ಕ್ರಾಪೆಯವರು ನುಡಿಯುತ್ತಾರೆ. ಅದರಲ್ಲಿ ಕೆಲವರು ಮಾತ್ರ ಮಿಗಿಲನ್ನು ಸಾಧಿಸಿದರೆ, ಉಳಿದವರು ತುಂಬ ಕೀಳ್ಮಟ್ಟದಲ್ಲಿರುತ್ತಾರೆ. ಅವರ ಪ್ರಕಾರ ಐಯೋನಿಯನ್ನರು ಆ ಕಲೆಯಲ್ಲಿ ನಿಸ್ಸೀಮರಂತೆ; ಅಟಿಕಾಕಥೆಗಳು ಐಯೋನಿಯಾ ಕಥೆಗಳ ಅನುಕರಣವಂತೆ; ಸ್ಪಾರ್ಟನ್ನರಲ್ಲಿ ಅದರ ಗಂಧವೇ ಇಲ್ಲವಂತೆ; ನಡುಗಾಲದಲ್ಲಿ ಫ್ರೆಂಚರು, ಐರಿಷರು ಮತ್ತು ಐಸ್‌ಲೆಂಡೀಯರು, ಜತೆಗೆ ಅರಬ್ಬರು ಸಿದ್ಧಿಯ ಶಿಖರವನ್ನು ಮುಟ್ಟಿದರಂತೆ. ಇದರ ಪರಿಣಾಮವಾಗಿ ಉಳ್ಳವರು ಇಲ್ಲದವರಿಗೆ ದಾನಮಾಡಿದ್ದಲ್ಲದೆ, ಉಳ್ಳವರೊಡನೆ ವಿನಿಮಯಮಾಡಿಕೊಂಡದ್ದುಂಟು. ಗ್ರೀಕ್ ಪುರಾಣಗಳನ್ನು ರೋಮನ್ನರು ಸೂರೆಗೊಂಡರು; ಗ್ರೀಕರು ಕೊನೆಕೊನೆಗೆ ಸೆಮಿಟಿಕ್ ಕಥೆಗಳನ್ನು ಎರವಲು ತೆಗೆದುಕೊಂಡರು. ಹೀಬ್ರೂಜನ ಗ್ರೀಕ್, ಪರ್ಷಿಯನ್ ಹಾಗೂ ಇಂಡಿಯನ್ನರಿಂದ ಕೆಲವನ್ನು ಪಡೆದುಕೊಂಡರು. ಕಥನಕಲೆ ಎಲ್ಲರಿಗೂ ಹೇಳಿಸಿದ್ದಲ್ಲ; ಕೆಲವರಿಗೆ ಮಾತ್ರವೇ ದೈವದತ್ತವಾಗಿ ಬಂದದ್ದು, ಉಳಿದವರು ಬೇರೆಯವರಿಂದ ಕಲಿಯಬೇಕಾಗುತ್ತದೆನ್ನುವ ಕ್ರಾಪೆಯವರ ಮಾತು ಒಪ್ಪತಕ್ಕದ್ದೇ ಸರಿ. ಭರತಖಂಡದಲ್ಲಿನ್ನೂ ಕಥಾಸಂಗ್ರಹ ಸಂಪೂರ್ಣವಾಗಿ ನಡೆದಿಲ್ಲ; ಆಫ್ರಿಕಾದಲ್ಲಿ ಆ ಕಾರ್ಯ ಮುಂದುವರಿದಿಲ್ಲ. ಜಗತ್ತಿನ ಎಲ್ಲ ಕಥೆಗಳು ಸಂಗ್ರಹಗೊಂಡಾಗ ಈ ಬಗ್ಗೆ ಕೊನೆಯ ತೀರ್ಪುನೀಡಿಕೆ ಸಾಧ್ಯವಾಗಬಹುದು. ಆದರೂ ಈಗಾಗಲೇ ದೊರೆತಿರುವ ಕಥೆಗಳ ಆಧಾರದ ಮೇಲೆ ಬೆನ್‌ಫಿ ಮೊದಲಾದವರು ಕೈಗೊಂಡಿರುವ ತೀರ್ಮಾನ ಸರಿಯಲ್ಲವೆಂದು ಹೇಳಲು ವಿರೋಧ ಪಕ್ಷದವರು ಕೊಡುವ ಕಾರಣಗಳು ಸಬಲವಾಗಿಲ್ಲ. ಪ್ರತಿಯೊಂದು ಕಥೆಯ ಇತಿಹಾಸವನ್ನು ದೋಷಾತೀತವಾಗಿ ರಚಿಸುವುದಾದರೆ ಯಾವ ಕಥೆ ಎಲ್ಲಿಂದ ಬಂತೆಂದು ಹೇಳಲು ಸಾಧ್ಯವಾಗುತ್ತದೆ. ಈ ಹೊತ್ತಿನ ಪಟ್ಟಿಗೆ ಹೇಳುವುದಾದರೆ ಗ್ರೀಸ್ ಮತ್ತು ಭಾರತ ಕಥೆಗಳ ಮೂಲ ಮಾತೃಸ್ಥಾನ ಎಂದು ಒಪ್ಪಬೇಕಾಗುತ್ತದೆ. ಈ ಹೇಳಿಕೆಗೆ ಕ್ರಾಪೆಯರ ಅಭಿಮತವೂ ಸಮರ್ಥನೆ ನೀಡುತ್ತದೆ. ಒಂದೇ ಚೌಕಟ್ಟಿನಲ್ಲಿ ಅನೇಕ ಕಥೆಗಳನ್ನು ತುಂಬುವ ರಚನಾಕೌಶಲ ನಿಸ್ಸಂದಿಗ್ಧವಾಗಿ ಭಾರತೀಯವಾದುದೆಂದು ಅವರೇ ಒಪ್ಪಿಕೊಳ್ಳುತ್ತಾರೆ. ಆ ಕಥೆಗಳು ಬೇರೆ ಬೇರೆ ದೇಶಗಳಲ್ಲಿ ಮುಂದಿನ ಕಥೆಗಳ ಉಗಮಕ್ಕೆ ಪ್ರೇರಕವಾಗುತ್ತವೆ. ಎರವಲು ಕಥೆಗಳಿಂದಲೇ ಯಾರೂ ಸಂತುಷ್ಟರಾಗುವುದಿಲ್ಲ. ಬೇರೆಡೆಯಿಂದ ಬಂದ ಕಥೆಗಳು ಜನಾಂಗದ ಸುಪ್ತಶಕ್ತಿಯನ್ನು ಜಾಗೃತಗೊಳಿಸಿ, ಸ್ವತಂತ್ರಕಥೆಗಳ ನಿರ್ಮಾಣಕ್ಕೆ ಕಾರಣ

ವಾಗುತ್ತವೆ. ಆ ಸ್ವತಂತ್ರ ಕಥೆಗಳು ಮುಂದಿನ ಕಥೆಗಳಿಗೆ ಮಾತೃಕೆಗಳಾಗುತ್ತವೆ. ಐರ್ಲೆಂಡ್, ಐಸ್‌ಲೆಂಡ್ ಮತ್ತು ಫಿನ್‌ಲೆಂಡ್ ದೇಶಗಳ ಕಥೆಗಳು ಯೂರೋಪಿನಲ್ಲೆಲ್ಲ ಅದಮ್ಯಪ್ರಭಾವವನ್ನು ಬೀರಿವೆ ಎನ್ನುವುದನ್ನಿಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ.

ಕಥೆಗಳ ಪ್ರಯಾಣಕ್ಕೆ ಯಾರು ಕಾರಣ? ಅವು ಹೇಗೆ ಯಾತ್ರೆ ಕೈಗೊಳ್ಳುತ್ತವೆ? ಪ್ರಯಾಣ ಸಮಯದಲ್ಲಿ ಏನಾದರೂ ವ್ಯತ್ಯಾಸವಾಗುತ್ತವೆಯೇ? ಎಂಬೆಲ್ಲ ಪ್ರಶ್ನೆಗಳು ಸಹಜವಾಗಿಯೇ ಮೂಡುತ್ತವೆ. ಲಿಪಿ ಸೌಕರ್ಯ ಪ್ರಾಪ್ತವಾಗುವ ಮುನ್ನ ಅವುಗಳ ವಹನಕಾರ್ಯ ಸಂಚಾರಶೀಲರಾದ ಸಾಹಸಿಗಳನ್ನವಲಂಬಿಸಿತ್ತು. ಪ್ರಾಗೈತಿಹಾಸಿಕ ಕಾಲದಲ್ಲಿ, ಊರುಕೇರಿಗಳ ಕಲ್ಪನೆ ಮೂಡುವುದಕ್ಕೆಮುಂಚೆ ಜನ ಒಂದು ಜಾಗಕ್ಕೆಕಟ್ಟುಗೊಳ್ಳದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದಾಡುತ್ತಿದ್ದರಷ್ಟೆ. ಆಗ ಇಡೀ ಜಗತ್ತೇ ಅವರ ಊರಾಗಿತ್ತು. ಆ ಜನ ತಂಡೋಪತಂಡವಾಗಿ ಅಲೆಯುತ್ತಿದ್ದಿರಬೇಕು. ಆ ತಂಡಗಳು ಒಂದು ಕಡೆ ಕಲೆತಾಗ ಅವರು ಕುಣಿದಾಡಿರಬೇಕು; ತಾವು ಕಲಿತ ಗೀತೆ ಕಥೆಗಳನ್ನು ಪರಸ್ಪರ ವಿನಿಮಯಮಾಡಿಕೊಂಡಿರಬೇಕು. ಎಲ್ಲರೂ ಒಟ್ಟಾಗಿ ಹೊಸ ಸಾಹಿತ್ಯವನ್ನು ಸೃಷ್ಟಿಸಿರಬೇಕು. ಊರುಕೇರಿ ಕಟ್ಟಿಕೊಂಡು ನೆಲಸಿದನಂತರವೂ ಅವರ ಸಾಹಸಪ್ರವೃತ್ತಿಗೆ ಅಡೆತಡೆಗಳಿರಲಿಲ್ಲ. ಅಷ್ಟೇ ಅಲ್ಲ, ಒಂದು ಕಡೆ ತಳವೂರಿ ನಿಲ್ಲುವುದೂ ಅವರಿಗೆ ಕಷ್ಟವಾಗಿರಬೇಕು. ಇಂದಿನ ಅಲೆಮಾರಿ ಜನರೇ ಈ ಮಾತಿಗೆ ಸಾಕ್ಷಿ. ಆ ಕಾಲಕ್ಕೆ ಭೌಗೋಲಿಕ, ರಾಜಕೀಯ, ಮತೀಯ, ಸಾಮಾಜಿಕಾದಿ ಯಾವುವೇ ಎಡರುತೊಡರುಗಳಿರಲಿಲ್ಲ. ಕುಲ ಜಾತಿ ವರ್ಣಜನಾಂಗಗಳಿಗೆ ಸಂಬಂಧಿಸಿದ ಉಪಾಧಿಗಳಾಗಲೀ ದ್ವೇಷಾಸೂಯೆಗಳಾಗಲೀ ಇರಲಿಲ್ಲ. ಈ ಉಪಾಧಿಗಳು ಹುಟ್ಟಿಕೊಂಡನಂತರವೂ ಜನರ ಪ್ರವಾಸವಾಗಲಿ ಗೂಳೆಯವಾಗಲಿ ನಿಲ್ಲಲಿಲ್ಲ. ಕೊಲಂಬಸ್, ವಾಸ್ಕೋಡಿಗಾಮರಂಥ ಸಾಹಸಪ್ರವೃತ್ತಿಯ ಜನರ ಜತೆಗೆ, ಗಡೀಪಾರುಗೊಂಡವರು, ವ್ಯಾಪಾರವಾಣಿಜ್ಯಾದಿ ವೃತ್ತಿಗಳನ್ನು ಕೈಕೊಂಡವರು, ಸೈನಿಕರು, ಅಲೆಮಾರಿ ಜನರು ತಂತಮ್ಮ ನಾಡಿನ ಕಥೆ ಗೀತೆಗಳನ್ನು ತಾವು ಹೋದೆಡೆಯಲ್ಲೆಲ್ಲ ಹಂಚಿರಬೇಕು. ಈ ಪ್ರಸರಣಕಾರ್ಯದಲ್ಲಿ ಮತ ಪ್ರಚಾರಕರ ಪಾತ್ರ ಅಪಾರವಾದದ್ದು. ಮತಪ್ರಚಾರಕಾರ್ಯ ಪರಿಚಯದ ಕಥೆಗಳ ಮೂಲಕ ಶೀಘ್ರವಾಗಿ ಸಫಲವಾಗುತ್ತದೆ. ಅಷ್ಟೇ ಅಲ್ಲ; ನಿರಕ್ಷರಕುಕ್ಷಿಗಳ ಸಮೂಹದಲ್ಲಿ ಕಥೆಯೊಂದೇ ಸುಲಭ ಸಮರ್ಥ ಮಾಧ್ಯಮವಾಗುತ್ತದೆ. ಆದ್ದರಿಂದ ಅವರು ಸ್ಥಳೀಯ ಕಥೆಗಳನ್ನೂ ತಮ್ಮ ನಾಡಿನ ಕಥೆಗಳನ್ನೂ ಬೆರೆಸಿ, ಕಸಿಮಾಡಿ, ಜನಮನೋಭೂಮಿಯಲ್ಲಿ ನೆಟ್ಟು ಕೃಷಿಮಾಡುತ್ತಿದ್ದರು; ಜತೆಗೆ ಹೊಸ ಕಥೆಗಳನ್ನೂ ಸೃಷ್ಟಿಸುತ್ತಿದ್ದರು. ಜಗತ್ತಿನಲ್ಲಿ ಇಂಥ ಕಾರ್ಯವನ್ನು ಮೊಟ್ಟಮೊದಲು ಮಾಡಿದವರೆಂದರೆ ಬೌದ್ಧಮತ ಪ್ರಚಾರಕರು.

ಮತಪ್ರಚಾರಕರ ಮೂಲಕ ಐತಿಹ್ಯಗಳು ಶೀಘ್ರವಾಗಿ ಪ್ರಚಾರವಾಗುತ್ತವೆ ಮತ್ತು ರೂಪಾಂತರಗೊಳ್ಳುತ್ತವೆನ್ನುವುದಕ್ಕೆ ಬುದ್ಧನ ಕತೆಯೇ ಸಾಕ್ಷಿ. ಕುಲದ ಹೆಮ್ಮೆ, ನೆಲದ ಹೆಮ್ಮೆ, ಹಣದ ಹೆಮ್ಮೆ, ಎಲ್ಲ ಬಗೆಯ ಹೆಮ್ಮೆಗಳು ಜಗತ್ತಿನಲ್ಲಿರುವ, ಮಾನವನನ್ನು

ಮುಸುಕಿರುವ, ಸಂಕಟವನ್ನು ಕತ್ತಲೆಯನ್ನು ಅರಿಷ್ಟಗಳನ್ನು ನಿವಾರಿಸಲಾರವು, ನಿರಾಸಕ್ತಿಯೊಂದೇ ಅವುಗಳಿಗೆ ಮದ್ದು ಎನ್ನುವ ಸತ್ಯ ಮೊದಲು ಹೊಳೆದದ್ದು ಬುದ್ಧನಿಗೆ. ಹೊಳವು ಮುಖ್ಯವಲ್ಲ, ಅದನ್ನು ಜೀವನದಲ್ಲಿ ಅನುಷ್ಠಾನಗೈದದ್ದು ಮುಖ್ಯ. ತದನಂತರ ಜಗತ್ತಿನ ಸರ್ವಮತೀಯರು ಬುದ್ಧನ ಕಥೆಯನ್ನೂ, ಅವನ ಉಪದೇಶಕಥೆಗಳನ್ನೂ ಆಧರಿಸಿ, ತಮ್ಮ ಮತೀಯ ಪ್ರಕ್ರಿಯೆಗಳಿಗೊಗ್ಗುವಂತೆ ಮಾರ್ಪಾಟುಗಳನ್ನು ಮಾಡಿಕೊಂಡು, ಹೊಸ ಕಥೆಗಳನ್ನು ಸೃಷ್ಟಿಸಿಕೊಂಡರು. ಜೈನ ಹಾಗೂ ಹಿಂದೂ ಗ್ರಂಥಗಳಲ್ಲಿ ಕಾಣುವ ಕೆಲವು ಕಥೆಗಳಲ್ಲಿ ಬೌದ್ಧ ಪ್ರಭಾವವನ್ನು ಗುರುತಿಸಬಹುದು. ಕ್ರಿಸ್ತ ಹಾಗೂ ಇಸ್ಲಾಂ ಮತಗಳು ಹಿಂದೆ ಮುಂದೆ ನೋಡದೆಯೇ ಬುದ್ಧನ ರಾಜ್ಯ ಪರಿತ್ಯಾಗ ಕಥೆಯನ್ನು ಸ್ವೀಕರಿಸಿಕೊಂಡಿವೆ.[1] ಮಧ್ಯ ಏಷಿಯಾದ ಕಥೆಯೊಂದನ್ನು ಉದ್ಧರಿಸಿದರೆ ಈ ಮಾತಿನ ಯಥಾರ್ಥತೆ ಸ್ಪಷ್ಟಗೊಳ್ಳುತ್ತದೆ. ಅರಬರ ದೊರೆ ನೂಮನ್ ಸಾಹಸಿಗ. ನೆರೆಹೊರೆಯ ಪ್ರಾಂತ್ಯಗಳನ್ನಲ್ಲದೆ, ರೋಮನ್ನರಿಗೆ ಸೇರಿದ ಸಿರಿಯಾ ದೇಶವನ್ನೂ ಗೆದ್ದುಕೊಂಡ. ಒಂದು ದಿನ ಅರಮನೆಯ ಮಹಡಿಯ ಕಿಟಕಿಯಿಂದಾಚೆ ನೋಡುತ್ತಿದ್ದಾಗ ಮೆಸಪೊಟೇಮಿಯಾದ ವಸಂತ ಸೌಂದರ್ಯವನ್ನೆಲ್ಲ ಸೂರೆಗೊಂಡಂತಿದ್ದ ನಂದನ ಕಣ್ಣಿಗೆ ಬಿತ್ತು. "ಇಂಥ ದೃಶ್ಯವನ್ನು ನೀನೆಂದಾದರೂ ನೋಡಿರುವೆಯಾ ?" ಎಂದವನು ವಜೀರನ ಕಡೆಗೆ ತಿರುಗಿದನು. "ಇದು ಶಾಶ್ವತವೆನ್ನುವುದಾದರೆ, ಇಂಥದನ್ನು ನೋಡಿಲ್ಲ" ಎಂದು ವಜೀರ ಉತ್ತರಿಸಿದ. "ಹಾಗಾದರೆ ಶಾಶ್ವತವಾದದ್ದು ಯಾವುದು ?" "ಸ್ವರ್ಗದಲ್ಲಿ ದೇವರ ಬಳಿ ಇರುವಂಥದು ಮಾತ್ರ ಶಾಶ್ವತ. ನಶ್ವರವಾದ ಅಧಿಕಾರ ಸ್ಥಾನಮಾನಗಳನ್ನು ತೊರೆದಾಗ ಮಾತ್ರ ಅವೆಲ್ಲ ಸಾಧ್ಯವಾಗುತ್ತದೆ." ಆ ಕೂಡಲೇ ನೂಮನ್ ಅಧಿಕಾರ ತ್ಯಜಿಸಿ, ರಾಜಭೂಷಣಗಳನ್ನು ಕಿತ್ತೊಗೆದು, ಹರಕು ಚಿಂದಿಯನ್ನುಟ್ಟುಕೊಂಡು, ಒಂಟಿ ಯಾತ್ರಿಕನಾಗಿ, ಕಾಡು ನಾಡುಗಳಲ್ಲಲೆದನು. ಅವನು ಮತ್ತೆ ಯಾರ ಕಣ್ಣಿಗೂ ಬೀಳಲಿಲ್ಲ.[2] ಬುದ್ಧನ ಕಥೆಯನ್ನು ಮೊದಲು ಇಂಡಿಯಾದಿಂದ ಹೊರಗೆ ಕೊಂಡೊಯ್ದವರು ಬೌದ್ಧಮತ ಪ್ರಚಾರಕರು. ಅರಬರ ದೇಶದಲ್ಲಿ ಸಿದ್ಧಾರ್ಥ ನೂಮನ್ನನಾಗುತ್ತಾನೆ. ಜತೆಗೆ ಇನ್ನೂ ಕೆಲವು ಬದಲಾವಣೆಗಳು ಹೊಮ್ಮುತ್ತವೆ.

ರಂಜಕತೆ ಐತಿಹ್ಯಗಳ ಪ್ರಧಾನ ಲಕ್ಷಣವಲ್ಲ. ಜತೆಗೆ ಕಾಲ್ಪನಿಕ ಕಥೆಗಳಲ್ಲಿ ಕಾಣುವ ಅದ್ಭುತ ಪ್ರಸಂಗಗಳು ಅವುಗಳಲ್ಲಿ ಅನಿವಾರ್ಯವೇನಲ್ಲ. ವ್ಯಕ್ತಿ ಅಥವಾ ಊರುಗಳ ಹೆಸರನ್ನು ಬದಲಾಯಿಸಿದ್ದಾದರೆ ಕಾಲ್ಪನಿಕ ಕಥೆಗಳಲ್ಲಿ ಬರುವ ಕಥೆ ಎಲ್ಲಿಯಾದರೂ ನಡೆಯಬಹುದಾದುದು. ಆದ್ದರಿಂದ ಅವು ಬೇಗನೆ ಜನಮನವನ್ನಾಕರ್ಷಿಸುವ ಹಾಗೆ ಐತಿಹ್ಯಗಳು ಆಕರ್ಷಿಸಲಾರವು. ಐತಿಹ್ಯಗಳು ಸ್ಥಳೀಯ ಉಪಾಧಿಗಳಿಂದ ಬಂಧಿತವಾದುವು.

---

[1] That story is of such beauty and power that neither Christianity nor Islam have scrupled to take it over, attributing it, of course, to personages of the rank of their own saints— *The Science of Folklore* by A. H. Krappe, p. 127.

[2] Ibid, p. 128.

ತಾವು ಉಗಮಗೊಂಡ ಜಾಗದ ವಾಸನೆಯಿಂದ ವಿಮುಕ್ತವಾದಾಗ ಮಾತ್ರ, ಅವು ಬೇರೆಡೆಗೆ ಹರಿಯಲು ಸಾಧ್ಯವಾಗುತ್ತದೆ. ಆದ್ದರಿಂದ ಅವುಗಳ ಪ್ರಸರಣ ವಿಲಂಬವಾಗುತ್ತದೆ. ಪ್ರವಾಸೀ ಹಾಗೂ ಸ್ಥಳೀಯ ಐತಿಹ್ಯಗಳ ನಡುವಣ ಭೇದ ತೀರಾ ತೆಳುವಾದದ್ದು. ಕೆಲವು ವೇಳೆ ಸ್ಥಳೀಯ ಐತಿಹ್ಯಗಳು ಪ್ರವಾಸ ಕೈಗೊಳ್ಳಬಹುದು, ಪ್ರವಾಸೀ ಐತಿಹ್ಯಗಳು ಸ್ಥಳೀಯ ಐತಿಹ್ಯಗಳಾಗಿ ಮಾರ್ಪಡಬಹುದು.

ಐತಿಹ್ಯಗಳಿಗೂ ಪುರಾಣಗಳಿಗೂ ಹೊಕ್ಕುಳ ಬಳ್ಳಿ ಸಂಬಂಧವುಂಟು. ಇತಿಹಾಸ ಐತಿಹ್ಯಕ್ಕೆ ಆಧಾರವಾದರೆ, ಐತಿಹ್ಯ ಪುರಾಣಕ್ಕೆ ಮೂಲ. Myth ಎನ್ನುವ ಪದದ ಅರ್ಥ 'ಕಥೆ' ಎಂದು. ಐತಿಹ್ಯ ಮತ್ತು ಪುರಾಣಗಳೂ ಪ್ರಥಮತಃ ಕಥೆಗಳು. ಕಲ್ಪನೆ ಆದಿಮಾನವನ ವಿಶಿಷ್ಟ ಲಕ್ಷಣವಾದ್ದರಿಂದ, ಅದೇ ಅವನ ಜೀವನದ ಚಾಲಕಶಕ್ತಿಯಾದ್ದರಿಂದ ಅವನ ಆಲೋಚನೆ ವ್ಯವಹಾರ ಸಾಧನೆಗಳೆಲ್ಲ ಅಭಿವ್ಯಕ್ತಿಗಾಗಿ ಕಥನ ಮಾಧ್ಯಮವನ್ನವಲಂಬಿಸಿದುವು. ಆದರೆ ಕಾಲ್ಪನಿಕ ಕಥೆಗಳಲ್ಲಿ ರಂಜಕಾಂಶ ಅಧಿಕವಾಗಿದ್ದರೆ, ಐತಿಹ್ಯ ಪುರಾಣಗಳಲ್ಲಿ ಚಿಂತನೆಯೇ ಪ್ರಧಾನ. ಆದ್ದರಿಂದಲೇ ಈ ಪ್ರಕಾರಗಳನ್ನು ಕೆಲವು ವಿದ್ವಾಂಸರು ಸಾಹಿತ್ಯದ ಗಡಿಯೊಳಗೆ ಸೇರಿಸುವುದಿಲ್ಲ. ವಿಜ್ಞಾನ ಪೂರ್ವಯುಗದ ವಿಜ್ಞಾನ ಪುರಾಣ[1] ಎಂಬ ಅಭಿಧಾನದಿಂದ ಇಂದಿನ ಮಾನವನಿಗೆ ಲಭಿಸುತ್ತಿದೆ. ಗೀತೆ ಕಥೆಗಳಲ್ಲಿ ಸಿಗದ ಮಾನವ ಜ್ಞಾನವೆಲ್ಲ ಪುರಾಣಗಳಲ್ಲಿ ದೊರೆಯುತ್ತದೆ. ವಿಶ್ವಸೃಷ್ಟಿಗೆ ಸಂಬಂಧಿಸಿದ ಕಲ್ಪನೆಗಳು ಮತ್ತು ನಂಬಿಕೆಗಳು, ಧಾರ್ಮಿಕ ಹಾಗೂ ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಕಥೆಗಳು, ದೇವರಿಗೆ ಸೇರಿದ ವಿಷಯಗಳು ಪುರಾಣಗಳ ಚೌಕಟ್ಟಿನಲ್ಲಿ ಬರುತ್ತವೆ. ಪುರಾಣಪುರುಷರಾದ ಇಂದ್ರ, ನಚಿಕೇತ, ರಾಮ, ಕೃಷ್ಣ, ವೃಷಭನಾಥ, ಬುದ್ಧ ಮೊದಲಾದವರೆಲ್ಲ ಒಂದಾನೊಂದು ಕಾಲದಲ್ಲಿ ಚಾರಿತ್ರಿಕ ವ್ಯಕ್ತಿಗಳಾಗಿದ್ದವರು ತಾನೆ. ಹಾಗಾದರೆ ಕುಮಾರರಾಮ, ಕೆಂಪೇಗೌಡನ ಸೊಸೆ ಲಕ್ಷ್ಮಮ್ಮ ಮೊದಲಾದವರು ದೇವ ದೇವಿಯರ ಪಟ್ಟಕ್ಕೇರಿ, ಪೂಜೆಯನ್ನು ಪಡೆಯುತ್ತಿದ್ದಾರಷ್ಟೆ. ಅವರಿಗೆ ಸಂಬಂಧಿಸಿದ ಸಾಹಿತ್ಯ ಪುರಾಣವಾದೀತೆ? ಇತಿಹಾಸಪೂರ್ವಕಾಲದಲ್ಲಿ ಅವರೇ ಪುರಾಣಪುರುಷರ ಸ್ಥಾನಮಾನಗಳನ್ನು ಪಡೆಯುತ್ತಿದ್ದರೆಂದು ತೋರುತ್ತದೆ. ಆದ್ದರಿಂದ ಇತಿಹಾಸದ ಹೆಜ್ಜೆಗಳು ಗೋಚರವಾಗತೊಡಗುತ್ತಲೇ ಪುರಾಣಗಳ ಸೃಷ್ಟಿ ಅಥವಾ ವಿಕಾಸ ನಿಂತುಹೋಗುತ್ತದೆ. ಪುರಾಣಕಲ್ಪನೆಗೆ ಕಲ್ಪನಾಪ್ರತಿಭೆ ಅತ್ಯವಶ್ಯ. ಅದರ ಸ್ಥಾನದಲ್ಲಿ ಬುದ್ಧಿ ವಿವೇಕಗಳು ನೆಲೆಗೊಂಡಾಗ ಪುರಾಣಗಳು ಹಿಂಜರಿಯುತ್ತವೆ. ಅಂದಮೇಲೆ ಪುರಾಣವಾಗಬೇಕಾಗಿದ್ದ ಇತಿಹಾಸ ಕಾಲದ ಕಥೆಗಳೆಲ್ಲ ಐತಿಹ್ಯವಾಗುಳಿಯುತ್ತವೆ. ವೈಜ್ಞಾನಿಕಯುಗದಲ್ಲಿ ಐತಿಹ್ಯಗಳ ಬೆಳವಣಿಗೆಯೂ ನಿಂತುಹೋಗುತ್ತದೆ. ಈ ವಿವರಣೆಯಿಂದ ಪುರಾಣ ಹಳೆಯದು, ಯಾರೂ ಕಂಡರಿಯದುದು, ಹಿಂದಿನಿಂದ ಪರಂಪರಾಗತವಾಗಿ ಬಾಯಿಂದ ಬಾಯಿಗೆ ಬಂದದ್ದು ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಕಾಟ್ಲ್ಯ ಪುರಾಣಗಳನ್ನು ಇತಿಹಾಸದಲ್ಲಿ

---

1 *Standard Dictionary of Folklore, Mythology and Legend*, p.778.

ಸೇರಿಸಿದ್ದುಂಟು.[1] ಸರ್ಗ ಪ್ರತಿಸರ್ಗ ದೇವರಾಕ್ಷಸ ವಂಶವರ್ಣನೆ, ಮನ್ವಂತರ, ರಾಜಾಧಿರಾಜರ ವಂಶಾನುಚರಿತ—ಇವು ಪುರಾಣ ಲಕ್ಷಣ[2]ಗಳೆಂದು ಅಮರಕೋಶ ತಿಳಿಸುತ್ತದೆ. ಯಜ್ಞಯಾಗಾದಿಗಳ ಕಾಲದಲ್ಲಿ ಮನರಂಜನೆಗಾಗಿ ಮತ್ತು ಬೋಧೆಗಾಗಿ ಹೇಳಿದ ಐತಿಹ್ಯಗಳೇ ಪುರಾಣಗಳೆಂದು ಹೇಳುವುದೂ ಉಂಟು. ಹಿಂದಿನ ಯುಗದಲ್ಲಿ ವಾಸ್ತವವಾಗಿ ನಡೆದವೆಂದು ಹೇಳುವ, ಸೃಷ್ಟಿ ಪ್ರಲಯಗಳನ್ನೂ, ಜನರ, ಅವರ ನಾಯಕರ ಮತ್ತು ದೇವತೆಗಳ ಉಗಮ ವಿಕಾಸ ಮಹಿಮೆಗಳನ್ನೂ, ಜತೆಗೆ ಅವರ ಸಾಂಸ್ಕೃತಿಕ ಮತ್ತು ಮತೀಯ ವಿಚಾರಗಳನ್ನೂ ವಿವರಿಸುವ ಕತೆಯೇ ಪುರಾಣ[3]. ಸುತ್ತಮುತ್ತ ನಡೆಯುವ ಘಟನೆಗಳಿಗೆ, ಆಚರಿಸುವ ಉಪಾಸನೆಗಳಿಗೆ, ಸಮಾಜದಲ್ಲಿ ಬೇರುಬಿಟ್ಟಿರುವ ನಂಬಿಕೆಗಳಿಗೆ ಕಾರಣಗಳನ್ನು ಸೃಷ್ಟಿಸುವಲ್ಲಿ ಪುರಾಣಗಳು ಹುಟ್ಟುತ್ತವೆ. ಎಲ್ಲ ಆಖ್ಯಾನಗಳೂ ಪುರಾಣಗಳಾಗುವುದಿಲ್ಲ. ಅವುಗಳಿಗೆ ಮತೀಯ ಹಿನ್ನೆಲೆಯಿರಬೇಕು; ಮುಖ್ಯ ಪಾತ್ರಗಳು ದೇವತೆಗಳಾಗಿರಬೇಕು.

ಮತಕ್ಕೂ ಪುರಾಣಕ್ಕೂ ಅವಿಭಾಜ್ಯ ಸಂಬಂಧವಿದೆ. ದೇವರ ಕಲ್ಪನೆ ತತ್ವ ಮತ್ತು ಆಚಾರಗಳಷ್ಟೇ, ಒಂದು ಕೈ ಅವುಗಳಿಗಿಂತ ಮಿಗಿಲಾಗಿಯೇ ಪುರಾಣಕ್ಕೆ ಮಹತ್ವವುಂಟು. ಮತೀಯ ಕ್ಷೇತ್ರದಲ್ಲಿ ಅದರ ಪಾತ್ರ ಬಹು ವ್ಯಾಪಕವಾದುದು. ಮೊದಲ ಮೂರು ಸಂಗತಿಗಳಿಗೂ ಅದೇ ಮೂಲ. ದೇವರನ್ನು ಸೃಷ್ಟಿಸಿದ್ದು ಅದು, ತತ್ವಗಳನ್ನು ಕಲ್ಪಿಸಿದ್ದು ಅದು, ಆಚಾರಗಳನ್ನು ತೋರಿಸಿದ್ದೂ ಅದೇಯೆ. ಪ್ರಾರಂಭದಲ್ಲಿ ಅವೆಲ್ಲ ಪುರಾಣದ ಒಂದು ಭಾಗವಾಗಿದ್ದುವು. ಬರಬರುತ್ತ ತತ್ವಶಾಸ್ತ್ರ ಹಾಗೂ ದೇವತಾಶಾಸ್ತ್ರಗಳು ಬೆಳೆದು, ಪುರಾಣದ ಸಾರ್ವಭೌಮತ್ವ ಕಾಂತಿಗುಂದಿತು. ಮತ ಮತ್ತು ಪುರಾಣಗಳಿಗೆ ಜಾನಪದವೇ ತಾಯಿಬೇರು, ಅಂತೆಯೇ ತಲಕಾವೇರಿ. ಪುರಾಣ ಜಾನಪದ ಜನ್ಯವಲ್ಲ; ಅದರಲ್ಲಿ ಜಾನಪದೀಯಾಂಶಗಳು ಸೇರಿಕೊಂಡಿರಬೇಕೆಂದು ಕೆಲವುತಜ್ಞರು ಅಭಿಪ್ರಾಯಪಡುತ್ತಾರೆ. ಕಾವ್ಯಮಯ ಶೈಲಿಯಲ್ಲಿ ಅವತರಿಸಿದ ಜಾನಪದ ಸಾಮಗ್ರಿಯೇ ಪುರಾಣ ಎಂಬುದು ಅವರ ಮತ. ಮತಪುರಾಣ ಬಾಂಧವ್ಯ ಪುರಸ್ಕರ್ತರಾದ ಮ್ಯಾಕ್ಸ್‌ಮುಲ್ಲರ್, ಸಿಮ್‌-ರಾಕ್ (Simrock) ಮೊದಲಾದವರ ವಾದವನ್ನವರು ಒಪ್ಪಿಕೊಳ್ಳುವುದಿಲ್ಲ. ಸೂರ್ಯ ಅಥವಾ ಚಂದ್ರ ಸಂಬಂಧವಾದ ಪುರಾಣಗಳು ಅನೇಕ ಕಡೆಗಳಲ್ಲಿ ಸಿಗುತ್ತವಾದರೂ, ಸೂರ್ಯೋಪಾಸನೆ ಅಥವಾ ಸೌರಮತ ಪಾಶ್ಚಾತ್ಯ ದೇಶಗಳಲ್ಲಿಲ್ಲ, ಇದ್ದರೂ ಪೌರ್ವಾತ್ಯ ದೇಶಗಳಿಂದ ಆಮದಾದುದು ಎಂದವರು ಕಾರಣವೊಡ್ಡುತ್ತಾರೆ. ಕಾರ್ಯಕಾರಣಸಂಬಂಧವನ್ನು ವಿವರಿಸುವ ಸಲುವಾಗಿ ಕಟ್ಟುಗೊಂಡ ಕಥೆಗಳೇ ಪುರಾಣಗಳೆಂದು ಎಣಿಕೆಗೊಂಡಿರು

[1] ಪುರಾಣಂ ಇತಿವೃತ್ತಂ ಆಖ್ಯಾಯಿಕೋದಾಹರಣಂ ಧರ್ಮಶಾಸ್ತ್ರಂ ಅರ್ಥಶಾಸ್ತ್ರಂ ಚೇತಿಹಾಸಃ.

[2] ಸರ್ಗಶ್ಚ ಪ್ರತಿ ಸರ್ಗಶ್ಚ ವಂಶೋ ಮನ್ವಂತರಾಣಿ ಚ/ವಂಶಾನು ಚರಿತಂ ಚೈವ ಪುರಾಣಂ ಪಂಚಲಕ್ಷಣಂ.

[3] *Standard Dictionary of Folklore, Mythology and Legend*, Ed by Maria Leach, P. 778.

ವುದಾಗಿಯೂ, ಹಾಗೆ ಎಣಿಸುವುದಾದರೆ ಕರಡಿ ಬಾಲವನ್ನು ಕಳೆದುಕೊಂಡ ಕಥೆ ಸಹ ಪುರಾಣದ ಪರಿಧಿಯೊಳಗೆ ಲೆಕ್ಕಗೊಳ್ಳುವುದಾಗಿಯೂ ಅವರು ವ್ಯಾಖ್ಯಾನ ಮಾಡುತ್ತಾರೆ. ಅವರಲ್ಲಿ ಕ್ರಾಪೆಯವರೂ ಒಬ್ಬರು. ಒಟ್ಟಿನಲ್ಲಿ ಅದೊಂದು ಕಥೆ; ಕವಿಗಳಿಂದ ಹೊಸ ರೂಪ ಪಡೆದದ್ದು; ಸಿದ್ಧಾಂತಗಳೊಡನೆ ಬೆರೆಯದೆ ಮತದೊಡನೆ ಶಿಥಿಲ ಸಂಬಂಧ ಹೊಂದಿದ್ದು ಎಂದು ಮುಂತಾಗಿ ಅವರು ಹೇಳುತ್ತಾರೆ.[1] ಯಾವ ವ್ಯಕ್ತಿಯೇ ಆಗಲಿ, ಘಟನೆಯೇ ಆಗಲೀ ಮತದ ಮುದ್ರೆಯನ್ನು ಪಡೆಯಿತೆಂದರೆ, ನಾಯಕ ನಾಯಿಕೆಯರಾಗಿ ದೇವತ್ವಕ್ಕೇರಿದರೆಂದರೆ ಪುರಾಣದ ಮಟ್ಟಕ್ಕೇರಿದಂತಾಗುತ್ತದೆ.

ಸಾಂಕೇತಿಕ ಭಾಷೆಯಲ್ಲಿ ರಚನೆಗೊಂಡ ವಿಕೃತ ಚರಿತ್ರೆಯೇ ಪುರಾಣವೆಂದು ಕೆಲವು ವಿದ್ವಾಂಸರು ಪ್ರತಿಪಾದಿಸಿದರೆ, ನೈಸರ್ಗಿಕ ವೈಚಿತ್ರ್ಯಗಳ ಊಹಾತ್ಮಕ ಸಾಂಕೇತೀಕರಣವೇ ಪುರಾಣವೆಂದು ಮತ್ತೆ ಕೆಲವು ವಿದ್ವಾಂಸರು ವಿಶದಪಡಿಸಿದ್ದಾರೆ. ಅಮೂರ್ತ ಭಾವನೆಗಳನ್ನು ಮೂರ್ತಗೊಳಿಸುವ ಸಲುವಾಗಿ ವಿರಚಿಸಿದ ವಿವರಣೆಯೇ ಪುರಾಣವಾಯಿತೆಂಬುದು ಮತ್ತೊಂದು ಮತ. ಆಧುನಿಕ ತಜ್ಞರಲ್ಲಿ ಈ ಮತಗಳ ಬಗ್ಗೆ ಭಿನ್ನಾಭಿಪ್ರಾಯವಿದೆ. "ಈ ತನಕ ಪುರಾಣಗಳು ಪರಿಹರಿಸಿರುವ ಸಮಸ್ಯೆಗಳು ವಿರಳ; ಅವುಗಳು ತಣಿಸಿರುವ ಕುತೂಹಲವಿಲ್ಲ; ಅವುಗಳು ಸಿದ್ಧಪಡಿಸಿರುವ ಸಿದ್ಧಾಂತಗಳಿಲ್ಲ"[2] ಎಂದು ಸ್ಪಷ್ಟಪಡಿಸಿದ ಮ್ಯಾಲಿನೋವ್‌ಸ್ಕಿಯವರೇ "ಅನಾಗರಿಕ ಸಮಾಜದಲ್ಲಿ ಪುರಾಣ ಬರಿಯ ಕಟ್ಟುಕತೆಯಲ್ಲ, ಅದೊಂದು ಜೀವಂತ ಸತ್ಯ"[3] ಎಂಬುವನ್ನೊಪ್ಪಿಕೊಳ್ಳುತ್ತಾರೆ. ಸೃಷ್ಟಿಯ ಪ್ರಾರಂಭ ಕಾಲದಲ್ಲಿ ನಡೆದ ಪೌರಾಣಿಕ ಘಟನೆಗಳು ಜಗತ್ತಿನ ಮೇಲೆ ಯಾವಾಗಲೂ ಅಪಾರ ಪ್ರಭಾವ ಬೀರುತ್ತದೆಂಬುದು ಆದಿಮಾನವನ ತಿಳಿವಳಿಕೆ. ಲೋಕದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚುಪಾಲು ಜನ ಈಗಲೂ ಪುರಾಣಗಳನ್ನು ನಂಬುತ್ತಾರೆ. ಎಲ್ಲ ದೇಶಗಳ ಪುರಾಣಗಳನ್ನು ಕಲೆಹಾಕಿ, ವಿಶ್ಲೇಷಿಸಿ, ತೌಲನಿಕವಾಗಿ ಅಭ್ಯಸಿಸುವ ತನಕ ಅವುಗಳ ಬಗ್ಗೆ ಇದಮಿತ್ಥಂ ಎಂದು ಸಾರುವುದು ಸರಿಯಲ್ಲ. ಅವುಗಳಲ್ಲಿ ಜಳ್ಳು ಸುಳ್ಳುಗಳೇ ಅಧಿಕ ಪ್ರಮಾಣದಲ್ಲಿರಬಹುದು. ಕೆಲವು ಮಂತ್ರ ಮಾಟ ಸಂಸ್ಕಾರಗಳಿಗೆ ಸಂಬಂಧಿಸಿದುವು; ನೈಸರ್ಗಿಕ ಕ್ರಿಯೆ ಅಥವಾ ಘಟನೆಗಳನ್ನು ವಿವರಿಸಲು ಹೆಣೆದವು ಕೆಲವು; ಆ ವಿವರಣೆಗಳಲ್ಲಿ ಅಷ್ಟಿಷ್ಟಾದರೂ ಚಿರಂತನ ಸತ್ಯಗಳಾಗಿದ್ದಿರಬಹುದು. ಕೆಲವು ಪುರಾಣಗಳಿಗೆ ಚಾರಿತ್ರಿಕ ಘಟನೆಗಳು ಆಧಾರವಾಗಿದ್ದಿರಬಹುದು. ಒಟ್ಟಿನಲ್ಲಿ ಮಾನವನ ಮನೋವಿಕಾಸ ಕ್ರಮವನ್ನು ಗುರುತಿಸಲು ಅವು ತುಂಬ ಸಹಕಾರಿಯಾಗುತ್ತವೆ.

---

1 Myths are merely certain tales, largely of popular origin but utilized and reworked by poets so as often to be considerably modified, loosely connected with certain religions of native growth but never incorporated by them into their creeds dogmas, only half believed in by the poets and often not taken seriously at all, in short, pieces of popular or poetic fancy as the case may be—*The Science of Folklore*, p. 317-18.

2 *Myth in Primitive Psychology* by B. Malinowski, p. 79.

3 Ibid, 21.

ಭೂಮಿಯ ಮೇಲೆ ಪ್ರತಿ ವರ್ಷ ಸಂಭವಿಸುವ ಬದಲಾವಣೆಗಳು ಸಹಜವಾಗಿಯೇ ಎಲ್ಲ ಕಾಲದ ಮಾನವರ ಮನಸ್ಸಿನ ಮೇಲೆ ಅಪಾರ ಪ್ರಭಾವ ಬೀರುತ್ತವೆ. ಅನಂತರ ಆ ಪರಿವರ್ತನೆಗಳಿಗೆ ಕಾರಣಗಳೇನಿರಬೇಕೆಂದು ಅವನ ಮನಸ್ಸು ಯೋಚಿಸುತ್ತದೆ. ಕುತೂಹಲವೊಂದೇ ಅವನ ಆಲೋಚನೆಯನ್ನು ಕೆರಳಿಸಲಿಲ್ಲ; ಜತೆಗೆ ನಿಸರ್ಗದೊಡನೆ ಅವನ ಬದುಕು ಬೆಸೆದುಕೊಂಡದ್ದರಿಂದ ಆ ಪರಿವರ್ತನೆಯ ಬಗ್ಗೆ ಅನಿವಾರ್ಯವಾಗಿ ಆಸಕ್ತಿ ವಹಿಸಬೇಕಾಯಿತು. ಬರದಿಂದ, ನದಿಯ ನೀರಿನ ಗಡ್ಡೆತನದಿಂದ ಸಸ್ಯಜಾತಿ ಹಾಳಾಗುತ್ತಿತ್ತು. ಮನುಷ್ಯಪ್ರಯತ್ನದ ಮೂಲಕ ಅಂಥ ಅನಾಹುತಗಳನ್ನು ತೊಡೆಯಬಹುದೆಂದು, ಋತುಗಳನ್ನು ನಿಯಂತ್ರಿಸಬಹುದೆಂದು ಆದಿಮಾನವ ಯೋಚಿಸಿದ. ಕಾಲಕಾಲಕ್ಕೆ ಮಳೆ ಬಿದ್ದು, ಸೂರ್ಯ ಹೊಳೆದು, ಪ್ರಾಣಿಗಳು ಹೆಚ್ಚಲೆಂದು ಮತ್ತು ಹಣ್ಣುಗಳು ಹಲವು ಮಡಿಯಾಗಲೆಂದು ಅವನು ಮಂತ್ರಗಳನ್ನು ಪಠಿಸಿದ, ಆಚರಣೆಗಳನ್ನು ನಡಸಿದ. ಮಾಟಮಂತ್ರಗಳಿಂದ ಬಾಲಿಶ ಸ್ವರೂಪದ ನಿಯಂತ್ರಣ ಸಾಧ್ಯವಿಲ್ಲವೆಂದೂ, ನೈಸರ್ಗಿಕ ಪರಿವರ್ತನೆಗೆ ಗಹನತರವೂ ಪ್ರಬಲತಮವೂ ಆದ ಕಾರಣಗಳಿವೆಯೆಂದೂ ಕಾಲಾನಂತರದಲ್ಲಿ ಬುದ್ಧಿವಂತರಿಗೆ ತಿಳಿಯಿತು. ಮನುಷ್ಯರಂತೆಯೇ ಹುಟ್ಟುವ, ಮದುವೆಯಾಗುವ, ಮಕ್ಕಳು ಹಡೆಯುವ, ಸಾಯುವ, ಹಾಗೆಯೇ ಬಲವೃದ್ಧಿಹ್ರಾಸಗಳಿಗೆ ಗುರಿಯಾಗುವ ದೇವತೆಗಳಿಂದಾಗಿ ನೈಸರ್ಗಿಕ ಕ್ಷೇತ್ರದ ಹೆಚ್ಚು ಕುಂದುಗಳು ನಿಯಂತ್ರಣಗೊಳ್ಳುತ್ತವೆಂದು ಅವರಿಗರಿವಾಯಿತು. ಮನುಷ್ಯರ ಪರವಾಗಿ ಹೋರಾಡುವ ದೇವತೆಗಳಿಗೆ ನೆರವು ನೀಡುವುದು ತನ್ನ ಕರ್ತವ್ಯವೆಂದರಿತ ಅವರು ಮಂತ್ರಮಾಟಗಳನ್ನು ಮುಂದುವರಿಸಿದರು. ದೇವತೆಗಳ ಹುಟ್ಟುಸಾವುಗಳಿಗೂ, ಸಸ್ಯಲೋಕದ ಹಾನಿವೃದ್ಧಿಗಳಿಗೂ ನಂಟು ಗಂಟು ಹಾಕಿದರು. ಇಷ್ಟವಸ್ತುವಿನ ಅಥವಾ ಕ್ರಿಯೆಯ ಅನುಕರಣದಿಂದ ಇಷ್ಟಪ್ರಾಪ್ತಿಯೊದಗುವುದೇ ಮಾಟದ ರಹಸ್ಯ. ಆದ್ದರಿಂದ ಉಪಾಸನೆ ಮತ್ತು ಆಚರಣೆಗಳಲ್ಲಿ ನೈಸರ್ಗಿಕ ಕ್ರಿಯೆಗಳ ಪ್ರತಿಬಿಂಬವನ್ನು ಕಾಣಲಾಯಿತು. ಈ ವಿಕಾಸದ ಪರಿಣಾಮವಾಗಿ ಒಂದು ಇಲಾಖೆ ಒಡೆದು ಎರಡಾದುವು. ಮಾಟ ಮತಗಳು ಬೇರೆಬೇರೆಯಾದುವು. ಆದರೂ ಅವು ಇನ್ನೂ ಕೆಲವು ದಿನ ಒಂದರೊಂದರ ಕೈಹಿಡಿದುಕೊಂಡು ಮುನ್ನಡೆದುವು. ಮತತತ್ತ್ವಾತ್ಮಕವಾದರೆ ಮಾಟ ಪ್ರಯೋಗಾತ್ಮಕವಾಯಿತು. ದೇವತೆಗಳನ್ನು ಕುರಿತು ಸ್ತೋತ್ರಗಳು ಹುಟ್ಟಿಕೊಂಡುವು: ನೈಸರ್ಗಿಕ ಕ್ರಿಯೆಗಳನ್ನೊಳಗೊಂಡ ನಾಟಕಗಳು ಸೃಷ್ಟಿಗೊಂಡುವು. ಅವನ್ನು ಹಾಡಿದ್ದು, ಆಡಿದ್ದು ನೈಸರ್ಗಿಕ ಶಕ್ತಿಗಳ ಪ್ರೀತ್ಯರ್ಥವಾಗಿ. ದೇವತೆಗಳು ಅಮರರು, ಮಾನವನ ಹಾನಿವೃದ್ಧಿಗಳಿಗೆಲ್ಲ ಅವರೇ ಕಾರಣರು ಎಂಬ ಭಾವನೆ ತಲೆದೋರಿದಾಗ ಮತ ಮಾಟದಿಂದ ಪ್ರತ್ಯೇಕಗೊಂಡಿತು. ಮಾಟದ ಪ್ರಕ್ರಿಯೆಗಳು ಹೊಸಗವಸಣಿಗೆಯನ್ನು ತೊಟ್ಟುವು. ದೇವತೆಗಳ ಕಲ್ಪನೆ ಮೂಡಿದಾಗಲೇ ಪುರಾಣಗಳಿಗೆ ಅಸ್ತಿಭಾರ ಹಾಕಿದಂತಾಯಿತು. ಚಿಂತನಮಂಥನಗಳ ಫಲವಾಗಿ ಶುದ್ಧತತ್ತ್ವ ವೃದ್ಧಿಗೊಂಡಾಗ ಪುರಾಣಗಳ ಪ್ರಾಶಸ್ತ್ಯ ಕುಗ್ಗಿತು. ಪುರಾಣಗಳ ಉಗಮಕ್ಕೆ ಆ ಮೇಲಿನ ಅನ್ಯಕಾರಣ ಯಾವುವೇ ಇರಲಿ, ಮೂಲಕಾರಣ ಒಂದೇ ಒಂದು; ಪ್ರಾಕೃತಿಕ ವಸ್ತುಕ್ರಿಯೆಗಳೇ ಅವುಗಳಿಗೆ

ಪ್ರೇರಕ; ಆದ್ದರಿಂದ ಮ್ಯಾಕ್ಸ್‌ಮುಲ್ಲರ್, ರೀಚ್ ಮೊದಲಾದ ವಿದ್ವಾಂಸರು ಈ ಉಗಮ ತತ್ವವನ್ನು ಪ್ರಕೃತಿ ಮೂಲಸಿದ್ಧಾಂತವೆಂದು ಕರೆದರು. ಸೂರ್ಯಚಂದ್ರ ನಕ್ಷತ್ರಗಳ ಪ್ರೇರಣೆಯಿಂದಲೇ ಪುರಾಣಗಳು 'ಹುಟ್ಟಲಿಲ್ಲ, ಅನೇಕ ವಾತಾವರಣ ಸಂಗತಿಗಳೂ ಅವುಗಳ ಹುಟ್ಟಿಗೆ ಕಾರಣವಾಗಿವೆ; ಆದ್ದರಿಂದ ಪ್ರಕೃತಿ ಮೂಲಸಿದ್ಧಾಂತದಿಂದಲೇ ಎಲ್ಲ ಪುರಾಣಗಳ ಜನ್ಮಕಾರಣವನ್ನು ನಿರ್ಣಯಿಸಲು ಸಾಧ್ಯವಾಗುವುದಿಲ್ಲ ಎಂದು ಅಮೇರಿಕೆಯ ಮಾನವಶಾಸ್ತ್ರಜ್ಞ ಲೂವೀ ಪ್ರತಿಪಾದಿಸಿದನು. ಸ್ವಪ್ನಗಳು, ನಂಬಿಕೆಗಳು, ಉಪಾಸನಾ ವಿಧಿಗಳು, ಸರ್ವಚೇತನತತ್ವ, ಮನುಷ್ಯತ್ವಾರೋಪಣ ಇವೇ ಮೊದಲಾದುವು ಸಹ ಅವುಗಳ ಹುಟ್ಟಿಗೆ ನಿಮಿತ್ತವಾಗಿವೆಯೆಂದು ಹೇಳುವ ವಿದ್ವಾಂಸರು ಇಲ್ಲದಿಲ್ಲ.

ಜಾನಪದವೇ ಬುದ್ಧಿವಂತರ ಪುನಸ್ಸೃಷ್ಟಿಯಾಗಿ ಪುರಾಣವಾಯಿತೆನ್ನುವ ಮಾತಿನಲ್ಲಿ ಹುರುಳಿಲ್ಲ. ಈಚೀಚಿನ ಮಾನವರು ಮಾತ್ರ ಬುದ್ಧಿವಂತರು, ಆದಿಮಾನವರು ಪಶು ಸಮಾನರು ಎನ್ನುವ ಆಧುನಿಕ ಮಾನವಪ್ರತಿಷ್ಠೆ ಈ ಎಲ್ಲ ಕುಚೇಷ್ಟೆಗಳಿಗೆ ಕಾರಣವಾಗಿದೆ. ಆದಿಮಾನವರಲ್ಲಿಯೂ ಬುದ್ಧಿ ಇತ್ತು, ಅವರಲ್ಲಿಯೂ ಬುದ್ಧಿವಂತರಿದ್ದರೆನ್ನುವುದನ್ನು ಖಂಡಿತ ಮರೆಯಬಾರದು. ಆಗಿನ ಕಾಲದ ಬುದ್ಧಿವಂತರು ಈಗಿನವರಂತೆ ವೈಜ್ಞಾನಿಕ ಸಾಮರ್ಥ್ಯವನ್ನು ಪಡೆದಿರಲಿಲ್ಲವೆಂಬುದು ಸುಸ್ಪಷ್ಟ. ಅವರು ಪ್ರಾಯಶಃ ಸಾಮಾನ್ಯ ಜನರಿಗಿಂತ ಅರೆಯಂಗುಲ ಎತ್ತರವಾಗಿ ಬೆಳೆದಿದ್ದಿರಬೇಕು, ಸುತ್ತಮುತ್ತಣ ಜನರ ಬುದ್ಧಿಭಾವನೆ ಭ್ರಮೆಗಳನ್ನು ಕಥೆಗಳಲ್ಲಿ ಪ್ರತಿಬಿಂಬಿಸಿರಬೇಕು. ಯಾವ ಕಾಲದಲ್ಲಿಯೇ ಆಗಲಿ, ಯಾವ ಸಮಾಜದಲ್ಲಿಯೇ ಆಗಲಿ ಕತೆ ಕಟ್ಟುವವನು ಒಬ್ಬ : ಕೇಳುವವರು ಹಲವರು. ಅದು ಬಾಯಿಂದ ಬಾಯಿಗೆ ಹರಿಯುವಾಗ ಸಾರ್ವಜನಿಕ ಆಸ್ತಿಯಾಗುತ್ತದೆ. ವ್ಯಾಸ ವಾಲ್ಮೀಕಿ ಹೋಮರ್ ಅಂಥವರು ಅದನ್ನೆತ್ತಿಕೊಂಡು ಸಂಸ್ಕರಿಸಿ ತಮ್ಮ ಕಾವ್ಯಗಳ ಸೇಯ್ಗೆಗೆ ಬಳಸಿಕೊಳ್ಳುತ್ತಾರೆ. ಮತಗಳು ಪುರೋಹಿತರ ಆಸ್ತಿಯಾಗಿ, ಸಾರ್ವಜನಿಕರು ಪುರೋಹಿತರನ್ನು ಆಶ್ರಯಿಸುವಂತಾದಾಗ ಹುಟ್ಟುವ ಪುರಾಣಗಳು ಬಹುಶಃ ಶಿಷ್ಟಪದೀಯವಾಗಬಹುದು. ಈ ದೃಷ್ಟಿಯಿಂದ ಪುರಾಣಗಳಲ್ಲಿ ಕಡೆಯ ಪಕ್ಷ ಎರಡು ಸೋಪಾನಗಳನ್ನಾದರೂ ಗುರುತಿಸಬಹುದೆಂದು ತೋರುತ್ತದೆ.

ಪುರಾಣಗಳ ವಿಕಾಸದಲ್ಲಿ ರೂಪಕವೂ ತಕ್ಕಮಟ್ಟಿನ ಪಾತ್ರ ವಹಿಸಿದೆ. ಆದರೆ ಎಲ್ಲ ಪುರಾಣಗಳಲ್ಲಿಯೂ ರೂಪಕಾರ್ಥವಿದೆಯೆಂದು ಭಾವಿಸುವುದು ತಪ್ಪು. ದ್ರಾವಿಡರ ಪುರಗಳನ್ನು ನಾಶಮಾಡಿದ ಪುರಂದರ ಐತಿಹಾಸಿಕ ವ್ಯಕ್ತಿಯೆಂದೂ. ಆರ್ಯರ ನೇತಾರನೆಂದೂ, ಆದ್ದರಿಂದಲೇ ವೇದದಲ್ಲಿ ಅವನಿಗೆ ಅಗ್ರಪೂಜೆ ಸಲ್ಲುವಂತಾಯಿತೆಂದು ಹೇಳುತ್ತಾರೆ. ಸಾಲೊಮನ್ನನ ಚಾರಿತ್ರಕತೆಯನ್ನು ಯಾರೂ ಅಪನಂಬುವುದಿಲ್ಲ. ಭ್ರಾಮಕ ಅಥವಾ ಬಾಲಿಶ ಕಲ್ಪನೆ ಎಂದು ಹೇಳುವ ಪುರಾಣಗಳಿಗೆ ಯಾವುದೋ ಕ್ಷುದ್ರ ಐತಿಹಾಸಿಕಘಟನೆ ಕಾರಣವಾಗಿರಬಹುದು. ತನ್ನ ಭುಜಗಳ ಮೇಲೆ ಆದಿಶೇಷನಂತೆ ಜಗತ್ತನ್ನು ಹೊತ್ತು ಕೊಂಡಿದ್ದಾನೆನ್ನುವ ಅಟ್ಲಾಸ್ ಮಹಾಜ್ಯೋತಿಷ್ಯನಾಗಿದ್ದಿರಬಹುದೆಂದು ಹೇಳುವವರುಂಟು.

ಜಗತ್ತಿನ ಎಲ್ಲ ಜನಾಂಗಗಳು ಸೃಷ್ಟಿಯ ಬಗ್ಗೆ ತಮಗೆ ಕಂಡಂತೆ ಕತೆಗಳನ್ನು ಕಟ್ಟಿ

ಕೊಂಡಿವೆ. ಆಧುನಿಕ ಮಾನವನ ಬುದ್ಧಿ ತತ್ತರಿಸುವಂಥ ಅದ್ಭುತ ಕಲ್ಪನೆಗಳು ಆ ಕಥೆಗಳಲ್ಲಡಕಗೊಂಡಿವೆ. ಈ ಭೂಮಿಯನ್ನು ಅಷ್ಟದಿಗ್ಗಜಗಳೋ ಆದಿಶೇಷನೋ ಅಟ್ಲಾಸನೋ ಹೊತ್ತಿರಬೇಕೆನ್ನುವ ಕಲ್ಪನೆ ಆಶ್ಚರ್ಯಕರವಾಗಿದೆ. ಈ ಭೂಮಿ ತೂಕ ಪ್ರಮಾಣ ವಿಸ್ತಾರಗಳ ಪರಿಮಿತಿಗೊಳಪಟ್ಟಿದೆ ಎಂಬ ಸಂಗತಿ ಆ ಕಲ್ಪನೆಯಿಂದ ವಿದಿತವಾಗುವುದಲ್ಲದೆ, ಕಲ್ಪನೆಯಾದರೂ ಅದು ಬರಿಯ ಭ್ರಮೆಯಲ್ಲವೆಂದು ಹೇಳಬೇಕಾಗುತ್ತದೆ. ಪ್ರಥಮ ಮನುಷ್ಯನ ಹುಟ್ಟಿನ ಬಗೆಗೆ ಪೂರ್ವಿಕರಲ್ಲಿ ಹಲವಾರು ಹುಚ್ಚು ಕಲ್ಪನೆಗಳು ಚಿಗಿತಿರಬೇಕು. ಈಡನ್ ತೋಟದ ಕತೆಯಂತು ಸರ್ವವೇದ್ಯ. ಮೊದಲ ಮನುಷ್ಯನ ದೇಹ ಜೇಡಿಯಿಂದಾದದ್ದು, ಹೆಂಗಸು ಅವನ ಎಲುಬಿನಿಂದಾದವಳು ಎಂಬುದೊಂದು ಕತೆಯುಂಟು. ಮನುಷ್ಯ ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳ ಮೂಲಕ ಹಾಯ್ದು ಬರುತ್ತಾನೆನ್ನುವುದು ಹಿಂದೂಗಳ ನಂಬಿಕೆ. ಜಲ ಅಥವಾ ಅಗ್ನಿಪ್ರಲಯಕ್ಕೆ ಸಂಬಂಧಿಸಿದ ಕಥೆಗಳಿಗೆ ಕ್ಷಾಮವಿಲ್ಲ. ಮಾನವನನ್ನು ಶಿಕ್ಷಿಸುವ ಸಲುವಾಗಿ ಪ್ರಲಯ ಅನಿವಾರ್ಯ, ಆಗ ಒಬ್ಬ ಮಾತ್ರ ದೋಣಿಯಲ್ಲಿ ತೇಲಿಕೊಂಡು ಬಚಾವಾದ ಅಥವಾ ಹೇಗೋ ಪರ್ವತ ಶಿಖರವನ್ನೇರಿ ಬದುಕಿಕೊಂಡ ಎಂಬುದಾಗಿ ಪುರಾಣಗಳು ನುಡಿಯುತ್ತವೆ. ಇಂಥವುಗಳಲ್ಲಿ ನೋಹನ ಕಥೆಯೂ ಒಂದು. ಪ್ರವಾಹನಿಯಂತ್ರಣ ಸಾಧನಗಳಿಲ್ಲದಿದ್ದಾಗ ಪ್ರವಾಹ ಬಂದದ್ದಾದರೆ ಊರೂರೇ ಕೊಚ್ಚಿಹೋಗುತ್ತಿದ್ದುವಷ್ಟೆ. ಅರಣ್ಯಕ್ಕೆ ಬೆಂಕಿ ಹೊತ್ತಿಕೊಂಡಾಗ ಗಿಡಗೆಂಡೆ ಪ್ರಾಣಿ ಪಕ್ಷಿ ಮನುಷ್ಯರೆಲ್ಲ ನಿರ್ನಾಮಗೊಳ್ಳುತ್ತಿದ್ದರು. ಅಂಥ ವಾಸ್ತವ ಘಟನೆಗಳ ಆಧಾರದಮೇಲೆ ಪ್ರಲಯ ಸಂಬಂಧವಾದ ಕಥೆಗಳು ತಲೆಯೆತ್ತುತ್ತಿದ್ದುವು.

ಆಕಾಶಕಾಯಗಳು ಅನೇಕ ಕಥೆಗಳಿಗೆ ಸ್ಫೂರ್ತಿ ನೀಡಿರುವುದುಂಟು. ಆಕಾಶಗಂಗೆ, ಕೃತ್ತಿಕಾಪುಂಜ, ಸಪ್ತರ್ಷಿಮಂಡಲ, ರಾಶಿಚಕ್ರ, ಮಳೆ ನಕ್ಷತ್ರಗಳು, ಧ್ರುವನಕ್ಷತ್ರ, ನವಗ್ರಹಗಳು, ರಾಹುಕೇತುಗಳು, ಚಂದ್ರ ಸೂರ್ಯರು ಮೊದಲಾದುವುಗಳ ಸುತ್ತ ಅನೇಕ ಪುರಾಣಗಳು ಹೆಣೆಗೆಗೊಂಡಿವೆ. ಆಕಾಶದ ವ್ಯಾಪಾರಗಳು ಮಾನವನ ಸುಖದುಃಖಗಳನ್ನು ನಿಯಂತ್ರಿಸುತ್ತವೆ. ಕೆಲವು ಕಡೆ ಮದುವೆಗಳಲ್ಲಿ ಗಂಡು ಹೆಣ್ಣುಗಳಿಗೆ ಅರುಂಧತಿ ದರ್ಶನ ಅನಿವಾರ್ಯ. ಧೂಮಕೇತು ಪತನದಿಂದ ಲೋಕಕ್ಕೆ ಸಂಕಟ ತಪ್ಪಿದ್ದಲ್ಲ. ಚಂದ್ರನಲ್ಲಿರುವ ಕಪ್ಪಿನ ಬಗ್ಗೆ ಕಥೆಗಳುಂಟು. ಆಕಾಶ ಗಂಡೆಂದೂ, ಭೂಮಿ ಹೆಣ್ಣೆಂದೂ ತಿಳಿದ ಜನರಿದ್ದಾರೆ.

ಕಣ್ಣಿಗೆ ಕಾಣುವ, ತಾನು ಬಲವಾಗಿ ನಿಂತಿರುವ ಲೋಕಕ್ಕಿಂತ ಮಿಗಿಲಾಗಿ ಕಾಣದ ಲೋಕವನ್ನು ಮಾನಸಿಕವಾಗಿ ಸೃಷ್ಟಿಸಿಕೊಂಡು ಆನಂದಪಡುವುದು ಮಾನವನ ಸ್ವಭಾವವಾಗಿದೆ. ಚತುರ್ದಶಲೋಕಗಳಲ್ಲೆಲ್ಲ ಅವನ ಕಲ್ಪನೆ ವಿಹಾರಗೈದಿದೆ. ಬಳಿಯ ಕಾಂತೆಯರು ಸಾಲದೆ ಅವನ ಮದನತೃಷ್ಣೆಯ ಬೆಂಕಿ ಸ್ವರ್ಗದ ಅಪ್ಸರೆಯರಿಗೆ ನಾಲಗೆಚಾಚಿದೆ. ಕಿನ್ನರಲೋಕದಲ್ಲಿ, ನಂದನವನದಲ್ಲಿ ಅವನ ಮನಸ್ಸು ಯಾತ್ರೆಗೈದು, ಕಲ್ಪತರುವಿನಡಿ ವಿಶ್ರಾಂತಿಹೊಂದಿ, ಕಾಮಧೇನುವಿನ ಹಾಲು ಕುಡಿದು, ತೃಪ್ತಿಹೊಂದಿ, ಭೂಮಿಯಮೇಲೆ

ಹೊರಳಾಡುತ್ತದೆ. ತಿರೆಯನ್ನು ತ್ಯಜಿಸಿದನಂತರ ಬೇಕಾಗುತ್ತದೆಂದು ಬೇರೆ ಲೋಕಗಳನ್ನು ಸೃಷ್ಟಿಮಾಡಿಕೊಳ್ಳುತ್ತಾನೆ. ಇಲ್ಲಿ ಕ್ಲೇಶಗಳಿಗೆ ಗುರಿಯಾದರೆ ಅಲ್ಲಿ ಸುಖವುಂಟೆಂದು ಭಾವಿಸುತ್ತಾನೆ.

ಭೂಸೃಷ್ಟಿಯ ಬಗೆಗೂ ಚಿತ್ರವಿಚಿತ್ರವಾದ ಕಥೆಗಳಿವೆ. ಸಮುದ್ರದೊಳಗೆ ಮುಳುಗಿ ಹೋಗಿದ್ದ ಭೂಮಿಯನ್ನು ಮೇಲೆತ್ತಿದವನು ವರಾಹಸ್ವಾಮಿ. ಅದು ಮತ್ತೆ ಕುಸಿಯದಂತೆ ಹೊತ್ತಿರುವ ಪ್ರಾಣಿ ಕೂರ್ಮ. ಹನುಮಂತ ಸಂಜೀವನ ಪರ್ವತವನ್ನು ಹೊತ್ತೊಯ್ಯುವಾಗ ಬಂಡೆಗಳುದುರಿದಂತೆ ಹಿಂದೂ ಕಲ್ಪಿಸಿಕೊಂಡರೆ, ರಾಕ್ಷಸರ ಬಟ್ಟೆಗಳಿಂದ ಅವು ಕೆಳಗುದುರಿದವೆಂದು ಕೆಲವರು ಊಹಿಸಿಕೊಳ್ಳುತ್ತಾರೆ.

ಚಂಡಮಾರುತ ಮೇಘ ಶೀತೋಷ್ಣ ಋತುಗಳೇ ಮೊದಲಾದ ವಾಯುಗುಣಕ್ಕೆ ಸಂಬಂಧಿಸಿದ ವಿಷಯಗಳು ಪುರಾಣಗಳಿಗೆ ಹೊರತಲ್ಲ. ದೈತ್ಯನೊಬ್ಬ ಗಾಳಿಯನ್ನು ಗವಿಯಲ್ಲಿ ಕೂಡಿಹಾಕಿ ಹಠಾತ್ತನೆ ಹೊರಗೆ ಬಿಟ್ಟಾಗ ಬಿರುಗಾಳಿ ಬೀಸುತ್ತದೆ. ದೈತ್ಯಪಕ್ಷಿಯ ರೆಕ್ಕೆ ಬಡಿತದಿಂದ ಗಾಳಿ ಉತ್ಪನ್ನವಾಗುತ್ತದೆ. ಗಾಳಿ ಅತಿಯಾದಾಗ ಸಾಹಸಿಯೊಬ್ಬ ಪಕ್ಷಿಯ ರೆಕ್ಕೆಗಳನ್ನು ಕೊಚ್ಚಬೇಕಾಗುತ್ತದೆ.

ದೇವರು ಸಾಧುಪ್ರಾಣಿಗಳನ್ನೂ, ದೆವ್ವ ಕ್ರೂರಪ್ರಾಣಿಗಳನ್ನೂ ಸೃಷ್ಟಿಸಿದನೆಂದು ಕೆಲವರ ತಿಳಿವಳಿಕೆಯಾಗಿದೆ. ಪ್ರಾಣಿಗಳ ಚರ್ಯೆ ಮತ್ತು ಗುಣಗಳನ್ನು ವಿವರಿಸುವ ಸಲುವಾಗಿ ಕೆಲವು ಕಥೆಗಳು ಹುಟ್ಟಿಕೊಂಡದ್ದುಂಟು. ಇರುವೆಗೂ ಜೇಡನಿಗೂ ಒಮ್ಮೆ ಸ್ವರ್ಗದಲ್ಲಿ ಜಗಳ ಸಂಭವಿಸಿತಂತೆ. ದೇವರು ಇರುವೆಯ ಪರವಾಗಿ ತೀರ್ಪಿತ್ತು, ಜೇಡನನ್ನು ಹೊರಗೆ ಬಿಸಾಡಿದನಂತೆ.

ಸೃಷ್ಟಿಯ ಆದಿಯಲ್ಲಿ ಈ ಲೋಕದಲ್ಲಿದ್ದದ್ದು ನೀರು ಮಾತ್ರ ಎಂದು ವೇದೋಪನಿಷತ್ತುಗಳು ನುಡಿಯುತ್ತವೆ. ಬೈಗ ಪುರಾಣ ಸಹ ಅದನ್ನೇ ಬೆಂಬಲಿಸುತ್ತದೆ. "ಆದಿಯಲ್ಲಿದ್ದದ್ದು ಬರಿಯ ನೀರು. ಆಗ ದೇವರ ಧ್ವನಿಯಿರಲಿಲ್ಲ, ಭೂತದ ಸ್ವರವಿರಲಿಲ್ಲ, ಗಾಳಿಯಿಲ್ಲ, ಕಲ್ಲಿಲ್ಲ, ದಾರಿಯಿಲ್ಲ, ಕಾಡಿಲ್ಲ. ಈಗ ಆಕಾಶವಿರುವಂತೆ ಆಗ ನೀರಿತ್ತು. ನೀರಿನ ಮೇಲೆ ತೇಲುತ್ತಿದ್ದ ಕಮಲದ ಮೇಲೆ ಭಗವಂತನಿದ್ದ. ಅವನು ಏಕಾಕಿಯಾಗಿದ್ದ."[1]

ಸೂರ್ಯಚಂದ್ರರಿಗೆ ಸಂಬಂಧಿಸಿದ ಕಥೆಗಳಂತು ಮಧ್ಯಭಾರತದ ಬುಡಕಟ್ಟು ಜನಾಂಗಗಳಲ್ಲಿ ಅಪರಿಮಿತವಾಗಿವೆ. ಹಿಂದಿನ ಮಧ್ಯಪ್ರಾಂತ್ಯದ ಒಂದು ಕತೆ ಈ ರೀತಿ ಇದೆ: ಸೂರ್ಯಚಂದ್ರರು ಅಣ್ಣತಂಗಿಯರು. ಇಬ್ಬರೂ ಒಂದು ಮದುವೆಗೆ ಹೋದರು. ಮದುವೆ ಮನೆಯಲ್ಲಿ ದೊರೆತ ತಿಂಡಿಯನ್ನೆಲ್ಲ ಸೂರ್ಯ ತಿಂದುಬಿಟ್ಟ, ಚಂದ್ರ ತನ್ನ ಪಾಲಿನದನ್ನು ತಾಯಿಗೆ ತಂದುಕೊಟ್ಟಳು. ತನ್ನನ್ನು ತೃಪ್ತಿಪಡಿಸದಿದ್ದುದಕ್ಕಾಗಿ ತಾಯಿ ಸದಾ ಉರಿಯುತ್ತಿರುವಂತೆ ಮಗನಿಗೆ ಶಾಪವಿತ್ತಳು; ತನ್ನ ಪ್ರೀತಿಪಾತ್ರಳಾದ ಮಗಳು ಸದಾ ತಣ್ಣಗಿರುವಂತೆ ಹರಸಿದಳು.[2] ಇಂತೆಯೇ ವೆರಿಯರ್ ಎಲ್ವಿನ್ ಅವರು ಮಧ್ಯಭಾರತದಿಂದ ನೀರು

---

1 *The Myths of Middle India* by Verrier Elwin, p. 4.

2 Ibid, p. 54.

ಗಾಳಿ ಬೆಂಕಿ, ಲೋಹಗಳು, ಹುಲ್ಲುಹೂಮರ, ಮೃಗಪಕ್ಷಿ ಹಾಗೂ ಮನುಷ್ಯರು, ಉಪಕರಣ ಗಳು, ಆಹಾರ ಸಾಮಗ್ರಿಗಳು, ರೋಗರುಜಿನಗಳು—ಈ ಎಲ್ಲವನ್ನು ಕುರಿತು ನೂರಾರು ಕತೆಗಳನ್ನು ಸಂಗ್ರಹಿಸಿದ್ದಾರೆ. ಒಂದೊಂದು ಕಲ್ಪನೆಯೂ ಆಧುನಿಕ ವಿಜ್ಞಾನಿಗಳನ್ನೂ ವಿಚಾರವಂತರನ್ನೂ ಬೆರಗುಗೊಳಿಸದಿರದು. ಆಫ್ರಿಕಾ ಆಸ್ಟ್ರೇಲಿಯಾ ಅಮೆರಿಕಾ ಮೊದ ಲಾದ ದೇಶಗಳ ಸಾಮಾನ್ಯ ಜನತೆಯಲ್ಲಿ ಇಂಥವು ಸಾವಿರಾರು ಕತೆಗಳುಂಟು. ಈ ಕತೆ ಗಳಲ್ಲಿ ಕೆಲವು ವೇದ ಬೈಬಲ್ಲು ಕೊರಾನ್ ಮೊದಲಾದ ಪವಿತ್ರ ಗ್ರಂಥ ಹಾಗೂ ಪೂರ್ವ ಕಾವ್ಯಗಳಲ್ಲಿ ಸೇರಿಕೊಂಡಿವೆ ಎನ್ನುವುದು ನಿರ್ವಿವಾದ.

ವೆರಿಯರ್ ಎಲ್ವಿನ್ ಅವರು ಬೃಹದಾರಣ್ಯಕ ಉಪನಿಷತ್ತಿನ ಸಂತಾನೋತ್ಪತ್ತಿಗೆ ಸಂಬಂಧಿಸಿಸೊಂದು ಕತೆಯನ್ನು ಉದಾಹರಿಸಿ, ಅದು ಬುಡಕಟ್ಟು ಜನಗಳ ಪುರಾಣ ಪ್ರಪಂಚದಿಂದ ಆಯ್ದುಕೊಂಡದ್ದೆಂದು ಭಾವಿಸಿದರೆ ತಪ್ಪಾಗಲಾರದು ಎಂದಿದ್ದಾರೆ. ಆ ಕತೆ ಹೀಗಿದೆ: ಒಂದಾನೊಂದು ಕಾಲದಲ್ಲಿ ಆತ್ಮ ಏಕಾಕಿಯಾಗಿದ್ದ. ತುಂಬ ಬೇಸರ ವಾಗಿತ್ತು. ಸಂಗಾತಿ ಬೇಕೆನಿಸಿತು. ತಾನೇ ಗಂಡ ಹೆಂಡಿರಾಗಿ ಪ್ರತ್ಯೇಕವಾದ. ಹೆಂಡತಿ ಯೊಡನೆ ಸಂಭೋಗ ನಡೆಸಿದ. ಅವಳಿಂದ ಮಾನವರು ಹುಟ್ಟಿದರು. "ತನ್ನಿಂದಲೇ ಉತ್ಪತ್ತಿಯಾದ ನನ್ನೊಡನೆಂತು ಅವನು ಕೂಡುತ್ತಾನೆ?" ಎಂದವಳು ಯೋಚಿಸಿ ಹಸು ವಿನ ರೂಪದಲ್ಲಿ ಕಣ್ಮರೆಯಾದಳು. ಆಗವನು ಹೋರಿಯಾದ. ಹಸುವಿನೊಡನೆ ಅವನು ಕೂಡಿದಾಗ ದನ ಉತ್ಪತ್ತಿಯಾದುವು. ಅವಳು ಹೆಂಗುದುರೆಯಾಗಿ, ಅವನು ಗಂಡು ಕುದುರೆಯಾಗಿ, ಅಶ್ವಕುಲ ವೃದ್ಧಿಯಾಯಿತು. ಆಮೇಲೆ ಹೆಣ್ಣು ಗಂಡು ಕತ್ತೆ ಕುರಿ ಮೇಕೆ ಇನ್ನೂ ಇತರ ಪ್ರಾಣಿಗಳ ರೂಪತಳೆದು ಆಯಾಯ ಜಾತಿ ಪ್ರಾಣಿಗಳ ಹುಟ್ಟಿಗೆ ಕಾರಣರಾದರು. ಇಂಥ ಹಲವಾರು ಕಥೆಗಳಲ್ಲಿ ಕೆಲವಾದರೂ ಸಾಮಾನ್ಯ ಜನರ ಕಲ್ಪನೆ ಯಲ್ಲಿ ಅರಳಿರಬೇಕೆಂದು ಊಹಿಸಿದರೆ ತಪ್ಪಾಗಲಾರದು.[1]

ದೇವಾಸುರರ ಯುದ್ಧಗಳು ಸಾಮಾನ್ಯವಾಗಿ ಎಲ್ಲ ಮತಗಳಲ್ಲಿಯೂ ಇದ್ದಂಥವೇ. ತಿರೆಯ ಜನ ಇಂದ್ರಪದವಿ ಪಡೆಯುವ ಸಲುವಾಗಿ ಅಶ್ವಮೇಧಯಾಗ ಮಾಡುವುದೂ, ಘೋರ ತಪಸ್ಸನ್ನಾಚರಿಸುವುದೂ, ಇಂದ್ರ ಆತ್ಮರಕ್ಷಣಾರ್ಥವಾಗಿ ಅವರಿಗೆ ಅಡ್ಡಿಯೊಡ್ಡು ವುದೂ ಸರ್ವಸಾಮಾನ್ಯ ಸಂಗತಿಗಳಾಗಿವೆ. ಪುರೋಹಿತಶಾಹಿ ವ್ಯಾಪಕವಾಗಿ ಪಸರಿಸಿ ದಂತೆಲ್ಲ ತಮ್ಮ ಅಧಿಕಾರವನ್ನುಳಿಸಿಕೊಳ್ಳುವ ಸಲುವಾಗಿ ಪುರಾಣ ಕಥೆಗಳ ಮೂಲಕ ದೇವತೆಗಳನ್ನು ಕೊಬ್ಬಿಸಲಾಯಿತು. ಮತೀಯ ಸಂಘರ್ಷಣೆಯ ಫಲವಾಗಿ, ಪ್ರತಿಯೊಂದು ಮತವವರೂ ತಂತಮ್ಮ ದೇವತೆಗಳನ್ನುಟ್ಟಿಸಿದರು. ಈ ಕಥೆಗಳಲ್ಲಿ ಪ್ರತಿಯೊಂದು ದೇವತೆಯ ಇತಿಹಾಸವೂ ನಿರೂಪಣೆಗೊಂಡಿದೆ. ವಾಲ್ಮೀಕಿಯ ಜೀವನಚರಿತ್ರೆಯೂ ಈ ಗುಂಪಿಗೆ ಸೇರುವಂಥದು.

ಸಾಮಾನ್ಯವಾಗಿ ಮತಪ್ರಚಾರಕರ ಮುಖಾಂತರ ಪುರಾಣಗಳ ವಿದೇಶಯಾತ್ರೆ ಸಾಗುತ್ತದೆ. ಬೇರೆ ಬೇರೆ ಮತೀಯರು ಅವುಗಳನ್ನು ರೂಪಾಂತರಗೊಳಿಸಿ, ತಮ್ಮ ಪುರಾಣ

[1] Ibid, p. 282.

ಚಕ್ರಕ್ಕಳವಡಿಸಿಕೊಂಡರೂ, ಅವು ಮತದ ಭಾಗವಾಗುಳಿಯುವುದಿಲ್ಲ. ಕೆಲವು ಸಾಂ ಅವುಗಳ ಕಲಾತ್ಮಕತೆ ಅನುಕರಣಕ್ಕೆ ಕಾರಣವಾಗುತ್ತದೆ. ಪ್ರಲಯ ಪುರಾಣ ಮೆಸೊಪೊಟೇಮಿಯಾದಲ್ಲಿ ಹುಟ್ಟಿ ಏಷಿಯಾ ಮೈನರ್ ಮತ್ತು ಗ್ರೀಸ್ ದೇಶಗಳಿಗೆ ಇತಿಹಾಸ ಪೂರ್ವ ಕಾಲದಲ್ಲಿ ಹರಡಿತೆನ್ನುತ್ತಾರೆ. ಜೊರಾಸ್ಟ್ರಿಯನ್ ಹಿಂದೂ ಮತಗಳ ಪುರಾಣಗಳಲ್ಲಿಯೂ ಪ್ರಲಯ ಕಥೆಗಳಿವೆ. ಲೋಕದಲ್ಲಿ ಅಧರ್ಮ ಅತಿರೇಕಕ್ಕೆ ಹೋದಾಗ ಅಂಥ ಪ್ರಲಯಗಳು ಸಂಭವಿಸುತ್ತವೆಂದು ಎಲ್ಲ ಜನಾಂಗಗಳು ನಂಬುತ್ತವೆ. ಅವತಾರದ ಉದ್ದೇಶವೂ ಅದೇ ಎಂದು ಭಗವದ್ಗೀತೆ ಸಾರುತ್ತದೆ. ಧರ್ಮೋತ್ಥಾನಕಾರ್ಯದಲ್ಲಿ ಸಾಧಾರಣವಾಗಿ ಗಂಡಸಿನ ಪಾತ್ರವೇ ಪ್ರಧಾನವಾದುದು; ಹೆಂಗಸು ಸಂಪೂರ್ಣವಾಗಿ ನಿರ್ಲಕ್ಷ್ಯದಿಂದಿರುತ್ತಾಳೆಂದು ಹೇಳುವಂತಿಲ್ಲ. ಇದಕ್ಕೆ ಸೀತೆ ದ್ರೌಪದಿಯರೇ ಸಾಕ್ಷಿ. ಹೆಂಗಸು 'ಮಾಯೆಯಾಗಿ, ಲಕ್ಷ್ಮಿಯಾಗಿ, ಚಾಮುಂಡಿಯಾಗಿ, ಸರ್ವಮಂಗಳೆಯಾಗಿ, ನಾನಾರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಒಮ್ಮೊಮ್ಮೆ ಆಕೆ ಗಂಡಸರ ಕೈಗೊಂಬೆಯಾಗಿ, ಲೋಕದ ಮಾನವರಿಗೆ ಸಂಕಟವನ್ನುಂಟುಮಾಡಬಹುದು. ದೇವಲೋಕದ ಅಪ್ಸರೆಯರು ಅಂಥವರು. ಗ್ರೀಕರ ಜ್ಯೂಸ್ ದೇವತೆ ಮಾನವರ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿ, ಪಂಡೋರಳನ್ನು ಸೃಷ್ಟಿಸಿ, ಪೆಟ್ಟಿಗೆಯೊಂದನ್ನು ಕೊಟ್ಟು, ಅದನ್ನು ತೆರೆಯಬಾರದೆಂದು ಮುನ್ನೆಚ್ಚರಿಕೆ ನೀಡಿ, ಭೂಲೋಕಕ್ಕೆ ಕಳಿಸಿಕೊಡುತ್ತಾನೆ. ಅವಳು ಪ್ರೊಮಿಥ್ಯೂಸನ ತಮ್ಮ ಎಪಿಮಿಥ್ಯೂಸನನ್ನು ಮದುವೆಯಾಗುತ್ತಾಳೆ. ಅವಳು ಜ್ಯೂಸ್ ದೇವತೆಯ ಎಚ್ಚರಿಕೆಯನ್ನು ನಿರ್ಲಕ್ಷಿಸಿ, ಪೆಟ್ಟಿಗೆಯನ್ನು ತೆರೆದಾಗ ಎಲ್ಲ ಕೇಡುಗಳೂ ಹೊರಬಂದು ಮಾನವನನ್ನು ಮುತ್ತುತ್ತವೆ. ಭರವಸೆ ಮಾತ್ರ ಪೆಟ್ಟಿಗೆಯಲ್ಲಿಯೇ ಉಳಿಯುತ್ತದೆ. ಸುಂದೋಪಸುಂದರ ಕಥೆಯೂ ಹೆಚ್ಚುಕಡಮೆ ಇಂಥದೇ. ಹೆಣ್ಣಿನ ಮೇಲಣ ಮೋಹದಿಂದ ಅವರಿಬ್ಬರೂ ಹೊಡೆದಾಡಿಕೊಂಡುಸಾಯುತ್ತಾರೆ. ಇಂಥ ಕಥೆ ಗ್ರೀಸ್ ದೇಶಕ್ಕೆ ವಿದೇಶೀಯವಲ್ಲ. ಅಟೋಸ್ (Otos) ಮತ್ತು ಇಫಿಯಾಲ್ಟೀಸ್ (Ephialtes)ರ ಕಥೆಯಲ್ಲಿ ಸಾದೃಶ್ಯಗಳ ಕುರುಹು ಕಾಣಿಸುತ್ತವೆ.[1] ಬೇಬೆಲ್ ಗೋಪುರದ ಒನ್ನೆಲೆಯಲ್ಲಿಯೂ ಮಾನವದ್ವೇಷದ ಆಶಯವಿರುವಂತೆ ತೋರುತ್ತದೆ. ದ್ವಿತೀಯ ಪ್ರಲಯವೇನಾದರೂ ಸಂಭವಿಸಿದ್ದಾದರೆ ಅದು ರಕ್ಷೆದಾಣವಾಗಿರಲೆಂದು ಕಟ್ಟಿದ್ದುದಾಗಿ ಒಂದು ಕಥೆಯಿದೆ. ಆಕಾಶ ಕೆಳಗೆ ಬೀಳದಿರಲೆಂದು ಊರೆಯಾಗಿ ನಿಲ್ಲಿಸಿದ ಕಂಬವೆಂದು ಕೆಲವರ ನಂಬಿಕೆ. ಮಾನವ ಸ್ವರ್ಗಕ್ಕೇರಲು ಹಾಕಿದ ಏಣಿ ಎಂದು ತಿಳಿದ ಯಹೂದಿ ದೇವತೆ ಜೆಹೋವ ಮಾನವರಲ್ಲಿ ಕಾದಾಟ ಸೃಷ್ಟಿಸುತ್ತಾನೆ. ಕರ್ಮಚಾರಿಗಳ ಮಾತು ಪರಸ್ಪರ ಅರ್ಥವಾಗದಂತೆ ಗಲಿಬಿಲಿ ಉಂಟುಮಾಡುತ್ತಾನೆ. ಜಗತ್ತಿನ ಭಾಷೆಗಳ ವೈವಿಧ್ಯಕ್ಕೆ ಇದೇ ಕಾರಣವೆನ್ನುತ್ತಾರೆ. ಮಾನವರು ಅನೈಕ್ಯದಿಂದ ಬಡಿದಾಡಬೇಕೆಂಬುದು ದೇವರ ಉದ್ದೇಶವಂತೆ.

ಜಾನಪದ ಮತ್ತು ಮತಗಳ ನಡುವಣ ಕೊಂಡಿಯಾದ ಪುರಾಣ ಸಂಪೂರ್ಣ ಕಟ್ಟುಕತೆಯೆಂದು ತಿರಸ್ಕರಿಸಲಾಗದು. ಅದರಭಾಷೆಯನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿ

1 *The Science of Folklore* by A. H. Krappe, p. 333.

ಕೊಳ್ಳುವುದಾದರೆ ಅವರ ಪ್ರಯೋಜನವನ್ನು ಪಡೆಯಬಹುದಾಗಿದೆ. ಮಾನವವಿಕಾಸದ ಪ್ರಾರಂಭದ ಚರಿತ್ರೆಯೇ ಪುರಾಣವೆಂಬ ಆಂಡ್ರೂಲಾಂಗನ ಅಭಿಪ್ರಾಯ ಅಮೂಲ್ಯ ವಾದದ್ದು. ಓಲೆತೊಳೆಯ ರುಚಿಯನ್ನನುಭವಿಸಬೇಕಾದರೆ ಅದರ ಸಿಪ್ಪೆ ಕರಟ ಜುಂಗು ಗಳನ್ನು ಭೇದಿಸಬೇಕಾಗುತ್ತದೆ. ಅಂತೆಯೇ ವಾಸ್ತವಿಕ ಘಟನೆಗಳನ್ನು ಮುಸುಕಿಕೊಂಡಿ ರುವ ಅದ್ಭುತ ಕಲ್ಪನೆಗಳನ್ನು ಬಿಡಿಸಿದರೆ ಮಾನವನ ಪೂರ್ವೇತಿಹಾಸದ, ಅವನ ವಿಜ್ಞಾನದ, ಅವನ ಸಂಸ್ಕೃತಿಯ ಸ್ವರೂಪ ಮನದಟ್ಟಾಗುತ್ತದೆ. ಅವು ಆದಿಮಾನವನ ಹೃದಯಕ್ಕೆ ಹಿಡಿದ ಕನ್ನಡಿ, ಅವನ ಭಾವಕೋಶವನ್ನು ಪ್ರತಿಬಿಂಬಿಸುವ ಪ್ರತಿಮೆ ಎಂದು ಎಣಿಸು ವುದಾದರೆ ಸಮಾಜವಿಜ್ಞಾನಿ, ಮಾನವಶಾಸ್ತ್ರಜ್ಞ, ಮನೋವಿಜ್ಞಾನಿ ಹಾಗೂ ಭಾಷಾ ವಿಜ್ಞಾನಿಗಳ ಸಂಶೋಧನೆಗೆ ಅಕ್ಷಯ ಕ್ಷೇತ್ರವಾಗುತ್ತವೆ. ಅವುಗಳ ಭಾಷೆ ಈಗಿನ ಮಾನವರಿಗೆ ಅರ್ಥವಾಗುವುದು ಕಷ್ಟ. ಅದರ ಕೀಲಿಕೈ ಅವರಿಗೆ ದೊರೆತದ್ದಾದರೆ ಪ್ರಾಚೀನ ರಹಸ್ಯಗಳೆಲ್ಲ ಬಯಲಾಗುತ್ತವೆ. ವಿಜ್ಞಾನ ಬೆಳೆದಂತೆ, ವಿಚಾರ ವಿಕಾಸ ಗೊಂಡಂತೆ, ಜ್ಞಾನವೃದ್ಧಿಯಾದಂತೆ, ಪುರಾಣಗಳು ಹಿಂಜರಿಯುತ್ತವೆ, ಮರೆಯಾಗುತ್ತವೆ. ಈ ಬದಲಾವಣೆಗಳು ನಿಸರ್ಗಸಹಜವಾದ್ದರಿಂದ ಈ ಬಗ್ಗೆ ಚಿಂತೆ ಅನಗತ್ಯ. ಆದರೆ ಅವು ಗ್ರಂಥಾಲಯದ ಅಮೂಲ್ಯ ಆಸ್ತಿಯಾಗಿ, ಕುತೂಹಲದ ವಸ್ತುವಾಗಿ, ಸಂಶೋಧನೆಯ ಸಾಮಗ್ರಿಯಾಗಿ ಬಹುಕಾಲ ಉಳಿಯುತ್ತವೆನ್ನುವುದರಲ್ಲಿ ಸಂಶಯವಿಲ್ಲ.

೫

ಕುಣಿತ ಮತ್ತು ಬಯಲಾಟ

ಮಾನವ ಹುಟ್ಟಿದಾಗಲೇ ಮಾತು ಕಲಿತವನಲ್ಲ. ಮಾತು ಕಲಿತದ್ದು ಎಷ್ಟೋ ವರ್ಷಗಳ ನಂತರ. ಆತನಕ ಕೂಗು, ಕಾಕು, ಸನ್ನೆ, ಅಂಗಭಂಗಿ, ಮುಖಮುದ್ರೆ, ಹಾವಭಾವಗಳ ಮೂಲಕ ತನ್ನ ಅಂತರಂಗವನ್ನು ಅಭಿವ್ಯಕ್ತಪಡಿಸುತ್ತಿದ್ದನು; ತನ್ನ ಸಂತೋಷವನ್ನು ಕುಣಿತದ ಮೂಲಕ ತೋರಿಸುತ್ತಿದ್ದನು. ಕಾಕು ಭಂಗಿ ಮುದ್ರೆ ಕುಣಿತಗಳೇ ಅವನ ಭಾಷೆ ಯಾಗಿತ್ತು. ಅದನ್ನು ಸಂಕೇತ ಅಥವಾ ಸನ್ನೆಗಳ ಭಾಷೆ ಎಂದು ಕರೆಯಬಹುದು. ಅವನ ಬಾಳಿನ ಬೇಡಿಕೆಗಳು ಕೆಲವೇ ಕೆಲವು. ಹಸಿವು ನೀರಡಿಕೆಗಳಿಗೆ ಸಂಬಂಧಿಸಿದುವು. ಮನೆ ಕಟ್ಟುವ, ಮದುವೆಮಾಡುವ, ಧನ ಸಂಗ್ರಹಿಸುವ ಬುದ್ಧಿ ಅವನಿಗಿರಲಿಲ್ಲ. ಹೊಟ್ಟೆಗಿಷ್ಟು ಕಂದಮೂಲಗಳೋ ಹಸಿಯ ಬಾಡೋ ಸಿಕ್ಕಿದರೆ ಅವನಿಗೆ ತೃಪ್ತಿಯಾಗುತ್ತಿತ್ತು. ಆ ತೃಪ್ತಿಯ ಭರದಲ್ಲಿ ಅವನ ಕೈಕಾಲುಗಳು ತಾವಾಗಿಯೇ ನರ್ತಿಸುತ್ತಿದ್ದುವು. ಅವನು ತನ್ನ ಕಣ್ಮುಂದೆ ಕುಣಿಯುತ್ತಿದ್ದ ಮೃಗಪಕ್ಷಿಗಳನ್ನು ಕಂಡಿದ್ದ. ಹಾಲು ಕುಡಿದು ತೃಪ್ತಿ ಹೊಂದಿದ ಮರಿಕರುಗಳು ಎಳಬಿಸಿಲಿನಲ್ಲಿ ನೆಗೆದಾಡುವುದನ್ನು ನೋಡಿರಬೇಕು; ನವಿಲಿನ ಲಯಬದ್ಧವಾದ ಕುಣಿತವನ್ನು ನೋಡಿ ಆನಂದಿಸಿರಬೇಕು. ಪ್ರಾಣಿ ಬಿಡುವ ಉಸಿರಿನಲ್ಲಿ, ನೀರ ತೆರೆಗಳ ಆಟದಲ್ಲಿ, ನಕ್ಷತ್ರಗಳ ನೆರಿವಣಿಗೆಯಲ್ಲಿ, ಬಳ್ಳಿಯ ಲಾಸ್ಯದಲ್ಲಿ, ನಿಸರ್ಗ ವ್ಯಾಪಾರಗಳಲ್ಲಿ ಲಯಲಾವಣ್ಯಗಳನ್ನು ಗಮನಿಸಿರಬೇಕು; ಅವು ಅವನ ಮನಸ್ಸಿನ ಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತಿರಬೇಕು. ಅವುಗಳನ್ನೆಲ್ಲ ಅವನು ಅನುಕರಿಸಿರಬೇಕು. ಈ ಅನುಕರಣ ಭಾವಪ್ರಚೋದನೆ ಮತ್ತು ವಿಕಾಸಗಳಿಗೆ ಸಹಕಾರಿಯಾಗಿರಬೇಕು, ಸ್ಫೂರ್ತಿ ದಾಯಿಯಾಗಿರಬೇಕು. ಬಹುಕಾಲದವರೆಗೆ ಕುಣಿತ ಮತ್ತು ಅಂಗಚಲನೆಗಳೇ ಆತ್ಮಾಭಿ ವ್ಯಕ್ತಿಯ ಮಾಧ್ಯಮಗಳಾಗಿರಬೇಕು. ಕುಣಿಯುವಾಗ ಅಥವಾ ಅಂಗಗಳನ್ನು ಕುಣಿಸು ವಾಗ ಕಾಕುಕೇಕೆಗಳು ದಿಗಂತಗಳಲ್ಲಿ ಅನುರಣನಗೊಂಡಿರಬೇಕು. ಅವುಗಳ ಜೊನ್ನೆಯಲ್ಲಿಯೇ ಮಾತು ಕೊನರಿರಬೇಕು. ಆದ್ದರಿಂದ ಕುಣಿತ ಅನಾದಿಯಾದದ್ದೆಂದೂ, ಜನಪದ ಕಲಾ ಪ್ರಕಾರಗಳಲ್ಲಿ ಅದೇ ಅತ್ಯಂತ ಪ್ರಾಚೀನವಾದದ್ದೆಂದೂ ಧಾರಾಳವಾಗಿ ಹೇಳಬಹುದು.

ಜನಪದ ನೃತ್ಯದ ಪ್ರಾದುರ್ಭಾವಕ್ಕೆ ಶೃಂಗಾರಕೇಳಿಯೇ ಮೂಲವೆನ್ನುವವರಿದ್ದಾರೆ. ಹೆಣ್ಣನ್ನೊಲಿಸಿಕೊಳ್ಳುವ ಸಲುವಾಗಿ ಗಂಡು ನಾನಾಕರ್ಷಣೆಗಳನ್ನೊಡ್ಡುವ ಪರಿಪಾಠವನ್ನು ಪ್ರಾಣಿವರ್ಗದಲ್ಲಿ ಕಂಡಿದ್ದೇವೆ. ಗಂಡು ನವಿಲಿನ ನೃತ್ಯವೇ ಇದಕ್ಕೊಂದು ನಿದರ್ಶನ. ಆದರೆ

ಮಾನವವರ್ಗಕ್ಕೆ ಈ ತತ್ವವನ್ನನ್ವಯಿಸುವುದು ಕಷ್ಟವಾಗುತ್ತದೆ. ಅವನು ಮೊದಮೊದಲು ಕುಣಿವವುದು ಆಂತರಿಕ ಪ್ರೇರಣೆಯಿಂದಾಗಿ, ಅಂಗಾಂಗಗಳ ಲವಲವಿಕೆಗಾಗಿ, ಆತ್ಮತೃಪ್ತಿಗಾಗಿ. ಒಬ್ಬನ ಕುಣಿತ ಮಗ್ಗುಲಲ್ಲಿದ್ದ ಮತ್ತೊಬ್ಬನಿಗೆ, ಅನಂತರ ಇತರರಿಗೆ ಸ್ಫೂರ್ತಿನೀಡಿ, ಅವರು ಸಹ ಅವನೊಡನೆ ಮೇಳವಿಸಿ, ಕುಣಿಯುವಂತಾಯಿತು. ಗೊಟ್ಟಿಗುಣಿತ ಪ್ರಾರಂಭ ವಾದದ್ದೇ ಹೀಗೆ. ಗೊಟ್ಟಿಗುಣಿತದೊಡನೆ ಸ್ಪರ್ಧೆ ಪ್ರಾರಂಭವಾಯಿತು. ಆಗ ಆತ್ಮತೃಪ್ತಿಯ ಜತೆಗೆ ಅನ್ಯಮನರಂಜನೆಯೂ ನೃತ್ಯದ ಗುರಿಯಾಯಿತು. ಆಹಾರಾರ್ಜನೆಗಾಗಿ ಬಹುಶ್ರಮ ಅನಾವಶ್ಯಕವಾಗಿದ್ದಾಗ, ಕಾಷ್ಠ ವ್ಯಸನಗಳು ಸೊನ್ನೆಯಾಗಿದ್ದಾಗ ಯಾವಾಗೆಂದರಾವಾಗ ಕುಣಿತ ನಡೆಯುತ್ತಿತ್ತು. ಕೃಷಿಸಂಸ್ಕೃತಿ ಪ್ರಾರಂಭವಾದನಂತರ ಸಮಾಜವ್ಯವಸ್ಥೆಯೂ ಜತೆಜತೆಗೇ ನಡೆದು, ಅನೇಕ ಜವಾಬ್ದಾರಿಗಳು ಮಾನವನ ಪಾಲಿಗೊದಗಿದುವು. ಆಗ ಸಾಮಾನ್ಯಸಮಯದಲ್ಲಲ್ಲದೆ, ನೃತ್ಯ ವಿಶೇಷಸಂದರ್ಭದ ಕೇಂದ್ರ ಸಂಗತಿಯಾಯಿತು. ಅವರಿಗೆ ಗೊತ್ತಿದ್ದ ಕಲೆ ಅದೊಂದೇ ಆಗ. ಮಾನವರಿಗೆ ತೃಪ್ತಿಕೊಡುವ ಕಲೆ ಭೂತ ಗಳಿಗೂ ತೃಪ್ತಿನೀಡಬಹುದೆಂದು ಆಗಿನ ಜನ ಬಗೆದರು. ನೃತ್ಯದ ಪ್ರಭಾವದಿಂದ ಸಸ್ಯ ಕೋಟಿ ವಿಜೃಂಭಿಸುತ್ತದೆ, ಅದರ ಅಭಾವದಿಂದ ಬೆಳೆ ನಶಿಸುತ್ತದೆ, ಬೇಟೆ ಕೈಗೆಟಕುವು ದಿಲ್ಲ, ಕ್ಷಾಮಡಾಮರಗಳು ವ್ಯಾಪಿಸುತ್ತವೆ, ಹಸಿವು ಸಾವುಗಳಿಂದಾಗಿ ಮನುಕುಲ ನಾಶ ವಾಗುತ್ತದೆ, ಇದು ಅವರು ಕಂಡ ಬೆಳಕು, ನಂಬಿಕೆ. ಜರ್ಮನಿ ಮತ್ತು ಸ್ವೀಡನ್‌ದೇಶಗಳಲ್ಲಿ ಹಾರುಕುಣಿತವೊಂದು ಹಿಂದಿನ ಕಾಲದಲ್ಲಿ ರೂಢಿಯಾಗಿತ್ತು. ಅಗಸೆಬೀಜವನ್ನು ಚೆಲ್ಲಿದಾಗ ತರುಣತರುಣಿಯರು ಹೊಲಗಳಲ್ಲಿ ಹಾರುತ್ತ ಕುಣಿಯುತ್ತಿದ್ದರಂತೆ. ಅವರೆಷ್ಟುದ್ದ ಹಾರಿ ದರೆ ಅಷ್ಟುದ್ದ ಅದು ಬೆಳೆಯುತ್ತದೆಂದು ಅವರು ನಂಬಿದ್ದರು. ಮಡಗಾಸ್ಕರ್ ದ್ವೀಪದ ಹಾಗೂ ಕೆಲವು ಆಫ್ರಿಕಾದೇಶಗಳ ಹೆಂಗಸರು ತಮ್ಮ ಪತಿಗಳು ಯುದ್ಧಕ್ಕೆ ಹೋದನಂತರ ಮೈಗೆ ಬಣ್ಣ ಬಳಿಮುಕೊಂಡು, ವಸ್ತ್ರಭೂಷಣಗಳಿಂದಲಂಕರಿಸಿಕೊಂಡು, ಆಯುಧಗಳನ್ನು ಹಿಡಿದುಕೊಂಡು ಯುದ್ಧ ಮುಗಿಯುವ ತನಕ ನರ್ತಿಸುತ್ತಿದ್ದರು. ಚಳಿಗಾಲದಲ್ಲಿ ಬೆಂಕಿ ಹಾಕಿ, ಅವರ ಸುತ್ತ ಗಂಡಸರು ಕುಣಿಯುತ್ತಿದ್ದರು. ಬಿತ್ತುವಾಗ, ಬೆಳೆಬಂದಾಗ, ಕೊಯ್ಯು ವಾಗ ವಿಶೇಷೋತ್ಸವಗಳನ್ನು ಏರ್ಪಡಿಸಿ, ಇರುಳೆಲ್ಲ ಒಂದೇ ಸಮನೆ ಕುಣಿದು ಕುಪ್ಪಳಿಸು ತ್ತಿದ್ದರು. ಭಾವದ ಲಯಕ್ಕೆ ತಕ್ಕಂತೆ ಹೆಜ್ಜೆಹಾಕುವುದೇ ಅವರ ಕುಣಿತವಾಗಿತ್ತು. ಎಂದರೆ ಚಲನೆಯ ಲಯವೇ ಜಾನಪದನೃತ್ಯದ ರಹಸ್ಯವೆನ್ನಬಹುದು.

ಭಾವವೇ ಕುಣಿತವಾಗಿ ರಸನಿಷ್ಪತ್ತಿಗೆ ಕಾರಣವಾಗುತ್ತದೆ. ಮಾನಸಿಕಕ್ರಿಯೆ ಅಂಗಾಂಗ ಭಂಗಿಗಳಲ್ಲಿ ಅಭಿವ್ಯಕ್ತಗೊಂಡಾಗ ಅಂದರೆ ಶಾರೀರಕಕ್ರಿಯೆಯಾದಾಗ ನೃತ್ಯ ವಾಗುತ್ತದೆ. ಆವೇಶ ಹೆಚ್ಚಿ, ನಾಡಿಕ್ರಿಯೆ ತೀವ್ರವಾಗಿ, ರಕ್ತ ಕಾವೇರಿ ಹೃದಯದ ಬಡಿತ ಅಧಿಕವಾದಂತೆಲ್ಲ ಭಾವವೇ ಕುಣಿದಂತಾಗುತ್ತದೆ. ಅಂಗಾಂಗಗಳಲ್ಲೆಲ್ಲ ಭಾವಸಂಚಾರವಾಗು ತ್ತದೆ. ಇಲ್ಲಿ ಅಂಗಭಂಗಿ ಪ್ರಧಾನವಲ್ಲ. ಹೆಜ್ಜೆಯ ಗತ್ತು ಮತ್ತು ನೆಗೆತದ ವರಿಸೆಗಳೇ ಮುಖ್ಯ. ಆತ್ಮನಿರಸನ ಅಥವಾ ಅಹಂಕಾರ ಭಂಗವೇ ಶ್ರೇಷ್ಠ ಕಲೆಯ ಲಕ್ಷಣವೆನ್ನುವುದಾದರೆ, ಈ ಕುಣಿತಕ್ಕೂ ಆ ಹೆಸರು ಸಲ್ಲುತ್ತದೆ. ಪ್ರಾರಂಭದಲ್ಲಿ ತಾಳಮದ್ದಳೆಗಳೂ ಇರಲಿಲ್ಲ. ಬಿದಿರು

ದಬ್ಬೆಯೋ, ನುಣುಪುಕಲ್ಲೋ, ಕೈಬಡಿತವೋ ಅವುಗಳ ಕೆಲಸವನ್ನು ನಿರ್ವಹಿಸುತ್ತಿದ್ದುವು. ಮಾನವನ ಭಾಷೆ ಸಹ ಪ್ರಾರಂಭದಲ್ಲಿ ಲಯಬದ್ಧವಾಗಿತ್ತೆಂದು ಹೇಳುವುದುಂಟು. ಕುಣಿತದೊಡನೆ ಮೇಳವಿಸಿದ ಕಾಕುಕೇಕೆಗಳೇ ಬರಬರುತ್ತ ಹಾಡಾಗಿ ಪರಿಣಮಿಸಿರಬೇಕು. ಅನಂತರ ಹಾಡೇ ಕುಣಿತವಾಗಿ, ಕುಣಿತವೇ ಹಾಡಾಗಿ ಪ್ರಕಾಶಗೊಳ್ಳುತ್ತದೆ. ಮಾಟ ವಿಕಾಸಗೊಂಡು ಮತ ವಿಜ್ಞಾನಗಳಾಗಿ ಕವಲೊಡೆದುವಷ್ಟೆ. ಕುಣಿತವೂ ಮಾಟದ ಅಂಗವಾಗಿ ಪ್ರಾಶಸ್ತ್ಯ ಪಡೆದು, ಅನಂತರ ಧಾರ್ಮಿಕ ವಿಧಿಗಳಲ್ಲಿಯೂ ಅನಿವಾರ್ಯವಾಯಿತು. ರೋಗ ಚಿಕಿತ್ಸೆಗೆ, ಅನಿಷ್ಟನಿವಾರಣೆಗೆ, ಮತ್ತು ದೇವರುದಿಂಡರ ಕೃಪಾರ್ಜನೆಗೆ ಅದು ಅತ್ಯಗತ್ಯವಾಯಿತು.

ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದ ರೋಮ್‌ನಗರದಲ್ಲಿ ಮದುವೆ ಅಥವಾ ಶವ ಸಂಸ್ಕಾರ ಸಮಯದಲ್ಲಿ ಕತ್ತಿವರಸೆ ಅಥವಾ ಖಡ್ಗನೃತ್ಯವನ್ನೇರ್ಪಡಿಸುತ್ತಿದ್ದುದುಂಟು. ದುಷ್ಟಶಕ್ತಿಗಳ ನಿವಾರಣೆಯೇ ಆ ಏರ್ಪಾಡಿನ ಉದ್ದೇಶವಾಗಿರುತ್ತಿತ್ತು. ಭಾರತದಲ್ಲಿಯೂ ಕೆಲವು ಜನರಲ್ಲಿ ಶವಯಾತ್ರಾನೃತ್ಯ ಇಂದಿಗೂ ರೂಢಿಯಲ್ಲಿದೆ. ಆದಿಮಾನವಸಮಾಜದಲ್ಲಿ ಯುದ್ಧಕ್ಕೂ ನೃತ್ಯ ಅತ್ಯವಶ್ಯವಾಗಿತ್ತು. ಕತ್ತಿವರಸೆ ದೊಣ್ಣೆವರಸೆಗಳು ಯುದ್ಧನೃತ್ಯದ ಪರಿಧಿಯಲ್ಲಿ ಬರುತ್ತವೆ. ಆತ್ಮರಕ್ಷಣೆಗಾಗಿ ಬಹೂಪಯುಕ್ತವೆಂದು ತೋರಿದ ಈ ಕಲೆಗಳು ಆದಿಯುಗದ ಯುದ್ಧರಂಗದಲ್ಲಿ ವಿಶೇಷವಾಗಿ ಬಳಕೆಯಾಗುತ್ತಿದ್ದಿರಬೇಕು.

ಅನುಕರಣ ಕಲೆಯ ಮೂಲ ಪ್ರವೃತ್ತಿ. ನಿಸರ್ಗ ಹಾಗೂ ಮೃಗ ಪಕ್ಷಿಗಳ ಅನುಕರಣೆಯ ಮೂಲಕ ಕಲಾಪ್ರಕಾರಗಳು ಉಗಮಗೊಂಡುವು. ಮಾನವ ಸುತ್ತಮುತ್ತಣ ಹಕ್ಕಿಜಂತುಗಳನ್ನಣಕಿಸಿ ಮಾತು ಕಲಿತುಕೊಂಡಂತೆಯೇ, ಸಚರಾಚರ ವಸ್ತುಗಳನ್ನಣಕಿಸಿ ನೃತ್ಯವನ್ನು ಕಲಿತುಕೊಂಡನು. ಪ್ರತಿಯೊಂದು ದೇಶದ ನೃತ್ಯದ ಮೇಲೆ ಅಲ್ಲಲ್ಲಿಯ ಭೌಗೋಳಿಕ ವಾತಾವರಣ ಪ್ರಭಾವ ಬೀರಿದೆಯೆಂಬುದು ಸ್ಪಷ್ಟ. ಹವಾಯ್ ದ್ವೀಪದ ನೃತ್ಯದಲ್ಲಿ ನಡುವಿನ ತೊನೆದಾಟವೂ, ಮುಂಚಾಚಿದ ತೋಳಿನ ತೂಗಾಟವೂ ಬಹುಮುಖ್ಯ. ಫೆಸಿಫಿಕ್ ಸಾಗರದ ಮಂದಮಾರುತದಿಂದ ತೊನೆದಾಡುವ ತಾಳೆಯ ಮರಗಳಿಂದ ನಡುವಿನ ಚಲನೆಯನ್ನೂ, ಶಾಂತಸಾಗರದ ತೆರೆಗಳಿಂದ ಹಸ್ತಚಲನೆಯನ್ನೂ ಅಲ್ಲಿಯ ಜನ ತಮ್ಮ ನೃತ್ಯಕ್ಕೆ ಅಳವಡಿಸಿಕೊಂಡರೆಂದು ಹೇಳುತ್ತಾರೆ.[1] ಆಯಾಯ ದೇಶದ ವಾಯುಗುಣ ಅಲ್ಲಲ್ಲಿಯ ನೃತ್ಯದ ದ್ರುತ ಅಥವಾ ಮಂದಗತಿಯ ಮೇಲೆ ಪ್ರಭಾವ ಬೀರುತ್ತದೆ. ವಾಯುಗುಣ ವೈವಿಧ್ಯವುಳ್ಳ ಇಂಡಿಯಾದೇಶದಲ್ಲಂತು ಒಂದೊಂದು ಮೂಲೆಯ ನೃತ್ಯಗಳಲ್ಲಿ ವ್ಯತ್ಯಾಸ ಕಂಡುಬರುವುದು ಸಹಜವೇ ಆಗಿದೆ. "ಮಣಿಪುರ ಗಗನಚುಂಬಿ ವೃಕ್ಷಗಳಿಂದ ಕೂಡಿದ ಪರ್ವತಪ್ರದೇಶ. ಬಿರುಗಾಳಿಗೆ ಸಿಕ್ಕಿದ ವೃಕ್ಷಗಳು ಸಮೂಲವಾಗಿ ಉರುಳುವುದುಂಟು. ನೃತ್ಯಸಮಯದಲ್ಲಿ ನಟರು ಹಠಾತ್ತನೆ ಕುಳಿತುಕೊಳ್ಳುವುದು ವೃಕ್ಷ ನಿರ್ಮೂಲನಕ್ರಿಯೆಯ ಸಂಕೇತವೆಂದೂ, ನಡುವಣ ಮೇಲಣ ಅಂಗಾಂಗಗಳ ಆವೇಶಮಯವಾದ ಚಲನೆ ಚಂಡಮಾರುತಕ್ಕೆ ಸಿಕ್ಕಿದ ವೃಕ್ಷಗಳ ಚಲನೆಯ ಸಂಕೇತವೆಂದೂ ಹೇಳುತ್ತಾರೆ. ಬಯಲು

1 *The Folk-Dance of India* by **Projesh Banerji**, p. 12

ಸೀಮೆಯ ನೃತ್ಯಗಳು ಮಲೆನಾಡಿನ ನೃತ್ಯಗಳಿಗಿಂತ ಸೌಮ್ಯವಾಗಿರುತ್ತವೆ.[1]

ಹಾಡು ಕುಣಿತದೊಡನೆ ಮಿಲನಗೊಂಡಾಗ ನಾಟ್ಯ ಆವಿರ್ಭಾವಗೊಂಡಿತೆಂದು ಹೇಳಬಹುದು. ಭಾವಪ್ರಧಾನವಾದ ಹಾಡಿನ ಧಾಟಿಗೆ ತಕ್ಕಂತೆ ಕುಣಿತದ ಗತ್ತು ಮಾರ್ಪಡುತ್ತಿತ್ತು ಅಥವಾ ಹೊಂದಿಕೊಳ್ಳುತ್ತಿತ್ತು. ಒಂದೇ ಭಾವ ಒಂದು ಕಡೆ ಹಾಡಾಗಿ ಹೊರಹೊಮ್ಮಿದರೆ, ಅಂಗಾಂಗಗಳ ಮೂಲಕ ಕುಣಿತವಾಗಿ ಚಿಮ್ಮುತ್ತಿತ್ತು. ಮನುಷ್ಯ ಮಾತು ಕಲಿತನಂತರವೂ ಮಾಟದ ಅಂಗವಾಗಿ ಸಂಜ್ಞೆ ಮತ್ತು ಅಂಗಭಂಗಿಗಳು ಮುಂದುವರಿದುವು. ಆಗ ಒಂದೊಂದು ಸನ್ನೆ ಅಥವಾ ಮುದ್ರೆಗೆ ಖಚಿತವಾದ ಅರ್ಥ ಪ್ರಾಪ್ತವಾಯಿತು. ಒಂದೊಂದು ಸನ್ನೆಯೂ ಒಂದೊಂದು ಮಾತಿನ ಸಂಕೇತವಾಯಿತು. ದುಷ್ಟಶಕ್ತಿಗಳನ್ನೋಡಿಸಬೇಕಾದರೆ ಜನ ಕೂಗು ಕೇಕೆಗಳನ್ನು ಹಾಕುತ್ತಿದ್ದರಷ್ಟೆ; ಜತೆಗೆ ದೊಣ್ಣೆಗಳನ್ನು ಬಡಿದೋ ಕೈಚಪ್ಪಾಳೆಯಿಕ್ಕಿಯೋ ಭಯಂಕರ ಗದ್ದಲವನ್ನೆಬ್ಬಿಸುತ್ತಿದ್ದರು. ಡೋಲು ನಗಾರಿಗಳ ಕಲ್ಪನೆ ಬಂದದ್ದೂ ದುಷ್ಟಶಕ್ತಿಗಳ ಉಚ್ಚಾಟನೋಪಾಯಗಳನ್ನು ಅನ್ವೇಷಿಸುವ ಸಂದರ್ಭದಲ್ಲಿ.

ಜನಪದ ನೃತ್ಯದ ಜಾಯಮಾನವೆಂದರೆ ಸರಳತೆ. ಅದರಲ್ಲಿ ರೂಕ್ಷತೆಯೂ ಕಾಣಬಹುದು. ಕುಣಿತದ ಧಾಟಿಗಳೂ ಕಡಮೆ. ಅವರ ಕುಣಿತಕ್ಕೆ ಸ್ಫೂರ್ತಿನೀಡುವ ಸಂಗತಿಗಳೆಂದರೆ ಉತ್ಸಾಹ ಮತ್ತು ಆವೇಶ. ರೌದ್ರವೀರ ಶೃಂಗಾರರಸಗಳು ಮಾತ್ರ ಅವರಿಗೆ ಸಂಪೂರ್ಣಪರಿಚಯ. ಅಲ್ಲಿಯೂ ನಯನವುರುಗಳು ಅವರಿಗೆ ವಿದೇಶೀಯ. ಇಷ್ಟನ್ನು ಪ್ರದರ್ಶಿಸಲಿಕ್ಕೆಷ್ಟು ಗತ್ತುಮೋಡಿ ಬಳುಕುಗಳು ಬೇಕೋ ಅಷ್ಟು ಅವರಲ್ಲಿ ಸಮೃದ್ಧವಾಗಿವೆ. ಉಳಿದ ರಸಗಳು ಅವರಿಗೆ ಗೊತ್ತಿಲ್ಲವೆಂದಲ್ಲ. ಅವರು ಧರಿಸುವ ಮೊಗವಾಡ ಹಾಗೂ ವಸ್ತ್ರಭೂಷಣಗಳ ಮೂಲಕ ಹಾಸ್ಯದ ಹೊನಲು ಹರಿಸುತ್ತಾರೆ, ಅದ್ಭುತದಲ್ಲಿ ತೇಲಾಡಿಸುತ್ತಾರೆ. ಅವರ ಬಾಳನ್ನು ಆಳುತ್ತಿರುವ ಮೂರು ಮುಖ್ಯ ಭಾವಗಳೆಂದರೆ ಅಳು, ನಗು, ರೇಗು. ಅವರ ಪ್ರತಿಯೊಂದು ಕ್ರಿಯೆಯಲ್ಲಿಯೂ ಅವು ಹೆಚ್ಚಿನ ಪ್ರಮಾಣದಲ್ಲಿ ಅಭಿವ್ಯಕ್ತವಾಗುತ್ತವೆ. ಕಡಿವಾಣವಿಲ್ಲದ ಆವೇಶ ಅವರನ್ನಾಳುತ್ತದೆ. ಎಲ್ಲ ರಸಗಳ ಅಭಿವ್ಯಕ್ತಿಯಲ್ಲಿಯೂ ಅದರ ಹಾರಾಟವನ್ನು ಕಾಣಬಹುದು. ಶೋಕಸನ್ನಿವೇಶದಲ್ಲಿಯೂ ಅದರ ಪ್ರಭಾವವನ್ನು ಗುರುತಿಸಬಹುದು. ಆದಿಮಾನವನ ಕೆಲವು ಗುಣಗಳನ್ನಾದರೂ ಇಂದಿನ ನಿರಕ್ಷರಕುಕ್ಷಿಗಳ ಬಾಳಿನಲ್ಲರಿಯಬಹುದಾಗಿದೆ. ಅವರು ಶೋಕಾವೇಶದಲ್ಲಿರುವಾಗ ಹಣೆ ಬಡಿದುಕೊಳ್ಳುತ್ತಾರೆ, ಕೂದಲು ಕೀಳುತ್ತಾರೆ, ಎದೆ ಹೊಡೆದುಕೊಳ್ಳುತ್ತಾರೆ, ಬಟ್ಟೆ ಹರಿದುಕೊಳ್ಳುತ್ತಾರೆ, ಧೂಳೆರಚಿಕೊಳ್ಳುತ್ತಾರೆ, ಕೈಗೆ ಕತ್ತಿ ಸಿಕ್ಕಿದರೆ ತಿವಿದುಕೊಳ್ಳುತ್ತಾರೆ. ಆವೇಶದ ಭರದಲ್ಲಿ ತಮ್ಮ ಕೃತ್ಯಗಳ ಭವಿಷ್ಯಹಾನಿಯನ್ನವರು ಲಕ್ಷಿಸುವುದಿಲ್ಲ. ಇದೇ ಪ್ರವೃತ್ತಿ ಹಿಂದಿನ ಕಾಲದ ಕುಣಿತಗಳಲ್ಲೆಲ್ಲ ಪ್ರತಿಫಲನಗೊಳ್ಳುತ್ತದೆ. ಇಂದಿನ ವೀರಗಾಸೆಗುಣಿತ, ಭೂತನೃತ್ಯಗಳಲ್ಲಿಯೂ ಅಂಥದೇ ಮನೋಧರ್ಮವನ್ನು ಕಾಣುತ್ತೇವೆ.

ನೃತ್ಯದ ಲಯಧಾಟಿಕ್ರಮಗಳನ್ನನುಸರಿಸಿದಾಗ ಮಾತು ಹಾಡಾಗಿ ಹರಿಯುತ್ತದೆ.

---

[1] Ibid, P. 13.

ಅದು ಮೊದಮೊದಲು ಕುಣಿತದ ಸಂಗಾತಿಯಾಗಿತ್ತು. ಕಾಲಕ್ರಮೇಣ ಅದು ಕುಣಿತದಿಂದ ಬೇರೆಯಾಗಿ ಅಸ್ತಿತ್ವವನ್ನು ಪಡೆದು ವಿಕಾಸವಾಗತೊಡಗಿತು. ಈ ಎರಡು ಕಲೆಗಳು ಸ್ವತಂತ್ರವಾಗಿ, ಪರಸ್ಪರ ಪೂರಕವಾಗಿ, ಮಾರ್ಗಸಂಪ್ರದಾಯಗಳಿಗೆ ಬುನಾದಿಯಾಗಿ, ಬೆಳೆಯುತೊಡಗಿತು. ಅನೇಕ ನಾಗರಿಕ ರಾಷ್ಟ್ರಗಳಲ್ಲಿ ಮಾರ್ಗಸಂಪ್ರದಾಯದ ಪ್ರಭಾವದಿಂದಾಗಿ ದೇಶೀ ಅಥವಾ ಜನಪದ ಸಂಪ್ರದಾಯ ಬಹುವಾಗಿ ಹಿಂಜರಿದಿದೆ. ಆಫ್ರಿಕಾದಂಥ ಹಿಂದುಳಿದ ರಾಷ್ಟ್ರಗಳಲ್ಲಿ ಜನಪದಸಂಪ್ರದಾಯ ತನ್ನ ಸತ್ವವನ್ನು ಕಳೆದುಕೊಂಡಿಲ್ಲ. ಭಾರತದಲ್ಲಂತು ಎರಡು ಸಂಪ್ರದಾಯಗಳೂ ಪರಸ್ಪರ ಪ್ರಭಾವಶಾಲಿಗಳಾಗಿ ಮುಂದುವರಿಯುತ್ತಿವೆ. ಇಲ್ಲಿಯ ಜನಪದ ಸಂಪ್ರದಾಯವನ್ನು ಸ್ವಲ್ಪ ಆಳವಾಗಿ ಅಧ್ಯಯನಮಾಡುವುದರಿಂದ, ಆದಿಮಾನವನ ಕಾಲದ ಕಲೆಗಳ ಸ್ವರೂಪ ಸ್ಪಷ್ಟವಾಗುವುದಲ್ಲದೆ, ಅವುಗಳ ಪ್ರಭಾವ ಮಾರ್ಗಕಲೆಗಳ ಮೇಲೆ ಎಷ್ಟರಮಟ್ಟಿಗೆ ಆಗಿದೆ ಎನ್ನುವುದೂ ತಿಳಿಯುತ್ತದೆ.

ಉತ್ತರ ಭಾರತದ ಮಣಿಪುರಿನೃತ್ಯ ಜಗದ್ವಿಖ್ಯಾತವಾಗಿದೆ. ಕುಣಿತವಿಲ್ಲದೆ ಹಬ್ಬಹರಿದಿನಗಳಲ್ಲಿ ನಡೆಯುವಂತಿಲ್ಲ. ಬೆಳುದಿಂಗಳ ಇರುಳುಗಳಲ್ಲಂತು ಯುವಕಯುವತಿಯರು ಹಳ್ಳಿಯಿಂದ ಹಳ್ಳಿಗೆ ಹೋಗಿ ಕುಣಿತವನ್ನು ಪ್ರದರ್ಶಿಸುತ್ತಾರೆ. ಅವರ ಗುಂಪು ಮುಂದುವರಿದಂತೆಲ್ಲ ಬೆಳೆಯುತ್ತದೆ. ರಾಧಾಕೃಷ್ಣ ಪ್ರಣಯ ಕಥೆಯ ಹಿನ್ನೆಲೆಯಲ್ಲಿ ನೃತ್ಯ ಸಾಗುತ್ತದೆ. ಹಿನ್ನೆಲೆಯ ಗಾಯಕರು ಹಾಡುತ್ತಾರೆ. ಕಲಾವಿದರ ರಂಗುರಂಗಿನ ವಸ್ತ್ರಭೂಷಣಗಳು ಆಕರ್ಷಣೀಯವಾಗಿರುತ್ತವೆ.[1] ರಾಸಲೀಲ ಮತ್ತು ಲಾಯಿ ಹರೋಬ ಬಹು ಜನಪ್ರಿಯವಾದ ನೃತ್ಯಗಳು. ನಾಗಾಜನರ ನೃತ್ಯ ಯುದ್ಧವನ್ನು ನೆನಪಿಗೆ ತರುವಂಥವು. ಅಸ್ಸಾಮಿನ ಖಾಸಿ ಬೆಟ್ಟಗಳಲ್ಲಿ ನೋಂಗ್ ಕ್ರೆಮ್, ಸುಮರ್ ಕಣಿವೆಯಲ್ಲಿ ನಾವೆನೃತ್ಯ; ಅನೇಕ ಕಡೆಗಳಲ್ಲಿ ಬೇಟೆಗೆ ಸಂಬಂಧಿಸಿದ ನೃತ್ಯಗಳು ಅಲ್ಲಿಯ ಜನರ ಉತ್ಸಾಹ ಸಾಹಸಾತಿಶಯಗಳಿಗೆ ಸಾಕ್ಷಿಯಾಗಿವೆ. ಕುಕ್ರಿ ಅಥವಾ ಕತ್ತಿವರಸೆ ಅಪಾಯಕಾರಿಯಾದ ಕುಣಿತ. ಹೆಚ್ಚುಕಡಮೆ ನಮ್ಮಲ್ಲಿಯ ಕತ್ತಿವರಸೆಯನ್ನು ನೆನಪಿಗೆ ತರುತ್ತದೆ. ಕೋಲೊಂದಕ್ಕೆ ಹಲವಾರು ಚಾಕುಗಳನ್ನು ಕಟ್ಟಿ ತೂಗಾಡಿಸುತ್ತ ಸುತ್ತಲೂ ಗಿರಗಿರನೆ ವೇಗವಾಗಿ ತಿರುಗಿಸುತ್ತಾರೆ. ವನನದೀಭೂತಗಳನ್ನು ತೃಪ್ತಿಪಡಿಸುವುದೇ ಈ ಎಲ್ಲ ನೃತ್ಯಗಳ ಗುರಿಯಾಗಿದೆ. ಅಸ್ಸಾಮಿನ ಬಿಹು ಕುಣಿತ ನಾನಾ ಬಗೆಯಾದದ್ದು. ಒಂದು ಬಗೆಯ ಕುಣಿತದಲ್ಲಿ ಸಾಮಾನ್ಯವಾಗಿ ಸ್ತ್ರೀಯರು ಮಾತ್ರ ಪಾತ್ರ ವಹಿಸುತ್ತಾರೆ. ಅವಶ್ಯಬಿದ್ದಾಗ ಸ್ತ್ರೀಯರೇ ಗಂಡಸರ ವೇಷ ಹಾಕುತ್ತಾರೆ. ಮತ್ತೊಂದು ಬಗೆಯ ಕುಣಿತದಲ್ಲಿ ಒಬ್ಬೊಬ್ಬರು ಹೆಂಗಸರೂ ಅಷ್ಟೇ ಗಂಡಸರು ಭಾಗವಹಿಸುತ್ತಾರೆ. ಹೆಂಗಸರು ಗಂಡಸರು ಏಕಕಾಲದಲ್ಲಿ ಬೇರೆಬೇರೆ ಗುಂಪುಗಳಾಗಿ ಪಾಲ್ಗೊಳ್ಳುವ ಕುಣಿತಗಳೂ ಇವೆ. ಹೆಂಗಸರು ಗಂಡಸರು ಕೂಡಿ ಒಟ್ಟಾಗಿ ಕುಣಿಯುವ ಬೇರೆ ಬಗೆಯೂ ಉಂಟು. ಅವರಿ ಬೇರೆ ಬಗೆಯಲ್ಲಿಯೂ ಹೆಂಗಸರು ಮತ್ತು ಗಂಡಸರು ಪರಸ್ಪರ ಸ್ಪರ್ಧವಾಗುವಂತೆ ಎಚ್ಚರಿಕೆಯಿಂ

1 ವಿವರಣೆಗಳಿಗೆ ಕುಮಾರ ವೆಂಕಣ್ಣನವರ 'ಭಾರತದ ಜಾನಪದ ನೃತ್ಯಗಳು' ಎಂಬ ಗ್ರಂಥವನ್ನು ನೋಡಬಹುದು. ಪು. ೯೭.

ದಿರುತ್ತಾರೆ. ಬಿತ್ತನೆ ಮತ್ತು ಸುಗ್ಗಿ ಕಾಲದಲ್ಲಿ ಈ ಕುಣಿತ ಮೆರೆತಗಳು ಸಾಮಾನ್ಯ. ಇದೊಂದು ಫಲಶಕ್ತಿ ವಿಧಿಯೆಂದೇ ರೈತರು ಗಣಿಸುತ್ತಾರೆ. ಗಂಡಸರಲ್ಲಿ, ದನಗಳಲ್ಲಿ ಮತ್ತು ಬೆಳೆಗಳಲ್ಲಿ ಫಲಶಕ್ತಿಯನ್ನು ಅಧಿಕಗೊಳಿಸುವುದೇ ಇವುಗಳ ಗುರಿ. ಕುಣಿತದೊಡನೆ ಹಾಡುವ ಗೀತೆ ಸಹ ಸೃಷ್ಟಿ ಮತ ನಿಸರ್ಗಗಳನ್ನು ಕುರಿತುದಾಗಿದ್ದು, ಫಲಶಕ್ತಿಕಾರಕ ವಾಗಿರುತ್ತದೆ. ಚೀನಾದ ಕೆಲವು ನೃತ್ಯ ಮತ್ತು ಬಿಹುಕುಣಿತಗಳ ನಡುವೆ ಸಾಕಷ್ಟು ಸಾಮ್ಯಗಳಿವೆಯೆಂದು ಹೇಳಲಾಗಿದೆ.[1]

ಬಂಗಾಳದಲ್ಲಿ ಪ್ರಖ್ಯಾತವಾಗಿರುವ ನೃತ್ಯಗಳು ಮೈಮೆನ್‌ಸಿಂಗ್ ಪ್ರದೇಶದಲ್ಲಿ ರೂಢಿ ಯಲ್ಲಿವೆ. ಚೈತ್ರಸಂಕ್ರಾಂತಿಯಲ್ಲಿ ಕಲಾವಿದರು ಮುಖವಾಡ ಧರಿಸಿಕೊಂಡು ಬಯಲಿನಲ್ಲಿ ನಡಸುವ ಈ ನೃತ್ಯಗಳು ಧಾರ್ಮಿಕಸ್ವರೂಪದವು. ಜನಪ್ರಿಯವಾದ ನಾಲ್ಕೈದು ನೃತ್ಯ ಗಳಲ್ಲಿ ಶಿವಕಾಳಿಯರಿಗೆ ಸಂಬಂಧಿಸಿದುವು ಬಹುಮುಖ್ಯವಾದುವು. ಮಾವಿನ ಹಲಗೆಯಿಂದ ಮಾಡಿ ಬಣ್ಣ ಬಳಿದ ಮುಖವಾಡ ಧರಿಸಿಕೊಂಡು, ಬಲಗೈಯಲ್ಲಿ ತ್ರಿಶೂಲವನ್ನೂ ಎಡಗೈ ಯಲ್ಲಿ ಶಂಖವನ್ನೂ ಹಿಡಿದ ನಟ್ಟುವ ಹಿನ್ನೆಲೆಗಾಯಕರು ಭಕ್ತಿಗೀತೆಗಳನ್ನು ಹಾಡುವಾಗ, ಢಕ್ಕೆಯ ಬಡಿತ ಸಾಗುವಾಗ ಆವೇಶದಿಂದ ಕುಣಿಯುತ್ತಾನೆ. ಅನಂತರ ಮಹಾಕಾಳಿ ಖಡ್ಗ ಧಾರಿಯಾಗಿ ರಂಗಮಂದಿರವನ್ನು ಪ್ರವೇಶಿಸಿ, ಸುತ್ತಲೂ ನರ್ತಿಸಿ, ಅಲ್ಲಿಯೇ ಮಲಗಿರುವ ಮಹದೇವನ ಎದೆಯ ಮೇಲೆ ಒಂದು ಕಾಲಿಟ್ಟು, ಕೆಲವು ಕುಣಿತದ ಮಟ್ಟುಗಳನ್ನು ಪ್ರದರ್ಶಿ ಸುತ್ತಾಳೆ. ವಿನೋದಾತ್ಮಕವಾದ ಬುರಾ-ಬುರಿ (ಮುದುಕ–ಮುದುಕಿ), ರಾಧಾಕೃಷ್ಣ, ಹರ-ಪಾರ್ವತಿ, ಗಂಗಾ ಮೊದಲಾದ ನೃತ್ಯಗಳು ಜನಮನ್ನಣೆಗೆ ಪಾತ್ರವಾಗಿವೆ. ಒಬ್ಬರೋ ಹಲವರೋ ಹೆಂಗಸರು ನಡಸುವ ಖೇಮ್ಟಾ ಎಂಬ ಭಕ್ತಿಪ್ರಧಾನ ನೃತ್ಯವೂ ಪ್ರಸಿದ್ಧ ವಾಗಿದೆ. ಕೂಟದವರು ಊರಿಂದೂರಿಗೆ ಹೋಗಿ ನಡಸುವ ಜಾತ್ರಾ ಎಂಬ ನೃತ್ಯನಾಟಕ ಕನ್ನಡನಾಡಿನ ಬಯಲಾಟದಂತಿದೆ. ಆ ನಾಟಕಗಳ ವಸ್ತು ಕೃಷ್ಣಲೀಲಾ. ಹುಡುಗರು ಗೋಪಿಯರ ಪಾತ್ರ ವಹಿಸುತ್ತಾರೆ. ಅಭಿನಯ ಮತ್ತು ಸಂಗೀತಗಳೂ ಈ ನಾಟಕಗಳಲ್ಲಿ[2] ಸಮ ಪ್ರಾಧಾನ್ಯವನ್ನು ಪಡೆಯುತ್ತವೆ. ವಿಷ್ಣು ಪೂಜೆಗೆ ಸಂಬಂಧಿಸಿದ, ವರ್ತುಲಾಕಾರ ದಲ್ಲಿ ಸುತ್ತುವ ಕೀರ್ತನನೃತ್ಯ ಸರ್ವಾದರಣೀಯವಾಗಿದೆ. ಚರಕಗಂಭೀರ ಹಬ್ಬದಲ್ಲಿ ಧೂಪನೃತ್ಯ ಹಾಗೂ ಅವತಾರ ನೃತ್ಯಗಳು ನಡೆಯುತ್ತವೆ. ನಟ್ಟುವ ಒಂದು ಕೈಯಲ್ಲಿ ಕೆಂಡ ತುಂಬಿದ ಕುಂಡ ಹಿಡಿದುಕೊಂಡು, ಮತ್ತೊಂದು ಕೈಯಿಂದ ಧೂಪವನ್ನೆರಚುತ್ತ ಕುಣಿಯುತ್ತಾನೆ. ಇದರಲ್ಲಿ ಹಾಡುಗಳ ಮೇಳವಿಲ್ಲ. ಅವತಾರಗಳ ವರ್ಣನೆ ಅವತಾರ ನೃತ್ಯಗಳ ಉದ್ದೇಶ. ಜೆಸ್ಸೂರ್ ಜಿಲ್ಲೆಯ ರಾಜಘಾಟ್ ಹಳ್ಳಿಯಲ್ಲಿ ಹೆಂಗಸರು ವ್ರತನೃತ್ಯ

---

[1] ವಿವರಗಳಿಗೆ ಪಿ. ಗೋಸ್ವಾಮಿಯವರ *Bihu Songs of Assam* ಎನ್ನುವ ಗ್ರಂಥವನ್ನು ನೋಡಿ.

[2] ಈ ನಾಟಕಗಳು ಹದಿನಾರನೆಯ ಶತಮಾನದಿಂದಲೂ ರೂಢಿಯಲ್ಲಿವೆ. ನಾಟಕಕಾರರಲ್ಲಿ ಲೋಚನ್‌ದಾಸ್ (೧೫೨೩ ೧೫೮೯), ಜಮುನಂದನದಾಸ್ (೧೬೦೭), ಪ್ರೇಮದಾಸ್ (೧೭೧೩), ಈ ಹೆಸರುಗಳು ಪ್ರಮುಖವಾದುವು. ನಮ್ಮ ಭಾಗವತರಂತೆ ಅಲ್ಲಿ 'ಅಧಿಕಾರಿ' ಇರುತ್ತಾನೆ.

ನಟಿಸುತ್ತಾರೆ. ಶೀತಲಗುಡಿಯ ಪಕ್ಕದ ಆಲದಮರದ ಕೆಳಗೆ ಈ ನೃತ್ಯ ಏರ್ಪಾಡಾಗುತ್ತದೆ. ಈ ನೃತ್ಯದ ಪ್ರಭಾವದಿಂದ ಸಿಡುಬಿನ ಮಾರಿ ದೂರವಿರುತ್ತಾಳೆಂದು ಪ್ರತೀತಿಯಿದೆ. ಬಾವ್ರುಲ್ ಎಂಬ ಗೀತನೃತ್ಯ ಯಾವೊಂದು ಋತುವಿಗೂ ಸೀಮಿತವಾಗದೆ, ಎಂದಾದರೂ ಅಭಿನಯಿಸಬಹುದಾದ್ದು. ಅದು ನರ್ತಕರು ಸ್ವಂತ ತೃಪ್ತಿಗಾಗಿ ನಡಸುವಂಥದು. ಅವರು ಊರಿಂದೂರಿಗೆ ಹೋಗಿ, ಶ್ರೀಮಂತರ ಮನೆ ಮುಂದೆ ಪ್ರದರ್ಶನಗಳನ್ನೇರ್ಪಡಿಸಿ, ಜೀವನಯಾಪನೆ ಮಾಡಿಕೊಳ್ಳುವುದೂ ಉಂಟು. ಹಿಂದುಳಿದ ಜನರಲ್ಲಿ ಬಳಕೆಯಲ್ಲಿರುವ ರೈಬೇಷೆ ಎಂಬ ನೃತ್ಯವನ್ನು ವೀರಗುಣಿತವೆಂದು ಕರೆಯಬಹುದು; ಅದು ಸಮರ ನೃತ್ಯದಂತಿದೆ. ಜೆಸ್ಸೂರು ಮತ್ತು ಖುಲ್ನ ಪ್ರದೇಶದ ಢಾಲಿ ಎಂಬ ಖಡ್ಗನೃತ್ಯವೂ ಅಂಥದೇ. ಮುಹಮ್ಮದೀಯರಲ್ಲಿ ರೂಢಿಯಲ್ಲಿರುವ ಮೊಹರಂ ಮತ್ತು ಕರ್ಬಲಾನೃತ್ಯಗಳೂ ಉಲ್ಲೇಖನೀಯವಾಗಿವೆ.

ಉತ್ತರಪ್ರದೇಶದಲ್ಲಿ ಸಾರ್ವತ್ರಿಕವಾಗಿ ಪ್ರಿಯತೆಯನ್ನು ಸಂಪಾದಿಸಿರುವ ರಾಸಲೀಲೆ ಕಥಕ್ ಶೈಲಿಯನ್ನನುಸರಿಸುತ್ತದೆ. ಪಿಚಕಾರಿಯನ್ನು ಹಿಡಿದುಕೊಂಡು ಆಡುವ ಹೋಲಿ ನೃತ್ಯದಲ್ಲಿ ಹೆಂಗಸರಿಗೇ ಪ್ರಮುಖಸ್ಥಾನ. ವರ್ಷಕಾಲದ ಪ್ರಾರಂಭದಲ್ಲಿ, ನಾನಾಸ್ತ್ರ
ಗಳಿಗೆ ಹಬ್ಬವನ್ನುಂಟುಮಾಡುವ ಮಳೆ ಸುರಿದು, ಬಿಸಿಲು ಜಾರಿ, ಹೊಸಬಾಳು ತಲೆ
ದೋರುವಾಗ ಜೂಲಾ ಗೀತಗಳೊಂದಿಗೆ ಕಜ್ರಿನೃತ್ಯ ಪ್ರಾರಂಭವಾಗುತ್ತದೆ. ಇಲ್ಲಿ ಪಾತ್ರ
ವಹಿಸುವವರು ದೇವದಾಸಿಯರು. ಗತಿವೈವಿಧ್ಯವಿಲ್ಲದಿದ್ದರೂ ಅವರ ನಿಲುವಿನ ಭಂಗಿ
ಮತ್ತು ಚಲನೆಗಳ ಸೌಕುಮಾರ್ಯವನ್ನು ದೇಶವಿದೇಶೀಯ ಕಲಾಭಿಜ್ಞರು ಪ್ರಶಂಸಿಸಿದ್ದಾರೆ.
ಗೊಲ್ಲರು ಚಮ್ಮಾರರೇ ಮೊದಲಾದ ಸಾಮಾನ್ಯ ಜನವರ್ಗದಲ್ಲಿಯೂ ಅನೇಕ ವಿಧದ
ಕುಣಿತಗಳಿವೆ. ಊರ ಹೊರಗೆ ವಾಸಿಸುವ ಬಂಜಾರರು ರಾತ್ರಿ ವೇಳೆಯಲ್ಲಿ ಬೆಂಕಿ ಹಾಕಿ
ಕೊಂಡು ಕುಣಿಯುತ್ತಾರೆ. ಬಂಜಾರ ಎಂದೇ ಆ ಕುಣಿತದ ಹೆಸರು. ಹರಕೆ ಹೊತ್ತು
ದೇವಾಲಯಗಳ ಸುತ್ತ ಕುಣಿಯುವ ಹೆಂಗಸರಂತು ಲೆಕ್ಕವಿಲ್ಲ. ಉತ್ತರ ಭಾರತದ
ವೈಶಿಷ್ಟ್ಯವೆಂದರೆ ರಾಮಲೀಲಾ: ವಿಜಯದಶಮಿಯ ಸಮಯದಂದು ಹತ್ತು-ಇಪ್ಪತ್ತು
ದಿನಗಳ ತನಕ ನಡೆಯುವ ಆಟ. ನಮ್ಮಲ್ಲಿಯ ಭಾಗವತ ಅಲ್ಲಿ ಪಂಡಿತನಾಗುತ್ತಾನೆ.
ನಾಟಕದಲ್ಲಿ ಸ್ತ್ರೀಯರು ಪಾತ್ರವಹಿಸುವಂತಿಲ್ಲ. ಕಥೆ ರಂಗಸ್ಥಲದಲ್ಲಿಯೇ ಮುಗಿಯದೆ,
ಕೆಲವು ದೃಶ್ಯಗಳು ನಗರದ ಬೀದಿಗಳಲ್ಲಿಯೂ ಜರುಗುವುದುಂಟು.

ಸ್ಥಿರನಿಯಮಗಳಿಲ್ಲದಿರುವುದು ಪಂಜಾಬಿ ನೃತ್ಯಗಳ ಹಿರಿಯ ಲಕ್ಷಣ. ಭಾವಾಭಿವ್ಯಕ್ತಿಯೇ
ಅವರ ಕುಣಿತದ ಮುಖ್ಯೋದ್ದೇಶವಾದ್ದರಿಂದ, ಆ ಕಾಲಕ್ಕೆ ಯಾವ ಬಳುಕು, ಯಾವ
ಗತ್ತು, ಯಾವ ನಿಲವು ಉಚಿತವಾಗಿ ತೋರುತ್ತದೆಯೋ ಅದು ಅಪ್ರಜ್ಞಾಪೂರ್ವಕವಾಗಿ
ಮೆರೆಯುತ್ತದೆ. ಇಂಥ ಭಾವಪ್ರಕಾಶನಕ್ಕೆ ಇಂಥ ಮಟ್ಟು ಆವಶ್ಯಕವೆನ್ನುವ ಬಿಗಿಯಿಲ್ಲ.
ಗತ್ತು ಭಾವಾಭಿವ್ಯಕ್ತಿಯ ಒಂದು ಮಾಧ್ಯಮವೆಂಬ, ಭಾವಾವೇಶವೇ ಗತ್ತಾಗಿ ಹೊರ
ಹೊಮ್ಮುತ್ತದೆಂಬ ತಿಳಿವಳಿಕೆ ಆ ಜನರದು. ವೀರ ಪೌರುಷ ಉತ್ಸಾಹಗಳು ಎಲ್ಲ
ಪಂಜಾಬಿನೃತ್ಯಗಳನ್ನು ಸ್ಫುರಿಸುವ ಸಂಗತಿಗಳು. ವೇಷಭೂಷಣಗಳು ತುಂಬ ಸರಳ.

ಡೋಲು ವಿನಾ ಬೇರೆ ವಾದ್ಯೋಪಕರಣಗಳನ್ನು ಸಾಮಾನ್ಯವಾಗಿ ಬಳಸುವುದಿಲ್ಲ. ಭಂಗ್ರಾ ಗಂಡಸರ ಕುಣಿತವಾದರೆ ಗಿದ್ಧ ಹೆಂಗಸರ ನೃತ್ಯ. ಜ್ಹುಮಾರ್ ಮತ್ತು ಸಮ್ಮಿ ನೃತ್ಯಗಳಲ್ಲಿ ಹೆಂಗಸರು ಗಂಡಸರು ಕೂಡಿ ಭಾಗವಹಿಸುತ್ತಾರೆ. ಪೌರುಷಪ್ರಧಾನವಾದ ಭಂಗ್ರಾದಲ್ಲಿ ಭಾಗವಹಿಸಬೇಕಾದರೆ ಭಾಗಿಗಳಲ್ಲಿ ಗೋರಂದವಿರಬೇಕು. ಸುಗ್ಗಿ ಮುಗಿದು, ಮನೆಯ ಕಣಜಗಳು ತುಂಬಿದಾಗ ವೈಶಾಖಮಾಸದಲ್ಲಿ ನಡೆಯುವ ಭಂಗ್ರಕುಣಿತ ಜನರ ಮೈಮನಗಳಲ್ಲಿ ಪುಳಕವುಂಟುಮಾಡುತ್ತದೆ; ತರುಣ ತರುಣಿಯರಲ್ಲಿ ಉತ್ಸಾಹವನ್ನೂ ಹೊಸ ಆಶೆಗಳನ್ನೂ ಕೆರಳಿಸುತ್ತವೆ. ಸಮತನವನ್ನು ಕಾಪಾಡುವ ಸಲುವಾಗಿ ದಬರೆ ತೋಳಿನ ಅಂಗಿಯನ್ನೂ, ಕಣಕಾಲಿನವರೆಗೆ ಲುಂಗಿಯನ್ನೂ, ಯಾವುದಾದರೊಂದು ಬಣ್ಣದ ಮುಂಡ ಕೋಟನ್ನೂ, ತಲೆಗೊಂದು ಪೇಟವನ್ನೂ ನಟ್ಟುವರು ಧರಿಸುತ್ತಾರೆ. ಡೊಳ್ಳನ್ನು ಬಳಸುವುದುಂಟು. ಡೊಳ್ಳುಗಾರನ ಸುತ್ತ ನಟ್ಟುವರು ನಿಲ್ಲುತ್ತಾರೆ. ನಿದಾನವಾಗಿ ಪ್ರಾರಂಭವಾದ ಪಾವಚಲನೆ, ಡೊಳ್ಳು ಬಡಿತದ ಏರಿನೊಡನೆ, ಮೈಬಳುಕಿನೊಡನೆ ಶಿಖರಸ್ಥಾನ ಮುಟ್ಟುತ್ತದೆ. ಡೊಳ್ಳು ನಿಂತಾಗ, ನಟುವರಲ್ಲೊಬ್ಬ ಮುಂದೆ ಬಂದು, ಒಂದು ಕೈಯನ್ನು ಕಿವಿಯ ಮೇಲಿರಿಸಿಕೊಂಡು, 'ಬೋಲಿ' ಹಾಡುತ್ತಾನೆ. ಹಾಡು ಮುಗಿದನಂತರ ಕುಣಿತ ಶುರುವಾಗುತ್ತದೆ. ಭಂಗ್ರನನ್ನೆ ಹೋಲುವ, ಮಾರ್ದವತೆ, ಸೌಕುಮಾರ್ಯ ಮತ್ತು ಹೊಂದಾವಣಿಕೆಗವಕಾಶವಿರುವ, ಹೆಂಗಸರ ಕುಣಿತವಾದ ಗಿದ್ಧ ಮದುವೆ ಮೊದಲಾದ ಸಾಮಾಜಿಕ ಸಮಾರಂಭಗಳಲ್ಲಿ ಬಳಕೆಗೊಳ್ಳುತ್ತದೆ. ಅಣಕವೂ ಈ ಕುಣಿತದ ಸಾಮಗ್ರಿಯಾಗುತ್ತದೆ. ಕಿಕ್ಲಿ ಎನ್ನುವುದೊಂದು ಹೆಣ್ಣುಮಕ್ಕಳ ಆಟ. ಎದುರುಬದುರಿಗೆ ನಿಂತ ಹುಡುಗಿಯರು ಒಬ್ಬೊಬ್ಬರ ಕೈಹಿಡಿದುಕೊಂಡು, ತುದಿಗಾಲಮೇಲೆ ನಿಂತುಕೊಂಡು, ಸುತ್ತುತ್ತಾರೆ. ಹಾಡು ಕುಣಿತದೊಡನೆ ಮೇಳವಿಸುತ್ತದೆ. ಪಂಚನದಿಗಳ ಉಗಮಸ್ಥಾನವಾದ ಕುಲು ಕಣಿವೆಯಲ್ಲಿ ಬೇಸಗೆ ಕಾಲ ಬಂತೆಂದರೆ ಎಲ್ಲೆಲ್ಲೂ ಸಂತೆ ಜಾತ್ರೆಗಳ ಸಡಗರ. ಅಲ್ಲಿಯ ಮುಖ್ಯ ದೇವರಾದ ರಘುನಾಥನ ಮತ್ತು ಇತರ ದೇವತೆಗಳ ಜಾತ್ರೆಗಳು ಪ್ರತಿಯೊಂದು ಹಳ್ಳಿಯಲ್ಲಿಯೂ ನಡೆಯುತ್ತವೆ. ಪಲ್ಲಕ್ಕಿಗಳಲ್ಲಿ ದೇವರುಗಳನ್ನು ಹೊತ್ತು ಪೂಜಾರಿಗಳು ನರ್ತಿಸುವಾಗ, ಭಕ್ತವೃಂದ ಸಹ ಪರವಶವಾಗಿ ಕುಣಿಯುತ್ತದೆ. ಬೆಳೆ ಹುಲುಸಲೆಂಬುದೂ ಈ ಕುಣಿತದ ಗುರಿ.

ಗಾರ್ಭಾ ಗುಜರಾತಿನ ರಾಷ್ಟ್ರೀಯ ನೃತ್ಯವೆಂದು ಕರೆಯಲಾಗಿದೆ. ಗಾರ್ಭಾ ಎನ್ನುವುದು ಹಿನ್ನೆಲೆಯ ಸಂಗೀತಕ್ಕೆ ಹೆಸರು. ಅದು ಕುಣಿತಕ್ಕೂ ಅನ್ವಯಗೊಂಡಿದೆ. ಕೃಷ್ಣ ಭಕ್ತಿ ಕುಣಿತದ ಹಿಂದಿರುವ ಸ್ಫೂರ್ತಿ. ಅಲಂಕಾರಯುಕ್ತವಾದ ಗಡಿಗೆಯನ್ನು ತರುಣಿಯರು ತಲೆಯಮೇಲೆ ಹೊತ್ತು ಕುಣಿಯುತ್ತಾರೆ. ಗಡಿಗೆಗೆ ಗರ್ಬಿ ಎಂದು ಗುಜರಾಥಿಯಲ್ಲಿ ಹೆಸರು. ಅದರೊಳಗೆ ದೀಪವಿರುತ್ತದೆ. ನಾಯಕಿ ಮೊದಲ ಚರಣ ಹಾಡುತ್ತಾಳೆ: ಇತರರು ಅದನ್ನೇ ಸಾಮೂಹಿಕವಾಗಿ ಹಾಡುತ್ತಾ, ಕುಣಿಯುತ್ತಾರೆ. ಮಕ್ಕಳಿಲ್ಲದವರು 'ಗಾರ್ಭಾ ನೃತ್ಯ' ಏರ್ಪಡಿಸುವುದಾಗಿ ಹರಕೆ ಕಟ್ಟಿಕೊಳ್ಳುತ್ತಾರೆ. ಘಾಂದರ್ ರಾಜಸ್ಥಾನದಲ್ಲಿ ದಿವಾಳಿ ಹಬ್ಬದಲ್ಲಿ ನಡೆಸುವ ಕುಣಿತ. ಗಂಡಸರು ಎದುರುಬದುರಾಗಿ ನಿಂತು, ಹಿಂದಕ್ಕೂ

ಮುಂದಕ್ಕೂ ಅಕ್ಕಪಕ್ಕಗಳಿಗೂ ಕಾಲಾಡಿಸುತ್ತ, ಕಾಲ ಸೂಚನೆಗಾಗಿ ಕೋಲುಹಾಕುತ್ತ, ಪ್ರಣಯಗೀತೆಗಳನ್ನು ಹಾಡುತ್ತಾರೆ.

ಒರಿಸ್ಸಾದ ಪ್ರಸಿದ್ಧ ನೃತ್ಯ 'ಚೌ'; ಸೆರೈಕಲಾ ಎಂಬ ಪ್ರಾಂತ್ಯದಲ್ಲಿ ವಸಂತೋತ್ಸವ ಸಮಯದಲ್ಲಿ ನಡೆಯುವ ನೃತ್ಯ; ಶೈವಸಂಪ್ರದಾಯಕ್ಕೆ ಸೇರಿದ್ದು. ಇದರಲ್ಲಿ ಸ್ತ್ರೀಯರು ಪಾಲ್ಗೊಳ್ಳುವುದಿಲ್ಲ. ಸ್ತ್ರೀಪಾತ್ರದ ಹೊಣೆಯನ್ನು ಗಂಡಸರೇ ಹೊರುತ್ತಾರೆ. ಹರಿಜನ ರಿಂದ ಮೊದಲ್ಗೊಂಡು ಹಾರುವರ ವರೆಗಿನ ಎಲ್ಲ ಜಾತಿಯ ಹದಿಮೂರು ಪ್ರತಿನಿಧಿಗಳು ಈ ಪೂಜೆಯನ್ನು ನೆರವೇರಿಸುತ್ತಾರೆ. ಆ ಪೂಜೆಯ ಕಾಲದಲ್ಲಿ ರಾತ್ರಿವೇಳೆ ನೃತ್ಯ ನಡೆಯು ತ್ತದೆ. ಚೌ ಎಂದರೆ ಮುಖವಾಡ. ಕಥೆಯಲ್ಲಿ ಬರುವ ಪೌರಾಣಿಕ ವ್ಯಕ್ತಿಗಳಿಗೆ ತಕ್ಕಂತೆ ಪಾತ್ರಧಾರಿಗಳು ಮುಖವಾಡ ಧರಿಸುತ್ತಾರೆ. ಹಿಮ್ಮೇಳದವರು ಹಾಡುವಾಗ ಪಾತ್ರಧಾರಿ ಗಳ ಅಭಿನಯ ನೃತ್ಯಗಳು ಸಾಗುತ್ತವೆ.[1] ತಾಂಡವ, ಮಯೂರ, ಧೀಬರ (ಮೀನುಗಾರರ ನೃತ್ಯ), ಕುರಂಗ, ಶಬರ ಮೊದಲಾದ ನೃತ್ಯಗಳು ವೈಯಕ್ತಿಕವಾದುವು. ದೇವರನ್ನರ್ಚಿ ಸುವ ಆರತಿ ನೃತ್ಯ, ಮಹಿಷಾಸುರವಧೆಯ ಸನ್ನಿವೇಶವನ್ನು ಕುರಿತ 'ದುರ್ಗಾ' ನೃತ್ಯ ಗಳು ಹೆಂಗಸರಿಗೆ ಮಾತ್ರ ಮೀಸಲಾದುವು. ಇಬ್ಬರೇ ನರ್ತಿಸುವ ಅಸ್ತ್ರದ್ವಂದ್ವ, ಚಂದ್ರ ಭಾಗಾ, ವಾಸುಕಿ ಗರುಡ, ರಾಧಾಕೃಷ್ಣ ಎಂಬ ನೃತ್ಯಗಳು ಇವೆ: ಮದುವೆಗೆ ಸಂಬಂಧಿ ಸಿದ ಆಚಾರಗಳನ್ನೊಳಗೊಂಡ 'ವಿವಾಹನೃತ್ಯ', ಸತ್ತವರ ಎಲುಬುಗಳನ್ನು ಹೂಳುವಾಗ ನಡಸುವ ಹಾರ್‌ಬೋರಿ ನೃತ್ಯಗಳು ಇವೆ. ಸುಗ್ಗಿ ಹಾಗೂ ಬೇಟೆ ಕುಣಿತಗಳಿಗೆ ಲೆಕ್ಕವೇ ಇಲ್ಲ. ಕೃಷಿ ವ್ಯಾಪಾರಗಳಿಗೆ ಸಂಬಂಧಪಟ್ಟ 'ಕರಮ್' ನೃತ್ಯಗಳೂ ಚಾಲ್ತಿಯಲ್ಲಿವೆ. ಸಂತಾಲರು, ಒರೆಯಾನ್‌ರು, ಖೋಂಡರು, ಬೊಂಡೋ ಪೋರಜರು, ಇನ್ನೂ ಹಲವಾರು ಕಾಡುಜನರ ಸಮಾಜಗಳು ನಾನಾ ಬಗೆಯ ಕುಣಿತಗಳನ್ನುಳಿಸಿಕೊಂಡು ಬಂದಿದ್ದಾರೆ.

ಮಧ್ಯಪ್ರದೇಶದ ದಕ್ಷಿಣ ಬಸ್ತಾರಿನ ಸಿಂಗ್‌ಪುರಿಯೆಂಬ ಬುಡಕಟ್ಟಿನಲ್ಲಿ ಗೌರ್ ಎಂಬ ನೃತ್ಯ ಪ್ರಸಿದ್ಧವಾಗಿದೆ. ಈ ಮರಿಯರು ಪೂರ್ವದಲ್ಲಿ ದ್ರಾವಿಡ ಜನಾಂಗಕ್ಕೆ ಸೇರಿದವರು. ಗೌರ್ ಎಂದರೆ ಕಾಡೆಮ್ಮೆ. ಈ ಕುಣಿತ ಬೇಟೆಯ ಉತ್ಸಾಹವನ್ನು ಸಂಕೇತಿಸುತ್ತದೆ. ಕೊಂಬುಕೂಗು ಬೆಟ್ಟಕಣಿವೆಗಳಲ್ಲಿ ಅನುರಣಿತಗೊಳ್ಳುತ್ತಿದ್ದಂತೆ ತಲೆ ಯುಡಿಗೆ ಧರಿಸಿ, ನವಿಲುಗರಿ ಸುತ್ತಿಕೊಂಡ ಗಂಡಸರು ಕೊಳಲು ಮದ್ದಲೆಗಳೊಡನೆ ರಂಗ ಸ್ಥಳದಲ್ಲಿ ಬಂದು ಕೂಡುತ್ತಾರೆ. ಹೆಚ್ಚಿಯ ಮೈಗೆ ಮಣಿಹಾರವನ್ನು, ತಲೆಗೆ ಹಿತ್ತಾಳೆಯ ಕೊದಲುಕಟ್ಟನ್ನು ಧರಿಸಿದ ಹೆಂಗಸರು ಕೋಲು ಕುಟ್ಟುತ್ತ ಬಂದು ಒಟ್ಟುಗೂಡುತ್ತಾರೆ. ಗಂಡಸರೊಡನೆ, ಬೇರೆ ಗುಂಪಾಗಿ, ಅವರೂ ಕುಣಿಯುತ್ತಾರೆ. ಅವರ ಹಾಡಿಗೆ ಕಲಿಡಗ ತಾಳಹಾಕುತ್ತವೆ. ಮದ್ದಲೆಯ ಏಟಿನೊಡನೆ ಗಂಡಸರ ಶಿರಸ್ತ್ರಾಭರಣವೂ ನವಿಲುಗರ ಗಳೂ ಕುಣಿಯುತ್ತವೆ. ಹುಲ್ಲಿ, ಕರ್ಮಾಣ ಮತ್ತು ಮಂದ್ರಿ ಅವರಲ್ಲಿ ಚಾಲ್ತಿಯಲ್ಲಿರುವ

---

1 ವಿವರಗಳಿಗೆ **Projesh Banerji** ಅವರ *Folk Dance of India* ಎಂಬ ಗ್ರಂಥವನ್ನು ನೋಡಿ.

ಇತರ ನೃತ್ಯಗಳು.[1] ದ್ರಾವಿಡ ಜನಾಂಗಕ್ಕೆ ಸೇರಿದವರಾದ ಗೋಂಡಿಗಳಲ್ಲಿ 'ಕರ್ಮ' ನೃತ್ಯ ಮನ್ನಣೆ ಪಡೆದಿದೆ. ಫಲಶಕ್ತಿ ಉಪಾಸನೆಯೇ ಇದರ ಗುರಿ. ಇದರಲ್ಲಿ ಢುಮ್ಕಿ, ಪಾಯ್ರಿ, ಝುಮ್ಕಿ ಮೊದಲಾದ ಉಪಕರಣಗಳ ಬಳಕೆಯುಂಟು. ದಿವಾಳಿಯಲ್ಲಿ ನಡೆಯುವ ಹೆಂಗಸರ ಕುಣಿತಕ್ಕೆ ರೀನಾ ಎಂದು ಹೆಸರು. ಸುಮಾರು ಅದೇ ಸಮಯದಲ್ಲಿ ಛತ್ತೀಸ್ ಘರ್ ವಿಭಾಗದಲ್ಲಿ ಹೆಂಗಸರೇ ಅಭಿನಯಿಸುವ ನೃತ್ಯಕ್ಕೆ ಸೂಆ ಅಥವಾ ಸುಗ್ಗ ಎಂದು ಹೆಸರು. ಸೂಆ ಎಂದರೆ ಗಿಣಿ. ಅವರ ಕುಣಿತ ಗಿಣಿಯ ನಡಗೆಯನ್ನು ಹೋಲುತ್ತದಂತೆ. ಸೈಲ ಅಥವಾ ದಂಡವೆಂದು ಪ್ರಸಿದ್ಧವಾಗಿರುವ ಕುಣಿತ ಸುಗ್ಗಿಯನಂತರ ತರುಣರು ನಡಸುವಂಥನು. ಕುಣಿತಗಾರರು ಒಂದೇ ಕಾಲಿನಮೇಲೆ ನಿಂತುಕೊಂಡು, ಊರೆಗಾಗಿ ಮುಂದಿನವನ ಭುಜ ಹಿಡಿಮಕೊಂಡು ಗೋಲಾಕಾರವಾಗಿ ನೆರೆಯುತ್ತಾರೆ. ಅನಂತರ ಅವರು ಸುತ್ತಲೂ ಕುಪ್ಪಳಿಸುತ್ತಾರೆ. ಒಮ್ಮೊಮ್ಮೆ ಅವರು ಮುಂದಿನವರ ಬೆನ್ನಿನ ಮೇಲೆ ನೆಗೆಯುತ್ತ ಜೋಡಿಯಾಗಿಯೋ ಬಿಡಿಯಾಗಿಯೋ ಕುಣಿಯುತ್ತಾರೆ. ವಿಂಧ್ಯಪ್ರದೇಶದ ಪುರುಷ ಭಿಲ್ಲರಲ್ಲಿ ಭಗೋರಿಯಾ, ಗವಾರ್, ಗೇರ್ ಕುಣಿತಗಳೂ, ಸ್ತ್ರೀಭಿಲ್ಲರಲ್ಲಿ ಲೂರ್ ಮತ್ತು ಪಾಳಿ ನೃತ್ಯಗಳೂ ರೂಢಿಯಲ್ಲಿವೆ. ಪ್ರಕೃತಿ ಶಾಮಲೆಯಾಗಿ ರಾರಾಜಿಸುವ ಸಮಯದಲ್ಲಿ ಬಂಜಾರರು ಲೆಹಂಗಿ ಎಂಬ ನೃತ್ಯದಲ್ಲಿ ತೊಡಗುತ್ತಾರೆ. ದಸರಾ ಸಮಯದಲ್ಲಿ ಝುಗಝುಗಿಸುವ ಮತ್ತು ಕಣ್ಕೋರೈಸುವ ವಸ್ತ್ರಾಭರಣಗಳನ್ನುಟ್ಟು ತೊಟ್ಟ ಬಂಜಾರ ಹೆಂಗಸರು ಲೋಟ ಕುಣಿತದಲ್ಲಿ ತಲ್ಲೀನರಾಗುತ್ತಾರೆ. ವಿವಾಹ ಸಮಯದಲ್ಲಿ ಮಾಳವದ ಹೆಂಗಸರು, ಒಬ್ಬರೋ ಇಬ್ಬರೋ ತಲೆಯ ಮೇಲೆ ಕರಗ ಹೊತ್ತುಕೊಂಡು ಅಭಿನಯಿಸುತ್ತಾರೆ. ಇದಕ್ಕೆ ಮಟ್ಕಿ ಎಂದು ಹೆಸರು. ಗ್ರಾಮೀಣ ಕನ್ಯೆಯರು ಮಾತ್ರವೇ ಅಭಿನಯಿಸುವಂಥದು ಫೂಲ್‌ಪತಿ ನೃತ್ಯ. ಮಾಂಚ್ ಎಂಬುದು ಗಂಡಸರು ಭಾಗವಹಿಸುವ ಅಲ್ಲಿಯ ಬಯಲಾಟ. ಬುಂದೇಲ್‌ಖಂಡ ವಿಭಾಗದಲ್ಲಿ ರಾಯ್ ಮತ್ತು ಫಾಗ್ ಕುಣಿತಗಳು ಕಾಣುತ್ತವೆ. ಮೊದಲನೆಯದು ದೇವದಾಸಿಯರು ಭಾಗವಹಿಸುವಂಥದು. ಗಂಡಿನವರ ಮುಂದೆ ಹೆಣ್ಣಿನ ಕಡೆಯ ಹೆಂಗಸರು ಬೀಳ್ಕೊಡಿಗೆಯ ಕುರುಹಾಗಿ ನಡಸುವಂಥದು ಬಧಾಯ್ (ವಿದಾಯ) ನೃತ್ಯ. ಬೈಗಾ ಜನರ ಬಿಲ್ಮ, ಕೊರ್ಕು ಜನರ ಚಟ್ಕೋರ, ಗೋಂಡಿಗಳ ಗೆಂಡಿ, ಗೋಡೋ, ಗೊಂಬೋ, ಮುರಿಯಾ ಹುಡುಗ ಹುಡುಗಿಯರ ಛೇರ್ತ, ಛತ್ತೀಸ್‌ಗರ್ ಗೊಲ್ಲರ ಮಾದಾಯ್, ಭೂಪಾಲ್ ರೈತರ ಬಿನಕಿ, ಬುಂದೇಲ್ ಖಂಡದ ಕಹಾರ್ ಕೋಲ್‌ಕೊತ್ವಾರ್ ಜನರ ದಾದರ್—ಇವು ಮಧ್ಯಪ್ರದೇಶದ ಇತರ ಕುಣಿತಗಳು. ಎಲ್ಲೆಲ್ಲಿ ಆದಿವಾಸಿ ಜನಾಂಗಗಳು ಅಪಾರ ಸಂಖ್ಯೆಯಲ್ಲಿದ್ದಾರೆಯೋ ಅಲ್ಲೆಲ್ಲ ನೃತ್ಯಭೇದಗಳೂ ಅಧಿಕವಾಗಿರುತ್ತವೆನ್ನುವುದಕ್ಕೆ ಈ ಪ್ರದೇಶವೇ ಸಾಕ್ಷಿ.

ದಕ್ಷಿಣ ಭಾರತೀಯರು ಸಂಪ್ರದಾಯಸ್ಥರಾದ್ದರಿಂದ ಅವರ ಅನೇಕ ಪ್ರಾಚೀನ ಪದ್ಧತಿಗಳು ಆಧುನಿಕತೆಯ ಸೋಂಕಿನಿಂದ ದೂರವಾಗಿವೆ ಎಂದು ಕೆಲವರು ಹೇಳುವುದುಂಟು.[2]

[1] ವಿವರಗಳಿಗೆ ಶ್ಯಾಮ್ ಪರಮಾರ್ ಅವರ *Folklore of Madhya Pradesh* ಎಂಬ ಗ್ರಂಥವನ್ನು ನೋಡಿ, ಪು. ೧೩೩. [2] ಅದೇ, ಪು. ೧೮.

ಆಧುನಿಕತೆಯ ಸೋಂಕಿನಿಂದ ದೂರವಾಗಿದೆ ಎನ್ನುವಾಗ ಆ ಜನ ಬೆಳೆಯಲಿಲ್ಲ. ಆಧುನಿಕತೆಯ ಪ್ರಭಾವಕ್ಕೊಳಗಾಗಿಲ್ಲ ಎಂದು ಅರ್ಥವಲ್ಲ. ನೃತ್ಯ ಅಥವಾ ನಾಟಕ ಕ್ಷೇತ್ರಗಳನ್ನು ಸಮೀಕ್ಷಿಸುವಾಗ, ಪ್ರಾಚೀನ ಮತ್ತು ನವೀನ ಸಂಪ್ರದಾಯಗಳೆರಡೂ ಸಮಾನಾಂತರವಾಗಿ ಮುಂದುವರಿಯುತ್ತಿವೆ ಎಂದು ತಿಳಿದುಬರುತ್ತದೆ. ದಕ್ಷಿಣ ಪ್ರದೇಶ ಪ್ರಾಚೀನಕಾಲದಿಂದಲೂ ವಿವಿಧ ಶೈಲಿಯ ನೃತ್ಯಗಳ ತವರಾಗಿದೆ. ಅವುಗಳ ಪ್ರಮುಖವಾಗಿ ಉತ್ತರದೆಗೆ ಭರತನಾಟ್ಯ ಕಲಿಸಿದ್ದು ದಕ್ಷಿಣವಲ್ಲಿ. ಚಾಲುಕ್ಯರ ಕಾಲದಲ್ಲಿ ನೃತ್ಯ ಬಹು ಜನಪ್ರಿಯವಾಗಿತ್ತೆಂಬುದಕ್ಕೆ ಶಾಸನಾಧಾರವಿದೆ.[1] ತಾವು ಕಟ್ಟಿಸಿದ ದೇವಾಲಯಗಳಲ್ಲೆಲ್ಲ ಮಹಾಮಂಡಪ ಅಥವಾ ನೃತ್ಯವೇದಿಕೆ ಇದ್ದುದು ದೊರೆಗಳ [illegible] ನೃತ್ಯಾಭಿಮಾನಕ್ಕೆ ಸಾಕ್ಷಿಯಾಗಿದೆ. ವಿಷ್ಣುವರ್ಧನನ ಪತ್ನಿ ಶಾಂತಲೆ ನಾಟ್ಯಸರಸ್ವತಿ ಎಂಬ ಬಿರುದಿಗೆ ಪಾತ್ರಳಾಗಿದ್ದದ್ದು ಲೋಕವಿಖ್ಯಾತವಾದ ವಿಷಯ. ಭಾರತದ ನೃತ್ಯ ಕ್ಷೇತ್ರದಲ್ಲಿ ದೇವದಾಸಿಯರ ಪಾತ್ರ ಮಹತ್ವಪೂರ್ಣವಾದದ್ದು. ಬಹಳ ಹಿಂದಿನ ಕಾಲದಿಂದಲೂ ಅವರು ದೇವಾಲಯಗಳ ಸೇವೆಯಲ್ಲಿ ನಿರತರಾಗಿದ್ದರು ಎಂದು ಗೊತ್ತಾಗಿದೆ. ದೇವದಾಸಿ ಪದ್ಧತಿ ಭಾರತಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಗ್ರೀಸ್ ಮತ್ತು ಈಜಿಪ್ಟ್ ದೇಶಗಳಲ್ಲಿಯೂ ಇಂಥ ಪದ್ಧತಿಯಿದ್ದಿತ್ತೆಂದು ತಿಳಿದುಬಂದಿದೆ.[2]

ಆಂಧ್ರಪ್ರದೇಶದ ಕೂಚಿಪುಡಿ ನಾಟ್ಯವೂ ನೃತ್ಯದಿಂದ ಗಮನಾರ್ಹವಾಗಿದೆ. ಅದು ಮೂಲತಃ ಭಾಗವತವನ್ನು [illegible] ಭರತನಾಟ್ಯದ ಸಂಪ್ರದಾಯದಿಂದ [illegible]. ಹಳ್ಳಿಹಳ್ಳಿಗೂ ಹೋಗಿ ಪುರಾಣದ ಕಥೆಗಳನ್ನು ನೃತ್ಯನಾಟಕಗಳ ಮೂಲಕ ಪ್ರದರ್ಶಿಸುವ ನಟವರ್ಗವನ್ನು ಭಾಗವತರು ಎಂದು ಕರೆಯುತ್ತಾರೆ. ಅವರಿಗೆ [illegible] ಹೆಸರೂ ಉಂಟು. [illegible] ವನ್ನುಳಿಸಿಕೊಂಡಿದೆ.

ಮಲಬಾರ್ ಪ್ರದೇಶದಲ್ಲಿ ಬಳಕೆಯಲ್ಲಿರುವ ಕಥಕ್ಕಳಿ ನೃತ್ಯಕ್ಕೆ [illegible] ಹೇಳುತ್ತಾರೆ. ಈ ನೃತ್ಯಕ್ಕೆ [illegible]. [illegible], ಅದು ಗಟ್ಟಿ ಕಾಲದಲ್ಲಿ [illegible], ಹಸ್ತಮುದ್ರೆ ಕೈಗೆ [illegible]. [illegible] ಕೈಗೆ [illegible] ನಲ್ಲಿಯೇ [illegible] ಕಂಡುಬರುತ್ತಾರೆ. [illegible] ಉಂಟು. [illegible] ಗಂಡಸರೇ [illegible] ಹಬ್ಬದ ದಿನಗಳ ರಾತ್ರಿ [illegible] ಪ್ರಸಂಗವನ್ನು [illegible] ನಡೆಯುತ್ತದೆ. ಕೃಷ್ಣ [illegible] ನಡೆಯುತ್ತದೆ. ಮಣಿಪುರಿ [illegible] ನೃತ್ಯಕಲೆಗೆ ಪ್ರಸಿದ್ಧವಾದ ಕ್ಷೇತ್ರಗಳು.

1 ಅದೇ, ಪು. ೩೧.

2 ಅದೇ, ಪು. ೩೪.

ಯರಿಗೆ ವಸತಿಸೌಕರ್ಯವನ್ನೊದಗಿಸಲಾಗುತ್ತಿತ್ತು. ತಂಜಾವೂರಿನ ಭಕ್ತಿಪ್ರಧಾನವಾದ ಕೇಲಾಟ್ಟವನ್ ಎಂಬ ಕುಣಿತ ತರುಣಿಯರಿಗೆ ಸೇರಿದ್ದು. ನಡುವೆಯಲ್ಲೊಂದು ಕೊಡವಿಟ್ಟು, ಅದರ ಮೇಲೆ ಹಣತೆಯನ್ನೋ ದೇವರ ಪ್ರತಿಮೆಯನ್ನೋ ಇಟ್ಟು, ಚಪ್ಪಾಳೆ ತಟ್ಟುತ್ತ ನರ್ತಿಸುತ್ತಾರೆ. ಭಾಗವತ ನಾಟಕ ಮೇಳವೆಂಬ ನೃತ್ಯನಾಟಕ ಕರ್ಣಾಟಕದ ಬಯಲಾಟದಂತಿದ್ದು, ಈಚೀಚೆಗೆ ಸೊರಗುತ್ತಿದೆ. ತಿರುಕೂತ್ತುವಿಗೂ ಅದಕ್ಕೂ ಹೆಚ್ಚು ವ್ಯತ್ಯಾಸವಿಲ್ಲ.

ದಕ್ಷಿಣ ಭಾರತದಲ್ಲಿ ನೃತ್ಯ ಮತ್ತು ನೃತ್ಯನಾಟಕಗಳ ತವರು ಮತ್ತು ಕೇಂದ್ರ ಎನಿಸಿಕೊಂಡಿರುವ ಕರಾವಳಿ ಸೀಮೆಯ ಒಂದು ಭಾಗ ಕೇರಳ. ರಾಮನಾಟ್ಟಂ ಕೃಷ್ಣಾಟ್ಟಂಗಳ[1] ಸಮ್ಮಿಲನದಿಂದ ಹದಿನಾರನೆಯ ಶತಮಾನದಲ್ಲಿ ಕಥಕ್ಕಳಿ ಜನ್ಮತಾಳಿತೆಂದು ಹೇಳುತ್ತಾರೆ. ಕಾಲಕ್ರಮೇಣ ಭರತನಾಟ್ಯದ ಸಂಸರ್ಗದಿಂದ ಇಂದಿನ ರೂಪ ಪಡೆಯಿತೆಂದು ತೋರುತ್ತದೆ. ಆದರೂ ಅದರ ಮೂಲಸ್ವರೂಪಕ್ಕೆ ಭಂಗ ಬಂದಿಲ್ಲವೆಂದೇ ಹೇಳಬೇಕು. ನೃತ್ಯ ಅಭಿನಯ ಕಥೆ ರಂಗಸಜ್ಜಿಕೆ ಪಾತ್ರಧಾರಿಗಳು ವೇಷಭೂಷಣಗಳು—ಪ್ರತಿಯೊಂದು ಅಂಶದಲ್ಲಿಯೂ ಯಕ್ಷಗಾನ ಕಥಕ್ಕಳಿಗಳಿಗೆ ಸಾಮ್ಯವಿದೆ. ಕಥಕ್ಕಳಿಯಲ್ಲಿ ಪಾತ್ರಧಾರಿ ಮುದ್ರೆ ಅಭಿನಯ ಮತ್ತು ನೃತ್ಯಗಳ ಮೂಲಕ ಕಥೆಯ ಸಂಗತಿಗಳನ್ನು ತಿಳಿಸಿ, ಭಾವರಸಗಳನ್ನು ಅಭಿವ್ಯಕ್ತಗೊಳಿಸಬೇಕು. ಇದರಲ್ಲಿ ೬೪ ಮುದ್ರೆಗಳಿಗೆ ವಿಶೇಷ ಪ್ರಾಶಸ್ತ್ಯ. ಭಾಗವತ ಹಾಡುತ್ತಾನೆ. ಎಲ್ಲಿಯೂ ಗದ್ಯದ ಸುಳಿವಿಲ್ಲ. ಚಂಡೆ ಪ್ರಮುಖ ವಾದ್ಯ. ಕಥಕ್ಕಳಿಯಂತೆ ಲೋಕವಿಖ್ಯಾತವಲ್ಲದಿದ್ದರೂ, ಜನಮನ್ನಣೆಗೆ ಪಾತ್ರವಾಗಿರುವ ನೃತ್ಯಗಳು ಇನ್ನೂ ಹಲವಾರಿವೆ: ಸಂಘಕಳಿ, ಪೂರಕ್ಕಳಿ, ಮೋಹಿನಿ ಆಟ್ಟಂ, ಓಟ್ಟಂತುಳ್ಳಲ್, ಖಡ್ಗನೃತ್ಯ, ಭೂತನೃತ್ಯ ಇತ್ಯಾದಿಯಾದವುಗಳು. ವಿವಾಹ, ಉಪನಯನ, ಅನ್ನಪ್ರಾಶನ ಮೊದಲಾದ ಶುಭಸಂದರ್ಭಗಳಲ್ಲಿ ಹಾಗೂ ಸತ್ತವರು ಸಮಾಧಿಯಾದನಂತರ ಅವರ ಮನೆಗಳಲ್ಲಿ ಸಂಘಕಳಿ ನೃತ್ಯ ನಡೆಯುತ್ತದೆ. ಓಟ್ಟಂತುಳ್ಳಲ್ ಒಬ್ಬನೇ ಅಭಿನಯಿಸುವ ವೀರರಸಪ್ರಧಾನವಾದ ನಾಟಕ. ಹಿನ್ನೆಲೆಯ ವಾದ್ಯ ಹಾಗೂ ಭಾಗವತನ ಹಾಡುಗಾರಿಕೆಯಿದ್ದರೂ ನಟನವೇ ಉದ್ದಕ್ಕೂ ಮೇಲುಗಾರಿಕೆ. ನಟನೇ ನೃತ್ಯಗಾರ, ಹಾಡುಗಾರ, ವ್ಯಾಖ್ಯಾನಕಾರ, ಎಲ್ಲವೂ ಆಗುತ್ತಾನೆ; ಅವನದು ಏಕಪಾತ್ರಾಭಿನಯವೆಂದರೂ ಸಲ್ಲುತ್ತದೆ. ಅನೇಕ ಪ್ರಸಂಗಗಳನ್ನು ಕವಿಗಳು ರಚಿಸಿದ್ದರೂ, ನಡುನಡುವೆ ನಟ ಸಾಮಾಜಿಕ ರಾಜಕೀಯ ವಿಚಾರಗಳನ್ನು ಸೇರಿಸಿಕೊಳ್ಳುತ್ತಾನೆ. ನೃತ್ಯಾಭಿನಯಗಳನ್ನು ಬಿಟ್ಟರೆ ಇದು ನಮ್ಮಲ್ಲಿಯ ಹರಿಕಥೆಯಂತಿದೆ. ಕೃಷ್ಣಕಥಾ ಪ್ರಸಂಗಗಳಿಗೆ ಜೋಡಿಸಿರುವ ನೃತ್ಯವೇ ಮೋಹಿನಿ ಆಟ್ಟಂ.

[1] ೧೫೭೫ರಿಂದ ೧೬೫೦ರ ವರೆಗೆ ಆಳುತ್ತಿದ್ದ ಕೊಟ್ಟಾರಕರ ರಾಜ ಶ್ರೀರಾಮನ ಕಥೆಗೆ ಸಂಬಂಧಿಸಿದಂತೆ ಎಂಟು ಪ್ರಬಂಧಗಳನ್ನು ರಚಿಸಿ, ಅವಕ್ಕೆ ಜಾನಪದ ನೃತ್ಯವನ್ನಳವಡಿಸಿ, ರಾಮನಾಟ್ಟಂ ಪದ್ಧತಿಯನ್ನು ರೂಢಿಗೆ ತಂದನೆಂದು ಹೇಳಲಾಗಿದೆ. ಕಲ್ಲಿಕೋಟೆಯ ದೊರೆ ಕೃಷ್ಣಾಟ್ಟಕ್ಕೆ ಮೂಲ ಪುರುಷನಂತೆ. ಉಳಿದ ವಿವರಗಳಿಗೆ ಕುಮಾರ ವೆಂಕಣ್ಣನವರ 'ಭಾರತದ ಜಾನಪದ ನೃತ್ಯಗಳು' ಗ್ರಂಥವನ್ನು ನೋಡಬಹುದು.

ಭರತಖಂಡ ಎಷ್ಟು ವಿಶಾಲವಾದುದೋ ಅಲ್ಲಿಯ ಸಂಸ್ಕೃತಿಯೂ ಅಷ್ಟೇ ವೈವಿಧ್ಯ
ಪೂರ್ಣವಾಗಿದೆ; ಅಂತೆಯೇ ಅಲ್ಲಿಯ ಕಲಾಪ್ರಕಾರಗಳು ಅನಂತವಾಗಿವೆ. ನೃತ್ಯದಂಥ
ಆಧುನಿಕ ಕಲೆಗೆ ಆಧಾರಸ್ಥಾನದಲ್ಲಿರುವಂಥವು ಅಲ್ಲಿಯ ಜನಪದ ಕುಣಿತಗಳು.
ಒಂದೊಂದು ಪ್ರದೇಶದಲ್ಲಿಯೂ ಹತ್ತಾರು ಕುಣಿತಗಳನ್ನು ಗುರುತಿಸಬಹುದಾಗಿದೆ. ಆದರೆ
ಈ ಕುಣಿತಗಳ ಸಮಗ್ರ ಸಮೀಕ್ಷೆ ಯಾವ ಪ್ರದೇಶದಲ್ಲಿಯೂ ನಡೆದಂತಿಲ್ಲ. ಹಳೆಯ
ಮೈಸೂರಿನಲ್ಲಿಯೇ ರಂಗದ ಕುಣಿತ, ಕೀಲುಕುದುರೆ ಕುಣಿತ, ನಂದಿಕೋಲು ಕುಣಿತ,
ವೀರಮಕ್ಕಳ ಕುಣಿತ, ಸೋಮನ ಕುಣಿತ, ಒಗ್ಗರ ಕುಣಿತ, ಕರಪಾಲ ಮೇಳ,ಭಾಗವಂತಿಕೆ
ಮೇಳ, ಬಿರಡೆ ಕುಣಿತ, ಕರಗದ ಕುಣಿತ, ವೀರಭದ್ರನ ಕುಣಿತ, ಮಾರಿಕುಣಿತ, ಪೂಜೆ
ಕುಣಿತ, ಕೋಲಾಟ, ಕತ್ತಿವರಸೆ, ದೊಣ್ಣೆವರಸೆ, ಒನಕೆ ಕುಣಿತ, ಇನ್ನೂ ಎಷ್ಟೆಷ್ಟೋ
ಕುಣಿತಗಳು ರೂಢಿಯಲ್ಲಿವೆ. ಉತ್ತರಕರ್ನಾಟಕದಲ್ಲಿ ಪರವಂತರ ಕುಣಿತ, ವೀರಮುಖಿ,
ಎಲ್ಲಮ್ಮನ ಕುಣಿತ, ಕರಡಿಮಜಲು, ಡೊಳ್ಳು ಕುಣಿತ, ಗೊಂದಲಿಗರ ಮೇಳಗಳೂ,
ಕೊಡಗಿನಲ್ಲಿ ಹುತ್ತರಿ ಕುಣಿತ, ಉಮ್ಮತ್ತಾಟಗಳೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೈದ್ಯ
ನೃತ್ಯ, ಭೂತನೃತ್ಯ, ದುಡಿಕುಣಿತ, ನಾಗಾನೃತ್ಯಗಳೂ, ಉತ್ತರ ಕನ್ನಡ ಜಿಲ್ಲೆಯಲ್ಲಿ
ಸುಗ್ಗಿ ಕುಣಿತ ಸಿಂಹ ನೃತ್ಯಗಳೂ ಹೆಸರುವಾಸಿಯಾಗಿವೆ. ಕೋಲಾಟ ಇವುಗಳಲ್ಲೆಲ್ಲ
ಪ್ರಖ್ಯಾತವಾದದ್ದು, ಹಾಗೆಯೇ ಪ್ರಾಚೀನವಾದದ್ದು. ಅದೊಂದು ಕತ್ತಿವರಸೆ ದೊಣ್ಣೆ
ವರಸೆಯಂತೆ ಲೌಕಿಕಕಲೆ. ಅದು ಉತ್ತರ ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ
ಅನೇಕ ದೇಶಗಳಲ್ಲಿ ಜನಪ್ರಿಯವಾಗಿದೆ. ಈಜಿಪ್ಟಿನ ಮತ್ತು ದಕ್ಷಿಣಭಾರತದ ಕೋಲಾಟ
ಗಳಲ್ಲಿ ಸಾಮ್ಯವಿದೆ ಎಂದು ಹೇಳುತ್ತಾರೆ. ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಅದು
ಆಧುನಿಕತೆಯ ಬಿರಕೆಯಿಲ್ಲದೆ ಜನಪ್ರಿಯವಾಗಿ ಉಳಿದುಕೊಂಡು ಬಂದಿರುವುದೇ
ಅದರ ಸತ್ವಾತಿಶಯಕ್ಕೆ ಸಾಕ್ಷಿಯಾಗಿದೆ. ಅದೊಂದು ಗಂಡುಕಲೆ. ಎಂಥ ಸಂದರ್ಭ
ದಲ್ಲಿಯೂ ಅದನ್ನೇರ್ಪಡಿಸಬಹುದು. ಶರೀರದ ಚಟುಲತೆಯನ್ನು, ಅಂಗಾಂಗಗಳ ಲವ
ಲವಿಕೆಯನ್ನು ಬುದ್ಧಿಯ ಚುರುಕನ್ನು ಪರೀಕ್ಷಿಸುವ ಕಲೆಯದು. ವೇಷಭೂಷಣಗಳ ರಗಳೆ
ಯಿಲ್ಲದ್ದರಿಂದ, ಯಾವಾಗೆಂದರೆ ಆವಾಗ ಈ ಆಟದಲ್ಲಿ ತೊಡಗಬಹುದು. ಅದರಲ್ಲಿ
ಪಾಲ್ಗೊಳ್ಳುವ ಜನ ಸಾಮಾನ್ಯವಾಗಿ ಅವಿದ್ಯಾವಂತರಾದ್ದರಿಂದ, ಮುಮ್ಮೇಳ ನುಡಿಸಲು
ಮತ್ತು ಮಾರ್ಗದರ್ಶನ ನೀಡಲು ಒಬ್ಬ ಯಜಮಾನ ಅತ್ಯವಶ್ಯ. ಜಾತಿಮತಕುಲಗಳ
ಭೇದವಿಲ್ಲದೆ ಈ ಆಟವನ್ನು ಎಲ್ಲರೂ ಕಲಿಯುತ್ತಾರೆ, ಆಡುತ್ತಾರೆ. ಕೋಲಾಟದಲ್ಲಿ
ಅನೇಕ ಬಗೆಗಳಿವೆ. ಆಟದ ಜತೆಗೆ ಬೆಳೆದುಕೊಂಡು ಬಂದಿರುವ, ಮನೋರಂಜನೆ ನೀಡುವ
ಸಾಹಿತ್ಯ ಗಮನಾರ್ಹವಾದದ್ದು.[1]

ಬೆಂಗಳೂರು ಜಿಲ್ಲೆಯ ಮತ್ತು ಅದರ ಪರಿಸರದ ಕೆಲವು ತಾಲ್ಲೂಕುಗಳಲ್ಲಿ ಪೂಜೆಕುಣಿತ
ರೂಢಿಯಲ್ಲಿದೆ. ಅದು ಧಾರ್ಮಿಕವಿಧಿಯ ಅಂಗವಾಗಿ ನಡೆಯುವ ಸಂಗತಿ. ಹುಟ್ಟಿದ

1 ಈ ಸಂಬಂಧವಾದ ಇತರ ವಿವರಗಳಿಗೆ ಜೀಶಂಪ ಅವರು ಡಿ. ಕೆ. ಈರೇಗೌಡರ 'ಕೋಲಾ
ಟದ ಪದಗಳು' ಎಂಬ ಗ್ರಂಥಕ್ಕೆ ಬರೆದಿರುವ ಮುನ್ನುಡಿಯನ್ನು ನೋಡಬಹುದು.

ದಿನಗಳಲ್ಲಿ ಉತ್ಸವ ವಿಗ್ರಹವನ್ನು ಕೇರಿಕೇರಿಗಳಲ್ಲೆಲ್ಲ ಮೆರವಣಿಗೆಯಲ್ಲಿ ಕೊಂಡೊಯ್ದು, ಭಕ್ತರ ಕೈಂಕರ್ಯವನ್ನು ಸ್ವೀಕರಿಸಿ ಮೂಲದೇವರ ಸನ್ನಿಧಿಗೆ ತರಬೇಕಾಗುತ್ತದೆ. ಹುಲಿಯೋ, ಸಿಂಹವೋ, ಗರುಡನೋ ವಾಹನವಾಗಿರುವ ದೇವತೆಗಳು ತಂತಮ್ಮ ವಾಹನಗಳ ಮೇಲೆ ಮೆರವಣಿಗೆ ಹೊರಡುತ್ತಾರೆ. ಉಳಿದವರು ಪಟಗಳಲ್ಲಿ ಪ್ರತಿಷ್ಠಾಪನೆಗೊಂಡು ಉತ್ಸವಕ್ಕೆ ಹೊರಡುತ್ತಾರೆ. ದೊಡ್ಡ ಗಾಳಿಪಟವನ್ನೋ ಚಂದ್ರಿಕೆಯನ್ನೋ ಹೋಲುವ ಈ ಪಟ ಬಿದಿರ ಗಳುಗಳಿಂದ ಮಾಡಿದ್ದು. ಪಟ ಸಾಮಾನ್ಯವಾಗಿ ಐದು ಅಡಿ ಎತ್ತರವಿದ್ದು, ಮೂರೂವರೆ ಅಡಿ ಅಗಲವಾಗಿರುತ್ತದೆ. ರೇಷ್ಮೆ ಕಲಾಬತ್ತಿನ ಬಟ್ಟೆಗಳಿಂದ, ಅನುಮೂಲ್ಯಾಭರಣಗಳಿಂದ ಪಟವನ್ನು ಸಿಂಗರಿಸುತ್ತಾರೆ. ಅದರ ಮಧ್ಯದಲ್ಲಿ ಉತ್ಸವ ಮೂರ್ತಿ ಇರುತ್ತದೆ. ತುದಿಯಲ್ಲಿ ಏಳೊ, ಒಂಬತ್ತೊ ಕಳಶಗಳಿರುತ್ತವೆ. ಅದರ ಕೆಳಗಡೆ ಲೋಹದ ಸಿಂಬಿ ಇರುತ್ತದೆ. ಇದಕ್ಕೆ ಪೂಜೆ ಎಂದು ಹೆಸರು. ಗಟ್ಟಿಮುಟ್ಟಾದ ಆಳು ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಪಟವನ್ನು ತಲೆಯಮೇಲೆ ಹೊತ್ತುಕೊಂಡು ಊರಲ್ಲೆಲ್ಲ ಮೆರೆಸುತ್ತಾನೆ. ಗಟ್ಟಿಮುಟ್ಟಾದ ಶರೀರವಿದ್ದರೆ ಸಾಲದು; ಆ ಕಲೆಯನ್ನು ದೀರ್ಘಕಾಲ ಅಭ್ಯಸಿಸಿರಬೇಕು. ತಂಬಟೆ ನಗಾರಿ ಓಲಗಗಳ ವಾದ್ಯಕ್ಕನುಗುಣವಾಗಿ ಹೆಜ್ಜೆ ಹಾಕಬೇಕು. ಉತ್ಸಾಹಾವೇಶಗಳೇ ಅವನನ್ನು ಕುಣಿಸುತ್ತವೆ. ಪೂಜೆಯನ್ನು ತಲೆಯಮೇಲೆ ಮಾತ್ರವಲ್ಲ, ಭುಜ, ಅಂಗೈಗಳ ಮೇಲೆಯೂ, ಮಲಗಿರುತ್ತ ಎದೆ, ಮಂಡಿಗಳ ಮೇಲೆಯೂ ಇಟ್ಟುಕೊಂಡು ಮೆರೆಸುತ್ತಾನೆ. ಕುಣಿಯುವಾಗಿನ ಅವನ ಬಾಗು ಬಳುಕುಗಳು ರೋಮಾಂಚನಕಾರಿಯಾಗಿರುತ್ತವೆ. ಇದನ್ನೇ ಪೂಜೆ ಕುಣಿತ ಎನ್ನುವುದು. ಮೆರೆಸುವವನಿಗೆ ಕುಣಿತವ ಸೇವೆಯಾಯಿತು, ಭಕ್ತರಿಗೆ ಧಾರ್ಮಿಕತೃಪ್ತಿಯೂ ಮನೋರಂಜನೆಯೂ ಆಯಿತು. ನಂದಿಕೋಲು ಕುಣಿತ. ವೀರಗಾಸೆ ಕುಣಿತಗಳೂ ಪೂಜೆ ಕುಣಿತಕ್ಕೆ ಸ್ಪರ್ಧಿಗಳೆನ್ನುವಂತೆ ಮೆರೆಯುತ್ತವೆ. ಒಂದು ಕಡೆ ವಾದ್ಯವೃಂದ, ಮತ್ತೊಂದು ಕಡೆ ಇತರ ಕುಣಿತಗಳು, ಇವುಗಳ ಸವಾಲಿಗೆ ಜವಾಬೋ ಎನ್ನುವಂತೆ ಪೂಜೆಕುಣಿತ ಸಾಗುತ್ತದೆ. ಮಾತಿನ ಸಂಗವಿಲ್ಲದ ಆ ಸವಾಲು ಜವಾಬುಗಳು ನೃತ್ಯನಾಟಕಗಳನ್ನು ನೆನಪಿಗೆ ತರುತ್ತವೆ. ಒಂದೊಂದೂರಿಗೊಂದೊಂದೆ ಪೂಜೆ ಇರುವುದರಿಂದ ಏಕಪೂಜೆ ಕುಣಿತವೇ ಸಾಮಾನ್ಯಸಂಗತಿ. ದೊಡ್ಡ ದೊಡ್ಡ ಜಾತ್ರೆಗಳಲ್ಲಿ ನಾಲ್ಕಾರು ಊರುಗಳ ಪೂಜೆಗಳು ಸೇರುವುದುಂಟು. ಆಗ ಪೂಜೆಕುಣಿತ ಸಾಮೂಹಿಕವಾಗಿರುತ್ತದೆ. ಆ ವೈಭವವನ್ನು ಹಳ್ಳಿಯ ಜನ ಬೇಸರವಿಲ್ಲದೆ ನಿದ್ದೆಗೆಟ್ಟು ಹೊತ್ತು ಹುಟ್ಟುವ ತನಕ ನೋಡುತ್ತಾರೆ.

'ದೇವರ ಗುಡ್ಡರು' ಅಥವಾ 'ಕುಣಿಯೊ ಗುಡ್ಡರು' ಎಂಬ ಜನಪದ ನೃತ್ಯಗಾರರನ್ನು ಹೆಚ್ಚಾಗಿ ಹಾಸನಜಿಲ್ಲೆ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾಣಬಹುದು. ಗ್ರಾಮಗಳಲ್ಲಿ ನಡೆಯುವ ಗ್ರಾಮದೇವತೆಯ ಹಬ್ಬ (ಬಂಡಿ ಹಬ್ಬ. ಆನೆಕೆರೆಯಮ್ಮನ ಹಬ್ಬ, ಮಾರಮ್ಮನ ಜಾತ್ರೆ, ದೇವಳ್ಳಿಯಮ್ಮನ ಜಾತ್ರೆ ಇತ್ಯಾದಿ.) ಮುಂತಾದ ಸಂದರ್ಭಗಳಲ್ಲಿ ದೇವರು ಭಕ್ತರ ಮೈಮೇಲೆ ಬಂದು ಆ ಊರಿನ ಕಷ್ಟ, ಸುಖ. ಭವಿಷ್ಯವನ್ನು ನುಡಿಯುವಂತೆ ಅಭಿನಯಿಸುವುದೇ ಇವರ ನೃತ್ಯದ ಗುರಿ. ಮುಖ್ಯ ಉದ್ದೇಶ. ಜೇಗ್ಗೆ

ಯಿಂದ ಸಂಜೆಯವರೆಗೆ ಉಪವಾಸವಿದ್ದು, ಮಡಿಯೊಂದಿಗೆ, ಕಳಸವನ್ನೊ, ಎಡೆಯನ್ನೊ ಹೊರುವ ಹೆಣ್ಣುಮಗಳ ಮೇಲೆ ಈ ದೇವರುಗಳು ಬರುವುದು ರೂಢಿ. ಪಡ್ಡೆ ಹುಡುಗರ ಮೇಲೂ ಬರುವುದುಂಟು. ಕೆಲವು ವೇಳೆ ಪೂಜೆಯ ಆರಂಭದಲ್ಲಿ ದೇವರು ಬರುವುದುಂಟು. ಆದರೆ ಕೆಲವು ಸಂದರ್ಭಗಳಲ್ಲಿ ಕೆಂಡಕೊಂಡ ಹಾದ ಮೇಲೆ ಮೈದುಂಬುವುದುಂಟು. ಅಂಥ ಸಂದರ್ಭಗಳಲ್ಲಿ ಗುಡ್ಡರ ಪಾತ್ರ ಅತಿ ಮುಖ್ಯ.

'ಕುಣಿಯೊ ಗುಡ್ಡರು' ಹೆಸರೇ ಸೂಚಿಸುವಂತೆ ಇಲ್ಲಿ ಕುಣಿತವೇ ಪ್ರಧಾನ. ಇದೊಂದು ನೃತ್ಯಪ್ರಧಾನ ಗಂಡುಕಲೆ. ಸ್ತ್ರೀಯರು ಎಲ್ಲೂ ಭಾಗವಹಿಸುವುದಿಲ್ಲ. ಇಲ್ಲಿ ಸಾಹಿತ್ಯ ಗೌಣ. "ಒಲಿದು ಬಾರೆ ತಾಯಿ ಒಲಿದು ಬಾರೆ" ಎಂಬ ಪಲ್ಲವಿಯೊಡನೆ ಆ ದೇವತೆಯ ವಿಶಿಷ್ಟ ಗುಣಗಳನ್ನು, ವಂಶಾವಳಿಗಳನ್ನು ಬಣ್ಣಿಸುವುದು ವಾಡಿಕೆ. ಇವರ ಕುಣಿತಕ್ಕೆ ಪ್ರತ್ಯೇಕವಾದ ವಾದ್ಯವಿಶೇಷವೇನೂ ಇದ್ದಂತೆ ಕಂಡುಬರುವುದಿಲ್ಲ. ಕಾಲಿಗೆ ಗೆಜ್ಜೆ, ಕೈಯಲ್ಲಿ ದಮ್ಮಡಿ ಇದ್ದರೆ ತೀರಿತು. ಅದೂ ಇಲ್ಲದಿದ್ದರೆ ಕೈಗೆ ಸಿಕ್ಕಿದ ಪಲ್ಲಿಯನ್ನೊ, ಬೇವಿನ ಸೊಪ್ಪನ್ನೋ, ಕಕ್ಕೆಸೊಪ್ಪನ್ನೋ ಹಿಡಿದರೂ ನಡೆದೀತು.

ಇದೊಂದು ಸಾಮೂಹಿಕ ನೃತ್ಯ. ಸುಮಾರು ನಾಲ್ಕರಿಂದ ಹತ್ತು ಜನರು ಈ ನೃತ್ಯದಲ್ಲಿ ಭಾಗವಹಿಸುವುದುಂಟು. ಇಲ್ಲಿಯೂ ಹಿಮ್ಮೇಳ ಮುಮ್ಮೇಳಗಳುಂಟು. ಆಯಾ ದೇವತೆಯ ಗುಣಗಳಿಗೆ ಸಂಬಂಧಿಸಿದಂತೆ ಸಾಹಿತ್ಯ ಬದಲಾವಣೆಯಾಗುತ್ತದೆ. ಈ ನೃತ್ಯಕ್ಕೆ ಮುಖ್ಯವಾಗಿ ಹರಿಜನರು ನುಡಿಸುವ 'ವಾದ್ಯಗೋಷ್ಠಿ' ಇದ್ದೇ ತೀರಬೇಕು. ಅವರಲ್ಲೂ ತಮ್ಮಟೆ ಬಾರಿಸುವವನು ಬಲವಾಗಿದ್ದಷ್ಟೂ ಈ ಕುಣಿತಕ್ಕೆ ಕಳೆ ಕಟ್ಟುತ್ತದೆ. ನೆರೆದ ನೆಂಟರು ಇವರ ಕುಣಿತ, ಭಾವಭಂಗಿಗಳಲ್ಲಿ ಮೈಮರೆಯುತ್ತಾರೆ. ಅನೇಕ ಸಲ ಕುಣಿತದ ಆವೇಶದಲ್ಲಿ ಪ್ರಜ್ಞೆ ತಪ್ಪುವುದೂ ಉಂಟು. ದೇವತೆ ಬೇಗ ಮೈಮೇಲೆ ಬಾರದಿದ್ದರೆ ಅವಳ(ನ)ನ್ನು ನಿಂದಿಸುವುದೂ ಉಂಟು. ಕೊನೆಗೆ ಇವರ ಬೈಗುಳಕ್ಕಾದರೂ ಹೆದರಿ ದೇವತೆ ಮೈಮೇಲೆ ಬಂದೇ ಬರುತ್ತದೆ. ಇವರಿಗೆ ಗ್ರಾಮಸ್ಥರೆಲ್ಲಾ ಸೇರಿ ಕಾಣಿಕೆಯಾಗಿ, ದವಸ ದುಡ್ಡು ಕೊಡುವುದೂ ರೂಢಿಯಲ್ಲಿದೆ. ಆದರೆ ಇವರು ಸಂಪೂರ್ಣವಾಗಿ ಇದನ್ನೇ ತಮ್ಮ ಕಾಯಕವನ್ನಾಗಿ ಅವಲಂಬಿಸಿಲ್ಲ. ಗುಡ್ಡರೂ ಬೇಸಾಯಗಾರರೇ. ಆದರೆ ಹಬ್ಬ, ಜಾತ್ರೆ ನಡೆದಾಗ ಅದರಲ್ಲಿ ಭಾಗವಹಿಸುತ್ತಾರೆ. ಇವರು ಸಾಮಾನ್ಯವಾಗಿ ಕುರುಬರ ಜಾತಿಗೆ ಸೇರಿದವರಾಗಿರುತ್ತಾರೆ. 'ಉಪ್ಪಾರ' ಜನಾಂಗದವರೂ ಈ ನೃತ್ಯದಲ್ಲಿ ಭಾಗವಹಿಸುತ್ತಾರೆ ಎಂದು ಹೇಳುತ್ತಾರೆ. ಇಂಥದೇ ಜನಾಂಗದವರು ಈ ನೃತ್ಯದಲ್ಲಿ ಭಾಗವಹಿಸುತ್ತಾರೆ ಎಂದು ಖಚಿತವಾಗಿ ತಿಳಿದುಬಂದಿಲ್ಲ. ಬಹುಶಃ ಈ ನೃತ್ಯವನ್ನು ಕೆಲವರು ತಮ್ಮ ಕುಲಕಸುಬನ್ನಾಗಿ ಮಾಡಿಕೊಂಡಿರಬಹುದು. ಬರಬರುತ್ತ ಇತರರೂ ಇದನ್ನು ತಮ್ಮ ಹವ್ಯಾಸವಾಗಿ ಬೆಳೆಸಿಕೊಂಡಿರಬೇಕು. ಒಟ್ಟಿನಲ್ಲಿ ಇವರು ಹವ್ಯಾಸಿ ಕಲಾವಿದರು ಎಂದು ಹೇಳಬಹುದು. ಹಾಸನದ ತಾಲ್ಲೂಕಿನ ಸತಿಗರಹಳ್ಳಿ ಕೊಪ್ಪಲು, ಅದರ ಸುತ್ತಮುತ್ತ, ಚನ್ನರಾಯಪಟ್ಟಣ ತಾಲ್ಲೂಕಿನ [illegible] ಸುತ್ತಮುತ್ತ; ಅರಕಲಗೂಡು ತಾಲ್ಲೂಕು ಕಂತೇನಹಳ್ಳಿ ಉಪ್ಪಾರ ಕೊಪ್ಪಲು ಆ ಸುತ್ತಮುತ್ತ

—ಈ ಕುಣಿಯೊ ಗುಡ್ಡರು ಇರುವುದಾಗಿ ತಿಳಿದುಬಂದಿದೆ. ನಾಗರಿಕತೆಯ ಈ ಯುಗದಲ್ಲಿ ಈ ಕುಣಿತ ತನ್ನ ವಿಶಿಷ್ಟತೆಯನ್ನು ಕಳೆದುಕೊಳ್ಳುತ್ತಾ ಬಂದಿವೆ.[1]

ಕ್ಷತ್ರಿಯರು ಪಾತ್ರಗೊಳ್ಳುವ, ಮದುವೆಯ ಸಮಾರಂಭದಲ್ಲಿ ನಡೆಯುವ ಸಾಮೂಹಿಕ ನೃತ್ಯವೇ ವೀರಮುಖ. ಯುದ್ಧವನ್ನು ಗೆದ್ದು ವಧುವನ್ನು ಪಡೆಯುವ ಪ್ರಸಂಗವೇ ಅದಕ್ಕೆ ಹಿನ್ನೆಲೆ. ವೀರ ಮತ್ತು ಶೃಂಗಾರರಸಗಳಿಗೆ ಇಲ್ಲಿ ಅಗ್ರಸ್ಥಾನ. ಎಲ್ಲಮ್ಮ ದೇವತೆಯ ಪ್ರೀತ್ಯರ್ಥವಾಗಿ ಅವಳ ಭಕ್ತರು ನಡಸುವ ಕುಣಿತ ಸೇವೆಯೇ ಎಲ್ಲಮ್ಮನ ಕುಣಿತ. ಕುಣಿತಗಾತಿ ನೀರುಳ್ಳ ಕಂಚಿನ ಪಾತ್ರೆಯನ್ನು ಹೊತ್ತಿರುತ್ತಾಳೆ. ಪಾತ್ರೆಗೆ ದೇವತೆಯ ಲಾಂಛನವನ್ನು ಕಟ್ಟಿರುತ್ತಾರೆ. ತುಂತುಣಿ ಮತ್ತು ಚೌಡಿಕೆಗಳು ಕುಣಿತದಲ್ಲಿ ಬಳಕೆಯಾಗುವ ವಾದ್ಯಗಳು.

ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದ ಜೀವಂತ ಭಾಗವಾಗಿರುವ ಭೂತಾರಾಧನೆಯಲ್ಲಿ ಕುಣಿತಕ್ಕೆ ವಿಶೇಷ ಪ್ರಾಶಸ್ತ್ಯ. ಈ ಭೂತಾರಾಧನೆಯಲ್ಲಿ ಎರಡು ಸಂಪ್ರದಾಯಗಳಿದ್ದು, ಕನ್ನಡಿಗರದೇ ಒಂದು ತೆರ, ತುಳುವರದೇ ಒಂದು ತೆರನಾಗಿದೆ. ತುಳುವರಲ್ಲಿ ಕುಣಿತದ ಕೈಂಕರ್ಯ ನಡಸುವ ಜನ ಇಂಥವರೇ ಎಂದು ನಿಗದಿಯಾಗಿದೆ. ನಲ್ಕೆ, ಪರವ, ಪಂಬದ ಮತ್ತು ಪಾಣಾರು ಜಾತಿಗಳ ಪೂಜಾರಿಗಳು ಕರೆಬಂದಾಗ ಆಯಾಯ ದೇವತೆಗಳ ವೇಷಭೂಷಣಗಳನ್ನು ಧರಿಸಿ, ಜತೆಯವರು ಪಾಡ್ದನಗಳನ್ನು ಹೇಳುವಾಗ, ವಾದ್ಯಕ್ಕನುಗುಣವಾಗಿ ಕುಣಿಯುತ್ತಾರೆ. ದೆವ್ವವೇ ಮೈಮೇಲೆ ಬಂದಂತೆ ಕುಣಿಯುತ್ತಾರಾದ್ದರಿಂದ ಕುಣಿತ ಭಯಾನಕವಾಗಿರುತ್ತದೆ. "ಇವುಗಳ ಜಿಗಿತ, ಕುಣಿತ, ಅಂಗಭಂಗಿಗಳ ರೀತಿಗಳೇ ಬೇರೆ; ಬಯಲಾಟದವುಗಳೇ ಬೇರೆ" ಎಂದು ಶಿವರಾಮಕಾರಂತರು ನುಡಿಯುತ್ತಾರೆ.[2] ಕನ್ನಡ ಸೀಮೆಯ ಭೂತಾರಾಧನೆಯಲ್ಲಿ ಬ್ರಾಹ್ಮಣವರ್ಗವೂ ಪಾಲ್ಗೊಳ್ಳುತ್ತದೆ. ನಾಗಮಂಡಲ ಎಂಬ ಪೂಜಾವಿಧಿಯಲ್ಲಿ ಅವರ ಪಾತ್ರ ಎದ್ದುಕಾಣುತ್ತದೆ. ನೃತ್ಯಪೂಜೆಯಲ್ಲಿ ಭಾಗಿಗಳಾಗುವ ಕುಣಿತಗಾರ ಹಾಗೂ ಹಿಮ್ಮೇಳಗಾರರನ್ನು ವೈದ್ಯರೆಂದು ಕರೆಯುತ್ತಾರೆ. ಅರ್ಧನಾರೀಶ್ವರನನ್ನು ನೆನಪಿಗೆ ತರುವಂತೆ ಈ ವೈದ್ಯ ಅರೆಮರೆ ಸ್ತ್ರೀಪುರುಷ ವೇಷದಲ್ಲಿರುತ್ತಾನೆ. ಹಿಮ್ಮೇಳಗಾರರು ವಾದ್ಯನುಡಿಸಿ ಹಾಡು ಹೇಳುವಾಗ ವೈದ್ಯ ಢಕ್ಕೆಯನ್ನು ಸದ್ದುಗೊಳಿಸುತ್ತ, ಹಾಡುತ್ತ, ಕುಣಿಯುತ್ತಾನೆ. ದೆವ್ವ ಅಥವಾ [illegible] ಸ ಪಾತ್ರವನ್ನು ವಹಿಸುವ ಪಾತ್ರಿ ವೈದ್ಯನ ಮುಂದೆ ನಿಲ್ಲುತ್ತಾನೆ. ವೈದ್ಯ ನಾನಾ [illegible] ಕುಣಿತಗಳ ಮೂಲಕ ನಾಗವೇಷದ ಪಾತ್ರಿಯನ್ನು ಒಲಿಸಿಕೊಳ್ಳಬೇಕಾಗುತ್ತದೆ. "ಈ ಕುಣಿತ ಮಾತ್ರ ತೀರ ಸುಂದರವಾದ, ತರಂಗಬದ್ಧವಾದ, ಪ್ರತಿಯೊಂದು ಭಾವರಸಕ್ಕೂ ಒಪಗಿಬಂದಿರುವ ನೃತ್ಯ ವಿಧಾನವಾಗಿದೆ. ಯಾವತ್ತು ಶರೀರಕ್ಕೆ ಅದರಲ್ಲಿ ಕೆಲಸವಿದೆ. ನಖಶಿಖಾಂತ ಶರೀರವಿನ್ಯಾಸಗಳಿವೆ. ಕುಣಿತ, ಜಿಗಿತ, ಹಿನ್ನಡೆ, ಮುನ್ನಡೆ, ಕೈಬಳುಕು, ಮೈಬಳುಕು, ಇಂಥ ಸುಸಂಬದ್ಧವಾಗಿ ಹೊಂದಿಕೊಂಡ ನೃತ್ಯ

[1] ಈ ವಿವರ ಒದಗಿಸಿದವರು ಡಿ. ಕೆ. ಈರೇಗೌಡರು.

[2] ಯಕ್ಷಗಾನ ಬಯಲಾಟ, ಪುಟ ೧೦೦.

ಗೀತಗಳಿವೆ. ಲಾಸ್ಯಕ್ಕೆ, ಹಾಸ್ಯಕ್ಕೆ, ತಾಂಡವಕ್ಕೆ, ರೌದ್ರಕ್ಕೆ ಸಮಶಕ್ತಿಯಿಂದ ಒದಗಬಲ್ಲ ಕಲನವಲನಗಳಿವೆ. ಯಕ್ಷಗಾನ ಬಯಲಾಟದವರು ಇದಕ್ಕೇನೆ ಋಣಿಗಳಾದರು"[1] ಎಂಬ ಶಿವರಾಮಕಾರಂತರ ಅಭಿಪ್ರಾಯ ವಿಚಾರಣೀಯವಾದದ್ದು.

ಬಯಲಾಟದ ಕುಣಿತ ನಾಗನೃತ್ಯಕ್ಕೆ ಋಣಿಯಾದರೂ ಈ ಎರಡರ ನಡುವೆ ಸಾಕಷ್ಟು ವ್ಯತ್ಯಾಸಗಳಿವೆಯೆಂದು ಅವರೇ ಸ್ಪಷ್ಟಪಡಿಸಿದ್ದಾರೆ. ನಾಟಕದ ಪರಿಸರವೇ ಬೇರೆಯಾದ್ದರಿಂದ ವ್ಯತ್ಯಾಸಗಳು ಅನಿವಾರ್ಯ. ಅಲ್ಲಿ ಕಥೆಯಿದೆ, ಸಂಭಾಷಣೆಯಿದೆ, ಬೇರೆ ಬೇರೆ ಪರಿಕರಗಳಿವೆ. ಜತೆಗೆ ನಾಟಕದ ಧ್ಯೇಯ ಮನೋಧರ್ಮಗಳೇ ಬೇರೆ, ಕುಣಿತದ ಗುರಿಯೇ ಬೇರೆ. ಕುಣಿತದ ಗುರಿ ಸಂಕುಚಿತವಾದುದು, ನಾಟಕದ ಗುರಿ ವ್ಯಾಪಕವಾದದ್ದು. ಭಾವರಸಾಭಿವ್ಯಕ್ತಿಗೆ ನಾಟಕದಲ್ಲೊದಗುವ ಅವಕಾಶಗಳು ಅಪಾರ. ಶೃಂಗಾರ ಅಥವಾ ಲಾಸ್ಯ, ಲಘುಭಾವ ಅಥವಾ ಹಾಸ್ಯ, ವೀರ ಇಲ್ಲವೆ ರೌದ್ರ ಎಂದು ಯಕ್ಷಗಾನದ ಕುಣಿತವನ್ನು ಶಿವರಾಮಕಾರಂತರು ಮೂರು ವರ್ಗಗಳಾಗಿ ವಿಂಗಡಿಸುತ್ತಾರೆ. ಲಾಸ್ಯ ಸ್ತ್ರೀಪಾತ್ರಗಳಲ್ಲಿಯೂ, ಲಘುನೃತ್ಯ ಚಾರಕ ಹನುಮನಾಯಕ ನಾರದಾದಿ ಪಾತ್ರಗಳಲ್ಲಿಯೂ, ವೀರ ಇತರ ಪಾತ್ರಗಳಲ್ಲಿಯೂ ಹೇಗೆ ಅಭಿವ್ಯಕ್ತವಾಗುತ್ತದೆನ್ನುವುದನ್ನು ಅವರು ಪದರ ಪದರವಾಗಿ ವಿವರಿಸಿದ್ದಾರೆ.[2]

ಮೇಲಣ ಕುಣಿತಗಳೆಲ್ಲ ಮೂಲತಃ ಆಟವಾಗಿದ್ದುವೆಂದು ತೋರುತ್ತದೆ. ತಾನು ಆಡುವ ಆಟಗಳು ಸಾಲದೆ ಮನುಷ್ಯ ಸುತ್ತಮುತ್ತಣ ಪ್ರಾಣಿಗಳಿಗೂ ಆಟ ಕಲಿಸಿ, ಆಡಿಸಿ ಹರ್ಷಿಸುತ್ತಿದ್ದನು. ಕೋಲೆಬಸವ ಅಂಥದೊಂದು ತೋರಿಕೆ. ಕೋತಿ ಹಾಗೂ ಕರಡಿಕುಣಿತ ಈ ವರ್ಗಕ್ಕೆ ಸೇರಿದುವು. ಪ್ರಾಯಶಃ ಈ ಪ್ರಾಣಿಗಳ ಕುಣಿತವೇ ಸರ್ಕಸ್ಸಾಗಿ ಪರಿಣಮಿಸಿರಬೇಕು. ಕೋಲೆಬಸವನ ಕುಣಿತದ ಮೂಲಕ ಪ್ರೇಕ್ಷಕರಿಗೆ ರಾಮಾಯಣ ಕಥೆಯ ಪರಿಚಯವಾಗುತ್ತಿತ್ತು. ಎಷ್ಟು ಕಲಿಸಿದರೂ ಪ್ರಾಣಿ ಪ್ರಾಣಿಯೇ. ಮನುಷ್ಯ ಹೇಳಿದ್ದನ್ನೆಲ್ಲ ಅವು ಅರ್ಥಮಾಡಿಕೊಳ್ಳುವಂತಿಲ್ಲ. ಅರ್ಥಮಾಡಿಕೊಳ್ಳುವಂತಿದ್ದರೆ ಮನುಷ್ಯನ ಕೈಗೆ ಅವು ದಕ್ಕುತ್ತಿರಲಿಲ್ಲ. ಕಾವ್ಯವಾಚನ ಅಥವಾ ಕಥಾಶ್ರವಣದ ಮೂಲಕ ಸಾಮಾನ್ಯ ಮನುಷ್ಯನ ಮನಸ್ಸಿನಲ್ಲಿ ವಿಷಯ ಪೂರ್ಣವಾಗಿ ನಾಟುವುದಿಲ್ಲ, ಸಂಬಂಧಪಟ್ಟ ಚಿತ್ರಗಳ ಕಲ್ಪನೆ ಸ್ಪಷ್ಟವಾಗಿ ಮೂಡುವುದಿಲ್ಲ. ದೃಗನುಭವ ಮಾತ್ರ ಬಹುಕಾಲ ಮನಸ್ಸಿನಲ್ಲಿ ನಿಲ್ಲುತ್ತದೆ. ಇದರ ರಹಸ್ಯವನ್ನರಿತೇ ಹಿಂದಿನವರು ಬೊಂಬೆಗಳನ್ನು ಮುಂದಿಟ್ಟುಕೊಂಡು, ಹಿನ್ನೆಲೆಯಿಂದ ಕಥೆಗೆ ಸಂಬಂಧಿಸಿದ ಹಾಡುಗಳನ್ನು ನುಡಿಯುತ್ತ, ವ್ಯಾಖ್ಯಾನವನ್ನು ಸೇರಿಸುತ್ತ ಜನಮನಸ್ಸನ್ನು ಆಕರ್ಷಿಸುತ್ತಿದ್ದರು. ಬರಬರುತ್ತ ಆ ಬೊಂಬೆಗಳಿಂದ ಕುಣಿತ ಕೂಡ ಮಾಡಿಸಿದರು. ದೃಕ್‌ಶ್ರವಣ ವಿಧಾನದ ಶಿಕ್ಷಣ ಬಹುಪ್ರಾಚೀನವಾದದ್ದೆನ್ನುವ ಸಂಗತಿ ನಿರ್ವಿವಾದವಾದದ್ದು. ಪ್ರಾಚೀನ ಜಗತ್ತಿನ ನಾನಾ ಭಾಗಗಳಲ್ಲಿ ಈ ವಿಧಾನ ಸಾರ್ವತ್ರಿಕವಾಗಿ ಚಾಲ್ತಿಯಲ್ಲಿದ್ದುದೇ ಅದರ ಉಪಯುಕ್ತತೆಗೂ ಜನಪ್ರಿಯತೆಗೂ ಸಾಕ್ಷಿಯಾಗಿದೆ.

1 ಅದೇ, ಪುಟ ೧೦೩.

2 ಹೆಚ್ಚು ವಿವರಗಳಿಗೆ ಅದೇ ಗ್ರಂಥದ 'ನೃತ್ಯ' ಪ್ರಕರಣವನ್ನೋದಬಹುದು.

ನಾಟಕವೂ ಅಂಥವೇ ವಿಧಾನ ತಾನೆ. ಕಾವ್ಯ ತತ್ವನಾದರೆ ನಾಟಕ ಪ್ರಯೋಗ.

ಬೊಂಬೆ ಆಟ ಎರಡು ವಿಧವಾಗಿದೆ: ಒಂದು ಸೂತ್ರದ ಬೊಂಬೆ, ಎರಡು ತೊಗಲು ಬೊಂಬೆ. ಬೊಂಬೆಗಳ ಆಕೃತಿ ಮತ್ತು ರಂಗಮಂಟಪ ವಿನ್ಯಾಸ ವಿನಾ ಉಳಿದೆಲ್ಲ ಅಂಶಗಳಲ್ಲಿ ಅವು ಸಮಾನಗುಣವುಳ್ಳವು. ಹಳ್ಳಿಯ ಜನರಿಗೆ ಬಿಡುವಾದಾಗ ಇವುಗಳ ಪ್ರದರ್ಶನ ನಡೆಯುತ್ತದೆ. ಅದೊಂದು ಕಲೆಯಾದ್ದರಿಂದ ಕೆಲವರು ಮಾತ್ರ ಸತತಾಭ್ಯಾಸದ ಮೂಲಕ ಅದನ್ನುಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಅವರಿಗೆ ಅದೊಂದು ವೃತ್ತಿಯೂ ಅಹುದು. ಪ್ರದರ್ಶನಕ್ಕೆ ಬೇಕಾದ ರಂಗಸಜ್ಜಿಕೆ ಬಹು ಸುಲಭ. ಎಲ್ಲೆಂದರಲ್ಲಿ ಸಿಕ್ಕುವ ಗಳು ಕವೆ ಈಚಲ ಚಾಪೆ ಅಥವಾ ಮಾವಿನಸೊಪ್ಪು ಅದಕ್ಕೆ ಬೇಕಾಗುವ ಸಾಮಗ್ರಿ. ತೆರೆಗೊಂದು ಪಂಚೆ, ಒಂದೆರಡು ದೀಪಗಳಿದ್ದರೆ ಮುಗಿಯಿತು ರಂಗಸಜ್ಜಿಕೆ. ಗೊಂಬೆಗಳನ್ನು ಆಡಿಸಿ, ಹಾಡು ಹೇಳುವ ರಾಮುನಾಗಲಿ ಸೂತ್ರಧಾರನಾಗಲಿ, ಅವನಿಗೆ ನೆರವು ನೀಡುವ ಅವನ ಹೆಂಡತಿಯಾಗಲಿ ಸಹಾಯಕರಾಗಲಿ ಪ್ರೇಕ್ಷಕರಿಗೆ ಕಾಣಿಸುವುದಿಲ್ಲ. ಬೊಂಬೆ ಆಟಗಾರ ದೊಡ್ಡ ಕಲೆಗಾರ. ಒಂದು ರೀತಿಯಲ್ಲಿ ಅವನದು ಏಕಪಾತ್ರಾಭಿನಯ. ಕೈಚಳಕ, ಮಾತಿನ ಮೋಡಿ, ಗೊಂಬೆಗಳಿಗೆ ಜೀವಶಕ್ತಿ ನೀಡುವ ಕಲಾಸಾಮರ್ಥ್ಯದಿಂದ ಅವನು ಜನಮನದಲ್ಲಿ ಭಾವೋತ್ಕರ್ಷವನ್ನೂ ಕಲಾಭಿರುಚಿಯನ್ನೂ ಕೆರಳಿಸಬೇಕಾಗುತ್ತದೆ. ಜೀವಂತ ಪಾತ್ರಗಳು ಆಡಿತೋರಿಸಬೇಕಾದ ಕುಣಿತವನ್ನು, ಮಾಡಿತೋರಿಸಬೇಕಾದ ಅಭಿನಯವನ್ನು ರಾಮನೊಬ್ಬನೇ ಗೊಂಬೆಗಳ ಮೂಲಕ ತೋರಿಸಬೇಕಾಗುತ್ತದೆ; ಅಂದರೆ ಅವನು ಹಿಂದಿನಿಂದ ಗೊಂಬೆಗಳನ್ನು ಸಪ್ರಾಣಿಸಬೇಕಾಗುತ್ತದೆ. ಗೊಂಬೆಯಾಟದ ಮುಖ್ಯಾಂಶಗಳನ್ನು ಗೊರೂರವರು ಮುಂದೆ ಕಂಡಂತೆ ಪಟ್ಟಿಮಾಡಿದ್ದಾರೆ: (೧) ಕಥೆ ನಮಗೆ ತಿಳಿದದ್ದಾಗಿರುವುದು; (೨) ಆ ಕಥೆಯನ್ನು ನಾವು ಮೆಚ್ಚಿ ಅನುಭವಿಸಿ ಸುಖಿಸಲು ನಮ್ಮ ಮನಸ್ಸನ್ನು ಅಳವಡಿಸಿಕೊಳ್ಳುವುದು; (೩) ಆಟಗಾರನಿಗೆ ಕಥೆ ಚೆನ್ನಾಗಿ ತಿಳಿದಿರುವುದು; (೪) ಅವನು ಕಥೆಯನ್ನು ಹೇಳುವುದಕ್ಕೂ ಅವನ ಗೊಂಬೆಗಳು ಅಭಿನಯಿಸುವುದಕ್ಕೂ ಸಾಮರಸ್ಯವಿರುವುದು.[1]

ಬೊಂಬೆಯಾಟದ ಕಥೆ ಸಾಮಾನ್ಯವಾಗಿ ಪೌರಾಣಿಕವಾದದ್ದು. ಸೂತ್ರಧಾರನಾಗಲಿ ಗೊಂಬೆರಾಮನಾಗಲಿ ದೊಡ್ಡ ವಿದ್ಯಾವಂತನಲ್ಲ. ಹರಿಕಥೆ ಪುರಾಣ ಶ್ರವಣ ರಾಮಾಯಣ ಪಾರಾಯಣ ನಡೆಯುವಾಗ ಹಾಜರಿದ್ದು ಕತೆಗಳನ್ನು ಮನನಮಾಡಿಕೊಳ್ಳುತ್ತಾನೆ: ತಕ್ಕಮಟ್ಟಿಗೆ ಬರಹದಲ್ಲಿರುವುದನ್ನು ಓದಿಕೊಳ್ಳುತ್ತಾನೆ; ಭಾಗವತದಿಂದ ಹಾಡು ಕಟ್ಟಿಸಿಕೊಳ್ಳುತ್ತಾನೆ: ಭಾರತ ರಾಮಾಯಣಗಳ ಪದ್ಯಗಳನ್ನು ಗಟ್ಟಿಮಾಡಿಕೊಳ್ಳುತ್ತಾನೆ: ಅವನು ಜಾಣನಾದ್ದರಿಂದ ತಾನೇ ಕಥೆ ಹಾಡುಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಕಥೆ ಪೌರಾಣಿಕವಾದುದಾದರೂ, ನಡುನಡುವೆ ತನ್ನ ಅನುಭವಕ್ಕೆ ಬಂದ ಸಾಮಾಜಿಕ ಸಂಗತಿಗಳನ್ನು ಪೋಣಿಸುತ್ತಾನೆ. ಆಗಾಗ್ಗೆ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಾನೆ. ಅವನು ಪ್ರೇಕ್ಷಕರ ಮನಸ್ಸನ್ನರಿತವನಾದ್ದರಿಂದ, ಅವರ ಅಭಿರುಚಿಗೆ ತಕ್ಕಂತೆ ಮಾತುಕತೆ

[1] ಕಪ್ಪಿನ ಹಾಲು, ಪುಟ ೧೮೨.

ಗಳನ್ನು ಹೊಂದಿಸಿಕೊಳ್ಳುತ್ತಾನೆ; ಉಪಕಥೆಗಳನ್ನು ಜೋಡಿಸುತ್ತಾನೆ: ಗಾದೆ ಲಾವಣಿ ಜನಪದಗೀತೆಗಳನ್ನು ಸೇರಿಸುತ್ತಾನೆ. ಯಕ್ಷಗಾನ ಪ್ರವರ್ಧಮಾನಕ್ಕೆ ಬಂದ ನಂತರ ಆ ಕತೆಗಳನ್ನೇ ಇವರು ಬಳಸಿಕೊಂಡದ್ದುಂಟು.

ತೊಗಲುಗೊಂಬೆ ಹೆಸರೇ ಸೂಚಿಸುವಂತೆ ಚಕ್ಕಳದಿಂದ ಮಾಡಿದ್ದು. ಅದಕ್ಕೆ ಆಡಿನ ಮಣಕದ ಅಥವಾ ಎಳೆಯ ಹುಲ್ಲೆಯ ಚರ್ಮವನ್ನು ಬಳಸುತ್ತಾರೆ. ಹದಮಾಡಿದ ಚರ್ಮದಮೇಲೆ ರಾಮ ಸೀತೆ ರಾವಣ ಮೊದಲಾದವರ ಚಿತ್ರಗಳನ್ನು ಬರೆಯುತ್ತಾರೆ. ಚಿತ್ರಗಳಿಗೆ ಬಳಸುವ ಬಣ್ಣವಂತು ಗಿಡಮೂಲಿಕೆ ಹಾಗೂ ರಾಸಾಯನಿಕವಸ್ತುಗಳ ಪಾಕದಿಂದ ತಯಾರಿಸಿದ್ದು. ಸೂತ್ರದ ಬೊಂಬೆಗಳು ಮೃದುವಾದ ಮರದಿಂದ ತಯಾರಾದುವು. ಉತ್ತರ ಕರ್ಣಾಟಕದಲ್ಲಿ ಹಿಂದೆ ಕಿಟ್ಟದಿಂದಲೂ ತಯಾರಿಸುತ್ತಿದ್ದರಂತೆ.[1] ಆಯಾಯ ಪಾತ್ರಗಳಿಗೆ ಹೊಂದುವ ಬಣ್ಣಗಳನ್ನವುಗಳಿಗೆ ಹಚ್ಚುತ್ತಾರೆ. ವೇಷಭೂಷಣ ಗಳನ್ನು ತೊಡಿಸುತ್ತಾರೆ. ಇವುಗಳಿಗೆ ಗಾತ್ರ ಆಕಾರಗಳಿರುವುದರಿಂದ ತೊಗಲು ಗೊಂಬೆಗಳಿ ಗಿಂತ ಅಧಿಕ ರಮ್ಯವಾಗಿ ಶೋಭಿಸುತ್ತವೆ. ಚಿತ್ರ ಮರಾಠಿ ಜನರೆಂದು ಕರೆಯುಕೊಳ್ಳುವ, ಮರಾಠಿಯೇ ಮನೆಮಾತಾಗುಳ್ಳ ಕಿಳ್ಳೆಕೇತರೇ ತೊಗಲು ಬೊಂಬೆಯಾಟದ ಮೂಲ ಪುರುಷರೆಂದು ಹೇಳುವುದುಂಟು. ಕನ್ನಡನಾಡಿನಲ್ಲಿ ಕ್ಯಾತ ಎನ್ನುವ ಹೆಸರು ಅಧಿಕ ಪ್ರಸಾರ ಹೊಂದಿದೆ. ಒಂದಾನೊಂದು ಕಾಲದಲ್ಲಿ ಮಹಾರಾಷ್ಟ್ರ ಕರ್ನಾಟಕದ ಒಂದು ಭಾಗವಾಗಿತ್ತೆನ್ನುವುದನ್ನು ಮರೆಯಬಾರದು. ಅವರು ಇಲ್ಲಿಂದ ಅಲ್ಲಿಗೆ ಹೋಗಿ ಕನ್ನಡ ವನ್ನು ಮರೆತು, ಮತ್ತೆ ಇಲ್ಲಿಗೆ ಬಂದರೋ, ಅಲ್ಲಿಯವರೇ ಆಗಿದ್ದು ಇಲ್ಲಿಗೆ ವಲಸೆ ಬಂದರೋ, ಸ್ಪಷ್ಟವಾಗಿ ಹೇಳಲಾಗದು. ಅದೇನೇ ಇರಲಿ, ಇವೆರಡು ವಿಧದ ಆಟಗಳು ದ್ರಾವಿಡ ಜನಾಂಗದಲ್ಲಿ ಬಹು ಪ್ರಚುರವಾಗಿದ್ದುವೆಂತಲೂ, ಅವರು ತೆಂಕಣಕ್ಕೆ ಬಂದಾಗಿ ನಿಂದ ವಿವಿಧ ಪ್ರಕಾರವಾಗಿ ಬೆಳೆಸಿದರೆಂದೂ ಹೇಳಬಹುದಾಗಿದೆ. ಬೊಮ್ಮಲಾಟ, ಪಾವಕೂತು, ತೋಲ್‌ಪಾವ್ವ ಎಂಬ ಬೇರೆ ಬೇರೆ ಹೆಸರುಗಳಿಂದ ಬೊಂಬೆಯಾಟ ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕೇರಳಗಳಲ್ಲಿ ಪ್ರಸಿದ್ಧವಾಗಿದ್ದರೂ. ಆಂಧ್ರಪ್ರದೇಶ ಮತ್ತು ಕರ್ಣಾಟಕಗಳಲ್ಲಿ ಅವುಗಳ ವ್ಯವಸಾಯ ವ್ಯಾಪಕವಾಗಿ ಮುಂದುವರಿದಿದೆ. ಉತ್ತರ ಹಾಗೂ ದಕ್ಷಿಣ ಕರ್ಣಾಟಕಗಳಲ್ಲಿ ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಊರೂರಿಗೆ ಹೋಗಿ ಪ್ರದರ್ಶನ ಮಾಡುವ ಜನ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಸ್ವಾಭಾವಿಕವಾಗಿ ಹೊರಹೊಮ್ಮಿದ ಕುಣಿತ ಮುಂದೆ ಭೂತಾರಾಧನೆಯಾಗಿ. ಅನಂತರ ದೇವರ ಸೇವೆಯಾಗಿ ಎಂತು ಪರಿಣಮಿಸಿತೋ ಅಂತೆಯೇ ಬೊಂಬೆಯಾಟವೂ ಭೂತ ತೃಪ್ತಿಯ, ದೇವರ ಪ್ರೀತಿಸಂಪಾದನೆಯ ಸಾಧನೆಯಾಗಿ ಪ್ರಾರಂಭವಾಗಿರಬೇಕೆಂದು ತೋರುತ್ತದೆ. ಆದಿವಾಸಿ ಜನ ಭೂತದರೂಪದಲ್ಲಿ ದೇವರನ್ನು ಕಂಡರು: ಅನಂತರ ಪ್ರಾಣಿಯ ಹಾಗೂ ಮನುಷ್ಯನ ರೂಪದಲ್ಲಿ ಅವನನ್ನು ಆರಾಧಿಸಿದರು: ಮನುಷ್ಯಲೋಕ ದಿಂದ ಹೊರಗಿರುವ ಸರ್ವಶಕ್ತನ ಕಲ್ಪನೆ ಆವೇಳೆ ಅವನಲ್ಲಿ ಮೂಡಿತು: ಸರ್ವವ್ಯಾಪಕನಾದ.

1 ಜಾನಪದ ಸಾಹಿತ್ಯ ದರ್ಶನ–೨, ಪುಟ ೧೨೧.

ಅಚಿಂತ್ಯವೂ, ಅನಾದಿಯೂ ಆದ ಪರಬ್ರಹ್ಮನ ಕಲ್ಪನೆ ಮೂಡಿದ್ದು ತೀರ ಇತ್ತೀಚೆಗೆ. ಅದೇನೇ ಇರಲಿ, ತನ್ನ ಹಾನಿವೃದ್ಧಿಗಳಿಗೆ, ಒಳಿತು ಕೆಡಕುಗಳಿಗೆ ಕಾರಣವಾದ ವಸ್ತು ವೊಂದಿದೆ ಎಂದು ಅವನು ತಿಳಿಮಕೊಂಡಂದಿನಿಂದ ಅದರೊಡನೆ ಹೋರಾಡಲು ಇಲ್ಲವೆ ಅದನ್ನು ತೃಪ್ತಿಪಡಿಸಲು ಪ್ರಯತ್ನ ನಡೆಸುತ್ತಿದ್ದಾನೆ. ಭೂತ ಅಥವಾ ದೇವರ ಪ್ರತೀಕ ವಾದ ಮೂರ್ತಿಗಳನ್ನು ಕಟ್ಟಿಕೊಂಡು, ಹೊತ್ತುಕೊಂಡು ಮೆರೆದಾಡಿದನು; ಅವುಗಳಿಗೆ ಗುಡಿ ಕಟ್ಟಿಸಿದನು; ತನ್ನೆಲ್ಲ ಕಾರ್ಯಫಲಗಳನ್ನವುಗಳಿಗೆ ಅರ್ಪಿಸಿದನು. ಅವುಗಳ ಬಗ್ಗೆ ಕತೆ ಕಟ್ಟಿ ಹಾಡು ಹೆಣೆದು ಹಾಡಿದನು, ಆಡಿದನು; ಗೊಂಬೆನೂಡಿ, ಆ ಮೂಲಕ ದೇವರ ಮಹಿಮೆಯನ್ನು ಪ್ರದರ್ಶಿಸಿದನು.

ಕನ್ನಡನಾಡಿನ ಹದಿನೈದು ಹದಿನಾರನೆಯ ಸಾಹಿತ್ಯಕೃತಿಗಳಲ್ಲಿ ಮತ್ತು ಶಾಸನಗಳಲ್ಲಿ ಬೊಂಬೆಯಾಟದ ಉಲ್ಲೇಖಗಳು ಸಿಗುವುವಾದರೂ,[1] ಅದು ಇನ್ನೂ ಪ್ರಾಚೀನವೆಂಬುದು ಮಾತ್ರ ನಿರುತ. ಸಯಾಮ್, ಇಂಡೋಚೀನಾ, ಜಾವಾ ಮತ್ತು ಬಾಲಿ ದ್ವೀಪಗಳಲ್ಲಿ ಬೊಂಬೆಯಾಟಗಳು ಬಹು ಜನಪ್ರಿಯವಾಗಿವೆಯೆಂದೂ, ಬೊಂಬೆಗಾರರು ಮುಸ್ಲಿಮ ರಾದರೂ ಕಥಾವಸ್ತು ಭಾರತೀಯ ಇತಿಹಾಸಗಳಿಂದ ಆರಿಸಿದ್ದೆಂದೂ, ಗಂಗೈಕೊಂಡ ಚೋಳನ (೧೦೨೨-೧೦೪೨) ಕಾಲದಲ್ಲಿ ಈ ಕಲೆ ಕರ್ಣಾಟಕದಿಂದ ಪಯಣಿಸಿರ ಬೇಕೆಂದೂ ರಂಗನಾಥ್ ಅವರು ಊಹಿಸುತ್ತಾರೆ.[2] ಸಂಸ್ಕೃತ ನಾಟಕಗಳಲ್ಲಿ ಭಾಗವತನಿಗೆ ಸೂತ್ರಧಾರ ಎಂದು ಹೆಸರು. ಆ ಪದಕ್ಕೆ ಬೊಂಬೆಯಾಟವೇ ಮೂಲ ಎನ್ನುವ ಸಂಗತಿ ನಿರ್ವಿವಾದವಾದದ್ದು. ಅಂದಮೇಲೆ ಆ ಕಲೆ ಕ್ರಿಸ್ತಶಕೆಯ ಪ್ರಾರಂಭಕ್ಕಿಂತ ಹಿಂದಿನ ದೆಂದೂ, ಪ್ರಾಯಶಃ ದ್ರಾವಿಡ ಜನಾಂಗದಲ್ಲಿ ಬಳಕೆಯಾಗಿದ್ದಿರಬೇಕೆಂದೂ ಹೇಳಬಹು ದಾಗಿದೆ. ಕ್ರಿಸ್ತಪೂರ್ವ ಐದನೆಯ ಶತಮಾನದ ಗ್ರೀಕರಲ್ಲಿಯೂ ಈ ಕಲೆ ಪ್ರಚುರ ವಾಗಿತ್ತೆನ್ನುವುದಕ್ಕೆ ಸಾಕ್ಷಿಗಳಿವೆ. ಚೀನಾ ಜಪಾನ್ ದೇಶಗಳಲ್ಲಂತೂ ಅದು ಸರ್ವವ್ಯಾಪಕ ವಾಗಿತ್ತು. ಯೂರೋಪಿನ ಫ್ರಾನ್ಸ್ ಇಟಲಿ ಜರ್ಮನಿ ಸ್ಕಾಟ್ಲೆಂಡ್ ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಅದು ಇಂದಿಗೂ ಪ್ರಚಾರದಲ್ಲಿದೆ. ಅಲ್ಲಿಯೂ ವೀರ ಅಥವಾ ಪೌರಾಣಿಕ ಕತೆಗಳೇ ಕಲೆಯ ವಸ್ತು. "ಅಮೆರಿಕೆಯಲ್ಲಿ ಚಾರ್ಲಿಮೂಕಾರ್ತಿ ಮತ್ತು ಎಡ್ಗಾರ್ ಬರ್ಗನ್ ತುಂಬ ಜನಪ್ರಿಯ ಸೂತ್ರದ ಬೊಂಬೆ ಆಟಗಾರರಾಗಿದ್ದಾರೆ"[3] ಭಾರತದಿಂದ ಕ್ರಿಸ್ತಪೂರ್ವ ಕಾಲದಲ್ಲಿಯೇ ಪಾಶ್ಚಾತ್ಯ ದೇಶಗಳಿಗೆ ವಲಸೆಹೋದ ಜಿಪ್ಸಿ ಗಳು ಅದನ್ನು ಕೊಂಡೊಯ್ದಿರಬಹುದೇ ಎಂಬ ವಿಷಯ ವಿಚಾರಣೀಯವಾಗಿದೆ.

ಉತ್ತರ ಕರ್ಣಾಟಕದಲ್ಲಿ ಜಾತಿಗಾರರು ಅಥವಾ ಬಹುರೂಪಿಗಳು ಎಂಬ ವೇಷಗಾರ

---

[1] *The Kannada Theatre* by H. K. Ranganath, P. 43.

[2] *Ibid*, P. 46.

[3] ಕಜ್ಜಿಸ ಹಾಲು, ಪು. ೧೮೯. ಇದರಲ್ಲಿ ಅಚ್ಚಾಗಿರುವ ಸೂತ್ರವಬೊಂಬೆ ತೊಗಲುಗೊಂಬೆ ಯಾಟಗಳನ್ನೂ, ಯಕ್ಷಗಾನ ಬಯಲಾಟಗಳನ್ನೂ ಕುರಿತ ಲೇಖನಗಳಲ್ಲಿ ಸಾಕಷ್ಟು ಉಪಯುಕ್ತ ವಿಷಯಗಳಿವೆ.

ರಿದ್ದಾರೆ. ಊರೂರಿಗೆ ಸಂಚರಿಸುತ್ತ, ವೇಷಹಾಕಿ ಕುಣಿಯುತ್ತ ಹೊಟ್ಟೆಹೊರೆಯುವುದೇ ಅವರ ಕುಲಕಸಬು. ಎತ್ತುಗಳ ಮೇಲೆ ತಮ್ಮ ಸಾಮಾನು ಸರಂಜಾಮು ಹೇರಿಕೊಂಡು ಹೋಗುತ್ತಾರೆ. ಹಳ್ಳಿಯ ಹೊರವಳಯದಲ್ಲಿ ಬೀಡು ಬಿಡುತ್ತಾರೆ. "ಒಬ್ಬ ಪೇಟಿ ಬಾರಿಸುತ್ತ ಹಾಡು ಹೇಳುತ್ತ ಮುಂದಾದರೆ ತಾಳ ಕಟೆಯುವ ಇಬ್ಬರು ಹಿಮ್ಮೇಳದಲ್ಲಿ ಸೇರುತ್ತಾರೆ. ಪಾತ್ರಧಾರಿಗಳು ಹಾಡಿನ ತಾಳಲಯಕ್ಕೆ ಅನುಗುಣವಾಗಿ ಕುಣಿಯುತ್ತ ಮಾತು ಹೇಳಿ, ಹಾಡಿ ಹಾವಭಾವ ಪ್ರಕಟಿಸುವರು. ಈ ಆಟ ಚಲಿಸುವ ರಂಗಭೂಮಿಯಂತೆ ಶೋಭಿಸುತ್ತದೆ."[1] ಇತಿಹಾಸ ಪುರಾಣಗಳ ಭಾಗಗಳೇ ಇವರು ತಮ್ಮ ಪ್ರಸಂಗಗಳಿಗೆ ಬಳಸುವ ವಸ್ತು. ವೇಷಗಾರ ಯಾವ ಪಾತ್ರವನ್ನಾದರೂ ಹಾಕಬಲ್ಲ ಸಾಮರ್ಥ್ಯವುಳ್ಳವನಾದ್ದರಿಂದ ಅವನನ್ನು ಬಹುರೂಪಿಯೆಂದು ಕರೆಯುವುದುಂಟು. "ತಮ್ಮ ನಡೆನುಡಿಯಿಂದ ಜನತೆಯನ್ನು ರಂಜಿಸಿ ಧರ್ಮ, ತತ್ವ, ನೀತಿಗಳನ್ನು ಬಿತ್ತಿಬೆಳೆಯುವಲ್ಲಿ ಈ ಜನಾಂಗದವರು ಮಾಡಿದ ಸೇವೆ ಅನುಪಮವಾದುದು."[2] ವಿವಿಧ ವೇಷಧಾರಣೆಯನ್ನೇ ಕಾಯಕವನ್ನಾಗಿ ಮಾಡಿಕೊಂಡಿದ್ದ ಬಹುರೂಪಿ ಚೌಡಯ್ಯನ ಹೆಸರು ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಎದ್ದು ಕಾಣುವಂಥದು. ಕಲಾಸಾಮರ್ಥ್ಯದ ಬಗ್ಗೆ ಈ ಬಹುರೂಪಿಗಳಲ್ಲಿ ಆಗಾಗ್ಗೆ ಸ್ಪರ್ಧೆ ನಡೆಯುತ್ತಿತ್ತೆಂಬ ಸಂಗತಿ ಅವನಿಗೂ ದಶಾವತಾರದ ವೇಷಗಳಲ್ಲಿ ಸಮರ್ಥನಾಗಿದ್ದ ಯಕ್ಷನಾಥನಿಗೂ ನಡೆದೊಂದು ಸ್ಪರ್ಧೆಯಿಂದ ವೇದ್ಯವಾಗುತ್ತದೆ. ಆ ಕಾಲಕ್ಕೆ ಮತ್ತು ಇನ್ನೂ ಹಿಂದೆ ಇದೊಂದು ಜನಪ್ರಿಯ ಕಲೆಯಾಗಿತ್ತೆಂಬ ವಿಚಾರ ಈ ಸಂಗತಿಯಿಂದ ಸ್ಪಷ್ಟವಾಗುತ್ತದೆ. "ಇದನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದರೆ ಬಯಲಾಟದ ಮೂಲವು ಈ ವೇಷಗಾರರ ಆಟಪಾಟವಲ್ಲಿದ್ದುದು ಸ್ಪಷ್ಟವಾಗಿ ತಿಳಿದುಬರುವುದು"[3] ಎಂಬ ಸುಂಕಾಪುರ ಅವರ ಅಭಿಪ್ರಾಯ ಗಮನಾರ್ಹವಾದದ್ದು.

ಹಿಂದಿನ ಕಾಲದಲ್ಲಿದ್ದಷ್ಟು ಶಿಕ್ಷಣ ಪ್ರಸಾರ ಮಾಧ್ಯಮಗಳು ಈ ಹೊತ್ತಿಲ್ಲ. ಈಗ ಅವುಗಳ ಸ್ಥಾನವನ್ನು ರೇಡಿಯೋ ಟೆಲಿವಿಷನ್ ವೃತ್ತಪತ್ರಿಕೆ ಶಾಲೆ ಕಾಲೇಜುಗಳು ಆಕ್ರಮಿಸಿಕೊಂಡಿವೆ. ಕೀರ್ತನಕಾರರು, ಹರಿಕಥೆ ದಾಸರು, ಪುರಾಣಿಕರು, ಜಂಗಮರು, ಕಾಲಜ್ಞಾನಿಗಳು, ಗೊರವರು, ಗಮಕಿಗಳು, ಗೊಂದಲಿಗರು, ಕರಪಾಲ ಮೇಳದವರು, ಜೋಗಿಗಳು, ಕಥೆಗಾರರು, ಲಾವಣಿಕಾರರು, ಹೆಳವರೇ ಮೊದಲಾದ ಕಥೋಪಜೀವಿಗಳು, ಕೊರವಂಜಿಯರು, ಓದುವವರು—ಇವರೇ ಸಂಸ್ಕೃತಿಯ ಜ್ಯೋತಿಯನ್ನು ಬೆಳಗಿದವರು. ರಾತ್ರಿಯೆಲ್ಲ ಯಕ್ಷಗಾನ ಶನಿ ಕಥೆಯನ್ನೋ ನಳನ ಕಥೆಯನ್ನೋ ಓದಿ ವ್ಯಾಖ್ಯಾನ ಮಾಡುತ್ತಿದ್ದವರನ್ನು ಓದುವವರೆಂದು ಕರೆಯುತ್ತಿದ್ದುದುಂಟು. ಇಬ್ಬರು

1 ಬಯಲಾಟದ ಪ್ರಕಾರಗಳು : ಜಾನಪದ ಸಾಹಿತ್ಯ ದರ್ಶನ ೩ ; ಲೇಖಕರು : ಎಂ. ಎಸ್. ಸುಂಕಾಪುರ ಅವರು. ಜಾತಿಗಾರರಿಗೆ ಸಂಬಂಧಿಸಿದ ವಿವರಗಳು ಈ ಲೇಖನದಲ್ಲಿ ಸಿಗುತ್ತವೆ.

2 ಅದೇ, ಪುಟ ೧೨೨.

3 ಅದೇ, ಪು. ೧೨೩.

ಓದಿದರೆ, ಮತ್ತೊಬ್ಬ ವ್ಯಾಖ್ಯಾನ ಮಾಡುತ್ತಿದ್ದನು. ಇದೇ ರೀತಿಯಲ್ಲಿ ಭಾರತ ರಾಮಾಯಣಗಳನ್ನು ಸಹ ಹಳ್ಳಿಗರು ಓದಿಸಿ ಕೇಳುತ್ತಿದ್ದರು. ಕೆಲವರಂತು ಓದುವಾಗ ಕುಳಿತುಕೊಂಡೆ ಮುಖ ಹಸ್ತಾಭಿನಯಗಳನ್ನು ಸಹ ಪ್ರದರ್ಶಿಸುತ್ತಿದ್ದುದುಂಟು. ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ, ಜನತೆಯಲ್ಲಿ ಜಾಗೃತಿಯುಂಟುಮಾಡುವುದರಲ್ಲಿ ಕೀರ್ತನಕಾರರ ಹಾಗೂ ಗಮಕಿಗಳ ಪಾತ್ರ ಮಹತ್ತರವಾದುದು.

ಈ ಎಲ್ಲ ಕಲಾಪ್ರಕಾರಗಳು ಏಕಕಾಲದಲ್ಲಿ ಉಗಮಗೊಂಡುವೆಂದು ಹೇಳಲಾಗದಿದ್ದರೂ, ತುಂಬ ಹಿಂದಿನವೆಂದೂ, ಅಂದಂದಿನ ಕಲಾಭಿರುಚಿ ಕಲಾಧರ್ಮಗಳಿಗೆ ಅವು ಕನ್ನಡಿಯಂತಿದ್ದು, ಆಯಾಯ ಕಾಲದ ಜನತೆಯ ಆಶೆನಿರಾಶೆಗಳ ಅಭಿವ್ಯಕ್ತಿ ಮಾಧ್ಯಮಗಳಾಗಿದ್ದುವೆಂದೂ, ಅವು ಪರಂಪರಾಗತವಾಗಿ ಪೀಳಿಗೆಯಿಂದ ಪೀಳಿಗೆಗೆ ಬಂದುವೆಂದೂ ಹೇಳಬಹುದಾಗಿದೆ. ಅವು ಬಿಡಿಬಿಡಿಯಾಗಿ, ಒಟ್ಟಾಗಿ ಯಕ್ಷಗಾನ ಕಲೆಯ ಉಗಮ ವಿಕಾಸಗಳಿಗೆ ಕಾರಣವಾದುವೆಂದೂ, ಅದರ ಆವಿರ್ಭಾವಕ್ಕೆ ಮೊದಲೇ ವೇದಿಕೆ ಸಿದ್ಧವಾಗಿತ್ತೆಂದೂ, ಅದರ ಲಕ್ಷಣಗಳು ಆ ಕಲೆಗಳಲ್ಲಿಯೇ ಮೂರ್ತತ್ವವನ್ನು ಪಡೆದಿದ್ದುವೆಂದೂ ಸಂದೇಹದೂರವಾಗಿ ಸಮರ್ಥಿಸಬಹುದು. ಯಕ್ಷಗಾನ ಬಯಲಾಟ ಎಲ್ಲ ಜಾನಪದ ಸಾಹಿತ್ಯದಂತೆ ಮೌಖಿಕ ಸಂಪ್ರದಾಯದ ಕಲೆಯಾದ್ದರಿಂದ ಅದರ ತಲಕಾವೇರಿ ಯಾವುದು, ಅದು ನಡೆದುಬಂದ ದಾರಿ ಯಾವುದು ಎನ್ನುವುದನ್ನು ಗುರುತಿಸುವುದು ಕಷ್ಟವಾಗುತ್ತದೆ. ಅದು ಅಪ್ಪಟ ಸ್ವದೇಶೀ ಕಲೆ, ಅದರ ತಾಯಿಬೇರು ಈ ನೆಲದಲ್ಲಿಯೇ ಹುದುಗಿದೆ ಎಂದು ಪ್ರಾಜ್ಞರು ಸ್ಪಷ್ಟಪಡಿಸಿದ್ದಾರೆ.

ಈ ವಿಷಯದಲ್ಲಿ ಚೂಲಮೂಲವಾಗಿ ಸಂಶೋಧನೆ ನಡಸಿರುವ ಎಚ್. ಕೆ. ರಂಗನಾಥ್ ಅವರ ಅಭಿಪ್ರಾಯಗಳು ಸಮರ್ಥನೀಯವಾದ್ದರಿಂದ ಅವುಗಳನ್ನಿಲ್ಲಿ ಸಂಗ್ರಹಿಸಿದೆ. ಕನ್ನಡದಲ್ಲಿ ನಾಟಕವೆಂದರೆ ಕಥನಾತ್ಮಕ ನೃತ್ಯ. ನೃತ್ಯ ಮತ್ತು ಅಭಿನಯಗಳಿಂದ ಕೂಡಿದ ನಾಟ್ಯಕ್ಕೂ ಅದೇ ಹೆಸರು. ಅಭಿನವ ಮಂಗರಾಜನ ಪ್ರಕಾರ "ನೃತ್ಯದೊಳು ಹಸ್ತಾಂಗ ದೃಷ್ಟಿ ಗತಿ ಪದ್ಧತಿಯೊಳಾಡೆ ನಾಟಕಮೆನಿಕ್ಕುಂ" ಪಂಪ ನೀಲಾಂಜನೆಯ ನೃತ್ಯವನ್ನು ನಾಟಕವೆಂದೇ ಕರೆದಿದ್ದಾನೆ. ಈ ನಾಟಕವೇ ಯಕ್ಷಗಾನವಾಗಿರಬೇಕು; ಸಾಂಕೇತಿಕ ನೃತ್ಯನಾಟಕವಾಗಿರಬೇಕು. ಅದರಲ್ಲಿ ಮಾತಿನ ಸುಳಿವಿಲ್ಲ. ಅದು ಆಸ್ಥಾನಿಕರಿಗಾಗಿ ರಾಜಾಲಯದಲ್ಲಿ ನಡೆಯುತ್ತಿದ್ದ ನಾಟಕವಾಗಿದ್ದು ಜನಪದರಿಗಾಗಿ ಪ್ರದರ್ಶನವಾಗುತ್ತಿದ್ದ 'ಆಟ'ದಿಂದ ಬೇರೆಯಾಗಿತ್ತು. ಭಟ್ಟಾಕಳಂಕ, ಅಗ್ಗಳ, ಅಭಿನವಪಂಪ, ದುರ್ಗಸಿಂಹ ಮತ್ತು ಕೇಶಿರಾಜರ ಹೇಳಿಕೆಯ ಆಧಾರದಿಂದ ಸಂಸ್ಕೃತ ನಾಟಕಗಳು ಹತ್ತನೆಯ ಶತಮಾನದಿಂದಲೇ ಕನ್ನಡಕ್ಕೆ ತರ್ಜುಮೆ ಹೊಂದುತ್ತಿರಬೇಕೆಂದೂ, ಪಂಡಿತರಿಗಾಗಿ ಪಂಡಿತರಿಂದ ಅವು ಪ್ರದರ್ಶನಗೊಳ್ಳುತ್ತಿದ್ದುವೆಂದೂ, ಪಾಮರರಿಗಾಗಿ ಜನಪದ ನಾಟಕವಿರುತ್ತಿತ್ತೆಂದೂ ಹೇಳಬಹುದಾಗಿದೆ. ಪಂಡಿತ ನಾಟಕ ಮಂದಿರಕ್ಕಿಂತ ಪಾಮರರಂಗಮಂದಿರ ಪ್ರಾಚೀನವಾದುದು. ಕ್ರಿಸ್ತಶಕೆಯ ಆದಿಯಲ್ಲಿ, ಅಂದರೆ ಸಂಗಮಯುಗದಲ್ಲಿ ಕನ್ನಡನಾಡಿನ ಒಂದು ಭಾಗವಾಗಿದ್ದ ಸೇಲಗಿರಿಗೆ ಚೇರದೊರೆ ಶಂಗುಟ್ಟುವನ್ (Sanguttuvan)

ಬಂದಿದ್ದಾಗ ಅವನ ಗೌರವಾರ್ಥವಾಗಿ ನೂರಿಪ್ಪತ್ತು ಮಂದಿ ಕನ್ನಡ ಸ್ತ್ರೀ ಪಾತ್ರಧಾರಿಗಳೂ ನರ್ತಕನರ್ತಕಿಯರೂ ಕಲಾಮೇಳವನ್ನೇರ್ಪಡಿಸಿದ್ದರೆಂದು ತಮಿಳು ಮಹಾಕಾವ್ಯ ಶಿಲಪ್ಪದಿಕಾರಮ್ ಗ್ರಂಥದಲ್ಲಿ ಉಲ್ಲೇಖವಿದೆ. ನಟನರ್ತಕಿಯರ ಕಲಾಚಾತುರ್ಯ, ವೇಷಭೂಷಣ ಹಾಗೂ ನೃತ್ಯ ಸಂಗೀತಗಳ ವರ್ಣನೆ ಆ ಗ್ರಂಥದಲ್ಲಿದೆ. ಆವೇಶಪೂರ್ಣವಾದ ಕುಣಿತದೊಡಗೂಡಿದ ಸಂಗೀತವೇ ಯಕ್ಷಗಾನವೆನ್ನುವುದು ಗೋವಿಂದ ದೀಕ್ಷಿತನ ಅಭಿಮತ. ಶಿಲ್ಪಿ ಜಕಣಾಚಾರ್ಯನನ್ನು ನೆನಪಿಗೆ ತರುವ ಯಕ್ಕಲಗಾನ ಅಥವಾ ಜಕ್ಕಲಿಗಾನದ ವಾಸನೆ ಸಹ ಉತ್ತರದಲ್ಲಿಲ್ಲದಿರುವುದರಿಂದ ಅದು ದಕ್ಷಿಣಗಾನವೇ ಸರಿ. ಕವಿರಾಜಮಾರ್ಗದಲ್ಲಿ ಉಲ್ಲೇಖಗೊಂಡಿರುವ ನಾಬ್ಬಿಗರಣ ದೇಶಿನಾಟಕವೇ ಅಹುದು. ಪಗರಣವೇ ಸಂಸ್ಕೃತದ ಪ್ರಕರಣವಾಗಿರಬೇಕು. ಆರ್ಯರು ಈ ದೇಶಕ್ಕೆ ಬರುವ ಮುನ್ನವೇ ದ್ರಾವಿಡರಲ್ಲಿ ರಂಗಕಲೆ ಬೆಳೆದಿರಬೇಕು. ಆದರೆ ಅದು ಇಂದಿನ ಯಕ್ಷಗಾನ ಕಲೆಗಿಂತ ಬೇರೆಯಾಗಿರಬೇಕು. ಆಗ ಬಳಕೆಯಲ್ಲಿದ್ದ ಕಥೆಗಳೂ ಭಿನ್ನವಾಗಿರಬೇಕು. ಯಕ್ಷರು ದಾಕ್ಷಿಣಾತ್ಯರು. ನಟ ಎನ್ನುವುದು ದ್ರಾವಿಡಪದ. ಅದರಿಂದ ನಾಟ್ಯ. ನೃತ್ಯ ಮತ್ತು ಅಭಿನಯಗಳುಳ್ಳದ್ದು ನಾಟ್ಯ. ಪಂಚಮವೇದವೆಂದು ಹೆಸರಾಗಿರುವ ಭರತನ ನಾಟ್ಯಶಾಸ್ತ್ರ ಉಗಮಿಸಿದ್ದು ಆರ್ಯರಲ್ಲಲ್ಲ. ನಾಟ್ಯಶಾಸ್ತ್ರ ವರ್ಣಿಸಿರುವ ತಂತ್ರವಿಧಾನಗಳು ಕನ್ನಡದ ಬಯಲಾಟ, ತಮಿಳಿನ ತೆರುಕೂತ್ತು ಮತ್ತು ತೆಲುಗಿನ ವೀಧಿ ನಾಟಕಗಳನ್ನು ಹೋಲುತ್ತವೆ. ಅದರಲ್ಲಿ ದ್ರಾವಿಡ ಸತ್ವ ಹರಿಯುತ್ತಿರುವಂತೆ ತೋರುತ್ತದೆ. ಆ ಶಾಸ್ತ್ರದ ಬೆಳವಣಿಗೆಗೆ ದ್ರಾವಿಡರ ಪಾತ್ರ ಅಪಾರವಾದದ್ದು. ಭಾಗವತನೇ ಸಂಸ್ಕೃತ ನಾಟಕಗಳ ಸೂತ್ರಧಾರನಾದ. ನಾಟ್ಯಶಾಸ್ತ್ರ ಸಂಗೀತ ನೃತ್ಯಗಳಿಗೆ ತುಂಬ ಪ್ರಾಶಸ್ತ್ಯ ನೀಡಿದೆ. ಸಂಸ್ಕೃತ ನಾಟಕಗಳಲ್ಲಿ ಅವಕ್ಕೆ ಪ್ರಾಮುಖ್ಯತೆಯಿಲ್ಲ. ಯಕ್ಷಗಾನದಲ್ಲಿ ಅವುಗಳಿಗೇ ಆದ್ಯತೆ. ತನ್ನ ವಿವೇಕ ಚೂಡಾಮಣಿಯಲ್ಲಿ ನಿಜಗುಣ ಶಿವಯೋಗಿ ಉಲ್ಲೇಖಿಸಿರುವ ಶುದ್ಧ ದೇಶ್ಯ ನೃತ್ಯನಾಟಕ ಯಕ್ಷಗಾನಕ್ಕೆ ಹತ್ತಿರವಾದದ್ದು. ಕುಮಾರವ್ಯಾಸನ ನಾಡಾಡಿಗಳ ನಾಟಕ ಇದೇ ಆಗಿದೆ. ಭರತೇಶ ವೈಭವದ ಆಸ್ಥಾನ ಸಂಧಿಯಲ್ಲಿ ಬರುವ ಯಕ್ಷವಿದರು ಎನ್ನುವ ಪದ ಯಕ್ಷಗಾನದ ನಟರನ್ನು ಸೂಚಿಸುತ್ತದೆ. ಮಹಾರಾಷ್ಟ್ರ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳ ಜನಪದ ನಾಟಕಗಳಿಗೆ ಯಕ್ಷಗಾನವೇ ಮೂಲ.

ಸದ್ಯಕ್ಕೆ ರಂಗನಾಥ್ ಅವರ ಈ ವಾದವನ್ನೊಪ್ಪಬಹುದೆಂದು ತೋರುತ್ತದೆ.[1] ಮೂರು ವಿಧವಾದ ನಾಟಕಗಳು ಹತ್ತನೆಯ ಶತಮಾನದ ಸುಮಾರಿನಲ್ಲಿ ಕರ್ನಾಟಕದಲ್ಲಿ ಬಳಕೆಯಲ್ಲಿದ್ದಿರಬೇಕೆಂಬ ಅರ್ಥ ಬರುವಂತೆ ವಿವರಣೆ ನೀಡಿದ್ದಾರೆ. ಪಾಮರರಿಗೆಂದು ಆಟ, ಆಸ್ಥಾನಿಕರಿಗೆಂದು ನೃತ್ಯನಾಟಕ. ಪಂಡಿತರಿಗೆಂದು ಸಂಸ್ಕೃತದಿಂದ ಅನುವಾದ

1 *The Karnataka Theatre* ಎಂಬ ಅವರ ಗ್ರಂಥದ ಕೆಲವು ಭಾಗಗಳ ಸಾರವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಅವರ ವಾದರಚನೆಯ [illegible] ಗಳನ್ನಿಲ್ಲಿ ಉದ್ಧರಿಸಿಲ್ಲ. ಅವುಗಳನ್ನು ತಿಳಿಯಬಯಸುವವರು ಮೂಲದ ಕಡೆ ಕಣ್ಣು ಹಾಯಿಸಬೇಕು.

ಗೊಂಡ ರೂಪಕಗಳು ಪಟ್ಟಿಗೊಂಡಿವೆ. ಯಕ್ಷಗಾನದಂತೆ ನೃತ್ಯನಾಟಕವೂ ಪಾಮರ ಕಲೆಯಾಗಿದ್ದಿರಬೇಕೆಂದು ತೋರುತ್ತದೆ. ಅದರಲ್ಲಿ ಪಾತ್ರ ಹಾಕುತ್ತಿದ್ದವರು ಪಾಮರರು. ಅವರಿಗೆ ಹಾಡುಗಾರಿಕೆಯಾಗಲೀ ಮಾತಾಗಲೀ ಕಷ್ಟವಾಗುತ್ತಿತ್ತು. ಸೂತ್ರದಬೊಂಬೆ ಯಕ್ಷಗಾನವಾಗಿ ಪರಿವರ್ತನೆಹೊಂದುತ್ತಿದ್ದ ಕಾಲವದು. ಸೂತ್ರಧಾರ ಅಥವಾ ಭಾಗವತ ಸರ್ವಾಧಿಕಾರಿಯಾಗಿ ಹೆಚ್ಚು ತಿಳಿಯದ ನಟರನ್ನು ಹೇಗೆಂದರೆ ಹಾಗೆ ಆಡಿಸುತ್ತಿದ್ದಿರಬೇಕು; ಅದೇ ಪರಿಪಾಠ ಎಂದೆಂದಿಗೂ ಮುಂದುವರಿಯಿತು. ಆದ್ದರಿಂದ ನೃತ್ಯನಾಟಕವೆಂದರೆ ಯಕ್ಷಗಾನವೆಂದು ನಿಸ್ಸಂದೇಹವಾಗಿ ಹೇಳಬಹುದು. ಆಟ ಎಂಬ ಪದದಿಂದ ನಟ ಎಂಬ ಪದ ಬಂದಿದೆಯೋ, ಅಥವಾ ಅವು ಬೇರೆ ಬೇರೆ ಮೂಲದಿಂದ ಬಂದಿವೆಯೋ ಈಗ ಸ್ಪಷ್ಟವಿಲ್ಲ. ಆದರೆ ಎಲ್ಲ ತರಹೆವಾರಿ ಕುಣಿತಗಳಿಗೂ ನಾಟಕಗಳಿಗೂ ಆಟ ಎಂಬ ಪದವೇ ಸರ್ವಸಾಮಾನ್ಯವಾಗಿ ಪ್ರಾಚೀನಕಾಲದಿಂದ ರೂಢಿಯಲ್ಲಿರುವುದರಿಂದ ಅದಕ್ಕೂ ನಟ ಎಂಬ ಪದಕ್ಕೂ ಹತ್ತಿರದ ನಂಟಿರಬೇಕೆಂಬ ಊಹೆ ತಪ್ಪಾಗಲಾರದು.

ಸಾಮಾನ್ಯವಾಗಿ ಯಕ್ಷಗಾನವೆಂದರೆ ಯಕ್ಷರ ಗಾನ; ವೈದಿಕ ಬೌದ್ಧಿಕ ಜೈನ ಸಾಹಿತ್ಯಗಳಲ್ಲಿ ಯಕ್ಷರೊಂದು ಜಾತಿಯ ಜನ; ವಾತ್ಸ್ಯಾಯನನ ಪ್ರಕಾರ ಯಕ್ಷರಾತ್ರಿ ಎಂಬುದೊಂದು ಕ್ರೀಡಾ ವಿಶೇಷ; ಜಕ್ಕುಲು ಎಂಬ ಹೆಸರಿನ ಜನ ಗುಂಟೂರು ಗೋದಾವರಿ ಜಿಲ್ಲೆಗಳಲ್ಲಿ ಈಗಲೂ ಇದ್ದಾರೆ. ಕೊರವಂಜಿಗಳೇ ಯಕ್ಷಗಾನಗಳಾಗಿರಬೇಕು ಎಂದು ಕೆಲವರೂ, ಗೊಂಬೆಯಾಟವೇ ಯಕ್ಷಗಾನವಾಯಿತೆಂದು ಬೇರೆಯವರೂ, ಹರಿಕಥೆ ಅಥವಾ ಕಥಕ್ಕಳಿ ಅದಕ್ಕೆ ಮೂಲವಾಗಿರಬೇಕೆಂದು ಇತರರೂ, ಸಂಸ್ಕೃತ ರೂಪಕವೇ ಆ ರೂಪ ಪಡೆಯಿತೆಂದು ಮಾರ್ಗಾನುಯಾಯಿಗಳೂ, ಹೀಗೆ ತಂತಮ್ಮ ವಾದಗಳನ್ನು ಮುಂದಿಟ್ಟುಕೊಂಡು ವಿದ್ವಾಂಸರು ಆಂಧ್ರಪ್ರದೇಶದ ಯಕ್ಷಗಾನದ ಮೂಲವನ್ನು ಶೋಧಿಸಲು ತೊಡಗಿದ್ದಾರೆ.[1] ಆದರೆ ಆ ಸಂಶೋಧಕರ ಅಧ್ಯಯನ ಆಳವಾಗಿದ್ದಂತೆ, ತೌಲನಿಕವಾಗಿದ್ದಂತೆ ತೋರುವುದಿಲ್ಲ. ಆದ್ದರಿಂದ ರಂಗನಾಥ್ ಅವರ ನಿರ್ಣಯಗಳಿಗೆ ಅಪೋಹ ಒದಗುವುದಿಲ್ಲ.

ಮೇಲಣ ಚರ್ಚೆಯಿಂದ ನೃತ್ಯದಂತೆ ಜಾನಪದ ನಾಟಕವೂ ಮತೀಯ ಸಂಪ್ರದಾಯದ ಒಂದು ಭಾಗವಾಗಿ ಉದಯವಾಯಿತೆಂದೂ, ಇಡೀ ನಾಟಕಕಲೆಗೆ ಜಾನಪದ ನಾಟಕವೇ ಬುನಾದಿಯೆಂದೂ ಧಾರಾಳವಾಗಿ ಹೇಳಬಹುದು.[2] ಅದು ಭರತನಾಟ್ಯದಿಂದ ಅಥವಾ ಕಥಕ್ಕಳಿಯಿಂದ ಉದ್ಭವವಾಯಿತೆಂದು ಹೇಳುವುದು ಸರಿಯಲ್ಲವೆಂದು ಶಿವರಾಮಕಾರಂತರು ಸ್ಪಷ್ಟಪಡಿಸಿದ್ದಾರೆ. ಆದರೆ ಅವರು ಹೇಳುವಂತೆ ನಾಗನೃತ್ಯವೊಂದಕ್ಕೇ ಅದರ ಉಗಮವನ್ನಾರೋಪಿಸುವುದು ಕಷ್ಟವಾಗುತ್ತದೆ. ಯಕ್ಷ್ ಎಂದರೆ ಯಜ್ಞಮಾಡು ಅಥವಾ ಪೂಜಿಸು ಎಂಬ, ಯಕ್ಷ ಎಂದರೆ ಪೂಜಿಸುವವನೂ ಎಂಬ

---

[1] ತೆಲುಗು ಯಕ್ಷಗಾನಗಳು : ಕಬ್ಬಿನ ಹಾಲು–ಅರ್ಫೀಯಸ್ ಸುಂದರಂ.

[2] Like the dance, the popular drama is of religious origin and, all dramatic art being ultimately derived from the popular type—*The Science of Folklore* by A. H. Krappe, P. 308.

ಅರ್ಥಗಳಿವೆ. ಅವರು ದಾಕ್ಷಿಣಾತ್ಯರು; ಯಕ್ಷಗಾನ ಎಂದರೆ ದೇಶೀಯ ಗಾನಪದ್ಧತಿ: ನಾಬ್ಬಿಗರಣವೇ ಯಕ್ಷಗಾನ ಎಂದು ಮುಳಿಯ ತಿಮ್ಮಪ್ಪಯ್ಯನವರು[1] ವ್ಯಾಖ್ಯಾನ ನೀಡಿದ್ದಾರೆ. ಆದರೆ ಈಗಿನ ಮಟ್ಟಿಗೆ, ಯಕ್ಷಗಾನದ ಬೇರುಗಳ ಚಾಚು ಕ್ರಿಸ್ತಶಕೆಯ ಪ್ರಾರಂಭದ ತನಕ ಗೋಚರಿಸುತ್ತದೆಯೆ ಹೊರತು, ಅದರಿಂದಾಚೆಗಿನ ಮುಂದುವರಿಕೆ ಕಾಣಿಸದ ಹಾಗೂ ಊಹಿಸಲಾಗದ ಕಾಲಗರ್ಭದಲ್ಲಿ ಹೂತುಹೋಗಿದೆಯೆಂದು ನಿರ್ಣಯಿಸಬಹುದಾಗಿದೆ.

ಯಕ್ಷಗಾನ ಮೊದಲು ಸಂಗೀತದ ಒಂದು ಪ್ರಭೇದವಾಗಿರಬೇಕೆಂಬುದು ಸ್ಪಷ್ಟ; ಪ್ರಭೇದ ಎನ್ನುವುದಕ್ಕಿಂತ ಮಾರ್ಗಸಂಗೀತಕ್ಕೆ ಮೂಲವಾದ ದೇಶಿ ಅಥವಾ ಜನಪದ ಸಂಗೀತವೆಂದರೆ ತಪ್ಪಾಗಲಾರದು. ಜನಪದ ಕುಣಿತ ಮತ್ತು ಯಕ್ಷಗಾನ ಎರಡೂ ಸೇರಿ ಜನಪದ ನಾಟಕವಾಯಿತು. ತಾಳಮದ್ದಲೆಯಲ್ಲಿ ಗಾನ ತಾನೇ ಪ್ರಧಾನ. ಯಕ್ಷಗಾನ ನಳಚರಿತ್ರೆ, ಯಕ್ಷಗಾನ ಶನಿಮಹಾತ್ಮೆ ಇವು ಸಹ ಮುಖ್ಯವಾಗಿ ಸಂಗೀತ ಕೃತಿಗಳು. ಇವೆಲ್ಲ ಹಾಡುಗಳು; ಗಂಡಸರ ಹಾಡುಗಳು. ಅಂದಮೇಲೆ ಮೂಲತಃ ಅದೊಂದು ವಿಶಿಷ್ಟ ಸಂಗೀತ ಪ್ರಕಾರವೆನ್ನುವುದರಲ್ಲಿ ಸಂಶಯವಿಲ್ಲ. ಆದ್ದರಿಂದಲೇ ನಾಟಕಕ್ಕೆ ಯಕ್ಷಗಾನ ಬಯಲಾಟ ಎಂಬ ಹೆಸರು ಬಂತು. ಅದರ ಮೂಲದ ಹೆಸರು ಬಯಲಾಟವೆಂಬುದೇ ನಿರುತ. ಬಯಲಾಟದ ಉಪಾಧ್ಯವಾಗಿ, ಸೂತ್ರಧಾರನಾಗಿ, ಮಣೇಗಾರನಾಗಿ, ಗಾಯಕನಾಗಿ, ಎಲ್ಲ ಹೊಣೆಗಳನ್ನು ಹೊತ್ತವನಾಗಿ ಮೆರೆಯುವ ಭಾಗವತನಿಂದ, ಭಾಗವತಕ್ಕೆ ಮತ್ತು ಭಗವಂತನಿಗೆ ಸಂಬಂಧಿಸಿದ ಕಥೆಗಳನ್ನೇ ನಾಟಕದ ವಸ್ತುವಿಗೆ ಆಯ್ದುಕೊಳ್ಳುತ್ತಿದ್ದುದರಿಂದ ಅದಕ್ಕೆ ಭಾಗವತರಾಟ ಎಂಬ ಹೆಸರು ರೂಢಿಯಾಯಿತು. ವಿಷ್ಣುವಿನ ಹತ್ತು ಅವತಾರಗಳ ಕಥೆಗಳು ಅದರ ಸಾಮಗ್ರಿಯಾಗಿ, ಅದಕ್ಕೆ ದಶಾವತಾರದ ಆಟ ಅಥವಾ ಕಥೆ ಎಂಬ ಹೆಸರು ಬಂತು. ಸಾಮೂಹಿಕ ಸಹಕಾರದ ಪ್ರಯತ್ನದ ಫಲವಾಗಿ ನಾಟಕ ಸಿದ್ಧಿಸುವುದರಿಂದ ಮೇಳ ಅಥವಾ ಮೇಳದವರ ಆಟ ಎಂಬ ಅಭಿಧಾನವೂ ಚಾಲ್ತಿಯಲ್ಲಿದೆ. ಅದನ್ನೇ ತಮಿಳಿನಲ್ಲಿ ಕೂಡಿಯಾಟಮ್ ಎಂದು ಕರೆಯುತ್ತಾರೆ. 'ಆಟ' ವೆಂದರೂ ನಾಟಕವೇ. ಆಟ ಅಥವಾ ಬಯಲಾಟ ಎಂಬ ಹೆಸರು ಹಳೆಯ ಮೈಸೂರು ಅಥವಾ ದಕ್ಷಿಣ ಕರ್ನಾಟಕದಲ್ಲಿಯೂ, ದೊಡ್ಡಾಟ ಮತ್ತು ಸಣ್ಣಾಟ ಎಂಬ ಹೆಸರುಗಳು ಉತ್ತರ ಕರ್ನಾಟಕದಲ್ಲಿಯೂ, ಯಕ್ಷಗಾನ ಬಯಲಾಟ ಅಥವಾ ತಾಳಮದ್ದಲೆ ಎಂಬುದು ಕರಾವಳಿ ಕರ್ನಾಟಕದಲ್ಲಿಯೂ ಚಾಲ್ತಿಯಲ್ಲಿವೆ. ಈ ಮೂರೂ ಬಯಲಾಟದ ಪ್ರಕಾರಗಳೆಂದರೂ ಸಲ್ಲುತ್ತದೆ. ಶಿವರಾಮಕಾರಂತರ ಮೂಡಲಪಾಯ, ಪಡುವಲಪಾಯ, ತೆಂಕುತಿಟ್ಟು, ಬಡಗುತಿಟ್ಟು ಎನ್ನುವ ವಿಂಗಡಣೆ ಕೇವಲ ಮಲೆನಾಡಿಗೆ ಸೇರಿದ್ದೆಂಬ ಹಾಗೂ ಉತ್ತರ ಮತ್ತು ದಕ್ಷಿಣ ಕರ್ನಾಟಕಗಳ ಸಂಪ್ರದಾಯಗಳು ಅವರ ಸಮೀಕ್ಷೆಯಿಂದ ಹೊರಗಿವೆ ಎಂಬ ಸಂಗತಿಗಳನ್ನು ಮರೆಯುವಂತಿಲ್ಲ. ವಿವರಗಳಲ್ಲಿ ವ್ಯತ್ಯಾಸ

1 'ಪಾರ್ತಿ-ಸುಬ್ಬ' ಎಂಬ ಅವರ ಗ್ರಂಥದಲ್ಲಿ ಈ ಬಗ್ಗೆ ಮತ್ತು ಪಾರ್ತಿಸುಬ್ಬನ ಅಸ್ತಿತ್ವದ ಬಗ್ಗೆ ದೀರ್ಘವಾದ ವಿವರಣೆಗಳಿವೆ.

ಕಾಣಬಹುದಾದರೂ, ಎಲ್ಲ ಪ್ರಕಾರಗಳ ಮೂಲಸತ್ವ ತಂತ್ರಧ್ಯೇಯಗಳು ವಿಭಿನ್ನವಲ್ಲ ಎಂದು ವಿಶದಪಡಿಸಬೇಕಾಗಿದೆ. ಕೇವಲ ಅಧ್ಯಯನ ಸೌಕರ್ಯಕ್ಕಾಗಿ ಈ ಭೌಗೋಲಿಕ ವಿಭಜನೆ ಸಹಾಯವಾದೀತೆಂದು ನಂಬಲಾಗಿದೆ.

ಬಯಲಾಟ ಬಹಳ ಹಳೆಯದಾದರೂ, ಈಗ ಉಪಲಬ್ಧವಾಗಿರುವ ಯಕ್ಷಗಾನ ಕೃತಿಗಳ ಕಾಲ ೧೬೦೦ಕ್ಕಿಂತ ಹಿಂದಕ್ಕೆ ಹೋಗುವುದಿಲ್ಲ. ಅವು ಮುಖ್ಯವಾಗಿ ಮೌಖಿಕ ಸಂಪ್ರದಾಯಕ್ಕೆ ಸೇರಿದವಾದ್ದರಿಂದ, ಅವುಗಳನ್ನು ಹಿಡಿದಿಟ್ಟಿರುವ ಓಲೆಗರಿ ಪ್ರತಿ ಸಿಗಲಿಲ್ಲವೆಂದು ಆತಂಕಪಡುವುದು ಬೆಸ್ಪ್ರತನವಾಗುತ್ತದೆ. ಜತೆಗೆ ಪಂಡಿತರ ಅವಹೇಳನಕ್ಕೆ ಅವು ಗುರಿಯಾಗಿದ್ದುದರಿಂದ, ಅವು ಓಲೆಗರಿಯಲ್ಲಿ ಸೆರೆಗೊಳ್ಳಲು ನಾಚಿ, ಸ್ವತಂತ್ರವಾಗಿ ಸಾಮಾನ್ಯರ ಬಾಯಿಯಲ್ಲಿಯೇ ಉಳಿದು ಬಂದುವು. ಅಲ್ಲಿಂದೀಚೆಗಿನ ಕಾಲದಲ್ಲಿ ರಚಿತವಾದ ನೂರಾರು ಯಕ್ಷಗಾನ ಪ್ರತಿಗಳೂ, ಪಾರ್ತಿಸುಬ್ಬ, ದೇವಿದಾಸ, ನಾಗಪ್ಪಯ್ಯ ಇವೇ ಮೊದಲಾದ ಹಲವು ಹೆಸರುಗಳೂ ಬೆಳಕಿಗೆ ಬಂದಿವೆ.[1]

ಈ ಮೊದಲೇ ನೋಡಿದಂತೆ ಬಯಲಾಟವೊಂದು ಸಮಷ್ಟಿ ಕಲೆ, ಸಾಮುದಾಯಿಕ ಕಲೆ. ಅದು ಮತ ಧರ್ಮಗಳಿಂದ ಪ್ರೇರಣೆಗೊಂಡ ಕಲೆಯೆಂಬುದಂತು ಸತ್ಯ. ಕುಂಕುಮ ಸೇವೆ, ಸಂಗೀತ ಸೇವೆ, ನೃತ್ಯಸೇವೆ ಇದ್ದ ಹಾಗೆ ಬಯಲಾಟವೂ ಒಂದು ದೇವರ ಸೇವೆಯಾಗಿತ್ತು. ಅದರ ಕಲಿಕೆಯನ್ನಾರಂಭಿಸುವಾಗ, ಮುಗಿಸುವಾಗ, ಪ್ರದರ್ಶಿಸುವಾಗ ಭಾಗವತರು, ಹಿಮ್ಮೇಳಗಾರರು ಮತ್ತು ನಟರು ನಡಸುವ ಪೂಜಾವಿಧಿಗಳಿಂದ ಈ ಅಂಶ ಸ್ಪಷ್ಟಪಡುತ್ತವೆ. ಅಷ್ಟೇ ಅಲ್ಲ, ಹಿಂದಿನ ಕಾಲದಲ್ಲಿ ಅದು ಪ್ರದರ್ಶಿತವಾಗುತ್ತಿದ್ದುದು ದೇವಾಲಯದ ಮುಂದೆ, ದೇವರ ಮುಂದೆ. ಊರಲ್ಲಿ ರೋಗರುಜಿನಗಳೋ ಮತ್ತೇನಾದರೂ ಅರಿಷ್ಟಗಳೋ ಸಂಭವಿಸಿದ್ದಾದರೆ, ಅಥವಾ ಮಳೆ ಬಾರದಿದ್ದರೆ ಶನಿ ಮಹಾತ್ಮ್ಯೆ ಓದಿಸುವಂತೆ, ಬಯಲಾಟಗಳನ್ನು ಆಡಿಸುತ್ತಿದ್ದುದುಂಟು. ಧಾರ್ಮಿಕ ಶುಭಾಕಾಂಕ್ಷೆ ಮತ್ತು ಮನರಂಜನೆ ಈ ಎರಡೂ ಅವುಗಳ ಆಣಿಗುರಿಯಾಗಿದ್ದುವು. “ಅದು ಸಮ್ಮಿಶ್ರ ಕಲೆ. ನೃತ್ಯ, ನಾಟಕ, ಗೀತ, ಚಿತ್ರ—ಈ ನಾಲ್ಕು ಪ್ರಬಲಶಕ್ತಿಗಳ ಸಮ್ಮೇಳದಿಂದ ಬೆಳೆದು ಬಂದ ಸಾಧನವದು.”[2] ಸಾಮಾನ್ಯರ ಕಲಾಭಿರುಚಿಗೆ ಮತ್ತು ರಸಿಕತೆಗೆ ಇದು ಚಿರಂತನ ಸಾಕ್ಷಿಯಾಗಿದೆ. ರಸಿಕ ಸಹೃದಯ ವೃಂದ ಅಂದಿನಿಂದ ಇಂದಿನತನಕ ಇರದಿದ್ದ ಪಕ್ಷದಲ್ಲಿ, ಅವರಲ್ಲಿ ನೈಜವಾದ ಸತ್ವ ಗೈರುಹಾಜರಿಯಾಗಿದ್ದರೆ ಆ ಕಲೆ ಈವರೆಗೆ ಊರ್ಜಿತವಾಗಿ ಬಾಳುತ್ತಿರಲಿಲ್ಲ: ಇಪ್ಪತ್ತನೆಯ ಶತಮಾನದ ನಾಗರಿಕ ದೈತ್ಯಶಕ್ತಿಯ ಹಿಡಿತಕ್ಕೆ ಸಿಕ್ಕಿಯೂ, ಅದನ್ನೆದುರಿಸಿಯೂ ಅಪ್ರತಿಹತವಾಗಿ ಉಳಿಯುತ್ತಿರಲಿಲ್ಲ. ಬೇರೆ

---

[1] ಈ ಸಂಬಂಧಿಸಿದ ವಿವರಗಳಿಗೆ ಶಿವರಾಮಕಾರಂತರ ಯಕ್ಷಗಾನ ಬಯಲಾಟ, ಮುಳಿಯ ತಿಮ್ಮಪ್ಪಯ್ಯನವರ ಪಾರ್ತಿ-ಸುಬ್ಬ, ಕುಬಣೂರು ಬಾಲಕೃಷ್ಣರಾವ್ ಅವರ ಯಕ್ಷಗಾನ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ ಕನ್ನಡ ಬಯಲಾಟ ಮೊದಲಾದ ಗ್ರಂಥಗಳನ್ನು ನೋಡಬಹುದು.

[2] ಯಕ್ಷಗಾನ ಬಯಲಾಟ, ಪು. ೪.

ಕೆಲವು ದೇಶಗಳಲ್ಲಿ ಜನಪದ ನಾಟಕದ ಅವಶೇಷಗಳ ಕುರುಹು ಸಹ ಉಳಿಯದಿರುವಾಗ, ಇಲ್ಲಿಯ ಈ ಕಲೆಯ ಮಹತ್ತಿಗೆ ಬೇರೆ ಸಾಕ್ಷಿ ಅನಗತ್ಯ. ಭಾಗವತರು, ವಾದ್ಯಗಾರರು, ಹಾಡುಗಾರರು, ನಟರು, ಮೇಲಾಗಿ ಪ್ರೇಕ್ಷಕ ಹಾಗೂ ಶ್ರೋತೃವೃಂದ ಪರಸ್ಪರಾವಲಂಬನ ವಿಧಾನದಿಂದ ಸಾಮೂಹಿಕವಾಗಿ ಅದನ್ನು ಕಾಪಾಡಿಕೊಂಡು ಬಂದಿರುವುದು ಹೆಗ್ಗಳಿಕೆಯ ವಿಷಯವಾಗಿದೆ, ಆ ಜನತೆಯ ಸಂಸ್ಕಾರಕ್ಕೊಂದು ನಿದರ್ಶನವಾಗಿದೆ.

ಬಯಲಾಟ ಹೆಸರೇ ಸೂಚಿಸುವಂತೆ ಬಯಲಿನಲ್ಲಿ ಆಡುವಂಥದು. ಗೊತ್ತಾದ ಅಳತೆಗೆ ನಾಲ್ಕು ಕಂಬಗಳನ್ನು ನೆಟ್ಟು, ಮೇಲೆ ನಾಲ್ಕು ಗಳು ಜೋಡಿಸಿ, ಸೊಪ್ಪು ಹೊದಿಸಿ, ಕೆಳಗೆ ಸುತ್ತಣ ಬಯಲಿಗಿಂತ ತುಸು ಎತ್ತರದ ಜಗಲಿ ಹಾಕಿದರೆ ರಂಗಮಂಟಪವಾಯಿತು. ಆದರೆ ಅದರ ಮುಂಭಾಗ ಯಾವ ಕಡೆಗೆ ತಿರುಗಿರಬೇಕು, ಅದರ ಆಯವೆಷ್ಟು, ಆಕಾರವೆಂಥದು ಎಂಬುದರ ಬಗ್ಗೆ ನಿಯಮಗಳಿವೆ. ಎರಡು ಮಂಚಗಳಿದ್ದರೆ ರಂಗಸಜ್ಜಿಕೆ ಮುಗಿಯಿತು. ಒಂದು ಮಂಚ ಭಾಗವತನಿಗೆ ಮತ್ತೊಂದು ಮಂಚ ರಾಜನ ಅಥವಾ ಪ್ರಮುಖ ಪಾತ್ರಗಳ ದರ್ಬಾರಿಗೆ. ರಂಗಮಂಟಪದ ಹಿಂದುಗಡೆ ತುಸು ದೂರದಲ್ಲಿ ಬಣ್ಣದ ಮನೆ ಅಥವಾ ಚೌಕಿ ಇರುತ್ತದೆ. ಅದೇ ನೇಪಥ್ಯ ಗೃಹ. ಅಲ್ಲಿ ಶಾಸ್ತ್ರೀಯವಾಗಿ ಪೂಜೆ ಜರುಗುತ್ತದೆ. ಅಲ್ಲಿ ಮಾಡಿದ ಆರತಿಯೊಂದಿಗೆ ಕೋಡಂಗಿ ಭಾಗವತರು ಹಾಡುತ್ತ ರಂಗಸ್ಥಳ ಪ್ರವೇಶಿಸುತ್ತಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಸಂಪ್ರದಾಯ. ದಕ್ಷಿಣ ಕರ್ನಾಟಕದ ಸಂಪ್ರದಾಯದ ಪ್ರಕಾರ ಗಣಪತಿ ಪೂಜೆ ರಂಗಮಂಟಪದಲ್ಲಿಯೇ ನಡೆಯುತ್ತದೆ. ಇಲ್ಲಿ ತೆರೆಯೆಂಬುದೇ ಇಲ್ಲ. ಪಾತ್ರಗಳು ರಂಗಮಂಟಪಕ್ಕೆ ಬರುವಾಗ ಅವರ ರುಂಡ ಮುಂಡ ಭಾಗಗಳನ್ನು ಮರೆ ಮಾಡುವಂಥ ಧೋತ್ರವನ್ನು ಇಬ್ಬರು ಪರಿಚಾರರು ಹಿಡಿದುಕೊಂಡು ಬರುತ್ತಾರೆ. ಮಂಟಪದ ಮುಂದುಗಡೆ ಬಯಲಿನಲ್ಲಿ ಜನ ಕುಳಿತುಕೊಳ್ಳುತ್ತಾರೆ.

ಹನುಮನಾಯಕನಿಗೂ ಪ್ರಸಂಗಕ್ಕೂ ಏನೇನೂ ಸಂಬಂಧವಿರುವುದಿಲ್ಲ. ಆದರೂ ಅವನು ಆಕರ್ಷಕ ವ್ಯಕ್ತಿ. ಅವನು ದೂತ, ಹಾಸ್ಯಗಾರ, ಹೊಗಳುಭಟ್ಟ; ಅಷ್ಟೇ ಅಲ್ಲ, ಒಂದರ್ಥದಲ್ಲಿ ಪಾತ್ರಧಾರಿಯೂ ಹೌದು. ಅವನ ಮಾತುಕತೆಗಳಿಗೆ ಲಂಗುಲಗಾಮಿಲ್ಲ. ಪ್ರೇಕ್ಷಕರು ಬೇಸರದಿಂದ ಗೊರಕೆ ಹೊಡೆಯದಂತೆ ನೋಡಿಕೊಳ್ಳಬೇಕಾದ್ದು ಅವನ ಜವಾಬ್ದಾರಿ. ಮೊದಲಿಂದ ಕೊನೆಯ ತನಕ, ವೃತ್ತಾಂತದ ನಡುವೆಯಲ್ಲಿ, ಪ್ರಮುಖ ಪಾತ್ರಗಳ ಪರಿಚಯ ಸಮಯದಲ್ಲಿ ಅವನು ಇರಲೇಬೇಕು. ಕೆಲವು ಕಡೆಯ ಆಟಗಳಲ್ಲಿ ಅವನು ಕೋಡಂಗಿಯಾದರೆ, ಮತ್ತೆ ಕೆಲವು ಕಡೆ ಸಾರಥಿಯಾಗುತ್ತಾನೆ. ಯಕ್ಷಗಾನದ ಭಾಗವತ ದಕ್ಷಿಣ ಕರ್ನಾಟಕದಲ್ಲಿ ಉಪಾಧ್ಯಾಯನಾಗುತ್ತಾನೆ. ಆದರೆ ಇಬ್ಬರ ಕಾರ್ಯಕರ್ತೃಗಳು ಹೆಚ್ಚು ಕಡಿಮೆ ಒಂದೇಯೆ. ಅವನು ಬೋಧಕ, ಹಾಡುಗಾರ, ನಿಯಂತ್ರಕ; ಅಷ್ಟೇ ಅಲ್ಲ, ಕೆಲವೊಮ್ಮೆ ಪ್ರಸಂಗದ ಒಂದು ಪಾತ್ರವಾಗುತ್ತಾನೆ. ರಂಗಮಂಟಪದಲ್ಲಿ ಒಂದೇ ಪಾತ್ರವಿರಬೇಕಾದ ಸಂದರ್ಭವುಂಟಾದಾಗ ಅವನು ಭಾಗವತನನ್ನು ಸಂಬೋಧಿಸುತ್ತಾನೆ, ಅವನಿಂದ ಉತ್ತರ ಪಡೆಯುತ್ತಾನೆ. ಪ್ರಸಂಗದ ಪಾತ್ರಗಳು ಹೇಗೆ ರಂಗವನ್ನು ಪ್ರವೇಶಿಸಬೇಕು, ಹೇಗೆ ಅವರ ಪರಿಚಯವಾಗಬೇಕು, ಅವರು ಹೇಗೆ ನಿಲ್ಲಬೇಕು ಎಂಬೆಲ್ಲ ಸಂಗತಿ

ಗಳ ಬಗ್ಗೆ ನಿಯಮಗಳಿವೆ.[1]

ಒಟ್ಟಿನ ಮೇಲೆ ವೇಷಭೂಷಣಗಳು ಎಲ್ಲ ಕಡೆ ಒಂದೇ ರೀತಿಯಾಗಿರುತ್ತವೆ. ಮೇಲು ನೋಟಕ್ಕೆ ಯಾವ ವ್ಯತ್ಯಾಸಗಳೂ ಕಾಣಿಸುವುದಿಲ್ಲ. ಆದರೆ ಸೂಕ್ಷ್ಮವಾಗಿ ವಿವರಗಳ ಕಡೆಗೆ ಗಮನ ಹರಿಸಿದಲ್ಲಿ ಕಿರೀಟ ಭುಜಕೀರ್ತಿ ಕಚ್ಚೆ ಮೊದಲಾದುವುಗಳಲ್ಲಿ ಕೆಲವು ಭಿನ್ನತೆಗಳು ಸುಳುಹುದೋರುತ್ತವೆ. ಯಾವ ಪಾತ್ರಕ್ಕೆ ಯಾವ ಬಣ್ಣ ಸರಿ, ಎಂಥ ಪೋಷಾಕು ಬೇಕು, ಎಂಥ ಮೀಸೆ ಇರಬೇಕು ಎನ್ನುವ ಸಂಗತಿಗಳು ಚಿತ್ರಕಲೆಯ ಸಾಮ್ರಾಜ್ಯಕ್ಕೆ ಸೇರುತ್ತವೆ. ಅವಂತೂ ಇಲ್ಲಿ ಬಹು ಮುಖ್ಯ. ಚಿತ್ರಗಾರ ಅಥವಾ ಬಣ್ಣಗಾರ ಈ ಶೃಂಗಾರ ಕಾರ್ಯದಲ್ಲಿ ನಾಲ್ಕೈದು ಗಂಟೆ ಸವೆಸುತ್ತಾನೆ. ಯಕ್ಷಗಾನದ ಪಾತ್ರಧಾರಿ ಬಣ್ಣಗಾರನ ನೆರವಿನೊಡನೆ ತಾನೇ ಶೃಂಗಾರ ಮಾಡಿಕೊಳ್ಳುತ್ತಾನೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಈ ಹೊಣೆ ಪೂರ್ತಿಯಾಗಿ ಬಣ್ಣಗಾರನದು. ಕವಚ, ಕಚ್ಚೆ, ಕೊರಳಹಾರ, ತೋಡ, ತೋಳಬಂದಿ, ಗೆಜ್ಜೆ, ಕಿರೀಟ ಇವು ಒಂದೇ ಎರಡೇ, ಅನೇಕ; ಆಯಾಯ ಪಾತ್ರಗಳಿಗನುಗುಣವಾಗಿ ಅವು ಬದಲಾವಣೆ ಹೊಂದುತ್ತವೆ. ಅರದಾಳ ಇಂಗಲೀಕ ಕಾಡಿಗೆ ಬಳಪಗಳನ್ನು ಬಣ್ಣಕ್ಕಾಗಿ ಬಳಸುತ್ತಾರೆ. ಝಗಝಗಿಸುವ ವೇಷ ಭೂಷಣಗಳ ಮೂಲಕ ಪುರಾಣ ಪಾತ್ರಗಳ ಅಸಾಧಾರಣತೆಯ ಪ್ರದರ್ಶನ ಸಾಧ್ಯವಾಗುತ್ತದೆ; ಪ್ರೇಕ್ಷಕರನ್ನು ವಾಸ್ತವಲೋಕದಿಂದ ಕಲ್ಪನೆಯಲೋಕಕ್ಕೊಯ್ಯಲು ಸುಲಭ ವಾಗುತ್ತದೆ.

ಬಯಲಾಟದಲ್ಲಿ ಪ್ರಸಂಗವೊಂದು ನೆಪ; ನೃತ್ಯ, ಗಾನ, ವಾದ್ಯ ಮತ್ತು ವೇಷ ಭೂಷಣಗಳೇ ಪ್ರಧಾನ. ಈ ಪರಿಕರಗಳ ಮೂಲಕವೇ ಪ್ರೇಕ್ಷಕರಿಗೆ ಪ್ರಸಂಗ ಅರ್ಥವಾಗ ಬೇಕು. ಅರ್ಥವಾಗದಿದ್ದಾಗ ಮಾತು ಸಹಾಯಕ್ಕೆ ಬರುತ್ತದೆ. ಆದರೆ ಈ ಪರಿಕರ ಗಳಿಂದಾಗಿ ಜನ ಕಾಲವನ್ನು ಮರೆಯುತ್ತಾರೆ, ತ್ರೇತಾ ದ್ವಾಪರಯುಗಕ್ಕೆ ಹಾರುತ್ತಾರೆ, ಭೀಮಾರ್ಜುನರ ರಾಮ ಲಕ್ಷ್ಮಣರ ದ್ರೌಪದಿ ಸೀತೆಯರ ಆಂಜನೇಯನ ರಾವಣಾದಿ ಅದ್ಭುತ ವ್ಯಕ್ತಿಗಳ ಸಂಪರ್ಕ ಪಡೆಯುತ್ತಾರೆ. ವೀರಾದ್ಭುತ ರಸಗಳ ಅಭಿವ್ಯಕ್ತಿಗಂತು ನೃತ್ಯ ಸಮರ್ಥ ಮಾಧ್ಯಮ. ಭಾವಗಳನ್ನು ಕೆರಳಿಸಿ, ಅವುಗಳನ್ನು ಸಂಸ್ಕಾರಗೊಳಿಸಿ, ತಲ್ಲೀನತೆಯನ್ನು ಸಾಧಿಸುವಲ್ಲಿ ಕುಣಿತದ ಪಾತ್ರ ಮಹತ್ತಾದುದು. ದಕ್ಷಿಣ ಕರ್ನಾಟಕ ದಲ್ಲಿಯ ಉಡಂಗಗಳು, ಜೈಟಕುಗಳು ಮತ್ತು ಜಿಗಿತಗಳು ಬೇರೆ ಕಡೆ ಕಾಣುವುದಿಲ್ಲ. ಕರಾವಳಿ ಕರ್ನಾಟಕದ ಯಕ್ಷಗಾನದಲ್ಲಿ ಜೋರಿಲ್ಲವೆಂದಲ್ಲ; ಆ ಜೋರಿನಲ್ಲಿಯೂ ತೂಕ ಸೌಮ್ಯ ಸಮತ್ವಗಳನ್ನು ಗುರುತಿಸಬಹುದು. ಹಾಡುಗಳಲ್ಲಿ ಕಾವ್ಯಾಂಶ ಕಡಮೆ. ಹಾಡುವ ಮೋಡಿಯಿಂದ ರಮ್ಯತೆಯನ್ನು ತುಂಬಬೇಕು. ಭಾಗವತನೊಡನೆ ಕೆಲವು ಪಾತ್ರಧಾರಿಗಳೂ

---

[1] ಯಕ್ಷಗಾನ ಬಯಲಾಟ, ಯಕ್ಷಗಾನ (ಬಾಲಕೃಷ್ಣ ರಾವ್ ರಚಿತ), ಯಕ್ಷಗಾನ (ವಿ. ಸೀತಾರಾಮಯ್ಯನವರಿಂದ ಸಂಪಾದಿತ) ಕರ್ನಾಟಕ ಜಾನಪದ ರಂಗಭೂಮಿ ಮೊದಲಾದ ಗ್ರಂಥ ಗಳಲ್ಲಿ ಈ ಬಗ್ಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ವೇಷ ಭೂಷಣ, ಸಂಗೀತ, ನೃತ್ಯ ಮೊದಲಾದ ಇತರ ಸಂಗತಿಗಳು ಸಹ ಅಲ್ಲಿಯೇ ಸಿಗುತ್ತವೆ.

ಹಾಡುವುದುಂಟು. ಯಕ್ಷಗಾನವೊಂದು ಸಂಗೀತ ಪ್ರಕಾರ; ಜನಸಾಮಾನ್ಯನಿಂದ
ಮೂಡಿದ್ದು; ಅದರಿಂದ ಮಾರ್ಗಸಂಗೀತ ವಿಕಾಸಗೊಂಡಿತು; ಅದುವೆ ಕರ್ನಾಟಕ ಸಂಗೀತ;
ಅದರ ರಾಗಗಳನ್ನು ಸಹ ಯಕ್ಷಗಾನದಲ್ಲಿ ಅಳವಡಿಸಿಕೊಳ್ಳುವುದುಂಟು. ತಾಳ, ಶ್ರುತಿ,
ಮುಖವೀಣೆ, ಹಾರ್ಮೋನಿಯಂ, ಮದ್ದಲೆ, ಮೃದಂಗ ಮತ್ತು ಚಂಡೆಗಳು ಇಲ್ಲಿ ಬಳಕೆ
ಯಾಗುವ ವಾದ್ಯಗಳು. ಮೈಲಿಗಟ್ಟಳೆ ಕೇಳಿಸುವ ಚಂಡೆಗೂ ಯಕ್ಷಗಾನಕ್ಕೂ ಅಚ್ಚಳಿಯದ
ನಂಟು.

ಯಕ್ಷಗಾನ ಸಾಹಿತ್ಯ ಮೂಲತಃ ಪದ್ಯಾತ್ಮಕವಾದದ್ದು. ಹಿಂದಿನ ಕಾಲದಲ್ಲಿ
ಭಾಗವತನೇ ಅದನ್ನು ಕಟ್ಟಿರಬೇಕು; ಅನಂತರ ಅದು ಬಾಯಿಂದ ಬಾಯಿಗೆ ಹರಿಯುತ್ತ
ನಾನಾ ರೂಪಾಂತರಗಳನ್ನು ಪಡೆದಿರಬೇಕು. ನಂದಳಿಕೆ ಲಕ್ಷ್ಮೀನಾರಾಯಣಪ್ಪನಂಥ
ಕವಿಗಳು ಅವನ್ನು ರಚಿಸಲಾರಂಭಿಸಿದ್ದು ಈಚೀಚೆಗೆ. ಭಾಗವತನಾಗಲಿ, ನಟನಾಗಲಿ ಆ
ಹಾಡುಗಳನ್ನು ಕಂಠಪಾಠ ಮಾಡಬಹುದು ಅಥವಾ ಬಿಡಬಹುದು. ಅವರ ಕಣ್ಮುಂದೆ
ಕೈಬರಹದ ಅಥವಾ ಮುದ್ರಿತ ಪ್ರತಿಗಳು ಇದ್ದೇ ಇರುತ್ತವೆ. ಪ್ರಸಂಗಗಳಲ್ಲಿ ದ್ವಿಪದಿ,
ಕಂದ, ಷಟ್ಪದಿ, ಸಾಂಗತ್ಯ ಮೊದಲಾದ ಛಂದೋಪ್ರಕಾರಗಳು ಪ್ರಯುಕ್ತವಾಗುತ್ತವೆ;
ಕೆಲವು ರಾಗ ತಾಳಗಳಿಗೊದಗುವ ಹಾಡುಗಬ್ಬಗಳು; ಪ್ರಾಯಶಃ ಕನ್ನಡ ಛಂದಸ್ಸಿನ
ಸೀಮೆಯೊಳಗೆ ಬರತಕ್ಕವು. ಕೆಲವುಕಡೆ ವಚನಗಳೂ ಬರುತ್ತವೆ. ಒಟ್ಟಿನಲ್ಲಿ ಈ ಸಾಹಿತ್ಯದ
ಭಾಷೆ ಸಾಮಾನ್ಯರಿಗೆ ಅರ್ಥವಾಗುವಂತಿರಬೇಕು. ಯಕ್ಷಗಾನದ ಗದ್ಯ ಬರೆದು ಕಲಿತದ್ದಲ್ಲ;
ವೇಷಗಾರರು ಪದ್ಯದ ಆಧಾರದ ಮೇಲೆ ಸ್ವಯಂಸ್ಫೂರ್ತಿಯಿಂದ ನುಡಿವುದು: ಉತ್ತರ
ಮತ್ತು ದಕ್ಷಿಣ ಕರ್ನಾಟಕಗಳ ಗದ್ಯ ಬರೆದದ್ದನ್ನು ವೇಷಗಾರರು ಕಂಠಪಾಠ ಮಾಡಿದ್ದು.
ಆ ಗದ್ಯದ ಲಯ ಪದ್ಯದ ಲಯಕ್ಕೆ ಹತ್ತಿರವಾಗಿರುತ್ತದೆ. ಅದನ್ನು ಸಹ ಯಾವುದೋ
ಒಂದು ಧಾಟಿಯಲ್ಲಿ ಹೇಳಿದಂತೆ ಭಾಸವಾಗುತ್ತದೆ. ಅದರಲ್ಲೊಂದು ಗತ್ತು ಧಿಮಾಕು
ಗಳಿರುತ್ತವೆ. ಕುಣಿದು ಜಿಗಿದು ಹಾಡಿ ಆಡಿ ಸರ್ವ ಚಮತ್ಕಾರಗಳನ್ನೂ ಕಲಾಕೌಶಲವನ್ನೂ
ತೋರಬೇಕಾದ ವೇಷಗಾರನ ಶರೀರ ಬಲ ಶಾರೀರಬಲ ಮತ್ತು ಬುದ್ಧಿಬಲಗಳು ಸಾಮಾನ್ಯ
ನುಡಿಯಬಹುದು.
ರಿಗೆ ಹೇಳಿದ್ದಲ್ಲವೆಂದು ನಿರ್ದಾಕ್ಷಿಣ್ಯವಾಗಿ
ಯಕ್ಷಗಾನದ ರೂಪಾಂತರ ಅಥವಾ ಮೂಲ ರೂಪವೇ ತಾಳ ಮದ್ದಲೆ. ಯಕ್ಷಗಾನ
ದೃಶ್ಯರೂಪವಾದರೆ ತಾಳಮದ್ದಲೆ ಶ್ರವ್ಯರೂಪ. ಇದರಲ್ಲಿ ವೇಷಭೂಷಣಗಳಿಲ್ಲ; ಕುಣಿತ
ಜಿಗಿತಗಳಿಲ್ಲ; ಬಯಲು ರಂಗಮಂಟಪವಿಲ್ಲ. ಪಾತ್ರಧಾರಿಗಳು ಕುಳಿತುಕೊಂಡೇ ಹಾಡು
ತ್ತಾರೆ, ಸಂಭಾಷಣೆ ನಡಸುತ್ತಾರೆ. ಯಕ್ಷಗಾನ ಬೇಸಗೆಯ ಆಟವಾದರೆ ಇದು ಮಳೆ
ಗಾಲದ ಕೂಟ. ಇದು ಕರಾವಳಿ ಕರ್ನಾಟಕದ ವೈಶಿಷ್ಟ್ಯ.
ತೆಂಕುತಿಟ್ಟು, ಬಡಗುತಿಟ್ಟುಗಳು ಯಕ್ಷಗಾನದ ಪ್ರಭೇದಗಳು. ಕಥಕ್ಕಳಿಯ ಪ್ರಭಾವ
ದಿಂದ ತೆಂಕುತಿಟ್ಟು ಬಡಗುತಿಟ್ಟಿನಿಂದ ಭಿನ್ನವಾಯಿತೆನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ
ಬಯಲಾಟ ದೊಡ್ಡಾಟ, ಸಣ್ಣಾಟಗಳೆಂಬ ಹೆಸರಿನಿಂದ ಜನಪ್ರಿಯವಾಗಿದೆ. ಬಯಲಾಟ
ವೆಂದರೆ ರಾತ್ರಿಯೆಲ್ಲ ಆಡುವಂಥದು. ಅಷ್ಟು ಕಾಲ ಕುಳಿತುಕೊಳ್ಳುವ ತಾಳ್ಮೆ ಎಲ್ಲರಿಗೂ

ಯಾವಾಗಲೂ ಇರುವುದಿಲ್ಲ. ಆದ್ದರಿಂದ ಮೂರ್‍ನಾಲ್ಕು ಗಂಟೆಗಳಲ್ಲಿಯೇ ಮುಗಿಯುವಂಥ 'ಸಣ್ಣಾಟ' ಬಳಕೆಗೆ ಬಂತು. ದೊಡ್ಡಾಟದಲ್ಲಿ ಕಾಣುವ ರಂಗಸಜ್ಜಿಕೆಯಾಗಲಿ, ವೇಷ ಭೂಷಣಗಳಾಗಲಿ ಇಲ್ಲಿ ಅನಾವಶ್ಯಕ; ಹಿಮ್ಮೇಳದ ಆಡಂಬರವೂ ಬೇಕಿಲ್ಲ. ಇಲ್ಲಿ ಸಾರಥಿಯಿಲ್ಲ. ಭಕ್ತಿ ಕಥೆಗಳೇ ಇಲ್ಲಿಯ ವಸ್ತು. ಸಾಮಾಜಿಕ ಕಥೆಗಳಿಗೂ ಇಲ್ಲಿ ಪ್ರವೇಶವುಂಟು. ರಾಜಾನಾಟ, ರಾಧಾನಾಟ, ದಾಸರಾಟ ಮತ್ತು ಶರಣರಾಟಗಳು ಸಣ್ಣಾಟದ ಪ್ರಭೇದಗಳೆಂಬೇ ಭಾವಿಸಬಹುದಾಗಿದೆ. ಲಘು ಸಂಗೀತ, ಚಟುಲಗತಿ, ದಿಡಗಿನ ಕುಣಿತ ಮೊದಲಾದ ಲಕ್ಷಣಗಳಿಂದ ಕೂಡಿದ ಸಣ್ಣಾಟ ದೊಡ್ಡಾಟದ ವಿರುದ್ಧರೂಪವೆಂದು ಸುಂಕಾಪೂರ ಅವರು ಹೇಳುತ್ತಾರೆ. ಶ್ರೀಕೃಷ್ಣಪಾರಿಜಾತ ಪ್ರತ್ಯೇಕ ಪ್ರಭೇದವೆಂದು ಕರೆಯುವುದುಂಟು. ದಕ್ಷಿಣ ಕರ್ನಾಟಕದಲ್ಲಿ ದೊಡ್ಡಾಟವನ್ನು ಆಟವೆಂದೇ ಕರೆಯುತ್ತಾರೆ. ವೇಷಭೂಷಣಗಳಲ್ಲಿ ರಂಗಸಜ್ಜಿಕೆಯಲ್ಲಿ ದೊಡ್ಡಾಟಕ್ಕೂ ಆಟಕ್ಕೂ ಸಣ್ಣಪುಟ್ಟ ವ್ಯತ್ಯಾಸಗಳಿವೆ. ಒಟ್ಟಿನ ಮೇಲೆ ಅವುಗಳಲ್ಲಿ ಸಾಮ್ಯವೇ ಅಧಿಕ. ದೊಡ್ಡಾಟ, ಸಣ್ಣಾಟ ಆಟಗಳು ಮೂಡಲ ಪಾಯದ ಒಳಭೇದಗಳೆಂದರೂ ಸಲ್ಲುತ್ತದೆ. ಅಧ್ಯಯನ ಸೌಕರ್ಯಕ್ಕಾಗಿ ಭೌಗೋಳಿಕಾಧಾರ ಮೇಲೆ ಅವುಗಳನ್ನು ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಬಯಲಾಟಗಳೆಂದು ಕರೆದಿದೆ.

ಜನಪದ ನಾಟಕದ ಬಗ್ಗೆ ದಕ್ಷಿಣ ಭಾರತದಲ್ಲಿ ಸಿಗುವಷ್ಟು ಮಾಹಿತಿ ಪುರಾವೆಗಳು ಜಗತ್ತಿನಲ್ಲಿ ಇತರತ್ರ ದೊರೆಯುವುದು ದುರ್ಲಭ. ಇಷ್ಟು ದೀರ್ಘವಾದ ಇತಿಹಾಸವಂತು ಎಲ್ಲಿಯೂ ಇದ್ದಿರಲಾರದೆಂದು ತೋರುತ್ತದೆ. ನಾಟಕದ ಉಗಮ ಮತ್ತು ವಿಕಾಸಗಳನ್ನು ಕುರಿತು ಅಧಿಕಾರಯುತವಾಗಿ ಬರೆಯಲು ಸಾಕಷ್ಟು ದಾಖಲೆಗಳು ಈ ಭಾಗದಲ್ಲಿ ಸಿಗುತ್ತವೆ. ಆ ಕಡೆಗೆ ತೋರುಬೆರಳು ಚಾಚುವ ಸಲುವಾಗಿ ಈ ವಿಷಯದ ಬಗ್ಗೆ ಇಷ್ಟು ಲಂಬಿಸಬೇಕಾಯಿತು. ಇದು ಲಂಬಿತವಾದರೂ ವಿವರಗಳಿಗಿಲ್ಲಿ ಅವಕಾಶವಿಲ್ಲ. ಏಕೆಂದರೆ ಯಕ್ಷಗಾನದ ಬಗ್ಗೆ ಪ್ರಕಟಗೊಂಡಿರುವ ಗ್ರಂಥಗಳಲ್ಲಿ ವಿಪುಲ ಸಾಮಗ್ರಿ ದೊರೆಯುತ್ತವೆ.

ಗಾದೆಗಳು

ಜನಪದ ಸಾಹಿತ್ಯಪ್ರಕಾರಗಳಲ್ಲೆಲ್ಲ ಗಾದೆಯೇ ಅತ್ಯಂತ ಜನಪ್ರಿಯವಾದುದು. ಮಾನವ ಸಮಾಜದಲ್ಲಿ ಇದರಷ್ಟು ವ್ಯಾಪಕವಾದ ಪ್ರಭಾವಶಾಲಿಯಾದ ಆಕರ್ಷಣೀಯವಾದ ಪ್ರಯೋಜನಕಾರಿಯಾದ ಸಾಹಿತ್ಯಪ್ರಕಾರ ಮತ್ತೊಂದಿಲ್ಲ. ಕಳ್ಳ-ಬೆಳ್ಳ, ಜ್ಞಾನಿ-ಅಜ್ಞಾನಿ, ನಿರಕ್ಷರ-ಸಾಕ್ಷರ, ವೈದಿಕ-ಅವೈದಿಕ, ಸಾಮಾನ್ಯ-ಮಹಾಮಾನ್ಯ, ಧಾರ್ಮಿಕ-ಮಾಲೀಕ, ಕವಿ–ಪಂಡಿತ, ಬಡವ–ಬಲ್ಲಿದ, ಆಳು-ಅರಸು, ಮೇಲು-ಕೀಳು ಎಂಬ ತಾರತಮ್ಯವಿಲ್ಲದೆ ಅದು ಸರ್ವ ಮಾನವರ ಬಾಳನ್ನು ಪ್ರವೇಶಿಸುತ್ತದೆ. ಗೀತೆ ಕತೆ ಲಾವಣಿ ಮೊದಲಾದುವುಗಳ ವಾಸನೆಯ ಸೋಂಕೇ ಇಲ್ಲದ ಗ್ರಾಮೀಣ ಮುಗ್ಧನ ಸ್ಮೃತಿಕೋಶದಲ್ಲಿ ನೂರಾರು ಗಾದೆಗಳಾದರೂ ಸುರಕ್ಷಿತವಾಗಿರುತ್ತವೆ. ಅದೇ ಅವನ ಸಾರಸ್ವತ ಸಂಪತ್ತು. ಯಾವ ಅಂತಸ್ತಿನ ಜನರೇ ಆಗಲಿ, ಮಾತುಕತೆಗಳಲ್ಲಿ, ಚರ್ಚೆಗಳಲ್ಲಿ ಬರಹಗಳಲ್ಲಿ, ಭಾಷಣಗಳಲ್ಲಿ, ಭಾಷೆ ಬಳಸುವೆಡೆಯಲ್ಲೆಲ್ಲ ಗಾದೆಗಳನ್ನು ತೂರಾಡುತ್ತಾರೆ. ಅವು ಅನೈಚ್ಛಿಕವಾಗಿ ಸಹಜಾಭಿವ್ಯಕ್ತಿಯ ಮಾಧ್ಯಮಗಳೋ ಎನ್ನುವಂತೆ, ಮಾತಿನ ಭಣಿತಿಯ ಅನಿವಾರ್ಯಾಂಶವೆನ್ನುವಂತೆ ನುಗ್ಗಿ ಬರುತ್ತವೆ. ಅವುಗಳನ್ನು ದಿನಜೀವಿಗಾದರೆ ಬಳಸದ ಜನರಿಲ್ಲ. ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಮೊದಲಾದ ನಂಜಿಕೆಯ ಪದಾರ್ಥಗಳು ಭೋಜನದ ಸ್ವಾದುವನ್ನು ಅಧಿಕಗೊಳಿಸುವಂತೆ ಅವು ಮಾತಿನ ಮಹತ್ವವನ್ನು ಹಿರಿದು ಮಾಡಿ ಅದರ ಪ್ರಯೋಜನವನ್ನು ವೃದ್ಧಿಗೊಳಿಸುತ್ತವೆ. ಭಾವಾರ್ಥಗಳ ಸ್ಫುಟತ್ವಕ್ಕೆ, ಶೀಘ್ರ ಬೋಧೆಗೆ, ಪರಿಣಾಮ ಸಾಧನೆಗೆ ಅವುಗಳಿಂದ ತುಂಬ ಲಾಭ ಒದಗುತ್ತದೆ. ಒಂದು ಜನಾಂಗದ ಅನುಭವ ಸಂಪತ್ತಿಗೆ, ಒಂದು ಭಾಷೆಯ ಬನಿ ಬಂಡ ಕಸುವುಗಳಿಗೆ ಮತ್ತು ಸಾರಸತ್ವಗಳಿಗೆ ಅವುಗಳಲ್ಲಿ ಸಂಗ್ರಹಗೊಂಡಿರುವ ಗಾದೆಗಳ ನಿಧಿಯೇ ಸಾಕ್ಷಿಯಾಗಿರುತ್ತದೆ.

ಗಾದೆ ವೇದಕ್ಕೆ ಸಮಾನ ಎಂಬ ಬಹುಜನಪ್ರಿಯವಾದ ಗಾದೆಯೂ ಉಂಟು. ವೇದ ಎಂಬುದೊಂದು ಪವಿತ್ರ ಗ್ರಂಥ. ಆ ಅರ್ಥದಲ್ಲಿ ಈ ಮಾತನ್ನು ಬೈಬಲ್ಲು ಕೊರಾನುಗಳಿಗೂ ಅನ್ವಯಿಸಬಹುದು. ಅದು ಪ್ರಭು ಸಮ್ಮಿತ ವಿಧಾನದಲ್ಲಿ ಜನತೆಯನ್ನು ತಿದ್ದು[illegible]ತ್ತದೆಂದು ಹಿರಿಯರು ಹೇಳುವುದುಂಟು. ಆಯಾಯ ಜನಾಂಗಗಳನ್ನು [illegible] ಮಹತ್ವಪೂರ್ಣವಾದುದು ಸರ್ವಶ್ರೇಷ್ಠವಾದುದು. ಈ ಪವಿತ್ರ ಗ್ರಂಥಗಳ ಪಾತ್ರ

ವೇದವಂತೆಯೆ ಅದು ನೀತಿಪ್ರಧಾನವಾದ ಉಪದೇಶಾತ್ಮಕವಾದ ಸತ್ಯನಿಷ್ಠವಾದ ರಚನೆ; ಅದರಂತೆಯೇ ಸನಾತನವೂ ಪ್ರಭಾವಯುತವೂ ಸರ್ವಜನ ಸಮ್ಮತವೂ ಆದ ವಾಙ್ಮಯ. ಒಂದು ದೃಷ್ಟಿಯಲ್ಲಿ ಅದು ವೇದಕ್ಕಿಂತ ಮಿಗಿಲಾದದ್ದು, ವ್ಯಾಪಕವಾದದ್ದು. ವೇದ ಕೆಲವರ ಸ್ವತ್ತಾದರೆ ಗಾದೆ ಸಕಲರ ಸ್ವತ್ತು. ಅಷ್ಟೇ ಅಲ್ಲ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಲೋಕೋಕ್ತಿ ಗಾದೆಗೆ ಅಗ್ರಸ್ಥಾನ ನೀಡುತ್ತದೆ. ವೇದ ಕಾಲ ಕಳೆದಂತೆ ಸಮಾಜ ಬದಲಾವಣೆ ಹೊಂದಿದಂತೆ ಸವಕಲಾಗುವ ನಾಣ್ಯ ; ಗಾದೆ ಬಳಸಿದಷ್ಟೂ ಹೊಳಪಾಗುವ, ಪುರಾತನವಾದಷ್ಟೂ ಬಹುಮಾನ್ಯತೆಯನ್ನು ಪಡೆಯುವ ಅಪ್ಪಟ ಚಿನ್ನ.

ಕೆಲವೇ ಕೆಲವು ಅರ್ಥಗರ್ಭಿತವಾದ ಮಾತುಗಳುಳ್ಳ, ಚಿಕ್ಕದೂ ಚೊಕ್ಕವಾದದ್ದೂ ಆದ ವಾಕ್ಯವೇ ಗಾದೆ. ಅಲ್ಲಿಯ ಮಾತು ಮಿತವಾಗಿರಬೇಕು ಹಿತವಾಗಿರಬೇಕು ಹೊಳಪಾಗಿರಬೇಕು. ಅನವಶ್ಯ ಪದವಾಗಲಿ ಪ್ರತ್ಯಯವಾಗಲಿ ಅಲ್ಲಿ ಪ್ರವೇಶಿಸಕೂಡದು. ಹದಿನೈದು ಅಥವಾ ಇಪ್ಪತ್ತು ಪದಗಳಿಗಿಂತ ಅವು ಹೆಚ್ಚಾಗಿರಬಾರದೆಂದು ಕೆಲವರು ಅಭಿಪ್ರಾಯಪಟ್ಟಿರುವುದೂ ಉಂಟು. ಅವೂ ಹೆಚ್ಚೇ. ಅದು ಪದ್ಯದಂತೆ ಲಯಬಂಧ ಪ್ರಾಸಗಳುಳ್ಳದ್ದು ; ಗದ್ಯದಂತೆ ಗಣನಿಯಮವಿಲ್ಲದ್ದು, ಹದವುಳ್ಳದ್ದು, ಸ್ಪಷ್ಟತೆಯುಳ್ಳದ್ದು. ಈ ಎರಡೂ ಪ್ರಕಾರಗಳ ಗುಣಲಕ್ಷಣಗಳನ್ನೊಳಗೊಂಡಿರುವ ವಿಶಿಷ್ಟಪ್ರಕಾರವದು. ಅದು ವಚನದಂತಿರುವುದು ಮಾತ್ರವಲ್ಲ, ವಚನ ತ್ರಿಪದಿಗಳಿಗೆ ಮೂಲವೆಂದರೂ ಸಲ್ಲುತ್ತದೆ. ಅದೆಂತು ಶ್ರೇಷ್ಠ ಗದ್ಯವಾಗಬಹುದೋ ಅಂತೆಯೇ ಸುಂದರ ಮುಕ್ತಕ ಅಥವಾ ಬಿಡಿಗವಿತೆಯಾಗಬಹುದು. ಅದರ ಭಾಷೆ ಸೂತ್ರಪ್ರಾಯವಾದುದು. ಅದು ಗಾತ್ರದಲ್ಲಿ ವಾಮನನಂತಿದ್ದರೂ, ಅರ್ಥವ್ಯಾಪ್ತಿಯಲ್ಲಿ ತ್ರಿವಿಕ್ರಮನಿಗೆಣೆಯಾದದ್ದು. ಅದರಲ್ಲಿ ಮೊನಚು, ಖಾರ, ಬಿಗಿ, ಸವಿ, ಛವಿ, ನುಣ್ಪು, ಗುಣ್ಪು, ಬಿಣ್ಪು, ಕಂಪು ಎಲ್ಲ ರೀತಿಯ ಶಬ್ದಗುಣಗಳು ಯಥೇಚ್ಛವಾಗಿ ದೊರೆಯುತ್ತವೆ. ಪ್ರಾಸಾನುಪ್ರಾಸಾದಿ ಶಬ್ದಾಲಂಕಾರಗಳೂ, ಉಪಮಾರೂಪಕಾದಿ ಅರ್ಥಾಲಂಕಾರಗಳೂ, ಪ್ರತಿಮಾ ಸಾಂಕೇತಿಕಾದಿ ಅರ್ಥವಿಧಾನಗಳೂ ಧ್ವನಿಶಕ್ತಿಯೂ ಅಲ್ಲಿ ಯಥೋಚಿತವಾಗಿ ಗೋಚರಿಸುತ್ತವೆ.

ಲೋಕವೇ ವಸ್ತುವಾಗುಳ್ಳ, ಮನುಕುಲದ ಅನುಭವ ಸಮಸ್ತವೂ ಗ್ರಾಸವಾಗಿರುವ ಗಾದೆಯ ವಿಸ್ತರೂಪವನ್ನೂ ಅದರ ಲಕ್ಷಣಗಳನ್ನೂ ಒಂದು ವಾಕ್ಯದಲ್ಲಿ ಸೂತ್ರೀಕರಿಸುವುದು ಕಷ್ಟವಾಗುತ್ತದೆ. ಶಿವಗಂಗೆ ಬೆಟ್ಟವಾಗಲಿ, ಮೈಸೂರು ಅರಮನೆಯಾಗಲಿ ಒಂದೊಂದು ದಿಕ್ಕಿನಿಂದ ನೋಡುವಾಗ ಒಂದೊಂದು ರೀತಿ ಕಾಣುವಂತೆ ಗಾದೆ ಒಬ್ಬೊಬ್ಬರ ದೃಷ್ಟಿಗನುಗುಣವಾಗಿ ಅನೇಕ ರೀತಿ ಕಾಣಿಸಿಕೊಳ್ಳುತ್ತದೆ. ಅದರಿಂದ ಸರ್ವಸಮ್ಮತವಾದ ಒಂದೇ ಒಂದು ಸೂತ್ರದಲ್ಲಿ ಅದರ ಎಲ್ಲ ಲಕ್ಷಣಗಳನ್ನು ಸಂಗ್ರಹಿಸುವುದು ದುಸ್ಸಾಧ್ಯವಾಗುತ್ತದೆ. ಸಂಕ್ಷಿಪ್ತತೆ, ಸಾರಗ್ರಾಹ್ಯತೆ, ತೀಕ್ಷ್ಣತೆ ಮತ್ತು ಜನಪ್ರಿಯತೆ—ಈ ನಾಲ್ಕು ಗಾದೆಯ ಪ್ರಮುಖ ಲಕ್ಷಣಗಳೆಂದು ಜೇಮ್ಸ್ ಎ. ಕೆಲ್ಸೋ ಹೇಳಿದ್ದಾರೆ.[1] ಅದು ಒಂದೇ ಉಸಿರಿಗೆ ಹೇಳಬಹುದಾದಷ್ಟು ಚಿಕ್ಕದಾಗಿರಬೇಕು; ಅರ್ಥವತ್ತಾಗಿರ

[1] James A Kelso : *Encyclopaedia of Religion and Ethics*, Vol. x, p. 412

ಬೇಕು: ಲೋಕಪ್ರಿಯತೆಯನ್ನು ಗಳಿಸುವಂಥದಾಗಬೇಕು: ಅನುಭವಸಾರ ಸಾಂದ್ರವಾಗಿರಬೇಕು: ತನ್ನ 'ಗಾದೆ ಮತ್ತು ಅದರ ಪಾಠಗಳು' ಎಂಬ ಗ್ರಂಥದಲ್ಲಿ ಆರ್. ಸಿ. ಟ್ರೆಂಚ್ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾನೆ. ಸಂಕ್ಷಿಪ್ತತೆ ಮತ್ತು ಯೋಗ್ಯತೆಗಳೇ ಕಾರಣವಾಗಿ ಪ್ರಳಯದಲ್ಲಿಯೂ ಉಳಿದು ಕೊಂಡಿರುವ ಪ್ರಾಚೀನ ದರ್ಶನದ ಪಳೆಯುಳಿಕೆಯೇ ಗಾದೆ ಎಂದು ಅರಿಸ್ಟಾಟಲ್ ಹೇಳಿದ್ದಂತೆ. ದೀರ್ಘಾನುಭವದ ಹ್ರಸ್ವವಾಕ್ಯವೇ ಗಾದೆ ಎಂಬುದು ಸರ್ವಾಂಟೀಸನ ಮತ. ಹಲವರ ವಿವೇಕ ಒಬ್ಬನ ವಾಕ್ಚಾತುರ್ಯವಾಗಿ ಹೊಮ್ಮಿರುವುದೇ ಗಾದೆ ಎಂದು ಜಾನ್ ರಸೆಲ್ ಅಭಿಪ್ರಾಯಪಟ್ಟಿದ್ದಾನೆ. ಅದು ರಾಷ್ಟ್ರೀಯ ಆಲೋಚನೆಯ ಕೆನೆ ಎಂಬುದಾಗಿ ಹೇಳಿದವರೂ ಇದ್ದಾರೆ.

"ಗಾದೆಗಳೆಂದರೆ ಜನಸಾಮಾನ್ಯರಲ್ಲಿ ಚಲಾವಣೆಯಲ್ಲಿರುವ, ಸಾರ್ವಜನಿಕ ಮನ್ನಣೆ ಪಡೆದಿರುವ ಪ್ರಚಲಿತವೂ ಸ್ವೀಕೃತ ಮೌಲ್ಯಭರಿತವೂ ಆಗಿರುವ ವಾಕ್ಯ. ಇದನ್ನು ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ, ಜನತೆಯ ಕೌಟುಂಬಿಕ ಪದವೇ ಗಾದೆಯೆನಿಸಿಕೊಳ್ಳುತ್ತದೆ." ಇದು ಇಕೆಲಿಯಸ್ ಎಂಬ ಜರ್ಮನ್ ಗಾದೆಗಳ ಸಂಗ್ರಹಕಾರನ ನಿರೂಪಣೆ. ಎಸ್. ಜಿ. ಚಾಂಪಿಯನ್ ಈ ಬಗ್ಗೆ ಆಡಿರುವ ಮಾತುಗಳಿವು: "ನನ್ನ ಅಭಿಪ್ರಾಯದಲ್ಲಿ ಗಾದೆಗಳೆಂದರೆ, ಜನಬಳಕೆಯಲ್ಲಿದ್ದು. ಈಗಲೂ ಇರುವ, ಉಪದೇಶಾತ್ಮಕ ಅಥವಾ ಸಲಹೆಯನ್ನು ನೀಡುವ, ನಿಜವಾದ ಅರ್ಥವನ್ನು ಮರೆಸಿ ಅಲಂಕಾರಿಕವಾಗಿ ವ್ಯಕ್ತವಾಗುವ. ರೂಪಕ ಅಥವಾ ಗೂಢಾರ್ಥದ್ಯೋತಕವಾಗಿ ರೂಪ ಬದಲಿಸಿ ಕಾಣಿಸಿಕೊಳ್ಳುವ ಜನಾಂಗವೊಂದರ ಸೂಕ್ತಿಯೇ ಆಗಿದೆ."[1] "ಒಂದು ರಾಷ್ಟ್ರದ ಪ್ರತಿಭೆ, ಬುದ್ಧಿ ಚಮತ್ಕಾರ ಮತ್ತು ಸತ್ವಗಳನ್ನು ಅದರ ಗಾದೆಗಳಲ್ಲಿ ಕಾಣಬಹುದು" ಎಂದು ಬೇಕನ್ ಹೇಳಿದ ಮಾತು ಉತ್ಪ್ರೇಕ್ಷೆಯಲ್ಲ.

ಮೇಲಿನ ಅಭಿಪ್ರಾಯಗಳನ್ನು ವಿಶ್ಲೇಷಿಸುವಾಗ, ಗಾದೆಯ ಆಕಾರ ಸಂಕ್ಷಿಪ್ತತೆಯೆಂದೂ. ಸಾವಿರ ಮಾತಿನಲ್ಲಿ ಹೇಳಬಹುದಾದ್ದನ್ನು ನಾಲ್ಕು ಮಾತು ಒಳಗೊಂಡಿರುತ್ತದೆಂದೂ. ಒಂದು ಜನಾಂಗದ ದೀರ್ಘಕಾಲದ ವಿವೇಕಾನುಭವಗಳು ಭಟ್ಟಿಯಾದ ಮಾತ್ರೆಗಳೇ ಅವೆಂದೂ. ಅನುಭವವೇ ಅವುಗಳ ಉಸಿರೆಂದೂ, ಕಲಾತ್ಮಕತೆ ಅವುಗಳ ಜೀವಾಳವೆಂದೂ. ಸಂಜೀವನ ಶಕ್ತಿ ಮತ್ತು ಲೋಕಪ್ರಿಯತೆ ಅವುಗಳ ಚಲಾವಣೆಯ ಮರ್ಮವೆಂದೂ ಹೇಳಬಹುದಾಗಿದೆ. ನೂರಾರು ಜ್ಞಾನವೃದ್ಧರ ವಿವೇಕಿಗಳ ಅನುಭವಾಮೃತದ ರಸಾಯನವೇ ಗಾದೆ: ಅದು ಬಹುಕಾಲದ ಪರಂಪರೆಯ ... ಹಲವು ತೀಕ್ಷ್ಣಮತಿಗಳ ... ನೂರಾರು ಜನಗಳ ... ಗಳ ಹಿಂದೆ ನೂರಾರು ಜನಗಳ ಅನುಭವ ಶಿಕ್ಷಣ ಮತ್ತು ಪ್ರಯೋಗಗಳೇ ಅದರ ಉಗಮಕ್ಕೆ ಕಾರಣ. ಗಾದೆ ಎಲ್ಲ ಜ್ಞಾನ ವಿಜ್ಞಾನಗಳ ತವರು ಎಂದು ಹೇಳಿದರೆ ತಪ್ಪಾಗಲಾರದು. ಎಲ್ಲ

1 ರಾಗೌ ಅವರು 'ನಮ್ಮ ಗಾದೆಗಳು' ಎಂಬ ತಮ್ಮ ಗ್ರಂಥದಲ್ಲಿ ಇದು ಮತ್ತು ಇಂತಹ ಹಲವು ಉದ್ಧರಣಗಳನ್ನು ಸೇರಿಸಿದ್ದಾರೆ, ಪುಟ ೧೨-೧೩.

ಜನಪದ ಸಾಹಿತ್ಯ ಪ್ರಕಾರಗಳ ಸಾಧಾರಣ ಲಕ್ಷಣಗಳಾದ ಅಜ್ಞಾತ ಕರ್ತೃತ್ವ ಮತ್ತು ಮೌಖಿಕ ಸಂಪ್ರದಾಯಗಳು ಇದಕ್ಕೂ ಅನ್ವಯಿಸುತ್ತವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಒಟ್ಟನಲ್ಲಿ ಅನುಭವ ಸಾಂದ್ರತೆ, ಲೋಕಮಾನ್ಯತೆ, ಉಕ್ತಿರಮಣೀಯತೆ ಮತ್ತು ಸೂತ್ರಾತ್ಮಕತೆ ಅದರ ಗುಣಗಳೆಂದು ಹೇಳಬಹುದು.

ಬದುಕಿನ ಅನಿವಾರ್ಯಾಂಶವಾಗಿರುವ ಗಾದೆಯ ಬಗೆಗೆ ಪಾಮರ ಪಂಡಿತರಾದಿಯಾಗಿ ಸರ್ವರೂ ಮುಕ್ತಕಂಠದಿಂದ ಪ್ರಶಂಸೆಯ ವರ್ಷ ಕರೆದಿದ್ದಾರೆ. ಒಂದು ರಾಷ್ಟ್ರದ ಪ್ರತಿಭೆ ವಾಕ್ಚಾತುರ್ಯ ಮತ್ತು ಅಂತಸ್ಸತ್ವಗಳನ್ನು ಗಾದೆಗಳಲ್ಲಿ ಮಾತ್ರ ಕಾಣಬಹುದೆಂದು ಬೇಕನ್ ಹೇಳುತ್ತಾನೆ. ವಿಚಾರ ಸಾಹಿತ್ಯದ ಮತ್ತು ಸತ್ಯವಾಕ್ಯಗಳ ತವನಿಧಿ ಗಾದೆಗಳು; ಅವು ಆಯಾಯ ರಾಷ್ಟ್ರದ ಪವಿತ್ರ ವಸ್ತುಗಳು ಹಾಗೂ ಕಾಶಿ ರಾಮೇಶ್ವರಗಳು ಎಂಬುದು ಎಮರ್ಸನ್ನನ ಅಭಿಪ್ರಾಯ. ಗ್ರಂಥಗಳು ಹುಟ್ಟುವುದಕ್ಕೆ ಮುಂಚೆ ಗಾದೆಗಳಿದ್ದುವೆಂದೂ, ಅವು ಪಾಮರನೀತಿಯ ಸಂಗ್ರಹಗಳೆಂದೂ, ಪುರಾತನಯುಗದ ಅಲಿಖಿತ ಧರ್ಮಶಾಸ್ತ್ರಗಳೆಂದೂ ಡಿಸ್‌ರೇಲಿಯ ವಾದ. "ಜನಾಂಗದಲ್ಲಿ ಪ್ರಚಾರದಲ್ಲಿರುವ ತಿಳಿವು ತನ್ನ ಮನಸ್ಸಿನಲ್ಲಿ ಬಿದ್ದಾಗ ನಾಲ್ಕು ಮಾತಿನಲ್ಲಿ ಘನಿಸಿ ಮುತ್ತಿನಂತಾಗುತ್ತದೆ. ಹಲವರ ಭಾವ ಒಬ್ಬನ ಮಾತಿನಲ್ಲಿ ಕಂಡು ಆ ಮಾತು ಹಲವರ ಮಾತಾಗುತ್ತದೆ. ಗಾದೆಗಳನ್ನು ನೋಡಿದರೆ ಜನಾಂಗದ ಮನಸ್ಸು ಎಂಥದೆಂದು ಊಹಿಸಲು ಸಾಧ್ಯವಾಗುವುದಕ್ಕೆ ಇದೇ ಕಾರಣ[1]" ಎಂದು ಮಾಸ್ತಿಯವರು ಸ್ಪಷ್ಟಪಡಿಸುತ್ತಾರೆ. ಅವರೇ ಮತ್ತೊಂದು ಕಡೆ ಹೀಗೆ ಹೇಳುತ್ತಾರೆ: "ಜಾಣಮನ ಒಂದು ಯಾವುದೋ ಸಂದರ್ಭದಲ್ಲಿ ತೋಚಿದ ಎಣಿಕೆಗೆ ಚಮುರಾದ ನುಡಿಯಲ್ಲಿ ರೂಪುಗೊಡುತ್ತದೆ. ಕೇಳಿದ ಜನ ಅದರ ದಿಟಕ್ಕೆ, ಚೆಲುವಿಗೆ ಮನಸೋತು ಅದನ್ನು ನೆನಪಿನಲ್ಲಿಡುತ್ತದೆ. ಅಂಥ ಸಂದರ್ಭ ಮತ್ತೆ ಬಂದಾಗ ಅದನ್ನು ಉದಾಹರಿಸುತ್ತದೆ. ಹೀಗಾಗಿ ಆ ನುಡಿ ನಾಡನುಡಿಯಾಗುತ್ತದೆ, ಬೆಲೆ ಪಡೆಯುತ್ತದೆ, ನಾಣ್ಯವಾಗಿ ನುಡಿಯುತ್ತದೆ." "ಗಾದೆ ಸಿದ್ಧಿಸಿದ ನುಡಿ, ಜನವಾಣಿ, ದೇವವಾಣಿ. ಸತ್ಯ ಗಾದೆ ಮೂರ್ಖ ಈ ಮೂವರನ್ನೂ ಎದುರಿಸಲಾಗದು. ಗಾದೆ ದೇವರ ಭೇರಿ"[2] ಎಂಬ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮಾತಿನಲ್ಲಿ ಸತ್ಯವಿದೆ. "ಗಾದೆ ಮಾತು ಜನತೆಯ ಮನಸ್ಸನ್ನು ಒಂದು ಮುಖದಲ್ಲಿ ಬಿಂಬಿಸುತ್ತದೆ; ಮತ್ತೊಂದು ಮುಖದಲ್ಲಿ ಆಳುತ್ತದೆ. ಅವರ ಅನುದಿನದ ನಂಟುಗಳನ್ನು ನಡೆಸುತ್ತದೆ; ಗಂಟುಗಳನ್ನು ಬಿಡಿಸುತ್ತದೆ."[3] ಎ. ಕೆ. ರಾಮಾನುಜಂ ಅವರು ಗಾದೆಯನ್ನು ಕಂಡ ರೀತಿ ಇದು. ಒಟ್ಟನಲ್ಲಿ ಗಾದೆಗಳು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದಾದ ಸುಂದರ ಸೂಕ್ತಿಗಳು; ಆದ್ಯಂತ್ಯಗಳಿಲ್ಲದ, ಸಂಕ್ಷಿಪ್ತ ಬ್ರಹ್ಮಾಂಡದಂತಿರುವ, ಅಣುಸ್ವರೂಪದ ಶಕ್ತಿಬೀಜಗಳು, ತತ್ತ್ವಶಾಸ್ತ್ರ, ವೇದಾಂತ, ಚರಿತ್ರೆ, ನೀತಿಶಾಸ್ತ್ರ ಮೊದಲಾದುವನ್ನೊಳಗೊಂಡು, ಅವುಗಳಿ

1 ಕರ್ನಾಟಕದ ಜನತೆಯ ಸಂಸ್ಕೃತಿ, ಪು. ೪೯–೫೦.

2 ಗಾದೆಗಳಲ್ಲಿ ನೀತಿ, ಜೀವನ, ಸೆಪ್ಟೆಂಬರ್, ೧೯೬೪.

3 ಗಾದೆಗಳು, ಪು. ೮೪

ಗಿಂತ ಶೀಘ್ರಬೋಧಪ್ರದವಾಗಿರುವ ಸಮರ್ಥ ಜ್ಞಾನ ಮಾಧ್ಯಮಗಳಿವೆ; ಅವು ಶಾಸ್ತ್ರ ಪ್ರವೃತ್ತಿಯುಳ್ಳವಾದರೆ ಇವು ಪ್ರಯೋಗ ಪ್ರವೃತ್ತಿಯುಳ್ಳವು.

ದೇಶವಿದೇಶಗಳಲ್ಲಿ ಚಲಾವಣೆಯಲ್ಲಿರುವ ಗಾದೆಗಳ ಬಗೆಗಿನ ಗಾದೆಗಳು ಇದೇ ಅಭಿಪ್ರಾಯವನ್ನು ವಿಶದಪಡಿಸುತ್ತವೆ. ಗಾದೆ ಎಂದೂ ಸುಳ್ಳು ಹೇಳುವುದಿಲ್ಲ (ಜರ್ಮನಿ). ಸಣ್ಣ ಸೂಕ್ತಿ ಬ್ರಹ್ಮಾಂಡದಷ್ಟು ವಿವೇಕವನ್ನು ಹೊತ್ತಿರುತ್ತದೆ (ಗ್ರೀಸ್). ಮಾನವನ ಯೋಚನೆಯೇ ಗಾದೆಯಾಗಿ ಹೊಮ್ಮುತ್ತದೆ (ಸ್ವೀಡನ್). ನಿಜವಲ್ಲದ ಗಾದೆಯಿಲ್ಲ (ಸ್ಪೈಯಿನ್). ಎಲ್ಲರೂ ಹೇಳಿದ್ದು ನಿಜವಿರಲೇಬೇಕು (ಇಂಗ್ಲೆಂಡ್). ದೈನಂದಿನ ಅನುಭವಗಳ ಹೆಣ್ಣುಮಕ್ಕಳೇ ಗಾದೆಗಳು (ಹಾಲೆಂಡು). ಗಾದೆ ಸುಳ್ಳಾದರೂ ಹಾಲು ಹುಳಿಯಾಗುತ್ತದೆ (ಮಲಯಾಳಂ). ಗಾದೆ ಬಲ್ಲವ ಜಗಳ ಬಿಡಿಸಬಲ್ಲ (ಆಫ್ರಿಕಾ).

ಗಾದೆಗಳ ಕರ್ತೃತ್ವ ಅಜ್ಞಾತವಾಗಿರುವಂತೆ ಅವುಗಳ ಜನ್ಮ ಕಾಲ ಮತ್ತು ಸ್ಥಳಗಳೂ ಅಜ್ಞಾತವೆಂಬುದು ಸುಸ್ಪಷ್ಟ. ಅವು ಮೌಖಿಕ ಪರಂಪರೆಯಿಂದ ಉಳಿದುಬಂದುವಾದ್ದರಿಂದ ಅವುಗಳ ಚಾರಿತ್ರಿಕ ವಿಕಾಸವನ್ನು ಗುರುತಿಸುವುದೂ ಕಷ್ಟವಾಗುತ್ತದೆ. ಅವು ಪ್ರಾಚೀನ ತತ್ವಶಾಸ್ತ್ರದ ಪಳೆಯುಳಿಕೆಗಳೆಂದು ಅರಿಸ್ಟಾಟಲ್ ಹೇಳುವಲ್ಲಿ ಅವು ಅವನಿಗಿಂತ ನೂರಾರು ವರ್ಷಗಳ ಹಿಂದಿನಿಂದ ಚಾಲ್ತಿಯಲ್ಲಿದ್ದುವೆಂದು ಹೇಳಬಹುದೇ ಹೊರತು, ಎಷ್ಟು ಹಿಂದಿನಿಂದ ಇದ್ದುವೆಂದು ಕರಾರುವಾಕ್ಕಾಗಿ ಹೇಳಲಾಗದು. ಕಾರಣ ವಿಚಾರವನ್ನು ಆಧಾರವಾಗುಳ್ಳ ಯಾವುದೋ ಒಂದು ಭಾವನೆಯನ್ನುಳ್ಳ ವಾಕ್ಯವೇ ಗಾದೆ ಎಂದು ತೊಲ್‌ಕಾಪ್ಪಿಯನರ್ ಗ್ರಂಥದಲ್ಲಿ ಉಲ್ಲೇಖವಿರುವುದರಿಂದ ತಮಿಳಿನಲ್ಲಿ ಆ ಹಿಂದೆಯೇ ಗಾದೆಗಳ ಬೆಳೆ ಹುಲುಸಾಗಿತ್ತೆಂದು ಧಾರಾಳವಾಗಿ ಹೇಳಬಹುದು. "ಕುಱಿ ತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್" ಎಂದು ಕವಿರಾಜಮಾರ್ಗಕಾರ ಕನ್ನಡಿಗರನ್ನು ಕುರಿತು ಹೇಳುವಾಗ ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದಾನೆ.
"ಎರಡಕ್ಕೆ ಬಟ್ಟೆ ಕಱುವಂ ಪೋಲ್ಗುಂ" ಮೊದಲಾದ ಗಾದೆಗಳು ಪಾಮರ ಸೃಷ್ಟಿಯೆಂಬುದು
ಸ್ಪಷ್ಟ. ಕನ್ನಡ ಭಾಷೆಯಲ್ಲಿಯೂ ಅವು ಸಮೃದ್ಧವಾಗಿದ್ದುವೆನ್ನುವುದಕ್ಕೆ ವಡ್ಡಾರಾಧನೆ
ಮೊದಲಾದ ಗ್ರಂಥಗಳಲ್ಲಿ ಉದ್ಧೃತವಾಗಿರುವ ವಾಕ್ಯಗಳೇ ಸಾಕ್ಷಿ.
ಶಿಷ್ಟವೋ ಕ್ಷುದ್ರವೋ, ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಗಾದೆಗಳು ಹೇರಳ
ವಾಗಿವೆ. ನೂರಾರು ಮಂದಿ ಮಾತಾಡುವ ಕ್ಷುಲ್ಲಕ ಭಾಷೆಗಳಲ್ಲಿಯೂ ಅವು ಇದ್ದೇ ಇವೆ.
ಗಾದೆಗಳಿಲ್ಲದ ಭಾಷೆ ಶೋಭಿಸುವುದಿಲ್ಲ. ಭಾಷೆಯ ಉಗಮದೊಡನೆಯೇ ಗಾದೆ ಹುಟ್ಟಿ
ಕೊಂಡಿರಬೇಕು. ಆದಿಮಾನವನ ಭಾಷೆ ಸಾಂಕೇತಿಕವಾಗಿ ಸರಳವಾಗಿದ್ದಿರಬೇಕು. ಅದು
ಪ್ರತ್ಯಯಸಮುಚ್ಚಯವಾಚಕಗಳಿಂದ ಮುಕ್ತವಾಗಿತ್ತು. ವಾಕ್ಯಗಳು ಪುಟ್ಟಪುಟ್ಟವಾಗಿದ್ದು
ಅಕ್ಲಿಷ್ಟವಾಗಿದ್ದುವು. ಅವರಲ್ಲಿ ಬುದ್ಧಿಗಿಂತ ಭಾವನೆಯೇ ಪ್ರಧಾನವಾಗಿದ್ದುದರಿಂದ ಭಾವ
ಸಂವಹನಕ್ಕೆ ಅವಶ್ಯವಾದ ಭಾಷೆ ಸೃಷ್ಟಿಗೊಂಡಿತು. ಆದ್ದರಿಂದ ಭಾಷೆ ಸರಳ ಲಯ
ಬದ್ಧವಾಗಿ ಸಮತೂಕವಾಗಿ ಹೊರಹೊಮ್ಮಿರಬೇಕು. ಈಗ ಅವರು ಆಡಿದ್ದೆಲ್ಲ ಗಾದೆ
ಯಾಗಿರಬೇಕು, ಕಾವ್ಯಮಯವಾಗಿರಬೇಕು. ಸಾಹಿತ್ಯ ಪ್ರಕಾರಗಳಲ್ಲೆಲ್ಲ ಗಾದೆಯೇ

ಅತ್ಯಂತ ಪ್ರಾಚೀನವಾದುದಾಗಿರಬೇಕು. ಹುಟ್ಟಿದ್ದೆಲ್ಲ ಎಂದೆಂದಿಗೂ ಉಳಿಯುತ್ತದೆಂದು ಹೇಳುವಂತಿಲ್ಲ. ಚಿರಮೌಲ್ಯಗಳನ್ನೊಳಗೊಂಡು ಬಹುಜನ ಮಾನ್ಯತೆಯನ್ನು ಪಡೆದವು ಮಾತ್ರ ಉಳಿಯಿತು; ಬಾಕಿಯವು ಮರೆಯಾದುವು.

ಮಾನವ ವಿಕಾಸಗೊಂಡಂತೆಲ್ಲ, ಅವನ ಆಚಾರವಿಚಾರಗಳು ಪ್ರಬಲವಾದಂತೆಲ್ಲ, ಜ್ಞಾನದ ದಿಗಂತ ಮುಂಚಾಚಿದಂತೆಲ್ಲ, ಅವನ ಕ್ರಿಯಾಕ್ಷೇತ್ರ ವಿಸ್ತೃತವಾದಂತೆಲ್ಲ, ಸಾಮಾಜಿಕ ಜೀವನ ವ್ಯವಸ್ಥೆಗೊಂಡಂತೆಲ್ಲ, ಸಂಘಸಂಸ್ಥೆಗಳು ವೃದ್ಧಿಗೊಂಡಂತೆಲ್ಲ, ಪರಸ್ಪರ ಸಂಪರ್ಕ ಗಾಢವಾದಂತೆಲ್ಲ, ಗಾದೆಗಳು ನಾನಾ ಆಯಾಮಗಳನ್ನೊಳಗೊಂಡು ವೈವಿಧ್ಯಮಯವಾಗಿ ಬ್ರಹ್ಮಾಂಡದಂತೆ ಬೆಳೆದದ್ದುಂಟು. ಅವು ಚೆಲುವಾಗಿ ಚಿಕ್ಕದಾಗಿದ್ದು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದಾಗಿದ್ದುದರಿಂದ ಅನೇಕರ ನಾಲಗೆಯಲ್ಲಿ ನಿಂತುವು. ಅವನ್ನು ಯಾರೂ ಉದ್ದೇಶಪೂರ್ವಕವಾಗಿ ಕಲಿತದ್ದಲ್ಲ. ಅವು ಜೀವನಾನುಭವದ ಒಂದು ಭಾಗವಾಗಿ ಉಳಿದುವು. ಗಾದೆಯಿಲ್ಲದ ಮಾತು ಎಲ್ಲರಿಗೂ ನೀರಸವಾಗಿ ಕಂಡಿರಬೇಕು. ಅನೇಕ ವರ್ಷಗಳ ತನಕ ಅವೇ ಅವರ ಸಾಹಿತ್ಯವಾಗಿ, ಚರಿತ್ರೆಯಾಗಿ, ವಿಶ್ವಕೋಶವಾಗಿ, ನೀತಿಶಾಸ್ತ್ರವಾಗಿ, ಶಾಸನವಾಗಿ, ಸಮಾಜಕ್ಕೆ ಮಾರ್ಗದರ್ಶಕವಾಗಿ, ಬಾಳಿಗೆ ಊರೆಗೋಲಾಗಿ, ಜನಜೀವನವನ್ನು ರೂಪಿಸಿದ್ದುಂಟು, ಪೋಷಿಸಿದ್ದುಂಟು, ಉನ್ನತಗೊಳಿಸಿದ್ದುಂಟು. ಜೀವನ ವಿಕಾಸಗೊಂಡಂತೆಲ್ಲ ಹೊಸ ಆಲೋಚನೆ, ಹೊಸ ಅನುಭವ, ಹೊಸ ಪ್ರೇರಣೆಗಳು, ಹೊಸ ತತ್ವಗಳು, ನೂತನ ಜೀವನದರ್ಶನಗಳು ಮೊಗದೋರುವುದುಂಟು. ಆಗ ಹೊಸ ಗಾದೆಗಳು ಸೃಷ್ಟಿಗೊಳ್ಳುತ್ತವೆ. ಹೊಸತು ಹಳತುಗಳಿಗೆ ಸ್ಪರ್ಧೆ ನಡೆದು, ಹಳೆಯವಲ್ಲಿ ಕೆಲವು ಕೊಚ್ಚಿಹೋಗಬಹುದು, ಸಶಕ್ತವಾದುವು ಉಳಿಯಬಹುದು, ಮತ್ತೆ ಕೆಲವು ರೂಪಾಂತರಗೊಳ್ಳಬಹುದು. ಜನ್ಮಾಂತರ ಮತಾಂತರ ದೇಶಾಂತರಗಳ ಬವಣೆಗೂ ಅವು ಹೊರಗಲ್ಲ.

ಗಾದೆ ಬಳಕೆಯಿಂದ ಸಮಷ್ಟಿ ಸೃಷ್ಟಿಯೆಂದು ಹೇಳಬಹುದಾದರೂ ಮೂಲತಃ ವ್ಯಷ್ಟಿ ಸೃಷ್ಟಿಯೆಂಬುದು ಮಾತ್ರ ಸತ್ಯ. ನಾಲ್ಕು ಜನ ಸೇರಿ ಮನೆಯನ್ನೋ ಮಠವನ್ನೋ ಹಡಗನ್ನೋ ಕಟ್ಟುವಂತೆ ಗಾದೆ ಸಾಮುದಾಯಿಕವಾಗಿ ರಚನೆಗೊಳ್ಳಲಿಲ್ಲ. ಯಾವುದೋ ಒಂದು ಕಾಲದಲ್ಲಿ ಒಂದು ಜಾಗದಲ್ಲಿ ಅನುಭವಿಯಾದ ಜಾಣವ್ಯಕ್ತಿ ಕಟ್ಟಿದ್ದು ಅದು. ಕೀರ್ತಿಕಾಮನೆಯಿಂದ, ಅರ್ಥವ್ಯಾಮೋಹದಿಂದ, ತಾನು ಕಟ್ಟಿದ್ದು ಅಜರಾಮರವಾಗಿರಬೇಕೆಂಬ ದೃಷ್ಟಿಯಿಂದ ಅದು ರೂಪುದಾಳಿದ್ದಲ್ಲ. ಒಂದು ಸಮುದಾಯದ ಅನುಭವ ಒಬ್ಬನ ಭಾಷೆಯಲ್ಲಿ ಹರಳುಗೊಂಡು ಪ್ರಕಟವಾಯಿತೆಂದು ಹೇಳಿದರೂ ಒಪ್ಪುತ್ತದೆ. ಬಾಳಿನ ಸಾರಸರ್ವಸ್ವವಾಗಿ ಅದು ಹೊರಹೊಮ್ಮಿತು; ಗಾಳಿಯಲ್ಲಿ ತೇಲಿತು, ಮತ್ತೊಂದು ಕಿವಿಯನ್ನು ತಾಕಿತು, ಮಗುದೊಂದು ಮನಸ್ಸನ್ನು ಸೆರೆಹಿಡಿಯಿತು, ಸಂತೆ ಜಾತ್ರೆ ಹಬ್ಬ ನೆರವಿಗಳಲ್ಲಿ ಸೇರಿದ ಜನರಿಗೆ ಅದು ಪ್ರಿಯವಾಯಿತು. ಕೊನೆಗೆ ಇಡೀ ಸಮಾಜದ ಅಥವಾ ಜನಾಂಗದ ಆಸ್ತಿಯಾಗಿ ಉಳಿಯಿತು.

ಗಾದೆ ಬಾಯಿಂದ ಬಾಯಿಗೆ. ಕಿವಿಯಿಂದ ಕಿವಿಗೆ, ಪೀಳಿಗೆಯಿಂದ ಪೀಳಿಗೆಗೆ

ಪ್ರಯಾಣಮಾಡುವಾಗ ಅನೇಕ ರೂಪಾಂತರಗಳನ್ನು ಪಡೆಯುವದುಂಟು. ಉದಾಹರಣೆಗಾಗಿ ಒಂದು ಗಾದೆಯ ಪಾಠಾಂತರಗಳನ್ನು ಗಮನಿಸಬಹುದು :

ಆಚೆ ಮನೇಳು ವಾಲೆ ಇಕ್ಕೊಂಡಿದ್ಕೆ
ಈಚೆ ಮನೇಳು ಕಿವಿ ಕಿತ್ಕೊಂಡಳು.
ಆಚೆ ಮನೇಳು ವಾಲೆ ಇಕ್ಕೊಂಡಿದ್ಕೆ
ಈಚೆ ಮನೇಳು ಆಲೆ ಕಿತ್ಕೊಂಡಳು.

ಎರಡನೆಯ ಪಾಠಾಂತರ ಪ್ರಾಸಬದ್ಧವಾಗಿರುವದಲ್ಲದೆ. ಮೊದಲಿನದಕ್ಕಿಂತ ಸ್ವಾರಸ್ಯವಾಗಿದೆ. ಈ ಗಾದೆ ಮೊದಲು ಹುಟ್ಟಿಕೊಂಡಾಗ 'ಕಿವಿ' ಎನ್ನುವ ಪದವೇ ಇದ್ದು, ಕಾಲಾನಂತರದಲ್ಲಿ ಸಂಸ್ಕಾರಗೊಂಡಂತೆ ಕಾಣುತ್ತದೆ. ಗಾದೆಯ ಒಂದು ಭಾಗ ಬಿಟ್ಟು ಹೋಗುವ್ರದೂ, ಹೊಸದಾಗಿ ಒಂದು ಭಾಗ ಸೇರುವ್ರದೂ ಉಂಟು.[1] ಹೀಗೆ ವಿಷಯಾಂತರ ಭಾವಾಂತರ ಅನುಭಾವಾಂತರ ಭಾಷಾಂತರವಾಗಿ ಗಾದೆಗಳಲ್ಲಿ ಕಾಲಕ್ರಮೇಣ ಅನೇಕ ವ್ಯತ್ಯಾಸಗಳು ತಲೆದೋರುತ್ತವೆ.

ಗಾದೆಗಳು ಹುಟ್ಟಿದ ಜಾಗದಲ್ಲಿಯೇ ಸುತ್ತುತ್ತವೆ, ಅಥವಾ ಯಾವ್ರದೋ ಒಂದು ಪ್ರದೇಶಕ್ಕೆ ಮಾತ್ರ ಸೀಮಿತಗೊಳ್ಳುತ್ತವೆ ಎಂದು ಹೇಳಲಾಗದು. ಅವು ಭಾಷೆ ದೇಶ ಮತಗಳ ಸೀಮೆಗಳನ್ನು ದಾಟಿ ಸಂಚಾರಮಾಡಬಹುದು. ಪ್ರವಾಸಪ್ರಿಯತೆ, ಸಾಹಸ ಮನೋಧರ್ಮ, ಜ್ಞಾನಕುತೂಹಲ, ಮತ್ತು ವ್ಯಾಪಾರ ವಾಣಿಜ್ಯಗಳು ಪುರಾತನಕಾಲದಿಂದ ಮಾನವನನ್ನು ಊರಿಂದೂರಿಗೆ, ರಾಜ್ಯದಿಂದ ರಾಜ್ಯಕ್ಕೆ ನಾಡಿನಿಂದ ನಾಡಿಗೆ ಕೊಂಡೊಯ್ಯುತ್ತಿವೆಯಷ್ಟೆ. ಅಂಥ ಪರ್ಯಟನಕಾಲದಲ್ಲಿ ಒಂದು ಸ್ಥಳದಲ್ಲಿ ಕೆಲವು ದಿನ ನಿಂತನೆಂದರೆ, ಸ್ಥಳೀಯ ಜನರೊಂದಿಗೆ ವಿಚಾರವಿನಿಮಯ ನಡಸುತ್ತಾನೆ. ಆಗ ಅಪ್ರಜ್ಞಾಪೂರ್ವಕವಾಗಿ ಸ್ವಸ್ವರೂಪದಲ್ಲಿಯೋ ವಿಕೃತರೂಪದಲ್ಲಿಯೋ ಗಾದೆಗಳ ಕೊಳು ಕೊಡೆ ನಡೆಯುತ್ತದೆ. ರಾಷ್ಟ್ರ ರಾಷ್ಟ್ರಗಳೊಳಗೆ ಯುದ್ಧ ನಡೆದು, ಗೆದ್ದ ರಾಷ್ಟ್ರ ಸೋತ ರಾಷ್ಟ್ರದ ಮೇಲೆ ನಾನಾರೀತಿಯಾಗಿ, ಅದರಲ್ಲಿಯೂ ಸಾಂಸ್ಕೃತಿಕವಾಗಿ ಪ್ರಭಾವ ಬೀರುವದುಂಟು. ಸೋತ ರಾಷ್ಟ್ರ ಸಾಂಸ್ಕೃತಿಕವಾಗಿ ಮಹತ್ವದ್ದಾಗಿದ್ದ ಪಕ್ಷದಲ್ಲಿ ಗೆದ್ದ ರಾಷ್ಟ್ರ ಅಲ್ಲಿಯ ಅನೇಕ ಸಾಂಸ್ಕೃತಿಕ ವಿಷಯಗಳನ್ನು ನಕಲುಮಾಡಿಕೊಳ್ಳಬಹುದು. ರೋಮನ್ನರು ಭಾಷಾಂತರದ ಮೂಲಕ ಗ್ರೀಕರ ಸಾರಸ್ವತ ಪ್ರಪಂಚವನ್ನು ಸೂರೆ [illegible]ಉಂಟು. ಲ್ಯಾಟಿನ್ ಬೈಬಲ್ಲಿನ ಭಾಷೆಯಾಗಿ, ಚರ್ಚಿನ ಭಾಷೆಯಾಗಿ [illegible] ದದ್ದರ ಪರಿಣಾಮವಾಗಿ ಅದು ಯುರೋಪಿನ ಜನರಿಗೆ [illegible]. ಆಗ ಗ್ರೀಕ್ ಭಾಷೆಯ ಬಹುತೇಕ ಗಾದೆಗಳು ಲ್ಯಾಟಿನ್ ಭಾಷೆಗೆ [illegible]. [illegible] ಪಾದ್ರಿಗಳು ಮತ್ತು ಪುರೋಹಿತರು ತಾವೇ ಸ್ವತಃ [illegible] ಗಾದೆಗಳನ್ನು [illegible]

1. [illegible] 'ಗಾದೆಗಳು' ಎಂಬ ತಮ್ಮ ಪುಸ್ತಕದ [illegible] ಅನೇಕ ಸಾಕಷ್ಟು ವಿವರ ಮತ್ತು ನಿದರ್ಶನಗಳನ್ನು ನೀಡಿದ್ದಾರೆ. [illegible] ಓದಬಹುದು.

ಚಲಾವಣೆಗೆ ಬಿಟ್ಟಿರಬೇಕು. ಅದು ಮತೀಯ ಭಾಷೆಯಾದ್ದರಿಂದ ಎಲ್ಲ ದೇಶಭಾಷೆಗಳಲ್ಲಿ ಅಲ್ಲಿಯ ಗಾದೆಗಳು ಸೇರಿಕೊಂಡಿರಬೇಕು. ಅಂತೆಯೇ ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಫ್ರೆಂಚ್ ಭಾಷೆ ಯೂರೋಪಿನಲ್ಲೆಲ್ಲ ಗೌರವಸ್ಥಾನ ಪಡೆದಾಗ ಅಲ್ಲಿಯ ಗಾದೆಗಳು ಬಹುಸಂಖ್ಯೆಯಲ್ಲಿ ದೇಶಭಾಷೆಗಳೊಳಗೆ ನುಸುಳಿಕೊಂಡಿರಬೇಕು. ಹೀಬ್ರೂ ಭಾಷೆಯ ಹಳೆಯ ಒಡಂಬಡಿಕೆಯ ಮೂಲಕ ಪೌರ್ವಾತ್ಯ ಗಾದೆಗಳು ಪಶ್ಚಿಮದೇಶ ಗಳಿಗೆ ತೆರಳಿರಬೇಕು.

ಪೂರ್ವದಿಂದ ಪಶ್ಚಿಮಕ್ಕೆ, ಪಶ್ಚಿಮದಿಂದ ಪೂರ್ವಕ್ಕೆ ಗಾದೆಗಳು ಓಡಾಡುವಾಗ, ಭಾರತದಂಥ ರಾಷ್ಟ್ರದಲ್ಲಿ ರಾಜ್ಯ ರಾಜ್ಯಗಳ ಮತ್ತು ಭಾಷೆ ಭಾಷೆಗಳ ನಡುವಣ ಕೊಳು ಕೊಡೆ ವಿಶೇಷ ಪ್ರಮಾಣದಲ್ಲಿ ನಡೆಯುವುದು ಸಾಧ್ಯವಿದೆ. ದಕ್ಷಿಣ ಇಂಡಿಯಾದ ಭಾಷೆಗಳಲ್ಲಿಯ ಗಾದೆಗಳನ್ನು ಪರಸ್ಪರ ಹೋಲಿಸಿದಾಗ ಈ ಮಾತಿನ ಯಥಾರ್ಥತೆ ಸ್ಪಷ್ಟ ವಾಗುತ್ತದೆ.

ಕನ್ನಡ : ಅಕ್ಕನ ಚಿನ್ನವಾದರೂ ಅಕ್ಕಸಾಲೆ ತೊನೆಯದೆ ಬಿಡ
ತೆಲುಗು : ತಲ್ಲಿ ಬಂಗಾರಂ ಅಯಿನಾ ಕಂಸಾಲಿವಾಡು ದೊಂಗಿಲಕ ಮಾನಡು
ತಮಿಳು : ತಾಯ್ಪೊನ್ನಿಲುಂ ಮಾಪ್ಪೊನ್ನು ತಿರುಡುವಾನ್ ತಟ್ಟಾನ್
ಮಲಯಾಳಂ : ತಟ್ಟಾನ್ ಪೆಜ್ಜಾಳುಟೀತುಂ ತಟ್ಟುಂ

ಕನ್ನಡ : ಹಣವಿಲ್ಲದವನು ಹೆಣ
ತಮಿಳು : ಪಣಮಿಲ್ಲಾದವನ್ ಪಿಣಂ
ಮಲಯಾಳಂ : ಪಣಮಿಲ್ಲಾತ್ತವನ್ ಪಿಣಂ

ಕನ್ನಡ ಮತ್ತು ಆಂಗ್ಲಗಾದೆಗಳ ಸಾಮ್ಯವನ್ನು ತೋರಿಸುವ ಸಲುವಾಗಿ ಒಂದೆರಡು ನಿದರ್ಶನಗಳನ್ನು ಕೊಡಲಾಗಿದೆ :

ಕನ್ನಡ : ಅತಿಸ್ನೇಹ ಗತಿ ಕೆಡಿಸಿತು
ಆಂಗ್ಲ : Familiarity breeds Contempt.
ಕನ್ನಡ : ಉಳಿ ಸಣ್ಣದಾದರೂ ಮರ ಕಡಿಯೋದು ಬಿಡದು
ಆಂಗ್ಲ : Little strokes fell great oaks.
ಕನ್ನಡ : ತಾ ಹಿಡಿದ ಮೊಲಕ್ಕೆ ಮೂರು ಕೊಂಬು
ಆಂಗ್ಲ : All that he says is law.

ಬೇರೆ ಬೇರೆ ಭಾಷೆಗಳ ಗಾದೆಗಳಲ್ಲಿ ಸಾಮ್ಯಗಳು ತೋರುವಾಗ ಒಂದು ಮತ್ತೊಂದರ ಪ್ರತಿ ಎಂದು ಭಾವಿಸುವುದು ತಪ್ಪಾಗುತ್ತದೆ. ಮನುಷ್ಯರು ಎಲ್ಲಿಯವರೇ ಆಗಲಿ, ಯಾವ ಜನಾಂಗಕ್ಕೆ ಸೇರಿದವರೇ ಆಗಿರಲಿ ಅವರ ಮನಸ್ಸಿನ ವ್ಯಾಪಾರಗಳು, ಬುದ್ಧಿಯ ಕ್ರಿಯೆ ಗಳು, ಇಂದ್ರಿಯ ಚೇಷ್ಟೆಗಳು, ದೈಹಿಕ ಲಕ್ಷಣಗಳು, ವಾಸನಾ ಪ್ರವೃತ್ತಿಗಳು ಮೂಲತಃ ಒಂದೆಯಾಗಿರುವಾಗ, ನಿಸರ್ಗ ಸಂಪತ್ತು ವ್ಯಾಪಾರಗಳು ಅಭಿನ್ನವಾಗಿರುವಾಗ, ಕುಡಿ

ಯುವ ನೀರಲ್ಲಿ ಸೇವಿಸುವ ಗಾಳಿಯಲ್ಲಿ ಉಣ್ಣುವ ಅನ್ನದಲ್ಲಿ ನಿಂತ ನೆಲದಲ್ಲಿ ವ್ಯತ್ಯಾಸ ಇಲ್ಲದಿರುವಾಗ, ಸುತ್ತಮುತ್ತಣ ಜೀವರಾಶಿಯಲ್ಲಿ ಮತ್ತು ಅವುಗಳೊಡನೆಯ ಸಂಪರ್ಕದಲ್ಲಿ ಹೆಚ್ಚು ಅಂತರ ಇಲ್ಲದಿರುವಾಗ ಆಚಾರವಿಚಾರಗಳಲ್ಲಾಗಲಿ ಆಲೋಚನೆ ಭಾವಾನುಭವಗಳಲ್ಲಾಗಲಿ ಹೆಚ್ಚು ತಾರತಮ್ಯವಿಲ್ಲದಿರುವಾಗ ಸಮಾನ ರೂಪಸ್ವರೂಪಗಳ ಅಥವಾ ಹೋಲಿಕೆಯ ಗಾದೆಗಳು ಅನೇಕ ದೇಶಗಳಲ್ಲಿ ಕಾಣಬಹುದು.

ಅನೇಕ ಗಾದೆಗಳ ಹಿನ್ನೆಲೆಯಲ್ಲಿ ಯಾವುದೋ ಒಂದು ಘಟನೆ, ಸಾಮ್ಯತೆ, ಸೂಕ್ತಿ, ಸನ್ನಿವೇಶ, ಪ್ರಸಂಗ, ಒಗಟು, ಸ್ಥಳವಿಶೇಷ, ಪ್ರಾಣಿಸ್ವಭಾವ, ಅಥವಾ ಕತೆ ಇರುತ್ತದೆ. ಕಾಲಾನಂತರದಲ್ಲಿ ಅದು ಮರೆತುಹೋಗುತ್ತದೆ. ಹಿನ್ನೆಲೆಯ ಪ್ರಸಂಗ ತಿಳಿದರಂತು ಆಯಾ ಗಾದೆಯ ಮಹತ್ವ ಸಂವೇದ್ಯವಾಗುತ್ತದೆ. The blind and the lame shall not come into the house ಎಂಬುದು ಹಳೆಯ ಒಡಂಬಡಿಕೆಯಲ್ಲಿ ಬರುವ ಹೀಬ್ರೂ ನಾಣ್ಣುಡಿ. ಅವರ ಕುರುಡು ಮತ್ತು ಕುಂಟುಗಳಿಗೆ ಭಗವಂತನ ಕೋಪವೇ ಕಾರಣ. ಅಂಥವರು ಮನೆಗೆ ಬಂದರೆ ಕೇಡು ಹಿಂಬಾಲಿಸುತ್ತದೆನ್ನುವುದು ಮೂಢನಂಬಿಕೆ. ಕಾಲಾನಂತರದಲ್ಲಿ ಜೆರೂಸಲೇಂ ಪಟ್ಟಣವನ್ನು ವಶಪಡಿಸಿಕೊಂಡ ಡೇವಿಡ್‌ನ ಕತೆಗೂ ಈ ಗಾದೆಗೂ ನಂಟು ಗಂಟುಹಾಕಲಾಯಿತು. ಪ್ರಾಚೀನ ಜೆಬುಸೈಟ್ ಕೋಟೆ ದುರ್ಗಮವಾಗಿದ್ದುದರಿಂದ ಕುರುಡ ಕುಂಟರ ಪಡೆ ಅದನ್ನು ರಕ್ಷಿಸಬಲ್ಲುದೆಂಬ ಪ್ರತೀತಿಯಿತ್ತು. ಡೇವಿಡ್ ಅದನ್ನು ಆಕ್ರಮಿಸಿಕೊಂಡಾಗ, ಕುರುಡ ಕುಂಟರನ್ನೆಲ್ಲ ಕೊಂದು ಹಾಕುವಂತೆ ತನ್ನ ಸೈನ್ಯಕ್ಕೆ ಆಜ್ಞೆ ಮಾಡಿ. ಆ ಅಣಕ ನುಡಿಯನ್ನು ಆಕ್ರಮಿತ ಜನರ ಮೇಲೆ ತಿರುಗಿಸಿದನಂತೆ. ಈ ಕತೆ ನಿಜವಲ್ಲದಿರಬಹುದು. ಒಂದೂರಿನಲ್ಲಿ ಒಬ್ಬ ವೈದ್ಯ ಇದ್ದ. ಅವನು ಸಿಹಿಮೂತ್ರ ರೋಗಕ್ಕೆ ಹೆಸರು ಮದ್ದು ಕೊಡುತ್ತಿದ್ದ. ದೂರದೂರಿನ ರೋಗಿಗಳು ಅವನ ಬಳಿ ಬಂದು ಔಷಧಿ ತೆಗೆದುಕೊಂಡು, ಬಾಯಿಲೆ ಗುಣ ಮಾಡಿಕೊಂಡು ಹೋಗುತ್ತಿದ್ದರು. ಆ ಊರಿನ ಶ್ರೀಮಂತನಿಗೆ ಅಂಥದೇ ಬಾಯಿಲೆ ಕಾಣಿಸಿಕೊಂಡಿತು. ಅವನು ನಗರದ ಸೀಮೆ ವೈದ್ಯನ ಬಳಿಹೋಗಿ, ದೇಹ ಪರೀಕ್ಷೆ ಮಾಡಿಸಿಕೊಂಡು ಔಷಧಿ ತೆಗೆದುಕೊಂಡನು. ತಿಂಗಳುಗಟ್ಟಳೆ ಔಷಧಿ ಮುಂದುವರಿಸಿದರೂ ಅವನ ರೋಗ ಗುಣವಾಗಲಿಲ್ಲ. ಆಗಾಗ್ಗೆ ಆಸ್ಪತ್ರೆಗೆ ಬರುತ್ತಿದ್ದ ಆ ಶ್ರೀಮಂತನಿಗೆ ನಗರದ ಮತ್ತೊಬ್ಬ ಶ್ರೀಮಂತ ಆಕಸ್ಮಾತ್ತಾಗಿ ಗುರುತಾದನು. "ನಿಮ್ಮೂರಲ್ಲಿಯೇ ವೈದ್ಯನನ್ನಿಟ್ಟುಕೊಂಡು ಇಷ್ಟುದೂರ ಏಕೆ ಬಂದಿರಿ? ನನ್ನ ಬಾಯಿಲೆ ಗುಣವಾದದ್ದು ಅವನ ಕೈಗುಣದಿಂದ. ಹಿತ್ತಲಗಿಡ ಮದ್ದಲ್ಲ" ಎಂದು ನಗರದ ಶ್ರೀಮಂತ ಹಳ್ಳಿಯ ಶ್ರೀಮಂತನನ್ನು ಹಂಗಿಸಿದನಂತೆ. ಹಿತ್ತಲಗಿಡ ಮದ್ದಲ್ಲ ಎಂಬ ಗಾದೆ ಬಂದದ್ದೇ ಹೀಗೆ. ಈಗ ಅದು ಎಷ್ಟು ಸಾರ್ವತ್ರಿಕವಾಗಿದೆ ಎಂದರೆ ಅದನ್ನು ಅರಿಯದವರೇ ಇಲ್ಲ. ಸಾಮಾನ್ಯವಾಗಿ ನಮ್ಮನ್ನು ನಿಂದಿಸಿದರೆ ನಾವು ಕೋಪಗೊಳ್ಳುತ್ತೇವೆ, ಇಲ್ಲವೆ ಸಂಕಟಪಡುತ್ತೇವೆ. ನಿಂದಕರಿದ್ದುದಾದರೆ ನಾವು ಸದಾ ಕರ್ತವ್ಯಪಾಲನೆಯಲ್ಲಿ ಎಚ್ಚರದಾಗಿರುತ್ತೇವೆ; ನಮ್ಮ ನಡೆನುಡಿಗಳಲ್ಲಿ ಕೋರೆ ಕಾಣಿಸದಂತೆ, ಬಾಳು ಹಸನಾಗಿರುವಂತೆ ವರ್ತಿಸುತ್ತೇವೆ. ಅಂಥ

ನಿಂದಕರು ಇಲ್ಲದಿದ್ದರೆ ನಾಸ್ತ್ರ ಎಚ್ಚರತಪ್ಪಿ, ದಿಕ್ಕುಗೆಟ್ಟು, ಬಾಳನ್ನು ಹಾಳುಮಾಡಿಕೊಳ್ಳ ಬಹುದು. ಆಧುನಿಕ ಆರೋಗ್ಯರಕ್ಷಣಾ ವಿಧಾನಗಳು ಚಾಲ್ತಿಗೆ ಬರುವ ಮುನ್ನ ಗ್ರಾಮಸಾರವನ್ನು ಶುದ್ಧಗೊಳಿಸಲು ಊರೂರುಗಳಲ್ಲಿ ಹಂದಿ ಸಾಕುತ್ತಿದ್ದುದುಂಟು. ನಗರ ಶುದ್ಧೀಕರಣಕ್ಕೆ ಹಂದಿ ಎಂತು ಆವಶ್ಯಕವೋ ಜೀವನ ಶುದ್ಧೀಕರಣಕ್ಕೆ ನಿಂದಕರು ಬೇಕು. ಇಂಥ ಸನ್ನಿವೇಶದ ಹಿನ್ನೆಲೆಯಲ್ಲಿ 'ಊರಿಗೆ ಹಂದಿ ಬೇಕು, ನೆರೆಗೆ ನಿಂದಕ ಬೇಕು' ಎಂಬ ಗಾದೆ ಉಗಮಗೊಂಡಿರಬೇಕು. ಹೊಳೆಯಿಂದಾಚೆಯ ಹೆಣ್ಣು ತಂದರೆ ಸಂಪರ್ಕ ಕಷ್ಟವಾಗುತ್ತದೆ, ಕರೆನೆರೆಗೆ ಹೋಗುವಾಗ ಹೊಳೆ ಕಟ್ಟಿಕೊಂಡರೆ ಅಪಾಯ ಸಂಭವಿಸಬಹುದು, ಅಂತೆಯೇ ತೊರೆದಂಡೆಯ ಹೊಲವನ್ನು ಸಾಗುವಳಿ ಮಾಡಿದ್ದಾದರೆ ನೆರೆ ಬಂದಾಗ ಕೊಚ್ಚಿಕೊಂಡು ಹೋಗುತ್ತದೆ ಎಂಬ ಭಾವನೆ ಮತ್ತು ಅನುಭವಗಳು "ಹೊಳೆಯಿಂದಾಚೆಯ ಹೆಣ್ಣು ಬೇಡ, ತೊರೆದಂಡೆ ಹೊಲ ಬೇಡ" ಎಂಬ ಗಾದೆಯ ಉತ್ಪತ್ತಿಗೆ ಕಾರಣವಾಗಿರಬೇಕು.

ಕೆಲವು ಗಾದೆಗಳ ಮೂಲವನ್ನು ಒಗಟುಗಳಲ್ಲಿ ಗುರುತಿಸಬಹುದು. A good name is worth more than gold ಎನ್ನುವುದೊಂದು ಆಂಗ್ಲ ಗಾದೆ. ಇದು ಬಂದದ್ದು ಹೇಗೆ? ಯಕ್ಷ ಧರ್ಮರಾಯನಿಗೆ ಸವಾಲು ಹಾಕಿದಂತೆ, ಯಾರೋ ಒಬ್ಬರು "What is worth more than gold ?" ಎಂದು ಮತ್ತೊಬ್ಬರಿಗೆ ಮುಂದಿಗೆ ಎಸೆದಿರಬಹುದು. ಎರಡನೆಯವನು ಜವಾಬು ನೀಡುವಲ್ಲಿ ಈ ಗಾದೆ ಹುಟ್ಟಿಕೊಂಡಿದೆ. "ಬೆಳಗ್ಗೆ ನಾಲ್ಕು ಕಾಲು, ಮಧ್ಯಾಹ್ನ ಎರಡು ಕಾಲು, ಸಂಜೆ ಮೂರು ಕಾಲು—ಈ ಪ್ರಾಣಿ ಯಾವುದು ?" ಥೀಬ್ಸ್ ಪ್ರಾಂತ್ಯದ ಮೃತ್ಯುವಂತಿದ್ದ ಸ್ಫಿಂಕ್ಸ್ ಈಡಿಪಸ್ ದೊರೆಯ ಮುಂದೆ ಒಡ್ಡಿದ ಸವಾಲಿದು. ದೊರೆ "ಮನುಷ್ಯ" ಎಂದು ಉತ್ತರ ಹೇಳಿ ತಾನೂ ಬಚಾವಾದ, ದೇಶವನ್ನೂ ಬದುಕಿಸಿದ. ಮಾನವನ ಇಡೀ ಬದುಕಿನ ನಾನಾವಸ್ಥೆಗಳನ್ನು ನಿರೂಪಿಸುವ ಅದ್ಭುತವಾದ ಗಾದೆ ಇದು.

ಅದ್ಭುತ ಕಥೆ, ನೀತಿ ಕಥೆ ಮತ್ತು ದೃಷ್ಟಾಂತ ಕಥೆಗಳಿಂದ ಗಾದೆಗಳು ಹೊರ ಹೊಮ್ಮುವುದುಂಟು; ಅಥವಾ ಗಾದೆಗಳಿಂದ ಕತೆ ಎಲೆಯಿಕ್ಕಿ ಬೆಳೆಯುವುದುಂಟು. ಇವಕ್ಕೆ ಪಂಚತಂತ್ರ, ಹಿತೋಪದೇಶ, Aesop's fables ಮೊದಲಾದ ಗ್ರಂಥಗಳಲ್ಲಿ ಬರುವ ಕತೆಗಳೇ ಸಾಕ್ಷಿ. 'ಆತ್ಮಾರ್ಥಂ ಪೃಥಿವೀಂ ತ್ಯಜೇತ್' ಅಥವಾ "ತಾನುಳ್ಳೊಡೆ ಮೂರು ಲೋಕವುಂಟು" ಎಂಬ ಗಾದೆಗಳನ್ನು ನೋಡೋಣ. ಪಂಚತಂತ್ರದ 'ನರಿಯೂ ಬಿಲವೂ' ಎಂಬ ಕತೆ ಇವುಗಳ ಹಿನ್ನೆಲೆಯಲ್ಲಿರುವಂತೆ ತೋರುತ್ತದೆ. ಒಂದು ಕಾಡಿನಲ್ಲಿ ಪುಂಡರೀಕನೆಂಬ ಹುಲಿ. ಅದು ಪ್ರತಿನಿತ್ಯ ಬೇಟೆಗೆ ಹೋಗಿ, ಮಾಂಸತಂದು, ಅದರಲ್ಲಿ ಸ್ವಲ್ಪ ತಿಂದು, ಮಾರನೆಯ ದಿನಕ್ಕೆಂದು ಸ್ವಲ್ಪ ಉಳಿಸುತ್ತಿತ್ತು. ಮಾರನೆಯ ದಿನ ಅದು ಹೊರಗೆ ಹೋಗಿದ್ದ ಸಮಯದಲ್ಲಿ ನರಿಯೊಂದು ಗುಹೆಗೆ ಬಂದು ಮಾಂಸ ವನ್ನು ತಿಂದು ಹೋಗುತ್ತಿತ್ತು. ಕೆಲವು ದಿನ ಹೀಗೆಯೆ ನಡೆಯುತ್ತಿರಲಾಗಿ ಹುಲಿಗೆ ಸೋಜಿಗವಾಗಿ, ಪರೀಕ್ಷಾರ್ಥವಾಗಿ ಮರೆಯಲ್ಲಿ ಹೊಂಚು ಹಾಕಿತು. ನರಿಯ ಕಳ್ಳತನ ವನ್ನು ಕಂಡು ರೇಗಿತು. ನರಿಯ ವಾಸಸ್ಥಳವನ್ನು ಶೋಧಿಸಿ, ಅದರ ಬಳಗವನ್ನೆಲ್ಲ

ನಾಶಮಾಡುವ ಉದ್ದೇಶದಿಂದ, ಅದಕ್ಕೆ ಕಾಣಿಸಿಕೊಳ್ಳದೆ ಅದನ್ನು ಹಿಂಬಾಲಿಸಿ, ಅದರ ಬಿಲವನ್ನು ಪತ್ತೆ ಹಚ್ಚಿತು. ಮಾರನೆಯ ದಿನ ನರಿ ಹೊರಗೆ ಹೋದ ನಂತರ ಹುಲಿ ಹೆಜ್ಜೆಯ ಗುರುತು ಸಿಗಬಾರದೆಂದು ಹಿಂದುಮುಂದಾಗಿ ನಡೆದು ಅದರ ಬಿಲದಲ್ಲಿ ಅವಿತು ಕೊಂಡಿತು. ಆ ಹೆಜ್ಜೆಗಳನ್ನು ಕಂಡ ನರಿ ಅಪಾಯವನ್ನು ಶಂಕಿಸಿ, ಉಪಾಯದಿಂದ ಪಾರಾಗಬೇಕೆಂದು ಯೋಚಿಸಿತು. "ಎಲೈ ಬಿಲವೆ, ಈ ತನಕ ನಾನು ನಿನ್ನಲ್ಲಿಗೆ ಬರುವಾಗ ಉಪಚರಿಸಿ ಸ್ವಾಗತಿಸುತ್ತಿದ್ದೆ. ಈಗ ಕೂಗಿದರೂ ಮಾತಾಡುವುದಿಲ್ಲ. ನೀನೀಗ ಮಾತಾಡದಿದ್ದರೆ ನಾನು ಹೊರಟುಹೋಗುತ್ತೇನೆ" ಎಂದಿತು. ನರಿ ದಕ್ಕದೆ ಹೋದೀತೆಂದು ಹುಲಿ ಸದ್ದುಗೈದಿತು. ಬಿಲ ಜಡವಸ್ತು, ಅದು ಮಾತಾಡುವುದುಂಟೆ ಎಂದು ತಿಳಿದು ನರಿ ಆ ವನದಿಂದ ಓಡಿಹೋಗಿ ಬದುಕಿಕೊಂಡಿತು. ಆತ್ಮರಕ್ಷಣಾರ್ಥವಾಗಿ ಮನುಷ್ಯ ತನ್ನ ರಾಜ್ಯವನ್ನಾದರೂ ಬಿಡಬೇಕಾದೀತು. ತಾನಿಲ್ಲದಮೇಲೆ ಎಷ್ಟು ಲೋಕ ಗಳಿದ್ದರೆ ತಾನೆ ಏನು ಪ್ರಯೋಜನ? ರಾಜಕೀಯದ ಜನ ತಮಗೆ ಅಪಾಯ ತಲೆದೋರಿ ದಾಗ ಅನ್ಯರಾಷ್ಟ್ರಗಳಿಗೆ ತಲೆತಪ್ಪಿಸಿಕೊಂಡು ಹೋಗಿ ಬದುಕಿಕೊಳ್ಳುವುದನ್ನು ನಾವು ಬಲ್ಲೆವಷ್ಟೆ. ಇಂಥ ಗಾದೆಗಳ ಉಗಮವನ್ನು ಆ ಈ ಕತೆಗಳಲ್ಲಿ ಕಾಣಬಹುದು. "ಅರ್ಥೀ ದೋಷಂ ನ ಪಶ್ಯತಿ"[1] ಸುಹೃದ್ದರ್ಶನಮಾಷಧಂ"[2] (ಮೊಸಳೆಯುಂ ಕಪಿ ಪಂಚಿಸಿದ ಕತೆ), "ಅರಸರ್ ವಿಷಮ ಸ್ವಭಾವರ್"[3] "ನಿಜಕಾರ್ಯಮಂತರೇನಂ ಮಾಡರ್"[4] "ನಾವಂಗೆ ಸಮುದ್ರಂ ಮೊಳಕಾಲುದ್ದಂ"[5] ಈ ಮೊದಲಾದ ಗಾದೆಗಳು ಸುಳಿಯುವ ಕತೆಗಳನ್ನು ನೋಡಿದಾಗ ಗಾದೆಗಳ ಪ್ರಪಂಚದ ವಿಸ್ತಾರವೂ, ಅವು ಸಂಕೇತಿಸುವ ಜೀವನಾನು ಭವದ ಮಹತ್ತೂ ಅರ್ಥವಾಗುತ್ತವೆ.

ಅರೇಬಿಯಾದ ಹಲವಾರು ಗಾದೆಗಳು ಅಲ್ಲಿಯ ಬುಡಕಟ್ಟುಗಳ ಇತಿಹಾಸಕ್ಕೆ ಸಂಬಂಧಿ ಸಿದ ಘಟನೆಗಳ ಆಧಾರದ ಮೇಲೆ ಜನ್ಮವೆತ್ತಿವೆ ಎಂದು ಜೆ. ಎ. ಕೆಲ್ಸೊ ಎಂಬ ವಿದ್ವಾಂ ಸರು ನಿದರ್ಶನಗಳ ಮೂಲಕ ವಿಶದಪಡಿಸಿದ್ದಾರೆ. Be a Roman in Rome ಎಂಬ ಲೋಕಪ್ರಸಿದ್ಧವಾದ ಗಾದೆ ಇದೆಯಷ್ಟೆ. ಸಂತ ಅಗಸ್ಟೈನನ ತಾಯಿ ಮೋನಿಕಳ ಜೀವನ ದಲ್ಲಿ ನಡೆದ ಘಟನೆಯೊಂದು ಅದರ ಹುಟ್ಟಿಗೆ ಹೇಗೆ ಕಾರಣವಾಯಿತೆಂಬುದನ್ನು ಕೆಲ್ಸೊ ಅವರೆ ಸ್ವಾರಸ್ಯವಾಗಿ ವಿವರಿಸಿದ್ದಾರೆ.[6]

ಮೇಲಿನ ಕತೆಗಳಂತೆಯೇ ಪೌರಾಣಿಕ ಕಥೆ, ಘಟನೆ ಮತ್ತು ಸನ್ನಿವೇಶಗಳಿಂದ ಪ್ರೇರಿತವಾಗಿ ಗಾದೆಗಳ ನಿರ್ಮಾಣ ಸಾಗಿರಬೇಕು. 'ಗಾಂಧಾರ ಕುಮಂತ್ರ [illegible]'

1 ದುರ್ಗಸಿಂಹನ ಪಂಚತಂತ್ರ; ಸಂ : ಡಾ. ಎಸ್. ಅನಂತರಂಗಾಚಾರ್, ಪುಟ ೧೨೨.

2 ಅದೇ, ಪುಟ ೨೦೬.

3 ಅದೇ, ಪುಟ ೪೭.

4 ಅದೇ, ಪುಟ ೧೯೪.

5 ಅದೇ, ಪುಟ ೬೯.

6 *Encyclopaedia of Religion and Ethics*. Eb by James Hastings, Vol. X; P. 412-15.

ಎಂಬೊಂದು ನಾಣ್ಣುಡಿ ಕೆಲವು ಕಡೆ ರೂಢಿಯಲ್ಲಿದೆ. ಇದರಲ್ಲಿ ವ್ಯಂಗ್ಯವಿದೆ, ವಿಡಂಬನೆಯಿದೆ, ಖಾರವಿದೆ, ಜುಗುಪ್ಸೆಯಿದೆ. ಈಯುವುದು ಎಂಬ ಪದ ಹಂದಿಯಂಥ ಪ್ರಾಣಿಗಳ ಹೆರಿಗೆಗೆ ಅನ್ವಯವಾಗುವಂಥದು. ಅಂದಮೇಲೆ ಗಾಂಧಾರಿ ಪಶುವಿಗೆ ಸಮಾನ ಎಂದಂತಾಯಿತು. ಕುಂತಿ ಹೆತ್ತದ್ದು ನೋಡಿ ಗಾಂಧಾರಿ ಹೊಟ್ಟೆ ಹಿಸುಕಿಕೊಂಡಳಂತೆ. ಹೊಟ್ಟೆಕಿಚ್ಚಿಗೆ ಅವಳು ಪ್ರತಿಮೆಯಾದಂತಾಯಿತು. ಬಸಿರು ಮಾಗುವ ಮುನ್ನ ಹುಟ್ಟಿದ ಮಕ್ಕಳು ಭೀಮಾರ್ಜುನರಂತೆ ಅಜೇಯರಾಗಲಾರರು. ಗಾಂಧಾರಿಯ ದುಷ್ಟ ಬುದ್ಧಿ ಗರ್ಭಸ್ಥರಾಗಿದ್ದ ಮಕ್ಕಳ ಮೇಲೆಯೂ ಪ್ರಭಾವ ಬೀರಿ ಅವರೆಲ್ಲರೂ ದುರ್ಯೋಧನ ದುಶ್ಶಾಸನರಾದದ್ದು ಲೋಕವೇದ್ಯವಾದ ಸಂಗತಿ. ಗಾಂಧಾರಿಯ ಮಕ್ಕಳು ಲೋಕಕಂಟಕರಾದದ್ದಂತು ಮಕ್ಕಳಿಗೂ ತಿಳಿಯುತ್ತದೆ. ಹೀಗೆ ಆ ಒಂದು ನಾಣ್ಣುಡಿಯಲ್ಲಿ ಇಡೀ ಮಹಾಭಾರತದ ಕತೆ ಮಾತ್ರವಲ್ಲ, ಧ್ಯೇಯೋದ್ದೇಶಗಳು ಸಹ ಪ್ರತಿಫಲನಗೊಳ್ಳುತ್ತವೆ. "ಅಂತು ಇಂತು ಕುಂತಿ ಮಕ್ಕಳಿಗೆ ರಾಜ್ಯವಿಲ್ಲ" ಎಂಬುದೂ ಅಂಥದೇ ಮತ್ತೊಂದು ಗಾದೆ. ಭಾರತದ ಸಾರವೆಲ್ಲ ಅದರಲ್ಲಿ ಭಟ್ಟಿಯಿಳಿದಂತಿದೆ. ಎಷ್ಟು ತತ್ವ, ಎಷ್ಟು ಸಾರ, ಎಂಥ ನೀತಿದರ್ಶನಗಳನ್ನು ಅದರಿಂದ ತಿಳಿಯಬಹುದೆಂಬ ಸಂಗತಿ ತುಸು ಮೆಲುಕುಹಾಕಿದರೆ ಸ್ಪಷ್ಟವಾಗುತ್ತದೆ.

ಒಂದು ಕತೆ ಅಥವಾ ಘಟನೆ ಒಂದು ಗಾದೆಯ ನಿರ್ಮಾಣಕ್ಕೆ ಕಾರಣವಾದಂತೆ, ಒಂದು ಗಾದೆ ಮತ್ತೊಂದು ಗಾದೆಯ ಹುಟ್ಟಿಗೆ ಹೇತುವಾಗಬಹುದು. "ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೆ?" ಎಂಬ ಗಾದೆಯ ಆಧಾರದ ಮೇಲೆ "ಹೆತ್ತ ತಾಯಿ ವಿಷ ಹಾಕುತ್ತಾಳೆಯೆ?" ಎಂಬ ಗಾದೆ ಬಂದಿರಬಹುದು. "ಕೆಲಸವಿಲ್ಲದ ನಾಯಿಂದ ಹೆಂಡತಿ ತಲೆ ಬೋಳಿಸಿದ" ಎನ್ನುವ ಹಾಗೆ "ಕೆಲಸವಿಲ್ಲದ ಕುಂಬಾರ ಕತ್ತೆ ಕುಂಡಿ ತಟ್ಟಿದ" ಈ ಗಾದೆಗಳು ಒಂದರಿಂದೊಂದು ಹುಟ್ಟಿದುವೆಂದು ನಿಶ್ಚಿತವಾಗಿ ಹೇಳಲಾಗದು. ಅವು ಸ್ವತಂತ್ರವಾಗಿಯೂ ಜನ್ಮ ಪಡೆದಿರಬಹುದು. ಆದರೆ ಕೆಲವಾದರೂ ಸಾಮ್ಯದಿಂದ ಹುಟ್ಟಿರಲು ಸಾಧ್ಯವೆಂದು ಧಾರಾಳವಾಗಿ ಸಾಧಿಸಬಹುದು. ಇವನ್ನು ಅನುಕರಣದ ಗಾದೆಗಳೆಂದು ಕರೆಯಬಹುದು.

ಸೂಕ್ತಿ ರೂಪದಲ್ಲಿರುವ ಗಾದೆಗಳಲ್ಲಿ ನೀತಿಬೋಧೆ ಪ್ರಧಾನವಾಗಿರುತ್ತದೆ. "ದುಷ್ಟರನ್ನು ಕಂಡರೆ ದೂರ ಸರಿ." ಅವುಗಳಿಗೆ ರೂಪಕಗಳ ಸಂಸರ್ಗ ಪ್ರಾಪ್ತವಾದದ್ದಾದರೆ ಚಿತ್ರಮಯವಾಗಿ ಬಹು ಪರಿಣಾಮಕಾರಿಯಾಗಿ ಜನಮನವನ್ನಾಕರ್ಷಿಸುತ್ತವೆ: "ಬಗಳುವ ನಾಯಿ ಕಚ್ಚುವುದಿಲ್ಲ." "Politics makes strange bed fellows" ಒಂದು ಕಡೆಯಿಂದ ಮತ್ತೊಂದು ಕಡೆಗೆ ಪರ್ಯಟನ ಮಾಡುವಾಗ ಗಾದೆಗಳು ರೂಪಾಂತರ ಹೊಂದುವುದುಂಟು. "A bird in the hand is worth two in the bush" ಎನ್ನುವ ಗಾದೆಯ ಪಾಠಾಂತರಗಳು ಸೋಜಿಗ ಹುಟ್ಟಿಸುವಂತಿವೆ. ೧೫೪೬ರಲ್ಲಿ ಜಾನ್ ಹೇವುಡ್ ಎನ್ನುವವನು "A birde in the hand is worth ten in the wood" ಎಂದು ಹೇಳಿದ. "A bird in the pan is better than many in the air" ಎಂಬು

ದಾಗಿ ಫ್ರಿಸಿಯನ್ ಭಾಷೆಯಲ್ಲಿದೆ. "A bird in the snare is worth more than eight flying"—ಇದು ಲ್ಯಾಟಿನ್ ಭಾಷೆಯ ಗಾದೆ.[1] ಭಾಷಾಂತರದ ಮೂಲಕ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವ ಗಾದೆಗಳು ತಮ್ಮ ಚರ್ಯೆಯನ್ನೂ ಬದಲಾಯಿಸಿಕೊಳ್ಳುವುದುಂಟು. "All that glitters is not gold" ಎನ್ನುವ ಗಾದೆ "ಬೆಳ್ಳಗಿರುವುದೆಲ್ಲ ಹಾಲಲ್ಲ" ಎಂದಾಗಿದೆ.

ಮೇಲಣ ವಿವರಣೆಯಿಂದ ಗಾದೆಗಳ ಪ್ರಾಚೀನತೆ ಕಾಲದ ಗರ್ಭದಲ್ಲಿ ಹೂತುಹೋಗಿದೆ ಎಂದು ಸ್ಪಷ್ಟವಾಗುತ್ತದೆ. ಲಿಪಿಯ ಕಲ್ಪನೆ ಮಾನವನ ಮನಸ್ಸಿನಲ್ಲಿ ಮೂಡುವ ಮುನ್ನವೇ ಮಿಲಿಯ ಸಂಖ್ಯೆಯ ಗಾದೆಗಳು ಆಕಾಶದಲ್ಲಿ ತೇಲಿಹೋಗಿರಬೇಕು. ಕ್ರಿ.ಪೂ. ಮೂರು ಸಾವಿರದ ಏಳುನೂರು ವರ್ಷಗಳ ಹಿಂದಿನ ಈಜಿಪ್ಟಿನಲ್ಲಿ ಬಳಕೆಯಲ್ಲಿದ್ದ ಗಾದೆಗಳನ್ನು 'Book of the Dead' ಎಂಬ ಗ್ರಂಥದಲ್ಲಿ ಸಂಕಲಿಸಲಾಗಿದೆ. ಹಳೆಯ ಒಡಂಬಡಿಕೆ, ಹೊಸ ಒಡಂಬಡಿಕೆ, ವೇದ, ಕೊರಾನ್, ತ್ರಿಪಿಟಕ, ಗ್ರಂಥಸಾಹೇಬ್ ಮೊದಲಾದ ಎಲ್ಲ ಮತಗಳ ಪವಿತ್ರ ಗ್ರಂಥಗಳಲ್ಲಿಯೂ ಗಾದೆಗಳ ಗುಪ್ಪೆಯನ್ನು ಕಾಣಬಹುದು. ಮತಪ್ರವರ್ತಕರೆಲ್ಲರೂ ತತ್ತ್ವೋಪದೇಶಕ್ಕಾಗಿ, ಮತಪ್ರಸಾರಕ್ಕಾಗಿ ಸಾಮಾನ್ಯ ಜನರ ನುಡಿ ಮತ್ತು ನುಡಿಗಟ್ಟುಗಳನ್ನು ಬಳಸುವುದು ಅತ್ಯವಶ್ಯವಾಗಿತ್ತು. ಸಾಮಾನ್ಯರ ಭಾಷೆಯನ್ನು ಬಿಟ್ಟಿದ್ದರೆ ಮತಪ್ರಸಾರ ಕಾರ್ಯದಲ್ಲಿ ಅವರು ಯಶಸ್ವಿಯಾಗುತ್ತಿರಲಿಲ್ಲ. ಯೇಸುವಿನ ಸುವಾರ್ತೆಗಳಲ್ಲಿ ಬರುವ ಕೆಲವು ಗಾದೆಗಳನ್ನು ನಿದರ್ಶನಾರ್ಥವಾಗಿ ಉಲ್ಲೇಖಿಸಬಹುದು :

In vain is a net spread wide
if any bird that flies can see it

Do not emulate a lawless man,
do not choose to follow his foot steps

If a man walks on hot coals,
will his feet not be scorched ?

A wise son brings joy to his father ;
a foolish son is hismot her's bane

ಪ್ಲೇಟೊ, ಸಾಕ್ರಟೀಸ್, ಕನ್‌ಫ್ಯೂಸಿಯಸ್, ಬುದ್ಧ, ಮಹಮ್ಮದ್. ಬಸವೇಶ್ವರ ಮೊದಲಾದ ತತ್ತ್ವಜ್ಞಾನಿಗಳು, ವಾಗ್ಮಿಗಳು, ಪ್ರವಾದಿಗಳು, ಮಹಾತ್ಮರು ತಮ್ಮ ಉಪದೇಶದಲ್ಲಿ ಜನರ ಮನಸ್ಸಿಗೆ ನೇರವಾಗಿ ಹುಗುವಂಥ ನಾಣ್ಣುಡಿಗಳನ್ನು ಬಳಸುತ್ತಿದ್ದರು. "ಜನ ಮರುಳೋ ಜಾತ್ರೆ ಮರುಳೋ"[2] "ಕಂಬಳಕ್ಕೆ ಹೋಗಿ ಕನಕನ ಕೊಡನ ಕಂಡಂತೆ

---

[1] ಹೆಚ್ಚಿನ ನಿದರ್ಶನಗಳಿಗೆ Tristram Coffin III ಅವರು ಸಂಪಾದಿಸಿರುವ *American Folklore* ಗ್ರಂಥದ ೨೨೨ನೆಯ ಪುಟ ನೋಡಿ.

[2] ಕನ್ನಡ ಗಾದೆಗಳ ಕೋಶ : ದ್ವಿತೀಯ ವಿಸ್ತೃತ ಆವೃತ್ತಿ, ೧೯೬೯.

"ಬಿದೊಕ್ಕಾಲು ಬುದ್ಧಿ ಮುಕ್ಕಾಲು" "ಬಂಜೆ ಬೇನೆಯರಿಯಳು" "ಚೇಟಿಂಗೆ ಬಸುರಾಯಿತ್ತೆ ಕಡೆ" — ಶರಣರ ವಚನಗಳಲ್ಲಿ ಇಂಥ ನಾಣ್ಣುಡಿಗಳು ಹೆಜ್ಜೆಹೆಜ್ಜೆಗೂ ಕಣ್ಣಿಗೆ ಬೀಳುತವೆ.

ಆಡುಮುಟ್ಟದ ಸೊಪ್ಪಿಲ್ಲವೆಂಬಂತೆ ಗಾದೆ ಮುಟ್ಟದ ವಸ್ತುವಿಲ್ಲ. ನಾಗರಿಕ ಉಪಾಧಿಗಳಿಗೆ ಸೆರೆಯಾಗಿರುವ ಕವಿತೆಯ ಕಣ್ಣಿಗೆ ಬೀಳದ ಎಷ್ಟೋ ವಸ್ತುಗಳು, ಅವನಿಗೆ ಕೇಳಿಸದ ಅತಿ ಸೂಕ್ಷ್ಮ ಶಬ್ದಗಳು, ಅವನ ಹೃದಯವನ್ನು ಮಿಡಿಯದ ಎಷ್ಟೋ ಭಾವಾನುಭವಗಳು ನಗ್ನ ಹೃದಯದ, ತೆರೆದ ಕಿವಿಯ, ಸ್ವಚ್ಛನೋಟದ ಗ್ರಾಮೀಣ ಕವಿಗೆ ಸುಲಭಗ್ರಾಹ್ಯವಾಗುತ್ತವೆ. ಪಂಡಿತಕವಿ ನಿಸರ್ಗದ ಸಮಾಜದ ಹೊರಗಿದ್ದರೆ ಗ್ರಾಮೀಣಕವಿ ಅವುಗಳ ಒಂದು ಭಾಗವಾಗಿರುವುದರಿಂದ ಅವನಿಗೆ ಕಾಣದ ಸಂಗತಿಗಳಿರುವುದಿಲ್ಲ. ಸಮಷ್ಟಿಯೇ ಅವನ ಹೃದಯದ ವೀಣೆಯನ್ನು ಮಿಡಿಯುವುದರಿಂದ ಇಡೀ ಲೋಕವೇ ಅವನಿಗೆ ತೆರೆದ ಹೊತ್ತಗೆಯಾಗುತ್ತದೆ. ಶ್ರೀ ಟಿ. ವಿ. ವೆಂಕಟರಮಣಯ್ಯನವರ ಕನ್ನಡ ಗಾದೆಗಳ ಕೋಶ[1]ವೊಂದರ ಹಾಳೆಗಳ ಮೇಲೆ ದೃಷ್ಟಿ ಹರಿಸಿದರೆ ಸಾಕು ಗಾದೆಗಳ ಲೋಕವ್ಯಾಪಕ ಸಾಮರ್ಥ್ಯ ಅಭಿವ್ಯಕ್ತವಾಗುತ್ತದೆ. ಈ ಒಂದು ಸಂಕಲನದಲ್ಲಿಯೇ ಸುಮಾರು ೫೬೦ ವಿಷಯಾಂಶಗಳಿಗೆ ಸಂಬಂಧಿಸಿದ ಗಾದೆಗಳು ಉಲ್ಲೇಖನಗೊಂಡಿವೆ. ಸಂಕೀರ್ಣ ಗಾದೆಗಳನ್ನು ತಾಳ್ಮೆಯಿಂದ ವಿಂಗಡಿಸಿದ್ದಾದರೆ ಇನ್ನೂ ಎಷ್ಟೋ ಹೊಸ ವಿಷಯಗಳು ಮೈದೋರುತ್ತವೆ. ಶಿಷ್ಟ ಅಥವಾ ಜಾನಪದ ಸಾಹಿತ್ಯದ ಯಾವ ಪ್ರಕಾರದಲ್ಲಿಯೂ ಇಷ್ಟು ವೈವಿಧ್ಯವಾಗಲಿ ಸರ್ವಸಂಸ್ಪರ್ಶತಾ ದೃಷ್ಟಿಯಾಗಲಿ ಕಾಣುವುದಿಲ್ಲ.

ಐತಿಹಾಸಿಕ ಸಾಮಾಜಿಕ ಪೌರಾಣಿಕ ಅಂಶಗಳನ್ನೊಳಗೊಂಡ, ಲೋಕನೀತಿ ವ್ಯವಹಾರ ಮೌಢ್ಯ ಪದ್ಧತಿಗಳ ವಿಚಾರಗಳುಳ್ಳ ಗಾದೆಗಳಂತಿರಲಿ, ವೃತ್ತಿಸಂಬಂಧವಾದ ಗಾದೆಗಳು ಅಸಂಖ್ಯವಾಗಿವೆ. ಅಕ್ಕಸಾಲಿಗ, ಅಗಸ, ಈಡಿಗ, ಒಕ್ಕಲಿಗ, ಕಂಚುಗಾರ, ಕುರುಬ, ಕುಂಬಾರ, ನಾಯಿಂದ, ಕೊರಮ, ಗಾಣಿಗ, ಡೊಂಬ, ದಾಸಯ್ಯ, ದರ್ಜಿ, ಬಣಜಿಗ, ಬೇಡ, ಹಾವಾಡಿಗರನ್ನು ಕುರಿತ ಗಾದೆಗಳು ಸಾಕಷ್ಟಿವೆ. ಕೇವಲ ದಿಗ್ದರ್ಶನಾರ್ಥವಾಗಿ ಒಂದಿಷ್ಟು ಗಾದೆಗಳನ್ನು ಮುಂದೆ ಪಟ್ಟಿಮಾಡಿದೆ:

ಅಗಸ ಮಾಡಿದ್ದು ಬಟ್ಟೆಗೆ, ಅಕ್ಕಸಾಲೆ ಮಾಡಿದ್ದು ಅಗ್ಗಿಷ್ಟಿಕೆಗೆ
ಈಡಿಗನ ಹೆಂಡತಿ ಎಂದಿದ್ದರೂ ಮುಂಡೆ
ಒಕ್ಕಲಿಗನ ನೆಂಟು ಒಡವೆ ಕೇಡು
ಕುರುಬ ಕೂಡಿ ಕೆಟ್ಟ ಡೊಂಬ ಅಗಲಿ ಕೆಟ್ಟ
ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ
ದೋಸೆ ಊಟವಲ್ಲ ದಾಸಯ್ಯ ನೆಂಟನಲ್ಲ.

ಈ ಒಂದೊಂದು ಗಾದೆಯಲ್ಲಿಯೂ ಆಯಾಯ ವೃತ್ತಿಯ ಸ್ವರೂಪ ಮರ್ಮ ಧರ್ಮ ಹಾನಿವೃದ್ಧಿ ರೀತಿನೀತಿಗಳು ತೋರುತ್ತವೆ. ಮೇಟಿಯಿಂದ ಕೋಟಿ ಅಥವಾ ಕೋಟಿಗೆದ್ದ ಎಂಬೊಂದು ಗಾದೆಯಿದೆ. ಮೇಟಿಯ ಬಲವಿಲ್ಲದಿದ್ದರೆ ಕಾರ್ಯಾನೇನಾಗಲಿ, ವಿದ್ಯಾ

ಸಂಸ್ಥೆಗಳಾಗಲಿ, ಉದ್ಯಾನಗಳಾಗಲಿ, ರಾಜಕೀಯ ವ್ಯವಹಾರಗಳಾಗಲಿ, ನಾಗರಿಕರ ಭೋಗಸ್ವೈಭವಗಳಾಗಲಿ ಸ್ಥಗಿತಗೊಂಡಂತೆಯೇ ಸರಿ; ಅಷ್ಟೇ ಏಕೆ, ಅದರ ನೆರವಿಲ್ಲದೆ ಶತ್ರುವಿನ ಕೋಟೆಯನ್ನು ಗೆಲ್ಲಲಾಗದು, ನಮ್ಮ ಕೋಟೆಯನ್ನು ಉಳಿಸಿಕೊಳ್ಳಲಾಗದು. 'ಕೈ ಕೆಸರಾದರೆ ಬಾಯಿ ಮೊಸರು' ಎನ್ನುವ ಗಾದೆ ವ್ಯವಸಾಯಕ್ಷೇತ್ರದಲ್ಲಿ ಉದ್ಭವವಾದರೂ, ಜೀವನದ ಎಲ್ಲ ಅಂಕಣಗಳಿಗೂ ಅತ್ಯುಚಿತವಾಗಿ ಅನ್ವಯವಾಗುತ್ತದೆ. ದುಡಿಮೆಯಿಂದಲೇ ಮುಕ್ತಿ ಭುಕ್ತಿ ಶಕ್ತಿಗಳೆಂಬ ತತ್ವ ಇದರಲ್ಲಿ ಅಡಕವಾಗಿದೆ. "ಆಕಳಿದ್ದವಗೆ ವ್ಯಾಕುಲವಿಲ್ಲ", "ಆಕಾಶದ ಮಳೆ, ಭೂಮಿ ಬೆಳೆ" "ಭರಣಿ ಮಳೆಯಿಂದ ಧರಣಿಗೆಲ್ಲ ಸುಖ" "ಗೆದ್ದೆಯ ಹೊಲ ಹೀನ, ಗೊಡ್ಡು ಹೆಂಡತಿ ಹೀನ" "ಹುರುಳಿ ಬೆಳೆದು ಕಳೆ ಹಾಳು ಮಾಡು." ವ್ಯವಸಾಯವನ್ನು ಕುರಿತ ಈ ಮತ್ತು ಇನ್ನು ಹಲವು ಗಾದೆಗಳು ಇಡೀ ಹಳ್ಳಿಯ ಬಾಳಿನ ನಂಬಿಕೆಗಳನ್ನು, ರೀತಿನೀತಿಗಳನ್ನು, ಆಶೆ ಆದರ್ಶಗಳನ್ನು, ಸುಖ ದುಃಖಗಳನ್ನು, ಅದರ ಸರ್ವಮುಖಗಳನ್ನು ಸಮರ್ಪಕವಾಗಿ ಕನ್ನಡಿಸುತ್ತವೆ. ಎಲ್ಲ ದೇಶಗಳ ಗಾದೆಗಳನ್ನು ಒಂದೆಡೆಗೆ ಕಲೆ ಹಾಕಿದಾಗ ಕೃಷಿ ಜೀವನದ ಮಹತ್ತು ಬೃಹತ್ತುಗಳು, ಅಂತೆಯೇ ಕಷ್ಟನಿಷ್ಠುರಗಳು ಸ್ಪಷ್ಟವಾಗಿ ತಿಳಿಯುತ್ತವೆ. ಈ ಮಾತು ಎಲ್ಲ ವೃತ್ತಿಗಳಿಗೂ ಅನ್ವಯಿಸುತ್ತದೆ. ಆರೋಗ್ಯ ಮನುಷ್ಯನ ಪ್ರಥಮ ಭಾಗ್ಯವಾದುದರಿಂದ ಅದನ್ನು ಕುರಿತ ಗಾದೆಗಳಂತು ಎಲ್ಲ ದೇಶಗಳಲ್ಲಿಯೂ ಅಪಾರವಾಗಿರಬೇಕು. "ತುತ್ತು ತಡಕ ಕೆಡಿಸಿತು" "ಹಿಟ್ಟು ತಿಂದವನ ಬಿಟ್ಟು ತಂದ" "ಮೋಹಕ್ಕೆ ಮದ್ದಿಲ್ಲ ಕಾಮಕ್ಕೆ ಕಣ್ಣಿಲ್ಲ" [illegible]. ಅವುಗಳ ಸಂಬಂಧವಾದ ಔಷಧೋಪಚಾರಗಳೂ ಗಾದೆಗಳ ಆಲಿಂಗನದಿಂದ ತಪ್ಪಿಸಿಕೊಳ್ಳುವಂತಿಲ್ಲ.

ಗಾದೆಗಳು ಸರ್ವಗ್ರಾಸಿ, ಅವುಗಳ ಕುಕ್ಷಿಯಲ್ಲಿ ಬ್ರಹ್ಮಾಂಡವೇ ಅಡಗಿದೆ, ಅದರೊಳಗೆ ಸಕಲ ಜ್ಞಾನಕ್ಷೇತ್ರಗಳೂ ಸಮಾವೇಶಗೊಂಡಿವೆಯೆಂಬ ಸಂಗತಿ ಮೇಲಿನ ವಿವರಣೆಯಿಂದ ಖಚಿತಗೊಳ್ಳುತ್ತದೆ. ಆದ್ದರಿಂದ ಅವುಗಳನ್ನು ಸಾಮಾಜಿಕ, ಆರ್ಥಿಕ, ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ದೃಷ್ಟಿಗಳಿಂದ ಅಧ್ಯಯನ ಮಾಡುವುದಾದರೆ, ಆಯಾಯ ಕ್ಷೇತ್ರಗಳಲ್ಲಿ ಈತನಕ ಬೆಳಕಿಗೆ ಬಾರದ ಅನೇಕ ಸತ್ಯಸಂಗತಿಗಳು ತಜ್ಞರ ಗಮನಕ್ಕೆ ಬರಬಹುದು. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು"[1] ಎಂಬ ಗಾದೆಯನ್ನೇ ಪರಿಶೀಲಿಸಬಹುದು. ಬೇರೆ ಮನೆಗೆ ಮದುವೆಯಾಗಿ ಹೋದ ಹೆಣ್ಣಿಗೆ ತಂದೆಯ ಕುಲಾಚಾರ [illegible] ಗಂಡನ ಮನೆಯ [illegible] ವಿಧಿನಿಷೇಧಗಳಾವುವೂ ಸಂಬಂಧಪಡುವುದಿಲ್ಲ.

1 ಕನಕಪುರದ ಬಳಿಯ ಒಂದು ಹಳ್ಳಿಯಲ್ಲಿ ಒಕ್ಕಲಿಗ ಜಾತಿಗೆ ಸೇರಿದ ಗುರು ಮನೆತನ [illegible] ಮದುವೆಯಾಗಿ ಹೋದ ಹೆಣ್ಣು ತಂದೆತಾಯಿ ಬಳಿಗೆ [illegible] ಉಂಟು. ಆ ಮನೆಯಿಂದ ಬೇರೆ ಮನೆಗೆ ಮದುವೆಯಾಗಿ [illegible] ಬಂದಾದರೆ ಬೇರೆ ತಟ್ಟೆಯಲ್ಲಿ ಊಟಬಡಿಸುವುದುಂಟು. [illegible] ನೋಡುವ ಸಲುವಾಗಿ ತವರಿಗೆ [illegible] ಕೋಣೆಗೂ ಪ್ರವೇಶವಿಲ್ಲ. ಅಂತೆಯೇ ಆ ಮನೆಗೆ ಬೇರೆ ಮನೆಯಿಂದ ಹೆಣ್ಣು [illegible] ಅವಳನ್ನು ಶುದ್ಧಿಗೊಳಿಸಲಾಗುತ್ತದೆ. ಅವಳು ತವರಿಗೆ ಹೋದಾಗ ತಾನೇ [illegible]

ಗಳಿಗೆ ಮಾತ್ರ ಅವಳು ಬದ್ಧ. ಶ್ರಾದ್ಧಾದಿಕರ್ಮಗಳ ವಿಷಯದಲ್ಲಿ, ಹಬ್ಬಹರಿದಿನಗಳ ಸಂದರ್ಭದಲ್ಲಿ, ಕುಲದ ಕಟ್ಟುನಿಟ್ಟುಗಳ ವಿಚಾರದಲ್ಲಿ ಅವಳು ಗಂಡನ ಮನೆಯ ಪದ್ಧತಿಗಳನ್ನು ಆಚರಿಸಬೇಕಾಗುತ್ತದೆ. "ಹಾರುವನ ಬದುಕು ಮಗನಿಗೆ, ಸೆಟ್ಟಿಯ ಬದುಕು ಅಳಿಯನಿಗೆ"—ಈ ಗಾದೆ ಪ್ರಾಯಶಃ ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಜೀವನದ ಒಂದು ಮುಖವನ್ನು ಕುರಿತದ್ದು ಎನಿಸುತ್ತದೆ. ಅಲ್ಲಿಯ ಬಂಟರಲ್ಲಿ ಆಸ್ತಿಯ ಹಕ್ಕು ಅಳಿಯನಿಗೆ ಸಲ್ಲುತ್ತದೆ; ಬ್ರಾಹ್ಮಣರಲ್ಲಿ ಮಗನಿಗೆ ಸೇರುತ್ತದೆ. "ಕಂಡಕಂಡವರಿಗೆಲ್ಲ ಹಲ್ಲು ಕಿರಿದರೂ ಗಂಡ ಸತ್ತ ಮುಂಡೆಗೆ ಬೋಳಿಸದೆ ಬಿಡರು"—ಈ ಪದ್ಧತಿ ಸಾಮಾನ್ಯವಾಗಿ ಬ್ರಾಹ್ಮಣರಲ್ಲಿ ಮತ್ತು ಅವರನ್ನನುಕರಿಸುವ ಅನ್ಯ ಜಾತಿಯವರಲ್ಲಿ ರೂಢಿಯಲ್ಲಿದೆ. ಬಾಲವಿಧವೆಯಾದರೂ ಮುಂಡನ ಅತ್ಯಗತ್ಯ. ತಾಯಿತಂದೆಯರ ಮುಂದೆ ಹುಯಿಲಿಟ್ಟರೂ ಬೋಳಿಕೆ ತಪ್ಪುವಂತಿಲ್ಲ. "ಕೊಕ್ಕರೆಗೊಂದು ಕೆರೆಯಿಲ್ಲ; ಕೊರಮಶೆಟ್ಟಿಗೊಂದೂರಿಲ್ಲ"—ಕೊಕ್ಕರೆಗೆ ಈಹೊತ್ತೊಂದು ಕೆರೆಯಾದರೆ, ನಾಳೆ ಮತ್ತೊಂದು ಕೆರೆ, ನಾಡಿದ್ದು ಮಗುದೊಂದು ಕೆರೆ. ಯಾವೊಂದು ಕೆರೆಯಲ್ಲಿಯೂ ಬಹುಕಾಲ ನಿಲ್ಲುವುದಿಲ್ಲ. ಅಂತೆಯೇ ಕೊರಮರಿಗೊಂದು ನೆಲೆಯಿಲ್ಲ. ಅವರು ಅಲೆಮಾರಿ ಜನ. ಊರಿಂದೂರಿಗೆ ತಟ್ಟಿ ಪುಟ್ಟಿ ಕುಡಿಕೆ ಕೋಳಿ ಕುರಿಗಳನ್ನು ಸಾಗಿಸಿಕೊಂಡು ಹೋಗುವುದೇ ಅವರ ಚಾಳಿ. ಒಂದುಕಡೆ ಅವರೆಂದೂ ನೆಲಸಿದವರಲ್ಲ. ಅವರ ವಾಡಿಕೆಗಳು ಈ ಗಾದೆಯಿಂದ ವಿಶದಗೊಳ್ಳುತ್ತವೆ. "ಕೂಡಿಕೆಯಾದವಳು ಶಾಸ್ತ್ರಕ್ಕೆ ಹೊರಗು"—ಇದು ಒಕ್ಕಲಿಗರಲ್ಲಿ ಚಲಾವಣೆಯಲ್ಲಿರುವ ಗಾದೆ. ಇದರಲ್ಲಿ ಗರ್ಭಿತವಾಗಿರುವ ಅರ್ಥ ಪ್ರಾಯಶಃ ಹಳ್ಳಿಯ ಇತರ ಕೋಮುಗಳಿಗೂ ಅನ್ವಯಿಸುತ್ತದೆಂದು ತೋರುತ್ತದೆ. ಒಮ್ಮೆ ಮದುವೆಯಾದ ಹೆಣ್ಣು ಬಾಲ್ಯ ಅಥವಾ ಯೌವನದಲ್ಲಿಯೇ ವಿಧವೆಯಾದರೆ, ಕಾರಣಾಂತರಗಳಿಂದ ಗಂಡನಿಂದ ಬಿಡುಗಡೆ ಹೊಂದಿದರೆ, ಬೇರೆಯವರು ಕೂಡಿಕೆಯೆಂಬ ಹೆಸರಿನಿಂದ ಅವಳನ್ನು ಮದುವೆಮಾಡಿಕೊಳ್ಳಬಹುದು. ಒಂದು ರೀತಿಯಲ್ಲಿ ಅದು ವಿಧವಾ ವಿವಾಹ. ವಿಧವಾ ವಿವಾಹ ಪದ್ಧತಿ ಬ್ರಾಹ್ಮಣೇತರರಲ್ಲಿ ರೂಢಿಯಾಗಿತ್ತೆನ್ನುವ ಸಂಗತಿ ಈ ಗಾದೆಯಿಂದ ವ್ಯಕ್ತವಾಗುತ್ತದೆ. ಆದರೆ ಮೊದಲಬಾರಿಗೆ ವಿವಾಹವಾದ ಹೆಂಗಸಿಗಿರುವ ಪಾವಿತ್ರ್ಯವಾಗಲಿ, ಹಕ್ಕುಗಳಾಗಲಿ ಕೂಡಿಕೆ ಹೆಂಗಸಿಗಿರುವುದಿಲ್ಲ. ಮದುವೆ ಮೊದಲಾದ ಒಸಗೆಗಳಲ್ಲಿ ನಡೆಯುವ ಶಾಸ್ತ್ರಗಳಲ್ಲಿ ಅವಳು ಪಾಲುಗೊಳ್ಳುವಂತಿಲ್ಲ. ಇದೊಂದು ಬಿಟ್ಟು ಉಳಿದೆಲ್ಲ ಹಕ್ಕುಗಳೂ ಅವಳಿಗುಂಟು. ಕಾನೂನು ಸಹ ಇಂಥ ವಿವಾಹವನ್ನೊಪ್ಪುತ್ತದೆ.

ಅನೇಕ ನಂಬಿಕೆಗಳು—ಮೂಢವೋ ಅಮೂಢವೋ—ಗಾದೆಗಳ ಮೂಲಕ ಸಮಾಜದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. "ಹಲ್ಲಿ ಹತ್ತಬಾರದು, ಓತಿ ಬೀಳಬಾರದು"; "ಗೂಬೆ ಮನೆ ಹೊಕ್ಕ ಹಾಗೆ" "ಮನೆಗೆ ಬಂದ ಮಾರಿ ಉಂಡಲ್ಲದೆ ಹೋಗದು" ಇವು ಮೂಢನಂಬಿಕೆಗಳಂತೆ ಕಾಣುತ್ತವೆ. ಇವುಗಳ ಉಗಮಕ್ಕೆ ಕಾರಣಗಳೇನು? ಇವುಗಳಿಂದ ಮಾನವಜೀವನಕ್ಕೊದಗುವ ಲಾಭ ನಷ್ಟಗಳೇನು? ಇವುಗಳ ಹಿಂದಿರುವ ಮನೋಧರ್ಮ ಎಂಥದು? ಎನ್ನುವ ಬಗ್ಗೆ ಸಮಾಜವಿಜ್ಞಾನಿ ವಿವೇಚನೆ ನಡಸುವುದಾದರೆ ಅನೇಕ

ಸಾಂಸ್ಕೃತಿಕ ವಿಚಾರಗಳು ಬೆಳಕು ಕಾಣುತ್ತವೆ. "ಮನೋರೋಗಕ್ಕೆ ಮರಣವೇ ಮದ್ದು" ಎನ್ನುವ ನಾಣ್ಣುಡಿ ಮನೋರೋಗಕ್ಕಿಂತ ಕ್ರೂರವಾದ ರೋಗ ಮತ್ತೊಂದಿಲ್ಲವೆನ್ನು ವುದನ್ನು ತಿಳಿಸುತ್ತದೆ. ನಮ್ಮ ಸಮಾಜ ಋಣಭಾರದ ಕ್ರೂರ ಪರಿಣಾಮಗಳನ್ನು ಪುರಾತನ ಕಾಲದಿಂದಲೂ ಕಂಡಿದೆ. ಸಾಲಿಗರು ಹಣವಂತರಿಂದ ನಾರಕೀಯವಾದ ನಷ್ಟ ಕಷ್ಟ ಹಾಗೂ ಯಾತನೆಗಳಿಗೆ ಗುರಿಯಾಗಿದ್ದಾರೆ, ಸುಲಿಗೆಯೇ ಹಣವಂತರ ಕರ್ಮ ಎನ್ನುವ ಸತ್ಯ ಮುಂದಿನ ಗಾದೆಗಳಲ್ಲಿ ಬಯಲಾಗಿದೆ: "ಸಾಲಮಾಡಿ ಓಲೆಮಾಡಿದ, ಓಲೆಮಾರಿ ಬಡ್ಡಿ ತೀರಿಸಿದ"; "ಸಾಲಗಾರನ ಮನೆಗೆ ಸಪ್ಪದೆ ಹೊತ್ತರೆ ಮೇಲಣ ಬಡ್ಡಿಗೆ ಸಮನಾಯ್ತು"; "ಕಡಹುಟ್ಟಿ ಬಡವ ಕೆಟ್ಟ." ಈ ಸಮಸ್ಯೆ ಎಷ್ಟು ಪ್ರಾಚೀನವಾದುದೋ ಅಷ್ಟೇ ಅರ್ವಾಚೀನವಾದುದು ಎಂಬ ವಿಚಾರ ಪ್ರಚಲಿತ ಪರಿಸ್ಥಿತಿಯಿಂದ ತಿಳಿಯುತ್ತದೆ.

ಕುಟುಂಬ ಸಮಾಜದ ಒಂದು ಭಾಗ ತಾನೆ. ಕೌಟುಂಬಿಕ ನೀತಿರೀತಿಗಳಿಗೆ ಯೋಗ ಕ್ಷೇಮಗಳಿಗೆ ಸಂಬಂಧಿಸಿದ ಗಾದೆಗಳು ಲೆಕ್ಕವಿಲ್ಲದಷ್ಟಿವೆ. ಅವು ಕೌಟುಂಬಿಕ ಸಂಗತಿಗಳ ಅಕ್ಷಯನಿಧಿ. ಪ್ರೇಮ ವೈರ, ಸುಖದುಃಖ, ಕಷ್ಟಕಾರ್ಪಣ್ಯ, ಲೋಕನೀತಿ ಲೋಕಾನು ಭವ, ಒಟ್ಟಿನಲ್ಲಿ ಕುಟುಂಬದ ಎಲ್ಲ ಮುಖಗಳು, ಎಲ್ಲ ಸಾಧನೆಗಳು, ಎಲ್ಲ ರೂಪಗಳು, ಎಲ್ಲ ರಹಸ್ಯಗಳು, ಎಲ್ಲ ಆಗುಹೋಗುಗಳು ಅಲ್ಲಿ ಪ್ರತಿಫಲನಗೊಂಡಿವೆ. ಅತ್ತೆಯ ಮನೆ ಯಲ್ಲಿ ಮಗಳು ಪಡುವ ಪಾಡುಗಳನ್ನು ಕಂಡ ತಾಯಿಯೊಬ್ಬಳ ಮನಸ್ಸಿನಲ್ಲಿ "ಹೆಣ್ಣು ಹಡೆಯೋದು ಬೇಡ, ಪರರಿಗೆ ಕೊಡೋದು ಬೇಡ" ಎಂಬ ವಾಕ್ಯ ಮೂಡಿರಬಹುದು. ಹೆಣ್ಣು ತಂದುಕೊಳ್ಳಬೇಕಾದರೆ ಅವಳ ನಡೆನುಡಿಗಳನ್ನು ಮೊದಲೇ ತಿಳಿಯಬೇಕಷ್ಟೆ. ಹಿಂದಿನ ಕಾಲದಲ್ಲಿ ಈಗಿನಂತೆ ಎಲ್ಲೆಂದರಲ್ಲಿ ಹೆಣ್ಣನ್ನು ನೋಡುವ ಅವಳ ಗುಣವನ್ನರಿಯುವ ಅವಕಾಶವಿರಲಿಲ್ಲ. ಜತೆಗೆ ಬಾಲ್ಯವಿವಾಹ ವಧುಪರೀಕ್ಷೆಗೆ ಅನುವು ನೀಡುತ್ತಿರಲಿಲ್ಲ. ಅಂಥ ಪರಿಸ್ಥಿತಿಯಲ್ಲಿ ತಾಯಿಯ ಶೀಲಸ್ವಭಾವಗಳಿಂದ ಮಗಳ ಶೀಲವನ್ನು ಅರಿಯಲಾಗು ತ್ತಿತ್ತು. ಅಂಥ ಪರಿಸರದಲ್ಲಿ ಮೂಡಿದ ನೀತಿಗಾದೆ "ತಾಯಿ ನೋಡಿ ಹೆಣ್ಣು ತಂದುಕೋ, ಹಾಲು ನೋಡಿ ಎಮ್ಮೆ ಕೊಂಡುಕೋ" ಎಂಬುದು. ತಾಯಿಯ ಚಿತ್ರ ಜನಪದ ಸಾಹಿತ್ಯ ದಲ್ಲಿ ಮೂಡುವಷ್ಟು ಸಮಗ್ರವಾಗಿ ಸಫಲವಾಗಿ ಕರುಣಾಪೂರ್ಣವಾಗಿ ಮತ್ತೆ ಯಾವ ಸಾಹಿತ್ಯದಲ್ಲಿಯೂ ರೇಖಿತವಾಗಿಲ್ಲ. ಆಕೆ ಕರುಣೆಯ, ಅಕ್ಕರೆಯ, ತಾಳ್ಮೆಯ, ತ್ಯಾಗದ ಮಹಾಮೂರ್ತಿ. ಮಕ್ಕಳನ್ನು ಹೊತ್ತು ಹೆತ್ತು ಹೇಲು ಉಚ್ಚೆ ಬಳಿದು ತನ್ನ ಹೊಟ್ಟೆ ಬಟ್ಟೆ ಕಟ್ಟಿ ಸಾಕಿ ಸಲಹುತ್ತಾಳೆ. ಮಗಳು ಅಳಿಯನ ಮನೆ ಸೇರಿ, ಮಗ ಸೊಸೆಯ ವಶ ವಾದ ಬಳಿಕ ಅವಳಿಗೆ ಗತಿ ಯಾರು? ಸರಿಯಾದ ಗಂಡನಿದ್ದರೆ ಅವನೊಂದು ಆಸರೆ ಯುಂಟು: ಇಲ್ಲವಾದರೆ ಶೂನ್ಯವೇ ಅವಳ ಹಣೆಬರಹ. ಮಗ ಮಗಳ ನಿರ್ಲಕ್ಷ್ಯಕ್ಕೆ ಭಾಜನಳಾದ ತಾಯಿಯ ಮೂಗಳಲು "ಮಗಳನ್ನು ಹೆತ್ತು ಅಳಿಯನಿಗೆ ಕೊಟ್ಟೆ. ಮಗ ನನ್ನು ಹೆತ್ತು ಸೊಸೆಗೆ ಕೊಟ್ಟೆ" ಎಂಬ ಗಾದೆಯಲ್ಲಿ ಸುಯ್ಗರೆಯುತ್ತದೆ.

ಲೋಕಾನುಭವದ ಗಾದೆಗಳಲ್ಲಿ ನೀತಿ ನಮ್ಮ ಆಚಾರ ಅನಾಚಾರಗಳು ಬಿಂಬಿತವಾಗು ತ್ತವೆ. "ಮಾಡೋದು ಅನಾಚಾರ, ಮನೆ ಮುಂದೆ ಬೃಂದಾವನ" ಎಂಬ ಗಾದೆ

ಮೂಲತಃ ಯಾವುದೋ ಒಂದು ವರ್ಗಕ್ಕೆ ಅನ್ವಯಿಸುವಂಥದು, ಕಾಲಕ್ರಮೇಣ ಜನಸಾಮಾನ್ಯಕ್ಕೆಲ್ಲ ಸೇರುವಂತಾಯಿತು. ನೂರು ಹೊತ್ತೂ ಪಾಪಕರ್ಮಗಳಲ್ಲಿ ತೊಡಗಿರುವವರು ಪ್ರತಿನಿತ್ಯ ಸಂಧ್ಯಾವಂದನೆ ಜಪ ತಪ ಪೂಜೆಪುನಸ್ಕಾರ ಯಾತ್ರೆಗಳನ್ನು ಮಾಡಿದರೆ ಪ್ರಯೋಜನವಾಗದು, ಸದಾಚಾರ ಮೊದಲು ದುರಾಚಾರ ಕೊನೆಗೆ ಎನ್ನುವ ತತ್ವವನ್ನು ಇದು ಪ್ರತಿಪಾದಿಸುತ್ತದೆ. "ಹಾರುವನಿಗೆ ತೊತ್ತಾಗಬೇಡ, ಗಾಣಿಗನಿಗೆ ಎತ್ತಾಗಬೇಡ", "ಅಡಿಕೆಗೆ ಹೋದ ಮಾನ ಆನೆ ಕೊಟ್ಟ್ರೆ ಬತ್ತದೆಯೆ", "ಮದುವೆ ಮಾಡಿನೋಡು, ಮನೆ ಕಟ್ಟಿನೋಡು" ಇಂಥ ನಿತ್ಯಾನುಭವದ ಗಾದೆಗಳು ಎಚ್ಚರತಪ್ಪಿದ ಜನರನ್ನು ಎಬ್ಬಿಸುತ್ತವೆ.

ಸಮಾಜದ ಸುಖಸಂಪತ್ತುಗಳಿಗೆ ನೀತಿಯೇ ಅಡಿಗಲ್ಲು. ಮಾನವನ ಮನಸ್ಸನ್ನು ತಿದ್ದುವ, ಧರ್ಮವನ್ನು ರಕ್ಷಿಸುವ ಶಕ್ತಿ ಅದು. ಅದು ಪರಿವರ್ತನಶೀಲವಾದದ್ದು. ದೇಶದಿಂದ ದೇಶಕ್ಕೆ, ಕಾಲದಿಂದ ಕಾಲಕ್ಕೆ ಆಯಾಯ ಪರಿಸರಕ್ಕನುಗುಣವಾಗಿ ಅದು ಬದಲಾಗುತ್ತದೆ. ಆದರೂ ಮನುಷ್ಯನ ಕ್ಷೇಮಕ್ಕೆ, ಸಾಂಸ್ಕೃತಿಕ ಜೀವನಕ್ಕೆ ಅದು ಅತ್ಯವಶ್ಯ. ಸ್ತೇಯ ವ್ಯಭಿಚಾರಗಳು ಸಾಮಾನ್ಯವಾಗಿ ದೂಷ್ಯವೆಂದು ಗಣನೆಗೊಂಡಿವೆ. ಅವುಗಳಿಂದ ಸಮಾಜದ ಶಾಂತಿಗೆ ಭಂಗವಾಗುತ್ತದೆ. ಆದರೆ ಆಪತ್ಸಮಯದಲ್ಲಿ ಅವು ನಿಂದನೀಯವಲ್ಲವೆಂಬುದಕ್ಕೆ "ದಂಡಿನಲ್ಲಿ ಕೆಟ್ಟದ್ದು ಹಾದರವಲ್ಲ, ಬರದಲ್ಲಿ ಕದ್ದದ್ದು ಕಳವಲ್ಲ" ಎಂಬ ಗಾದೆಯನ್ನು ಗಮನಿಸಬಹುದು. ಯೋಧ ಪ್ರಾಣದ ಹಂಗು ತೊರೆದು ಯುದ್ಧದಲ್ಲಿ ತೊಡಗಿರುವಾಗ, ಹಾದರದ ಮೂಲಕ ಕಾಮತೃಪ್ತಿಗೆಳಸುವುದು ಮಹಾಪರಾಧವಾಗಲಾರದು. ಅಂತೆಯೇ ಕ್ಷಾಮ ಕಾಲದಲ್ಲಿ ಅನ್ನ ನೀರು ಸಿಗದೆ ಪ್ರಾಣಾಪಾಯವೊದಗಿರುವಾಗ ಕಳ್ಳತನದಿಂದಲಾದರೂ ಹರಣ ಹೊರೆಯುವುದಾದರೆ ತಪ್ಪಲ್ಲ. ನೀತಿಶಾಸ್ತ್ರದ ರಚನೆಗಂತು ಗಾದೆಗಳಿಂದ ವಿಪುಲ ಸಾಮಗ್ರಿ ದೊರೆಯುತ್ತದೆ.

ಗಾದೆಗಳು ಒಂದು ನಾಡಿನ ಸಂಸ್ಕೃತಿಗೆ ಆದರ್ಶವೂ ಅಹುದು, ದೂರದರ್ಶಿಯೂ ಅಹುದು. ಸಂಸ್ಕೃತಿಯ ಅಧ್ಯಯನದಲ್ಲಿ ಶಾಸನ, ಕಾವ್ಯ, ಪುರಾತತ್ವ ವಸ್ತುಗಳು ಮತ್ತು ಪವಿತ್ರ ಗ್ರಂಥಗಳೆಷ್ಟು ಮುಖ್ಯವೋ ಗಾದೆಗಳೂ ಅಷ್ಟೇ ಮುಖ್ಯ. ಅವುಗಳನ್ನುಳಿದ ವ್ಯಾಸಂಗ ಅರೆಕೊರೆಯಾಗುತ್ತದೆ. ಅವು ಸಂಸ್ಕೃತಿಯ ಕೈಮರಗಳೂ ಅಹುದು, ದೀವಿಗೆಗಳೂ ಅಹುದು. "ಕಲ್ಲಿಟ್ಟವನ ಬೆಲ್ಲದಲ್ಲಿಡಬೇಕು" ಎಂಬ ವಾಕ್ಯ ಜನತೆಯ ಔದಾರ್ಯವನ್ನೂ ಅವರ ಮನಸ್ಸಿನ ಪರಿಪಕ್ವತೆಯನ್ನೂ ನಡೆಯ ನಯವನ್ನೂ ಎತ್ತಿತೋರಿಸುತ್ತದೆ. ಮುಯ್ಯಿಗೆ ಮುಯ್ಯಿ ಪರಿಹಾರವಲ್ಲ. ಸೇಡು ಸೇಡನ್ನು ಹೆರುತ್ತದೆ. ಸಾಮಾಜಿಕ ರೋಗಗಳಿಗೆಲ್ಲ ಪ್ರೇಮವೇ ಪರಮ ಭೇಷಜ. ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆ ತೋರಿಸು ಎಂದು ಯೇಸು ಹೇಳಿದ ಉಪದೇಶದ ತಿರುಳಾದರೂ ಇದೇಯೆ. ಮೂರ್ಖನನ್ನು ಮೌರ್ಖ್ಯದಿಂದ ತಿದ್ದಲಾಗದು, ಅವನು ಪ್ರೇಮಕ್ಕೆ ಮಾತ್ರ ಮಣಿಯುತ್ತಾನೆನ್ನುವುದಕ್ಕೆ ಗಿರೀಶ್ಚಂದ್ರ ಘೋಷರ ಚರಿತ್ರೆಯೇ ಸಾಕ್ಷಿಯಾಗಿದೆ. ಮಾನವನ ದುಃಖಕ್ಕೆ ಆಶೆಯೇ ಮೂಲವೆಂದು ಬುದ್ಧ ಘೋಷಿಸಿದ್ದುಂಟು. ಅವನ ಸಕಲಾರಿಷ್ಟಗಳಿಗೆ ಅದೇ ಕಾರಣ.

ಅಂದರೆ ಆಸೆ ಇರಬಾರದೆಂದಲ್ಲ. ಎಷ್ಟು ಬೇಕೋ ಅಷ್ಟೇ ಇದ್ದರೆ ತೃಪ್ತಿಯಿರುತ್ತದೆ: ತೃಪ್ತಿಯಿಂದ ಮನಶ್ಶಾಂತಿ, ಮನಶ್ಶಾಂತಿಯಿಂದ ಸುಖ ಲಭಿಸುತ್ತವೆ. ಅತಿ ಆಸೆಯಿಂದ, ಲಾಭಕೋರತನದಿಂದ ಸಮಾಜದ ಸಮತೋಲ ತಪ್ಪುತ್ತದೆ. ಒಂದು ಕಡೆ ಲಾಭ, ಮತ್ತೊಂದು ಕಡೆ ನಷ್ಟ, ಒಂದು ಕಡೆ ಶ್ರೀಮಂತಿಕೆ ಮತ್ತೊಂದು ಕಡೆ ದಾರಿದ್ರ್ಯ ತಾಂಡವವಾಡುತ್ತದೆ. ಆದ್ದರಿಂದ "ಅತಿ ಆಸೆ ಗತಿ ಕೆಡಿಸಿತು" ಎಂಬ ಮಾತು ಸತ್ಯವಾಯಿತು. "ಹಂಗಿನ ಹಾಲಿಗಿಂತ ಅಂಬಲಿಯು ತಿಳಿಲೇಸು", "ಹಾಸಿಗಿದ್ದಷ್ಟು ಕಾಲು ಚಾಚು", "ಇಲ್ಲದವನಿಗೆ ಒಂದು ಚಿಂತೆಯಾದರೆ ಇದ್ದವನಿಗೆ ನಾನಾ ಚಿಂತೆ"—ಇವೆಲ್ಲ ಮಾನವ ಹಿತ ಮತ್ತು ಲೋಕಕ್ಷೇಮಗಳನ್ನು ಕುರಿತಂಥವು. ಇವೆರಡು ಉಚ್ಚಸಂಸ್ಕೃತಿಯ ಮುಖ್ಯ ಲಕ್ಷಣಗಳು.

ಗಾದೆಗಳ ಸಾಹಿತ್ಯಿಕ ಮತ್ತು ಭಾಷಿಕ ಮೌಲ್ಯಗಳ ಪ್ರಾಮುಖ್ಯದ ಬಗ್ಗೆ ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ಅದೊಂದು ಸಾಹಿತ್ಯಿಕ ಪ್ರಕಾರವೆಂದಾಗಲೇ ಅವುಗಳಲ್ಲಿ ಪ್ರಥಮತಃ ಸಾಹಿತ್ಯಲಕ್ಷಣಗಳನ್ನು ನಿರೀಕ್ಷಿಸಬೇಕಾಗುತ್ತದೆ; ಉಳಿದದ್ದು ಆನುಷಂಗಿಕ. ಕೇವಲ ನೀತಿ ಅಥವಾ ಅನುಭವಗಳಿಗಾಗಿಯೇ ಅವನ್ನು ಯಾರೂ ನೆನಪಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಉಕ್ತಿ ಚಮತ್ಕಾರ ಗಾದೆಗಳ ಹೆಗ್ಗುಣಗಳಲ್ಲೊಂದು. ಪ್ರಾಸ ಲಯ ಅಲಂಕಾರ ಪಾಕ ಮೊದಲಾದ ಕಾವ್ಯಗುಣಗಳು ಇಲ್ಲಿಯೂ ಮುಕ್ಕಳಿಸುತ್ತವೆ. "ಕಾಣದೂರಿಗೆ ನಾಲಗೆಯೇ ದಾರಿ" ಎಂಬ ವಾಕ್ಯದಲ್ಲಿಯ 'ನಾಲಗೆಯೇ ದಾರಿ' ಎನ್ನುವ ಉಕ್ತಿವಿಶೇಷವನ್ನು ಗಮನಿಸಬಹುದು. ನಾಲಗೆ ಹೇಗೆ ದಾರಿಯಾದೀತು? ಅದರ ಮೇಲೆ ನಡೆಯುವುದು ಹೇಗೆ? ದಾರಿ ತಿಳಿಯಬೇಕಾದರೆ ಕೈಮರವಿರಬೇಕು, ಇಲ್ಲವೆ ಯಾರನ್ನಾದರೂ ಕೇಳಬೇಕು. ಕೈಮರ ಇಲ್ಲ. ಆಗ ನಾಲಗೆಯೇ ದಾರಿ ತೋರಿಸಬೇಕಾಗುತ್ತದೆ. ಹೇಗೆ? ತಿಳಿದವರನ್ನು ಕೇಳುವುದರಿಂದ. ಹೀಗೆ ಮೊದಲು ಹೊಳೆದ ವಿರೋಧಾರ್ಥವನ್ನು ಪರಿಹರಿಸಿಕೊಂಡಾಗ ಅದರ ಸ್ವಾರಸ್ಯ ಮನಮುಟ್ಟುತ್ತದೆ. "ನಾಲಗೆಯಿದ್ದವ ಬರದಲ್ಲಿ ಗೆದ್ದ" ಎನ್ನುವ ಗಾದೆಯೂ ಹೀಗೆಯೇ. ಗಾದೆಗಳಲ್ಲಿ ಪ್ರಸಿದ್ಧಾರ್ಥಕ್ಕಿಂತ ಗೂಢಾರ್ಥ ಅಥವಾ ವ್ಯಾಪಕಾರ್ಥ ಮುಖ್ಯ. ದಿಗಂತ ಕಲ್ಪನೆಯ ರೆಕ್ಕೆ ಗರಿ ಬಿಚ್ಚಿದಷ್ಟು ಅವರ ಅರ್ಥ ಮುಗಿಲಿಗೆ ಏಣಿ ಹಾಕುತ್ತದೆ. "ಸಸಿಲಾಡಿ ಕೊರವನ ತಲೆಗೆ ತಂತು" ವನ್ನು ಬಾಚುತ್ತದೆ, ಸಮಾಜವನ್ನು ತಬ್ಬುತ್ತದೆ. "ಸಸಿಲು ಸೀರೆಸೊಳಗಿರವೆ. ಮೇಲೆ ಬಂದು ಅದು ಎಂಬ ಗಾದೆಯೇ ಇದಕ್ಕೆ ನಿದರ್ಶನ. ಸಸಿಲು ಸೀರೆಸೊಳಗಿರವೆ. ಈ ಬಿಸ್ತ್ರನಿಗೆ ಗುಟ್ಟು ಗೊತ್ತು. ಬಲೆ ಹಾಕುತ್ತಾನೆ. ಅಲ್ಲಿಯೇ ಒಳಗೆ ತಾಯಿವಿಹಾಸಿರುತ್ತದೆ. ಕೊರವ ಸೆರೆಯಾಗುತ್ತದೆ. ಮಕ್ಕಳ ತಪ್ಪಿನಿಂದ ತಾಯಿ, ಸಸಿಲು ಸುಣಿಚಿಕೊಳ್ಳುತ್ತವೆ; ಮಂತ್ರಿಯ ಕುಚೇಷ್ಟೆಯಿಂದ ರಾಜ, ಪ್ರಭುತ್ವದ ಪ್ರತಿಷ್ಠೆಯಿಂದ ನಾಡಿನ ಜನ ಇಂತೆಯೇ ಸಂಕಟಕ್ಕೊಳಗಾಗಬೇಕಾಗುವ ಪ್ರಸಂಗಗಳು ನಮ್ಮ ನಿತ್ಯಾನುಭವದ ಸಂಗತಿಗಳಾಗಿವೆ. "ಎತ್ತು ಏರಿಗೆ ಎಮ್ಮೆ ನೀರಿಗೆ." ನೊಗಕ್ಕೆ ಎತ್ತು ಅಥವಾ ಕೋಣ ಹೂಡಬೇಕಷ್ಟೆ. ಅವುಗಳಲ್ಲಿ ಒಂದು ಒಂದು ಕೋಲಿಗಾದರೆ, ಮತ್ತೊಂದು ಇನ್ನೊಂದು ಕೋಲಿ ಗಾಗುತ್ತದೆ. 'ಏರಿಗೆ' ಎನ್ನುವಲ್ಲಿ ಶ್ಲೇಷೆಯುಂಟು. ಏರು, ಏರಿ ಎಂದು ಅದನ್ನು ಬಿಡಿಸ

ಬಹುದು, ಮಧ್ಯಾಹ್ನದ ಬಿಸಿಲಲ್ಲಿ ಎಮ್ಮೆ ಮುಳುವಿನಿಂದ ಎಷ್ಟು ಚುಚ್ಚಿದರೂ ಅದು ನೀರಿನ ಕಡೆಗೆ ಮುಖವಾಗುತ್ತದೆ. ಎತ್ತು ಮಾತ್ರ ಮುಳುಗೋಲು ಹೇಳಿದಂತೆ ಕೇಳುತ್ತದೆ. ಈ ಗಾದೆಯನ್ನು ಇಬ್ಬಂದಿಗಳಾದ ಗಂಡಹೆಂಡಿರಿಗೂ ಅನ್ವಯಿಸುವುದುಂಟು. ಹಾಸ್ಯ ವಿಡಂಬನೆ ವ್ಯಂಗ್ಯಗಳಿಗೆ ಗಾದೆಗಳಲ್ಲಿ ಬರವಿಲ್ಲ. "ಮೂರು ನಾಮದವ ಸ್ವರ್ಗಕ್ಕೆ ಹೋದರೆ ಹನ್ನೆರಡು ನಾಮದವ ಎಲ್ಲಿಗೆ ಹೋದಾನು ?" ಲಾಂಛನಧಾರಿಗಳನ್ನು ಕುರಿತ ಟೀಕೆ ಇದು. "ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ" ಒಳಗೇನೂ ಇಲ್ಲದೆ ಬಡಾಯಿ ಕೊಚ್ಚುವವನನ್ನು ಕುರಿತದ್ದು. "ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ." ಸೋತರೂ ಸೋಲನ್ನೊಪ್ಪಿಕೊಳ್ಳದವನ ಒಣಮಾತು. "ಕಳ್ಳನ ನಂಬಿದರೂ ಕುಳ್ಳನ ನಂಬಬಾರದು" "ಏನೋ ಗೌಡ ಅಂಪ್ರೆ ಕಂಬ್ಳೀಗೆ ಮೂರು ಹಣ ಅಂದ" "ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ." ಹಬ್ಬ ಹರಿದಿನಗಳಲ್ಲಿ ಮದುವೆಯೊಸಗೆಗಳಲ್ಲಿ ಸಂತೆ ಜಾತ್ರೆಗಳಲ್ಲಿ ಹೊಲಗದ್ದೆಗಳಲ್ಲಿ ಕುಳಿತಾಗ ನಿಂತಾಗ ಇಂಥ ಗಾದೆಗಳನ್ನು ಹೇಳಿಕೊಂಡು, ಬಾಳಿನ ಕಹಿ ನೋವನ್ನು ಮರೆತು, ಸುತ್ತಮುತ್ತಲೆಲ್ಲ ನಗುವಿನ ಅಲೆಯನ್ನೆಬ್ಬಿಸಿ, ಹಾಸ್ಯದ ಹೊನಲನ್ನುಕ್ಕಿಸುವ ಜಾನಪದರೇ ಧನ್ಯರು.

ಭಾಷಾವಿಜ್ಞಾನಿಗಂತು ಗಾದೆಗಳು ತವನಿಧಿಯಂತಿವೆ. ಹಳ್ಳಿಗರ ಬಾಯಲ್ಲಿ ಬಿದ್ದಂತೆಯೆ ಆಯ್ದುಕೊಂಡು, ಸ್ವಸ್ವರೂಪದಲ್ಲಿಯೇ ಅಚ್ಚುಹಾಕಿಸಿದ್ದಾದರೆ ಹೊಸ ವ್ಯಾಕರಣ ಸೂತ್ರಗಳನ್ನು ರಚಿಸಬೇಕಾಗುತ್ತದೆ; ಭಾಷೆಯ ನೈಜಸ್ವರೂಪವನ್ನು ತಿಳಿಯಲನುಕೂಲವಾಗುತ್ತದೆ. ಜನ ಸಂಪರ್ಕವಿಲ್ಲದ, ಜನವಾಣಿಯ ಹೊಲಬರಿಯದ ಕೇಶಿರಾಜ ಭಟ್ಟಾಕಳಂಕರಂಥ ಮಹಾವೈಯಾಕರಣಿಗಳಿಗೆ ಅಲಭ್ಯವಾಗಿದ್ದ ಅನೇಕಾನೇಕ ರೂಪಗಳು ಸಿಗುತ್ತವೆ. ಯಾಜ್ಯ, ಇಸ, ಯಾಸ, ಈಬತ್ತಿ, ಇಳ್ಳೆದೆಲೆ, ಪರ್‌ಸಾದ, ಕುಡ್ಳು (ಕುಳ್ಳು), ತೊದಲ (ಕೊವಲ), ಗುಡ್ಳು (ಗುಳ್ಳು), ಅಂಡು (>ಹರಡು) ಸೆಡೆ (>ಹೆಡೆ) ದುಡುವಂತೆ (ದೃಢವಂತೆ)—ಇತ್ಯಾದಿ ರೂಪಗಳು ರಾಶಿರಾಶಿಯಾಗಿ ದೊರೆಯುತ್ತವೆ. ಇಂತೆಯೇ ಕಿಟ್ಟೆಲ್‌ನಂಥ ಮಹಾಕೋಶಕಾರರು ನಗರದ ಮಹಾವಿದ್ವಾಂಸರು ಕನಸಿನಲ್ಲಿಯೂ ಕಂಡರಿಯದ, ಮಣ್ಣಿನ ಕಂಪುಳ್ಳ, ಜನಾಂಗದ ಕಸುವನ್ನು ಪಡೆದ ಪದಗಳು ಹಿಂಡುಹಿಂಡಾಗಿ ಕಾಣಿಸಿಕೊಳ್ಳುತ್ತವೆ. ಅಂಟೆ (ಜಿಪುಣೆ), ಗುದಿಗೆ (ದೊಣ್ಣೆ), ಚಟ್ಟಿ (ಮಡಕೆ), ಹಿಂಡೆಕೂಳು (ಶ್ರಾದ್ಧದ ಅನ್ನ), ದುಬ್ಬಿಸು (ಹೊಡೆ), ಕೊಂಗ (ಮೊರ), ಹೆಡ್ತಿ, (ಕೋಚೆ ಸ್ವಭಾವದವನು), ಚಿಬ್ಬಲು (ಬಿದಿರಿನ ಮುಚ್ಚಳ), ದದ್ದು (ಒಡಕು): ನಿದರ್ಶನಾರ್ಥವಾಗಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಇದೀ ಜಗತ್ತೀ ಗಾದೆಗಳ ವಸ್ತುವ್ಯಾಪ್ತಿಯಿಂದ, ಅವುಗಳಿಗೊಂದು ವಸ್ತುವಿಲ್ಲವಾದ್ದರಿಂದ ಗಾದೆಗಳ ವರ್ಗೀಕರಣ ಕಷ್ಟ. ಉಗಮದ ದೃಷ್ಟಿಯಿಂದ ಅವುಗಳನ್ನು ಜನಪದ ಮತ್ತು ಗ್ರಂಥಸ್ಥ (ಅಥವಾ ಸಾಹಿತ್ಯಿಕ) ಗಾದೆಗಳೆಂದು ಎರಡು ಪಂಗಡಗಳಾಗಿ ವಿಂಗಡಿಸುವುದುಂಟು. ಅಕ್ಷರಜ್ಞಾನವಿಲ್ಲದ ಜಾನಪದರಂತೆ ವಿದ್ಯಾವಂತರೂ ಗಾದೆಗಳನ್ನು ಕಟ್ಟಿ ಗಾಳಿಯಲ್ಲಿ ತೇಲಿಸುತ್ತಾರೆ. ಅವು ಸಹ ಕಾಲಾನಂತರದಲ್ಲಿ ಜನಪ್ರಿಯತೆಯನ್ನು ಗಳಿಸು

ತ್ತವೆ. ಸಾಮಾನ್ಯರೂ ಅವನ್ನು ಬಳಸುತ್ತಾರೆ, ಅಥವಾ ಅನುಕರಿಸುತ್ತಾರೆ. ಅವು ಗ್ರಂಥಸ್ಥ ಗಾದೆಗಳಿಗಿಂತ ಭಿನ್ನವೆಂದೇ ಕರೆಯಬೇಕಾಗುತ್ತದೆ. ಏಕೆಂದರೆ ಅವು ಮೌಖಿಕವಾಗಿಯೇ ಸಮಾಜದಲ್ಲಿ ಹಬ್ಬಿಕೊಳ್ಳುತ್ತವೆ. ಅದರಿಂದ ಅವನ್ನು ಗಮನಕ್ಕೆ ತಂದುಕೊಂಡು ಒಂದು ಹೊಸ ವರ್ಗವನ್ನು ಕಲ್ಪಿಸಬೇಕಾಗುತ್ತದೆಂದು ಕೆಲವರು[1] ವಾದಿಸುತ್ತಾರೆ. ಅವರು ಆ ವರ್ಗಕ್ಕೆ 'ನಾಗರಿಕ ಗಾದೆಗಳು' ಎಂದು ನಾಮಕರಣ ಮಾಡಿದ್ದಾರೆ. 'ನಾಗರಿಕ' ಎನ್ನುವ ಮಾತು 'ಅನಾಗರಿಕ' ಎಂಬ ವಿರುದ್ಧಾರ್ಥದ ಪದವನ್ನಪೇಕ್ಷಿಸುವುದರಿಂದ, ಆ ಪದವನ್ನು ಕುಚೇಷ್ಟೆಗಾದರೂ ಬೇರೆ ವರ್ಗದ ಪದಗಳಿಗೆ ಅನ್ವಯಿಸಬಹುದಾದ ಅಂಜಿಕೆಯಿರುವುದರಿಂದ ಅವುಗಳನ್ನು ಶಿಷ್ಟ ಅಥವಾ ವಿಶಿಷ್ಟ ಗಾದೆಗಳೆಂದು ಕರೆಯಬಹುದಾಗಿದೆ. ಇವುಗಳನ್ನು ನಗರದ ಶಿಷ್ಟವರ್ಗ ಮಾತ್ರವಲ್ಲ, ಹಳ್ಳಿಯಲ್ಲಿ ನೆಲಸಿರುವ ವಿದ್ಯಾವಂತರು, ಕಾರ್ಖಾನೆಗಳಲ್ಲಿ ಕೆಲಸಮಾಡುವ ಕಾರ್ಮಿಕರೂ ಟಂಕಿಸಬಹುದು. ಕಚೇರಿಗಳಲ್ಲಿ ನೌಕರಿ ಮಾಡುವ ಜನ ಸಹ ಗಾದೆಗಳ ಸೃಷ್ಟಿಯಲ್ಲಿ ಭಾಗವಹಿಸಬಹುದು. ಈ ಶಿಷ್ಟಗಾದೆಗಳು ಜನಪದ ಗಾದೆಗಳ ಅನುಕರಣವೆನ್ನುವುದರಲ್ಲಿ ಸಂಶಯವಿಲ್ಲ. ಆದರೆ ಅನುಭವ ಮತ್ತು ಭಾಷೆಗಳ ದೃಷ್ಟಿಯಿಂದ ಎರಡಕ್ಕೂ ಸಾಕಷ್ಟು ಅಂತರವಿರುತ್ತದೆ. ಆದರೂ ಅವುಗಳನ್ನು ಬೇರ್ಪಡಿಸುವುದು ಕಷ್ಟವಾಗುತ್ತದೆ. ಈಗಾಗಲೇ ಪ್ರಕಟಗೊಂಡಿರುವ ಕೆಲವು ಗಾದೆಗಳ ಸಂಕಲನಗಳಲ್ಲಿ ಎರಡು ವರ್ಗಗಳ ಗಾದೆಗಳು ಬೆರಕೆಗೊಂಡಿರಲು ಸಾಧ್ಯ. "ಶತದ್ರೋಹಿಗೆ ಶಾಲು ಜೋಡಿ", "ಧ್ಯಾನಿಸಿದವನೇ ಜಾಣ", "ಅಭಿಸಾರಿಯ ಕೈಲಾದರೂ ಉಂಡೇನು, ಅವಿಚಾರಿಯ ನೆರೆ ಬೇಡ"[2]—ಇಂತೆಯೇ ಎಷ್ಟು ಬೇಕಾದರೂ ಪೋಣಿಸಬಹುದು.

ಗ್ರಂಥಸ್ಥ ಗಾದೆಗಳನ್ನು ಕುರಿತು ಇಲ್ಲಿ ಹೆಚ್ಚು ಹೇಳಬೇಕಾಗಿಲ್ಲ. ಜನಪದ ಗಾದೆಗಳನ್ನಂತು ಅವರು ಧಾರಾಳವಾಗಿ ಬಳಸಿಕೊಳ್ಳುತ್ತಾರೆ. ಹಾಗೆ ಬಳಸಿಕೊಳ್ಳುವುದರಿಂದ ಅವರ ಶೈಲಿಗೆ ಕಾಂತಿ ಸಮನಿಸುತ್ತದೆ. ಆದರೂ ಗಾದೆ ಕಾವ್ಯಮಯವಾದ್ದರಿಂದ ಕವಿಯ ಲೇಖನಿಯಿಂದ ಅವು ಸಹಜವಾಗಿಯೇ ಹೊಮ್ಮುತ್ತವೆ. ಶೇಕ್ಸ್‌ಪಿಯರ್, ಷಾ, ಗಯಟೆ, ಕಾಲಿದಾಸ, ವಾಲ್ಮೀಕಿ, ಪಂಪ, ಕುಮಾರವ್ಯಾಸ, ಪುರಂದರಾದಿ ಕವಿಗಳು ಗಾದೆಗಳ ಬೃಹತ್ ಪ್ರಪಂಚವನ್ನೇ ನಿರ್ಮಿಸಿದ್ದಾರೆ. ವಚನಕಾರರ ಶೈಲಿಯಂತು ಬಹುವೇಳೆ ಗಾದೆಯ ದಾರಿ ಹಿಡಿಯುತ್ತದೆ.[3] ಪರಮೇಶ್ವರಭಟ್ಟ ಮತ್ತು ಲಕ್ಷ್ಮಣಗೌಡರಂಥವರು

---

1 ಈ ವಾದವನ್ನು ಮೊದಲು ಮಂಡಿಸಿದವರು ನನಗೆ ತಿಳಿದಮಟ್ಟಿಗೆ ಶ್ರೀ ಸಂ. ಶಿವಕುಮಾರ್ ಅವರು. 'ಕನ್ನಡ ಗಾದೆಗಳ ಸಮೀಕ್ಷೆ', ಪು. ೨೩ ೩೬.

2 ಟಿ. ವಿ. ವೆಂಕಟರಮಣಯ್ಯನವರ ಕನ್ನಡ ಗಾದೆಗಳ ಕೋಶದಿಂದ ಉದ್ಧರಿಸಿದೆ.

3 Dry Sorrow drinks our blood—*Romeo and Juliet*, III, v. 59.
Yet hasty marriage seldom proveth will—The third part of *King Henry the Sixth*, iv. i. 18.
Things sweet to taste prove in digestion sour—The tragedy of *King Richard the Second* I. iii. 236. ಎಚ್. ಎಸ್. [illegible]ಪ್ಪನವರ 'ಗ್ರಂಥಸ್ಥ ಗಾದೆಗಳು' ಎಂಬ ಗ್ರಂಥವನ್ನು ನೋಡಬಹುದು.

ಸ್ವತಂತ್ರ ಗಾದೆಗಳನ್ನು ಹೊಸೆದಿರುವುದೂ ಉಂಟು. ಅವನ್ನು ಸಹ ಈ ಗುಂಪಿಗೆ ಸೇರಿಸಿಬಿಡಬಹುದು. ಈ ಮೂರೂ ವರ್ಗದ ಗಾದೆಗಳಲ್ಲಿ ಕೊಳುಕೊಡೆ, ಅನುಕರಣ, ರೂಪಾಂತರಗಳು ಧಾರಾಳವಾಗಿ ಸಾಗುತ್ತವೆ.[1]

ಉತ್ತಂಗಿ ಚೆನ್ನಪ್ಪನವರು ವ್ಯಾಕರಣ ಪ್ರಕ್ರಿಯೆ ಮತ್ತು ಅಲಂಕಾರಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಗಾದೆಗಳನ್ನು ಆರು ವರ್ಗಗಳಾಗಿ ವಿಂಗಡಿಸಿದ್ದಾರೆ. ಅವು ಹೀಗಿವೆ: (೧) ಸ್ಥಾಪನಾರೂಪದ ಗಾದೆಗಳು, ಉದಾ: ಹೆಡ್ಡನಾದರೂ ದೊಡ್ಡವನೇ ಲೇಸು. (೨) ವಿಧ್ಯರ್ಥಕ ಗಾದೆಗಳು: ವನದ ಮುಂದೆ, ಕುದುರೆಯ ಹಿಂದೆ ಹೋಗಬೇಡ. (೩) ನಿಷೇಧರೂಪದ ಗಾದೆಗಳು: ಕಜ್ಜಿ ಇದ್ದವಗೆ ಲಜ್ಜೆಯಿಲ್ಲ, ಅಜ್ಜಿ ಇದ್ದವಗೆ ಬುದ್ಧಿಯಿಲ್ಲ. (೪) ಉಪಮಾನರೂಪದ ಗಾದೆಗಳು: ಬೆಟ್ಟ ಬೇಯುತ್ತದೆಂದು ಸೆಟ್ಟಿ ಅತ್ತ ಹಾಗೆ. (೫) ಸಂವಾದರೂಪಕ ಗಾದೆಗಳು: ಸೆಟ್ಟರೇ, ನಿಮ್ಮ ಮಗ ಬಿದ್ದ ಅಂದರೆ, ಫಾಯಿದೆ ಕಾಣದೆ ಬಿದ್ದಿರಲಾರ ಎಂದ. (೬) ಪ್ರಶ್ನಾರ್ಥಕರೂಪದ ಗಾದೆಗಳು: ಅಂಗೈ ಹುಣ್ಣಿಗೆ ಕನ್ನಡಿ ಏಕೆ?[2] ಈ ತರಹದ ವರ್ಗೀಕರಣ ಸಮರ್ಪಕವೆನ್ನಲಾಗದು. ವಸ್ತುಭೇದದ ಆಧಾರದ ಮೇಲೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ವೃತ್ತ್ಯಾತ್ಮಕ, ಐತಿಹಾಸಿಕ, ಪೌರಾಣಿಕ, ಭೌಗೋಲಿಕ, ವೈಜ್ಞಾನಿಕ ಎಂದು ಮುಂತಾಗಿ ವಿಂಗಡಣೆ ಮಾಡಿದರೆ ಪ್ರಯೋಜನವಾದೀತು.

ಗಾದೆಗಳ ಸ್ವರೂಪಲಕ್ಷಣ ಮತ್ತು ವ್ಯಾಪ್ತಿಗಳನ್ನರಿತುಕೊಂಡನಂತರ ಆ ಪದದ ವ್ಯುತ್ಪತ್ತಿಯ ಬಗೆಗೆ ಕುತೂಹಲ ಅನಿವಾರ್ಯವಾಗಿ ಕೆರಳುತ್ತದೆ. ಸಂಸ್ಕೃತದ ಭಿನ್ನಭಿನ್ನಾರ್ಥಕವಾದ ಪದಗಳು ತಂತಮ್ಮ ಮೂಲಾರ್ಥ ರೂಪಗಳನ್ನು ಕಳೆದುಕೊಂಡು ಕೆಲವು ದೇಶಭಾಷೆಗಳಲ್ಲಿ ಪ್ರಯೋಗವಾಗುತ್ತಿವೆ. ಕನ್ನಡದಲ್ಲಿ ಇದಕ್ಕೆ ಸಂವಾದಿಯಾದ ಮತ್ತೊಂದು ಪದ ನಾಣ್ಣುಡಿ. ನಾಡು+ನುಡಿ, ನಾಣ್ಣುಡಿಯಾಗಿದೆ. ಗಾದೆ ಎಂಬಶಬ್ದ ರೂಢಿಗೆ ಬಂದನಂತರ ಅದು ಮರೆಯಾಯಿತು. ಈಗಂತು ಗಾದೆ ಎಂಬುದೇ ಸಾಮಾನ್ಯರ ನಾಲಗೆಯ ಮೇಲೂ ಕುಣಿದಾಡುತ್ತ, ಅಚ್ಚಗನ್ನಡವಾಗುಳಿದಿದೆ. ಛಂದೋಪ್ರಕಾರವನ್ನು ಸೂಚಿಸುವ ಸಂಸ್ಕೃತದ ಗಾಥಾ ಶಬ್ದ ಪ್ರಾಕೃತದ ಮೂಲಕ ಕನ್ನಡಕ್ಕೆ ಬಂದಿದೆ. ಹಾಗೆ ಬರುವಾಗ ರೂಪದಲ್ಲಿ ಮಾತ್ರವಲ್ಲ, ಅರ್ಥದಲ್ಲಿಯೂ ವ್ಯತ್ಯಾಸವನ್ನು ಪಡೆದಿದೆ. ಆದ್ದರಿಂದ ಅವರಲ್ಲಿ ಕನ್ನಡತನವೇ ವಿಜೃಂಭಿಸುತ್ತಿದೆ. ಸಂಸ್ಕೃತದ ಪ್ರವಾದ ಮತ್ತು ಲೋಕೋಕ್ತಿಗಳು ಕನ್ನಡದ ನಾಣ್ಣುಡಿಗೆ ಸಮಾನ

---

1 ಜನಪದ ಗಾದೆಗಳನ್ನು ಕವಿಗಳು ಬಳಸಿಕೊಳ್ಳುವಾಗ ರೂಪಾಂತರಿಸಿಕೊಳ್ಳುವುದೂ ಉಂಟು. "To everything there is a season, and a time to every purpose under the heaven" ಇದು ಬೈಬಲಿನಲ್ಲಿರುವ ಗಾದೆ. ಶೇಕ್ಸ್‌ಪಿಯರ್‌ನ ಕಾಮೆಡಿ ಆಫ್ ಎರರ್ಸ್ ನಾಟಕದಲ್ಲಿ ಅದು "There is a time for all things" ಎಂದಾಗಿದೆ. ಹೆಚ್ಚಿನ ನಿದರ್ಶನಗಳಿಗೆ Tristram coffin III ಅವರಿಂದ ಸಂಪಾದಿತವಾದ *American Folklore* ಎಂಬ ಗ್ರಂಥದ ೨೧೯-೨೩೦ ನೆಯ ಪುಟಗಳನ್ನು ನೋಡಿ.

2 ಕನ್ನಡ ಗಾದೆಗಳ ಕೋಶ: ಪುಟ ೨೧-೨೩.

ವಾಗಿದೆ. ತೆಲುಗಿನ ಸಾಮೆತ ಸಂಸ್ಕೃತದ ಸಾಮ್ಯತಾ (ಸಾದೃಶ್ಯ) ಪದದಿಂದ ಬಂದಂತೆ ಕಾಣುತ್ತದೆ. ಅಸ್ಸಾಮಿನ ಮರಾಠಿಯಲ್ಲಿ ಆಹಣ ಆಣ ಆಗಿದೆ; ಉತ್ತರದ ರಾಜ-ಸ್ಥಾನಿಯಲ್ಲಿ ಓಖಾಣೋ ಆಗಿ, ಗುಜರಾತಿಯಲ್ಲಿ ಉಖಾಣೋ ಆಗಿದೆ. ಬಂಗಾಳಿಯಲ್ಲಿ ಸಂಸ್ಕೃತದ ಮೂಲರೂಪಗಳಾದ ಪ್ರವಾದ ಲೋಕೋಕ್ತಿಗಳೇ ಬಳಕೆಯಲ್ಲಿವೆ. ಹಿಂದಿಯಲ್ಲಿ ಲೋಕೋಕ್ತಿಯಿದೆ. ತಮಿಳು ಮತ್ತು ಮಲಯಾಳಗಳಲ್ಲಿ ಮಾತ್ರ ಹಳೆಯ ಮಾತು ಎಂಬರ್ಥ ಬರುವ ಪಳಮೊಳಿ ಮತ್ತು ಪಳಂಜೊಲ್ ಪ್ರಾಚೀನ ಶಬ್ದಗಳು ರೂಢಿಯಲ್ಲಿವೆ.

೭

ಒಗಟುಗಳು

ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ
ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಗಾಗಿ
ಬಲ್ಲವರು ಹೇಳಿ ಸರ್ವಜ್ಞ

ಬಂದಿಹೆನು ನಾನೊಮ್ಮೆ ಬಂದು ಹೋಗುವೆನೊಮ್ಮೆ
ಬಂದೊಮ್ಮೆ ಹೋಗಿ ನಾ ಬಾರೆ ಕವಿಗಳಲಿ
ವಂದ್ಯರಿದ ಪೇಳಿ ಸರ್ವಜ್ಞ

ಹಲವು ಮಕ್ಕಳ ತಂದೆ ತಲೆಯಲ್ಲಿ ಜುಟ್ಟವಗೆ
ಸಲೆಗಳಿಗೆ ಜಾವವರಿವನ ಹೆಂಡತಿಗೆ
ಮೊಲೆಯಿಲ್ಲ. ನೋಡ ಸರ್ವಜ್ಞ

ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿಲಿಂಗ
ಹಸುರು ಗಿಡದಮೇಲೆ ಮೊಸರು ಚೆಲ್ಲಿದೆ

ಹಬ್ಬಹರಿದಿನಗಳಲ್ಲಿ ಬಿಡುಬೀಸಾಗಿ ಬಾಹ್ಯಪ್ರಪಂಚವನ್ನು ಮರೆತು ಕುಳಿತು ಹರಟೆ ಹೊಡೆಯುವಾಗ, ಮದುವೆಯೊಸಗೆಗಳಲ್ಲಿ ಊಟ ಗಟ್ಟಿಸುವಾಗ, ಹೊಲಗದ್ದೆಗಳಲ್ಲಿ ನಾಟಿ ಹಾಕುವಾಗ ಕಳೆ ತೆಗೆಯುವಾಗ, ಅಳಿಯ ಮಾವನ ಮನೆಗೆ ಬಂದಾಗ, ಬೀಗಬೀಗರು ಕಲೆತಾಗ, ಬೆಳುದಿಂಗಳ ರಾತ್ರಿ ಕಣ ಕಾಯುವಾಗ, ಸೋಗುಬೀಗುಗಳಿಲ್ಲದ ಸಾಮಾನ್ಯ ಜನರ ಪ್ರತಿಭೆ ಕಲ್ಪನೆಯ ವೈನತೇಯನನ್ನೇರಿದಾಗ, ಬುದ್ಧಿಚಮತ್ಕಾರ ವಿಜೃಂಭಿಸಿ, ಕಾವ್ಯಾತ್ಮಕವಾದ ಗೂಢಾರ್ಥನಿವಿಷ್ಟವಾದ ಸವಾಲಿನಿಂದ ಕೂಡಿದ ಮೋಡಿ ನುಡಿಗಳು, ಮೇಲಿನ ನುಡಿಗುಂಪುಗಳು, ಪುಂಖಾನುಪುಂಖವಾಗಿ ಸಹಜವಾಗಿ ಅವರ ನಾಲಗೆಯಿಂದ ಹೊರನುಗ್ಗುತ್ತವೆ. ಅವರ ಮಾತಿನ ಗಾರುಡಿಗತನಕ್ಕೆ, ಅವರು ಕಟ್ಟುವ ಗಂಟುಗಳಿಗೆ, ಎಸೆಯುವ ಸಮಸ್ಯೆಗಳಿಗೆ ಬೆರಗಾಗದವರಿಲ್ಲ. ಆ ಸವಾಲುಗಳಿಗೆ ಜವಾಬು ನೀಡುವಲ್ಲಿ ಎದುರಾಳಿಯ ಬುದ್ಧಿಸಾಮರ್ಥ್ಯ ಪರೀಕ್ಷೆಗೀಡಾಗುತ್ತದೆ; ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾಗ ಮನಸ್ಸಿಗೆ ಆನಂದವಾಗುತ್ತದೆ; ಸುತ್ತಮುತ್ತ ಕುಳಿತು ಕೇಳುವವರ ಬುದ್ಧಿಯ ಬಾಗಿಲು ತೆರೆಯುತ್ತದೆ. ಹೃದಯ ಅರಳುತ್ತದೆ.

ಮಾನವ ಬುದ್ಧಿಜೀವಿ. ಬುದ್ಧಿ ಕೇವಲ ನಾಗರಿಕರ ಅಥವಾ ಪಂಡಿತರ [illegible]. ಅವರವರ ಬದುಕಿನ ಸಂಸ್ಕಾರ ಮತ್ತು ಪರಿಸರಕ್ಕನುಗುಣವಾಗಿ ಅಷ್ಟಿಷ್ಟು ಇದ್ದೇ ಇದು

ತ್ತದೆ. ಶ್ರೀಸಾಮಾನ್ಯನಿಗೆ ವಿದ್ಯೆಯಿಲ್ಲದಿದ್ದರೂ, ಕೃಷಿಮಾಡಿ ನಾಗರಿಕರ ಹೊಟ್ಟೆ ತುಂಬು ವಷ್ಟು, ನಾಗರಿಕರ ಮಾತನ್ನು ಅರ್ಥಮಾಡಿಕೊಳ್ಳುವಷ್ಟು, ಬೇಕಾದೊಡನೆ ತರ್ಕಮಾಡು ವಷ್ಟು ಬುದ್ಧಿ ಇದ್ದೇ ಇದೆ. ಅವನ ಬೌದ್ಧಿಕ ಸಾಹಸ ನಾನಾ ರೂಪಗಳಲ್ಲಿ ವ್ಯಕ್ತವಾಗು ತ್ತದೆ. ತನ್ನ ಕರ್ತವ್ಯ ಕರ್ಮ ಮುಗಿದನಂತರ ಆಟಪಾಟಗಳಲ್ಲಿ, ಹರಟೆಯಲ್ಲಿ, ಕಥಾ ಕಾಲಕ್ಷೇಪದಲ್ಲಿ, ಇಂಥದೇ ಬೌದ್ಧಿಕ ಚಟುವಟಿಕೆಗಳಲ್ಲಿ ನಿರತನಾಗುತ್ತಾನೆ. ಕೊನೆಗೆ ಚುಕ್ಕಿಯಾಟ, ಕುಣಿಕೆಯಾಟ ಮೊದಲಾದ ಸಮಸ್ಯಾತ್ಮಕವಾದ ಆಟಗಳಲ್ಲಿ ತನ್ನ ಬುದ್ಧಿ ಕೌಶಲವನ್ನು ಪ್ರದರ್ಶಿಸುತ್ತಾನೆ. ಅವನ ಸೃಜನಾತ್ಮಕ ಪ್ರತಿಭೆ ಕೃಷಿ, ನೆಯ್ಗೆ, ಪಶುಪಾಲನೆ, ಕೈಗಾರಿಕೆ ಮೊದಲಾದ ಸಾವಿರಾರು ಉದ್ಯೋಗಗಳ ಮೂಲಕ ಪ್ರಕಟವಾಗುವಂತೆ ಸಾಹಿತ್ಯದ ಮೂಲಕವೂ ಹೊರಹೊಮ್ಮುತ್ತದೆ. ಬತ್ತದ ಬೆಳೆಯಾಗಲಿ, ಕುಂಬಾರಿಕೆ ಯಾಗಲಿ, ಬಟ್ಟೆ ತಯಾರಿಕೆಯಾಗಲಿ, ಹಾಡುಹುಟ್ಟಿನ ಅದೀತವಾಗಲಿ ಎಲ್ಲವೂ ಸೃಷ್ಟಿ ಕಾರ್ಯವೇ. ಆದ್ದರಿಂದ ಸೃಜನಶೀಲತೆ ಮಾನವನ ಮೂಲಭೂತ ಲಕ್ಷಣ. ಆದರೆ ಸೃಷ್ಟಿಯ ಗುಣಗಾತ್ರಗಳು ಆಯಾ ವ್ಯಕ್ತಿಯ ಸಂಸ್ಕಾರಾವಕಾಶ ಯೋಗ್ಯತೆಗಳನ್ನವಲಂಬಿಸುತ್ತವೆ.

ಯಾವ ಮಟ್ಟದ ಸಾಹಿತ್ಯವೇ ಆಗಲಿ ಮೂಲತಃ ಸಮಷ್ಟಿಸೃಷ್ಟಿ. ಹತ್ತು ಜನದ ಚಿಂತನ, ನೂರು ಜನದ ಮಂಥನ, ಸಾವಿರ ಜನದ ಕಲ್ಪನೆ ಒಬ್ಬನ ಪ್ರತಿಭಾ ಮೂಷೆ ಯಲ್ಲಿ ಪಾಕಗೊಂಡ ಅನುಭವವಾಗಿ, ಸಾಹಿತ್ಯರೂಪದಲ್ಲಿ ಪ್ರಕಟಗೊಳ್ಳುತ್ತದೆ. ಪರ್ವ ತಾಗ್ರದಲ್ಲಿ ಬಿದ್ದ ನೀರು ನೂರಾರು ದಿಕ್ಕಿನಿಂದ ಹರಿದು ಬಂದು ಕಾಲುವೆಯಾಗುವಂತೆ, ನೂರು ಕಾಲುವೆ ಹೊಳೆಯಾಗುವಂತೆ, ನೂರು ಹೊಳೆ ಮಹಾನದಿಯಾಗುವಂತೆ, ಅನೇಕ ಜನರ ಮತಿಶಕ್ತಿ ಕಲ್ಪನಾಸಾಮರ್ಥ್ಯಗಳು ಯೋಗ್ಯಪಾತ್ರದ ಮೂಲಕ ಹೊರಹೊಮ್ಮು ತ್ತವೆ. ಭೂಗರ್ಭಾಂತರಾಳದಲ್ಲಿ ಹರಿಯುತ್ತಿರುವ ನೀರು ಎಲ್ಲಿಂದೋ ಬಂದು ಕಡೆ ಚಿಲುಮೆಯಾಗಿ ಚಿಮ್ಮುವಂತೆ, ನೂರಾರು ಕಡೆಗಳಿಂದ ನಾನಾ ಮುಖಗಳಲ್ಲಿ ಆವಿಯಾ ಗುವ ನೀರು ಎಲ್ಲಿಂದೋ ಮುಗಿಲುಗಟ್ಟಿ, ಮತ್ತೆಲ್ಲಿಯೋ ಸುರಿಯುವಂತೆ ಜನಮನದಲ್ಲಿ ಹರಿಯುತ್ತಿರುವ ಕಾವ್ಯಶಕ್ತಿ ಅನುಕೂಲಕ್ಷೇತ್ರ ಪ್ರಾಪ್ತವಾದೊಡನೆ ಹೊರಹೊಮ್ಮುತ್ತದೆ. ಬಾವಿಯ ಜಲಶಕ್ತಿ ಪರಿಸರದ ಒರಬನ್ನವಲಂಬಿಸುವಂತೆ. ಬಾವಿಯ ಆಳ ಅಗಲಗಳು ಪರಿಸರದ ಒರಬಿಗನುಗುಣವಾಗಿರಬೇಕು. ಪಾತ್ರಕ್ಕೆ ತಕ್ಕಷ್ಟು ನೀರು. ನೀರಿಗೆ ತಕ್ಕಂಥ ಪಾತ್ರ. ಸೃಷ್ಟಿನಿಯಮ. ಕಿರುಕಾವ್ಯ ಮಹಾಕಾವ್ಯಗಳ ಅಂತರಕ್ಕೆ ಇದೇ ಕಾರಣ. ಒಟ್ಟಿನಲ್ಲಿ ಸಾಹಿತ್ಯ ಸಮಷ್ಟಿಸೃಷ್ಟಿ ಎಂಬುದು ನಿಜ. "ಕವಿಯ ಹೃದಯವೊಂದು ವೀಣೆ, ಲೋಕವವನು ಮಿಡಿವುದು" ಎಂಬ ಮಹಾಕವಿಯ ಸುಭಾಷಿತ ಸಹ ಮೇಲಿನ ಮಾತಿಗೆ ಬೆಂಬಲವಾಗಿದೆ. ಜಾನಪದ ಸಾಹಿತ್ಯಸೃಷ್ಟಿಗೂ ಈ ತತ್ವವೇ ಅನ್ವಯಿಸುತ್ತದೆ.

ಎಲ್ಲಿಂದೋ ಪ್ರಸರಣಗೊಂಡ ಧ್ವನಿತರಂಗಗಳು ಆಕಾಶದಲ್ಲಿ ಅಲೆಯುತ್ತಿದ್ದು ರೇಡಿಯೋ ದಂಥ ಗ್ರಾಹಕಯಂತ್ರ ಇರುವೆಡೆಯಲ್ಲಿ ಅದರ ಮೂಲಕ ಹೊರಬರುವಂತೆ, ಜನಮನದ ಸಲ್ಲಿ ತೆರೆತೆರೆಯಾಗಿ ಏಳುವ ಆಲೋಚನಾತರಂಗಗಳು ಜನಮನಸ್ಸನ್ನು ಸ್ಪರ್ಶಿಸುತ್ತವೆ. ಆ ಸಂಸ್ಪರ್ಶಕ್ಕೆ ಸಂವೇದನೆಗೊಂಡ ಮನಸ್ಸಿನ ಮೂಲಕ ಅವು ಅಭಿವ್ಯಕ್ತವಾಗುತ್ತವೆ.

ಈ ದೃಷ್ಟಿಯಿಂದ ಜನಪದ ಸಾಹಿತ್ಯ ಸಮಷ್ಟಿಸೃಷ್ಟಿ. ಸಾಮಾನ್ಯ ಜನತೆಯ ದೇಹ ವೊಂದು ಬರಿಯ ಯಂತ್ರವೆಂದು ತಿಳಿಯುವುದು ಬೆಪ್ಪುತನ. ಸುಸಂಸ್ಕೃತನಲ್ಲಿರುವ ಶಕ್ತಿ ಸಾಮರ್ಥ್ಯಗಳೆಲ್ಲ ಸಮಪ್ರಮಾಣದಲ್ಲಲ್ಲದಿದ್ದರೂ, ಯುಕ್ತಪ್ರಮಾಣದಲ್ಲಿ ಶ್ರೀಸಾಮಾನ್ಯ ನಿಗೆ ವಶವಾಗಿರುತ್ತವೆ. ಸುಸಂಸ್ಕೃತನಲ್ಲಿಲ್ಲದ ಹೆಗ್ಗುಣವೊಂದು ಅವನಲ್ಲಿರುತ್ತದೆ. ಅದೇ ಅಕೃತ್ರಿಮತೆ. ನಾಲ್ಕಾರು ಪದಾರ್ಥಗಳು ಸೇರಿ ರಸಾಯನವಾಗುವಂತೆ, ನಾಲ್ಕಾರು ಜನರ ಜೀವನಾನುಭವಗಳಿಂದ ಒಂದು ಒಗಟು ರೂಹುಗೊಳ್ಳಬಹುದು. ಅಂದರೆ ಅದು ಜನರ ನೆರವಿಯಲ್ಲಿ ತೀರ್ಮಾನವಾಗುವ ನಿರ್ಣಯವಲ್ಲ. ಉದ್ದೇಶಪೂರ್ವಕವಾಗಿ ನಡೆಯುವ ಕಾರ್ಯವೂ ಅಲ್ಲ. ನಮ್ಮ ಮನೆಯ ಸುತ್ತಮುತ್ತ ಆಲದ ಮರವಿಲ್ಲ. ಆದರೂ ಎಂದೋ ಒಂದು ದಿನ ಆಲದ ಸಸಿಯನ್ನು ನೋಡುತ್ತೇವೆ. ಅಂತೆಯೇ ಎಂದೋ ಒಂದು ದಿನ ಜಾನಪದ ಕವಿಯ ಅಂತರಂಗದಿಂದ ಒಗಟೊಂದು ಹೊರಹೊಮ್ಮಿ ಬಹುಬೇಗನೆ ಜನತೆಯ ಸ್ವತ್ತಾಗುತ್ತದೆ. ಸಮಷ್ಟಿಚೇತನದ ಮಿಡಿತದಿಂದ ಅದು ರೂಹುಗೊಂಡದ್ದಾದ್ದ ರಿಂದ ಜನಮನವನ್ನು ನೇರವಾಗಿ ಹೊಗುತ್ತದೆ. ಸಾಮಾನ್ಯವಾಗಿ ಜಾನಪದ ಸಾಹಿತ್ಯ ರಚನೆ ಮುಖ್ಯವಾಗಿ ಅಪ್ರಜ್ಞಾಪೂರ್ವವಾಗಿ ನಡೆಯುವ ಕಾರ್ಯ. ಅದು ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಬರುವ ಹೊತ್ತಿಗೆ ನಾನಾ ರೂಪಾಂತರಗಳನ್ನು ಪಡೆದು ಒಂದು ಜನಾಂಗದ, ಒಂದು ನಾಡಿನ, ಕೊನೆಗೆ ಇಡೀ ಜಗತ್ತಿನ ಸ್ವತ್ತಾಗುತ್ತದೆ. ಒಂದು ವೇಳೆ ಅದು ವ್ಯಷ್ಟಿ ಸೃಷ್ಟಿಯಾದರೂ ಅನೇಕ ಜನರ ಬಾಯಲ್ಲಿ ಬಿದ್ದು, ವ್ಯಷ್ಟಿತನ ವನ್ನು ಕಳೆದುಕೊಂಡು ಸಮಷ್ಟಿಯಾಗುಳಿಯುತ್ತದೆ. ವ್ಯಷ್ಟಿಲಯವೇ ಜಾನಪದ ಸಾಹಿತ್ಯದ ಪ್ರಮುಖ ಲಕ್ಷಣ.

ಭಾವ ಹೆಪ್ಪುಗಟ್ಟಿ ಗೀತೆಯಾಗುವಂತೆ, ಭಾವಬುದ್ಧಿಗಳ ರಸಾಯನದಿಂದ ಗಾದೆ ಯಾಗುವಂತೆ, ಬುದ್ಧಿ ಹರಳುಗೊಂಡು ಒಗಟಾಗುತ್ತದೆ. ಜಾನಪದ ಸಾಹಿತ್ಯಪ್ರಕಾರ ಗಳಲ್ಲಿ ಮೊದಲು ಹುಟ್ಟಿದ್ದು ಗೀತೆ, ಅನಂತರ ಕಥೆ. ಗಾದೆ ಗೀತೆಕತೆಗಳ ಜತೆಜತೆಗೆ ಹುಟ್ಟಿರಬಹುದಾದರೂ ಒಗಟಂತು ಅವುಗಳಷ್ಟು ಪ್ರಾಚೀನವಲ್ಲ. ಅಂತೆಯೇ ಅವುಗಳಷ್ಟು ಸರ್ವವ್ಯಾಪಿಯಲ್ಲ. ಪ್ರಾಚೀನರೂಪಕಗಳೆಲ್ಲ ಒಗಟುಗಳು; ಅವು ಸಂಕೇತಾತ್ಮಕವಾದುವು; ಪ್ರಾಚೀನ ಭಾಷೆ ಸಾಮಾನ್ಯವಾಗಿ ಸಂಕೇತರೂಪಕಗಳಿಂದ ವ್ಯಾಪ್ತವಾದದ್ದು ; ವೇದಗಳ ಭಾಷೆಯೇ ಇದಕ್ಕೆ ಸಾಕ್ಷಿ; ಅಷ್ಟೇ ಅಲ್ಲ, ಮಾನವನ ಪ್ರಾರಂಭದ ಭಾಷೆಯೆಲ್ಲ ರೂಪಕ ವಾಗಿತ್ತು ಎಂದು ಹೇಳುವವರೂ ಉಂಟು. ಗಾದೆ ಬಳಸದ ಜನರಿಲ್ಲ; ಒಗಟು ಎಲ್ಲರಿಗೂ ಎಟಕುವಂಥದಲ್ಲ. ಆದರೆ ಅದನ್ನು ಕುತೂಹಲದಿಂದ ಕೇಳುವ ಮಂದಿ ಇಲ್ಲದಿಲ್ಲ. ಅವ ಸರದ ನೋಟಕ್ಕೆ ಅದು ಗಾದೆಯಂತೆ ತೋರುತ್ತದೆ. ಪ್ರಾಸಾನುಪ್ರಾಸ ಉಪಮಾರೂಪ ಕಾವ್ಯಾಲಂಕಾರಗಳು, ರಸಪಾಕದಂತೆ ಕೆನೆಯಂತೆ ಸ್ಫಟಿಕದಂತಿರುವ ಮಾತುಗಳು ಗಾದೆಯ ಹೋಲಿಕೆಯನ್ನು ನೆನಪಿಗೆ ತರುವಾದರೂ ಒಗಟಿನ ದಿಂಡುತಿರುಳುಗಳು ಅದಕ್ಕಿಂತ ತೀರ ಭಿನ್ನವಾದುವು. ಒಂದರದು ದ್ರಾಕ್ಷಾಪಾಕವಾದರೆ ಮತ್ತೊಂದರದು ನಾರಿಕೇಳಪಾಕ: ಒಂದರಲ್ಲಿ ಬುದ್ಧಿಪ್ರಾರ್ಥ ಸ್ಪಷ್ಟ. ಮತ್ತೊಂದರಲ್ಲಿ ಅದು ಅಸ್ಪಷ್ಟ: ಅಸ್ಪಷ್ಟ ಮಾತ್ರವಲ್ಲ,

ಪ್ರಚ್ಛನ್ನ. ಗಾದೆಯ ಭಾಷೆ ಸ್ಫಟಿಕ ನಿರ್ಮಲ : ಒಗಟಿನ ಭಾಷೆ ಸಾಂಕೇತಿಕ, ರಹಸ್ಯಾತ್ಮಕ. ಒಗಟುಗಳಲ್ಲಿ ಸವಾಲಿನ ಮತ್ತು ಪ್ರಶ್ನೆಯ ರೂಪದಲ್ಲಿರುತ್ತವೆ. ಪ್ರಶ್ನೆ ಸ್ಪಷ್ಟವಾಗಿರಬಹುದು ಅಥವಾ ಗೂಢವಾಗಿರಬಹುದು. ಇತರ ಜನಪದ ಸಾಹಿತ್ಯ ಪ್ರಕಾರಗಳಂತಲ್ಲದೆ ಒಗಟು ಒಂದು ರೀತಿಯಲ್ಲಿ ಪ್ರಯತ್ನಪೂರ್ವಕವಾದ ಸೃಷ್ಟಿಯೆಂದು ಹೇಳಬೇಕಾಗುತ್ತದೆ. ಉದ್ದಿಷ್ಟಾರ್ಥವನ್ನು ಗ್ರಹಿಸುವಲ್ಲಿ ಎದುರಾಳಿಯ ಬುದ್ಧಿ ಪರೀಕ್ಷೆಯಾಗುತ್ತದೆ. ಪ್ರಸ್ತುತದಿಂದ ಅಪ್ರಸ್ತುತವನ್ನು ಉಪಮಾನದಿಂದ ಉಪಮೇಯವನ್ನು ವರ್ಣ್ಯದಿಂದ ಅವರ್ಣ್ಯವನ್ನು, ವಾಚ್ಯದ ಮೂಲಕ ಸೂಚ್ಯವನ್ನು, ಗೊತ್ತಿರುವುದರಿಂದ ಗೊತ್ತಿಲ್ಲದ್ದನ್ನು ತಿಳಿಸುವ ಚಮತ್ಕಾರ ಸಾಮರ್ಥ್ಯ ಅವನಿಗಿರಬೇಕು. ಒಂದೊಂದಕ್ಕೂ ಪರಸ್ಪರ ವಿರೋಧ, ಶ್ಲೇಷೆ, ಅಸಂಬದ್ಧತೆ ಮತ್ತು ವಿರೋಧಾಭಾಸಗಳು ತೋರಬಹುದು.

ಮೊಗ್ಗರಳಿ ಹೂವಾಗಿ ಪುಷ್ಪ ತಾನಲ್ಲ
ಹಿಗ್ಗಲಿಸಿ ನೋಡಿದರೆ ಪರಿಮಳವೆ ಇಲ್ಲ.

ಇಲ್ಲಿಯ ಉದ್ದಿಷ್ಟಾರ್ಥ ಕೊಡೆ ಎಂದೇ ಇಟ್ಟುಕೊಳ್ಳೋಣ. ಪುಷ್ಪಕ್ಕೂ ಕೊಡೆಗೂ ಏನು ಸಂಬಂಧ? ಹೂ ಅಲ್ಲವೆಂದಮೇಲೆ ಕೇಳುಗನ ಕಲ್ಪನೆ ತಾನು ಕಂಡಿರಬಹುದಾದ ಸಕಲ ವಸ್ತುಗಳ ಕಡೆಗೆ ಕೊಕ್ಕು ಚಾಚುತ್ತದೆ. ಅಣಬೆಯೆ? ಅಲ್ಲ; ರಾಗಿ ತೆನೆಯೆ? ಅಲ್ಲ; ಕುಡಿಕೆ ಮುಚ್ಚೆ? ಅಲ್ಲ. ಲೋಕವಸ್ತುಜ್ಞಾನ ಅಪಾರವಾಗಿರುವ ಮನುಷ್ಯನ ದೃಷ್ಟಿ ಎತ್ತೆತ್ತಲೋ ಸಾಗುತ್ತದೆ. ಎರಡನೆಯ ವಾಕ್ಯ ಅವನ ದೃಷ್ಟಿಯನ್ನು ಸೀಮಿತಗೊಳಿಸಿ, ಪರ್ಯಾಯ ಪದಾರ್ಥಗಳ ಸಂಖ್ಯೆಯನ್ನು ಮಿತಗೊಳಿಸುತ್ತದೆ. ಮೊದಲನೆಯ ವಾಕ್ಯದಿಂದ ಉತ್ತರ ಸಿಗದೆ ಕಲ್ಪನೆ ಜಿಬ್ಬಳಿಸುವಾಗ ಎರಡನೆಯ ಅಥವಾ ಮುಂದಿನ ವಾಕ್ಯಗಳು ನೆರವಿಗೆ ಬರುತ್ತವೆ. ಇಷ್ಟಾದರೂ ಗುರಿಯ ವಸ್ತುವಿನ ಪರಿಚಯ ಅವನಿಗಿರಬೇಕು. ಇಲ್ಲದಿದ್ದರೆ ತಿಂಗಳುಗಟ್ಟಲೆ ತಿಣುಕಿದರೂ ಅರ್ಥ ಹೊಳೆಯದಿರಬಹುದು.

ಆರು ತಿಂಗಳಿಗೊಂದು ಬೆಳೆ
ಮೂರು ತಿಂಗಳಿಗೊಂದು ಬೆಳೆ
ನೊಪ್ಪತ್ತಿಗೆ ಬರುವುದೊಂದು ಬೆಳೆ
ಅವುನ್ನೆಲ್ಲಾ ಒಂದು ಕಣಕ್ಕಾಗಿ
ಮುವತ್ತೆರಡು ಎತ್ತು ಕಟ್ಟಿ ಅರುದ್ರೆ
ಎಲ್ಲ ಕೆಂಪು ಧಾನ್ಯವಾಗುತ್ತೆ[1]

1 ಇಂಥ ಒಗಟುಗಳು ಆಂಗ್ಲಭಾಷೆಯಲ್ಲಿ ಸಾಕಷ್ಟಿವೆ. ಉದಾಹರಣೆಗಾಗಿ ಒಂದನ್ನು ಮಾತ್ರ ಇಲ್ಲಿ ಉದ್ಧರಿಸಿದೆ :

White as snow, but snow it ain't ;
Green as grass, but grass it ain't ;
Red as blood, but blood it ain't ;
Black as ink, but ink it ain't ;
What is it ?

Answer : Bramble berry or briar berry

—Quoted from *American Folklore*, Ed. by Tristram coffin III, p. 234

ಇಲ್ಲಿಂತು ಐದನೆಯ ಸಂಕ್ತಿಯ ತನಕ ಅರ್ಥವಿವಕ್ಷೆಯೇ ಸಾಧ್ಯವಿಲ್ಲ. ಮೂವತ್ತೆರಡು ಎತ್ತು ಕಣಕ್ಕೆ ಕಟ್ಟಬಹುದು. ಈ ಮೂವತ್ತೆರಡು ಎತ್ತು ಹಲ್ಲುಗಳನ್ನು ಸೂಚಿಸುತ್ತವೆಂದು ಸುಸ್ಪಷ್ಟಗೊಂಡ ಕೂಡಲೇ ಬಾಯಿ ಒಂದು ಕಣವೆಂದು ಹೊಳೆಯುತ್ತದೆ. ಕೊನೆಯ ಪಂಕ್ತಿಯಲ್ಲಿರುವ 'ಕೆಂಪು' ಮೊದಲ ಮೂರು ಸಾಲುಗಳಲ್ಲಿ ಸೂಚಿತವಾಗಿರುವ ವಸ್ತುಗಳನ್ನು ನೆನಪಿಗೆ ತರುತ್ತದೆ. ಅಡಕೆ ವೀಳೆಯದೆಲೆ ಸುಣ್ಣ ಎಂದು ಅರ್ಥವಾಗುತ್ತದೆ. ಆದರೆ 'ಧಾನ್ಯ'ದಂಥ ಮಾತು ಪರಿಚಿತಾರ್ಥದಲ್ಲಿ ಬಳಕೆಯಾಗಿಲ್ಲ ಎನ್ನುವ ಸಂಗತಿಯನ್ನು ಮರೆಯಬಾರದು.

ಇಂಥವೇ ಮತ್ತೊಂದು ಒಗಟನ್ನು ಪರಿಶೀಲಿಸಬಹುದು. "ಮೈಯ್ಯುಜ್ಜುವುದು ಕಲ್ಲಲ್ಲ, ಕೊಳೆ ತೆಗೆಯುವುದು ಬ್ರಷ್ಷಲ್ಲ." ಹಳ್ಳಿಗಾಡಿನಲ್ಲಿ ಇಂದಿಗೂ ಶರೀರದ ಕೊಳೆ ತೆಗೆಯುವ ಸಲುವಾಗಿ ನುಣುಪಾದ ಕಲ್ಲನ್ನು ಬ್ರಷ್ಷಿಗೆ ಬದಲಾಗಿ ಬಳಸುವುದುಂಟು; ನಗರದ ನಾಗರಿಕರು ಬ್ರಷ್ಷು ಬಳಸಬಹುದು. ಈ ಎರಡರ ಕೆಲಸವನ್ನು ಪೂರೈಸುವಂಥ ಸಾಧನ ಬೇರೆ ಯಾವುದಿದೆ? ತೆಂಗಿನ ಮರ ವಿಶೇಷವಾಗಿ ಬೆಳೆಯುವ ಕಡೆ ಚಗರೆ ಬಳಸುತ್ತಾರೆ; ಕೆಲವು ಕಡೆ ಹೀರೆ ಬುರುಡೆ ಬಳಸುತ್ತಾರೆ. ಹೀರೆಯ ದುದ್ದೆ ಚಗರೆಯಂತೆ ಕೆಲಸಮಾಡುತ್ತವೆ. ಅಂತು ಇವೆರಡೂ ಆ ಒಗಟಿಗೆ ಉತ್ತರವಾಗಬಹುದು. ಆದರೆ ಹೀರೆ ಬುರುಡೆ ಎಷ್ಟು ಜನರಿಗೆ ತಿಳಿದಿದೆ?

ಒಂದು ಒಗಟಿಗೆ ಒಂದೇ ಅರ್ಥ ಇರಬೇಕಾಗಿಲ್ಲ. ದ್ವಂದ್ವಾರ್ಥ ಅನೇಕಾರ್ಥಗಳನ್ನು ಅದು ಸೂಚಿಸಬಹುದು. ಯಾರೋ ಒಬ್ಬ "ಹಸುರು ಕೋಲಿಗೆ ಮುತ್ತಿನ ತುರಾಯಿ" ಎಂದು ಹೇಳಿದಾಗ ಕೇಳುಗ 'ಜೋಳದ ತೆನೆ' ಎಂದು ಉತ್ತರವಿತ್ತರೆ ತಪ್ಪಾಗುತ್ತದೆಯೆ? ಈರುಳ್ಳಿ ಹೂವೇ ಆಗಬೇಕೇನು? ಅರಳಿದ ತಾವರೆಯ ಮೊಗ್ಗಾಗಬಾರದೇನು?

ಅಣ್ಣ ಬಣ್ಣ
ಕೆಂಪು ಬಣ್ಣ
ತಂದು ಕೊಡಣ್ಣ
ಬೀಜಿಲ್ದಣ್ಣ[1]

ಇದರರ್ಥ ಗೆಣಸೇ ಆಗಬೇಕಾಗಿಲ್ಲ, ದ್ರಾಕ್ಷಿಯೂ ಆಗಬಹುದು, ನೆಲಹಲಸೂ ಆಗಬಹುದು.

ಒಂದು ವಸ್ತುವಿನ ಅವಲಂಬನದ ಮೇಲೆ ಒಂದೇ ಒಂದು ಒಗಟು ಹುಟ್ಟುತ್ತದೆಂದೂ ತಿಳಿಯಬೇಕಾಗಿಲ್ಲ.

ಈಟುದ್ದ ಹುಡುಗ
ಏಟುದ್ದ ಪೇಟ ಸುತ್ತವನೆ[2]

ಉದ್ದಿಷ್ಟ ವಸ್ತು ಜೋಳ. ಅದು ಒಬ್ಬೊಬ್ಬರಲ್ಲಿ ಒಂದೊಂದು ಭಾವನೆ ಹುಟ್ಟಿಸಿ, ನಾನಾ

[1] ಜನಪದ ಒಗಟುಗಳು : ನಂ. ನಾರಾಯಣಗೌಡ, ಪು. ೧೦.
[2] ಅದೇ, ಪು. ೨೪.

ಒಗಟುಗಳ ಜನನಕ್ಕೆ ಸ್ಫೂರ್ತಿ ನೀಡಬಹುದು. ಈ ನಿದರ್ಶನಗಳಿಂದ ಒಂದು ಮಾತು ಖಚಿತವಾಗುತ್ತದೆ. ಅದೇನೆಂದರೆ ಒಗಟಿನ ಧ್ವನಿಗೆ ನಿರ್ದಿಷ್ಟಾರ್ಥವಿಲ್ಲ. ಸಹೃದಯನ ಲೋಕಪರಿಜ್ಞಾನದ ಗುಣಪ್ರಮಾಣಗಳಿಗನುಗುಣವಾಗಿ, ಅವನ ಕಲ್ಪನೆಯ ಶಕ್ತಿಗನು ಗುಣವಾಗಿ ಅದರ ಅರ್ಥ ವಿಸ್ತಾರವಾಗುತ್ತ, ಬಹುಗುಣವಾಗುತ್ತ ಹೋಗುತ್ತದೆ.

ಎಲ್ಲರ ಮನೆ ಅಜ್ಜಿಗೆ
ಮೈಯೆಲ್ಲ ಕಜ್ಜಿ[1]

ಇದಕ್ಕೆ ಸಂಪಾದಕರು ಕೊಟ್ಟಿರುವ ಅರ್ಥ ದೋಸೆ. ಮತ್ತೊಂದರ್ಥ ಒಂದರಿ ಏಕಾಗ ಬಾರದು ? ಒಂದರಿಯೇ ಸರಿಯೆಂದು ನನ್ನ ಅಭಿಪ್ರಾಯ. ಏಕೆಂದರೆ ದೋಸೆಯ ಜತೆ ಯಲ್ಲಿ ಕಜ್ಜಿಯನ್ನು ಸಂಪರ್ಕಗೊಳಿಸುವಾಗ ಹೀನೋಪಮೆಯಾಗುವುದಿಲ್ಲವೆ? ಒಗಟುಗಾರರ ದೃಷ್ಟಿಯಿಂದ ಇಷ್ಟು ಸೂಕ್ಷ್ಮ ವಿಶ್ಲೇಷಣೆ ಅನವಶ್ಯ ಎಂದು ಯಾರಾದರೂ ಹೇಳಬಹುದು. ಹಾಗೆ ಹೇಳಬಹುದಾದರೆ 'ಆಕಾಶ'ವನ್ನು ಸಹ ಆ ಪಟ್ಟಿಯಲ್ಲಿ ಸೇರಿಸಬಾರದೇಕೆ? "ಮಾಳಿಗೆ ಮೇಲೆ ಮಲ್ಲಿಗೆ ಹೂ ಚಲ್ಲ್ಯತೆ" ಎಂದು ಹೇಳುವಾಗ ಅದರ ಸ್ವಾರಸ್ಯವೇ ಬೇರೆ ಎಂಬುದೂ ನಿಜ. ಒಂದು ಒಗಟಿನಿಂದ ಅನೇಕಾರ್ಥಗಳು ಸೂಚಿತವಾಗುವಂತೆ, ಅನೇಕ ಒಗಟುಗಳ ಉದ್ದಿಷ್ಟಾರ್ಥ ಒಂದೇ ಪದಾರ್ಥವಾಗಬಹುದು :

ತೆಗೆಯಕಾಗುತ್ತೆ[2]
ಹಾಕಕ್ಕಾಗೊಲ್ಲ

ಎದರ್ಗೆ ಮಾಡದಾಗ
ಮೂವತ್ತೆರಡು ಕವಡಿ ಬಿದ್ದಾವ
ತಗೋ ಬೇಕಂದರ ಬರಾದಿಲ್ಲ[3]

ಎರಡರ ಅರ್ಥವೂ 'ಹಲ್ಲು.' ಆ ಪದಾರ್ಥದ ಭಿನ್ನ ಭಿನ್ನ ಸ್ವಭಾವ ಪ್ರತ್ಯೇಕ ಒಗಟು ಗಳಿಗೆ ಎಡೆ ಕಲ್ಪಿಸಿದೆ. ಒಟ್ಟಿನಲ್ಲಿ ಕಲ್ಪನಾವಿಲಾಸ, ಬುದ್ಧಿಯ ಲೀಲಾ ವೈವಿಧ್ಯ ಮತ್ತು ಪ್ರತಿಭೆಯ ವಿಶ್ವರೂಪ ವ್ಯಕ್ತವಾಗುವ ಸುಂದರ ಮಾಧ್ಯಮಗಳೇ ಒಗಟುಗಳು.

ಒಗಟು ಯಾವಾಗಲೂ ಪ್ರಶ್ನೋತ್ತರ ರೂಪದಲ್ಲಿರುವಂಥದು. ಒಗಟಿನ ಪರಿಹಾರ ಉತ್ತರರೂಪದಲ್ಲಿರುತ್ತದೆ. ಈ ಉತ್ತರ ಹೊಳೆಯದಿದ್ದಾಗ ಕೇಳುಗ ಅದೇ ಧಾಟಿಯ ಲ್ಲಿಯೇ ಮರುಪ್ರಶ್ನೆ ಹಾಕುತ್ತಾನೆ.

ಒಬ್ಬನನ್ನು ಕಟ್ಟಿದ್ದೆ ಒಬ್ಬನನು ಬಿಟ್ಟಿದ್ದೆ
ಒಬ್ಬನನು ಕರಕೊಂಡು ಒಳಗ್ಹೋದೆ.
ಯಾರನ್ನು ಕಟ್ಟಿದ್ದೆ ಯಾರನ್ನು ಬಿಟ್ಟಿದ್ದೆ
ಯಾರನ್ನು ಕರಕೊಂಡು ಒಳಗ್ಹೋದೆ.

---

1 ಅದೇ, ಪು. ೧೩.

2 ಅದೇ, ಪು. ೨೭.

3 ಉತ್ತರ ಕರ್ನಾಟಕದ ಒಗಟುಗಳು, (ಸಂ.) ಡಾ. ಎಮ್. ಎಸ್. ಲಠ್ಠೆ, ಪು. ೭.

ದನವನ್ನು ಕಟ್ಟಿದ್ದೆ ಕರುವನ್ನು ಬಿಟ್ಟಿದ್ದೆ
ಹಾಲನ್ನು ಕರಕೊಂಡು ಒಳಗ್ಹೋದೆ.[1]

ಈ ಪರಿಹಾರ ಸಹ ಒಗಟಿನ ವೇಷವನ್ನು ತಾಳುವುದುಂಟು. ಆಗ ಅದು ನಿಜವಾದ ಸವಾಲು-ಜವಾಬಾಗುತ್ತದೆ. ಪ್ರಾಶ್ನಿಕ ಮತ್ತು ಉತ್ತರ ದಾಯಿಯರ ಬುದ್ಧಿ ಮಿಲಾವಣೆ ಅಪೂರ್ವ ಸ್ವಾರಸ್ಯವಾಗಿದ್ದು, ಶ್ರೋತೃಗಳಿಗೆ ಅಮಿತಾನಂದವನ್ನುಂಟುಮಾಡುತ್ತದೆ. ಹರದೇಶಿ-ನಾಗೇಶಿಯರ ಹಾಡುಗಳಲ್ಲಿ ಸ್ಪರ್ಧೆಯ ಪರಾಕಾಷ್ಠೆಯನ್ನು ಕಾಣಬಹುದು. ಇಂಥದೊಂದು ಒಗಟನ್ನಿಲ್ಲಿ ಉದಾಹರಿಸಬಹುದು:

ಅತ್ತೆ : ಕರ ಕಟ್ಟಾದೆ ಹೊರ್ದುಲ್ಲಾದ ಕದೆ
ಕರ ಯಾಕೆ ಮೆಯ್ಯಿಲ್ಲ?
ಅಳಿಯ : ಮೋಡಗಟ್ಟಿದೆ ಮೊವರಾಗದೆ
ಮಳೆ ಯಾಕೆ ಹುಯ್ಯಿಲ್ಲ?[2]

ಗದ್ಯ-ಪದ್ಯಗಳೆರಡರಲ್ಲಿಯೂ ಒಗಟು ಜನ್ಮ ತಾಳಬಹುದು; ಆದರೆ ಅದು ಪದ್ಯರೂಪದಲ್ಲಿರುವುದೇ ಹೆಚ್ಚು. ಇದಕ್ಕೆ ಮುಖ್ಯಕಾರಣ ಪದ್ಯರೂಪದಲ್ಲಿದ್ದರೆ ಅದನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು; ಕಾವ್ಯಮಯವಾಗಿದ್ದರೆ ಅದು ಹೆಚ್ಚು ಆಕರ್ಷಣೀಯವಾಗುತ್ತದೆ. ಪದಮಿತಿಗೆ ಮತ್ತು ಅರ್ಥಸಾಂದ್ರತೆಗೆ ಪದ್ಯ ಹೆಚ್ಚು ಅನುಕೂಲ. ದ್ವಿಪದಿ, ತ್ರಿಪದಿ, ಚತುಷ್ಪದಿಗಳಿಂದ ಹಿಡಿದು ಒಮ್ಮೊಮ್ಮೆ ಎಂಟು ಹತ್ತು ಸಾಲುಗಳತನಕ ಅದು ಹಬ್ಬಬಹುದು. ಕೆಲವಂತು ಸೂತ್ರಪ್ರಾಯವಾಗಿಯೂ ಇರುವುದುಂಟು. ಒಗಟಿನ ರಚನೆಯನ್ನು ವಿಶ್ಲೇಷಿಸುತ್ತ ಜರ್ಮನಿಯ ಜಾನಪದ ವಿಜ್ಞಾನಿ ಡಾ. ರಾಬರ್ಟ್ ಪೆಟ್ಸ್

---

[1] ಇಂಥದೇ ಒಗಟುಗಳನ್ನು ಮರಾಠಿಯಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದು :

ಏಕಾಲಾ ಸೋಡಿತ ಹೋತೀ	I was loosening some one
ಏಕಾಲಾ ಬಾಂಧಿತ ಹೋತೀ	I was binding some one
ಏಕಾಲಾ ಹಾತಿ ಧರೂನ	I was taking some-one by hand to
ಮಂದೇರೀ ನ್ಹೇತ ಹೋತೀ	the temple
ಕೋಣ್ಹಾಲಾ ಸೋಡಿತ ಹೋತೀ ?	Whom were you loosening?
ಕೋಣ್ಹಾಲಾ ಬಂಧಿತ ಹೋತೀ ?	Whom were you binding?
ಕೋಣ್ಹಾಲಾ ಹಾತೀ ಧರೂನ ?	Whom did you take by hand and
ಮಂದೇರಿ ನ್ಹೇತ ಹೋತೀ ?	went to the temple?
ಗಾಯಿಲಾ ಸೋಡಿತ ಹೋತೀ	I was loosening the cow
ವಾಸರಾಲಾ ಬಾಂಧಿತ ಹೋತೀ	and tying the calf.
ದುಧಾಚೀ ಕಾಸಂಡೀ	The jug of milk
ಮಂದೇರೀ ನ್ಹೇತ ಹೋತೀ	did I carry to the temple.

Quoted by Durga Bhagawat in her *The Riddle in Indian Lore and Literature*, p. xxviii

[2] ನಮ್ಮ ಒಗಟುಗಳು : ರಾಗೌ, ಪು. xxiii

(Robert Petsch) ಅವರು ಅದರಲ್ಲಿ ಪಂಚಾಂಶಗಳನ್ನೆತ್ತಿ ತೋರಿಸುತ್ತಾರೆ. ಇವು ಅವನ ಪ್ರಕಾರ ಒಗಟಿನ ಧರ್ಮಗಳು: ಉಪಕ್ರಮಾಂಶ, ಅಭಿಧಾನಾಂಶ, ನಿರ್ದೇಶಕ ಅಥವಾ ವರ್ಣನಾಂಶ, ಪ್ರತಿಬಂಧಕಾಂಶ ಅಥವಾ ವಕ್ರತಾಂಶ ಮತ್ತು ಮುಕ್ತಾಯಾಂಶ. ಈ ಐದೂ ಎಲ್ಲ 'ಒಗಟು'ಗಳ ಸಮಾನಧರ್ಮಗಳೆಂದು ಹೇಳಲಾಗದು. ಒಂದು, ನಾಲ್ಕು ಮತ್ತು ಐದನೆಯ ಭಾಗಗಳಿಲ್ಲದೆಯೂ ಒಗಟು ರೂಪಗೊಳ್ಳಬಲ್ಲುದು. ಎರಡು ಮತ್ತು ಮೂರನೆಯ ಅಂಶಗಳು ಅತ್ಯವಶ್ಯ. ಕೇವಲ ವರ್ಣನಾಂಶಗಳುಳ್ಳ ಒಗಟುಗಳೂ ಇವೆ. ಕೆಲವಂಶಗಳಿರಬೇಕಿಲ್ಲವೆನ್ನುವಾಗ ಅವು ಪ್ರತ್ಯಕ್ಷವಾಗಿಲ್ಲದೆ ಪರೋಕ್ಷವಾಗಿದ್ದಿರಬಹುದು. ಸುಪ್ರಸಿದ್ಧ ಜಾನಪದ ವಿದ್ವಾಂಸರಾದ ಬರ್ಕ್ಲಿಯ ಆರ್ಚರ್ ಟೇಲರ್ (Archer Taylor)[1] ನಿಜವಾದ ಒಗಟಿನಲ್ಲಿ ಪರಸ್ಪರ ವಿರೋಧವಾಗಿ ಅಥವಾ ಸಮಾನ ಧರ್ಮಗಳಿಲ್ಲದ ಉಪಮಾನ ಉಪಮೇಯಗಳಿರುತ್ತವೆ ಎಂದು ಮೊದಲು ಹೇಳಿದ್ದುಂಟು. ಕೆಲದಿನಗಳನಂತರ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತ ಒಗಟಿನಲ್ಲಿ ನೈಜ ಅಥವಾ ಪ್ರತ್ಯಕ್ಷಾಂಶವೂ ನೇತ್ಯಾತ್ಮಕ ಅಥವಾ ವಿರೋಧಾಂಶವೂ ಇರುತ್ತವೆಂದು ನುಡಿದರು. ದ್ವಂದ್ವಾರ್ಥ ಮತ್ತು ವಿರೋಧಾರ್ಥಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾರ್ಜಿಸ್ ಮತ್ತು ಡಂಡೀಸ್ (Georches and Dundes)ರು ವಿರೋಧಾರ್ಥಕ ಮತ್ತು ಅವಿರೋಧಾರ್ಥಕ ಎಂಬುದಾಗಿ ಎರಡು ಗುಂಪುಗಳನ್ನು ಗುರುತಿಸಿದರು. ಬಿಂದು ಅಥವಾ ಅಂತರಂಗ ವಸ್ತುವನ್ನು ದೃಷ್ಟಿಯಲ್ಲಿಟ್ಟುಕೊಂಡು ಧಾರ್ಮಿಕ, ಸಾಹಿತ್ಯಿಕ ಮತ್ತು ಜಾನಪದ ಅಥವಾ ಸೃಜನಾತ್ಮಕ ಒಗಟುಗಳೆಂದು ವರ್ಗೀಕರಿಸಿರುವುದೂ ಉಂಟು.[2] ಧಾರ್ಮಿಕ ಒಗಟುಗಳಲ್ಲಿ ಮತಪ್ರಕ್ರಿಯೆಗಳಿಗೆ ಪ್ರಾಧಾನ್ಯತೆಯಿದ್ದರೂ ಅವುಗಳನ್ನು ಸಾಹಿತ್ಯಿಕ ವಿಭಾಗದಲ್ಲಿ ಸಮಾವೇಶಗೊಳಿಸಬಹುದೆಂದು ತೋರುತ್ತದೆ. ಜೇಮ್ಸ್ ಎ. ಕೆಲ್ಸೊ ಅವರ ಆದರ್ಶವನ್ನನುಸರಿಸಿ ದ್ವಂದ್ವಾರ್ಥಕ, ಗೂಢಾರ್ಥಕ, ಚಿತ್ರಾತ್ಮಕ, ಗಣಿತಾತ್ಮಕ, ಪ್ರಶ್ನೋತ್ತರಾತ್ಮಕ ಮತ್ತು ಸ್ಪರ್ಧಾತ್ಮಕ ಎಂದೂ ಅವುಗಳನ್ನು ವರ್ಗೀಕರಿಸುವುದುಂಟು.[3] ಒಗಟುಗಳೆಲ್ಲ ಸಾಮಾನ್ಯವಾಗಿ ಸವಾಲಿನ ರೂಪದಲ್ಲಿರುವುದರಿಂದ ಸ್ಪರ್ಧಾತ್ಮಕ ವರ್ಗವನ್ನು ಬಿಟ್ಟುಬಿಡಬಹುದೆಂದು ತೋರುತ್ತದೆ.

ಇಡೀ ಜಗತ್ತನ್ನೇ ಉದರದಲ್ಲಿಟ್ಟುಕೊಂಡಿರುವ ಒಗಟುಗಳ ವರ್ಗೀಕರಣ ಕಷ್ಟವಾಗುತ್ತದೆ. ಶೈಲಿ ರಚನೆ ವಿಷಯ ಅರ್ಥ ಇವುಗಳೆಲ್ಲಕ್ಕೂ ಅನ್ವಯವಾಗುವಂಥ ಏಕಮುಖವಾದ ವಿಂಗಡಣೆ ದುಸ್ತರವಾಗುತ್ತದೆ. ಇವುಗಳನ್ನೆಲ್ಲ ಸರಳ ಮತ್ತು ಸಂಕೀರ್ಣ ಒಗಟುಗಳೆಂದೋ ಅಥವಾ ಸೌಂದರ್ಯಪ್ರಧಾನ ಮತ್ತು ಚಾತುರ್ಯಪ್ರಧಾನ

1 *English Riddles from Oral Traditions* ಎನ್ನುವುದು ಅವರ ಹೆಸರುವಾಸಿಗೆ ಕಾರಣವಾದ ಗ್ರಂಥ.

2 Durga Bhagawat, *The Riddle in Indian Life, Lore and Literature*, P. X.

3 ವಿವರಗಳಿಗೆ ರಾಗೌ ಅವರ 'ನಮ್ಮ ಒಗಟುಗಳು' ಎಂಬ ಗ್ರಂಥದ ಮುನ್ನುಡಿಯನ್ನು ನೋಡಬಹುದು.

ಒಗಟುಗಳೆಂದೋ ಎರಡು ದೊಡ್ಡ ವಿಭಾಗಗಳಲ್ಲಿ ಅಡಕಗೊಳಿಸಬಹುದು. ಅವುಗಳ ಆಂತರಿಕ ಮತ್ತು ಬಾಹ್ಯಲಕ್ಷಣಗಳನ್ನನುಸರಿಸಿ ಕಲಾತ್ಮಕ, ಗಣಿತಾತ್ಮಕ, ನಿಷೇಧಾತ್ಮಕ, ಸಮಸ್ಯಾತ್ಮಕ, ಕಥಾತ್ಮಕ, ಧಾರ್ಮಿಕ, ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಂಪ್ರದಾಯಿಕ, ಪ್ರಾಕೃತಿಕ, ನಾಗರಿಕ, ಪೌರಾಣಿಕ, ಆಧ್ಯಾತ್ಮಿಕ, ವಿನೋದಾತ್ಮಕ, ಪ್ರಾಣಿಸಂಬಂಧಿ, ಸಂವಾದಾತ್ಮಕ, ಪ್ರಶ್ನೋತ್ತರ, ಅಶ್ಲೀಲ, ಅಶ್ಲೀಲವೇಷಿ—ಇತ್ಯಾದಿ ಒಳವಿಭಾಗಗಳನ್ನು ಮಾಡುವುದು ಸಾಧ್ಯ. ಕಲಾತ್ಮಕ ಒಗಟುಗಳಲ್ಲಿಯೂ ಪ್ರತಿಮಾತ್ಮಕ, ಲಯಾತ್ಮಕ, ಗೀತಾತ್ಮಕ ಒಗಟುಗಳೆಂದೂ ಪ್ರತ್ಯೇಕಿಸಬಹುದು"[1] ಎಂದು ಎಚ್. ಜೆ. ಲಕ್ಕಪ್ಪಗೌಡರು ನಿರೂಪಿಸಿದ್ದಾರೆ. ಇದು ವೈಜ್ಞಾನಿಕ ವರ್ಗೀಕರಣವಲ್ಲ. ಇವೆಲ್ಲವನ್ನು ಗಣಿತಾತ್ಮಕ, ಧಾರ್ಮಿಕ, ಸಾಮಾಜಿಕ, ಪೌರಾಣಿಕ, ವಿನೋದಾತ್ಮಕ ಮತ್ತು ಸಂವಾದಾತ್ಮಕ ಘಟಕಗಳಲ್ಲಿ ಅಡಕಗೊಳಿಸಬಹುದೆಂದು ತೋರುತ್ತದೆ.

ಒಗಟುಗಳ ವಿಭಜನೆಯನ್ನೂ ಅವುಗಳ ಪ್ರಭೇದಗಳನ್ನೂ ಗಮನಿಸುವಾಗ ಅವುಗಳಿಗೆ ಹೊರತಾದ ವಸ್ತುವಿಲ್ಲವೆಂದು ಹೇಳಬಹುದು. ಮಾನವನ ಇಂದ್ರಿಯಗಳು ಪಟುವಾಗಿದ್ದು ಅವನ ಬುದ್ಧಿ ಪ್ರಖರವಾಗಿದ್ದ ಪಕ್ಷದಲ್ಲಿ ತನ್ನ ಕಾಲಡಿಯಲ್ಲಿರುವ, ದಿಟ್ಟಿಗೆ ನಿಲುಕುವ ಸಂಗತಿಗಳೆಲ್ಲ ಅವುಗಳಿಗೆ ಗ್ರಾಸವಾಗುತ್ತವೆ. ಮನುಷ್ಯನ ಅವಯವಗಳೇ, ಭಾವನಾ ಲೋಚನೆಗಳೇ, ಪ್ರಾಣಿಗಳೇ, ನಿಸರ್ಗವೇ, ಉಪಕರಣಗಳೇ, ಊಟೋಪಚಾರಗಳೇ, ಲೆಕ್ಕವೇ, ನಡಾವಳಿಗಳೇ, ಆಚರಣೆಗಳೇ, ಜಲನೆಲ ಬಾನುಗಳೇ, ಗುಡುಗು ಸಿಡಿಲು ಮೊದಲಾದ ನೈಸರ್ಗಿಕಕ್ರಿಯೆಗಳೇ ಇವೆಲ್ಲ ಒಗಟುಗಳಲ್ಲಿ ಕಾಣುವ ಸರಕು. ಕೊನೆಗೆ ಒಂದು ಗಾದೆ ಅಥವಾ ಕಥೆ ಒಗಟಿನ ಉದಯಕ್ಕೆ ಪ್ರೇರಕವಾಗಬಹುದು. ಒಂದೂರಿನಲ್ಲಿ ಪುಟ್ಟದೊಂದು ಸಂಸಾರ. ಸಂಸಾರ ಎಂದರೆ ಗಂಡಹೆಂಡಿರಿಬ್ಬರೇ. ಮದುವೆಯಾಗಿ ವರುಷಗಳುರುಳಿದರೂ ಮನೆಯೊಡತಿಗೆ ಮಕ್ಕಳಾಗಲಿಲ್ಲ. ಆಗ ಅವಳ ಕಣ್ಣು ಪರಪುರುಷನ ಕಡೆಗೆ ಹರಿಯಿತು. ಹೊಲಕ್ಕೋ ನೀರಿಗೋ ಹೋದಾಗ ಅವರಿಬ್ಬರು ಭೇಟಿಯಾಗುತ್ತಿದ್ದರು. ಕಾಲಕ್ರಮೇಣ ಗಂಡ ಇಲ್ಲದ್ದನ್ನು ನೋಡಿಕೊಂಡು ಮಿಂಡ ಮನೆಗೆ ಸಲೀಸಾಗಿ ಬರಲಸುವಾದ. ಗಂಡನಿಗೆ ಹೆಂಡತಿಯ ಪಾವಿತ್ರ್ಯದ ಬಗ್ಗೆ ಅನುಮಾನವುಂಟಾಯಿತು. ಅವನೊಂದು ದಿನ ಬೇರೆ ಊರಿಗೆ ಹೋಗುವುದಾಗಿ ಹೆಂಡತಿಗೆ ತಿಳಿಸಿ, ಅವಳು ಕಾಣದಂತೆ ಅಟ್ಟವೇರಿ ಕುಳಿತುಕೊಳ್ಳುತ್ತಾನೆ. ಮುಂಜಾವದಲ್ಲಿ ಹೆಂಗಸು ರಾಗಿ ಬೀಸಲುದ್ಯುಕ್ತಳಾಗುತ್ತಾಳೆ. ಗಂಡ ಊರಲ್ಲಿಲ್ಲವೆಂದು ತಿಳಿದ ಮಿಂಡ ಬಂದು ಬಾಗಿಲು ತಟ್ಟುತ್ತಾನೆ. ಆದರೆ ಗಂಡ ಅಟ್ಟದ ಮೇಲಿರುವ ಸುಳುಹು ಹೇಗೋ ಹೆಂಡತಿಗೆ ಹೊಳೆಯುತ್ತದೆ. ರಾಗಿ ಕಲ್ಲಿನ ಕೃತಿಯೊಂದಿಗೆ ಅವಳು ರಾಗ ತೆಗೆಯುತ್ತಾಳೆ:

ಸುತ್ತಿ ಸುತ್ತಿ ಬರುತೀಯೆ ನನಗಾಗಿ
ಮೇಲೊಬ್ಬ ಕುಳಿತವ್ನೆ ನಿನಗಾಗಿ

[1] ಒಗಟುಗಳು, ಎಚ್. ಜೆ. ಲಕ್ಕಪ್ಪಗೌಡ, ಪು. xv–xvi

ಅದರ ಅರ್ಥವನ್ನು ಗ್ರಹಿಸಿದ ಮಿಂಡ ಕಾಲ್ಕಿತ್ತುತ್ತಾನೆ. ಅಟ್ಟದ ಮೇಲಿದ್ದ ಗಂಡ ಕೆಳಗಿಳಿದು "ನಿನ್ನ ಹಾಡಿನ ಅರ್ಥವೇನೇ ಮಾಟಗಾತಿ" ಎಂದು ಗದರಿಸಿಕೊಳ್ಳುತ್ತಾನೆ. ಅದಕ್ಕೆ ಅವಳು ಈ ರೀತಿ ಉತ್ತರ ಕೊಡುತ್ತಾಳೆ: "ನಿನ್ನೆ ನೀರಿಗಾಗಿ ಕಟ್ಟೆಯ ಬಳಿ ಹೋಗಿದ್ದಾಗ ಮೀನುಗಾರ ಗಾಳ ಒಡ್ಡಿದ್ದ. ಆಗ ಆತನ ಪಕ್ಕದಲ್ಲಿ ಕುಳಿತಿದ್ದೊಬ್ಬ ಹುಡುಗ ಈ ಪದ ಹಾಡಿಕೊಳ್ಳುತ್ತಿದ್ದ. ಅದು ಎರೆಹುಳುವನ್ನು ಕುರಿತ ಪದವಂತೆ." ಗಂಡ ಅವಾಕ್ಕಾಗುತ್ತಾನೆ. ಇಂಥ ಕಥೆಗಳು ಅಪರೂಪವಲ್ಲವೆಂದು ದುರ್ಗಾ ಭಾಗವತರು ಸನಿದರ್ಶನವಾಗಿ ವಿವರಿಸಿದ್ದಾರೆ.[1] ಕೂಟಕಥಾನಕ ಮತ್ತು ಕಥಾ ಪ್ರಹೇಳಿಕಾ ಎಂಬ ಎರಡು ಕಥನ ಮಾದರಿಗಳು ಹೇಮಚಂದ್ರನ ತ್ರಿಷಷ್ಟಿಶಲಾಕಾಪುರುಷಚರಿತೆಯಲ್ಲಿಯೂ (೧೧ನೆಯ ಶತಮಾನ) ಜಂಭಾಲದತ್ತನ ವೇತಾಳ ಪಂಚವಿಂಶತಿಯಲ್ಲಿಯೂ (೧೬ನೆಯ ಶತಮಾನ) ಕ್ರಮವಾಗಿ ದೊರೆಯುತ್ತವೆ. ಮಧ್ಯಯುಗದ ಯೂರೋಪು ಮತ್ತು ಏಷಿಯಾ ಖಂಡಗಳಲ್ಲಿಯೂ ಸಿಗುತ್ತವೆ. ಮರಾಠಿಯ ಕಲ್ಲಿ-ತುರಾಲಾವಣಿಗಳು ಸಹ ಕಥಾನಕಗಳೇ ಆಗಿವೆ, ನಮ್ಮಲ್ಲಿ ಹರದೇಶಿ-ನಾಗೇಶಿ ಲಾವಣಿಗಳಿರುವಂತೆ. ಕಲ್ಗಿ ಸ್ತ್ರೀ ಅಥವಾ ಪ್ರಕೃತಿಗೆ, ಮತ್ತು ತುರಾ ಗಂಡಸು ಅಥವಾ ಪುರುಷನಿಗೆ ಸಂಕೇತವಾಗಿವೆ. ಇಂಥವನ್ನು ಭೇದಿಕಾ ಲಾವಣಿಗಳೆಂದೂ ಕರೆಯುವುದುಂಟು.

ಕೊಂಕಣದಲ್ಲಿ ಪ್ರಚಲಿತವಾಗಿರುವ ಮರಾಠಿಲಾವಣಿಯ ಕಥೆ ಹೀಗಿದೆ: "ಕಲ್ಲಂಗಡಿ ಹಣ್ಣನ್ನು ಚಾಕುವಿಂದ ಕತ್ತರಿಸಿದೆ. ಹಸು ಹಣ್ಣನ್ನು ತಿಂದಿತು. ಚಾಕು ಎಲ್ಲಿಯೂ ಕಾಣ ಲಿಲ್ಲ. ಹಸು ಅದನ್ನು ನುಂಗಿಬಿಟ್ಟಿರಬೇಕೆನಿಸಿತು. ಹಾಲು ಕರೆವದಾಯಿತು. ಅದರಲ್ಲಿಯೂ ಚಾಕು ಸಿಗಲಿಲ್ಲ. ಹಾಲು ಕಡೆದು ಬೆಣ್ಣೆ ತೆಗೆಯಲಾಯಿತು. ಅದರಲ್ಲಿಯೂ ಚಾಕು ಕಾಣ ಲಿಲ್ಲ. ಬೆಣ್ಣೆ ಕಾಯಿಸಿ ತುಪ್ಪವಾದಾಗ ಅದರಲ್ಲಿ ಚಾಕು ಸಿಕ್ಕಿತು. ಇದುಹೇಗಾಯಿತು? ಅದಕ್ಕೆ ಉತ್ತರವಿದು: ನಾನು ಚಾಕುವನ್ನು ಹಂದರದಲ್ಲಿ ಸಿಕ್ಕಿಸಿದ್ದೆ. ಮರೆತುಹೋಗಿತ್ತು. ಸೂರ್ಯ ಮೇಲೇರಿದಾಗ ಚಾಕುವಿನ ಛಾಯೆ ತುಪ್ಪದಲ್ಲಿ ಕಂಡಿತು." ಎಲ್ಹೋಜಿ ಲಾವಣಿ ಯೆಂದು ಇದಕ್ಕೆ ಹೆಸರು. ಆಂಗ್ಲಭಾಷೆಯಲ್ಲಿಯೂ ಕಥನರೂಪದ ಒಗಟುಗಳಿವೆ.

Riddle me, riddle me right :
where was I last Friday night ?

ದಕ್ಷಿಣ ಅಪಲೇಚಿಯಾ (Appalachia)ದಲ್ಲಿ ಚಾಲ್ತಿಯಲ್ಲಿರುವ ಒಗಟು ಕಥೆಯನ್ನಿಲ್ಲಿ ಮಾದರಿಗಾಗಿ ಉದಾಹರಿಸಿದೆ.[2]

ಕೆಲವು ಕಡೆ ಜನಪ್ರಿಯಗೀತೆಗಳು ಒಗಟುಗಳ ರೂಪದಲ್ಲಿರುತ್ತವೆ. ಅವು [illegible] ಅಥವಾ ಗಂಡಿನ [illegible]ಯನ್ನು [illegible]

1 *The Riddle in Indian Life, Lore and Literature* ಎಂಬ ತಮ್ಮ ಗ್ರಂಥದ ಏಳನೆಯ ಪ್ರಕರಣದಲ್ಲಿ ಕೆಲವು ಕತೆಗಳನ್ನು ಸಹ ಉದ್ಧರಿಸಿದ್ದಾರೆ.

2 ಕತೆಯ ವಿವರಗಳಿಗೆ *American Folklore*, ed by Tristram Coffin III, ಪುಟ ೨೪೦-೨೪೧ ನೋಡಿ.

ಕಟ್ಟು ಜನರ ವಿವಾಹಗಳಲ್ಲಿ ಇವುಗಳಿಗೆ ವಿಶೇಷಸ್ಥಾನವುಂಟು. ಹೆಣ್ಣನ್ನು ಕರೆತರುವ ಸಲುವಾಗಿ ಗಂಡಿನ ಪ್ರತಿನಿಧಿ ಅವಳ ಮನೆಗೆ ಹೋದಾಗ, ಅವಳ ಕಡೆಯವರು ಒಗಟುಗಳ ನ್ನೊಡ್ಡುವ ಪದ್ಧತಿ ಗೋಂಡಿ ಜನರಲ್ಲಿದೆ. ಅವನ್ನು ಬಿಡಿಸದೆ ಅವನು ಹೆಣ್ಣನ್ನೊಯ್ಯ ಲಾರ. ಅವರಲ್ಲಿ ಬಳಕೆಯಲ್ಲಿರುವ ಒಂದು ಕತೆಯಿದು: ಹೆಣ್ಣು ತನ್ನ ಗಂಡನ ತಮ್ಮ ನೊಡನೆ ಮಲಗಬೇಕೆಂದು ಅಪೇಕ್ಷಿಸುತ್ತಾಳೆ. ಅಣ್ಣನಿಗಂಜಿದ ಮೈದುನ ಅನುಮತಿ ಯೀಯುವುದಿಲ್ಲ. ಅತ್ತಿಗೆಯ ಕಾಟ ಅತಿಯಾದಾಗ, ಅವನು ನೊಣದ ಹಾಲನ್ನು, ಲಾಳದ ತಿರುಳನ್ನು, ತಲೆಯಿಲ್ಲದ ಆಡನ್ನು, ಒಂಟಿಕಾಲಿನ ಗೌಜಗ ಹಕ್ಕಿಯನ್ನು ತರುವೆಯಾದರೆ ನಾನು ಕಣ್ಣಿಲ್ಲದ ಕುದುರೆಯೇರಿ ಬರುತ್ತೇನೆಂದು ನುಡಿಯುತ್ತಾನೆ. ಬಹುದಿನಗಳತನಕ ಅದನ್ನು ಬಿಡಿಸಲಾರದೆ ಅವಳು ಸಂಕಟಪಡುತ್ತಿರುವಾಗ ಯಾರೋ ಒಬ್ಬ ಜಾಣ ಉತ್ತರ ಹೇಳಿಕೊಡುತ್ತಾನೆ. ನೊಣದ ಹಾಲೇ ಜೇನು, ಲಾಳದ ತಿರುಳು ಕಬ್ಬು, ಸುಟ್ಟ ಬರ್ರಾ[1] ಆಡಿನ ತಲೆ, ಒಂಟಿಕಾಲಿನ ಹಕ್ಕಿಯೇ ಬದನೆಕಾಯಿ ಮತ್ತು ಕಣ್ಣಿಲ್ಲದ ಕುದುರೆಯೇ ಚಪ್ಪಲಿಗಳು ಎಂದವಳು ಸಮಸ್ಯೆ ಬಿಡಿಸುತ್ತಾಳೆ. ಮೈದುನ ವಿಧಿಯಿಲ್ಲದೆ ಅವಳ ಬಯಕೆಯನ್ನು ಪೂರೈಸಬೇಕಾಗುತ್ತದೆ. ಬಿರ್‌ಹಾರ್ (Birhor) ಜನರ ಸಂಪ್ರದಾಯದ ಪ್ರಕಾರ ಹೆಣ್ಣಿನ ಕಡೆಯ ಜನ ಗಂಡಿನ ಮನೆಗೆ ಹೋದಾಗ, ಅತಿಥಿಗಳು ಕೂಡಲು ಬೇಟೆಯ ಬಲೆಗಳನ್ನು ಹಾಸುತ್ತಾರೆ. ಗಂಡಿನ ಕಡೆಯವರು "ದಾರಿಯಲ್ಲೇನು ಕಂಡಿರಿ" ಎಂದು ಪ್ರಶ್ನಿಸುತ್ತಾರೆ. "ದಾರಿಯಲ್ಲೊಂದು ಹುಡುಗಿ ಕಂಡೆವು. ನಿಮ್ಮಪ್ಪ ಎಲ್ಲಿಗೆ ಹೋಗಿದ್ದಾನೆ ಎಂದವಳನ್ನು ಕೇಳಿದೆವು" ಎಂದವರು ಉತ್ತರ ಕೊಡುತ್ತಾರೆ. "ನನ್ನಪ್ಪ ಆಗಸದ ಮಳೆಯನ್ನು ಹಿಡಿಯುವ ಸಲುವಾಗಿ ಹೋಗಿದ್ದಾನೆ." ಎಂದು ಹುಡುಗಿ ಹೇಳುತ್ತದೆ. ಅವನು ಮಾಳಿಗೆ ಹುಲ್ಲಿಗೆ ಹೋಗಿದ್ದಾನೆಂಬುದು ಅದರ ಅರ್ಥ. ಕ್ರೀಡಾ ನೃತ್ಯಗಳಲ್ಲಿ, ಅವರಲ್ಲಿಯೂ ದಂಡಕ್ರೀಡಾ ನೃತ್ಯಗಳಲ್ಲಿ ಈ ಹಾಡುಗಳಿಗೆ ಹೆಚ್ಚು ಮಹತ್ವವುಂಟು. ಉದಾಹರಣೆಗಾಗಿ ಒಂದನ್ನಿಲ್ಲಿ ತರ್ಜುಮೆ ಮಾಡಿಕೊಟ್ಟಿದೆ:

ಹೋಗುವೆನು ನಾ ಖಾಜ್ಲಿಬಾನಿಗೆ
ಹೋಗುವೆನು ಬೃಂದಾವನಕೆ
ದೇವರೊಳು ನಂಬಿಕೆಯ ನಿಟ್ಟು.
ತಾಯಿ ಬಾಸ್ ತಂದೆಯಿಳೆಯು
ಆ ಇಳೆಯ ಬಿಡದಿಯೆನಗೆ
ಕೋಡಿಲ್ಲ ಎಲೆ ಮೊದಲೆ ಇಲ್ಲ
ಹೂಗಳರಳುತಿನೆಯಂತೆ

ಇದಕ್ಕೆ 'ಸೂರ್ಯ' ಎಂದು ಅರ್ಥ.[2]

[1] ಈ ಪದದ ಅರ್ಥ ನನಗೆ ತಿಳಿಯಲಿಲ್ಲ.

[2] ವಿವರಗಳಿಗೆ ವೆರಿಯರ್ ಎಲ್ವಿನ್ ಮತ್ತು ಶಾಮರಾವ್ ಹಿವಾಳೆಯವರು ಸಂಗ್ರಹಿಸಿರುವ *Folksongs of the Maikal Hills* ಎಂಬ ಗ್ರಂಥದ 'Riddle Songs' ಎಂಬ ಪ್ರಕರಣ ನೋಡಬಹುದು (ಪು. ೭೩-೭೮).

ಸಂಸ್ಕೃತ ಮತ್ತು ಪ್ರಾಕೃತ ಸಾಹಿತ್ಯದಲ್ಲಿ ಒಗಟು ಅಥವಾ ಕಾವ್ಯವೆಂದು ಪರಿಗಣನೆಗೊಂಡಿತ್ತು. ಕೆಲವು ಒಗಟುಗಳಲ್ಲಿ ಉತ್ತಮ ಕಾವ್ಯಲಕ್ಷಣಗಳಿರುವುದುಂಟು. ಅಂಥ ಕಾವ್ಯಲಕ್ಷಣ ಸಮೃದ್ಧವಾಗಿರುವ ಒಗಟುಗಳು ಸಾಕಷ್ಟಿವೆ ಎಂಬುದು ಮನನೀಯವಾದ ವಿಷಯ. ಅವುಗಳ ಭಾಷೆ ಸಹಜವಾಗಿ ಅಲಂಕಾರಿಕವೂ ಸಾಂಕೇತಿಕವೂ ಪ್ರತಿಮಾತ್ಮಕವೂ ಆದದ್ದರಿಂದ ಅವು ಸಾಹಿತ್ಯದ ಪರಿಧಿಯೊಳಗೆ ಸೇರುತ್ತವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಬೌದ್ಧಿಕ ವ್ಯಾಪಾರ ಪ್ರಧಾನವಾದದ್ದರಿಂದ ಸಾಹಿತ್ಯಗುಣ ಕಡಿಮೆಯಾಗುತ್ತದೆಂಬ ವಾದ ಸ್ವೀಕಾರಯೋಗ್ಯವಾದದ್ದಲ್ಲ. ಇಲ್ಲಿ ಅರ್ಥವೈಭವಕ್ಕನುಗುಣವಾದ ಮಾತಿನ ಗತ್ತು ಬೇಕಾಗುತ್ತದೆ. ಆ ಗತ್ತು ಅರ್ಥಾಂತರನ್ಯಾಸ ಅತಿಶಯೋಕ್ತಿ ಸಂಖ್ಯೆ ರೂಪಕ ಮೊದಲಾದ ಅಲಂಕಾರಗಳ ಮೂಲಕ ಪ್ರಕಟಗೊಳ್ಳುತ್ತದೆ. ಅನೇಕ ವೇಳೆ ಧ್ವನಿಸಾಂಗತ್ಯವೂ ದೊರಕೊಳ್ಳುವುದುಂಟು. ಚಮತ್ಕಾರವೇ ಈ ಭಾಷೆಯ ಒಳಮೈ ಹಾಗೂ ಹೊರಮೈ. ಇಲ್ಲಿಯ ಮಾತಿನ ಅರ್ಥ ಮತಿಕೋಶದಲ್ಲಿ ದೊರೆಯುವಂಥದೇ ಹೊರತು ಕಾಗದದ ಕೋಶದಲ್ಲಿ ಕಾಣುವಂಥದಲ್ಲ. ರೂಢಿಯ ಭಾವಾರ್ಥಗಳನ್ನು ಮರೆತು ಹೊಸ ಅರ್ಥವನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ.

ಹರಕು ಸೀರೆ ಉಟ್ಕೊಂಡು
ಹತ್ತು ಮಕ್ಳ ಎತ್ಕೊಂಡು
ದೊರೆ ಜೊತೇಲಿ ಊಟ ಮಾಡ್ತಾಳೆ[1]

ಬೆಳ್ಳಿಯ ಹೊರಗೊಳಗುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದವರಿಗೆ ಮಾತ್ರ ಹರಕು ಸೀರೆ, ಮಕ್ಕಳು, ದೊರೆ ಮೊದಲಾದ ಮಾತುಗಳು ಯಾವ ಯಾವ ಉದ್ದಿಷ್ಟ ವಸ್ತುಗಳಿಗೆ ಸಂಕೇತವಾಗಿ ನಿಲ್ಲುತ್ತವೆಂದು ಸ್ಪಷ್ಟವಾಗುತ್ತದೆ. ಇಲ್ಲಿ ಸೀರೆಯಲ್ಲ ಮುಖ್ಯ, ಸೀರೆಯ ಭಾವನೆ. ಯಾವ ಉದ್ದೇಶಕ್ಕಾಗಿ ಸೀರೆ ಬಳಸುತ್ತೇವೆಯೋ ಆ ಉದ್ದೇಶ ಮುಖ್ಯ. ಅಂದರೇನಾಯಿತು? ಆ ಪದದ ರೂಢಿಯ ಅರ್ಥಗಳು ಇಲ್ಲಿ ಅಪ್ರಕೃತ: ಕೇವಲ ಕೆಲವು ಸಮಾನಧರ್ಮಗಳ ಆಧಾರದ ಮೇಲೆ, ಸುತ್ತಮುತ್ತಣ ಪದಗಳ ನೆರವಿನಿಂದ, ಗೂಢಾರ್ಥವನ್ನು ಊಹಿಸಿಕೊಳ್ಳಬೇಕಾಗುತ್ತದೆ. "ಏಣಿ ಇಲ್ಲದ ಕೆರೆಯಲ್ಲಿ ನೀರು ತುಂಬಿದೆ"[2] ಎಂಬ ಮತ್ತೊಂದು ನಿದರ್ಶನವನ್ನು ನೋಡೋಣ. ಇಲ್ಲಿರುವ ಎಲ್ಲ ಮಾತುಗಳೂ ಸರಳವಾಗಿವೆ. ಸ್ಪಷ್ಟವಾಗಿವೆ. ಏಣಿ ಇಲ್ಲದ ಕೆರೆ ಯಾವುದಾಗುತ್ತದೆ? ಭೂಮಿಯ ಮೇಲೆ ಅಂಥದೊಂದು ವಸ್ತು ಇಲ್ಲ. ಭೂಮಿ ಬಿಟ್ಟರೆ ನಮಗೆ ಕಾಣುವ ಮತ್ತೊಂದು ನೈಸರ್ಗಿಕ ಕಾಯ ಆಕಾಶ. ಮೋಡವಿಲ್ಲದ ತಿಳಿಯಾಗಸದಲ್ಲಿ ನೀರಿನ ಭಾವನೆಯನ್ನು ಕಾಣುತ್ತೇವಲ್ಲವೆ? [illegible] [illegible] ಸಂಬಂಧ[illegible] ಕ್ಕಾವುದೂ [illegible]. ಅದಕ್ಕೆಲ್ಲಿದೆ? [illegible]

1 ಎಚ್. ಜೆ. ಲಕ್ಕಪ್ಪಗೌಡ, ಒಗಟುಗಳು, ಪು. ೭೬.

2 [illegible] ಸುಂದರವಾದ ನಿದರ್ಶನಗಳನ್ನು [illegible] ಸಾಹಿತ್ಯ[illegible] ಸಂದರ್ಭದಲ್ಲಿ ನೋಡಬಹುದು.

ಇಲ್ಲ. ಕೆರೆಗೆ ಬದಲಾಗಿ ಕೊಪ್ಪರಿಗೆಯೋ ನೀರಿಗೆ ಬದಲಾಗಿ ಎಣ್ಣೆಯೋ ಇದ್ದಿದ್ದರೆ ಆಗ-ಸವ ಕಲ್ಪನೆ ಬರುತ್ತಿರಲಿಲ್ಲ. ಹಿತಮಿತವಾದ ಮಾತುಗಳಲ್ಲಿ ಉಪಮೆ ವಿರೋಧಾಭಾಸಗಳ ಮೂಲಕ ಹೊಸ ಕಲ್ಪನೆಗೆ ಅವಕಾಶವಾಗಿ ವಿಶಿಷ್ಟಾರ್ಥದ್ಯೋತಕವಾಗುವಾಗ ಸಾಹಿತ್ಯ ಲಕ್ಷಣಗಳಿಲ್ಲವೆನ್ನುವುದು ಹೇಗೆ? ನವ್ಯಕಾವ್ಯ ಪದ್ಧತಿ ಇದಕ್ಕಿಂತ ಭಿನ್ನವಾದುದೆಂದು ಹೇಳುವಂತಿಲ್ಲ. ಮೇಲಾಗಿ ಹಾಸ್ಯ ವಿನೋದ ವಿಡಂಬನೆಗಳಿಗೆ ಆಕರವಾಗಿರುವ ಒಗಟು ಗಳನ್ನು ಸಾಹಿತ್ಯಕ್ಷೇತ್ರದಿಂದ ಗಡೀಪಾರು ಮಾಡಲಾಗದು.

ಒಗಟುಗಳಲ್ಲಿ ಸಾಹಿತ್ಯಗುಣಗಳಿವೆ ಎನ್ನುವಾಗ ಅವನ್ನು ಗೀತೆಯ ಪ್ರಕಾರದೊಡನೆ ಹೋಲಿಸಬಾರದು. ಅನೇಕ ಒಗಟುಗಳಲ್ಲಿ ಸಹೃದಯರು ಮೆಚ್ಚುವಂಥ ಲಕ್ಷಣಗಳು ಸಾಕಷ್ಟು ಪ್ರಮಾಣದಲ್ಲಿವೆಯೆಂದು ಅರಿತರೆ ಸಾಕು. ನುಡಿಯ ಬೆಡಗಿನ ಮಾತಿನ ವಿವಿಧ ಛಾಯೆಗಳ ಮತ್ತು ಅಲಂಕಾರಗಳ ಅಧ್ಯಯನಕ್ಕೆ ಒಗಟು ಫಲವತ್ತಾದ ಕ್ಷೇತ್ರ. ಅಂತೆಯೇ ಸಾಮಾಜಿಕ ಧಾರ್ಮಿಕ ವಿಷಯಗಳನ್ನೊಳಗೊಂಡ ಸಾಂಸ್ಕೃತಿಕ ಅಧ್ಯಯನಕ್ಕೆ ಇವು ಸಾಕಷ್ಟು ಸಾಮಗ್ರಿಯೊದಗಿಸುತ್ತವೆ. ಮನಸ್ಸಿನ ವಿಶ್ವರೂಪದರ್ಶನಕ್ಕೆ ಇವು ಸಬಲ ಮಾಧ್ಯಮಗಳು. ಲೋಕಪರಿಜ್ಞಾನ ಪರೀಕ್ಷೆ, ಸಮಸ್ಯಾಪರಿಹಾರ ಸಾಮರ್ಥ್ಯ, ತಾರ್ಕಿಕ ಬುದ್ಧಿಯ ವಿಕಾಸ, ವಾಕ್ಚಾತುರ್ಯ, ಒಂದು ಜನಾಂಗದ ಸಂಸ್ಕೃತಿ ದರ್ಶನ, ಶಿಕ್ಷಣ ಲಾಭ ಇವೇ ಮೊದಲಾದ ಪ್ರಯೋಜನಗಳೊದಗುವುದರಿಂದ ಒಗಟುಗಳು ಪ್ರಾಚೀನ ಕಾಲದಿಂದ ಲೋಕಪ್ರಿಯವಾಗಿವೆ.

ಅವು ಜನಪ್ರಿಯವಾಗಿರುವುದರಿಂದ ಅನುಕರಣ ರೂಪಾಂತರಗಳ ಮೂಲಕ ಪ್ರದೇಶ ದಿಂದ ಪ್ರದೇಶಕ್ಕೆ ಪರ್ಯಟನ ಮಾಡುವುದುಂಟು. ಆದರೆ ಅವು ಗಾದೆಗಳಷ್ಟು ವೇಗ ವಾಗಿ, ಅಷ್ಟೇ ವ್ಯಾಪಕವಾಗಿ ಬೇರೆ ಬೇರೆ ನಾಡುಗಳಲ್ಲಿ ಹಬ್ಬುವುದಿಲ್ಲ. ಅವುಗಳಲ್ಲಿ ಪ್ರಾದೇ ಶಿಕ ಲಕ್ಷಣಗಳೇ ಅಧಿಕವಾಗಿರುತ್ತವೆ. "ಒಬ್ಬನನು ಕಟ್ಟಿದ್ದೆ ಒಬ್ಬನನು ಬಿಟ್ಟಿದ್ದೆ." ಎಂಬ ಸಾಲಿನಿಂದ ಪ್ರಾರಂಭವಾಗುವ ಲಾವಣಿ ಮರಾಠಿ ಭಾಷೆಯಲ್ಲಿಯೂ ಇದೆ ಎನ್ನುವುದನ್ನು ಈಗಾಗಲೇ ನೋಡಲಾಗಿದೆ. ನೆರೆಹೊರೆಯ ರಾಜ್ಯಗಳಲ್ಲಿ ಈ ಕೊಳುಕೊಡೆ ಸಾಧ್ಯವೇ ಹೊರತು ದೂರಾಂತರ ರಾಜ್ಯಗಳಲ್ಲಿ ಸರಾಗವಾಗಿ ಸಂಭವಿಸಲಾರದೆಂದು ತೋರುತ್ತದೆ. ಬೇರೆ ಬೇರೆ ದೇಶಗಳ ಒಗಟುಗಳಲ್ಲಿ ಕಾಣಬಹುದಾದ ಸಾದೃಶ್ಯಕ್ಕೆ ಅನುಕರಣೆ ಅಥವಾ ಸ್ವೀಕರಣ ಕಾರಣವಾಗದೆ, ಸಮಾನ ಬೌದ್ಧಿಕ ವ್ಯಾಪಾರವೇ ಕಾರಣವಾಗಿರಬಹುದು. ಸ್ವೀಕರಣ ಜರುಗುವುದಾದರೂ ಮಿತಪ್ರಮಾಣದಲ್ಲಿ ಮಾತ್ರ ಸಾಧ್ಯ. ಈ ಸ್ವೀಕರಣ ಭಾಷಾಂತರ, ರೂಪಾಂತರ ಅಥವಾ ಅನುವಾದ ಮಾರ್ಗದಲ್ಲಿ ನಡೆಯಬಹುದು. ಅಲ್ಲಲ್ಲಿಯ ಸನ್ನಿವೇಶಕ್ಕೆ ತಕ್ಕಂತೆ ಅವು ಅಷ್ಟಿಷ್ಟು ವ್ಯತ್ಯಾಸವಾಗುವುದೂ ಉಂಟು. ಇಂಥ ವ್ಯತ್ಯಾಸ ವನ್ನು ಒಂದೇ ಭಾಷೆಯ ಒಗಟುಗಳಲ್ಲಿಯೂ ಗಮನಿಸಬಹುದು :

ಅಣ್ಣ ಬಣ್ಣ
ಕೆಂಪು ಬಣ್ಣ
ತಂದುಕೊಡಣ್ಣ
ಬೀಜಿಲ್ದಣ್ಣ

ಹಜಾರದಲ್ಲಿ ಅಣ್ಣ
ಬಜಾರದಲ್ಲಿ ಬಣ್ಣ
ಬೀಜವಿಲ್ಲದ ಹಣ್ಣ
ತಂದುಕೊಡಣ್ಣ

ಎರಡರಲ್ಲಿಯೂ ಉತ್ತರ ಒಂದೇ : ಗೆಣಸು. ಮೊದಲನೆಯದು 'ಜನಪದ ಒಗಟುಗಳು' ಗ್ರಂಥದಿಂದ, ಎರಡನೆಯದು 'ನಮ್ಮ ಒಗಟುಗಳು' ಗ್ರಂಥದಿಂದ ಉದ್ಧೃತವಾಗಿವೆ. ಹಲಸಿನ ಬೀಜ ಕೆಲವರಿಗೆ 'ಚಿನ್ನದ ಪೆಟ್ಗೀಲಿ ಬೆಳ್ಳಿ ಗಜ್ಜುಗ'ದಂತೆ, ಬೇರೆ ಕೆಲವರಿಗೆ 'ಚಿನ್ನದ ಪೆಟ್ಟಿಗ್ಯಾಗ ಬೆಳ್ಳೀಲಿಂಗ'ದಂತೆ ಕಾಣಬಹುದು. ಆಯಾಯ ಜನರ ಸಂಸ್ಕಾರಕ್ಕನುಗುಣವಾಗಿ ಹೀಗೆ ಪಾಠಾಂತರಗಳು ಬೆಳೆಯುವುದುಂಟು.

ಇತರ ಜಾನಪದ ಸಾಹಿತ್ಯಪ್ರಕಾರಗಳಂತೆ ಒಗಟು ಬಹು ಪ್ರಾಚೀನವಾದುದು, ಆದಿಮಾನವನ ಕಾಲಕ್ಕೇ ಪ್ರಾರಂಭವಾಗಿದ್ದಿರಬೇಕು, ಬೌದ್ಧಿಕ ಕುತೂಹಲ ಮತ್ತು ಸಾಹಸಗಳು ಎಲೆಯಿಕ್ಕಿದೊಡನೆಯೇ ಅದು ಉಗಮಗೊಂಡಿರಬೇಕೆನ್ನುವುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಪ್ರಾಚೀನ ಹೀಬ್ರೂ ಕಾವ್ಯಗಳಲ್ಲಿ ಮತ್ತು ಬೈಬಲಿನಲ್ಲಿ, ಗ್ರೀಕ್ ಕಾವ್ಯಗಳಲ್ಲಿ, ವೈದಿಕ ಸಾಹಿತ್ಯದಲ್ಲಿ ಒಗಟುಗಳ ಸುಗ್ಗಿಯನ್ನು ಕಾಣಬಹುದು. ರಾಜಮಹಾರಾಜರು ಮತ್ತು ಶೂರರು ಒಗಟುಗಳನ್ನುತ್ತರಿಸಿ ಭೂವನಿತೆ ಮತ್ತು ವನಿತೆಯರನ್ನು ಗೆದ್ದುಕೊಳ್ಳುತ್ತಿದ್ದರೆನ್ನುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಈಡಿಪಸ್ ಮತ್ತು ಭೋಜಮಹಾರಾಜರ ಮುಂದೆ ಭೂತಗಳು ಒಡ್ಡಿದ ಸಮಸ್ಯೆ ಲೋಕವಿಖ್ಯಾತವಾದುವು. "ಬೆಳಗ್ಗೆ ನಾಗಾಲಿ, ಮಧ್ಯಾಹ್ನ ಇಗ್ಗಾಲಿ, ಸಂಜೆ ಮೂಗಾಲಿ; ಈ ಪ್ರಾಣಿ ಯಾವುದು?" ಎಂದು ಸ್ಫಿಂಕ್ಸ್ ಭೂತ ಈಡಿಪಸ್ಸಿನ ಮುಂದೆಸೆದ ಸವಾಲು. 'ಮನುಷ್ಯ' ಎಂದು ತೃಪ್ತಿಕರವಾದ ಉತ್ತರ ಹೇಳಿ ದೊರೆ ಬಚಾವಾದ, ಭೂತ ಸತ್ತುಹೋಯಿತು. ಭೋಜಮಹಾರಾಜನ ಪರವಾಗಿ ಕಾಳಿದಾಸ ಭೂತಕ್ಕೆ ಉತ್ತರ ಕೊಡುತ್ತಾನೆ.

ಭೂತ : ಸರ್ವಸ್ಯದ್ವೇ
ಕಾಳಿದಾಸ : ಸುಮತಿ ಕುಮತಿ ಸಂಪದಾಪತ್ತಿ ಹೇತೂ
ಭೂತ : ವೃದ್ಧೋಯೂನ
ಕಾಳಿದಾಸ : ಸಹ ಪರಿಚಯಾತ್ ತ್ಯಜ್ಯತೇ ಕಾಮಿನೀಭಿಃ
ಭೂತ : ಸ್ತ್ರೀ ಪುಂವಚ್ಚ
ಕಾಳಿದಾಸ : ಪ್ರಭವತಿಯದಾ ತದ್ಧಿ ಗೇಹಮ್ ವಿನಷ್ಟಮ್

ಇಂಥ ಸಮಸ್ಯಾಪೂರ್ತಿ ಸಂದರ್ಭದಲ್ಲಿ ಕಾಳಿದಾಸ [illegible]ದ ಕತೆ ಲೋಕಪ್ರಸಿದ್ಧ. [illegible]ಯೊಬ್ಬಳ ಮನೆಯಲ್ಲಿದ್ದ. ಅಲ್ಲಿಯೇ ಮೃತವಾದದ್ದು. ಆಗ ಅವನು ಸಿಂಹಳದ [illegible] ಒಂದು ಸಮಸ್ಯೆಯನ್ನು ಪ್ರಕಟಿಸಿ, ಅದನ್ನು ಕುಮಾರಸೇನ ಅವನ ಸ್ನೇಹಿತನ ಗೆಳೆಯ. [illegible] ಬಹುಮಾನ ನೀಡುವುದಾಗಿ ಘೋಷಿಸಿದ. '[illegible] ಪೂರಣ ಮಾಡಿದವರಿಗೆ ದೊಡ್ಡ ಬಹುಮಾನ [illegible] ನ ಚ ದೃಶ್ಯತೇ' ಎನ್ನುವುದೇ ಆ ಸಮಸ್ಯೆ. ಕಾಳಿದಾಸ ಕುಸುಮೋತ್ಪತ್ತಿಃ ಶ್ರೂಯತೇ

"ಬಾಲೇ ತವ ಮುಖಾಂಭೋಜೇ ಕಥಮ್ ಇಂದೀವರದ್ವಯಮ್" ಎಂದು ಮುಂದಿನ ಸಾಲನ್ನು ರಚಿಸಿ ವೇಶ್ಯೆಯ ಕೈಗೆ ಕೊಟ್ಟನು. ಬಹುಮಾನದ ಆಸೆಯಿಂದ ಅವಳು ಕಾಳಿದಾಸನನ್ನು ಕೊಂದು, ಆ ಸೂಕ್ತಿ ತಾನೇ ರಚಿಸಿದುದೆಂದು ತಿಳಿಸಿದಳು. ಅದನ್ನು ಕಾಳಿದಾಸನೇ ರಚಿಸಿರಬೇಕೆಂದು ದೊರೆ ಊಹಿಸಿ, ವಿಚಾರಣೆ ನಡಸಿದ್ದರಲ್ಲಿ ಸತ್ಯಾಂಶ ತಿಳಿಯಿತು. ಆಗ ಚಿತೆಯನ್ನು ನಿರ್ಮಿಸಿ ಕವಿಯೊಡನೆ ದೊರೆಯೂ ಚಿತಾಪ್ರವೇಶ ಮಾಡಿದನು.

ವೇದಗಳಲ್ಲಿಯೇ ಪ್ರಕೃತಿಯನ್ನು ಕುರಿತ ಸಮಸ್ಯೆಗಳು ಕಾವ್ಯರೂಪದಲ್ಲಿ ರಚನೆಗೊಂಡಿರುವುದನ್ನು ಲಕ್ಷಿಸಬಹುದು. ವಾಜಸನೇಯಿ ಸಂಹಿತೆಯಲ್ಲಿ ಬರುವ, ಪುರೋಹಿತ, ಹೋತೃ ಮತ್ತು ಅಧ್ವರ್ಯು ಇವರ ನಡುವೆ ನಡೆಯುವ ಸಂವಾದದಲ್ಲಿಯ ಒಂದು ಭಾಗವಿದು :

ಪ್ರಶ್ನೆ: ತನ್ನ ಪಥದಿ ಒಂಟಿಯಾಗಿ ಅಲೆವರಾರು ?
ಮತ್ತೆ ಮತ್ತೆ ಹೊಸತು ಹುಟ್ಟು ಪಡೆವರಾರು ?
ಚಳಿಗೆ ಹಿರಿಯ ಮದ್ದು ಯಾವುದು ?
ದೊಡ್ಡ ಧಾನ್ಯ ಕಣಜ ಯಾವುದು ?
ಉತ್ತರ: ತನ್ನ ಪಥದಿ ಒಂಟಿಯಲೆವನವನು ಸೂರ್ಯ
ಮತ್ತೆ ಮತ್ತೆ ಹುಟ್ಟು ಪಡೆವನವನು ಚಂದ್ರ
ಚಳಿಗೆ ಮದ್ದು ಬೆಂಕಿ
ಧಾನ್ಯ ಕಣಜ ಭೂಮಿ.[1]

ವೇದದಲ್ಲಿಯ ಅಧ್ಯಾತ್ಮ ಸಂಬಂಧದ ಸುಪ್ರಸಿದ್ಧ ರಚನೆಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು :

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ
ಅನಶ್ನನ್ನನ್ಯೋಽಭಿಚಾಕಶೀತಿ.

ಮುಂದೆ ಪುರಾಣೇತಿಹಾಸಗಳಲ್ಲಿ ಹಾಗೂ ಜೈನ ಬೌದ್ಧ ಸಾಹಿತ್ಯದಲ್ಲಿ ಈ ಪರಂಪರೆ ಮುಂದುವರಿಯುತ್ತದೆ. ಮಹಾಭಾರತದ ವನಪರ್ವದಲ್ಲಿ ಬರುವ ಯಕ್ಷಪ್ರಶ್ನೆ ಒಗಟಿನ ಇತಿಹಾಸದಲ್ಲೊಂದು ಮೈಲಿಗಲ್ಲು. ದೇವಧಮ್ಮ ಜಾತಕದಲ್ಲಿಯೂ ಅಂಥದೇ ಪ್ರಶ್ನೆ ಎಳುತ್ತದೆ. [illegible] ಬೋಧಿಸತ್ತ್ವ ನರಭಕ್ಷಕ ಯಕ್ಷನೊಬ್ಬನ ಅಧ್ಯಾತ್ಮಗುರುವಾಗಿ, ಅವನು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವ ಮೂಲಕ ಧರ್ಮದ ಸ್ವರೂಪ ತಿಳಿಸುತ್ತಾನೆ.

[1] M. Winternitz, *History of Indian Literature*, Vol I, p. 183. ಋಗ್ವೇದದಲ್ಲಿ ಬರುವ ಒಗಟುಗಳ ವಿವರಣೆಗೆ [illegible] *The Riddle in Indian Life, Lore and Literature* ಎಂಬ ಗ್ರಂಥದ ಮುನ್ನುಡಿಯನ್ನು ನೋಡಿ.

ಮಹಾಉಮ್ಮಗ ಜಾತಕದಲ್ಲಿ ಸುಮಾರು ಹನ್ನೆರಡು ಒಗಟುಗಳಿವೆ. ಇದೇ ಜಾತಕದಲ್ಲಿ ಹೆಣ್ಣು ಅಥವಾ ಗಂಡನ್ನು ಗೆಲ್ಲುವ ಆಟವನ್ನು ಒಗಟಿವೆ. ಬೋಧಿಸತ್ವ ಹೆಣ್ಣು ಹುಡುಕುತ್ತಿರುತ್ತಾನೆ. ಬಹು ಸುಂದರಿಯಾದ ಅಮರಾ ಎಂಬ ಬಡವಿಯನ್ನು ಸಂಧಿಸುತ್ತಾನೆ. ಮುಷ್ಟಿಭಂಗಿಯ ಮೂಲಕ ಅವಳಿಗೆ ಮದುವೆಯಾಗಿದೆಯೆ ಎಂದು ಪ್ರಶ್ನಿಸುತ್ತಾನೆ. ಅವಳು ಬೆರಳುಗಳನ್ನರಳಿಸಿ ಇಲ್ಲ ಎಂದು ಸೂಚಿಸುತ್ತಾಳೆ. "ನಿನ್ನ ಹೆಸರೇನು?" ಎಂದವನು ಕೇಳುತ್ತಾನೆ.

"ಸಾವಿಲ್ಲದ ಹೆಸರು."

"ಅಂಬಲಿ ಯಾರಿಗೆ ಕೊಂಡೊಯ್ಯುತ್ತೀಯೆ ?"

"ಹಳೆಗಾಲದ ದೇವರುಗಳಿಗೆ" (ತಂದೆತಾಯಿಯರು)

"ನಿಮ್ಮ ತಂದೆಯ ಕೆಲಸ ?"

"ಅವನು ಎರಡನ್ನೊಂದು ಮಾಡುತ್ತಾನೆ."

"ಉಳುತ್ತಾನೆಯೆ ?"

"ಅಹುದು."

"ಎಲ್ಲಿ ಉಳುತ್ತಾನೆ ?"

"ಒಮ್ಮೆ ಹೋಗಲಿಕ್ಕೆ ಹೋದವರು ಮತ್ತೆ ಬಾರದ ಜಾಗ."

"ಶ್ಮಶಾನದ ಬಳಿ ಉಳುತ್ತಿದ್ದಾನೆಯೆ ?"

"ಅಹುದು."

ಪ್ರಶ್ನೋತ್ತರ ರೂಪದ ಧರ್ಮೋಪದೇಶ ಒಗಟುಗಳಿಂದ ತುಂಬಿರುತ್ತದೆ. ಹಿಂದೂ ಬೌದ್ಧರಲ್ಲಿ ಮಾತ್ರವಲ್ಲ ಕ್ರಿಶ್ಚಿಯನ್‌ರಲ್ಲಿಯೂ ಈ ಪದ್ಧತಿ ಉಂಟು. ಸಂಸ್ಕೃತದ ಪ್ರಶ್ನೋತ್ತರ ಮಾಲಿಯ ಕೆಳಗಿನ ಪದ್ಯವನ್ನು ಉದಾಹರಣೆಗಾಗಿ ಲಕ್ಷಿಸಬಹುದು.

ಕೋ ವಾ ದರಿದ್ರೋ ಹಿ ವಿಶಾಲ ತೃಷ್ಣಃ
ಶ್ರೀಮಾನ್ ಚ ಕೋ ಯಸ್ಯ ಸಮಸ್ತತುಷ್ಟಿಃ
ಜೀವನ್ಮೃತಃ ಕಸ್ತು ನಿರುದ್ಯಮೋ ಯಃ
ಕಾ ವಾಸ್ತ್ಯತಿಕ್ ನೀಸಜನೇ ದುರಾಶಾ.

ಇಂಥ ಒಗಟುಗಳು ಸಾಮಾನ್ಯವಾಗಿ ದೈವಶಾಸ್ತ್ರ, ತತ್ವಶಾಸ್ತ್ರ, ಮತೀಯವಿಧಿ ಹಾಗೂ ನೀತ್ಯಾತ್ಮಕವಾದ ವಿಷಯಗಳನ್ನೊಳಗೊಂಡಿರುತ್ತವೆ. ಯಕ್ಷಪ್ರಶ್ನೆಯಂಥ ಸಂವಾದವನ್ನು ಪಾಣಿನಿ 'ಪ್ರಶ್ನಾಖ್ಯಾನ'ವೆಂದು ಕರೆಯುತ್ತಾನೆಂದು ಮಹಾಭಾಗವತರು ಹೇಳುತ್ತಾರೆ.[1] ಕರ್ನಾಟಕದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ರಚಿಸಿದ ಪ್ರಶ್ನೋತ್ತರ ರತ್ನಮಾಲಿಕಾ ಎಂಬ ಗ್ರಂಥ ಟಿಬೆಟ್ ಭಾಷೆಗೂ ತರ್ಜುಮೆಗೊಂಡಿರುವುದು ಪ್ರಖ್ಯಾತವಾಗಿದೆ ಎಂಬುದನ್ನು ನೆನೆಯಬಹುದು.

ವೇದ ಪುರಾಣೇತಿಹಾಸಗಳಲ್ಲಿ ಕಂಡುಬರುವ ಒಗಟುಗಳು ಮನಸ್ಸನ್ನು [illegible]

1 ಅದೇ. ಪು. xxiv

ಪದರು ಪ್ರಜ್ಞಾಪೂರ್ವಕವಾಗಿ ರಚಿಸಿದುವಾದ್ದರಿಂದ ಅವುಗಳನ್ನು ಜಾನಪದ ಒಗಟುಗಳ ಗುಂಪಿಗೆ ಸೇರಿಸಲಾಗದು. ಆದರೆ ಅವುಗಳಿಗೆ ಪ್ರೇರಣೆ ಜಾನಪದ ಒಗಟುಗಳಿಂದ ಬಂದದ್ದೆಂದು ಧಾರಾಳವಾಗಿ ಹೇಳಬಹುದು. ಜಾತಕಾಂತರ್ಗತವಾದ ಒಗಟುಗಳಲ್ಲಿ ಕೆಲವಾದರ ಜಾನಪದ ಒಗಟುಗಳ ಅನುಕರಣವಿದ್ದಿರಬಹುದು. ಇಂಥದೇ ಪ್ರೇರಣೆ ಅನುಕರಣಗಳಿಂದ ಬೆಡಗಿನ ವಚನಗಳು ರಚನೆಯಾಗಿವೆ. ಅಷ್ಟೇ ಅಲ್ಲ, ಈ ಶಿಷ್ಟಪದ ಒಗಟುಗಳು ಜಾನಪದ ಒಗಟುಗಳಷ್ಟು ಜನಪ್ರಿಯವಾದುವಲ್ಲ. ಅವುಗಳು ಅನುಭಾವದ ಆಳದಿಂದ ಬಂದುವಾಗಿದ್ದು ರಹಸ್ಯಜ್ಞಾನವನ್ನು ಒಳಗೊಂಡಿರುವುದರಿಂದ, ಅವು ಉಕ್ಕಿನ ಕಡಲೆಯಾಗುಳಿದಿವೆ. ಪಂಡಿತರಿಗೂ ಅವು ಅರ್ಥವಾಗುವಂತಿಲ್ಲ. ಅಲ್ಲಮ ಅಕ್ಕಮಹಾದೇವಿ ಸರ್ವಜ್ಞ ಮೊದಲಾದ ಅನೇಕ ಶರಣರು ಇಂಥ ಅನೇಕ ವಚನಗಳನ್ನು ರಚಿಸಿದ್ದಾರೆ. ಕಲ್ಲಿನೊಳಗಣ ಸುವರ್ಣ ರೇಖೆಯಂತೆ ಅವುಗಳ ಅರ್ಥಭೇದನ ಕಷ್ಟ. ಉದಾಹರಣೆಗಾಗಿ ಅಲ್ಲಮಪ್ರಭುವಿನ ಒಂದು ವಚನವನ್ನಿಲ್ಲಿ ಉದ್ಧರಿಸಿದೆ:

> ಒಂದು ಕೋಲಿನಲ್ಲಿ ಮೂರುಲೋಕ ಮಡಿಯಿತ್ತು. ಬಿಲ್ಲಿನ ಕೋಪ್ಪ ಹಾರಿ, ನಾರಿ ಸಿಡಿದು, ನಾರಾಯಣನ ತಾಗಿತ್ತು.
>
> ನಾರಾಯಣನ ಹಲ್ಲು ಮುರಿದು, ಬ್ರಹ್ಮನ ಹಣೆ ಒಡೆಯಿತ್ತು. ಹಣೆ ಮುರಿದು, ರುದ್ರನ ಹಣೆಗಣ್ಣಿನ ಕಿಚ್ಚಿನ ಕಣ್ಣಿನಲ್ಲಿ ಬಿದ್ದಿತ್ತು,
>
> ನಷ್ಟವಾಯಿತ್ತು ಗೊಹೇಶ್ವರನ ಶರಣ ಅಲ್ಲಮ ಬದುಕಿದ ಬದುಕು ನಾಮ ನಷ್ಟವಾಯಿತ್ತು.[1]

ಇಂತೆಯೆ 'ಕಂತಿಹಂಪನ ಸಮಸ್ಯೆಗಳು', ಹರಿಹರನ 'ಮುಡಿಗೆಯ ಅಷ್ಟಕ' ಮತ್ತು 'ಕನಕನ ಮುಂಡಿಗೆಗಳು ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾಗಿವೆ. ಸಮಸ್ಯಾಪೂರಣದ ಸವಾಲು ಕಂತಿಹಂಪನ ಸಮಸ್ಯೆಗಳಲ್ಲಿ ಪ್ರಕಟಗೊಂಡಿದೆ:

> **ಪಂಪ:** ದನನಂ ಕಡಿಕಡಿದು ಬಸದಿಗೆಬೞಿಯುತ್ತಿರ್ದರ್

ಅಹಿಂಸಾವ್ರತಿಯಾದ ಜೈನಕವಿ ಹೀಗೆ ಹೇಳಬಹುದೆ ಎಂದು ಯಾರಾದರೂ ಕಳವಳಗೊಳ್ಳಬಹುದು. ಕಂತಿಗೂ ಮೊದಮೊದಲು ಅಚ್ಚರಿಯಾಗಿರಬೇಕು. ಅವಳು ನೀಡಿದ ಉತ್ತರದಿಂದ ಜೈನರು ಸಮಾಧಾನದ ಉಸಿರು ಬಿಡುವಂತಾಗಿದೆ:

> **ಕಂತಿ:** ವನದೊಳಗೆ ಪುಟ್ಟಿ ಬೆಳೆಯುತೆ। ತನಿಗಂಪಂ ಪತ್ತುದೆಸೆಗೆ ಬೀಱುತ್ತಿರ್ಪಾ
> ಘನತರ ಸುರುಚಿರಪಚ್ಚಂ। ದನನಂ ಕಡಿಕಡಿದು ಬಸದಿಗೆಬೞಿಯುತ್ತಿರ್ದರ್

ಕನಕನ ಮುಂಡಿಗೆಗಳಿಗೆ ನಾನತ್ವದ ಪ್ರಸಂಗವೇ ಸಮುಚಿತವಾದ ನಿದರ್ಶನ. ಅವನ ಕೆಲವು ಹಾಡುಗಳಲ್ಲಂತು ಅಧ್ಯಾತ್ಮಿಕ ತತ್ವನಿರೂಪಣೆಗೆ ಸಾಂಕೇತಿಕ ಭಾಷೆ ಬಳಕೆಯಾಗುತ್ತದೆ.

---

[1] ವಚನ ಸಾಹಿತ್ಯ ಸಂಗ್ರಹ, ಸಂ: ಸಂ. ಶಿ. ಭೂಸನೂರ ಮಠ ಅವರು, ಪು. ೫೬೭. ಅಲ್ಲಿಯೇ ಅದರ ಟೀಕು ನೋಡಿ.

ಒಂಬತ್ತು ಹೂವಿಗೆ ಒಂದೇ ನಾಳವು ಚಂದವೂಮೂ ।
ತುಂಬಿ ನಾಳತುದಿ ತುಂಬ ಭಾನುಪ್ರಭೆ ಚಂದವೂಮು ।
ಕಾಲಿಲ್ಲದಾತನು ಹತ್ತಿದನಾ ಮರ ಚಂದವೂಮು ।
ಕೈಯಿಲ್ಲದಾತನು ಕೊಯ್ದನು ಆ ಹಣ್ಣು ಚಂದವೂಮು ।

ಕನಕನ ಸಮಕಾಲೀನರಾದ ಪುರಂದರಾದಿ ದಾಸರೂ ಇಂಥ ಕೀರ್ತನೆಗಳನ್ನು ಕಟ್ಟಿದ್ದಾರೆ. ಕ್ಷುಲಕ ಭಾಷೆಗಳನ್ನೊಳಗೊಂಡ ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಒಗಟುಗಳು ದೊರೆಯುತ್ತವೆ. ಪಾಮರರಂತೆ ಪಂಡಿತರೂ ಅವುಗಳಿಗೆ ಮಾರುಹೋಗಿದ್ದಾರೆಂಬುವನ್ನು ತೋರಿಸುವುದಕ್ಕೋಸ್ಕರ ಕನ್ನಡದಿಂದ ಕೆಲವು ನಿದರ್ಶನಗಳನ್ನಿಲ್ಲಿ ಉದ್ಧರಿಸಲಾಗಿದೆ.

ಒಗಟು ಇಷ್ಟು ಜನಪ್ರಿಯವಾದರೂ ಅದರ ನಿಷ್ಪತ್ತಿ ಮಾತ್ರ ಸ್ಪಷ್ಟವಾಗಿಲ್ಲ. ಸಂಸ್ಕೃತದಲ್ಲಿ ಅದಕ್ಕೆ ಸಂವಾದಿಯಾಗಿ ಬ್ರಹ್ಮೋದಯ, ಪ್ರಶ್ನೆ ಅಥವಾ ಪ್ರಶ್ನೋತ್ತರ, ಕೂಟ, ಪ್ರವಾಹ್ಲಿಕಾ ಅಥವಾ ಪ್ರಹೇಳಿಕಾ, ವಿವಾದ, ಸಮಸ್ಯಾ, ಗೂಢ, ಹೃದಯಾಲಿಕಾ ಎಂಬ ಮಾತುಗಳಿವೆ. ಇವುಗಳಲ್ಲಿ ಬ್ರಹ್ಮೋದಯ ಬಹುಪ್ರಾಚೀನವಾಗಿದ್ದು, ವೇದಗಳಲ್ಲಿ ಬರುತ್ತದೆ. ಯಜ್ಞಯಾಗಾದಿಗಳ ಸಂದರ್ಭದಲ್ಲಿ ಧಾರ್ಮಿಕವಿಧಿ ಅಥವಾ ದೈವಶಾಸ್ತ್ರಕ್ಕೆ ಸಂಬಂಧಿಸಿದಂತೆ ನಡೆಯುವ ಪ್ರಶ್ನೋತ್ತರ ರೂಪದ ಸಂಗತಿಗೆ ಬ್ರಹ್ಮೋದಯ ಎಂದು ಹೆಸರುಂಟು. ಅಶ್ವಮೇಧಯಾಗದಲ್ಲಿ ಕುದುರೆಯನ್ನು ಕಡಿಯುವ ಮುನ್ನ ಹೋತ್ರಿ ಮತ್ತು ಬ್ರಾಹ್ಮಣರು ಉಪಾಸನಾ ವಿಧಿಗಳ ಅಂಗವಾಗಿ ಏರ್ಪಡಿಸುತ್ತಿದ್ದ ಸಮಸ್ಯಾಪೂರಣ ಕಾರ್ಯಕ್ರಮವನ್ನು ಬ್ರಹ್ಮೋದಯವೆಂದು ಕರೆಯುತ್ತಿದ್ದರು. ಸಂಹಿತಾ ಬ್ರಾಹ್ಮಣ ಮತ್ತು ಕಾರ್ಯಕ್ರಮವನ್ನು ಬ್ರಹ್ಮೋದಯವೆಂದು ಕರೆಯುತ್ತಿದ್ದರು. ಸಂಹಿತಾ ಬ್ರಾಹ್ಮಣ ಮತ್ತು ಉಪನಿಷತ್ತುಗಳಲ್ಲಿಯೂ ಇಂಥ ಸ್ತೋತ್ರಪಾಠಗಳು ಬರುತ್ತವೆ. ಪ್ರವಾಹ್ಲಿಕಾ ಐತರೇಯ ಉಪನಿಷತ್ತುಗಳಲ್ಲಿಯೂ ಇಂಥ ಸ್ತೋತ್ರಪಾಠಗಳು ಬರುತ್ತವೆ. ಪ್ರವಾಹ್ಲಿಕಾ ಐತರೇಯ ಕೌಶೀತಕೀ ಬ್ರಾಹ್ಮಣಗಳಲ್ಲಿಯೂ ಬೃಹದ್ದೇವತಾದಲ್ಲಿಯೂ ಕಂಡುಬಂದಿದೆ. ಮಹಾ ಕೌಶೀತಕೀ ಬ್ರಾಹ್ಮಣಗಳಲ್ಲಿಯೂ ಬೃಹದ್ದೇವತಾದಲ್ಲಿಯೂ ಕಂಡುಬಂದಿದೆ. ಮಹಾ ಭಾರತದಲ್ಲಿ ಪ್ರಹೇಲಿಕಾದ ಉಲ್ಲೇಖವಿಲ್ಲ. ದಂಡಿ ತನ್ನ ಕಾವ್ಯಾದರ್ಶದಲ್ಲಿ ಹದಿನಾರು ಬಗೆಯ ಪ್ರಹೇಲಿಕಾಗಳನ್ನು ವಿವರಿಸಿದ್ದಾನೆ. ಕೂಟಕಥಾನಕ ಮತ್ತು ಕಥಾಪ್ರಹೇಲಿಕಾ ಬಗೆಯ ಪ್ರಹೇಲಿಕಾಗಳನ್ನು ವಿವರಿಸಿದ್ದಾನೆ. ಮರಾಠಿಯ ಕಲ್ಗಿ-ತುರಾ ಮತ್ತು ಗಳು ವೇತಾಳ ಪಂಚವಿಂಶತಿಯಲ್ಲಿ ಮೊಗದೋರುತ್ತವೆ. ಮರಾಠಿಯ ಕಲ್ಗಿ-ತುರಾ ಮತ್ತು ಕರ್ನಾಟಕದ ಹರದೇಶಿ–ನಾಗೇಶಿ ಲಾವಣಿಗಳು ಪ್ರಶ್ನೋತ್ತರಗಳಿಗೆ ಸಮನಾದುವು. ಕರ್ನಾಟಕದ ಹರದೇಶಿ–ನಾಗೇಶಿ ಲಾವಣಿಗಳು ಪ್ರಶ್ನೋತ್ತರಗಳಿಗೆ ಸಮನಾದುವು. ಪ್ರಾಕೃತದಲ್ಲಿ ಪ್ರಹೇಲಿಕಾ ಪಹೇಲೀ ಆಗುತ್ತದೆ. ಮರಾಠಿಯಲ್ಲಿ ಉಖಾಣಾ, ಅಹಣಾ, ಉಪಮಾಣ, ಕೊಹಾಡಾ, ಕುಲಂಗಡಿ, ಕೋಡೆ, ಬಯಾಣ ಎಂಬ ಪದಗಳೂ, ಗುಜರಾತಿ ಯಲ್ಲಿ ಉಖಾಣೋ, ಕೊಹ್ಯಾಡೋ, ಅಟಿಯಾಣು ಮತ್ತು ಕೋದು ಎಂಬ ಮಾತು ಯಲ್ಲಿ ಉಖಾಣೋ, ಕೊಹ್ಯಾಡೋ, ಭುಲ್‌ಭುಲಾಯಿಯಾ ಮೊದಲಾದುವೂ ಗಳೂ, ಹಿಂದಿಯಲ್ಲಿ ಪಹೇಲೀ, ಬುಜಾವಲ್, ಭುಲ್‌ಭುಲಾಯಿಯಾ ಮೊದಲಾದುವೂ ಇವೆ. ತಮಿಳಿನಲ್ಲಿ ಪಿಡಿಕಾದಾಯ್ ಮತ್ತು ಪುದುರ್ ಎಂಬ ಪದಗಳೂ ಮಲೆಯಾಳ ದಲ್ಲಿ ವಿಡಿಕದ ಮತ್ತು ಕಟಕದ ಎಂಬ ರೂಪಗಳೂ, ತೆಲುಗಿನಲ್ಲಿ ವಿಡಿಕಥಾ ಮತ್ತು ಪೊಡಪುಕಥಾಲು ಎಂಬ ಮಾತುಗಳೂ ಇವೆ. ಇವನ್ನೆಲ್ಲ ಪರಿಶೀಲಿಸಿದಾಗ ಉತ್ತರ ಭಾರತೀಯ ಭಾಷೆಗಳಲ್ಲಿ ಬರುವ ಮಾತುಗಳಲ್ಲಿ ಹಲವು ಸಂಸ್ಕೃತಜನ್ಯವಾದುವೆಂದು ಸ್ಪಷ್ಟವಾಗುತ್ತದೆ. ಸಂಸ್ಕೃತದ 'ಬೃಹತ್ಕಥಾ' ಪ್ರಾಕೃತದಲ್ಲಿ 'ವಡ್ಡಕಹಾ' ಆಗಿ,

ಅನಂತರ ದಕ್ಷಿಣ ಭಾರತದ ಭಾಷೆಗಳಲ್ಲಿ ಒಡಕಥೆ ಅಥವಾ ಒಗಟು, ವಿಡಿಕಥಾ, ವಿಡಿ ಕಾಪಾಯ್ ಆಗಿ ರೂಪಾಂತರ ಹೊಂದಿರಬೇಕೆಂದು ದುರ್ಗಾಭಾಗವತರು ಸಾಧಿಸಿದ್ದಾರೆ[1] ವಪ್ಪಾಕಹಾದಿಂದ ಒಡಕಥೆ ಬಂದಿರಬಹುದಾದರೂ ಅದಕ್ಕೂ ಒಗಟಿಗೂ ಏನೇನೂ ಸಂಬಂಧವಿಲ್ಲವೆಂದು ಧಾರಾಳವಾಗಿ ಹೇಳಬಹುದು. ತಮಿಳಿನಲ್ಲಿ ಪುದುರ್ ಎಂಬ ಪದವೂ ಇದೆ. ಅದು ಕನ್ನಡದ ಹದಿರಿಗೆ ಸಂವಾದಿಯಾದುದೆಂದು ಹೇಳಬಹುದು.

ದುರ್ಗಾಭಾಗವತರ ಪಟ್ಟಿಯ ಪ್ರಕಾರ ಕನ್ನಡದಲ್ಲಿ ಒಗಣು, ಒಡಗತೆ, ಒಡಕಥೆ, ಪ್ರಹೇಲಿಕೆ, ಸೂಚಿಕಾರ್ಥ, ಮತ್ತು ಒಗಟು ಅಥವಾ ವಗಟುಗಳಿವೆ.[2] ಒಗಣು ಎನ್ನುವ ರೂಪ ತಪ್ಪಿರಬೇಕೆಂದು ತೋರುತ್ತದೆ. ಅದು ಪ್ರಸಿದ್ಧವಾದ ಯಾವ ಕೋಶಗಳಲ್ಲಿಯೂ ಸಿಗುವುದಿಲ್ಲ. ಸೂಚಿಕಾರ್ಥಕತೆ ಒಗಟಿನ ಲಕ್ಷಣಗಳಲ್ಲೊಂದಾದುದರಿಂದ ಆ ಪದ ಒಗಟಿಗೆ ಅನ್ವಯವಾಗಬಹುದಾದರೂ ಆ ಪದಕ್ಕೆ ಸಮಾನಾರ್ಥಕವಾಗಿ ಅದು ಎಲ್ಲಿಯೂ ಬಳಕೆಗೊಂಡಂತಿಲ್ಲ. ಪ್ರಹೇಲಿಕೆ ಪದ ಕಿಟ್ಟೆಲ್ ಕೋಶದಲ್ಲಿದೆ. ಆದರೆ ಅದೂ ವಿಶೇಷವಾಗಿ ಪ್ರಯೋಗದಲ್ಲಿಲ್ಲ. ಒಡಕಥೆ ಮತ್ತು ವಗಟು ರೂಪಗಳು ಕೇವಲ ಪಾಠಾಂತರಗಳಾದುದರಿಂದ ಅವನ್ನು ಲಕ್ಷಿಸಬೇಕಾಗಿಲ್ಲ. ಈ ಪದಗಳನ್ನು ಕಳೆದನಂತರ ಉಳಿಯುವುವು ಒಡಗತೆ ಮತ್ತು ಒಗಟು. ಇವುಗಳ ಜತೆಗೆ ಉತ್ತರ ಕರ್ನಾಟಕದಲ್ಲಿ ಪ್ರಚುರವಾಗಿರುವ ಒಡಪನ್ನೂ ಮುಂಡಿಗೆಯನ್ನೂ ಸೇರಿಸಿಕೊಳ್ಳಬಹುದು. ಮುಂಡು ಅಥವಾ ರುಮಾಲನ್ನೆಸೆದು ಸವಾಲಿಗೆ ಕರೆಯುವ ಅಥವಾ ಪಂಥಾಹ್ವಾನ ನೀಡುವ ರೂಢಿಯಿದ್ದುದರಿಂದ ಮುಂಡಿಗೆ ಎಂಬ ಪದ ಬಂತೆಂದು ಹೇಳುತ್ತಾರೆ. ಅದು ದ್ರಾವಿಡ ಭಾಷೆಯ ಪದವಿರಬೇಕೆಂದು ತೋರುತ್ತದೆ. ಹಿಂದಿನ ಸಾಹಿತ್ಯದಲ್ಲಿ ಒಡಗತೆ ಎಂಬ ಪದ ಬಳಕೆಯಾದಂತೆ ತೋರುವುದಿಲ್ಲ. ಜತೆಗೆ ಅದೊಂದು ಒಗಟಿನ ಬಗೆಯಾಗುತ್ತದೆಯೇ ಹೊರತು, ಒಗಟಿಗೆ ಪರ್ಯಾಯವಾಗುವುದಿಲ್ಲ. ಭೇದಿಸು ಎನ್ನುವ ಅರ್ಥದಲ್ಲಿ ಒಡೆ ಎಂಬ ಧಾತುವಿಂದ 'ಒಡಪು' ಪದ ಬಂದಿರಬೇಕೆಂದು ಊಹಿಸಬಹುದಾದರೂ ತೆಲುಗಿನ ಪೊಡಪು ಕಥಾಲು ಎಂಬ ಪದ ಒಡಪು ಏಕಾಗಿರಬಾರದೆನ್ನುವ ಸಮಸ್ಯೆಯೂ ಕಣೆಗೆದರಿ ನಿಲ್ಲುತ್ತದೆ. ಒಡಪು ಎನ್ನುವ ಪದ ತಕ್ಕಮಟ್ಟಿಗೆ ಹಳೆಯದಾದರೂ (೧೪೩೩)[3] ಒಗಟು ಎನ್ನುವ ಅರ್ಥದಲ್ಲಿ ಅದೆಲ್ಲಿಯೂ ರೂಢಿಯಲ್ಲಿದ್ದಂತೆ ತೋರುವುದಿಲ್ಲ. ಈ ಅರ್ಥದಲ್ಲಿ ಅದು ಇತ್ತೀಚೆಗೆ ಮಾತ್ರ ಚಾಲ್ತಿಯಲ್ಲಿದೆ.

ಇನ್ನುಳಿದುದು ಒಗಟು ಪದ ಒಂದೇ. ಇದು ಪ್ರಾಚೀನ ಕಾಲದಿಂದ ಒಗಟೆ, ಒಗಂಟೆ, ಒಗಟೆ, ಒಗಂಟು, ಒಗಟು ಎಂಬ ಪಾಠಾಂತರಗಳನ್ನು ಹೊಂದಿ ಪ್ರಸಿದ್ಧವಾಗಿದೆ, ಲೋಕಮಾನ್ಯವಾಗಿದೆ. ಇವುಗಳಲ್ಲಿ ಒಗಂಟು ಎನ್ನುವ ಪದವೇ ಅತ್ಯಂತ ಹಳೆಯದು. ನಾಗವರ್ಮನ ಕಾವ್ಯಾವಲೋಕನ (೨೫೫ನೆಯ ಪದ್ಯ) ದಲ್ಲಿ ಈ ಪದ ಬಂದಿದೆ. ಒಗಟೆ ಮೊಟ್ಟಮೊದಲಿಗೆ ಹದಿಮೂರನೆಯ ಶತಮಾನದ ವರಕುಮಾರ ಚರಿತೆಯ(೮–೩೨)ಲ್ಲಿ ಬರು

[1] Durga Bhagwat, *The Riddle in Indian Life, Lore and Literature* : p. 73,
[2] ಅದೇ, ಪು. ೩.
[3] ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಪು. ೧೨೨೬.

ತ್ತದೆ. ಇದಕ್ಕೆ ಸಮಾನವಾದ ಪದ ತುಳು ಬಿಟ್ಟರೆ ಬೇರಾವ ಜ್ಞಾತಿ ಭಾಷೆಗಳಲ್ಲಿಯೂ ಇಲ್ಲ.[1] ಒಗಟು ಒಗಟೆಯಾಗಿ ಓಗಟೆಯಾಗಲು ಸಾಧ್ಯವಿದೆ. ಓಗಟೆಯನ್ನೇ ಆಧಾರ ಪದವಾಗಿಟ್ಟುಕೊಂಡರೆ ನಿಷ್ಪತ್ತಿ ಕಷ್ಟವಾಗುತ್ತದೆ. 'ಒಗೆ' ಎಂಬ ಧಾತುವಿನಿಂದ ಅದು ಹುಟ್ಟಿರಬೇಕೆಂದು ಕೆಲವು ಮಿತ್ರರು[2] ಊಹಿಸಿದ್ದಾರೆ. ಆದರೆ ಒಗಟಿನ ಸ್ವರೂಪಲಕ್ಷಣಗಳಿಗೂ 'ಒಗೆ' ಸೂಚಿಸುವ ಅರ್ಥಕ್ಕೂ ಏನೇನೂ ಸಂಬಂಧವಿರುವಂತೆ ತೋರುವುದಿಲ್ಲ. ಮೂಲಪದದ ಅರ್ಥ ಒಂದಾಗಿ ನಿಷ್ಪನ್ನಪದ ತದ್ವಿರುದ್ಧಾರ್ಥದಲ್ಲಿ ಮೊಗದೋರುವಂಥ ಸಂದರ್ಭಗಳು ಭಾಷಾಚರಿತ್ರೆಯಲ್ಲಿ ಅಪರೂಪವೇನಲ್ಲ. ಆದರೆ ಅವಸರವಾಗಿ ನಿಷ್ಪತ್ತಿ ಹೇಳುವಂಥ ಪದವಲ್ಲ ಇದು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು[3] ಸಹ ಈ ಬಗ್ಗೆ ಮೌನ ತಾಳಿದೆ. 'ಒಗಟಾಗು' ಎನ್ನುವ ಪದಸಮುಚ್ಚಯಕ್ಕೆ ಅರ್ಥ ಹೇಳುವಾಗ 'ಸಮಸ್ಯೆಯಾಗು, ಕಗ್ಗಂಟಾಗು' ಎಂದು ಬರೆದಿದೆ. ಈ 'ಗಂಟು' ಮತ್ತು 'ಒಗಂಟು' ಗಳಿಗೇನಾದರೂ ನಂಟುಂಟೆ ಎಂದು ಪರಾಮರ್ಶಿಸಬೇಕಾಗಿದೆ. ಒಗ್ + ಗಂಟು > ಒಗ್ಗಂಟು > ಒಗಂಟು > ಒಗಂಟು > ಒಗಟು ಏಕಾಗಬಾರದು? ಗಂಟು ಮೂಲಪದವಾದರೆ ಬಿಂದುಲೋಪದ ಸಮಸ್ಯೆಯನ್ನು ಬಿಡಿಸುವುದು ಹೇಗೆ? ಮೂಲಪದದ ಬಿಂದುಗಳು ಉದುರಿಹೋಗುತ್ತವೆನ್ನುವುದಕ್ಕೆ ಕೇಶಿರಾಜನಿಂದ ಉದಾಹರಣೆಗಳನ್ನು ಉದ್ಧರಿಸಬಹುದು: ಕಜ್ಜುಂಕೆ > ಕಜ್ಜುಗೆ, ಕದಂಪು > ಕದಪು; ಇಜ್ಜುಂಪೆ > ಇಜ್ಜುಪೆ ಇತ್ಯಾದಿ. ಅಷ್ಟೇ ಅಲ್ಲ ಅವನು ಹೇಳಿದ ನಿತ್ಯಬಿಂದುಕಗಳೆಲ್ಲ ಈಗ ಅಬಿಂದುಕಗಳಾಗಿವೆ: ಬೇಂಟೆ > ಬೇಟೆ; ಮೇಂಟಿ > ಮೇಟಿ, ತೋಂಟ > ತೋಟ, ಮಾಂಟು > ಮಾಟು ಇತ್ಯಾದಿ.[4] ದ್ವ್ಯಕ್ಷರ ಪದಗಳ ಬಿಂದುಗಳೇ ಹಾರಿಹೋಗಿರುವಾಗ 'ಒಗಂಟು'ವಿನಂಥ ಅನೇಕಾಕ್ಷರ ಪದದ ಬಿಂದು ಓಡಿಹೋದರೆ ತಪ್ಪಾಗುವುದಿಲ್ಲ. ತೆಲುಗಿನಲ್ಲಿ 'ಒಗ್ಗು' ಎನ್ನುವ ಒಂದು ಪದವಿದೆ. ಅದಕ್ಕೆ 'to lay trap, net, lay a wager' ಎಂಬ ಅರ್ಥಗಳಿವೆ.[5] ತುಳು ಭಾಷೆಯಲ್ಲಿಯೂ ಆ ಪದಕ್ಕೆ ಅದೇ ಅರ್ಥವಿದೆ. ಕನ್ನಡದ 'ಬಾಗು' (to be crooked, bent, distorted) ಮತ್ತು 'ಒಗ್ಗು' (to bend, bow, turn towards)[6] ಎಂಬ ಪದಗಳಿಗೂ ತೆಲುಗಿನ 'ಒಗ್ಗು' ಪದಕ್ಕೂ ಸಂಬಂಧವನ್ನು ಸ್ಥಾಪಿಸಲಾಗಿದೆ. ಇದಕ್ಕೂ 'ಒಗಟು'ವಿಗೂ ನಂಟುಗಂಟು ಹಾಕುವುದು ಸಾಧ್ಯವೇ ನೋಡಬೇಕು. ಆಗ ಒಗ್ಗು + ಟು > ಒಗುಟು > ಒಗಟು ಎಂದಾಗಬೇಕು. ಒಗಟು ಪದ ಮೊದಲು ಅಬಿಂದುಕ

---

1 T. Burrow and M. B. Emeneau; *A Dravidian Etymological Dictionary*, p. 69.

2 ಕನ್ನಡ ಒಗಟುಗಳು: ಜೀ.ಶಂ. ಪರಮಶಿವಯ್ಯ; ಪು. ೬೦. (ಸಿ.ಪಿ.ಕೆ.ಯವರು ಬರೆದಿರುವ ಪ್ರಸ್ತಾವನೆಯಲ್ಲಿ ಈ ಪ್ರಸ್ತಾಪವಿದೆ.)

3 ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಪು. [illegible].

4 ಶಬ್ದಮಣಿದರ್ಪಣಂ: ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಣ ([illegible]). ಪು. [illegible].

5 *DED*, p. 69.

6 Ibid, p. 54.

ವಾಗಿತ್ತೆಂಬುದನ್ನು ಮರೆಯುವಂತಿಲ್ಲ. ಇದರ ಪ್ರಕಾರ ಅದು ಅಬಿಂದುಕವಾಗಬೇಕು. ಅಷ್ಟೇ ಅಲ್ಲ, ಭಾಷಾಶಾಸ್ತ್ರ ರೀತಿಯಾಗಿ ಒಗ್ಗು + ಟು > ಒಗಟುಗಳ ನಿಷ್ಪತ್ತಿಯನ್ನೊಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಅಂತು 'ಒಗಟು' ಪದದ ಹುಟ್ಟು ಒಗಟಾಗಿಯೇ ಉಳಿಯುತ್ತದೆ.

ಒಟ್ಟಿನಲ್ಲಿ ಈ ಪದ ತನ್ನ ಮೂಲವನ್ನು ರಹಸ್ಯವಾಗುಳಿಸಿಕೊಂಡು ತನ್ನ ಪ್ರಧಾನ ಲಕ್ಷಣವನ್ನು ಕಾಯ್ದುಕೊಂಡಿದೆ. ಸಾದೃಶ್ಯ ವೈದೃಶ್ಯಗಳಿಂದ ಕೂಡಿದ, ಗೂಢಾರ್ಥ ನಿಬದ್ಧವಾದ, ಸುಂದರ ಚತುರೋಕ್ತಿಯೇ ಒಗಟು. ಅದು ಜನಾಂಗದ ಬುದ್ಧಿಶಕ್ತಿಯ ಒರೆಗಲ್ಲು, ಪಾಂಡಿತ್ಯದ ಹೆಗ್ಗುರುತು, ವಾಗ್ಮಿತೆಯ ಜಯದುಂದುಭಿ.

೮

ಮಾಟ-ಮಂತ್ರ

ಪುರಾತನ ಪರ್ಷಿಯಾದ ಪುರೋಹಿತನಿಗೆ 'ಮಾಗಿ' ಎಂದು ಹೆಸರು. ಅವನಲ್ಲಿ ಅದ್ಭುತವಾದ ಮಂತ್ರಶಕ್ತಿ ಇತ್ತೆಂದು ಹೇಳಲಾಗಿದೆ. ಆಂಗ್ಲ ಭಾಷೆಯ Magic ಎನ್ನುವ ಮಾತು 'ಮಾಗಿ' ಎಂಬ ಪದದಿಂದ ಬಂದಿದೆ. ಪ್ರಕೃತಿಯನ್ನೂ ಭೂತಪ್ರೇತಾದಿಗಳನ್ನೂ ರಹಸ್ಯ ರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ ಗತಿಯನ್ನು ಮಾರ್ಪಡಿಸಲಾಗುವುದೆಂಬ ಮಿಥ್ಯಾಭಿಪ್ರಾಯವುಳ್ಳ ವಿದ್ಯೆಯೇ Magic ಎಂದು ಅದರ ಅರ್ಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ವಿವರಿಸಿದೆ. ಮಂತ್ರವಿದ್ಯೆ, ಮೋಡಿ, ಮಾಟ, ಇಂದ್ರಜಾಲ, ಯಕ್ಷಿಣಿ, ಕಣ್ಕಟ್ಟು, ಗಾರುಡಿವಿದ್ಯೆ, ಅಭಿಚಾರ, ಬೇಳುವೆ—ಇವೆಲ್ಲ ಸಂವಾದಿ ಪದಗಳೆಂದು ಆ ನಿಘಂಟು ಸೂಚಿಸಿದೆ. ಅನೈಸರ್ಗಿಕ ಅಥವಾ ಅಮಾನುಷ ವಿಧಾನದಲ್ಲಿ ನೈಸರ್ಗಿಕ ವ್ಯಾಪಾರಗಳನ್ನು ನಿಯಂತ್ರಿಸುವ ಕ್ರಿಯೆಯೇ ಮಾಟವೆಂದು ವಿಶ್ವಕೋಶವೊಂದು[1] ತಿಳಿಸುತ್ತದೆ. ಮಾಟದ ವಿಸ್ತರಣವೇ ವಿಜ್ಞಾನವೆಂದೂ, ಅದು ಮತದ ಪಿತಾಮಹ ಸ್ಥಾನದಲ್ಲಿರುವ ಶಕ್ತಿಯೆಂದೂ, ಉದ್ದಿಷ್ಟ ಸಾಧನೆಗಾಗಿ ಮಾಟ ಅಮಾನುಷ ಶಕ್ತಿಗಳನ್ನು ನಿಯಂತ್ರಿಸಿದರೆ, ಮತ ಅವುಗಳನ್ನು ಗೌರವದಿಂದ ಪೂಜಿಸುವುದೆಂದೂ, ತಾಯಿತಿ ಮಂತ್ರ ಹಾಗೂ ಸಾದೃಶ್ಯಾನುಕರಣದ ಮೂಲಕ ಮಾಟ ತನ್ನ ಗುರಿಯನ್ನೀಡೇರಿಸಿಕೊಳ್ಳುತ್ತದೆಂದೂ, ಪ್ರಾಚೀನ ಮಾನವರ ಬದುಕಿನಲ್ಲಿ ಅದು ಮಹತ್ತರವಾದ ಪಾತ್ರ ವಹಿಸುತ್ತಿತ್ತೆಂದೂ, ಇಂದಿನ ಅನೇಕ ನಂಬಿಕೆಗಳು ಪ್ರಾಚೀನಕಾಲದ ವಿಮತೀಯರ ಮೋಡಿಯ ಪಳೆಯುಳಿಕೆಗಳೆಂದೂ ಅದೇ ವಿಶ್ವಕೋಶ ವಿವರಿಸುತ್ತದೆ. ಪಿಶಾಚಿಗಳ ಸಹಾಯದಿಂದ ನಡೆಸುವ ಕೆಡಕುಮಾಟವನ್ನೂ, ದೇವತೆಗಳ ಸಹಾಯದಿಂದ ನಡೆಸುವ ಒಳ್ಳೆಯ ಮಾಟವನ್ನೂ, ಯಾವ ವ್ಯಕ್ತಿಯ ಸಹಾಯವೂ ಇಲ್ಲದೆ ನಡೆಸುವ ಸಹಜಮಾಟವನ್ನೂ ಪೂರ್ವೋಕ್ತ ನಿಘಂಟು ಉಲ್ಲೇಖಿಸುತ್ತದೆ. ಮಾಟ ಎನ್ನುವುದರ ಸಮಾನ ಪದಗಳ ಸಂಖ್ಯೆಯನ್ನು ಗಮನಿಸಿದಾಗ, ಜಗತ್ತಿನ ಈ ಭಾಗದಲ್ಲಿ ಅದರ ಜನಪ್ರಿಯತೆಯ ಆಧಿಕ್ಯ ಅಭಿವ್ಯಕ್ತವಾಗುತ್ತದೆ. ಮಾಡಿದ್ದು ಅಥವಾ ಮಾಡಿಸಿದ್ದು ಮಾಟ. ಕೆಲವು ಕಡೆ ಈ ಪದಕ್ಕೆ ಬದಲಾಗಿ ಹಿಂದೂಸ್ತಾನಿಯ ಜಾದೂಗಾರಿ ಎಂಬ ಪದವನ್ನು ಬಳಸುವುದುಂಟು.

---

1 *The Columbia Viking Desk Encyclopaedia*, Ed by William Bridgwater, p. 1084.

17

ವಿಜ್ಞಾನದ ತಳಹದಿ ತರ್ಕ. ಬಾಹ್ಯಪ್ರಪಂಚದ ಸಂಗತಿಗಳನ್ನು ಕಾರ್ಯಕಾರಣ ಸಂಬಂಧ ನಿಯಮಗಳಿಗನುಗುಣವಾಗಿ ಸಂಘಟನೆಗೊಳಿಸುವ ಮಾನವನ ಮತಿಶಕ್ತಿಗೆ ತರ್ಕವೆಂದು ಹೆಸರು. ವೀಕ್ಷಣೆ, ಆಧಾರಕಲ್ಪನೆ ಮತ್ತು ಪ್ರಯೋಗಗಳು ವಿಜ್ಞಾನ ನಡೆಯುವ ಮಾರ್ಗ. ತರ್ಕಬದ್ಧವಲ್ಲದ್ದು ವಿಜ್ಞಾನವಲ್ಲ. ಮಾಟಕ್ಕೂ ತರ್ಕವೇ ನೆಲಗಟ್ಟು. ತಾರ್ಕಿಕ ಹಿನ್ನೆಲೆಯ ದೃಷ್ಟಿಯಿಂದ ಮಾಟ ಮತ್ತು ವಿಜ್ಞಾನಗಳೆರಡೂ ಸಮಾನಧರ್ಮಿಗಳೆಂದು ಹೇಳಬಹುದು. ಆದರೆ ಮಾಟದಲ್ಲಿ ಕಾಣುವ ತರ್ಕ ದೋಷಪೂರಿತವಾದದ್ದು. ಕರಾರುವಾಕ್ಕಾದ ವೀಕ್ಷಣೆ ಮತ್ತುಪ್ರಯೋಗಗಳಿಂದ ಇಲ್ಲಿಯಕಾರ್ಯಕಾರಣಸಂಬಂಧ ಸಿದ್ಧವಾದದ್ದಲ್ಲ. ಈಕಾರ್ಯಕಾರಣ ತತ್ವದಲ್ಲಿ ನಾಲ್ಕು ಪರಿಕರಗಳಿವೆ. ಪ್ರತಿಯೊಂದು ಘಟನೆಗೂ ಒಂದು ಕಾರಣವುಂಟು; ಕಾರ್ಯಕಾರಣ ಸಂಬಂಧ ಏಕರೀತಿಯಾದದ್ದು; ಕಾರ್ಯದ ಅನಿವಾರ್ಯಗುಣಗಳ ಸಮೂಹವೇ ಕಾರಣ; ಕಾರಣ ಕಾರ್ಯಪ್ರಮಾಣಕ್ಕನುಗುಣವಾಗಿರುತ್ತದೆ. ಪ್ರತಿಯೊಬ್ಬ ವಿಜ್ಞಾನಿಯೂ ಅವಶ್ಯವಾಗಿ ಗಮನಿಸುವ ಲಕ್ಷಣಗಳಿವು. ಆದರೆ ಅವು ಅವನೊಬ್ಬನಿಗೇ ಮೀಸಲಾದುವಲ್ಲ. ಎಲ್ಲ ಕಾಲದ ಜನಸಾಮಾನ್ಯರು ಸಹ ಅದೇ ಧಾಟಿಯಲ್ಲಿ ಆಲೋಚಿಸುತ್ತಾರೆ. ಅದು ಮಾನವನ ಹುಟ್ಟುಗುಣ. ಆದರೆ ವೈಜ್ಞಾನಿಕ ಮತಿಯ ನಿಖರತೆ ಮತ್ತು ನಿರ್ದುಷ್ಟತೆಗಳು ಸಾಧಾರಣ ಮತಿಗಿರುವುದಿಲ್ಲ. ಕಾಕತಾಳೀಯತೆ, ಭ್ರಮೆ, ಸ್ವಪ್ನ, ಗೊಂದಲದ ಹಾಗೂ ವಿಕೃತಗೊಂಡ ನೆನಪುಗಳು, ಹಗಲುಗನಸುಗಳು, ಮತ್ತು ಭಾವೋದ್ರಿಕ್ತತೆಗಳು ತಾರ್ಕಿಕ ಲೋಪದೋಷಗಳಿಗೆ ಕಾರಣವಾಗುತ್ತವೆ. ಪುನರಾವರ್ತನೆಗೊಂಡ ಅನುಭವಗಳಲ್ಲಿ ಸತ್ಯವಿರಬಹುದಾದರೂ ಭಾವಾತ್ಮಕತೆಯ ಪರಿಣಾಮವಾಗಿ ಅವುಗಳಲ್ಲಿ ದೋಷ ನುಸುಳುವ ಸಂಭವವುಂಟು. ಅದೇನೇ ಇರಲಿ, ಮಾಟ ವಿಜ್ಞಾನಕ್ಕಿಂತಲೂ ಬಹುಪ್ರಾಚೀನವಾದುದು. ದೋಷವಿಮುಕ್ತವಾದ ಅಥವಾ ದೋಷಪೂರ್ಣವಾದ ತರ್ಕ ಅದರ ಪ್ರಮುಖ ಲಕ್ಷಣ. ತಾರ್ಕಿಕಪ್ರಜ್ಞೆ ಒಂದಲ್ಲ ಒಂದು ರೀತಿಯಲ್ಲಿ ಆದಿಮಾನವನಲ್ಲಿಯೂ ಇತ್ತು, ಅದು ಮಾನವಸಹಜವಾದ ಗುಣ ಎಂಬ ಸಂಗತಿಗಳಂತು ಸತ್ಯ. ಆದ್ದರಿಂದ ವಿಜ್ಞಾನಕ್ಕೆ ಮಾಟವೇ ಮೂಲ, ಅದು ಪ್ರೇರಕ ಹಾಗೂ ಸ್ಫೂರ್ತಿಶಕ್ತಿ ಎಂದು ಧಾರಾಳವಾಗಿ ಹೇಳಬಹುದು.

ಆದಿಮಾನವ ನೈಸರ್ಗಿಕ ವ್ಯಾಪಾರಗಳನ್ನು ಭಯವಿಸ್ಮಯಗಳಿಂದ ನೋಡಿದ್ದುಂಟು. ಅವನು ಸಿಡಿಲು ಗುಡುಗು ಬಿರುಗಾಳಿಗಳಿಗೆ ಹೆದರಿದ; ಮರ ಮುರಿದ ಸದ್ದಿಗೆ ಹೆದರಿದ; ರೋಗರುಜಿನಗಳಿಗೆ ತಲ್ಲಣಿಸಿದ. ಕತ್ತಲೆಯಲ್ಲಿ ಹೋಗುತ್ತಿದ್ದಾಗ ದಾರಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಯಾರೋ ಓಡಿಹೋದ ಸಪ್ಪಳ ಕೇಳಿಸಿತು. ಬೆರಗಾಗಿ ನಿಂತು ನೋಡಿದ. ಯಾರೂ ಕಾಣಿಸಲಿಲ್ಲ. ಅದು ಆಕಾರವಿಲ್ಲದ ಶಕ್ತಿಯಿರಬೇಕೆಂದು ಭ್ರಮಿಸಿದ. ಮತ್ತೊಮ್ಮೆ ನಸುಕಿನಲ್ಲಿ ದೈತ್ಯಾಕಾರದ ಬಂಡೆ ನೋಡಿದ. ತಲೆ ಕೆದರಿಕೊಂಡು, ಭೂಮ್ಯಾಕಾಶಗಳನ್ನೊಂದು ಮಾಡಿದಂತೆ ನಿಂತಿತ್ತು. ಆ ವಿಚಿತ್ರ ವಸ್ತುವನ್ನು ನೋಡಿದ ಕೂಡಲೇ ಜೀವ ಜಗ್ಗೆಂದಿತು; ಗುಡಿಸಿಲಿಗೆ ಮರಳುವ ವೇಳೆಗೆ ವಾಂತಿಭೇದಿ ಆಯಿತು. ಕೆಲದಿನಗಳಲ್ಲಿ ಅವನು ನೆಗೆದುಬಿದ್ದ. ನೆರೆಯವನಿಗೂ ಅಂಥವೇ ಅನುಭವ

ವಾಯಿತು. ಹೇಗೋ ಹುಷಾರಾದ. ಆ ಬಂಡೆಯಲ್ಲಿ ಯಾವುದೋ ದುಷ್ಟಶಕ್ತಿಯನ್ನು ಕಂಡ. ಆಮೇಲೆ ಪ್ರತಿಯೊಂದು ವಸ್ತುವಿನಲ್ಲಿ ಹಾಗೂ ನೈಸರ್ಗಿಕ ವ್ಯಾಪಾರಗಳಲ್ಲಿ ಅಗೋಚರಶಕ್ತಿಯ ಕೈವಾಡವನ್ನು ಊಹಿಸಿದ. ಅದೇನಿರಬಹುದೆಂದು [illegible] ತಾನೆ ಪ್ರಶ್ನಿಸಿಕೊಂಡ. ಪ್ರಶ್ನೆ ಮತ್ತು ಆಶ್ಚರ್ಯಗಳ ನಡುವೆ ಅವನ ಮನಸ್ಸು ಮುಗ್ಗರಿಸಿತು. ಸರಿಯೋ ತಪ್ಪೋ, ಅವನಿಗೊಂದು ಉತ್ತರ ಕೂಡಲೇ ಬೇಕಾಗಿತ್ತು. ಮನೋವೇಗದಲ್ಲಿ ಊಹೆ ಕೆಲಸಮಾಡಿತು. ಎಲ್ಲೆಲ್ಲಿಯೂ ಅಗೋಚರವಾದ ಚೇತನ ಕಾಣಿಸಿತು. ಅದನ್ನು ನಿಯಂತ್ರಿಸದಿದ್ದರೆ ತಾನು ಭೂಮಿಯ ಮೇಲೆ ಉಳಿಯುವುದಿಲ್ಲ, ತನ್ನ ವಂಶವೇ ನಿರ್ನಾಮವಾಗುತ್ತದೆ ಎಂದು ಬಗೆದ. ಅವನಿಗೊಂದು ಉಪಾಯ ಹೊಳೆಯಿತು. ಅದರ ಬೆನ್ನೇರಿ ಹೊರಟಾಗ ಯಶಸ್ಸು ಪ್ರಾಪ್ತವಾಯಿತು. ಅವನಿಗೆ ತುಸು ಧೈರ್ಯ ಬಂತು. ಅಲ್ಲಿಂದಾಚೆಗೆ ಅವನು ತೀವ್ರಗತಿಯಿಂದ ಸಾಗಿದ. ಕೆಲವು ಉಪಾಯ ಪರಿಣಾಮಕಾರಿಯಾದುವು, ಹಲವು ಅಪಾಯಕಾರಿಯಾದುವು. ಒಮ್ಮೆ ಅಪಾಯಕಾರಿಯಾದದ್ದು ಮತ್ತೊಮ್ಮೆ ನಿರುಪದ್ರವಿಯಾಗುತ್ತದೆಂದು ಅವನ ಪಕ್ಷಪಾತ ಮನೋಭಾವಕ್ಕೆ ಹೊಳೆಯಿತು. ತನ್ನ ಕಲ್ಪನೆ ಊಹೆ ಭಾವನೆಗಳನ್ನು ಅನುಸಂಧಾನಗೈದಾಗ ಮಾಟ ಹುಟ್ಟಿತು.

ಮಾಟಕ್ಕೆ ಸಂಬಂಧಿಸಿದ ಆಲೋಚನಾ ಸಮುದಾಯವನ್ನೂ ತರ್ಕವನ್ನೂ ವಿಶ್ಲೇಷಿಸಿದಾಗ ಎರಡು ತತ್ವಗಳು ಅಭಿವ್ಯಕ್ತಗೊಳ್ಳುತ್ತವೆ. ಸಾದೃಶ್ಯದಿಂದ ಸಾದೃಶ್ಯ ಮೂಡುತ್ತದೆ ಅಥವಾ ಕಾರ್ಯಕಾರಣವನ್ನು ಹೋಲುತ್ತದೆ ಎಂಬುದೊಂದು. ರಾಮು ಭೀಮು ಇಬ್ಬರೂ ಶತ್ರುಗಳೆಂದಿಟ್ಟುಕೊಳ್ಳೋಣ. ರಾಮು ಭೀಮನನ್ನು ಸಂಹರಿಸಬೇಕೆಂದು ಮಾಟ ಮಾಡಿಸುತ್ತಾನೆ. ಮಾಟಗಾರನಿಗೆ ಭೀಮನ ಉಗುರೋ ಕೂದಲೋ ಸಿಕ್ಕಿತೆಂದರೆ, ಮಣ್ಣಿನಲ್ಲಿ ಅವನ ಪ್ರತಿಮೆಯನ್ನು ಮಾಡಿಸಿ, ಉಗುರು ಕೂದಲುಗಳನ್ನಂಟಿಸಿ, ಭೀಮನೆಂದೇ ಭಾವಿಸಿಕೊಂಡು ಮಂತ್ರ ಹೇಳುತ್ತ, ಆ ಪ್ರತಿಮೆಗೆ ಚಿತ್ರಹಿಂಸೆ ಕೊಡುತ್ತಾನೆ. ಪ್ರತಿಮೆಗಾಗುವ ಹಿಂಸೆ ಜೀವಿತ ವ್ಯಕ್ತಿಗೂ ತಗಲುತ್ತದೆನ್ನುವ ತರ್ಕ ಮಂತ್ರವಾದಿಯದು. ಹಿಂಸೆ ಕೊಟ್ಟು ಕೊಟ್ಟು ಕೊನೆಗೆ ಅದನ್ನು ಕತ್ತರಿಸುತ್ತಾನೆ. ಆಗ ಶತ್ರುವೂ ನಿರ್ನಾಮನಾದನೆಂದೇ ಅವನ ಲೆಕ್ಕ. ಮಳೆ ಬೇಕಾಯಿತೆನ್ನಿ. ಕೆರೆಯ ನೀರನ್ನು ಬಿಂದಿಗೆಗೆ ತುಂಬಿಕೊಂಡು ಚೆಲ್ಲಬೇಕು. ಮಳೆಯನ್ನನುಕರಿಸುವುದರಿಂದ ಮಳೆ ಬರುತ್ತದೆನ್ನುವ ನಂಬಿಕೆಯೇ ಈ ತತ್ವದ ಹಿನ್ನೆಲೆಯಲ್ಲಿರುವ ತರ್ಕ. ಇದನ್ನು ಸಾದೃಶ್ಯ ಮೂಲಮಾಟ ಅಥವಾ ಅನುಕರಣ ಮಾಟವೆಂದು ಕರೆಯುತ್ತಾರೆ. ಮೂಲವಸ್ತುವಿಗೆ ಸಂಬಂಧಿಸಿದ ಒಂದು ಭಾಗ ಅದರಿಂದ ಅಗಲಿತೆಂದಿಟ್ಟುಕೊಳ್ಳೋಣ. ಆ ಭಾಗಕ್ಕೊದಗಬಹುದಾದ ಹಾನಿವೃದ್ಧಿಗಳು ಮೂಲದಮೇಲೆ ಪರಿಣಾಮವುಂಟುಮಾಡುತ್ತವೆ. ಪೂರ್ವ ಆಫ್ರಿಕೆಯ ಕುರುಬರು ಮತ್ತು ಪ್ರಾಚೀನ ಇಸ್ರೇಲಿ ಜನ ಹಸುವಿನ ಹಾಲು ಕಾಯಿಸುತ್ತಿರಲಿಲ್ಲ. ಹಾಲು ಕುದಿಸಿದರೆ ಹಸುವಿಗೆ ತೊಂದರೆಯಾಗುತ್ತದೆಂದು ಅವರು ನಂಬಿಕೊಂಡಿದ್ದರು. ಆ ಹಾಲು ಹಿಂದೆ ಹಸುವಿನ ಒಂದು ಭಾಗವಾಗಿತ್ತಷ್ಟೆ. ಅದು ದೂರ ಸರಿದರೂ, ಅವುಗಳ ಬಾಂಧವ್ಯ ಹರಿದುಹೋಗುವುದಿಲ್ಲವೆಂಬುದು ಅವರ ವಾದ. ಇದನ್ನು ಸಂಸರ್ಗೀಯ ಅಥವಾ ಸೋಂಕು

ಮಾಟವೆಂದು ಹೆಸರಿಸಬಹುದು.[1] ಎರಡು ವಸ್ತುಗಳ ಭೌತಿಕ ಸಂಬಂಧ ಹರಿದುಹೋಗಿ ಅವು ದೂರ ಸರಿದಾಗಲೂ ಅವುಗಳ ಸಂಸರ್ಗಕ್ಕೆ ಹಾನಿಯೊದಗುವುದಿಲ್ಲ, ಅವುಗಳ ಪರಸ್ಪರ ಪ್ರಭಾವ ಅನಿವಾರ್ಯವಾದದ್ದೆನ್ನುವ ತರ್ಕ ಈ ತತ್ವಕ್ಕೆ ಊಡು. ಇಲ್ಲೆಲ್ಲ ದೂರ ಮನಸ್ಪರ್ಶನ ತತ್ವ ಕೆಲಸ ಮಾಡುತ್ತದೆಂಬ ಭ್ರಮೆಯೂ ಇದ್ದಿರಬೇಕು.

ಪರಸ್ಪರ ಹೋಲುವ ವಸ್ತುಗಳು ಒಂದೇ ಎಂಬ ಭಾವನೆ ಸಾದೃಶ್ಯ ಮೂಲ ಮಾಟದ ರಹಸ್ಯ; ಒಮ್ಮೆ ಸಾಹಚರ್ಯ ಸಂಬಂಧ ಹೊಂದಿರುವ ವಸ್ತುಗಳು ಸದಾ ಅದೇ ಸಂಬಂಧ ಹೊಂದಿರುತ್ತವೆನ್ನುವ ವಾದ ಸಂಸರ್ಗ ಮೂಲ ಮಾಟದ ಗುಟ್ಟು. ತಾತ್ವಿಕವಾಗಿ ಅವೆರಡು ಪ್ರತ್ಯೇಕವಾಗಿ ಕಂಡರೂ, ಪ್ರಾಯೋಗಿಕವಾಗಿ ಅವುಗಳ ವ್ಯತ್ಯಾಸ ತೀರ ತೆಳುವಾದದ್ದು. ಸಾದೃಶ್ಯ ತತ್ವದ ಪ್ರಕಾರ, ಒಂದು ವಸ್ತುವನ್ನು ನೋಡಿದಾಗ, ಅಂಥದೇ ಮತ್ತೊಂದು ವಸ್ತುವಿನ ನೆನಪಾಗುತ್ತದೆ. ಭಾವನೆಗಳ ಸಾಹಚರ್ಯ ಅಥವಾ ಬಾಂಧವ್ಯವೇ ಇದಕ್ಕೆ ಕಾರಣ. ವಿದೇಶಯಾತ್ರೆಯಲ್ಲಿರುವ ವ್ಯಕ್ತಿ ಅಲ್ಲಿಯ ವಿಶ್ವವಿದ್ಯಾನಿಲಯವನ್ನು ನೋಡಿದಾಗ ತನ್ನ ವಿಶ್ವವಿದ್ಯಾನಿಲಯದ ಚಿತ್ರ ಕಣ್ಮುಂದೆ ನಿಂತಂತಾಗುತ್ತದೆ; ಸ್ಮೃತಿದೃಶ್ಯಗಳನ್ನು ದೃಕ್‌ದೃಶ್ಯಗಳೊಡನೆ ಹೋಲಿಸಿಕೊಳ್ಳುತ್ತಾನೆ. ಇಂಥ ಭಾವ ಬಾಂಧವ್ಯ ಮಾನವನ ಸಹಜ ಲಕ್ಷಣ. ಹಿಂದೆಂದೋ ಎರಡು ವಸ್ತುಗಳನ್ನು ನೋಡಿದ್ದು, ಮತ್ತೆ ಅವುಗಳಲ್ಲೊಂದನ್ನು ನೋಡಿದ್ದಾದರೆ ಮತ್ತೊಂದರ ನೆನಪು ಕೂಡಲೇ ಸ್ಫುರಿಸುವುದುಂಟು. ಹಗೆಯ ನೆನಪು ಬಂದಾಗ ಅವನ ಹೆಜ್ಜೆಗುರುತೋ, ಅವನ ಲೇಖನಿಯೋ, ವಾಹನವೋ ಸ್ಮೃತಿಪಥಕ್ಕೆ ಬರುತ್ತವೆ; ಅಂತೆಯೇ ಅವನ ಹೆಜ್ಜೆಯನ್ನೋ ಲೇಖನಿಯನ್ನೋ ನೋಡಿದಾಗ ಅವನ ಆಕೃತಿ ಸ್ಮರಣೆಗೆ ಬರುತ್ತದೆ. ಮೊದಲನೆಯದರಲ್ಲಿ ಸಾದೃಶ್ಯ ಮುಖ್ಯ; ಎರಡನೆಯದರಲ್ಲಿ ಸಂಸರ್ಗ ಮುಖ್ಯ. ಪ್ರತ್ಯಕ್ಷ ವಸ್ತುವಿಗೆಸಗುವ ಅಭಿಚಾರ ಪರೋಕ್ಷವಾಗಿ ದೂರದಲ್ಲಿರುವ ವ್ಯಕ್ತಿಗೆ ತಟ್ಟುತ್ತದೆ. ಅದು ಪ್ರಸರಿಸುವ ಪ್ರಣಾಳಿಕೆ ಮಾತ್ರ ಅಗೋಚರ, ಅಗ್ರಾಹ್ಯ. ಅದೇನೇ ಇರಲಿ, ಈ ಎರಡು ವಿಧವಾದ ಮಾಟಗಳಲ್ಲಿ ಸಮಾನ ಗುಣಧರ್ಮಗಳಿರುವುದರಿಂದ, ಅವೆರಡಕ್ಕೂ ಅನ್ವಯವಾಗುವಂಥ ಒಂದು ಹೆಸರು ಆವಶ್ಯಕ. ಅದನ್ನು ಅನುವೇದನ ಮೂಲ ಮಾಟವೆಂದು ಕರೆದಿವೆ. ಆಗ ಸಾದೃಶ್ಯ

[1] Alexander H. Krappe ಎಂಬ ವಿದ್ವಾಂಸರು ತಮ್ಮ *The Science of Folklore* ಎಂಬ
ಗ್ರಂಥದಲ್ಲಿ ಮಾಟದ ಎರಡು ವಿಭಾಗಗಳನ್ನು ಗುರುತಿಸಿ, ಮೊದಲನೆಯದನ್ನು Sympathetic
magic ಎಂದೂ, ಎರಡನೆಯದನ್ನು Homeopathic magic ಎಂದೂ ಹೆಸರಿಸುತ್ತಾರೆ. Sympa-
thetic magic ಬಗ್ಗೆ ಹೀಗೆ ಬರೆಯುತ್ತಾರೆ: "Its logic assumes the continuance of a
relationship that has in fact ceased". ಎರಡನೆಯದರ ವಿಷಯದಲ್ಲಿ "Its logic may
rendered by the latin proverb Similia Simlibus" ಎಂದು ನಿರೂಪಿಸುತ್ತಾರೆ. ಫ್ರೇಜರ್
ಪ್ರಕಾರ ಇವರ Sympathetic magic ಎನ್ನುವುದು contagious magic ಆಗುತ್ತವೆ;
Sympathetic magic ಎರಡಕ್ಕೂ ಸಮಾನವಾಗಿ ಅನ್ವಯವಾಗುವ ಸಾಮಾನ್ಯ ವಾಚಕವಾಗು
ತ್ತದೆ. ಅವನ ದೃಷ್ಟಿಯಲ್ಲಿಯೂ ಎರಡು ಪ್ರಕಾರಗಳಿಗಿರುವ ವ್ಯತ್ಯಾಸ ತುಂಬ ಸೂಕ್ಷ್ಮವಾದುದು.
ಒಮ್ಮೊಮ್ಮೆ ಅವುಗಳ ಸಮಾನಧರ್ಮ ಕಾರಣವಾಗಿ ಎರಡೂ ಒಂದೆಯೋ ಎನ್ನಿಸುತ್ತವೆ.

ಮೂಲ ಮತ್ತು ಸಂಸರ್ಗೀಯ ಮಾಟಗಳು ಅವರ ಶಾಖೆಗಳೆಂದಾಗುತ್ತವೆ.

ಮಾಟದ ಜಗತ್ತಿನಲ್ಲಿ ಪುನರಾವರ್ತನೆಯ ತತ್ವವೂ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದೆ. ಒಬ್ಬ ಬೇಟೆಗಾರ ಕಾಡಿಗೆ ಹೋಗುತ್ತಾನೆ. ಚಿರತೆ ಎದುರಾಗುತ್ತದೆ. ಚಿರತೆಯ ಕಣ್ಣಿಗೆ ಬಿದ್ದವರು ಯಾರೂ ಬದುಕಿಲ್ಲವೆಂಬುದು ಆತನಿಗೆ ಗೊತ್ತು. ಅಂದು ಅದು ಏಕೋ ಬೆದರಿದಂತೆ ಓಡಿಹೋಗುತ್ತದೆ. ಅವನಿಗೆ ಅಚ್ಚರಿಯಾಗುತ್ತದೆ. ಅವನ ತೋಳಿನಲ್ಲಿ ಎಂದೋ ಅಪ್ಪ ಕಟ್ಟಿಸಿದ ತಾಯಿತಿ ಇದೆ. ಅದರ ಪ್ರಭಾವದಿಂದಾಗಿ ತಾನು ಚಿರತೆಯಿಂದ ಪಾರಾದುದಾಗಿ ತಿಳಿಯುತ್ತಾನೆ. ಮುಂದಿನ ಶುಭಗಳಿಗೆಲ್ಲ ಅದನ್ನೇ ಈಡು ಮಾಡುತ್ತಾನೆ. ಅವನ ಬಂಧುಬಳಗ ಸಹ ಅಂಥ ತಾಯಿತಿಯನ್ನು ಕಟ್ಟಿಕೊಳ್ಳುತ್ತಾರೆ.

ಪೂರ್ವೋಕ್ತ ತತ್ವಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಎಷ್ಟರ ಮಟ್ಟಿಗೆ ಚಾಲ್ತಿಯಲ್ಲಿದ್ದುವು, ಎಷ್ಟರಮಟ್ಟಿಗೆ ಜನಜೀವನದ ಮೇಲೆ ಪ್ರಭಾವ ಬೀರುತ್ತಿದ್ದುವೆನ್ನುವುದನ್ನು ಲಕ್ಷಿಸಬೇಕಾಗಿದೆ. ಅಮೆರಿಕೆಯ ಇಂಡಿಯನ್ ತನ್ನ ಹಗೆಯನ್ನು ಕೊಲ್ಲಬೇಕೆಂದು ನಿಶ್ಚಯಿಸಿಕೊಂಡಾಗ, ಮರದಲ್ಲೊಂದು ಪ್ರತಿಮೆಯನ್ನು ಸಣ್ಣದಾಗಿ ಕೊರೆದುಕೊಳ್ಳುತ್ತಾನೆ. ಅದರ ತಲೆ ಅಥವಾ ಎದೆಯ ಭಾಗದಲ್ಲಿ ಒಂದು ಸೂಜಿ ಚುಚ್ಚುತ್ತಾನೆ, ಇಲ್ಲವೆ ಒಂದು ಬಾಣ ತೂರಿಸುತ್ತಾನೆ. ಆ ಕ್ರಿಯೆಯಿಂದ ಹಗೆಯ ಅದೇ ದೇಹಭಾಗಗಳಲ್ಲಿ ಅಸಹ್ಯವಾದ ಬೇನೆಯುಂಟಾಗುತ್ತದಂತೆ. ಅವನನ್ನು ಕೊಲ್ಲುವುದೆಂದು ನಿರ್ಧರಿಸಿಕೊಂಡವರಾದರೆ ಮಂತ್ರಪೂರ್ವಕವಾಗಿ ಬೊಂಬೆಯನ್ನು ಸುಡುತ್ತಾರೆ, ಇಲ್ಲವೆ ಹೂಳುತ್ತಾರೆ. ಕೊಬ್ಬು ಮತ್ತು ಧಾನ್ಯಗಳ ಮಿಶ್ರಣದಿಂದ ತಮಗಾಗದವರ ಪ್ರತಿಮೆಗಳನ್ನು ಎರಕ ಹೊಯ್ದು, ಅವರು ತಿರುಗಾಡುವ ಹಾದಿಯಲ್ಲಿ ಸುಟ್ಟು, ಅವರ ಆತ್ಮವನ್ನೇ ದಹಿಸಿದೆವೆಂದು ಹೇಳಿಕೊಳ್ಳುತ್ತಾರೆ, ಪೆರುನಾಡಿನ ಇಂಡಿಯನ್ನರು. ಮಲೆ ಜನರಲ್ಲಿಯೂ ಈ ವಾಡಿಕೆಯಿದೆ. ಅವರೆ ಅವರು ಹಗೆಯ ಉಗುರನ್ನೋ ಕೂದಲನ್ನೋ ಉಗುಳನ್ನೋ ದೊರಕಿಸಿಕೊಂಡು ಬೊಂಬೆಮಾಡು ತ್ತಾರೆ. ಇಲ್ಲಿ ಸಾದೃಶ್ಯ ಮೂಲ ತತ್ವದ ಜತೆಗೆ ಸಂಸರ್ಗೀಯ ತತ್ವವೂ ಬೆರಕೆಗೊಂಡಿದೆ.

ಬೇರೆಯವರ ಹಸುಗಳಿಂದ ಹಾಲು ಕರೆಯುವುದು, ಬೇರೆ ಮನೆಯ ಬೆಣ್ಣೆ, ಗೋಧಿ ಮೊದಲಾದುವನ್ನು ಕದಿಯುವುದು, ಸುಂಟರಗಾಳಿ ಸೃಷ್ಟಿಸುವುದು—ಇಂಥ ಮಾಟಗಳು ಎಲ್ಲೆಲ್ಲೂ ರೂಢಿಯಲ್ಲಿದ್ದುವು. ಇಂಥ ಮಾಟಗಳನ್ನು ಮಾಡುತ್ತಿದ್ದ ಮಾಟಗಾತಿಯೊಬ್ಬಳನ್ನು ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಹಾಂಬರ್ಗ್ ನಗರದಲ್ಲಿ ಸುಟ್ಟದ್ದೂ ಉಂಟು. ತಗಡಿನ ಮೇಲೋ ಚರ್ಮದ ಮೇಲೋ ಮಾಂತ್ರಿಕ ಚಿಹ್ನೆಗಳನ್ನೋ ಅಕ್ಷರಗಳನ್ನೋ ಬರೆದು ದಿಂಬಿನ ಅಥವಾ ಹಾಸುಗೆಯ ಕೆಳಗಿಟ್ಟರೆ, ಅದರ ಮೇಲೆ ಮಲಗುವವನು ರೋಗಿಯಾಗುತ್ತಾನೆ ಅಥವಾ ಸಾಯುತ್ತಾನೆಂಬ ಭಾವನೆ ವಶೀಕರಣ ವಿದ್ಯೆಯನ್ನು ಬಲ್ಲ ಪ್ರಾಚೀನ ಭಾರತೀಯರಿಗೆ ಅಪರಿಚಯವೇನಲ್ಲ.

ಸಾದೃಶ್ಯ ಮೂಲತತ್ವ ದುಷ್ಟಕಾರ್ಯಗಳಿಗೆ ಮಾತ್ರವಲ್ಲ, ಶಿಷ್ಟಕಾರ್ಯಗಳಿಗೂ ಅನ್ವಯವಾಗುತ್ತದೆ.[1] ಸುಖದ ಹೆಂಗೆಗಾಗಿ ಮತ್ತು ಬಂಜೆಗೆ ಬೇಕಾದ ಸಂತಾನ

1 ಇಲ್ಲಿಯ ಅನೇಕ ನಿದರ್ಶನಗಳು *The Golden Bough* ಗ್ರಂಥದಿಂದೆತ್ತಿಕೊಂಡುವು.


ಕ್ಕಾಗಿ ಇದನ್ನು ಬಳಸುವುದುಂಟು. ಬಹುಸಂತಾನವಂತನಾದ ತಂದೆಯನ್ನು ಕರೆಸಿ
ಕೊಂಡು, ತನಗೆ ಮಕ್ಕಳಾಗುವಂತೆ ತನ್ನ ಪರವಾಗಿ ಸೂರ್ಯನನ್ನು ಪ್ರಾರ್ಥಿಸುವಂತೆ
ಬಂಜೆಯೊಬ್ಬಳು ಕೇಳಿಕೊಳ್ಳುತ್ತಾಳೆ. ಕೆಂಪುಹತ್ತಿಯ ಬೊಂಬೆಯನ್ನು ತಬ್ಬಿಕೊಂಡು,
ಅವಳು ಮೊಲೆಯೂಡುತ್ತಾಳೆ. ಬಹುಸಂತಾನಸಿದ್ಧ ಕೋಳಿಯ ಕಾಲುಗಳನ್ನು ಕೈಯಲ್ಲಿ
ಹಿಡಿದುಕೊಂಡು, ಬಂಜೆಯ ತಲೆಯಮೇಲೆ ನೇತಾಡಿಸುತ್ತ "ಓ ಸೂರ್ಯನೇ, ಈ ಕೋಳಿ
ಯನ್ನು ನಿನಗರ್ಪಿಸುತ್ತಿದ್ದೇನೆ. ಒಂದು ಮಗು ನನ್ನ ಕೈಗೆ, ನನ್ನ ತೊಡೆಗೆ ಬರುವಂತೆ
ಅನುಗ್ರಹಿಸು" ಎಂದು ಕೇಳಿಕೊಳ್ಳುತ್ತಾನೆ. ಅನಂತರ "ಮಗು ಬಂದಿದೆಯೆ?" ಎಂದು
ಹೆಂಗಸನ್ನು ಪ್ರಶ್ನಿಸುತ್ತಾನೆ. "ಆಗಲೇ ಮೊಲೆಯುಣ್ಣುತ್ತಿದೆ" ಎಂದು ಉತ್ತರಿಸುತ್ತಾಳೆ.
ಬಳಿಕ ಗಂಡನ ತಲೆಯಮೇಲೆ ಆ ಕೋಳಿ ಹಿಡಿದುಕೊಂಡು ಏನೋ ಮಂತ್ರ ಮಣಕಿಸು
ತ್ತಾನೆ. ಕೊನೆಗೆ ಅದನ್ನು ಕೊಂದು ವೀಳೆಯದೆಲೆಯೊಡನೆ ಮನೆಯ ಬಲಿಪೀಠದ
ಮೇಲಿರಿಸುತ್ತಾನೆ. ಶಾಸ್ತ್ರಗಳೆಲ್ಲ ಮುಗಿದನಂತರ ಸುದ್ದಿ ಊರಲ್ಲೆಲ್ಲ ಹರಡುತ್ತದೆ. ಊರಿನ
ಜನ ಬಂದು, ತಾಯಿಗೆ ಅಭಿನಂದನೆ ಸಲ್ಲಿಸುತ್ತಾರೆ. ಇದು ಬಾಬರ್ ದ್ವೀಪಸ್ತೋಮದಲ್ಲಿ
ಚಲಾವಣೆಯಲ್ಲಿರುವ ವಾಡಿಕೆ. ಸುಖಪ್ರಸವವಾಗದಿರುವಾಗ ಮಾಡುವ ಮಾಟ ಬೋರ್ನಿ
ಯೋದ ಕೆಲವು ಪಂಗಡಗಳಲ್ಲಿ ರೂಢಿಯಲ್ಲಿದೆ. ಹೆರಿಗೆ ಬೇನೆಯನುಭವಿಸುತ್ತಿರುವ
ಹೆಂಗಸಿನ ಮನೆಗೆ ಬಂದ ಮಂತ್ರವಾದಿ ಅವಳ ಮೈಯನ್ನು ಮೆಲ್ಲಗೆ ಹಿಸಕುತ್ತಾನೆ. ಅದೇ
ಸಮಯದಲ್ಲಿ ಕೋಣೆಯ ಹೊರಗೆ ಕುಳಿತಿರುವ ಮತ್ತೊಬ್ಬ ಮಂತ್ರವಾದಿ ದಿನವಾದ
ಬಸಿರಿಯಂತೆ ನಟಿಸುತ್ತಾನೆ. ಕಲ್ಲುಗುಂಡೊಂದನ್ನು ಹೊಟ್ಟೆಗೆ ಕಟ್ಟಿಕೊಳ್ಳುತ್ತಾನೆ.
ಅದು ಗರ್ಭಕೋಶದಲ್ಲಿರುವ ಮಗುವನ್ನು ಪ್ರತಿನಿಧಿಸುತ್ತದೆ. ಕೋಣೆಯೊಳಗಿನ ಮಂತ್ರ
ವಾದಿಯ ಆಜ್ಞೆಯನ್ನು ಚಾಚೂ ತಪ್ಪದೆ ಪರಿಪಾಲಿಸುತ್ತಾನೆ. ಶಿಶು ಜನನವಾಗುವತನಕ
ಈ ನಟನೆ ಸಾಗುತ್ತದೆ. ಕೆಲವು ಕನ್ನಡಿಗರ ಮನೆಯ ಮದುವೆಗಳಲ್ಲಿ ತೊಟ್ಟಲು ಶಾಸ್ತ್ರ
ವೊಂದುಂಟು. ಬಟ್ಟೆದೊಟ್ಟಿಲಲ್ಲೊಂದು ಗುಂಡುಕಲ್ಲಿಟ್ಟು, ಜೋ ಜೋ ಸೋಬಾನೆ
ಸಾಗುವಾಗ, ವಧೂವರರ ಕೈಯಲ್ಲಿ ತೂಗಿಸುತ್ತಾರೆ. ಅಷ್ಟೇ ಅಲ್ಲ, ಗಂಡು ಕಲ್ಲುಮಗು
ವನ್ನೆತ್ತಿಕೊಂಡು "ಹೊಲಕ್ಕೆ ಹೋಗ್ತೀನಿ, ತಕ್ಕೊ" ಎಂದು ಹೆಣ್ಣಿನ ಕೈಗೆ ಅದನ್ನು
ಕೊಡುತ್ತಾನೆ. ಹೆಣ್ಣು "ನೀರಿಗೆ ಹೋಗ್ತೀನಿ, ಮಗು ಕಟ್ಕೊಳ್ಳಿ" ಎಂದು ಗಂಡನ ಕೈಗೆ
ಕೊಡುತ್ತಾಳೆ. ಭವಿಷ್ಯಜೀವನದ ನಾಟಕವನ್ನೆಲ್ಲ ಮದುವೆಯಲ್ಲಿಯೇ ಆಡಿಸಿ ಮುಗಿಸು
ತ್ತಾರೆ. ಬಂಜೆ ಹೆಂಗಸು ಬೇರೆಯವರ ಮಕ್ಕಳನ್ನು ಸಾಕಿಕೊಂಡರೆ ಮಕ್ಕಳಾಗುತ್ತವೆಂಬ
ನಂಬಿಕೆಯೂ ಕೆಲವರಲ್ಲಿ ಮನೆಮಾಡಿಕೊಂಡಿದೆ.

ರೋಗನಿವಾರಣೆ ಸಹ ಈ ಮಾಟದಿಂದ ಸಾಧ್ಯ. ಹೊಟ್ಟೆಯೊಳಗಿನ ಅವಯವಗಳ
ಸಂಬಂಧ ಕಳಚಿಹೋಗುವುದರ ಪರಿಣಾಮವಾಗಿ ವಾಂತಿಯಾಗುತ್ತದೆಂದು ಫ್ರಾನ್ಸ್ ದೇಶದ
ಕೆಲವು ರೈತರ ನಂಬಿಕೆ. ಅವುಗಳನ್ನು ಮತ್ತೆ ಒಟ್ಟಿಗೆ ಸೇರಿಸಿದರೆ ವಾಂತಿ ನಿಲ್ಲುತ್ತದೆ.
ತನ್ನ ಹೊಟ್ಟೆಯೇ ಮುರಿದಂತೆ ಮಂತ್ರವಾದಿ ಒದ್ದಾಡುತ್ತಾನೆ. ಹಿಸುಕಿಕೊಳ್ಳುತ್ತಾನೆ.
ಆತನ ಹೊಟ್ಟೆಯೊಳಗಣ ಅವಯವಗಳ ಸಂಬಂಧವೂ ಕಳಚಿಕೊಳ್ಳುತ್ತದೆ. ಮತ್ತೆ

ಅವನು ಮುಖ ಸೊಟ್ಟಗೆ ಮಾಡಿಕೊಂಡು, ಹೊಟ್ಟೆ ಹಿಸುಕಿಕೊಂಡು ಒದ್ದಾಡುತ್ತಾನೆ. ರೋಗಿ ತೆಪ್ಪಗೆ ಮಲಗಿರುತ್ತಾನೆ. ಮಂತ್ರವಾದಿಯು ಶಾಸ್ತ್ರ ಮುಗಿವನಂತರ ರೋಗಿ ಗುಣಮುಖನಾಗುತ್ತಾನೆ. ಒಬ್ಬ ಮಂತ್ರವಾದಿ ಸತ್ತಂತೆ ಬಿದ್ದುಕೊಳ್ಳುವುದೂ, ಅವನ ಶವವನ್ನು ಚಾಪೆಯೊಳಗೆ ಸುತ್ತಿ ಮನೆಯ ಹೊರಗಿಡುವುದೂ, ಒಂದು ಗಂಟೆ ಕಳೆವನಂತರ ಮತ್ತೊಬ್ಬ ಮಂತ್ರವಾದಿ ಅವನಿಗೆ ಜೀವ ಬರಿಸುವುದೂ, ಅವನಿಗೆ ಜೀವ ಬಂದಕೂಡಲೇ ರೋಗಿಯ ರೋಗ ವಾಸಿಯಾಗುವುದೂ ಮತ್ತೊಂದು ಮಾಟದ ರೀತಿಯಾಗಿದೆ.

ಆಹಾರ ಸೃಷ್ಟಿಯಲ್ಲಿಯೂ ಈ ಮಾಟದ ಪ್ರಭಾವವನ್ನು ಗುರುತಿಸಬಹುದು. ಮಧ್ಯ ಸೆಲಿಬೀಸ್ ದ್ವೀಪದ ಬೇಟೆಗಾರರು ಜಿಂಕೆ ಅಥವಾ ಹಂದಿಗಳ ದವಡೆ ಮೂಳೆಗಳನ್ನು ತಮ್ಮ ಮನೆಗಳಲ್ಲಿ ನೇತುಹಾಕುವುದರಿಂದ, ತಾವು ಬೇಟೆಗೆ ಹೋದಾಗ ಅವು ಸುಲಭವಾಗಿ ಸಿಗುತ್ತವೆಂದು ಭಾವಿಸಿದ್ದಾರೆ. ಕೆಲವು ಸೀಮೆಗಳಲ್ಲಿ ಅಗಸೆ ಬಿತ್ತಿದಾಗ ರೈತರ ಹುಡುಗಿಯರು ಕುಣಿದು ಕುಪ್ಪಳಿಸುತ್ತಾರಂತೆ. ಅವರೆಷ್ಟು ಎತ್ತರ ಹಾರುತ್ತಾರೆಯೋ, ಅಗಸೆ ಅಷ್ಟೇ ಎತ್ತರ ಬೆಳೆಯುತ್ತದಂತೆ. ಹೊಲ ಹೊಸದಾಗಿ ಉತ್ತಾಗ ನೇಗಿಲು ಗೆರೆಗಳಲ್ಲಿ ಗಂಡ ಹೆಂಡಿರು ಸಂಭೋಗ ನಡೆಸುವುದಾದರೆ ಬೆಳೆ ಸಮೃದ್ಧಿಯಾಗಿ ಬರುತ್ತದಂತೆ.[1]

ಮಾಟದಲ್ಲಿ ಸಕಾರಾತ್ಮಕವಾದ ಆಚರಣೆಗಳಿರುವಂತೆ ನಕಾರಾತ್ಮಕವಾದುವೂ ಉಂಟು. ಸಕಾರಾತ್ಮಕವಾದುವನ್ನು ಮಂತ್ರವಿಧಿಗಳೆಂದೂ ನಕಾರಾತ್ಮಕವಾದುವನ್ನು ನಿಷೇಧ (Taboo) ಗಳೆಂದೂ ಕರೆಯಬಹುದು. ಮಂತ್ರವಿಧಿಗಳು ಮಾಡಬಹುದಾದ್ದನ್ನು ತಿಳಿಸಿದರೆ ನಿಷೇಧಗಳು ಮಾಡಬಾರದ್ದನ್ನು ಉಲ್ಲೇಖಿಸುತ್ತವೆ. ಎರಡರಲ್ಲಿಯೂ ಸಾದೃಶ್ಯ ಮೂಲತತ್ವವೇ ಕೆಲಸಮಾಡುತ್ತದೆ. ಕೆಲವು ಆಚರಣೆಗಳಿಂದ ಶುಭ ಫಲ ಕೈಗೂಡುವಂತೆ, ಕೆಲವು ನಿಷೇಧಗಳ ತ್ಯಾಗದಿಂದ ಉದ್ದಿಷ್ಟ ಫಲ ಲಭಿಸುತ್ತದೆ. ಆದರೆ ನಕಾರಾತ್ಮಕವಾದುವೆಲ್ಲ ನಿಷೇಧಗಳಾಗುವುದಿಲ್ಲ. ಬೆಂಕಿ ಮುಟ್ಟಬೇಡ, ಹಾವು ತುಳಿಯಬೇಡ, ಬೀಡಿ ಸೇದಬೇಡ ಎನ್ನುವಲ್ಲಿ ನಿಷೇಧಾರ್ಥವಿದ್ದರೂ ನಿಷೇಧದ ಜಾತಿಗೆ ಸೇರುವುದಿಲ್ಲ. ಈ ನಕಾರಾತ್ಮಕತೆಯಿಂದ ಶುಭವೊದಗುವುದರಿಂದ, ಅದು ಸಾಮಾನ್ಯನೀತಿಯ ಪರಿಧಿಯೊಳಗೆ ಬರುತ್ತದೆ. ಮಾಟದ ಸ್ವರೂಪ ಮತ್ತು ವಿವಿಧ ಕ್ರಿಯೆಗಳ ಆಧಾರದ ಮೇಲೆ ಕೆಲವು ಕವಲು ಮತ್ತು ಮರಿಗವಲುಗಳನ್ನು ಬಿಡಿಸಬಹುದು.



[1] A. H. Krappe, *The Science of Folklore*, P.288.

ನಿಷೇಧಗಳನ್ನು ಕುರಿತ ಕೆಲವು ನಿದರ್ಶನಗಳನ್ನಿಲ್ಲಿ ಉದಾಹರಿಸಬಹುದು. ಗಂಡ ಬೇಟೆಗೆ ಹೋದಾಗ ಹೆಂಡತಿ ನೂಲುವುದಾದರೆ, ಪ್ರಾಣಿ ಬೇಟೆಗಾರನನ್ನು ಸುತ್ತಿಸಿ ಸುತ್ತಿಸಿ ಸುಸ್ತುಮಾಡಿ ಪರಾರಿಯಾಗುತ್ತದೆಂಬ ನಂಬಿಕೆ ಕಾರ್ಪೇಥಿಯನ್ ಗುಡ್ಡಗಾಡಿನ ಜನರಲ್ಲಿ ಪ್ರಚಲಿತವಾಗಿದೆ. ಹೆರಿಗೆಗೆ ಎರಡು ತಿಂಗಳ ಮುಂಚೆ ಬಸಿರಿ ನೂತದ್ದಾದರೆ ಅಥವಾ ಹಗ್ಗ ಹುರಿಮಾಡಿದ್ದಾದರೆ ಹೊಟ್ಟೆಯೊಳಗಿನ ಮಗುವಿನ ಕರುಳು ದಾರದಂತೆ ನುಲಿದುಕೊಳ್ಳುತ್ತದೆಂಬುದು ಕೆಲವರ ಮತ. ಊರಿನ ಮುಖಂಡರು ಪಂಚಾಯಿತಿಗೆ ಕುಳಿತಾಗ, ಹಾಜರಿದ್ದವರಲ್ಲಿ ಯಾರೂ ಕದಿರು ತಿರುಗಿಸಬಾರದೆಂದು ಬಿಲಾಸ್‌ಪುರ ಜಿಲ್ಲೆಯ ಜನರ ತಿಳಿವಳಿಕೆ. ಹಾಗೆ ತಿರುಗಿಸಿದ್ದಾದರೆ ಚರ್ಚೆ ಬಳಸುದಾರಿ ಹಿಡಿದು ಕೊನೆ ತಲುಪುವುದಿಲ್ಲವಂತೆ. ಪ್ರಾಣಿಗಳ ಸಂಬಂಧವಾದ ಕಲ್ಪನೆಯ ಗುಣಗಳು ತಮ್ಮ ದೇಹಕ್ಕಿಳಿಯಲೆಂದು ಅವುಗಳ ಮಾಂಸವನ್ನು ಭಕ್ಷಿಸುವುದು ಸರಿಯಷ್ಟೆ; ಅಂತೆಯೇ ಕೆಟ್ಟ ಗುಣಗಳು ತಮಗೆ ಪ್ರಾಪ್ತವಾಗಬಾರದೆಂಬ ದೃಷ್ಟಿಯಿಂದ ಕೆಲವು ಪ್ರಾಣಿಗಳ ಮಾಂಸವನ್ನು ತಿನ್ನುವುದಿಲ್ಲ. ಜಗಳವಾಡಿ ಸತ್ತ ಹುಂಜನ ಮಾಂಸವನ್ನು ಸೈನಿಕ ತಿಂದದಾದ್ದರೆ ಯುದ್ಧದಲ್ಲಿ ಸಾಯುತ್ತಾನೆಂಬ ತಿಳಿವಳಿಕೆಯಿಂದ ಕೆಲವು ಕಡೆಯ ಯೋಧರರು ತಿನ್ನುವುದಿಲ್ಲ. ಹೆದರಿದಾಗ ಚೆಂಡಿನಂತೆ ಮುದುರಿಕೊಳ್ಳುವ ಮುಳ್ಳುಹಂದಿಯನ್ನು ತಿಂದ ಮನುಷ್ಯ ಅಂಜುಕುಳಿಯಾಗುತ್ತಾನೆಂದು ಮಡಗಾಸ್ಕರ್ ಸೈನಿಕರು ನಂಬಿಕೊಂಡಿದ್ದಾರೆ. ತಾನು ಆನೆ ಬೇಟೆಗೆ ಹೋದ ಸಮಯದಲ್ಲಿ ಕೂದಲು ಕತ್ತರಿಸಿಕೊಳ್ಳಬಾರದೆಂದೂ, ಮೈಗೆ ಎಣ್ಣೆ ಹಚ್ಚಿಕೊಳ್ಳಬಾರದೆಂದೂ ಲಾವೋಸಿನ ಬೇಟೆಗಾರ ಮೊದಲೇ ಹೆಂಡತಿಗೆ ಎಚ್ಚರಿಕೆ ನೀಡುತ್ತಾನೆ. ಕೂದಲು ಕತ್ತರಿಸಿಕೊಂಡರೆ ಆನೆ ಜಾಲವನ್ನು ಹರಿದುಹಾಕುತ್ತದೆಂದೂ, ಎಣ್ಣೆ ಹಚ್ಚಿಕೊಂಡರೆ ನುಸುಳಿಹೋಗುತ್ತದೆಂದೂ ಅವನು ತಿಳಿದಿದ್ದಾನೆ. ಹೆಂಡತಿ ನೀತಿ ಭ್ರಷ್ಟೆಯಾದರೆ ಬೇಟೆಗಾರ ಆನೆಗೆ ಬಲಿಯಾಗುತ್ತಾನೆಂದು ಪೂರ್ವ ಆಫ್ರಿಕೆಯ ಜನರ ನಂಬುಗೆ. ಅಂಥ ಸುದ್ದಿ ಏನಾದರೂ ಬೇಟೆಗಾರನಿಗೆ ತಿಳಿದದ್ದಾದರೆ ಅವನು ಬೇಟೆ ಬಿಟ್ಟು ಮನೆಗೆ ಹಿಂದಿರುಗುತ್ತಾನೆ. ಹೆಂಡತಿಯಿಂದ ವಂಚಿತನಾದ ಬೇಟೆಗಾರನನ್ನು ಹಾವು ಕಚ್ಚಬಹುದು, ಹುಲಿ ತಿಂದುಬಿಡಬಹುದು. ಗಂಡಂದಿರು ಕರ್ಪೂರ ತರಲು ಕಾಡಿಗೆ ಹೋದಾಗ, ಹೆಂಡಿರು ವ್ಯಭಿಚಾರಕ್ಕಿಳಿದದ್ದಾದರೆ, ಅವರು ಸಂಗ್ರಹಿಸಿದ ಕರ್ಪೂರವೆಲ್ಲ ಆವಿಯಾಗಿ ಹೋಗುತ್ತದೆಂದು ಸಾರವಾಕ್ ಪ್ರಾಂತ್ಯದ ಕೆಲವು ಕುಲಗಳ ತಿಳಿವಳಿಕೆ. ಅಷ್ಟೇ ಅಲ್ಲ, ಆಗ ಅವರ ಹೆಂಡಿರು ತಲೆ ಬಾಚಬಾರದಂತೆ; ಬಾಚಿದರೆ ಮರಗಳಲ್ಲಿರುವ ಕರ್ಪೂರ ಮಾಯವಾಗುತ್ತದಂತೆ. ಗಂಡಂದಿರು ಯುದ್ಧಭೂಮಿಗೆ ತೆರಳಿದ ನಂತರ ಮನೆಯಲ್ಲಿರುವ ಹೆಂಗಸರು ಉಷಃಕಾಲಕ್ಕೆ ನಿದ್ರೆಯಿಂದೆದ್ದು, ಕಿಟಕಿಗಳನ್ನು ತೆರೆಯಬೇಕು. ಇಲ್ಲಿ ಕಿಟಕಿಗಳನ್ನು ತೆರೆಯದಿದ್ದರೆ ಅಲ್ಲಿ ಗಂಡಂದಿರು ನಿದ್ದೆಮಾಡಿಬಿಡುತ್ತಾರಂತೆ. ಹಗಲು ಹೆಂಗಸರು ಮಲಗಿದರೆ, ಅಲ್ಲಿ ಅವರ ಗಂಡಂದಿರಿಗೂ ಮಂಪರ ಬರುತ್ತದೆ. ಯಾವುದಾದರೂ ವಸ್ತುವಿಗೆ ಎಡವಿ ಬಿದ್ದುಬಿಟ್ಟರೆ, ಗಂಡಂದಿರು ಶತ್ರುಗಳಿಗೆ ಶರಣಾಗತರಾಗುತ್ತಾರಂತೆ. ಇಲ್ಲಿ ಇವರು ಮುಖ ಮುಚ್ಚಿಕೊಂಡರೆ ಅಲ್ಲಿ ಅವರಿಗೆ ಕಾಡುದಾರಿ

ಕಾಣಿಸುವುದಿಲ್ಲವಂತೆ. ಟೈಮರ್ ದ್ವೀಪದ ಪೂಜಾರಿ ಯುದ್ಧ ಸಮಯದಲ್ಲಿ ದೇವಾಲಯ ಬಿಟ್ಟು ಹೋಗುವಂತಿಲ್ಲ. ಅವನಲ್ಲಿಗೇ ಊಟ ತರಿಸಿಕೊಳ್ಳಬೇಕು, ಅಥವಾ ಒಳಗಡೆ ಅಡಿಗೆ ಮಾಡಿಕೊಳ್ಳಬೇಕು. ಹಗಲಿರುಳೆಲ್ಲ ಬೆಂಕಿ ಉರಿಯುತ್ತಿರಬೇಕು. ಸೈನಿಕರ ಶಕ್ತಿ ತಣ್ಣಗಾಗದಿರಲು, ಅವರು ಹಿಂದಿರುಗುವ ತನಕ ಅವನು ಬಿಸಿನೀರನ್ನೇ ಕುಡಿಯಬೇಕು. ಅವನು ಕರ್ತವ್ಯಭ್ರಷ್ಟನಾದರೆ ಯೋಧರರಿಗೆ ಅನಿಷ್ಟ ಸಂಭವಿಸುತ್ತದೆ. ಘಾನಾದ ಕೆಲವು ಹೆಂಗಸರು ತಮ್ಮ ಗಂಡಂದಿರು ಯುದ್ಧಾಭಿಮುಖರಾದ ಕೂಡಲೇ ಬಿಳಿ ಬಣ್ಣ ಬಳಿದುಕೊಂಡು, ಮಣಿ ಮತ್ತು ತಾಯಿತಿಗಳಿಂದ ತಮ್ಮ ದೇಹಗಳನ್ನಲಂಕರಿಸಿಕೊಳ್ಳುತ್ತಾರೆ; ಯುದ್ಧಾರಂಭದ ದಿನ ಬಂದೂಕವನ್ನೋ, ಬಂದೂಕದಂತೆ ಕೆತ್ತಿದ ಮರದ ತುಂಡನ್ನೋ ಹೆಗಲ ಮೇಲಿರಿಸಿಕೊಂಡು ಕುಣಿದಾಡುತ್ತಾರೆ; ವೈರಿಗಳ ಶಿರಚ್ಛೇದನ ಮಾಡುವವರಂತೆ ಚಾಕುಗಳಿಂದ ಕಲ್ಲಂಗಡಿಯಂತಿರುವ ಪಾಪಾ (Paw-Paw) ಹಣ್ಣುಗಳನ್ನು ಚೆಂಡಾಡುತ್ತಾರಂತೆ. ಇಲ್ಲಿ ಮತ್ತೆ ಮಂತ್ರವಿಧಿ ಮತ್ತು ನಿಷೇಧಗಳು ಜತೆಜತೆಯಾಗಿಯೇ ಸಾಗುತ್ತವೆ. ದೂರ ಮನಸ್ಪರ್ಶನ ತತ್ವದ ವ್ಯಾಪಾರವೇ ಇಂಥ ಕಡೆಗಳಲ್ಲಿ ವಿಜೃಂಭಿಸುತ್ತದೆ.

ಕಾಲಮಾನಕ್ಕೆ ಸರಿಯಾಗಿ ಮರಗಿಡಗಳು ಯಥೇಷ್ಟವಾಗಿ ಹಣ್ಣು ಬಿಡುವಂತೆ ಮಾಡಲು ಈ ಮಾಟ ಅತ್ಯವಶ್ಯವೆಂದು ಆದಿಮಾನವನಿಂದ ಸಾಗಿಬಂದಿರುವ ನಂಬಿಕೆ. ಸುಮಾತ್ರಾದ ಹೆಂಗಸರು ಬತ್ತ ಚೆಲ್ಲುವಾಗ ತಮ್ಮ ಬಿಡುಮುಡಿಯನ್ನು ಬೆನ್ನಿನ ಮೇಲೆ ತೂಗಾಡಲು ಬಿಡುತ್ತಾರೆ. ಬತ್ತದ ದಂಟು ಉದ್ದವಾಗಿ ಬೆಳೆಯಬೇಕು, ಫಸಲು ತೂಗಾಡಲು ಬಿಡುತ್ತಾರೆ. ಬತ್ತದ ದಂಟು ಉದ್ದವಾಗಿ ಬೆಳೆಯಬೇಕು, ಫಸಲು ಕೈತುಂಬ ಬರಬೇಕೆಂಬ ಆಸೆಯೇ ಈ ಆಚರಣೆಯ ಉದ್ದೇಶ. ಪ್ರಾಚೀನ ಮೆಕ್ಸಿಕೋ ದೇಶದಲ್ಲಿ ಮುಸುಕಿನ ಜೋಳ ದೇವತೆಯ ಹೆಸರಿನಲ್ಲಿ ಹಬ್ಬ ಮಾಡುತ್ತಿದ್ದುದುಂಟು. ಪೈರು ಚೆನ್ನಾಗಿ ಬೆಳೆದು ತೆನೆಬರುವ ಸಮಯದಲ್ಲಿ ಆ ಹಬ್ಬ ನಡೆಯುತ್ತಿತ್ತು. ಹೆಂಗಸರು ಜೋಲುಮುಡಿ ಬಿಟ್ಟುಕೊಂಡು ಕುಣಿಯುತ್ತಿದ್ದರು. ಕುಣಿಯುವಾಗ ಅತ್ತಿತ್ತ ಕೂದಲು ಜೋಲಾಡುವಂತೆ ತೆನೆಯ ಕುಚ್ಚು ಅಥವಾ ಇಲುಕುಗಳು ತೂಗಾಡಬೇಕು, ಕಾಳು ತುಂಬ ಕಚ್ಚಬೇಕು ಎಂಬುದೇ ಅವರ ಉದ್ದೇಶ. ಬತ್ತ ಕೊಯ್ಯುವಾಗ ಮಲಯ ಹೆಂಗಸರ ಮುಂಡ ನಗ್ನವಾಗಿರುತ್ತಂತೆ. ಅದರಿಂದ ಬತ್ತದ ಹೊಟ್ಟು ತೆಳ್ಳಗಿರುತ್ತದಂತೆ. ಹೊಟ್ಟು ದಪ್ಪಗಿದ್ದರೆ ಕುಟ್ಟುವುದು ಕಷ್ಟ. ಮರದ ಮೊದಲನೆಯ ಹಣ್ಣನ್ನು ಬಸಿರಿಯರಿಗೆ ತಿನ್ನಿಸಿದರೆ, ಆ ಮರ ಮುಂದಿನ ವರ್ಷ ಅಗಾಧವಾಗಿ ಫಲ ಕೊಡುತ್ತದೆಂದು ಆಸ್ಟ್ರಿಯಾ ಮತ್ತು ಬವೇರಿಯಾ ದೇಶಗಳ ರೈತರ ಭಾವನೆ. ಭಾರತದಲ್ಲಿ ಕೆಲವು ಕಡೆ ರಾಗಿ ಅಥವಾ ಜೋಳ ತೆನೆಗೊಂಡಾಗ 'ಹೆಚ್ಚು' ಎಂಬ ಪೂಜೆ ನಡಸುತ್ತಾರೆ. ಕೊಡವರ ಹುತ್ತರಿ ಹಬ್ಬವನ್ನು ಸಹ ಈ ಸಂದರ್ಭದಲ್ಲಿ ನೆನೆಯಬಹುದು. ನಮ್ಮ ಸಾಹಿತ್ಯದಲ್ಲಿ ಬರುವ ದೋಹದ ಕ್ರಿಯೆಯ ಕಡೆಗೂ ಗಮನ ಹರಿಸಬಹುದು. ಬಂಜೆ ತೋಟ ಹೆಕ್ಕರೆ ಮರಗಿಡ ಹೂ ಹಣ್ಣು ಬಿಡುವುದಿಲ್ಲವೆಂಬ ಕಾರಣಕ್ಕಾಗಿ ಅವಳನ್ನು ಬಿಡುಗಡೆಮಾಡಿಕೊಳ್ಳುವ ಪದ್ಧತಿ ಹಲವು ದೇಶಗಳಲ್ಲಿ ಚಾಲ್ತಿಯಲ್ಲಿದೆ. ನೆಲ ಫಲವತ್ತಾಗಲಿ, ಧಾನ್ಯದ ತೆನೆ ಹುಲುಸಲಿ ಎಂಬ

ಉದ್ದೇಶದಿಂದ ಗ್ರೀಕರು ಹಾಗೂ ರೋಮನ್ನರು ಭೂದೇವತೆ ಹಾಗೂ ಧಾನ್ಯಾಧಿದೇವತೆಗೆ ಬಸಿರಿಯರನ್ನು ಬಲಿಕೊಡುತ್ತಿದ್ದುದುಂಟು.

ಮನುಷ್ಯ ಮರದ ಮೇಲೆ ಪ್ರಭಾವ ಬೀರುವಂತೆ, ಮರವೂ ಮನುಷ್ಯನ ಮೇಲೆ ಪ್ರಭಾವ ಬೀರುತ್ತದೆ. ಅವಳಿಕಾಳು ತಿಂದ ಹೆಂಗಸು ಅವಳಿ ಮಕ್ಕಳನ್ನು ಹಡೆಯುತ್ತಾಳೆ ಎಂಬ ನಂಬಿಕೆ ದಕ್ಷಿಣ ಅಮೇರಿಕೆಯ ಗೌರಾಣಿ ಇಂಡಿಯನ್ನರದಾದರೆ, ಅವಳಿ ಬಾಳೆಹಣ್ಣು ತಿಂದ ಹೆಣ್ಣು ಅವಳಿಮಕ್ಕಳನ್ನು ಪಡೆಯುತ್ತಾಳೆನ್ನುವುದು ಭಾರತೀಯರ ನಂಬಿಕೆ. ಮುಳ್ಳು ಮರ ಬಳಸಿ ಮನೆ ಕಟ್ಟಿದ್ದಾದರೆ, ಅದರ ನಿವಾಸಿಗಳು ಬಾಳಿನುದ್ದಕ್ಕೂ ಕಷ್ಟಕಂಟಕಗಳನ್ನೆದುರಿಸಬೇಕಾಗುತ್ತದೆಂಬುದು ಸೂಡಾನ್ ಜನರ ಅಭಿಮತ.

ಸತ್ತವರ ಮೂಲಕ ಮಾಟ ಮಾಡುವ ಪದ್ಧತಿ ಸದೃಶಕ್ರಿಯಾ ವಿಧಾನದ ಮತ್ತೊಂದು ಮುಖ. ಸತ್ತವರ ಎಲುಬುಗಳನ್ನಾಗಲಿ, ಶವಕ್ಕೆ ಸಂಬಂಧಿಸಿದ ಯಾವುದೇ ವಸ್ತುವನ್ನಾಗಲೀ ಬಳಸಿಕೊಂಡು ಬೇರೆ ಜನರ ಮೇಲೆ ಮಾಟ ನಡಸಿ, ಅವರನ್ನು ಕುರುಡುಗೊಳಿಸಬಹುದು, ಇಲ್ಲವೆ ಕಿವುಡುಗೊಳಿಸಬಹುದು, ಅಥವಾ ಮೂಕಗೊಳಿಸಬಹುದು ಎನ್ನುವ ಭಾವನೆ ಕೆಲವರಲ್ಲಿದೆ. ತರುಣನೊಬ್ಬ ರಾತ್ರಿಯ ವೇಳೆ ತನ್ನ ಪ್ರೇಯಸಿಯನ್ನು ಭೇಟಿಮಾಡಿ ಮಾತಾಡಬೇಕಾಗಿದೆ ಎಂದಿಟ್ಟುಕೊಳ್ಳೋಣ. ಆಗವನು ಶ್ಮಶಾನದಿಂದ ಒಂದು ಹಿಡಿ ಮಣ್ಣನ್ನೊಯ್ದು, ಹುಡುಗಿಯ ತಂದೆ ತಾಯಿಯರು ಮಲಗುವ ಜಾಗಕ್ಕೆ ನೇರವಾಗಿ ಚಾವಣಿಯ ಮೇಲೆ ಚೆಲ್ಲಿದರೆ, ಅವರು ಸತ್ತ ಮರದಂತೆ ಬಿದ್ದಿರುತ್ತಾರಂತೆ. ಅನಂತರ ಅವನು ಸಾವಕಾಶವಾಗಿ ತನ್ನ ಪ್ರಣಯಿನಿಯೊಡನೆ ಪ್ರಣಯ ಸಲ್ಲಾಪ ಮುಗಿಸಿ ಹೊರ ಬರಬಹುದು. ಕಳ್ಳರಿಗೆ ಮತ್ತು ದರೋಡೆಕೋರರಿಗೆ ಈ ಉಪಾಯವೊಂದು ವರವಾಗಿತ್ತು. ಸತ್ತವನ ಎಲುಬನ್ನು ಮನೆಯ ಮೇಲೆ ಎಸೆಯುತ್ತಿದ್ದಂತೆ ಶ್ಮಶಾನದ ಮಣ್ಣನ್ನು ಎರಚುತ್ತಿದ್ದಂತೆ ಮನೆಯ ಜನ ಗಾಢನಿದ್ರೆಗೆ ವಶರಾಗುತ್ತಾರೆ. ಚಿತಾಭಸ್ಮವನ್ನು ಬಾಗಿಲಲ್ಲಿ ಚಿಮುಕಿಸಿದರೆ ಅಂಥದೇ ಪರಿಣಾಮ ಸಂಭವಿಸುತ್ತದೆಂದು ಹಿಂದೂಗಳ ತಿಳಿವಳಿಕೆ. ಕಾಲೆಲುಬಿನ ಕೊಳಲೂದಿದರೆ ಜನ ಸಮ್ಮೋಹಿತರಾಗುತ್ತಾರೆ. ಗೃಹಜೀವನದ ಕಟ್ಟುನಿಟ್ಟುಗಳಿಂದ ಸಿಡಿಮಿಡಿಗೊಂಡ ಬಲ್ಗೇರಿಯಾದ ಹೆಂಗಸರು ಶವದ ಕಣ್ಣಿಗಂಟಿಸಿರುವ ತಾಮ್ರದ ಕಾಸುಗಳನ್ನೆತ್ತಿಕೊಂಡು, ನೀರು ಅಥವಾ ವೈನಿನಲ್ಲಿ ತೊಳೆದು, ತೊಳೆದ ನೀರನ್ನು ಕುಡಿಯುವ ಸಲುವಾಗಿ ಗಂಡಂದಿರಿಗೆ ಕೊಡುತ್ತಾರೆ. ಅದನ್ನು ಗುಟುಕಿಸಿದ ಕೂಡಲೆ ಗಂಡಂದಿರು ಕುರುಡರಾಗುತ್ತಾರಂತೆ.

ಮಾಟದ ಮೂಲಕ ಪ್ರಾಣಿಗಳ ಗುಣಗಳನ್ನು ಮನುಷ್ಯನಿಗೆ ವರ್ಗಾಯಿಸಬಹುದೆನ್ನುವ ಭಾವನೆ ಆ ತತ್ವದ ಮತ್ತೊಂದು ಮುಖ. ಇಲಿ ಚುರುಕಾದ ಪ್ರಾಣಿಯಷ್ಟೆ. ತನ್ನ ಕೂದಲಿನ ಜತೆಗೆ ಅದರ ಕೂದಲನ್ನು ಸೇರಿಸಿ ಹೆಣೆದುಕೊಂಡರೆ, ಹಗೆಯಾಟದ ಹೊಡೆತದಿಂದ ಪಾರಾಗಬಹುದೆಂದು ದಕ್ಷಿಣ ಆಫ್ರಿಕೆಯ ಯೋಧರ ತಿಳಿದಿದ್ದಾರೆ. ಯುದ್ಧ ಸಮಯದಲ್ಲಿ ಇಲಿಯ ಕೂದಲಿಗೆ ತುಂಬ ಬೇಡಿಕೆಯಿದೆಯಂತೆ ಅಲ್ಲಿ. ಮನೆಯಿಂದ ತಪ್ಪಿಸಿಕೊಂಡು ಓಡಿಹೋಗುವ ಗುಲಾಮನನ್ನು ಹಿಂದಿರುಗಿಸಲು ಅರಬರು ಹುನ್ನಾನ

ಪ್ರಯೋಗವೊಂದನ್ನು ನಡೆಸುತ್ತಾರೆ. ನೆಲದ ಮೇಲೆ ನಾಯಿಯ ವೃತ್ತವನ್ನು ರೇಖಿಸುತ್ತಾರೆ. ಅದರ ನಡುವೆ ಒಂದು ಮೊಳೆ ನೆಡುತ್ತಾರೆ. ಜೀರುಂಡೆಯನ್ನು ದಾರಕ್ಕೆ ಸೇರಿಸಿ ಮೊಳೆಗೆ ಕಟ್ಟುತ್ತಾರೆ. ಓಡಿಹೋದವನು ಗಂಡಸಾದರೆ ಗಂಡು ಜೀರುಂಡೆ ಬೇಕು, ಹೆಣ್ಣಾದರೆ ಹೆಣ್ಣು ಜೀರುಂಡೆ ಬೇಕು. ಮೊಳೆಯನ್ನು ಸುತ್ತುಹಾಕಿದಂತೆಲ್ಲ ಜೀರುಂಡೆ ಅದಕ್ಕೆ ಹತ್ತಿರವಾಗುತ್ತದೆ. ಅಂತೆಯೇ ಗುಲಾಮ ಯಜಮಾನನ ಬಳಿಗೆ ಬರುತ್ತಾನಂತೆ. ಬ್ರಿಟಿಷ್ ನ್ಯೂಗಿನಿಯ ಪಶ್ಚಿಮ ಪ್ರದೇಶದ ಆದಿವಾಸಿಗಳು ಸುಟ್ಟ ಹಾವಿನ ಬೂದಿಯನ್ನು ಕಾಲುಗಳಿಗೆ ಬಳಿದುಕೊಂಡು ಕಾಡಿಗೆ ಹೋಗುವುದರಿಂದ, ಅವರಿಗೆ ಹಾವಿನಿಂದ ಯಾವ ಅಪಾಯವೂ ಸಂಭವಿಸುವುದಿಲ್ಲ. ಮಂಜು ದಿಟ್ಟಿಯ ಕಣ್ಣುಗಳಿಗೆ ಗರುಡ ಪಕ್ಷಿಯ ಪಿತ್ತರಸವನ್ನು ಬಳಿದರೆ, ಅವುಗಳಿಗೆ ಗರುಡ ದೃಷ್ಟಿಯ ತೀಕ್ಷ್ಣತೆ ಸಮನಿಸುತ್ತದೆಂದು ಪ್ರಾಚೀನ ಗ್ರೀಕರು ನಂಬಿಕೊಂಡಿದ್ದರು.

ಜೀವಂತ ವಸ್ತುಗಳಲ್ಲಿರುವಂತೆಯೇ ಜಡವಸ್ತುಗಳಲ್ಲಿಯೂ ಮಾಯಾಶಕ್ತಿಯಿದೆ. ಆದರೆ ಆ ಶಕ್ತಿಯ ಮಹಿಮಾಭಿವ್ಯಕ್ತಿ ಮಾಟಗಾರನ ಸಾಮರ್ಥ್ಯ ಕೌಶಲಗಳನ್ನವಲಂಬಿಸಿದೆ. ಸಮರ್‌ಕಂದ್ ಸ್ತ್ರೀಯರು ಮಗುವಿನ ಬಾಯಿಗೆ ಸಕ್ಕರೆ ಹರಳನ್ನು ಹಾಕುತ್ತಾರೆ. ಮಗು ಅದನ್ನು ಚೀಪುತ್ತ, ಕೈಗೆಲ್ಲ ಅಂಟು ಮಾಡಿಕೊಳ್ಳುತ್ತದೆ. ಮುಂದಿನ ಬಾಳಿನಲ್ಲಿ ಶುಭ ಸಂಗತಿಗಳು ಅಂತೆಯೇ ಅಂಟಿಕೊಳ್ಳಲೆಂಬುದು ಅವರ ಅಪೇಕ್ಷೆ. ಬಹು ಪುತ್ರವತಿಯ ಬಟ್ಟೆಯನ್ನು ಧರಿಸಿದ ಬಂಜೆ ಫಲವತಿಯಾಗುತ್ತಾಳೆಂದು ಪ್ರಾಚೀನ ಮೋಅಬ್ ದೇಶದ ಅರಬರು ನಂಬಿಕೊಂಡಿದ್ದರು. ಬಣ್ಣ ತೂಕ ರಚನೆಗಳಿಗನುಗುಣವಾಗಿ ಕಲ್ಲುಗಳಲ್ಲಿಯೂ ಮಾಂತ್ರಿಕಶಕ್ತಿಯಿದೆಯೆಂದು ಜಗತ್ತಿನ ಜನ ಒಪ್ಪಿಕೊಂಡಿದ್ದಾರೆ. ರತ್ನಶಿಲೆಗಳನ್ನು ಅಲಂಕರಣಕ್ಕಾಗಿ ಬಳಸುವುದು ಈಚೆಗೆ. ಪ್ರಾಚೀನ ಕಾಲದಲ್ಲಿ ಅವು ರಕ್ಷಾಯಂತ್ರಗಳಾಗಿ ಪ್ರಯೋಗವಾಗುತ್ತಿದ್ದುವು. ಮರದ ಗುರುತುಗಳಿರುವ ಅಗೇಟ್ ಎಂಬ ಪ್ರಶಸ್ತ ಶಿಲೆಯ ಮಣಿಗಳನ್ನು ಉಳುವ ಎತ್ತುಗಳ ಕೊರಳಿಗೆ ಕಟ್ಟಿದರೆ ಬೆಳೆ ಅಧಿಕವಾಗುತ್ತದೆಂದು ಗ್ರೀಕರು ಭಾವಿಸಿದ್ದರು. ಸಾಲಿಗ್ರಾಮಶಿಲೆ ವೈಷ್ಣವರಿಗೂ, ಲಿಂಗಾಕೃತಿಯ ಶಿಲೆ ಶೈವರಿಗೂ ಪವಿತ್ರವಾದುವು. ಅಂತೆಯೇ ಮುಟ್ಟಿದ್ದೆಲ್ಲ ಚಿನ್ನವಾಗುತ್ತದೆನ್ನುವ ಪೌರಾಣಿಕ ಸ್ಪರ್ಶಶಿಲೆಯನ್ನೂ ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಕನ್ನೆಯರು ಅಥವಾ ಯುವತಿಯರು ಹೆಣ ಹೊದಿಕೆಯ ಬಟ್ಟೆಯನ್ನು ಕತ್ತರಿಸಿ, ಹೊಲಿದು ತಯಾರಿಸಿದ ಬಟ್ಟೆಯನ್ನು ಹೊದ್ದರೆ ಮುದುಕರ ಆಯುಸ್ಸು ಹೆಚ್ಚುತ್ತದೆಂದು ಚೀನೀಯರು ತಿಳಿದಿದ್ದಾರೆ. ಕನ್ನೆಯರು ಬಹು ದಿನ ಬದುಕುವರಾದ್ದರಿಂದ, ಅವರು ಹೊಲಿದ ಬಟ್ಟೆಯನ್ನುಟ್ಟವರು ಹೆಚ್ಚು ದಿನ ಬದುಕುವರಂತೆ. ಅಂಥ ಉಡುಪನ್ನು ಅಧಿಕಮಾಸದಲ್ಲಿ ತಯಾರಿಸಿದರೆ ಇನ್ನೂ ಪ್ರಶಸ್ತ. ಅಂಥ ಉಡುಪನ್ನು ವಿಶೇಷ ದಿನಗಳಲ್ಲಿ, ಮುಖ್ಯವಾಗಿ ಹುಟ್ಟಿದಹಬ್ಬದಂದು, ಧರಿಸುತ್ತಾರೆ. ಒಂದು ನಗರದ ಅಥವಾ ದೇವಾಲಯದ ಭವಿಷ್ಯಕ್ಕೆ ಅದರ ಆಕಾರವೂ ಕಾರಣವಾಗುತ್ತದೆನ್ನುವುದು ಅವರ ನಂಬಿಕೆಗಳಲ್ಲೊಂದು. ಅರ್ಧ ಶತಮಾನದ ಹಿಂದೆ ಹಾಂಕಾಂಗ್ ನಗರದಲ್ಲಿ [illegible]. ಅದಕ್ಕೆ ಕಾರಣವೇನೆಂದು ಭವಿಷ್ಯಜ್ಞರನ್ನು ವಿಚಾರಿಸುವಾಗ

ಆಮೆ ಆಕಾರದಲ್ಲಿ ಕಟ್ಟಿದ್ದ ಅಲ್ಲಿಯ ದೇವಾಲಯವೇ ಕಾರಣವೆಂದು ತೀರ್ಪು ನೀಡಿದರಂತೆ. ದೇವಾಲಯವನ್ನು ಕೆಡವಿದರೂ, ಕೆಡಹದಿದ್ದರೂ ಕೇಡು, ಮುಂದೇನು ಗತಿ ಎಂದು ಯೋಚಿಸುತ್ತಿರುವಾಗ ದೇವಾಲಯದ ಮುಂದೆ ಆಮೆಯ ಎರಡು ಕಣ್ಣುಗಳಂತಿದ್ದ ಬಾವಿಗಳನ್ನು ಮುಚ್ಚಿದರೆ ಆಮೆಯತನ ಕುಂದಿ, ಅರಿಷ್ಟ ಮಾಯವಾಗುತ್ತದೆಂದು ಮೃದ್‌ಭವಿಷ್ಯಗ್ರಾಹಿಗಳು (Geomancer) ತಿಳಿಸಿದರಂತೆ.

ದುರ್ನಿಮಿತ್ತ ನಿವಾರಣೆಗೂ ಇದೇ ತತ್ವವನ್ನು ಪ್ರಯೋಗಿಸುವುದುಂಟು. ಅಪಶಕುನದಿಂದೊದಗಬಹುದಾದ ದುಷ್ಪರಿಣಾಮ ನಿವಾರಣೆಗೆ ಅಣಕದ ಮೂಲಕ ಪ್ರತೀಕಾರ ಬಗೆಯಬಹುದೆಂಬ ಭಾವನೆ ಈ ತತ್ವದಲ್ಲಿ ಅಡಕವಾಗಿದೆ. ಮಡಗಾಸ್ಕರ್ ಸಂಪ್ರದಾಯದ ಪ್ರಕಾರ ಫೆಬ್ರುವರಿ ಮೊದಲನೆಯ ದಿನ ಜನ್ಮವೆತ್ತಿದ ವ್ಯಕ್ತಿಯ ಮನೆ ಅವನು ಪ್ರಾಪ್ತವಯಸ್ಕನಾಗುವ ಹೊತ್ತಿಗೆ ಭಸ್ಮವಾಗುತ್ತದೆನ್ನುವುದು ನೈಮಿತ್ತಿಕರ ಮುಂಗಾಣ್ಕೆ. ಮುಂದಾಗಬಹುದಾದ ಅನಾಹುತವನ್ನು ತಪ್ಪಿಸುವ ಸಲುವಾಗಿ ಹೊಲದಲ್ಲಾಗಲಿ ಕೊಟ್ಟಿಗೆಯಲ್ಲಾಗಲಿ ಒಂದು ಗುಡಿಸಿಲು ಹಾಕಿ ಸುಡುತ್ತಾರೆ. ಮಗು ಮತ್ತು ತಾಯಿಯಿಬ್ಬರೂ ಗುಡಿಸಿಲಿನಲ್ಲಿರಬೇಕು. ಅದು ಹೊತ್ತಿಕೊಂಡನಂತರ ಅವರಿಗೆ ಅಪಾಯವೊದಗುವ ಮುನ್ನ ಅವರನ್ನು ಪಾರು ಗಾಣಿಸಬೇಕು. ಭಾರತದಲ್ಲಿ ಇಂಥ ನೈಮಿತ್ತಿಕರ ಕಾಟ ಹೇಳತೀರದು. ಅವರ ದೃಷ್ಟಿಯಲ್ಲಿ ಮೂಲಾನಕ್ಷತ್ರದಲ್ಲಿ ಹುಟ್ಟುವ ಮಗುವಿಗೆ ಅನೇಕ ಅರಿಷ್ಟಗಳು ಕಾದುಕೊಂಡಿರುತ್ತವೆ. ಆ ಮಗು ಬದುಕಿರುವತನಕ ಶಾಂತಿಮಾಡಿಸುವ ನೆಪದಲ್ಲಿ ತಂದೆ ತಾಯಿಯರನ್ನು ಸುಲಿಗೆ ಮಾಡಿ, ಅವರಿಗೆ ಪಾಪರ್‌ಚೀಟಿ ಸಹ ಕೊಡಿಸುತ್ತಾರೆ. ಕೊನೆಗೆ ಮೂಲಾನಕ್ಷತ್ರದಲ್ಲಿ ಹುಟ್ಟಿದ ಮಗುವೇ ಆ ಬಡಪಾಯಿಗಳ ದಾರಿದ್ರ್ಯಕ್ಕೆ ಕಾರಣವೆಂದು ತೀರ್ಪೀಯುತ್ತಾರೆ. ಗಂಡು ಹೆಣ್ಣುಗಳಿಗೆ ರಾಶಿಬಲ ಕೂಡಲಿಲ್ಲ, ಇನ್ನೇನೋ ಲೊಟ್ಟಿಲೊಸಕು ಎಂದು ಹೇಳಿ ನವಗ್ರಹಪೂಜೆ ಮಾಡಿಸುವ ಮೂಲಕ ತಮ್ಮ ಚೀಲ ತುಂಬಿಕೊಳ್ಳುತ್ತಾರೆ. ಅವರ ಪಂಚಾಂಗದಲ್ಲಿ ಹೆಜ್ಜೆ ಹೆಜ್ಜೆಗೂ ಇಂಥ ದುರ್ನಿಮಿತ್ತಗಳೂ ಶಾಂತಿ ಕಾರ್ಯಗಳೂ ಕಾದುಕೊಂಡಿರುತ್ತವೆ.

ಈ ತನಕ ಸಾದೃಶ್ಯಮೂಲ ಮಾಟದ ವಿವಿಧ ಮುಖಗಳನ್ನು ಗಮನಿಸಿದ್ದಾಯಿತು. ಸಂಸರ್ಗೀಯ ಮಾಟದ ಸ್ವರೂಪವನ್ನು ತಿಳಿಯುವ ಸಲುವಾಗಿ ಕೆಲವು ನಿದರ್ಶನಗಳನ್ನಿಲ್ಲಿ ಉಲ್ಲೇಖಿಸಬಹುದು. ಮಗುವಿನ ಬಿದ್ದ ಹಲ್ಲುಗಳನ್ನು ಬಿಸಾಡಬಾರದೆಂದು ಈಚಿನ ತನಕ ಸಸೆಕ್ಸ್ ಪ್ರಾಂತ್ಯದ ಜನ ನಂಬಿಕೊಂಡಿದ್ದರು. ಯಾವುದಾದರೂ ಪ್ರಾಣಿ ಆ ಹಲ್ಲುಗಳನ್ನು ಕಡಿದದ್ದಾದರೆ, ಎರಡನೆಯಸಾರಿ ಹುಟ್ಟುವ ಮಗುವಿನ ಹಲ್ಲುಗಳು ಆ ಪ್ರಾಣಿಯ ಹಲ್ಲುಗಳನ್ನು ಹೋಲುತ್ತವಂತೆ. ಬಿಗಿ ಹಾಗೂ ಚೂಪಾದ ಹಲ್ಲುಗಳನ್ನುಳ್ಳ ಇಲಿಗಳು ಮಕ್ಕಳ ಹಲ್ಲುಗಳನ್ನು ಕಡಿದರೆ ಒಳ್ಳೆಯದಂತೆ. ಜರ್ಮನಿಯಲ್ಲಿ ಚಾಲ್ತಿಯಲ್ಲಿರುವ ವಾಡಿಕೆಯ ಪ್ರಕಾರ, ಒಲೆಯ ಹಿಂದೆ ನಿಂತು, "ಇಲಿರಾಜ, ನನ್ನ ಮೂಳೆಯ ಹಲ್ಲು ನಿನಗೆ ಕೊಡುತ್ತೇನೆ. ನಿನ್ನ ಉಕ್ಕಿನ ಹಲ್ಲು ನನಗೆ ಕೊಡು" ಎಂದು ಹೇಳುತ್ತ ಮಗು ತನ್ನ ಹಲ್ಲನ್ನು ತಲೆಯ ಮೇಲಿಂದ ಹಿಂದಕ್ಕೆಸೆದರೆ, ಉಳಿದ ಹಲ್ಲುಗಳು ಬಲವಾಗಿರುತ್ತವಂತೆ. ಪೆಸಿಫಿಕ್

ಸಾಗರದ ಕೆಲವು ದ್ವೀಪಗಳ ಮಕ್ಕಳು ಹೊಸ ಹಲ್ಲು ಕೊಡೆಂದು ಇಲಿಯನ್ನು ಪ್ರಾರ್ಥಿಸುತ್ತ ಬಿದ್ದ ಹಲ್ಲನ್ನು ಚಾವಣಿಯ ಮೇಲೆ ಬಿಸಾಡುತ್ತಾರೆ. ಬಿದ್ದ ಹಲ್ಲನ್ನು ಸಗಣಿಯ ಉಂಡೆಯೊಳಗಿಟ್ಟು ಮನೆಯ ಹಾರಿನಮೇಲೆ ಬಿಸಾಡುವ ಪದ್ಧತಿ ಮಂಡ್ಯ ಬೆಂಗಳೂರು ಕಡೆಗಳಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ಕೇರೊಲಿನ್ ದ್ವೀಪಗಳಲ್ಲೊಂದಾದ ಪೊಣಪೆಯಲ್ಲಿ ನಾಭಿನಾಳವನ್ನು ಚಿಪ್ಪಿನಲ್ಲಿಟ್ಟು ಮಗುವಿನ ಭವಿಷ್ಯಕ್ಕೆ ನಾಂದಿಯಾಗುವ ರೀತಿಯಲ್ಲಿ ಅದನ್ನು ನಿಕ್ಷೇಪಗೊಳಿಸುತ್ತಾರೆ; ಮುಂದೆ ಮಗು ಮರ ಹತ್ತುವ ಕಲೆಯಲ್ಲಿ ನಿಷ್ಣಾತನಾಗಬೇಕಾದರೆ ಅದನ್ನೊಂದು ಮರಕ್ಕೆ ತೂಗುಹಾಕುತ್ತಾರೆ. ಕೈದ್ವೀಪದ ಜನ ಹೊಕ್ಕುಳ ಬಳ್ಳಿ ಮಗುವಿನ ತಮ್ಮ ಅಥವಾ ತಂಗಿ ಎಂದು ತಿಳಿಯುತ್ತಾರೆ. ಕೆಲವು ಕಡೆ ಸತ್ತಿಯನ್ನು ಎರಡನೆಯ ಮಗು ಎಂದು ಬಗೆಯುತ್ತಾರೆ. ಅದನ್ನು ಬಾಳೆಯ ಗಿಡದ ಬೇರಿನೊಡನೆ ಹೂಳುತ್ತಾರೆ. ಹಣ್ಣು ಬಿಟ್ಟು, ಹಣ್ಣಿನಿಂದ ಹಬ್ಬಮಾಡುವ ತನಕ ಆ ಗಿಡ ಪವಿತ್ರವೆಂದು ಪರಿಗಣಿಸಲಾಗುತ್ತದೆ. ಪ್ರಾಚೀನ ಮೆಕ್ಸಿಕೋದಲ್ಲಿ ಹೊಕ್ಕುಳ ಬಳ್ಳಿಯನ್ನು ಸೈನಿಕರ ಮೂಲಕ ಕಳಿಸಿ ರಣಭೂಮಿಯಲ್ಲಿ ಹೂಳಿಸುತ್ತಿದ್ದರು. ಮಕ್ಕಳು ಮುಂದೆ ರಣಾಸಕ್ತರಾಗಬೇಕೆಂಬುದೇ ಆ ಆಚರಣೆಯ ಉದ್ದೇಶ. ಇದಕ್ಕೆ ಸಂಬಂಧಿಸಿದ್ದ ಮಂತ್ರಕಾರ್ಯಗಳು ದೇಶದಿಂದ ದೇಶಕ್ಕೆ ಭಿನ್ನವಾಗುತ್ತವೆ ಮತ್ತು ಅಸಂಖ್ಯವಾಗಿವೆ. ನಾಭಿನಾಳದಲ್ಲಿ ಮಗುವಿನ ರಕ್ಷಾಶಕ್ತಿ ಅಥವಾ ಅದರ ಆತ್ಮದ ಒಂದು ಭಾಗ ಸದಾ ಅಂಟಿಕೊಂಡಿರುತ್ತವೆಂಬ ನಂಬಿಕೆಯೇ ಈ ಆಚರಣೆಗಳ ಹಿಂದಿರುವ ಚಾಲಕಶಕ್ತಿ. ಸತ್ತಿಯ ಬಗೆಗೂ ಅಂಥವೇ ನಂಬಿಕೆಗಳು ಸಾರ್ವತ್ರಿಕವಾಗಿ ಪ್ರಚಲಿತವಾಗಿವೆ.

ಸಂಸರ್ಗೀಯ ಮಾಟದ ಪ್ರಯೋಗಗಳನ್ನು ಗಾಯಾಳುಗಳ ವ್ರಣನಿವಾರಣೆಗಾಗಿ ಬಳಸುತ್ತಾರೆ. ಗಾಯಕ್ಕೂ ಗಾಯವನ್ನುಂಟುಮಾಡಿದ ಕರಣಕ್ಕೂ ಸಂಬಂಧವಿರುವುದರಿಂದ ಕರಣವನ್ನು ಮಾಟಕ್ಕೊಳಗುಮಾಡಿದರೆ ಗಾಯ ವಾಸಿಯಾಗುತ್ತದೆಂಬ ನಿರೀಕ್ಷೆಯ ಮೇಲೆ ಸಿದ್ಧಾಂತ ರೂಪುಗೊಂಡಿದೆ. ಗಾಯಗೊಳಿಸಿದ್ದಕ್ಕಾಗಿ ಅನುಕಂಪ ವ್ಯಕ್ತಪಡಿಸಿ, ಗಾಯಗೊಳಿಸಿದ ಕೈಗೆ ಉಗಿದರೆ, ಗಾಯದ ನೋವು ಕಡಮೆಯಾಗುತ್ತದೆಂದು ಪ್ಲಿನಿ ಹೇಳುತ್ತಾನೆ. ಗಾಯಗೊಳಿಸಿದ ಬಾಣವನ್ನು ತಣ್ಣನೆಯ ತಾಣದಲ್ಲಿರಿಸಿದರೆ ಗಾಯದ ಉರಿ ತಗ್ಗುತ್ತದೆಂದು ಮೆಲನೇಷಿಯಾದ ಜನ ತಿಳಿದುಕೊಂಡಿದ್ದಾರೆ. ಆ ಗಾಯ ಉಲ್ಬಣಗೊಳ್ಳಬೇಕೆಂದು ಗಾಯಾಳುವಿನ ಶತ್ರುಗಳು ಇಚ್ಛಿಸಿದ್ದಾದರೆ, ಅವರು ಖಾರದ ಪಾನಕಗಳನ್ನು ಕುಡಿಯುತ್ತಾರೆ, ಇಲ್ಲವೆ ನವೆಹುಟ್ಟಿಸುವ ಎಲೆಗಳನ್ನು ಅಗಿಯುತ್ತಾರೆ. ಅಷ್ಟೇ ಅಲ್ಲ, ಚಾಪವನ್ನು ಬೆಂಕಿಯ ಬಳಿ ಇರಿಸುತ್ತಾರೆ. ಗಾಯಗೊಳಿಸಿದ ಬಾಣಕ್ಕೆ ಮುಲಾಮು ಹಚ್ಚಿದರೆ ಗಾಯ ವಾಸಿಯಾಗುತ್ತದೆಂದು ಬೇಕನ್ ಸಹ ಹೇಳುತ್ತಾನೆ.[1] ಇಂದಿಗೂ ಸಫೋಕ್ (Suffolk) ಜನ ಕೈಗೂ ಕಾಲಿಗೂ ಮುಳ್ಳು ಚುಚ್ಚಿತೆಂದರೆ, ಹೊರತೆಗೆದ

---

1 It is constantly received avouched that the anointing of the weapon that maketh the wound will heal the wound itself—Quoted in *The Golden bough* by J.G. Frazer, p. 54.

ಅದಕ್ಕೆ ಮುಲಾಮು ಹಚ್ಚುತ್ತಾರೆ. ಕುದುರೆಯ ಕಾಲಿಗೆ ಹೊಕ್ಕಿಕೊಂಡ ಮೊಳೆಯನ್ನು ತೆಗೆದು ಶುಚಿ ಮಾಡಿ ಪ್ರತಿ ದಿನ ಅದಕ್ಕೆ ಮುಲಾಮು ಬಳಿಯುತ್ತಾರೆ. ಹಾಗೆ ಮಾಡ ದಿದ್ದರೆ ಗಾಯ ನಂಜಾಗುತ್ತದೆ. ಅಂತೆಯೇ ಮನುಷ್ಯನನ್ನಿರಿದ ಬಾಕುವಿಗೆ ಮುಲಾಮು ಹಚ್ಚಿ, ಹಾಸುಗೆಯ ಮೇಲೆ ಅವನ ಬಳಿ ಇಟ್ಟರೆ ಮಾತ್ರ ಅವನು ಬೇಗ ಗುಣಮುಖ ನಾಗುತ್ತಾನೆಂದು ಎಸೆಕ್ಸ್ ಜನ ಭಾವಿಸುತ್ತಾರೆ. ಕಳ್ಳ ಸಿಗದಿದ್ದಾಗ, ಅವನ ಬಟ್ಟೆ ಸಿಕ್ಕಿದರೆ ಸಾಕು, ಅದನ್ನು ಬಡಿದಾಗ ಕಳ್ಳ ಕಾಯಿಲೆಯಿಂದ ಮಲಗುತ್ತಾನೆಂಬುದು ಪ್ರಷ್ಯಾ ಜನರ ಕಲ್ಪನೆ.

ಯಜ್ಞಪಶುವಿನ ವಸ್ತುಗಳಾಗಲಿ ಅವಯವಗಳಾಗಲಿ ಸಿಗದಿದ್ದಾಗ ಅವನ ಶರೀರವೋ ಅಥವಾ ಅದರ ಭಾಗಗಳೋ ನೆಲ ಅಥವಾ ಮರಳಿನ ಮೇಲೆ ಊರಿದ ಚಿಹ್ನೆಗಳು ದೊರೆ ತರೂ ಮಾಟ ಸಾಧ್ಯ. ಹೆಜ್ಜೆ ಗುರುತನ್ನು ಹಿಂಸಿಸುವುದರ ಮೂಲಕ ಅದನ್ನು ಮುದ್ರಿಸಿದ ಪಾದಗಳನ್ನು ಸಹ ಹಿಂಸಿಸಬಹುದಂತೆ. ಹೆಜ್ಜೆ ಗುರುತಿನ ಮೇಲೆ ಗಾಜಿನ, ಮೂಳೆಯ ಅಥವಾ ಕಲ್ಲಿದ್ದಲಿನ ಚೂರನ್ನಿರಿಸಿ, ಮನುಷ್ಯನನ್ನು ಪಂಗುಗೊಳಿಸಬಹುದೆಂದು ಆಗ್ನೇಯ ಆಸ್ಟ್ರೇಲಿಯಾ ಜನರ ಎಣಿಕೆ. ಹೆಜ್ಜೆ ಗುರುತಿನ ಮೇಲೆ ಮೊಳೆ ಬಡಿದರೆ, ಅದನ್ನು ಮುದ್ರಿಸಿದ ಪಾದಗಳು ಮುಂದೆ ಚಲಿಸಲಾರವೆಂದೂ, ಮೊಳೆಯನ್ನು ತೆಗೆದಾಗ ಅವು ಚಲಿಸುತ್ತವೆಂದೂ ಫ್ರಾನ್ಸ್‌ದೇಶದ ಕೆಲವು ಕಡೆಯ ಜನ ನಂಬಿದ್ದಾರೆ. ಇದೇ ತತ್ವವನ್ನು ಕೆಲವರು ಬೇಟೆಯಾಡುವ ಪ್ರಾಣಿಗಳಿಗೂ ಅನ್ವಯಿಸುತ್ತಾರೆ. ಬೇಟೆಯ ಪ್ರಾಣಿಗಳ ಹೆಜ್ಜೆಯಿರುವ ಮರಳನ್ನು ಗಾಳಿಗೆಸೆದರೆ ಅವು ತಟಕ್ಕನೆ ನಿಂತುಬಿಡುತ್ತವೆಂದು ಹಾಟೆಂಟಾಟ್ (Hottentot) ಬೇಟೆಗಾರರ ತಿಳುವಳಿಕೆ. ಕೊನೆಗೆ ಬಲಿಜನರ ಭಾವಚಿತ್ರವಲ್ಲ, ಹೆಸರು ಸಿಕ್ಕಿದರೂ ಅವರನ್ನು ಆಹುತಿ ತೆಗೆದುಕೊಳ್ಳಬಹುದಂತೆ. ಆದ್ದರಿಂದಲೇ ಈಗಲೂ ಕಾಡು-ಜನ ಭಾವಚಿತ್ರ ತೆಗೆಸಿಕೊಳ್ಳಲು ಹಿಂಜರಿಯುತ್ತಾರೆ. ಅವರು ತಮ್ಮವರ ಹುಟ್ಟುಹೆಸರು ಸಹ ಬಯಲುಮಾಡುವುದಿಲ್ಲ. ಪ್ರತಿಯೊಬ್ಬರಿಗೂ ಎರಡೆರಡು ಹೆಸರಿದ್ದು, ಕೃತಕನಾಮವನ್ನು ತಿಳಿಸಿಯಾರೇ ಹೊರತು ನಿಜನಾಮವನ್ನು ಪ್ರಕಟಿಸುವುದಿಲ್ಲ. ಅಷ್ಟೇ ಅಲ್ಲ, ಮಂತ್ರಗಾರರಿಗೆ ಹೆದರಿ ಕುಲದೇವತೆಗಳ ಹೆಸರು ಸಹ ಬಹಿರಂಗಪಡಿಸುವುದಿಲ್ಲ. ಪ್ರಾಚೀನ ಈಜಿಪ್ಟ ಜನ ಹಾಗೂ ರೋಮನ್ನರು ತಮ್ಮ ನಗರದೇವತೆಗಳ ಹೆಸರನ್ನು ಅಪರಿಚಯಸ್ಥರಿಗೆ ತಿಳಿಸುತ್ತಿರಲಿಲ್ಲ. ಮಲಗಿದ್ದಾಗ ಶರೀರದ ಒತ್ತಿನಿಂದಾಗುವ ಮುದ್ರೆಗಳನ್ನು ಎದ್ದೊಡನೆಯೇ ಅಳಿಸಿಬಿಡಬೇಕೆಂದು ಪ್ರಾಚೀನ ಗ್ರೀಕರು ಹೇಳುತ್ತಿದ್ದರು. ಅವು ಶತ್ರುಗಳ ಕಣ್ಣಿಗೆ ಬಿದ್ದರೆ ದುರುಪಯೋಗವಾಗಬಹುದೆಂಬ ಅಂಜಿಕೆ ಅವರದು.

ಇದೇ ಸಂದರ್ಭದಲ್ಲಿ ಮತ್ತೊಂದು ಪ್ರಮುಖ ವಿಷಯವನ್ನು ನೆನೆಸಿಕೊಳ್ಳಬೇಕಾಗಿದೆ. ಯಾವೊಂದು ವ್ಯಾವಹಾರಿಕ ಕ್ಷೇತ್ರವಲ್ಲಾಗಲಿ ಜನ ಹೆಚ್ಚಿದಂತೆ ತಿಕ್ಕಾಟ ಹೆಚ್ಚುವುದೂ ಸಹಜ. ಅಂತೆಯೇ ಮಾಟಗಾರಿಕೆಯೊಂದು ಲಾಭದಾಯಕವಾದ ವೃತ್ತಿಯೆಂದು ಪುರ ಸ್ಕೃತವಾದನಂತರ ಸ್ಪರ್ಧಾಳುಗಳ ಸಂಖ್ಯೆ ಬಲವಾಯಿತು. ಶೀನಣ್ಣ ಕಾಮಣ್ಣನ ಏಳ್ಗೆ ಯನ್ನು ಹಾಳುಮಾಡುವ ಉದ್ದೇಶದಿಂದ ಒಬ್ಬ ಮಾಟಗಾರನ ಬಳಿ ಕಣ್ಕಟ್ಟಿನ ಪ್ರಯೋಗ

ಕ್ಕಾಗಿ ಹೋಗುತ್ತಾನೆಂದಿಟ್ಟುಕೊಳ್ಳೋಣ. ಅವನು ತನಗೆ ಬರಬೇಕಾದ ರುಸುಂ ತೆಗೆದು ಕೊಂಡು ಮಾಟಮಾಡುತ್ತಾನೆ. ಆ ವಿಷಯ ಕಾಮಣ್ಣನಿಗೆ ಗೊತ್ತಾಗಿ ಮತ್ತೊಬ್ಬ ಮಾಟಗಾರನ ಬಳಿ ಹೋಗಿ ಎದಿರು ಅಥವಾ ತಡೆಮಾಟ ಮಾಡಿಸುತ್ತಾನೆ. ಇದರಿಂದ ಕಾಮಣ್ಣನ ದಿಟ್ಟಿ ನಷ್ಟವಾಗುವುದಿಲ್ಲ. ಅಷ್ಟೇ ಅಲ್ಲ, ಶೀನಣ್ಣನಿಗೆ ತೊಂದರೆಯಾಗುವ ಸಂಭವವೂ ಉಂಟು. ಇಲ್ಲಿ ಬಲಿಪಶುಗಳ ಪೈಪೋಟಿ ಮಾಟಗಾರರ ಸ್ಪರ್ಧೆಯಾಗಿ ಪರಿಣಮಿಸುತ್ತದೆ. ಇಂದಿಗೂ ದಕ್ಷಿಣ ಕನ್ನಡ ಮತ್ತು ಕೊಯಮುತ್ತೂರು ಜಿಲ್ಲೆಗಳಲ್ಲಿ ಇಂಥ ಸಂಗತಿಗಳು ನಡೆಯುತ್ತವೆಂದು ಕೇಳಿದ್ದೇನೆ. ಸ್ಕಾಂಡಿನೇವಿಯಾದಲ್ಲಿ ಹೀಗೆ ನಡೆ ಯಿತೆಂದು ಹೇಳುವ ಕತೆಯೊಂದನ್ನಿಲ್ಲಿ ನಿದರ್ಶನವಾಗಿ ಉದ್ಧರಿಸಬಹುದು. ಡೇನರ ದೊರೆ ಹೆರಾಲ್ಡ್ ಗಾರಮ್‌ಸನ್ ಐಸ್‌ಲೆಂಡಿನ ಸ್ಥಿತಿಗತಿಗಳನ್ನು ತಿಳಿಯುವ ಸಲುವಾಗಿ ಒಬ್ಬ ಮಂತ್ರಗಾರನನ್ನಲ್ಲಿಗೆ ಕಳಿಸುತ್ತಾನೆ. ಮಂತ್ರಗಾರ ತಿಮಿಂಗಲದ ರೂಪ ತಾಳಿ ಕೊಂಡು ದ್ವೀಪವನ್ನು ತಲುಪುತ್ತಾನೆ. ಈ ಸಂಗತಿಯ ಸುಳುಹು ತಿಳಿದ ಐಸ್‌ಲೆಂಡಿನ ನಾಲ್ವರು ಮಂತ್ರಗಾರರು ತಮ್ಮ ವಿದ್ಯೆಯ ಬಲದಿಂದ ಅವನು ದಡ ಸೇರದಂತೆ ಅಡ್ಡಿ ಮಾಡುತ್ತಾರೆ. ಈ ತೆರನ ರೂಪಪರಾವರ್ತನ ವಿದ್ಯೆ ಭಾರತೀಯ ಪುರಾಣೇತಿಹಾಸಗಳ ನ್ನೋದಿದವರಿಗೆ ಹೊಸದೇನೂ ಅಲ್ಲ.

ಈ ತನಕ ಖಾಸಗಿಕ್ಷೇತ್ರಕ್ಕೆ ಸಂಬಂಧಿಸಿದ ಮಾಟಗಳನ್ನು ಪರಿಶೀಲಿಸಿದ್ದಾಯಿತು. ಒಬ್ಬ ವ್ಯಕ್ತಿ ಅಥವಾ ಕುಟುಂಬದ ಕ್ಷೇಮಕ್ಕಾಗಿ ನಡಸುವ ತಂತ್ರಗಳನ್ನು ಸ್ಥೂಲವಾಗಿ ವಿವರಿಸಿ ದ್ದಾಯಿತು. ಆದಿಮಾನವ ಸಮಾಜದಲ್ಲಿ ಸಾರ್ವತ್ರಿಕವಾದ ಮಾಟಗಳಿಗೂ ಅವಕಾಶ ವುಂಟು. ಸಮಷ್ಟಿಕ್ಷೇಮವೇ ಅವುಗಳ ಉದ್ದೇಶ. ವ್ಯಕ್ತಿ ವ್ಯಕ್ತಿ ಸೇರಿದರೆ ಸಮಷ್ಟಿಯಾಗು ತ್ತದೆ, ವ್ಯಕ್ತಿಗಳ ಅಭ್ಯುದಯದಿಂದ ಸಮಷ್ಟಿಕಲ್ಯಾಣ ಸಾಧನೆಯಾಗುತ್ತದೆಂಬುದು ನಿಜ. ಒಂದು ವ್ಯಕ್ತಿಗೆ ಪ್ಲೇಗು ತಗಲಿದರೆ ಇಡೀ ಸಮಾಜಕ್ಕೆ ಅದರ ಸೋಂಕು ತಗುಲುತ್ತದೆನ್ನುವ ದೃಷ್ಟಿಯಿಂದ ವ್ಯಕ್ತಿಕ್ಷೇಮವೂ ಮುಖ್ಯ. ಹೊಕ್ಕುಳಬಳ್ಳಿ ಅಥವಾ ವೈಯಕ್ತಿಕ ವೈರಕ್ಕೆ ಸಂಬಂಧಿಸಿದ ವಿಧಿಶಾಂತಿಕರ್ಮಗಳು ಕೇವಲ ವೈಯಕ್ತಿಕವಾದುವು: ಅವು ಸಮಷ್ಟಿಹಿತಕ್ಕೆ ಅನುಕೂಲವಾಗುತ್ತವೆನ್ನುವಂತಿಲ್ಲ. ಮಳೆಯ ಅಭಾವದಿಂದ ಇಡೀ ಸಮಾಜಕ್ಕೆ ಕೇಡಾಗು ತ್ತದೆ. ಅಲ್ಲಿ ವ್ಯಷ್ಟಿ ಮತ್ತು ಸಮಷ್ಟಿಹಿತಗಳು ಒಂದಾಗಿರುತ್ತವೆ. ಅಂಥ ಕಡೆ ಸಮಷ್ಟಿ ಹಿತದಲ್ಲಿ ವ್ಯಷ್ಟಿಹಿತ ಕೂಡಿಕೊಂಡಿರುತ್ತದೆ. ಸಮಷ್ಟಿಹಿತಕ್ಕಾಗಿ ಆಚರಣೆಗಳನ್ನು ನಡಸುವ ಮಾಟಗಾರ ಜನರ ಕಣ್ಣಿನಲ್ಲಿ ದೊಡ್ಡವನಾಗುತ್ತಾನೆ; ಎಲ್ಲರ ಕಣ್ಣಿಗೆ ಬೀಳುವಂತಾಗು ತ್ತದೆ; ಇತರರಿಗಿಂತ ಒಂದಂಗುಲ ಎತ್ತರವಾಗಿ ಕಾಣುತ್ತಾನೆ; ಎಲ್ಲರಿಂದ ಗೌರವ ಪಡೆಯುವಂತಾಗುತ್ತಾನೆ. ಒಂದು ರೀತಿಯಲ್ಲಿ ಅವನು ಸಮಾಜದ ಮುಖಂಡನಾಗು ತ್ತಾನೆ, ಸಾರ್ವಜನಿಕ ಅಧಿಕಾರಿಯಾಗುತ್ತಾನೆ. ಒಂದು ಕುಲದ ಕ್ಷೇಮಕ್ಕೆ ಅವನು ಹೊಣೆಗಾರನಾದ್ದರಿಂದ, ಆ ಕ್ಷೇಮ ಅವನ ಮಂತ್ರವಿದ್ಯೆಯನ್ನವಲಂಬಿಸಿದ್ದರಿಂದ ಅವನು ಪ್ರಸಿದ್ಧ ಹಾಗೂ ಪ್ರಭಾವಶಾಲೀ ವ್ಯಕ್ತಿಯಾಗುತ್ತಾನೆ.

ಅನಾವೃಷ್ಟಿಯಿಂದೊದಗಿದ ಕೇಡಿನ ನಿವಾರಣೆಗಾಗಿ ಮತ್ತು ಮಳೆಯನ್ನೆಳೆತರುವ

ಸಲುವಾಗಿ ರಷ್ಯಾ ದೇಶದ ಪ್ಲೋಸ್ಕ (Ploska) ಎಂಬ ಹಳ್ಳಿಯ ಹೆಂಗಸರು ಮತ್ತು ಹುಡುಗಿಯರು ರಾತ್ರಿಯವೇಳೆ ಪೂರ್ಣ ನಗ್ನರಾಗಿ ಗಡಿಗೆಗಳಲ್ಲಿ ನೀರು ಹೊತ್ತುಕೊಂಡು ಗಡಿಯ ಬಳಿ ಸುರಿಯುತ್ತಿದ್ದರಂತೆ. ಮಳೆ ಮಾಟದಲ್ಲಿ ಚೀನೀಯರು ಬಹು ಪ್ರಸಿದ್ಧಿ. ಮಳೆರಾಯನಿಗೆ ಪ್ರತೀಕವಾಗಿ ಕಾಗದ ಅಥವಾ ಮರದಿಂದ ಡ್ರೇಗನ್‌ನಂಥ ಪ್ರಾಣಿಯ ಬೊಂಬೆಯನ್ನು ರಚಿಸಿ, ಬೀದಿಗಳಲ್ಲಿ ಮೆರೆವಣಿಗೆ ಮಾಡುತ್ತಾರೆ. ಆಗಲೂ ಮಳೆ ಬರದಿದ್ದರೆ ಅವನ್ನು ಚೂರುಚೂರಾಗಿ ಹರಿದುಹಾಕುತ್ತಾರೆ. ದೇವತೆಯ ಪಟ್ಟದಿಂದ ಕೆಳಗಿಳಿಸುವುದಾಗಿ ಹೆದರಿಸುತ್ತಾರೆ. ಭಾರತದಲ್ಲಿ, ಅದರಲ್ಲಿಯೂ ಕರ್ನಾಟಕದ ಕೆಲವು ಕಡೆ ಮಳೆರಾಯನನ್ನು ಆಹ್ವಾನಿಸುವ ರೀತಿಯೇ ಬೇರೆ. ಹಳ್ಳಿಯ ತರುಣ ತರುಣಿಯರು ತಮ್ಮಟೆ ಹೊಡೆಯಿಸಿಕೊಂಡು ಊರಮುಂದಣ ಕೆರೆಗೆ ಹೋಗುತ್ತಾರೆ. ಅಲ್ಲಿ ಅಳಿದುಳಿದಿರುವ ನೀರನ್ನುಪಯೋಗಿಸಿ, ಅಲ್ಲಿಯ ಮಣ್ಣಿನಿಂದ ಮಳೆರಾಯನ ಪ್ರತಿಮೆಯನ್ನು ತಿದ್ದುತ್ತಾರೆ. ಅರೆನಗ್ನನಾದ ಹುಡುಗನ ತಲೆಯ ಮೇಲೆ ಅದನ್ನು ಹೊರಿಸುತ್ತಾರೆ. ಅವನ ಮೈಮೇಲೆ ಎಲೆಯ ಬಳ್ಳಿಗಳನ್ನು ಜೋಲುಬಿಡುತ್ತಾರೆ. ಅನಂತರ ಬೀದಿಬೀದಿಗಳಲ್ಲಿ ಮೆರೆವಣಿಗೆ ಸಾಗುತ್ತದೆ. "ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ಕಟ್ಟಿಗೆ ನೀರಿಲ್ಲ; ಕುಟ್ಟೋ ಕುಟ್ಟೋ ಮಳೆರಾಯ ಕುನ್ನೀರ್ಕಟ್ಟಿಗೆ ನೀರಿಲ್ಲ" ಎಂದು ಮುಂತಾಗಿ ಜತೆಯವರು ಕುಣಿಯುತ್ತ ಹಾಡುತ್ತಾರೆ. ಮನೆಮನೆಯಲ್ಲಿ ಮಳೆರಾಯನ ಮೇಲೆ ನೀರು ಹೊಯ್ದು ಕಾಣಿಕೆ ನೀಡುತ್ತಾರೆ. ಮೆರೆವಣಿಗೆ ಮುಗಿದನಂತರ ಕೆರೆಯ ಬಳಿ ಪರಮಾಡಿ ಎಲ್ಲರೂ ಊಟ ಮಾಡುತ್ತಾರೆ. ಮಳೆಮಾಟಕ್ಕೆ ಪ್ರಾಶಸ್ತ್ಯವಿಲ್ಲದ ದೇಶವೇ ಇಲ್ಲ. ಆ ಸಂಪ್ರದಾಯ ಅನೇಕ ದೇಶಗಳಲ್ಲಿ ಇಂದಿಗೂ ಚಾಲ್ತಿಯಲ್ಲಿದೆ.

ಅಂಥಹೊಂದು ಸಮಯದಲ್ಲಿ ಜಾದುಗಾರಿಕೆ ಶ್ರೇಷ್ಠವೃತ್ತಿಯಾಗಿ ಪರಿಣಮಿಸುತ್ತದೆ. ಉಳಿದೆಲ್ಲ ವೃತ್ತಿಗಳು ಅದರ ಮುಂದೆ ಸಪ್ಪೆ, ಮಾತ್ರವಲ್ಲ, ಕಿಂಕರಸ್ಥಾನದಲ್ಲಿ ನಿಲ್ಲುವಂತಾಗುತ್ತದೆ. ಹೀಗಾಗಿ ಈ ಪ್ರತಿಷ್ಠೆಯ ಮಂತ್ರವಿದ್ಯೆ ಕುಲದ ಮೇಧಾವಿಗಳನ್ನೂ ಮಹತ್ವಾಕಾಂಕ್ಷಿಗಳನ್ನೂ ಚತುರರನ್ನೂ ಆಕರ್ಷಿಸುವಂತಾಯಿತು. ಅಂಥ ವೃತ್ತಿಯಿಂದ ಗೌರವ ಧನ ಅಧಿಕಾರ ಎಲ್ಲವೂ ದೊರಕುವಾಗ ಸ್ಪರ್ಧೆ ಸಂಭವಿಸುವುದೂ ಸಹಜವೇ. ಮೊದ ಮೊದಲು ಶ್ರದ್ಧೆಯೊಂದೇ ಯಕ್ಷಿಣಿಯ ಮೂಲಶಕ್ತಿಯಾಗಿದ್ದದ್ದು, ಬರಬರುತ್ತ ಅದರ ಜತೆಗೆ ಯುಕ್ತಿಚಮತ್ಕಾರಗಳೂ ಸೇರಿಕೊಂಡುವು. ಕುಯುಕ್ತಿಯ ಜನ ಕುಲಕಲ್ಯಾಣದ ಮರೆಯಲ್ಲಿ, ಮತ್ತು ಅದರ ಹೆಸರಿನಲ್ಲಿ ಸ್ವಹಿತಸಾಧನಾಸಕ್ತರಾದರು. ಸಮಾಜದ ದುರ್ಬಲ ವರ್ಗವನ್ನು ತಮ್ಮ ಅನುಕೂಲಕ್ಕಾಗಿ ಸುಲಿಗೆ ಮಾಡಿದರು; ಅವರ ಮೌಢ್ಯಾಭಿಮಾನವನ್ನು ದುರುಪಯೋಗಪಡಿಸಿಕೊಂಡರು, ಅವರನ್ನು ಪಶುತನಕ್ಕಿಳಿಸಿದರು. ಅದೇ ವ್ಯವಸ್ಥೆ ಮುಂದುವರಿಯುವುದಾದರೆ ತಮ್ಮ ಪೀಳಿಗೆ ಸುಖವಾಗಿರುತ್ತದೆಂದೂ, ಅವರು ತಮ್ಮ ಸಂತಾನದ ಕ್ಷೇಮಕ್ಕಾಗಿ ಸತತವಾಗಿ ದುಡಿಯುತ್ತಾರೆಂದೂ ಯೋಚಿಸಿಕೊಂಡರು. ಆದರೆ ಅವರು ತಮ್ಮ ಜಾದುಗಾರಿಕೆಯಲ್ಲಿ ನಂಬಿಕೆ ಕಳೆದುಕೊಳ್ಳಲಿಲ್ಲ. ಆದರೆ ಅದು ವಿಫಲವಾದಾಗ ಹೆದರಲಿಲ್ಲ; ಕೃತ್ರಿಮದ ಕತೆಗಳನ್ನು ಸೃಷ್ಟಿಸಿ, ಏನೇನೋ ಸಬೂಬೊಡ್ಡಿ, ಜನ

ಅವನ್ನು ನಂಬುವಂತೆ ಮಾಯಾಜಾಲವನ್ನು ಬೀಸಿದ. ಮಿಥ್ಯೆಯಲ್ಲಿ ವಿಶ್ವಾಸ ಬಲಿಯುವಂತೆ ಹೂಡುವ ಹೂಟವೇ ಜಾದುಗಾರಿಕೆ; ನೀತಿಧರ್ಮಗಳ ಯಶಸ್ವೀ ಉಲ್ಲಂಘನೆಯೇ ಮಾಟಗಾರಿಕೆ; ವಂಚನೆಯ ಮತ್ತು ತಳುಕಿನ ಜಯವೇ ಮಂತ್ರವಿದ್ಯೆ.

ಮುಳುಗುವವನಿಗೆ ಘಟಸರ್ಪವೇ ಬೆಂಡಾಗುವಂತೆ, ದುರ್ನಿಮಿತ್ತಾರಿಷ್ಟಗಳ ಕೋಟಲೆಯಿಂದ, ನೈಸರ್ಗಿಕಶಕ್ತಿಗಳ ಚಿತ್ರಹಿಂಸೆಯಿಂದ ಕೊರಗಿ ನಿರ್ಜೀವವಾಗಿದ್ದ ಮಾನವನಿಗೆ ಅವುಗಳಿಂದ ಪಾರು ಮಾಡುತ್ತೇನೆಂದು ಮುಂದೆ ಬಂದವನು ತಾರಕಶಕ್ತಿಯಾದನು. ನೈಸರ್ಗಿಕ ಶಕ್ತಿಗಳನ್ನಡಗಿಸಬಲ್ಲ ಸಾಹಸಿಯಲ್ಲಿ ಸರ್ವಶಕ್ತಿಯನ್ನು ಕಂಡನು. ತನ್ನನ್ನೇ ಅವನಿಗರ್ಪಿಸಿಕೊಂಡು, ಜೀವನದ ಕೋಟಲೆಯಿಂದ ಪಾರಾದೆನೆಂಬ ಭ್ರಮೆಯಿಂದ, ಮಾನಸಿಕ ಸಂತೃಪ್ತಿಯಿಂದ ತೆಪ್ಪಗಾದನು. ಊರೂರಿಗೂ ಕೊಂಪೆಕೊಂಪೆಗೂ ಮಾಟಗಾರರಿದ್ದರಷ್ಟೆ. ಅವರಲ್ಲಿ ಬುದ್ಧಿವಂತರಾದವರು ಸಾರ್ವಜನಿಕ ಮುಖಂಡರಾದರು. ಅಧಿಕಾರ ದಕ್ಕಿದಾಗ ಬಿಡುವವರು ಕಡಮೆ; ಅದು ಸಿಕ್ಕಿದಾಗ ಬಲಪಡಿಸಿಕೊಳ್ಳದವರು ಅಥವಾ ಸ್ವಾರ್ಥಕ್ಕಾಗಿ ಬಳಸಿಕೊಳ್ಳದವರು ನಿಷ್ಪ್ರಯೋಜಕರು. ಆ ಮುಖಂಡರು ಕಾಲಕ್ರಮೇಣ ಕುಲದ ಕಟ್ಟುಕಾಯಿದೆಗಳನ್ನು ಬದಲಾಯಿಸಿದರು. ಅವರು ನುಡಿದದ್ದೆಲ್ಲ ಶಾಸನವಾಯಿತು, ನಡೆದದ್ದೆಲ್ಲ ಆಚಾರವಾಯಿತು. ಸಾಮಾನ್ಯಜನ ಜನ್ಮಾಂಧರಂತೆ ಹುಟ್ಟುಮೂಕರಂತೆ ಅವರಿಗೆ ವಿಧೇಯರಾದರು. ಈ ಮುಖಂಡರು ಮಾಡಿದ್ದೆಲ್ಲ ತಪ್ಪೆನ್ನುವಂತಿಲ್ಲ. ಸತ್ಕಾರ್ಯಗಳನ್ನು ಮಾಡಿದ್ದುಂಟು; ಅವುಗಳ ಪರಿಣಾಮವಾಗಿ ಸಮಾಜ ನಾಗರಿಕತೆಯ ಪಥದಲ್ಲಿ ಹೆಜ್ಜೆಹಾಕುವಂತಾಯಿತು. ನಾಗರಿಕತೆಯ ವಿಕಾಸದ ಜತೆಗೆ ದೊಡ್ಡವ ಸಣ್ಣವ, ಬುದ್ಧಿವಂತ ಬುದ್ಧಿಹೀನ, ಅಧಿಕಾರಿ ಅಧೀನ ಎಂಬ ವ್ಯತ್ಯಾಸಗಳೂ ಸಮಾಜದಲ್ಲಿ ತಲೆಹಾಕಿದ್ದುಂಟು.

ಮಂತ್ರವಿದ್ಯೆಯಾದರೂ ಜಡವಸ್ತುವಲ್ಲ, ನಿಂತ ಮಡುವಲ್ಲ, ಹರಿಯುವ ನದಿ. ಮಂತ್ರವಿದ್ಯಾತಜ್ಞರೆಲ್ಲರೂ ಸಾಮಾನ್ಯವಾಗಿ ಮೇಧಾವಿಗಳು, ಪ್ರತಿಭಾವಂತರು, ಕಲ್ಪನಾಸಮರ್ಥರು. ಪುರಾತನ ಪದ್ಧತಿಗಳಿಗೆ ಸಂಪೂರ್ಣವಾಗಿ ಅವರು ಕಟ್ಟುಬಿದ್ದವರಲ್ಲ. ಮಾನವ ಸಹಜವಾಗಿ ಸಾಹಸಿ. ಸ್ವಾಭಾವಿಕವಾಗಿ ಪ್ರಯೋಗಶೀಲ. ಹಳೆಯದರಿಂದ ಅವನೆಂದೂ ತೃಪ್ತನಾಗಲಿಲ್ಲ. ಹೊಸತನ್ನು ಉಪೇಕ್ಷಿಸಲಿಲ್ಲ. ತನ್ನಲ್ಲಿಯೂ ಮತಿಶಕ್ತಿಯಿದೆ ಎಂದು ತಿಳಿದಾಗ, ಇತರರ ಮೇಲೆ ತನ್ನ ಮುದ್ರೆಯೊತ್ತಲು ಪ್ರಯತ್ನಿಸಿದ್ದುಂಟು. ಹೀಗಾಗಿ ಮಂತ್ರವಿದ್ಯೆ ಭೂವ್ಯೋಮ ವ್ಯಾಪಕವಾಗಿ ಬೆಳೆಯಿತು. ಕೇವಲ ನಂಬಿಕೆಯಾಗಿದ್ದದ್ದು ಪ್ರಯೋಗದ ಮೂಲಕ ಅನುಭವವಾದದ್ದೂ ಉಂಟು. ನಂಬಿಕೆ ಅನುಭವಗಳ ಪುನರಾವರ್ತನೆಯೇ ನಾಗರಿಕತೆಗೆ ನಾಂದಿಯಾಯಿತು. ಕಾರಣದ ಪುನರಾವರ್ತನೆಯಿಂದ ಕಾರ್ಯ ಪುನರಾವರ್ತನೆಗೆ ಸಾಧ್ಯವೆಂಬುದನ್ನೂ, ನಿಯಮಬದ್ಧ ಶಾಸ್ತ್ರಾಚರಣೆಯಿಂದ ಅಪೇಕ್ಷಿತ ಫಲ ಲಭಿಸುತ್ತದೆಂಬುದನ್ನೂ ಮಂತ್ರಗಾರ ಬಲ್ಲ. ಅವನು ತಿಳಿದಿರುವ ಕಲಾಸೂತ್ರಗಳೇ ಅವನ ಪಾಲಿಗೆ ವಿಶ್ವನಿಯಮಗಳು. ಈ ನಿಯಮಗಳ ಉಲ್ಲಂಘನೆಯಿಂದ ಕೇಡು ಖಂಡಿತ. ಇದೇ ಸೂತ್ರಗಳು ವೈಜ್ಞಾನಿಕ ಕ್ಷೇತ್ರಕ್ಕೂ ಅನ್ವಯವಾಗುತ್ತವೆ.

ಇಬ್ಬರೂ ಸತ್ಯಾನ್ವೇಷಕರು; ಇಬ್ಬರೂ ಸೃಷ್ಟಿಯ ರಹಸ್ಯಗಳನ್ನು ಭೇದಿಸಿ, ಮಾನವ ಕುಟುಂಬಕ್ಕೆ ಕಲ್ಯಾಣವುಂಟುಮಾಡಬೇಕೆಂದು ಸಂಕಲ್ಪ ತೊಟ್ಟವರು. ಆದರೆ ಸಾದೃಶ್ಯ ತತ್ವದ ಆಧಾರದ ಮೇಲೆ ಕಾರಣಕಾರ್ಯಸಂಬಂಧವನ್ನು ಗಂಟುಹಾಕುವುದು ತಪ್ಪು. ಭಾವನಾಸಂಬಂಧ ನಿಯಮಗಳು ಮಾನವಮತಿಯ ವಿಕಾಸಕ್ಕೂ ವಿಜ್ಞಾನದ ಬೆಳವಣಿಗೆಗೂ ಅತ್ಯಾವಶ್ಯಕ. ಅವುಗಳ ಕ್ರಮಬದ್ಧ ಪ್ರಯೋಗ ವಿಜ್ಞಾನಕ್ಕೂ, ಅಕ್ರಮ ಪ್ರಯೋಗ ಮಾಟಕ್ಕೂ ದಾರಿಯಾಗುತ್ತದೆ. ಆದ್ದರಿಂದಲೇ ಮಾಟವನ್ನು ವಿಜ್ಞಾನದ ಇಬ್ಬಂದಿ ಅಥವಾ ಖೋಟಾ ಸೋದರಿ ಎಂದು ಕರೆಯುತ್ತಾರೆ.[1] ಅಂದಮೇಲೆ ಮಾಂತ್ರಿಕ ವಿಜ್ಞಾನಿಯೂ ಅಹುದು; ಆದರೆ ವೈಜ್ಞಾನಿಕ ಪ್ರಜ್ಞೆ ಅವನಲ್ಲಿ ವ್ಯಭಿಚಾರಭಾವವೇ ಹೊರತು ಸ್ಥಾಯಿಯ ಮಟ್ಟಕ್ಕೇರುವುದಿಲ್ಲ. ಸಾದೃಶ್ಯಮೂಲ ತತ್ವಗಳನ್ನು ಪ್ರಯೋಗಿಸುವಾಗ ಒಮ್ಮೊಮ್ಮೆ ಅವನು ಸತ್ಯದ ದಡವನ್ನು ಎಡಹುವುದೂ ಉಂಟು.

ಮಂತ್ರಗಾರಿಕೆ ಮತಗಳ ಉದಯಕ್ಕೂ ಬುನಾದಿಯಾಯಿತೆಂಬ ವಿಚಾರ ನಿರ್ವಿವಾದ. ಅಗೋಚರವಾದ ನೈಸರ್ಗಿಕ ಶಕ್ತಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ ಈ ಎರಡು ಪ್ರಕಾರಗಳ ಗುರಿ. ಗುರಿಯ ನೆರವೇರಿಕೆಯಲ್ಲಿ ವಿಧಾನದಲ್ಲಿ ಭಿನ್ನತೆ ಇರುವುದಾದರೂ, ಒಂದು ಮತ್ತೊಂದಕ್ಕೆ ಜನಕಸ್ಥಾನದಲ್ಲಿದೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಮಾನವಶಕ್ತಿಗೆ ಮೀರಿದ, ನಿಸರ್ಗ ಹಾಗೂ ಮಾನವಜೀವನ ವ್ಯಾಪಾರಗಳನ್ನು ನಿಯಂತ್ರಿಸುವಂಥ ಅಗೋಚರಶಕ್ತಿಗಳ ಅನುಗ್ರಹ ಅಥವಾ ಸ್ನೇಹಸಂಪಾದನೆಯೇ ಮತ ಎಂಬುದು ಕೆಲವರ ಮತ.[2] ದೇವರಲ್ಲಿ ನಂಬಿಕೆ ಮತ್ತು ಅವನ ಅನುಗ್ರಹ ಸಂಪಾದನೆ ಮತದ ಎರಡು ಪ್ರಮುಖ ಲಕ್ಷಣಗಳು. ಅನುಗ್ರಹ ಸಂಪಾದನೆಗೆ ಇದೇ ದಾರಿ ಎಂದು, ಈ ದಾರಿ ಸರಿ ಅದು ಸರಿಯಲ್ಲವೆಂದು ಹೇಳುವಂತಿಲ್ಲ. ಆಹುತಿಕೊಟ್ಟು ನೈವೇದ್ಯ ಅರ್ಪಿಸುವುದರ ಮೂಲಕ ಪೂಜೆ ಮಾಡಬಹುದು; ಸತ್ಯವಾಕ್ಯಪರಿಪಾಲನ, ದೇವಾಲಯ ನಿರ್ಮಾಣ, ಬಾವಿಯ ಸಮೇತ, ದಾನಧರ್ಮಗಳು ಸಹ ದೇವರನ್ನೊಲಿಸಿಕೊಳ್ಳುವ ಸಾಧನಗಳಾಗುತ್ತವೆ. ಹೀಗೆ ಸತ್ಕರ್ಮಾಚರಣೆಯ ಮೂಲಕ ಅಮಾನುಷಶಕ್ತಿಗಳ ಸಂಚಾರಪಥವನ್ನೇ ಬದಲಿಸಬಹುದೆಂದು ಮತ ಹೇಳುತ್ತದೆ. ನಿಸರ್ಗದ ಸ್ಥಿತಿಪರಿವರ್ತನೀಯತೆ ಮಾಟ ಹಾಗೂ ವಿಜ್ಞಾನದ ನಿಯಮಗಳಿಗೆ ಸವಾಲಾಗಿದೆ. ಅವುಗಳ ಪ್ರಕಾರ ನಿಸರ್ಗನಿಯಮಗಳು ಸ್ಥಿರ ಮತ್ತು ಅಪರಿವರ್ತನೀಯ. ವಿಜ್ಞಾನ ಆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಾದರೂ, ಮಾಟ ಕಾಲಕ್ರಮೇಣ ಅವನ್ನು ಸಡಿಲಿಸಿಕೊಂಡದ್ದುಂಟು. ಮಹಾ

---

[1] The principles of association are excellent in themselves, and indeed absolutely essential to the working of the human mind. Legitimately applied they yield science; illegimately applied they yield magic, the bastered sister of Science—*The golden Bough*, Sir James George Frazer, p. 65.

[2] By religion, then, I understand a propitiation or conciliation of powers superior to man which are believed to direct and control the course of nature and human life.—Ibid, p. 65.

ದೇವತೆಗಳೂ ತಮ್ಮ ಆಣತಿಯಂತೆ ನಡೆಯಬೇಕು, ಹಾಗಿಲ್ಲದೆ ಅವಿಧೇಯತೆಯಿಂದ ವರ್ತಿಸಿದ್ದಾದರೆ ಅವರನ್ನು ಚೂರುಚೂರು ಮಾಡುವುದಾಗಿ ಪ್ರಾಚೀನ ಈಜಿಪ್ಟಿನ ಮಾಂತ್ರಿಕರು ಬೆದರಿಕೆ ಹಾಕಿದ್ದುಂಟು. ಭಾರತದಲ್ಲಿಯೂ ಕೆಲವರು ಹೇಳುತ್ತಿದ್ದುದುಂಟು: ವಿಶ್ವವೆಲ್ಲ ದೈವಾಧೀನ, ದೇವರು ಮಂತ್ರಾಧೀನ, ಮಂತ್ರ ಬ್ರಾಹ್ಮಣಾಧೀನವೆಂದು. ದೇವರು ಬೇರೆಲ್ಲಿಯೂ ಇಲ್ಲ, ಬ್ರಾಹ್ಮಣರೇ ಪ್ರತ್ಯಕ್ಷ ದೇವರು, ಅವರೇ ವಿಶ್ವವನ್ನು ನಿಯಂತ್ರಿಸುತ್ತಾರೆಂಬ ನಂಬಿಕೆಯನ್ನು ಜನಮನದಲ್ಲಿ ಬಿತ್ತಿದ್ದುಂಟು.

ನಿಸರ್ಗನಿಯಮಗಳು ಸ್ಥಿರ ಎನ್ನುವ ಮತ್ತು ಅಮಾನುಷಶಕ್ತಿಗಳನ್ನೊಲಿಸಿಕೊಳ್ಳಬಹುದೆನ್ನುವ ಪರಸ್ಪರ ವಿರುದ್ಧ ಭಾವನೆಗಳು ತಲೆಯೆತ್ತಿ ಮೊದಮೊದಲು ಮಾಂತ್ರಿಕನ ಮನಸ್ಸನ್ನು ಪ್ರಕ್ಷುಬ್ಧಗೊಳಿಸಿರಬೇಕು; ಅವನ ಮನಸ್ಸು ಹೊಯ್ದಾಟದ ರಣರಂಗವಾಗಿರಬೇಕು. ಅಂಥ ಸಂದರ್ಭದಲ್ಲಿ ಅವನು ಎರಡನ್ನೂ ನಂಬಿಕೊಂಡಿರಬೇಕು. ದೇವರ ಅನುಗ್ರಹ ಸಂಪಾದನೆಯ ಕಡೆಗೂ ಅವನು ಪ್ರಯತ್ನ ನಡೆಸಿರಬೇಕು. ಮಂತ್ರಗಾರ ಮತ್ತು ಪುರೋಹಿತರಿಬ್ಬರೂ ಒಬ್ಬನಲ್ಲಿಯೇ ಏಕೀಭವಿಸಿ ಕೆಲವು ಕಾಲ ದ್ವಿವಿಧ ಸಾಧನೆಯಲ್ಲಿ ಮುಂದುವರಿದಿರಬೇಕು. ಮಾಟಗಾರಿಕೆ ಮಂತ್ರೋಚ್ಚಾರಣೆಗಳ ಜತೆಜತೆಗೆ ಪ್ರಾರ್ಥನೆ ಸಹ ನಿವೇದಿಸಿಕೊಂಡಿರಬೇಕು. ಸಂಪ್ರದಾಯಬದ್ಧರಾದ ಮಾಟಗಾರರಿಗೆ ಇವರು ಸಮಸ್ಯೆಯಾಗಿ ಅಸಹ್ಯವಾಗಿ ಕಂಡಿರಬೇಕು; ಇವರ ದ್ವಿವಿಧ ಸಾಧನೆ ಗೊಂದಲವಾಗಿ ಪರಿಣಮಿಸಿರಬೇಕು. ಭರತಖಂಡದಲ್ಲಿ ಯಜ್ಞಯಾಗಾದಿಗಳು ಅಸ್ತಿತ್ವಕ್ಕೆ ಬರುವ ಹೊತ್ತಿಗೆ ಪುರೋಹಿತ ಪದವಿ ಪ್ರತ್ಯೇಕಗೊಂಡು, ಸ್ಥಿರತೆಯನ್ನು ಪಡೆದಿದ್ದರೂ ಅವರ ಆಹುತಿ ಕರ್ಮಗಳಲ್ಲಿ ಇತರ ಆಚರಣೆಗಳಲ್ಲಿ ಮಾಟದ ಅಂಶಗಳು ಇದ್ದೇ ಇದ್ದುವು. ಅವು ಇದ್ದುವೆನ್ನುವುದಕ್ಕೆ ಅಥರ್ವವೇದವೇ ಸಾಕ್ಷಿ. ಅಷ್ಟೇ ಅಲ್ಲ, ಮಾಟದಲ್ಲಿ ಪ್ರಯುಕ್ತವಾಗುತ್ತಿದ್ದ ಮಂತ್ರಗಳು ಮತ್ತು ಆಚರಣೆಗಳು ಮತೀಯ ವಿಧಿನಿಯಮಗಳೊಳಗೆ ಸೇರಿಕೊಂಡುವು. ಮಂತ್ರ ಮತ್ತು ಪ್ರಾರ್ಥನೆಗಳ ನಡುವೆ ಹೆಚ್ಚು ವ್ಯತ್ಯಾಸವೂ ಇಲ್ಲ. ಮಂತ್ರಗಳೇ ಪ್ರಾರ್ಥನೆಯ ಅಂತಸ್ತಿಗೂ ಏರಿದ್ದುಂಟು. ನಮ್ಮಲ್ಲಿ ರೂಢಿಯಲ್ಲಿರುವ ವ್ರತಗಳಿಗೂ ಮಾಟಗಳೇ ಮೂಲವಿದ್ದಿರಬೇಕು. ಕಾಲಕ್ರಮೇಣ ಅದ್ಯತನ ಹಾಗೂ ಪುರಾತನ ಮಾಟಗಾರರ ನಡುವೆ ಬಿರುಕು ಹುಟ್ಟಿ, ದಿನೇ ದಿನೇ ಅಗಲವಾಯಿತು. ಪುರಾತನರಿಗೆ ಸವಾಲೆಸೆಯುವಂತೆ, ಅಥವಾ ಹಿಂದಿನ ಮಾಟಗಾರಿಕೆಯಲ್ಲಿ ಹುರುಳಿಲ್ಲವೆಂಬಂತೆ ಅದ್ಯತನರು ಹೊಸ ದಾರಿ ಹಿಡಿಯಲಾರಂಭಿಸಿದರು; ಹೊಸ ಕಟ್ಟುಕಟ್ಟಳೆ ವಾಡಿಕೆ ಮತ್ತು ಆಚರಣೆಗಳನ್ನು ಜಾರಿಗೆ ತಂದರು; ಪ್ರಾರ್ಥನಾಂಶವನ್ನು ಅಧಿಕಗೊಳಿಸಿದರು. ಅವರ ಮಂತ್ರಗಾರತನ ಒಳಪದರುಗಳಿಗೆ ಹರಿದು ಪುರೋಹಿತನ ಬಹಿರಂಗವಾಯಿತು. ಅವರಿಬ್ಬರೂ ಭಿನ್ನ ವರ್ಗಗಳಿಗೆ ಸೇರಿದ ಮುಖಂಡರಾದರು. ಹೀಗೆ ಮಾಟದ ಗರ್ಭದಿಂದ ಮತ ಉದಯವಾದಂತಾಯಿತು.

ಮಂತ್ರಗಾರ ಮತ್ತು ಪುರೋಹಿತರು ಸಂಪೂರ್ಣವಾಗಿ ಪ್ರತ್ಯೇಕಗೊಂಡನಂತರವೂ ಕೆಲವು ಕಾಲ ಸಾಮಾನ್ಯರಿಗೆ ಆ ವ್ಯತ್ಯಾಸ ಅರ್ಥವಾಗಲಿಲ್ಲ. ಮಂತ್ರಗಾರ ಮತ್ತು

ಪುರೋಹಿತರಿಬ್ಬರ ಯಶಸ್ಸು ಯಾವಾಗಲೂ ಸಾಮಾನ್ಯರ ಮೌಢ್ಯವನ್ನವಲಂಬಿಸಿರುವುದಷ್ಟೆ. ಅವರ ಸಮಾಧಾನಕ್ಕಾಗಿ ಪುರೋಹಿತ ಮಾಟಗಾರಿಕೆಯನ್ನು ಬೆರಸಬೇಕಾಯಿತು. ಪ್ರತಿಯೊಂದು ಮತದ ದೇವತಾಶಾಸ್ತ್ರದಲ್ಲಿ ಮಾಟದ ಪಳೆಯುಳಿಕೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಪುರೋಹಿತ ಹೇಳಿದ್ದನ್ನೆಲ್ಲ ದೇವರು ಕೇಳುತ್ತಾನೆ, ಯಾರ ಪರವಾಗಿ ಬೇಕಾದರೂ ಅವನು ದೇವರ ಅನುಗ್ರಹಕ್ಕಾಗಿ ಪ್ರಾರ್ಥನೆ ಸಲ್ಲಿಸಬಹುದೆಂಬ ಭಾವನೆಯೂ ಸಾಮಾನ್ಯ ಜನತೆಯಲ್ಲಿ ಬಲವಾಗಿ ಬೇರೂರಿತು. ಭೂಮಿಯ ಮೇಲೆ ದೇವರ ಕೃಪೆಯನ್ನು ಹರಿಸಿ, ಕ್ಷಾಮಡಾಮರಗಳನ್ನು ತಡೆಯಬಹುದು, ಝಂಝಾವಾತವನ್ನು ತಪ್ಪಿಸಬಹುದು, ಅಗ್ನಿಪ್ರಳಯವನ್ನು ನಿವಾರಿಸಬಹುದು ಎಂಬೆಲ್ಲ ಬಯಕೆಗಳು ಅವರ ಮುಗ್ಧ ಮನಸ್ಸಿನಲ್ಲಿ ಚಿಗುರಿದುವು. ಫ್ರಾನ್ಸ್ ದೇಶದ ಕೆಲವು ಹಳ್ಳಿಗಳಲ್ಲಿ ತಮ್ಮ ಚರ್ಚಿಗೆ ಸೇರಿದ ಪುರೋಹಿತ ವರ್ಗಗೊಂಡು, ಅವನ ಜಾಗಕ್ಕೆ ಮತ್ತೊಬ್ಬ ಬಂದಾಗ "ಇವನಲ್ಲಿ ಅಷ್ಟೇ ಶಕ್ತಿಯಿದೆಯೆ?" ಎಂದು ಸಾಮಾನ್ಯಜನ ಪ್ರಶ್ನಿಸುತ್ತಿದ್ದರಂತೆ. ಮುಗಿಲೊಡ್ಡು ಭಯಂಕರವಾಗಿದ್ದು, ಝಂಝಾವಾತ ಪ್ರಾರಂಭವಾದಾಗ ಆ ಪಿಡುಗುಗಳನ್ನು ಉಚ್ಚಾಟನೆಗೊಳಿಸಬೇಕೆಂದು ಒತ್ತಾಯ ಮಾಡಿ ಜನ ಅವನನ್ನು ಪರೀಕ್ಷೆಗೀಡುಮಾಡುತ್ತಿದ್ದರಂತೆ. ಕೆಲವು ಸಾರಿ ಮಾಟಗಾರಿಕೆಯಲ್ಲಿ ಆಸಕ್ತಿ ವಹಿಸುತ್ತಿದ್ದ ಪುರೋಹಿತರು ಬಿಷಪ್ಪರ ಆಗ್ರಹಕ್ಕೆ ಬಲಿಯಾಗುತ್ತಿದ್ದರು.

ಪ್ರಾಚೀನ ಮಾನವ ಎಲ್ಲಿಯವನೇ ಆಗಲಿ, ಪ್ರಾಥಮಿಕಾವಸ್ಥೆಯ ಅವನ ಮನೋಬುದ್ಧಿಗಳು ಏಕರೀತಿಯಾಗಿ ಹಾಗೂ ಏಕಮುಖವಾಗಿ ಕೆಲಸಮಾಡುತ್ತವೆನ್ನುವ ಸತ್ಯಸಂಗತಿ ಮೇಲಿನ ವಿವರಗಳಿಂದ ಸುಸ್ಪಷ್ಟಗೊಳ್ಳುತ್ತದೆ. ಮತ ಹುಟ್ಟಿ, ರೂಹು ಪಡೆದದ್ದು ಅವನು ಪ್ರಬುದ್ಧಾವಸ್ಥೆಯನ್ನು ಮುಟ್ಟಿದನಂತರ, ವಿಚಾರಮತಿ ಅಸ್ಪಷ್ಟವಾಗಿ ಹೊಳಹು ದೋರುತ್ತಿದ್ದಾಗ. ಆದ್ದರಿಂದ ಮಾಟದ ತತ್ವಗಳು ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೆ ಎಲ್ಲಿ ಹೋದರೂ ವ್ಯತ್ಯಾಸ ಹೊಂದುವುದಿಲ್ಲ; ವ್ಯತ್ಯಾಸವಾಗಬಾರದು. ಅಪರಿವರ್ತನೀಯತೆ ಮತದ ಸಹಜ ಲಕ್ಷಣವಲ್ಲ; ಸ್ಥಿತಿಸ್ಥಾಪಕತೆ ಅದರ ಪ್ರಮುಖ ಗುಣಗಳಲ್ಲೊಂದು. ಆದ್ದರಿಂದ ಮತೀಯ ತತ್ವಾಚರಣೆಗಳು ದೇಶದಿಂದ ದೇಶಕ್ಕೆ, ಮತದಿಂದ ಮತಕ್ಕೆ ಭಿನ್ನವಾಗುತ್ತವೆ. ಮತ ಎಷ್ಟೇ ಪ್ರಬಲಗೊಂಡರೂ ಮಾಟ ಮಾತ್ರ ನಿಲ್ಲಲಿಲ್ಲ. ಅದರ ಉರುಬು ತುಸು ತಗ್ಗಿರಬಹುದು. ಅದರ ಆರಾಧಕರು ಎಲ್ಲ ದೇಶಗಳಲ್ಲಿಯೂ ಇದ್ದಾರೆ. ಭರತಖಂಡಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದಾಗ ದೇಶನಾಯಕರ ವಿನಾಶಕ್ಕಾಗಿ ರಾಜಮಹಾರಾಜರು ಮಾಡಿಸಿದ ಮಂತ್ರತಂತ್ರಗಳು ಸರ್ವವೇದ್ಯ ಸಂಗತಿ. ಮಾಟಗಾರರಿಗೂ ಪುರೋಹಿತರಿಗೂ ಮೊದಮೊದಲು ತಿಕ್ಕಾಟ ಪ್ರಬಲವಾಗಿದ್ದರೂ, ದಿನ ಕಳೆದಂತೆ ಅದು ತಣ್ಣಗಾದದ್ದುಂಟು. ಆದರೆ ನಿರಕ್ಷರಕುಕ್ಷಿಗಳ ಅಜ್ಞಾನವನ್ನು ಸೂರೆಗೊಂಡು, ಅವರನ್ನು ಸುಲಿಯುವ ಸಲುವಾಗಿ ಕೆಲವು ಪ್ರಚ್ಛನ್ನ ಮಂತ್ರವಾದಿಗಳಂತಿರುವ ಪುರೋಹಿತರು ಇಂದಿಗೂ ವಾಮಾಚಾರಗಳಲ್ಲಿ ಆಸಕ್ತಿ ವಹಿಸುವುದುಂಟು.

ಮಾಟಗಾರ ಪುರೋಹಿತನಾದಂತೆ ಊರಿನ ಮುಖಂಡ ಅಥವಾ ದೊರೆಯಾದದ್ದೂ

ಉಂಟು. ಮಳೆ ಬರಿಸುವ, ಫಸಲುಕ್ಕಿಸುವ, ಸುಂಟರಗಾಳಿ ತಡೆಯುವ ಶಕ್ತಿಯುಳ್ಳವನನ್ನು ಸುತ್ತಮುತ್ತ ಜನರೆಲ್ಲ ಗೌರವಿಸುವುದೇನೂ ಆಶ್ಚರ್ಯವಲ್ಲ. ಸಾಮಾನ್ಯಜನ ಅಂಥವರ ಬುಟ್ಟಿಯಲ್ಲಿ ಬಿದ್ದಂತೆಯೇ. ನೈಸರ್ಗಿಕ ಶಕ್ತಿಗಳನ್ನೇ ತನ್ನ ಮುಷ್ಟಿಯಲ್ಲಿರಿಸಿಕೊಂಡವನು ಮುಗ್ಧ ಜನರಿಗೆ ಮಂಕುಬೂದಿ ಎರಚಿ, ತನ್ನ ಹಿಡಿತದಲ್ಲಿಟ್ಟುಕೊಳ್ಳುವುದೇನೂ ಕಷ್ಟ ವಾಗಿರಲಾರದು. ಸಾಮಾನ್ಯಜನ ಅವನು ಹೇಳಿದ್ದನ್ನು ನಡೆಸುವವರಾದರು. ಕಾಡಿಗೆ ಹೋಗಿ ಸೌದೆ ತಾರೆಂದರೆ ತರಬೇಕು, ತಾನು ಮಲಗಿದಾಗ ಕಾದು ಕುಳಿತಿರಬೇಕೆಂದರೆ ಕುಳಿತಿರಬೇಕು. ಹೀಗೆ ಒಬ್ಬನೇ ವ್ಯಕ್ತಿ ತನ್ನಲ್ಲಿ ತ್ರಿಮೂರ್ತಿತ್ವವನ್ನಳವಡಿಸಿಕೊಂಡಂತಾಯಿತು: ಅವನೇ ಮಾಟಗಾರ, ಪುರೋಹಿತ ಮತ್ತು ದೊರೆ. ಪುರೋಹಿತ ಮುಂದಾಗಿ ಮಾಟಗಾರ ಹಿಂದಾದನಂತರ ದೊರೆತನ ಪುರೋಹಿತನಲ್ಲಿಯೇ ಉಳಿದುಕೊಂಡಿರಬೇಕು. ಅವನೇ ಬಹುಕಾಲದ ತನಕ ಸಮಾಜದ ನೇತಾರ. ಎಲ್ಲಿಯ ತನಕ ಎಲ್ಲ ಕುಲಗಳು ಒಂದಾಗಿ ಸಾಮರಸ್ಯದಿಂದ ಸೌಹಾರ್ದದಿಂದ ಬದುಕುತ್ತಿದ್ದುವೋ ಅಲ್ಲಿಯ ತನಕ ಈ ವ್ಯವಸ್ಥೆಯೇ ಮುಂದುವರಿಯಿತು. ಆದರೆ ಕುಲ ಕುಲಗಳ ನಡುವೆ ವೈರ ಮೊದಲಾಗ ಪರಿಸ್ಥಿತಿ ವ್ಯತ್ಯಾಸಗೊಂಡಿತು. ಪುರೋಹಿತ ಧಾರ್ಮಿಕ ಕಾರ್ಯಗಳನ್ನುಳಿದು ಮುಂಚೂಣಿಗೆ ಹೋಗುವಂತಿಲ್ಲ. ಹಿಂದೆಯೇ ಇದ್ದು ಮುಂಚೂಣಿಯ ಮುಂದಾಳುಗಳಿಗೆ ಬೆಂಬಲವಾಗಿ ಯಜ್ಞಯಾಗಾದಿ ಪೂಜೆಗಳನ್ನು ನಡೆಸಬೇಕಾಗಿತ್ತು. ಆದರೆ ಮುಂಚೂಣಿಯ ಮುಂದಾಳು ಸಹ ಅಲೌಕಿಕ ಶಕ್ತಿಗಳನ್ನೊಲಿಸಿಕೊಂಡವನೇ ಆಗಬೇಕು. ವಿಜಯೋನ್ಮತ್ತನಾಗಿ ಬಂದ ಪುರೋಹಿತ ಹಿಂದಿದ್ದ ಪುರೋಹಿತನಿಗಿಂತ ಒಂದು ಬಣ್ಣ ಹೆಚ್ಚಾದ. ಅನೇಕ ಶತಮಾನಗಳವರೆಗೆ ಇದೇ ವ್ಯವಸ್ಥೆ ಮುಂದುವರಿದು, ರಾಜಕೀಯ ಮತೀಯ ಕ್ಷೇತ್ರಗಳು ಪ್ರತ್ಯೇಕಗೊಂಡು, ದೊರೆ ಪುರೋಹಿತನಿಂದ ಬೇರೆಯಾದದ್ದುಂಟು.

ಜಗತ್ತಿನ ವಿವಿಧ ದೇಶಗಳಲ್ಲಿ ದೊರೆತನ ಅಸ್ತಿತ್ವಕ್ಕೆ ಬಂದ ರೀತಿನೀತಿಗಳು ಮೇಲಿನ ವಾದಕ್ಕೆ ಪುಷ್ಟಿ ನೀಡುತ್ತವೆ. ಭೂತಗಳೊಡನೆ ಮಾನಸಿಕ ಸಂಪರ್ಕವನ್ನಿಟ್ಟುಕೊಂಡು, ಬೇಕಾದಾಗ ಅವುಗಳ ಪ್ರಭಾವವನ್ನು ಪಡೆಯಬಲ್ಲ ಶಕ್ತರನ್ನು ಮೆಲನೇಷಿಯಾದ ಜನ ಮುಖಂಡತ್ವಕ್ಕೇರಿಸಿದರು. ಮುಖಂಡ ತೆರಿಗೆ ಕೇಳಿದಾಗ ಜನ ಸದ್ದುಗದ್ದಲವಿಲ್ಲದೆ ಅವನ ಅಮಾನುಷಶಕ್ತಿಗೆ ಹೆದರಿ ತೆತ್ತರು. ತೆರಿಗೆ ತೆರದಿದ್ದರೆ ಭೂತವಶೀಕರಣ ವಿದ್ಯೆಯ ಮೂಲಕ ಅವನು ತಮ್ಮ ಮೇಲೆ ಪಿಡುಗು ಹರಿಸಬಹುದೆಂದು ಅವರು ತಲ್ಲಣಗೊಂಡರು. ಆಫ್ರಿಕಾದ ಬುಡಕಟ್ಟುಗಳಲ್ಲಿ ಮುಖಂಡತ್ವ ಸ್ಥಾಪಿತವಾದದ್ದೇ ಹೀಗೆ. ಆಧುನಿಕ ಯುಗದಲ್ಲಿಯೂ ಆ ವ್ಯವಸ್ಥೆಯನ್ನು ಅಲುಗಾಡಿಸುವುದು ಸಾಧ್ಯವಾಗಿಲ್ಲ. ಮಡಗಾಸ್ಕರಿನ ಮಾಟಗಾರನಿಗೆ ಅಲ್ಲಿ ಬಹು ಪ್ರಾಶಸ್ತ್ಯ. ಯುಕ್ತಿಗೆ ವಿದ್ಯೆಯ ಕಲಿಕೆಗಿದ್ದ ಅವಕಾಶ ಸೀಮಿತವಾದವು. ಮೇಲಾಗಿ ಅದು ಆನುವಂಶಿಕವಾಗಿ ನಡೆದುಕೊಂಡು ಬರುತ್ತಿತ್ತು. ಗೌರವ ಪ್ರತಿಷ್ಠೆಗಳನ್ನು ತಂದುಕೊಡುವ ವಿದ್ಯೆಯ ಹಕ್ಕನ್ನು ಪರಭಾರೆ ಮಾಡಲು ಅವರು ಹಿಂದೆ ಮುಂದೆ ನೋಡುತ್ತಿದ್ದರು. ಅದರಿಂದ ಮುಖಂಡತ್ವ ಆನುವಂಶೀಯ ಅಧಿಕಾರವಾಯಿತು. ನೈಲ್ ನದಿಯ ಮೇಲ್ಭಾಗದ ಪ್ರದೇಶದಲ್ಲಿ ಸಾಮಾನ್ಯವಾಗಿ ಮಳೆ ಕಡಮೆ.

ಮಳೆ ಬರದಿದ್ದಾಗ ಅವರ ಪಾಡು ಅಷ್ಟಿಷ್ಟಲ್ಲ. ಅಂಥ ಸಂದರ್ಭವಿದ್ದಾಗ ಮಳೆಮಾಟಗಾರರಿಗೆ ಜನ ಏನುಬೇಕಾದರೂ ಅರ್ಪಿಸಿಯಾರು ; ತಮ್ಮ ತನುಮನಧನಗಳ ಮೇಲಣ ಹಕ್ಕು ಸಹ ಬಿಟ್ಟುಕೊಟ್ಟಾರು. ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಅವರು ಹೇಳುವ ಭವಿಷ್ಯ ನಿಜವಾಗ ಬಹುದಾದ್ದರಿಂದ, ಅವರು ಮಾಡುವ ಮಾಟ ಫಲದಾಯಕವಾಗುವುದರಿಂದ ಆ ಮಾಟಗಾರರು ಅಲ್ಲಿಯ ತಪ್ಪಲುಗಳಲ್ಲಿ ವಸತಿಗಳನ್ನೇರ್ಪಡಿಸಿಕೊಳ್ಳುತ್ತಿದ್ದರು. ಅವರ ಬಳಿ ಮಳೆಗಲ್ಲುಗಳಿರುತ್ತಿದ್ದುವು. ಮಳೆ ಬೇಕಾದಾಗ ಅವನ್ನು ಗಡಿಗೆಯ ನೀರೊಳಗೆ ಮುಳುಗಿಸಿ, ತುದಿ ಸೀಳಿದ ತೊಗಟೆ ಸುಲಿದ ಬೆತ್ತವೊಂದನ್ನು ಕೈಯಲ್ಲಿ ಹಿಡಿದುಕೊಂಡು ಮೋಡಗಳ ಕಡೆಗೆ ತೋರಿ, ಮಂತ್ರವನ್ನು ಉಚ್ಚರಿಸುತ್ತ, ಅವು ಯಾವ ಕಡೆಗೆಂದರೆ ಆ ಕಡೆಗೆ ಸರಿಯಬೇಕೆಂದು ಸನ್ನೆ ಮಾಡುತ್ತಿದ್ದರು. ಎಲ್ಲಿಯವರೆಗೆ ತಮ್ಮ ಇಷ್ಟಾರ್ಥ ನೆರವೇರುತ್ತಿತ್ತೋ ಅಲ್ಲಿಯವರೆಗೆ ಜನ ಗೋಧನ ಧಾನ್ಯಗಳನ್ನವರಿಗೆ ಕಾಣಿಕೆಯಾಗಿ ನೀಡುತ್ತಿದ್ದರು. ಮಳೆ ಬರದೆ ಬರ ಬಂತೆಂದರೆ ಅವರನ್ನು ಮುಖಂಡತ್ವದಿಂದ ತಪ್ಪಿಸಿ ಚಿತ್ರಹಿಂಸೆ ಕೊಡುತ್ತಿದ್ದರು. ಸಾರವಾಕ್ ಪ್ರಾಂತ್ಯವನ್ನಾಳುತ್ತಿದ್ದ ಆಂಗ್ಲದೊರೆ ಬ್ರೂಕ್ (Brooke) ಬತ್ತದ ಬೆಳೆ ಹೆಚ್ಚಿಸುವಂಥ ಮಂತ್ರಶಕ್ತಿಯನ್ನು ಪಡೆದಿದ್ದನೆಂಬುದಾಗಿ ಅಲ್ಲಿಯ ಜನ ನಂಬಿಕೊಂಡಿದ್ದರು. ಅವನು ಯಾವುದಾದರೂ ಹಟ್ಟಿಗೆ ಹೋದನೆಂದರೆ ಅಲ್ಲಿಯ ಜನ ಮುಂದಿನ ವರ್ಷದ ಬಿತ್ತನೆ ಬೀಜವನ್ನು ಅವನ ಮುಂದೆ ತಂದಿರಿಸುತ್ತಿದ್ದರು. ಅವನು ಅವುಗಳ ಮೇಲೆ ಕೈಯಾಡಿಸಿದನೆಂದರೆ ಮುಂದಿನ ವರ್ಷದ ಫಸಲು ಹುಲುಸುತ್ತಿತ್ತು. ಹೆಂಗಸರು ಅವನ ಪಾದವನ್ನು ಮೊದಲು ನೀರಿನಿಂದ ಅನಂತರ ಎಳನೀರಿನಿಂದ, ಮತ್ತೆ ನೀರಿನಿಂದ ತೊಳೆಯುತ್ತಿದ್ದರು. ಆ ಪಾದೋದಕವನ್ನು ಸಂಗ್ರಹಿಸಿಟ್ಟುಕೊಂಡು ಬಿತ್ತನೆ ಮಾಡುವಾಗ ಹೊಲ ಗದ್ದೆಗಳಲ್ಲಿ ಚಿಮುಕಿಸುತ್ತಿದ್ದರು. ದೂರದ ಜನ ಬಿಳಿ ಬಟ್ಟೆಯ ಚೂರನ್ನೂ ಬೆಳ್ಳಿಯ ತುಂಡನ್ನೂ ಕಳಿಸಿ, ಅವನಿಂದ ಗರ್ಭದಾನ ಮಾಡಿಸಿ ತಂದು ಚೆಲ್ಲಣೆ ಕಾಲದಲ್ಲಿ ಅವನ್ನು ನೆಲದಲ್ಲಿ ಹೂಳುತ್ತಿದ್ದರು. ಇಂಗ್ಲೆಂಡಿನ ಚಕ್ರವರ್ತಿಗಳು ಮುಟ್ಟಿದ ನಂತರ ಗಂಡಮಾಲೆ ಮಾಯವಾಗುತ್ತಿತ್ತಂತೆ. ಮೊದಲನೆಯ ಎಲಿಜಬೆತ್ ರಾಣಿ ಸಹ ಇಂಥ ಅದ್ಭುತಶಕ್ತಿಯನ್ನು ಪಡೆದಿದ್ದಳಂತೆ. ಪ್ರಾಚೀನ ಕಾಲದಲ್ಲಿ ಬುದ್ಧಿವಂತರು ದೊರೆತನವನ್ನು ಅಪಹರಿಸಿಕೊಂಡದ್ದೇ ಹೀಗೆ. ಜಗತ್ತಿನ ಎಲ್ಲ ಕಡೆಗಳಲ್ಲಿಯೂ ಇದಕ್ಕೆ ನಿದರ್ಶನಗಳು ಹೇರಳವಾಗಿ ದೊರೆಯುತ್ತವೆ.

ಮಾಟದ ಬಸಿರಿನಿಂದ ಇನ್ನು ಹಲವಾರು ನಕಲಿ ಶಾಸ್ತ್ರಗಳು ಹುಟ್ಟಿಕೊಂಡಿವೆಯೆಂಬುದು ಅವುಗಳ ಇತಿಹಾಸದ ಕಡೆಗೆ ದಿಟ್ಟಿಹರಿಸಿದಾಗ ಸ್ಪಷ್ಟವಾಗುತ್ತದೆ. ಮಾಟಗಾರರು ಹಕ್ಕಿಗಳ ಹಾರಾಟ ಕೂಗುಗಳಿಗೆಲ್ಲ ಅರ್ಥ ಕಲ್ಪಿಸಿದರು. ತಮ್ಮ ಯಕ್ಷಿಣೀ ವಿದ್ಯೆ ನಿಷ್ಫಲವಾಯಿತೆಂದು ತಿಳಿದಾಗ "ನಾನು ಮೊದಲೇ ಹೇಳಲಿಲ್ಲವೆ ? ಕಾಗೆ ಎಡಕ್ಕೆ ಹಾರಿಹೋಯಿತೆಂದು ; ಆದರಿಂದ ಮಂತ್ರಶಕ್ತಿ ಲೋಪವಾಯಿತೆಂದು" ಎಂದು ಸುಲಭವಾಗಿ ನೆಪವೊಡ್ಡುತ್ತಾರೆ ; ಅಥವಾ ಮನೆಯಲ್ಲಿ ಮುಟ್ಟುಚಿಟ್ಟಾಗಿರಬೇಕೆಂದು ಫಲಾರ್ಥಿಗಳ ಮೇಲೆಯೇ ಗುಬ್ಬಿ ಕೂರಿಸುತ್ತಾರೆ. ಈ ಶಕುನಗಳು ನಿಜವಾಗುತ್ತವೆಂದು ತಿಳಿದವರ ವಾದವಿದು : ವಿಶ್ವದ

ಸಮಸ್ತ ಚೇತನಗಳಲ್ಲಿ ಪರಸ್ಪರ ಸಂಬಂಧವುಂಟು. ಮನುಷ್ಯನ ಭವಿಷ್ಯದ ಬಗ್ಗೆ ವಿಶ್ವಶಕ್ತಿ ನಾನಾ ವಿಧವಲ್ಲಿ ಮುನ್ನೆಚ್ಚರಿಕೆ ನೀಡುತ್ತದೆ. ಈಶ್ವರ ಸಂಕಲ್ಪದ ಪ್ರಕಟನೆಗೆ ಹಲ್ಲಿಯ ಲೊಚಸದ್ದು, ಮಗುವಿನ ಸೀನು, ಗೂಬೆಯ ಕೂಗು, ಇಂಥವೇ ಮತ್ತಾವುದೋ ಸಂಗತಿ ಮಾಧ್ಯಮವಾಗಬಹುದು; ಕೊನೆಗೆ ಕನಸೂ ಏಣಿಯಾಗಬಹುದು. ಆಸ್ಟ್ರೇಲಿಯಾದ ಒಂದು ಬುಡಕಟ್ಟಿನ ಜನ ಒಮ್ಮೆ ತಮ್ಮ ಬಿಡದಿಯನ್ನೆತ್ತಿಕೊಂಡು ಬೇರೆ ಕಡೆಗೆ ದೌಡಾಯಿಸಿದರಂತೆ. ಅದಕ್ಕೆ ಕಾರಣ ಅವರಲ್ಲೊಬ್ಬ ಕಂಡ ಕನಸು. ಅವನು ಕನಸಿನಲ್ಲಿ ಕಂಡದ್ದು ಗೂಬೆ. ಬೇರೆ ಬುಡಕಟ್ಟಿನ ಜನ ತಮ್ಮ ಮೇಲೆ ಧಾಳಿ ನಡಸುತ್ತಾರೆಂದು ಸ್ವಪ್ನ ಸೂಚಿಸುತ್ತದೆಂದು ಮಂತ್ರವಾದಿಗಳು ತಿಳಿಸಲಾಗಿ ಪಾಳೆಯ ಗೂಳೆಯ ಹೊರಟಿತು. ಸ್ವಪ್ನಫಲ ಸ್ವಪ್ನಕ್ಕೆ ವ್ಯತಿರಿಕ್ತವಾಗಿರುತ್ತದೆನ್ನುವುದೊಂದು ಸ್ವಪ್ನಶಾಸ್ತ್ರಜ್ಞರ ಭಾಷ್ಯ. ರೋಗಿಯ ಮನೆಯಲ್ಲಿ ಯಾರಾದರೂ ಹೆಣವನ್ನು ಕನಸಿನಲ್ಲಿ ಕಂಡದ್ದಾದರೆ ರೋಗಿ ಗುಣಮುಖನಾಗುತ್ತಾನಂತೆ; ಮದುವೆ ಕುಣಿತವನ್ನು ಕಂಡರೆ ಅವನು ಸಾಯುತ್ತಾನಂತೆ. ಮುಸ್ಲಿಮರ ಪ್ರಕಾರ ಸ್ವಪ್ನದಲ್ಲಿ ಬಿಳಿ ಹಸುರು ಬಣ್ಣಗಳನ್ನಾಗಲೀ ನೀರನ್ನಾಗಲೀ ಕಂಡರೆ ಶುಭ; ಕಪ್ಪು ಕೆಂಪು ಬಣ್ಣಗಳನ್ನಾಗಲೀ ಬೆಂಕಿಯನ್ನಾಗಲೀ ಕಂಡರೆ ಅಶುಭ.

ಅಸ್ಥಿಮಂತ್ರ ವಿದ್ಯೆಯೂ (Haruspication) ಮಾಟದ ಶಿಶುವೇ. ಈ ವಿದ್ಯೆಯಲ್ಲಿ ಶಕುನಿ ನಿಸ್ಸೀಮ. ಕೌರವ ಪಾಂಡವ ದ್ಯೂತದಲ್ಲಿ ಅವನು ಬಳಸಿದ ದಾಳಗಳು ಸತ್ತ ತಮ್ಮಂದಿರ ಮೂಳೆಯಿಂದಾದಂಥವು. ಮುಳ್ಳುಹಂದಿಯ ಚಪ್ಪಟೆ ಮೂಳೆಯನ್ನು ಬೆಂಕಿಯ ಮೇಲೆ ಹಾಕಿದಾಗ ಅದರಿಂದ ಹೊರಹೊಮ್ಮುವ ಬಣ್ಣದಿಂದ ಹಂದಿಬೇಟೆ ಜಯಪ್ರದವಾಗುತ್ತದೆಯೇ ಇಲ್ಲವೇ ಎಂದು ಉತ್ತರ ಅಮೆರಿಕೆಯ ಇಂಡಿಯನ್ನರು ತೀರ್ಮಾನಿಸುತ್ತಿದ್ದರಂತೆ. ಯುದ್ಧದಲ್ಲಿ ಸತ್ತ ವೀರರ ಮೂಳೆ ತೊರಳೆ ಗುಲ್ಮಗಳನ್ನು ಪರೀಕ್ಷೆ ಮಾಡಿ ಮಂತ್ರವಾದಿಗಳು ನೀಡಬಹುದಾದ ಸಲಹೆಗಳ ಆಧಾರದ ಮೇಲೆ ರೋಮ್ ಚಕ್ರವರ್ತಿಗಳು ಭವಿಷ್ಯ ಯೋಜನೆಗಳನ್ನು ನಿರ್ಧರಿಸುತ್ತಿದ್ದರು.

ಹಸ್ತಸಾಮುದ್ರಿಕ ಹಾಗೂ ಜ್ಯೋತಿಶ್ಶಾಸ್ತ್ರಗಳು ಅವಳಿಜವಳಿಗಳು. ಲಲಾಟಲಿಪಿ ಹಸ್ತರೇಖೆಗಳಲ್ಲಿ ಅಭಿವ್ಯಕ್ತಿ ಪಡೆಯುತ್ತದೆನ್ನುವುದು ಇಟಲಿ ಗ್ರೀಸ್ ಮತ್ತು ಭರತಖಂಡದ ಜನರ ತಿಳಿವಳಿಕೆ. ಇಂದಿನ ವಿಚಾರಮತಿಗಳಲ್ಲಿ ಹಲವರು ಹಸ್ತರೇಖಾಪಠನದಲ್ಲಿ ಹಾಗೂ ರೇಖಾಫಲಗಳಲ್ಲಿ ಅತೀವ ನಂಬಿಕೆ ಇಟ್ಟುಕೊಂಡಿದ್ದಾರೆ. ಪ್ರಾಯಶಃ ಮತಕ್ಕೆ ಆನುಷಂಗಿಕವಾಗಿ ಜ್ಯೋತಿಶ್ಶಾಸ್ತ್ರ ತಲೆಯೆತ್ತಿತೆಂದು ತೋರುತ್ತದೆ. ಆಕಾಶಕಾಯಗಳ ವ್ಯವಹಾರಗಳಿಗೂ ಮಾನವ ಜೀವನ ವ್ಯಾಪಾರಗಳಿಗೂ ಪರಸ್ಪರ ಸಂಬಂಧವುಂಟೆಂಬ ತಿಳಿವಳಿಕೆಯ ಆಧಾರದ ಮೇಲೆ ಈ ಶಾಸ್ತ್ರ ತಲೆಯೆತ್ತಿದೆ. ಮನುಷ್ಯನ ಹಣೆಬರಹವನ್ನು ಊರ್ಧ್ವಲೋಕದ ನವಗ್ರಹಗಳು ನಿರ್ಧರಿಸುತ್ತವೆ, ಅವನ ಭವಿಷ್ಯವನ್ನು ರೂಪಿಸುತ್ತವೆನ್ನುವ ಸಿದ್ಧಾಂತ ಜ್ಯೋತಿಶ್ಶಾಸ್ತ್ರ ಪಂಡಿತರದು. ಸಾಂಕೇತಿಕತೆ ಈ ಶಾಸ್ತ್ರದ ಪ್ರಮುಖ ಲಕ್ಷಣ. ಇಬ್ಬರು ಸೋದರರು ಒಂದೇ ಸಾರಿ ಕಾಯಿಲೆಬಿದ್ದಾಗ, ಅವರು ಅವಳಿಮಕ್ಕಳಿರಬೇಕೆಂದು ಹಿಪೊಕ್ರೆಟೀಸ್ ವೈದ್ಯ ಹೇಳಿದರೆ, ಅವರು ಒಂದೇ ನಕ್ಷತ್ರದಲ್ಲಿ ಹುಟ್ಟಿದವರೆಂದು ಪೋಸಿಡಾನಿಯೋಸ್

ಜ್ಯೋತಿಷಿ ನುಡಿದನಂತೆ.[1] ಸಿಂಹರಾಶಿಯಲ್ಲಿ ಹುಟ್ಟಿದ ಮಗು ಧೈರ್ಯಶಾಲಿಯಾಗುತ್ತಾನೆ, ಕರ್ಕಾಟಕ ರಾಶಿಯಲ್ಲಿ ಹುಟ್ಟಿದವನು ಪುಣ್ಯಶಾಲಿಯಾಗುವುದಿಲ್ಲ, ಮಕರ ರಾಶಿಯಲ್ಲಿ ಹುಟ್ಟಿದವನು ಮೇಧಾವಿಯಾಗುತ್ತಾನೆ, ಇತ್ಯಾದಿ ಇತ್ಯಾದಿಯಾಗಿ ರಾಶಿಫಲವನ್ನು ಹೇಳುವ, ಅದನ್ನು ನಂಬುವ ಮಹಾನಾಯಕರು ನಮ್ಮ ನಡುವೆ 'ದೈವವಶಾತ್' ಈಗಲೂ ಇದ್ದಾರೆ. ರೋಮನ್ನರ ಪ್ರಕಾರ ಬುಧ ಪ್ರಯಾಣ ವಾಣಿಜ್ಯಗಳ ದೇವತೆ, ಶುಕ್ರ ಕಾಮ ದೇವತೆ, ಕುಜ ಯುದ್ಧದೇವತೆ, ಮತ್ತು ಬೃಹಸ್ಪತಿ (Jupiter) ಅಧಿಕಾರ ದೇವತೆ. ಇತ್ತೀಚಿನ ತನಕ ಜರ್ಮನರು ಮಗುವಿನ ಪವಿತ್ರಸ್ನಾನ ಸತ್ರದ ಜತೆಗೆ ಕುಂಡಲಿಯನ್ನಿರಿಸಿ ಅವೆರಡನ್ನು ಎಚ್ಚರಿಕೆಯಿಂದ ರಕ್ಷಿಸುತ್ತಿದ್ದುದುಂಟು. ಭಾರತದಲ್ಲಂತು ಇಂದಿಗೂ ಜಾತಕಕ್ಕೆ ಜೋಲು ಬೀಳುವವರು ಘನವಿದ್ವಾಂಸರು, ಪಾಶ್ಚಾತ್ಯ ವಿದ್ಯಾಪಾರಂಗತರು ; ಸಾಮಾನ್ಯ ರಿಗೆ ಜಾತಕದ ಕಲ್ಪನೆಯೇ ಇಲ್ಲ. ನಮ್ಮ ಪುರಾಣೇತಿಹಾಸಗಳಲ್ಲಿ, ಸಾಹಿತ್ಯಕೃತಿಗಳಲ್ಲಿ, ಆಧುನಿಕ ಜನಜೀವನದಲ್ಲಿ, ವಿಜ್ಞಾನಿಗಳ ಮನೆಗಳಲ್ಲಿ, ರಾಜಕೀಯ ನಾಯಕರ ತಲೆಗಳಲ್ಲಿ ಜ್ಯೋತಿಶ್ಶಾಸ್ತ್ರದ ಪ್ರಭಾವ ಅನಿವಾರ್ಯಶಕ್ತಿಯಾಗಿ ತಾಂಡವವಾಡುತ್ತಿದೆ. ಅದರಿಂದಾಗಿ ಜ್ಯೋತಿಷಿ ಸಮಾಜದಲ್ಲಿ ಅಗ್ರಸ್ಥಾನ ಪಡೆದು, ಕೊಬ್ಬಿದ್ದಾನೆ, ಶೋಷಕನಾಗಿದ್ದಾನೆ, ಮೂಢನಂಬಿಕೆಗಳ ಜನಕನಾಗಿದ್ದಾನೆ.

ಭೂತಾರಾಧನೆಯ ಪಾತ್ರಿ ಹಾಗೂ ಮಾರಿಜಾತ್ರೆಗಳಲ್ಲಿ ಪೂಜೆ ಕಂಬ ಮೊದಲಾದು ವನ್ನು ಹೊತ್ತು ಕುಣಿಯುವ ವೀರರನ್ನು ನೋಡಿದವರುಂಟು. ಅಂತೆಯೇ ಕೊಂಡ ಹಾಯುವ ಪೂಜಾರಿಗಳ, ಮೈಮೇಲೆ ದೇವರು ಬರುವ ಜನರ ಭಾವಾತ್ಮಕವಾದ ಕುಣಿತ ಗಳು ಸಾಮಾನ್ಯ ಜನಕ್ಕೆ ಅದ್ಭುತಗಳಾಗಿ ಕಾಣುತ್ತವೆ. ಹಬ್ಬ ಜಾತ್ರೆಗಳ ಅಂಗವಾಗಿ ಕುಣಿತ ಮೆರೆತ ಅನಿವಾರ್ಯ. ಕೆಲವು ಸಾರಿ ಮಂತ್ರವಾದಿಯೂ ಕುಣಿಯುತ್ತಿದ್ದುದುಂಟು. ಅವನು ಕುಣಿಯುದಿದ್ದಾಗ, ಮನೆಯೊಳಗೆ ಯಕ್ಷಿಣೀಕ್ರಿಯೆ ನಡೆಯುವಾಗ, ಅದಕ್ಕೆ ಜೋಡಿ ಎಂಬಂತೆ, ಪ್ರೇರಕವಾಗಿ ಎಂಬಂತೆ ಯಾರಾದರೂ ಅವನ ಪರವಾಗಿ ಹೊರಗೆ ಕುಣಿಯಬೇಕಾಗಿತ್ತು ; ಜತೆಗೆ ಮೇಳ ಸಂಗೀತ ನಡೆಯಬೇಕಾಗಿತ್ತು. ಹೀಗಾಗಿ ನಾಟಕ ಕಲೆ ಮತ್ತು ಅನೇಕ ಕ್ರೀಡೆಗಳು ಬೆಳೆಯಲನುಕೂಲವಾಯಿತು. ಅವು ಬೆಳೆದದ್ದರಿಂದ ಜನರಲ್ಲಿ ಸಾಮಾಜಿಕ ಪ್ರಜ್ಞೆ ಉದಯವಾಗಲನುಕೂಲವಾಯಿತು. ಪರಸ್ಪರ ಸಹಕಾರ ಭಾವನೆ ಕುಡಿವರಿಯಿತು ; ಅವರಿಗೆ ಮನರಂಜನೆಯ ಸಾಧನಗಳು ದೊರೆತಂತಾಯಿತು. ತಜ್ಞ ಸಂಶೋಧಕರು ಒಲಿಂಪಿಕ್ ಕ್ರೀಡೆಗಳ ಮೂಲವನ್ನು ಆದಿಕಾಲದ ಮತೀಯ ಪ್ರಕ್ರಿಯೆಗಳಲ್ಲಿ ಕಾಣುವುದುಂಟು.

ಮಾಟಗಾರನ ಮಂತ್ರಸಾಮಗ್ರಿಗಳಿಗೆ ಲೆಕ್ಕವೇ ಇಲ್ಲ. ತನ್ನ ಸುತ್ತಮುತ್ತ ಸಿಗ ಬಹುದಾದ ಎಂಥ ಕ್ಷುಲ್ಲಕ ಪದಾರ್ಥವಾದರೂ ಅವನ ಉದ್ದೇಶಸಾಧನೆಗೊದಗುತ್ತದೆ. ಕಲ್ಲಾಗಬಹುದು, ಕಡ್ಡಿಯಾಗಬಹುದು, ಮಣ್ಣಾಗಬಹುದು, ಎಲೆಯಾಗಬಹುದು, ಚರ್ಮದ ತುಂಡಾಗಬಹುದು, ಬಕ್ಕರೆಯಾಗಬಹುದು, ಎಲುಬಿನ ಚೂರಾಗಬಹುದು.

[1] *Primitive Culture* by E. B. Tylor, p 129.

ಅವು ಸ್ವಜಾತೀಯ ಪದಾರ್ಥಗಳಿಗಿಂತ ವಿಲಕ್ಷಣವಾಗಿದ್ದರಂತೂ ಅವುಗಳ ಮೌಲ್ಯ ಅಧಿಕ ವಾಗುತ್ತದೆ. ಇವುಗಳ ಅಧ್ಯಯನದ ಪ್ರಮಾಣ ಹಿರಿದಾದ್ದರಿಂದ ಆ ಗೋಜಿಗೀಗ ಕೈ ಹಾಕುವುದಿಲ್ಲ. ಆದರೆ ಕುಲ ಲಾಂಛನ ಪದ್ಧತಿಗೆ ಇವು ಪಾರ್ಶ್ವಿಕವಾಗಿ ಕಾರಣವಾದ್ದ ರಿಂದ ಇವುಗಳ ಉಲ್ಲೇಖನ ಅಗತ್ಯವಾಗಿ ಕಂಡಿತು. ಆಗಮತಂತ್ರಗಳ ಬೇರು ಸಹ ಈ ಯಕ್ಷಿಣೀವಿದ್ಯೆಯ ಕುಕ್ಷಿಯಲ್ಲಿ ಹುದುಗಿಕೊಂಡಿವೆಯೆಂಬುದನ್ನು ಮರೆಯಲಾಗದು.

ಸುಳ್ಳು ತಟವಟಗಳಿಂದ ತುಂಬಿದ, ಲಾಭದಾಯಕವಲ್ಲದ, ವಿಚಾರವಿಹೀನವಾದ ಮಾಟ ಸೊಂಪಾಗಿ ಬೆಳೆಯಲು ಏನು ಕಾರಣ: ಅದು ಮಾನವ ಸಮಾಜದಲ್ಲಿ ಆಳವಾಗಿ ಬೇರೂರಲು ಬೇಕಾದ ಆಕರ್ಷಣೆ ಯಾವುದು? ಅದು ಒಂದು ಜನಾಂಗದ ಅನಾಗರಿಕತೆಯ ಲಕ್ಷಣವೆಂದೂ, ಅಜ್ಞಾನಾಂಧವಶರಾದ ನಿರಕ್ಷರಕುಕ್ಷಿಗಳ ಸಮುದಾಯದಲ್ಲಿ ತೆಕ್ಕೆತೆಕ್ಕೆ ಯಾಗಿ ಗರುಕೆಯಂತೆ ವೃದ್ಧಿ ಹೊಂದುತ್ತದೆಂಬುದಂತು ನಿಜ. ಈ ಕೃತ್ರಿಮ ಅಥವಾ ನಕಲಿ ಕಲೆ ಜಗತ್ತಿನಲ್ಲೆಲ್ಲ ಸಾರ್ವತ್ರಿಕವಾಗಿ ಸಾರ್ವಕಾಲಿಕವಾಗಿ ವಿಜೃಂಭಿಸುತ್ತಿದ್ದುದ ರಿಂದಲೇ ಅದರ ಅಧ್ಯಯನ ಅಗತ್ಯವೆಂದು ಪ್ಲಿನಿ ನುಡಿದದ್ದುಂಟು. ಈ ಐಂದ್ರಜಾಲಿಕ ವಿದ್ಯೆ ಪ್ರಾರಂಭದಲ್ಲಿ ಮಾನವನ ಶ್ರದ್ಧಾ ನಿಷ್ಠೆ ಪ್ರಾಮಾಣಿಕತೆಗಳ ಫಲವಾಗಿ ಉಗಮ ಗೊಂಡರೂ, ಅದು ಕೊನೆಕೊನೆಗೆ ನಿಂತದ್ದು ಸ್ವಸಾಮರ್ಥ್ಯದಿಂದಲ್ಲ, ಯುಕ್ತಿವಂತ ಮಾಟಗಾರರ ಮೋಸದಿಂದಾಗಿ, ಜನತೆಯ ಅಜ್ಞಾನದ ಫಲವಾಗಿ. ಈಗಲೂ ಕೈಚಳಕ ಬಾಯ್ಚಳಕಗಳಿಂದ ಕಣ್ಕಟ್ಟು ನಡಸುವುದುಂಟಷ್ಟೆ. ತಿಳಿವಳಿಕಸ್ಥರೇ ಅಂಥ ಅದ್ಭುತಗಳಿಗೆ ಮೋಹಗೊಂಡಿದ್ದಾರೆ. ಸಿನಿಮಾ ನಟನಟಿಯರನ್ನು ನೋಡಲಿಕ್ಕಾಗಿ ಜೀವದ ಹಂಗು ದೊರೆದು ಗುಂಪಿನಲ್ಲಿ ನುಗ್ಗುವ ಜನ ಡೊಂಬರ ಲಾಗಪಟ್ಟುಗಳನ್ನು ನೋಡಲಿಕ್ಕೂ ಗಾವುದ ಗಾವುದಗಳಿಂದ ದೇಹಾಲಸ್ಯವನ್ನು ಲೆಕ್ಕಿಸದೆ ದೌಡಾಯಿಸುತ್ತಾರೆ. ಹಿಂದೊಂದೋ ಬೈರಾ ಪಟ್ಟಣದ ಬಳಿ ಡೊಂಬ ತೋಳಿಗೆ ರೆಕ್ಕೆಯಂತೆ ಮೊರ ಕಟ್ಟಿಕೊಂಡು ಹಾರಾಡಿ, ಹಾರಾಡಿದಗಲ ಜಮೀನನ್ನು ತನ್ನ ಹೆಸರಿಗೆ ಕೊಡುಗೆ ಮಾಡಿಸಿಕೊಂಡ ಕತೆ ಜನ್ನ ಪಟ್ಟಣದ ಜನರ ಮನಸ್ಸಿನಿಂದ ಮರೆಯಾಗಿಲ್ಲ. ಮಾಟದ ವಿವರಗಳನ್ನು ನೋಡಿದಾಗ ಯಾರಿಗಾದರೂ ವಿಶ್ವಾಸವುಂಟಾಗದಿರದು. ಕಾಕತಾಳೀಯ ನ್ಯಾಯದಂತೆ ಅವನ ಕುತಂತ್ರ ಕೆಲವು ಸಾರಿ ಜಯ ಪಡೆದಿರಬಹುದು. ಅಥವಾ ನೂರರಲ್ಲೊಂದು ಭಾಗ ಸರಿ ಯಿರಬಹುದು. ಅಷ್ಟೇ ಸಾಕು, ಸಾಮಾನ್ಯ ಜನತೆಗೆ ಮಂಕುಬೂದಿ ಎರಚಲು. ಅವನ ಬುದ್ಧಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು. ಆಧುನಿಕ ವಿಜ್ಞಾನ ಪ್ರವೇಶಿಸದ ಕಡೆ ಮಾಟ ವಿಗುರ್ವಣಶಕ್ತಿಯಾಗಿ ಮೆರೆಯುವುದುಂಟು. ವೈದ್ಯನ ಕೈಮೀರಿದ ನಂತರ ರೋಗಿ ಅಸ್ತ್ಯ ನಿರ್ವಾಹವಿಲ್ಲದೆ, ನಿರಾಶೆಯಿಂದ ಮಾಟಗಾರನ ಮರೆಹೋಗುತ್ತಾನೆ. ಹಿಂದಿನ ವೈದ್ಯ ಕೊಟ್ಟ ಔಷಧದ ಸಾಮರ್ಥ್ಯದಿಂದಾಗಿ ರೋಗಿ ಗುಣಮುಖನಾದರೆ, ಕೊನೆಗೆ ಬಂದ ಮಾಟಗಾರನ ಯಂತ್ರವೇ ಗೆದ್ದಿತೆಂದು ಅವನ ಹಾಡಿಹೊಗಳುವುದು ಸಹಜ ವಪದುಂಟು. ಆಗ ಮಾಟಗಾರನ ಅಟ್ಟಹಾಸ ಕೇಳಬೇಕೆ? ಮತ್ತೆ ರೋಗ ಬಂದಾಗ ಜನ ವೈದ್ಯಮಾಂತ್ರಿಕರಿಬ್ಬರನ್ನೂ ಆಶ್ರಯಿಸುವುದುಂಟು. ಹೊಲ ಗದ್ದೆ ತೋಟಗಳಲ್ಲಿ ಬೆಳೆಗಿಂತ

ಕಳೆಯೇ ಮೊದಲು ಬರುತ್ತದೆ, ಸೊಂಪಾಗಿ ಬೆಳೆಯುತ್ತದೆ. ಅಂತೆಯೇ ಸಟೆ ನಂಬಿಕೆಗಳು ಅರ್ಬುದಹುಣ್ಣಿನಂತೆ ಬಹುಬೇಗನೆ ಸಮಾಜವನ್ನೆಲ್ಲ ವ್ಯಾಪಿಸುತ್ತವೆ. ಸತ್ತವರು ಪ್ರೇತಗಳಾಗುತ್ತಾರೆ, ಅವರ ಪ್ರೀತಿಯನ್ನು ಸಂಪಾದಿಸಿಕೊಂಡರೆ ಶುಭವೊದಗುತ್ತದೆ ಎಂಬ ನಂಬಿಕೆಗೆ ನಮ್ಮ ಭೂತಾರಾಧನೆ ಪಿತ್ರಾರಾಧನೆಗಳೇ ಸಾಕ್ಷಿ.

ಯೋಗಾಭ್ಯಾಸದಿಂದ ನೀರಿನ ಮೇಲೆ ನಡೆಯಬಲ್ಲ, ನೆಲದಿಂದ ಎರಡಡಿ ಮೇಲೇಳಬಲ್ಲ ಸಾಮರ್ಥ್ಯ ಲಭಿಸುತ್ತದೆಂದು ಇಂದಿಗೂ ಯೋಗಿಗಳು ಹೇಳುತ್ತಾರೆ. ಒಮ್ಮೆ ಕ್ಯಾಂಟರ್ ಬರಿಯ ಮಹಾಭಿಷಕರಾದ ಸಂತ ಎಡ್ಮಂಡರು ಸಕಾಲಕ್ಕೆ ಊಟಕ್ಕೆ ಬರಲಿಲ್ಲ. ಸಂತ ರಿಚರ್ಡ್ ಎನ್ನುವವರು ಅವರನ್ನೆಚ್ಚರಿಸಲೆಂದು ಅವರ ಕೋಣೆಗೆ ಹೋದರು. ಹೋದಾಗ ಅಪೂರ್ವ ಕೌತುಕವೊಂದು ಅವರ ಕಣ್ಣಿಗೆ ಬಿತ್ತು. ಎಡ್ಮಂಡರ ತೋಳು ಮೇಲೆ ಚಾಚಿಕೊಂಡಿವೆ; ಮೊಣಕಾಲು ಮಡಚಿಕೊಂಡಿವೆ; ಅವರ ಶರೀರ ನೆಲ ಬಿಟ್ಟು ಗಾಳಿಯಲ್ಲಿ ತೇಲಾಡುತ್ತಿದೆ. ರಿಚರ್ಡರಿಗೆ ದಿಗ್ಭ್ರಮೆಯಾಗಿ, ಅವರ ಬ್ರಹ್ಮಾನಂದಾಸ್ವಾದನೆಯನ್ನು ತಪ್ಪಿಸಿದ್ದಕ್ಕಾಗಿ ಕ್ಷಮೆ ಕೇಳಿಕೊಂಡು, ನೆಲದ ಮೇಲೆ ಸಾಷ್ಟಾಂಗವಾಗಿ ಮಲಗಿದರಂತೆ.[1] ಮಾರ್ಟಿನ್ ಲೂಥರ್ ಕ್ರಿಸ್ತಮತದ ಇತಿಹಾಸದಲ್ಲಿ ಬಿರುಗಾಳಿಯಾಗಿ ಬೀಸುವ ಮುನ್ನ ಇಂಥ ಯಕ್ಷಿಣಿ ವಿದ್ಯೆಗಳು ಅಸಂಖ್ಯವಾಗಿ ಜರುಗುತ್ತಿದ್ದುವು. ಇಂದು ವಿಜ್ಞಾನಿಗಳೆಂದು ವಿಚಾರವಾದಿಗಳೆಂದು ಜಂಬಕೊಚ್ಚಿಕೊಳ್ಳುವ, ಭಾರತವನ್ನು ಮಂತ್ರವಾದಿಗಳ ದೇಶವೆಂದು ಅಣಕಿಸುವ ಆಧುನಿಕ ಪಾಶ್ಚಾತ್ಯರ ತಾತ ಮುತ್ತಾತಂದಿರು ಇಂಥ ನಂಬಿಕೆಗಳಲ್ಲಿ ಭಾರತೀಯರನ್ನು ಸಹ ಮೀರಿಸುತ್ತಿದ್ದರೆನ್ನುವುದಕ್ಕೆ ಫ್ರೇಜರ್, ಟೈಲರ್ ಮೊದಲಾದ ವಿದ್ವಾಂಸರ ಗ್ರಂಥಗಳೇ ಸಾಕ್ಷಿಯಾಗಿವೆ. 1657ರಲ್ಲಿ ಷೆಪ್ಟನ್ ಮಾಲೆಟ್ (Shepton Mallet) ಎಂಬ ಊರಲ್ಲಿ ವಾಸ ಮಾಡುತ್ತಿದ್ದ ಹನ್ನೆರಡು ವರ್ಷದ ಬಾಲಕ ಜೇನ್ ಬ್ರುಕ್ಸ್ ಎಂಬ ಮಂತ್ರವಾದಿಯ ಮಾಟದ ಪ್ರಭಾವಕ್ಕೊಳಗಾಗಿ ಗಾಳಿಯಲ್ಲಿ ತೇಲಿಕೊಂಡು ತೋಟದ ಗೋಡೆಯ ಮೇಲೆ ಹಾದು, ಮೂವತ್ತು ಗಜ ಹಾರಿ ಹೋದನಂತೆ. 1658ರ ಮಾರ್ಚಿ ತಿಂಗಳಲ್ಲಿ ಜೇನ್‌ಬ್ರುಕ್ಸ್ ಇಂಥ ಯಕ್ಷಿಣಿ ವಿದ್ಯೆಗಾಗಿ ಮರಣದಂಡನೆಗೆ ಗುರಿಯಾದನೆಂದು ವರದಿಯಾಗಿದೆ.[2]

ಮಾಟತಾಳುವ ಅವತಾರಗಳಲ್ಲಿ ಮಂತ್ರಯಂತ್ರಗಳೂ ಸೇರುತ್ತವೆಂದು ಮೇಲೆ ಸೂಚಿಸಲಾಗಿದೆ. ಇಂಗ್ಲಿಷಿನಲ್ಲಿ ಇವುಗಳಿಗೆ Charms ಎಂದು ಹೆಸರು. "ಗೂಢ ಅಥವಾ ದೈವಿಕ ಶಕ್ತಿಯುಳ್ಳ ರಕ್ಷೆಯೆಂದು ಹೇಳುವ ಶ್ಲೋಕ, ವಾಕ್ಯ, ಶಬ್ದ, ಕೃತ್ಯ, ವಸ್ತು; ಮಂತ್ರ; ಪೀಡಾನಿವಾರಕವಾಗಿ ಧರಿಸುವ ರಕ್ಷೆ, ತಾಯಿತಿ, ಯಂತ್ರ" ಎಂದು ಅವರ ಅರ್ಥ.[3] ಅನಿಷ್ಟ ಪರಿಹಾರಾರ್ಥವಾಗಿ ಮಾನವ ಆಚರಿಸುವ ಸಂಪ್ರದಾಯಗಳಲ್ಲಿ ಇವೂ ಸೇರುತ್ತವೆ. ಇವುಗಳ ಸಹಯೋಗದಿಂದ ಮಾತ್ರ ಮಾಟಕ್ಕೆ ಯಶಸ್ಸು ದೊರೆಯುವುದು.

---

[1] E. B. Tylor, *Primitive Culture*, p. 151

[2] Ibid, p. 152.

[3] *The Mysore University English-Kannada Dictionary*, p. 168

ಆದ್ದರಿಂದ ಮಾಟದ ಪ್ರಭಾವವಿರುವೆಡೆಯಲ್ಲೆಲ್ಲ ಮಂತ್ರ ಪಠನವೂ ಯಂತ್ರ ಪ್ರಯೋಗವೂ ಇದ್ದೇ ಇರುತ್ತವೆ. ಮಂತ್ರಯಂತ್ರ ವಿಧಾನಗಳನ್ನರಿಯುವ ವ್ಯಕ್ತಿ ಮಾಟಗಾರನೆನಿಸಿಕೊಳ್ಳಲಾರ, ಅಂಥವನ ಬಳಿ ಶಕ್ತಿಗಾರರು ಸೇರುವುದಿಲ್ಲ. ಜಗತ್ತು ದೈವಾಧೀನ, ದೈವ ಮಂತ್ರಾಧೀನ, ಮಂತ್ರ ಬ್ರಾಹ್ಮಣಾಧೀನ ಎನ್ನುವ ನಂಬಿಕೆ ಭಾರತೀಯರಲ್ಲಿಯೂ ಇದ್ದದ್ದೇ. ಇಂಥ ಮಂತ್ರಗಳಿಗೆ ಅಥರ್ವಣವೇದ ಪ್ರಸಿದ್ಧಿಯಾಗಿದೆ. ಮಂತ್ರಗಳು ಅಘಟಿತ ಘಟನಾ ಸಾಮರ್ಥ್ಯವನ್ನು ಹೊಂದಿವೆಯೆಂಬ ತಿಳಿವಳಿಕೆ ಪುರಾತನವಾದದ್ದು, ಹಾಗೂ ಸಾರ್ವತ್ರಿಕವಾದದ್ದು.

ಸಮುದ್ರದ ನಡುವಿರುವ ತಿಮಿಂಗಿಲಗಳನ್ನು ದಡಕ್ಕೆ ತರಬಲ್ಲ ಶಕ್ತಿ ಮಂತ್ರಗಳಿಗಿದೆ ಎಂದು ಕೆಲವರು ನಂಬುತ್ತಾರೆ. ಮಂತ್ರಗಳನ್ನು ಜಪಿಸಿ, ತಿಂಡಿ ಪದಾರ್ಥಗಳನ್ನು ಸಮುದ್ರಕ್ಕೆಸೆದದ್ದಾದರೆ ಅವು ಸರಕ್ಕನೆ ಬಂದುಬಿಡುತ್ತವೆ. ಅವು ಮಾನವರೂಪವನ್ನು ತಾಳಿ ಮಂತ್ರಗಾರರ ಆಜ್ಞೆಯನ್ನು ಈಡೇರಿಸುತ್ತವೆಂದೂ, ಆ ಮಂತ್ರಜರು ಶತ್ರುನಾಡಿಗೆ ಹೋಗಿ, ಎದುರಾದವರನ್ನೆಲ್ಲ ಕೊಲ್ಲುತ್ತಾರೆಂದೂ ಹೇಳುತ್ತಾರೆ. ಇಂಥ ಪರಿಣಾಮಕಾರಿಯಾದ ಮಂತ್ರಗಳನ್ನು ರೋಗನಿವಾರಣೆಗೆ, ಅಮಾನುಷ ಕೃತ್ಯಗಳ ಪೂರೈಕೆಗೆ, ಅಪಾಯ ದಾಟಣೆಗೆ ಮತ್ತು ಪುಣ್ಯಸಂಪಾದನೆಗೆ ಮನುಷ್ಯ ಬಳಸಿಕೊಂಡದ್ದು ಸಹಜ.[1]

ಮಂತ್ರಪಠನವೊಂದೇ ಉದ್ದೇಶಸಾಧನೆಗೆ ಸಾಕಾಗುವುದಾದರೂ ಅದು ಯಾವುದಾದರೂ ಮಾಧ್ಯಮದ ಮೂಲಕ ಯಶಸ್ವಿಯಾಗಿ ಕೆಲಸಮಾಡಬಲ್ಲದು. ಪಾಂಡವರ ವಂಶವನ್ನು ನಿರ್ಮೂಲನ ಮಾಡಲೆಂದು ಉತ್ತರೆಯ ಗರ್ಭದಲ್ಲಿದ್ದ ಮಗುವನ್ನು ಕೊಲ್ಲುವ ಸಲುವಾಗಿ ಅಶ್ವತ್ಥಾಮ ತೃಣವನ್ನು ಮಂತ್ರಿಸಿ ಬಿಡುತ್ತಾನೆ. ಹಾವಿನ ವಿಷವನ್ನಿಳಿಸಲು, ಪಿಶಾಚಿಯನ್ನು ಬಿಡಿಸಲು, ತಲೆಶೂಲೆ ತಪ್ಪಿಸಲು ಬೇವಿನಸೊಪ್ಪೋ; ಮಣ್ಣಿನ ಪ್ರತಿಮೆಯೋ, ವೀಳ್ಯದೆಲೆಯೋ, ತೆಂಗಿನಕಾಯಿಯೋ ಯಾವುದಾದರೂ ನಿರ್ದಿಷ್ಟ ವಸ್ತು ಬೇಕಾಗುತ್ತದೆ. ಮಂತ್ರಪೂರಿತವಾದ ಅಥವಾ ಮಂತ್ರವನ್ನು ಬರೆದ ಚೀಟಿಯನ್ನೋ ತಾಯಿತಿಯನ್ನೋ ತೋಳಿಗೋ ಕೊರಳಿಗೋ ಕಟ್ಟುವುದುಂಟು. "ಬೇನೆಯನ್ನು, ಸಾವು, ಸಿಡಿಲು, ನೌಕಾಘಾತ, ಕಳ್ಳಕಾಕರ ಮತ್ತು ದುಷ್ಟ ಮೃಗಗಳ ಕಾಟ, ದುಷ್ಟಶಕ್ತಿಗಳ ದೌರ್ಜನ್ಯ, ಯಕ್ಷಿಣಿ, ಕೆಟ್ಟ ಕಣ್ಣು ಮೊದಲಾದ ಅಪಾಯಗಳಿಂದ ರಕ್ಷಿಸುವಂಥ; ದೈಹಿಕ ಬಲ, ಶ್ರೀಮಂತಿಕೆ, ಅದೃಷ್ಟ ಶಕ್ತಿಗಳನ್ನು ಸಂಪಾದಿಸಲು ನೆರವಾಗುವಂಥ; ಪ್ರೀತಿ, ಕಾಳಗ, ಪ್ರಣಯ, ವಾಣಿಜ್ಯ ಮೊದಲಾದ ವ್ಯವಹಾರಗಳಲ್ಲಿ ಜಯ ಸಾಧಿಸಲು ಸಹಾಯಕವಾಗುವಂಥ; ಸಾಮಾನ್ಯವಾಗಿ ತುಂಬ ಬಾಳಿಕೆ ಬರುವ, ಸುಲಭವಾಗಿ ಹೊರಬಹುದಾದ, ಶರೀರದ ಮೇಲೆ ಧರಿಸಬಹುದಾದ ಅಥವಾ ಮನೆಯಲ್ಲಿ ಭದ್ರವಾಗಿರಿಸಬಹುದಾದ ಭೌತಿಕ ವಸ್ತುವೇ ತಾಯಿತಿ ಅಥವಾ ಚೀಟು" ಎಂದು ಎಸ್. ಪಿ. ಹಾಸ್ (Sally Pepper Haas) ಹೇಳುತ್ತಾರೆ.[2] ಇವನ್ನು ಬಳಸದ ಜನಾಂಗ ಕಾಣದ ಜನಾಂಗವಿಲ್ಲ. ಲಾಳ,

1 *Standard Dictionary of Folklore, Mythology and Legend*, Ed. by Maria Leach, p. 213

2 *Ibid*, p. 50

ಅದೃಷ್ಟ ನಾಣ್ಯ, ಮೊಲದಪಾದ ಮೊದಲಾದುವನ್ನು ಅಮೆರಿಕೆಯ ಜನ ಬಳಸಿದರೆ, ಭಾರತೀಯರಲ್ಲಿ ಕೆಲವರು ತಾಮ್ರದ ತಗಡು, ಹುಲಿಯ ಚರ್ಮ ಅಥವಾ ಉಗುರುಗಳನ್ನು ಉಪಯೋಗಿಸುತ್ತಾರೆ; ಅವನ್ನು ಮನೆಯ ಸೂರಿಗೆ ಕಟ್ಟುತ್ತಾರೆ, ಪ್ರಾಣಿಗಳ ಕೊರಳಿಗೆ ನೇತುಹಾಕುತ್ತಾರೆ, ಹೊಲದ ಬಳಿಯ ಮರಕ್ಕೆ ತಗುಲಿಸುತ್ತಾರೆ, ಮೇಟಿ ಕಣಜಗಳಿಗೆ ಬಂಧಿಸುತ್ತಾರೆ.

ಆಕಾರಕ್ಕಾಗಿಯೋ, ಬಣ್ಣಕ್ಕಾಗಿಯೋ ಅಥವಾ ಸ್ಥಾನಮಹಿಮೆಗಾಗಿಯೋ ಆರಿಸಿ ತಂದ ಕಲ್ಲನ್ನು ಮಂಗೋಲಿಯಾದ ಜನ ಮೈಮೇಲಿಟ್ಟುಕೊಂಡು, ಅದು ಸಿಡಿಲು ಗುಡುಗುಗಳಿಗೆ ರಕ್ಷೆಯೆಂದು ತಿಳಿಯುತ್ತಾರೆ; ಯಹೂದ್ಯರು ಅದನ್ನು ಗರ್ಭಪಾತಕ್ಕೆ ಮದ್ದಾಗಿ ಬಳಸುತ್ತಾರೆ; ಇಟಲಿಯ ಜನ ಮಾಟಕ್ಕೆ ವಿರುದ್ಧವಾಗಿ ಹಾಗೂ ಹಾವಿನ ವಿಷಕ್ಕೆ ರಾಮಬಾಣವೆಂದು ಪ್ರಯೋಗಿಸುತ್ತಾರೆ. ದುಷ್ಟಮೋಹಿನಿಯರು ಹಸುಗಳಿಂದ ಹಾಲು ಕದಿಯುವುದನ್ನು ತಡೆಯುವ ಸಲುವಾಗಿ ಐರಿಷ್ ಜನ ವೆಜ್ಜ ಕೊರೆದ ಕಲ್ಲುಗಳ ಹಾರವನ್ನು ಗೋಶಾಲೆಯಲ್ಲಿ ನೇತುಹಾಕುತ್ತಾರೆ. ಸಂತಾನಹೀನರಾದ ಜಪಾನೀಯರು ಕಲ್ಲುಹರಳುಗಳನ್ನು ಸದಾ ಜತೆಯಲ್ಲಿಟ್ಟುಕೊಂಡಿರುತ್ತಾರೆ. ಸಾಲಿಗ್ರಾಮ ಶಿಲೆಯನ್ನು ಬಾಯಲ್ಲಿಟ್ಟುಕೊಳ್ಳುವ, ಜೇಬಿನಲ್ಲಿ ಭದ್ರಪಡಿಸಿಕೊಳ್ಳುವ ಹಾಗೂ ದೇವರ ಮನೆಯಲ್ಲಿ ಪೂಜಿಸುವ ಸಂಪ್ರದಾಯ ಭಾರತದಲ್ಲಿದೆ.

ಪ್ರಾಣಿದೇಹದ ಅವಯವ ಭಾಗವನ್ನು ಧರಿಸುವುದರಿಂದ ಆ ಪ್ರಾಣಿಯ ಗುಣಗಳು ಮಾನವನ ದೇಹಕ್ಕೆ ಹರಿದು ಬರುತ್ತವೆನ್ನುವ ನಂಬಿಕೆ ಬಹು ಪ್ರಾಚೀನವಾದುದು. ಗ್ರೀನ್‌ಲ್ಯಾಂಡಿನ ಎಸ್ಕಿಮೋಗಳು ತಮ್ಮ ಹುಡುಗರು ದೊಡ್ಡ ಬೇಟೆಗಾರರಾಗಬೇಕೆಂಬ ಬಯಕೆಯಿಂದ ಗಿಡಗನ ತಲೆಯನ್ನೂ, ಅವರ ಬಲ ವರ್ಧಿಸಲೆಂದು ಕರಡಿ ಮೂತಿಯ ಮೇಲ್ಭಾಗದ ಚರ್ಮವನ್ನೂ, ಯುಕ್ತಿ ನೈಪುಣ್ಯವೊದಗಲೆಂದು ನರಿತಲೆಯ ತುಂಡೊಂದನ್ನೂ ಅವರ ಅಂಗಿಗಳಿಗೆ ಹೊಲಿಸುತ್ತಾರೆ.

ಮರಗಿಡಗಳ ಭಾಗಗಳನ್ನು ತಾಯಿತಿಗೆ ಬಳಸುವ ರೂಢಿ ಲೋಕವ್ಯಾಪಿಯಾದುದು. ಕಣ್ಣಾಸರೆಗಾಗಿ ಮೆಣಸಿನಕಾಯಿಯನ್ನು ಇಳಿತೆಗೆಯುವ ಅಥವಾ ಪೊರಕೆ ಕಡ್ಡಿಗಳನ್ನು ಮುರಿದು ಸುಡುವ, ಅರಿಸಿನದ ಕೊನೆಯನ್ನು ತೋಳಿಗೆ ಕಟ್ಟುವ, ಬತ್ತದ ಅಥವಾ ಗೋಧಿ ತೆನೆಯನ್ನೊ ತೆಂಗಿನಕಾಯನ್ನೊ ಮನೆಯ ಸೂರಿಗೆ ನೇತುಹಾಕುವ, ಅಂತೆಯೇ ದುಷ್ಟಶಕ್ತಿಗಳಿಂದೊದಗುವ ಅಪಾಯವನ್ನು ತಪ್ಪಿಸಲು ದರ್ಭೆಯನ್ನು ಮಂತ್ರಿಸುವ ಪದ್ಧತಿ ಭಾರತದ ಹಲವು ಕಡೆಗಳಲ್ಲಿ ಆಚರಣೆಯಲ್ಲಿದೆ. ಮೋಹಿನಿಯರನ್ನು ದೂರವಿರಿಸುವ ಸಲುವಾಗಿ ರೋಮನ್ನರು ಬೆಳ್ಳುಳ್ಳಿಯನ್ನು ಬಳಸುತ್ತಿದ್ದರು. ಕೆಟ್ಟ ಕಣ್ಣು ತಲೆನೋವುಗಳ ನಿವಾರಣೆಗಾಗಿ ಮತ್ತು ಭಾಗ್ಯೋದಯಕ್ಕಾಗಿ ಇಟಲಿಯ ಜನ ವಾಲ್‌ನಟ್ಟುಗಳನ್ನೂ ಬಾದಾಮಿಗಳನ್ನೂ ಶರೀರದಮೇಲೆ ಧರಿಸುತ್ತಿದ್ದರು. ಸದಾ ಆಲೂಗೆಡ್ಡೆಯನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಅಪಾಯಗಳು ಬಳಿ ಸುಳಿಯುವುದಿಲ್ಲ, ಮತ್ತು ರೋಗಗಳು ವಾಸಿಯಾಗುತ್ತವೆಯೆಂದು ಹಲವರು ನಂಬುತ್ತಾರೆ.

ಗ್ರೀಕರಿಗೆ ದೇವರ ವಿಗ್ರಹಗಳೂ ರೇಖಾಚಿತ್ರಗಳೂ ರಕ್ಷಾಬಂಧನಗಳಾಗುತ್ತಿದ್ದುವು. ಜಗತ್ತಿನ ನಾನಾ ಕಡೆಗಳಲ್ಲಿ ಉಂಗುರ ಮತ್ತು ಬಳೆಗಳು ತಾಯಿತಿಗಳಾಗುತ್ತವೆ. ಕೆಲ್ಟಿಕ್ ಜನ ಕುದುರೆ ಬಸವಗಳ ಮೂರ್ತಿಗಳನ್ನೂ, ಕಾಡುಹಂದಿಯ ಹಲ್ಲಿನ ಮಾದರಿಗಳನ್ನೂ ಬಳಸುತ್ತಿದ್ದರು. ಮಾಯಾಜನರ ರಕ್ಷೆಗಳೆಂದರೆ ಕಪ್ಪೆ, ಹಲ್ಲಿ, ಮೊಸಳೆ, ಹಾವು, ಗಿಳಿ ಅಥವಾ ಕೋತಿಗಳ ಬೊಂಬೆಗಳು. ಕೆಲವು ಆಭರಣಗಳಾದರೂ ಮೊದಮೊದಲು ತಾಯಿತಿಗಳ ರೂಪದಲ್ಲಿ ಬಳಕೆಗೆ ಬಂದಿರಬೇಕೆಂದು ತೋರುತ್ತದೆ. ಮಾಟಗಳಿಗೆ ತಡೆಯಾಗಿ ತಾಮ್ರ, ಬೆಳ್ಳಿ, ಚಿನ್ನ, ಕಬ್ಬಿಣಗಳ ಉಂಗುರಗಳನ್ನೋ ಬಳೆಗಳನ್ನೋ ಧರಿಸುವ ರೂಢಿ ಭರತಖಂಡದಲ್ಲಿದೆ. ತಾಲಿಯೂ ಅಂಥದೇ ಇರಬೇಕೆಂದು ಹೇಳುವುದುಂಟು. ದೇವತೆಗಳ ಹೆಸರೋ, ರೇಖಾಚಿತ್ರವೋ, ಧ್ರಾಂಧ್ರೀಂ ಧ್ರೂಂ ಹೋಲುವ ಪ್ರಾಸಗಳೋ, ರಹಸ್ಯಾತ್ಮಕವಾದ ಮುದ್ರೆಗಳೋ, ಪವಿತ್ರ ಗ್ರಂಥಗಳ ಸಾಲುಗಳೋ ತಾಯಿತಿಯಲ್ಲಿ ಬರೆದಿರುತ್ತವೆ. ತೋಡಗಳು ಬೆಳೆಯನ್ನು ಹಾಳುಮಾಡಿದ್ದಾದರೆ 'ತೋಡಗಳೇ, ಇಲ್ಲಿದ್ದುಕೊಂಡು ತೊಂದರೆ ಕೊಡಬೇಡಿ ಎಂದು ಆಜ್ಞೆ ಮಾಡುತ್ತಿದ್ದೇನೆ. ಇಲ್ಲಿಂದ ದೂರದ ಹೊಲಕ್ಕೆ ಹೋಗಿ. ಮತ್ತೆ ಭೂಮಾತೆಯ ಕೃಪೆಯಿಂದ ನೀವಿಲ್ಲಿ ಕಾಣಿಸಿಕೊಂಡದ್ದಾದರೆ ಏಳೇಳು ಚೂರುಗಳಾಗಿ ಸಿಗಿದುಹಾಕುತ್ತೇನೆ" ಎಂದು ಕಾಗದದ ಮೇಲೆ ಬರೆದು ಹೊಲದ ಬಂಡೆಗೆ ಹಚ್ಚುವ ರೂಢಿ ಪ್ರಾಚೀನ ಗ್ರೀಸಿನ ರೈತರಲ್ಲಿತ್ತು.

ಅದ್ಭುತಯಂತ್ರ (Talisman) ತಾಯಿತಿಯಿಂದ ಸಂಪೂರ್ಣ ಭಿನ್ನವಾದುದು. ತಾಯಿತಿ ಧರಿಸಿದವನಿಗೆ ನಿಶ್ಚಿತ ರಕ್ಷೆಯಾದರೆ, ಅದ್ಭುತಯಂತ್ರ ಸ್ವಯಂ ಕ್ರಿಯಾಶೀಲವಾಗಿರುವುದಲ್ಲದೆ, ಅದರ ಪ್ರಭಾವ ಅನ್ಯತ್ರ ಅರ್ಥವಿಸುತ್ತದೆ. ಜಾನಪದ ಕಥೆಗಳಲ್ಲಿ ಬರುವ ಅದೃಶ್ಯಟೊಪ್ಪಿಗೆ, ಏಳು ಹರಿದಾರಿ ಬೂಟುಗಳು, ಹಾರುವ ಮಂಚ ಮುಂತಾದುವು ಅದ್ಭುತಯಂತ್ರದ ಜಾತಿಗೆ ಸೇರುತ್ತವೆ. ಸರ್ವಚೇತನ ಮತ ಪ್ರಚಲಿತವಿದ್ದ ಕಾಲದಲ್ಲಿ ಅದ್ಭುತಯಂತ್ರಗಳ ಸಂಖ್ಯೆ ಪ್ರಬಲವಾಗಿತ್ತೆಂದು ಹೇಳುತ್ತಾರೆ. ಅಲ್ಲಾದೀನನ ಮಾಯಾದೀಪ ಈ ಅದ್ಭುತಯಂತ್ರಕ್ಕೆ ಅತ್ಯುತ್ತಮ ನಿದರ್ಶನ. ಭಾರತೀಯ ಕಾವ್ಯಗಳಲ್ಲಿ ಆಗಾಗ್ಗೆ ಗೋಚರಿಸುವ ಸ್ಪರ್ಶಶಿಲೆ ಅಂಥಾದ್ದೇ.[1]

ಹೊಟ್ಟೆನೋವು ಭೇದಿ ಕಣ್ಣಾಸರು ಕಾಲುಳುಕು ಹುಳುಕು ಮೊದಲಾದುವುಗಳಿಗೆ ಈಬೂತಿ ಮಂತ್ರಿಸಿ ಕೊಡುವ ಪದ್ಧತಿ ಇಂದಿಗೂ ಕರ್ನಾಟಕದ ಕೆಲವು ಕಡೆಗಳಲ್ಲಿ ಪ್ರಾಚುರ್ಯದಲ್ಲಿದೆ. ಆ ಸಂದರ್ಭದಲ್ಲಿ ಪಠಿಸುವ ಮಂತ್ರವನ್ನಿಲ್ಲಿ ಕೊಟ್ಟಿದೆ:[2]

1 ಇಲ್ಲಿಯ ಕೆಲವು ಉದಾಹರಣೆಗಳು [illegible] ಪೂರ್ವೋಕ್ತ ಗ್ರಂಥದಿಂದ ಆಯ್ದುವು.

2 ಈ ಮಂತ್ರದ ಪಾಠಗಳು ಅಷ್ಟು [illegible] ಬಾಯಿಂದ ಬಾಯಿಗೆ ಬರುವಾಗ ವಿಚಿತ್ರ ರೂಪವನ್ನು [illegible] ಹಲವತ್ತು ವರ್ಷಗಳ ಹಿಂದೆ [illegible] ಬಾಯಿಂದ ಕೇಳಿದ್ದು.

ಗುರುಬ್ರಹ್ಮಾ ಗುರುರ್ವಿಷ್ಣುಃ
ಬೀಜಾಕ್ಷರ ಇಂದು ಕುಲವಂಗ
ನಾನಾ ಎಲ್ಲಮ್ಮ
ಇವರು ನಾಲ್ಕು ಜನವೂ ಅಕ್ಕತಂಗಿಯರು
ಈ ನಾಲ್ಕು ಜನವೂ ಅಕ್ಕತಂಗಿಯರೂವೆ
ಈ ದೃಷ್ಟಿ ಈ ನಷ್ಪಿ ದಿಕ್ಕುಂಟಾ ಹೋಯ್ತು
ಚಿಪ್ಪಿನಟ್ಲ ಪಾಪಾನಿಕಿ ಪೋಯ್ತು
ಈ ದೃಷ್ಟಿ ಈ ನಷ್ಪಿ ದಿಗು ದಿಗು
ಛೀ ಕಾಳಿ ಮಾಂಕಾಳಿ

ಇಂಗ್ಲೆಂಡಿನ ಗ್ರಾಮೀಣ ಜನ ಕಾಲಿನ ಮುಳ್ಳು ತೆಗೆಯುವಾಗಲೂ ಮಂತ್ರಗಳನ್ನು ಪಠಿಸುತ್ತಿದ್ದರಂತೆ.[1] ಔಷಧಿಗೆಂದು ಗಿಡಮೂಲಿಕೆಗಳನ್ನು ಕೀಳುವಾಗಲೂ ಮಂತ್ರೋಚ್ಚಾರಣೆ ಅತ್ಯವಶ್ಯವಾಗಿತ್ತು.[2] ಹೂಹಣ್ಣುಗಳು ಯಥೇಚ್ಛವಾಗಿ ಬಿಡಲೆಂದು ಮಂತ್ರ ಹೇಳುತ್ತಿದ್ದುದುಂಟು.[3]

ಪಂಜಾಬಿನ ಓಝರು ನಲವತ್ತು ದಿನ ಸ್ಮಶಾನದಲ್ಲಿ ತಪಸ್ಸುಮಾಡಿ, ಶಕ್ತಿಯನ್ನೊಲಿಸಿಕೊಂಡು, ಅದ್ಭುತ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರಂತೆ. ಅಂತೆಯೇ ಮುಸ್ಲಿಮರು ಸಮಾಧಿಗಳ ಬಳಿ ತಪಸ್ಸು ಮಾಡಿ, ಸೈತಾನನನ್ನು ಹತೋಟಿಯಲ್ಲಿಟ್ಟುಕೊಂಡು, ವಶೀಕರಣ ಶಕ್ತಿಯನ್ನು ಸಾಧಿಸುತ್ತಾರಂತೆ. ಗ್ರಾಮೀಣ ಮುಗ್ಧರಿಗೆ ಇವರೆಂದರೆ ಅಂಜಿಕೆ.

---

1 Happy man that christ was born,
He was crowned with a thorn ;
He was pierced through the skin,
For to let the poison in.
But his five wounds, So they say,
Closed before he passed away.
In with healing, out with thorn,
Happy man that christ was born.

—*The Science of Folklore* by A. H. Krappe, p. 191

2 All Hail, then holy herb, vervin,
Growing on the ground ;
On the Mount of Cavalry,
There wast thou found ;
Thou helpest many a grief,
And staun chest many a wound.
In the name of sweet gesus,
I lift thee from the ground—Ibid, p. 193

3 ಫಸಕ್ಕೆ ಬಂದ ಗಿಡದ ಬಳಿ ಪ್ರತಿದಿನ ಬೆಳಗ್ಗೆ ಸಂಗೀತ ಹಾಡಿದರೆ ಹೂಹಣ್ಣುಗಳು ಹುಲುಸು ಪ್ರವಾಗಿಯೂ, ಆ ಬಗ್ಗೆ ತಾವು ಪ್ರಯೋಗ ನಡೆಸುತ್ತಿರುವುದಾಗಿಯೂ ಸುಪ್ರಸಿದ್ಧ ಸಂಗೀತಗಾರರಾದ ಟಿ. ಟಿ. ಚೌಡಯ್ಯನವರು ಆಗಾಗ್ಗೆ ಹೇಳುತ್ತಿದ್ದುದನ್ನಿಲ್ಲಿ ನೆನೆಸಿಕೊಳ್ಳಬಹುದು.

ಅವರು ಓಝುರ ಬಳಿ ಹೋಗಿ, ಒಂದು ಚಿಟಿಕೆ ಬೂದಿಯನ್ನೋ, ಅಥವಾ ಬೇರಾವುದಾದರೂ ಮಂತ್ರಪೂತವಾದ ವಸ್ತುವನ್ನೋ ಒಯ್ದು ತಮ್ಮ ಶತ್ರುಗಳ ಮೇಲೆ ಪ್ರಯೋಗಿಸುತ್ತಾರೆ. ಅಂಥ ಪ್ರಯೋಗಕ್ಕೆ ತುತ್ತಾದ ಶತ್ರು ರಕ್ತವನ್ನು ಕಕ್ಕುತ್ತ ಸಾಯುತ್ತಾನೆ. ತಮ್ಮ ಕುಟುಂಬದ ಬಂಧುಗಳನ್ನೂ ಗಂಡಂದಿರನ್ನೂ ಹತೋಟಿಯಲ್ಲಿಟ್ಟುಕೊಳ್ಳುವ ಸಲುವಾಗಿ ಹೆಂಗಸರು ಮಂತ್ರಯಂತ್ರಗಳನ್ನು ಬಳಸುವುದುಂಟು[1]. ಮುಸ್ಲಿಮ್ ಪೀರರು ತಾವು ಕೊಡುವ ವಸ್ತುಗಳ ಮೇಲೆ ಕೊರಾನಿನ ಕೆಲವು ಪಂಕ್ತಿಗಳನ್ನು ಬರೆಯುತ್ತಾರೆ. ಇಂಥ ಪದ್ಧತಿಗಳು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಇರುವಂಥವೇ. ಕುರಿ ಆಡು ಕೋಳಿಗಳನ್ನು ಮಾರಿಯರಿಗೆ ಬಲಿಕೊಡುವಾಗ ಅವರ ಹೆಸರು ಹೇಳಿ, ಬೇವಿನ ಸೊಪ್ಪನ್ನು ನೀರಲ್ಲದ್ದಿ, ಪ್ರಾಣಿಗಳ ಮೇಲೆ ಚಿಮುಕಿಸುತ್ತಾರೆ. ಆ ಪ್ರಾಣಿಗಳು ತಲೆ ಅಲ್ಲಾಡಿಸಿದರೆ ಆ ಬಲಿ ದೇವರಿಗೊಪ್ಪಿಗೆಯಾಯಿತೆಂದು ಲೆಕ್ಕ. ರೋಗ ನಿವಾರಣೆಗಿ ಕಾರ್ಲಂಜು[2]ಮಾಡಿ, ಮೂರು ಹಾದಿ ಕೂಡುವೆಡೆ ಅವನ್ನು ಸುರಿಯುವ ಪದ್ಧತಿ ಅನೇಕ ಕಡೆ ಚಾಲ್ತಿಯಲ್ಲಿದೆ.

ಭಾಷೆಯ ತೊಡಕಿನಿಂದಾಗಿ ಮಂತ್ರಗಳು ದೇಶದಿಂದ ದೇಶಕ್ಕೆ ಯಾತ್ರೆ ಹೋಗುವುದಿಲ್ಲ. ಆದರೆ ಅವುಗಳಿಗೆ ಸಂಬಂಧಿಸಿದ ಆಚರಣೆಗಳು ಪ್ರಸರಣಗೊಳ್ಳಲವಕಾಶವಿದೆ. ಕ್ರಿಸ್ತಶಕೆಯ ಆದಿಯಿಂದ ಅರಬರ ಮತ್ತು ಭಾರತೀಯರ ನಡುವೆ ಅವುಗಳ ವಿನಿಮಯ ನಡೆದಿರಬೇಕೆಂಬ ಊಹೆಗೆ ಜಾನಪದ ಕಥೆಗಳಿಂದ ಪುಷ್ಟಿ ದೊರೆಯುತ್ತದೆ. ವಿನಿಮಯ ನಡೆದಿರುವುದಾದರೂ, ಬಹುಮೂಲವಾದವನ್ನು ತಳ್ಳಿಹಾಕುವಂತಿಲ್ಲ. ಅನೇಕ ಆಚರಣೆಗಳು ಪರಿಸರದ ಒತ್ತಡ ಹಾಗೂ ಸಾಮಾಜಿಕಾವಶ್ಯಕತೆಗಳ ಪರಿಣಾಮವಾಗಿ, ಅಂತೆಯೇ ಸ್ವತಂತ್ರವಾಗಿ ಉದ್ಭವಿಸಿರಬೇಕು.[3] ಯಾವುದೋ ಒಂದು ಆಚರಣೆ ಭಾರತದಲ್ಲಿ ರೂಹುಗೊಂಡು ಚೀನಾಕ್ಕೋ ಮೆಕ್ಸಿಕೋಗೋ ಪ್ರಯಾಣಮಾಡಿತೆಂದು ಹೇಳುವುದು ಔದ್ಧತ್ಯವಾಗುತ್ತದೆ. ಅವುಗಳಲ್ಲಿ ಪರಸ್ಪರ ಸಾದೃಶ್ಯವಿದ್ದ ಮಾತ್ರಕ್ಕೆ ಒಂದು ಮತ್ತೊಂದಕ್ಕೆ ಮೂಲವೆಂದು ಹೇಳಲಾಗದು. ಅದಕ್ಕೆ ಬದಲಾಗಿ ಮನುಷ್ಯಜಾತಿ ಎಲ್ಲಿಯೇ ಇರಲಿ, ಅವನ ಸ್ವಭಾವವೊಂದೇ ರೀತಿಯಾದದ್ದು, ಅವನ ಬುದ್ಧಿ ಮನಸ್ಸುಗಳ ವರ್ತನೆಯಲ್ಲಿ

---

1 *Folklore of the Punjab* by Sohinder Sing Bedi, p. 41-42

2 ಮುಸಿನೀರು, ಓಕುಳಿನೀರು (ಸುಣ್ಣ ಅರಿಸಿನ ಸೇರಿದ್ದು) ಮತ್ತು ಸಗಣಿನೀರುಗಳನ್ನು ಮೂರು ತಟ್ಟೆಗಳಲ್ಲಿ ತುಂಬುತ್ತಾರೆ. ಹಿಟ್ಟಿನಲ್ಲೊಂದು ಆಕಾರ ನಿರ್ಮಿಸಿ, ಅದಕ್ಕೆ ಗರುಕೆ ಸಿಕ್ಕಿಸಿ, ನೀರಿನಲ್ಲಿಡುತ್ತಾರೆ. ಅದಕ್ಕೆ ಪಿಳ್ಳೆಯೆಂದು ಹೆಸರು. ಮೂರು ಬಣ್ಣದ ಬಟ್ಟೆಯ ದೀಪವನ್ನು ಪ್ರತ್ಯೇಕವಾಗಿ ಹಚ್ಚಿ, ರೋಗಿಗೆ ಇಳಿತೆಗೆದು, ನೀರೊಳಗೆ ಹಾಕಿ, ಮೇಲೆ ಮಡಿ ಮುಚ್ಚುತ್ತಾರೆ. ಅನಂತರ ಆ ನೀರನ್ನು ಮೂರು ಹಾದಿ ಕೂಡುವೆಡೆ ಸುರಿಯುತ್ತಾರೆ. ಇದಕ್ಕೆ ಕಾರ್ಲಂಜು ಎಂದು ಹೆಸರು.

3 Even the contents of these popular charms reveal so simple an association of ideas that an independent origin in different places and at different times may without hesitation be assumed—*The Science of Folklore* by A. H. Krappe, p. 190

ಏಕೀಭಾವವಿದೆಯೆಂಬ ತತ್ವವನ್ನರಿಯುವುದು ಮೇಲು. ಕುದುರೆಯ ಕಾಲು ಉಳುಕಿದರೆ, ಮೂಳೆ ಮುರಿದರೆ ಮಂತ್ರೋಚ್ಚಾರಣೆಯ ಮೂಲಕ ವಾಸಿಮಾಡುತ್ತಿದ್ದ ಪದ್ಧತಿ ಪ್ರಾಚೀನಕಾಲದ ಜರ್ಮನಿ ಮತ್ತು ಭಾರತಗಳಲ್ಲಿತ್ತೆಂಧು ಕ್ರಾಪೆಯವರೇ ತಿಳಿಸುತ್ತಾರೆ. ಜರ್ಮನ್ ಭಾಷೆಯ ಮಂತ್ರಕ್ಕೆ ಸಂವಾದಿಯಾದ ಅಥರ್ವವೇದದ ಮಂತ್ರವನ್ನು ಸಹ ನಿದರ್ಶನಾರ್ಥವಾಗಿ ಉದ್ಧರಿಸಿದ್ದಾರೆ.[1] ಆದರೆ ಭಾರತೀಯ ಮೂಲವಾದದ ಪುರಸ್ಕರ್ತರು ಆ ಮಂತ್ರ ಭಾರತದಿಂದ ಜರ್ಮನಿಗೆ ತೆರಳಿತೆಂದು ವಾದಿಸಿದರೆ ಆಶ್ಚರ್ಯಪಡಬೇಕಾಗಿಲ್ಲ.

ಇಂದ್ರಜಾಲಿಕ ವಿದ್ಯೆಗಳಿಗೆ ಮತ್ತು ತಜ್ಜನ್ಯ ಮೂಢನಂಬಿಕೆಗಳಿಗೆ ವಿಜ್ಞಾನ ಕುಠಾರ ಪ್ರಾಯವಾಯಿತು; ಮಂತ್ರಿಸಿದರೆ ಮಾವಿನಕಾಯಿ ಉದುರೀತೇ ಎಂಬ ಹೇಳಿಕೆಗೆ ಪುರಸ್ಕಾರ ನೀಡಿತು. ಆದರೆ ಮಾನವನ ಸಕಲ ಸಮಸ್ಯೆಗಳಿಗೆ ವಿಜ್ಞಾನ ಪರಿಹಾರ ನೀಡಿಲ್ಲ, ಸದ್ಯಕ್ಕೆ ನೀಡುವಂತೆಯೂ ಕಾಣುವುದಿಲ್ಲ. ಭೂತಪ್ರೇತಗಳ ಬಗೆಗೆ ಇನ್ನೂ ಯಾರು ಕಟ್ಟಕಡೆಯ ತೀರ್ಮಾನ ಹೇಳಿಲ್ಲ. ಸಟಿನಂಬಿಕೆಗಳೆಂದು ಅಣಕಕ್ಕೆ ಗುರಿಯಾಗಿದ್ದಂಥವು ಪ್ರಯೋಗಾನಂತರ ದಿಟದ ನಂಬಿಕೆಗಳಾಗಿ ತೋರಿರುವುದೂ ಉಂಟು. ಭಾವಪ್ರೇಷಣ, ಅಂತರ್ವಾಣಿ, ಯೋಗಸಿದ್ಧಿ, ಪವಾಡ ಮೊದಲಾದುವುಗಳನ್ನು ಕುರಿತ ಚರ್ಚೆ ಕೊನೆಯ ತನಕ ವಿವಾದವಾಗುಳಿಯುವ ಸೂಚನೆಗಳು ಕಾಣುತ್ತಿವೆ. ಬಹುದೇವತಾವಾದಕ್ಕೆ ಸರ್ವಚೇತನವಾದ ಕಾರಣವಾದಂತೆ, ಮಾಟಕ್ಕೂ ಅದೇ ಮೂಲ. ಅದು ಆದಿಮಾನವನ ಸಹಜ ಮತ. ವೃಕ್ಷಮಾನವಸಂಬಂಧವಾದ ಪರಸ್ಪರ ರೂಪಾಂತರ ತತ್ವ ಮಾಟದ ಪರಿಧಿಯಲ್ಲಿ ಬಂದಾಗಲೇ ಜನ್ಮಾಂತರ ತತ್ವಕ್ಕೂ ಬೀಜಾವಾಪವಾಯಿತೆಂದು ಧಾರಾಳವಾಗಿ ಹೇಳಬಹುದು. ಕೆಲವು ಮತಗಳು ಇದನ್ನಂಗೀಕರಿಸಿವೆ; ಕೆಲವು ಉಪೇಕ್ಷಿಸಿವೆ. ಸೇಂದ್ರಿಯ ಜ್ಞಾನದಂತೆ ಅತೀಂದ್ರಿಯ ಜ್ಞಾನವೂ ಉಂಟೆಂದು ಬಲ್ಲವರು ಹೇಳುತ್ತಾರೆ. ಅದರ ಶೋಧನೆಯ ಕಡೆಗೆ ಮನೋವಿಜ್ಞಾನಿ ಇದೇ ತಾನೆ ಗಮನ ಹರಿಸಿದ್ದಾನೆ. ಸಾಗರದ ಬಳಿ ಹೋದವನು ತನ್ನಲ್ಲಿರುವ ಪಾತ್ರೆ ಹಿಡಿಸುವಷ್ಟು ನೀರು ತರುತ್ತಾನೆ; ಆದರೆ ಆ ನೀರನ್ನೆಲ್ಲ ಅಗಸ್ತ್ಯ ಕುಡಿದನೆನ್ನುವುದು ಪುರಾಣದ ಕತೆ. ಅಂತೆಯೇ ನಿಸರ್ಗದ ರಹಸ್ಯ ಶೋಧನೆ ಮಾಡಿದಷ್ಟು ನಿಗೂಢವಾಗುತ್ತಿದೆ; ಇನ್ನೂ ವಿಜ್ಞಾನಿಗಳು ಅದರ ದಡದಲ್ಲಿ ಕುಳಿತು ನೊರೆ ಹವಳ ಕಪ್ಪೆಚಿಪ್ಪುಗಳನ್ನಾಯುತ್ತಿದ್ದಾರೆ. ಸಾವಿರ ವರ್ಷದ ಹಿಂದಿನವನು ನಮಗೆ ಆದಿಮಾನವನಾದಂತೆ, ಸಾವಿರವರ್ಷಗಳನಂತರವೂ ಮುಂದಿನವರಿಗೆ ಈಗಿನವರಾದ ನಾವು ಆದಿಮಾನವರಾಗುತ್ತೇವೆ.

ಸೃಷ್ಟಿ ಎಂದಾಯಿತೋ ನಿಖರವಾಗಿ ಯಾರೂ ಹೇಳಲಾರರು. ಅದು ಅನಾದಿ ಅನಂತ ಎಂದು ಕರೆಯುವುದು ಸುಲಭ. ಈ ಮಾತು ಮಾನವನ ನಿರಾಶೆಯನ್ನು ಪ್ರತಿಬಿಂಬಿಸುವಂತೆ, ಅವನ ಬುದ್ಧಿಸೂಕ್ಷ್ಮತೆಯನ್ನೂ ಅಭಿವ್ಯಕ್ತಪಡಿಸುತ್ತದೆ. ನಿಸರ್ಗ ಪರಿವರ್ತನೆ

---

[1] Marrow join marrow, and limb join limb,
What thou hast lost in flesh and bones grow again,
Marrow join marrow, skin join skin above—Ibid. p. 190

ಹೊಂದುತ್ತಿದೆ, ವಿಕಾಸಹೊಂದುತ್ತಿದೆ ಎಂದು ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ವಿಜ್ಞಾನವೂ ಒಂದು ಬಗೆಯ ನಂಬಿಕೆ. ಇಂದಿನ ವೈಜ್ಞಾನಿಕ ನಂಬಿಕೆಯನ್ನು ಮುಂದಿನ ವಿಜ್ಞಾನಿ ಚೂರು ಚೂರು ಮಾಡಬಹುದು. ನಿಸರ್ಗ ವಿಕಾಸಹೊಂದುತ್ತಿದೆಯೆಂದು ಒಪ್ಪಿಕೊಳ್ಳೋಣ. ಒಪ್ಪಿಕೊಂಡದ್ದರಿಂದ ಏನಾಯಿತು? ಕೆಲವು ವರ್ಷಗಳ ಇತಿಹಾಸ ತಿಳಿದಂತಾಯಿತು. ಮುಂದಿನ ವಿಕಾಸದ ಸ್ವರೂಪ ಮಾತ್ರ ಯಾರಿಗೂ ತಿಳಿದಿಲ್ಲ; ತಿಳಿಯುವಂತೆಯೂ ಕಾಣೆ. ಬ್ರಹ್ಮಾಂಡದ ಸ್ವರೂಪವೇ ಯಾರಿಗೂ ಅರಿವಾಗಿಲ್ಲ; ಈಗಿನ ಅರಿವೆಲ್ಲ ಬರಿಯ ಊಹೆ. ಏನೇ ವಿಕಾಸ ಜರುಗುತ್ತಿರಲಿ, ನಿಸರ್ಗದ ಮೂಲತತ್ವ ಬದಲಾಯಿಸಿದಂತಿಲ್ಲ. ಸೂರ್ಯಚಂದ್ರರು ಬಂದು ಹೋಗುತ್ತಿದ್ದಾರೆ, ನಕ್ಷತ್ರಗಳು ಮಿನುಗುತ್ತಿವೆ, ಮಳೆ ಹುಯ್ಯುತ್ತಿದೆ, ಗಾಳಿ ಬೀಸುತ್ತಿದೆ, ಮನುಷ್ಯ ಇತರ ಜೀವಿಗಳಂತೆ ಹುಟ್ಟು ಸಾವುಗಳ ಸುಳಿಯಲ್ಲಿ ಸೆರೆಯಾಗಿದ್ದಾನೆ; ಸೆರೆಯಾಗಿದ್ದಾನೆನ್ನುವುದಕ್ಕಿಂತ ಸಂಚರಿಸುತ್ತಿದ್ದಾನೆನ್ನಬಹುದಲ್ಲವೆ? ಇತರ ಜೀವಿಗಳಿಗಿಲ್ಲದ ಬುದ್ಧಿ ತನಗಿದೆ ಎಂದುಕೊಂಡಿದ್ದಾನೆ ಮನುಷ್ಯ. ಆದ್ದರಿಂದಲೇ ಅವನು ನಿಸರ್ಗದ ಮತ್ತು ಇತರ ಜೀವಿಗಳ ರಹಸ್ಯಭೇದನ ತನ್ನ ಕರ್ತವ್ಯವೆಂದು ಭಾವಿಸಿಕೊಂಡಂತಿದೆ. ಈ ರಹಸ್ಯಭೇದನಮಾರ್ಗ ಮಂತ್ರ ತಂತ್ರ ಮಾಟ, ಮತ, ಕಲೆ, ವಿಜ್ಞಾನ ಇವುಗಳ ಮೂಲಕ ಹರಿದಿದೆ. ಇದು ಮುಗಿದ ಕತೆಯಲ್ಲ, ಎಂದೆಂದಿಗೂ ನಡೆಯುವ ಕತೆ. ನಿಸರ್ಗವಿರುವತನಕ ಜೀವಿಗಳಿರುವತನಕ ಮನುಷ್ಯನಿರುವತನಕ ಅದೇ ತಂತ್ರಮಂತ್ರಗಳು, ಅದೇ ಮತ ಕಲೆ ವಿಜ್ಞಾನಗಳು ಚಕ್ರಾರಪಂಕ್ತಿಗಳಂತೆ ಸುತ್ತುತ್ತವೆ. ಒಮ್ಮೆ ಅದಕ್ಕೆ ಒಮ್ಮೆ ಇದಕ್ಕೆ ಪಟ್ಟ; ಅಥವಾ ಮಂತ್ರ ವಿಜ್ಞಾನಗಳೆರಡೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಜಗತ್ತನ್ನು, ಮಾನವ ಸಮಾಜವನ್ನು ಆಳಬಹುದು, ತಿದ್ದಬಹುದು, ಎತ್ತಲೋ ಕೊಂಡೊಯ್ಯಬಹುದು. ಅದೂ ಯಕ್ಷಿಣಿಯೆ! ಕಾಣುವುದೆಲ್ಲ ವಿಜ್ಞಾನ, ಕಾಣದ್ದೆಲ್ಲ ಯಕ್ಷಿಣಿ!

೯

ನಂಬಿಕೆಗಳು

೧. ಅನೇಕ ದಿನಗಳ ಕಾಲ ಹಸುವಿನ ಸಗಣಿಯನ್ನು ಕಲಸಿ ಗಾಯಕ್ಕೆ ಮೆತ್ತಿದರೆ ಅದು ವಾಸಿಯಾಗುತ್ತದೆ. ಕೈಕಾಲುಗಳಲ್ಲಿ ಗಾಯಕ್ಕೆ ಇಂಗ್ಲೆಂಡಿನ ಕೆಲವು ಭಾಗಗಳಲ್ಲಿ ಇದನ್ನೇ ಬಳಸುತ್ತಿದ್ದುದುಂಟು. ಮತ್ತೆ ಕೆಲವು ಕಡೆ ವಿಷಮಶೀತ ಜ್ವರಕ್ಕೆ ಇದೇ ಮದ್ದು. ಈ ಶತಮಾನದ ಪ್ರಾರಂಭದಲ್ಲಿಯೂ ಇದೇ ಪದ್ಧತಿ ಮುಂದುವರಿದಿತ್ತು. ಸಗಣಿಯ ಗೊಬ್ಬರದಿಂದ ಶಾಖೋತ್ಪತ್ತಿಯಾಗುತ್ತದೆಂಬ ಸಂಗತಿ ಹಳೆಯ ಕಾಲದ ತೋಟಗಾರನಿಗೂ ತಿಳಿದಿತ್ತು. ಆಧುನಿಕ ವಿಜ್ಞಾನಿಗೂ ತಿಳಿದಿರುವ ವಿಚಾರ. ಚಳಿಜ್ವರ ಬಂದಾಗ ಹಸುವಿನ ಸಗಣಿಯನ್ನು ಔಷಧಿಯಾಗಿ ಬಳಸುವುದರಲ್ಲಿ ತಪ್ಪಿಲ್ಲ.[1]

೨. ಗೋರಕನ ಬಲೆಯನ್ನು ಸಂಗ್ರಹಿಸಿ, ಉಂಡೆಕಟ್ಟಿ ನುಂಗಿದ್ದಾದರೆ ಗೂರಲು ರೋಗ ವಾಸಿಯಾಗುತ್ತದೆ. ಬೆಕ್ಕಿನ ಹಸಿಮಾಂಸವನ್ನು ತಿಂದರೆ ರೋಗ ಗುಣವಾಗುತ್ತದೆಂದು ಹದಿನಾರನೆಯ ಶತಮಾನದ ಜನರ ನಂಬಿಕೆಯಾಗಿತ್ತು. ಬೇಯಿಸಿದ ಕೆಂಪು ಮೂಲಂಗಿ ತಿಂದರೆ ಅದು ಮಾಯವಾಗುತ್ತದೆಂಬುದು ಹದಿನೇಳನೆಯ ಶತಮಾನದ ಜನರ ಅಭಿಪ್ರಾಯ. ಹಸಿ ಕೆಂಪು ಮೂಲಂಗಿ ತಿಂದರೆ ಕತ್ತಲೆಯಲ್ಲಿಯೂ ಕಣ್ಣು ಚೆನ್ನಾಗಿ ಕಾಣಿಸುತ್ತದೆಂದೂ, ಎರಡನೆಯ ಮಹಾಯುದ್ಧದ ಕಾಲದಲ್ಲಿ ವಿಮಾನ ಚಾಲಕರು ಅದನ್ನು ಧಾರಾಳವಾಗಿ ಬಳಸುತ್ತಿದ್ದರೆಂದೂ ತಿಳಿದುಬಂದಿದೆ.[2]

೩. ಹಡಗು ಹೊರಟಾಗ ಅದರ ಬಲಭಾಗದಲ್ಲಿ ನಾವಿಕ ಸೀತದ್ದಾದರೆ ಪ್ರಯಾಣ ಸುಗಮವಾಗುತ್ತದೆಂದೂ, ಎಡಗಡೆ ಸೀತದ್ದಾದರೆ ಕೆಟ್ಟಹವೆ ಸಂಭವಿಸುತ್ತದೆಂದೂ ನಂಬಿಕೆಯಿದೆ. ಅದೇ ತಾನೇ ಹುಟ್ಟಿದ ಮಗು ಸೀನದಿದ್ದರೆ ಮಾಯಾಶಕ್ತಿಗಳ ವಶದಲ್ಲಿರುತ್ತದೆಂದು ಮತ್ತೊಂದು ತಿಳಿವಳಿಕೆಯಿದೆ. ಬೆಳಗಿನ ತಿಂಡಿಗೆ ಮುಂಚೆ ಸೀತದ್ದಾದರೆ ಆ ವಾರ ಮುಗಿಯುವುದರೊಳಗಾಗಿ ಬಹುಮಾನ ಸಿಗುತ್ತದಂತೆ. ನೆಗಡಿ ಹಿಡಿದಾಗ ಅಥವಾ ನಶ್ಯ ಏರಿಸಿದಾಗ ಬರುವ ಸೀನು ಲೆಕ್ಕಕ್ಕಿಲ್ಲ. ಸೋಮವಾರ ಸೀತರೆ ಅಪಾಯಕಾರಿ, ಮಂಗಳವಾರ ಅಪರಿಚಯಸ್ತರ ಅಧರಾಮೃತಪಾನ, ಬುಧವಾರ ಪತ್ರಾಗಮನ, ಗುರುವಾರ ತಕ್ಕಮಟ್ಟಿನ ಶುಭ, ಶುಕ್ರವಾರ ದುಃಖ, ಶನಿವಾರ ಪ್ರೇಯಸಿಯ ದರ್ಶನ.[3]

[1] *Encyclopaedia of Superstitions* by E. and M. A. Radford, p. 91.
[2] Ibid, p. 25.
[3] Ibid, p. 222.

೪. (i) ಅಂಟು ರೋಗಗಳು ಮುಟ್ಟದಿರಲು ಇಂಗನ್ನಿಡಬೇಕು. ಕರ್ಪೂರವೂ ಸರಿಯೆ. ಸಾಮಾನ್ಯವಾಗಿ ಇವನ್ನು ಬೇರೆ ಬೇರೆಯಾಗಿಯೋ ಒಟ್ಟಿಗೋ ಗಂಟುಕಟ್ಟಿ ಕೊರಳಲ್ಲಿ ನೇತುಹಾಕಿಕೊಳ್ಳುವುದುಂಟು. (ii) ಜೇಬಿನಲ್ಲಿ ಬೆಳ್ಳುಳ್ಳಿ ಒಯ್ದರೆ ಖಾಯಿಲೆಗಳು ಹತ್ತಿರ ಸುಳಿಯುವುದಿಲ್ಲ. (iii) ಬಲಮಗ್ಗುಲಲ್ಲಿ ಮಲಗಿದರೆ ಆಯುಸ್ಸು ಹೆಚ್ಚುತ್ತದೆ, ಎಡಮಗ್ಗುಲಲ್ಲಿ ಮಲಗಿದರೆ ಹೃದಯ ದುರ್ಬಲವಾಗುತ್ತದೆ. (iv) ದೀರ್ಘಕಾಲ ಒಂದೇ ಕೊಟಡಿಯಲ್ಲಿ ಮಲಗಿರುವ ರೋಗಿಯನ್ನು ಸ್ಥಳಾಂತರಿಸಿದರೆ ರೋಗ ಗುಣವಾಗುತ್ತದೆ. (v) ರೋಗವಿರುವಾಗ ಸತ್ತವನನ್ನು ನೆನೆದರೆ ರೋಗ ವಾಸಿಯಾಗುವುದಿಲ್ಲ. (vi) ಇರುಳು ಉಲ್ಬಣಗೊಳ್ಳುವ ಖಾಯಿಲೆ ಬಹುದಿನ ಎಳೆಯುತ್ತದೆ. (vii) ರೋಗವಿರುವಾಗ ಹಾಸುಗೆಯ ಮೇಲೆ ಆಕಳಿಸುವುದು ಕೆಟ್ಟ ಶಕುನ.[1]

೫. ನಡುರಾತ್ರಿ ನಾಯಿಂದನನ್ನು ನೆನೆಯಬಾರದು. ಒಮ್ಮೆ ವಧೂವರರಿಗೆ ಲಗ್ನ ಕೂಡಿಬಂದದ್ದು ನಟ್ಟಿರುಳಿನಲ್ಲಿ. ಆಗ ವಪನ ಶಾಸ್ತ್ರಕ್ಕಾಗಿ ನಾಯಿಂದನನ್ನು ಬರಮಾಡಲಾಯಿತು. ಅವನು ಬಂದಾಗ ನಿದ್ದೆಗಣ್ಣು, ಆಕಳಿಕೆ. ವರನ ಮುಖ ಕೊರಳುಗಳ ಮೇಲೆ ಅವನು ಕತ್ತಿ ಆಡಿಸುವಾಗ ಅದು ಆಯತಪ್ಪಿ ಕೊರಳು ಕೊಯ್ದುಹೋಯಿತು. ಈ ಬಗೆಗೆ ಇಂಥವೇ ಕತೆ ಹಲವಿರಬಹುದು.

೬. ಕಾಲ ಮೇಲಿನ ಗಾಯಕ್ಕೆ ಸ್ವಮೂತ್ರವೇ ಶ್ರೇಷ್ಠ ಚಿಕಿತ್ಸೆ.

೭. ಬಸುರಿಯಾದ ತಂಗಿಯನ್ನು ತವರಿಗೆ ಕರೆತರಲು ಅಣ್ಣನನ್ನು ಕಳಿಸಬಾರದು. ಚೊಚ್ಚಲ ಹೆರಿಗೆ ತವರಿನಲ್ಲಿಯೇ ಆಗಬೇಕಾದ್ದು ಸತ್ಸಂಪ್ರದಾಯ. ತಾಯಿಯ ರಕ್ಷೆಯಲ್ಲಿರುವ ಮಗಳಿಗೆ ಮಾನಸಿಕ ತೃಪ್ತಿಯುಂಟಾಗಿ ಹೆರಿಗೆ ನಿರಾಯಾಸವಾಗಿ ಆಗುತ್ತದೆ. ಹೆಚ್ಚುಕಡಮೆಯಾದರೆ ತಾಯ್ತನವನ್ನೆಲ್ಲ ಸೂರೆಗೊಂಡು ತಾಯಿ ಮಗಳಿಗೆ ಆರೈಕೆ ಮಾಡುತ್ತಾಳೆ. ಆದರೆ ಅಣ್ಣ ಏಕೆ ತಂಗಿಯನ್ನು ಕರೆತರಬಾರದು? (i) ಅದಕ್ಕೊಂದು ಪೌರಾಣಿಕ ಕತೆಯಿದೆ. ಕೃಷ್ಣ ಸುಭದ್ರೆಯನ್ನು ಕರೆತರುವಾಗ ಆಯಾಸ ಪರಿಹಾರಕ್ಕಾಗಿ ದಾರಿಯ ಮರದಡಿ ಕುಳಿತರಂತೆ. ಕೃಷ್ಣ ಕಥೆ ಹೇಳುತ್ತಿರುವಾಗ ಸುಭದ್ರೆ ನಿದ್ದೆ ಹೋದಳು. ಆಕೆ ಬದಲಿಗೆ ಹೊಟ್ಟೆಯ ಮಗು ಹೂಂಕೊಳ್ಳುತ್ತಿತ್ತು. ತುಸು ಹೊತ್ತಿನನಂತರ ಕೃಷ್ಣನಿಗೆ [illegible] ಗೊತ್ತಾಗಿ, ದಿವ್ಯದೃಷ್ಟಿಯಿಂದ ಮಗುವನ್ನು ನೋಡಿ. ಅವನಿಗೆ [illegible] ದನ್ನು ಕಂಡು. ಬಾಣ ಹೂಡಿ ಅಂಗಗಳನ್ನು ಕತ್ತರಿಸುವುದಿದೆ. ಕತೆ ನಿಲ್ಲಿಸಿಬಿಟ್ಟನು. ಕತೆ ಮುಂದುವರಿಸಿ ಚಕ್ರವ್ಯೂಹ ಭೇದನೋಪಾಯವನ್ನು ತಿಳಿಸಿದ್ದರೆ ಅಭಿಮನ್ಯು ಮುಂದೆ ಭಾರತದ ಯುದ್ಧದಲ್ಲಿ ಸಾಯುತ್ತಿರಲಿಲ್ಲ. (ii) ಇದಕ್ಕನ್ವಯವಾಗುವ ಮತ್ತೊಂದು ಜಾನಪದ ಕಥೆಯೂ ಉಂಟು. ತವರಿಗೆ ಕರೆತರುತ್ತಿದ್ದ ತಂಗಿಯನ್ನು ಅಣ್ಣ ನೋಡಿದ. ಅವಳು ಸಾಕಷ್ಟು ಒಡವೆ ಹಾಕಿದ್ದಳು. ಅದರ ಮೇಲಿನ ಆಸೆಯಿಂದ ಅವಳನ್ನು ಕೊಂದು. [illegible] ಮಗುವನ್ನು ಅತ್ತೆಮಾವಂದಿರು ಕಳಿಸಲಿಲ್ಲವೆಂದು ಸುಳ್ಳು ಹೇಳಿದ. [illegible] ಕೊಳಕ್ಕೆ ಬಿಸಾಡಿ. [illegible]

[1] *Folklore from Adams County Illinois* by Harry Middleton Hyatt, Items No. 4530, 4542, 4564A, 4584, 4596, 4617, 4635.

ತಿಂಗಳು ಕಳೆದರೂ ಅತ್ತೆಮಾವಂದಿರಿಗೆ ಸೊಸೆ ಹೆತ್ತ ಸುದ್ದಿ ತಿಳಿಯಲಿಲ್ಲ. ಆಗ ಅವರು ಮಗನ ಜತೆಯಲ್ಲಿ ಬೀಗರ ಊರಿಗೆ ಹೋಗುವಾಗ ಬಾಯಾರಿಕೆಯ ತೀರಿಕೆಗಾಗಿ ದಾರಿಯ ಕೊಳಕ್ಕಿಳಿಯುತ್ತಾರೆ. "ಅಣ್ಣ ನನ್ನನ್ನು ಕೊಳಕ್ಕೆ ತಳ್ಳಿದ ; ತಾವರೆಯಾದೆ ; ಮುಟ್ಟಿದರೆ ಬಾಡಿಹೋಗುತ್ತೇನೆ, ಮುಟ್ಟಬೇಡಿ" ಎಂದಿತು.

೮. ಒಲೆಯನ್ನು ಕಾಲಿಂದ ಒದೆಯಬಾರದು. ಅಗ್ನಿಸ್ಪರ್ಶದ ಅಂಜಿಕೆಯೊಂದು ಕಾರಣ. ಮಾನವನ ಸಂಸ್ಕೃತಿ ಅರಳಿದ್ದು ಅಗ್ನಿಯಿಂದ. ಶುಭಕಾರ್ಯಗಳಿಗೆ ಅಗ್ನಿ ಇರಲೇಬೇಕು. ಅಶುಭವನ್ನು ಪರಿಹರಿಸುವಂಥ ಪವಿತ್ರ ವಸ್ತುವೂ ಅದೇನೆ. ಜತೆಗೆ ಅಡುಗೆ ಒಲೆಯಿಂದ ಸಿದ್ಧಿಸಬೇಕು. ಈ ಕಾರಣಗಳಿಂದ ಒಲೆಯ ಬಗ್ಗೆ ಪೂಜ್ಯಭಾವನೆ ಬರುವುದು ಸಹಜ.

೯. ಶುಭಕಾರ್ಯಕ್ಕೆ ಹೋಗುವಾಗ ಮೂರು ನಾಮದವರು ಎದುರಿಗೆ ಸಿಗಬಾರದು.

೧೦. ಮಾಲುಗಣ್ಣಿನ ಹೆಣ್ಣು ಪುಣ್ಯವಂತೆ.

ಮೊದಲ ಮೂರು ಈಚಿನ ತನಕ ಇಂಗ್ಲೆಂಡಿನಲ್ಲಿಯೂ, ನಾಲ್ಕನೆಯವು ಅಮೆರಿಕೆಯ ಇಲಿನಾಯ್ ಪ್ರಾಂತ್ಯದ ಆಡಮ್ಸ್ ಕೌಂಟಿಯಲ್ಲಿಯೂ, ಮುಂದಿನವು ಭಾರತದಲ್ಲಿಯೂ, ಅದರಲ್ಲಿಯೂ ಕರ್ನಾಟಕದ ಕೆಲವು ಭಾಗಗಳಲ್ಲಿ ಈ ತನಕವೂ ಚಾಲ್ತಿಯಲ್ಲಿದ್ದ—ಇರುವ ನಂಬಿಕೆಗಳು. ಒಂದು, ಎರಡು, ನಾಲ್ಕು ಮತ್ತು ಆರನೆಯ ನಂಬಿಕೆಗಳು ವೈದ್ಯಕ್ಕೆ ಸಂಬಂಧಿಸಿಮವು. ಆಧುನಿಕ ವೈದ್ಯಪದ್ಧತಿ ಜಾರಿಗೆ ಬರುವ ತನಕ ಇಲ್ಲಿ ನಮೂದಿಸಿರುವ ಔಷಧಿ ಪ್ರಯೋಗವೇ ಬಹುಕಾಲ ರೂಢಿಯಲ್ಲಿದ್ದಿರಬೇಕು. ವಿಜ್ಞಾನ ವಿಕಾಸಗೊಳ್ಳುವ ತನಕ ಇವನ್ನೇ ನಾಗರಿಕರು ಅನಾಗರಿಕರೆಲ್ಲ ಅವಲಂಬಿಸಿರಬೇಕು. ವೀಕ್ಷಣೆ–ಪ್ರಯೋಗ—ಅಪಜಯ–ಪುನಃಪ್ರಯತ್ನ–ಯಶಸ್ಸು, ಈ ವಿಧಾನದಿಂದ ಆಗಿನ ವೈದ್ಯರು ಮೇಲಿನ ತೀರ್ಮಾನಕ್ಕೆ ಬಂದಿರಬೇಕು. ಆರೋಗ್ಯರಕ್ಷಣೆ ಮನುಷ್ಯನ ಪ್ರಪ್ರಥಮ ಪ್ರಯತ್ನಗಳಲ್ಲೊಂದಾಗಿರಬೇಕು. ಆದ್ದರಿಂದ ವ್ಯವಸಾಯದ ಕಡೆಗೆ ಅವನ ಗಮನ ಹರಿಯುವ ಮುನ್ನವೇ ದೇಹ ಕ್ಷೇಮಸಾಧಕವಾದ ಉಪಾಯಗಳನ್ನು ಕಂಡುಹಿಡಿಯಲು ಅವನು ತನ್ನ ಬುದ್ಧಿಶಕ್ತಿಯನ್ನು ಬಳಸಿರಬೇಕು. ಆ ಜಾನಪದ ವೈದ್ಯವೇ ಆಧುನಿಕ ಪದ್ಧತಿಗೆ ಪ್ರೇರಣೆ ಸೂಚನೆಗಳನ್ನೊದಗಿಸಿರಬೇಕು.

ಮೂರು ಮತ್ತು ಒಂಬತ್ತನೆಯವು ಶಕುನಗಳು. ಅವುಗಳ ಉಗಮವನ್ನು ಊಹಿಸುವುದು ಕಷ್ಟ. ಐದು ಮತ್ತು ಏಳನೆಯ ನಂಬಿಕೆಗಳಂತು ಎಂದೋ ನಡೆದಿರಬಹುದಾದುವು ಇಲ್ಲವೇ ಕಲ್ಪನೆಯ ಕತೆಗಳ ಆಧಾರದಮೇಲೆ ಹುಟ್ಟಿಕೊಂಡಿರುವಂಥವು. ಎಂಟನೆಯ ನಂಬಿಕೆಯಲ್ಲಿ ಕಲ್ಪನೆ ವಾಸ್ತವತೆಗಳೆರಡೂ ಸೇರಿವೆ. ಹತ್ತನೆಯ ನಂಬಿಕೆಯಲ್ಲಿ ಮಾಲುಗಣ್ಣಿಗೂ ಪುಣ್ಯಕ್ಕೂ ಸಂಬಂಧ ಕಲ್ಪಿಸಿದೆ. ಆ ಕಲ್ಪನೆ ಎಂದು ಉದಯವಾಯಿತೋ ಗೊತ್ತಿಲ್ಲ. ಅದರ ಕಾರ್ಯಕಾರಣಸಂಬಂಧವೂ ಸ್ಪಷ್ಟವಿಲ್ಲ. ಈ ಮಾಲು ಹೆಚ್ಚಾಗಿಲ್ಲವೆ, ಕಂಡೂ ಕಾಣದಂತಿದ್ದರೆ, ಸೌಂದರ್ಯಕ್ಕೆ ಕೋಡುಮೂಡಿದಂತೆ ಸೊಗಸು ಹೆಚ್ಚುತ್ತದೆ. ಸೊಗಸಿಗೂ ಪುಣ್ಯಕ್ಕೂ ಏನು ಸಂಬಂಧ? ಮಾಲುಗಣ್ಣಿನ ಹೆಣ್ಣನ್ನು ಮದುವೆಯಾದವರೆಲ್ಲರಿಗೂ ಶುಭವಾಗಿರಬಹುದೇ?

ಏನೇ ಇರಲಿ, ಇಂಥ ನಂಬಿಕೆಗಳು ಜಾತಿ ವೃತ್ತಿ ಅಂತಸ್ತುಗಳ ಭೇದವಿಲ್ಲದೆ ಸಮಾಜದ ಸಮಸ್ತರ ಎಲುಬು ರಕ್ತಗಳಲ್ಲಿ ಸೇರಿಕೊಂಡಿವೆಯೆಂಬುದು ಸುಸ್ಪಷ್ಟ. ಮದುವೆ ಮುಂಜಿ ತಿಥಿ ಹಬ್ಬಗಳಲ್ಲಿ ಕೃಷಿ ಕೈಗಾರಿಕೆ ವ್ಯಾಪಾರಾದಿ ಉದ್ಯಮಗಳಲ್ಲಿ ಪ್ರಯಾಣಕಾಲದಲ್ಲಿ ಜ್ಯೋತಿಷ್ಯ ನೋಡಿಸದೆ, ಕಣಿ ಕೇಳದೆ, ಶಾಸ್ತ್ರಗಳನ್ನಾಚರಿಸದೆ, ದೇವರಿಂದ ಹೂ ಕೇಳದೆ ಶಕುನಗಳನ್ನು ನೋಡದೆ ಯಾರೂ ಮುಂದುವರಿಯುವಂತಿರಲಿಲ್ಲ. ರಾಜರು ಬೇಟೆಗೆ ಹೋಗುವಾಗ ಜ್ಯೋತಿಷ್ಯನನ್ನು ಬಳಿಯಿರಿಸಿಕೊಂಡು, ಪ್ರಾಣಿ ಸಿಕ್ಕೀತೆ ಇಲ್ಲವೆ ಎಂದು ವಿಚಾರಿಸುತ್ತಿದ್ದದ್ದುಂಟು. ಜೈತ್ರಯಾತ್ರೆಗೆ ಹೋಗುವಾಗಲಂತು ಭವಿಷ್ಯಜ್ಞರ ಸಲಹೆ ಅತ್ಯವಶ್ಯವಾಗಿತ್ತು. ನಿನ್ನೆ ಮೊನ್ನೆ ಸಹ ರಾಷ್ಟ್ರನಾಯಕರು ಬೆಂಗಳೂರಿಗೆ ಬಂದು. ತಾವು ಪ್ರಧಾನಿಯಾಗುವ ಬಗ್ಗೆ ಮಂತ್ರಿಯಾಗುವ ಬಗ್ಗೆ ಜ್ಯೋತಿಷಿಗಳಿಂದ ಆಶೀರ್ವಾದ ಪಡೆದು ಹೋದದ್ದುಂಟು. ಅಂದಮೇಲೆ ನಂಬಿಕೆ ಮಾನವ ಜೀವನದ ಸರ್ವಕ್ಷೇತ್ರಗಳಲ್ಲಿಯೂ ವ್ಯಾಪಿಸಿಕೊಂಡಿದೆ, ಅದೇ ಅವನ ಜೀವನವನ್ನು ರೂಪಿಸುತ್ತಿದೆ. ಅದೇ ಸಂಸ್ಕೃತಿಯ ತಿರುಳು ಎನ್ನಬೇಕಾಗುತ್ತದೆ. ಜಗತ್ತಿನ ಶ್ರೇಷ್ಠ ವಿಜ್ಞಾನಿಗಳು ಸಹ ವಿಸ್ಮಯಕಾರಿ ನಂಬಿಕೆಗಳಿಗೆ ಅತುಕೊಂಡಿರುತ್ತಾರೆ.

ಪ್ರಾಚೀನ ಕಾವ್ಯಗಳ ಕಡೆಗೆ ಗಮನ ಹರಿಸಿದಾಗ ಈ ನಂಬಿಕೆಗಳ ಪ್ರಾಬಲ್ಯ ಎಂಥದಿರಬಹುದೆಂದು ತಿಳಿಯುತ್ತದೆ. ವ್ಯಾಸ ಭಾಸ ಕಾಳಿದಾಸಾದಿ ಮಹಾಕವಿಗಳಂತು ಜ್ಯೋತಿಷ್ಯ ಸಾಮುದ್ರಿಕೆ ಶಕುನಗಳಲ್ಲಿ ಅಪಾರ ವಿಶ್ವಾಸ ತಾಳಿದ್ದುದಾಗಿ ವೇದ್ಯವಾಗುತ್ತದೆ. ಕಣ್ವಾಶ್ರಮ ಹತ್ತಿರವಾದಾಗ ದುಶ್ಯಂತನ ಬಲಭುಜ ಅದುರಿತಂತೆ. ಪವಾಡ ಕಣಿ ಶಕುನ ತಾಯಿತಿ ಭೂತ ಮೊದಲಾದುವುಗಳಲ್ಲಿ ಶೇಕ್ಸ್‌ಪಿಯರನಿಗೆ ಭಾರಿ ಗೌರವ. ಪವಿತ್ರ ಹಸ್ತಸಂಸ್ಪರ್ಶದಿಂದ ಬಂಜೆತನ ಹೋಗುವುದಾಗಿಯೂ[1] ಕಣಿ ಕೇಳುವುದರಿಂದ ಸುಜ್ಞಾನ ಹೊಂದುವುದಾಗಿಯೂ,[2] ಹೊಸ್ತಿಲಲ್ಲಿ ಎಡವಿದರೆ ಅಪಾಯ ಸಂಭವಿಸುವುದಾಗಿಯೂ[3] ಆತ ನಂಬಿಕೊಂಡಿದ್ದ. ದೋಹದ ಕ್ರಿಯೆಯಿಂದ ಮಾಧವಿ ಪುಷ್ಪಿತೆಯಾಗುವದೆಂದೂ ಮಾವು ಹಣ್ಣು ಬಿಡುವುದೆಂದೂ ನಮ್ಮವರು ಭಾವಿಸಿಕೊಂಡಿದ್ದುದನ್ನು ನಾವಿಲ್ಲಿ ನೆನೆಯಬಹುದು. ಈ ವಿಷಯದಲ್ಲಿ ಕನ್ನಡ ಕವಿಗಳೇನೂ ಅಪವಾದವಲ್ಲ. ಸ್ವಪ್ನನಿಮಿತ್ತಾದಿ ಪ್ರಸಂಗಗಳು ಕಾವ್ಯಕ್ರಿಯೆಗೆ ಅನಿವಾರ್ಯವೆನ್ನುವಂತೆ, ಆಯಾಯ ಕಾಲದ ಜನ

---

1 Forget not, in your speed, Antonius,
To touch Calphurnia ; for our elders say,
The barren, touched in this holy chase ;
Shake off their sterile curse
—Julius Cæsar I, ii, 6-9.

2 And there is in this business more than nature
Was ever conduct of : Some Oracle
Must rectify our knowledge
—The Tempest, V, i, 243-4

3 For many men that stumble at the threshold
Are well foretold that danger lucrks within.
—The third part of King Henry Sixth V, vii, 11-15.

ಜೀವನದ ಹಾಸುಹೊಕ್ಕೆನ್ನುವಂತೆ ಅತ್ಯಂತ ವ್ಯಾಪಕವಾಗಿ ಬರುತ್ತವೆ. ಆದಿತೀರ್ಥಂಕರನ ತಾಯಿ ಮರುದೇವಿ ಕಂಡ ಷೋಡಶ ಸ್ವಪ್ನಗಳು ತೀರ್ಥಂಕರ ಜನನದ ಮುನ್ಸೂಚನೆಗಳೆಂಬುದಾಗಿ ವರ್ಣನೆಗೊಂಡಿವೆ.[1] ಭರತ ಚಕ್ರವರ್ತಿ ತಾನು ಕಂಡ ಷೋಡಶ ಸ್ವಪ್ನಗಳನ್ನು ವೃಷಭನಾಥನಿಗೆ ವಿವರಿಸಿದಾಗ, ವೃಷಭನಾಥ ಅವುಗಳ ಫಲಾಫಲಗಳನ್ನು ವಿವರಿಸುತ್ತಾನೆ.[2] ವಿಶ್ವಾಮಿತ್ರಾಶ್ರಮಕ್ಕೆ ಬಂದ ಹರಿಶ್ಚಂದ್ರ ಕಂಡ ದುಸ್ವಪ್ನದ ಫಲ ಆ ಕೂಡಲೇ ನೆರವೇರುತ್ತದೆ.[3] ಹರಿಹರದೇವಿ ಕುಮಾರರಾಮನ ಜನನದ ಮುನ್ಸೂಚನೆಯಾಗಿ ಕನಸು ಕಾಣುತ್ತಾಳೆ.[4] ಸೀತಾಪರಿತ್ಯಾಗಪೂರ್ವದಲ್ಲಿ ಶ್ರೀರಾಮಚಂದ್ರ ಕಂಡ ಕನಸು ನಿಜವಾಗುತ್ತದೆ.[5] ಅಪರಾಜಿತ ಹುಟ್ಟುವ ಮುನ್ನ ಜಿನದತ್ತೆ ಕಂಡ ಸ್ವಪ್ನವೂ ಭವಿಷ್ಯಸೂಚಿಯಾಗಿದೆ.[6]

ಸ್ವಪ್ನಗಳಂತೆಯೇ ಶಕುನಗಳು ಮತ್ತು ಉತ್ಪಾತಗಳು ಭವಿಷ್ಯಘಟನೆಗಳಿಗೆತ್ತಿದ ಕೈಮರಗಳಂತಿವೆಯೆಂಬುದು ಕಾವ್ಯಗಳಲ್ಲಿ ಹೆಜ್ಜೆ ಹೆಜ್ಜೆಗೂ ಗೋಚರವಾಗುತ್ತದೆ. ಭರತ ಚಕ್ರವರ್ತಿ ಚಕ್ರರತ್ನವನ್ನು ಮುಂದಿಟ್ಟುಕೊಂಡು ದಿಗ್ವಿಜಯಕ್ಕೆ ಹೊರಟುನಿಂತ ಸಂದರ್ಭದಲ್ಲಿ ದಕ್ಷಿಣ ಭುಜ ಮತ್ತು ದಕ್ಷಿಣಾಕ್ಷಿ ಸ್ಪಂದಿಸಿದುವಂತೆ.[7] ಕೌರವ ಜನನ ಕಾಲದಲ್ಲಿ

ಪ್ರತಿಮೆಗಳಟ್ಟುವು ಮೊಟಗಿದು
ದತಿರಭಸದೆ ಧಾತ್ರಿ ದೆಸೆಗಳುರಿದುವು ಭೂತ
ಪ್ರತತಿಗಳಾಡಿದುವೊಳಱಿಂದು
ವತಿ ರವ್ಯಸ್ಥಾನದೊಳ್ ಶಿವಾನಿವಹಂಗಳ್ —ಪಂಪಭಾರತ, ೧-೧೩೨

ದುರ್ಯೋಧನನೇ ತಮ್ಮ ಕುಲಕ್ಕೆ ಕೇತುವೆಂದು ಆ ಉತ್ಪಾತಗಳ ಆಧಾರದ ಮೇಲೆ ವಿದುರ ಮುಂದನ್ನು ನುಡಿಯುತ್ತಾನೆ. ಅರ್ಜುನ ದ್ವಾರಾವತಿಗೆ ಬಂದಾಗ ಶ್ರೀಕೃಷ್ಣನ ಬಲದೋಳು ಬಲಗಣ್ಣುಗಳದುರಿದುವಂತೆ ಶುಭಸಂಕೇತವಾಗಿ.[8] ದ್ರೌಪದಿಯ ಮದುವೆಗೆಂದು ಪಾಂಡವರು ಪಾಂಚಾಲ ನಗರದತ್ತ

ಬರುತ ಕಂಡರು ಕಳಶ ಕನ್ನಡಿ
ವರಯುವತಿ ಖಗಮೃಗದ ಬಲು ಸು
ಸ್ವರ ಸುಗಂಧಾನಿಲ ಸುಸಂಗತ ಶಕುನ ಸೂಚಕವ—ಆದಿಪರ್ವ, ೧೧-೨೨

---

[1] ಆದಿಪುರಾಣ, ಸಪ್ತಮಾಶ್ವಾಸಂ, ಪು. ೧೬೬-೧೬೮.
[2] ಅದೇ, ಪಂಚದಶಾಶ್ವಾಸಂ, ಪು. ೪೦೮-೪೦೩.
[3] ಹರಿಶ್ಚಂದ್ರಕಾವ್ಯಂ, ಷಷ್ಠಸ್ಥಲಂ, ಪು. ೧೦೨.
[4] ರಾಮನಾಥ ಚರಿತೆ, ಆನೆಯ ಸಂಧಿ, ಪು. ೧೩೨, ೧೩೪.
[5] ಜೈಮಿನಿಭಾರತ, ಸಂಧಿ ೧೮, ಪದ್ಯ ೩.
[6] ನೇಮಿನಾಥ ಪುರಾಣ, ದ್ವಿತೀಯಾಶ್ವಾಸಂ, ಪದ್ಯ ೧೮.
[7] ಆದಿಪುರಾಣ, ಏಕಾದಶಾಶ್ವಾಸಂ, ಪು. ೨೭೩.
[8] ವಿಕ್ರಮಾರ್ಜುನವಿಜಯಂ, ೪-೧೩೩.

ಎಂದು ಕುಮಾರವ್ಯಾಸ ವರ್ಣಿಸುತ್ತಾನೆ. ಅಂತೆಯೇ ಶಿಶುಪಾಲವಧೆಯ ಸಂದರ್ಭದಲ್ಲಿ ಅನೇಕ ಶಕುನಗಳು ಕಾಣಿಸಿಕೊಳ್ಳುತ್ತವೆ.[1] ಕಪಟದ್ಯೂತದ ಮೂಲಕ ಪಾಂಡವರನ್ನು ಗೆದ್ದುಕೊಳ್ಳುವ ದುರಾಲೋಚನೆಯಿಂದ ದುರ್ಯೋಧನ ಅವರನ್ನು ಹಸ್ತಿನಾವತಿಗೆ ಕರೆಸಿಕೊಳ್ಳುತ್ತಾನಷ್ಟೆ. ಅವರು ಇಂದ್ರಪ್ರಸ್ಥದಿಂದ ಹೊರಟಾಗ ಹಲವು ದುರ್ನಿಮಿತ್ತಗಳು ತೋರುತ್ತವೆ.[2] ದ್ಯೂತ ಪ್ರಾರಂಭವಾದಾಗ ದ್ರೌಪದಿಯ ದಕ್ಷಿಣಾಕ್ಷಿ ಕೆತ್ತಿತಂತೆ, ಭೀಮಪಾರ್ಥರ ಎಡಭುಜ ಮತ್ತು ಅಕ್ಷಿಗಳು ಸ್ಪಂದನಗೊಂಡುವಂತೆ. ಕುಮಾರವ್ಯಾಸ ಭಾರತದಲ್ಲಿ ಇಂಥವು ದಂಡೆದಂಡೆಯಾಗಿ ಸಿಗುತ್ತವೆ. ಕುಮಾರರಾಮನಿಗೆ ಯುವರಾಜ್ಯಾಭಿಷೇಕವಾದಾಗ ಶತ್ರುರಾಜರ ನಗರಗಳಲ್ಲಿ,[3] ನೇಮಿಖಾನ ಕುಮ್ಮಟದುರ್ಗಕ್ಕೆ ದಂಡೆತ್ತಿ ಬಂದಾಗ,[4] ಅನೇಕ ಉತ್ಪಾತಗಳು ಸಂಭವಿಸಿದುವು. ಅಂಗೈ ತಿಂದುದೆನ್ನ, ಕಂಗಳು ಕೆತ್ತಿಹುವಯ್ಯಾ; ಬಂದಹರಯ್ಯಾ ಪುರಾತನರೆನ್ನ ಮನೆಗೆ[5] ಎಂದು ಬಸವೇಶ್ವರರು ಹೇಳುತ್ತಾರೆ. ಅಂಗೈ ಕಡಿದರೆ ಶುಭವೆಂದು, ಹಣ ಸಿಗುತ್ತದೆಂದು ಈಗಲೂ ಜನ ನಂಬಿದ್ದಾರೆ. ಶ್ರೀರಾಮನಾಜ್ಞೆಯಂತೆ ಲಕ್ಷ್ಮಣ ಸೀತೆಯನ್ನು ಕಾಡಲ್ಲಿ ಬಿಡಲು ಕರೆದೊಯ್ಯುವಾಗ,[6] ಚಂದ್ರಹಾಸನನ್ನು ಹಿಂದಕ್ಕೆ ಕಳಿಸಿ ಮದನ ತಾನೇ ಚಂಡಿಕಾಲಯಕ್ಕೆ ಹೋಗುವಾಗ[7] ಅನೇಕ ಉತ್ಪಾತಗಳಾಗುತ್ತವೆ. ರಾಜ ಚಂದ್ರಾದಿತ್ಯ ಆದಯ್ಯನ ಮೇಲೆ ಯುದ್ಧಕ್ಕೆ ಹೊರಟಾಗ ಅನೇಕ ಅಪಶಕುನಗಳು ತಲೆದೋರುತ್ತವೆ.[8] ನರಕಾಸುರ ವಧೆಯ ಸಂದರ್ಭದಲ್ಲಿ ಅವನಿಗಾದ ಅಪಶಕುನಗಳನ್ನು ಜಗನ್ನಾಥ ವಿಜಯದಲ್ಲಿ ನೋಡಬಹುದು.[9]

ಇಂತೆಯೇ ಸಾಹಿತ್ಯ ಕೃತಿಗಳು ನಂಬಿಕೆಗಳ ಅಕ್ಷಯ ನಿಧಿಯಾಗಿವೆ. ಭಗವದ್ಗೀತೆ ರಾಮಾಯಣಾದಿ ಪವಿತ್ರ ಗ್ರಂಥಗಳನ್ನು ಪಾರಾಯಣ ಮಾಡಿದವರಿಗೆ ಅಣಿಮಾದಿ ಅಷ್ಟ ಸಿದ್ಧಿಗಳು ಲಭಿಸುವಂತೆ, ಭಾರತವನ್ನೋದಿದವರಿಗೂ ಅವರ್ಣನೀಯ ಪುಣ್ಯಗಳು ಲಭಿಸುತ್ತವೆಂದು ಕುಮಾರವ್ಯಾಸ ಘೋಷಿಸುತ್ತಾನೆ:

ವೇದ ಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನ ಫಲ ಕೃ

1 ಗದುಗಿನ ಭಾರತ, ಸಭಾಪರ್ವ, ಸಂಧಿ ೧೦, ಪದ್ಯ ೭೦-೭೨.
2 ಅದೇ, ಸಭಾಪರ್ವ, ೧೩-೨.
3 ರಾಮನಾಥ ಚರಿತೆ, ೮ : ೧೫೨-೧೫೪.
4 ಅದೇ, ೪೦-೪, ೯, ೧೦.
5 ಬಸವಣ್ಣನವರ ಷಟ್‌ಸ್ಥಲದ ವಚನಗಳು, ಸಂ : ಶಿ. ಬಸವನಾಳರು, ವಚನ ೩೭೧.
6 ಜೈಮಿನಿ ಭಾರತ, ೧೯-೩.
7 ಅದೇ, ೩೧-೪೬.
8 ಸೋಮನಾಥ ಚಾರಿತ್ರ, ೪-೧೦೧.
9 ೧೨-೩, ೪.

ಜ್ಞಾದಿ ತಪಸಿನ ಫಲವು ಜ್ಯೋತಿಷ್ಟೋಮ ಯಾಗ ಫಲ
ಮೇದಿನಿಯ ನೊಲಿದಿತ್ತ ಫಲವ
ಸ್ತಾದಿ ಕನ್ಯಾದಾನ ಫಲವಹು
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ —ಆದಿಪರ್ವ, ೩-೩೦

ವಿದುರ ನೀತಿಯಲ್ಲಿ ಇಂಥವು ರಾಶಿರಾಶಿಯಾಗಿ ಬರುತ್ತವೆ. ಅವುಗಳಲ್ಲೊಂದನ್ನು ಮಾತ್ರ ಇಲ್ಲಿ ಉದ್ಧರಿಸಿದೆ.

ನಾಗವಲ್ಲಿಯ ಹಿಂದು ಮುಂದನು
ನೀಗಿ ಕಳೆಯದೆ ಚೂರ್ಣಪರ್ಣ
ತ್ಯಾಗವಿಲ್ಲದೆ ದಂತಧಾವನ ಪರ್ಣವನು ಸವಿದು
ಭೋಗಿಸುವಡಮರೇಂದ್ರನಾಗಲಿ
ನಾಗಭೂಷಣ ನಾದೊಡವನನು
ನೀಗಿ ಕಳೆವಳು ಭಾಗ್ಯವಧು ಭೂಪಾಲ ಕೇಳೆಂದ (ಉದ್ಯೋಗಪರ್ವ ೩-೫೯)

ಚಂದ್ರಹಾಸನಿಗೆ ವಿಷವನ್ನೂಡಿಸಿ ಕೊಲಿಸು ಎಂದು ಕಾಗದ ಬರೆದು ಕಳಿಸಿದನಂತರ, ತನ್ನಾಜ್ಞೆಯನ್ನು ಮಗ ನೆರವೇರಿಸಿದನೋ ಇಲ್ಲವೋ ಎಂಬ ಕಾತರದಿಂದ ದುಷ್ಟಬುದ್ಧಿ ಕುಂತಳಪುರಕ್ಕೆ ಬರುತ್ತಿದ್ದಾಗ, ಮಾರ್ಗದಲ್ಲಿ ಸರ್ಪವೊಂದು ಇದಿರಾಗಿ "ಈ ತನಕ ನಿನ್ನ ಮನೆಯ ಒಡವೆಯನ್ನು ಕಾದಿದ್ದೆ, ಅದು ನಿನ್ನ ಮಗನಿಂದ ಹಾಳಾಯಿತು" ಎಂದು ಹೇಳಿತಂತೆ. ಸರ್ಪ ನಿಧಿಯನ್ನು ಕಾಯುತ್ತದೆಂಬ ನಂಬಿಕೆ ಬಹು ಪ್ರಾಚೀನವಾದುದು. ಮಕ್ಕಳು ಕಣ್ಣು ತೆರೆಯದಿದ್ದಾಗ, ಲಿಂಗವನ್ನು ತೋರಿ, ಭಸಿತವನ್ನಿಟ್ಟರೆ ಕಣ್ಣು ಬಿಡುತ್ತವೆಂಬ ಭಾವನೆ ವೀರಶೈವ ಪುರಾಣಗಳಲ್ಲಿ ವ್ಯಾಪಿಸಿಕೊಂಡಿದೆ. ಸಾಮಾಜಿಕ ಜೀವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಸರ್ವಜ್ಞ ಅನೇಕ ನಂಬಿಕೆಗಳನ್ನು ಪಟ್ಟಿ ಮಾಡುತ್ತಾನೆ. ಅವುಗಳಲ್ಲಿ ಕೆಲವನ್ನು ಮಾತ್ರ ದಿಗ್ದರ್ಶನಾರ್ಥವಾಗಿ ಉದಾಹರಿಸಿದೆ:

ಏನ ಮನ್ನಿಸದಿರಲು ಸೀನ ಮನ್ನಿಸಬೇಕು
ಸೀನ ಮನ್ನಿಸದೆ ಹೋದರೆ ಹೋದಲ್ಲಿ
ಹಾನಿಯೇ ಬಕ್ಕು ಸರ್ವಜ್ಞ

ತೆಂಕಲಿಗೆ ಮುಗಿಲಡರೆ ಶಂಕರನ ದೆಸೆಮಿಂಚೆ
ಪಂಕಜಾರಾತಿ ಗುಡಿಕಟ್ಟೆ ಮಳೆಯು ತಾ
ಭೋಂಕನೇ ಬಕ್ಕು ಸರ್ವಜ್ಞ

ಉಂಡು ಕೆಂಡವ ಕಾಸಿ ಉಂಡು ಶತಪಥ ನಡೆದು
ಉಂಡೆಡವ ಮಗ್ಗುಲಲಿ ಮಲಗೆ ವೈದ್ಯನಾ
ಬಂಡಾಟವಿಲ್ಲ ಸರ್ವಜ್ಞ

ವಿಜ್ಞಾನ, ತಾಂತ್ರಿಕವಿಜ್ಞಾನ ಮತ್ತು ಕೈಗಾರಿಕೆಗಳು ಮಾನವ ಸಂಸ್ಕೃತಿಯನ್ನು ರೂಢಮೂಲವಾಗಿ ಮಾರ್ಪಾಡು ಮಾಡುತ್ತವೆಂದು ಹೇಳುವುದುಂಟು. ಆದರೆ ಜಗತ್ತಿನ ಹಾಗೂ ಹಲವು ಸಮಾಜಗಳ ಇತಿಹಾಸಗಳನ್ನು ನೋಡಿದಾಗ ನಂಬಿಕೆಗಳು ಸಹ ಮಾನ

ವನಉದ್ಧಾರಕ್ಕೆ ಸಹಾಯಕವಾಗಿವೆಯೆಂದು ಸ್ಪಷ್ಟವಾಗುತ್ತದೆ. ಗ್ಲಾಸೆಸ್ಟರ್‌ಷೈರಿನಲ್ಲಿ ಕೆಲಸ ಮಾಡುತ್ತಿದ್ದ ಎಡ್ವರ್ಡ್ ಜೆನ್ನರ್ ಸಿಡುಬುರೋಗಕ್ಕೆ ಔಷಧಿಯನ್ನು ಕಂಡುಹಿಡಿದನಷ್ಟೆ. ಅವನಿಗೆ ಅದರ ಸುಳುಹು ದೊರೆತದ್ದು ಜನತೆಯಲ್ಲಿ ಚಾಲ್ತಿಯಲ್ಲಿದ್ದ ನಂಬಿಕೆಯಿಂದ. ಹಸುವಿನ ಕೆಚ್ಚಲಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ದನದ ಸಿಡುಬು ಹಾಲು ಕರೆಯುವ ಹೆಣ್ಣುಗಳಿಗೆ ಅಂಟುತ್ತಿತ್ತು. ಅಂಥವರ ಬಳಿ ಮನುಷ್ಯರ ಸಿಡುಬು ಸುಳಿಯುತ್ತಿರಲಿಲ್ಲ. ಈ ನಂಬಿಕೆಯ ಬೆನ್ನು ಹತ್ತಿ ಜೆನ್ನರ್ ಇಂದಿಗೂ ಸಿದ್ಧೌಷಧಿಯಾಗಿಯೇ ಉಳಿದಿರುವ ಲಸಿಕೆಯನ್ನು ತಯಾರಿಸಿದ. ಮೆಣಸಿನಪುಡಿಯನ್ನು ತುಳಸಿ ರಸದಲ್ಲಿ ಕಲಸಿ ಕುಡಿದರೆ ಮಲೇರಿಯಾ ವಾಸಿಯಾಗುತ್ತದೆನ್ನುವುದು ಸುಳ್ಳಲ್ಲ. ಎದೆ ಬೇನೆಗೆ ಮಾವಿನ ಹಣ್ಣು ಒಳ್ಳೆಯದೆಂದು ಆಧುನಿಕ ವೈದ್ಯರು ಹೇಳುತ್ತಿದ್ದಾರೆ. ಆದರೆ ಈ ಸಂಗತಿ ಜಾನಪದರಿಗೆ ಬಹು ಹಿಂದೆಯೇ ಗೊತ್ತಿತ್ತು. ನೈಸರ್ಗಿಕ ಕರಣತತ್ವವನ್ನು ಸ್ವತಂತ್ರವಾಗಿ ಕಂಡುಹಿಡಿದ ಆಲ್‌ಫ್ರೆಡ್ ರಸೆಲ್ ವಾಲೇಸ್ (Alfred Russel Wallace) ಎಂಬ ವಿಜ್ಞಾನಿ ಪವಾಡಗಳನ್ನು ನಂಬುತ್ತಿದ್ದುದಲ್ಲದೆ, ವಶೀಕರಣ ವಿದ್ಯೆಯನ್ನು ಕುರಿತು ಒಂದು ಗ್ರಂಥ ಸಹ ಬರೆದಿದ್ದಾನೆ. ಆಧುನಿಕ ವಿಜ್ಞಾನಿಗಳೇ ನಂಬಿಕೆಗಳಲ್ಲಿ ಆಸಕ್ತಿ ವಹಿಸುವಾಗ, ನಂಬಿಕೆಗಳಿಂದ ವೈಜ್ಞಾನಿಕ ಸಂಶೋಧನೆಗಳಿಗೆ ಸ್ಫೂರ್ತಿ ಪಡೆಯುತ್ತಿರುವಾಗ, ಪ್ರಾಚೀನ ಸಾಹಿತಿಗಳು ಅವುಗಳ ಬಗೆಗೆ ಅತಿ ವ್ಯಾಮೋಹವನ್ನು ಪ್ರಕಟಪಡಿಸಿರುವುದು ಆಶ್ಚರ್ಯವಲ್ಲ. ನಮ್ಮ ಋಷಿಗಳು ವಿವರಿಸುವ ಪ್ರಣವಮಂತ್ರದ ಮಹಿಮೆಯಾಗಲಿ, ಮುಂದಿನ ಪೀಳಿಗೆಗಳಿಗೆ ದಯಪಾಲಿಸಿರುವ ಲಾಂಛನ ಸಂಕೇತಗಳಾಗಲಿ ವಿಶ್ವಾಸ ಮೂಲವಾದುವೆಂದು ತಿಳಿಯಬೇಕಾಗಿದೆ. ಆದ್ದರಿಂದ ವಿಚಾರ ವಾದಿಗಳೆಂದು ಹೇಳಿಕೊಳ್ಳುವಂಥ, ಮೊದಲಾಗಿ ನಂಬಿಕೆಗಳ ಹಿಡಿತದಿಂದ ತಪ್ಪಿಸಿಕೊಳ್ಳುವಂಥ ಮಹನೀಯರು ಜಗತ್ತಿನಲ್ಲಿ ಇಲ್ಲವೆಂದೇ ಹೇಳಬೇಕಾಗಿದೆ. "ಸಮಾಜದ ಎಲ್ಲ ಸ್ತರಗಳಲ್ಲಿಯೂ ಮೂಢನಂಬಿಕೆ ಅಸ್ತಿತ್ವದಲ್ಲಿದೆ ಮತ್ತು ಸಾಂಪ್ರದಾಯಿಕ ಶಿಕ್ಷಣವನ್ನು ಪಡೆದಿರುವ ಜನ ಅದನ್ನು ಪ್ರತಿಭಟಿಸುತ್ತಾರೆ" ಎಂದು ಅಮೆರಿಕೆಯ ಜಾನಪದತಜ್ಞ ವೇಲ್ಯಾಂಡ್ ಡಿ. ಹ್ಯಾಂಡ್ ನುಡಿದಿದ್ದಾರೆ.[1] ಆದರೆ ಸಾಂಪ್ರದಾಯಿಕ ಶಿಕ್ಷಣ ಪಡೆದ ಜನ ಸಹ ಅವುಗಳಿಂದ ಮುಕ್ತರಾಗಿಲ್ಲವೆಂದೇ ಹೇಳಬೇಕಾಗುತ್ತದೆ. "ಜಗತ್ತಿನ ಜನರನ್ನು ನಂಬಿಕೆಗಾರರು ಮತ್ತು ವಿವೇಕಿಗಳು ಎಂದು ವಿಭಜಿಸಿಮಾಡಲಾಗದು; ಕೆಲವರು ಅರೆ ನಂಬಿಕೆಗಾರರು, ಮತ್ತೆ ಕೆಲವರು ಪೂರ್ಣ ನಂಬಿಕೆಗಾರರು ಎಂದು ಪಟ್ಟಿಮಾಡಬೇಕಾಗುತ್ತದೆ" ಎಂದು ಫಿಲಿಪ್ ಎಫ್. ವಾಟರ್‌ಮನ್ ಹೇಳುವ ಮಾತೇ[2] ಸರಿಯೆಂದು ತೋರುತ್ತದೆ.

---

1 Superstition exists in all strata of society and is encountered among people of all degrees of formal education—Wayland D. Hand in his paper 'The fear of the Gods Superstition and popular Belief.' Published in *American Folklore*, Ed. by Tristram Coffin, III, p. 245

2 One cannot divide the peoples of the world into the superstitious and the enlightened, but only into those, by and large, more or less superstitious—*The Story of Superstition*, by Phillip F. Waterman, p. 33

ಹೀಗೆ ಜಗತ್ತನ್ನಾಳುವ ಸಮಸ್ತಜೀವನಾತ್ಮಕವಾದ ನಂಬಿಕೆಗಳೇ ಆಚರಣೆಗಳಾಗಿ ರೂಢಿ ವಾಡಿಕೆ ಸಂಪ್ರದಾಯಗಳ ರೂಪದಲ್ಲಿ ಉಳಿಯುತ್ತವೆ. ಅವು ಕೊನೆಗೆ ಮಂತ್ರ ಮಾಯ ಮಾಟಗಳ ಆಕಾರವನ್ನು ಪಡೆಯುವುದಲ್ಲದೆ, ಮತೀಯ ಹಾಗೂ ಸಾಮಾಜಿಕ ಪದ್ಧತಿಗಳಾಗಿ ರೂಹುಸೋರುತ್ತವೆ. ನಾನಾರೀತಿಯ ಪೂಜಾವಿಧಾನಗಳು ಪ್ರಾಣಿ ಹಾಗೂ ನರಬಲಿಗಳು ವಿವಾಹ ಸಮಯದ ಶಾಸ್ತ್ರಗಳು ವಿಧಿನಿಷೇಧಗಳು ಎಲ್ಲವೂ ನಂಬಿಕೆಗಳ ಪ್ರಾಯೋಗಿಕ ರೂಪಗಳು. ಶಿಲ್ಪ ವಾಸ್ತುಶಿಲ್ಪ ಚಿತ್ರಾದಿ ಕಲೆಗಳ ಹಿನ್ನೆಲೆಯಲ್ಲಿ ನಂಬಿಕೆಗಳ ಸ್ಫೂರ್ತಿ ಇದೆಯೆನ್ನುವುದನ್ನು ಮರೆಯಲಾಗದು.

ವಿರಾಟ್‌ಶಕ್ತಿಸ್ವರೂಪದ ವಿರಾಡ್ರೂಪಗಳನ್ನು ಧರಿಸುವ ನಂಬಿಕೆಗಳು ಹುಟ್ಟುವ ಬಗೆ ಹೇಗೆ? ಇವು ಮೊದಮೊದಲು ಸಾಮೂಹಿಕವಾಗಿಯೇ ಹುಟ್ಟಿರಬೇಕೆಂದು ತೋರುತ್ತದೆ. ಆದಿಮಾನವ ನೈಸರ್ಗಿಕ ಚೇಷ್ಟೆಗಳ ಬಗೆಗೆ ತಳೆದ ಮನೋಭಾವವೇ ನಂಬಿಕೆಗಳ ಉಗಮಕ್ಕೆ ಕಾರಣವಾಗಿರಬೇಕು. ಮಿಂಚು ಗುಡುಗು ಸಿಡಿಲುಗಳ ಆರ್ಭಟೆ, ಕ್ಷಾಮ ಡಾಮರಗಳ ಆಟೋಪ, ಭೂಕಂಪ ಪ್ರವಾಹ ಚಂಡಮಾರುತಗಳ ಹಾವಳಿ, ಸೂರ್ಯ ಚಂದ್ರ ಗ್ರಹಣಗಳು, ಜೀವಜಂತುಗಳ ಮರಣ ಇವೇ ಮೊದಲಾದ ನೈಸರ್ಗಿಕ ವ್ಯಾಪಾರಗಳು ಅವನಲ್ಲಿ ಭಯ ಹುಟ್ಟಿಸಿರಬೇಕು. ಕಾಡಿನ ಹುಲಿ ಗರ್ಜಿಸಿದಾಗ ಯಾವುದೋ ಭೀಕರ ಶಕ್ತಿ ಅದರೊಳಗೆ ಕುಳಿತುಕೊಂಡು ಭಯಂಕರ ಶಬ್ದ ಮಾಡುತ್ತಿರಬೇಕೆಂದು ಅವನಿಗನಿಸಿರಬೇಕು. ಬಂಡೆ ಬಂಡೆಗೆ ತಗುಲಿದಾಗ ಹುಟ್ಟುವ ಬೆಂಕಿಗೆ, ಮರ ಮುರಿದಾಗ ಹೊರ ಹೊಮ್ಮುವ ಸದ್ದಿಗೆ, ಬೆಟ್ಟದೆತ್ತರಕ್ಕೇರುವ ಸಮುದ್ರದ ಅಲೆಗಳಿಗೆ, ಇತರ ಪ್ರಾಕೃತಿಕ ಕ್ರಿಯೆಗಳಿಗೆ ಯಾವುದೋ ಅದೃಶ್ಯ ಶಕ್ತಿ ಕಾರಣವಿರಬೇಕೆಂದು ಮಾನವ ಊಹಿಸಿಕೊಂಡಿರಬೇಕು. ಜನನ ಮರಣಗಳು ಸಹ ಯಾವುದೋ ನಿಗೂಢ ಶಕ್ತಿಯ ಕೈವಾಡವೆಂದು ಅವನು ಯೋಚಿಸಿಕೊಂಡಿರಬೇಕು. ಇಡೀ ಸಮಾಜವೇ ಇಂಥ ಅನುಭವಗಳನ್ನು ಗ್ರಹಿಸಿರಬೇಕು. ಆಗ ಎಲ್ಲರೂ ಒಂದೆಡೆ ಕಲೆತು ಸಮಾಲೋಚನೆ ನಡೆಸಿರಬೇಕು. ಆ ಸಂದರ್ಭದಲ್ಲಿ ಒಬ್ಬೊಬ್ಬರೂ ತಂತಮ್ಮ ಊಹೆಗೆ ನಿಲುಕಿದ ತರ್ಕಕಲ್ಪನೆಗಳನ್ನೊಡ್ಡಿ, ಮಾನವನ ಕ್ಷೇಮಕ್ಕೆ ಸಾಧನೆಗೆ ಬೇಕಾದ ವಿಧಾನೋಪಾಯಗಳನ್ನು ಸೂಚಿಸಿರಬೇಕು. ಬರಬರುತ್ತ ಆ ಸಮಾಜದ ವ್ಯಕ್ತಿಯೊಬ್ಬ ಇತರರಿಗಿಂತ ವಿವೇಕಶಾಲಿಯೆಂದು ತೋರಿದಾಗ, ಅವರು ಆ ಒಬ್ಬನ ಅಭಿಪ್ರಾಯಗಳಿಗೆ ಪುರಸ್ಕಾರ ನೀಡುವಂತಾಗಿರಬೇಕು. ಆಗ ಅವನು ನಂಬಿದ್ದೆಲ್ಲ ಸಮಾಜದ ನಂಬಿಕೆಯಾಗಿರಬೇಕು. ನಿಸರ್ಗದ ನಿಯಂತ್ರಣದಿಂದ ತಮ್ಮ ರಕ್ಷಣೆ ಸಾಧ್ಯವೆಂದು ಕಾಲಕ್ರಮೇಣ ಅವರಿಗೆ ಅರಿವಾಗಿರಬೇಕು. ಇದರಿಂದಾಗಿ ಮಾನವನಿಗೂ ನಿಸರ್ಗಕ್ಕೂ ಸತತವಾದ ಹೋರಾಟ ಪ್ರಾರಂಭವಾಯಿತು. ತನಗೆ ಆಹಾರಸಾಮಗ್ರಿಗಳು ಯಥೇಚ್ಛವಾಗಿ ದೊರೆತಾಗ, ಯಾವ ಅನಾಹುತಗಳೂ ಸಂಭವಿಸದಿದ್ದಾಗ ಪ್ರಕೃತಿ ರಮಣೀಯವಾಗಿ ಕ್ಷೇಮಂಕರಿಯಾಗಿ ಕಂಡಿರಬೇಕು; ಕಷ್ಟಕ್ಲೇಶಗಳ ಪರಂಪರೆ ಎದುರುಗೊಂಡಾಗ ಅವಳು ಮಹಾಕಾಳಿಯಾಗಿ ತೋರಿರಬೇಕು. ಒಮ್ಮೆ ಅನುನಯ ವಿನಯಗಳಿಂದ, ಮತ್ತೊಮ್ಮೆ ಶೌರ್ಯಸಾಹಸಗಳಿಂದ ನಿಸರ್ಗವನ್ನೊಲಿಸಿ

ಕೊಳ್ಳಲು, ಇಲ್ಲವೆ ಜಯಿಸಲು ಅವನು ಪ್ರಯತ್ನಿಸಿದ್ದುಂಟು. ಸೂರ್ಯಚಂದ್ರರನ್ನು ರಾಹುಕೇತುಗಳು ನುಂಗುವುದರಿಂದ ಲೋಕಕ್ಕೆ ಹಾನಿಯಾಗುತ್ತದೆ. ಮನುಷ್ಯನಿಗೆ ಬಾಧೆ ಯಾಗುತ್ತದೆಂದು ತಿಳಿದು, ಆ ಸೂರ್ಯಚಂದ್ರರ ಕ್ಷೇಮಕ್ಕಾಗಿ ಮಂತ್ರತಂತ್ರಗಳನ್ನು ಆಚರಿಸಲನುವಾದ. ಗ್ರಹಣಗಳಿಂದ ಅಪಾಯಾನುಭವವೂ ಅವನಿಗೆ ಆಗಿದ್ದಿರಬೇಕು. ಬರಿಗಣ್ಣಿಂದ ಸೂರ್ಯಗ್ರಹಣವನ್ನು ನೋಡಿದರೆ ಹಾನಿ ಸಂಭವಿಸುತ್ತದೆಂದು ಇಂದಿನ ವಿಜ್ಞಾನಿಗಳೂ ಹೇಳುವುದುಂಟಷ್ಟೆ. ಹೆರಿಗೆಯ ಕಾಲದಲ್ಲಿ ಹೆಂಗಸು ಪಡುವ ಪಾಡು ಗಳನ್ನು ಕುಂದಿಸುವ ಸಲುವಾಗಿ ಕೆಲವು ಆಚರಣೆಗಳನ್ನು ಅನುಸರಿಸುತ್ತಿರಬೇಕು. ಬಸಿರಿ ಗಂಡನನ್ನು ಮಲಗಿಸಿ, ತುಳಿಸಿಕೊಂಡು ಅವನನ್ನು ದಾಟಿದ್ದಾದರೆ ಪ್ರಸವವೇದನೆ ಕಡಿಮೆ ಯಾಗುತ್ತದಂತೆ. ಒಂಬತ್ತು ಕೋಳಿಮೊಟ್ಟೆ ಮತ್ತು ಒಂಬತ್ತು ಈರುಳ್ಳಿಗಳನ್ನು ಕುದಿಸಿ, ಅದರ ರಸವನ್ನು ಕುಡಿದದ್ದಾದರೆ ಸುಲಭವಾಗಿ ಹೆರಿಗೆಯಾಗುತ್ತದಂತೆ.[1]

ಮನುಷ್ಯನನ್ನು ಕಾಡುತ್ತಿದ್ದ ಮತ್ತು ಇಂದಿಗೂ ಕಾಡುವ ಸಂಗತಿಗಳೆಂದರೆ ರೋಗ ಗಳು. ದೆವ್ವ ಭೂತ ಮೊದಲಾದ ಅಗೋಚರಶಕ್ತಿಗಳ ಕಾಟದಿಂದಾಗಿ ರೋಗಗಳು ಬರುತ್ತವೆಂದು ಪ್ರಾಚೀನರ ನಂಬಿಕೆಯಾಗಿತ್ತು. ಅವು ಬಂದಾಗ ಅವನು ನಿಸ್ಸಹಾಯಕ ಸ್ಥಿತಿಯಲ್ಲಿದ್ದಿರಬೇಕು. ಮೂಕಪ್ರಾಣಿಗಳಿಗೆ ಬಾಯಿಲೆಯಾಗುತ್ತದೆಂದಿಟ್ಟುಕೊಳ್ಳೋಣ. ಅವಕ್ಕೆ ಮಾತು ಬರುವುದಿಲ್ಲ. ಅದ್ದರಿಂದ ಅವುಗಳಿಗೆ ನಿಸರ್ಗವೇ ಸಹಾಯವನ್ನು ದೊರಕಿಸಿಕೊಡಬೇಕು. ಒಂದಾನೊಂದು ಕಾಲದಲ್ಲಿ ಮನುಷ್ಯ ಇದೇರೀತಿ ಮೂಕ ಸಂಕಟವನ್ನನುಭವಿಸುತ್ತಿದ್ದಿರಬೇಕು. ಬಾಯಿಲೆಯ ಕಾರಣ ತಿಳಿಯದಿದ್ದಾಗ ಭೂತ ಭೇತಾಳ ಮಾರಿಮಸಣಿಯರನ್ನು ಕಲ್ಪಿಸಿಕೊಂಡು ಬಲಿಪೂಜೆಗಳನ್ನು ಸಲ್ಲಿಸುತ್ತಿದ್ದಿರ ಬೇಕು; ಮಂತ್ರಗಾರರ ಸಹಾಯವನ್ನು ಪಡೆಯುತ್ತಿದ್ದಿರಬೇಕು. ಗ್ರೀಸ್‌ದೇಶದಲ್ಲಿ ಕಣಿ ಕೇಳುತ್ತಿದ್ದರೆ ಭಾರತದಲ್ಲಿ ದೇವರಿಂದ ಹೂ ಕೇಳುತ್ತಿದ್ದುದುಂಟು. ಬರುಬರುತ್ತ ಅಂತ ರಂಗದ ಪ್ರೇರಣೆ, ಊಹೆ, ವೀಕ್ಷಣೆ, ಆಕಸ್ಮಿಕ ಘಟನೆ ಮತ್ತು ಪ್ರಯೋಗಗಳ ಮೂಲಕ ಗಿಡಮೂಲಿಕೆಗಳನ್ನು ಬಳಸಲಾಯಿತು. ರೋಗಿಗೆ ಗೊತ್ತಾಗದಂತೆ ಎರಡು ಮೂರು ಬಸವನ ಹುಳು (Snail)ಗಳನ್ನು ಬಾಣ್ಲಿ ನೀರಿನಲ್ಲಿ ಬೇಯಿಸಿ- ಅದರ ರಸ ಕೊಟ್ಟರೆ ಕೆಮ್ಮು ಗುಣವಾಗುತ್ತದೆಂದು ಪ್ರಾಚೀನ ಆಂಗ್ಲರು ನಂಬಿಕೊಂಡಿದ್ದರು.[2] ಇತ್ತೀಚಿನ ತನಕ ಕೆಮ್ಮಿಗೆ ಅದೇ ಮದ್ದು. ಅಮ್ಮ, ಸಿಡುಬು ಬಂದಾಗ ಅವರ ಮನೆಯಲ್ಲಿ ಮೆಣಸಿನಕಾಯಿ ಹುರಿಯಬಾರದು, ಮಾಂಸದ ಅಡುಗೆ ಮಾಡಬಾರದು ಎಂಬ ಭಾವನೆ ಇಂದಿಗೂ ಹಳ್ಳಿಗಳಲ್ಲಿ ಪ್ರಚಾರದಲ್ಲಿದೆ. ಕಡಜ ಕಡಿದ ಜಾಗಕ್ಕೆ ಗೊಣ್ಣೆ ತೀ ಸಿಟಿದರೆ ಉರಿ ಕಡಿಮೆಯಾಗುತ್ತದೆ. ಕುರು ಎದ್ದರೆ, ಹಾಲುಸೊಪ್ಪು ಚಿವುಟಿ ಹಚ್ಚಿದರೆ ವಾಸಿಯಾಗುತ್ತದೆ. ಮಕ್ಕಳು ಸಿಕ್ಕ ಮೆಣಸುಗಳನ್ನು, ಉಗುಳಿನಲ್ಲಿಯೂ ಮೆತ್ತಿದರೆ ... ಈ ಪದಾರ್ಥಗಳು ಹೊಟ್ಟೆಯಿಂದ ಹೊರಕ್ಕೆ ಲಾಗಿದ್ದರೆ ಹೊಟ್ಟೆಯ ಹುಳು ನುಂಗಿಸಬೇಕು.

1 H. M. Hyatts, *Folklore from Adams County Illinois*, Items 2958, 2965

2 E. & M.A. Radford, *Encyclopaedia of Superstitions*, p. 88

ಹೊತ್ತಿಗೆ ಯುಗಯುಗಗಳೇ ಕಳೆದಿರಬೇಕು. ಆದರೂ ಅವು ಪೂರ್ಣ ಯಶಸ್ವಿಯಾಗಿದ್ದುವೆಂದು ಹೇಳಲಾಗದು. ಔಷಧೋಪಚಾರಗಳ ಜತೆಜತೆಗೆ ಭೂತಾರಾಧನೆ ಮಾರಿ ಮಸಣಿಯರ ಪೂಜೆಯೂ ನಡೆಯುತ್ತಿದ್ದುವು.

ಒಟ್ಟಿನಲ್ಲಿ ಭಯ ಮತ್ತು ಭಾವಾತ್ಮಕತೆ ಎಲ್ಲ ನಂಬಿಕೆಗಳ ಹಿನ್ನೆಲೆಯಲ್ಲಿದ್ದು ಅನೇಕ ವಿಧಾನಗಳಲ್ಲಿ ನಂಬಿಕೆಗಳು ಮೂಡಿರಬೇಕು. ಸೃಷ್ಟಿಶಕ್ತಿ ಕಲ್ಪನೆ ಮತ್ತು ಅಂತರ್ವಾಣಿ ಮನುಷ್ಯನ ಮೂಲಭೂತಗುಣಗಳು. ಅವನು ಸೂಕ್ಷ್ಮವಾಗಿ ನಿಸರ್ಗವನ್ನು ವೀಕ್ಷಿಸಿದ್ದಾನೆ. ಬೇಟೆಯಾಡಿ, ಮೃಗದ ಮಾಂಸವನ್ನು ಎಂಥದೋ ಸೊಪ್ಪಿನಲ್ಲಿ ಕಟ್ಟಿಕೊಂಡು ಬರುತ್ತಾನೆ. ಮನೆಗೆ ಬರುವ ಹೊತ್ತಿಗೆ ಮೂಳೆ ಮಾಂಸಗಳು ಒಂದಕ್ಕೊಂದು ಅಂಟಿಕೊಂಡಿರುತ್ತವೆ. ಮೂಳೆಮುರಿತಕ್ಕೆ ಆ ಸೊಪ್ಪು ಹಿರಿಮದ್ದೆಂದು ಅವನು ತೀರ್ಮಾನಿಸುತ್ತಾನೆ. ಕಾಡಿನಲ್ಲಿ ಓಡಾಡುವಾಗ ಎಡಹುತ್ತಾನೆ. ರಕ್ತ ಸ್ರವಿಸುತ್ತದೆ. ಅಲ್ಲಿಯೇ ಇದ್ದ ಎಂಥದೋ ಸೊಪ್ಪನ್ನರೆದು ಮೆತ್ತುತ್ತಾನೆ. ಅದು ವಾಸಿಯಾಗುತ್ತದೆ. ವಸ್ತುಗಳ ಗಂಧಗುಣಗಳನ್ನರಿತುಕೊಂಡು, ಅವುಗಳ ಪರಸ್ಪರ ಸಂಬಂಧವನ್ನು ಊಹೆಯ ಮೂಲಕ ಗ್ರಹಿಸಿಕೊಂಡು, ಅವುಗಳ ಔಷಧೀಯ ಗುಣಗಳನ್ನು ಕಂಡುಕೊಳ್ಳುತ್ತಾನೆ. ಅಂದರೆ ಕಾಡು ಮಾನವ ಪ್ರಾಣಿಯಲ್ಲ. ಅವನಲ್ಲಿಯೂ ತಾರ್ಕಿಕ ಸಾಮರ್ಥ್ಯ ಮತ್ತು ವೈಜ್ಞಾನಿಕ ದೃಷ್ಟಿಗಳಿದ್ದೇ ಇದ್ದುವು. ಈ ಕಲ್ಪನೆ ಮತ್ತು ತಾರ್ಕಿಕ ಸಾಮರ್ಥ್ಯಗಳು ಆಗಾಗಿನ ಅಗತ್ಯಕ್ಕನುಗುಣವಾಗಿ ಪರಿಸರದ ಒತ್ತಡದಿಂದ ಕೆರಳಿದಂಥವು. ಯುದ್ಧ, ಬೇಟೆ, ಕೃಷಿ, ಕ್ಷುಧೆ, ಪ್ರೇಮ, ದ್ವೇಷ, ದುಃಖ, ಶಂಕೆ ಮೊದಲಾದ ದೈಹಿಕ ಮತ್ತು ಮಾನಸಿಕ ಕ್ರಿಯೆಗಳಿಂದಾಗಿ ಅವು ಉಜ್ವಲಗೊಳ್ಳುತ್ತವೆ. ಸಾದೃಶ್ಯ-ವೈದೃಶ್ಯ, ಕ್ರಿಯೆ-ಪ್ರತಿಕ್ರಿಯೆ ಮತ್ತು ಬಾಹ್ಯಾಂತರ ದರ್ಶನಗಳ ಮೂಲಕ ಕಲ್ಪನೆ ಕೆಲಸಮಾಡುತ್ತದೆ.

ಮೊದಲೇ ಚಾಲ್ತಿಯಲ್ಲಿರುವ ಮೂಲ ನಂಬಿಕೆಗಳ ಆಧಾರದ ಮೇಲೆ ಅನುಮಾನ ಪ್ರಮಾಣದ ಮೂಲಕ ಬೇರೆ ಕೆಲವು ನಂಬಿಕೆಗಳು ನಿಷ್ಪನ್ನವಾಗಬಹುದು. ಸೌದೆ ಅಥವಾ ಎಣ್ಣೆ ಇರುವತನಕ ಬೆಂಕಿ ಉರಿಯುತ್ತದೆ; ಅಂತೆಯೇ ಯಾವುದೋ ಶಕ್ತಿ ಕಾರಣವಾಗಿ ಸೂರ್ಯ ಉರಿಯುತ್ತಾನೆ; ಆ ಶಕ್ತಿ ತೀರಿಹೋದನಂತರ ಸೂರ್ಯ ತಂಪಾಗುತ್ತಾನೆ. ಪುನರಾವೃತ್ತಿಯ ಅನುಭವಗಳು ನಂಬಿಕೆಗಳನ್ನು ಸೃಜಿಸುತ್ತವೆ. ಬೆಂಕಿಯಲ್ಲಿ ಕೈಯಿಟ್ಟರೆ ಸುಡುತ್ತದೆ. ಮನುಷ್ಯ ಪ್ರತಿಮೆಯನ್ನು ಬೆಂಕಿಗೆಸೆದರೆ ನಾಶವಾಗುತ್ತದೆ. ಮಾಯಮಾಟಗಳು ಶುರುವಾದದ್ದೇ ಹೀಗೆ. ಇವೆಲ್ಲ ಮನುಷ್ಯನ ಅನುಭವದ ಅಚ್ಚಿನಲ್ಲಿಯೇ ಬರಬೇಕೆಂಬುದು ಮಾತ್ರ ಸುಸ್ಪಷ್ಟ.

ಕಾಕತಾಳೀಯ ನ್ಯಾಯ ಅನೇಕ ನಂಬಿಕೆಗಳಿಗೆ ಇಂಬಾಗಬಹುದು. ಧೂಮಕೇತು ಕಾಣಿಸಿಕೊಂಡಾಗ ಪ್ರಸಿದ್ಧ ಪುರುಷರು ಸಾಯುತ್ತಾರೆಂಬ ಭಾವನೆ ರೂಢಿಯಲ್ಲಿ ಬಂದದ್ದೇ ಹೀಗೆ. ಸೀಸರ್ ಸಾಯುವ ಮುನ್ನ ಅದು ಕಾಣಿಸಿಕೊಂಡಿತ್ತು; ಅಂತೆಯೇ ಅದು ಕಾಣಿಸಿಕೊಂಡ ವರ್ಷವೇ ಏಳನೆಯ ಎಡ್ವರ್ಡ್ ತೀರಿಕೊಂಡದ್ದುಂಟು. ಒಂದು ಮನೆಯಿಂದ ಹೆಣ್ಣು ನೋಡುವ ಸಲುವಾಗಿ ಬೇರೆ ಊರಿಗೆ ಮೂವರು ಹೊರಟರು. ಆ

ದಿನ ಅಲ್ಲಿ ಹೆಣ್ಣು ರಜಸ್ವಲೆಯಾದಳು. ಸಮಸಂಖ್ಯೆಯ ಜನ ಹೋಗಿದ್ದರೆ ಆ ಅಪಶಕುನವಾಗುತ್ತಿರಲಿಲ್ಲ ಎಂಬ ಭಾವನೆ ಆಗ ಮೊಳೆಯಿತು. ತಮ್ಮ ಮಗ ಪರೀಕ್ಷೆಯಲ್ಲಿ ಉತ್ತೀರ್ಣನಾಗುತ್ತಾನೆಯೋ ಇಲ್ಲವೋ ಎಂದು ಗಂಡಹೆಂಡಿರು ಮಾತಾಡಿಕೊಳ್ಳುವಾಗ ಹಲ್ಲಿ ಲೊಚಗುಟ್ಟುತ್ತದೆ, ಇಲ್ಲವೆ ದೇವಾಲಯದಲ್ಲಿ ಗಂಟೆಯ ಸದ್ದಾಗುತ್ತದೆ, ಅಥವಾ ಬೀದಿಯ ಜಗುಲಿಯಲ್ಲಿ ಆಟವಾಡುತ್ತಿದ್ದ ಮಕ್ಕಳು ಎರಡುಸಾರಿ ಸೀನುತ್ತಾರೆ. ಮುಂದೆ ಒಂದೆರಡು ದಿನಗಳಲ್ಲಿ ಮಗ ತೇರ್ಗಡೆಹೊಂದಿದ ಸುದ್ದಿ ಬರುತ್ತದೆ. ಹಲ್ಲಿಯ ಮತ್ತು ಗಂಟೆಯ ಶಬ್ದ ಮತ್ತು ಸೀನುಗಳು ಶುಭ ಶಕುನಗಳೆಂದು ಅವರು ತಿಳಯುತ್ತಾರೆ. ಇಂದಿಗೂ ಜನ ಅವುಗಳನ್ನು ನಂಬುತ್ತಾರೆ. ಮಾನವನಿಗೂ ಸುತ್ತಮುತ್ತಣ ಪ್ರಕೃತಿಗೂ ಸಾಮಯುವ ಸಂಬಂಧವಿದೆ. ವಿಶ್ವಶಕ್ತಿ ಹಲ್ಲಿಯ ಮೂಲಕ, ಪಕ್ಷಿಗಳ ಮೂಲಕ ಮನುಷ್ಯನಿಗೆ ಎಚ್ಚರಿಕೆ ನೀಡುತ್ತದೆ, ಇಲ್ಲವೇ ಪ್ರೋತ್ಸಾಹ ನೀಡುತ್ತದೆ. ಆದ್ದರಿಂದ ಶಕುನಗಳು ವಿಶ್ವಾಸಾರ್ಹವಾದುವು ಎಂದು ಅವರು ತಿಳಿಯುತ್ತಾರೆ. ನಿಮ್ಮ ಮೂಗು ಕಡಿದರೆ ಮೂರ್ಖ ಗಂಟುಬೀಳುತ್ತಾನೆ: ಕಾಲು ಕಡಿದರೆ ಅಪರಿಚಯ ಸ್ಥಾನದ ದರ್ಶನವಾಗುತ್ತದೆ; ಬಲಗೈ ಕಡಿದರೆ ಧನಲಾಭ: ಎಡಗೈ ಕಡಿದರೆ ಧನನಷ್ಟ: ಬಲಗಿವಿ ಕಡಿದರೆ ಪ್ರಶಂಸೆ; ಎಡಗಿವಿ ಕಡಿದರೆ ನಿಂದೆ; ಮೊಣಕಾಲು ಕಡಿದರೆ ಕಾಣದ ಚರ್ಚಿನಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಬೇಕಾಗುತ್ತದೆ: ಮೊಣಕೈ ಕಡಿದರೆ ಅಪರಿಚಯ ವ್ಯಕ್ತಿಯೊಂದಿಗೆ ಮಲಗಬೇಕಾಗುತ್ತದೆ. ಇವು ಆಂಗ್ಲರ ನಂಬಿಕೆಗಳು.[1] ಇವುಗಳಲ್ಲಿ ಕೆಲವು ನಮ್ಮಲ್ಲಿಯೂ ರೂಢಿಯಲ್ಲಿವೆ: ಕೈ ಕಡಿದರೆ ಹಣ, ಕಾಲ್ಕಡಿದರೆ ರಣ. ಇವೆಲ್ಲವೂ ಸಾಮಾನ್ಯವಾಗಿ ಕಾಕತಾಳೀಯವಾಗಿ ಮೂಡಿರಬೇಕು.

ಆಧುನಿಕ ಮನಶ್ಶಾಸ್ತ್ರ ಬೆಳೆಯುವುದಕ್ಕೆ ಮುಂಚೆ ಯಾವುದೋ ನಿಗೂಢಶಕ್ತಿಯ ಪ್ರೇರಣೆಯಿಂದಾಗಿ ಕನಸುಗಳು ಬೀಳುತ್ತವೆ. ಕನಸಿನಲ್ಲಿ ಕಂಡದ್ದು ದಿಟವಾಗುತ್ತದೆ ಎಂಬ ಭಾವನೆಯಲ್ಲಿ ಎಷ್ಟು ಶ್ರದ್ಧೆಯಿತ್ತೆನ್ನುವುದನ್ನು ಮೇಲೆ ಸೂಚಿಸಲಾಗಿದೆ. ಕಾಲಾನಂತರದಲ್ಲಿ ಕನಸುಗಳಿಗೆ ಅನೇಕ ವ್ಯಾಖ್ಯಾನಗಳೂ ಹುಟ್ಟಿಕೊಂಡದ್ದುಂಟು. ಮೂಡುವ ರವಿಯ ಕನಸಾದರೆ ಪುಣ್ಯ. ಅಂತೆಯೇ ಚಂದ್ರನ ಕನಸು. ಕನಸಿನಲ್ಲಿ ಮಿಂಚನ್ನು ಕಂಡರೆ ಸಂಸಾರದಲ್ಲಿ ಸಾವು; ಮಂಜನ್ನು ಕಂಡರೆ ಜೀವನದಲ್ಲಿ ಮುಖ್ಯವಾದ ಘಟನೆ ಜರುಗುತ್ತದೆ; ಬಗ್ಗಡವನ್ನು ಕಂಡರೆ ಖಾಯಿಲೆ; ಯಾರಾದರೂ ಆಳವಾದ ಜಲಕ್ಕೆ ಮೂಕುಪಂತೆ ಕಂಡರೆ ಸಾವು; ಕಾಂತಿಯುತವಾದ ಹೂಗಳನ್ನು ಕಂಡರೆ ಸುಖಜೀವನ; ಹಸುರು ಮರಗಳ ತೋಪನ್ನು ಕಂಡರೆ ಶ್ರೀಮಂತಿಕೆ: ಗಿಣಿಯನ್ನು ಕಂಡರೆ ಪ್ರಿಯರಿಂದ ಮೋಸ; ಮರಣೋತ್ತರ ಶಾಸನ (will)ವನ್ನು ರಚಿಸುತ್ತಿದ್ದಂತೆ ಕಂಡರೆ ದೀರ್ಘಾಯುಸ್ಸು; ಕನಸಿನಲ್ಲಿ ಮದುವೆ ಕಂಡರೆ ಸಾವು: ಫಲ ಕಂಡರೆ ಮತ್ತು ವ್ಯಾಪಾರದಲ್ಲಿ ಯಶಸ್ಸು.[2]

1 *Ibid*, p. 154

2 H. M. Hyatt, *Folklore from Adams County Illinois*, Items 7278, 7280, 7295, 7311, 7355, 7393, 7402, 7476, 7589, 8376

ಶುಭ, ಮೀನು ಕಂಡರೆ ಮಿತ್ರ; ಹಾವು ಕಚ್ಚಿದರೆ ದೀರ್ಘಾಯುಸ್ಸು; ಪ್ರವಾಹ ಕಂಡರೆ ದುಃಖ; ಅಮೂದಿ ಕಂಡರೆ ಮಳೆ—ಇತ್ಯಾದಿ ನಂಬಿಕೆಗಳು ಕರ್ಣಾಟಕದ ಕೆಲವು ಭಾಗ ಗಳಲ್ಲಿ ದೊರೆಯುತ್ತವೆ.

ಹಗಲುಗನಸುಗಳು ಸಹ ಹಲವಾರು ನಂಬಿಕೆಗಳನ್ನು ಹೆರುತ್ತವೆ. ಸೋಮಾರಿಯ ಮನಸ್ಸು ದೆವ್ವದ ಕಾರ್ಖಾನೆಯೆಂದು ಹೇಳುವುದುಂಟು. ಕೆಲಸವಿಲ್ಲದಾಗ ಮನಸ್ಸು ಸದಾ ಸದಾಲೋಚನೆಯಲ್ಲಿಯೇ ನಿಮಗ್ನವಾಗಿರುತ್ತದೆಂದು ತಿಳಿಯುವಂತಿಲ್ಲ. ಸಂಯಮಶೀಲ ನಿಗೆ ಮಾತ್ರ ಸುವಿಚಾರ ಸಾಧ್ಯ. ಉಳಿದವರು ಅನೇಕ ಆಶೆ ಆಕಾಂಕ್ಷೆಗಳ ಗೋಪುರ ಗಳನ್ನು ಕಟ್ಟಿಕೊಳ್ಳುತ್ತಾರೆ. ಅತೃಪ್ತಕಾಮನೆಗಳು ಅವರ ಮನೋನೇತ್ರದ ಮುಂದೆ ಬಂದು ದೆವ್ವಗಳಂತೆ ನರ್ತನಗೆಯ್ಯುತ್ತವೆ. ಮಂತ್ರದಿಂದ ಮಳೆ ಬರಿಸಬಹುದಾದರೆ, ಅಂಜನದಿಂದ ಸುಂದರಿಯನ್ನೇಕೆ ಆಕರ್ಷಿಸಬಾರದು? ತಾಯಿತಿ ಕಟ್ಟಿಕೊಳ್ಳುವುದರಿಂದ ಅದೃಶ್ಯವಾಗಿ ಅರಮನೆಯಲ್ಲಿಳಿಯಬಾರದೇಕೆ? ಮಾಟ ಮಾಡಿಸಿ ಹಗೆಯನ್ನೇಕೆ ಕೊಲ್ಲಿಸ ಬಾರದು? ಇಂಥ ಸಾವಿರಾರು ಯೋಚನೆಗಳು ತಲೆಯನ್ನು ಹೊಕ್ಕು ಹೊಸ ನಂಬಿಕೆಗಳ ಉದಯಕ್ಕೆ ಮೂಲವಾಗುತ್ತವೆ.

ನಂಬಿಕೆಗಳೆಂದ ಕೂಡಲೇ ಬುದ್ಧಿಭಾವಗಳು ಗೈರುಹಾಜರಿ ಎಂದು ತಿಳಿಯಕೂಡದು. ಮನಸ್ಸಿನ ಇಷ್ಟಾನಿಷ್ಟಗಳ ಅಭಿವ್ಯಕ್ತಿಗೆ ಈ ನಂಬಿಕೆಗಳು ಮಾಧ್ಯಮವಾಗುವಂತೆ, ಅವು ಗಳ ಉಗಮಕ್ಕೂ ಇಷ್ಟಾನಿಷ್ಟಗಳು ಕಾರಣವಾಗುತ್ತವೆ. ತಾಯಿ ತಂದೆಯರಲ್ಲಿ ಭಕ್ತಿ, ಉಪಕಾರ ಮಾಡಿದವರಲ್ಲಿ ಕೃತಜ್ಞತೆ, ಮಕ್ಕಳನ್ನು ಸಾಕಬೇಕೆನ್ನುವಲ್ಲಿ ಕರ್ತವ್ಯಪ್ರಜ್ಞೆ ಇವೇ ಮೊದಲಾದುವಕ್ಕೆ ಭಾವಾತ್ಮಕತೆಯೇ ಪ್ರೇರಕವಾಗುತ್ತದೆ. ರೋಗ ಚಿಕಿತ್ಸೆಗೆ, ಕೃಷಿ ಮೊದಲಾದ ವೃತ್ತಿಗಳಿಗೆ, ಹವಮಾನಕ್ಕೆ ಸಂಬಂಧಿಸಿದ ನಂಬಿಕೆಗಳಲ್ಲಿ ಹಲವು ಬುದ್ಧಿಪೂರ್ವಕವಾಗಿ, ಕಾರ್ಯಕಾರಣಸಂಬಂಧದ ಆಧಾರದ ಮೇಲೆ ಹುಟ್ಟಿಕೊಂಡವು; ಕೊನೆಗೆ ಅವು ಅನುಭವವಾಗಿ ಪರಿಣಮಿಸುತ್ತವೆ. ನೀರು ಬೆಂಕಿಯನ್ನಾರಿಸುತ್ತದೆನ್ನುವುದು ದಿಟದ ನಂಬಿಕೆಯೂ ಅಹುದು, ಅನುಭವವೂ ಅಹುದು. ನಂಬಿಕೆಗಳಿಗೆ ಅನುಭವವೆಂತು ಮೂಲವೋ ಅಂತೆಯೇ ಅಂತರ್ಬೋಧೆಯೂ ಕಲ್ಪನೆಗಳೂ ಮೂಲವಾಗುತ್ತವೆ. ಕೊನೆಯ ಮೂಲಗಳಿಂದ ಹುಟ್ಟುವ ನಂಬಿಕೆಗಳು ಅನುಭವದ ಪ್ರಯೋಗಶಾಲೆಯಲ್ಲಿ ತೇರ್ಗಡೆ ಹೊಂದಿದರೆ ಮಾತ್ರ ದಿಟವಾಗುತ್ತವೆ.

ವಾಸ್ತವಿಕತೆ ಮತ್ತು ಯಥಾರ್ಥತೆಯ ದೃಷ್ಟಿಯಿಂದ ನೋಡಿದಾಗ ನಂಬಿಕೆಗಳಲ್ಲಿ ಕೆಲವು ದಿಟವೆಂದೂ ಕೆಲವು ಸಟೆಯೆಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಎಲ್ಲಿಲ್ಲಿ ಕಾರ್ಯ ಕಾರಣಸಂಬಂಧ ಸುಸಂಬದ್ಧವಾಗಿ ತೋರುತ್ತದೆಯೋ ಅವು ದಿಟದ ನಂಬಿಕೆಗಳೆಂದೂ ಅದು ತೋರದಿದ್ದರೆ ಸಟೆಯ ನಂಬಿಕೆಗಳೆಂದೂ ಕರೆಯಬಹುದು. ಈ ಸಟೆ ನಂಬಿಕೆಗಳನ್ನು ಮೂಢ ನಂಬಿಕೆಗಳೆಂದೂ ಮೌಢ್ಯಗಳೆಂದೂ ಕರೆಯುವ ರೂಢಿಯಿದೆ. ಇಂಗ್ಲ ಭಾಷೆಯಲ್ಲಿ ಈ ಗುಂಪಿಗೆ Superstition ಎನ್ನುವ ಹೆಸರಿದೆ. ಅದು stare ಎನ್ನುವ ಲ್ಯಾಟಿನ್ ಮೂಲದಿಂದ ಬಂದಿದೆ. Survival ಎಂಬ ಇಂಗ್ಲ ಪದ ಅದಕ್ಕೆ ಸಂವಾದಿಯಾದುದು.

ಜರ್ಮನ್ ಭಾಷೆಯಲ್ಲಿ Aberglaube ಎಂದೂ, ಡಚ್‌ನಲ್ಲಿ Overgeloof ಎಂದೂ, ಡೇನಿಷಿನಲ್ಲಿ Overtro ಎಂದೂ ಅದಕ್ಕೆ ಹೆಸರು. ಆದರೆ ಗ್ರೀಕ್ ಪದ deisidaimonia ಮೂಢ ನಂಬಿಕೆಗಳ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸುತ್ತದೆಂದು ತೋರುತ್ತದೆ. ಆ ಪದದ ನಿಜವಾದ ಅರ್ಥ 'ದೇವರ ಭಯ' ಎಂದು. ಜೀವನದಲ್ಲಿ ಸಂಭವಿಸುವ ಸಾಮಾನ್ಯ ಸಂಗತಿಗಳ ಕಡೆಗೆ ಮನುಷ್ಯ ಲಕ್ಷ್ಯ ಕೊಡುವುದಿಲ್ಲ. ಅಸಾಧಾರಣ ಸಂಗತಿಗಳು ಮಾತ್ರ ಅವನ ಗಮನವನ್ನು ಸೆಳೆಯುತ್ತವಲ್ಲದೆ, ಗೌರವ ಭಯ ಭಕ್ತಿಗಳನ್ನು ಆಕರ್ಷಿಸುತ್ತವೆ. ತನಗೆ ತಿಳಿದಂತೆ ಮನುಷ್ಯ ಅವನ್ನು ರೂಪಿಸಿಕೊಳ್ಳುತ್ತಾನೆ. ಇಂಥ ಘಟನೆಗಳು ಯಾವತ್ತೂ ಇರುತ್ತವೆ. ಕೆಲವಂತು ಆಧುನಿಕ ವಿಜ್ಞಾನಿಯೂ ಬಿಡಿಸಲಾರದಂಥವು. ಅಷ್ಟೇ ಏಕೆ, ಹಿಂದಿನ ವೈಜ್ಞಾನಿಕ ಸಿದ್ಧಾಂತ ಕಾಲಾನಂತರದಲ್ಲಿ ಹುಸಿಯಾಗಬಹುದೆಂಬುದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬಹುದಾಗಿದೆ. ಆದರೆ ಒಬ್ಬನಿಗೆ ಅಸಾಧಾರಣವೆಂದು ತೋರಿದ್ದು ಮತ್ತೊಬ್ಬನಿಗೆ ಸಾಧಾರಣವೆಂದು ತೋರಬಹುದು. ಅಂದರೆ ಅದನ್ನು ಸೀಮಿತಾರ್ಥದಲ್ಲಿ ಬಳಸಬೇಕಾಗುತ್ತದೆ.

ದೈತ್ಯವೃಕ್ಷಗಳನ್ನು ಬೇರುಸಹಿತ ಉರುಳಿಸುವ, ಮನೆಮಠಗಳನ್ನು ತೂರಾಡಿಸುವ, ಭೂಮಿಯನ್ನೇ ಅಲ್ಲಾಡಿಸುವಂತೆ ಬೀಸುವ ಚಂಡಮಾರುತ ಆದಿಮಾನವನಲ್ಲಿ ಅನೇಕ ಭ್ರಮೆಗಳನ್ನು ಹುಟ್ಟಿಸುವುದು ಸಹಜ. ಉತ್ತರ ಧ್ರುವದಲ್ಲಿ ಕುಳಿತಿರುವ ರಾಕ್ಷಸ ಪಕ್ಷಿಯೊಂದು ರೆಕ್ಕೆ ಬಡಿದದ್ದರಿಂದ ಚಂಡಮಾರುತ ಸಂಭವಿಸಿತೆಂದು ನಾರ್ವೆ ಸ್ವೀಡನ್ ದೇಶಗಳ ಜನ ಅಂದುಕೊಂಡಿರಬಹುದು. ಅದನ್ನೊಲಿಸಿಕೊಳ್ಳುವ ದೃಷ್ಟಿಯಿಂದ ಕೆಲವರು ಅದನ್ನು ದೇವರ ದರ್ಜೆಗೇರಿಸಿರಬಹುದು.

ಅವಳಿಮಕ್ಕಳ ಜನನ ಮತ್ತೊಂದು ಅಸಾಧಾರಣ ಅಥವಾ ವಿಪರೀತ ಘಟನೆ. ಅಂಥ ಘಟನೆಯಿಂದ ಸಮಾಜಕ್ಕೆ ಅಪಾಯವೊದಗುತ್ತದೆಂಬ ಶಂಕೆಯಿಂದ ಮಕ್ಕಳನ್ನಾಗಲಿ, ಅವರ ತಾಯಿಯನ್ನಾಗಲಿ, ಅಥವಾ ತಾಯಿಮಕ್ಕಳನ್ನಾಗಲಿ ಕೊಲ್ಲುತ್ತಿದ್ದುದುಂಟು. ಕೆಲವು ಸಂಕೇ ಇರಕೂಡದೆಂದು ಹೆರಿಗೆಯಾದ ಮನೆಯನ್ನು ಸುಡುತ್ತಿದ್ದುದುಂಟು. ಇಂಥ ದೇಶಗಳಲ್ಲಿ ತಾಯಿ ಮಕ್ಕಳನ್ನು ದ್ವೀಪಾಂತರಕ್ಕೆ ರವಾನೆ ಮಾಡುತ್ತಿದ್ದುದುಂಟು. ಇಂಥ ಯಮಳ ಸಂರಕ್ಷಣಾ ಧಾಮಗಳು ಕೊನೆಗೆ ರೋಮಿನಂಥ ನಗರಗಳ ಉತ್ಪತ್ತಿಗೆ ಕಾರಣವಾಗಿರುವುದುಂಟು.

ಯಮಳರ ಜನನದಿಂದ ಬೇರೆ ಅನಾಹುತಗಳೂ ಸಂಭವಿಸುತ್ತಿದ್ದುದುಂಟು. ಇಬ್ಬರು ಗಂಡಸರು ಒಬ್ಬ ಹೆಂಗಸಿನ ಸಂಪರ್ಕ ಹೊಂದುವುದರಿಂದ ಅವಳಿಮಕ್ಕಳು ಹುಟ್ಟುತ್ತವೆಂಬ ಭಾವನೆ ಕೆಲವು ಸಮಾಜಗಳಲ್ಲಿ ಬೇರೂರಿತ್ತು. ಭೂಮಿಯ ಮನುಷ್ಯರಲ್ಲದಿದ್ದರೆ ಅಗೋಚರ ಶಕ್ತಿಗಳು, ಅಂದರೆ ದೇವತೆಗಳು ಆ ಹೆಂಗಸಿನ ಸಂಪರ್ಕ ಬೆಳೆಸಿರಬೇಕೆಂಬ ಉದಾರ ಭಾವನೆ ಕೆಲವೆಡೆ ತಲೆದೋರಿರಬಹುದು. ರೊಮುಲಸ್ ಮತ್ತು ರೀಮಸ್‌ರ ಜನನ ವಾದದ್ದು ಹೀಗೆ. ಕೆಲವು ಜನಾಂಗಗಳಲ್ಲಿ ಅವರು ಅಶ್ವಿನೀ ದೇವತೆಗಳಂತೆ ವಿಶೇಷ ಸ್ಥಾನಮಾನ ಪಡೆದಿರಬಹುದು.

ಹುಟ್ಟುವಾಗಲೇ ಹಲ್ಲಿರುವ ಮಕ್ಕಳು ಕುಲಕ್ಷಯಕ್ಕೆ ಕಾರಣರಾಗುವರೆಂದು ಕೊಲ್ಲುತ್ತಿದ್ದುದುಂಟು. ಜನಿಸುವಾಗಲೇ ಮೈಮೋರೆಗಳು ಬಿಳಿಚಿಕೊಂಡಿರುವುದು, ಕಿವಿ ಸೊಟ್ಟಗಿರುವುದು, ಮೂಗು ಹತ್ತಿಕೊಂಡಿರುವುದು ಇಂಥವೇ ವಿಚಿತ್ರ ಲಕ್ಷಣಗಳು ಶುಭವಲ್ಲವೆಂಬ ಅಭಿಪ್ರಾಯ ಕೆಲವು ಸಂಗಡಗಳಲ್ಲುಂಟು. ಕೈಯಲ್ಲೋ ಕಾಲಲ್ಲೋ ಆರು ಬೆರಳಿದ್ದರೆ ಅಂಥ ವ್ಯಕ್ತಿ ಪ್ರಖ್ಯಾತನಾಗುತ್ತಾನೆಂಬ ನಂಬಿಕೆ ಭಾರತೀಯರಲ್ಲುಂಟು. ಚಂದ್ರಹಾಸನಿಗೆ ಆರು ಬೆರಳಿದ್ದುವೆನ್ನುವುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

ಕಣ್ಣು ಸಾಮಾನ್ಯವಾಗಿರದೆ, ವಿಲಕ್ಷಣವಾಗಿದ್ದ ಪಕ್ಷದಲ್ಲಿ ಕೆಟ್ಟ ಪರಿಣಾಮವಾಗುತ್ತದೆನ್ನುವ ಭಾವನೆ ಅನೇಕ ದೇಶಗಳಲ್ಲುಂಟು. ಮೆಡ್ಡಗಣ್ಣು, ಗುಳಿಗಣ್ಣು, ಅದಿರುಗಣ್ಣು, ಒಂಟಿಗಣ್ಣು ಮೊದಲಾದ ವಿರೂಪಗಳಿಂದ ಕೂಡಿದ ಕಣ್ಣು ಅಶುಭಕ್ಕೆ ಕಾರಣವಾಗುತ್ತದೆನ್ನುವ ತಿಳಿವಳಿಕೆ ಪ್ರಾಚೀನವಾದದ್ದು. ಭಾರತದಲ್ಲಿಂತೋ ಮೆಡಿಟರೇನಿಯ ಸಮುದ್ರದ ತೀರ ಪ್ರದೇಶಗಳಲ್ಲಿ ನೀಲಿಗಣ್ಣು, ಯೂರೋಪ್ ಖಂಡದ ಉತ್ತರ ಭಾಗದಲ್ಲಿ ಕಪ್ಪುಗಣ್ಣು, ಕರ್ನಾಟಕದಲ್ಲಿ ಕೆಲವು ಕಡೆ ಕೆಂಚುಗಣ್ಣು ಒಳ್ಳೆಯದಲ್ಲ. ಹುಬ್ಬುಗೂದಲಿಲ್ಲದಿರುವುದು, ಹುಬ್ಬುಗಳೆರಡೂ ಕೂಡಿಕೊಂಡಿರುವುದು ಅಶುಭದ ಲಕ್ಷಣ. ಇಂಥ ಕೆಟ್ಟ ಕಣ್ಣಿನವರು ದುರುಗುಟ್ಟಿಕೊಂಡು ಫಲಭರಿತವಾದ ಮರಗಳನ್ನು ನೋಡಿದರೆ ಹಣ್ಣೆಲ್ಲ ಉದುರಿ ಹೋಗುತ್ತವಂತೆ, ಹೆಚ್ಚು ಹಾಲು ಕೊಡುವ ದನದ ಕೆಚ್ಚಲನ್ನು ನೋಡಿದರೆ ಹಾಲು ಬತ್ತಿ ಹೋಗುತ್ತವಂತೆ, ಅವರ ದೃಷ್ಟಿ ಮಕ್ಕಳ ಮೇಲೆ ಬಿದ್ದರೆ ಏನಾದರೂ ಕಾಯಿಲೆ ಬರುತ್ತದಂತೆ. ಊಟ ಮಾಡುವಾಗ ತಟ್ಟೆಯ ಮೇಲೆ ಬಿದ್ದರೆ ಉಂಡವರಿಗೆ ಹೊಟ್ಟೆನೋವು ಬರುತ್ತದಂತೆ, ರಾಗಿ ರಾಶಿಯ ಮೇಲೆ ಬಿದ್ದರೆ ಅದು ಹುಳಿಯುವುದಂತೆ. ಅಂಥವರಲ್ಲಿ ಕರುಬು ಬಹು ಪ್ರಮಾಣದಲ್ಲಿರುತ್ತದೆ. "ಕಪ್ಪುಕಣ್ಣಿನ ಹೆಂಗಸರನ್ನು ನಂಬಬಾರದು; ನೀಲಿಗಣ್ಣಿನ ಸ್ತ್ರೀಯರು ವಿಶ್ವಾಸಾರ್ಹರು; ಬೂದಿಗಣ್ಣಿನ ಹೆಂಗಸರು ಹೊಟ್ಟೆಬಾಕಿಯರು; ಗುಳಿಗಣ್ಣಿನ ಜನ ಮೋಸಗಾರರು; ಹುಬ್ಬುಗಳ ಕೂಡಿಕೆ ಮೋಸವನ್ನು ಸೂಚಿಸುತ್ತದೆ."[1]

ಶಕುನನಿಮಿತ್ತಾದಿ ಸಂಗತಿಗಳು ಮೂಢನಂಬಿಕೆಗಳಲ್ಲಿ ಬಹುಭಾಗವನ್ನೊಳಗೊಳ್ಳುತ್ತವೆ. ಅನೇಕ ಮತಗಳಲ್ಲಿ ವಾಡಿಕೆಯಲ್ಲಿರುವ ಕಾಲಜ್ಞಾನ ಭವಿಷ್ಯಜ್ಞಾನ ಪದ್ಧತಿಗಳು ಸಹ ಅಜ್ಞಾನದ ಸಂತಾನಗಳೇ ಆಗಿವೆ. ಮತದ ಪರಿಧಿಯಲ್ಲಿ ಬರುವ ಶಕುನಗಳು ಕೆಲವು; ಅದರ ಗಡಿಯಾಚೆ ನಿಲ್ಲುವವು ಕೆಲವು. ವಸ್ತು ವಿಸ್ತಾರವಾದಷ್ಟೇ ಶಕುನಗಳ ವಿಸ್ತಾರವೂ ಕಣ್ಕುಕ್ಕುವಂಥದಾಗಿದೆ. ಪಶು ಪಕ್ಷಿ ಗಿಡ ಬಳ್ಳಿ ಗಾಳಿ ನೀರು ಬೆಂಕಿ ಮೊದಲಾದ ತಿರೆಯ ಮೇಲಣ ವಸ್ತುಗಳೆಲ್ಲ ಶಕುನದ ಮಾಧ್ಯಮಗಳಾಗಬಹುದು. ಕೊನೆಗೆ ಸತ್ತವರಿಗೆ ಭವಿಷ್ಯಜ್ಞಾನ ಲಭಿಸುತ್ತದೆ. ಅವರ ಶಾಪ ಅಥವಾ ವರಗಳು ಫಲಿಸುತ್ತವೆ. ಪ್ರೇತಗಳೊಡನೆ ಸಂಪರ್ಕ ಏರ್ಪಡಿಸುವುದರಿಂದ ಅವುಗಳನ್ನೊಲಿಸಿಕೊಳ್ಳುವುದರಿಂದ ಕಲ್ಯಾಣವುಂಟಾಗುತ್ತದೆಂಬ ನಂಬಿಕೆಯೇ ನಾನಾ ಬಗೆಯ ಶ್ರಾದ್ಧಗಳಿಗೆ ಬುನಾದಿಯಾಗಿದೆ. ಶ್ರಾದ್ಧದ ದಿನ ಕಾಗೆಗಳು ಪಿಂಡಕೂಳು ತಿನ್ನಲಿಲ್ಲವೆಂದರೆ ಸತ್ತವರು ಬದುಕಿದ್ದಾಗ ಧಾರಾಳಿಗಳಾಗಿರಲಿಲ್ಲ

[1] *Folklore From Adams County Illinois*, Items 4015, 4016, 4018, 4020, 4031.

ವೆಂದೋ, ಅಥವಾ ಅವರು ಕೋಪಗೊಂಡಿದ್ದಾರೆಂತಲೋ ಅರ್ಥ ಮಾಡುವುದುಂಟು. ಇಂಥ ಶಕುನಗಳಲ್ಲಿ ಹಲವು ಜ್ಯೋತಿಷಿಗಳು ಮತ್ತು ಪುರೋಹಿತರು ಸೃಷ್ಟಿಸಿರಲೂ ಬಹುದು. ಪ್ರಯಾಣ ಕಾಲದಲ್ಲಿ ಕಾಗೆ ಎಡದಿಂದ ಬಲಕ್ಕೆ ಹಾರಿಹೋಗುವುದು, ಬರಿ ಪಾತ್ರೆ ಎದುರಾಗುವುದು, ಬೋಳಿಯನ್ನು ನೋಡುವುದು ಅಶುಭ; ಹೆಂಡ ಹೆಣ ತುಂಬಿದ ಕೊಡ ನೋಡುವುದು ಶುಭ. ಇವನ್ನು ಪ್ರಾಯಶಃ ಸಾಮಾನ್ಯರು ಕಲ್ಪಿಸಿಕೊಂಡವೆಂದು ತೋರುತ್ತದೆ.

ಸಂಖ್ಯೆಗಳ ಬಗೆಗೂ ಸಟಿನಂಬಿಕೆಗಳು ತಲೆಯೆತ್ತಿರುವುದುಂಟು. ನಮ್ಮಲ್ಲಿ ಒಂದು, ಏಳು, ಹನ್ನೊಂದು ಶುಭವಲ್ಲ. ಎಣಿಸುವಾಗ ಅವುಗಳಿಗೆ ಬದಲಾಗಿ 'ಹೆಚ್ಚಲಿ' ಎಂಬ ಪದವನ್ನು ಬಳಸುತ್ತಾರೆ. ಕೆಲವು ಜನಾಂಗಗಳಲ್ಲಿ ಒಂಬತ್ತು ಪವಿತ್ರವೆಂದು[1] ಪರಿಗಣಿತವಾಗಿದೆ. ಜಗತ್ತಿನಲ್ಲೆಲ್ಲ ಮೂರು ಒಳ್ಳೆಯ ಸಂಖ್ಯೆಯೆಂದು ನಂಬಲಾಗಿದೆ. ನಮ್ಮಲ್ಲಂತೂ ತ್ರಿಮೂರ್ತಿಗಳ ಕಲ್ಪನೆ ಅದಕ್ಕೆ ಕಾರಣವಾಗಿರಬಹುದು. ಕ್ರೈಸ್ತಧರ್ಮದ ತ್ರಿಮೂರ್ತಿತತ್ವ ಕಲ್ಪನೆಯೂ ಈ ಊಹೆಯನ್ನು ಸಮರ್ಥಿಸುತ್ತದೆ.

ಸೀನು ಬಿಕ್ಕಳಿಕೆಗಳು ಸಾಮಾನ್ಯವಾಗಿ ಪರರಿಗೆ ಶಕುನಗಳಾಗಿ ಪರಿಣಮಿಸುತ್ತವೆ. ಸೀತವರಿಗೂ ಸೀನುಗಳಿಗೂ ಏನೇನೂ ಸಂಬಂಧವಿಲ್ಲ. ಭಾವಪ್ರೇಷಣ ಅಥವಾ ದೂರ ಮನೋದರ್ಶನದ ಮೂಲಕ ಇವು ಫಲಾಫಲಗಳನ್ನು ಸೂಚಿಸುತ್ತವಂತೆ. ಇಬ್ಬರು ವ್ಯಕ್ತಿಗಳು ಮಾತಾಡಿಕೊಳ್ಳುತ್ತಿರುವಾಗ ಒಬ್ಬ ಸೀನುತ್ತಾನೆಂದಿಟ್ಟುಕೊಳ್ಳೋಣ. ಅದರ ಫಲ ಎದುರಿಗಿರುವ ಮತ್ತೊಬ್ಬನಿಗೆ ಮಾತ್ರ ಸೇರುತ್ತದೆ. ಎದುರಿಗಿರುವವನ ಭಾವವನ್ನು ಸೀನುವವನ ಹೃದಯ ಗ್ರಹಿಸುತ್ತದೆ, ಮತ್ತು ಅದು ಸೀನು ಬಿಕ್ಕಳಿಕೆಗಳ ರೂಪದಲ್ಲಿ ಹೊರಗೆ ಬರುತ್ತದೆನ್ನುವುದು ಪ್ರಪಂಚದ ಎಲ್ಲ ಜನಾಂಗಗಳಲ್ಲಿಯೂ ರೂಢಿಯಲ್ಲಿರುವ ನಂಬಿಕೆ.

ಭೂತ ಪಿಶಾಚಿ ಮತ್ತು ಮಾಟಗಾತಿಯರಿಂದ ಅನೇಕ ಕ್ಲೇಶಗಳುಂಟಾಗುತ್ತವೆಂಬ ತಿಳಿವಳಿಕೆ ತುಂಬ ಹಳೆಯದು. ಅವುಗಳಿಂದ ಪಾರಾಗಲು ಮನುಷ್ಯ ಸದಾ ಚಿಂತಿಸುತ್ತಿದ್ದಿರಬೇಕು. ದೆವ್ವಗಳು ಹತ್ತಿರ ಸುಳಿಯದಿರಲು ಏನು ಮಾಡಬೇಕು? ಮೆಟ್ಟನ್ನು ಕೈಯಲ್ಲಿ ಹಿಡಿದುಕೊಂಡಿದ್ದರೆ ಸುಳಿಯುವುದಿಲ್ಲವಂತೆ. ಅಥವಾ ಸಗಣಿಯಲ್ಲಿ ಭೂತನಿರ್ಮಾಣ ಮಾಡಿ ಅದರ ಮೇಲೆ ಉಗಿಯಬೇಕು. ಮಾಟಗಾತಿಯ ದೇಹದ ಒಂದೆರಡು ತೊಟ್ಟು ರಕ್ತ ಸಿಕ್ಕಿದ್ದಾದರೆ ಅವಳ ಮಾಟಗಳನ್ನು ನಿಷ್ಕ್ರಿಯಗೊಳಿಸಬಹುದಂತೆ. ಅಪರಾಧಿಗಳು ತಾವು ದುಷ್ಕೃತ್ಯ ನಡೆಸಿದ ಸ್ಥಳಗಳನ್ನು ಮಲಮೂತ್ರಾದಿಗಳ ಮೂಲಕ ಹೊಲಸುಗೊಳಿಸಿ ಅಲ್ಲಿಂದ ಕಾಲ್ತೆಗೆದದ್ದಾದರೆ ಅವರನ್ನು ಪತ್ತೆ ಮಾಡುವುದು ಕಷ್ಟವಾಗುತ್ತದೆಂಬ ಭಾವನೆ ಕೆಲವರಲ್ಲಿದೆ.[2] ಯಾವ ಕೇಡೂ ತಟ್ಟದಿರಲೆಂದು ಮನೆಗಳಿಗೆ ಅಷ್ಟದಿಗ್ಬಂಧನ ಮಾಡಿಸುವುದುಂಟು.

1 Thus for Example the frequent occurence of the number nine in Folk-traditions is ultimately the consequence of the sacredness of that number
—*The Science of Folklore*, p. 215

2 Ibid., P. 218.

ಇವೆಲ್ಲ ಅರಿಷ್ಟ ಅಥವಾ ಅಶುಭ ನಿವಾರಣೋಪಾಯಗಳು. ಕೆಲವು ಗಿಡಗೆಂಡೆಗಳನ್ನು ಸಹ ಅಶುಭ ನಿವಾರಣೆಗೆಂದು ಬಳಸುವುದುಂಟು.

ಸೀಮಂತ ಚೌಲ ಜನನೋತ್ಸವ ನಾಮಕರಣ ಮೊದಲಾದ ಕರ್ಮಗಳು ಮಗುವಿನ ಕ್ಷೇಮಕ್ಕಾಗಿ ನಡಸುವ ಆಚರಣೆಗಳು. ಅವುಗಳ ಹಿಂದಿರುವ ನಂಬಿಕೆಗಳು ಅಪಾರ. ಮೂಲಾನಕ್ಷತ್ರದಲ್ಲಿ ಹುಟ್ಟಿದ ಮಕ್ಕಳಿಂದ ತಂದೆತಾಯಿಯರಲ್ಲೊಬ್ಬರಿಗೆ ಅಥವಾ ಇಬ್ಬರಿಗೂ ಸಾವು ಸಮನಿಸುತ್ತದಂತೆ. ಮೊದಲನೆಯ ಮಗು ಹೆಣ್ಣಾದರೆ ಹುಟ್ಟಿದ ಮನೆಗೆ ಶುಭ. ಮೊದಲೇ ಹುಟ್ಟಿದ ಮಕ್ಕಳು ಸತ್ತು, ಕೊನೆಯಲ್ಲಿ ಹುಟ್ಟಿದ ಮಗು ಉಳಿಯಬೇಕಾದರೆ ಯಾವುದಾದರೂ ಪ್ರಾಣಿಯ ಹೆಸರಿಡಬೇಕೆಂದು ಪ್ರಾಚೀನ ಬೇಬಿಲೋನಿಯಾದ ಜನರೂ ರೋಮನರೂ ನಂಬಿಕೊಂಡಿದ್ದರು. ಕಾಡಯ್ಯ ಎಂದೋ ಜವರಯ್ಯ ಎಂದೋ ಹೆಸರಿಟ್ಟರೆ ನಾಲ್ಕಾರು ಮಕ್ಕಳು ಸತ್ತಮೇಲೆ ಹುಟ್ಟಿದಂಥ ಮಕ್ಕಳು ಸಾಯವುದಿಲ್ಲವೆಂಬ ತಿಳಿವಳಿಕೆ ನಮ್ಮಲ್ಲಿಯೂ ಇದೆ. ದೀಕ್ಷಾಸ್ನಾನವಾಗುವ ತನಕ ಮಗು ತುಂಬಿಕೊಂಡು ಬೆಳೆಯುವುದಿಲ್ಲವೆಂದೂ ತಂದೆತಾಯಿಯರ ಹೆಸರನ್ನು ಮಗುವಿಗಿತ್ತರೆ ಅದು ಬಹು ಬೇಗನೆ ಸಾಯುತ್ತದೆಂದೂ, ಸಾಧುಸಂತರ ಹೆಸರಿಟ್ಟರೆ ಅದು ಭಾಗ್ಯಶಾಲಿಯಾಗಿ ಬೆಳೆಯುವುದೆಂದೂ, ಕ್ರಿಶ್ಚಿಯನ್ನರ ನಂಬಿಕೆ.[1] ನಾಮಕರಣೋತ್ಸವಕ್ಕೆ ಮುಂಚೆ ಮಗುವನ್ನು ಯಾವುದಾದರೂ ಹೆಸರಿಂದ ಕರೆಯುವುದು ಕೆಟ್ಟದ್ದಂತೆ. ಶನಿವಾರದ ಹೊರತು ಬೇರೆ ವಾರ ಮಗುವಿಗೆ ನಾಮಕರಣ ಮಾಡಿದರೆ ಸತ್ತುಹೋಗುತ್ತದಂತೆ. ನಾಮಕರಣ ಮಾಡುವಾಗ ಯಕ್ಷಿಣೀ ಪುರೋಹಿತ ಮಗುವಿನ ಮುಖದ ಮೇಲೆ ಮೂರು ಸಾರಿ ಉಗುಳುವುದು ಆಫ್ರಿಕಾದ ಮಧ್ಯಪ್ರದೇಶಗಳಲ್ಲಿರುವ ರೂಢಿ. ನಾಮಕರಣಕ್ಕೆ ಮುಂಚೆ ಮುಂದೆ ಕಟ್ಟುವ ಹೆಸರನ್ನು ಯಾರಿಗಾದರೂ ಹೇಳಿದ್ದಾದರೆ ಮಗುವಿಗೆ ತೊಂದರೆಯಾಗುತ್ತದಂತೆ. ಅಮೆರಿಕೆಯ ಕೆಂಪು ಇಂಡಿಯನ್ನರು ತಮ್ಮ ನಿಜ ನಾಮವನ್ನು ಬಚ್ಚಿಡುತ್ತಾರಂತೆ. ಹೆಸರು ವ್ಯಕ್ತಿತ್ವದ ಅವಿಭಾಜ್ಯಾಂಗವಾದುದರಿಂದ ಹೆಸರಿನ ಮೂಲಕವೇ ವ್ಯಕ್ತಿತ್ವಕ್ಕೆ ಅಪಾಯವೊದಗಬಹುದು ಎಂಬ ಭೀತಿ ಅವರಿಗೆ.[2] ಮದುವೆ ಸಾವುಗಳಿಗೆ ಸಂಬಂಧಿಸಿದ ಮೂಢ ನಂಬಿಕೆಗಳನ್ನು ಇಂತೆಯೇ ಗಮನಿಸಬಹುದು.

ಗೃಹಕೃತ್ಯಕ್ಕೆ ಸಂಬಂಧಿಸಿದ ಹುಸಿನಂಬಿಕೆಗಳಂತು ಎಲ್ಲ ದೇಶಗಳಲ್ಲಿಯೂ ಇದ್ದೇ ಇರಬೇಕು. ಈಜಿಯನ್ ಸಮುದ್ರದ ದ್ವೀಪಸ್ತೋಮಗಳಲ್ಲಿ ವಾಸಿಸುವ ಸೂಡಾನ್ ಜನ ಮುಳ್ಳಿರುವ ಮರವನ್ನು ಮನೆ ಕಟ್ಟುವಲ್ಲಿ ಬಳಸುವುದಿಲ್ಲವಂತೆ. ಹಾಗೆ ಬಳಸಿದರೆ ಅದರೊಳಗೆ ವಾಸಿಸುವ ಜನ ಅನೇಕ ಕಂಟಕಗಳನ್ನೆದುರಿಸಬೇಕಾಗುತ್ತದಂತೆ.[3] ಮನೆಯಲ್ಲಿ ಉಪ್ಪು ಚೆಲ್ಲಿದರೆ ಸಂಸಾರದಲ್ಲಿ ಜಗಳವಾಗುತ್ತದಂತೆ. ಮನೆ ಬಾಗಿಲು ಉತ್ತರಕ್ಕಿರಬಾರದು, ಹೊಸ ಮನೆಗೆ ಹೋಗುವಾಗ ಶಾಂತಿ ಮಾಡಿಸಬೇಕು ಮತ್ತು ಹಾಲು ಉಕ್ಕಿಸಬೇಕು, ಬಾಗಿಲ

---

[1] *Folklore from Aadms County Illinois*, items 3488, 3495, 3496.
[2] *Encyclopaedia of Superstition* by E. and M. A. Radford, pp. 71–73.
[3] *The Science of Folklore* by A. H. Krappe, p. 226.

ಚಿಲಕ ಅಲ್ಲಾಡಿಸಬಾರದು, ಇತ್ಯಾದಿ ನಂಬಿಕೆಗಳು ಕರ್ಣಾಟಕದ ಕೆಲವು ಭಾಗಗಳಲ್ಲಿ ಚಾಲ್ತಿಯಲ್ಲಿವೆ.

ಪೌರಾಣಿಕ ವಸ್ತುಗಳಿಗೆ ಸಂಬಂಧಿಸಿದ ಮೂಢ ನಂಬಿಕೆಗಳು ಎಲ್ಲ ಕಡೆಯೂ ಯಥೇಚ್ಛವಾಗಿವೆ. ಗಣೇಶ ಹುಟ್ಟಿದಾಗ ಶಿವಪಾರ್ವತಿಯರು ದೇವತೆಗಳನ್ನು ಊಟಕ್ಕೆ ಕರೆಯುತ್ತಾರೆ. ಶನಿಯನ್ನು ಕರೆಯುವುದು ಮರೆತುಹೋಗುತ್ತದೆ. ಆದರೂ ಶನಿ ಭೋಜನಕೂಟಕ್ಕೆ ಹೋಗಿ ಮಗುವನ್ನು ಕೆಕ್ಕರಿಸಿ ನೋಡುತ್ತಾನೆ. ಕೂಡಲೇ ಮಗುವಿನ ತಲೆಬಿದ್ದುಹೋಗುತ್ತದೆ. ದೇವತೆಗಳು ಆನೆಯ ತಲೆಯನ್ನು ತಂದು ಅಂಟಿಸಿ ಮಗುವನ್ನು ಬದುಕಿಸುತ್ತಾರೆ.[1] ಈ ಕಥೆಯ ಮತ್ತೊಂದು ಪಾಠಾಂತರವೂ ಉಂಟು. ಪಾರ್ವತಿ ಗಣೇಶನನ್ನು ಕಾವಲಿಗೆ ನಿಲ್ಲಿಸಿ ತಾನು ಸ್ನಾನಗೃಹದಲ್ಲಿ ಮೀಯುವುದು, ಒಳಗೆ ಪ್ರವೇಶಿಸಲು ಪ್ರಯತ್ನಿಸಿದ ಈಶ್ವರನನ್ನು ಅವನು ತಡೆಯುವುದು, ಕೋಪರುದ್ರನಾದ ಶಿವ ಅವನನ್ನು ಕೊಂದುದು, ಪಾರ್ವತಿಯ ದುಃಖನಿವಾರಣೆಗಾಗಿ ಬಡಗಣ ಕಡೆಗೆ ಮುಖವಾಗಿ ಮಲಗಿದ್ದ ಆನೆಯ ತಲೆಯನ್ನು ತರಿಸಿ ಅಂಟಿಸಿ ಬದುಕಿಸಿದುದು—ಇದು ಬದಲು ಕತೆ. ಪ್ರಸಿದ್ಧವಾದ ಮತ್ತೊಂದು ಪೌರಾಣಿಕ ಕಥೆಯನ್ನು ಸಹ ಇಲ್ಲಿ ಉದ್ಧರಿಸುವುದುಚಿತವೆಂದು ಕಾಣುತ್ತದೆ. ಮದುವೆಯಾದ ಕೂಡಲೇ ಗಾಂಧಾರಿಯ ಗಂಡ ಸತ್ತುಹೋಗುವುದಾಗಿ ಶಾಪವಿತ್ತಂತೆ. ಅದಕ್ಕಾಗಿ ಅವಳನ್ನು ಮೊದಲು ಹೋತನಿಗೆ ಮದುವೆ ಮಾಡುತ್ತಾರೆ. ಅದು ಸತ್ತುಹೋಗುತ್ತದೆ. ಅನಂತರ ಧೃತರಾಷ್ಟ್ರನೊಡನೆ ಅವಳ ಮದುವೆಯಾಗುತ್ತದೆ.

ಯಜ್ಞಯಾಗಾದಿಗಳಲ್ಲಿ ಬಲಿಕೊಡುವ ಪರಿಪಾಠ ಬಂದದ್ದು ಭೂತ ಪಿಶಾಚಿ ಮೊದಲಾದ ಅಮಾನುಷ ಶಕ್ತಿಗಳನ್ನು ತಣಿಸಿದರೆ ಅವುಗಳನ್ನೊಲಿಸಿಕೊಳ್ಳಬಹುದು, ಅವರಿಂದ ಶುಭವಾಗುತ್ತದೆ ಎಂಬ ದೃಷ್ಟಿಯಿಂದ. ಮನುಷ್ಯ ತನ್ನ ಸ್ವಭಾವವನ್ನು ಅವುಗಳಿಗೂ ಆರೋಪಿಸುತ್ತಾನೆ. ಕೆರೆಗೆ ಹಾರದಲ್ಲಿ ಬರುವ ಭಾಗೀರಥಿಯ ಬಲಿದಾನ ಪ್ರಕರಣವನ್ನಿಲ್ಲಿ ನೆನೆಸಿಕೊಳ್ಳಬಹುದು. ಬೆಂಗಳೂರು ಕೆಂಪೇಗೌಡ ಕೋಟೆ ಕಟ್ಟುವಾಗ ಸೊಸೆ ಲಕ್ಷ್ಮಮ್ಮ ಆಹುತಿಯಾಗಬೇಕಾಯಿತು. ಈಜಿಪ್ಟಿನ ಫ್ಯಾರೋ ದೊರೆಗಳು ಪಿರಮಿಡ್ಡುಗಳ ಗೋಡೆಗಳ ನಡುವೆ ಮಕ್ಕಳನ್ನಿಟ್ಟು ಇಟ್ಟಿಗೆಗಳನ್ನು ಕಟ್ಟಿಸುತ್ತಿದ್ದರಂತೆ. ಆ ಕ್ರೂರಕೃತ್ಯ ನಿಂತದ್ದು ಮೋಸೆಸ್‌ನಿಂದ. ಕೋಪನ್ ಹೇಗನ್‌ನಲ್ಲಿಯೂ ಇಂಥದೇ ಘಟನೆಗಳು ನಡೆಯುತ್ತಿದ್ದುವೆಂದು ಫಿಲಿಪ್ ಎಫ್. ವಾಟರ್‌ಮನ್ ವರದಿ ಮಾಡಿದ್ದಾರೆ. ಸ್ವಲ್ಪ ನೈವೇದ್ಯ ನೀಡಿ ಹೆಚ್ಚು ಪಡೆಯಬೇಕೆನ್ನುವ ಆಸೆಯೂ ಇಂಥ ಬಲಿಗಳ ಹಿನ್ನೆಲೆಯಲ್ಲಿದೆ. ಒಂದು ತೊಟ್ಟು ನೀರು ನೆಲಕ್ಕೆ ಸುರಿದರೆ ಮಳೆ ಬರುತ್ತದಂತೆ.

ಜೀವನದಲ್ಲಿ ಹಾಗೂ ಸುತ್ತಮುತ್ತ ನಡೆಯುವ ಘಟನೆಗಳಿಗೆ ಕಾರ್ಯಕಾರಣ ಸಂಬಂಧವನ್ನು ಕಲ್ಪಿಸಬೇಕೆಂಬ ಭಾವನೆ ಮಾನವ ಸಹಜ ಗುಣ. ಇದು ಭೂಮಿಯ ಮೇಲೆ ಹುಟ್ಟಿದವರೆಲ್ಲರಿಗೂ ಸಮಾನವಾಗಿರುವಂಥ ಧರ್ಮ. ಈ ವಿಷಯದಲ್ಲಿ ವಿದ್ಯಾ

1 *The Story of Superstition* by Philip F. Waterman, p. 138.

ವಂತ ಅವಿದ್ಯಾವಂತರೆಂಬ ಭೇದವಿಲ್ಲ. ಅವರವರ ಬುದ್ಧಿ ಶಕ್ತಿ ವೀಕ್ಷಣ ಸಾಮರ್ಥ್ಯ ಮತ್ತು ಮನೋಧರ್ಮಗಳಿಗನುಗುಣವಾಗಿ ಕಾರ್ಯಕಾರಣ ಸಂಬಂಧ ಪ್ರಜ್ಞೆ ವಿಕಾಸಗೊಳ್ಳುತ್ತದೆ. ಅಸಮರ್ಪಕ ಜ್ಞಾನ, ಅಜ್ಞಾನ, ದೋಷಯುಕ್ತವಾದ ವೀಕ್ಷಣೆ, ಇಂದ್ರಿಯಾನುಭವ ನ್ಯೂನತೆ, ಅವಸರದ ನಿರ್ಣಯ, ಮತ್ತು ತರ್ಕವಿಚಾರಗಳ ಆಧಾರವಿಲ್ಲದ ಕಲ್ಪನೆಗಳು ಮೂಢ ಅಥವಾ ಸಟೆ ನಂಬಿಕೆಗಳ ಹುಟ್ಟಿಗೆ ಕಾರಣ. ಪರಸ್ಪರ ಸಂಬಂಧವಿಲ್ಲದ ವಸ್ತುಗಳಲ್ಲಿ ಸಂಬಂಧ ಕಲ್ಪಿಸಿ, ಅವುಗಳಿಗೆ ಕಲ್ಪಿತ ಪರಿಣಾಮಗಳನ್ನು ಆರೋಪಿಸುವುದರಿಂದ ಅವು ವೃದ್ಧಿ ಹೊಂದುತ್ತವೆ. ಹಲ್ಲಿಯ ಲೊಚಲೊಚಕ್ಕೂ ಮದುವೆಯ ಸುದ್ದಿಗೂ, ಪ್ರಯಾಣೋದ್ದೇಶಕ್ಕೂ ಬೆಕ್ಕು ಅಡ್ಡ ಬರುವುದಕ್ಕೂ ಏನು ಸಂಬಂಧ? ಮೂಲಕೃತಿಯ ಗುಣ ಛಾಯಾಕೃತಿಗೂ ಅನ್ವಯಿಸುತ್ತದೆ, ಸಾದೃಶ್ಯ ಸಾದೃಶ್ಯವನ್ನು ಸೃಷ್ಟಿಸುತ್ತದೆ ಎಂಬ ತಿಳಿವಳಿಕೆ ಅನೇಕ ಮೌಢ್ಯಗಳ ಸೃಷ್ಟಿಗೆ ಹೇತುವಾಗುತ್ತದೆ. ಮೀನು ಸಿಗದಿದ್ದರೆ ಮೀನಿನ ಪ್ರತಿಮೆ ಮಾಡಿ ನೀರೊಳಗೆ ಬಿಡುವುದರಿಂದ ಮೀನು ದಂಡಿಯಾಗಿ ಸಿಗುತ್ತದೆಂದು ಬ್ರಿಟಿಷ್ ಕೊಲಂಬಿಯಾದ ಕೆಂಪು ಇಂಡಿಯನರ ನಂಬಿಕೆ. ಅಂತೆಯೇ ಆಗದವರ ಪ್ರತಿಮೆಯನ್ನು ಸ್ಮಶಾನದಲ್ಲಿಟ್ಟು ಸೂಜಿ ದಬ್ಬಳಗಳಿಂದ ಚುಚ್ಚಿ, ಚಿತ್ರಹಿಂಸೆ ಕೊಟ್ಟು, ಕೊನೆಗೆ ಕತ್ತರಿಸಿದರೆ, ಮೂಲ ವ್ಯಕ್ತಿ ಹತನಾಗುತ್ತಾನೆಂಬುದು ಭಾರತೀಯರ ಭಾವನೆ. ನಾಯಕರ ಪ್ರತಿಮೆಗಳನ್ನು ಸುಡುವ ಉದ್ದೇಶವೇ ಇದು. ಪರಸ್ಪರ ಸಂಬಂಧ ಸಂಪರ್ಕವುಳ್ಳ ಪದಾರ್ಥಗಳ ಪರಸ್ಪರ ಪ್ರಭಾವದಿಂದಾಗಿ ಎಷ್ಟೋ ನಂಬಿಕೆಗಳು ಮೊಳೆಯುತ್ತವೆ. ಯಾವನಾದರೂ ವ್ಯಕ್ತಿಯ ಉಗುರು ಕೂದಲು ಸಿಕ್ಕಿದ್ದಾದರೆ ಮಾಟಗಾರರು ಮಾಟ ಮಾಡಿ ಅವನನ್ನು ದುರ್ಬಲಗೊಳಿಸಬಹುದಂತೆ, ಇಲ್ಲವೆ ಮರುಳುಗೊಳಿಸಬಹುದಂತೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವನನ್ನು ಕೊಲೆಮಾಡಬಹುದಂತೆ. ಈ ಸಾದೃಶ್ಯ ಮತ್ತು ಸಂಪರ್ಕ ಮೂಲ ಪರಸ್ಪರ ಪ್ರಭಾವ ತತ್ವಗಳು ಅನಾಗರಿಕ ಮಾನವನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿರುವುದುಂಟು. ಹೆಣದ ಮುಂದೆ ಸಾಯುವಾಗ ಕನ್ನಡಿಗಳನ್ನು ಮುಚ್ಚುವುದು ಯಹೂದ್ಯರಲ್ಲಿರುವ ವಾಡಿಕೆ. ಅವನು ಬದುಕಿದ್ದಾಗ ಪ್ರತಿನಿತ್ಯ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುತ್ತಿದ್ದನಷ್ಟೆ. ಅಭ್ಯಾಸವಶವಾಗಿ ಅವನ ಆತ್ಮ ಕನ್ನಡಿಯಲ್ಲಿ ನಿಂತುಬಿಡದೆ ಸ್ವರ್ಗಕ್ಕೆ ಸುಖವಾಗಿ ಪ್ರಯಾಣ ಮಾಡಲಿ ಎನ್ನುವುದೇ ಈ ವಾಡಿಕೆಯ ಉದ್ದೇಶ. ಮನುಷ್ಯರ ಗುಣವರ್ತನೆಗಳನ್ನು ಪ್ರಾಣಿ ಹಾಗೂ ಸಸ್ಯವರ್ಗಗಳಿಗೆ ಆರೋಪಿಸುವುದರಿಂದ ಕೆಲವು ನಂಬಿಕೆಗಳು ಜನ್ಮತಾಳುತ್ತವೆ. ಸರ್ವಚೇತನವಾದವೂ ಇದರ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿರಬೇಕು. ಜೇವು ಅರಳಿಗಳ ಮದುವೆಯೇ ಇದಕ್ಕೆ ಸಾಕ್ಷಿ.

ಮಾನವನ ವೈಜ್ಞಾನಿಕ ಮತಿ ಪ್ರಖರವಾದಂತೆಲ್ಲ ಮೂಢ ನಂಬಿಕೆಗಳು ಕಡಮೆಯಾಗುವುದು ಸಹಜವೇ. ಆದರೆ ಅವುಗಳಲ್ಲಿ ಎಲ್ಲವೂ ಮಾಯವಾಗುವುದಿಲ್ಲ. ಕೆಲವು ವಿಸ್ಮೃತಿಯ ಗರ್ಭದಲ್ಲಿ ಮರೆಯಾಗುತ್ತವೆ; ಹಲವು ಉಡ ಹಿಡಿತದಂತೆ ಸಮಾಜಕ್ಕೆ ಅಂಟಿಕೊಂಡಿರುತ್ತವೆ; ಜತೆಗೆ ಹೊಸವು ಬಂದು ಸೇರಿಕೊಳ್ಳುತ್ತವೆ. ವಿಜ್ಞಾನ ಯುಗದಲ್ಲಿ

ಹೊಸ ಸಟಿನಂಬಿಕೆಗಳಿಗೆ ಅವಕಾಶವಿದೆಯೇ ಎಂದು ಪ್ರಶ್ನಿಸಬಹುದು. ಅವಕಾಶವಿದೆಯೆಂದು ಖಚಿತವಾಗಿ ಹೇಳಬಹುದು. ಸೃಷ್ಟಿಯ ಸಕಲ ರಹಸ್ಯಗಳು ಮಾನವ ಮತಿಯ ಹಿಡಿತಕ್ಕೆ ಸಿಕ್ಕಿಲ್ಲ. ವೈಜ್ಞಾನಿಕ ಪ್ರಯೋಗಗಳಿಗೆ ಅವು ನಿಲುಕುವ ತನಕ ಮಾನವ ಅವುಗಳ ಬಗೆಗೆ ಆಶ್ಚರ್ಯ ವ್ಯಕ್ತಪಡಿಸುತ್ತಾನೆ, ತನಗೆ ತೋರಿದಂತೆ ವಿವರಣೆ ನೀಡುತ್ತಾನೆ. ಅಷ್ಟೇ ಅಲ್ಲ ದಿಟನಂಬಿಕೆ ಯಾವುದು ಸಟಿ ನಂಬಿಕೆ ಯಾವುದು ಎನ್ನುವುದರ ಬಗೆಗೂ ಈಗ ಇದಮಿತ್ಥಂ ಎನ್ನುವಂತಿಲ್ಲ. ತಾರ್ಕಿಕವಾಗಿ ವೈಜ್ಞಾನಿಕ ಮತಿ ಸಂಶೋಧನೆ ನಡೆಸಿದ್ದಾದರೆ ಕೆಲವು ಮೂಢನಂಬಿಕೆಗಳು ದಿಟದ ನಂಬಿಕೆಗಳಾಗಿ ಪರಿಣಮಿಸುವ ಸಂಭವವುಂಟು. ಯುಗಾದಿಯಲ್ಲಿ ಬೇವು-ಬೆಲ್ಲ ತಿನ್ನುವುದರ ಹಿಂದಿನ ಭಾವನೆ ಏನೇ ಇರಲಿ. ಅದು ಆರೋಗ್ಯಕರವೆನ್ನುವುದಂತು ಸತ್ಯ. ವಿಜ್ಞಾನ ಅದ್ಭುತವಾಗಿ ಬೆಳೆದಿರುವ ಪಾಶ್ಚಾತ್ಯ ಸಮಾಜದಲ್ಲಿಯೇ ಭೂತಪ್ರೇತಗಳ ಬಗ್ಗೆ, ಭವಿಷ್ಯವಾದಿಗಳ ಬಗ್ಗೆ ವಿಶ್ವಾಸವುಂಟು.[1] ಭೂತಗಳ ಬಗ್ಗೆ ವೈಜ್ಞಾನಿಕವಾಗಿ ಸಂಶೋಧನೆ ನಡೆಯುತ್ತಿದೆಯೆಂಬ ವಿಚಾರವೂ ಗಮನಾರ್ಹ.

"ಆದಿಮಾನವನ ಮಾನಸಿಕ ಮತ್ತು ಆಧ್ಯಾತ್ಮಿಕ ಜೀವನ ಪ್ರಾಥಮಿಕಾವಸ್ಥೆಯ ಭೌತವಿಜ್ಞಾನವನ್ನವಲಂಬಿಸಿದ್ದರಿಂದ ಅವನು ಮೂಢನಂಬಿಕೆಗಳನ್ನವಲಂಬಿಸಿದ್ದು ಹೆಚ್ಚಲ್ಲ; ಆದರೆ ಆಧುನಿಕ ವಾತಾವರಣದಲ್ಲಿ ಬೆಳೆದ ಜನರನ್ನು ನೋಡುವಾಗ ಅವರ ವಿಚಾರದೂರವಾದ ನಂಬಿಕೆಗಳು ಆಶ್ಚರ್ಯವುಂಟುಮಾಡುತ್ತವೆ"[2] ಎಂದು ನುಡಿಯುತ್ತ ವೇಲ್ಯಾಂಡ್ ಡಿ. ಹ್ಯಾಂಡ್‌ರವರು ಅನೇಕ ನಿದರ್ಶನಗಳನ್ನು ನೀಡುತ್ತಾರೆ. ನ್ಯೂಯಾರ್ಕ್ ನಗರದ ಬಂಡವಾಳಗಾರ ಅದೃಷ್ಟದ ಕೊರಳುಪಟ್ಟಿಯಿಲ್ಲದೆ ಬಂಡವಾಳ ಪತ್ರದ ಮಾರುಕಟ್ಟೆಗಿಳಿಯುವುದಿಲ್ಲ. ತಮ್ಮ ಮಕ್ಕಳ ಅಸ್ತಮ ಮೊದಲಾದ ರೋಗಗಳನ್ನು ಗುಣಪಡಿಸುವ ಸಲುವಾಗಿ ಉತ್ತರ ಕ್ಯಾರೊಲೀನಾದ ಪರ್ವತಾರೋಹಿಗಳು ಇಬ್ಭಾಗಗೊಂಡ ಮರದ ಹೋಳುಗಳ ನಡುವೆ ಅವರನ್ನು ನುಗ್ಗಿಸುತ್ತಾರಂತೆ. ಭಾರಿ ಪ್ರಮಾಣದ ಮೀನುಗಳನ್ನು ಸಂಗ್ರಹಿಸುವ ಸಲುವಾಗಿ ಆಂಗ್ಲ ಬೆಸ್ತರು ಮೊದಲು ಹಿಡಿದ ಮೀನುಗಳನ್ನು ನೀರಿಗೆ ಬಿಟ್ಟುಬಿಡುತ್ತಾರಂತೆ. ಅಮೇರಿಕೆಯ ಹಿಂದಿನ ಅಧ್ಯಕ್ಷರೊಬ್ಬರು ಮೊದಲ [illegible]

[1] In England, One person in six believes in ghosts and nearly one quarter are uncertain whether or not they exist; one person in fourteen thinks he or she has actually seen or heard a ghost. In England, one in three has been to a fortune teller; One in ten believes in lucky numbers etc.—*The Psychology of Superstition*; Gustar Jahoda, p. 25

[2] Leaving primitive man out of account, since much of his mental and spiritual life is based on but the most rudimentary knowledge of the physical world that surrounds him, let us look rather to representative people of our own time and condition for examples that will suggest the total range of irrational beliefs and practices that help to make up the total body of modern-day mental baggage known as superstition—*American Folklore*: Ed. by Tristram Coffin III, p. 245

ವನ್ನು ಜೇಬಿನಲ್ಲಿಟ್ಟುಕೊಂಡು ಚುನಾವಣಾ ಕಣಕ್ಕಿಳಿದರಂತೆ. ಮದ್ದಿಗೆಂದು ಬಳಸುವ ಗಿಡಮೂಲಿಕೆಗಳನ್ನು ಮುಗ್ಧ ಯುವಕ ಯುವತಿಯರೇ ಕೀಳಬೇಕಂತೆ. ಒಂದೇ ಬೆಂಕಿ ಕಡ್ಡಿಯಿಂದ ಮೂವರು ಸಿಗರೇಟು ಹಚ್ಚಿಕೊಳ್ಳಬಾರದಂತೆ. ಇಂಥ ಜನ ನಮ್ಮಲ್ಲಂತು ಕಣ್ಣಾಡಿಸಿದ ಕಡೆ ಸಿಗುತ್ತಾರೆ. "ಎಷ್ಟೋ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದ ಪ್ರೊಫೆಸರುಗಳೂ ವಿಜ್ಞಾನದ ಪಾಠಗಳನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಮರ್ಪಕ ವಾಗಿ ಬೋಧಿಸಿದರೂ ಮನೆಯಿಂದ ಹೊರಡುವಾಗ ರಾಹುಕಾಲ ಗುಳಿಕಕಾಲಗಳಿಗಾಗಿ ಕ್ಯಾಲೆಂಡರನ್ನೊ ಪಂಚಾಂಗವನ್ನೊ ನೋಡುವುದನ್ನು ನಾವು ಕಂಡಿಲ್ಲವೆ?"[1] ಎಂದು ಕುವೆಂಪು ಅವರೇ ಪ್ರಶ್ನಿಸಿದ್ದಾರೆ. ಅಷ್ಟಗ್ರಹ ಕೂಟದ ಅಮಂಗಳ ಪರಿಹಾರಾರ್ಥವಾಗಿ ಮಹಾನಾಯಕರು ಮಂತ್ರತಂತ್ರ ಮೊದಲಾದ ಮೌಢ್ಯಗಳಲ್ಲಿ ನಿರತರಾಗುವುದುಂಟು. ಈಗಲೂ ಜನಿವಾರ ಕಟ್ಟಿಕೊಳ್ಳುವವರು, ನಾಮವಿಭೂತಿ ಬಳಿದುಕೊಳ್ಳುವವರು, ಪುರೋ ಹಿತರ ಪಾದ ತೊಳೆದು ನೀರು ಕುಡಿಯುವವರು, ಗ್ರಹಣಕಾಲದಲ್ಲಿ ತಂಬಟೆ ಬಡಿದು ಸೂರ್ಯನನ್ನು ರಾಹುವಿನಿಂದ ಪಾರುಮಾಡುವ ಆಸ್ತಿಕ ಮಹಾಶಯರು, ದೇವರಿಗೆ ಹರಕೆ ಕಟ್ಟಿಕೊಂಡು ನಡೆಯುವವರು, ಬಾಯಿಬೀಗ ಚುಚ್ಚಿಸಿಕೊಳ್ಳುವವರು, ಮಕ್ಕಳಿಗೆ ಸಿಡಿ ಯಾಡಿಸುವವರು, ದೇವರಿಗೆ ಮುಡಿ ಒಪ್ಪಿಸುವವರು, ಸತ್ಯನಾರಾಯಣ ನಾಗರಪೂಜೆ ಗಳಲ್ಲಿ ನಂಬಿಕೆ ಇಡುವವರು, ಕುಡಿಯದ ನಾಗರಕಲ್ಲಿಗೆ ಹಾಲೆರೆಯುವವರು, ಗಂಗಾ ನದಿಯ ಕೊಳೆನೀರನ್ನು ತೀರ್ಥವೆಂದು ತರುವವರು, ಮನೆಯ ಸೂರಿಗೆ ಬೂದುಗುಂಬಳ ಕಾಯಿ ಕಟ್ಟುವವರು, ಹುಣಸೆಯ ಮರದಲ್ಲಿ ದೆವ್ವ ಕಾಣುವವರು, ದೊಡ್ಡ ಪದವಿಗಾಗಿ ಹಸ್ತ ನೋಡಿಸುವವರು, ಕ್ಷೌರಕ್ಕೆ ತಿಥಿನಕ್ಷತ್ರ ನೋಡುವವರು, ಇತ್ಯಾದಿ ಮೂಢನಂಬಿಕೆ ಗಳಲ್ಲಿ ಅಂಧಾಭಿಮಾನವುಳ್ಳ ಜನ ನೂರಕ್ಕೆ ತೊಂಬತ್ತು ಭಾಗ ಸಿಗುತ್ತಾರೆ.

ಒಂದು ಕಡೆ ಮೂಢನಂಬಿಕೆ ಮೂಡಿತೆಂದರೆ ಅದು ಸಾಂಕ್ರಾಮಿಕ ರೋಗದಂತೆ ಕ್ಷಿಪ್ರ ವಾಗಿ ಊರಿಂದೂರಿಗೆ, ದೇಶದಿಂದ ದೇಶಕ್ಕೆ ಹರಡುತ್ತದೆ. ಅವು ಜಾತಿವರ್ಣಗಳನ್ನು, ಸಾಮಾಜಿಕ ವ್ಯವಸ್ಥೆಗಳನ್ನು, ಮತಭಾಷೆಗಳ ಕೋಟೆಗಳನ್ನು, ರಾಜಕೀಯ ಹಾಗೂ ಭೌಗೋಲಿಕ ಗಡಿಗಳನ್ನು, ವೈಜ್ಞಾನಿಕ ಪ್ರಯೋಗಶಾಲೆಗಳನ್ನು ಭೇದಿಸಿಕೊಂಡು ಮುನ್ನುಗ್ಗುತ್ತವೆ. ಅಂಟುಜಾಡ್ಯಗಳನ್ನು ತಡೆಯುವ ಹುನಾರುಗಳು ಈಗ ಗೊತ್ತಿದೆ. ಇವನ್ನು ತಡೆಗಟ್ಟುವ ಉಪಾಯ ಯಾರಿಗೂ ಗೊತ್ತಿಲ್ಲ. ಬುದ್ಧಿಯನ್ನು ಮಾರಿಕೊಂಡ ಅಥವಾ ಅಲಸ ಬುದ್ಧಿಯ ಜನರ ಸಮೂಹದಲ್ಲಂತು ಅವು ಬಹುಬೇಗನೆ ಹಬ್ಬುತ್ತವೆ. ಅನುಕರಣ ರೂಪಾಂತರ ಸಂಸರ್ಗ ಸಾಹಚರ್ಯಗಳ ಮೂಲಕ ಅವು ದೇಶಾಟನೆ ಮಾಡುತ್ತವೆ. ನಿಷೇಧಗಳು (Taboos) ಅಥವಾ ಮುಟ್ಟುತಟ್ಟುಗಳು ಹೇಗೆ ಘಟಕದಿಂದ ಘಟಕಕ್ಕೆ ವ್ಯಾಪಿಸುತ್ತವೆನ್ನುವುದಕ್ಕೆ ವೇಲ್ಯಾಂಡ್ ಡಿ. ಹ್ಯಾಂಡ್ ಸ್ವಾರಸ್ಯವಾದ ನಿದರ್ಶನಗಳನ್ನು ಉದಾಹರಿಸಿದ್ದಾನೆ. ನಾವಿಕ ಸಿಳ್ಳೆಹಾಕುವುದರಿಂದ ಬಿರುಗಾಳಿ ಏಳುತ್ತ

[1] ಪಕ್ಷಿನಮನ: ಕುವೆಂಪು, ಪುಟ 249

ದಂತೆ. ಆದ್ದರಿಂದ ಅದು ಹಡಗಿನಲ್ಲಿ ನಿಷಿದ್ಧ. ಅಂಥದೇ ನಿಷೇಧ ಗಣಿಗಳಲ್ಲಿಯೂ ಇತ್ತು. ರಂಗಮಂದಿರವಲ್ಲಿ, ಅದರಲ್ಲಿಯೂ ನೇಪಥ್ಯ ಗೃಹದಲ್ಲಿ ಅದು ಬಹಿಷ್ಕೃತ. ಕೊನೆಗೆ ಈ ಮುಟ್ಟು ತಟ್ಟು ವರ್ತಮಾನ ಪತ್ರಿಕೆಗಳ ಕೋಣೆಗಳಿಗೂ ಪ್ರವೇಶಿಸಿತು. ಸಿಳ್ಳೆ ಅಪಶಕುನದ ಸಂಕೇತವೆಂದು ತಿಳಿಯಬಂದದ್ದರಿಂದ ಅದನ್ನು ಅನೇಕ ಕಡೆ ಅನ್ವಯ ಮಾಡಿಕೊಳ್ಳಲಾಯಿತು. ಅಂತೆಯೇ

ಸಿಳ್ಳೆ ಹಾಕುವ ಹೆಣ್ಣು ಕೊಕ್ಕೊ ಕೂಗುವ ಹೇಂಟೆ
ದುರ್ವಿಧಿಯನಪ್ಪುವುದು ಸತ್ಯವಿದು ನಂಬು

ಜರ್ಮನಿಯಲ್ಲಿಯೂ ಹೆಣ್ಣಿನ ಸಿಳ್ಳೆಯ ಬಗ್ಗೆ ಇದೇ ತಿಳಿವಳಿಕೆಯಿದೆ.[1]

ಕೆಲವು ನಂಬಿಕೆಗಳು ದೇಶದಿಂದ ದೇಶಕ್ಕೆ ಪ್ರಯಾಣಮಾಡುವಂತೆ, ಹಲವು ನಂಬಿಕೆಗಳು ಪ್ರಾದೇಶಿಕವಾಗಿಯೇ ಉಳಿಯುವುದುಂಟು. ರಾಜಾಸ್ಥಾನದ ನಂಬಿಕೆಗಳು ಉತ್ತರ ಪ್ರದೇಶದಲ್ಲಿ ಕಾಣದಿರಬಹುದು. ಭಾದ್ರಪದಮಾಸದಲ್ಲಿ ಹಸು, ಶ್ರಾವಣದಲ್ಲಿ ಕುದುರೆ, ಮಾಘದಲ್ಲಿ ಎಮ್ಮೆ ಈದರೆ ಒಡೆಯ ಸಾಯುತ್ತಾನೆಂಬ ನಂಬಿಕೆ ರಾಜಾಸ್ಥಾನದ್ದಾದರೆ, ಯಾವನಾದರೂ ಒಬ್ಬ ಮನುಷ್ಯನೋ ಒಂದು ಪ್ರಾಣಿಯೋ ಸಾಯಬಹುದೆಂಬುದು ಉತ್ತರಪ್ರದೇಶದ ನಂಬಿಕೆ. ರಾಜಾಸ್ಥಾನದ ನಂಬಿಕೆಗಳ ಪ್ರಕಾರ ಭಾದ್ರಪದದಲ್ಲಿ ಮೂಡಣಗಾಳಿ, ಆಶ್ವಿಯುಜದಲ್ಲಿ ಪಡುವಣ ಗಾಳಿ ಬೀಸಿದರೆ ಬೆಳೆ ವಿಪುಲ; ಮಾರ್ಗಶಿರದಲ್ಲಿ ಮಳೆ ಹುಯ್ದರೆ ವರಿಷ್ಠ ಪ್ರಮಾಣದ ಬೆಳೆ, ಫಾಲ್ಗುಣದಲ್ಲಿ ಹುಯ್ದರೆ ನಷ್ಟ; ನರಿ ಹಗಲು ಊಳಿದರೆ ಕ್ಷಾಮ; ಬೆಳಗಿನ ಹೊತ್ತಿನಲ್ಲಿ ಗುಡುಗಿದರೆ ಮಳೆ ಬರುವುದು ಖಂಡಿತ; ಆಗಸದಲ್ಲಿ ಹಳದಿ ಬಣ್ಣ ಹರಡಿದರೆ ಮಳೆ ತಡವಾಗಿ ಬರುತ್ತದೆ, ಕೆಂಪು ಬಣ್ಣ ಹರಡಿದರೆ ಇಲ್ಲ; ಗುಬ್ಬಚ್ಚಿ ನೀರಿನಲ್ಲಿ ಸ್ನಾನ ಮಾಡಿದರೆ ಮಳೆ ತಪ್ಪುವುದಿಲ್ಲ; ಬುಧವಾರದ ಬಿತ್ತನೆ ಶುಕ್ರವಾರದ ಒಕ್ಕಣೆ ಮೇಲು; ಚಿತ್ರಾ ನಕ್ಷತ್ರದಲ್ಲಿ ಬಿತ್ತಿದ ಗೋಧಿ, ಆದ್ರ್ರಾನಕ್ಷತ್ರದಲ್ಲಿ ಹಾಕಿದ ಬತ್ತ ಹುಲುಸಾಗಿ ಬೆಳೆಯುತ್ತವೆ.[2]

ಸಟೆನಂಬಿಕೆಗಳ ಕತೆ ಹೀಗಾದರೆ ದಿಟನಂಬಿಕೆಗಳು ಮಾನವನ ಸರ್ವತೋಮುಖವಾದ ಸಾಂಸ್ಕೃತಿಕ ವಿಕಾಸಕ್ಕೆ ಸಾಧನಗಳಾಗಿವೆಯೆಂಬುದು ಸರ್ವವೇದ್ಯ ಸಂಗತಿಯಾಗಿದೆ. ಅವುಗಳ ಎಣಿಕೆ ಆದಿಶೇಷನಿಗೂ ಸಾಧ್ಯವಿಲ್ಲ. ಅವು ಸಾಮಾನ್ಯವಾಗಿ ದೀರ್ಘವೀಕ್ಷಣೆಯಿಂದ, ಇಂದ್ರಿಯಜ್ಞಾನದಿಂದ ಪಕ್ವಾನುಭವದಿಂದ, ವೈಚಾರಿಕಮಂಥನದಿಂದ ಉದ್ಭವವಾದುದರಿಂದ ಅವು ಭದ್ರವಾದ ನೆಲಗಟ್ಟಿನ ಮೇಲೆ ನಿಂತಿವೆ. ಯುಗಯುಗಗಳ ಬಹುಜನರ ಜೀವನವೇ ಅವುಗಳ ಪ್ರಯೋಗಶಾಲೆಯಾಗಿದೆ. ಆ ಶಾಲೆಯಲ್ಲಿ ಅವು ತೇರ್ಗಡೆ ಹೊಂದಿರುವುದರಿಂದಲೇ ಇಂದಿಗೂ ಮಾನ್ಯವಾಗಿವೆ. ಪ್ರಯತ್ನ-ಪ್ರಮಾದಗಳ ಪರ್ಯಾಯ ರೂಪದ ಕ್ರಿಯೆ ಪ್ರತಿಕ್ರಿಯೆಗಳ ಸಂಘರ್ಷದಲ್ಲಿ, ಪ್ರಾಯೋಗಿಕ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿರುವುದರಿಂದ ಆಧುನಿಕ ವಿಜ್ಞಾನಕ್ಕೆ ಅವು ತಳಹದಿಯಾಗಿವೆ

1 *American Folklore* : Ed. by Tristram Coffin III, p. 246-247
2 *Folk Culture and Oral Tradition* by S. L. Srivatsava.

ಎಂದರೆ ತಪ್ಪಾಗದು. ಒಟ್ಟಿನಲ್ಲಿ ಅವು ಮನುಕುಲದ ಇತಿಹಾಸರಚನೆಯಲ್ಲಿ, ಮಾನವನ ಹಣೆಬರಹವನ್ನು ತಿದ್ದುವುದರಲ್ಲಿ ಪ್ರಮುಖ ಪಾತ್ರವಹಿಸಿವೆ ಎಂದು ಧಾರಾಳವಾಗಿ ಹೇಳಬಹುದು.

ವೈದ್ಯಸಂಬಂಧವಾದ ನಂಬಿಕೆಗಳಲ್ಲಿ ಬಹುಭಾಗ ದಿಟವಾದುವೆಂಬುದನ್ನು ಹಿಂದೆ ನೋಡಿದೆ. ಉಗುರುನೀರು ಹಾಯಿಸಬಾರದು, ಉಗುರು ಕಡಿಯಬಾರದು, ಕೊಯ್ದ ಉಗುರನ್ನು ಹೊರಗೆ ಬಿಸಾಡಬೇಕು ಎಂದು ಹೇಳುವುದರ ಉದ್ದೇಶ ಅವುಗಳಲ್ಲಿರುವ ಕೊಳೆ ದೇಹಕ್ಕೆ ಸೇರಬಾರದೆಂಬುದು. ಬೇರೊಬ್ಬರ ಹಾಸುಗೆಯ ಮೇಲೆ ಮಲಗಬಾರದು, ಬೇರೊಬ್ಬರ ಬಟ್ಟೆ ಹೊದೆಯಬಾರದೆಂಬುದೂ ಇಂಥದೊಂದು ಉದ್ದೇಶದಿಂದಲೇ. ಹಾಗೆ ಮಲಗಿದರೆ ಅಥವಾ ಹೊದೆದರೆ ಚರ್ಮದ ರೋಗಗಳು ಅಂಟಬಹುದು. ಇಂತೆಯೇ ಮತ್ತೆ ಕೆಲವು ನಂಬಿಕೆಗಳ ಸಾರ್ಥಕತೆಯನ್ನು ಗಮನಿಸಬಹುದು. ಗಂಡಸರು ಅಪರೂಪವಾಗಿ ಹೆಂಗಸರು ವಿಶೇಷವಾಗಿ ಹಚ್ಚೆ ಹುಯ್ಯಿಸಿಕೊಳ್ಳುವ ಪದ್ಧತಿ ಅನೇಕ ಕಡೆ ಚಾಲ್ತಿಯಲ್ಲಿದೆ. ಹಾಗೆ ಹುಯ್ಯಿಸಿಕೊಳ್ಳುವುದರಿಂದ ನರಸಂಬಂಧವಾದ ಕಾಯಿಲೆಗಳು ಬರುವುದಿಲ್ಲವೆಂಬ ಎಣಿಕೆಯಿದೆ. ಇತ್ತೀಚೆಗೆ ತಾಮ್ರದ ಬಳೆ ತೊಟ್ಟುಕೊಳ್ಳುವುದು ಒಂದು ಶೋಕಿಯಾಗಿದೆ. ನರವ್ಯಾಧಿಗೆ ಅದು ಒಳ್ಳೆಯದೆಂದು ಹೇಳುತ್ತಾರೆ. ದನಗಳ ಚಪ್ಪೆಯ ಮೇಲೆ ಬರೆಹಾಕಿದರೆ ಚಪ್ಪೆರೋಗ ಬರುವುದಿಲ್ಲವೆಂಬ ಸಂಗತಿಯನ್ನಿಲ್ಲಿ ನೆನೆಯಬಹುದು. ಅರಿಸಿನ ಹಚ್ಚಿಕೊಳ್ಳುವುದು ಮುತ್ತೈದೆಯ ಲಕ್ಷಣವೆಂಬ ಗಣನೆಯಿದೆ. ಅರಿಸಿನದಲ್ಲಿ ಕ್ರಿಮಿನಾಶಕ ಶಕ್ತಿಯಿದೆ, ಚರ್ಮವನ್ನು ಹೊಳಪುಗೊಳಿಸುವ ಸಾಮರ್ಥ್ಯವಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಊಟಮಾಡಿದ ತಕ್ಷಣ ಮಲಗಬಾರದೆಂದು ಓದುಬರಹ ಬಾರದ ಹಿರಿಯರು ಸಹ ಹೇಳುತ್ತಾರೆ. ಇಂದಿನ ವೈದ್ಯಶಾಸ್ತ್ರವೂ ಅದನ್ನೇ ಸಾರುತ್ತದೆ. ಹವಾಮಾನ ಮತ್ತು ವ್ಯವಸಾಯಕ್ಕೆ ಸಂಬಂಧಿಸಿದ ನಂಬಿಕೆಗಳಲ್ಲಿ ಹಲವು ಇಂದಿಗೂ ನಿಜವಾಗಿದೆ. "ಅತ್ತದ ಮಳೆ ಹುಯ್ಯದಿದ್ದರೆ ಹೆತ್ತ ತಾಯಿ ಹಿಟ್ಟು ಕೊಡುವುದಿಲ್ಲ" "ಭರಣಿ ಹುಯ್ದರೆ ಧರಣಿಗೆ ಭಾಗ್ಯ" ಯಾವ ಮಳೆ ಹುಯ್ಯದಿದ್ದರೂ ಈ ಮಳೆಗಳು ಹುಯ್ಯಲೇಬೇಕು: ಸಾಮಾನ್ಯವಾಗಿ ಅವು ಹುಸಿಯುವುದಿಲ್ಲ. ಅವು ಹುಸಿಯಿತೆಂದರೆ ಬೆಳೆಗೆ ನಷ್ಟ ಎಂಬುದು ಈಗಲೂ ಸತ್ಯವಾಗಿದೆ. ಕೋಳಿ ಪುಕ್ಕ ಕಾಯಿಸಿದರೆ, ಮೊಟ್ಟೆ ಇರುವೆ ಗೂಡಿನಿಂದ ಹೊರಬಂದರೆ, ಮಿಡಿತೆಗಳು ಎದ್ದಾಡಿದರೆ, ಹೊತ್ತಿನ ಕಣ್ಣಿನಲ್ಲಿ ಮಿಂಚಿದರೆ, ಕಪ್ಪೆ ಎಡೆಬಿಡದೆ ವಟಗುಟ್ಟಿದರೆ ಮಳೆ ಕುಂತೇಟು ಎಂದು ಹೇಳುವುದುಂಟು. ಈ ಹೇಳಿಕೆಯಲ್ಲಿ ಸತ್ಯಾಂಶವಿಲ್ಲದಿಲ್ಲ. ಕಪ್ಪೆಗಳು ದೀರ್ಘವಾಗಿ ಗಟ್ಟಿಯಾಗಿ ವಟಗುಟ್ಟಿದರೆ ಮಳೆ ಬಹುಬೇಗನೆ ಬರುತ್ತದೆಂಬ ನಂಬಿಕೆ ಅಮೇರಿಕೆಯಲ್ಲಿಯೂ ಉಂಟು. ಚಂದ್ರನಿಗೆ ಸುತ್ತುಗಟ್ಟಿದರೆ ಮಳೆ ಬರುತ್ತದೆ (ತಿಂಗಳಿಗೆ ಸುತ್ತುಗಟ್ಟಿದರೆ ತಿಂಗಳು ಮಳೆಯಿಲ್ಲವೆಂದು ನಮ್ಮವರು ಹೇಳುತ್ತಾರೆ). ಪಡುವಣ ಗಾಳಿ ಬೀಸಿದರೆ ಮಳೆಯಿಲ್ಲ. ಪ್ರಾತಃಕಾಲದ ಮಳೆ ಮತ್ತು ಮುದುಕಿಯ ನೃತ್ಯ ಕ್ಷಿಪ್ರವಾಗಿ ಅಂತ್ಯಗೊಳ್ಳುತ್ತವೆ. ಅಪರಾಹ್ನ ಮೂರುಗಂಟೆಗೆ ಪ್ರಾರಂಭವಾದ ಮಳೆ ಮರುದಿನ ಅದೇ ಕಾಲದವರೆಗೆ ಇರುತ್ತದೆ (ಸಂಜೆ ಬಂದ ಮಳೆ

ಮತ್ತು ನೆಂಟ ಬೇಗನೆ ಹೋಗುವುದಿಲ್ಲವೆಂಬ ಹೇಳಿಕೆ ನಮ್ಮಲ್ಲಿದೆ). ಮುಸ್ಸಂಜೆಯಲ್ಲಿ ಗೂಬೆ ಕೂಗಿದರೆ ಮಳೆ ಖಂಡಿತ. ಕೋಳಿ ಮರಿಗಳು ಗಾಳಿಗೆದುರಾಗಿ ಪುಕ್ಕವೆತ್ತಿ ನಿಲ್ಲಿಸಿಕೊಂಡರೆ ಮಳೆ ತಪ್ಪುವುದಿಲ್ಲ. ಫೆಬ್ರುವರಿ ತಿಂಗಳಲ್ಲಿ ಮಳೆ ಮತ್ತು ಸೂರ್ಯರಶ್ಮಿಗಳು ಜತೆಜತೆಯಾಗಿ ಸುರಿದರೆ ಸಮೃದ್ಧವಾದ ಸುಗ್ಗಿ ಕೈಗೆ ಬರುತ್ತದೆ. ಮೇ ಒಂದನೆಯ ತಾರೀಖು ಸೂರ್ಯೋದಯಕ್ಕೆ ಮುಂಚೆ ಸೌತೆ ಮತ್ತು ಕಲ್ಲಂಗಡಿಗಳನ್ನು ನೆಟ್ಟರೆ ಉತ್ಕೃಷ್ಟವಾಗಿ ಬರುತ್ತವೆ.[1]

ದಿಟ ಹಾಗೂ ಸಟೆ ನಂಬಿಕೆಗಳ ನಡುವೆ ಗಡಿರೇಖೆ ಎಳೆಯುವುದಂತು ಕಷ್ಟ. ಉಸಿರಾಟದಷ್ಟೇ ಅವು ಬಾಳಿನ ಸಹಜಕ್ರಿಯೆಗಳಾಗಿವೆ. ದೇಹಾವಯವಗಳ ಪ್ರಜ್ಞೆಯಿಲ್ಲದೆಯೇ ಮನುಷ್ಯ ಅವನ್ನು ಬಳಸುತ್ತಾನಷ್ಟೆ. ನಂಬಿಕೆಗಳೂ ಅದೇ ರೀತಿ ಬಳಕೆಯಾಗುತ್ತವೆ. ನೋವು ಬಂದಾಗ ಮಾತ್ರ ಮೂಗು ಕಣ್ಣು ಕಿವಿ ಗಂಟಲು ಕೈಕಾಲು ಇವೆಯೆಂಬ ಅರಿವು ಮೂಡುತ್ತದೆ. ದೈಹಿಕ ಹಾಗೂ ಮಾನಸಿಕ ಲಕ್ಷಣಗಳು ವ್ಯಕ್ತಿಗಿಂದಿಲ್ಲದಂತೆ ಅನುವಂಶಿಕವಾಗಿ ವರ್ಗಾವಣೆಯಾಗುವಂತೆ ಅವು ಜೀವನವನ್ನು ಪ್ರವೇಶಿಸುತ್ತವೆ. ತೊಂದರೆಯಾದಾಗ ಮಾತ್ರ ಮೂಢನಂಬಿಕೆ ಎಂಬ ಅರಿವೆ ಮೂಡಬಹುದು. ಹುಟ್ಟುವುದಕ್ಕೆ ಮುಂಚೆಯೇ ಅವು ಸ್ಮೃತಿಕೋಶದಲ್ಲಿ ಸುಪ್ತಗೊಂಡಿರುವಂತೆ ತೋರುತ್ತವೆ. ಇದು ದಿಟ ನಂಬಿಕೆ, ಇದು ಸಟೆ ನಂಬಿಕೆಯೆಂದು ವಿಶ್ವಾಸಿಗಳೂ ವಿಚಾರ ಮಾಡುವುದಿಲ್ಲ. ವಿಚಾರ ಮಾಡದೆಯೇ ವೈದ್ಯರು ಬಿಳಿಕೋಟನ್ನು, ವಕೀಲರು ಕರಿಯಕೋಟನ್ನು ಆಸ್ತಾನಿಕರು ಕಮರಬಂದನ್ನು ತೊಡುತ್ತಾರೆ; ಗಾಡಿ ಕಟ್ಟುವಾಗ ಧೈತ ಮೂಕಿ ಸುಟ್ಟು ತಲೆಗೆ ಹೊತ್ತುಕೊಳ್ಳುತ್ತಾನೆ; ಹರಕೆ ಹೊತ್ತವ ಸಾರಸ್ವನ ಮುಂದೆ ಮರಿ ಕಡಿಯುತ್ತಾನೆ: ವಿದ್ಯಾರ್ಥಿ ಪರೀಕ್ಷೆಗೆ ಮುಂಚೆ ಚಾಮುಂಡೇಶ್ವರೀ ದೇವಾಲಯಕ್ಕೆ ಹೋಗುತ್ತಾನೆ: ಹಿಂದೆ ಮುಂದೆ ಯೋಚಿಸದೆಯೇ ಕುರುಡ ಯುಕ್ತಿಯೇ ವಿಶ್ವಾಸಗಳನ್ನು ನಂಬುತ್ತೇವೆ. ಅದರಿಂದ ನಂಬಿಕೆಗಳನ್ನು ಸ್ವೀಕರಿಸುವಾಗ ವಿವೇಚನೆ ಅತ್ಯಗತ್ಯವಾಗುತ್ತದೆ.

ದಿಟದ ನಂಬಿಕೆ ಶ್ರೇಯಸ್ಕರವಾದುದು. ಸಟೆಯು ನಂಬಿಕೆ ಹಾನಿಕಾರಕವಾದುದು ಎಂಬ ತಥ್ಯಾಂಶ ಮೇಲಣ ನಿದರ್ಶನ ಮತ್ತು ವ್ಯಾಖ್ಯಾನಗಳಿಂದ ನಿಚ್ಚಳವಾಗುತ್ತದೆ. ಕೆಲವು ಸಾರಿ ಸಟೆಯು ನಂಬಿಕೆಗಳು ನಿರಪಾಯವಾಗಿಯೂ ಕಾಣಿಸಬಹುದು. ನಂಬಿಕೆಗಳು [illegible] ಅವುಗಳ ಪ್ರಯೋಜನ ಮತ್ತು ನಿತ್ಯ ಬಾಳಿನ ಒಂದು ಅವಿಭಾಜ್ಯಾಂಗವಾದುದರಿಂದ ಅವುಗಳ ಪ್ರಯೋಜನಗಳನ್ನು ಸ್ಥೂಲವಾಗಿ ತಿಳಿಯುವುದು ಒಳ್ಳೆಯದು. ಆರೋಗ್ಯದ ದೃಷ್ಟಿಯಿಂದ ಕೆಲವು ನಂಬಿಕೆಗಳು ಸ್ವೀಕಾರಯೋಗ್ಯವಾಗಿವೆ. ಹುತ್ತದ ಮಣ್ಣು ಮೈಗೆ ಹಚ್ಚಿಕೊಂಡರೆ ಚರ್ಮದ ವ್ಯಾಧಿ ನಿವಾರಣೆಯಾಗುತ್ತದೆ. ಕೆಲವು ಕಡೆ [illegible]ಗಳಲ್ಲಿ ಸ್ನಾನ ಮಾಡಿದರೆ ಚರ್ಮವ್ಯಾಧಿಗಳ ಜತೆಗೆ ಸಂಬಂಧಪಟ್ಟ ರೋಗಗಳೂ [illegible] ಎಂಬುದು ಪ್ರಯೋಗದಿಂದ ನಿಜವೆಂದು ಸ್ಪಷ್ಟವಾಗಿದೆ. ಜ್ವರ [illegible] ಗಳಿಗೆ ಗಾಂಧೀಜಿ ಮಣ್ಣಿನ ಚಿಕಿತ್ಸೆ ಸಹಕಾರಿ[illegible]

1 H M. Hyatt's, *Folklore from Adams County Illinois*, Items No. 524, 64, 196, 235, 238, 590, 638, 911, 1150

ಕೆಲವುವೇಳೆ ಮನೋರೋಗಗಳಿಂದ ಶಾರೀರಕ ವ್ಯಾಧಿಗಳು ಉಲ್ಬಣಗೊಳ್ಳುತ್ತವೆ ; ಮೊದಲಿನವು ಗುಣವಾದರೆ ಎರಡನೆಯವು ತಾವಾಗಿಯೇ ಉಡುಗಿಹೋಗುತ್ತವೆ. ಚಿತ್ತಸ್ಥೈರ್ಯವಿರುವವರ ಬಳಿ ಕಾಹಿಲೆಗಳೇ ಸುಳಿಯುವುದಿಲ್ಲ, ಸುಳಿದರೂ ಬಹುದಿನ ಇರುವುದಿಲ್ಲ. ಹೊಟ್ಟೆಹುಣ್ಣು, ರಕ್ತದ ಒತ್ತಡ, ಕಣ್ಣು ಬೇನೆಗಳಿಗೆ ಮನಃಕ್ಲೇಶಗಳೇ ಕಾರಣವೆನ್ನುವುದು ಬಹುತೇಕವಾಗಿ ನಿಜ. ಮದ್ದುಗಳಿಂದ ಬಗೆಹರಿಯಲಾರದ ಕಾಹಿಲೆಗಳು ಹರಕೆ ಮಂತ್ರ ಚೀಟು ಮೊದಲಾದುವುಗಳಿಂದ ವಾಸಿಯಾಗಿರುವುದನ್ನು ಹಲವರು ಬಲ್ಲರು. ಅವು ಮದ್ದಿಗೆ ಪರ್ಯಾಯಗಳೆಂದು ಬಗೆಯಬಾರದು. ಮನಸ್ಸ್ವಾಸ್ಥ್ಯಕ್ಕೆ ಅವು ಮದ್ದೆಂಬುದು ನಿಜ. ಮನಶ್ಶಾಂತಿಯಿಂದ ನರಗಳ ಮೇಲಣ ಒತ್ತಡ ಕಡಮೆಯಾಗುತ್ತದೆ. ಹಾವು ಕಡಿತದಿಂದ ಸಾಯುವವರ ಸಂಖ್ಯೆಗಿಂತ ಕಡಿತದ ಭಯದಿಂದ ಸತ್ತವರ ಸಂಖ್ಯೆಯೇ ಹೆಚ್ಚೆನ್ನುವ ಸಂಗತಿ ಎಲ್ಲರಿಗೂ ತಿಳಿದದ್ದೇ ಆಗಿದೆ. ಈ ದೃಷ್ಟಿಯಿಂದ ಮಂತ್ರತಂತ್ರಗಳು ವಿವೇಕಿಗಳಿಗಲ್ಲದಿದ್ದರೂ ಸಾಮಾನ್ಯರಿಗೆ ಪ್ರಯೋಜಕವಾಗುತ್ತವೆ. ಹುತ್ತವನ್ನು ಬಳಸಬಾರದೆಂಬುದು ಮತ್ತೊಂದು ನಂಬಿಕೆ. ನಸುಕಿನಲ್ಲಂತು ಅದನ್ನು ಬಳಸಬಾರದು. ಇಬ್ಬರೋ ಮೂವರೋ ಜತೆಯಲ್ಲಿ ಪ್ರಯಾಣಮಾಡುತ್ತಿದ್ದಾರೆಂದಿಟ್ಟುಕೊಳ್ಳೋಣ. ಆಗ ಬೇಸಿಗೆ. ಹಾವು ಸೆಕೆ ತಡೆಯಲಾರದೆ ಕತ್ತಲಾಗುವುದಕ್ಕೆ ಮುಂಚೆಯೇ ಹೊರಗೆ ಬಂದು ದಾರಿಯಲ್ಲಿ ಮಲಗುತ್ತದೆ. ಹುತ್ತದ ಎರಡು ಕಡೆ ಜನ ನಡೆದದ್ದಾದರೆ ಅದು ಗಾಬರಿಗೊಂಡು ಕಡಿಯುವ ಸಂಭವವಿದೆ.

ಅನೇಕ ಸಾಮಾಜಿಕ ಮತ್ತು ಕೌಟುಂಬಿಕ ಮೌಲ್ಯಗಳು ನಂಬಿಕೆಗಳ ಮೂಲಕ ವ್ಯಕ್ತವಾಗುತ್ತವೆ. ಅವು ಸಮಾಜದ ಅಲಿಖಿತ ಶಾಸನಗಳು. ಲಿಖಿತ ಶಾಸನಗಳಿಗಿಂತ ಬೆಲೆಯುಳ್ಳವು. ಅವುಗಳ ಹಿಂದೆ ದೀರ್ಘ ಪರಂಪರೆಯಿರುವುದರಿಂದ, ಅನೇಕ ಪೀಳಿಗೆಗಳ ಮೆಚ್ಚುಗೆಗೆ ಪಾತ್ರವಾಗಿರುವುದರಿಂದ ಅವುಗಳ ಬೆಲೆ ಅಮೇಯವಾದದ್ದು. ಮನುಧರ್ಮ ಶಾಸ್ತ್ರ ಯಾವುದು ? ನಂಬಿಕೆಗಳ ಸಂಗ್ರಹ. ಆ ಸಂಗ್ರಹ ಸಮರ್ಪಕವಾಗಿಲ್ಲದಿರಬಹುದು, ಸಮಗ್ರವಾಗಿಲ್ಲದಿರಬಹುದು. ಅದರಲ್ಲಿ ನ್ಯೂನತೆಗಳೂ ಇರಬಹುದು, ಪಕ್ಷಪಾತದಿಂದ ಕೂಡಿರಬಹುದು. ನಂಬಿಕೆಗಳು ನಿಂತ ಮಡುವಲ್ಲ, ಹರಿಯುವ ನದಿ ಎನ್ನುವುದನ್ನು ಗಮನಿಸಬೇಕು. ಅವೂ ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತವೆ. ಇರಲಿ, ಸಮಾಜದಲ್ಲಿ ನೀತಿ ಧರ್ಮ ಉಳಿದಿರುವುದು ಈ ನಂಬಿಕೆಗಳಿಂದ; ಐಕ್ಯ ಸಾಧನೆಯಾಗಿರುವುದು ಇವುಗಳಿಂದ. ಅಪ್ಪನ ಮುಂದೆ ಮಗ ಮೀಸೆ ಬಿಡಬಾರದೆನ್ನುವುದು ಒಂದು ಪ್ರಾಚೀನ ಸಂಪ್ರದಾಯ. ಮೀಸೆ ಪ್ರತಿಷ್ಠಾಹಂಕಾರಗಳ ಸಂಕೇತ. ಮಕ್ಕಳು ವಿನಯಶೀಲರಾಗಿರಬೇಕು. ಇದು ಮಕ್ಕಳ ವರ್ತನೆಗೆ ಸಂಬಂಧಿಸಿದ್ದೆಂದು ತಿಳಿಯಬಹುದಾಗಿದೆ. ಮಲಗಿರುವ ಕಿರಿಯರು ಹಿರಿಯರು ಬಂದಾಗ ನೀಡಿರುವ ಕಾಲನ್ನು ಕೊಕ್ಕರಿಸಿಕೊಳ್ಳಬೇಕು ಎನ್ನುವ ರೂಢಿ ಕಿರಿಯರ ವಿನಯಶೀಲತೆಯನ್ನು ಕುರಿತದ್ದೆಂದು ಭಾವಿಸಬಹುದಾಗಿದೆ. ಇಂತೆಯೇ ಅಶ್ವತ್ಥ ಪ್ರದಕ್ಷಿಣೆ ಉಪವಾಸ ಮಡಿಮೈಲಿಗೆಗಳು ತೀರ್ಥಯಾತ್ರೆಗಳಿಂದ ಸೀಮಿತ ಪ್ರಯೋಜನವಾದರೂ ದೊರಕಬಹುದೆಂದು ನಂಬಬಹುದಾಗಿದೆ. ಬಾಣಂತಿ ಮೂರು

ತಿಂಗಳತನಕ ಹೂಕುಂಕುಮ ಇಡಬಾರದು, ಗಂಡ ಗಡ್ಡ ಬೋಳಿಸಬಾರದು ಎಂಬ ನಂಬಿಕೆ ಈಗ ರೂಢಿಯಲ್ಲಿಲ್ಲ. ಲೈಂಗಿಕಸಂಯಮ ಸಾಧನೆಗಾಗಿ ಈ ಕಟ್ಟುಪಾಡು ಅತ್ಯವಶ್ಯವಾಗಿತ್ತು. ಬಾಳಿನಿಂದ ಬಾಳಿಗಾಗಿ ಉಗಮಗೊಂಡ ಈ ನಂಬಿಕೆಗಳು ಸತ್ವಪೂರ್ಣವಾದುವು ಜೀವಂತವಾದುವು ಎಂಬುದನ್ನು ಮರೆಯಲಾಗದು.

ನಿರಕ್ಷರಕುಕ್ಷಿಗಳೇ ಸಮೃದ್ಧವಾಗಿರುವ, ಮತೀಯ ಭಾವನೆಗಳ ಧೃತರಾಷ್ಟ್ರ ಮುಷ್ಟಿಯಲ್ಲಿ ಸಿಕ್ಕಿಕೊಂಡಿರುವ, ಪರಕೀಯ ಬುದ್ಧಿಗೆ ಹಂಗಿಗರಾಗಿರುವ, ವೈಜ್ಞಾನಿಕ ವಿಚಾರಗಳಿಗೆ ಮುಖಮುರಿಯುವ ಸಮಾಜದಲ್ಲಿ ಅನುಕೂಲಗಳಿಗಿಂತ ಪ್ರತಿಕೂಲಗಳು, ಉಪಕಾರಕ್ಕಿಂತ ಅಪಕಾರವೇ ಜಾಸ್ತಿ. ಆರೋಗ್ಯಭಾಗ್ಯವುಳ್ಳ ಮಧ್ಯವಯಸ್ಸಿನ ಐದು ಮಕ್ಕಳ ತಾಯಿಯೊಬ್ಬಳು ಶಸ್ತ್ರಚಿಕಿತ್ಸೆಗಾಗಿ ೧೯೬೫ರ ಮಾರ್ಚಿಯಲ್ಲಿ ಕೆನಡಾದ ಆಸ್ಪತ್ರೆಯೊಂದಕ್ಕೆ ದಾಖಲಾದಳಂತೆ. ಶಸ್ತ್ರಚಿಕಿತ್ಸೆಯನಂತರ ಒಂದೆರಡು ದಿನ ಆರೋಗ್ಯವಾಗಿದ್ದಳಂತೆ. ಅನಂತರ ಅಡ್ರಿನಲ್ ಗ್ರಂಥಿಯ ರಕ್ತಸ್ರಾವದಿಂದ ತೀರಿಕೊಂಡಳು. ತಾನು ಐದು ವರ್ಷದವಳಾಗಿದ್ದಾಗ ಭವಿಷ್ಯವಾದಿಯಿಂದ ಕೇಳಿದ್ದ ಕಣಿಯನ್ನು ಶಸ್ತ್ರಚಿಕಿತ್ಸೆಗೆ ಮುಂಚೆ ದಾದಿಯೊಡನೆ ಹೇಳಿದ್ದಳಂತೆ. ಸುಮಾರು ನಲವತ್ತುಮೂರನೆಯ ವಯಸ್ಸಿಗೆ ಅವಳು ಸಾಯುವುದಾಗಿ ಕಣಿ ನುಡಿದಿತ್ತಂತೆ. ಆ ಕಣಿಯ ಪರಿಣಾಮವೇ ಈ ಸಾವು. ಹದಿಮೂರರ ಸಂಖ್ಯೆ ಆಂಗ್ಲರಿಗೆ ಶುಭವಲ್ಲ. ಹದಿಮೂರನೆಯ ತಾರೀಖು ಮಗು ಜನಿಸಿದ್ದಾದರೆ ಅದು ಒಳ್ಳೆಯದಲ್ಲವೆಂದು ತಾಯಿಯ ಮನಸ್ಸು ಕೊರೆಯುತ್ತಿರುತ್ತದೆ. ಆ ಕೊರೆತದ ಪರಿಣಾಮವಾಗಿ ತಾಯಿ ಸತ್ತರೆ ಸೋಜಿಗವೇನಿಲ್ಲ. ದೆವ್ವ ಹಿಡಿದಿದೆಯೆಂದು ಹೆಣ್ಣು ಮಕ್ಕಳಿಗೆ ಬರೆಹಾಕುವುದು, ದೊಡ್ಡ ಬಂಡೆಯನ್ನು ಅವಳ ಮೇಲೆ ಹೇರಿಸುವುದು, ರಕ್ತಸೋರುವತನಕ ಅವಳನ್ನು ಚಾಟಿಯಿಂದ ಹೊಡೆಯುವುದು, ಮಾಟಗಾರರ ಮತ್ತು ಪುರೋಹಿತರ ಚಿತ್ರಹಿಂಸೆಗಳಿಗೊಳಗುಮಾಡುವುದು : ತಮಗಾಗದವರು ಮಾಟ ಮಾಡಿಸಿದ್ದಾರೆನ್ನುವ ಕೊರಗಿನಲ್ಲಿ ಸಾಯುವಂತಾಗುವುದು : ಹೆರುವ ಸವತಿಯೋ ವಾರಗಿತ್ತಿಯೋ ಸತ್ತು ಪಿಶಾಚಿಯಾಗಿ ಅಮರಿಕೊಂಡಿದ್ದಾರೆಂದು ಸಂಶಯಿಸುವುದು : ಮೈಲಿ ಬಂದಾಗ ಮದ್ದು ಕೊಡಿಸದೆ ಮಾರಮ್ಮನಿಗೆ ತಂಬಿಟ್ಟಿಡುವುದು. ಇವೆಲ್ಲ ಅಪಾಯಕಾರಿಯಾದ ಸಂಗತಿಗಳು. ಮೂಢನಂಬಿಕೆಗಳ ಪ್ರಸಾರಕ್ಕೆ ಸ್ವಾರ್ಥಪರರಾದ ಪುರೋಹಿತರು ಮತ್ತು ಜ್ಯೋತಿಷಿಗಳೇ ಮುಖ್ಯಕಾರಣವೆಂಬುದನ್ನು ಅರಿಯಬೇಕಾಗಿದೆ.

ಕೆಲವು ನಂಬಿಕೆಗಳು ಅಪಾಯಕಾರಿಯೂ ಅಲ್ಲ. ಉಪಯೋಗವೂ ಇಲ್ಲ. ಮದುವೆ ಆಗದವರ ಕನಸು ನಿಜವಾಗುವುದಿಲ್ಲ: ಮಕ್ಕಳು ದೇವರ ಸಮಾನ: ಕುಂಟಮಂಡೆ ನೋಡಿದರೆ ಪುಣ್ಯ.[1] ಇವುಗಳಲ್ಲಿ ಉಪ್ಪು ಹುಳಿ ಖಾರ ಏನೂ ಇಲ್ಲ. ಪೂಜೆ ಮಾಡುವಾಗ ಚಿಕ್ಕದನ್ನು ರಾಗಿಕಲ್ಲು ಗುಟುಕಿಕ್ಕೆ ಕಟ್ಟಬೇಕು ಎನ್ನುವ ನಂಬಿಕೆಯನ್ನು ಸಿಕ್ಕಿಸಿದಾಗ ಅನುಭವದಿಂದ ಸತ್ಯವಾಗುವುದಿಲ್ಲವೆಂದು ತಿಳಿಯುತ್ತದೆ, ಇಂಥವು ಸಟೆಯಾದುದು. ಒಂದು ಮನೆಯಲ್ಲೊಬ್ಬ ಮುತ್ತಜ್ಜ ಇದ್ದ. ಅವನು ಪ್ರತಿನಿತ್ಯ ಬೆಳಗ್ಗೆ ಹತ್ತು ಗಂಟೆ ಹೊತ್ತಿಗೆ

1 Ibid, Item 2359

೧೦

ಸಂಪ್ರದಾಯಗಳು ಮತ್ತು ಹಬ್ಬಗಳು

ಅ. ಸಂಪ್ರದಾಯಗಳು

ಮಾನವ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಪೋಷಿಸುವಲ್ಲಿ, ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯಾಚರಣೆಗಳಿಗೆ ವಿಶೇಷ ಮಹತ್ವವಿದೆ. ಅವು ಅವನ ಬಾಳಿನ ಅವಿಭಾಜ್ಯ ಸಂಗತಿಗಳಾಗಿವೆ; ಸಮಾಜವನ್ನು ಒಂದುಗೂಡಿಸುವ ಮತ್ತು ಮುಂದಕ್ಕೊಯ್ಯುವ ಶಕ್ತಿಪುಂಜಗಳಾಗಿವೆ. ಅವನ ನಡೆವಳಿ ಹಾಗೂ ವ್ಯವಹಾರಗಳು ಸಂಪ್ರದಾಯಬದ್ಧವಾಗಿಯೇ ಜರುಗುತ್ತವೆ. ಜಗತ್ತಿನ ಸಕಲ ರಾಷ್ಟ್ರಗಳ ಕಾನೂನು ರಚನೆಗೆ ಸಂಪ್ರದಾಯಗಳೇ ಆಧಾರ. ಇಂಗ್ಲೆಂಡಿನಂಥ ಕೆಲವು ರಾಷ್ಟ್ರಗಳಲ್ಲಂತು ಸಂಪ್ರದಾಯಗಳೇ ಕಾನೂನಾಗಿ ಪರಿಣಮಿಸುತ್ತವೆ. ಆದ್ದರಿಂದಲೇ ನಾಗರಿಕ ಪ್ರಪಂಚದ ಸರ್ವ ವ್ಯವಸ್ಥೆಗಳಿಗೆ ಅವೇ ಮೂಲ ಮಾತೃಕೆಗಳೆಂದು ಗಣನೆಗೊಂಡಿವೆ. ಪ್ರದೇಶದಿಂದ ಪ್ರದೇಶಕ್ಕೆ, ಕುಲದಿಂದ ಕುಲಕ್ಕೆ ವ್ಯತ್ಯಾಸಗೊಳ್ಳುವ ಕೆಲವು ಸಂಪ್ರದಾಯಗಳು ಸಾರ್ವತ್ರಿಕ ವ್ಯಾಪ್ತಿಯೊಳಗೆ ಸೇರದೆ ಹೊರಚ್ಚಾಗಿಯೇ ನಿಲ್ಲುವ ಸಂಭವವುಂಟು.

ಸಂಪ್ರದಾಯಗಳು ಮೂಲತಃ ವೈಯಕ್ತಿಕ ವಾಡಿಕೆಗಳೆಂಬುದು ಸುಸ್ಪಷ್ಟ. ಪ್ರಭಾವಶಾಲಿಯಾದ ವ್ಯಕ್ತಿಯೊಬ್ಬನ ವಾಡಿಕೆಗಳನ್ನು ಸುತ್ತಮುತ್ತಣ ಜನ ಅನುಕರಿಸುವುದು ಸಹಜ. ಸಮಾಜದ ತಲೆಯಾಳಿನಂತಿರುವ ಜನರ ಆಚರಣೆ ದೋಷರಹಿತವಾದುದಿರಬೇಕು, ಶುಭದಾಯಕವಾದುದಿರಬೇಕು, ಸಭ್ಯತೆಯ ಕುರುಹಾಗಿರಬೇಕು, ಆದ್ದರಿಂದ ಅವೆಲ್ಲ ಗ್ರಾಹ್ಯ; ಅದಕ್ಕೆ ವಿರುದ್ಧವಾದದ್ದೆಲ್ಲ ತ್ಯಾಜ್ಯ ಎಂಬ ಭಾವನೆ ಸಾಮಾನ್ಯ ಜನತೆಯ ಮನಸ್ಸಿನಲ್ಲಿ ಬೇರೂರಿರುತ್ತದೆ. ಅನುಕರಣ ಮಾನವನಿಗೆ ಜನ್ಮಾರಭ್ಯ ಒದಗಿ ಬರುವ ವಿಶಿಷ್ಟ ಗುಣ. ತಂದೆಯಿಂದ ಮಗ, ತಾಯಿಯಿಂದ ಮಗಳು, ಗುರುವಿನಿಂದ ಶಿಷ್ಯ, ದೊಡ್ಡವರಿಂದ ಚಿಕ್ಕವರು ಅನೇಕ ಅಭ್ಯಾಸಗಳನ್ನು ಕಲಿಯುವುದು ರೂಢಿ. "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಾಃ; ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ" ಎಂದು ಗೀತಾಚಾರ್ಯನೇ ಹೇಳಿದ್ದುಂಟು. ದೊಡ್ಡವರಲ್ಲಿ ಅತೀವ ಶ್ರದ್ಧೆಯುಳ್ಳ ಜನ ಹಿಂದೆ ಮುಂದೆ ವಿಚಾರಿಸದೆ ಅವರು ಮಾಡಿದ್ದನ್ನೆಲ್ಲ ತಾವೂ ಅಕ್ಷರಶಃ ಆಚರಿಸುತ್ತಾರೆ. ಹಿರಿಯರೆಂದಮೇಲೆ ಅವರು ನಡೆದದ್ದು ಅಥವಾ ನುಡಿದದ್ದೆಲ್ಲ ಸರಿಯೆ, ತಪ್ಪೆ ಎಂದು ವಿಚಾರಿಸುವ ಗೋಜು ಅವರಿಗೆ ಬೇಕಾಗಿಲ್ಲ. ಹೀಗಾಗಿ ಸಂಪ್ರದಾಯಗಳು

ಸಾಮೂಹಿಕ ಸ್ವರೂಪವನ್ನು ಪಡೆಯುತ್ತವೆ. ಇಡೀ ಸಮಾಜದ, ಅಥವಾ ಒಂದು ನಿರ್ದಿಷ್ಟ ಪ್ರದೇಶದ ಜನತೆಯ ಅಂಗೀಕಾರ ಮುದ್ರೆಯನ್ನು ಪಡೆಯದ, ಕೇವಲ ಒಂದು ಗುಂಪಿಗೆ ಅಥವಾ ಕುಟುಂಬಕ್ಕೆ ಸೀಮಿತಗೊಂಡಿರುವ ಆಚರಣೆ ಸಂಪ್ರದಾಯವೆನಿಸಿ ಕೊಳ್ಳುವುದಿಲ್ಲ. ಅಭಿರುಚಿ ವೈವಿಧ್ಯವೊ, ಪರಿಸರದ ಒತ್ತಡವೊ, ವಿದೇಶೀಯಾನು ಕರಣವೋ ಕಾರಣವಾಗಿ ಉಗಮಗೊಳ್ಳುವ ಆಚರಣೆಗಳು ಕೇವಲ ವಾಡಿಕೆ (usage) ಗಳಾಗಿಯೋ ರೀತಿ (Fashion)ಗಳಾಗಿಯೋ ಉಳಿಯುತ್ತವೆ. ಅವು ತಾತ್ಕಾಲಿಕ ಸ್ವರೂಪದವಾಗಿ ಕೆಲವು ಮಂದಿಗೆ ಮಾತ್ರ ಸೀಮಿತಗೊಳ್ಳುವುದರಿಂದ ಸಂಪ್ರದಾಯಗಳ ಮಟ್ಟಕ್ಕೇರಲಾರವು. ಯಾವುದೋ ಒಂದು ವೃತ್ತಿ ಅಥವಾ ವ್ಯಾಪಾರ ಅಥವಾ ಉದ್ಯೋಗಕ್ಕೆ ಸಂಬಂಧಿಸಿದ ಕ್ರಿಯೆ ವಾಡಿಕೆಯಾದರೆ, ವೇಷ ಭೂಷಣ ಹವ್ಯಾಸಗಳಿಗೆ ಸಂಬಂಧಿಸಿದ ಆಚರಣೆ ರೀತಿಯಾಗುತ್ತವೆ. ಕಾಲಕ್ರಮೇಣ ಅವು ಸಾಮೂಹಿಕ ಕ್ರಿಯೆ ಗಳಾಗಿ, ಅವಿಚ್ಛಿನ್ನ ಪರಂಪರೆಯಾಗಿ ಪರಿಣಮಿಸಿದರೆ, ಸಂಪ್ರದಾಯಗಳ ಸ್ಥಾನಮಾನ ಗಳನ್ನು ಪಡೆಯಬಹುದು.

ಆಧುನಿಕ ನಾಗರಿಕತೆಯ ಪರಿಣಾಮವಾಗಿ ಕೋರ್ಟು ಕಛೇರಿಗಳು ಅಸ್ತಿತ್ವಕ್ಕೆ ಬರುವ ಮುನ್ನ ಸಂಪ್ರದಾಯಗಳೇ ಕಾನೂನಿನಂತೆ ವರ್ತಿಸುತ್ತಿದ್ದುವು. ಅವು ಅಲಿಖಿತ ಶಾಸನ ಗಳೂ ಹೌದು. ಕುಟುಂಬ ಹಾಗೂ ಸಮಾಜಗಳೊಳಗಿನ ನಾನಾವಿಧ ಸಂಬಂಧ ವ್ಯವಹಾರಗಳನ್ನು ಅವುಗಳೇ ನಿಯಂತ್ರಿಸುತ್ತಿದ್ದುವು. ಸಮಾಜದ ಮುಖಂಡನಾಗಲೀ ನಾಡಿನ ದೊರೆಯಾಗಲೀ ಅವನ್ನು ಮಾನ್ಯ ಮಾಡಬೇಕಾಗಿತ್ತು. ರಾಜತ್ವ ಕೊನೆಗೊಂಡು, ಅದರ ಸ್ಥಾನದಲ್ಲಿ ಬಂದ ವ್ಯವಸ್ಥೆಗಳು ಸಹ ಸಂಪ್ರದಾಯಗಳನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಲಿಲ್ಲ. ಯಾವುದಾದರೊಂದು ಸಂಪ್ರದಾಯ ಆರ್ಷೇಯಕಾಲದಿಂದ ಅವಿಚ್ಛಿನ್ನ ವಾಗಿ ಅಡ್ಡಿ ಆತಂಕಗಳಿಲ್ಲದೆ ಜೀವಂತವಾಗಿ ಹರಿದುಕೊಂಡು ಬಂದಿದ್ದರೆ, ಅದು ತರ್ಕಬದ್ಧ ವಾಗಿದ್ದು ಅನಿವಾರ್ಯವೆನಿಸುವುದಾದರೆ, ಅದು ಯಾವುದಾದರೊಂದು ಪ್ರದೇಶಕ್ಕೆ ಸೀಮಿತ ಗೊಂಡಿದ್ದರೆ, ಬ್ರಿಟಿಷ್ ಸರ್ಕಾರ ಅವನ್ನು ಕಾನೂನಿಗೆ ಸಮಸಮನಾಗಿ ಪರಿಗಣಿಸಿ ಮಾನ್ಯ ಮಾಡುತ್ತದೆ.

ಸಾಮಾನ್ಯವಾಗಿ ಸಂಪ್ರದಾಯ ಎರಡು ಕವಲಾಗಿ ಒಡೆಯುತ್ತದೆ: ಒಂದು ರಾಜಕೀಯ; ಎರಡು ಸಾಮಾಜಿಕ-ಧಾರ್ಮಿಕ. ಮೊದಲನೆಯದು ಕಾನೂನು ಶಾಸ್ತ್ರ ವಾಗಿ ವಿಕಾಸಗೊಂಡರೆ, ಎರಡನೆಯದು ನೀತಿಶಾಸ್ತ್ರವಾಗಿ ಬೆಳೆಯುತ್ತದೆ. ಗುರುಹಿರಿಯರ, ತಂದೆಮಕ್ಕಳ, ಗುರುಶಿಷ್ಯರ ನಡುವಣ ಅಥವಾ ಇಂಥದೇ ಹಲವಾರು ಸಂಬಂಧ ಹಾಗೂ ವ್ಯವಹಾರಗಳಿಗೆ ಸೇರುವ ಸಂಪ್ರದಾಯಗಳು ನೈತಿಕ ಕ್ಷೇತ್ರದ ಪರಿಧಿಯಲ್ಲಿ ಸಮಾವೇಶ ಗೊಳ್ಳುತ್ತವೆ. ಒಬ್ಬಾನೊಬ್ಬ ವ್ಯಕ್ತಿ ಪ್ರತ್ಯೇಕವಾಗಿ ಬದುಕುವುದು ಸಾಧ್ಯವಿಲ್ಲ. ಇಬ್ಬರೋ ಹಲವರೋ ಒಟ್ಟಿಗೆ ಬಾಳಬೇಕಾದಾಗ, ಸಮಾಜದ ಭದ್ರತೆ ಮತ್ತು ಸಾಮ ರಸ್ಯಗಳನ್ನು ರಕ್ಷಿಸುವ ಸಲುವಾಗಿ ಕಟ್ಟುಪಾಡುಗಳು ಅನಿವಾರ್ಯವಾಗುತ್ತವೆ. ಆ ಕಟ್ಟು ಪಾಡುಗಳೇ ಬರಬರುತ್ತ ನೀತಿಸೂತ್ರಗಳಾಗುತ್ತವೆ.

ಸಮಾಜವನ್ನು ನಿಯಂತ್ರಿಸುವ ಮತ್ತು ಅದನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯುವ ಶಕ್ತಿ ಸಂಪ್ರದಾಯಕ್ಕಿದೆ. ಎಂಥ ದರ್ಪಿಷ್ಠನಾದ ವ್ಯಕ್ತಿಯೂ ಅದಕ್ಕೆ ತಲೆಬಾಗಲೇಬೇಕು. ಇಲ್ಲವಾದರೆ ಅವನು ನಿಶ್ಚಿಂತೆಯಿಂದ ನಿರಾತಂಕವಾಗಿ ಬಾಳು ನಡಸುವುದು ಕಷ್ಟವಾಗುತ್ತದೆ. ಅವನಿಗೆ ಸಮಾಜದಲ್ಲಿ ಬೆಲೆಯಿಲ್ಲವಾಗುತ್ತದೆ. ಪರಸ್ತ್ರೀಯನ್ನು ಸೋದರಿಯಂತೆ ಕಾಣಬೇಕೆಂಬುದು ಒಂದು ಸಂಪ್ರದಾಯ. ಅದಕ್ಕೆ ವಿರೋಧವಾಗಿ ವರ್ತಿಸುವ ವ್ಯಕ್ತಿ ಬಹಿಷ್ಕಾರಕ್ಕೆ ಗುರಿಯಾಗುತ್ತಾನೆ. ಇಂಥ ಕಟ್ಟುಪಾಡುಗಳಿಲ್ಲದಿದ್ದರೆ ಸಮಾಜ ನಿತ್ಯ ರಣರಂಗವಾಗಿ, ಅದರ ಅಸ್ತಿತ್ವಕ್ಕೆ ಧಕ್ಕೆಯೊದಗುತ್ತಿತ್ತು.

ಆಧುನಿಕ ಸಮಾಜಕ್ಕಿಂತ ಆದಿಮಾನವ ಸಮಾಜದಲ್ಲಿ, ನಾಗರಿಕ ಜನಾಂಗಗಳಿಗಿಂತ ಬುಡಕಟ್ಟು ಜನರಲ್ಲಿ, ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ, ಸುಶಿಕ್ಷಿತರಿಗಿಂತ ನಿರಕ್ಷರಿಗಳಲ್ಲಿ ಸಂಪ್ರದಾಯಗಳು ಪ್ರಬಲವಾಗಿರುತ್ತವೆ. ಅವುಗಳ ಉಡಹಿಡಿತದಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಅವು ಚಾಲ್ತಿಯಲ್ಲಿರುವ ಪ್ರದೇಶವಾಗಲಿ ಗುಂಪಾಗಲಿ ಮಿತವಾಗಿದ್ದಷ್ಟು ಅವುಗಳ ಏಕರೂಪತೆಗೆ ಭಂಗ ಬರುವುದಿಲ್ಲ, ಪ್ರಭಾವಕ್ಕೆ ಕುಂದುಂಟಾಗುವುದಿಲ್ಲ.

ಭೌಗೋಳಿಕ ಮತ್ತೀಯ ಹಾಗೂ ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ, ಆಯಾಯ ಜನರ ಮನೋಧರ್ಮವನ್ನವಲಂಬಿಸಿ ಸಂಪ್ರದಾಯಗಳು ಉಗಮಗೊಳ್ಳುತ್ತವೆ. ಜನರ ವಲಸೆ ಹಾಗೂ ನಾನಾ ರೀತಿಯ ಸಂಪರ್ಕಗಳಿಂದಾಗಿ ಅವು ಹರಡುವುವಾದರೂ, ಅವುಗಳ ಉಗಮಸ್ಥಾನ ಬಹುತ್ವವನ್ನು ನಿರಾಕರಿಸುವಂತಿಲ್ಲ. ಮಾನವನ ಬೌದ್ಧಿಕ, ಮಾನಸಿಕ ಹಾಗೂ ಶಾರೀರಕ ಗುಣಲಕ್ಷಣ ಕ್ರಿಯೆಗಳು ಸಾರ್ವತ್ರಿಕವಾಗಿ ಏಕರೂಪವಾಗಿರುವುದರಿಂದ ಒಂದೇ ಬಗೆಯ ಸಂಪ್ರದಾಯಗಳು ಭಿನ್ನ ಭಿನ್ನ ಪ್ರದೇಶಗಳಲ್ಲಿ ಸ್ವತಂತ್ರವಾಗಿ ರೂಪುಗೊಳ್ಳಲವಕಾಶವುಂಟು. ಆದ್ದರಿಂದಲೇ ಬೇರೆ ಬೇರೆ ದೇಶಗಳಲ್ಲಿ ಚಾಲ್ತಿಯಲ್ಲಿರುವ ಕೃಷಿ ವಿವಾಹ ಸಂಬಂಧವಾದ ಹಾಗೂ ಮರಣೋತ್ತರ ಸಂಪ್ರದಾಯಗಳಲ್ಲಿ ವೈದೃಶ್ಯಗಳಿರುವಂತೆಯೇ ಸಾದೃಶ್ಯಗಳೂ ಇರುವುದುಂಟು. ಸಾಮಾನ್ಯ ಜನರನ್ನೊಲಿಸಿಕೊಳ್ಳುವ ಸಲುವಾಗಿ ಮತಾಂತರಕಾರರು ಅವರ ಮೂಲ ಸಂಪ್ರದಾಯಗಳನ್ನು ತನಿತನಿಯಾಗಿಯೋ ಪರಿಷ್ಕಾರ ರೂಪದಲ್ಲಿಯೋ ಸ್ವೀಕರಿಸುವುದುಂಟು. ಈ ಕಾರಣದಿಂದಲೂ ಪ್ರಸರಣಕ್ರಿಯೆ ತೀವ್ರವಾಗಿ ಜರುಗುತ್ತದೆ.

ನೈಸರ್ಗಿಕ ಪರಿಸರ ಮಾನವನ ಸಂಪ್ರದಾಯಗಳನ್ನು ರೂಪಿಸುತ್ತವೆನ್ನುವವಕ್ಕೆ ಒಂದೆರಡು ನಿದರ್ಶನಗಳನ್ನು ನೀಡಬಹುದು. ಉಷ್ಣವಲಯದ ಕಾಡುಗಳಲ್ಲಿ ಯಥೇಚ್ಛವಾಗಿ ಆಹಾರ ಸಾಮಗ್ರಿಗಳು ಸಿಗುತ್ತಿದ್ದಾಗ ಅಲ್ಲಿಯ ಮಾನವ ಸ್ವತಂತ್ರ ಮನೋಭಾವದವನಾಗಿ ಬೆಳೆದುದರಿಂದ ಕೆಲವು ಸಾಮಾಜಿಕ ಸಂಪ್ರದಾಯಗಳು ಶಿಥಿಲಗೊಳ್ಳುವಂತಾಯಿತು. ಶೀತವಲಯದ ಜನ ಬೇಟೆಯಿಂದ ಜೀವನ ಸಾಗಿಸಬೇಕಾಗಿದ್ದುದರಿಂದ ಅವರನ್ನು ಸದಾ ಒಟ್ಟುಗೂಡಿಸುವ ಸಂಪ್ರದಾಯಗಳು ವಿಕಾಸಗೊಂಡುವು. ಆಹಾರ ಸಾಮಗ್ರಿ ಸಾಕಷ್ಟು ದೊರೆಯದ ಬಯಲುಸೀಮೆಯ ಜನ ಅಲೆಮಾರಿಗಳಾಗಿ ಅಲೆದದ್ದೂ ಉಂಟು. ಆದ್ದರಿಂದ ಅವರ ಸಂಪ್ರದಾಯಗಳು ಭಿನ್ನ ರೀತಿಯವಾದುವು. ಸಹರಾ ಮರುಭೂಮಿಯ

ಅಂಚಿನಲ್ಲಿ ವಾಸಿಸುವ ಜನ ಎರಚುವ ಧೂಳಿನಿಂದ ಮತ್ತು ಉರಿಯುವ ಹಬೆಯಿಂದ ಮುಖವನ್ನು ರಕ್ಷಿಸುವ ಸಲುವಾಗಿ ಬಟ್ಟೆಯಿಂದ ಮುಚ್ಚಿಕೊಳ್ಳುತ್ತಿದ್ದುದುಂಟು. ಕಾಲಕ್ರಮೇಣ ಆ ಮುಸುಕು ಸಭ್ಯ ಸಂಪ್ರದಾಯದ ಚಿಹ್ನೆಯಾಗುಳಿಯಿತು.

ಜ್ಞಾನಕ್ಷೇತ್ರ ವಿಶಾಲವಾದಂತೆಲ್ಲ, ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ನೂತನಾವಿಷ್ಕಾರಗಳು ಮೊಗದೋರಿದಂತೆಲ್ಲ, ಹೊಸ ಮೌಲ್ಯಗಳು ತಲೆಯೆತ್ತಿದಂತೆಲ್ಲ ಕೆಲವು ಸಂಪ್ರದಾಯಗಳು ಜೀರ್ಣವಾಗುವುದುಂಟು, ಹೊಸ ಸಂಪ್ರದಾಯಗಳು ಚಿಗುರುವುದೂ ಉಂಟು. ಆದರೆ ಹೊಸ ರಾಜಕೀಯಾರ್ಥಿಕ ವ್ಯವಸ್ಥೆಗಳಿಂದಾಗಿ, ವೈಜ್ಞಾನಿಕ ಹಾಗೂ ವೈಚಾರಿಕ ವಿಕಾಸದ ಮಹತ್ತಿನಿಂದಾಗಿ, ವಿವಿಧ ಜನಾಂಗಗಳ ಗಾಢ ಸಂಪರ್ಕದಿಂದಾಗಿ, ಮಿಗಿಲಾಗಿ ಶ್ರಮದ ಹಂಚಿಕೆಯಿಂದಾಗಿ ಸಮಾಜದ ಸಾಮರಸ್ಯ ಹದಗೆಡುತ್ತಿರುವುದಲ್ಲದೆ, ಅದು ದಿನೇ ದಿನೇ ಛಿದ್ರವಿಚ್ಛಿದ್ರವಾಗುತ್ತಿದೆ; ರಾಷ್ಟ್ರೀಯ ಪ್ರಜ್ಞೆಯ ಪ್ರಾಬಲ್ಯ, ಪ್ರಜಾಪ್ರಭುತ್ವದ ಪ್ರಭಾವ ಮತ್ತು ಸರ್ವಾಧಿಕಾರದ ಪ್ರತಿಷ್ಠೆಯಿಂದಾಗಿ ಪ್ರಾಚೀನ ಮೌಲ್ಯಗಳು ಕಣ್ಮರೆಯಾಗಿ ಸಮಾಜದ ಸ್ವರೂಪವೇ ಬದಲಾವಣೆಯಾಗುತ್ತದೆ; ಹೀಗಾಗಿ ಸಂಪ್ರದಾಯಗಳು ಬಹುಬೇಗನೆ ನಶಿಸಿಹೋಗುತ್ತವೆ. ವ್ಯಕ್ತಿಸ್ವಾತಂತ್ರ್ಯವಂತು ಅವುಗಳಿಗೆ ಕುಠಾರಪ್ರಾಯವಾಗಿದೆ.

ನಂಬಿಕೆಗಳೇ ಸಂಪ್ರದಾಯಗಳಿಗೆ ಮೂಲ. ಅವುಗಳ ಗರ್ಭದಲ್ಲಿ ಭ್ರೂಣಾವಸ್ಥೆಯಲ್ಲಿ ಸುಪ್ತಗೊಂಡಿರುವ ಸಂಪ್ರದಾಯಗಳು ಕಾಲಕ್ರಮೇಣ ಅನುಕೂಲ ಸನ್ನಿವೇಶಗಳೊದಗಿದ ಕೂಡಲೇ ಮೂರ್ತಿಮತ್ತಾಗಿ ಪ್ರಕಟಗೊಳ್ಳುತ್ತವೆ. ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯವೆಂದು ಎಣಿಕೆಗೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿನಿಷೇಧಗಳಾಗಿ ಉಪಾಸನೆ (Rituals)ಗಳಾಗಿ ಸಾಕಾರತೆ ಪಡೆಯುತ್ತವೆ. ಯಾವುದಾದರೂ ಸಿದ್ಧಿಯನ್ನು ಪಡೆಯಬೇಕಾದರೆ ಯಾವಾಗ ಏನು ಮಾಡಬೇಕೆಂಬುದೇ ಸಂಪ್ರದಾಯವಾಗುತ್ತದೆ: ಹೇಗೆ ಮಾಡಬೇಕೆಂಬುದು ಉಪಾಸನೆಯಾಗುತ್ತದೆ: ಉಪಾಸನೆಗೆ ಪೋಷಕವಾಗುವಂತೆ ಯಾವ ಕ್ರಿಯೆ ಅಥವಾ ಸಂಗತಿ ಗ್ರಾಹ್ಯ, ಯಾವುದು ತ್ಯಾಜ್ಯ ಎಂಬುದು ವಿಧಿನಿಷೇಧಗಳಾಗುತ್ತವೆ. ಮಳೆ ಬರದಿದ್ದಾಗ ಮಳೆರಾಯನನ್ನು ಪೂಜಿಸಿ, ಹೂತಳಿರುಗಳಿಂದ ಅಲಂಕರಿಸಿದ ಹುಡುಗನ ಮೇಲೆ ಅದನ್ನು ಹೊರಿಸಿ, ಊರಲ್ಲೆಲ್ಲ ಮೆರವಣಿಗೆ ಮಾಡಿಸಬೇಕೆನ್ನುವುದು ಸಂಪ್ರದಾಯ. ಮಳೆರಾಯನ ಮೂರ್ತಿಯನ್ನೆಂತು ರಚಿಸಬೇಕು. ಎಂಥ ಹೂತಳಿರುಗಳನ್ನು ಮುಡಿಸಬೇಕು, ದೇವರಿಗೆಂಥ ನೈವೇದ್ಯ ಅರ್ಪಿಸಬೇಕು, ಹೇಗೆ ಮೆರವಣಿಗೆ ನಡಸಬೇಕು, ಇತ್ಯಾದಿ ವಿವರಗಳು ಉಪಾಸನೆಯ ಭಾಗವಾಗಿ ಬರುತ್ತವೆ. ದೇವರನ್ನು ಹೊರುವ ಹುಡುಗ ಬೆಳಗಿನಿಂದ ಉಪವಾಸವಿರಬೇಕೆನ್ನುವುದು ವಿಧಿ. ವಿಧವೆಯರು ಗರ್ಭಿಣಿಯರು ಅಥವಾ ಮುಟ್ಟಾದವರು ಮಳೆರಾಯನನ್ನು ಹೊತ್ತವನ ಮೇಲೆ ನೀರು ಹುಯ್ಯಬಾರದೆನ್ನುವುದು ನಿಷೇಧ. ಮುಂದಾಗುವ ಅಪಾಯಗಳನ್ನು ತಡೆಗಟ್ಟಲು ಮತ್ತು ಪಾವಿತ್ರ್ಯ ಕಾಪಾಡಲು ಈ ನಿಷೇಧಗಳು ಅತ್ಯಗತ್ಯ. ಉಪಾಸನಾಸಮಯದಲ್ಲಿ ಕೆಲವು ಆಹಾರ ಪಾನೀಯಗಳನ್ನು ಬಳಸಬಾರದು; ಬ್ರಹ್ಮಚರ್ಯವನ್ನು ಪಾಲಿಸಬೇಕು,

ಕೆಲವು ವ್ಯಕ್ತಿಗಳನ್ನು ಮುಟ್ಟಬಾರದು, ಬೀಡಿ ಸಿಗರೇಟು ಸೇದಬಾರದು, ಅವಾಚ್ಯ ಶಬ್ದಗಳನ್ನು ಉಚ್ಚರಿಸಕೂಡದು. ಇವೆಲ್ಲ ನಿಷೇಧಗಳು.

ಪುರಾಣಗಳು ಈ ಸಂಪ್ರದಾಯ ಉಪಾಸನೆಗಳಿಗೆ ನೆಲಗಟ್ಟನ್ನೂ ಸ್ಥಿರತೆಯನ್ನೂ ಒದಗಿಸುತ್ತವೆ. ನಂಬಿಕೆ ಸಂಪ್ರದಾಯ ಮತ್ತು ಉಪಾಸನೆಗಳಿಗೆ ಅವು ಅರ್ಥವನ್ನು ಕಲ್ಪಿಸುತ್ತವೆ. ಪುರಾಣವೆಂಬುದು ನಂಬಿಕೆಗಳ ಸನ್ನದು; ಉಪಾಸನೆಗಳಿಗೊಂದು ಗುರಿ ಗೊತ್ತು ಮಾಡಿ, ಅಧಿಕಾರಮುದ್ರೆಯನ್ನೊತ್ತುತ್ತದೆಂದು ಮಾನವಶಾಸ್ತ್ರ ತಜ್ಞರು[1] ಹೇಳುತ್ತಾರೆ. ನಂಬಿಕೆಗಳ ಕ್ರಿಯಾರೂಪವೇ ಉಪಾಸನೆಗಳು.[2] ಪುರಾಣ ನಂಬಿಕೆಗಳಿಗೆ ಅಂಗೀಕಾರಮುದ್ರೆಯೊತ್ತಿದರೆ, ಉಪಾಸನೆ ಆ ನಂಬಿಕೆಯನ್ನು ಪುನಶ್ಚೇತನಗೊಳಿಸುವ ಮತ್ತು ದೃಢಪಡಿಸುವ ಕರಣವಾಗುತ್ತದೆ.[3] ಜನರನ್ನು ಐಕ್ಯಗೊಳಿಸುವಲ್ಲಿ ಉಪಾಸನೆಗಳ ಪಾತ್ರ ಅದ್ವಿತೀಯವಾದದ್ದು. ಒಂದಾನೊಂದು ಕಾಲದಲ್ಲಿ ಜನತೆಯ ಸಂಘಟನೆ ಮತ್ತು ನಾಡಿನ ಐಕ್ಯ ಪುರಾಣಾಗಮ ಇತಿಹಾಸಗಳ ಮುಖ್ಯೋದ್ದೇಶವಾಗಿತ್ತೆಂಬುದನ್ನು ಮರೆಯಲಾಗದು.

ಒಂದು ಸಂಪ್ರದಾಯ ಉತ್ತಮ, ಮತ್ತೊಂದು ಅಧಮ ಎಂದು ಹೇಳುವುದು ಸರಿಯಲ್ಲ. ಒಬ್ಬನಿಗೆ ಹಿತವಲ್ಲದುದು ಮತ್ತೊಬ್ಬನಿಗೆ ಹಿತವಾಗಿ ಕಾಣಬಹುದು. ಸರಿತಪ್ಪುಗಳು ಸಾಪೇಕ್ಷವಾದುವು. ಯಾವೊಂದು ಸಮಾಜವೇ ಆಗಲಿ ತನ್ನಲ್ಲಿ ರೂಢಿಯಲ್ಲಿರುವ ಸಂಪ್ರದಾಯ ಸರಿ ಎಂದರೆ ಸರಿ, ತಪ್ಪೆಂದರೆ ತಪ್ಪು. ಸಮಾಜವಿರೋಧಿ ಪದ್ಧತಿಗಳು ಯಾವಾಗಲೂ ತ್ಯಾಜ್ಯವೆಂದೇ ಹೇಳಬೇಕು.[4] ಅಷ್ಟೇ ಅಲ್ಲ, ಆದಿಮಾನವನ ಅನೇಕ ಸಂಪ್ರದಾಯಗಳು ಇಂದಿಗೂ ನಾಗರಿಕ ಸಮಾಜದಲ್ಲಿ ಜೀವಂತವಾಗಿವೆ. ಇವು ಪ್ರಾಚೀನತೆ ಮತ್ತು ನೂತನತೆಗಳನ್ನು ಬೆಸೆಯುವ ಸೇತುಶಕ್ತಿಗಳಾಗಿವೆ; ಜತೆಗೆ ಸಮಾಜದಲ್ಲಿ ಭಾವುಕತೆಯನ್ನು ಪ್ರೇರಿಸುವ ಸ್ಫೂರ್ತಿಶಕ್ತಿಗಳಾಗಿವೆ. ಈ ದೃಷ್ಟಿಯಿಂದಲೂ ಮೇಲುಕೀಳುಗಳ ಭಾವನೆಯನ್ನು ತಿರಸ್ಕರಿಸಬೇಕಾಗುತ್ತದೆ.

ಮೌಲ್ಯಗಳು ಬದಲಾವಣೆಯಾದಂತೆಲ್ಲ ಸಂಪ್ರದಾಯಾಚರಣೆಗಳು ವ್ಯತ್ಯಾಸವಾಗುವುದುಂಟಷ್ಟೆ. ಆಧುನಿಕ ವಿಚಾರಸಂತಾನವನ್ನು ಲೆಕ್ಕಿಸದೆಯೇ ಕೆಲವು ಆಚರಣೆ ಅಥವಾ ಉಪಾಸನೆಗಳು ಅಸ್ತಿತ್ವದಲ್ಲಿರುವುದುಂಟು. ಪಟ್ಟಭದ್ರಹಿತಾಸಕ್ತಿಗಳು ಅವುಗಳ ರಕ್ಷಣೆಗೆ ಕಂಕಣತೊಟ್ಟು ನಿಲ್ಲುವುದುಂಟು. ಆದರೂ ಯುಗಪರಿವರ್ತನೆಗನುಗುಣವಾಗಿ ಅನೇಕ ಆಚರಣೆಗಳು ವಿಸ್ಮೃತಿಗರ್ಭವನ್ನು ಸೇರುತ್ತವೆ. ಅವುಗಳಿಗೆ ಜೀವದಾನಮಾಡಿದ್ದ ನಂಬಿಕೆಗಳು ಆಮೇಲೆಯೂ ಕೆಲವು ದಿನ ಸ್ಮೃತಿಕೋಶದಲ್ಲುಳಿಯುತ್ತವೆ. ಹೀಗಾಗಿ ಪೂರ್ವ

---

1 Myth is a charter of belief and gives point and meaning to the ritualistic behaviour that derives from its sanctions—*Cultural Anthropology* by Melville J. Herskovits, p. 229

2 Ibid

3 Ibid, p. 230.

4 *Customs of the World*, Ed. by Walter Hutchinson—Introduction by A.C. Haddon, p. ii

ಕಾಲದ ಯಜ್ಞಯಾಗಾದಿಗಳು, ಮಂತ್ರಮಾಟಗಳು, ಹಬ್ಬಹರಿದಿನಗಳು ನಿಂತುಹೋಗಿವೆ, ಅಥವಾ ಮೊಟಕುಗೊಂಡಿವೆ. ವಿವಾಹಾಚರಣೆಯಂತು ಹಲವು ಬಗೆಯಾಗಿ ರೂಪಾಂತರ ಹೊಂದುತ್ತಿದೆ. ಕೆಲವೊಮ್ಮೆ ನಂಬಿಕೆ ಮರೆತುಹೋಗಿ ಆಚರಣೆಗಳು ರೂಢಿಯಲ್ಲಿರುವು ದುಂಟು. ಆಗ ಆ ಆಚರಣೆಗಳಿಗೆ ಬೇರೆ ಕಾರಣ ಹುಡುಕುವುದುಂಟು. ಹಿಂದಿನ ಕಾಲದ ಕ್ರೈಸ್ತಸಂಪ್ರದಾಯದ ಪ್ರಕಾರ ಚಟ್ಟದ ಮುಂದೆ ಕ್ರೂಸೆಯನ್ನು ಹೊತ್ತು ಹೋಗುವ ಆಚರಣೆಯಿತ್ತಷ್ಟೆ. ಅದು ಈಗಲೂ ಕೆಲವರಲ್ಲಿ ಬಳಕೆಯಲ್ಲಿದೆ. ಅದರಲ್ಲಿ ಮುಂದೆ ಹೋಗು ತ್ತಿದ್ದ ಜನ ತಮ್ಮ ಟೋಪಿಗಳನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ಹೋಗುವುದು ಸಭ್ಯ ನಡತೆಯ ಲಕ್ಷಣವೆಂದು ಗಣನೆಗೊಂಡಿತ್ತು. ಪ್ರತಿಕ್ರಿಸ್ತಮತ (Protestantism)ದ ಪ್ರಕಾರ ಕ್ರೂಸೆ ಹೊರುವ ಪದ್ಧತಿಯಿಲ್ಲ. ಅದಿಲ್ಲವಾದರೂ ತಲೆಯುಡುಗೆಯ ತೆಗೆತ ಮಾತ್ರ ಆಚರಣೆಯಲ್ಲಿದೆ.[1]

ಉಪಾಸನೆ ಅಥವಾ ಆಚರಣೆಗಳ ಮೂಲಕ ಸಂಪ್ರದಾಯಗಳು ಉಳಿದಿವೆಯಾದ್ದರಿಂದ ಈ ಮುಂದೆ ಕೆಲವು ಉಪಾಸನೆಗಳನ್ನು ವಿವರಿಸಲಾಗಿದೆ. ಕ್ರಾಪೆಯವರು ಉಪಾಸನೆಗಳನ್ನು ಮೂರು ಬಗೆಯಾಗಿ ವಿಂಗಡಿಸುತ್ತಾರೆ: (೧) ಸೌರವರ್ಷದ ಋತುಗಳಲ್ಲಿ ಮತ್ತು ನಿರ್ದಿಷ್ಟ ದಿನಗಳಲ್ಲಿ ನಡಸುವ ಆಚರಣೆಗಳು; (೨) ಹುಟ್ಟು ಸಾವು ಮದುವೆಗಳಂಥ ವಿಶಿಷ್ಟ ಸಂದರ್ಭ ಗಳಲ್ಲಿ ಕೈಗೊಳ್ಳುವ ಉಪಾಸನೆಗಳು; ಮತ್ತು ವಿರೋಧ ಮತ್ತು ಪ್ರತಿರೋಧಾರ್ಥವಾಗಿ ಚಾಲನಿಸುವ ಆಚರಣೆಗಳು.[2] ಎ. ಆರ್. ರ್‍ಯಾಡ್‌ಕ್ಲಿಫ್–ಬ್ರೌನ್ ಎಂಬುವರು ನೈತಿಕ, (Moral) ಪಾರಿಭಾಷಿಕ (Technical), ಮತ್ತು ಶಾಸ್ತ್ರೋಕ್ತ (Ceremonial) ಎಂದು ಮೂರು ಬಗೆಯ ಸಂಪ್ರದಾಯಗಳನ್ನು ಹೆಸರಿಸುತ್ತಾರೆ. ಸರಿತಪ್ಪುಗಳ ಆಧಾರದ ಮೇಲೆ ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧವನ್ನು ನಿರ್ಣಯಿಸುವ ವಿಧಾನವನ್ನು ನೈತಿಕ ಸಂಪ್ರದಾಯವೆಂದೂ, ಆಹಾರಾರ್ಜನೆಯೇ ಮೊದಲಾದ ಜೀವನೋಪಯೋಗಿ ಕ್ರಿಯೆ ಗಳಲ್ಲಿ ಬಳಸುವ ಸಾಧನವಿಧಾನಗಳನ್ನು ಪಾರಿಭಾಷಿಕ ಸಂಪ್ರದಾಯವೆಂದೂ, ಸತ್ತವರ ಸಂಬಂಧಿಗಳು ಅನುಸರಿಸುವ ವಿಧಿಗಳು ಶಾಸ್ತ್ರೋಕ್ತ ಸಂಪ್ರದಾಯಗಳೆಂದೂ ಅವರು ವಿವರಿಸುತ್ತಾರೆ.[3] ಈ ವಿಭಜನೆ ಎಲ್ಲ ಕಾಲಕ್ಕೂ ಎಲ್ಲ ಸಂದರ್ಭಗಳಿಗೂ ಸರಿಹೊಂದುತ್ತ ದೆಂದು ಅವರುಒಪ್ಪಿಕೊಳ್ಳುವುದಿಲ್ಲ.[4] ಸಂಪ್ರದಾಯಾಚರಣೆಗಳು ಜೀವನದಷ್ಟೇ ಜಟಿಲವೂ ಸಂಕೀರ್ಣವೂ ಆದುದರಿಂದ ಅವುಗಳ ವಿಂಗಡಣೆ ಸರ್ವಸಮರ್ಪಕವಾಗಲಾರದು.

ಕೃಷಿ ಸಂಸ್ಕೃತಿ ಪ್ರಧಾನವಾಗಿರುವ ಸಮಾಜದಲ್ಲಿ ಕೃಷಿಗೆ ಸಂಬಂಧಿಸಿದ ಆಚರಣೆಗಳು ಅನಿವಾರ್ಯ. ಹೊಸ ಮಳೆ ಬಿದ್ದ ಕೂಡಲೇ ಊರವರೆಲ್ಲ ಎತ್ತುಕಟ್ಟಿಕೊಂಡು ಬೀದಿಗಳಲ್ಲಿ

---

1 *The Science of Folklore* by A. H. Krappe, p. 270

2 Ibid, ;

3 *The Andaman Islanders* by A. R. Radcliffe—Brown, p. 88

4 It is not pretended that this division of social customs into three different kinds is any great or permanent value, and it is only introduced as an aid to the exposition of the customs of the Andamanese, Ibid, p. 89

ಮೆರೆವಣಿಗೆ ಹೊರಡುತ್ತಾರೆ. ಸಾಮಾನ್ಯವಾಗಿ ಊರ ಗೌಡನ ಏರೋ ಅಥವಾ ಊರವರ ಹೆಸರಬಲ ನೋಡಿ ಜೋಯಿಸ ಸೂಚಿಸಿದ ಹೆಸರಿನವನ ಏರೋ ಮೆರೆವಣಿಗೆಯ ಅಗ್ರ ಭಾಗವಲ್ಲಿರುತ್ತದೆ. ಮೆರೆವಣಿಗೆ ಮುಗಿದನಂತರ, ಅವು ಹೊಲಮಾಳಕ್ಕೆ ಹೋಗಿ, ಕೆಲವು ಹೊಲಗಳಲ್ಲಿ ಗೆರೆಹೊಡೆದು, ತಂತಮ್ಮ ಹೊಲಗಳಿಗೆ ತೆರಳುತ್ತವೆ. ಕ್ರಿಸ್ತಮತ ಇಂಗ್ಲೆಂಡಿನಲ್ಲಿ ಹರಡುವ ಮುನ್ನ ಸರಿಸುಮಾರು ಇಂಥದೇ ಸಂಪ್ರದಾಯ ಅಲ್ಲಿಯೂ ರೂಢಿಯಲ್ಲಿತ್ತಂತೆ.[1] ದೀಪಾವಳಿಯ ಸಮಯದಲ್ಲಿ ಹೊಲ ಬೆಳೆದು ಕಣ್ಣಿಗೆ ಹಬ್ಬವಾಗಿ ಮೆರೆಯುವಾಗ "ಹೆಚ್ಚು"ಮಾಡಿ, ಪಿಳ್ಳೆ ಪೂಜಿಸಿ, ಮನೆಯಿಂದ ಅಟ್ಟುತಂದ ಊಟವನ್ನು ಹೊಲದಲ್ಲಿಯೇ ಮುಗಿಸುತ್ತಾರೆ. ದೀಪಾವಳಿ ಸಂಕ್ರಾಂತಿಗಳಂತು ಒಂದು ರೀತಿಯಲ್ಲಿ ಕೃಷಿ ಸಂಪ್ರದಾಯದ ವಲಯದಲ್ಲಿ ಬರುವ ಹಬ್ಬಗಳಾಗಿವೆ. ಈ ಸಂದರ್ಭದಲ್ಲಿ ಕೊಡಗಿನ ಹುತ್ತರಿ ಹಬ್ಬವನ್ನೂ, ಉತ್ತರ ಕರ್ಣಾಟಕದ ಸುಗ್ಗಿಯ ಸಂಪ್ರದಾಯಗಳನ್ನೂ, ಮಣ್ಣ ಪೂಜೆ, ಶೀಗೆಹುಣ್ಣಿಮೆಗಳನ್ನೂ ನೆನೆಯಬಹುದು.

ಹೊಲಗದ್ದೆ ತೋಟಗಳಲ್ಲಿ ಹುಲುಸು ಬೆಳೆಯಾದರೆ ಕೆಲವು ಆಚರಣೆಗಳನ್ನು ನಡಸುವಂತೆ, ಪೈರಿಗೆ ರೋಗ ಬಂದಾಗಲೂ ಕೆಲವು ಉಪಾಸನೆಗಳನ್ನು ಅನುಷ್ಠಾನಗೈಯುತ್ತಾರೆ. ಬೊಬ್ಬೆ ಬೆಂಕಿ ಬೆದರು ಬೊಂಬೆಗಳ ಮೂಲಕ ಮಿಡಿತಗಳನ್ನೂ ದುಷ್ಟಶಕ್ತಿಗಳನ್ನೂ ದೂರವಿರಿಸಲು ಪ್ರಯತ್ನಿಸುತ್ತಾರೆ. ಸಿರ್ಸ ಎಂಬ ಊರಿನಲ್ಲಿ ಕರ್ವ ಎಂಬ ಕೀಟ ಬಾಜ್ರ ಹೂಗಳನ್ನು ಹಾಳುಮಾಡುತ್ತದಂತೆ. ಆಗ ಯಜಮಾನ ಸೋದರಳಿಯನನ್ನು ಹೆಗಲ ಮೇಲೆ ಕೂರಿಸಿಕೊಂಡು, ಅವನ ಬಾಯಿಗೆ ಅನ್ನಹಾಲು ಕೊಡುತ್ತ "ಅಳಿಯ ಮಾವನ ಹೆಗಲೇರಿದ್ದಾನೆ. ಎಲೆ ಕರ್ವ, ಬೇರೆ ಹೊಲಕ್ಕೆ ಹೋಗು" ಎಂದು ಮಂತ್ರ ಹೇಳುತ್ತಾನೆ.[2] ಇಂತೆಯೇ ಬೂಸ್ಟು ಕರಿ ರೋಗಗಳು ಬಂದಾಗ ಅರಿಸಿನದ ನೀರು ಮಾಡಿ ಎರಚುತ್ತಾರೆ. ಪಡುವಲ ಕುಂಬಳ ಸೋರೆ, ಯಾವುದೇ ತರಕಾರಿಯಾಗಲಿ ಹುಲುಸಾಗಿ ಬೆಳೆದಾಗ, ದೃಷ್ಟಿದೋಷನಿವಾರಣೆಗಾಗಿ ಸುಣ್ಣ ಬಳಿದ ಮಡಕೆಯನ್ನು ತೂಗುಹಾಕುತ್ತಾರೆ. ಮೊದಲು ಬಿಟ್ಟ ತರಕಾರಿಯನ್ನೋ ಕಾಯನ್ನೋ ದೇವರಿಗೋ ಪೂಜಾರಿಗೋ ಅಥವಾ ಹಿರಿಯರಿಗೋ ಅರ್ಪಿಸಿದ್ದಾದರೆ ಮುಂದಿನ ಫಲ ಹುಲುಸುತ್ತದೆಂಬ ನಂಬಿಕೆಯೂ ಉಂಟು.

ಮಾನವವರ್ಗದ ಫಲಶಕ್ತಿಗೂ ಸಸ್ಯವರ್ಗದ ಫಲಶಕ್ತಿಗೂ ಸಂಬಂಧ ಗಂಟುಹಾಕುವ ಸಂಪ್ರದಾಯ ಪಾಶ್ಚಾತ್ಯರಲ್ಲಿ ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಭೂದೇವಿಯ ಪ್ರತಿನಿಧಿಯಾದ ಒಬ್ಬ ಹೆಂಗಸೋ ಅಥವಾ ಹೆಂಗಸಿನ ವೇಷ ಹಾಕಿದ ಒಬ್ಬ ಹುಡುಗನೋ ಇಲ್ಲಿಯ ಪಾತ್ರಧಾರಿ. ಆ ಹೆಂಗಸನ್ನು ವಶಪಡಿಸಿಕೊಳ್ಳುವ ಸಲುವಾಗಿ ಶಿಶಿರ ಹಾಗೂ ವಸಂತ ಋತುಗಳ ನಡುವೆ ತಿಕ್ಕಾಟವಾಗುತ್ತದೆ. ಆ ಜಗಳದಲ್ಲಿ ಶಿಶಿರ ಕೊಲೆಗೊಳ್ಳುವುದರಿಂದ ಆ ಹೆಂಗಸು ವಸಂತನಿಗೆ ವಶವಾಗುತ್ತಾಳೆ. ಇಬ್ಬರು ಹುಡುಗರು ಋತುಗಳನ್ನು

---

[1] *Discovering English Customs and Traditions* by Margaret Gascoigne, pp. 6–7

[2] *The Popular Religion and Folklore of Northern India*, Vol. 2, by William Crooke, p. 302

ಪ್ರತಿನಿಧಿಸುತ್ತಾರೆ. ಕೆಲವು ಸಾರಿ ಶಿಶಿರ ವಸಂತನನ್ನು ಕೊಲ್ಲುವುದುಂಟು. ಆಗ ನಾಲ್ಕನೆಯ ಪಾತ್ರಧಾರಿಯೊಬ್ಬ ಶಿಶಿರನನ್ನು ಕೊಂದು ವಸಂತನನ್ನು ಸಪ್ರಾಣಿಸುತ್ತಾನೆ.[1]

ಶಿಶಿರನನ್ನು ದಹಿಸುವ ವಸಂತೋತ್ಸವ ಜರ್ಮನಿ ಮತ್ತು ಸ್ವಿಟ್ಜರ್‌ಲ್ಯಾಂಡ್‌ಗಳಲ್ಲಿ ಸರ್ವೇಸಾಮಾನ್ಯ. ಉಣ್ಣೆಯಿಂದಲೋ ಅಥವಾ ಸುಲಭವಾಗಿ ದಹನವಾಗುವ ವಸ್ತುಗಳಿಂದಲೋ ಶಿಶಿರನ ಪ್ರತಿಕೃತಿಯನ್ನು ನಿರ್ಮಿಸಿ, ಚಿತೆಯ ಮೇಲಿರಿಸಿ ಸುಡುತ್ತಾರೆ. ಈಸ್ಟರ್‌ನಂತರ ಬರುವ ಎರಡನೆಯ ಸೋಮವಾರದಂದು ಈ ಆಚರಣೆ ನೆರವೇರುತ್ತದೆ.[2]

ಎಂತು ನಂಬಿಕೆಗಳೆಲ್ಲ ಸಟೆಯಲ್ಲವೋ ಅಂತೆಯೇ ಸಂಪ್ರದಾಯಗಳೆಲ್ಲ ಮೌಢ್ಯಜನ್ಯವಲ್ಲ, ಅಪ್ರಯೋಜಕವಲ್ಲ. ಆಧುನಿಕ ವೈಜ್ಞಾನಿಕ ದೃಷ್ಟಿಗೆ ನಿಷ್ಪ್ರಯೋಜಕ, ಮೂಢ ಗೊಡ್ಡು ಎಂದು ತೋರುವ ಸಂಪ್ರದಾಯಗಳ ಮೂಲವನ್ನು ಕೆದಕಿ ನೋಡುವಾಗ, ಅವುಗಳ ಅಸ್ತಿತ್ವಕ್ಕೆ ಕಾರಣರಾದ ಪೂರ್ವಜರ ಕಲ್ಪನಾಚಾತುರ್ಯ ಮತ್ತು ದೂರದೃಷ್ಟಿಗಳು ಸ್ಪಷ್ಟ ಗೋಚರವಾಗುತ್ತವೆ. ಪ್ರಪಂಚದ ಸರ್ವಜನಾಂಗಗಳಲ್ಲಿಯೂ ಚಾಲ್ತಿಯಲ್ಲಿರುವ ವೈವಾಹಿಕ ವ್ಯವಸ್ಥೆಯನ್ನು ಕೂಲಂಕಷವಾಗಿ ಸಹಾನುಭೂತಿಯಿಂದ ಪರಿಶೀಲಿಸಿದಾಗ ಅದರ ಮಹತ್ವ ಮಿಂಚುತ್ತದೆ. ಆ ವ್ಯವಸ್ಥೆ ರೂಢಿಗೆ ಬರುವ ಮುನ್ನ ಮಾನವ ಲೈಂಗಿಕ ಸಂಬಂಧವಾಗಿ ಪಶುಗಳಂತೆ ವರ್ತಿಸುತ್ತಿದ್ದಿರಬೇಕೆನ್ನುವ ವಿಷಯದಲ್ಲಿ ಸಂದೇಹವಿಲ್ಲ. ವ್ಯಕ್ತಿವ್ಯಕ್ತಿಗಳ ನಡುವೆ ಮಧುರ ಬಾಂಧವ್ಯ ಕುದುರಬೇಕಾದರೆ, ಪಾಶವೀಯತೆ ನಾಶವಾಗಿ ಸಮಾಜದಲ್ಲಿ ಸ್ನೇಹಮಯ ಶಾಂತ ವಾತಾರಣ ಉದ್ಭವಿಸಬೇಕಾದರೆ ಇದು ಅತ್ಯಗತ್ಯವಾಗಿತ್ತು. ಕ್ಷುತ್ಪಿಪಾಸೆ ಮತ್ತು ಕಾಮದಾಹಗಳ ತೃಪ್ತಿಯೊಂದೇ ಮಾನವ ಜೀವನದ ಗುರಿಯಲ್ಲ, ಅದನ್ನು ಮೀರಿದ ಶ್ರೇಯಸ್ಸಾಧನೆ ಅದರ ಪರಮಗಂತವ್ಯವಾಗಬೇಕೆನ್ನುವ ಅರಿವಿನ ಮೂಲದಲ್ಲಿ ಮದುವೆಯ ಕಲ್ಪನೆಯಿದೆ. ಪ್ರೇಮ, ವಾತ್ಸಲ್ಯ, ಸ್ನೇಹ, ಕರುಣೆ, ಕನಿಕರ, ಔದಾರ್ಯ ಮೊದಲಾದ ಮಾನವೀಯ ಗುಣಗಳು ಕೃಷಿಗೊಂಡದ್ದು ಮದುವೆಯ ಮೂಲಕ. ಕಾಮತೃಪ್ತಿಯ ಜತೆಗೆ ಧರ್ಮಸಾಧನೆಯೂ ಮದುವೆಯ ಗುರಿಯಾಗುತ್ತದೆ. ವಿವಾಹ ಸಂಬಂಧದ ಉಪಾಸನಾವಿಧಿಗಳೆಲ್ಲ ವೈವಾಹಿಕ ಮೌಲ್ಯಗಳಿಗೆ ಸಂಕೇತವಾಗುತ್ತವೆ. ಕೆಲವು ಬುಡಕಟ್ಟುಗಳಲ್ಲಿ ಗಂಡು ಹೆಣ್ಣುಗಳ ಪರಸ್ಪರಾಲಿಂಗನ ಆ ವಿಧಿಗಳ ಅಂಗವಾಗುಳಿದಿದೆ. ದೇಹೈಕ್ಯಕ್ಕೆ ಮಾತ್ರವಲ್ಲ, ಆತ್ಮೈಕ್ಯಕ್ಕೂ ಅದು ಸಂಕೇತವಾಗುತ್ತದೆ. ಅದು ಸುಪ್ತ ಪ್ರೇಮಭಾವನೆಗಳನ್ನು ಕೆರಳಿಸುತ್ತದೆ. ಮದುವೆಯಲ್ಲಿ ಮುಖ್ಯವಾದ ವ್ಯಕ್ತಿಗಳೆಂದರೆ ಗಂಡು ಹೆಣ್ಣುಗಳು ಮತ್ತು ಪ್ರೇಕ್ಷಕರು. ಪುರೋಹಿತ ಪ್ರೇಕ್ಷಕರ ಪರವಾಗಿ ಉಪಾಸನಾವಿಧಿಗಳನ್ನು ನಡೆಸುತ್ತಾನೆ. ಪ್ರೇಕ್ಷಕರು ಸಾಕ್ಷಿಗಳಾಗಿದ್ದುಕೊಂಡು, ವಧೂವರರ ಸಂಗಮದಿಂದ ಜಗತ್ಕಲ್ಯಾಣವಾಗಲೆಂದು ಹರಸುತ್ತಾರೆ. ಮದುವೆಯ ಆಗುಹೋಗುಗಳು ಕೇವಲ ಗಂಡುಹೆಣ್ಣುಗಳಿಗೆ ಮಾತ್ರ ಸೀಮಿತವಾದುವಲ್ಲ, ಇಡೀ ಸಮಾಜಕ್ಕೆ ಸಂಬಂಧಿ

1 *The Science of Folklore*, p. 273

2 *Manners and Customs of Mankind*, Vol. I, Ed. by J. A. Hammerton, p. 16

ಸಿದುವು, ಸಮಾಜದ ಭದ್ರತೆ ಮದುವೆಯನ್ನವಲಂಬಿಸಿದೆ ಎಂಬ ತತ್ವಗಳು ಆ ಉಪಾಸನಾ ವಿಧಿಗಳಲ್ಲಿ ಅಡಕಗೊಂಡಿರುತ್ತವೆ. ಮದುವೆಯ ಮೂಲಕ ಗಂಡು ಹೆಣ್ಣುಗಳ ಸಾಮಾಜಿಕ ಸ್ಥಾನಮಾನಗಳು ವ್ಯತ್ಯಾಸಗೊಳ್ಳುತ್ತವೆ; ಅವರು ವಿಶೇಷವಾದ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಸಂತಾನ ಸಂರಕ್ಷಣೆಯ, ಜತೆಗೆ, ದುರ್ಬಲರನ್ನು ಸಾಕುವ ಜವಾಬ್ದಾರಿ ಅವರದಾಗುತ್ತದೆ. ಒಂದೊಂದು ಉಪಾಸನಾವಿಧಿಯೂ ಆ ಹೊಣೆಗಾರಿಕೆಯ ಗುರುತ್ವವನ್ನು ಸ್ಪಷ್ಟಪಡಿಸುತ್ತದೆ. ಪ್ರೇಕ್ಷಕರು ನೂತನ ದಂಪತಿಗಳಿಗೆ ಕಾಣಿಕೆ ನೀಡುವ ಮೂಲಕ, ತಮ್ಮ ಸ್ನೇಹ ಪ್ರೇಮಗಳನ್ನು ಪ್ರಕಟಿಸುವುದರ ಜತೆಗೆ, ಸಹಕಾರ ಮನೋಭಾವವನ್ನು ಪ್ರದರ್ಶಿಸುವುದರ ಜತೆಗೆ, ಅವರು ಸಮಾಜದ ಏಳಿಗೆಗಾಗಿ ಸಲ್ಲಿಸಬೇಕಾದ ಸೇವೆಯ ಮಹತ್ವವನ್ನು ಅರಿವುಮಾಡಿಕೊಟ್ಟಂತಾಗುತ್ತದೆ. ಒಟ್ಟಿನಲ್ಲಿ ಮದುವೆ ಪುರುಷಾರ್ಥ ಸಾಧನೆಯ ಸಾಧನವಾಗುತ್ತದೆ.

ವಿವಾಹದ ಮತ್ತು ಆ ಸಂಬಂಧವಾದ ಉಪಾಸನಾವಿಧಿಗಳ ಧ್ಯೇಯಾದರ್ಶಗಳಲ್ಲಿ ಏಕರೂಪತೆಯಿರುವುದಾದರೂ ವಿವಾಹ ಪದ್ಧತಿ ಮತ್ತು ವಿಧಿಗಳು ಸಮಾಜದಿಂದ ಸಮಾಜಕ್ಕೆ, ಜನಾಂಗದಿಂದ ಜನಾಂಗಕ್ಕೆ, ಬುಡಕಟ್ಟಿನಿಂದ ಬುಡಕಟ್ಟಿಗೆ, ಗುಂಪಿನಿಂದ ಗುಂಪಿಗೆ ಬದಲಾವಣೆ ಹೊಂದುತ್ತವೆ. ಪ್ರಾಚೀನಕಾಲದ ಭಾರತದಲ್ಲಿ ಅಷ್ಟವಿಧ ವಿವಾಹ ಪದ್ಧತಿಗಳು ರೂಢಿಯಲ್ಲಿದ್ದುವು. ಅವುಗಳಲ್ಲಿ ಕೆಲವು ಬುಡಕಟ್ಟು ಜನರ ರೂಢಿಗಳನ್ನು ಹೋಲುತ್ತವೆ. ಹೆಣ್ಣುಗಂಡುಗಳನ್ನು ಜತೆಯಲ್ಲಿ ಕೂರಿಸದೆಯೇ, ಅವರು ಬೇರೆಬೇರೆ ಕಡೆ ಅಥವಾ ಬೇರೆಬೇರೆ ಊರುಗಳಲ್ಲಿರುವಾಗ ಮದುವೆ ನಡೆಯುವುದುಂಟು. ಮಾನವನ ವಿಚಾರಸಾಮರ್ಥ್ಯ ವಿಕಾಸಗೊಂಡಂತೆಲ್ಲ, ಅವನ ಅಭಿರುಚಿ ಪರಿಪಕ್ವವಾದಂತೆಲ್ಲ, ಆ ಪದ್ಧತಿಗಳು ಪರಿಷ್ಕಾರಗೊಳ್ಳುವುದು ಸಹಜವೇ ಸರಿ. ಅನೇಕ ಸಮಾಜಗಳಲ್ಲಿ ಸಗೋತ್ರ ವಿವಾಹ ದೂಷ್ಯ. ಕೆಲವು ಸಮಾಜಗಳಲ್ಲಿ ಚಿಕ್ಕಪ್ಪನ ಮಗಳನ್ನು ಮದುವೆಯಾಗಬಹುದಾದರೆ, ಬೇರೆ ಕೆಲವಲ್ಲಿ ಆ ಸಂಪ್ರದಾಯ ಹೇಯವೆಂದು ಪರಿಗಣನೆಗೊಂಡಿದೆ. ಉಪಾಸನಾಧಿಗಳ ವೈವಿಧ್ಯವಂತು ಅನಂತಾನಂತ. ಈ ಸಂಪ್ರದಾಯಗಳನ್ನೆಲ್ಲ ಗಮನಿಸಿದಾಗ ಮಾನವನ ಬೌದ್ಧಿಕ ಸಂಪತ್ತಿನ ಅಮೇಯತೆಗೆ ವಿಸ್ಮಯಗೊಳ್ಳುವಂತಾಗುತ್ತದೆ.

ಜಗತ್ತಿನಲ್ಲಿ ಜಾರಿಯಲ್ಲಿರುವ ಸಕಲ ವಿವಾಹ ಪದ್ಧತಿಗಳ ವಿವರಣೆ ಪ್ರಕೃತೋದ್ದೇಶವಲ್ಲವಾದರೂ ಕೇವಲ ನಿದರ್ಶನಾರ್ಥವಾಗಿ ಕಾಂಗೋ ಬುಡಕಟ್ಟೊಂದರ ಸಂಪ್ರದಾಯವನ್ನಿಲ್ಲಿ ಉಲ್ಲೇಖಿಸಲಾಗಿದೆ. ಅವರಲ್ಲಿ ಸಗೋತ್ರ ವಿವಾಹ ಆಚರಣೆಯಲ್ಲಿಲ್ಲ. ಒಬ್ಬ ಹುಡುಗ ಗುರುತಿನ ಹುಡುಗಿಯೊಬ್ಬಳನ್ನು ಪ್ರೀತಿಸುವುದೆಂದು ಮನಸ್ಸುಮಾಡಿಕೊಂಡರೂ ಅವನು ಅವಳೊಡನೆ ನೇರವಾಗಿ ಮಾತಾಡುವಂತಿಲ್ಲ. ಅವಳ ಸೋದರಮಾವನಿಗೆ ಒಂದು ಬುರುಡೆ ಹೆಂಡವನ್ನು ಕೊಟ್ಟು, ಅವನ ಬಳಿ ಆ ಹುಡುಗಿಯ ಪ್ರಸ್ತಾಪವೆತ್ತುತ್ತಾನೆ. ಸೋದರಮಾವ ಪಾನೀಯವನ್ನು ಸೇವಿಸಿದನಂತರ ಮತ್ತೊಂದು ದಿನ ಬರುವಂತೆ ಪ್ರಿಯಕರನಿಗೆ ತಿಳಿಸುತ್ತಾನೆ. ಪ್ರಿಯಕರ ಗೊತ್ತಾದದಿನ ಮತ್ತಷ್ಟು ವೈನು ತೆಗೆದುಕೊಂಡು ಬರುತ್ತಾನೆ. ಅವನ ಬಗ್ಗೆ ಮನಸ್ಸಾದರೆ ಮಾವ ಐದು ಸಾವಿರ ಮಣಿಗಳನ್ನೋ, ಅಥವಾ ಅವುಗಳಿಗೆ

ಬದಲಾಗಿ ಆಡುಹಂದಿಗಳನ್ನೋ ತರುವಂತೆ ಹೇಳುತ್ತಾನೆ. ಆಮೇಲೆ ಅವನು ಗಂಡಿನ
ಮನೆಗೆ ಹೋಗಿ ತೆರ ನಿಷ್ಕರ್ಷಿಸುತ್ತಾನೆ. ಮತ್ತೊಂದು ದಿನ ಹುಡುಗಿಯ ತಂದೆಗೆ
ಹುಡುಗನನ್ನು ಪರಿಚಯಿಸಿಕೊಡುತ್ತಾನೆ. ಕನ್ಯಾಪಿತೃ ಮತ್ತು ಸೋದರಮಾವಂದಿರು
ಕೊನೆಗೊಂದುದಿನ ಹಲವು ಬುರುಡೆಗಳಲ್ಲಿ ವೈನ್ ತುಂಬಿಕೊಂಡು ಗಂಡಿನ ಮನೆಗೆ ಹೋಗು
ತ್ತಾರೆ. ನೆಂಟರಿಷ್ಟರೊಡನೆ ಪಾನೀಯ ಸೇವನೆಯಾದನಂತರ, ಅವರ ಸಾಕ್ಷಿತ್ವದಲ್ಲಿ
ಮದುವೆಯ ಹಣದ ಮೊತ್ತದ ಬಗ್ಗೆ ಕರಾರಾಗುತ್ತದೆ. ಹೆಣ್ಣಿನ ತಾಯಿ ಸಮ್ಮತಿ ನೀಡಿದ
ಳೆಂದರೆ ಮದುವೆ ನಿಶ್ಚಯವಾದಂತೆಯೇ ಸರಿ. ಅನಂತರ ಒಂದು ದಿನ ಗಂಡು ಕೆಲವು
ಗೆಳೆಯರೊಡನೆ ಹೆಣ್ಣಿನ ಊರಿಗೆ ಹೋಗುತ್ತಾನೆ. ಊರ ಸಮೀಪದಲ್ಲಿ ತನ್ನ ಬಂದೂಕವನ್ನು
ಹಾರಿಸಿ, ಗದ್ದಲಮಾಡುತ್ತಾನೆ. ಹೆಣ್ಣಿನ ಕಡೆಯವರು ಅವರ ಮೇಲೆ ಬೀಳುತ್ತಾರೆ.
ಎರಡು ಗುಂಪಿನ ನಡುವೆ ನಟನೆಯ ಹೋರಾಟ ನಡೆಯುತ್ತದೆ. ಗಂಡಿನ ಕಡೆಯವರ
ಕೈ ಮೇಲಾಗಿ, ಹೆಣ್ಣನ್ನೆತ್ತಿಕೊಂಡು ಧಾವಿಸುತ್ತಾರೆ. ಮುಂದಿನ ಎರಡು ಮೂರು ದಿನ
ಕುಣಿತ ಕುಡಿತ ಮತ್ತು ಮಾಂಸ ಭಕ್ಷಣೆಯ ಆನಂದದಲ್ಲಿ ಜನ ನಲಿಯುತ್ತಾರೆ.
ನಾಲ್ಕಾರು ಆಡು ಹಂದಿಗಳು ಕೊಲೆಯಾಗುತ್ತವೆ. ಮದುವೆಯ ಹಿಂದಿನ ದಿನ ಹೆಣ್ಣು
ಉಪವಾಸವಿರಬೇಕಾಗುತ್ತದೆ. ಗಂಡನನ್ನು ಅವನ ಕುಟುಂಬದವರನ್ನು ಗೌರವಿಸುವಂತೆ,
ಹಿರಿಯರ ಮಾತನ್ನು ಮೀರದಿರುವಂತೆ. ನೆರೆಹೊರೆಯವರೊಂದಿಗೆ ಸರಿಯಾಗಿ ನಡೆದು
ಕೊಳ್ಳುವಂತೆ ಮದುವೆಯ ದಿನ ಹಿರಿಯರು ಸಾಕ್ಷಿಗಳ ಮುಂದೆ ಹೆಣ್ಣಿಗೆ ಉಪದೇಶಿಸು
ತ್ತಾರೆ; ಅಂತೆಯೇ ಸತಿಯಲ್ಲಿ ನಿಷ್ಠೆಯಿಂದಿರಬೇಕೆಂದು, ಅವಳ ಕುಟುಂಬವನ್ನು ಗೌರವಿಸ
ಬೇಕೆಂದು, ಹೆಂಡತಿಯನ್ನು ಬಯ್ಯಬಾರದೆಂದು, ಹೊಡೆಯಬಾರದೆಂದು, ಅವಳೊಡನೆ
ಕಠಿನವಾಗಿ ವರ್ತಿಸಬಾರದೆಂದು ಗಂಡಿಗೂ ಬುದ್ಧಿವಾದ ಹೇಳುತ್ತಾರೆ. ಆಗ ಗಂಡು
ಬಂದೂಕದ ಗುಂಡೊಂದನ್ನು ತೆಗೆದುಕೊಂಡು, ಸಾಕ್ಷಿಯ ಮುಂಗೈಗೆ ಉಜ್ಜಿ "ನಿಮ್ಮ
ಉಪದೇಶವನ್ನೀಗ ಕೇಳಿದ್ದೇನೆ. ಅದರಂತೆ ನಡೆದುಕೊಳ್ಳುತ್ತೇನೆ. ಈ ಮದುವೆಯನ್ನು
ನಿರರ್ಥಕಗೊಳಿಸುವುದಿಲ್ಲ. ಹಾಗೆ ಮಾಡಿದ್ದಾದರೆ ಈ ಗುಂಡಿನಿಂದಲೇ ಸಾಯುತ್ತೇನೆ"
ಎಂದು ಪ್ರತಿಜ್ಞೆಮಾಡುತ್ತಾನೆ. ಹೆಣ್ಣು ಸಹ ತನ್ನ ಸಂಕಲ್ಪವನ್ನು ಸ್ಪಷ್ಟಪಡಿಸುತ್ತಾಳೆ.
ಉತ್ಸವಗಳೆಲ್ಲ ಮುಗಿದನಂತರ ಗಂಡಿಗೆಂದೇ ಸಿದ್ಧವಾದ ಹೊಸಮನೆಯಲ್ಲಿ ಒಲೆಯಿಡುವ
ಮತ್ತು ಬೆಂಕಿ ಹಚ್ಚುವ ಶಾಸ್ತ್ರ ನಡೆಯುತ್ತದೆ. ಅಲ್ಲಿ ಮತ್ತೆ ಹಿರಿಯರು ಹೆಣ್ಣಿಗೆ ಅವಳ
ಕರ್ತವ್ಯಗಳನ್ನು ಬೋಧಿಸುತ್ತಾರೆ. ಅಲ್ಲಿಗೆ ಮದುವೆ ಮುಕ್ತಾಯವಾಗುತ್ತದೆ.
ಮದುವೆಗೆ ಮುಂಚೆ ವಧುಪರೀಕ್ಷೆಯಂತೆಯೇ ವರನ ಶಕ್ತಿಸಾಮರ್ಥ್ಯ ಪರೀಕ್ಷೆಯೂ
ನಡೆಯುತ್ತಿದ್ದುದುಂಟು. ಆಸ್ತಿಪಾಸ್ತಿಗಳಿಗಿಂತ ದೈಹಿಕ ಶ್ರೀಮಂತತೆಗೆ ಕೆಲವು ಸಮಾಜ
ಗಳಲ್ಲಿ ಹೆಚ್ಚು ಪ್ರಾಶಸ್ತ್ಯವಿರುತ್ತಿತ್ತು. ಊರ ಹೊರಗಿನ ಬಯಲಿನಲ್ಲಿರುತ್ತಿದ್ದ ಕಲ್ಲುಂಡು
ಗಳನ್ನೆತ್ತಿ, ವರ ತನ್ನ ಬಲಾಬಲಗಳನ್ನು ಮೆರೆಯಬೇಕಾಗಿತ್ತು. ಓರಿನೋಕೊ
(Orinoco) ಇಂಡಿಯನ್ನರ ಸಂಪ್ರದಾಯದ ಪ್ರಕಾರ, ಮದುವೆಯಾಗಬೇಕಾದ
ಯುವಕ ಕೆಂಜಿಗ ತುಂಬಿದ ಚೀಲದಲ್ಲಿ ಒಂದೆರಡು ದಿನ ಬಿದ್ದಿರಬೇಕಾಗುತ್ತಿತ್ತು. ಅವನ

ಸಹನಶಕ್ತಿಯನ್ನು ಪರೀಕ್ಷಿಸುವುದೇ ಆ ಪದ್ಧತಿಯ ಉದ್ದೇಶವಾಗಿತ್ತು.

ತೆರ ಅನಾಗರಿಕ ಅಸಹ್ಯ ಪದ್ಧತಿಯೆಂಬ ಭಾವನೆ ಕೆಲವರ ಮನಸ್ಸಿನಲ್ಲುಳಿದಿದೆ. ಆದೀಗ ಅಸಹ್ಯವೆನಿಸಿದರೂ ಅನಿವಾರ್ಯವಾಗಿತ್ತು. ಜನಸಂಖ್ಯೆ ವಿರಳವಾಗಿದ್ದ ಕಾಲದಲ್ಲಿ, ಕೆಲಸಗಾರರ ಅಭಾವದಿಂದ ಬೇಸಾಯ ಕಷ್ಟವಾಗುತ್ತಿತ್ತು. ಅಂತ ಸಂದರ್ಭದಲ್ಲಿ ರೈತ ಮನೆಯಿಂದ ಹೊರಗೆ ತನ್ನವರನ್ನು ಕಳುಹಿಸಿದ್ದಾದರೆ ಬೇಸಾಯಕ್ಕೆ ತೊಂದರೆಯಾಗುತ್ತಿತ್ತು, ಬಹುಪತ್ನಿತ್ವ ಜಾರಿಗೆ ಬರಲು ಇದೂ ಒಂದು ಕಾರಣ. ರೋಗರುಜಿನಗಳಿಂದಾಗಿ ಜನನ ಸಂಖ್ಯೆಗಿಂತ ಮರಣ ಸಂಖ್ಯೆ ಹೆಚ್ಚು ಪ್ರಮಾಣದಲ್ಲಿರುತ್ತಿತ್ತು. ಮಗಳು ಮನೆ ಬಿಟ್ಟಳೆಂದರೆ ಕುಟುಂಬಕ್ಕೆ ಅಷ್ಟರಮಟ್ಟಿಗೆ ನಷ್ಟವಾಗುತ್ತಿತ್ತು. ಈ ನಷ್ಟತುಂಬುವ ಸಲುವಾಗಿ ತೆರದ ಏರ್ಪಾಡು ಜಾರಿಗೆ ಬಂದದ್ದುಂಟು. ಕೆಲವೊಮ್ಮೆ ಕನ್ಯಾವಿನಿಮಯದ ಮೂಲಕ ತೆರ ತಪ್ಪುತ್ತಿದ್ದುದುಂಟು.

ನಂಬಿಕೆಯೇ ಸಂಪ್ರದಾಯದ ತಾಯಿಯೆನ್ನುವುದಕ್ಕೆ ಮಧ್ಯಯೂರೋಪಿನಲ್ಲಿ ರೂಢಿಯಲ್ಲಿದ್ದ ವಿವಾಹ ಸಂಬಂಧವಾದ ಕೆಲವು ಆಚರಣೆಗಳನ್ನು ಉದಾಹರಿಸಬಹುದು. ಪ್ರೇತ ಭೂತಗಳರೂಪದಲ್ಲಿ ದುಷ್ಟಶಕ್ತಿಗಳು ಯಾವಾಗಲೂ ಮಾನವನನ್ನು ಪೀಡಿಸುತ್ತವೆಂಬ ಭಾವನೆ ಬಹು ಪ್ರಾಚೀನವಾದದ್ದು. ಶುಭಕಾರ್ಯಗಳಲ್ಲೆಲ್ಲ ಅವುಗಳ ರಾದ್ಧಾಂತವಿದ್ದೇ ಇರುತ್ತದೆ. ಮದುವೆಯ ಸಮಯದಲ್ಲಂತು ಅದನ್ನು ಕೆಡಿಸುವ ಸಲುವಾಗಿ ಆ ದುಷ್ಟಶಕ್ತಿಗಳು ಕಾದುಕೊಂಡಿರುತ್ತವೆ. ಹಿಂದಿನ ದಿನ ಸಂಜೆಯೇ ಅವುಗಳನ್ನು ಉಚ್ಚಾಟಿಸುವ ಸಲುವಾಗಿ ಅತಿಥಿಗಳು ಕೂಗಿಕೊಳ್ಳುತ್ತಾರಂತೆ.

ಕನ್ಯಾಪಹರಣ ವಿಧಾನ ಜಾರಿಯಲ್ಲಿದ್ದ ಕಾಲದಲ್ಲಿ, ಹೆಣ್ಣಿನ ನೆಂಟರಿಷ್ಟರಿಗೆ ಗೊತ್ತಾಗದಂತೆ ಅವಳನ್ನು ಗುಪ್ತಸ್ಥಾನಗಳಲ್ಲಿ ಬಚ್ಚಿಡುತ್ತಿದ್ದಾಗ ಮಧುಚಂದ್ರ ರೂಢಿಗೆ ಬಂತೆಂದು ಹೇಳುತ್ತಾರೆ. ಹಿಟ್ಟು ನೀರು ಉಪ್ಪುಗಳನ್ನು ಬೆರಸಿ ಮಾಡಿದ್ದ ಕೇಕು ಅಥವಾ ಬಿಸ್ಕತ್ತನ್ನು ಹೆಣ್ಣಿನ ತಲೆಯಮೇಲೆ ಮುರಿದು, ಮುರಿದ ಚೂರುಗಳನ್ನು ನೆಂಟರಿಷ್ಟರಿಗೆ ಹಂಚುತ್ತಿದ್ದ ಪದ್ಧತಿ ಪ್ರಾಚೀನ ರೋಮನರಲ್ಲಿತ್ತು. ರೊಟ್ಟಿ ಅಥವಾ ಬಿಸ್ಕತ್ತು ಫಲಶಕ್ತಿ, ಆತಿಥ್ಯ ಮತ್ತು ಅಭ್ಯುದಯಗಳ ಸಂಕೇತವೆಂದು ಗಣನೆಗೊಂಡಿತ್ತು. ಪ್ರಾಯಶಃ ಭಾರತೀಯ ವಿವಾಹಗಳಲ್ಲಿ ವಧೂವರರ ಶಿರದ ಮೇಲೆ ತಳಿಯುವ ಸೇಸೆಗೂ ಅದೇ ಅರ್ಥವಿದೆಯೇನೋ. ಮುಹೂರ್ತಸಮಯದಲ್ಲಿ ವಧೂವರರು ಬಿಳಿಬಟ್ಟೆಗಳನ್ನುಡುವ ಸಂಪ್ರದಾಯ ತೀರ ಹಳೆಯದು ಮತ್ತು ಹಲವು ದೇಶಗಳಲ್ಲಿ ರೂಢಿಯಲ್ಲಿರುವಂಥದು. ಶ್ವೇತವರ್ಣ ಪಾವಿತ್ರ್ಯ ಮತ್ತು ಸಾರಳ್ಯಗಳ ಸಂಕೇತವೆಂಬ ಭಾವನೆ ಇಂದಿಗೂ ಮರೆಯಾಗಿಲ್ಲ. ಮುಂದಿನ ವಧೂವರರ ಬಾಳು ಸಿಹಿಯಾಗಿರಲೆಂದು, ಅವರಲ್ಲೊಬ್ಬರ ಮುಖಕ್ಕಾಗಲೀ ತುಟಿಗಳಿಗಾಗಲೀ ಜೇನು ಸವರುವ ವಾಡಿಕೆ ರೋಡ್ಸ್ (Rhodes) ಮತ್ತು ಸ್ಪಾರ್ಟಗಳಲ್ಲಿ ಬಹುಕಾಲ ಚಾಲ್ತಿಯಲ್ಲಿತ್ತು. ಹೆಣ್ಣು ಗಂಡುಗಳ ಐಕ್ಯದ ಕುರುಹಾಗಿ ಕೆಲವು ಕಡೆ ಇಬ್ಬರ ಬೆರಳು ಹಿಡಿಸಿದರೆ, ಮತ್ತೆ ಕೆಲವು ಕಡೆ (ಸಿಲೋನ್) ಅವರ ಕೈಗಳನ್ನು ತುಸು ಹೊತ್ತು ಸರಪಳಿಯಲ್ಲಿ ಬಂಧಿಸುತ್ತಾರೆ; ಪೂರ್ವ ಆಫ್ರಿಕಾದ ಕೆಲವು ಜನಾಂಗಗಳಲ್ಲಿ

ವರ ಮದುವೆಯನಂತರ ಒಂದು ತಿಂಗಳತನಕ ತನ್ನ ಮಡದಿಯ ಬಟ್ಟೆಗಳನ್ನು ಧರಿಸಬೇಕು.
ದಕ್ಷಿಣ ಪೆಸಿಫಿಕ್ ದ್ವೀಪನಿವಾಸಿಗಳಾಗಿದ್ದ ಗ್ರಿಟೋ ಜನರ ಮದುವೆ ಅತ್ಯಂತ ಸರಳ.
ಹೆಣ್ಣು ಗಂಡುಗಳು ಯಜಮಾನನ ಬಳಿ ಹೋಗುತ್ತಾರೆ. ಅವನು ಅವರಿಬ್ಬರ ತಲೆಗೆ ಡಿಕ್ಕಿ
ಹೊಡೆಸಿ, ಅವರು ಗಂಡಹೆಂಡಿರೆಂದು ಸಾರುತ್ತಾನೆ. ಅಲ್ಲಿಗೆ ಮದುವೆ ಮುಗಿಯಿತು.
ಜಪಾನಿನ ಮದುವೆ ಮೆರವಣಿಗೆಯ ಮುಂಭಾಗದಲ್ಲಿ ಕೆಂಪು ಚಾವಟ ಹಿಡಿದ ಸಮವಸ್ತ್ರ
ಧಾರಿಗಳು ನಡೆಯುತ್ತಾರೆ. ದುಷ್ಟಶಕ್ತಿಗಳನ್ನು ದೂರವಿರಿಸುವುದೇ ಆ ಪದ್ಧತಿಯ ಅರ್ಥ.
ಬೋರ್ನಿಯೋ ದ್ವೀಪದ ಡ್ಯಾಕ್ (Dyaks) ಹುಡುಗ ಹುಡುಗಿಯರ ಪ್ರಣಯ
ರೋಮಿಯೋಜ್ಯೂಲಿಯಟ್ಟರ ಪ್ರಣಯ ಪ್ರಸಂಗದಂತೆ ಬಹಿರಂಗವಾಗಿ ಪ್ರಾರಂಭವಾಗು
ತ್ತದೆ. ಈ ಪ್ರಣಯವ್ಯಾಪಾರಗಳಿಗೆ ಅವರ ತಂದೆತಾಯಿಯರ ಅನುಮತಿಯುಂಟು.[1]

ಸಂಪ್ರದಾಯಗಳ ಮೊತ್ತವೇ ಸಮಾಜ, ಅವುಗಳ ಆಚರಣೆಯೇ ಜೀವನವೆಂದರೆ
ಅತಿಶಯೋಕ್ತಿಯಾಗಲಾರದು. ಮನುಷ್ಯ ಮಾತೃಗರ್ಭವನ್ನು ಹೊಕ್ಕಾಗಿನಿಂದ ಹಿಡಿದು
ಮಣ್ಣುಗೂಡುವ ತನಕ, ಒಂದಲ್ಲ ಒಂದು ಸಂಪ್ರದಾಯಕ್ಕೆ ಶರಣಾಗಿ ಬದುಕು ನಡೆಸ
ಬೇಕಾಗಿದೆ. ಈ ಹಲವಾರು ಸಂಪ್ರದಾಯಗಳ ಹಿನ್ನೆಲೆಯಲ್ಲಿರುವ ಕಾತರತೆಯೆಂದರೆ
ಅನಿಷ್ಟ ನಿವಾರಣೆ. ಪ್ರೇತಗಳು ಗರ್ಭವನ್ನು ಪ್ರವೇಶಿಸದಂತೆ, ಭ್ರೂಣಾವಸ್ಥೆಯಲ್ಲಿರುವ
ಮಗುವಿಗೆ ದುಷ್ಟಶಕ್ತಿಗಳ ಮುಟ್ಟು ತಟ್ಟದಂತೆ, ಚರಾಚರವಸ್ತುಗಳಲ್ಲಿ ಮನೆ ಮಾಡಿ
ಕೊಂಡಿರುವ ಭೂತಗಳಿಂದ ಹುಟ್ಟಿದ ಮಕ್ಕಳಿಗೆ ರಾವು ತಟ್ಟದಂತೆ ತಡೆಯುವುದೇ
ಸೀಮಂತ ಚೌಲ ಉಪನಯನ ದೀಕ್ಷಾಸ್ನಾನ ಮೊದಲಾದ ಶಾಸ್ತ್ರಕರ್ಮಗಳ ಉದ್ದೇಶ.
ಮಗುವಿಗೆ ಹಲ್ಲು ಬಂದಾಗ, ಅವನನ್ನು ಶಾಲೆಗೆ ಕಳಿಸುವಾಗ ಕೆಲವು ವಿಧಿಗಳನ್ನಾಚರಿ
ಸುವುದುಂಟು. ಬಾಣಂತಿಯ ಮೈಗೆ ದೋಷಗಳು ಬಹುಬೇಗನೆ ತಟ್ಟುತ್ತವಂತೆ. ಗಂಧರ್ವ
ಕನ್ಯೆಯರೋ ವನದೇವತೆಯರೋ ಬೇರೊಂದು ಮಗುವನ್ನಿರಿಸಿ, ಹುಟ್ಟಿದ ಮಗುವನ್ನೆತ್ತಿ
ಕೊಂಡು ಹೋಗುತ್ತಾರಂತೆ. ಬೆಂಕಿ ದೀಪಗಳನ್ನು ಕಂಡರವರಿಗೆ ಅಂಜಿಕೆ. ಆದ್ದರಿಂದ
ಜನನನಿರೀಕ್ಷೆ ಸನ್ನಿಹಿತವಾದೊಡನೆಯೇ ಗರ್ಭಿಣಿಯ ಹಾಸುಗೆಯ ಬಳಿ ದೀಪವಿಡಬೇಕು.

ಹುಟ್ಟು ಮದುವೆ ಸಾವುಗಳು ಮಾನವ ಜೀವನದ ಪ್ರಮುಖ ಸೋಪಾನಗಳು. ಅವನು
ಸತ್ತನಂತರ ಪ್ರೇತವಾಗುಳಿಯುತ್ತಾನೆ, ಅಥವಾ ಮತ್ತೆ ಹುಟ್ಟಿಬರುತ್ತಾನೆ, ಇಲ್ಲವೆ ಸ್ವರ್ಗ
ದಲ್ಲಿದ್ದು ಕೊಂಡು ತಿರೆಯವರ ಯೋಗಕ್ಷೇಮಗಳನ್ನು ವಿಚಾರಿಸಿಕೊಳ್ಳುತ್ತಾನೆ ಎಂಬ ನಂಬಿಕೆ
ಅನೇಕ ಮರಣೋತ್ತರ ಸಂಸ್ಕಾರಗಳಿಗೆ ಪ್ರೇರಕವಾಗಿದೆ. ಈ ಸಂಸ್ಕಾರಗಳು ಸಹ ಜನಾಂಗ
ದಿಂದ ಜನಾಂಗಕ್ಕೆ ಫಿರ್ಕಾದಿಂದ ಫಿರ್ಕಾಕ್ಕೆ ಬದಲಾವಣೆಯಾಗುತ್ತವೆ. ಬದಲಾಗುತ್ತ
ವೆಂದರೆ, ಸಾದೃಶ್ಯಗಳಿಲ್ಲವೆಂದಲ್ಲ. ಸಾದೃಶ್ಯಗಳಿಗಿಂತ ವೈದೃಶ್ಯಗಳೇ ಪ್ರಧಾನವಾಗಿರುವ
ಒಂದೆರಡು ಸಮಾಜಗಳ ಉತ್ತರಕ್ರಿಯೆಗಳನ್ನಿಲ್ಲಿ ಸಂಗ್ರಹಿಸಲಾಗಿದೆ. ಅಂಡಮಾನ್ ದ್ವೀಪ
ಗಳ ಕೆಲವು ಬುಡಕಟ್ಟುಗಳಲ್ಲಿ ಕಾಣುವ ರೂಢಿಗಳು ಮೆಲನೇಷಿಯಾ ಸಮಾಜದ ಪದ್ಧತಿ

1 An Article by Nora Secco de sonsa in, 'Deccan Herald' Weekly magazine, dated 20-6-1976.

ಗಳನ್ನು ಹೋಲುತ್ತವೆ. ಮಗು ಸತ್ತಾಗ ತಂದೆತಾಯಿಯರು ಮತ್ತು ಬಂಧುಗಳು ಶವದ ಬಳಿ ಕುಳಿತು ಅಳುತ್ತಾರೆ. ಕೆಲವು ಸಮಾಜಗಳಲ್ಲಿ ಕೂಲಿಕೊಟ್ಟು ಇತರರಿಂದ ಅಳಿಸುವುದುಂಟು. ತಂದೆತಾಯಿಯರು ಮೈಗೆ ಜೇಡಿಮಣ್ಣು ಬಳಿದುಕೊಳ್ಳುತ್ತಾರೆ. ತಲೆ ಬೋಳಿಸಿಕೊಂಡು ಒಂದು ಚೂರು ಮಣ್ಣು ಮೆತ್ತಿಸಿಕೊಳ್ಳುತ್ತಾರೆ. ಶೋಕದಿನಗಳು ಕಳೆಯುವತನಕ ಅದು ಇರಲೇಬೇಕು. ಅದೇನಾದರೂ ಬಿದ್ದುಹೋದರೆ ಹೊಸಮಣ್ಣು ಅಂಟಿಸಿಕೊಳ್ಳುತ್ತಾರೆ. ಹದಿನೆಂಟು ಗಂಟೆಯೊಳಗೆ ಹೆಣವನ್ನು ಸಮಾಧಿಮಾಡಬೇಕು. ತಂದೆ ಗುಂಡಿ ತೋಡುತ್ತಾನೆ. ಬೀಳ್ಕೊಡಿಗೆಯ ಕುರುಹಾಗಿ ತಂದೆತಾಯಿಯರು ಮಗುವಿನ ಹಣೆಯ ಮೇಲೆ ಉಫ಼ೆನ್ನುತ್ತಾರೆ. ಆ ಮೇಲೆ ಎಲೆ ಮುಚ್ಚಿ, ಗುಂಡಿಯೊಳಗೆ ಹೆಣವನ್ನು ಕೂರಿಸಿ, ಮಣ್ಣು ಮುಚ್ಚುತ್ತಾರೆ. ಬಿದಿರೆಲೆಯಿಂದ 'ಆರ' ಎಂದು ಕರೆಯುವ ತೋರಣವನ್ನು ತಯಾರಿಸಿ, ಗುಡಿಸಿಲಿನ ಸುತ್ತಣ ಮರಗಳಿಗೆ ಕಟ್ಟುತ್ತಾರೆ. ಸೂತಕದ ದಿನದಂದು ಅಪರಿಚಯಸ್ತರು ಅಲ್ಲಿಗೆ ಬರಬಾರದೆಂಬುದು ತೋರಣದ ಉದ್ದೇಶವಿರುವಂತೆ ತೋರುತ್ತದೆ. ಸಮಾಧಿಯ ಬಳಿ ಯಾವಾಗಲೂ ಬೆಂಕಿ ಜೀವಂತವಾಗಿರುತ್ತದೆ. ತಾಯಿ ಎದೆ ಹಾಲು ಕರೆದು ಸಮಾಧಿಯ ಬಳಿ ಚಿಪ್ಪಿನಲ್ಲಿಡುತ್ತಾಳೆ. ಗುಡಿಸಿಲಿನ ಸುತ್ತ ಅಲೆದಾಡುವ ಮಗುವಿನ ಆತ್ಮಕ್ಕೆ ಅದೇ ಆಹಾರ. ಅನಂತರ ತಮ್ಮ ಸಾಮಾನು ಕಟ್ಟಿಕೊಂಡು ಬೇರೆ ಕಡೆಗೆ ಹೋಗಿ ಬೀಡು ಬಿಡುತ್ತಾರೆ. ಶೋಕದಿನಾಚರಣೆಯ ಅವಧಿ ಮೂರು ತಿಂಗಳು. ಆ ಕಾಲವಲ್ಲಿ ಹಬ್ಬಹರಿದಿನಗಳ ಉತ್ಸವವಿಲ್ಲ; ಹಂದಿ ಮಾಂಸತಿನ್ನುವುದಿಲ್ಲ; ಲೈಂಗಿಕಭೋಗ ಸಲ್ಲದು. ಮೂರು ತಿಂಗಳ ನಂತರ 'ಆರ'ವನ್ನು ಕಿತ್ತುಹಾಕುತ್ತಾರೆ. ತಂದೆ ಸಮಾಧಿಯನ್ನಗೆದು ಮಗುವಿನ ತಲೆಬುರುಡೆ, ಮೂಳೆಗಳನ್ನೊಯ್ದು ಸಮುದ್ರದ ನೀರಿನಲ್ಲಿ ತೊಳೆಯುತ್ತಾನೆ. ಮೂಳೆಗಳಿಂದ ಕೊರಳ ಹಾರವಾಗುತ್ತದೆ. ಬುರುಡೆಗೆ ಬಣ್ಣಹಾಕಿ, ಚಿಪ್ಪುಗಳಿಂದಲಂಕರಿಸಿ, ತಾಯಿ ಅದನ್ನು ಕುತ್ತಿಗೆಗೆ ನೇತುಹಾಕಿಕೊಳ್ಳುತ್ತಾಳೆ. ಕೆಲವು ದಿನಗಳನಂತರ ಅದನ್ನು ತಂದೆ ಧರಿಸುತ್ತಾನೆ. ಮೂಳೆಹಾರಗಳನ್ನು ಮಿತ್ರರು ಕಾಣಿಕೆಯಾಗಿ ಸ್ವೀಕರಿಸುತ್ತಾರೆ. ಅನಂತರ ನೆಂಟರಿಷ್ಟರು ಹಳೆಯ ಗುಡಿಸಿಲ ಬಳಿ ನೆರೆಯುತ್ತಾರೆ. ತಂದೆ ಹಾಡು ಹೇಳುತ್ತಾನೆ. ಮಗು ಜೀವಂತವಾಗಿದ್ದಾಗ ಕೈಯಲ್ಲೆತ್ತಿಕೊಂಡು ಹಾಡುತ್ತಿದ್ದ ಹಾಡುಗಳೇ ಅವು. ಹೆಂಗಸರು ನೆಂಟರಿಷ್ಟರೆಲ್ಲ ಗೋಳಾಡುತ್ತ ಕುಣಿಯುತ್ತಾರೆ. ಆಯಾಸವಾದನಂತರ ಅವರು ತಂತಮ್ಮ ಮನೆಗಳಿಗೆ ತೆರಳುತ್ತಾರೆ.[1] ವಯಸ್ಕರಿಗೆ ಸಂಬಂಧಿಸಿದ ಉತ್ತರಕ್ರಿಯೆಗಳೇ ಬೇರೆ.[2]

ಹಿಂದಿನ ಕಾಲದಲ್ಲಿ ಕೆಲವು ಜನ ಹೆಣವನ್ನು ತಿನ್ನುತ್ತಿದ್ದುದುಂಟು. ಪಶುಪಕ್ಷಿಗಳಿಗೆ ಆಹಾರವಾಗಲೆಂದು ಮರದ ಮಂಚಿಗೆಯ ಮೇಲೆ ಶವವನ್ನಿಡುತ್ತಿದ್ದುದುಂಟು. ಎತ್ತರದ

---

[1] *The Andaman Islanders* by E. H. Man, pp. 73-75.

[2] ವಿವರಗಳಿಗೆ A. R. Radcliffe Brown ಅವರ *The Andaman Islanders* ಎಂಬ ಗ್ರಂಥವನ್ನೂ, Walte Hrtchiunson ಅವರು ಸಂಪಾದಿಸಿರುವ ಎರಡು ಸಂಪುಟಗಳ *Customs of the World* ಎಂಬ ಗ್ರಂಥವನ್ನೂ ನೋಡಿ ;

ಮಾಳಿಗೆಯ ಮೇಲೆ ಹೆಣವಿಡುವ ಪದ್ಧತಿ ಇಂದಿಗೂ ಪಾರ್ಸಿ ಜನಾಂಗದಲ್ಲಿ ರೂಢಿಯಲ್ಲಿದೆ. ಕೆಲವರು ಗವಿಗಳಲ್ಲಿ ಹೆಣವನ್ನಿಟ್ಟರೆ ; ಮತ್ತೆ ಕೆಲವರು ಕಲ್ಲಿನ ಪೆಟ್ಟಿಗೆಯಲ್ಲಿಡುತ್ತಿದ್ದರು. ಕೆಲವರು ಸಮಾಧಿಯಲ್ಲಿ ಹೆಣವನ್ನು ಮಲಗಿಸಿದರೆ, ಮತ್ತೆ ಕೆಲವರು ಕೂರಿಸುತ್ತಾರೆ. ಅವನ್ನು ಸುಡುಗಾಡಿಗೊಯ್ಯುವ ರೀತಿ ವಿಧಾನಗಳೂ ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸವಾಗುತ್ತವೆ.

ಮಂಡ್ಯದ ಸುತ್ತಮುತ್ತಣ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಮರಣೋತ್ತರ ಸಂಸ್ಕಾರಗಳನ್ನಿಲ್ಲಿ ಸಂಕ್ಷೇಪಿಸಬಹುದು.[1] ಮನುಷ್ಯ ಸತ್ತ ಕೂಡಲೇ ಕೈಕಾಲು ಮುರಿಯುತ್ತಾರೆ. ಮಣ್ಣಿನ ಹಣತೆಯಿರುವ ಬೆಲ್ಲದಚ್ಚನ್ನು ತಟ್ಟೆಯಲ್ಲಿ ರಾಶಿಗೊಳಿಸಿದ ಅಕ್ಕಿಯ ಮೇಲಿರಿಸಿ, ಅದನ್ನು ಹೆಣದ ತಲೆದೆಸೆಯಲ್ಲಿಡುತ್ತಾರೆ. ಹೆಣ ನೋಡಲು ಬರುವ ಹತ್ತಿರದ ನೆಂಟರಿಷ್ಟರು ಪಕ್ಕದ ಗೂಡೆಯಲ್ಲಿ ಬೆಲ್ಲ ಅಕ್ಕಿ ಹಾಕಿ ಹೋಗುತ್ತಾರೆ. ವೀಳೆದೆಲೆ ಅಡಕೆಗಳನ್ನು ಜಜ್ಜಿ ಉಂಡೆ ಕಟ್ಟಿ ಹೆಣದ ಬಾಯಿಗೆ ತುರುಕುತ್ತಾರೆ. ಮನೆಯ ಹೊರಗಡೆ ಬಾಗಿಲ ನೇರದಲ್ಲಿ ಕೊಳ್ಳಿಯೊಂದು ಉರಿಯುತ್ತದೆ. ಬೀದಿಯಲ್ಲಿ ನೀರು ಕಾಯಿಸಿ, ಹೆಣಕ್ಕೆ ಸ್ನಾನ ಮಾಡಿಸುತ್ತಾರೆ. ಕಾದ ನೀರು ಉಳಿಯಬಾರದು ; ಅದಕ್ಕೆ ತಣ್ಣೀರು ಬೆರಸಬಾರದು. ಸ್ನಾನಾನಂತರ ಹತ್ತಿರದ ನೆಂಟರು ಹೊಸ ಬಟ್ಟೆ ಉಡಿಸುತ್ತಾರೆ. ಹೊಸ ಬಟ್ಟೆಯೆಂದರೆ ಒಂದು ಬಿಳಿಯ ನಿಲುವಂಗಿ. ಚಟ್ಟದಲ್ಲಿ ಎರಡು ವಿಧ. ಉದ್ದಕ್ಕೆರಡು, ಅಡ್ಡಲಾಗೆರಡು ಬೊಂಬು ಹಾಕಿ ಕಟ್ಟುವುದು. ಅದರ ಮೇಲೆ ಹೆಣ ಮಲಗಿಸುತ್ತಾರೆ. ಕೂರಿಸಲನುಕೂಲವಾಗುವಂತೆ ಕಟ್ಟುವ ಚಟ್ಟಕ್ಕೆ ಕುರ್ಜು ಎಂದು ಹೆಸರು. ಅವುಗಳನ್ನು ಹೊರಲು ನಾಲ್ಕು ಜನ ಬೇಕು. ಮದುವೆಯಾಗದವರನ್ನು ಕಂಬಳಿಯಲ್ಲಿ ಸುತ್ತಿ, ಒಂದು ಗಳುವಿಗೆ ನೇತುಹಾಕಿಕೊಂಡು, ಹಂದಿ ಹೊರುವಂತೆ ಇಬ್ಬರು ಹೊರುತ್ತಾರೆ. ಚಟ್ಟವನ್ನು ಮೇಲೆತ್ತುವಾಗ ಪೂಜೆಯಾಗುತ್ತದೆ. ಊರಿನ ಹೆಬ್ಬಾಗಿಲಲ್ಲಿ ಮತ್ತೊಮ್ಮೆ ಪೂಜೆ ಸಲ್ಲುತ್ತದೆ. ಆಗ ಹಿಂದಿನವರು ಮುಂದೆ, ಮುಂದಿನವರು ಹಿಂದೆ ಬಂದು ಹೆಗಲು ಬದಲಾಯಿಸುತ್ತಾರೆ. ಚಟ್ಟದ ಮೇಲೆ ಪುರಿ ಕಾಸು ಎರಚುತ್ತಾರೆ. ಹೆಣದ ಮೈಮೇಲಿನ ಅಥವಾ ಕೆಳಗೆ ಬಿದ್ದ ಕಾಸುಗಳನ್ನು ಕೆಲವರು ಕಾಯ್ದಿರಿಸಿಕೊಳ್ಳುತ್ತಾರೆ. ಭೇದಿಯಾಗುವ ಮಕ್ಕಳಿಗೋ ಎಳ ವಾದವರಿಗೋ ಅದನ್ನು ತೋಳಿಗೋ ಉಡಿದಾರಕ್ಕೋ ಕತ್ತಿಗೋ ಬಟ್ಟೆ ಸುತ್ತಿ ಕಟ್ಟುವರೆ ಅನಿಷ್ಟ ಪರಿಹಾರವಾಗುತ್ತದೆಂಬ ನಂಬಿಕೆಯಿದೆ. ತಂದೆಯ ಹೆಣವಾದರೆ ಹಿರಿಯ ಮಗನೂ, ತಾಯಿಯ ಹೆಣವಾದರೆ ಕಿರಿಯ ಮಗನೂ, ಮಕ್ಕಳಿಲ್ಲದಾಗ ಪಂಚಾಯಿತಿಯವರು ನಿರ್ಣಯಿಸಿದ ಅವರ ಹತ್ತಿರದ ಬಂಧುವೊಬ್ಬನು ಚಟ್ಟದ ಮುಂದೆ ತಲೆಕೊಳ್ಳಿ ಹಿಡಿದು ಮುಂದೆ ನಡೆಯುತ್ತಾನೆ. ಅವನೇ ಮುಂದೆ ಕರ್ಮಾಂತರ ಮಾಡಿಸಿಕೊಳ್ಳುತ್ತಾನೆ. ಅಷ್ಟೇ ಅಲ್ಲ, ಮಗನಿಲ್ಲದಿದ್ದರೆ ಅವನೇ ಆಸ್ತಿಗೆ ಹಕ್ಕುದಾರನಾಗುತ್ತಾನೆ.

---

1 ಇವನ್ನು ವಿವರಿಸಿದವರು ಶ್ರೀ ಕೆ. ಟಿ. ವೀರಪ್ಪನವರು. ಕೆಲವು ಭಾಗಗಳಲ್ಲಿ ವ್ಯತ್ಯಾಸ ಇರಬಹುದಾದರೂ, ಚನ್ನಪಟ್ಟಣ ತಾಲ್ಲೂಕಿನಲ್ಲಿಯೂ ಇಂಥವೇ ಆಚರಣೆಗಳು ರೂಢಿಯಲ್ಲಿವೆ. ಈ ವಿವರಣೆಗಳು ಒಕ್ಕಲಿಗರ ಜಾತಿಗೆ ಸೀಮಿತವಾದುವೆಂಬುದನ್ನು ಮರೆಯಬಾರದು.

ಸುಡುಗಾಡಿನಲ್ಲಿ ಗುಂಡಿ ಒಂದೇ ಕಡೆ ತೆಗೆಯಬೇಕೇ ಹೊರತು, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ ತೆಗೆಯಬಾರದು. ಗುಂಡಿ ಸುಲಭವಾಗಿ ಹರಿದರೆ ಸತ್ತವನು ಧರ್ಮಿಷ್ಠನೆಂದೂ, ಹರಿಯದಿದ್ದರೆ ಕೃಪಣನೆಂದೂ ಹೇಳುತ್ತಾರೆ. ಗರ್ಭಿಣಿ ಬಾಣಂತಿಯರು ಅಥವಾ ತೊನ್ನಿನವರ ಹೆಣವಾದರೆ ಸುಡುತ್ತಾರೆ. ಗರ್ಭಿಣಿಯ ಹೊಟ್ಟೆ ಬಗಿದು, ಮಗುವನ್ನು ಹೊರ ತೆಗೆದು, ತಾಯಿಯ ಪಕ್ಕದಲ್ಲಿಡುತ್ತಾರೆ. ತೊನ್ನಿನ ಹೆಣವನ್ನು ಸುಡದೆ ಹೂತದ್ದಾದರೆ ಮಳೆ ಬೀಳದೆ ಬರ ಬರುತ್ತದೆಂಬ ನಂಬಿಕೆ ರೂಢಿಯಲ್ಲಿದೆ. ಗುಂಡಿಯೊಳಗೆ ಹೆಣ ಮಲಗಿಸುವುದೊಂದು ಬಗೆಯಾದರೆ, ಗುಂಡಿಯೊಳಗೆ ಕೋಬು ಮಾಡಿ, ಅದರೊಳಗೆ ತಲೆ ನುಗ್ಗಿಸಿ ಮಲಗಿಸುವುದಿನ್ನೊಂದು ಬಗೆ. ಗುಂಡಿಯ ಗೂಡಿನೊಳಗೆ ಕೆಳಗೆ ಕಲ್ಲಿಟ್ಟು, ಅದರ ಮೇಲೆ ಉಪ್ಪು ಸುರಿದು, ತಡಿಕೆ ಕವೆಗಳನ್ನು ಊರೆ ಕೊಟ್ಟು, ಹೆಣ ಕೂರಿಸುವುದು ಮತ್ತೊಂದು ವಿಧಾನ. ಅನಂತರ ಮಾಮೂಲಿನಂತೆ ಪೂಜೆಯಾಗಿ ಮಣ್ಣು ಮುಚ್ಚುತ್ತಾರೆ. ಹೆಣದೊಡನೆ ಬಂದವರೆಲ್ಲ ಒಂದೊಂದು ಹೆಂಟೆಯನ್ನು ದುವ್ವೆಯ ಮೇಲೆಸೆಯುವುದುಂಟು. ಕಡೆಗೆ ಕೆಲಸಗಾರರು ಸಮಾಧಿಯನ್ನು ಚೌಕಾಕಾರವಾಗಿ ಸಮೆಸುತ್ತಾರೆ. ಅವರು ಮಣ್ಣು ತುಂಬುವಾಗ ಎರಡು ಕಾಲೆಡೆಯಲ್ಲಿ ಗುದ್ದಲಿ ತೂರಬಾರದು; ಗುದ್ದಲಿಯಿಂದ ಪಕ್ಕಕ್ಕೆಸೆಯಬೇಕು. ತಲೆವೆಸೆಯಲ್ಲಿ ಮೂರು ಕಲ್ಲೋ ಮೂರು ಇಟ್ಟಿಗೆಯೋ ಇಟ್ಟು ಗೂಡು ಮಾಡಿ, ದೀಪ ಇಡಬೇಕು. ಹೆಣದ ತಲೆ ಮಲಗಿಸಿದಾಗ ದಕ್ಷಿಣದ ಕಡೆ ಗಿರುತ್ತದೆ, ಕೂರಿಸಿದಾಗ ಉತ್ತರಮುಖಿಯಾಗಿರುತ್ತದೆ. ದೀಪದ ಬಳಿ ಉತ್ತರಾಣಿ ಗಿಡ ನೆಡುವುದುಂಟು. ಸಮಾಧಿಯ ಮೇಲೆ ಪೂರ್ವಪಶ್ಚಿಮಾಭಿಮುಖವಾಗಿ ಮೂರು ಸಾರಿ ಕೋಳಿಮರಿಯನ್ನೆಸೆಯುತ್ತಾರೆ. ಮೂರು ಸುತ್ತಾದ ನಂತರ ಅದನ್ನು ಯಾರು ಬೇಕಾದರೂ ಹಿಡಿದುಕೊಳ್ಳಬಹುದು. ಕೊನೆಗೆ ಗುದ್ದಲಿ ಪಿಕಾಸಿಗಳನ್ನು ಸಹ ಹಿಂದಿನಂತೆಯೇ ಎಸೆದು, ಶಾಸ್ತ್ರ ಪೂರೈಸಿದ ನಂತರ ತೆಗೆದುಕೊಂಡುಹೋಗುತ್ತಾರೆ. ಬೆಲ್ಲ ಅಕ್ಕಿ ಸಂಗ್ರಹಗೊಂಡಿದ್ದ ಹೆಡಗೆ ಹೆಣದ ಜತೆಯಲ್ಲಿಯೇ ಬಂದಿರುತ್ತದೆ. ಅಕ್ಕಿ ಬೆಲ್ಲಗಳನ್ನು ಅಗಸ ಹಜಾಮ ಹರಿಜನರಿಗೆ ಹಂಚುತ್ತಾರೆ.

ಬಂದವರು ವಾಪಸ್ಸು ಹೋಗುವಾಗ ಹತ್ತಿರದ ಕೊಳದಲ್ಲಿ ನೀರು ಮುಟ್ಟಬೇಕು. ಮುಟ್ಟುವುದೆಂದರೆ ಕೈಯಲ್ಲಿ ನೀರು ತೆಗೆದುಕೊಂಡು ತಲೆಯ ಮೇಲೆ ಸಿಂಪಡಿಸಿಕೊಳ್ಳುವುದೆಂದರ್ಥ. ಕೊಳದ ಬಳಿ ಎಲೆಯಡಿಕೆ ವಿತರಣೆಯಾಗುತ್ತದೆ. ಪ್ರತಿಯೊಬ್ಬರೂ ಎಲೆಯಡಿಕೆ ಪಡೆಯಲೇಬೇಕು. ಅನಂತರ ಎಲ್ಲರೂ ಸತ್ತವರ ಮನೆಗೆ ಹೋಗಿ ಅಲ್ಲಿ ಉರಿಯುತ್ತಿರುವ ಹಣತೆಯನ್ನು ನೋಡಿಕೊಂಡು, ತುಸು ಕುಳಿತಿದ್ದು, ಅನಂತರ ಮುಂದಡಿಯಿಡಬೇಕು. ಆ ಹಣತೆ ತಿಥಿ ಮುಗಿಯುವ ತನಕ ಉರಿಯುತ್ತದೆ. ಹೋಗುವಾಗ ಯಾರೇ ಆಗಲಿ 'ಹೋಗ್ತೀನಿ' ಎನ್ನಬಾರದು. ಹೊರ ಊರಿನಿಂದ ಬಂದಿರುವ ಜನ ನೆಲ ಬಾಯಿ ತೆರೆದದ್ದಾದ್ದರಿಂದ ಅಲ್ಲಿ ಆ ದಿನ ನಿಲ್ಲಬಾರದು. ತಂತಮ್ಮ ಊರುಗಳಿಗೆ ಹೋಗಿ, ಅವಶ್ಯವಿದ್ದರೆ ಮಾರನೆಯ ದಿನ ಬರಬಹುದು. ಅಕಸ್ಮಾತ್ ತಂಗಬೇಕಾದ ಪ್ರಸಂಗ ವೊದಗಿದ್ದಾದರೆ, ಮಾರನೆಯ ದಿನವೂ ಇದ್ದು, ಮೂರನೆಯ ದಿನ ಹೋಗಬೇಕು. ಆ

ತನಕ ಬಂಧುಗಳು ಉಂಡಿರುವುದಿಲ್ಲ. ಸ್ನಾನ ಮಾಡಿ, ಬೇರೆ ಬಂಧುಗಳ ಮನೆಯಲ್ಲಿ ಉಣ್ಣಬಹುದು. ಕೆಲವು ಕಡೆ ತಿಥಿ ಮುಗಿಯುವ ತನಕ ಸತ್ತವರ ಮನೆಯವರಿಗೆಲ್ಲರಿಗೂ ಊಟ ಬಂಧುಗಳ ಮನೆಗಳಲ್ಲಿ ನಡೆಯುತ್ತದೆ.

ಐದನೆಯ ದಿನ ಹಾಲು ತುಪ್ಪದ ಶಾಸ್ತ್ರ. ಹೆಣ ಸುಟ್ಟಿದ್ದರೆ ಮೂಳೆ ಆರಿಸಿಕೊಂಡು ಹೊಸ ಕುಡಿಕೆಯಲ್ಲಿಟ್ಟು ಮರದ ಮೇಲೆ ಕಟ್ಟುತ್ತಾರೆ. ಸುಟ್ಟ ಜಾಗದಲ್ಲಿ ಹೊಸ ಮೊಗೆಯಿಂದ ನೂರೊಂದು ಸಾರಿ ನೀರು ಹೊಯ್ದು, ಸಮಾಧಿ ಸಮೆಯುತ್ತಾರೆ. ಹೂತಿದ್ದರೆ, ಮೊದಲೇ ಇದ್ದ ಸಮಾಧಿಯನ್ನು ಸಮ ಮಾಡುತ್ತಾರೆ. ಆ ಜಾಗದಲ್ಲಿ ಸಗಣಿ ಹಾಕುತ್ತಾರೆ. ಹೊಂಬಾಳೆ ನಾಟಿ ಹಾಲು ತುಪ್ಪ ಬಿಡುತ್ತಾರೆ.

ಹನ್ನೊಂದನೆಯ ದಿನ ಎಡೆಶಾಸ್ತ್ರ. ಮುಂಚಿನ ದಿನಗಳಿಂದಲೇ ಸತ್ತವರಿಗೆ ಪ್ರಿಯವಾಗಿದ್ದ ತಿಂಡಿತಿನಿಸುಗಳನ್ನು ಅಣಿಗೊಳಿಸುತ್ತಾರೆ. ತಿಥಿಯ ದಿನ ಕೋಣೆಯ ಹೊರಗೆ ಹೊಸ ಮಡಕೆಯಲ್ಲಿ ಅರಿಶಿನದ ಅನ್ನ ಮಾಡುತ್ತಾರೆ. ಹಣ್ಣುಹಂಪಲು ತಿಂಡಿತಿನಿಸುಗಳನ್ನು ತೆಗೆದುಕೊಂಡು ಹೆಣದ ಮಾಳಕ್ಕೆ ಹೋಗುತ್ತಾರೆ. ದುಪ್ಪೆಯ ಮೇಲೆ ಬಾಳೆಎಲೆ ಹಾಸಿ, ಹೊರಸುತ್ತಿನಲ್ಲಿ ನೂರೊಂದು ನಿಂಬೆಹೋಳು, ನೂರೊಂದು ವೀಳೆಯದೆಲೆ ಜೋಡಿಸುತ್ತಾರೆ. ನಾಲ್ಕು ಮೂಲೆಗಳಲ್ಲಿ ನಾಲ್ಕು ದೊನ್ನೆ ಜೋಡಿಸುತ್ತಾರೆ. ತಲೆದೆಸೆಯಲ್ಲಂತು ಹೊಂಬಾಳೆಯೂ ಅವರದಿ ಹಣತೆಯೂ ಇರಬೇಕು. ಸಮಾಧಿಯ ಮೇಲೆ ಒಳಸುತ್ತಿನಲ್ಲಿ ತಿಂಡಿತಿನಿಸುಗಳನ್ನು ಸುರಿಯುತ್ತಾರೆ. ಮುಂದೆ ಬಂಧುಗಳಿಂದ ಪೂಜೆ ನಡೆಯುತ್ತದೆ. ಅವರು ಹಾಲು ತುಪ್ಪ ಬಿಟ್ಟು, ಧೂಪ ಹಾಕಿ, ಮಂಗಳಾರತಿ ಎತ್ತುತ್ತಾರೆ. ಸತ್ತವನು ಗಂಡನಾದರೆ ಹೆಂಡತಿಗೆ ಆ ದಿನ ತಾಯಿ ಮನೆಯ ಹೊಸ ಬಟ್ಟೆಯುಡಿಸಿ, ಹೊಸ ಬಳೆ ತೊಡಿಸಿ, ಕುಂಕುಮವಿಟ್ಟು, ಹೂ ಮುಡಿಸಿ ಸಿಂಗಾರ ಮಾಡುತ್ತಾರೆ. ಸಮಾಧಿಯ ಮೇಲೆ ಬಳೆ ಒಡೆಸಿ, ತಲೆಯ ಹೂವು ಬಿಚ್ಚಿಸಿ, ಕುಂಕುಮವನ್ನಳಿಸುತ್ತಾರೆ. ಆ ಮೇಲೆ ಕರ್ಮಾಂತರ ಎಂದರೆ ತಲೆ ಬೋಳಿಸಿಕೊಂಡ ಮಗ ಅಥವಾ ಬಂಧು ಒಳಗೆರೆಯಲ್ಲಿ ಮಿಂದು, ತೇವದ ಬಟ್ಟೆಯುಟ್ಟುಕೊಂಡೇ, ನೀರು ತುಂಬಿದ ಹೊಸ ಗಡಿಗೆಯನ್ನು ಹೆಗಲ ಮೇಲಿರಿಸಿಕೊಂಡು ಸಮಾಧಿಯನ್ನು ಮೂರು ಸುತ್ತು ಬಳಸುತ್ತಾನೆ. ಹಾಗೆ ಬಳಸುವಾಗ ಯಾರಾದರೊಬ್ಬರು ಸಮಾಧಿಯ ಕಾಲುದೆಸೆಯಲ್ಲಿ ನಿಂತು ಕುಡುಗೋಲಿನಿಂದ ಗಡಿಗೆಯನ್ನು ಕುಟುಕಿ ತೂತು ಮಾಡುತ್ತಾರೆ. ಮೂರು ಬಳಸು ಮುಗಿದ ನಂತರ ಗಡಿಗೆ ಹೊತ್ತವನು ಉತ್ತರ ಕಡೆಗೆ ತಿರುಗಿಕೊಂಡು ಸಮಾಧಿಯ ಮೇಲೆ ಎತ್ತಿಹಾಕಿ, ಬಾಯಿ ಬಡಿದುಕೊಂಡು ಹೊರಟು ಹೋಗುತ್ತಾನೆ. ಜನರೆಲ್ಲ ಹೋದ ನಂತರ ಕಾಗೆ ಮೊದಲಾದ ಹಕ್ಕಿಗಳು ಹಿಂಡಿಕೂಳು ತಿನ್ನಲು ಬರುತ್ತವೆ. ಅವು ಬರಲಿಲ್ಲ ಎಂದರೆ, ಸತ್ತವನು ಪುಣ್ಯವಂತನಲ್ಲ ಎಂದುಕೊಳ್ಳುತ್ತಾರೆ.

ಮುಂದೆ ಮನೆಯಲ್ಲಿಯೂ ಎಡೆಯಿಟ್ಟು ಪೂಜೆ ಮಾಡುತ್ತಾರೆ. ಸತ್ತವನ ಮಡಿವಸ್ತ್ರಗಳನ್ನೂ, ಅವನಿಗೆ ಪ್ರಿಯವಾದ ಬೀಡಿ ಸಿಗರೇಟು ವೀಳೆಯದೆಲೆ ಮೊದಲಾದ ವಸ್ತುಗಳನ್ನೂ ಎಡೆಯಿಡುತ್ತಾರೆ. ಸಿದ್ಧಗೊಳಿಸಿರುವ ತಿಂಡಿ ಪದಾರ್ಥಗಳನ್ನು ಬಾಳೆಎಲೆಯ

ಮೇಲೆ ಸುರಿಯುತ್ತಾರೆ. ಹತ್ತಿರದ ಬಂಧುಗಳೆಲ್ಲರು ಪೂಜೆ ಮಾಡಿದ ನಂತರ ಬಾಗಿಲು ಮುಚ್ಚಿಕೊಳ್ಳುತ್ತಾರೆ. ಈ ಮಧ್ಯೆ ಕರ್ಮಾಂತರ ಮಾಡಿಸಿಕೊಂಡಿದ್ದ ಮಗ ಸುಡುಗಾಡಿನಿಂದ ನೇರವಾಗಿ ದೇವಾಲಯಕ್ಕೆ ಹೋಗಿರುತ್ತಾನೆ. ಮೂರು ಹರಳುಕಲ್ಲು ಮತ್ತು ಬೆಣ್ಣೆಯನ್ನು ದೇವಾಲಯದ ಬಾಗಿಲಿಗೆಸೆದು, 'ಸಗ್ಗದ ಬಾಗಿಲು ಬಗ್ಗನೆ ತೆಗಿ' ಎಂದು ಕೇಳಿಕೊಳ್ಳುತ್ತಾನೆ. ಒಳಗಿನಿಂದ ಪೂಜಾರಿ ಬಾಗಿಲು ತೆಗೆಯುತ್ತಾನೆ. ಮಂಗಳಾರತಿ ಮುಗಿದ ನಂತರ, ಮಗ ಮನೆಗೆ ಬಂದು ಎಡೆಯಿಕ್ಕಿದ ಕೋಣೆಯ ಬಾಗಿಲು ತೆರೆದು, ಮತ್ತೆ ಪೂಜೆ ಮಾಡುತ್ತಾನೆ. ಅನಂತರ ನೆಂಟರಿಷ್ಟರಿಗೆ ಊರವರಿಗೆ ಊಟವಾಗುತ್ತದೆ. ಎಡೆಯೂಟ ಮಾತ್ರ ಹತ್ತಿರದ ನೆಂಟರಿಗೆ ಹಂಚಿಕೆಯಾಗುತ್ತದೆ.

ಸತ್ತ ದಿನ ಹಚ್ಚಿಟ್ಟ ಹಣತೆಯ ಮೇಲೆ ಹೆಡಗೆ ದಬ್ಬಾಕಿರುತ್ತಾರೆ. ಅದನ್ನು ಆಗಾಗ್ಗೆ ತೆಗೆದು ಎಣ್ಣೆ ಹಾಕುತ್ತಾರೆ. ಹನ್ನೆರಡನೆಯ ದಿನ ಹೆಡಗೆ ಎತ್ತುತ್ತಾರೆ. ಹಣತೆ ತಾನಾಗಿಯೇ ತುಂಬಿಹೋಗುತ್ತದೆ.

ಸೋಮವಾರ ಮಧ್ಯಾಹ್ನ ಸತ್ತು ಮಂಗಳವಾರ ಸಮಾಧಿಯಾದರೆ ಶುಭವಂತೆ. ಅಮಾವಾಸ್ಯೆಯ ದಿನ ಮನೆಯೊಳಗೆ ಸತ್ತರೆ ಒಂದು ತಿಂಗಳು ಮನೆ ಬಿಡಬೇಕು ; ತ್ರಿಪಾದಿ ನಕ್ಷತ್ರದಲ್ಲಿ ಸತ್ತರೆ ಆರು ತಿಂಗಳು ಬಿಡಬೇಕು. ಬೇರೆ ದಿನ ಯೋಚನೆಯಿಲ್ಲ.

ಕೆಲವು ಸಮಾಜಗಳಲ್ಲಿ ಹತ್ತಿರದ ಬಂಧುಗಳು ದುಃಖದ ಕುರುಹಾಗಿ ಕಿವಿಯ ಅಥವಾ ಬೆರಳಿನ ಭಾಗವನ್ನು ಕತ್ತರಿಸಿ, ಶವದ ಮೇಲೆ ರಕ್ತ ತೊಟ್ಟಿಕ್ಕಿಸುತ್ತಾರೆ. ಸತ್ತವರ ಆತ್ಮಕ್ಕೆ ಚೈತನ್ಯವೊದಗಿಸುವುದೂ ಈ ಕ್ರಿಯೆಯ ಉದ್ದೇಶಗಳಲ್ಲೊಂದೆಂದು ಹೇಳುತ್ತಾರೆ. ಪ್ರೇತದ ಬಳಕೆಗಾಗಿ ದುಪ್ಪೆಯ ಮೇಲೆ ತಿಂಡಿತಿನಿಸುಗಳನ್ನಿಡಲಾಗುತ್ತದೆಂಬ ತಿಳಿವಳಿಕೆ ಅನೇಕ ಜನಾಂಗಗಳಲ್ಲಿ ರೂಢಿಯಲ್ಲಿದೆ. ಪ್ರೇತಗಳನ್ನೋಡಿಸುವ ಸಲುವಾಗಿ ಕೃತ್ರಿಮ ಕುಸ್ತಿಗಳೂ ಕೆಲವು ಕಡೆ ಬಳಕೆಯಲ್ಲಿವೆ. ಮತ್ತೆ ಕೆಲವು ಕಡೆ ಆತ್ಮಹತ್ಯೆಯೇ ಕಾರಣವಾಗಿ ಬಿದ್ದ ಹೆಣವನ್ನು ನಿತ್ಯದ ಬಾಗಿಲ ಮೂಲಕ ಕೊಂಡೊಯ್ಯುವುದಿಲ್ಲ. ಗೋಡೆಯಲ್ಲೊಂದು ಕಂಡಿ ಮಾಡಿ, ಆ ಮೂಲಕ ಸಾಗಿಸಿದನಂತರ ಅದನ್ನು ಮುಚ್ಚುತ್ತಾರೆ. ಪ್ರೇತ ಹೆಣ ಹೋದ ದಾರಿಯಲ್ಲಿಯೇ ಬರುತ್ತದೆಂದು, ಕಂಡಿ ಮುಚ್ಚಿಬಿಟ್ಟರೆ ಅದು ಹಿಂದಕ್ಕೆ ಬರುವುದಿಲ್ಲವೆಂದೂ ಕೆಲವು ಜನರ ನಂಬಿಕೆ.

ಕೃಷಿಪ್ರಧಾನವಾದ ದೇಶಗಳಲ್ಲಿ ಮಳೆ ಬರಿಸುವ ಸಂಪ್ರದಾಯಗಳು ಅಸಂಖ್ಯಾತವಾಗಿವೆ. ಮುಂಬಯಿ ಸುತ್ತಮುತ್ತಣ ಪ್ರದೇಶದಲ್ಲಿ ಕುಂಬಾರರು ಮಣ್ಣಿನಲ್ಲಿ ಶಿವಲಿಂಗವನ್ನು ಮಾಡಿ, ಮರದ ಮಣೆಯ ಮೇಲೆ ಪೂಜಿಸಿ, ಬೆತ್ತಲೆ ಹುಡುಗನ ಮೇಲೆ ಹೊರಿಸುತ್ತಾರೆ. ಅವನನ್ನು ಮನೆಯಿಂದ ಮನೆಗೆ ಒಯ್ದಾಗ ಹೆಂಗಸರು ಲಿಂಗದ ಮೇಲೆ ನೀರು ಹುಯ್ಯುತ್ತಾರೆ. ಥಾಣಾ ಜಿಲ್ಲೆಯ ಜನ ನೀರೊಳಗಿನ ಕಲ್ಲನ್ನು ಪೂಜಿಸಿ, ಹುಡುಗನೊಬ್ಬನ ಮೇಲೆ ಹೊರಿಸುತ್ತಾರೆ. ಅವನು ಮನೆ ಮನೆಗೂ ಅದನ್ನು ಹೊತ್ತು ಹೋದಾಗ, ಮನೆಯವರು ಅದರ ಮೇಲೆ ನೀರು ಸುರಿಯುತ್ತಾರೆ. ಗ್ರಾಮದೇವತೆಗೆ ಹಬ್ಬವನ್ನಾಚರಿಸಿದರೆ ಮಳೆ ಬರುತ್ತದೆಂಬ ನಂಬಿಕೆ ಕೆಲವರಲ್ಲಿದೆ. ಧಾರಾಕಾರವಾಗಿ ಮಳೆ ಸುರಿದು,

ಕೆರೆಕಟ್ಟೆ ಒಡೆದು, ಬೆಳೆಗಳು ನಾಶವಾಗುವಂತಿದ್ದರೆ, ಮಳೆ ನಿಲ್ಲಿಸುವ ಸಲುವಾಗಿ ಕೆಲವು ಉಪವಾಸನಾವಿಧಿಗಳನ್ನು ಜರುಗಿಸುವುದುಂಟು. ಗೊತ್ತಾದ ದಿನ ಯಾರೂ ಅಡುಗೆ ಮಾಡಕೂಡದು, ನೀರು ತರಕೂಡದು, ಬಟ್ಟೆ ಒಗೆಯಬಾರದು, ಉಳಿದ ಯಾವ ಕೆಲಸ ವಿದ್ದರೂ ಬಿಟ್ಟು ಎಲ್ಲರೂ ಉಪವಾಸವಿದ್ದು ಇಡೀ ದಿನ ಪೂಜೆಪುನಸ್ಕಾರಗಳಲ್ಲಿ ಮಗ್ನ ರಾಗಿರಬೇಕೆಂದು ಊರ ಗೌಡ ಸಾರಿಸುತ್ತಾನೆ. ಹಾಗೂ ಮಳೆ ನಿಲ್ಲದಿದ್ದರೆ ಅವನು ಜನರನ್ನು ಮೆರವಣಿಗೆಯಲ್ಲೊಯ್ದು ಊರ ಗುಡಿಯಲ್ಲಿ ಜಲದೇವಿಗೆ ನೈವೇದ್ಯವರ್ಪಿಸು ತ್ತಾನೆ. ಹುಡುಗನೊಬ್ಬನನ್ನು ಮಳೆರಾಯನೆಂದು ಭಾವಿಸಿ ಹೂತಳಿರುಗಳಿಂದಲಂಕರಿಸಿ, ಊರ ಸುತ್ತ ಕರೆದೊಯ್ದು, ಮನೆ ಮನೆಯ ಜನ ನೀರು ಹೊಯ್ದು, ಕೊಟ್ಟ ಅಕ್ಕಿ ಪಡಿಯಿಂದ ಊರ ಮುಂದಿನ ಕೆರೆಯ ಬಳಿ ಪರ ಮಾಡಿ, ಮಳೆರಾಯನಿಗೆ ಮೊದಲು ನೈವೇದ್ಯವರ್ಪಿಸಿ, ಅನಂತರ ಊರವರೆಲ್ಲ ಪ್ರಸಾದ ಹಂಚಿಕೊಂಡು ಉಣ್ಣುವ ಪದ್ಧತಿ ಕರ್ನಾಟಕದ ಕೆಲವೆಡೆಗಳಲ್ಲಿ ರೂಢಿಯಲ್ಲಿದೆ. ಊರಿನಲ್ಲಿ ಮೆರವಣಿಗೆ ಬಯ್ಯುವಾಗ ಹುಡುಗರು ಮುಂದಿನ ಹಾಡನ್ನು ಮೇಳದಲ್ಲಿ ಹಾಡುತ್ತಾರೆ:

ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೆಯ ತೋಟಕೆ ನೀರಿಲ್ಲ
ಕರೆಯೊ ಕರೆಯೊ ಮಳೆರಾಯ
ಕಬ್ಬಿನ ತೋಟಕೆ ನೀರಿಲ್ಲ
ಕುಟ್ಟೋ ಕುಟ್ಟೋ ಮಳೆರಾಯ
ಕಟ್ಟೆಗೆ ಕೆರೆಗೆ ನೀರಿಲ್ಲ.
ಕಾರೆಕಾಯಿ ಕಂಕಣ
ಬೇಲದಕಾಯಿ ಬೆಳ್ಳಿ ಗುಂಡು
ಹುಯ್ಯೋ ಹುಯ್ಯೋ ಮಳೆರಾಯ
ಮಳೆರಾಯನ ಹೆಂಡ್ತಿ ಮಕ್ಕಳತಾಯಿ
ಹುಯ್ಯೋ ಹುಯ್ಯೋ ಮಳೆರಾಯ

ಆಯಾಯ ಊರಿನ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಈ ಸಾಲುಗಳು ವ್ಯತ್ಯಾಸ ಗೊಳ್ಳುತ್ತವೆ; ಆಂಜನೇಯ ಲಾಂಗೂಲದಂತೆ ಬೆಳೆಯುತ್ತವೆ.

ಹಳಬರಾಗಲಿ ಹೊಸಬರಾಗಲಿ ನಂಬಿಕೆ ಮತ್ತು ಸಂಪ್ರದಾಯಗಳಿಂದ ಸಂಪೂರ್ಣವಾಗಿ ವಿಮುಕ್ತರಾದವರಿಲ್ಲ. ಅತ್ಯಾಧುನಿಕರೂ ದೇವರ ಕೋಣೆಯಲ್ಲಿ ಗಂಧದ ಕಡ್ಡಿ ಹಚ್ಚುತ್ತಾರಷ್ಟೆ. ಧೂಪದ ಹೊಗೆ ದುಷ್ಟಶಕ್ತಿಗಳನ್ನು ದೂರವಿಡುವ ಸಾಧನವೆಂದು ಹಿಂದಿನವರು ನಂಬಿದ್ದನ್ನೇ ಇಂದಿನವರು ಈ ಮೂಲಕ ಪಾಲಿಸುತ್ತಿದ್ದಾರೆ. ಅನೇಕ ವೈಜ್ಞಾನಿಕ ವಿಷಯಗಳೂ ನಂಬಿಕೆಗಳಾಗಿ ಬೇರೂರುವುದುಂಟು. [illegible] ಸಂಪ್ರದಾಯವಾಗಿ ಪರಿಣಮಿಸುವುದುಂಟು. ಹೀಗೆ [illegible] ತನಕ

ತನಗರಿವಿಲ್ಲದೆಯೇ ಮನುಷ್ಯ ಅನೇಕ ಸಂಪ್ರದಾಯಗಳ ಆಚರಣೆಯಲ್ಲಿ ತೊಡಗುತ್ತಾನೆ. ಮಹಾ ವಿಜ್ಞಾನಿಯಲ್ಲಿಯೂ ದಿಟದ ನಂಬಿಕೆಗಳಿರಲಿ, ಅನೇಕ ಕುರುಡು ನಂಬಿಕೆಗಳೂ ಮನೆಮಾಡಿಕೊಂಡಿರುತ್ತವೆ. ಶಕುನ ನೋಡುವುದು, ಕಣಿ ಕೇಳುವುದು, ದೇವರಿಂದ ಹೂ ಬೇಡುವುದು, ದೃಷ್ಟಿದೋಷ ಪರಿಹರಿಸುವುದು, ಬಾಯಿಬೀಗ ಚುಚ್ಚಿಸಿಕೊಳ್ಳುವುದು, ಕೊಂಡ ಬಂಡಿ ಹೊಡುವುದು, ದೇವರ ಮುಂದೆ ಅಡ್ಡಬೀಳುವುದು, ದೊಡ್ಡವರ ಕಾಲು ಕಟ್ಟುವುದು, ಉರುಳುಸೇವೆ ಮಾಡುವುದು, ದೆವ್ವ ಬರದಿರಲೆಂದು ಮನೆಯ ಮುಂದಿನ ಸೂರಿಗೆ ಎಕ್ಕಡದ ಚೂರು ಸಿಕ್ಕಿಸುವುದು, ಗೃಹಪ್ರವೇಶ ಸಮಯದಲ್ಲಿ ಬಾಗಿಲಿಗೆ ಬೂದುಗುಂಬಳಕಾಯಿ ಕಟ್ಟುವುದು, ಕನಸುಗಳು ನಂಬುವುದು—ಇಂಥವು ಸಹಸ್ರ ಸಂಖ್ಯೆಯಲ್ಲಿ ಪ್ರತಿಯೊಬ್ಬನ ಜೀವನವನ್ನು ಪೋಷಿಸುತ್ತಿರುತ್ತವೆ. ಊರಿನಲ್ಲಿ ದನಗಳಿಗೋ ಜನಗಳಿಗೋ ಸಾಂಕ್ರಾಮಿಕರೋಗಗಳು ಬಂದದ್ದಾದರೆ ಮಾರಮ್ಮನಿಗೆ ತಂಪು ಮಾಡುವುದರಿಂದ, ಬಲಿಕೊಡುವುದರಿಂದ ಮಾರಿಯ ರೂಪದ ರೋಗಗಳು ತೊಲಗುತ್ತವೆಂದು ನಂಬುತ್ತಿದ್ದ ಕಾಲವೊಂದಿತ್ತು. ಮೂಢನಂಬಿಕೆಗಳನ್ನು ವಿರೋಧಿಸುವವರೇ ಅವುಗಳಿಗೆ ದಾಸರಾಗಿರುತ್ತಾರೆ. ತಮಗಿಷ್ಟವಿರುವವರು ಸಾಧಿಸುವ ಅದ್ಭುತ ಸಂಗತಿಗಳು ಅವರ ದೃಷ್ಟಿಯಲ್ಲಿ ಪವಾಡಗಳಾದರೆ, ತಮಗಿಷ್ಟವಿಲ್ಲದವರ ವಿಸ್ಮಯಾತ್ಮಕ ಸಾಧನೆಗಳು ಯಕ್ಷಿಣಿಗಳಾಗುತ್ತವೆ. ಮೂಢನಂಬಿಕೆಗಳು ಪೌರ್ವಾತ್ಯದಲ್ಲಿರುವಷ್ಟು ಪಾಶ್ಚಾತ್ಯರಲ್ಲಿಲ್ಲವೆಂದು ಕೆಲವರದು ಕುರುಡುನಂಬಿಕೆ. ಕೈಗಾರಿಕಾಕಾಂತ್ರಿ ಮತ್ತು ವೈಜ್ಞಾನಿಕ ಪ್ರಗತಿಗಳು ಸಿದ್ಧಿಸುವತನಕ ಅವರನ್ನು ಸಹ ಕುರುಡುನಂಬಿಕೆಗಳು ಆಳುತ್ತಿದ್ದುದುಂಟು. ಹಿಂದಿನ ಪಾಶ್ಚಾತ್ಯರಲ್ಲಿ ಕಲ್ಲು ಬೀರುವುದು ಮತೀಯ ವಿಧಿಗಳಲ್ಲೊಂದಾಗಿತ್ತು. ಮೆಕ್ಕಾ ಯಾತ್ರಾರ್ಥಿಗಳು ದೆವ್ವವನ್ನಟ್ಟುವ ಸಲುವಾಗಿ ಇಂದಿಗೂ ಈ ಸಂಪ್ರದಾಯವನ್ನಾಚರಿಸುತ್ತಾರೆ. ಪಾಶ್ಚಾತ್ಯರ ಈ ಸಂಪ್ರದಾಯಕ್ಕೆ Lithobolia ಎಂದು ಹೆಸರು.[1] ಯುಗಾದಿ ಹಬ್ಬ ಮುಗಿದ ಮಾರನೆಯ ದಿನ, ಅಂದರೆ ವರ್ಷ ತೊಡಕಿನ ದಿನದಂದು ರಾತ್ರಿ ವೇಳೆ ಕಲ್ಲು ಬೀರುವ ಪದ್ಧತಿ ಇಂದಿಗೂ ಬೆಂಗಳೂರು ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಚಾಲ್ತಿಯಲ್ಲಿದೆ. ನಿದ್ದೆ ಮಾಡುವಾಗ ಆತ್ಮ ಬೇರೆ ಬೇರೆ ಕಡೆ ಅಲೆದಾಡಿಕೊಂಡು ಬರುತ್ತದೆಂಬ ತಿಳಿವಳಿಕೆ ಇಂದಿಗೂ ಕೆಲವು ಬುಡಕಟ್ಟು ಜನರಲ್ಲುಂಟು. ಮಲಗಿಕೊಳ್ಳುವ ಮುನ್ನ ನೀರು ಕುಡಿಯುವಂತೆ ಹಿರಿಯರು ಸಾಮಾನ್ಯವಾಗಿ ಕಿರಿಯರಿಗೆ ಬುದ್ಧಿವಾದ ಹೇಳುತ್ತಾರೆ; ಅಥವಾ ಹಾಸುಗೆಯ ಪಕ್ಕದಲ್ಲಿ ತೆರೆದ ನೀರು ತಂಬಿಗೆಯಿಟ್ಟುಕೊಳ್ಳುವಂತೆ ಕೆಲವು ಕಡೆಯ ಹಿರಿಯರು ಸಲಹೆ ನೀಡುತ್ತಾರಂತೆ. ನಿದ್ದೆಯಲ್ಲಿ ಬಾಯಾರಿಕೆಯಾದರೆ ಆತ್ಮ ನೀರು ಹುಡುಕಿಕೊಂಡು ಹೋಗುತ್ತದಂತೆ. ಮನೆಯಲ್ಲಿ ನೀರು ಸಿಗದಿದ್ದರೆ, ಹೊರಗೆ ಹೋದದ್ದು ಮತ್ತೆ ಹಿಂದಿರುಗುವುದಿಲ್ಲವಂತೆ. ಆಗ ಮನುಷ್ಯ ಸಾಯುತ್ತಾನೆಂದು ಹೇಳುತ್ತಾರೆ.[2] ಬೆತ್ತಲೆಯಲ್ಲಿ ಪೂಜಿಸುವುದು, ಆಣೆ, ಭಾಷೆ, ದಿವ್ಯ ಮೊದಲಾದುವೆಲ್ಲ ಪಳೆಯುಳಿಕೆಗಳೇ ಸರಿ.

---

[1] *The Science of Folklore* by A. H. Krappe, p. 274

[2] *The Folklore of Bombay* by R. E. Enthoven, p. 153

ಇದು ಮುಗಿಯದ ಕಥೆ. "ಆದಿಯಲ್ಲಿಲ್ಲದ್ದು ಅಂತ್ಯದಲ್ಲಿರಲಾರದು. ಆಧುನಿಕ ಲೋಕದಲ್ಲಿ ರೂಢಿಯಲ್ಲಿರುವ ಅನೇಕ ಸಂಪ್ರದಾಯಗಳಿಗೆ ಅವಿಚ್ಛಿನ್ನವಾದ ಚರಿತ್ರೆಯಿದೆ. ಅವು ಆದಿಮಾನವರಿಂದ ಅವರ ಪೀಳಿಗೆಯವರಾದ ಅನಾಗರಿಕ ಮಾನವರಿಗೆ, ಅವರಿಂದ ನಮ್ಮ ಪೂರ್ವಜರಾದ ಪ್ರಾಚೀನ ನಾಗರಿಕರಿಗೆ, ಅವರಿಂದ ನಮ್ಮ ತನಕ ಹರಿದುಬಂದಿವೆ. ಇಂದಿಗೂ ಅಲ್ಲಲ್ಲಿ ಉಳಿದಿರುವ ಬುಡಕಟ್ಟು ಜನರು ಮತ್ತು ಅನಾಗರಿಕರೆಂದು ಹೆಸರು ಪಡೆದಿರುವ ಜನಾಂಗಗಳು ಜೀವನ ಸ್ಪರ್ಧೆಯಲ್ಲಿ ತಡವಾಗಿ ತೊಡಗಿಯೂ ಪ್ರಾಚೀನ ಸಂಪ್ರದಾಯಗಳನ್ನು ಬಲವಾಗಿ ತಬ್ಬಿಕೊಂಡಿದ್ದಾರೆ. ಅವರ ಸಂಪ್ರದಾಯಗಳು ನಾವು ಅಣಕಿಸುವ ಅಥವಾ ಮೂದಲಿಸುವ ವೈಚಿತ್ರ್ಯಗಳಾಗಬಾರದು. ಅವು ಅವರಿಗೆ ಮಾತ್ರವಲ್ಲ, ನಮಗೂ ಮಹತ್ವಪೂರ್ಣವಾಗಿವೆ."[1] ಏಕೆಂದರೆ ಅವುಗಳಲ್ಲಿ ಹಲವು ಒಂದಲ್ಲ ಒಂದು ರೂಪದಲ್ಲಿ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಮ್ಮ ಜೀವನವನ್ನು ರೂಪಿಸುತ್ತಿವೆ, ಹಾಗೂ ಮುತ್ತಿಕೊಂಡಿವೆ. ಪ್ರಾಚೀನ ಸಂಪ್ರದಾಯ ಈಗ ಬಳಕೆಯಲ್ಲಿಲ್ಲವೆಂದರೆ, ಅದು ರೂಪಾಂತರಗೊಂಡಿದೆ, ಅಥವಾ ಅದರ ಸ್ಥಳದಲ್ಲಿ ಬೇರೊಂದು ಆಚರಣೆಯಲ್ಲಿದೆ ಎಂದೇ ಅರ್ಥ. ಆಧುನಿಕ ನಾಗರಿಕನಲ್ಲಿ ಆದಿಮಾನವನ ಅಥವಾ ಅನಾಗರಿಕ ಪ್ರಾತಃಕಾಲದ ಮಾನವನ ಗುಣಲಕ್ಷಣಗಳು ಇಲ್ಲವೆಂದಿಲ್ಲ. ಹೂವುಗಳಲ್ಲಿ ಬೀಜವನ್ನು ಕಾಣುವಂತೆ ಅವುಗಳ ಪರಿಷ್ಕೃತ ರೂಪಗಳಲ್ಲಿ ಮೂಲಪ್ರವೃತ್ತಿಗಳನ್ನು ಗುರುತಿಸಬಹುದು. ಆದ್ದರಿಂದ ಆದಿಮಾನವನ ಸಂಪ್ರದಾಯಗಳ ಅಧ್ಯಯನ ಅತ್ಯಗತ್ಯವಾಗಿದೆ.

ಆ. ಹಬ್ಬಗಳು

ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾರೂಪಗಳೇ ಹಬ್ಬಗಳು. ಅವುಗಳ ಬೇರು ಮಾಟಗಳಲ್ಲಿ ಅಡಗಿದೆ. ನಿಸರ್ಗಾರಾಧನೆಯಲ್ಲಿ ಹರಡಿದೆ. ಅವು ಕೃಷಿಸಂಸ್ಕೃತಿಯಲ್ಲಿ ಸ್ಪಷ್ಟರೂಪವನ್ನು ಪಡೆದು, ಕಾಲಾನಂತರದಲ್ಲಿ ವಿಕಾಸಗೊಳ್ಳುತ್ತ, ಜಟಿಲವಾದುವು. ಪ್ರತಿಯೊಂದು ಯುಗದ ಜನರೂ ಆ ಆ ಕಾಲದ ಅಭಿರುಚಿ ಮನೋಧರ್ಮಗಳಿಗನುಗುಣವಾಗಿ, ತಂತಮ್ಮ ಕಲ್ಪನೆಗಳಿಗನುಸಾರವಾಗಿ ಅವುಗಳ ರೂಪಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡದ್ದುಂಟು. ಹೊಸ ಹೊಸ ವಿಧಿನಿಷೇಧಗಳನ್ನು, ಉಪಾಸನಾವಿಧಾನಗಳನ್ನು ಸೇರಿಸಿದ್ದುಂಟು. ಅವುಗಳ ಬಹುವರ್ಣಕೀರ್ಣವಾದ ಸಂಕೀರ್ಣ ವಾಡಿಕೆಗಳಿಗೆ ಮತಸಂಘಟಕರು ಮತ್ತು ಪುರೋಹಿತರು ನಾನಾ ರೀತಿಯಲ್ಲಿ ಕಾಣಿಕೆಗಳನ್ನು

---

1 Some one has said that there is nothing in the end which is not in the beginning and the unbroken continuity can be traced between most of our customs and those of our barbarian forefathers, who, in their turn, received them from their savage ancestorr. Existing barbarians and savages are belated stragglers in the race of life, and that is why we consider that their customs are not curiosities to be gaped at or scoffed at, since for us, as well as for them they are full of significance—*Customs of the World* (Ed. by walter Hutchinson). Introduction by A. C. Haddon, p. xxiv.

ನೀಡಿದ್ದಾರೆ. ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟುಪಡೆದುವು. ಹೀಗಾಗಿ ಹಲವು ಸಂಪ್ರದಾಯ ಗಳ ಮೊತ್ತ ಹಬ್ಬವಾಗುತ್ತದೆ.

"ಸಾಮಾನ್ಯವಾಗಿ ಪ್ರತಿವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯಗಳ ಸಮ್ಮಿಶ್ರ ಜಟಿಲ ಘಟಕವೇ ಹಬ್ಬ" ಎಂದು ವಿದ್ವಾಂಸರು[1] ಅದರ ಲಕ್ಷಣವನ್ನು ವಿವರಿಸಿದ್ದಾರೆ. ಜಾನಪದ ಸಂಗತಿ ಗಳೆಂದರೆ ಮುಖ್ಯವಾಗಿ ಕಲೆಗಳು. ಅವುಗಳ ಪ್ರದರ್ಶನಕ್ಕೆ ಹಬ್ಬಗಳೆಂತು ನಿಮಿತ್ತವಾಗು ತ್ತವೆಯೋ ಅವುಗಳ ವಿಕಾಸಕ್ಕೂ ಕಾರಣವಾಗುತ್ತವೆ. ಅವು ಸಾಧಾರಣವಾಗಿ ಸಾಮೂ ಹಿಕಾಚರಣೆಗಳು; ವೈಯಕ್ತಿಕ ಮಟ್ಟದಲ್ಲಿ ನಡೆಯುವಂಥವಲ್ಲ. ಹಾಗೆ ನಡೆಯುವಂಥವು ಹಬ್ಬಗಳೆನಿಸಿಕೊಳ್ಳುವುದಿಲ್ಲ. ಸಾಮೂಹಿಕಾಚರಣೆಯೆಂದರೆ ಊರಿನ ಅಥವಾ ಸಮಾಜದ ಜನರೆಲ್ಲ ಒಂದು ಕಡೆ ಸೇರಿ ನಡಸುವುದೆಂದರ್ಥವಲ್ಲ. ಅವರವರ ಮನೆಗಳಲ್ಲಿ ನಡಸುವ ಆಚರಣೆಯಾದರೂ ಏಕಕಾಲದಲ್ಲಿ, ಏಕರೀತಿಯಲ್ಲಿ, ಏಕರೂಪದ ಕಟ್ಟುಪಾಡುಗಳಿಗನು ಗುಣವಾಗಿ ನಡಸುವಂಥದಾದ್ದರಿಂದ ಅದು ಸಾಮೂಹಿಕ ಸ್ವರೂಪವನ್ನು ಪಡೆಯುತ್ತದೆ. ಉದಾಹರಣೆಗಾಗಿ ಚಾಂದ್ರಮಾನ ಯುಗಾದಿ ಹಬ್ಬವನ್ನೇ ತೆಗೆದುಕೊಳ್ಳೋಣ. ನಾಡಿನ ಬಹುಭಾಗದಲ್ಲಿ ಅದು ಏಕಕಾಲದಲ್ಲಿ ನಡೆಯುತ್ತದೆ. ಪ್ರಾರ್ಥನೆಗಾಗಲಿ, ಇತರ ಉಪಾ ಸನಾ ವಿಧಿಗಳಿಗಾಗಲಿ ಜನ ಒಂದೆಡೆ ನೆರೆಯುವುದಿಲ್ಲ. ಕೆಲವರು ಪೂಜೆಗೆಂದು ದೇವಾ ಲಯಗಳಿಗೆ ಹೋಗಬಹುದು. ಆ ಪೂಜೆಯೂ ಕಡ್ಡಾಯವಲ್ಲ. ಬೇವು-ಬೆಲ್ಲಗಳ ಬಳಕೆ, ಅಭ್ಯಂಜನ ಸ್ನಾನ, ಮತ್ತು ಹೋಳಿಗೆ ಊಟ ಅನೇಕ ಕಡೆಗಳಲ್ಲಿ ಸರ್ವೇಸಾಮಾನ್ಯ. ಬೇರೆ ಕೆಲವರು ಸೌರಮಾನ ಯುಗಾದಿಯನ್ನಾಚರಿಸುತ್ತಾರೆ. ಒಂದೇ ಗ್ರಾಮದ ಜನರಲ್ಲಿ ಕೆಲವರು ಚಾಂದ್ರಮಾನ ಯುಗಾದಿಯನ್ನೂ ಬೇರೆಯವರು ಸೌರಮಾನ ಯುಗಾದಿಯನ್ನೂ ಆಚರಿಸಬಹುದು. ಆಶ್ವಯುಜ ಮಾಸದಲ್ಲಿ ಕೆಲವರು ಪಿತೃಪಕ್ಷ ಮಾಡುತ್ತಾರೆ, ಹಲವರು ಮಾಡುವುದಿಲ್ಲ. ಕೆಲವು ಹಬ್ಬಗಳು ಪ್ರಾದೇಶಿಕವಾದುವಾದರೂ ಏಕಕಾಲವಲ್ಲಿ ನಡೆಯುವುದಿಲ್ಲ. ಸಂಕ್ರಾಂತಿ ಅಂಥದು. "ಕೀಳ್ಗಿಟ್ಟ ಸಂಕ್ರಾಂತಿ ಊರಿ ಗೊಂದು ದಿನ" ಎಂಬ ಗಾದೆಯೇ ಇದೆ. "ಹೆಂಗಸರಿಗೇಕೆ ಸಂಕ್ರಾಂತಿ ದುಃಖ, ಗಂಡಸರಿ ಗೇಕೆ ಗೌರಿ ದುಃಖ" ಎಂಬ ಗಾದೆಯಂತೆ ಕೆಲವು ಹಬ್ಬಗಳಲ್ಲಿ ಹೆಂಗಸರೂ, ಮತ್ತೆ ಕೆಲವು ಗಳಲ್ಲಿ ಗಂಡಸರೂ ಪ್ರಧಾನವಾಗಿ ಭಾಗವಹಿಸುವುದುಂಟು. ಆದರೂ ಇವೆಲ್ಲ ಸಾಮೂಹಿಕ ಪರ್ವಗಳೆಂದು ಧಾರಾಳವಾಗಿ ಹೇಳಬಹುದು. ತಿಥಿಯಂಥ ಒಂದೊಂದೇ ಕುಟುಂಬಕ್ಕೆ ಸೀಮಿತವಾಗಬಹುದಾದ ಆಚರಣೆಗಳು ಹಬ್ಬವೆನಿಸಿಕೊಳ್ಳಲಾರವು. ಅವುಗಳಲ್ಲಿ ಸಾರ್ವ ತ್ರಿಕತೆಯ ಲಕ್ಷಣಗಳಿರಬೇಕು.

ಸಾಂಘಿಕ ಸ್ವರೂಪದ ಹಬ್ಬಗಳೂ ಸಾಕಷ್ಟಿವೆ. ಇವು ಏಕಕಾಲವಲ್ಲಿ ಮನೆಯೊಳಗೆ

[1] Festival is a complex unit of customs and other folklore to celebrate a special occasion, usually annually; and of public interest: *SDFML.*, ಬಾಗ್ಸ್, Vol. II, p. 1144

ಮತ್ತು ಹೊರಗೆ ನಡೆಯುವಂಥವು. ಮನೆಯ ಹಬ್ಬ ಅಂಥದು: ಗ್ರಾಮ ದೇವತೆಗಳ ಹಬ್ಬ ಅಂಥವು: ಸ್ವಾತಂತ್ರ್ಯೋತ್ಸವದಂಥ ರಾಷ್ಟ್ರೀಯ ಹಬ್ಬಗಳು ಅಂಥವು. ಅವು ಸ್ವಭಾವಮೂಲಕವಾದ ಉತ್ಸವಗಳ ರೂಪದಲ್ಲಿ ನಡೆಯುವುದರಿಂದ ಊರಿನ ಎಲ್ಲ ಬಗೆಯ ಸಹಕಾರ ಬೇಕಾಗುತ್ತದೆ. ಪಾತ್ರಧಾರಿಗಳಾಗಿಯೋ ಪ್ರೇಕ್ಷಕರಾಗಿಯೋ ಎಲ್ಲರೂ ಭಾಗ ವಹಿಸುತ್ತಾರೆ. ಸಾಮೂಹಿಕ ಪರ್ವಗಳಲ್ಲಿ ಸಂಬಂಧಪಟ್ಟವರು ಸಾಮಾನ್ಯವಾಗಿ ಕಾಣುವುದಿಲ್ಲ. ಸಾಂಘಿಕ ಪರ್ವಗಳಲ್ಲಿ ಬಂಧುಮಿತ್ರರು ಸೇರುತ್ತಾರೆ. ಇವರ ಇಂಥ ಹಬ್ಬಗಳು ಸಾಮಾನ್ಯವಾಗಿ ಒಂದು ಊರಿಗೋ, ಜಿಲ್ಲೆಗೋ, ಪ್ರದೇಶಕ್ಕೋ ಸೀಮಿತಗೊಂಡಿರುತ್ತವೆ. ಆದರೂ ಇವುಗಳಲ್ಲಿ ಸಾರ್ವತ್ರಿಕತೆಯ ಲಕ್ಷಣ ಮೈದಾಳಿರುತ್ತದೆಯೆಂಬುದನ್ನು ನಿರ್ಲಕ್ಷಿಸುವಂತಿಲ್ಲ. ಸಾಂಘಿಕವೋ ಸಾಮೂಹಿಕವೋ ಅದು ಮನೆಯಲ್ಲಿ ನಡೆಯುವ ವಿಶೇಷೋತ್ಸವವೆಂಬುದಂತೂ ನಿಜ.

ಪ್ರಾಚೀನ ಮತ್ತು ದಾಖಲೆಗಳ ಅಭಾವದಿಂದ ಹಬ್ಬಗಳ ಉಗಮ ಮತ್ತು ವಿಕಾಸ ಗಳನ್ನು ಕುರಿತು ಕರಾರುವಾಕ್ಕಾಗಿ ಹೇಳುವುದನ್ನೇ ಆಗಲಿ ಹೇಳಲು ಬರುವುದಿಲ್ಲ. ಋತುಗ ಳಿಗೂ ಕೃಷಿಸಂಬಂಧವಾದ ಹಬ್ಬಗಳು ಪ್ರಾಚೀನವಾದುವಾದರೂ, ಆದಿಮಾನವನ ಸೃಷ್ಟಿಯವಾದರೂ, ಕಾಲಾನಂತರದಲ್ಲಿ ಅವುಗಳ ಸ್ವರೂಪಲಕ್ಷಣಗಳು ಸಂಪೂರ್ಣವಾಗಿ ಮಾರ್ಪಾಡುಹೊಂದಿವೆ. ರಾಷ್ಟ್ರ ಸಮಾಜಗಳ ರಕ್ಷಣಾಭ್ಯುದಯಗಳಿಗಾಗಿ ಹೋರಾಡಿದ ವೀರಾಧಿವೀರರ ಮತ್ತು ಲೋಕಹಿತಾರ್ಥವಾಗಿ ತಮ್ಮನ್ನರ್ಪಿಸಿಕೊಂಡವರನ್ನು ಸ್ಮರಿಸಿ ಮಹಾ ಸಾಧನೆಯನ್ನು ಕೈಗೊಂಡ ಸಾಧುಸಂತರ ಸ್ಮರಣಾರ್ಥವಾಗಿ ಹಬ್ಬಗಳನ್ನಾಚರಿಸುವ ಪರಿಪಾಠವೂ ಪ್ರಾಚೀನವಾದುದೇ. ಅನೇಕ ಹಬ್ಬಗಳ ಹುಟ್ಟಿಗೆ ಮತಪ್ರವರ್ತಕರೇ ಕಾರಣ ರೆಂಬುದು ಸುಸ್ಪಷ್ಟ. ಮತಾಚಾರ್ಯರನ್ನು ಮಾತ್ರವಲ್ಲ; ಆ ಮತಗಳ ಅಭ್ಯುದಯಕ್ಕೆ ಮತ್ತು ಪ್ರಸಾರಕ್ಕೆ ಕಾರಣರಾದವರನ್ನು, ಆ ಮತದ ಮೂಲಕ ಆಧ್ಯಾತ್ಮ ಸಿದ್ಧಿಯನ್ನು ಪಡೆದ ಮಹಿಮಾವಂತರನ್ನು; ಸದ್ಗುರುಗಳು ಆಚಾರ್ಯ ಪರಂಪರೆಯನ್ನು ಹಬ್ಬಗಳ ಮೂಲಕ ಪೂಜಿಸುವುದು ರೂಢಿಯಲ್ಲಿದೆ. ಪುರಾಣೇತಿಹಾಸಗಳಲ್ಲಿ ಬರುವ ಶ್ರೇಷ್ಠವ್ಯಕ್ತಿ ಗಳು, ವಿಶೇಷ ಘಟನೆ ಹಾಗೂ ಅಸಾಮಾನ್ಯ ವ್ಯಕ್ತಿಗಳು ಹಬ್ಬಕ್ಕೆ ನಿಮಿತ್ತವಾಗು ತ್ತವೆ. ಒಟ್ಟಿನಲ್ಲಿ ಅವು ಜನಾಂಗದ ಸಾಂಸ್ಕೃತಿಕ ಹಿನ್ನೆಲೆಗಳಾಗಿವೆ. ಜತೆಗೆ ಜನ ತಮ್ಮ ಕ್ಷೇಮಸಾಧನೆಗೆ ಅಡ್ಡಿಯಾಗುತ್ತಿದ್ದ ದುಷ್ಟ ಶಕ್ತಿಗಳನ್ನು ದೂರ ಮಾಡಿ ಭೂತ ಭೇತಾಳಗಳ ಹೆಸರಲ್ಲಿ ಪೂಜಿಸಿ, ಬಲಿಕೊಟ್ಟು, ಆತ್ಮರಕ್ಷಣೆ ಮಾಡಿಕೊಳ್ಳಲು ಅವು ಸಹಾಯಕವಾದುವು.

ಮುಖ್ಯವಾಗಿ ವಿಶ್ವಕಲ್ಯಾಣಾಕಾಂಕ್ಷೆಯುಳ್ಳ ಆಧ್ಯಾತ್ಮಿಕ ಚೇತನ್ಯದ ಮಾನವನ ಬೌದ್ಧಿಕ ಹಾಗೂ ಅಂತರ್ಶೋಧನೆಯ ಕಲ್ಪನೆಯಿಂದಾಗಿ ಸುಮಾರು ಸಾವಿರಾರು ಹಬ್ಬಗಳು ಅಸ್ತಿತ್ವಕ್ಕೆ ಬಂದಿವೆ. ಬರುಬರುತ್ತ ಉತ್ಸವಪ್ರಿಯನಾದ ಮಾನವ ದೇವತೆಗಳಿಗೆ ಪ್ರಿಯ ವೆಂದು ಹೇಳಿಕೊಂಡು, ತನಗೆ ಪ್ರಿಯವಾದ ಉಪಚಾರಗಳನ್ನು ಕಾಯಂಗೊಳಿಸಿದನು. ಕುರಿತ ಮಿತಿತ ವಿಧಿಗಳು ಕಾಲಾನುಕ್ರಮದಲ್ಲಿ ಸೇರಿಕೊಂಡುವು. ಅವು ಸಹ ದೇವರ

ಸೇವೆಗೆ ಅರ್ಪಿತವಾದುವು. ದೇವದಾಸಿಯ ನರ್ತನದಂತೆಯೋ ಸಾಮಾನ್ಯರ ನಂದಿಕೋಲು ಕುಣಿತವೂ ಭಗವಂತನ ಭೋಗಕ್ಕೆ ನೈವೇದ್ಯವಾದುವು. ಮನುಷ್ಯ ಮನುಷ್ಯನನ್ನೊಲಿಸಿ ಕೊಳ್ಳಲು ಹೂಡುವ ಉಪಾಯಗಳನ್ನೆಲ್ಲ ದೇವರನ್ನೊಲಿಸಿಕೊಳ್ಳುವ ಸಲುವಾಗಿ ಬಳಸಿ ಕೊಂಡನು. ದೇವರಿಗಾಗಿ ಹಾಸಿ ಬಿಟ್ಟದ್ದಾಯಿತು. ಚಿನ್ನದ ನಗಗಳನ್ನು ಮಾಡಿಸಿದ್ದಾಯಿತು. ಹೊಲ ಗದ್ದೆಗಳನ್ನು ಬಿಡಿಸಲು ಬಿಟ್ಟದ್ದಾಯಿತು. ತನ್ನ ರುಚಿ-ಅಭಿರುಚಿಗಳಿಗೊಪ್ಪುವ ತಿಂಡಿತಿನಿಸುಗಳನ್ನು ಸಮರ್ಪಿಸಿದ್ದಾಯಿತು. ನಂಬಿಕೆಯಿಂದ ಆಚಾರ, ಆಚಾರದಿಂದ ನಂಬಿಕೆ, ಹೀಗೆ ಒಂದಕ್ಕೊಂದು ಪ್ರೇರಕವಾಗಿ ನಂಬಿಕೆ ಸಂಪ್ರದಾಯಗಳು ಕೊನೆಯಿಲ್ಲದೆ ಬೆಳೆದುವು. ಜತೆಗೆ ಅನ್ಯಾನುಕರಣೆಯೂ ಹಬ್ಬಗಳ ಸಂಕೀರ್ಣತೆಗೆ ಕಾರಣವಾಯಿತು.

ಆದರೆ ಉತ್ತಮ ಭೋಜನ ಭೂಷಣಗಳಲ್ಲಿಯೇ ಹಬ್ಬಗಳ ಗುರಿ ಪರ್ಯವಸಾನವಾಗಲಿಲ್ಲ. ಆಚಾರ ವಿಚಾರಕ್ಕೆ ಪ್ರೇರಕವಾಯಿತು: ಚಿಂತನ ಮಂಥನಗಳಿಗೆ ಮೀಟುಗೋಲಾಯಿತು. ಸಗುಣ ಬ್ರಹ್ಮೋಪಾಸನೆ ನಿರ್ಗುಣೋಪಾಸನೆಗೆ ದಾರಿಮಾಡಿಕೊಟ್ಟಿತು. ಕರ್ಮ ಭಕ್ತಿ ಜ್ಞಾನಗಳ ಸಮ್ಮಿಲನ ಸಾಧನೆ ಹಬ್ಬಗಳ ಮೂಲಕ ಸಾಧ್ಯವಾಯಿತು. ಮೂಢನಂಬಿಕೆಯಿಂದ ಮೂಡಿದ ಭಕ್ತಿ ದೋಷಯುಕ್ತವಾಗಲಿಲ್ಲ. ಪಾಪ ಪುಣ್ಯಗಳ ತಾರತಮ್ಯ ವಿವೇಕ ಅಂಕುರಿಸಲವಕಾಶವಾಯಿತು. ಕರ್ಮ ಧರ್ಮ ಸಮನ್ವಯ ಹಾಗೂ ಬುದ್ಧಿಭಾವಗಳ ಸಾಮರಸ್ಯ ಕೈಗೂಡುವಂತಾಯಿತು. ಸತ್ಯ ಶ್ರೇಯಸ್ಸುಗಳ ಕಡೆಗೆ ಮಾನವನ ಗಮನ ಹರಿಯಲನುಕೂಲವಾಯಿತು. ಧ್ಯಾನ ತಪಸ್ಸುಗಳ ಮಹತ್ವಗಳನ್ನರಿಯಲು, ಶಾಶ್ವತ ಮೌಲ್ಯಗಳ ಸ್ವರೂಪವನ್ನು ಮನದಟ್ಟುಮಾಡಿಕೊಳ್ಳಲು ಹಬ್ಬ ಹರಿದಿನಗಳು ನಿಮಿತ್ತವಾದುವು. ಮಾನವನ ಆಸುರೀಗುಣಗಳ ಸ್ವಚ್ಛಂದ ವರ್ತನೆಗೆ ಅವು ನಿಯಂತ್ರಣ ಯಂತ್ರಗಳಾದದ್ದೂ ಉಂಟು. ಒಟ್ಟಿನಲ್ಲಿ ಅವು ತಾತ್ಕಾಲಿಕವಾಗಿ ಯಾದರೂ ಮಾನವನ ಯಾಂತ್ರಿಕ ಜೀವನಕ್ಕೆ ರಸವರ್ಷನ ಮಾಡಿಸುವ, ಅವನ ಅವಿರತ ಪಾದ ದುಡಿಮೆಗೆ ವಿಶ್ರಾಂತಿ ನೀಡುವ, ಅವನ ದಿನದಿನದ ಗೋಳಿಗೆ ವಿರಾಮವೇರ್ಪಡಿಸುವ, ಒಟ್ಟಿನಲ್ಲಿ ಅವನ ಮನಸ್ಸಿಗೆ ಶಾಂತಿಸಮಾಧಾನಗಳನ್ನೊದಗಿಸುವ ಅಮೂಲ್ಯ ಸಾಧನಗಳಾಗಿವೆ.

ಪ್ರಾರ್ಥನೆ ಧ್ಯಾನ ತಪಸ್ಸುಗಳ ಕಲ್ಪನೆಗೂ ಹಬ್ಬಗಳೇ ಕಾರಣಗಳಾಗಿರಬೇಕು. ನೋಂಪಿಗಳಿಗಂತು ಜನ್ಮನಿತ್ತದ್ದು ಅವೇ. ಅವುಗಳಿಂದ ಮಾನವನ ಮನಸ್ಸು ಶುಚಿಯಾಗುತ್ತದೆ, ವಿವೇಕ ಪಲ್ಲವಿಸುತ್ತದೆ, ಸಂಯಮ ಶಕ್ತಿ ಅಧಿಕವಾಗುತ್ತದೆನ್ನುವುದಕ್ಕೆ ಅನ್ಯ ಸಾಕ್ಷಿ ಬೇಕಿಲ್ಲ. ಏಕೆಂದರೆ ಅವು ಸ್ವತಸ್ಸಿದ್ಧ ಸಂಗತಿಗಳಾಗಿವೆ. ಉತ್ತಮ ವೈಭವಾದಿ ಸಂಗತಿಗಳು ಹಬ್ಬಗಳ ಮೂಲಪ್ರಸ್ತಾವಗಳಲ್ಲ. ಇತ್ತೀಚೆಗೆ ಸೇರಿಕೊಂಡ ಪರಿಕರಗಳೆಂದು ತಿಳಿಯಬೇಕಾಗಿದೆ. ಹಬ್ಬಗಳ ಮೂಲೋದ್ದೇಶ ಮರೆಯಾಗುತ್ತಿದ್ದಂತೆ ನೋಂಪಿಗಳು ಹುಟ್ಟಿಕೊಂಡಿರಬೇಕೆಂದು ತೋರುತ್ತದೆ.

ಹಬ್ಬಗಳ ಸಾಮಾಜಿಕ ಪ್ರಯೋಜನವನ್ನಂತು ನಿರ್ಲಕ್ಷಿಸುವಂತಿಲ್ಲ. ನೆಂಟರಿಷ್ಟರು

ಒಂದು ಕಡೆ ಕೂಡುವಾಗ ಸ್ಫೂರ್ತಿ ಸಿಗುತ್ತದೆ. ಭಾವಾತ್ಮಕತೆ ಕುಸುಮಿಸುತ್ತದೆ, ವಿಚಾರವಿನಿಮಯ ಸುಲಭವಾಗುತ್ತದೆ. "ಬಂಧುಗಳ ದರ್ಶನ ಫಲವೆಲಾ ಸಂಸಾರ ತರುವಿಂಗೆ"[1] ಎಂಬ ಸುಭಾಷಿತದಂತೆ ಬಂಧುಗಳ ಸೇರುವಿಕೆ ಹಬ್ಬವಾಗುತ್ತದೆ. ಒಂದು ರೀತಿಯಲ್ಲಿ ಅಂಥ ಸೇರುವಿಕೆಗಳು ಗ್ರಾಮೀಣ ಜನರ ವಿಚಾರಗೋಷ್ಠಿಗಳಾಗುತ್ತವೆ. ಜನ ಜೀವನಕ್ಕೆ ಸಂಬಂಧಿಸಿದ ಸಮಸ್ತ ವಿಚಾರಗಳೂ ಅಲ್ಲಿ ಚರ್ಚಿತವಾಗುತ್ತವೆ. ಮದುವೆ ಪ್ರಸ್ತ ಬೇಸಾಯ ಪಾಲು ಪಟ್ಟಿ ದನ ಕರು—ಎಲ್ಲ ವಿಷಯಗಳ ಬಗ್ಗೆ ಸಂವಾದಗಳು ನಡೆಯುತ್ತವೆ. ವರ್ತಮಾನ ಪತ್ರಿಕೆಗಳಿಲ್ಲದಿದ್ದಾಗ, ಇದ್ದೂ ಓದಲು ಬಾರದಿದ್ದಾಗ, ರೇಡಿಯೋ ಹೊಂದುವ ಸಾಮರ್ಥ್ಯವಿಲ್ಲದಿದ್ದಾಗ ಹಬ್ಬಗಳೇ ಸಮರ್ಥ ಜ್ಞಾನಪ್ರಸಾರ ಮಾಧ್ಯಮಗಳಾಗುತ್ತವೆ. ಊರುಕೇರಿಗಳಿಗೆ, ಸಮಾಜ ಸಂಸಾರಗಳಿಗೆ, ವ್ಯಕ್ತಿವ್ಯಕ್ತಿಗಳಿಗೆ ಸಂಬಂಧಿಸಿದ ಸಮಸ್ಯೆಗಳೆಲ್ಲ ಅಲ್ಲಿ ತೀರ್ಮಾನವಾಗುತ್ತವೆ. ಕೆಲವು ಸಲ ಕೊಳುಕೊಡೆ ವ್ಯವಹಾರಗಳು ಈ ಸಂದರ್ಭದಲ್ಲಿ ಬಗೆಹರಿಯುವುದುಂಟು. ಹೊಸ ಸಂಬಂಧಗಳು ಕುದುರುವುದುಂಟು.

ಒಟ್ಟಿನಲ್ಲಿ ಹಬ್ಬಗಳು ಗ್ರಾಮೀಣ ಜೀವನದ ಸಾಂಸ್ಕೃತಿಕ ಪ್ರೇರಣೆಗಳೆಂದೂ ಜಾನಪದರ ರಸಿಕತೆಗೂ ಕಲಾಭಿಜ್ಞತೆಗೂ ಹಿಡಿದ ಕನ್ನಡಿಗಳೆಂದೂ ಧಾರಾಳವಾಗಿ ಹೇಳಬಹುದು. ವರ್ಷಕ್ಕೊಮ್ಮೆ ಬರುವ ಈ ಹಬ್ಬಗಳು ಜೀವನದ ರಸನಿಮಿಷಗಳು, ಬಾಳಿಗೆ ತಂಪೆರೆಯುವ ಅಮೃತ ಬಿಂದುಗಳು. ಪ್ರತಿಯೊಂದು ಹಬ್ಬವೂ ಸಂಪ್ರದಾಯವೂ ಅಹುದು, ಸಂಗೀತ ಕಲೆಯೂ ಅಹುದು, ಆತ್ಮೋದ್ಧಾರಸಾಧನವಾದ ಮಾಧ್ಯಮವೂ ಅಹುದು: ಸ್ನೇಹದ ಹೃದಯಗಳನ್ನೊಟ್ಟುಗೂಡಿಸುವ ಸೇತುಶಕ್ತಿಯೂ ಅಹುದು. ಇದು ಐಕ್ಯದ ಮಹತ್ವವನ್ನು ಪ್ರಕಾಶಪಡಿಸುತ್ತದೆ; ದೈವಶಕ್ತಿಯಲ್ಲಿನ ವಿಶ್ವಾಸವನ್ನು ಬಲಪಡಿಸುತ್ತದೆ. ಲೌಕಿಕ ಮತ್ತು ಪಾರಮಾರ್ಥಿಕಗಳ ಸಂಗಮ ಸ್ಥಾನವದು. ಸಾಂಸ್ಕೃತಿಕ ಸಂಘಟನೆ ಹಾಗೂ ಸಂರಕ್ಷಣೆಗಳಲ್ಲಿ ಹಬ್ಬದ ಪಾತ್ರ ಮಹತ್ವಪೂರ್ಣವಾದದ್ದೆಂದು ಒತ್ತಿ ಹೇಳಬೇಕಾಗಿಲ್ಲ.

ಹಬ್ಬಕ್ಕೂ ಜಾತ್ರೆಗೂ ನಿಕಟವಾದ ಸಂಬಂಧವಿದೆ. ಯಾತ್ರಾ ಎಂಬ ಪದದ ತದ್ಭವ ಜಾತ್ರೆ. ಇತರ ಅರ್ಥಗಳ ಜತೆಗೆ, ತೀರ್ಥಕ್ಷೇತ್ರ ಪ್ರವಾಸ; ಯಾವುದಾದರೊಂದು ದೇವರ ಹೆಸರಿನಲ್ಲಿ ಆಗಾಗ್ಗೆ ನಡೆಯುವ, ಬೇರೆ ಬೇರೆ ಕಡೆಗಳಿಂದ ಯಾತ್ರಾರ್ಥಿಗಳನ್ನು ಆಕರ್ಷಿಸುವ ಹಬ್ಬ; ತೇರು, ಮೆರವಣಿಗೆ. ಮತ್ತು ಹಬ್ಬ ಎಂಬ ಅರ್ಥಗಳನ್ನು ಆ ಪದ ಪಡೆದಿದೆ.[2] ಜಾತ್ರೆ ನಡೆಯುವಾಗಲೆಲ್ಲ ಹಬ್ಬವಿರುತ್ತದೆ. ಹಬ್ಬ ನಡೆಯುವಾಗಲೆಲ್ಲ ಜಾತ್ರೆಯಿರಬೇಕೆಂದಿಲ್ಲ. ಗೌರಿಗಣೇಶರ ಹಬ್ಬದಲ್ಲಿ ಜಾತ್ರೆ ನಡೆಯುವುದಿಲ್ಲ. ಮಾರಿಜಾತ್ರೆಯಾಗಲಿ ಎಲ್ಲಮ್ಮನ ಜಾತ್ರೆಯಾಗಲಿ ಹಬ್ಬ ಜೊತೆಗೂಡಿರುತ್ತದೆ. ಕೆಲವೊಮ್ಮೆ ಹಬ್ಬವಿಲ್ಲದೆಯೂ ಜಾತ್ರೆ ನಡೆಯುವುದುಂಟು. ಕೆಂಗಲ್ ಹನುಮಂತರಾಯನ ಜಾತ್ರೆಯನ್ನು ಉದಾ

1 ಕರ್ನಾಟಕ ಭಾರತ ಕಥಾಮಂಜರಿ : ಕುಮಾರವ್ಯಾಸ, ಉದ್ಯೋಗಪರ್ವ ೨ ೧೪.
2 ಕಿಟೆಲ್ ಕೋಶವನ್ನು ನೋಡಿ.

ಹೆಸಿಸಬಹುದು. ಪ್ರಾರಂಭದಲ್ಲಿ ಯಾತ್ರೆ ಅಥವಾ ಜಾತ್ರೆ ಸುಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ನಡೆಯುತ್ತಿತ್ತೆಂದು ತೋರುತ್ತದೆ. ಪಾಪ ಪರಿಹಾರಕ್ಕಾಗಿ ದೇಶದ ಮೂಲೆಮೂಲೆಗಳಿಂದ ಜನ ಅಂಥ ಕ್ಷೇತ್ರಗಳಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆಯುತ್ತಿದ್ದರು. ಅನಂತರ ಕೆಲವು ಹಳ್ಳಿ ಗಳಲ್ಲಿ ನಿಯತ ಅಥವಾ ಅನಿಯತ ಕಾಲಗಳಲ್ಲಿ ಅದ್ದೂರಿಯಿಂದ ಜರುಗುತ್ತಿದ್ದ ದೊಡ್ಡ ಹಬ್ಬಗಳಲ್ಲಿ ನೆಂಟರಿಷ್ಟರ ಜತೆಗೆ ಶ್ರದ್ಧಾವಂತ ಜನರೂ ಬರಲಾರಂಭಿಸಿದರು. ದೇವರು ಪ್ರಭಾವಶಾಲಿಯಾದರಂತು ಜನರ ಗದ್ದಲವೂ ಅಧಿಕವಾಗುತ್ತಿತ್ತು. ಒಂದು ದಿನದ ಹಬ್ಬ ಮೂರು ಅಥವಾ ಹೆಚ್ಚು ದಿನಗಳಿಗೆ ಹಬ್ಬುತ್ತ, ಕುಣಿತ ಮೆರೆತಗಳು ಕೂಡಿಕೊಂಡು, ಮದ್ದು ಪಟಾಕಿಗಳ ವೈಭವ ಆಕರ್ಷಕವಾಗಿದ್ದು, ಅಂಗಡಿ ಮುಂಗಟ್ಟುಗಳೂ ಜಮಾಯಿಸಿ, ಜನಮರುಳಾಗಿ ಪರಿಷೆ ಸೇರಿದಾಗ ಅದು ಜಾತ್ರೆಯೆಂಬ ನಾಮಕರಣಕ್ಕೆ ಯೋಗ್ಯವಾಯಿತು. ಕೊನೆಗೆ ರೈತನ ಜೀವನಾಡಿಯಂತಿರುವ ದನಗಳ ನೆರವಿಯೂ ಸಂಘಟನೆಗೊಂಡಾಗ ಆ ಪದದ ಅರ್ಥ ತುಂಬ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕಾಲಕ್ರಮೇಣ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದು, ಕೊನೆಗೆ ವಾಣಿಜ್ಯ ಮುಖವನ್ನು ರೂಪಿಸಿ ಕೊಂಡಾಗ ಜಾತ್ರೆಯಾಯಿತು. ಅಷ್ಟೇ ಅಲ್ಲ, ವಸ್ತುಪ್ರದರ್ಶನವೂ ಇತ್ತೀಚಿನ ಜಾತ್ರೆಗಳ ವೈಶಿಷ್ಟ್ಯವಾಗಿದೆ. ಜಾತ್ರೆಯೆಂದ ಕೂಡಲೇ ಈ ಮೂರು ಚಿತ್ರಗಳು ಕಣ್ಮುಂದೆ ನಿಲ್ಲು ತ್ತವೆ. ಈ ಲಕ್ಷಣಗಳಿಗೆ ಉತ್ತಮ ಲಕ್ಷ್ಯವೆಂದು ಸಿದ್ಧಗಂಗೆ ಜಾತ್ರೆಯನ್ನು ಹೆಸರಿಸ ಬಹುದು. ಕುಂಭಮೇಳದಂಥ ಮೇಳಗಳನ್ನು ಸಹ ಜಾತ್ರೆಯಲ್ಲಿಯೇ ಸಮಾವೇಶಗೊಳಿಸ ಬಹುದು.

ಪಂಜಾಬಿನಲ್ಲಿ ಜಾತ್ರೆಗಳನ್ನು ನಾಲ್ಕು ವಿಧವಾಗಿ ವಿಂಗಡಿಸುತ್ತಾರೆ: (೧) ವಸಂತಾ ಗಮನವನ್ನು ಸಾರುವಂಥ ಬಸಂತ ಪಂಚಮಿಯಂಥ ಋತುಮಾನದ ಜಾತ್ರೆಗಳು, (೨) ಪೌರಾಣಿಕ ಜಾತ್ರೆಗಳು, (೩) ಗುಗ್ಗ ಪೀರ್‌ನಂಥವರ ಹೆಸರಿನಲ್ಲಿ ನಡಸುವ ಸಂತರ ಜಾತ್ರೆಗಳು, ಮತ್ತು (೪) ಹಬ್ಬಗಳ ಜಾತ್ರೆಗಳು.[1] ಪೌರಾಣಿಕ ಸಂಗತಿಗಳು ಕೆಲವು ಜಾತ್ರೆಗಳ ಹಿನ್ನೆಲೆಯಲ್ಲಿವೆಯೆಂಬುದನ್ನು ಮಧ್ಯಪ್ರದೇಶದ ಜಾತ್ರೆಗಳಿಂದ ತಿಳಿಯ ಬಹುದು.[2]

ಮೊತ್ತದಲ್ಲಿ ಹಬ್ಬಗಳು ದುಷ್ಟಶಕ್ತಿ ನಿವಾರಣಾವಸರದಲ್ಲಿ ಹುಟ್ಟಿಕೊಂಡು, ಕಾಲ ಕ್ರಮೇಣ ಬೇರೆ ಬೇರೆ ಉದ್ದೇಶಗಳೂ ಸೇರಿಕೊಂಡುವೆಂಬ ಸಂಗತಿ ಮೇಲಿನ ವಿವರಣೆ ಯಿಂದ ಸ್ಪಷ್ಟವಾಗುತ್ತದೆ. ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಗ್ರಾಮೀಣ ಹಬ್ಬಗಳೆಂದು ಮೂರು ಬಗೆಗಳಾಗಿ ವಿಂಗಡಿಸಬಹುದು. ದೀಪಾವಳಿ, ಸ್ವಾತಂತ್ರ್ಯೋತ್ಸವ, ನವರಾತ್ರಿ, ಗಾಂಧಿಜಯಂತಿ ಮೊದಲಾದುವು ರಾಷ್ಟ್ರೀಯ ಹಬ್ಬಗಳು; ಕೇರಳದ ಓಣಂ, ತಮಿಳುನಾಡಿನ ಪೊಂಗಲ್, ಕರ್ನಾಟಕದ ಬಸವಜಯಂತಿ ಮುಂತಾದುವು ಪ್ರಾದೇಶಿಕ ಹಬ್ಬಗಳು; ಗ್ರಾಮದೇವತೆ

---

[1] *Folklore of the Punjab* by Sohinder Singh Bedi, P. 71.

[2] *Folklore of Madhya Pradesh* by Shyam Parmar, p. 48.

ಗಳ ಹಬ್ಬಗಳೆಲ್ಲ ಗ್ರಾಮೀಣ ಹಬ್ಬಗಳು. ಪಂಜಾಬಿನ ಟೀಕ್ರಾ, ಲೋಹ್ರಿ, ವೈಶಾಖೀ ಹಬ್ಬಗಳಿರುವಂತೆ ಒಂದೊಂದು ರಾಜ್ಯದಲ್ಲಿಯೂ ನಾಲ್ಕಾರು ಪ್ರಾದೇಶಿಕ ಹಬ್ಬಗಳಿರಬಹುದು. ಬುದ್ಧಜಯಂತಿ, ಮಹಾವೀರಜಯಂತಿ, ನಾನಕ್‌ಜಯಂತಿ, ಬಸವಜಯಂತಿ ಮೊದಲಾದ ಮತೀಯ ಹಬ್ಬಗಳನ್ನು ನಾಡಿನ ಹಲವೆಡೆಗಳಲ್ಲಿ ಆಚರಿಸುತ್ತಿದ್ದರೂ, ಅವು ಆಯಾಯ ಮತಗಳ ಅನುಯಾಯಿಗಳಿಗೆ ಸೀಮಿತಗೊಳ್ಳುವುದರಿಂದ, ಅವನ್ನು ರಾಷ್ಟ್ರೀಯ ಹಬ್ಬಗಳೆಂದು ಕರೆಯಲಾಗದು. ಭರತಖಂಡ ಲೋಕದ ಸಕಲ ಮತಗಳಿಗೆ ಜನ್ಮಸ್ಥಾನವೋ ಆಶ್ರಯಭೂಮಿಯೋ ಆಗಿರುವುದರಿಂದ ಮುಸ್ಲಿಮ್, ಕ್ರಿಶ್ಚಿಯನ್, ಪಾರ್ಸಿಗಳು ಆಚರಿಸುವ ಹಬ್ಬಗಳು ಹಲವಾರಿವೆ. ಅವೂ ಭಾರತೀಯ ಹಬ್ಬಗಳೆಂದೇ ಗಣನೆಗೊಳ್ಳಬೇಕಾಗಿದೆ. ಆದ್ದರಿಂದ ಮೇಲಣ ವಿಂಗಡಣೆಯಲ್ಲಿ ಮತೀಯ ಹಬ್ಬಗಳೆಂಬ ನಾಲ್ಕನೆಯ ಬಗೆ ಸೇರಬೇಕಾಗುತ್ತದೆ.

ಪರಿಸರ, ಜನಮನೋಧರ್ಮ, ವಿಶೇಷ ಸಂದರ್ಭ ಮತ್ತು ನಿರ್ದಿಷ್ಟ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹಬ್ಬಗಳು ಉಗಮಗೊಳ್ಳುವುದರಿಂದ ಉಪಾಸನಾ ವಿಧಿಗಳಲ್ಲಿ ಸಾಕಷ್ಟು ಅಂತರವಿರುತ್ತದೆ. ಈ ಅಂತರ ಆಯಾಯ ಹಬ್ಬಗಳ ಧ್ಯೇಯೋದ್ದೇಶಗಳಿಗನುಗುಣವಾಗಿ ಉತ್ಸವದ ಸ್ವರೂಪದಲ್ಲಿ, ಪೂಜಾವಿಧಾನದಲ್ಲಿ, ತಿಂಡಿತೀರ್ಥಗಳಲ್ಲಿ, ಎದ್ದು ಕಾಣುತ್ತದೆ. ಒಂದು ಕುಟುಂಬ ಅಥವಾ ಸಮಾಜ ಆಚರಿಸುವ ಹತ್ತಾರು ಹಬ್ಬಗಳಲ್ಲಿ ಒಂದೊಂದೂ ಒಂದೊಂದು ವಿಧವಾಗಿರುತ್ತವೆ.[1] ರಾಷ್ಟ್ರೀಯ ಮಟ್ಟದ ಹಬ್ಬಗಳ ಆಚರಣೆಯಲ್ಲಿಯೂ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗಳು ಒಡೆದು ಕಾಣುತ್ತವೆ. ಈ ವ್ಯತ್ಯಾಸಗಳಿಗೆ ಮುಖ್ಯವಾದ ಕಾರಣ ಭೌಗೋಳಿಕ ಹಿನ್ನೆಲೆ ಮತ್ತು ಜನರ ಅಭಿರುಚಿ. ವೈವಿಧ್ಯವೈಶಿಷ್ಟ್ಯಗಳಿಂದ ಪ್ರತಿಯೊಂದು ಹಬ್ಬದ ವ್ಯಕ್ತಿತ್ವಮಹತ್ವಗಳು ಸ್ಪಷ್ಟವಾಗಿ ಗೋಚರಿಸುತ್ತವೆ, ನಿಜ. ಆದರೆ ಅವುಗಳಲ್ಲಿ ಸಾದೃಶ್ಯಗಳಿಲ್ಲವೆಂದಿಲ್ಲ. ಏಕಮತೀಯರ ಹಬ್ಬಗಳಲ್ಲಿ ಸಾದೃಶ್ಯಗಳು ತೋರುವುದು ಹೆಚ್ಚಲ್ಲ. ಭಿನ್ನಮತೀಯರ ಹಬ್ಬಗಳಲ್ಲಿಯೂ ಹಲವಾರು ಸಾದೃಶ್ಯಗಳು ಕಾಣುತ್ತವೆ. ಈ ಸಾದೃಶ್ಯಗಳಿಗೆ ಅವರ ಪರಸ್ಪರ ಸಂಪರ್ಕ ಸಂಸರ್ಗಗಳೇ ಕಾರಣ. ಮೇಲಾಗಿ ಮತಾಂತರ ಹೊಂದಿದ ನಂತರವೂ ಜನ ತಮ್ಮ ಮುಂಚಿನ ಮತದ ಸಂಸ್ಕಾರ ವಾಸನೆಗಳನ್ನು ಹೊಸ ಮತದ ಆವರಣಕ್ಕೂ ಒಯ್ಯುವುದುಂಟು. ಅಷ್ಟೇ ಅಲ್ಲ, ಒಂದು ಮತದವರು ನಡೆಸುವ ಹಬ್ಬಗಳಲ್ಲಿ ಮತ್ತೊಂದು ಮತದವರೂ ಪಾಲ್ಗೊಳ್ಳುವುದರಿಂದ ವಿಧಿನಿಷೇಧಗಳ ವಿನಿಮಯ ಅಸ್ಪೃಷ್ಟಿಕವಾಗಿ, ಗೂಢವಾಗಿ ನಡೆದುಹೋಗುತ್ತದೆ. ಈ

1 ಭಾರತೀಯ ಹಬ್ಬಗಳ ಆಳವಾದ ಅಂತೆಯೇ ತುಲನಾತ್ಮಕವಾದ ಅಧ್ಯಯನ ನಡೆದಿಲ್ಲ. ಸಧ್ಯಕ್ಕೆ ಡಿ. ಟಿ. ರಂಗಸ್ವಾಮಿಯವರ 'ಭಾರತದ ಹಬ್ಬ ಹರಿದಿನಗಳು'. ಪಿ. ವ್ಹಿ. ಕೇಶವಯ್ಯನವರ 'ಭಾರತೀಯ ಹಬ್ಬಗಳು', ಪಿ. ಬಿ. ದೇಸಾಯಿಯವರ 'ಹಬ್ಬ ಹುಣ್ಣಿಮೆಗಳು', ಪಿ. ವಿ. ಜಗದೀಶ ಅಯ್ಯರ್ ಅವರ *South Indian Festivals* ಎಂಬ ಗ್ರಂಥಗಳನ್ನು ನೋಡಬಹುದು. ಬಿ. ಎಸ್. ಗದ್ದಿಗಿಮಠ ಅವರ 'ಕನ್ನಡ ಜಾನಪದ ಗೀತೆಗಳು' ಎಂಬ ಗ್ರಂಥದ "ಹಬ್ಬಗಳ ಹಾಡುಗಳು" ಎಂಬ ಪ್ರಕರಣವನ್ನು ಗಮನಿಸಬಹುದು.

ಸಂದರ್ಭದಲ್ಲಿ ಹಿಂದೂಗಳು ಪಾಲ್ಗೊಳ್ಳುವ ಮೊಹರಂ ಹಬ್ಬವನ್ನು ಸ್ಮರಿಸಿಕೊಳ್ಳಬಹುದು.

ನಂಬಿಕೆ ಮತ್ತು ಸಂಪ್ರದಾಯಗಳು ದೇಶದಿಂದ ದೇಶಕ್ಕೆ ಪ್ರಸರಣಗೊಳ್ಳಬಹುದಾದರೂ ಹಬ್ಬಹರಿದಿನಗಳು ದೂರದೇಶಗಳಿಗೆ ಪಯಣಿಸುವುದಿಲ್ಲ. ಅವು ಜನ್ಮತಾಳಿದ ದೇಶಗಳಲ್ಲಿಯೇ ಉಳಿಯುತ್ತವೆ. ಇಲ್ಲವೆ ಅಳಿಯುತ್ತವೆ. ವಾಣಿಜ್ಯ ವ್ಯವಹಾರಗಳು, ಸಂಪರ್ಕಸಾಧನಗಳು, ಸಂಚಾರ ಸೌಕರ್ಯಗಳು, ರಾಜಕೀಯ ಬಾಂಧವ್ಯಗಳು ಎಷ್ಟೇ ಉತ್ತಮಗೊಂಡರೂ, ಹಬ್ಬನೋಂಪಿಗಳಿಗೆ ಸಂಬಂಧಿಸಿದಂತೆ ಆದಾನ ಪ್ರದಾನಗಳು ಸಾಧ್ಯವಿಲ್ಲ. ಅವು ರಾಷ್ಟ್ರೀಯ ಹಿನ್ನೆಲೆ, ಧಾರ್ಮಿಕ ಹಾಗೂ ಮತೀಯ ಪ್ರೇರಣೆ ಮತ್ತು ಪರಿಸರ ಪ್ರಭಾವಗಳಿಂದ ವಿಕಾಸಗೊಂಡುವಾದ್ದರಿಂದ, ನೂತನ ಸಾಂಸ್ಕೃತಿಕ ವಾತಾವರಣದಲ್ಲಿ ತಲೆಯೆತ್ತಲಾರವು ; ಅಷ್ಟೇ ಅಲ್ಲ, ಅವುಗಳಿಗಲ್ಲಿ ಪ್ರವೇಶ ಸಹ ದೊರೆಯಲಾರದು. ಹಬ್ಬಗಳಲ್ಲಿ ಅನುಷ್ಠಾನದಲ್ಲಿರಬಹುದಾದ ಕೆಲವು ಉಪಾಸನಾವಿಧಿಗಳು ಸೀಮೆಯಿಂದ ಸೀಮೆಗೆ ಹರಿದಾಡಲವಕಾಶವುಂಟು. ಕೇವಲ ಸಾದೃಶ್ಯದ ಆಧಾರದಿಂದ ಅವುಗಳಿಗೆ ಏಕ ಮೂಲತೆಯನ್ನಾರೋಪಿಸುವುದು ಕಷ್ಟವಾಗುತ್ತದೆ.

ಹಬ್ಬಗಳ ಮೂಲೋದ್ದೇಶವೇನೇ ಇರಲಿ, ಅವುಗಳ ಸಾಂಸ್ಕೃತಿಕ ಪ್ರಯೋಜನವನ್ನಾಗಲಿ, ಸಾಮಾಜಿಕ ಸಾರ್ಥಕತೆಯನ್ನಾಗಲೀ ಅಲ್ಲಗಳೆಯುವಂತಿಲ್ಲ. ಮನುಷ್ಯಚೇತನ ಊರ್ಧ್ವಮುಖವಾಗಲು, ಅವನ ಶೀಲವರ್ತನೆಗಳು ಉತ್ತಮಗೊಳ್ಳಲು, ಸಮಾಜದಲ್ಲಿ ಐಕ್ಯಭಾವನೆ ಕುದುರಲು, ನಾಡಿನಲ್ಲಿ ಶಾಂತಿ ನೆಲೆಗೊಳ್ಳಲು, ದೇಶಭಕ್ತಿ ಕೊನರಲು ಅವು ಅತ್ಯವಶ್ಯವೆಂದು ಒತ್ತಿ ಹೇಳಬೇಕಾಗಿಲ್ಲ. ಜತೆಗೆ ಅವು ದುಡಿಮೆಯ ಶ್ರಮವನ್ನೂ ಬಾಳಿನ ಬೇಸರವನ್ನೂ ಪರಿಹರಿಸಿ, ಮನುಷ್ಯನ ಮನಸ್ಸಿಗೆ ಆನಂದವುಂಟುಮಾಡುವ ಸಾಧನಗಳೂ ಅಹುದು, ಜನತಾ ಸಂಪರ್ಕ ಮಾಧ್ಯಮಗಳೂ ಅಹುದು ಎನ್ನುವುದಾದರೆ ಅವುಗಳ ಉಪಯುಕ್ತತೆಯ ಬಗ್ಗೆ ಯಾರಿಗೂ ಸಂದೇಹವಿರಲಾರದು.

ಸಸ್ಯ ಜಾನಪದ[1]

ಮಾನವ ಎಂದೂ ಸ್ವತಂತ್ರನಲ್ಲ, ಸ್ವಾವಲಂಬಿಯೂ ಅಲ್ಲ; ಅವನು ಸದಾ ಪರತಂತ್ರ ಹಾಗೂ ಪರಾವಲಂಬಿ. ಅವನು ನಿಸರ್ಗವನ್ನೊಲಿಸಿಕೊಂಡು, ಅದರ ಪ್ರಯೋಜನವನ್ನು ಪಡೆಯುವುದಾದರೆ ಸುಖವಾಗಿ ಬಾಳುತ್ತಾನೆ; ಅದರ ವಿರುದ್ಧವಾಗಿ ಸೆಣಸಿ, ಹೋರಾಟ ನಡೆಸುವುದಾದರೆ ಅವನು ನಿರ್ನಾಮವಾಗುತ್ತಾನೆ. ನಿಸರ್ಗದ ರಕ್ಷೆಯಿರುವತನಕ ಅವನಿಗೆ ಭಯವಿಲ್ಲ. ಮಾನವ ಜನ್ಮವೆತ್ತುವ ಮುನ್ನ ಅವನು ಪ್ರಾಣಿ ಹಾಗೂ ಸಸ್ಯ ಜನ್ಮಗಳ ಮೂಲಕ ಹಾದು ಬಂದಿದ್ದಾನೆನ್ನುವ ನಂಬಿಕೆ ಅನೇಕ ಜನಾಂಗಗಳಲ್ಲಿ ಪ್ರಬಲವಾಗಿದೆ. ಅವನು ಭೂಮಿಯ ಮೇಲೆ ಕಾಣಿಸಿಕೊಳ್ಳುವ ಹೊತ್ತಿಗೆ ತರುಗುಲ್ಮ ಲತಾದಿಸಸ್ಯ ಸಂಪತ್ತು ಸರ್ವತ್ರ ಸಮೃದ್ಧವಾಗಿ ಹರಡಿತ್ತು. ಅವನು ಹುಟ್ಟಿದ್ದೇ ಕಾಡಿನ ನಡುವೆ, ಬೆಳೆದದ್ದೇ ಮರಗಿಡಗಳ ಜತೆಯಲ್ಲಿ. ಅವನ ಹಸಿವನ್ನು ನೀಗಿದ್ದು ಮರದ ಹಣ್ಣು, ನೆಲದ ಗೆಡ್ಡೆಗೆಣಸುಗಳು; ಮರದ ತೊಗಟೆಯೇ ಅವನ ಹೊದಿಕೆಯಾಯಿತು: ಮರದ ನೆರಳೇ ಅವನಿಗೆ ಆಸರೆಯಾಯಿತು. ಗುಡುಗು ಸಿಡಿಲು ಮೊದಲಾದ ನೈಸರ್ಗಿಕ ವ್ಯಾಪಾರಗಳು ಹುಲಿ ಚಿರತೆ ಮೊದಲಾದ ದುಷ್ಟಜಂತುಗಳು ಅವನನ್ನು ಪೀಡಿಸುವಾಗ ಮರದ ಬುಡವೋ ಅಥವಾ ಬಾಹುಗಳೋ ಅವನಿಗೆ ಆಶ್ರಯ ನೀಡಿದುವು. ಐತಿಹಾಸಿಕ ಕಾಲದಲ್ಲಿ ಸಹ ನೆಲದ ಮೇಲೆಲ್ಲ ಹಸುರು ಆವರಿಸಿಕೊಂಡಿದ್ದಿರಬೇಕು. ಆದಿಮಾನವ ಮರ ದೂರಕ್ಕೆ ವಸತಿಗಳನ್ನು ನಿರ್ಮಿಸಿಕೊಂಡಿದ್ದಂತೆ ತೋರುತ್ತದೆ. ತನ್ನ ಅಭಿವೃದ್ಧಿಗೆ, ತನ್ನ ಪ್ರಾಣಾಧಾರಕ್ಕೆ ಗಿಡಗೆಂಡೆಗಳೇ ಕಾರಣವೆಂದರಿತುಕೊಳ್ಳಲು ಅವನಿಗೆ ಬಹುಕಾಲ ಹಿಡಿಯಲಿಲ್ಲ. ಅರಣ್ಯದಲ್ಲಿ ಎಲ್ಲೆಲ್ಲಿಯೋ ರೂಕ್ಷವಾಗಿ ಬೆಳೆಯುತ್ತಿದ್ದ ಸಸ್ಯಗಳನ್ನು ಒಗ್ಗಿಸಿ ಕೊಂಡು ತನಗೆ ಬೇಕಾದಷ್ಟನ್ನು ಒಂದೆಡೆ ಬೆಳೆಯಲಾರಂಭಿಸಿದ. ಸಸ್ಯಗಳನ್ನು ಬೆಳೆಯುತ್ತ, ಅರಣ್ಯೋತ್ಪನ್ನಗಳನ್ನು ಬಳಸುತ್ತ ಯಾವ ಪದಾರ್ಥ ಆರೋಗ್ಯಾನುಕೂಲವಾದದ್ದು, ಯಾವುದು ಪ್ರತಿಕೂಲವಾದದ್ದು, ಯಾವ ಗಿಡದ ರಸ ಯಾವ ರೋಗಕ್ಕೆ ಮದ್ದೆಂಬುದನ್ನು ಕಂಡುಕೊಂಡ. ಮಾನವನ ಸಂಸ್ಕೃತಿ ರೂಪುಗೊಂಡದ್ದೇ ಕಾಂತಾರದಲ್ಲಿ, ಅವನ ಇತಿಹಾಸ ಪ್ರಾರಂಭವಾದದ್ದೇ ಕಾನನಾಂತರದಲ್ಲಿ. ಹಿಂದಿನಕಾಲದ ಕವಿ

---

1 ಈ ಅಧ್ಯಾಯವನ್ನು ಬರೆಯುವಲ್ಲಿ ಜೇಮ್ಸ್ ಜಾರ್ಜ್ ಫ್ರೇಜರ್ ಅವರ *The Golden Bough* ಎಂಬ ಗ್ರಂಥದ ಕೆಲವು ಭಾಗಗಳನ್ನು ಬಳಸಿಕೊಂಡಿದೆ.

ಋಷಿ ಸಾಧುಸಂತರು ಗಿರಿವನಪ್ರಿಯರೆಂಬುದನ್ನು, ಪರ್ಣಕುಟಿಗಳೇ ಗುರುಕುಲಗಳಾಗಿದ್ದು ವೆನ್ನುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

ವೈಜ್ಞಾನಿಕಯುಗದ ಮಾನವನೂ ತನ್ನೆಲ್ಲ ಸೌಕರ್ಯಗಳಿಗೆ ಹಾಗೂ ಕ್ಷೇಮಸಾಧನೆಗೆ ಸಸ್ಯಸಂಪತ್ತನ್ನೇ ಅವಲಂಬಿಸಬೇಕಾಗಿದೆ. ಅವನು ರಾಸಾಯನಿಕ ಮಾತ್ರೆಗಳಿಂದಲೇ ಹೊಟ್ಟೆ ಹೊರೆದುಕೊಳ್ಳಲಾರ; ಕಾರ್ಖಾನೆಯ ಉತ್ಪನ್ನಗಳಿಂದ ಜೀವನ ಸಾಗಿಸಲಾರ. ಆಹಾರ ಪದಾರ್ಥಗಳು, ಬಟ್ಟೆಕಾಗದಗಳಿಗೆ ಬೇಕಾದ ಕಚ್ಚಾ ಸಾಮುಗ್ರಿಗಳು, ಎಣ್ಣೆ ಔಷಧಿಗಳಿಗೆ ಆಧಾರಭೂತವಾದ ವಸ್ತುಗಳು, ವಸತಿ ಸೌಕರ್ಯಕ್ಕೆ ಬೇಕಾದ ಮರ, ಜೀವನದ ಎಲ್ಲ ಅಗತ್ಯಗಳೂ ಸಸ್ಯಕ್ಷೇತ್ರದಿಂದಲೇ ಪೂರೈಕೆಯಾಗಬೇಕಾಗಿದೆ. ಅರಣ್ಯಗಳು ನಾಶಗೊಂಡು, ಮರ ಗಿಡ ಬಳ್ಳಿ ಪೈರುಗಳೆಲ್ಲ ಒಕ್ಕಲಿಕ್ಕಿ ಹೋಗುವುದಾದರೆ, ಮಾನವ ಮಾತ್ರವಲ್ಲ, ಇಡೀ ಪ್ರಾಣಿಕೋಟಿಯೇ ನಿರ್ನಾಮವಾಗುತ್ತದೆ; ನಾಗರಿಕತೆ ಧ್ವಂಸ ವಾಗುತ್ತದೆ. ಮನುಷ್ಯನ ಉಪಯೋಗಕ್ಕೆ ಬಾರದ ಸಸ್ಯವಿಲ್ಲವೆಂದೇ ಹೇಳಬಹುದು. ಸೃಷ್ಟಿಯಲ್ಲಿ ನಿಷ್ಪ್ರಯೋಜಕವಾದ ವಸ್ತುವಿರಲಾರದು. ಉಪಯೋಗಕ್ಕೆ ಬಾರದ ಗಿಡವೋ ಬಳ್ಳಿಯೋ ಕಂಟಿಯೋ ಇರುವುದಾದರೆ ಅದಕ್ಕೆ ಮಾನವನ ಅಜ್ಞಾನವೇ ಕಾರಣವೆನ್ನ ಬಹುದು.

ತನ್ನ ಬದುಕಿಗೆ ಆಧಾರಭೂತವಾಗಿರುವ ಅನಿವಾರ್ಯವಾಗಿರುವ ಸಸ್ಯಗಳ ಬಗ್ಗೆ ಆದಿ ಮಾನವ ಗೌರವ ವಾತ್ಸಲ್ಯ ಭಯಾಶ್ಚರ್ಯಗಳನ್ನು ಹೊಂದಿದ್ದುದೇನೂ ಆಶ್ಚರ್ಯವಲ್ಲ. ತನ ಗಿಂತ ಮುಂದೆ ಹುಟ್ಟಿ, ಆಗಸದೆತ್ತರಕ್ಕೆ ಬೆಳೆದು, ತನ್ನ ರಕ್ತಮಾಂಸಗಳ ವೃದ್ಧಿಗೆ ಬೇಕಾದ ದ್ರವ್ಯಗಳನ್ನು ನೀಡಿ, ತಾನು ಮುಪ್ಪಾದರೂ ಪುಷ್ಟವಾಗಿ ಸೊಂಪಾಗಿ ಬೆಳೆಯುವ ಮರ ಗಿಡಗಳನ್ನೂ, ತನಗೆ ಹಣ್ಣುಹಂಪಲು ತರಕಾರಿಗಳನ್ನು ಕಾಳುಕಡ್ಡಿಗಳನ್ನು ಒದಗಿಸಿ ಸತ್ತು ಹೋಗುವ ಬಳ್ಳಿಪೈರುಗಳನ್ನೂ, ವರ್ಷವರ್ಷವೂ ಎಲೆಯುದುರಿ ಚಿಗುರಿ ಹೂವಾಗಿ ಮೆರೆಯುವ ವೃಕ್ಷಕೋಟಿಯನ್ನೂ ನೋಡಿದಾಗ ಅವನಲ್ಲಿ ನಾನಾಭಾವನೆಗಳು ಮೂಡು ವುದು ಸಹಜವೇ. ಅವು ತನ್ನಂತೆ ನಡೆಯುವುದಿಲ್ಲ, ಮಾತಾಡುವುದಿಲ್ಲ; ಆದರೂ ರಾಗ ಭಾವಗಳ ಉತ್ಪತ್ತಿಗೆ ಕುಣಿತ ಮೆರೆತಗಳ ಪ್ರದರ್ಶನಕ್ಕೆ ಸ್ಫೂರ್ತಿ ಪ್ರೇರಣೆಗಳು ಅವನಿಗೆ ನಿಸರ್ಗದಿಂದಲೇ ಒದಗಿರಬೇಕು. ಅವುಗಳೊಳಗಿರುವ ಯಾವುದೋ ಚೈತನ್ಯ ಕಾರಣ ವಾಗಿ ಅಷ್ಟೆಲ್ಲ ಮಹತ್ಕಾರ್ಯಗಳು ಜರುಗುತ್ತಿರಬೇಕೆಂದು ಅವನಿಗನಿಸಿರಬೇಕು. ಮಳೆ ಹುಯ್ದರೆ ಹಸಿರು ಚಿಮ್ಮುತ್ತದೆ, ಬೆಂಕಿ ಇದ್ದರೆ ಹೊಗೆ ಏಳುತ್ತದೆ ಎಂಬ ಕಾರ್ಯಕಾರಣ ಸಂಬಂಧ ಪ್ರಜ್ಞೆ ಅವನಲ್ಲಿ ವಿಕಾಸಗೊಂಡು, ಸರ್ವಚೇತನವಾದ ಅಪ್ರಜ್ಞಾಪೂರ್ವಕವಾಗಿ ಅವನ ಮನಸ್ಸಿನಲ್ಲಿ ಮಿಡಿಯುತ್ತಿದ್ದಿರಬೇಕು. ಚೈತನ್ಯವೇ ಮರದ, ಗಿಡದ, ಬಳ್ಳಿಯ ಹಾಗೂ ಪೈರಿನ ರೂಪದಲ್ಲಿ ಮೂರ್ತಸ್ವರೂಪವನ್ನು ಪಡೆದಿದೆ ಎಂಬ ಭಾವನೆ ಮೂಡಿದಾಗ ಅವನ್ನು ಪೂಜಿಸತೊಡಗಿದನು. ಆ ಪೂಜೆಯೂ ಕ್ಲಿಷ್ಟವಾಗಿರಲಾರದು. ಮರವನ್ನು ಕಣ್ಣಿಗೊತ್ತಿಕೊಂಡಿರಬೇಕು; ಕಾಲು ತಗುಲಿದಾಗಿ ಸಣ್ಣಮಾಡಿಕೊಂಡಿರಬೇಕು.

ಉತ್ತರ ಅಮೇರಿಕೆಯ ಕೆಲವು ಇಂಡಿಯನ್ನರು ಪ್ರತಿಯೊಂದು ನೈಸರ್ಗಿಕ ವಸ್ತುವಿ

ನಲ್ಲಿಯೂ ಚೈತನ್ಯ ಅಥವಾ ಛಾಯೆಯಿದೆ ಎಂದು ನಂಬಿದ್ದಾರೆ. ಅಷ್ಟೇ ಅಲ್ಲ; ಅವು ಗಳಲ್ಲಿ ಕೆಲಸಕ್ಕೆ ಬುದ್ಧಿಶಕ್ತಿಯಿದೆ ಎಂಬ ಭಾವನೆಯೂ ಅವರಲ್ಲಿದೆ. ಅವರೆಂದೂ ಮರ ಗಳನ್ನು ಕಡಿಯುವರಲ್ಲ. ಏತಕ್ಕಾದರೂ ಮರ ಬೇಕಾಗಿದ್ದರೆ ಅದು ಉರುಳುವತನಕ ಮುಟ್ಟುವುದಿಲ್ಲ. ಪೂರ್ವ ಆಫ್ರಿಕೆಯ ವಾಣಿಕರ ಕಲ್ಪನೆಯ ಪ್ರಕಾರ ಪ್ರತಿಯೊಂದು ಮರದಲ್ಲಿಯೂ, ಮುಖ್ಯವಾಗಿ ತೆಂಗಿನ ಮರದಲ್ಲಿ ಚೈತನ್ಯವಿದೆ. ಆ ಮರ ಬಾಳಿಗೆ ತುಷ್ಟಿ ಪುಷ್ಟಿಗಳನ್ನು ನೀಡುತ್ತದೆಯಾದ್ದರಿಂದ ಅದನ್ನು ಕಡಿದವರು ಮಾತೃಹತ್ಯಾದೋಷಿಗಳೆಂದು ಗಣನೆಗೊಳ್ಳುತ್ತಾರೆ. ಮುಗ್ಧ ಜನರ ತೋಳು ಕತ್ತರಿಸುವುದೆಷ್ಟು ಪಾತಕವೋ ಮರಗಳ ಕೊಂಬೆ ಕಡಿಯುವುದೂ ಅಷ್ಟೇ ದೂಷ್ಯವೆಂದು ಸಯಾಮಿನ ಸನ್ಯಾಸಿಗಳು ತಿಳಿದಿದ್ದಾರೆ. ಅವಕ್ಕೂ ಚೇತನವಿರುವುದರಿಂದ ಕಡಿದರೆ ನೋವಾಗುತ್ತದೆಂಬ ಭಾವನೆ ಆದಿಮಾನವನಲ್ಲಿ ಮೂಡಿದ್ದು ಅಸಹಜವೇನಲ್ಲ. ಓಕ್ ಆಲ ಬಲಗಿ ಮೊದಲಾದ ದೈತ್ಯಗಾತ್ರದ ವೃಕ್ಷ ಗಳಲ್ಲಿ ಮಹಾಚೈತನ್ಯವನ್ನು ಕಂಡ ಅವನಲ್ಲಿ ಅವನ್ನು ಕಡಿದವನು ಸಾಯುತ್ತಾನೆ, ಇಲ್ಲವೆ ಅಂಗವಿಕಲನಾಗುತ್ತಾನೆಂಬ ಭಾವನೆ ಮೂಡಿದ್ದು ಸಹಜವೇ. ಮರ ಕಡಿದವನ ಸುಳಿಯೇ ಸತ್ತುಹೋಗುತ್ತದೆಂಬ ನಂಬಿಕೆ ಇಂದಿಗೂ ಹಳ್ಳಿಗಾಡಿನ ಜನರಲ್ಲಿದೆ. ಪಾಪ ಪರಿಹಾರಾರ್ಥವಾಗಿ ಅಂಥದೊಂದು ಮರವನ್ನು ಕಡಿದ ಮರಕಟುಗ ಅದೇ ಕೊಡಲಿ ಯಿಂದ ಹೇಟೆಯ ಶಿರವನ್ನು ಬಲಿಕೊಡುವ ಪದ್ಧತಿ ಕೆಲವು ಜನಾಂಗಗಳಲ್ಲಿ ಚಾಲ್ತಿ ಯಲ್ಲಿದೆ. ಪಂಜಾಬಿನ ಕಾಂಗ್ರಾ ಪರ್ವತ ಪ್ರಾಂತ್ಯದಲ್ಲಿ ಪ್ರಾಚೀನ ದೇವದಾರು ಮರವನ್ನು ಕಡಿದ ತಪ್ಪಿಗಾಗಿ ಸಂಬಂಧಪಟ್ಟ ಊರಿನ ಕುಟುಂಬಗಳು ಪ್ರತಿವರ್ಷವೂ ಪರ್ಯಾಯ ಕ್ರಮದಲ್ಲಿ ಒಂದೊಂದು ಹುಡುಗಿಯನ್ನು ಬಲಿಕೊಡಬೇಕಾಗಿತ್ತು.

ಮರ ಮುರಿದು ಬೀಳುವಾಗ ಆಗುವ ಶಬ್ದದಿಂದ ಅದು ಅಳುತ್ತದೆಂದೂ, ಆಗ ರಸವೋ ಹಾಲೋ ಸ್ರವಿಸುವುದಾದರೆ ರಕ್ತ ಸುರಿಯುತ್ತದೆಂದೂ ಅನೇಕ ದೇಶಗಳ ಜನ ನಂಬಿಕೊಂಡಿದ್ದರು. ಚೀನೀ ಗ್ರಂಥಗಳಲ್ಲಿ ಇಂಥ ಸಂಗತಿಗಳು ಉಲ್ಲೇಖಗೊಂಡಿದೆ. ಮರ ಕಡಿತದಿಂದ ಕಟುಕನಿಗೆ ಅಥವಾ ಅಲ್ಲಿಯ ಕುಲದ ಯಜಮಾನನಿಗೆ ಕೇಡೊದಗುವ ಸಂಭವವಿದ್ದುದರಿಂದ, ಅದನ್ನು ಕಡಿಯುವುದಕ್ಕೆ ಮುಂಚೆ ಮಾಂತ್ರಿಕನ ಅನುಮತಿ ಪಡೆಯುವ ಪದ್ಧತಿ ಮಧ್ಯ ಆಫ್ರಿಕೆಯ ಕೆಲವು ಕುಲಗಳಲ್ಲಿ ಜಾರಿಯಲ್ಲಿತ್ತು. ಆ ಅನು ಮತಿ ದೊರೆತನಂತರ ಕಟುಕ ಕೋಳಿಯನ್ನೋ ಆಡನ್ನೋ ಆಹುತಿನೀಡಿ, ಅನಂತರ ಬುಡಕ್ಕೆ ಕೊಡಲಿಬಿಡುತ್ತಿದ್ದನು. ಮೊದಲನೆಯ ಏಟಿನಿಂದ ಸ್ರವಿಸುವ ರಸವನ್ನು ನಾಲಗೆ ಯಿಂದ ನೆಕ್ಕಿ, ತಾವಿಬ್ಬರೂ ರಕ್ತಸೋದರರೆಂಬ ಬಾಂಧವ್ಯವನ್ನು ಸ್ಥಾಪಿಸಿಕೊಂಡನಂತರ, ಮುಂದಿನ ಕಾರ್ಯಕ್ಕೆ ಅಣಿಯಾಗುತ್ತಿದ್ದನು. ಮದುವೆ ಮೊದಲಾದ ಶುಭಕಾರ್ಯಗಳಿಗೆ ಸೌದೆಗಾಗಿ ಮರ ಕಡಿಯುವ ಮುನ್ನ ಅದಕ್ಕೆ ಪೂಜೆ ಸಲ್ಲಿಸುವ ಪದ್ಧತಿ ಇಂಡಿಯಾ ದಲ್ಲಿಯೂ ಕೆಲವು ಕಡೆ ರೂಢಿಯಲ್ಲಿತ್ತು. ಹಣ್ಣು ಬಿಡದ ಮರದ ಬಗ್ಗೆ ಜನ ಕ್ರುದ್ಧ ರಾಗುತ್ತಿದ್ದುದೂ ಉಂಟು. ಅದು ಹಣ್ಣು ಬಿಡುವಂತೆ ಮಾಡಲು ಕೆಲವು ಆಚರಣೆಗಳನ್ನು ಕೈಗೊಳ್ಳುತ್ತಿದ್ದರು. ಇಬ್ಬರು ಮುಚ್ಚು ಕೊಡಲಿಗಳನ್ನು ಹಿಡಿದುಕೊಂಡು, ಆ ಮರದ ಬಳಿ

ಹೋಗುತ್ತಿದ್ದರು. ಅವರಲ್ಲೊಬ್ಬ ಮರದ ಬುಡದಲ್ಲಿ ನಿಂತರೆ, ಮತ್ತೊಬ್ಬ ಮೇಲೇರುತ್ತಿದ್ದನು. ಹಣ್ಣು ಬಿಡದಿದ್ದರೆ ಕಡಿದುಬಿಡುತ್ತೇನೆಂದು ಕೆಳಗೆ ನಿಂತವನು ಉಗ್ಗಡಿಸುತ್ತಿದ್ದನು. ಆಗ ಮೇಲಿನವನು ಮರದ ಪರವಾಗಿ ದನಿ ಎತ್ತಿ ಮುಂದೆ ತುಂಬ ಫಲ ಕೊಡುವುದಾಗಿ ಹೇಳುತ್ತಿದ್ದನು. ಇದು ಜಪಾನಿನಲ್ಲಿ ಜಾರಿಯಲ್ಲಿದ್ದ ವಾಡಿಕೆ. ಯೂರೋಪಿನ ಕೆಲವು ರಾಷ್ಟ್ರಗಳಲ್ಲಿ ಇಂಥವೇ ಪದ್ಧತಿ ರೂಢಿಯಲ್ಲಿತ್ತು.

ಮರವೂ ಮನುಷ್ಯನಂತೆ ಚೈತನ್ಯಸಂಪನ್ನವಾದುದರಿಂದ ಮಾನವಸಾದೃಶ್ಯಾರೋಪಣೆ ಸ್ವಭಾವಿಕ. ಮದುವೆಯ ಕಲ್ಪನೆ ಮನುಷ್ಯನ ಮನಸ್ಸಿನಲ್ಲಿ ಮೂಡುವ ಹೊತ್ತಿಗೆ ಅವನು ನಾಗರಿಕನಾಗಿದ್ದ. ಅದನ್ನು ಮರಗಳಿಗೆ ಅನ್ವಯಿಸುವ ಹೊತ್ತಿಗೆ ಸರ್ವಚೇತನವಾದದ ಯುಗ ಮುಕ್ತಾಯಗೊಳ್ಳುತ್ತಿತ್ತೆಂದು ಕಾಣುತ್ತದೆ. ಮನುಷ್ಯ ಸಂತಾನದಂತೆ ವೃಕ್ಷಸಂತಾನಾಭಿವೃದ್ಧಿಗೂ ಮದುವೆ ಅತ್ಯವಶ್ಯವೆಂಬ ಭಾವನೆ ಕೇವಲ ಭ್ರಮಾಮೂಲವಾಗದೆ ಶ್ರದ್ಧಾಮೂಲವಾಗಿತ್ತೆಂಬುದಂತು ನಿಜ. ಕೆಲವು ವೃಕ್ಷಜಾತಿಗಳು ದ್ವಿಲಿಂಗಿಗಳು ಮತ್ತೆ ಕೆಲವು ಏಕಲಿಂಗಿಗಳೆಂಬ ವಿಚಾರ ಇಲ್ಲಿ ಅಪ್ರಕೃತ. ಪ್ರಾಚೀನರಲ್ಲಿ ಕೆಲವರಿಗಾದರೂ ಈ ವೈಜ್ಞಾನಿಕತತ್ವ ಗೊತ್ತಿತ್ತೆಂದು ಹೇಳುತ್ತಾರೆ. ಗರ್ಭಧಾರಣ ಸಮಯದಲ್ಲಿ ಗಂಡು ಖರ್ಜೂರ ಮರದ ಪರಾಗವನ್ನು ಹೆಣ್ಣು ಮರದ ಹೂವಿನ ಮೇಲೆ ಕವಿಸುತ್ತಿದ್ದುದುಂಟು. ಮಾವಿನ ಮರ ನೆಟ್ಟವರು ಅದನ್ನು ಬೇರೆ ಮರದೊಡನೆ ಮದುವೆಮಾಡುವತನಕ ಅದರ ಹಣ್ಣು ತಿನ್ನಕೂಡದೆಂಬ ತಿಳಿವಳಿಕೆ ಕೆಲವು ಹಿಂದೂಗಳಲ್ಲಿದೆ. ಹುಣಿಸೆ ಮರ ಮಾವಿನ ತೋಟದ ಹತ್ತಿರವಿದ್ದರೆ, ಅದನ್ನು ಹೆಣ್ಣೆಂದು ಕಲ್ಪಿಸಿಕೊಂಡು ಮಾವಿನ ಮರದೊಡನೆ ಮದುವೆ ಮಾಡುವುದುಂಟು. ಹುಣಿಸೆ ಮರ ಹತ್ತಿರವಲ್ಲಿಲ್ಲವಾದರೆ ಮಲ್ಲಿಗೆ ಬಳ್ಳಿಯನ್ನೇ ಹೆಣ್ಣೆಂದು ಅಂಗೀಕರಿಸುವುದುಂಟು. ಜತೆಗೂಡಿ ಬೆಳೆದ ಆಲ ಮತ್ತು ಅರಳಿ ಮರಗಳಿಗೆ ಸೂಕ್ತ ಸಮಯದಲ್ಲಿ ವಿವಾಹ ಮಾಡುವುದು ಒರಿಸ್ಸಾ ಪ್ರಾಂತ್ಯದ ಪದ್ಧತಿ. ಮದುವೆಯಿಲ್ಲದ ಮರಗಳ ಹಣ್ಣುಗಳಲ್ಲಿ ಹುಳು ತುಂಬಿರುತ್ತವೆಂದೂ, ಅವು ತಿನ್ನಲು ಯೋಗ್ಯವಲ್ಲವೆಂದೂ, ಆದ್ದರಿಂದ ಹಣ್ಣುಬಿಡುವ ಮುನ್ನ ಮರಗಳಿಗೆ ಮದುವೆ ನಡೆಯಬೇಕೆಂಬುದು ಒರಯಾನ್ (Oraon) ಜನರ ನಂಬಿಕೆ. ಕುಟುಂಬದೊಳಗೆ ನಡೆಯುವ ಮದುವೆಯ ಸಮಯದಲ್ಲಿಯೇ ಆ ಮದುವೆಯೂ ನಡೆಯಬಹುದು. ಅರಳಿ ಮತ್ತು ಬೇವಿನ ಮರಗಳನ್ನು ಒಂದೇ ಕಡೆ ಬೆಳೆಸಿ ಅವುಗಳಿಗೆ ಮದುವೆ ಮಾಡುವ ಪರಿಪಾಠ ಕರ್ನಾಟಕದ್ದು. ಇಂಥ ಮದುವೆಗಳಿಗೆ ಹಿಂದಿನಕಾಲದಲ್ಲಿ ತುಂಬ ಹಣ ಖರ್ಚುಮಾಡುತ್ತಿದ್ದುದುಂಟು. ಇಬ್ಬರು ಹೆಂಡಿರನ್ನು ಕಳೆದುಕೊಂಡ ಒರಿಸ್ಸಾದ ವಿಧುರ ಮೂರನೆಯ ಹೆಂಡತಿಗೂ ಅನಿಷ್ಟ ಒದಗಬಾರದೆಂದು ಮದುವೆಗೆ ಮುಂಚೆ ಹಿಪ್ಪಲಿನೇರಳೆ ಮರವನ್ನು ಮದುವೆಯಾಗುತ್ತಿದ್ದನು. ಕರ್ನಾಟಕದಲ್ಲಿ ಅಂಥ ಮದುವೆ ಎಕ್ಕದಗಿಡದೊಡನೆ ಆಗುತ್ತಿತ್ತು. ಮದುವೆಯಾದನಂತರ ಆ ಗಿಡವನ್ನು ಸುಡುತ್ತಿದ್ದರು. ಅಂತೆಯೇ ವಿಧವೆಯನ್ನು ಮದುವೆಯಾಗಲಿರುವ ಮುಂಬಯಿ ಪ್ರಾಂತ್ಯದ [illegible] ಜನಾಂಗದ ಬ್ರಹ್ಮಚಾರಿ ಮೊದಲು ಶಮಿ ಅಥವಾ ರೂಯಿ ಮರವನ್ನು ಮದುವೆಯಾಗಬೇಕು. ನಿಜವಾದ ಮದುವೆಗೆ

ಮುಂಚೆ ಮುಂಡ ಹೆಣ್ಣನ್ನು ಮಹುವಾ ಮರಕ್ಕೂ, ಗಂಡನ್ನು ಮಾವಿನ ಮರಕ್ಕೂ ಮದುವೆ ಮಾಡಿಸಬೇಕು. ಇದೊಂದು ವಿವಾಹಶಾಸ್ತ್ರ. ದುಷ್ಟಶಕ್ತಿಗಳ ಜೀಷ್ಮೆಯಿಂದ ಪಾರಾಗುವುದೇ ಇಂಥ ಅಣಕು ಮದುವೆಯ ಉದ್ದೇಶವಿದ್ದಂತೆ ತೋರುತ್ತದೆ. ಕ್ರಿಸ್‌ಮಸ್ ಸಮಯದಲ್ಲಿ ಜರ್ಮನಿಯ ರೈತರು ಹುಲ್ಲು ಹುರಿಯಿಂದ ಹಣ್ಣಿನ ಮರಗಳನ್ನು ಕಟ್ಟಿ, ಮದುವೆಯಾಯಿತೆಂದು ಹೇಳಿದನಂತರ ಹಣ್ಣು ಬಿಡುತ್ತಿದ್ದುವು.

ಹೊತ ಲವಂಗ ವೃಕ್ಷಗಳನ್ನು ಬಸಿರಿಯರಂತೆ ಉಪಚರಿಸುವುದೂ, ಗದ್ದಲವಾಗದಂತೆ ನೋಡಿಕೊಳ್ಳುವುದೂ, ರಾತ್ರಿಯವೇಳೆ ಬೆಂಕಿ ಬೆಳಕುಗಳು ಹತ್ತಿರ ಸುಳಿಯದಂತೆ ಎಚ್ಚರಿಕೆ ವಹಿಸುವುದೂ ಕೆಲವು ಕಡೆ ರೂಢಿಯಲ್ಲಿದೆ. ಮರಗಳಿಗೆ ಹೆದರಿಕೆಯಾದರೆ ಹೂ ಕಚ್ಚುವುದಿಲ್ಲವಂತೆ. ಬತ್ತ ತೊಡೆ ಕಟ್ಟಿದಾಗ ಗದ್ದೆಯ ಬಳಿ ಬಂದೂಕವ್ವೇ ಆಗಲಿ ಮತ್ತಾವುದೇ ಸದ್ದಾಗಲಿ ಕೇಳಿಸಕೂಡದು. ಸದ್ದು ಕೇಳಿಸಿದರೆ ಗರ್ಭಪಾತವಾಗುತ್ತದೆ: ಬತ್ತ ಜೊಳ್ಳಾಗುತ್ತದೆ.

ಬಿರುಗಾಳಿ ಬೀಸಿ ಮರಕ್ಕೆ ಮರ ಉಜ್ಜಿ ಬೆಂಕಿ ಉತ್ಪತ್ತಿಯಾದಾಗ, ಮರ ಮುರಿದಾಗ ಭೀಕರ ಶಬ್ದವಾಗಿ ತದನಂತರ ಅದು ಒಣಗಿದಾಗ, ಪ್ರತ್ಯಕ್ಷ ಕಾರಣವಿಲ್ಲದೆ ಮರ ಒಣಗಿ ಪ್ರೇತದಂತೆ ಕಂಡಾಗ, ಆ ತನಕ ಅದರೊಳಗೆ ಸೇರಿಕೊಂಡಿದ್ದ ಪ್ರೇತದಂಥ ಶಕ್ತಿ ತೊಲಗಿ ಹೋಗಿರಬೇಕೆಂದು ಮನುಷ್ಯ ಊಹಿಸಿಕೊಳ್ಳುವುದು ಸಹಜವೇ. ಅವನ ಕಣ್ಣಿಗೆ ಮೊದಮೊದಲು ಚೇತನವೇ ಮರವಾಗಿ ಕಂಡದ್ದು. ಕಾಲಕ್ರಮೇಣ ಮರ ಚೇತನದ ಆವಾಸಸ್ಥಾನವೆಂದೂ ಅದು ಅಲ್ಲಿದ್ದು ಹೊರಗೆ ಹೋಗಬಹುದಾದ, ಮತ್ತೆ ಒಳಗೆ ಪ್ರವೇಶಿಸಬಹುದಾದ ಶಕ್ತಿಯೆಂದೂ ಅವನಿಗೆ ವೇದ್ಯವಾಗಿರಬೇಕು. ಮರಗಳಲ್ಲಿ ಅವಿತುಕೊಂಡಿರುವ ದಿವ್ಯ ಪ್ರಾಣಿಗಳು ಹೊರಗೆ ಬಂದು ಅಪ್ಪಳಿಸುತ್ತವೆಂದು ಸಿಆವೂ (Siaoo) ತಿಳಿವಳಿಕೆ. ಅದಕ್ಕೆ ಒಂದು ಮಾದರಿ, ಉದಾ: ನೆಂಟು ಕೈಕಾಡುಗಳು ಮತ್ತು ಹೆಬ್ಬೆಟ್ಟುಗಳಿರುತ್ತವಂತೆ. ಅವುಗಳ ಆವಾಸಸ್ಥಾನಗಳಲ್ಲಿ ಜನ ಕೋಳಿ ಕುರಿಗಳನ್ನು ತಂದು ಮಾನುಷರೊಂದಿಗೆ ತಂಪು ಮಾಡಿಸುತ್ತಾರಂತೆ. ಶಕ್ತಿ ಬಲಿಕೊಡುವುದುಂಟು, ನಮ್ಮಲ್ಲಿ. ಮರ ಒಣಗಿಯಾದಾಗಲೂ ಅದರಲ್ಲಿ ಮರದ ಪ್ರೇತ ತೆಂಗಿನ ಮರವನ್ನು ಸುಡುತ್ತದಂತೆ. ಮರ ಉರುಳಿದಾಗ ಅದರಲ್ಲಿ ಸೇರಿಕೊಳ್ಳುವ ಭೂತದಿಂದ ಜನರಿಗೆ ತುಂಬ ತೊಂದರೆಯಾಗುತ್ತದೆಂಬ ನಂಬಿಕೆ ಮಲೆನಾಡಿನ ಜನರಲ್ಲಿ ರಕ್ತಗತವಾಗಿತ್ತು. ಆದ್ದರಿಂದ ಆ ಶಕ್ತಿಗಳ ತೃಪ್ತಿಗಾಗಿ ಮರಗಳಿಗೆ ಪೂಜೆ ಸಲ್ಲುತ್ತಿತ್ತು. ಭೂತ ಮರದಲ್ಲಿರುವತನಕ ಸ್ಥಳಾಂತರಿಸದೆ ಸಿಗೆತ್ತಿ ಮರ ಕಡಿಯುವಂತಿಲ್ಲ. ಅದನ್ನು ಮರಳುಗೊಳಿಸುವ ಸಲುವಾಗಿ ಮರದ ಬುಡದಲ್ಲಿ ಆಹಾರ ಇಡುತ್ತಾರೆ. ಅದು ಮರ ತ್ಯಜಿಸಿ ... ಲಿನ ಎಣ್ಣೆಯನ್ನು ಎರೆಯುತ್ತಾನೆ. ಆ ಎಣ್ಣೆ ಆ ಶಕ್ತಿಗೆ ಬಹು ಪ್ರಿಯ. ನಂತರ ಅದನ್ನು ಕತ್ತರಿಸುತ್ತಾನೆ. ಕಾಡು ಕಡಿದು ಗದ್ದೆ ಮಾಡಬೇಕಾದಾಗ ಫಿಲಿಪೈನ್ಸ್ ದ್ವೀಪದ ಜನ, ಸಣ್ಣ ಮನೆಕಟ್ಟಿ, ಅಲ್ಲಿರುವ ಭೂತಗಳನ್ನಲ್ಲಿ ಗಾಪ್ಯಗೊಳಿಸುತ್ತಾರೆ. ಅವು ಗೂಡು ಬಿಟ್ಟನಂತರ ಮುಂದಿನ ಕೆಲಸ ಪ್ರಾರಂಭಿಸುತ್ತಾರೆ. ಕಾಡು ಮರ ತಾವು ಕೊಂದದ್ದು. ಮರಗಳ ಶಕ್ತಿಗಳಿಗೆ ಹೆದರಿದ

ಹಲಗೆ ತೀರು ಕದ ಕಂಬಗಳನ್ನು ತಯಾರಿಸಿಕೊಂಡರೂ ದೆವ್ವ ಹಿಂದುಗಡೆಯೇ ಬಂದು ಮುಟ್ಟುಗಳಲ್ಲಿ ಸೇರಿಕೊಳ್ಳುತ್ತದಂತೆ. ಈ ನಂಬಿಕೆ ಈಗಲೂ ಅನೇಕ ಜನಾಂಗಗಳ ಆಸ್ತಿಯಾಗಿದೆ. ಆದ್ದರಿಂದಲೇ ಮನೆ ಕಟ್ಟಿದನಂತರ ಬಲಿಕೊಟ್ಟು, ಪ್ರಾಣಿಯ ರಕ್ತವನ್ನು ತೊಲೆ ತೀರುಪಟ್ಟಿಗಳಿಗೆ ಬಳಿಯುವ ತನಕ ಅಲ್ಲಿ ಸೇರಿಕೊಂಡಿರುವ ಭೂತಗಳು ಜಾಗ ಬಿಟ್ಟು ಕದಲುವುದಿಲ್ಲವಂತೆ. ಈ ಭೂತಗಳಿಗೂ ಸಾಕಷ್ಟು ಪ್ರತಿಷ್ಠೆಯುಂಟು, ಸ್ವಾಭಿಮಾನವುಂಟು. ಕಾಡು ಮರ ಬಳಸಿ ಮನೆ ಕಟ್ಟಿದನಂತರ ಅವು ಆಗಾಗ್ಗೆ ಊರಿನ ಜನರಿಗೆ ಕಾಟ ಕೊಡುತ್ತವೆ. ಅಂಥ ಸಂದರ್ಭದಲ್ಲಿ ಕರಡಿ ಚಿರತೆ ಹಾವುಗಳನ್ನು ಒಂದು ವರ್ಷ ಕಾಲವಾದರೂ ಕೊಲ್ಲುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕಾಗುತ್ತದೆ. ಬೋರ್ನಿಯೋ ದ್ವೀಪದ ಜನರಲ್ಲಿ ಈ ಪದ್ಧತಿ ಇದೆ.

ಪ್ರತಿಯೊಂದು ಪ್ರಾಣಿ ಅಥವಾ ವಸ್ತುವಿನಲ್ಲಿಯೂ ಬೇಕಾದಾಗ ಅಲ್ಲಿಯೇ ಇರಬಹುದಾದ, ಬೇಡವಾದಾಗ ಹೊರಗೆ ಬರಬಹುದಾದ ಶಕ್ತಿಯೊಂದಿದೆಯೆಂಬುದನ್ನರಿತಾಗ, ಈ ಶಕ್ತಿಗೆ ಅನೇಕತ್ವವನ್ನಾರೋಪಿಸಿಕೊಂಡಾಗ, ಆ ಶಕ್ತಿಗಳು ಒಂದು ಕಾಯದಿಂದ ಮತ್ತೊಂದು ಕಾಯಕ್ಕೆ ಪ್ರವೇಶಿಸುವ ಮೂಲಕ ತಂತಮ್ಮ ಸ್ಥಾನಗಳನ್ನು ಅದಲುಬದಲು ಮಾಡಿಕೊಳ್ಳಬಹುದೆಂದಾಯಿತು. ಮರದ ಆತ್ಮ ಮನುಷ್ಯರ ದೇಹವನ್ನು ಪ್ರವೇಶಿಸುತ್ತದೆಂಬುದಕ್ಕೆ ಆಧಾರಗಳಿಲ್ಲ. ಆದರೆ ಸತ್ತ ಹಿರಿಯರ ಆತ್ಮ ಮರವನ್ನು ಪ್ರವೇಶಿಸುತ್ತದೆಂಬ ನಂಬಿಕೆ ಜಗತ್ತಿನ ಅನೇಕ ಜನಾಂಗಗಳಲ್ಲಿದೆ. ಕೆಲವು ಮರ ಮನುಷ್ಯನಿಗಿಂತ ಹೆಚ್ಚು ದಿನ ಬಾಳುವುದು ಮಾತ್ರವಲ್ಲ, ಅವನಿಗಿಂತ ಉದ್ದವಾಗಿ ಗಾತ್ರವಾಗಿ ಬೆಳೆಯುತ್ತವೆನ್ನುವ ಯಥಾರ್ಥತಾಜ್ಞಾನವೂ ಇಂಥ ತಿಳಿವಳಿಕೆ ಕಾರಣವಾಗಿರಬೇಕು. ಮಧ್ಯ ಆಸ್ಟ್ರೇಲಿಯಾದ ಬುಡಕಟ್ಟಿನ ಜನ ಇಂಥ ನಂಬಿಕೆಯಿಂದಾಗಿ ತಮ್ಮ ಹಿರಿಯರ ಆತ್ಮ ಸೇರಿರಬಹುದಾದ ಮರಗಳಿಗೆ ಅಪಾರ ಗೌರವ ಸಲ್ಲಿಸುತ್ತಾರೆ. ಅವರು ಅವುಗಳನ್ನು ಕಡಿಯುವುದಿಲ್ಲ, ಮುಟ್ಟುವುದಿಲ್ಲ. ಅವನ್ನು ಕಡಿಯಲು ಪ್ರಯತ್ನಿಸುವ ಹೊರಗಿನವರನ್ನು ಅವರು ಶಕ್ತಿಮೀರಿ ತಡೆಯುತ್ತಾರೆ. ತಡೆಯಲು ಸಾಧ್ಯವಿಲ್ಲವಾದರೆ, ತಾವು ಅದೃಷ್ಟಹೀನರೆಂದೂ, ತಮಗೆ ಶಿಕ್ಷೆ ಕಾದಿಯೆಂದೂ ತಿಳಿಯುತ್ತಾರೆ. ಗಗನ ಚುಂಬಿತವಾದ ಮರಗಳಲ್ಲಿ ತಮ್ಮ ಪೂರ್ವಜರು ನೆಲಸಿದ್ದುದಾಗಿಯೂ, ಗಾಳಿಯಿಂದಾದ ಎಲೆಕೊಂಬುಗಳ ಸದ್ದು ಪೂರ್ವಜರ ಧ್ವನಿಯೆಂದೂ ಭಾವಿಸುತ್ತಾರೆ. ಆ ಮರಗಳ ಬಳಿ ಸುಳಿದಾಗ ಹಿರಿಯರ ಶಾಂತಿಗೆ ಭಂಗವಾಯಿತೆಂದು ತಿಳಿದು ಕ್ಷಮೆಕೇಳಿಕೊಂಡು ನಮಸ್ಕರಿಸುತ್ತಾರೆ. ಇಡೀ ಊರಿನ ಹಿರಿಯರ ಪ್ರೇತಗಳೆಲ್ಲ ಅಲ್ಲಿರುವ ಪವಿತ್ರ ವೃಕ್ಷದಲ್ಲಿ ಸೇರಿಕೊಳ್ಳುತ್ತವೆಂಬ ತಿಳಿವಳಿಕೆಯೂ ಕೆಲವು ಕಡೆ ಅಸ್ತಿತ್ವದಲ್ಲಿದೆ. ಅಂಥ ಮರವನ್ನು ಕಡಿದರೆ ಆ ಊರಿನ ವಿನಾಶ ಸಿದ್ಧ. ಜಾಣಂತಿಯರ ಮತ್ತು ಪ್ಲೇಗಿನಿಂದ ಸತ್ತ ಜನರ ಆತ್ಮಗಳು ತಪ್ಪದೆ ಮರ ಸೇರುತ್ತವೆಂದು ಕೊರಿಯಾ ಜನರ ನಂಬಿಕೆ. ಆ ಮರದ ಬುಡದಲ್ಲಿ ಕಲ್ಲು ಗುಡ್ಡೆ ಮಾಡಿ, ಆ ಗುಡ್ಡೆಗೆ ಹಂದಿಮಾಂಸ ಬಲಗೊಳಿಸಿ, ದೇಹ ಕೊಳೆಯುವಂತೆ ಸದಾ ಹಸಿರುವ ಎತ್ತರದ ಸೈಪ್ರೆಸ್ ಮತ್ತು ಪೈನ್ ಮೊದಲಾದ ಪದಾರ್ಥಗಳನ್ನು ನೈವೇದ್ಯವಾಗಿ ನೀಡುತ್ತಾರೆ. ಮೃತರ ಆತ್ಮವನ್ನು

ಪೈನ್ ಮರಗಳನ್ನು ಚೀನೀಯರು ಅವರ ಸಮಾಧಿಯ ಮೇಲೆ ನೆಡುತ್ತಾರೆ. ಮೃತರ ಆತ್ಮ ಮರದಲ್ಲಿ ನೆಲಸಲಿ, ಅದು ಆ ರೂಪದಲ್ಲಿ ಸದಾ ಕಾಣಿಸುತ್ತಿರಲೆಂಬ ದೃಷ್ಟಿಯಿಂದ ಇಂಡಿಯಾದಲ್ಲಿಯೂ ಸಮಾಧಿಯ ಬಳಿ ಮರ ನೆಡುವುದುಂಟು. ಪ್ರೇತಗಳು ಸ್ಮಶಾನವನ್ನು ಬಿಟ್ಟು ಬರದಿರಲೆಂಬ ಕಾರಣಕ್ಕಾಗಿ ಅಲ್ಲಿಯೇ ತೋಪು ಬೆಳೆಸುವುದೂ ಉಂಟು.

ಕರ್ಣಾಟಕದಲ್ಲಿ ಚಾಲ್ತಿಯಲ್ಲಿರುವ ಒಂದು ಕತೆಯ ಪ್ರಕಾರ ಅರಳಿಮರ ದುಷ್ಟ ಶಕ್ತಿಯ ಏಳು ಜನ ಸುಂದರ ಪುತ್ರಿಯರನ್ನು ಪ್ರತಿನಿಧಿಸುತ್ತದೆ. ಒಂದು ದಿನ ಅವರು ಹತ್ತಿರದ ನದಿಗೆ ಸ್ನಾನಕ್ಕೆಂದು ಹೋಗುತ್ತಿದ್ದಾಗ ಕೃಷ್ಣ ಅವರಲ್ಲಿ ಪ್ರೇಮಾಸಕ್ತನಾದನು. ತನ್ನನ್ನು ಮದುವೆಯಾಗುವಂತೆ ಅವನು ಅವರನ್ನು ಕೇಳಿದನು. ಅವರು ನಿರಾಕರಿಸಿದರು. ಕೃಷ್ಣ ಅವರನ್ನು ಹಿಡಿದುಕೊಳ್ಳಲು ತುಡುಕಿದನು. ಆ ಸೋದರಿಯರು ಕೂಡಲೇ ಅರಳಿ ಮರವಾಗಿ ರೂಪಾಂತರ ಹೊಂದಿದರು. ಅವರನ್ನು ಆಲಿಂಗಿಸಿಕೊಂಡಿದ್ದ ಕೃಷ್ಣ ಒಡನೆಯೇ ಬೇವಿನ ಮರವಾದನು. ಅಂದಿನಿಂದ ಬೇವು ಅರಳಿಗಳಿಗೆ ಮದುವೆಮಾಡಿ ಪೂಜಿಸುವ ಪದ್ಧತಿ ರೂಢಿಯಲ್ಲಿದೆ.[1] ಒರಿಸ್ಸಾದ ಜಾನಪದ ಕತೆಯೊಂದರ ಪ್ರಕಾರ ಅಲ್ಲಿಯ ಮಂತ್ರಿಯ ಮಗಳು ಚಂಪಕ ವೃಕ್ಷವಾಗಿ ಪರಿವರ್ತನೆಯಾಗುತ್ತಿದ್ದಳಂತೆ. ತೋಡಿದ ಒಂದು ಗುಂಡಿಯಲ್ಲಿ ಅವಳು ಕುಳಿತುಕೊಳ್ಳುತ್ತಿದ್ದಳು. ಅನಂತರ ಗುಂಡಿಯ ಬಾಯನ್ನು ಮಣ್ಣಿಂದ ಮುಚ್ಚುತ್ತಿದ್ದರು. ಗುಂಡಿಯ ಮೇಲೆ ಅರಿಸಿನದ ನೀರು ಚಿಮುಕಿಸುತ್ತಿದ್ದರು. ಅನಂತರ ಚಿನ್ನದ ಬಣ್ಣದ ಮೊಗ್ಗು ಹೂಗಳಿಂದ ತುಂಬಿದ ಚಂಪಕ ವೃಕ್ಷ ಹೊರಬರುತ್ತಿತ್ತು. ಅವಳ ದಾಸಿ ಹೂಗಳನ್ನೆಲ್ಲ ಕಿತ್ತುಕೊಂಡನಂತರ "ಓ ಚಿನ್ನದ ಹೂವೇ, ಈಗ ಮೇಲೇಳು" ಎಂದು ಹೇಳುತ್ತಿದ್ದಳು. ಆಗ ಮರ ಮಾನವಾಕೃತಿ ತಾಳುತ್ತಿತ್ತು. ಮತ್ತೊಂದು ಕತೆಯ ಪ್ರಕಾರ ಒಬ್ಬ ರಾಕ್ಷಸಿ ರಾಜಕುಮಾರಿಯನ್ನು ಬಾವಿಗೆಸೆದು, ಅವಳ ವೇಷಭೂಷಣಗಳನ್ನು ತಾನೇ ಧರಿಸಿ, ರಾಣಿಯಾದಳು. ನಿಜವಾದ ರಾಣಿ ಸತ್ತು ನೈದಿಲೆಯಾದಳು. ಚತುರೆಯಾದ ರಾಕ್ಷಸಿ ಆ ಗಿಡವನ್ನು ಕಿತ್ತು ಹೊರಗೆ ಬಿಸಾಡಿದಳು. ಆ ನೈದಿಲೆ ಬಾಡಿ, ನೆಲ ಸೇರಿತು. ಆ ಜಾಗದಲ್ಲಿ ಕುಂಬಳದ ಬಳ್ಳಿ ಬೆಳೆಯಿತು. ತುಂಬ ಕಾಯಿಬಿಟ್ಟಿತು. ರಾಕ್ಷಸಿ ಅವುಗಳಲ್ಲೊಂದನ್ನು ಕಿತ್ತು ಅಡುಗೆ ಮಾಡಿದಳು. ಅದು ಬೇಯುವಾಗ ತನ್ನ ಕೊಲೆಯ ಕತೆಯನ್ನು ಗಟ್ಟಿಯಾಗಿ ಹೇಳಿದಳು. ದೊರೆ ಅದನ್ನು ಕೇಳಿಸಿಕೊಂಡು ರಾಕ್ಷಸಿಯನ್ನು ಕೂಡಲೇ ಕೊಲೆಮಾಡಿಸಿದನು. ರಾಣಿ ಅಡುಗೆಪಾತ್ರೆಯಿಂದ ಮಾನವರೂಪದಲ್ಲಿ ಹೊರಗೆ ಜಿಗಿದಳು.[2]

---

1 *Tree Cult in Karnataka*, by H. M. Nayak, Published in Tree Symbol Worship in India, p. 121-122

2 ಇಂಥದೇ ಇನ್ನು ಕೆಲವು ಕತೆಗಳು ಒರಿಸ್ಸಾ ಜಾನಪದದಲ್ಲಿ ಸಂಗ್ರಹಗೊಂಡಿವೆ. ಶಂಕರ ಸೇನ್ ಗುಪ್ತರಿಂದ ಸಂಪಾದಿತವಾಗಿರುವ *Tree Symbol Worship in India* ಎಂಬ ಗ್ರಂಥದ 32-33ನೆಯ ಪುಟಗಳನ್ನೂ, ಅಂತೆಯೇ R. E. Enthoven ರಚಿಸಿರುವ *The Folk-lore of Bombay* ಎಂಬ ಗ್ರಂಥದ 116-127ನೆಯ ಪುಟಗಳನ್ನು ನೋಡಬಹುದು.

ಪದ್ಮಪುರಾಣದ ಉತ್ತರಕಾಂಡದಲ್ಲಿ ದೇವತೆಗಳೇ ವೃಕ್ಷವಾಗಿ ರೂಪಾಂತರಗೊಂಡ ಕತೆಯೊಂದಿದೆ. ಒಂದು ದಿನ ಅರಣ್ಯದ ನಿರ್ಜನಪ್ರದೇಶದಲ್ಲಿ ಶಿವಶಿವಾಣಿಯರು ಪ್ರಣಯ ಲೀಲೆಯಲ್ಲಿ ತಲ್ಲೀನರಾಗಿದ್ದರು. ದೇವತೆಗಳೆಲ್ಲರು ಸಂಚುಹೂಡಿ ಬ್ರಾಹ್ಮಣ ವೇಷದಲ್ಲಿ ಅಗ್ನಿಯನ್ನು ಆ ಸ್ಥಳಕ್ಕೆ ಕಳಿಸಿದರು. ತಮ್ಮ ಏಕಾಂತವನ್ನು ಭಂಗಮಾಡುವ ಸಲುವಾಗಿ ಬಂದವನು ಯಾರೆಂದು ಪಾರ್ವತಿಗೆ ತಿಳಿಯಿತು. ಕುಪಿತಳಾದ ಪಾರ್ವತಿ ಸಂಚುಗಾರರೆಲ್ಲ ಮರಗಳಾಗಲೆಂದು ಶಾಪವಿತ್ತಳು. ಆ ಶಾಪದ ಪರಿಣಾಮವಾಗಿ ಬ್ರಹ್ಮ ಪಲಾಶವೃಕ್ಷವಾದನು; ವಿಷ್ಣು ಅಶ್ವತ್ಥವಾದನು; ರುದ್ರ ವಟವಾದನು. ಇಂಥ ಸಂಗತಿಗಳು ಅನೇಕ ಜನಾಂಗಗಳ ಜಾನಪದದಲ್ಲಿ ದಂಡೆಯಾಗಿ ಸಿಗುತ್ತವೆ.

ಬರಬರುತ್ತ ಮಾನವನ ಧರ್ಮಕರ್ಮಗಳಿಗೆಲ್ಲ ಮರ ಕೇಂದ್ರಶಕ್ತಿಯಾಯಿತು. ಅವನ ಜೀವನಸಮೃದ್ಧಿಯಲ್ಲಿ, ಮನೋಧರ್ಮ ವಿಕಾಸದಲ್ಲಿ, ಕಲೆಗಳ ಬೆಳವಣಿಗೆಯಲ್ಲಿ, ತತ್ತ್ವದರ್ಶನ ಮತ್ತು ಸೌಂದರ್ಯಮೀಮಾಂಸೆಗಳ ಉಗಮದಲ್ಲಿ ಮರದ ಪಾತ್ರ ಮಹತ್ತ್ವಪೂರ್ಣವಾಯಿತು. ಮರದ ಸುತ್ತ ಮನೆಗಳೆದ್ದು ಊರಾಯಿತು. ಊರಿನ ನಡುವೆ ಮರ ಅನಿವಾರ್ಯವಾಯಿತು. ಅದರ ಕ್ಷೇಮಪಾಲನೆ ಮರದ ಹೊಣೆಗಾರಿಕೆಯಾಯಿತು. ಅದು ಊರಿನ ನ್ಯಾಯದೇವತೆಯೂ ಆಯಿತು. ಪಂಚಾಯಿತಿಗಳೆಲ್ಲ ನಡೆಯುತ್ತಿದ್ದುದೇ ಅದರ ಕೆಳಗೆ. ಸಾಕ್ಷಿಗಳು ಮರದ ಮೇಲೆ ಆಣೆಯಿಟ್ಟು ಸಾಕ್ಷ್ಯನೀಡಬೇಕಾಗಿತ್ತು. ಸುಳ್ಳು ಹೇಳಿದರೆ ಮರದ ಶಾಪ ತಪ್ಪುತ್ತಿರಲಿಲ್ಲ. ಮದುವೆ ಸಹ ಮರದ ಕೆಳಗೆ ಜರುಗುತ್ತಿದ್ದುವು. ಲೇವಾದೇವಿಗು ಮರವೇ ಸಾಕ್ಷಿಯಾಗುತ್ತಿತ್ತು. ಅದರ ಕೆಳಗೆ ನಡೆದ ಸಕಲ ವ್ಯವಹಾರಗಳು ಸತ್ಯದ ಗಡಿಯನ್ನು ದಾಟುತ್ತಿರಲಿಲ್ಲ. ಮಾನವರ ಪಾಪಪುಣ್ಯಗಳೆಲ್ಲ ಅವಕ್ಕೆ ತಿಳಿಯುತ್ತಿದ್ದುವು. ಒಟ್ಟಿನಲ್ಲಿ ಅದು ಅಗೋಚರಶಕ್ತಿಯೊಂದರ ಪ್ರತಿನಿಧಿಯಾಯಿತು. ಊರಿನ ಆಗುಹೋಗುಗಳಿಗೆ ಅದರ ಅಭ್ಯುತ್ತರಗಳಿಗೆ ಅದೇ ಕಾರಣವಾಗಿ ಧ್ರುವತಾರೆಯಾದುದರಿಂದ ಅದು ಧರ್ಮವೃಕ್ಷ (Life tree)ವಾಯಿತು. ಅದು ಉನ್ನತವಾಗಿ ಬೆಳೆದು ಆಕಾಶಕ್ಕೆ ಊರೆಯಾದುದರಿಂದ, ಆಕಾಶ ಕಳಚಿ ಕೆಳಗೆ ಬೀಳದಂತೆ ರಕ್ಷಿಸುವ ಕಂಬವಾದುದರಿಂದ ಅದು ರಕ್ಷಾಶಕ್ತಿಯಾಯಿತು. ಮೋಡಗಳು ಇಳಿಯುವ ಏಣಿಯಾಗಿ ಮಳೆ ತರುತ್ತಿದ್ದುದರಿಂದ ಕ್ಷೇಮಶಕ್ತಿಯಾಯಿತು. ಮಕ್ಕಳು ಹುಟ್ಟಿದಾಗ ಮರ ನೆಡುವುದೂ, ಮರದ ಬೆಳವಣಿಗೆಯ ಆಧಾರದಿಂದ ಮಗುವಿನ ಭವಿಷ್ಯವನ್ನು ನಿರ್ಧರಿಸುವುದೂ, ರೋಮನರಲ್ಲಿದ್ದ ಪದ್ಧತಿ. ರೋಮುಲಸ್ ಮತ್ತು ರೀಮಸ್‌ರು ಸಿಕ್ಕಿದ್ದು ಒಂದು ಮರದ ಕೆಳಗೆ. ಅದು ಆ ರಾಜವಂಶದ ಏಳ್ಗೆಗೆ ಪ್ರತೀಕವಾಗಿ ವಂಶವೃಕ್ಷವಾಗಿ ಬಹು ವರ್ಷಗಳ ಕಾಲ ಅಲ್ಲಿ ನಿಂತಿತ್ತು. ಅದು ಒಣಗುವಂತಾದಾಗ, ರಾಷ್ಟ್ರದ ಅವನತಿಗೆ ಕಾರಣವಾಗಬಹುದೆಂದು ರೋಮನ್ನರು ದುಃಖಾಕ್ರಾಂತರಾದರು.

ಮರದಿಂದ ಮರಕ್ಕೆ ಜಿಗಿದಾಡುವ ನಿರಾಕಾರವೂ ಅಮೂರ್ತವೂ ಆದ ಈ ಸಸ್ಯಶಕ್ತಿಯನ್ನು ಕಲ್ಪಿಸಿಕೊಳ್ಳುವುದು ಅವನಿಗೆ ಕಷ್ಟವಾಗಿರಬೇಕು. ಸರ್ವಸಮರ್ಥವಾದ ಆ ಶಕ್ತಿಯನ್ನವನು ಪ್ರಾಣಿರೂಪದಲ್ಲಿ ಕಲ್ಪಿಸಿಕೊಳ್ಳಲಾರ. ಜೀವಕೋಟಿಯಲ್ಲಿ ಮಾನವನೇ

ಶ್ರೇಷ್ಠ ಎಂಬ ಭಾವನೆಯೂ ಅವನ ಮನಸ್ಸಿನ ಒಳಪದರದಲ್ಲಿ ಮನೆ ಮಾಡಿಕೊಂಡಿರಬೇಕು. ಆದ್ದರಿಂದ ತನ್ನ ರೂಪವನ್ನೇ ಅವಕ್ಕೂ ಆರೋಪಿಸಿಕೊಂಡನು. ಅವುಗಳಿಗೆ ಮಾನವರೂಪವೊದಗಿದರೂ ಅವರ ಸ್ವರೂಪ ಸ್ವಭಾವಗಳು ಮಾತ್ರ ಬದಲಾಗಲಿಲ್ಲ. ಬಿಸಿಲು ಮಳೆಗಳಿಗೆ ವನದೇವತೆಗಳೇ ಕಾರಣವೆಂಬ ನಂಬುಗೆ ಮಾನವನ ಮನಸ್ಸಿನಲ್ಲಿ ಬೇರೂರಿತು. ಪವಿತ್ರಾರಣ್ಯದಲ್ಲಿ ಒಂದು ಮರ ಕಡಿದರೂ ವನದೇವತೆಗಳು ಕೋಪಗೊಂಡು ಮಳೆ ತಡೆಯುತ್ತಾರೆಂಬ ಭಾವನೆ ಅಸ್ಸಾಮಿನ ಮುಂಡಾರಿ ಜನಾಂಗದಲ್ಲಿದೆ. ಜಸ್ತ್ರದೇಶದ ಕೆಲವೆಡೆಗಳಲ್ಲಿ ಊರಿನ ಬಳಿಯ ದೊಡ್ಡ ಹುಣಿಸೆಮರಕ್ಕೆ ಹಣ್ಣುಹಂಪಲು ಕೋಳಿಗಳನ್ನು ನೈವೇದ್ಯ ನೀಡಿ, ಮಳೆ ಬರಿಸುವುದುಂಟು. ಎಲೆಯುಳ್ಳ ಕೊಂಬೆಗಳನ್ನು ನೇಗಿಲ ಗೆರೆಗಳಲ್ಲಿ ನಟ್ಟರೆ ಒಳ್ಳೆಯ ಫಸಲು ಸಿಗುತ್ತದೆಂದು ಸ್ವೀಡನ್ ರೈತರ ನಂಬಿಕೆ. ಮೇ-ವೃಕ್ಷ ಅಥವಾ ಮೇ-ಸ್ತಂಭದ ಪೂಜೆಯಿಂದ ಸ್ತ್ರೀಯರಿಗೆ ಹಾಗೂ ದನಗಳಿಗೆ ಫಲಶಕ್ತಿ ಒದಗುತ್ತದೆಂದು ಯೂರೋಪೀಯರ ತಿಳಿವಳಿಕೆ. ಕೊಟ್ಟಿಗೆಯ ಬಾಗಿಲಲ್ಲಿ ಮೇ-ವೃಕ್ಷವನ್ನಿರಿಸಿದರೆ ದನಗಳಲ್ಲಿ ಹಾಲು ಹೆಚ್ಚಾಗುತ್ತದೆಂದು ಜರ್ಮನಿಯ ಕೆಲವು ಕಡೆ ಜನರ ಭಾವನೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಮರಕ್ಕೆ ಈ ಗುಣವಿರುತ್ತದೆ. ಅರಳಿ ಮರವನ್ನು ಪ್ರದಕ್ಷಿಣೆ ಮಾಡಿ ಪೂಜಿಸಿದರೆ ಬಂಜೆಯರು ಫಲವತಿಯರಾಗುತ್ತಾರೆಂಬ ಕಲ್ಪನೆ ದಕ್ಷಿಣ ಭಾರತೀಯರಲ್ಲಿದೆ. ಹೆರಿಗೆ ಸುಖವಾಗಿ ನಡೆಯಲೆಂಬ ದೃಷ್ಟಿಯಿಂದ ಕಾಂಗೋವಿನ ಕೆಲವು ನೀಗ್ರೋ ಕುಲಗಳ ಹೆಂಗಸರು ಪವಿತ್ರವೃಕ್ಷಗಳ ತೊಗಟೆಯಿಂದ ಮಾಡಿದ ಉಡುಪುಗಳನ್ನು ತೊಡುತ್ತಾರಂತೆ. ಕೆಲವು ಕಡೆ ಮಕ್ಕಳಾಗಲೆಂದು ಹೆಂಗಸರು ಮರಗಳನ್ನು ತಬ್ಬಿಕೊಳ್ಳುವರಂತೆ.

ಮತದ ಇತಿಹಾಸದಲ್ಲಿ ವೃಕ್ಷಪೂಜೆಯೊಂದು ಮೈಲಿಗಲ್ಲು. ಅದು ಚಾಲ್ತಿಯಲ್ಲಿಲ್ಲದ ದೇಶವಿಲ್ಲ. ಇಂದಿಗೂ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮೇ-ವೃಕ್ಷೋತ್ಸವ ಅದ್ದೂರಿಯಿಂದ ನಡೆಯುತ್ತದೆ.[1] ಅಷ್ಟೇ ವೈಭವದಿಂದ ನಡೆಯುವ ಮತ್ತೊಂದು ಹಬ್ಬವೆಂದರೆ ಪ್ರತಿವರ್ಷ ಏಪ್ರಿಲ್ ಇಪ್ಪತ್ತಮೂರರಂದು ಬರುವ ಸಂತ ಜಾರ್ಜ್ ದಿನಾಚರಣೆ. ಕಾರಿಂಥಿಯಾದ ಸ್ಲಾವ್ ಜನಾಂಗಕ್ಕೆ ಸೇರಿದ ಹುಡುಗರು ಹಬ್ಬದ ಹಿಂದಿನ ದಿನ ಕೆಡವಿದ ಮರವನ್ನು ಹೂಹಾರಗಳಿಂದ ಅಲಂಕರಿಸುತ್ತಾರೆ. ಸಂಗೀತವಾದ್ಯಗಳ ಸಂಭ್ರಮದೊಡನೆ ಅದನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ. ಭೂರ್ಜ ಜಾತಿಯ ಮರದ ಕೊಂಬೆಗಳಿಂದ ಉದ್ದ ಇಳಿಯ ಮುಚ್ಚಿದ ಹುಡುಗ ಆ ಮೆರವಣಿಗೆಯ ಕಣ್ಮಣಿ. ಅವನನ್ನು ಹಿಂತಾಭ ಅಥವಾ ಹಸುರು ಜಾರ್ಜ್ ಎಂದು ಕರೆಯುತ್ತಾರೆ. ಶಾಸ್ತ್ರಗಳೆಲ್ಲ ಮುಗಿದ ನಂತರ ಹಸುರು ಜಾರ್ಜನ ಪ್ರತಿಮೆಯನ್ನು ನೀರಿಗೆ ಎಸೆಯುತ್ತಾರೆ. ಪೂರ್ವಾನುಸರಣವಿಂದ ಬಾಲಕ ಹೊರಗೆ ಬಂದು, ಯಾರೂ ಕಾಣದಂತೆ ಪ್ರತಿಮೆಯನ್ನು ಅವರೊಳಗೆ ನುಗ್ಗಿಸುತ್ತಾರೆ. ಕೆಲವು ಕಡೆ ಹಸುರು ಜಾರ್ಜನನ್ನೇ ನೀರೊಳಗೆ ಮುಳುಗಿಸಿ, ಹೊರಗೆ ತರುತ್ತಾರೆ. ಬೇಸಿಗೆಯಲ್ಲಿ ಮಳೆ ಬಂದು ಹೊಲಗದ್ದೆ ತೋಟಗಳು ಸದಾ ಹಸುರಾಗಿರಬೇಕೆಂಬುದೇ

1 ವಿವರಗಳಿಗೆ ಜೆ. ಜಿ. ಫ್ರೇಜರ್ ಅವರ *The Golden Bough* ಗ್ರಂಥದ 'Relics of Tree-Worship in Modern Europe' ಎಂಬ ಪ್ರಕರಣವನ್ನು ಓದಬಹುದು.

ಈ ಉತ್ಸವದ ಉದ್ದೇಶ. ನಮ್ಮಲ್ಲಿಯ ಮಳೆರಾಯನ ಮೆರೆವಣಿಗೆ ಸಾಮಾನ್ಯವಾಗಿ ಇಂಥದೇ. ಆದರೆ ಇದು ಪ್ರತಿವರ್ಷ ನಡೆಯುವ ಹಬ್ಬವಲ್ಲ. ಮತ್ತೆ ಕೆಲವು ಕಡೆ ದನಗಳಿಗೆ ಬಣ್ಣ ಬಳಿದು, ಹಸುರು ಮುಡಿಸಿ, ಸಂಗೀತದೊಡನೆ ಮೆರೆವಣಿಗೆಯಲ್ಲಿ ಕೊಂಡೊಯ್ಯುತ್ತಾರೆ: ಉದ್ದಕ್ಕೂ ಹಸುರು ಜಾರ್ಜನನ್ನು ಕುರಿತು ಹಾಡುತ್ತಾರೆ.[1] ಈಸ್ಟರ್ ಹಬ್ಬದ ಸಮಯದಲ್ಲಿ ಜಿಪ್ಸಿಯರೂ ಈ ಉತ್ಸವವನ್ನು ಆಚರಿಸುವುದುಂಟು.

ಯೂರೋಪಿನ ಕೆಲವು ಕಡೆ ಇಂಥದೇ ಹಬ್ಬ ವಸಂತಋತುವಿನ ಪ್ರಾರಂಭದಲ್ಲಿ ನಡೆಯುತ್ತದೆ. ಊರಿನ ಮಕ್ಕಳು ಜತೆಗೂಡಿ ಒಂದು ಭಾನುವಾರ ಕಾಡಿಗೆ ಹೋಗುತ್ತಾರೆ. ಅಲ್ಲಿ ತಮ್ಮ ಸಹಪಾಠಿಯೊಬ್ಬನನ್ನು ಅವರು ಪರ್ಣಬಾಲಕನನ್ನಾಗಿ ಆರಿಸಿಕೊಳ್ಳುತ್ತಾರೆ. ಎಲೆಗಳುಳ್ಳ ಮರದ ಕೊಂಬೆಗಳನ್ನು ಇಳಿಯ ಮುಳಿಯ ಅವನಿಗೆ ಹೊದಿಸುತ್ತಾರೆ. ಎಲೆಯ ಹೊದಿಕೆಗೆ ಕಣ್ಣಿರುತ್ತವೆ. ಇಬ್ಬರು ಮಕ್ಕಳು ಅವನ ಕೈಹಿಡಿದು ನಡೆಸುತ್ತಾರೆ. ಕುಣಿಯುತ್ತ ಹಾಡುತ್ತ ಅವನನ್ನು ಮನೆಯಿಂದ ಮನೆಗೆ ಒಯ್ಯುತ್ತಾರೆ. ಪ್ರತಿ ಮನೆಯಲ್ಲಿಯೂ ಮೊಟ್ಟೆಯೋ ರೊಟ್ಟಿಯೋ, ಬೇರೆ ಯಾವುದಾದರೂ ತಿಂಡಿಯ ಪದಾರ್ಥವೊ ಸಿಗುತ್ತವೆ. ಕೊನೆಗೆ ಎಲೆ ಹುಡುಗನ ಮೇಲೆ ನೀರು ಚಿಮುಕಿಸಿ, ಸಂಗ್ರಹಗೊಂಡ ತಿಂಡಿಯನ್ನು ತಿನ್ನುತ್ತಾರೆ. ಇಂಗ್ಲೆಂಡಿನಲ್ಲಿ ಜಾಕ್-ಇನ್-ದಿ-ಗ್ರೀನ್ ಎಂಬ ಹೆಸರಿನಿಂದ ಇಂಥದೇ ಉತ್ಸವ ನಡೆಯುತ್ತದೆ.

ಮೇಲಿನ ನಿದರ್ಶನಗಳಿಂದ ವೃಕ್ಷಮಾನವ ತತ್ತ್ವ ವಿಕಾಸಗೊಂಡದ್ದನ್ನು ಸ್ಪಷ್ಟವಾಗಿ ಗುರುತಿಸಬಹುದು. ಹಸುರು ಜಾರ್ಜನೇ ಮೇ-ವೃಕ್ಷ; ಅವನು ವೃಕ್ಷಶಕ್ತಿಯ ಪ್ರತೀಕ. ಕೆಲವು ವೇಳೆ ಅವನನ್ನು ದೊರೆ ಅಥವಾ ರಾಣಿ ಎಂದು ಕರೆಯುವುದುಂಟು. ಜೊತೆಗೆ ಮೇ-ವೃಕ್ಷವನ್ನು ಸ್ಥಾಪಿಸಲಾಗುತ್ತದೆ. ಮಕ್ಕಳೆಲ್ಲ ಅದರ ಬಳಿ ಓಡುತ್ತಾರೆ. ಈ ಪಂದ್ಯದಲ್ಲಿ ಯಾರು ಮೊದಲು ವೃಕ್ಷವನ್ನು ಮುಟ್ಟುತ್ತಾರೆಯೋ ಅವನೇ ದೊರೆ. ಕೂಡಲೇ ಅವನ ಕೊರಳಿಗೆ ಹೂಹಾರ ಹಾಕಿ, ಅವನ ಕೈಲಿ ಮೇ-ವೃಕ್ಷವನ್ನು ಹಿಡಿಸಿಕೊಂಡು, ಮೆರೆವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ. ಪ್ರತಿಯೊಂದು ಮನೆಯ ಬಳಿಯೂ ನಿಂತು ಹಾಡುತ್ತ, ಮನೆಯವರಿಗೆಲ್ಲ ಶುಭ ಕೋರುತ್ತಾರೆ. ಕೊಟ್ಟಿಗೆಯ ಕರಿಹಸು ಬಿಳಿ ಹಾಲನ್ನು ಕರೆಯಲೆಂದೂ, ಕಪ್ಪುಕೋಳಿ ಬಿಳಿಮೊಟ್ಟೆಯಿಡಲೆಂದೂ ಹಾರೈಸಿ, ಮೊಟ್ಟೆ ಮತ್ತು ಒಣಬಾಡು ಬೇಕೆಂದು ಕೇಳುತ್ತಾರೆ. ಹಂಗೇರಿಯಲ್ಲಿ ಹಳ್ಳಿಯ ಹುಡುಗಿಯರು ಒಂದೆಡೆ ಸೇರಿ, ಅತ್ಯಂತ ಸುಂದರಿಯಾದ ಹುಡುಗಿಯನ್ನು ರಾಣಿಯನ್ನಾಗಿ ಆರಿಸಿ, ತಲೆಗೆ ಹೂ ಮುಡಿಸಿ, ಮೆರೆವಣಿಗೆಯಲ್ಲಿ ನಡಸಿಕೊಂಡು ಹೋಗುತ್ತಾರೆ. ಪ್ರತಿಯೊಂದು ಮನೆಯ ಬಳಿ ನಿಂತು, ಲಾವಣಿಗಳನ್ನು ಹಾಡಿ, ಕಾಣಿಕೆಗಳನ್ನು ಕೊಂಡು, ಮುಂದುವರಿಯುತ್ತಾರೆ.

---

[1] 'Green George we bring,
Green George we accompany,
May he feed our herds well,
If not, to the water with him'—ಅದೇ, ಪುಟ 166

ದೇವಾಲಯಗಳ ಕಲ್ಪನೆ ಮೂಡುವ ತನಕ ಮರಗಳೇ ದೇವಾಲಯಗಳಾಗಿದ್ದವು. ಅನಂತರ ಮರಗಳ ಕೆಳಗಿನ ಒಂದು ಮೂರ್ತಿಗಳಲ್ಲೇ ದೇವರ ಸಂಕೇತವಾಯಿತು. ಒಂದೊಂದು ವನದೇವತೆ ಸ್ವತಂತ್ರ ದೇವತೆಯಾಗಿ ಬಹುದೇವತೋಪಾಸನೆ ಪ್ರಾರಂಭವಾಯಿತು. ತನ್ನ ಸುತ್ತಮುತ್ತಣ ಪಂಚಭೂತಾದಿ ನಿಸರ್ಗಶಕ್ತಿಗಳಿಗೂ ಅತಿಮಾನವತ್ವವನ್ನಾರೋಪಿಸಿ, ಪೂಜಿಸತೊಡಗಿದಾಗ, ಕಾಲಕ್ರಮೇಣ ಜ್ಯುಪಿಟರ್, ಜ್ಯೂಸ್, ಇಂದ್ರ, ವಾಯು ಮೊದಲಾದ ದೇವತೆಗಳು ಹುಟ್ಟಿಕೊಂಡಾಗ, ವೃಕ್ಷದೇವತೆಗಳಿಗೂ ಅವರಿಗೂ ಸಂಬಂಧ ಕಲ್ಪಿಸಲಾಯಿತು. ಇಂದ್ರನಂತೆ ಜುಪಿಟರ್ ಅಥವಾ ಜ್ಯೂಸ್ ಆಕಾಶದ ಮಳೆಯ ಮತ್ತು ಗುಡುಗು ಮಿಂಚುಗಳ ದೇವತೆಗಳು. ಮಳೆಯಾಗುವ ಮತ್ತು ಗುಡುಗು ಮಿಂಚುಗಳಿಂದ ರಕ್ಷಣೆ ಪಡೆಯುವ ಸಲುವಾಗಿ ಜ್ಯುಪಿಟರ್ ಮತ್ತು ಜ್ಯೂಸ್ ದೇವತೆಗಳನ್ನು ಇಟಲಿ ಮತ್ತು ಗ್ರೀಸ್ ದೇಶಗಳಲ್ಲಿ ವಿಶೇಷವಾಗಿ ಪೂಜಿಸುತ್ತಿದ್ದುದುಂಟು. ವೇದಗಳ ಕಾಲದಲ್ಲಿ ದೇವಸಮೂಹದಲ್ಲಿ ಇಂದ್ರನಿಗಿದ್ದ ಅಪೂರ್ವ ಸ್ಥಾನವನ್ನಿಲ್ಲಿ ನೆನೆಯಬಹುದು. ಓಕ್ ಮರ ಸಿಡಿಲನ್ನಾಕರ್ಷಿಸುತ್ತದೆಂಬ ಪ್ರತೀತಿಯಿದೆ. ಆದ್ದರಿಂದ ಗುಡುಗು ದೇವತೆಗೂ ಓಕ್ ಮರಕ್ಕೂ ಸಂಬಂಧ ಕಲ್ಪಿಸಲಾಯಿತು. ಓಕ್ ಮರಕ್ಕೆ ಮಾಡುವ ಪೂಜೆ ಜ್ಯುಪಿಟರ್ ದೇವತೆಗೆ ಸಲ್ಲುವಂತಾಯಿತು. ಇಂತೆಯೇ ಕೆಂಪು ಹಣ್ಣು ಬಿಡುವ ಸ್ಕ್ಯಾಂಡಿನೇವಿಯಾದ ರೋವನ್ ಎಂಬ ಮರ ಥಾರ್ ಎಂಬ ಗುಡುಗು ದೇವತೆಗೆ ಸಂಕೇತವಾಯಿತು.

ಭರತಖಂಡದಲ್ಲಿಯೂ ಪವಿತ್ರವೆಂದು ಪರಿಗಣನೆಗೊಂಡಿರುವ ವೃಕ್ಷಗಳು ಹತ್ತಾರಿವೆ. ಇವುಗಳಲ್ಲಿ ಕೆಲವು ರಾಷ್ಟ್ರೀಯವಾದುವು, ಕೆಲವು ಪ್ರಾದೇಶಿಕವಾದುವು. ಸರ್ವತ್ರ ಸರ್ವ ಗೌರವಕ್ಕೆ ಪಾತ್ರವಾಗಿರುವ ವೃಕ್ಷವೆಂದರೆ ಅಶ್ವತ್ಥ. ಅದು ದೇವತೆಗಳ ನೆಲೆವೀಡು. ದೇವತೆಗಳಲ್ಲಿ ಅದಕ್ಕೆ ಗೌರವಸ್ಥಾನವುಂಟು. "ಅಶ್ವತ್ಥಃ ಸರ್ವವೃಕ್ಷಾಣಾಂ" ಎಂದು ಭಗವದ್ಗೀತೆ ಅದರ ಮಹತ್ವವನ್ನು ಪ್ರಶಂಸಿಸುತ್ತದೆ. ಬೇರು ಮೇಲಾಗಿ ಕೊಂಬೆ ಕೆಳಗಾಗಿರುವ ಅಶ್ವತ್ಥವೃಕ್ಷದ ವರ್ಣನೆ ಅದೇ ಗ್ರಂಥದ ಹದಿನೈದನೆಯ ಸಂಧಿ(೧-೪)ಯಲ್ಲಿ ಬರುತ್ತದೆ. ಅದು ವಿಷ್ಣುವಿನ ಸಂಕೇತ. ಬಂಗಾಳದಲ್ಲಿ ಅಶ್ವತ್ಥಪತ್ರವ್ರತವೊಂದು ಆಚರಣೆಯಲ್ಲಿದೆ. ವೈಶಾಖಮಾಸದ ಕೊನೆಯ ದಿನದಂದು ಸ್ತ್ರೀಯರು ಇದನ್ನು ಆಚರಿಸುತ್ತಾರೆ. ಆ ವ್ರತಕ್ಕೆ ಬೇರೆ ಬೇರೆ ತರದ ಐದು ಪತ್ರಗಳು ಬೇಕು. ಪ್ರತಿಯೊಂದು ಎಲೆಯೂ ಮಾನವ ಜೀವನದ ವಿವಿಧ ಮೆಟ್ಟಿಲುಗಳನ್ನು ಮತ್ತು ಆಶೋತ್ತರಗಳನ್ನು ಸೂಚಿಸುತ್ತದೆ. ಹಸುರಿನ ಚಿಗುರನ್ನು, ಚಿಗುರು ಮಗುವಿನ ಜನನವನ್ನು, ಪತಿ ಪತ್ನಿಯರ ಸುಖಸೌಭಾಗ್ಯಗಳ ಅಭಿವೃದ್ಧಿಯನ್ನು ಮತ್ತು ಗಂಡನ ದೀರ್ಘಾಯುಷ್ಯವನ್ನು, ಒಣಗಿದೆಲೆ ಸುಖಸೌಭಾಗ್ಯಗಳ ... ವನ್ನು ಸೂಚಿಸುತ್ತವಂತೆ.[1] ಅದರಿಂದ ಫಲಶಕ್ತಿ ... ಎಲೆ ಶ್ರೀಮಂತಿಕೆಯನ್ನು ... ಸಾರ್ವತ್ರಿಕವಾಗಿ ವ್ಯಾಪಿಸಿದೆ. ... ಭಾವನೆ ಭರತಖಂಡದಲ್ಲೆಲ್ಲ ... ಬೋಧಿವೃಕ್ಷವೂ ಅಹುದು.

1 *Tree Symbol Worship in India*, Ed. by Shankar Sen Gupta, p. 127

ಅರಳಿಯಂತೆಯೇ ಪವಿತ್ರವಾದ ಮತ್ತೊಂದು ವೃಕ್ಷ ವಟ. ಅದು ಅಮರವಾದ ಮರ. ಶ್ರೀಕೃಷ್ಣ ವಟಪತ್ರಶಾಯಿಯಂತೆ. ಜಲಪ್ರಲಯ ಸಮಯದಲ್ಲಿ ಇಡೀ ಭೂಮಂಡಲವೇ ನೀರಿನಲ್ಲಿ ಮುಳುಗಿಹೋದಾಗ ಅದು ಮಾತ್ರ ಭದ್ರವಾಗಿ ನಿಂತಿತ್ತಂತೆ. ಶಿಶುರೂಪಿಯಾದ ಶ್ರೀಕೃಷ್ಣ ಅದರ ಮೇಲೆ ನಿರಾತಂಕವಾಗಿ ಪವಡಿಸಿದ್ದನು. ಸೋಮರಸಪಾನವನ್ನು ಬಿಟ್ಟು, ಆಲದ ಹಾಲನ್ನು ಕುಡಿಯುವಂತೆ ಋಷಿಗಳು ದೊರೆಯೊಬ್ಬನಿಗೆ ಬುದ್ಧಿವಾದ ನೀಡಿದುದಾಗಿ ಐತರೇಯ ಬ್ರಾಹ್ಮಣದಲ್ಲಿ ಉಲ್ಲೇಖವಿದೆ. ಬಂಗಾಳದಲ್ಲಿ ಹಲವು ಕಡೆ ವಟಸಾವಿತ್ರಿ ದಿನದಂದು ಹೆಂಗಸರು ಅದನ್ನು ಪೂಜಿಸಿ, ತಮ್ಮ ಗಂಡಂದಿರಿಗೆ ದೀರ್ಘಾಯುಸ್ಸು ಬೇಡಿಕೊಳ್ಳುವುದುಂಟು. ಪಂಚವಟಿ ಅಥವಾ ಐದು ಮರಗಳ ತೋಪು ಪವಿತ್ರವಾದುದು. ತೋಪಿನಲ್ಲಿ ಐದೇ ಮರವಿರಬೇಕೆಂಬುದಿಲ್ಲ. ಹೆಚ್ಚಾಗಿರಬಹುದು. ಅಲ್ಲಿ ಐದು ಆಲದ ಮರಗಳಿರಬೇಕೇ, ಅಥವಾ ಯಾವುದಾದರೂ ಐದು ಮರಗಳಿರಬೇಕೇ ಎಂಬುದು ಸಂದೇಹಾಸ್ಪದವಾದ ಸಂಗತಿ. ಅಶ್ವತ್ಥ, ವಟ, ಬಿಲ್ವ, ಆಮಲಕ ಮತ್ತು ಅಶೋಕ ವೃಕ್ಷಗಳು ಸೇರಿ ಪವಿತ್ರವಾದ ತೋಪಾಗುತ್ತದೆ. ಶಿವಶಕ್ತಿಯರಿಗೆ ಬಿಲ್ವಪತ್ರೆ ಬಹು ಪ್ರಿಯವಂತೆ. ಶಿವದೇವಾಲಯವಿದ್ದ ಕಡೆ ಆ ಮರ ಇರಲೇಬೇಕು. ಆ ಮರವನ್ನು ಸೌದೆಗೆ ಬಳಸುವುದಿಲ್ಲ, ಕೆಲವು ಕಡೆ. ಅದರ ಎಲೆ ಹಣ್ಣು ಔಷಧಿಗೂ ಬರುತ್ತವೆ. ಬಂಗಾಳದಲ್ಲಿ ಅದಕ್ಕೆ ಶ್ರೀಫಲ ಎಂಬ ಮತ್ತೊಂದು ಹೆಸರೂ ಉಂಟು. ಕದಂಬ ವೃಕ್ಷ ಕೃಷ್ಣನಿಗೆ ಪ್ರಿಯವಾದದ್ದು. ಕರ್ನಾಟಕದ ಸುಪ್ರಸಿದ್ಧ ಪ್ರಾಚೀನ ಮನೆತನದ ಸಂಕೇತ ಕದಂಬ. ಸೀತೆಗೆ ಆಸರೆಕೊಟ್ಟದ್ದು ಅಶೋಕ. ಶಮಿ ವಿಜಯದ ಸಂಕೇತ. ವಿಜಯದಶಮಿಯಲ್ಲಿ ಬನ್ನಿಪೂಜೆಗೆ ವಿಶೇಷವಾದ ಸ್ಥಾನವುಂಟು. ಪಾಂಡವರು ಅಜ್ಞಾತವಾಸದ ಕಾಲದಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಮೂಟೆಕಟ್ಟಿ ಆ ಮರದ ಮೇಲಿರಿಸಿದ್ದರು. ರಾಜಾಸ್ಥಾನದ ಜನರಿಗಂತು ಅದು ಪವಿತ್ರ ವಸ್ತು. ಗೋರ ಅಥವಾ ದಡಾರದ ದೇವತೆ ಶೀತಲ. ದಡಾರಕ್ಕೆ ಶೀತಾಳ ಸಿಡುಬೆಂದೇ ಹೆಸರು. ಆ ದೇವತೆ ಸದಾ ಬೇವಿನಮರದಲ್ಲಿ ವಾಸಿಸುತ್ತಾಳಂತೆ. ಸಿಡುಬು ಬಂದನಂತರ ಅದರ ಸೊಪ್ಪನ್ನರೆದು ಮೈಗೆ ಹಚ್ಚುತ್ತಾರೆ. ಬೇವಿನ ಸೌದೆಯಿಂದ ಮಾಡಿದ ಅಡುಗೆಯನ್ನುಂಡವನಿಗೆ ಸರ್ಪದ ವಿಷ ಏರುವುದಿಲ್ಲವಂತೆ. ಅದರ ಎಣ್ಣೆ ಅನೇಕ ಕಾಯಿಲೆಗಳಿಗೆ ಬರುತ್ತದೆ. ದೆವ್ವ ಗಾಳಿ ಬಿಡಿಸುವುದಕ್ಕೂ ಈ ಸೊಪ್ಪನ್ನು ಬಳಸುತ್ತಾರೆ. ಯುಗಾದಿಯ ಬೆಲ್ಲಬೇವಂತು ಮರೆಯುವಂಥದಲ್ಲ. ಬಾಣಂತಿ ಕೋಣೆಯನ್ನು ಪ್ರವೇಶಿಸುವ ಮುನ್ನ ಚಿತ್ಪಾವನ ಬ್ರಾಹ್ಮಣರು ಬೇವಿನಸೊಪ್ಪಿದ್ದ ಗಂಜಳದಲ್ಲಿ ಕಾಲು ತೊಳೆದುಕೊಳ್ಳಬೇಕಂತೆ. ಅಹಮ್ಮದ್ ನಗರದಲ್ಲಿ ಹಾವು ಕಚ್ಚಿದ ಮನುಷ್ಯನನ್ನು ಭೈರವ ದೇವಾಲಯಕ್ಕೆ ಕರೆದುಕೊಂಡು ಹೋಗಿ ಬೇವಿನೆಲೆ ಮತ್ತು ಮೆಣಸುಗಳನ್ನರೆದು ತಿನ್ನಿಸುತ್ತಾರೆ.

ನಾರಿಕೇಳ ಅಥವಾ ತೆಂಗು ಕಲ್ಪವೃಕ್ಷವೆಂದು, ಸಕಲ ದೇವತೆಗಳಿಗೂ ಪ್ರಿಯವಾದದ್ದೆಂದು ಭರತಖಂಡದಲ್ಲಿ ಮಾತ್ರವಲ್ಲ. ಅದು ಬೆಳೆಯುವೆಡೆಯಲ್ಲೆಲ್ಲ ಖ್ಯಾತಿಗೊಂಡಿದೆ. ಎಲ್ಲ ಶುಭಕಾರ್ಯಗಳಿಗೂ ಅದು ಮೊದಲು ಬೇಕು. ಅದಿಲ್ಲದೆ ಮದುವೆಯಾಗುವಂತಿಲ್ಲ,

ದೇವಾಲಯಗಳಲ್ಲಿ ಪೂಜೆ ನಡೆಯುವಂತಿಲ್ಲ. ಹೆಣ್ಣು ಗಂಡಿಗೆ ತೆಂಗಿನಕಾಯಿ ನೀಡುವುದು ಗುಜರಾತಿನ ಮದುವೆಯ ಸಂಪ್ರದಾಯ. ತನ್ನ ಬಾಳಿನುದ್ದಕ್ಕೂ ಗಂಡು ಅದನ್ನು ನೆನಪಾಗಿಟ್ಟುಕೊಳ್ಳುತ್ತಾನಂತೆ. ದುಷ್ಟಶಕ್ತಿಗಳ ಪ್ರಭಾವದಿಂದ ತಪ್ಪಿಸುವ ಸಲುವಾಗಿ ಮತ್ತು ದೃಷ್ಟಿನಿವಾರಣೆಗಾಗಿ ಕರ್ಣಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ತೆಂಗಿನಕಾಯನ್ನು ನಿವಾಳಿಸಿ ಈಡುಗಾಯಿ ಹೊಡೆಯುವುದುಂಟು. ಕಳಸದ ಪೂಜೆಗಂತು ಇದು ಅನಿವಾರ್ಯ. ಚರ್ಮ ತೆಗೆದ ಕೊಬರಿಯ ಮೇಲೆ ಸರಸ್ವತಿಯ ಚಿತ್ರ ಬರೆದು ಬಸಂತಪಂಚಮಿಯ ದಿನ ಒರಿಸ್ಸಾದ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು, ತಮ್ಮ ಭಕ್ತಿಯನ್ನು ಸಲ್ಲಿಸುತ್ತಾರೆ. ವರ್ಣಗೊಂಡ ಕೊಬರಿಯನ್ನು ಮನೆಯಿಂದ ಮನೆಗೆ ಕೊಂಡೊಯ್ದು, ಸರಸ್ವತೀ ಗೀತವನ್ನು ಹಾಡಿ, ಜನರಿಂದ ಕಾಣಿಕೆ ಪಡೆದು ತಮ್ಮ ಗುರುಗಳಿಗೆ ನೀಡುತ್ತಾರೆ. ಈಗ ಕೊಬರಿ ಪ್ರತಿಮೆಗೆ ಬದಲಾಗಿ ಮಣ್ಣಿನ ಪ್ರತಿಮೆ ಬಳಸುತ್ತಾರೆ.[1] ಕರ್ಣಾಟಕದ ಪ್ರತಿಷ್ಠೆಯ ವೃಕ್ಷವೆಂದು ಹೆಸರುಗೊಂಡಿರುವ ಶ್ರೀಗಂಧದ ಚಂದನವಂತು ದಕ್ಷಿಣದಲ್ಲಿ ಸಕಲದೇವತಾ ಕಾರ್ಯಗಳಿಗೆ ಬರುವುದಲ್ಲದೆ, ಅನೇಕರು ಅದನ್ನು ಹಣೆಮೈಗಳಿಗೆ ಹಚ್ಚಿಕೊಳ್ಳುತ್ತಾರೆ. ತೆಂಗಿನಕಾಯಿಯ ಜತೆಜತೆಗೆ ವೀಳೆಯದೆಲೆಯೂ ಪ್ರಸಿದ್ಧಿಯನ್ನು ಪಡೆದಿದೆ. ಕರ್ಣಾಟಕದ ಜನಜೀವನದಲ್ಲಿ ಇದು ಹಾಸುಹೊಕ್ಕಾಗಿ ಹರಿದಿದೆ. ಇದು ಶುಭಕಾರ್ಯಗಳಿಗೆ ಮಾತ್ರವಲ್ಲದೆ, ಶಾಂತಿಸಂಧಾನಗಳ ಸಮಯದಲ್ಲಿ, ಯುದ್ಧಕ್ಕೆ ಆಹ್ವಾನ ನೀಡುವಾಗ ಇದರ ಪ್ರಾಶಸ್ತ್ಯ ಅದ್ವಿತೀಯ. ನಿವಾಳಿ ತೆಗೆಯುವಾಗ ಇದು ಬೇಕು. ಇದಿಲ್ಲದೆ ತಾಂಬೂಲವಾಗುವುದಿಲ್ಲ. ಇದರ ಔಷಧೀಯ ಗುಣ ಅಷ್ಟೇ ಪ್ರಸಿದ್ಧ.

ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭರತಖಂಡದಲ್ಲಿಯೇ ತುಳಸಿಗಿರುವ ಮಾನ್ಯತೆ ಬೇರೆ ಗಿಡಕ್ಕಿದ್ದಂತಿಲ್ಲ. ಅದರಂಥ ಪವಿತ್ರವಾದ ವಸ್ತು ಮತ್ತೊಂದಿಲ್ಲ. ಅದು ಸರ್ವಶುಭ ಕಾರ್ಯಗಳಿಗೂ ಬೇಕಾದದ್ದು. ಅಷ್ಟೇ ಅಲ್ಲ, ತುಳಸಿ ಎಲೆಯಿರುವ ಗಂಗಾಜಲವನ್ನು ಸಾಯುವವನ ಬಾಯಿಗೆ ಹಾಕಿದರೆ ಅವನಿಗೆ ಮೋಕ್ಷಸಿಗುತ್ತಂತೆ. ಹರಿಪ್ರಿಯ, ಭೂತಘ್ನಿ ಎಂಬ ಹೆಸರುಗಳೂ ಅದಕ್ಕಿವೆ. ಅದಿರುವ ಕಡೆ ಭೂತಪ್ರೇತಾದಿ ದುಷ್ಟಶಕ್ತಿಗಳು ಸುಳಿಯುವುದಿಲ್ಲ. ಅದರಿಂದಲೇ ಅದು ಎಲ್ಲ ಸಂಪ್ರದಾಯಸ್ಥರ ಮನೆಯ ಅಂಗಳದಲ್ಲಿ ಸುಂದರವಾದ ಕಟ್ಟೆಯೊಳಗೆ ನಲಿದಾಡುತ್ತದೆ. ಕೆಲವು ಕಡೆ ಹೆಂಗಸರು ದಿನಕ್ಕೆರಡು ಬಾರಿ ಅದನ್ನು ಪೂಜಿಸುತ್ತಾರೆ. ಅದರ ಎಲೆಗಳನ್ನು ಕುದಿಯುವ ನೀರಿಗೆ ಹಾಕಬಾರದು. ಅದರಿಂದ ಗಿಡದ ಆತ್ಮಕ್ಕೆ ಸಂಕಟವಾಗುತ್ತದಂತೆ. ಸಾಧುಗಳು ತುಳಸಿಯ ಹಾರವನ್ನು ಕೊರಳಲ್ಲಿ ಧರಿಸುತ್ತಾರೆ. ಅದರ ಮೇಲೆ ಆಣೆಯಿಟ್ಟವನು ಸುಳ್ಳು ಹೇಳುವುದಿಲ್ಲ. ಒಂದು ಜಾನಪದದ ಪ್ರಕಾರ ಅದರ ಬೇರುಗಳಲ್ಲಿ ಗಂಗೆ ಹರಿಯುತ್ತಾಳಂತೆ, ಬ್ರಹ್ಮ ಅದರ ಕೊಂಬೆಗಳಲ್ಲಿ ವಾಸಿಸುತ್ತಾನಂತೆ, ಇತರ ದೇವತೆಗಳು ಅದರ ಎಲೆಗಳ ಮೇಲೆ [illegible] ತ್ತಾನಂತೆ. ಅದು ಭೂಸ್ವರ್ಗಗಳ ಸಂ[illegible]ವಂತೆ. ಕೇವಲ [illegible] ಪ್ರಾತಃಕಾಲ ಸ್ನಾನಾನಂತರ [illegible] ತುಳಸಿಕಟ್ಟೆಯ ಸುತ್ತ ಪ್ರದಕ್ಷಿಣೆ [illegible]ತ್ತಾರೆ.

[1] Ibid, p. 28–29

ದೇವಾಲಯಗಳಲ್ಲಿ ನೀಡುವ ತೀರ್ಥಪ್ರಸಾದಗಳಲ್ಲಿ ತುಲಸಿ ಎಲೆ ಇರಲೇಬೇಕು. ಎಲೆಯನ್ನು ಪ್ರಸಾದವೆಂದು ಕಿವಿಯಲ್ಲಿ ಸಿಕ್ಕಿಸಿಕೊಳ್ಳುವುದೂ ಉಂಟು. ಮನೆಯ ಅಂಗಳದಲ್ಲಿ ತುಲಸಿಕಟ್ಟೆ ಇದ್ದರೆ ದೇವಾಲಯಕ್ಕೂ ಹೋಗಬೇಕಾಗಿಲ್ಲ.

ಸಿಡಿಲ ರೂಪವನ್ನು ತಾಳಿದ ಶಿವನ ಕೋಪ ಮತ್ತು ಸಾಗರಗಳ ಸಂಯೋಗದಿಂದಾಗಿ ಜಲಂಧರನೆಂಬ ಮಹಾ ಶೂರ ಹುಟ್ಟಿದ. ಅವನು ಕಾಲನೇಮಿಯ ಮಗಳು ವೃಂದೆಯನ್ನು ಮದುವೆಯಾದ. ಅವಳ ಪತಿವ್ರತಾಮಹಿಮೆಯಿಂದಾಗಿ ಜಲಂಧರನಿಗೀಡಾದ ಶೂರನೇ ಮೂರು ಲೋಕಗಳಲ್ಲಿರಲಿಲ್ಲ. ಭೂಮಂಡಲದ ದೊರೆಗಳೆಲ್ಲ ಅವನಿಗೆ ಶರಣಾಗತರಾದರು. ಕೈಲಾಸದ ತಪ್ಪಲಿನಲ್ಲಿ ನಡೆದ ಯುದ್ಧದಲ್ಲಿ ಶಿವ ಸಹ ಆತನನ್ನು ಸೋಲಿಸಲಾಗಲಿಲ್ಲ. ಲೋಕಕಂಟಕನಾದ ಜಲಂಧರನನ್ನು ವಿನಾಶಗೈಯಬೇಕೆಂದು ದೇವತೆಗಳು ಸಂಚು ಹೂಡಿ ವಿಷ್ಣುವಿನ ಬಳಿ ಹೋದರು. ವಿಷ್ಣು ಜಲಂಧರನ ವೇಷವನ್ನು ತಾಳಿ ವೃಂದೆಯ ಪಾತಿವ್ರತ್ಯವನ್ನು ಕೆಡಿಸಿದನು. ಆಗ ಶಿವ ಜಲಂಧರನನ್ನು ಸುಲಭವಾಗಿ ಕೊಂದನು. ತಾನು ಮೋಸಹೋದುದಕ್ಕಾಗಿ ವೃಂದೆ ಕಡುನೊಂದು ಚಿತೆಯನ್ನೇರಿದಳು. ಅವಳ ಸಮಾಧಿಯಿಂದ ತುಲಸಿ ಉದ್ಭವವಾಯಿತು.[1] ಇದು ಪದ್ಮಪುರಾಣದ ಕತೆಯಾದರೆ, ಗುಜರಾತಿನಲ್ಲಿ ಇದರ ಜತೆಗೆ ಚಲಾವಣೆಯಲ್ಲಿರುವ ಮತ್ತೊಂದು ಕತೆಯಿದೆ. ರುಕ್ಮಿಣಿ ಕೃಷ್ಣನ ರಾಣಿಯರಲ್ಲೆಲ್ಲ ಅತ್ಯಂತ ಪ್ರಿಯಳಾದವಳು. ನಾರದ ಅವಳನ್ನು ಸ್ವರ್ಗಕ್ಕೊಯ್ಯಬೇಕೆಂದು ಆಲೋಚಿಸಿದ. ಇತರ ರಾಣಿಯರಿಗೆ ಹೊಟ್ಟೆಕಿಚ್ಚು ಬಂದು, ರುಕ್ಮಿಣಿಯನ್ನಲ್ಲಿಯೇ ಉಳಿಸಿದರೆ ಕೃಷ್ಣನ ಭಾರದ ಚಿನ್ನ ನೀಡುವುದಾಗಿ ಆಶ್ವಾಸನೆ ನೀಡಿದರು. ನಾರದ ಸಮ್ಮತಿಸಿದನು. ತಮ್ಮೆಲ್ಲ ಒಡವೆಗಳನ್ನು ತಕ್ಕಡಿಗೆ ಹಾಕಿದಾಗ ಅದು ಮೇಲೇಳಲೇ ಇಲ್ಲ. ರುಕ್ಮಿಣಿಯ ಬಳಿ ಚಿನ್ನದ ಒಡವೆಗಳೇ ಇರಲಿಲ್ಲ. ಒಂದು ತುಲಸಿ ಎಲೆ ತಂದು ತಕ್ಕಡಿಗೆ ಹಾಕಿದಳು. ಆಗ ತೂಕ ಸಮವಾಯಿತು. ಅನಂತರ ತುಲಸಿ-ಕೃಷ್ಣರಿಗೆ ಮದುವೆಯಾಯಿತು. ಕಾರ್ತಿಕಮಾಸದ ಕೃಷ್ಣಪಕ್ಷದಲ್ಲಿ ಪ್ರತಿ ವರ್ಷವೂ ತುಲಸಿ ಕೃಷ್ಣರ ಮದುವೆ ನಡೆಯುತ್ತದೆ.[2]

ಕೃಷ್ಣನ ಮೋಸಗಾರಿಕೆಯಿಂದ ಕುಪಿತಗೊಂಡ ವೃಂದಾವತಿ ಸಾಯುವ ಮುನ್ನ

---

[1] ಇದು ಜನಪ್ರಿಯ ಕಥೆಯಾದ್ದರಿಂದ, ಇದರ ಮಹಿಮೆ ಭಾರತದಾದ್ಯಂತ ಮಹಾರಾಷ್ಟ್ರದಿಂದ
ಮ[illegible] ತನಕ, ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಹರಡಿರುವುದರಿಂದ ಅನೇಕ
ಪಾಠಾಂತರಗಳು ಲಭಿಸುತ್ತವೆ. ಗುಜರಾತಿನ ಪಾಠದ ಪ್ರಕಾರ ಜಲಂಧರ ಯುದ್ಧ ಮಾಡಿದ್ದು
[illegible] ಮತ್ತೊಂದು ಪಾಠಾಂತರದ ಪ್ರಕಾರ ವೃಂದೆ ವಿಷ್ಣುವಿನ ಮಾಯೆಯಿಂದ
ಸೃಷ್ಟಿಯಾದ ಜಲಂಧರನ ಕೃತಕ ಶವವನ್ನಪ್ಪಿಕೊಂಡು ಸಾಯುತ್ತಾಳೆ. ಸಾಯುವಾಗ ಅವನಿಗೆ
[illegible] ಅವಳ ಸಮಾಧಿಯ ಮೇಲೆ ತುಲಸಿ ಗಿಡ ಹುಟ್ಟುವಳು ಪಾರ್ವತಿ.
ಅ[illegible] ಆ ತುಲಸಿ ವಿಷ್ಣುವಿನ ಶಾಶ್ವತ ಸಹಚಾರಿಣಿಯಾಗುತ್ತದೆ. (*Tree Symbol Worship in India*, Ed. by Shankar Sen Gupta, p. 38)

[2] [illegible] ಜಾನ್ ಕೀಟ್ಸನ 'Isabella, or the pot of basil' ಎಂಬ ಕವನವನ್ನು ನೆನೆಸಿಕೊಳ್ಳಬಹುದು.

"ನಾನು ಪವಿತ್ರ ತುಲಸಿಯಾಗಿ ಹುಟ್ಟುತ್ತೇನೆ. ನನಗೆ ಮಾಡಿದ ಅಪರಾಧಕ್ಕಾಗಿ
ನೀನವನ್ನು ಯಾವಾಗಲೂ ಮುಡಿಯಲ್ಲಿ ಧರಿಸಬೇಕು" ಎಂದು ಅವನಿಗೆ ಶಾಪ
ವಿತ್ತಂತೆಯೂ, ಅವಳ ಇಷ್ಟಾರ್ಥ ನೆರವೇರುವಂತೆ ಕೃಷ್ಣ ಹರಸಿದಂತೆಯೂ ಒರಿಸ್ಸಾದ
ಜಾನಪದ ತಿಳಿಸುತ್ತದೆ.[1] ತುಲಸಿಯ ಕುಂಡವನ್ನು ಹೊತ್ತ, ಸಾಂಪ್ರದಾಯಕ ವೇಷ
ಭೂಷಣಗಳಿಂದ ಕೂಡಿದ ಒರಿಯಾ ಹೆಂಗಸಿನ ರೂಪವನ್ನು ಹೋಲುವ ವೃಂದಾವನದ
ಕಲ್ಲಿನ ಮೂರ್ತಿಯನ್ನು ಈಗಲೂ ಅನೇಕ ಮನೆಗಳ ಮುಂದೆ ಕಾಣಬಹುದು.

ಮರ ಮಾನವನ ಮೂಲ ಜನಕ ಎಂಬ ವಿಷಯ ಹಲವು ಜನಾಂಗಗಳ ತಿಳಿವಳಿಕೆ.
ಈಜಿಪ್ಟಿನ ಸಸ್ಯಾಧಿದೇವತೆ ಒಸಿರಿಸ್ (osiris) ಮತ್ತು ಸೌಂದರ್ಯಕ್ಕೆ ಹೆಸರಾದ ಗ್ರೀಕ್
ದೇವತೆ ಅಡೋನೀಸ್ (Adonis) ವೃಕ್ಷಗಳಿಂದ ಹುಟ್ಟಿದವರೆಂದು ಪ್ರತೀತಿಯಿದೆ.
ದಕ್ಷ ಪ್ರಜಾಪತಿಯ ಹೆಂಡತಿ ಮಾರೀಷ ವೃಕ್ಷಸುತೆಯೆಂದು ಒಂದೂ ಪುರಾಣಗಳಲ್ಲಿ
ಹೇಳಿದೆ. ಬ್ರಹ್ಮ ಕಮಲ ಸಂಭವ, ಅಂತೆಯೇ ಸರಸ್ವತಿ ಕಮಲಾಸನೆ. ವನಮಹೋತ್ಸವದ
ವಿವರಣೆ ಮತ್ಸ್ಯಪುರಾಣದಲ್ಲಿ ಬರುತ್ತದೆ. ಭವಿಷ್ಯಪುರಾಣ ಹಲಸು, ಎಕ್ಕೆ, ಕುಶ,
ಮಾವು, ಬಕುಳ, ಕರವೀರ ಮೊದಲಾದ ಮೂವತ್ತು ಪವಿತ್ರ ತರುಗುಲ್ಮಗಳನ್ನು ಪಟ್ಟಿ
ಮಾಡಿದೆ. ಆದರೆ ಅವೆಲ್ಲ ಪವಿತ್ರವಾಗಿದ್ದಂತೆ ತೋರುವುದಿಲ್ಲ. ಸೌರಾಷ್ಟ್ರದಲ್ಲಿ ಇಪ್ಪತ್ತು
ನಾಲ್ಕು ವೃಕ್ಷಗಳು ಪವಿತ್ರವಾದುವೆಂದು ಪ್ರಸಿದ್ಧವಾಗಿವೆ. ಹೀಗೆ ಅವುಗಳ ಸಂಖ್ಯೆ
ಮತ್ತು ಜಾತಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸಗೊಳ್ಳುತ್ತವೆ. ಕರ್ನಾಟಕದ ಕೆಲವು
ಕಡೆಗಳಲ್ಲಿ ಕೋಲುಗಳ್ಳಿ ಶ್ರೇಷ್ಠವಾದದ್ದೆಂಬ ತಿಳಿವಳಿಕೆ ಇದೆ. ಹಿಂದಿನ ಕಾಲದಲ್ಲಿ
ಮದುವೆ ಮೂರ್‍ನಾಲ್ಕು ದಿನಗಳ ಕಾಲ ನಡೆಯುತ್ತಿದ್ದಾಗ ಚಪ್ಪರದ ಶಾಸ್ತ್ರವೇ ಒಂದು ದಿನ
ನಡೆಯುತ್ತಿತ್ತು. ಮೂರು ಕವೆಗಳನ್ನು ಸಕಲ ಪೂಜಾಗೌರವಗಳೊಡನೆ ದೇವಸ್ಥಾನದಿಂದ
ತಂದು, ಶಾಸ್ತ್ರೋಕ್ತವಾಗಿ ಹಸೆ ಜಗಲಿಯ ನಡುವೆ ಮತ್ತು ಅಕ್ಕಪಕ್ಕಗಳಲ್ಲಿ ಸಂಸ್ಥಾಪಿಸ
ಲಾಗುತ್ತಿತ್ತು. ಆ ಮೂರು ಕವೆಗಳಲ್ಲಿ ಒಂದು ಕಳ್ಳಿಯದು; ಉಳಿದುವು ಯಾವುದಾದರೂ
ಹಾಲುಳ್ಳ ಮರದವಾಗಬಹುದು. ಅವುಗಳಲ್ಲಿ ಕಳ್ಳಿ ಕವೆಗೆ ಪ್ರಾಧಾನ್ಯ ಮತ್ತು ಪ್ರಾಶಸ್ತ್ಯ.
ಮದುವೆ ಮುಗಿದ ನಂತರ ಅವುಗಳ ವಿಸರ್ಜನೆಯೂ ಶಾಸ್ತ್ರೀಯವಾಗಿ ನಡೆಯು
ತ್ತಿತ್ತು. ಇದೇ ಸಂದರ್ಭದಲ್ಲಿ ಮಡಿವಾಳ ಸೇರಿಳೆ ಕೊಂಬೆ ಹಿಡಿದುಕೊಂಡು ಬರುತ್ತಿದ್ದು
ದನ್ನೂ, ಅದಕ್ಕೂ ಶಾಸ್ತ್ರ ಮರ್‍ಯಾದೆ ಸಲ್ಲುತ್ತಿದ್ದುದನ್ನೂ ನೆನೆಯಬಹುದು.

ಜಾನಪದದ ದೃಷ್ಟಿಯಿಂದ ಪವಿತ್ರವಾದ ಮತ್ತು ಪವಿತ್ರವಲ್ಲದ, ಅಥವಾ ಧಾರ್ಮಿಕ
ಮತ್ತು ಲೌಕಿಕ ವೃಕ್ಷಗಳೆಂದು ಭೂಮಂಡಲದ ಸಸ್ಯಜಾತಿಯನ್ನು ಎರಡು ಭಾಗ ಮಾಡ
ಬಹುದು. ಇವುಗಳಲ್ಲದೆ ಭೂಮಿಯಲ್ಲಿ ಕಾಣದ, ಪುರಾಣಗಳಲ್ಲಿ ಮಾತ್ರವೇ ಉಲ್ಲೇಖ
ಗೊಂಡಿರುವ ವೃಕ್ಷಗಳುಂಟು. ಸೋಮ ಮಂದಾರ ಕಲ್ಪತರು ಸಂಜೀವಿನಿಲತೆ ಮೊದಲಾದ
ಈ ಪೌರಾಣಿಕ ವೃಕ್ಷಲತೆಗಳು ಭೂಮಿಯ ಮೇಲಿನ ಯಾವುದಾದರೂ ಸಸ್ಯಜಾತಿಗಳಿಗೆ
ಸಂಬಂಧಿಸಿದಾಗಿರಬೇಕೆ ಎಂಬುದು ಗೊತ್ತಿಲ್ಲ. ಅವುಗಳ ವಿವರಣೆ ಬಹಳಷ್ಟು

1 *Tree Symbol Worship in India*, Ed. by Shankar Sen Gupta, P. 15

ಸಸ್ಯಗಳ ಹಿರಿಮೆಗೆ ಅವುಗಳ ಔಷಧೀಯ ಗುಣವೂ ಕಾರಣವಾಗಿರಬೇಕು. ಚರಕ ಸುಶ್ರುತರು ಮಾತ್ರವಲ್ಲ, ಇಂದಿನ ಮಹಾ ವೈದ್ಯರು ಕಾಣದ ಸಸ್ಯಶಕ್ತಿ ಪ್ರಾಚೀನ ಮಾನವನಿಗೆ ತಿಳಿದಿತ್ತು. ತನ್ನ ಸುತ್ತಮುತ್ತಣ ಯಃಕಶ್ಚಿತ್ ವೃಕ್ಷದಲ್ಲಿ ಮಾತ್ರವಲ್ಲ, ನೆಗ್ಗಿಲಿನಂಥ ಮುಳ್ಳುಗಿಡದಲ್ಲಿಯೂ ಜೀವರಕ್ಷಕ ಸಾಮರ್ಥ್ಯವನ್ನು ಕಂಡುಕೊಂಡ. ತಿರುಗುಕೋಲಿಗೆ ಅಂಕೋಲೆ ಶ್ರೇಷ್ಠವಾದದ್ದೆಂದು ಹೇಳುತ್ತಾರೆ. ಮಾನವನಿಗೆ ಅಪ್ರಿಯವಾದ ಹಾಗೂ ನಿಷ್ಪ್ರಯೋಜಕವಾದ ಗಿಡವೊಂದೂ ಈ ನೆಲದ ಮೇಲೆ ಹುಟ್ಟಿರಲಾರದೆಂದುಕೊಂಡ. ಅಳಲೆಕಾಯಿ ಪಂಡಿತರೆಂದು ಅಣಕಕ್ಕೆ ಗುರಿಯಾದ ಕೆಲವು ಆಯುರ್ವೇದ ಪಂಡಿತರು ವೈದ್ಯ ರಹಸ್ಯಗಳನ್ನು ಇತರರಿಗೆ ತಿಳಿಸಲಿಲ್ಲ. ತುಲಸಿ ಪವಿತ್ರ ವಸ್ತುವೆಂಬ ಗಣನೆಗೆ ಗುರಿಯಾಗಬೇಕಾದರೆ ಅದರ ಔಷಧೀಯ ಗುಣವೇ ಮುಖ್ಯ ಕಾರಣ. ಜ್ವರಕ್ಕೆ ತಲೆನೋವು ಕೆಮ್ಮು ನೆಗಡಿ ಮೊದಲಾದ ರೋಗಗಳಿಗೆ ಅದು ದೊಡ್ಡ ಮದ್ದು. ಅಷ್ಟು ಸರಳಪದಾರ್ಥದ ಪ್ರಯೋಜನ ಸ್ವಾರ್ಥಪರರಾದ ಪಂಡಿತರಿಂದಾಗಿ ಪಾಮರರಿಗೆ ಸರಿಯಾಗಿ ದೊರೆಯಲಿಲ್ಲ. ಕೆಲವು ಗಿಡಮರಗಳಿಂದ ಉತ್ಪತ್ತಿಯಾಗುವ ವಿಷವನ್ನು ಬಾಣಗಳಿಗೆ ಬಳಸುತ್ತಿದ್ದುದುಂಟು. ಇಲಿಯಡ್ ಮೊದಲಾದ ಗ್ರಂಥಗಳಲ್ಲಿ ಅವುಗಳ ಬಗ್ಗೆ ಸೂಚನೆಯಿದೆ.[1] ಆಫ್ರಿಕಾವಲ್ಲಿ ಇಂದಿಗೂ ವಿಷ ಪರೀಕ್ಷೆಗೆಂದು ಗಿಡದ ರಸಿಕೆ ಅಥವಾ ಪುಡಿಗಳನ್ನು ಬಳಸುವುದುಂಟು. ಮಾನವಾಕೃತಿಯ, ಕೀಳುವಾಗ ಕಿರುಚುವುದೆಂದು ಹೇಳುವ ಬೇರುಳ್ಳ, ಹಿಂದಿನ ಯೂರೋಪಿನಲ್ಲಿ ಪ್ರಸಿದ್ಧವಾದ ಮಂದ್ರಕೆ (Mandrake) ಎಂಬ ಗಿಡದ ರಸ ಮತ್ತು ಬರಿಸುತ್ತದಂತೆ. ಅಷ್ಟೇ ಅಲ್ಲ, ಅದರ ಉಪಯೋಗದಿಂದ ಬಂಜೆಯರಲ್ಲಿ ಫಲಶಕ್ತಿ ಉಂಟಾಗುತ್ತದಂತೆ.

ಈ ಔಷಧೀಯ ಗುಣದಿಂದ ವೃಕ್ಷಲಾಂಛನ ತತ್ವ ರೂಪಗೊಂಡು ದೇವತಾಶಾಸ್ತ್ರದ ಒಂದು ಭಾಗವಾಯಿತು. ಪ್ರತಿಯೊಂದು ರೋಗಕ್ಕೂ ರಾಮಬಾಣದಂತಿರುವ ಮೂಲಿಕೆಯೊಂದು ಇದ್ದೇ ಇದೆ ಎಂಬ ನಂಬಿಕೆಯೇ ಆ ತತ್ವದ ಉಗಮಕ್ಕೆ ಮೂಲ. ಆಯಾಯ ಗಿಡದ ಬಣ್ಣ ಆಕಾರ ಅಥವಾ ಹೆಸರನ್ನು ಆ ಲಾಂಛನ ಸೂಚಿಸುವಂತಿರುತ್ತದೆ. ಹಳದಿ ಹೂ ಕಾಮಾಲೆಗೆ ಮದ್ದಂತೆ. ನಾಯಿ ನಾಲಗೆ (Cynoglossum) ಎಂಬ ಗಿಡ ನಾಯಿ ಕಚ್ಚಿದ ಗಾಯಕ್ಕೆ ಪರಮಂತೆ. ಕಾಯಿಲೆ ಬಂದಾಗ ಪ್ರಾಣಿಗಳು ಅಂತಃಪ್ರೇರಣೆಯಿಂದಾಗಿ ಈ ಔಷಧೀಯ ಗಿಡಗಳನ್ನು ತಿನ್ನುವುದರಿಂದಲೋ ಮೂಸುವುದರಿಂದಲೋ ಅದು ಗುಣವಾಗುತ್ತದಂತೆ. ಅಜೀರ್ಣವಾದಾಗ ನಾಯಿಗಳು ಹಸಿರು ಹುಲ್ಲು ತಿನ್ನುತ್ತವೆಂದು ಕೆಲವು ಕಡೆ ಪ್ರತೀತಿಯುಂಟು.

ಜ್ಯೋತಿಶ್ಶಾಸ್ತ್ರದಲ್ಲಿಯೂ ವೃಕ್ಷಗಳ ಪಾತ್ರವುಂಟೆಂದು ಹೇಳುತ್ತಾರೆ. ಮಂತ್ರಮಾಟಗಳಲ್ಲಂತು ಅವುಗಳ ಪ್ರಯೋಜನ ಇದ್ದೇ ಇದೆ. ಅಷ್ಟೇ ಅಲ್ಲ, ವಶೀಕರಣಕ್ಕೂ ಕೆಲವು ಬೀಜಗಳನ್ನೋ ಎಲೆಗಳನ್ನೋ ಇತರ ಭಾಗಗಳನ್ನೋ ಬಳಸುವ ರೂಢಿ ಕೆಲವು ದೇಶಗಳಲ್ಲಿದೆ. ಕೆಲವು ಮರಗಳು ಭೂತಗಳಿಗೆ ನೆಲೆವಾಣಗಳೆಂದೂ ಹೇಳುವುದುಂಟು. ಸಸ್ಯಗಳು

[1] *The Science of Folklore*: A. H. Krappe, p. 235.

ಮಾನವರ ಕುಲಚಿಹ್ನೆಗಳಾಗಿ ಉಳಿದುಬಂದಿರುವುದು ರಹಸ್ಯಾತ್ಮಕ ಸಂಗತಿಯಾಗಿದೆ. ಅವು ಆ ಪ್ರಾಶಸ್ತ್ಯವನ್ನು ಪಡೆಯಲು ಕಾರಣವೇನೆಂಬುದನ್ನು ಊಹಿಸುವುದು ಕಷ್ಟ. ಈ ಮಾನವ ವೃಕ್ಷ ಸಂಬಂಧಕ್ಕೆ ಆಯಾಯ ವೃಕ್ಷಗಳ ವಿಚಿತ್ರ ಲಕ್ಷಣ ಕಾರಣವಾಗಿರಬಹುದೆ? ಎಂದೋ ಅವುಗಳಿಂದೊದಗಿದ ಪ್ರಯೋಜನ ಹೇತುವಾಗಿರಬಹುದೆ? ಕೆಲವರ ಕುಲಲಾಂಛನ ಕೊಗ್ಗಿ, ಮತ್ತೆ ಕೆಲವರದು ಕೊಮ್ಮೆ. ಇದು ಏಕೆ? ಮನೆದೇವರಿಗೆ ಈ ಕುಲಲಾಂಛನ ಪ್ರತೀಕವಾಗಿ ಪರಿಣಮಿಸುತ್ತದೆ, ರಾಷ್ಟ್ರಕ್ಕೆ ಬಾವುಟವಿದ್ದಂತೆ. ಸತ್ತ ಮನುಷ್ಯನ ಆತ್ಮ ಕೆಲವು ಗಿಡಗಳನ್ನೋ ಪ್ರಾಣಿಗಳನ್ನೋ ಪ್ರವೇಶಿಸುತ್ತದೆ; ಅವನ ಪೀಳಿಗೆಯ ಜನ ಪಿತೃಪೂಜಾ ನೆವದಿಂದ ಆ ಗಿಡವನ್ನು ಪೂಜಿಸುತ್ತಾರೆ; ಅದೇ ಅವರ ಕುಲಚಿಹ್ನೆಯಾಗುತ್ತದೆ ಎಂದು ಟೈಲರ್ (Tylor) ಮೊದಲಾದ ತಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಚಿನ್ನ ಬೆಳ್ಳಿ ಹಳಗೆ ಬುಟ್ಟಿ ಬುಜ್ಜಣಿಗೆ ಹೆಡಗೆ ಮೊದಲಾದ ಜಡವಸ್ತುಗಳು ಕೂಡ ಕುಲಲಾಂಛನವಾಗಬಲ್ಲುವು. ಇವನ್ನೆಲ್ಲ ಪರಿಶೀಲಿಸುವಾಗ ಕುಲಲಾಂಛನ ಪದ್ಧತಿಯ ರಹಸ್ಯಭೇದನ ಸುಲಭವಾದದ್ದಲ್ಲವೆಂದು ಮನದಟ್ಟಾಗುತ್ತದೆ.

ವೃಕ್ಷನಾಮಗಳ ಅಧ್ಯಯನ ಇನ್ನೂ ಎಲ್ಲಿಯೂ ನಡೆದಂತೆ ತೋರುವುದಿಲ್ಲ. ಅವುಗಳ ಬಣ್ಣ, ಹೂ, ಎಲೆ ಮೊದಲಾದ ಬಿಡಿಭಾಗಗಳ ಗುಣಗಳ ಪ್ರೇರಣೆಯಿಂತೆ ಹೆಸರು ಹುಟ್ಟಿಕೊಂಡಿರಬೇಕು. ಜನಿವಾರ ಎಂಬುದೊಂದು ಲತೆ. ಯಜ್ಞೋಪವೀತಕ್ಕೂ ಅದಕ್ಕೂ ಹೆಸರೇ ಸಂಬಂಧವೇನು? ಬಾಚೀ ಗಾಯದ ಸೊಪ್ಪು ಎಂಬುದು ಮತ್ತೊಂದು. ಹೆಸರೇ ಸೂಚಿಸುವಂತೆ ಬಾಚಿ ಗಾಯಕ್ಕೆ ಬಳಸುವ ಸೊಪ್ಪು ಅದು. ವಿಷ್ಣುಕ್ರಾಂತಿಸೊಪ್ಪು. ಇದರ ಸಾರನ್ನು ಜ್ವರ ಬಂದವರಿಗೆ ಕೊಡುತ್ತಾರೆ. ಅದರ ಬಣ್ಣ ಅಚ್ಚನೀಲಿ; ವಿಷ್ಣುವಿನ ದೇಹವರ್ಣವೂ ಅದೇ. ಕೊತ್ತಿಮುಳ್ಳು ಎಂಬುದೊಂದು ಪೊದೆ. ಇಲಿ ಹೆಗ್ಗಣಗಳ ಪ್ರವೇಶಕ್ಕಡ್ಡಿಯಾಗಲೆಂದು ಗಳಿಗೆ ಕಣಜಗಳ ಸುತ್ತ ಇಡುತ್ತಾರೆ. ಅದನ್ನು ಭೇದಿಸಿಕೊಂಡು ಬೆಕ್ಕು ಸಹ ಮುಂದರಿಯಲಾರದು. ಇಂಗ್ಲಿಷಿನಲ್ಲಿಯೂ Adders tongue ಎನ್ನುವ ಹೆಸರು ಪ್ರಾಣಿಯಿಂದ ಬಂದದ್ದು. 'ಮುಟ್ಟಿದರೆ ಮುನಿ' ಎಂಬುದು 'Forget me not' ಎನ್ನುವುದರ ಭಾಷಾಂತರ. ಸಾಂಕೇತಿಕ ಭಾಷೆಯ ಬೆಳವಣಿಗೆಯಲ್ಲಿ ಗಿಡಗಳ ಪಾತ್ರವನ್ನು ಮರೆಯುವಂತಿಲ್ಲ. ಕೆಲವು ಮಾನವನ ರಾಗಭಾವಗಳಿಗೆ ಸಂಕೇತವಾಗಿರುವುದುಂಟು. ಹಳೆಯ ಒಡಂಬಡಿಕೆಯಲ್ಲಿ ಒಲಿವ್ ಮರ ಶಾಂತಿಗೆ ಸಂಕೇತವಾಗಿರುವಂತೆ, ಭಾರತೀಯರಲ್ಲಿ ಕಮಲ ಪಾವಿತ್ರ್ಯಕ್ಕೆ ಜ್ಞಾನಕ್ಕೆ ಸಂಕೇತವಾಗಿದೆ. [illegible] ಪಾಶ್ಚಾತ್ಯರಲ್ಲಿ, ಲಾರೆಲ್ ವಿಜಯದ ಸಂಕೇತ.

ಸಸ್ಯವಿಜ್ಞಾನಿಯನ್ನು ಕೂಡಿಕೊಂಡು ಭಾಷಾವಿಜ್ಞಾನಿ ವೃಕ್ಷನಾಮಗಳನ್ನು, ವೈದ್ಯ ವಿಜ್ಞಾನಿ ಜಾನಪದವೈದ್ಯವನ್ನು, ಸಮಾಜವಿಜ್ಞಾನಿ ಸಸ್ಯ ಸಮಾಜವನ್ನು ಕುರಿತ ನಂಬಿಕೆಗಳನ್ನು ಕುರಿತು ಅಧ್ಯಯನ ನಡೆಸುವುದಾದರೆ ಅನೇಕ [illegible] ಬೀಳುವ ಸಂಭವವಿದೆ. ಜಾನಪದವೆಲ್ಲ ಅನಾಗರಿಕವಾದದ್ದು [illegible] ಎನ್ನುವ ತಿಳಿವಳಿಕೆಯೇ ಅನಾಗರಿಕವಾಗುತ್ತದೆ. [illegible]ವಾಗುತ್ತದೆ.

೧೨

ಪ್ರಾಣಿ ಜಾನಪದ

ಮಾನವ ಕಾಡಿನಲ್ಲಿ ಪ್ರಾಣಿಗಳ ಜತೆಯಲ್ಲಿ ವಾಸಮಾಡುತ್ತಿದ್ದ ಕಾಲವೊಂದಿತ್ತು. ತನ್ನ ದೇಹರಕ್ಷಣೆಗಾಗಿ ಹಾಗೂ ಜೀವನ ವ್ಯವಹಾರಕ್ಕಾಗಿ ಅವನು ಸಸ್ಯಸಂಪತ್ತನ್ನೆಂತು ಸೂರೆಗೊಂಡನೋ ಅಂತೆಯೇ ಪ್ರಾಣಿಸಂಪತ್ತನ್ನೂ ಸಂಪೂರ್ಣವಾಗಿ ಬಳಸಿಕೊಂಡದ್ದುಂಟು. ಹಾವು ಹುಲಿ ಆನೆ ಸಿಂಹ ಚಿರತೆ ಮೊದಲಾದ ದುಷ್ಟಜಂತುಗಳನ್ನು ಕಂಡಾಗ ಹೆದರಿ, ಏನೇನೋ ಕಲ್ಪನೆಗಳನ್ನು ಸೃಷ್ಟಿಸಿಕೊಂಡಿರಬೇಕು; ಹಸು ಕುದುರೆ ಮೇಕೆ ಕುರಿ ಜಿಂಕೆ ಮೊದಲಾದ ಸಾಧುಪ್ರಾಣಿಗಳಲ್ಲಿ ತನ್ನ ಸುಖ ಸೌಭಾಗ್ಯಗಳನ್ನು ಕಂಡಿರಬೇಕು; ಅವು ತನಗೆ ಸ್ಪರ್ಧಿಗಳೆಂದು, ಹಗೆಗಳೆಂದು, ತನ್ನ ಸುಖಕ್ಕೆಂತೋ ಅಂತೆಯೇ ದುಃಖಕ್ಕೂ ಕಾರಣಗಳೆಂದು ಅವನು ಬಗೆದಿರಬೇಕು. ಭಯವಿಸ್ಮಯಗಳಿಂದ ಕೂಡಿದ ಅವನ ಮುಗ್ಧ ಮನಸ್ಸು ಅವುಗಳ ಬಗೆಗೆ ಚಿತ್ರವಿಚಿತ್ರವಾದ ಅಭಿಪ್ರಾಯಗಳನ್ನು ತಳೆದು, ನಾನಾ ಕಥೆಗಳನ್ನು ಕಲ್ಪಿಸಿಕೊಂಡಿರಬೇಕು. ಜಡಪ್ರಾಯದ ಸಸ್ಯಲೋಕದಲ್ಲಿ ಅದ್ಭುತಶಕ್ತಿಗಳನ್ನು ಕಂಡವನು, ತನ್ನಂತೆ ತಿನ್ನುವ, ಓಡಾಡುವ, ಮಲಗುವ, ಕೂಗುವ, ಕಾಮಮೋಹಗಳ ಸೆಳೆತಕ್ಕೆ ಸೋಲುವ, ಸಂತಾನೋತ್ಪತ್ತಿಯಲ್ಲಿ ತೊಡಗುವ ಪ್ರಾಣಿಗಳಲ್ಲಿ ಇನ್ನು ಹೆಚ್ಚಿನ ಶಕ್ತಿಗಳನ್ನು ಗುರುತಿಸಿರಬೇಕು. ಆದಿಮಾನವನಂತು ತನಗೂ ಅವುಗಳಿಗೂ ಹೆಚ್ಚು ವ್ಯತ್ಯಾಸಗಳನ್ನು ಕಂಡಿರಲಾರನು. ತಾನು ಪ್ರಾಣಿಗಳಿಗಿಂತ ಮುಂದುವರಿದ, ವಿಶೇಷ ಸಾಮರ್ಥ್ಯವುಳ್ಳ ಮಹಾಪ್ರಾಣಿ ಎಂದು ಅರ್ಥಮಾಡಿಕೊಳ್ಳುವ ಹೊತ್ತಿಗೆ ಸಹಸ್ರಾರು ವರ್ಷಗಳು ಸಂದಿರಬೇಕು. ಆ ಹಿಂದೆ ಅವನು ಅಸಂಗತ ಸಾಮ್ಯ ಮತ್ತು ಅಸಂಬದ್ಧ ತರ್ಕಗಳ ಮೂಲಕ ತನ್ನ ಮತ್ತು ಪ್ರಾಣಿಪ್ರಪಂಚದ ಸಂಬಂಧವನ್ನು ನಿರ್ಣಯಿಸಿಕೊಳ್ಳುವಾಗ ಅನೇಕ ನಂಬಿಕೆಗಳು ಹುಟ್ಟಿಕೊಂಡದ್ದುಂಟು.

ಧಾನ್ಯದೇವತೆ ನಾಯಿ ನರಿ ಮೊಲ ತೋಳ ಹಂದಿ ಹಸು ಕುದುರೆ ಹುಂಜ ಆಡು ಬೆಕ್ಕು ಗವ್ವಜಗ ಮೊದಲಾದ ಪ್ರಾಣಿಗಳ ರೂಪದಲ್ಲಿ ತೆನೆ ಹುಲ್ಲಿನಲ್ಲಿರುತ್ತದೆಂದು ಕೆಲವರು ನಂಬುತ್ತಾರೆ. ಹೊಲ ಕುಯ್ಯುವವನು ಕೊಯ್ಯಲು ಮುಂದುವರಿಸಿದಂತೆಲ್ಲ ಆ ದೇವತೆ ಮುಂದೆ ಮುಂದೆ ಸರಿಯುತ್ತಾಳೆ. ಅವನೇನಾದರೂ ಕೊಯ್ಯುವಾಗಲೆ ಖಾಯಿಲೆ ಬಿದ್ದದ್ದಾದರೆ ಧಾನ್ಯದೇವತೆಯ ಆಗ್ರಹವೇ ಕಾರಣವೆನ್ನುತ್ತಾರೆ. ಕೊನೆಯ ಪೈರು ಕೊಯ್ದು, ಕೊನೆ ಹಿಂಡಿಯನ್ನು ಕಟ್ಟಿದಾಗ ಪೈ-ತೋಳ ಎಂದೋ, ಪೈ-ಹಸು ಎಂದೋ, ಗೋಧಿ-

ಮೋಲ ಎಂದೋ ಹೆಸರು ಪಡೆಯುತ್ತಾನೆ, ಮತ್ತು ಅದು ಕೆಲವು ದಿನ ಅವನೊಡನೆ ಅಂಟಿಕೊಂಡಿರುತ್ತದೆ. ಕೊನೆಯ ಪಿಂಡಿಯಿಂದಲೋ ಮರದಿಂದಲೋ ಮಾಡಿದ ಬೊಂಬೆಯನ್ನು ಬಂಡಿಯಲ್ಲಿಟ್ಟುಕೊಂಡು ಸುಗ್ಗಿ ಹಬ್ಬ ಆಚರಿಸುವುದುಂಟು. ಆ ದೇವತೆ ಕೊನೆಯ ಪಿಂಡಿ ಬಡಿಯುವ ತನಕ ಅಲ್ಲಿಯೇ ವಾಸವಾಗಿರುತ್ತದೆ ಎಂದು ಹೇಳುವವರೂ ಉಂಟು. ಆಗ ಪ್ರಾಣಿಯ ಹೆಸರು ಬಡಿಗಾರನಿಗೆ ಸಲ್ಲುತ್ತದೆ. ಒಕ್ಕಣೆ ಮುಗಿಯುದಿದ್ದ ಕಣದವರ ಕಣ್ಣಿಗೆ ಬಿದ್ದರೆ ಅವನನ್ನು ಹಿಡಿದು ಒಂದು ಕಡೆ ಕೂಡಿಹಾಕಿ, ಯಾವ ಪ್ರಾಣಿಯನ್ನವನು ಪ್ರತಿನಿಧಿಸುತ್ತಾನೆಯೋ ಆ ಪ್ರಾಣಿಯನ್ನು ಸಂಬೋಧಿಸುವಂತೆ ಕರೆಯುತ್ತ, ಒಕ್ಕಣೆ ಮುಗಿದನಂತರ ಬಿಡುಗಡೆಮಾಡುತ್ತಾರೆ.

ಫ್ರಾನ್ಸ್ ಜರ್ಮನಿ ಮತ್ತು ಸ್ಲಾವ್ ದೇಶಗಳಲ್ಲಿ ಧಾನ್ಯದೇವತೆಯನ್ನು ತೋಳ ಅಥವಾ ನಾಯಿ ಎಂದು ಕರೆಯುವುದು ರೂಢಿ. ಧಾನ್ಯದೇವತೆ ಹುಂಜನ ರೂಪದಲ್ಲಿ ಹೊಲಕ್ಕೆ ಬಂದ ಮಕ್ಕಳ ಕಣ್ಣುಕುಕ್ಕುವುದಾಗಿ ಆಸ್ಟ್ರಿಯಾದ ರೈತರು ನಂಬಿದ್ದಾರೆ. ಹುಂಜ ಕೊನೆಯ ಪಿಂಡಿಯ ಮೇಲೆ ಕುಳಿತಿದೆ, ಅವನ್ನೋಡಿಸಬೇಕೆಂದು ಉತ್ತರ ಜರ್ಮನಿಯ ರೈತರು ಕೂಗಿಕೊಳ್ಳುತ್ತಾರೆ. ಕೊನೆಯ ಹಿಡಿ ಪೈರು ಕೊಯ್ಯುವ ಮುನ್ನ, ಜೀವದ ಹುಂಜ ನನ್ನಲ್ಲಿಟ್ಟು, ಎದ್ದು ಓಡಿಹೋಗುವಾಗ ಅದನ್ನು ಹಿಡಿದುತಂದು, ಕೊರಳು ಮಾತ್ರ ನೆಲದ ಮೇಲೆ ಕಾಣುವಂತೆ ಹೂತು, ಕುಡುಗೋಲಿನಿಂದ ಅದನ್ನು ಕತ್ತರಿಸುವ ಪದ್ಧತಿ ಜರ್ಮನಿ ಹಂಗೆರಿ, ಪೋಲೆಂಡ್ ಮೊದಲಾದ ದೇಶಗಳಲ್ಲಿದೆ. ಮೊಲದ ಆಕಾರ ಬರುವಂತೆ ಕೊನೆಯ ಹಿಡಿಪೈರನ್ನು ನಿಲ್ಲಿಸಿ, ಅದನ್ನು ಮೂರು ಭಾಗ ಮಾಡಿ ಸೇರಿಸಿ ಕಟ್ಟಿ, ಹೊಲ ಕೊಯ್ಯುವವರು ತುಸು ದೂರದಿಂದ ತಮ್ಮ ಕುಡುಗೋಲನ್ನು ಮೇಲಿಂದ ಮೇಲೆ ಕೊನೆಯ ಕಡ್ಡಿ ಬೀಳುವವರೆಗೂ ಮೊಲದ ಮೇಲೆ ಎಸೆದು, ಅದು ಬಿದ್ದನಂತರ ಮನೆಗೊಯ್ದು ಅಡುಗೆ ಮನೆಯ ಹೆಣ್ಣಾಳಿನ ಕೈಗೆ ಕೊಟ್ಟು, ನಾಗವಾಸದ ಮೇಲಿಡಿಸುವ ವಾಡಿಕೆ ಯೂರೋಪಿನ ಕೆಲವು ಸೀಮೆಗಳಲ್ಲಿದೆ. ಮುಂದಿನ ಸುಗ್ಗಿಯ ತನಕ ಆ ಮೊಲ ಅಲ್ಲಿಯೇ ಇರುತ್ತದೆ. ಗಾಳಿ ಬೀಸಿ, ಪೈರು ಅಲೆಅಲೆಯಾಗಿ ಓಡಿಹೋಗುವಂತೆ ಕಾಣುವಾಗ ಕುದುರೆ ಓಡು ತ್ತಿದೆ ಎಂದೂ, ಪೈರು ದಟ್ಟವಾಗಿರುವೆಡೆ ಗೂಳಿ ಮಲಗಿದೆ ಎಂದೂ ಪೂರ್ವ ಪ್ರಷ್ಯಾದ ಜನ ಹೇಳುತ್ತಾರೆ. ಕ್ರಿಸ್‌ಮಸ್ ಹಬ್ಬದ ಹಿಂದಿನ ರಾತ್ರಿ ಕೊನೆಯ ಪೈರಿನ ಗೋಧಿ ತಂದು, ಹಂದಿಯ ಆಕಾರದಲ್ಲಿ ರೊಟ್ಟಿಮಾಡಿ, ಹಬ್ಬ ಮುಗಿಯುವ ತನಕ ಮೇಜಿನಮೇಲಿಟ್ಟುಕೊಳ್ಳುವ ಸಂಪ್ರದಾಯ ಸ್ಕಾಂಡಿನೇವಿಯಾ ರಾಷ್ಟ್ರಗಳಲ್ಲಿ ರೂಢಿ ಯಲ್ಲಿದೆ. ಆ ರೊಟ್ಟಿಯನ್ನು ಬಿತ್ತನೆ ಕಾಲದವರೆಗೂ ಇಟ್ಟಿದ್ದು, ಅದರೊಂದು ಭಾಗವನ್ನು ಬೀಜದ ಜತೆ ಬೆರಸುವ, ಮತ್ತೊಂದು ಭಾಗವನ್ನು ಉಳುವವನಿಗೆ ಮತ್ತು ಉಳುವ ಕುದುರೆಗಳಿಗೆ ಕೊಡುವ ಪದ್ಧತಿಯೂ ಉಂಟು. ಅಥೆನ್ಸ್ ನಗರದಲ್ಲಿ ಧಾನ್ಯದೇವತೆ ಯಾದ ಗೂಳಿಯನ್ನು ಬಲಿಕೊಡುತ್ತಿದ್ದುದುಂಟು. ಈ ಬಲಿಯು ಕಣದ ಹಬ್ಬದ ಭಾಗ ವಾಗಿದೆ. ಜೂನ್ ಅಥವಾ ಜುಲೈ ತಿಂಗಳಲ್ಲಿ ಒಕ್ಕಣೆ ಮುಗಿಯುತ್ತಿರುವಾಗ ಡಿಪೋಲಿ ಹಬ್ಬ ನಡೆಯುತ್ತಿತ್ತು. ಜ್ಯೂಸ್ ಪೋಲಿಯಸ್ ಬಲಿಪೀಠದಮೇಲೆ ಬಾರ್ಲಿ ಮತ್ತು ಗೋಧಿ

ಗಳಿಂದ ಮಾಡಿದ ರೊಟ್ಟಿಯನ್ನಿಡುತ್ತಿದ್ದರು. ಗೂಳಿಗಳು ವೇದಿಕೆಯನ್ನು ಪ್ರದಕ್ಷಿಣೆ ಮಾಡಿದನಂತರ, ದೇವರ ಮುಂದಿಟ್ಟಿದ್ದ ನೈವೇದ್ಯವನ್ನು ತಿನ್ನುತ್ತಿದ್ದುವು. ಕನ್ಯೆಯರು ತಂದ ತೀರ್ಥದಿಂದ ಕೊಡಲಿ ಮತ್ತು ಮಚ್ಚುಗಳನ್ನು ತೊಳೆಯಲಾಗುತ್ತಿತ್ತು. ಅನಂತರ ನನ್ನು ಹರಿತಗೊಳಿಸಿ, ಕಟುಕರಿಗೆ ಕೊಡಲಾಗುತ್ತಿತ್ತು. ಅವರಲ್ಲೊಬ್ಬ ಕೊಡಲಿಯಿಂದ, ಗೂಳಿಯ ಹೆಗಲನ್ನು ಕಡಿಯುತ್ತಿದ್ದ; ಮತ್ತೊಬ್ಬ ಮಚ್ಚಿನಿಂದ ಅದರ ಗಂಟಲನ್ನು ಕತ್ತರಿಸುತ್ತಿದ್ದ. ಅನಂತರ ಅವರಿಬ್ಬರೂ ತಂತಮ್ಮ ಆಯುಧಗಳನ್ನು ಬಿಸಾಡಿ ಓಡಿಹೋಗುತ್ತಿದ್ದರು. ಉಳಿದ ಜನ ಸತ್ತ ಗೂಳಿಯ ಮಾಂಸವನ್ನು ಹಂಚಿಕೊಳ್ಳುತ್ತಿದ್ದರು.[1] ಸಸ್ಯಾಧಿಪತಿಗಳಾದ ಡಯೋನಿಸಸ್, ಡಿಮಿಟರ್, ಅಟಿಸ್ ಮೊದಲಾದವರನ್ನು ಗೂಳಿ ಹೋತ ಹಂದಿ ಕುದುರೆಗಳ ರೂಪದಲ್ಲಿಯೂ ಪೂಜಿಸುತ್ತಿದ್ದುದುಂಟು.[2] ಕ್ಷಾಮಡಾಮರಗಳನ್ನು ತಡೆದು, ಬೆಳೆ ಹೆಚ್ಚಿಸಬೇಕೆಂಬುದೇ ಈ ಎಲ್ಲ ಸಾಧನೆಗಳ ಗುರಿಯಾಗಿತ್ತು.

ಬ್ರಹ್ಮ ವಿಷ್ಣು ಮಹೇಶ್ವರ ಮೊದಲಾದ ಶಿಷ್ಟವರ್ಗದ ದೇವರುಗಳ ಕಲ್ಪನೆ ಮೊಳೆಯುವ ಮುನ್ನ ಗ್ರಾಮದೇವತೆಗಳ ಪ್ರಾಬಲ್ಯ ಸಾರ್ವತ್ರಿಕವಾಗಿ ವ್ಯಾಪಿಸಿತ್ತು. ಅವರ ಹೆಸರಿನಲ್ಲಿ ಹರಕೆ ಹೊತ್ತುಕೊಂಡು ಕುರಿ ಆಡುಗಳನ್ನು ದಕ್ಕುಬಿಡುತ್ತಿದ್ದುದುಂಟು. ಗ್ರಾಮದೇವತೆಯ ಹಬ್ಬದ ಸಮಯದಲ್ಲಿ ಆ ಹರಕೆ ಒಪ್ಪಿಸುತ್ತಿದ್ದುದುಂಟು. ದೇವತೆಗೆ ತೃಪ್ತಿಯಾಗಲೆನ್ನುವ ಮತ್ತು ದುಷ್ಟಶಕ್ತಿ ಆ ಕೊಲೆಯ ಮೂಲಕ ಗ್ರಾಮದಿಂದ ಹೊರಗೆ ಹೊರಟುಹೋಗಲೆಂಬ ದೃಷ್ಟಿಯಿಂದ ಬಲಿ ಅವರಿಗೆ ಅವಶ್ಯವಾಗಿ ಕಂಡಿರಬೇಕು. ಗ್ರಾಮದೇವತೆಗಳ ಗುಡಿಯಿರುವುದು ಸಾಮಾನ್ಯವಾಗಿ ಊರಿಂದ ಹೊರಗೆನ್ನುವುದನ್ನು ಗಮನಿಸಬೇಕು. ನರಬಲಿಯೂ ವ್ಯವಸ್ಥಿತವಾಗಿ ನಡೆಯುತ್ತಿದ್ದ ಕಾಲವದು. ಇದೇ ಸಂದರ್ಭದಲ್ಲಿ ಸತಿ ಪದ್ಧತಿಯನ್ನೂ ನೆನೆಯಬಹುದು. ಅದು ಆರ್ಯ ಜನಾಂಗ ಜಗತ್ತಿಗಿತ್ತ ಕೊಡುಗೆ.[3] ಸತ್ತ ಯಜಮಾನನೊಡನೆ ಅವನ ಮೆಚ್ಚುಗೆಯ ಗುಲಾಮರನ್ನು ಹೂಳುತ್ತಿದ್ದುದು ಸೀಸರನ ಕಾಲದ ರೋಮನರಲ್ಲಿದ್ದ ಪದ್ಧತಿ.

ಅಂದಿನ ಅನಾಗರಿಕರಲ್ಲಿ, ಇಂದಿನ ಸಾಮಾನ್ಯ ಮಾನವ ಸಹ ಪ್ರಾಣಿವರ್ಗ ಮತ್ತು ಮನುಷ್ಯವರ್ಗಗಳಲ್ಲಿ ಹೆಚ್ಚು ವ್ಯತ್ಯಾಸವನ್ನು ಕಂಡಿಲ್ಲ. ಹಸು ಕರು ಕುರಿಗಳಿಗೆ ತನ್ನ ಮಾತು ತಿಳಿಯುತ್ತದೆಂದು ಅವನು ಊಹಿಸಿಕೊಂಡಿದ್ದಾನೆ. ನಮ್ಮ ನಾಗರಿಕರು ನಾಯಿಗಳೊಡನೆ, ಸರ್ಕಸ್ಸಿನ ಯಜಮಾನ ಹುಲಿ ಆನೆಗಳೊಡನೆ ಮಾತಾಡುವಾಗ ಈ ಊಹೆ ಭ್ರಾಂತಿಯಂತೆ ತೋರುವುದಿಲ್ಲ. ದೇಹಾಂತರ ಪ್ರವೇಶವಾದವನ್ನೊಪ್ಪುವ ಜನ ಪ್ರಾಣಿ

1 ಚನ್ನಪಟ್ಟಣ ತಾಲ್ಲೂಕಿನ ಇಟ್ಟೂರಿನಲ್ಲಿ ಒಂದಾನೊಂದು ಕಾಲದಲ್ಲಿ ಕೋಣನ ಮಾರಿ ಜಾತ್ರೆ ನಡೆದು, ಬಹಳ ಭಯಂಕರವಾಗಿ ಕೊಲೆ ನಡೆಯುತ್ತಿತ್ತು.

2 ಹೆಚ್ಚಿನ ವಿವರಗಳಿಗೆ ಜೆ. ಜಿ. ಫ್ರೇಜರ್ ಅವರ *The Golden Bough* ಗ್ರಂಥದಲ್ಲಿ ಬರುವ 'Ancient Deities of Vegetation as Animals' ಎಂಬ ಪ್ರಕರಣವನ್ನು ನೋಡಬಹುದು.

3 Widow-sacrifice is found in various regions of the world under a low state of civilisation, and this fits with the hypothesis of its having belonged to the Aryan race while yet in an early and barbarous condition.

ಗಳಲ್ಲಿಯೂ ಆತ್ಮವಿದೆ, ಅದು ತನ್ನ ಪೂರ್ವಜರ ಆತ್ಮವಿದ್ದಿರಬೇಕೆಂದು ನಂಬಿದರೆ ಆಶ್ಚರ್ಯವಾಗುವುದಿಲ್ಲ. ನಾಯಿ ಸತ್ತು ಪರಲೋಕಕ್ಕೆ ಹೋದಾಗಲೂ ತನ್ನ ಯಜಮಾನನಿಗೆ ಪರೋಕ್ಷ ರಕ್ಷೆ ನೀಡುತ್ತದೆಂಬ ಭ್ರಮೆಯೂ ಕೆಲವರಲ್ಲಿತ್ತು. ಮಂತ್ರವಾದಿ ಆರೋಗ್ಯ ಸಂಪನ್ನವಾದ ಮೊಲ, ಜಿಂಕೆ ಅಥವಾ ಮಗುವಿನ ಆತ್ಮವನ್ನು ರೋಗಿಯ ಆತ್ಮಕ್ಕೆ ವರ್ಗಾಯಿಸಿ, ರೋಗವನ್ನು ಗುಣಪಡಿಸಬಹುದೆಂಬ ನಂಬಿಕೆ ಗ್ರೀನ್‌ಲ್ಯಾಂಡಿನ ಜನರಲ್ಲಿತ್ತು. ತೆಂಕಣದ ಬೆಟ್ಟವೊಂದರಲ್ಲಿ ವಾಸಮಾಡುವ ಮನುಷ್ಯರ ಮತ್ತು ಪ್ರಾಣಿಗಳ ಭೂತಗಳು ಆಗಾಗ್ಗೆ ಸಮಾಧಿಸ್ಥಳಗಳಲ್ಲಿ ಸಂಚಾರಮಾಡುತ್ತವೆಂದು ಮಡಗಾಸ್ಕರ್ ಜನರ ತಿಳಿವಳಿಕೆ. ಮುಂದಿನ ಲೋಕದಲ್ಲಿ ದೊರೆಗೆ ಸೇವೆ ಸಲ್ಲಿಸಲೆಂಬ ದೃಷ್ಟಿಯಿಂದ ಕೆಲವರು ಕಾಡುಪ್ರಾಣಿಗಳನ್ನು ಅವನ ಶವದೊಡನೆ ಚಿತಾಗ್ನಿಯಲ್ಲಿ ಬೇಳ್ವೆಮಾಡುತ್ತಾರಂತೆ. ಸತ್ತವನ ಆತ್ಮ ಸವಾರಿಮಾಡಲನುಕೂಲವಾಗುವಂತೆ ಸಿಯುಕ್ಸ್ ಜನ ಅವನ ಸಮಾಧಿಯ ಮೇಲೆ ಒಂಟೆಯನ್ನು ಬಲಿಕೊಡುತ್ತಾರಂತೆ.

ಜನ್ಮಾಂತರ ಸಂಬಂಧವಾದ ನಂಬಿಕೆ ಭಾರತೀಯರಿಗೆ ಮಾತ್ರ ಮೀಸಲಾದುದಲ್ಲ. ಅದು ಎಲ್ಲ ಪ್ರಾಚೀನ ಜನಾಂಗಗಳ ಸೃಷ್ಟಿಯಾಗಿತ್ತು. ಆತ್ಮದ ಯಾತ್ರೆ ಅಮೀಬಿಯಲ್ಲಿ ಪ್ರಾರಂಭವಾಗಿ ಮಾನವನಲ್ಲಿ ಮುಕ್ತಾಯವಾಗುತ್ತದೆ. ಅಥವಾ ಕರ್ಮಶೇಷವಿರುವ ಮನುಷ್ಯ ಪ್ರಾಣಿಯಾಗಿ ಜನಿಸಿ, ಅದು ಸತ್ತ ಮೇಲೆ ಮತ್ತೆ ಮಾನವನಾಗಿ ಹುಟ್ಟುತ್ತಾನೆಂದು ಭಾರತೀಯರು ಇಂದಿಗೂ ತಿಳಿದುಕೊಂಡಿದ್ದಾರೆ. ಸತ್ತವರ ಪ್ರೇತ ಕರಡಿಗಳ ದೇಹದೊಳಗೆ ಪ್ರವೇಶಿಸುತ್ತದೆನ್ನುವುದು ವಾಯುವ್ಯ ಕ್ಯಾಲಿಫೋರ್ನಿಯಾದ ಜನರ ಭಾವನೆ. ಬ್ರೆಜಿಲ್ ದೇಶದ ಕೆಲವು ಬುಡಕಟ್ಟುಗಳ ಪ್ರಕಾರ ಧೀರರ ಆತ್ಮ ಪಕ್ಷಿ ದೇಹವನ್ನು ಪ್ರವೇಶಿಸಿ, ರುಚಿಕರವಾದ ಹಣ್ಣುಗಳನ್ನು ಭಕ್ಷಿಸುತ್ತವೆಂದೂ. ಹೇಡಿಗಳ ಆತ್ಮ ಹಾವು ಹಲ್ಲಿಗಳ ದೇಹವನ್ನು ಪ್ರವೇಶಿಸುತ್ತವೆಂದೂ ಪ್ರತೀತಿಯುಂಟು. ಕೆಟ್ಟವರು ನರಿಗಳಾಗುತ್ತಾರೆಂದು, ಒಳ್ಳೆಯವರು ಹಾವುಗಳಾಗುತ್ತಾರೆಂದು ಆಫ್ರಿಕಾದ ಕೆಲವು ಬುಡಕಟ್ಟುಗಳ ತಿಳಿವಳಿಕೆ.

ಹೆಂಡತಿ ಗಂಡನನ್ನು ಎತ್ತು ಅಥವಾ ಕೋಣನನ್ನಾಗಿ ಪರಿವರ್ತಿಸುವಂಥ ಸನ್ನಿವೇಶಗಳು ಬರುವ ಕಥೆಗಳು ಸೋಮದೇವನ ಕಥಾ ಸರಿತ್ಸಾಗರದಲ್ಲಿ ಸಿಗುತ್ತವೆ. ಮಾರೀಚ ಜಿಂಕೆಯ ರೂಪತಾಳಿದ ಪ್ರಸಂಗ ರಾಮಾಯಣದಲ್ಲಿ ಬರುತ್ತದೆ. ಪ್ರಾಣಿಗಳು ಸಹ ಬೇರೆ ಬೇರೆ ರೂಪಗಳನ್ನು ತಾಳುವುದುಂಟು. ಇಲಿ ಬೆಕ್ಕಾಗುವ, ಜಿಂಕೆ ಭೂತವಾಗುವ ವಿಷಯ ಕೆಲವು ಬಂಗಾಳಿ ಕಥೆಗಳಲ್ಲಿ ಬರುತ್ತವೆ.

ಪ್ರಾಣಿ ಮಾನವರ ನಡುವೆ ದೇಹಾಂತರ ಪ್ರವೇಶ ಸಾಧ್ಯವಾಗುವುದಾದರೆ, ಮನುಷ್ಯನ ರೋಗನಿವಾರಣೆಗೆ ಪ್ರಾಣಿಗಳನ್ನು ಬಳಸಿಕೊಳ್ಳುವುದು ಸ್ವಾಭಾವಿಕವಾಗುತ್ತದೆ. ಪಶ್ಚಿಮ ಆಫ್ರಿಕಾದ ಮಂತ್ರವಾದಿ ರೋಗಿಯ ಕಾಯಿಲೆಯನ್ನು ಕೋಳಿಗೆ ವರ್ಗಾಯಿಸುತ್ತಾನೆ. ಬೇರೆ ಯಾರಾದರೂ ಆ ಕೋಳಿಯನ್ನು ಹಿಡಿದುಕೊಂಡದ್ದಾದರೆ, ಅವನಿಗೆ ಆ ರೋಗ ತಗಲುತ್ತದೆ. ಸತ್ತ ಮನುಷ್ಯನ ಅಥವಾ ಪ್ರಾಣಿಯ ಮಾಂಸ

ಅಥವಾ ಉಗುರಿಂದ ತಾಯಿತಿಯನ್ನು ಮಾಡಿಸಿ ಕಟ್ಟಿಕೊಂಡರೆ ಅರಿಷ್ಟಗಳು ತೊಲಗುತ್ತವೆ. ಭಾರತದಲ್ಲಿ ಈಗಲೂ ಕೆಲವರು ಹುಲಿಯ ಉಗುರಿಂದ ಮಾಡಿದ ಉಂಗುರವನ್ನು ಯಂತ್ರದಂತೆ ಧರಿಸುವುದುಂಟು.

ಕೆಲವು ಪ್ರಾಣಿಗಳಿಗೆ ಮುಂದಿನ ಅಪಾಯಗಳನ್ನು ಗ್ರಹಿಸುವ ಸಾಮರ್ಥ್ಯವಿದೆಯಂತೆ. ಇಲಿಗಳು ಮುಳುಗುವ ದೋಣಿ ಅಥವಾ ಹಡಗಿನಿಂದ ಮೊದಲೇ ಪರಾರಿಯಾಗುತ್ತವಂತೆ. ಮನುಷ್ಯನ ಭವಿಷ್ಯವನ್ನು ಸೂಚಿಸುವ ಸಲುವಾಗಿ ಕೆಲವು ಪಕ್ಷಿಗಳು ಎಡದಿಂದ ಬಲಕ್ಕೋ ಬಲದಿಂದ ಎಡಕ್ಕೋ ಹಾರಾಡುವುದುಂಟು. ಇದ್ದಕ್ಕಿದ್ದಂತೆ ಕಾಗೆಗಳು ಕೂಗಿಕೊಂಡರೆ ಕೆಟ್ಟ ಸುದ್ದಿ ಬರುತ್ತದೆಂದು ಜನ ನಿರೀಕ್ಷಿಸುತ್ತಾರೆ. ಭೂತ ಪ್ರೇತಗಳ ಸಂಚಾರ ನಾಯಿಗಳ ಕಣ್ಣಿಗೆ ಬೀಳುವಾಗ ಅವು ವಿಲಕ್ಷಣವಾಗಿ ಕೂಗಿಕೊಳ್ಳುತ್ತವೆಂದು ಹೇಳುತ್ತಾರೆ. ಆಗಾಗ್ಗೆ ಅವು ದನಗಳ ಕಣ್ಣಿಗೂ ಕಾಣಿಸಿಕೊಳ್ಳುತ್ತವಂತೆ. ಮನುಷ್ಯನಿಗೊದಗುವ ಅಪಾಯಗಳ ಬಗ್ಗೆ ಮುನ್ನೆಚ್ಚರಿಕೆ ನೀಡುವ ಪಕ್ಷಿಗಳು ಜಾನಪದ ಕಥೆಗಳಲ್ಲಿಯೂ ಧಾರಾಳವಾಗಿ ಸಿಗುತ್ತವೆ.

ಸಮಾಜದಿಂದ ಬಹಿಷ್ಕೃತವಾದ, ಮತ್ತು ಬಾಂಧವರ ತಿರಸ್ಕಾರಕ್ಕೆ ಗುರಿಯಾದ ಹೆಂಗಸರು ಮತ್ತು ಮಕ್ಕಳು ಪ್ರಾಣಿ ಪಕ್ಷಿಗಳಿಂದ ರಕ್ಷಣೆಪಡೆದಿರುವ ವಿಷಯ ಪುರಾಣೇತಿಹಾಸಗಳ ವಸ್ತುವಾಗಿದೆ. ಚಂಡಾಲರು ಹಸುಳೆ ಚಂದ್ರಹಾಸನ ಬೆರಳು ಕತ್ತರಿಸಿಕೊಂಡು ಕಾಡಿನಲ್ಲಿ ಬಿಟ್ಟುಬಂದಾಗ, ಲಕ್ಷ್ಮಣ ಅರಣ್ಯದಲ್ಲಿ ಬಿಟ್ಟುಹೋದ ನಂತರ ತುಂಬು ಬಸಿರಿ ಸೀತೆ ಮೂರ್ಛೆಗೊಂಡಾಗ ಪಶುಪಕ್ಷಿಗಳು ಅವಳನ್ನು ಉಪಚರಿಸಿದ ಕತೆ ಸರ್ವವೇದ್ಯವಾದದ್ದು. ಅಂತೆಯೇ ಮೇನಕೆ ತೊರೆದುಹೋದ ಕೂಸನ್ನು ಸಾಕಿದ್ದು ಶಕುಂತಲಾ ಪಕ್ಷಿಗಳು. ರೋಮ್ ನಗರದ ನಿರ್ಮಾಪಕರಾದ ರೊಮುಲಸ್ ಮತ್ತು ರೀಮಸ್ ಹೆಣ್ಣು ತೋಳದ ಹಾಲುಕುಡಿದು, ಕುರುಬನೊಬ್ಬನ ತೆಕ್ಕೆಯಲ್ಲಿ ಬೆಳೆದದ್ದೂ ಹೀಗೆಯೇ. ಕುಲಲಾಂಛನ ಸಂಬಂಧವಾದ ನಂಬಿಕೆಗಳು ಇಂಥ ಕತೆಗಳ ಹಿನ್ನೆಲೆಯಲ್ಲಿರಬಹುದೆಂದು ಕೆಲವು ವಿದ್ವಾಂಸರು ತರ್ಕಿಸುತ್ತಾರೆ. ಆದರೆ ಈ ತರ್ಕ ಎಲ್ಲೆಡೆಗೂ ಅನ್ವಯಿಸುತ್ತದೆಂದು ಹೇಳಲಾಗದು.

ಮನುಷ್ಯನಂತೆಯೇ ಪ್ರಾಣಿಗಳಲ್ಲಿಯೂ ಭಾವಕೋಶವಿದೆ, ಅವನೊಡನಾಡಿಗಳಾಗಿ ಬೆಳೆದ ಪ್ರಾಣಿಗಳಲ್ಲಿ ವಾತ್ಸಲ್ಯನಿಷ್ಠೆ ಹಾಗೂ ಪ್ರಾಮಾಣಿಕತೆಗಳು ತನ್ನಲ್ಲಿರುವುದಕ್ಕಿಂತ ಅಧಿಕ ಪ್ರಮಾಣದಲ್ಲಿವೆ ಎನ್ನುವ ವಿಷಯ ಬಹು ಹಿಂದೆಯೇ ಅವನಿಗರಿವಾಗಿರಬೇಕು. ದನಕರುಗಳಿಗೆ ಸಾಕಿದವನ ದನಿ ಮಾತ್ರವಲ್ಲ, ಬೆವರಿನ ವಾಸನೆಯೂ ತಿಳಿಯುತ್ತದೆ. ಅವನ ಆಜ್ಞೆಯಂತೆ ಅವು ವರ್ತಿಸುತ್ತವೆ. ಆಡು ಕುರಿಗಳಂತೂ ಅವನೊಡನೆ ನೀರಿಗಲ್ಲ, ಬೆಂಕಿಗೆ ಬೀಳಲಿಕ್ಕೂ ತಯಾರು. ಕೃತಜ್ಞತೆಯಲ್ಲಿ ಮನುಷ್ಯ ಸಹ ನಾಯಿಯನ್ನು ಮೀರಿಸಲಾರ. ಪಳಗಿದ ಕಾಡುಮೃಗಗಳೂ ಅವನ ಇಚ್ಛೆಯಂತೆ ವರ್ತಿಸುತ್ತವೆ. ಇಂಥಾ ವರಲ್ಲಿ, ಅವು ತನಗೆ ಸಹಾಯವಾದವೆಂದು, ಪೂರ್ವಜನ್ಮದ ಮಿತ್ರರೇ ಸಾಂಪ್ರತಕಾಲದಲ್ಲಿ ಪ್ರಾಣಿಜನ್ಮ ಎತ್ತಿರಬೇಕೆಂದೂ, ತನಗೂ ಅವುಗಳಿಗೂ ಯಾವುದೋ ಬಾಂಧವ್ಯ ಎಂದೋ

ಇದ್ದಿರಬೇಕೆಂದೂ, ಅವುಗಳ ಸುಖದುಃಖ ತನ್ನ ಸುಖದುಃಖಗಳೆಂದೂ ಅವನು ತಿಳಿಯುತ್ತಾನೆ; ಅವುಗಳಿಗೆ ರೋಗರುಜಿನಗಳಡಸಿದಾಗ, ಕುಟುಂಬಕ್ಕೆ ಪ್ರಾಪ್ತವಾದ ಅರಿಷ್ಟವೆಂದು ತಿಳಿದು ಇಲಾಜು ಮಾಡಿಸುತ್ತಾನೆ; ಅಷ್ಟೇ ಅಲ್ಲ, ತನಗೆ ತಿಳಿದಿರುವ ದೇವತೆಗಳಿಗೆಲ್ಲ ಹರಕೆ ಕಟ್ಟಿಕೊಳ್ಳುತ್ತಾನೆ. ಅವು ಸತ್ತರಾದರೆ ತನ್ನ ಕುಟುಂಬಕ್ಕೆ ಏನೋ ಅಪಾಯ ಕಾದಿರಬೇಕೆಂದು ಜ್ಯೋತಿಷಿಯ ಬಳಿ ಓಡಿಹೋಗುತ್ತಾನೆ. ಸಾಧುಸಂತರು ವಾಸಮಾಡುವ ಅರಣ್ಯದಲ್ಲಿ ದುಷ್ಟಮೃಗಗಳು ತಮ್ಮ ಕ್ರೌರ್ಯವನ್ನುಳಿದು ಸ್ನೇಹದಿಂದ ವರ್ತಿಸುತ್ತವೆನ್ನುವ ವಿಚಾರ ಒಂದಾನೊಂದು ಕಾಲದಲ್ಲಿ ಜಗತ್ತಿನಲ್ಲೆಲ್ಲ ಪ್ರಸಿದ್ಧವಾಗಿತ್ತು.

ಪ್ರಾಣಿಗಳಿಗೆ ಸಂಬಂಧಿಸಿದ ನಂಬಿಕೆಗಳು ಒಂದೊಂದು ಪ್ರದೇಶದಲ್ಲಿಯೂ ಅಪಾರವಾಗಿವೆ. ಭೌಗೋಲಿಕ ಸಂಗತಿಗಳು, ಆರ್ಥಿಕ ಕಾರಣಗಳು ಹಾಗೂ ಅಲ್ಲಲ್ಲಿಯ ಜನರ ಮನೋಧರ್ಮ, ಸಂಸ್ಕಾರಗಳು ನಂಬಿಕೆಗಳ ಉಗಮವನ್ನು ನಿರ್ಧರಿಸುವುದರಿಂದ, ಅವು ದೇಶದಿಂದ ದೇಶಕ್ಕೆ ವ್ಯತ್ಯಾಸವಾಗಬಹುದು. ಒಂದು ಕಡೆ ಬೆಕ್ಕು ಅಡ್ಡವಾಗುವುದು ಅನಿಷ್ಟವೆಂದು ತಿಳಿದರೆ, ಮತ್ತೊಂದು ಕಡೆ ಅದೇ ಇಷ್ಟವಾಗಿ ಕಾಣಬಹುದು. ಯಾವುದಾದರೂ ಪ್ರಾಣಿ ಅನ್ಯದೇಶದಿಂದ ಬಂದದ್ದಾದರೆ, ಅದಕ್ಕೆ ಸಂಬಂಧಿಸಿದ ನಂಬಿಕೆಗಳೂ ಅದನ್ನು ಹಿಂಬಾಲಿಸಬಹುದು. ಯೂರೋಪಿನಲ್ಲಿ ನವಿಲುಗರಿ ದುರದೃಷ್ಟದ ಸಂಕೇತ. ಅದು ಆ ಭಾಗಕ್ಕೆ ಪರಿಚಯವಾದದ್ದು ಹೋಮರನನಂತರ. ಆದ್ದರಿಂದ ಆ ನಂಬಿಕೆ ಇಂಡಿಯಾದಿಂದ ಅಥವಾ ಇತರ ಪೌರ್ವಾತ್ಯ ರಾಷ್ಟ್ರಗಳಿಂದ ಆಮದಾಗಿರಬೇಕೆಂದು ತಜ್ಞರು ಅಭಿಪ್ರಾಯಪಡುತ್ತಾರೆ.[1] ಇಂತೆಯೇ ನರಿಗೆ ಸಂಬಂಧಿಸಿದ ಕತೆಗಳು ಇಂಡಿಯಾದಿಂದ ಪಾಶ್ಚಾತ್ಯ ರಾಷ್ಟ್ರಗಳಿಗೆ ಪ್ರಯಾಣಮಾಡಿರಬೇಕು. ಸಿಂಹದ ಕತೆಯೂ ಅಷ್ಟೇ. ಗ್ರೀಸ್ ದೇಶದಲ್ಲಿ ವೀರಯುಗ ಮುಕ್ತಾಯಗೊಳ್ಳುವ ವೇಳೆಗೆ ಅದು ಯೂರೋಪುಖಂಡದಿಂದ ಕಣ್ಮರೆಯಾಗಿತ್ತು. ಆನಂತರ ಊಹೆ ಮತ್ತು ಕೇಳಿಕೆಗಳ ಆಧಾರದಮೇಲೆ ಆ ಪ್ರಾಣಿಯ ಬಗ್ಗೆ ಅನೇಕ ಕಥೆ ಐತಿಹ್ಯಗಳು ಹುಟ್ಟಿಕೊಂಡುವು.

ಕೆಲವು ಕಡೆ ದುಷ್ಟ ಪ್ರಾಣಿಗಳನ್ನು ನಿಜನಾಮಗಳಿಂದ ಕರೆಯುವುದಿಲ್ಲ. ಹಾಗೆ ಕರೆಯುವುದರಿಂದ ಕೇಡುಕಾಗಬಹುದೆಂಬ ಹೆದರಿಕೆ ಇರುತ್ತದೆ. ಇದು ಮನೋವಿಜ್ಞಾನಕ್ಕೆ ಸಂಬಂಧಿಸಿದ ಸಂಗತಿ. ಹಾವನ್ನು ನಾಗಪ್ಪ ಅಥವಾ ಮುನಿಯಪ್ಪ ಎಂದು ಕರೆಯುವುದು ಕೆಲವು ಕಡೆಯ ರೂಢಿ. ದನಕರುಗಳನ್ನು ಹಾವೋ ಚೇಳೋ ಕಡಿದರೆ 'ಸತ್ತಿ' ಅಥವಾ 'ಬಳ್ಳಿ' ಮುಟ್ಟಿತೆನ್ನುತ್ತಾರೆ. ಮಧ್ಯ ಯೂರೋಪು ಮತ್ತು ಸ್ಕಾಂಡಿನೇವಿಯಾ ದೇಶಗಳಲ್ಲಿ ತೋಳವನ್ನು 'ತೋಳ' (wolf) ಎಂದು ಕರೆಯದೆ 'ಮೌನಿ' (Silent one) ಎಂದೋ 'ಕಾಡೋಡಿ' (wood-runner) ಎಂದೋ ಸಂಬೋಧಿಸುತ್ತಾರೆ. ರಷ್ಯನ್ ಭಾಷೆಯಲ್ಲಿ ಕರಡಿ ಎನ್ನುವುದಕ್ಕೆ ಸಂವಾದಿ ಪದ 'ಜೇನ್ತಿನಿ' (honey-eater) ಎಂದು. ಕಠಿನವೂ, ಅನಿಷ್ಟವೂ, ಅಸಹ್ಯವೂ ಆದ ಸಂಗತಿಗಳನ್ನು ಕೋಮಲವಾದ ಭಾಷೆಯಲ್ಲಿ

[1] *The Science of Folklore* by A. H. Krappe, p. 249

ಹೇಳುವ ಉಕ್ತಿಸಂಪ್ರದಾಯ ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಇರುವಂಥದು. ಇದಕ್ಕೆ 'ಸೌಮ್ಯೋಕ್ತಿ' ಎಂದು ಹೆಸರು.

ಫ್ರೇಜರ್ ಪ್ರಕಾರ ಪೂರ್ವಕಾಲದ ಪ್ರಾಣಿಪೂಜೆಯಲ್ಲಿ ಎರಡು ವಿಧಾನಗಳಿವೆ. ಪೂಜಾರ್ಹವಾದ ಕೆಲವು ಪ್ರಾಣಿಗಳನ್ನು ಕೊಲ್ಲುವುದೂ ಇಲ್ಲ, ತಿನ್ನುವುದೂ ಇಲ್ಲ; ಕೊಂದು ತಿನ್ನುವಂಥ ಮತ್ತೆ ಕೆಲವು ಪ್ರಾಣಿಗಳನ್ನು ಪೂಜಿಸುವುದುಂಟು. ತನಗೆ ಅಪಾಯಕಾರಿಯಾಗದೆ, ಹಲವು ರೀತಿಗಳಲ್ಲಿ ನೆರವಾಗುವುದರಿಂದ ಕೆಲವನ್ನು ಮನುಷ್ಯ ಪೂಜಿಸಿದರೆ, ಮಾಂಸ ಚರ್ಮ ಮೊದಲಾದ ಪದಾರ್ಥಗಳನ್ನು ನೀಡಿ ತನ್ನ ಬದುಕಿಗೆ ಲಾಭದಾಯಕವಾಗುವುದರಿಂದ ಮತ್ತೆ ಕೆಲವನ್ನು ಪೂಜಿಸುತ್ತಾನೆ. ಎರಡು ವಿಧಾನದ ಪೂಜೆಗಳಿಗೂ ಅವನಿಗೊದಗುವ ಪ್ರಯೋಜನವೇ ಮುಖ್ಯ. ಭಾರತೀಯರು ಗೋವನ್ನು ತಿನ್ನುವುದಿಲ್ಲ. ಆದರೆ ಅದರಿಂದ ಬಹುವಿಧ ಪ್ರಯೋಜನ ಅವರಿಗಾಗುತ್ತದೆ. ಆದ್ದರಿಂದ ಅದು ಅವರಿಗೆ ಪವಿತ್ರ ವಸ್ತುವಾಗಿದೆ. ಆಡು ಕುರಿಗಳಿಂದ ಉಣ್ಣೆ ಚರ್ಮ ಮಾಂಸ ಸಿಗುತ್ತದೆ. ಆದ್ದರಿಂದ ಅವರಿಗೆ ಅವುಗಳಲ್ಲಿ ಗೌರವ. ಉತ್ತರ ಅಮೆರಿಕೆಯ ಇಂಡಿಯನ್ನರು ಕುಲಲಾಂಛನ ಪ್ರಾಯದ ಪ್ರಾಣಿಗಳನ್ನು ಕೊಲ್ಲುವುದಿಲ್ಲ, ಗೌರವಿಸುತ್ತಾರೆ; ಅಂತೆಯೇ ವಿನಾಸು ಕುರಿಗಳನ್ನು ತಿಂದರೂ ಅವರು ಅವುಗಳನ್ನು ಪವಿತ್ರ ಭಾವನೆಯಿಂದ ಕಾಣುತ್ತಾರೆ. ಜಿಬ್ಹಿಲ್ಲ ಮಾಡದೆ ಅಂದರೆ ವಿಧ್ಯುಕ್ತವಾಗಿ ಕೊಲ್ಲದೆ ಮುಸ್ಲಿಮರು ಪ್ರಾಣಿ ಮಾಂಸವನ್ನು ತಿನ್ನುವುದಿಲ್ಲವೆಂಬ ಸಂಗತಿಯಿಂದಲೇ ಅವರು ಪ್ರಾಣಿಗಳ ಬಗೆಗೆ ತಾಳಿರುವ ಪವಿತ್ರ ಭಾವನೆ ಅಭಿವ್ಯಕ್ತಗೊಳ್ಳುತ್ತದೆ. ನೀಲಗಿರಿಯ ತೊದವರು ಮೊದಲನೆಯ ಗುಂಪಿಗೆ ಸೇರಿದ ಪ್ರಾಣಿಯನ್ನು ವರ್ಷಕ್ಕೊಮ್ಮೆ ಮಾತ್ರ ಕೇವಲ ಶಾಸ್ತ್ರಕ್ಕೋಸ್ಕರ ಕೊಂದು ತಿನ್ನುವುದುಂಟು. ಅವರಿಗೆ ಎಮ್ಮೆ ಪವಿತ್ರ ವಸ್ತು. ಆದ್ದರಿಂದ ಅದರ ಮಾಂಸ ತಿನ್ನುವುದಿಲ್ಲ. ಒಂದೇ ಒಂದು ಸಾರಿ ಮಾತ್ರ ಅವರು ಎಳಗರುವನ್ನು ಕಾಡಿಗೊಯ್ದು ಪವಿತ್ರ ವೃಕ್ಷದ ದೊಣ್ಣೆಯಿಂದ ಹೊಡೆದು ಸಾಯಿಸುತ್ತಾರೆ. ಅನಂತರ ಅದರ ಮಾಂಸವನ್ನು ಸುಟ್ಟು ತಿನ್ನುತ್ತಾರೆ. ಅದನ್ನು ಹೆಂಗಸರು ತಿನ್ನುವಂತಿಲ್ಲ.[1] ಮಧ್ಯ ಆಫ್ರಿಕೆಯ ಮೊರು (Moru) ಬುಡಕಟ್ಟಿನ ಜನರಲ್ಲಿಯೂ ಹೆಚ್ಚುಕಡಮೆ ಇಂಥವೇ ಪದ್ಧತಿ ಜಾರಿಯಲ್ಲಿದೆಯೆಂದು ಹೇಳಲಾಗಿದೆ.

ಈ ವಿಧಾನಗಳು ಭಾರತೀಯರಲ್ಲಿ ಹೇಗೆ ಆಚರಣೆಯಲ್ಲಿವೆ ಎನ್ನುವುದನ್ನರಿಯುವ ಸಲುವಾಗಿ ಕೆಲವು ನಿದರ್ಶನಗಳನ್ನು ಪರಿಶೀಲಿಸಬಹುದು. ಕುದುರೆ ಶಕ್ತಿಗೆ ಪ್ರತೀಕವಾದ ಪ್ರಾಣಿಯಷ್ಟೆ. ಅದು ವ್ಯವಸಾಯಕ್ಕೆ ಮಾತ್ರವಲ್ಲ, ಅದಕ್ಕಿಂತ ಮಿಗಿಲಾಗಿ ರಣರಂಗದಲ್ಲಿ ತುಂಬ ಉಪಯುಕ್ತವಾದ ಪ್ರಾಣಿ. ಅದು ವಿಜಯದ ಸಂಕೇತವೂ ಅಹುದು. ಅಶ್ವಮೇಧಯಾಗಾಚರಣೆಯ ಹಕ್ಕು ಲೋಕವಿಜಯಿಗಳಿಗೆ ಮಾತ್ರ ಮುಡಿಪಾಗಿತ್ತು. ಆ ಯಾಗಕ್ಕೆ ಕಪ್ಪು ಕಿವಿಯ ಕುದುರೆ ಬೇಕಾಗಿತ್ತಂತೆ. ಇಬ್ಬರು ಅಸುರರು ಕದ್ದೊಯ್ದು ವೇದವನ್ನು ಸಂರಕ್ಷಿಸುವ ಸಲುವಾಗಿ ವಿಷ್ಣು ಹಯಗ್ರೀವ ರೂಪವನ್ನು ತಾಳಿದನಂತೆ.

[1] *The Golden Bough* by J. G. Frazer, p. 700–701

ಅವನು ಕಲ್ಕ್ಯವತಾರವನ್ನು ತಾಳುವಾಗ ಬಿಳಿ ಕುದುರೆಯನ್ನೇರಿ ಬರುತ್ತಾನಂತೆ. ಬುದ್ಧನಿಗೆ ಬಹು ಪ್ರಿಯವಾಗಿದ್ದ ಪ್ರಾಣಿಯೊಂದರೆ ಕಂಥಕ ಎಂಬ ಕುದುರೆ. ಬಿಜಾಪುರದ ಆಲಿ ಸಯ್ಯೀದ್ ಎಂಬವನಿಗೆ ಕುದುರೆಯ ಸಂತ ಎಂಬ ಹೆಸರಿತ್ತಂತೆ. ಅವನ ಕುದುರೆಯನ್ನು ಅವನ ಸಮಾಧಿಯ ಬಳಿಯೇ ಹೂಳಲಾಯಿತು. ಕುದುರೆಯಿದ್ದ ಕಡೆ ಅದರ ಬಾಯಿ ಜೊಲ್ಲಿಗಂಜಿ ಭೂತಪ್ರೇತಾದಿ ಶಕ್ತಿಗಳು ಸುಳಿಯುವುದಿಲ್ಲವೆಂಬ ನಂಬಿಕೆ ದಖ್ಖನಿನ ಕೆಲವು ಭಾಗಗಳಲ್ಲಿ ಚಾಲ್ತಿಯಲ್ಲಿದೆ. ನಾಟಿಕಾಲದಲ್ಲಿ ಕುದುರೆಯೇರಿ ಯಾರಾದರೂ ಕಬ್ಬಿನ ಗದ್ದೆಗೆ ಬಂದದ್ದಾದರೆ ಶುಭವಾಗುತ್ತದೆಂದು ಉತ್ತರ ಭಾರತದ ಜನ ನಂಬಿದ್ದಾರೆ. ರಾಜಾಸ್ಥಾನ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಹಿಂದೆ ದಸರೆಯ ಸಮಯದಲ್ಲಿ ಪಟ್ಟದ ಕುದುರೆಗೆ ಪೂಜೆ ಸಲ್ಲುತ್ತಿತ್ತು. ಅದೇ ಸಮಯದಲ್ಲಿ ದಕ್ಷಿಣದ ಕೆಲವು ಭಾಗಗಳಲ್ಲಿ ಮಣ್ಣಿನ ಕುದುರೆಯನ್ನು ಪೂಜಿಸಿ, ಮೆರವಣಿಗೆಯಲ್ಲಿ ಕೊಂಡೊಯ್ದು, ಊರ ಹೊರಗೆ ನಿಲ್ಲಿಸುವುದುಂಟು.

ಕುದುರೆಯ ಜತೆಯಲ್ಲಿ ಕತ್ತೆಯ ನೆನಪು ಬರುವುದು ಸಹಜ. ಮಕ್ಕಳು ಹುಟ್ಟಿದ ಕೂಡಲೇ ಕತ್ತೆ ಹಾಲು ಕುಡಿಸುವುದು ಕೆಲವು ಹಳ್ಳಿಗಳಲ್ಲಿ ಈಗಲೂ ರೂಢಿಯಲ್ಲಿದೆ. ಮಗುವಿನ ಆರೋಗ್ಯ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಅದು ಅವಶ್ಯವೆನ್ನುತ್ತಾರೆ. ಏಸುವನ್ನು ಹೊತ್ತುದರಿಂದ ಕತ್ತೆ ಪವಿತ್ರ ಪ್ರಾಣಿ ಎಂದು ಕೆಲವರ ಭಾವನೆ. ನಾಯಿಕೆಮ್ಮಿಗೆ ಕತ್ತೆಯ ಭುಜದ ಕೂದಲಿಂದ ಮಾಟಗಾರಿಕೆ ಮಾಡಿಸಿದರೆ ವಾಸಿಯಾಗುತ್ತದೆಂಬ ನಂಬಿಕೆ ಆಂಗ್ಲರಲ್ಲಿದೆ. ಮೂರು ಕೂದಲನ್ನು ಮಸ್ಲಿನ್ ಬಟ್ಟೆಯಲ್ಲಿ ಕಟ್ಟಿ ರೋಗಿಯ ಕೊರಳಿಗೆ ಕಟ್ಟಬೇಕು. ರೋಗಿ ಗಂಡಸಾದರೆ ಹೆಣ್ಣುಕತ್ತೆಯ ಕೂದಲೂ, ಹೆಂಗುಸಾದರೆ ಗಂಡುಕತ್ತೆಯ ಕೂದಲೂ ಆವಶ್ಯಕ.[1] ಇಂದ್ರನ ಬಳಿ ವೇಗಗಾಮಿಯಾದ ಕತ್ತೆಯೊಂದಿರುತ್ತಿತ್ತಂತೆ. ಇದರಿಂದ ಕತ್ತೆಯ ಬಗೆಗಿನ ಜಿಗುಪ್ಸೆ ವೇದಗಳ ಕಾಲದಿಂದೀಚೆಗೆ ಬಂದದ್ದೆಂದು ತೋರುತ್ತದೆ. ಭಾಗವತದಲ್ಲಿ ಧೇನುಕ ರಾಕ್ಷಸನ ಕತೆ ಬರುತ್ತದೆ. ರಾಮನಿಂದ ಹತನಾದ ಖರ ರಾಕ್ಷಸನೂ ಕತ್ತೆ ರೂಪದವ. ಅದು ಶೀತಲ ದೇವತೆಯ ವಾಹನವಂತೆ. ಅದರಿಂದ ಆಗರವಾಲಾ ಕೋಮಿನ ಜನ ಮದುವೆಗೆ ಮುಂಚೆ ವರನನ್ನು ಗುಟ್ಟಾಗಿ ತುಸು ಹೊತ್ತು ಕತ್ತೆಯ ಮೇಲೆ ಕೂರಿಸುವ ಶಾಸ್ತ್ರವನ್ನು ಆಚರಿಸುವರಂತೆ. ಶೀತಲ ದೇವಿಯ ತೃಪ್ತ್ಯರ್ಥವಾಗಿ ಈ ಆಚರಣೆ ಜಾರಿಯಲ್ಲಿದೆ.[2]

ಸಾಮಾನ್ಯವಾಗಿ ಜಗತ್ತಿನ ಜಾನಪದ ಕಥೆಗಳಲ್ಲೆಲ್ಲ ಸಿಂಹದ ವಿಷಯ ಬಂದೇ ಬರುತ್ತದೆ. ಅದು ಪಾರ್ವತಿಯ ವಾಹನವಾದ್ದರಿಂದ ಭಾರತದಲ್ಲಿ ಅದಕ್ಕೆ ಪೂಜೆ ಸಲ್ಲುತ್ತದೆ. ಕಾಡಿನಲ್ಲಿ ಸಿಂಹವನ್ನೇರಿ ಬರುವ ಮಗುವೇ ಮಕ್ಕಳಿಲ್ಲದ ತಂದೆಗೆ ಮಗನಾಗುವ, ಮುಂದೆ ಅವನೇ ರಾಜನಾಗುವ ಸಂಗತಿಗಳು ಜಾನಪದ ಕಥೆಗಳಲ್ಲಿ ಬರುತ್ತವೆ. ಸಿಂಹದ ವರ್ಣನೆಯುಳ್ಳ ಪ್ರಾಚೀನ ಕಾವ್ಯಗಳು ವಿರಳ. ಶಕುಂತಳೆಯ ಮಗ ಭರತ ಹಸುಳೆಯಾಗಿದ್ದಾಗ ಸಿಂಹದ ಮರಿಯೊಡನೆ ಆಟವಾಡುವ ವರ್ಣನೆ ಶಾಕುಂತಲ ನಾಟಕದಲ್ಲಿ ಬರುತ್ತದೆ. ಅನೇಕ ದೇಶ

1 *Encyclopaedia of Superstitions* by E. & M. A. Radford, p. 25

2 *Folklore of Northern India*, volume 2, by William Crooke, p. 208-209

ಹುಲಿ ಸಿಂಹದ ಸ್ಥಾನದಲ್ಲಿ ಬರುವುದುಂಟು. ಡಯೋನಿಸಸ್ ಮತ್ತು ಶಿವರ ಸಂಕೇತ ವ್ಯಾಘ್ರ. ಶಿವ ವ್ಯಾಘ್ರಾಜಿನದ ಮೇಲೆ ಕುಳಿತು ತಪಸ್ಸು ಮಾಡುತ್ತಾನೆ. ಮಾದೇಶ್ವರನ ವಾಹನ ಹುಲಿ. ತಾವು ವ್ಯಾಘ್ರವಂಶದವರೆಂದು ಕೆಲವು ರಾಜಪುತ್ರರು ಹೇಳಿಕೊಳ್ಳುತ್ತಾರೆ. ಅವರು ಹುಲಿಯನ್ನು ಕೊಲ್ಲುವುದಿಲ್ಲ. ಮಾನವಭಕ್ಷಕವಲ್ಲದ ಹುಲಿಯನ್ನು ಸುಮಾತ್ರದ ಜನ ಹಿಂಸಿಸುವುದಿಲ್ಲ. ನೇಪಾಲದಲ್ಲಿ ಬಾಘ್ ಜಾತ್ರೆ ಎಂಬ ಹೆಸರಿನಿಂದ ಹುಲಿಯ ಗೌರವಾರ್ಥವಾಗಿ ಪ್ರತಿವರ್ಷ ತಪ್ಪದೆ ಒಂದು ಹಬ್ಬ ನಡಸುತ್ತಾರೆ. ಆ ದಿನ ವ್ಯಾಘ್ರಾರಾಧಕರು ಹುಲಿಯ ವೇಷ ಹಾಕಿಕೊಂಡು ಕುಣಿಯುತ್ತಾರೆ. ಮೊಹರಂ ಹಬ್ಬದ ಕಾಲದಲ್ಲಿ ನಡೆಯುವ ಹುಲಿವೇಷದ ಕುಣಿತವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಮಿರ್ಜಾಪುರ್ ಕಾಡಿನ ಬುಡಕಟ್ಟು ಜನ ಬಾಘೇಶ್ವರ ಎನ್ನುವ ಹೆಸರಿನಲ್ಲಿ ಅದನ್ನು ಪೂಜಿಸುವುದುಂಟು. ಅದು ವನರಾಜನೆಂದು ಕೆಲವರ ಕಲ್ಪನೆ. ಸಂತಾಲರು ಅದನ್ನು ಕೊಲ್ಲುವುದಿಲ್ಲ. ಅದನ್ನು ಭಕ್ತಿಯಿಂದ ಪೂಜಿಸುವುದರಿಂದ ತಮಗೆ ಪ್ರಾಣರಕ್ಷಣೆಯ ವರ ಲಭಿಸುತ್ತದೆಂದು ಅವರ ನಂಬಿಕೆ. ಎಲ್ಲಿ ಸಿಕ್ಕಿದರಲ್ಲಿ ಅದನ್ನು ಕೊಲ್ಲಬೇಕೆನ್ನುವುದು ಭೂಯಿಯಾರ್ ಜನರ ಸಂಕಲ್ಪ. ಹುಲಿ ಸತ್ಯವಂತ ಪ್ರಾಣಿ ಎನ್ನುವ ವಿಷಯ ಗೋವಿನ ಕತೆಯಿಂದ ಪ್ರಕಟವಾಗುತ್ತದೆ. ಚಿರತೆಯಂತೆ ಅದು ಕುತಂತ್ರಿಯಲ್ಲ ಎಂಬುದು ಸರ್ವ ವಿಶ್ವಾಸಾರ್ಹವಾದ ಸಂಗತಿ. ಸತ್ತನಂತರ ಹುಲಿಯ ಉಗುರು, ಕೆನ್ನೆಕೂದಲು ಮೊದಲಾದ ಭಾಗಗಳನ್ನು ತಂತ್ರಮಂತ್ರಗಳಿಗಾಗಿ ಬಳಸುತ್ತಾರೆ. ಹುಲಿಹಾಲನ್ನು ತರಬಲ್ಲ ವ್ಯಕ್ತಿ ಸಮಾಜದ ಗೌರವಕ್ಕೆ ಪಾತ್ರನಾಗುತ್ತಾನೆ. ಅದರ ಕೊಬ್ಬು ಸಂಧಿವಾತಕ್ಕೆ ಹಿರಿಮದ್ದಂತೆ. ಹುಲಿಯ ಮಾಂಸ ಧೈರ್ಯಬಲಗಳನ್ನು ನೀಡಬಲ್ಲುದಾದ್ದರಿಂದ ಗಂಡಸರಿಗೆ ಒಳ್ಳೆಯದೆಂದು ಅಸ್ಸಾಮಿನ ಮಿರಿಜನ ನಂಬಿದ್ದಾರೆ; ಅದನ್ನು ತಿಂದ ಹೆಂಗುಸರು ಗಂಡುಬೀರಿಯರಾಗಬಹುದಾದ್ದರಿಂದ ಅವರಿಗೆ ನಿಷಿದ್ಧ.[1] ಹುಲಿಯ ಚರ್ಮ ಪವಿತ್ರವಾದದ್ದರಿಂದ ಋಷಿಗಳು ಮತ್ತು ಸನ್ಯಾಸಿಗಳು ಪ್ರಾರ್ಥನಾ ಸಮಯದಲ್ಲಿ ಅದರ ಮೇಲೆ ಕೂರುತ್ತಾರೆ. ಕಾಡಿನಲ್ಲಿ ಸಿಗುವಂಥ ಯಾವುದೋ ಒಂದು ಬೇರನ್ನು ತಿಂದರೆ ಮನುಷ್ಯ ಹುಲಿಯಾಗುತ್ತಾನೆಂದೂ, ಮತ್ತೊಂದು ಬೇರನ್ನು ತಿಂದರೆ ಅದೇ ಹುಲಿ ಮತ್ತೆ ಹಿಂದಿನ ರೂಪ ತಾಳುತ್ತದೆಂದೂ ಉತ್ತರ ಇಂಡಿಯಾದ ಕಾಡುಜನರ ತಿಳಿವಳಿಕೆ. ಹುಲಿ ನರರನ್ನು ತಿಂದು, ಅವರ ಆತ್ಮಗಳನ್ನೆಲ್ಲ ತನ್ನೊಳಗೆ ಸೇರಿಸಿಕೊಳ್ಳುತ್ತದೆಂಬ ನಂಬಿಕೆ ಜನಮನದಲ್ಲಿ ನಿಂತದ್ದರಿಂದ ಅದಕ್ಕಿಷ್ಟು ಪ್ರಾಶಸ್ತ್ಯ ದೊರೆತಿರಬೇಕು.

ಪ್ರಾಯಶಃ ಮಾನವನ ಪ್ರಪ್ರಥಮ ಪ್ರಾಣಿಮಿತ್ರರಲ್ಲಿ ನಾಯಿಗೆ ಅಗ್ರಸ್ಥಾನ ಸಲ್ಲಬೇಕೆಂದು ತೋರುತ್ತದೆ. ಆದಿಮಾನವನ ಕಾಲದಿಂದ ಅದು ಅವನ ನೆಚ್ಚಿನ ಸಂಗಾತಿಯಾಗಿದೆ. ರಕ್ಷಕನಾಗಿದೆ, ಕಷ್ಟಕಾಲಕ್ಕೊದಗುವ ಬಂಧುವಾಗಿದೆ. ಅದು ಅವನ ಕುರಿ ಮಂದೆ ಕಾದಿದೆ, ಮನೆಯನ್ನು ರಕ್ಷಿಸಿದೆ. ಕಾಡಿನಲ್ಲಿ ಮೃಗಗಳ ಪತ್ತೆ ತೋರಿಸಿದೆ, ನೀರಿಗೆ ಬಿದ್ದವನನ್ನು ಮೇಲೆತ್ತಿದೆ: ಕೃತಜ್ಞತೆಯಲ್ಲಿ ಮಾನವನಿಗಿಂತ ಮೇಲೆಂಬ ಖ್ಯಾತಿಯನ್ನು

---

[1] Ibid, p 215

[illegible]

1 *Encyclopaedia of Super*[illegible] by E. and M. A. Radford, p. 102-103

ನಂತೆ. ಪ್ರಾಚೀನ ಇಂಗ್ಲೆಂಡ್ ಮತ್ತು ಪ್ರಷ್ಯಾದೇಶಗಳಲ್ಲಿ ಚಳಿಗಾಲದಲ್ಲಿ ಬಿತ್ತನೆ ಮಾಡುವಾಗ, ಆಡನ್ನು ಕೊಂದು, ಅದರ ಮಾಂಸ ತಿಂದು, ಓಕ್ ಮರದ ಬಳಿ ಉದ್ಭವವಾದ ಗಳು ನೆಟ್ಟು ಚರ್ಮವನ್ನು ಅವಕ್ಕೆ ಸಿಕ್ಕಿಸುತ್ತಿದ್ದರಂತೆ. ಸುಗ್ಗಿ ಕಾಲದಲ್ಲಿ ತೆನೆಗೂಡಿದ ಬಿದಿ ಹುಲ್ಲನ್ನು ಆ ಚರ್ಮದ ಮೇಲೆ ಕಟ್ಟುತ್ತಿದ್ದರು. ಅನಂತರ ಕುಣಿತ ಮೆರೆತ ಊಟಗಳು ಸಾಗುತ್ತಿದ್ದುವು. ಆದು ಧಾನ್ಯಶಕ್ತಿಯೂ ಆಗಿ ಅದರ ಸುತ್ತ ಅನೇಕ ಕಥೆಗಳು ಹೆಣೆದುಕೊಂಡಿವೆ. ಕೆಲವು ಕಡೆ ಅವು ರೋಗಗಳಿಗೆ ಬಲಿಪಶುಗಳೂ ಆಗುವುದುಂಟು. ರೋಗಬಂದ ಊರಿನಲ್ಲಿ ಅವರ ಕೊರಳಿಗೆ ಹೂಹಾರ ಹಾಕಿ ಗಡಿಯಿಂದಾಚೆ ಅಟ್ಟಿದರೆ, ರೋಗವೂ ಅವರ ಹಿಂದೆಯೇ ಪಲಾಯನ ಮಾಡುತ್ತದಂತೆ.[1] ಮೇಕೆಯಾಗಲಿ ಮೇಷವಾಗಲಿ ದೇವರಿಗೆ ಹರಕೆ ಬಿಡುವುದು ಬಹು ಪ್ರಾಚೀನ ಪದ್ಧತಿ. ಅದನ್ನು ಕೊಲ್ಲುವ ಮುನ್ನ ಜೀರಿಗೆಸೊಪ್ಪನ್ನು ನೀರಲ್ಲದ್ದಿ, ಅದರ ಮುಖ ಮತ್ತು ಮೈಮೇಲೆ ನೀರು ಚಿಮುಕಿಸುತ್ತಾರೆ. ಅದು ಒದರಿದರೆ ಆ ಬಲಿ ದೇವರಿಗೆ ಇಷ್ಟವಾಯಿತೆಂದು ಅರ್ಥ. ಗ್ರೀಕರಲ್ಲಿಯೂ ಈ ಸಂಪ್ರದಾಯ ರೂಢಿಯಲ್ಲಿತ್ತೆಂದು ಪ್ಲೂಟಾರ್ಕ್ ಹೇಳುತ್ತಾನೆ. ಬ್ರಹ್ಮ ಪ್ರಾಣಿಕೋಟಿಯನ್ನು ಸೃಷ್ಟಿಸುವಾಗ, ಆಡು ಮೊದಲು ಅವನ ಬಾಯಿಂದ ಬಂತೆಂಬುದು ಪೌರಾಣಿಕ ನಂಬಿಕೆ. ಮಾನವ ಮನೆಗೊಳಿಸಿಕೊಂಡ ಪ್ರಾಣಿಗಳಲ್ಲಿ ಆಡು ಕುರಿಗಳು ಮೊದಲ ಸುತ್ತಿನಲ್ಲಿಯೇ ಸೇರುತ್ತವೆಂದು ತೋರುತ್ತದೆ.

ನಾಗರಿಕತೆಯ ವಿಕಾಸದಲ್ಲಿ, ಸಂಸ್ಕೃತಿಯ ಸಂವರ್ಧನೆಯಲ್ಲಿ ಗೋವಿನಷ್ಟು ಉಪಯುಕ್ತವಾದ ಪ್ರಾಣಿ ಜಗತ್ತಿನಲ್ಲಿ ಮತ್ತೊಂದಿಲ್ಲ. ಒಂದಾನೊಂದು ಕಾಲದಲ್ಲಿ ಅದು ಕೃಷಿಕ್ಷೇತ್ರದಲ್ಲಿ ಮಾತ್ರವಲ್ಲ, ಆಹಾರ ವಿಷಯದಲ್ಲೂ ಪ್ರಯೋಜನಕಾರಿಯಾಗಿತ್ತು. ಕೃಷಿಪ್ರಧಾನವಾದ ಭಾರತದಂಥ ರಾಷ್ಟ್ರದಲ್ಲಿ, ಅದರಲ್ಲಿಯೂ ಅಲ್ಲಿ ಅಹಿಂಸಾನೀತಿಗೆ ಅಗ್ರಪಟ್ಟ ದೊರೆತನಂತರ ಗೋವು ಅತ್ಯಂತ ಪವಿತ್ರ ಪ್ರಾಣಿಯೆಂದು ಪರಿಗಣನೆಗೊಂಡಿತು. "ಪ್ರಾಗೈತಿಹಾಸಕಾಲದಲ್ಲಿ ಹಸು ಅಥವಾ ಗೂಳಿಯ ಮಾಂಸ ಬಳಕೆಯಲ್ಲಿತ್ತು. ಐತರೇಯಬ್ರಾಹ್ಮಣದ ಪ್ರಕಾರ, ಮನೆಗೆ ರಾಜನಾಗಲಿ ಅಥವಾ ಪ್ರತಿಷ್ಠಿತ ವ್ಯಕ್ತಿಯಾಗಲಿ ಅತಿಥಿಯಾಗಿ ಬಂದಾಗ ಗೂಳಿಯನ್ನಾಗಲಿ ಗರ್ಭಪಾತಹೊಂದಿದ ಹಸುವನ್ನಾಗಲಿ ಕೊಲ್ಲಲಾಗುತ್ತಿತ್ತು. ಕೆಲವು ನಿರ್ದಿಷ್ಟ ದೇವತೆಗಳ ತೃಪ್ತ್ಯರ್ಥವಾಗಿ ಆಚರಿಸಬೇಕಾಗಿದ್ದ ಉಪಯಜ್ಞಗಳಲ್ಲಿ ಎಂಥ ಗೋವನ್ನು ಕೊಲ್ಲಬೇಕೆಂಬ ವಿಷಯವಾಗಿ ಅನೇಕ ವಿವರಗಳು ಕೃಷ್ಣಯಜುರ್ವೇದದ ಬ್ರಾಹ್ಮಣದಲ್ಲಿ ಬರುತ್ತವೆ....ಅಶ್ವಮೇಧಯಾಗದಲ್ಲಿ ಕುದುರೆ ಗೂಳಿ ಮೇಕೆ ಮೇಷ ಜಿಂಕೆ ಮೊದಲಾದ ಪ್ರಾಣಿಗಳನ್ನು ನೂರೆಂಭತ್ತಕ್ಕೆ ಕಡಿಮೆ ಇಲ್ಲದಂತೆ ಆಹುತಿ ಮಾಡಲಾಗುತ್ತಿತ್ತು. ಆಹುತಿಗೊಂಡ ಪ್ರಾಣಿಯ ಯಾವ ಭಾಗ ಯಾರಿಗೆ ಎಂಬ ಸಂಗತಿಗಳೂ ಅಲ್ಲಿ ಉಲ್ಲೇಖಗೊಂಡಿವೆ. ಪಕ್ಕೆ ಮತ್ತು ಕಟಿಭಾಗಗಳು ಮನೆಯ ಯಜಮಾನನಿಗಾದರೆ, ವಸ್ತಿಕುಹರ ಮತ್ತು ಮೂತ್ರಪಿಂಡಗಳು ಯಜಮಾನಿಗೂ. ಪುರೋಹಿತರಿಗೆ ನಾಲಗೆ, ಗೆ[illegible], ಭುಜ, ದೊಂಡಿ ಮತ್ತು ಕಾಲುಗಳೂ

[1] Ibid, p 132-133

ಕೊಲ್ಲುತ್ತಿದ್ದರು."[1] ಗೋಘ್ನ ಎನ್ನುವುದು ಅತಿಥಿಗೆ ಇನ್ನೊಂದು ಸಂವಾದಿಪದ. ಅತಿಥಿ ಸತ್ಕಾರಕ್ಕಾಗಿ ಗೂಳಿಯು ವಧೆಯಾಗಬೇಕಾದದ್ದರಿಂದ ಅವನಿಗೆ ಆ ಹೆಸರು ಬಂತು.

ಗೋವಿನ ಪ್ರಯೋಜನ ಹೆಚ್ಚಾದಂತೆಲ್ಲ, ಅವುಗಳ ಸಂತಾನಾಭಿವೃದ್ಧಿಯು ಭಾರತೀಯರ ಪ್ರಧಾನ ಕರ್ತವ್ಯವಾಯಿತು. ಗೋಮಾಂಸಭಕ್ಷಣದಿಂದ ಅವುಗಳ ಸಂಖ್ಯೆ ಕ್ಷೀಣಿಸುತ್ತಿದ್ದುದರಿಂದ ಕ್ರಮೇಣ ಆ ಪದ್ಧತಿ ನಿಂತುಹೋಗಿರಬೇಕು. ಅದು ನಿಂತು ಹೋಗುತ್ತಿದ್ದಂತೆಯೇ ಅದು ಪವಿತ್ರವಸ್ತುವೆಂದು ಎಣಿಕೆಗೊಂಡು, ಮತೀಯ ಸ್ಥಾನ ಮಾನವನ್ನು ಪಡೆದಿರಬೇಕು. ಪಂಚಗವ್ಯ[2] ರೋಗನಿವಾರಣೆಗೆ ಮತ್ತು ದೇವತಾಕಾರ್ಯಗಳಿಗೆ ಅತ್ಯವಶ್ಯ. ಗೋರೋಚನ[3]ವಂತು ಶಕ್ತಿವರ್ಧನೆಗೆ ಮತ್ತು ಕ್ರಿಮಿನಾಶನಕ್ಕೆ ಸಹಕಾರಿ ಎನ್ನುತ್ತಾರೆ. ಪ್ರಾಚೀನಕಾಲದಲ್ಲಿ ಈಜಿಪ್ಟ್ ದೇಶದ ಜನ ಸಹ ಗೂಳಿಯನ್ನು ಪವಿತ್ರಪ್ರಾಣಿಯೆಂದು ಸ್ವೀಕರಿಸಿದ್ದುಂಟು. ಇಂದ್ರ ಗೋವಿನಿಂದ ಸೃಷ್ಟಿಯಾದವನೆಂದು ಪ್ರಾಚೀನ ಐತಿಹ್ಯಗಳು ಹೇಳಿದರೆ, ಕೃಷ್ಣ ಗೋವಿಂದನೆನ್ನುವುದು ಸರ್ವವೇದ್ಯವಾಗಿದೆ. ಇಂದ್ರ ಹಾಗೂ ಕೃಷ್ಣನನ್ನು ಪೂಜಿಸುತ್ತಿದ್ದ ಜನರಿಗೆ ಗೋವು ಕುಲಲಾಂಛನವಾಗಿದ್ದು, ಪೂಜಾವಸ್ತುವಾಗಿ ಪರಿಣಮಿಸಿರಬಹುದು. ಹರಪ್ಪ ಮೊಹೆಂಜೋದಾರೋ ಕಾಲದಿಂದ ಗೋವು ಶ್ರೇಷ್ಠ ಪ್ರಾಣಿಯೆಂದು ಎಣಿಕೆಗೊಂಡು, ಶಿವನ ವಾಹನವಾಗಿ ಹೆಸರುಗೊಂಡಿರಬೇಕೆನ್ನುವುದು ಅಲ್ಲಿಯ ಸಂಶೋಧನೆಗಳಿಂದ ಸ್ಪಷ್ಟವಾಗುತ್ತದೆ. ಜೀವ ಮಾನವತ್ವ ಪಡೆಯುವ ಮುನ್ನ ಗೋವಾಗಿ ಹುಟ್ಟುತ್ತದೆನ್ನುವುದು ಹಿಂದೂಗಳ ನಂಬಿಕೆ. ಇದರ ಪ್ರಕಾರ ಗೋ ಕುಲಕ್ಕೂ ಮಾನವ ಕುಲಕ್ಕೂ ಇರುವ ಸಂಬಂಧ ವ್ಯಕ್ತವಾಗುತ್ತದೆ. ವೇದಗಳ ಕಾಲದಲ್ಲಿ ಗೋಪೂಜೆ ರೂಢಿಯಲ್ಲಿದ್ದಂತಿಲ್ಲ. ಮನುವಿನ ಕಾಲಕ್ಕೆ ಗೋಪೂಜೆ ಜನಸಾಮಾನ್ಯರಲ್ಲಿ ಬೇರೂರಿತ್ತು. ಗೋಹಂತಕರು ನಾರಕಿಗಳಾಗುತ್ತಾರೆಂದೂ, ಗೋಮಾಂಸಭಕ್ಷಕರು ಚಂಡಾಲರೆಂದೂ ಕ್ರಮೇಣ ತಿಳಿಯಲಾಯಿತು. ಬರಬರುತ್ತಾ ಕಾಮಧೇನುವೂ ಬಂದಿತು. ಅದರ ಸುತ್ತಮುತ್ತ ಅನೇಕ ಹೊಸ ಪುರಾತನವಾದದ್ದಲ್ಲದೆ ಕತೆಗಳು ಹುಟ್ಟಿಕೊಂಡುವು. ಸಾಮಾನ್ಯವಾಗಿ ಎಲ್ಲ ಶಾಸನಗಳಲ್ಲಿಯೂ ಗೋಪೂಜೆಯ ವಿಷಯವನ್ನು ಕುರಿತು ಉಲ್ಲೇಖವಿದ್ದೇ ಇರುತ್ತದೆ.

ಮಾನವನ ಬಾಳಿನೊಡನೆ ಬೆಸೆದುಕೊಂಡಿರುವ ಗೋವಿನ ಬಗ್ಗೆ ಅನೇಕ ನಂಬಿಕೆಗಳು ಹುಟ್ಟಿಕೊಳ್ಳುವುದು ಸಹಜ. ಅವರ ಒಂದೊಂದು ಹಾಗೂ ಬೇರೆ ನಂಬಿಕೆಗಳು ...

---

1 *Folklore of Northern India*, by William Crooke, P. 226-227

2 [illegible]

3 [illegible]

ಅಂಗಾಂಗದ ಬಗೆಗೂ ಅನೇಕ ಶುಭಾಶುಭ ಶಕುನಗಳು ಸೃಷ್ಟಿಗೊಂಡಿವೆ. ಕೊಂಬಿನ ಆಕಾರ, ಹಿಳಿಲು, ಗಂಗೆದೊಗಲು, ಬಾಲ, ಸುಳಿ, ಗೊರಸು, ಕಣ್ಣಿನ ಸೋಗೆ, ಬಣ್ಣ— ಒಂದೊಂದರ ಬಗೆಗೂ ಅನೇಕ ನಂಬಿಕೆಗಳು ಒಗೆದಿರುವುದುಂಟು. ಮಗುವಿನ ಜಾತಕ ಅಶುಭ ನುಡಿಯುವುದಾದರೆ, ಮಗುವನ್ನು ಕೇಸರಿ ಬಣ್ಣದ ಬಟ್ಟೆಯಲ್ಲಿ ಸುತ್ತಿ, ಕುಕ್ಕೆಯ ಅಥವಾ ಹೆಡಗೆಯ ಹಿಂಬದಿಗೆ ಕಟ್ಟಿ, ಅದನ್ನು ಹಸುವಿನ ಹಿಂಗಾಲುಗಳ ನಡುವೆ ಹಾಯಿಸಿ ಮುಂಗಾಲುಗಳ ಮೂಲಕ ತೆಗೆದು, ಮತ್ತೆ ಅದೇ ಮಾರ್ಗದಲ್ಲಿ ಹಿಂದಕ್ಕೆ ತರಬೇಕಂತೆ. ಆಗ ಮಗು ಆ ಪವಿತ್ರಮಾತೆಯ ಬಸಿರಿಂದ ಬಂದಂತೆ ಲೆಕ್ಕ.[1] ತಲೆತೂಗು, ಸಿಡಿಗಾಲು, ಹೀನಸುಳಿ ಇರುವ ದನ, ಸಾಕಿದರೆ ಫಲಸಿಕೆ ಇಲ್ಲವೆನ್ನುವುದುಂಟು. ಒಬ್ಬ ವ್ಯಕ್ತಿಯ ಮುಖಕ್ಕೆ ಎದುರಾಗಿ ಮೂರು ಸಾರಿ ಅಂಬಾ ಎಂದರೆ ಸಾವು ತಪ್ಪದೆಂದೂ, ಕಾವಾಡಿಗಿತ್ತಿ ಹಾಲು ಕರೆದನಂತರ ಕೈ ತೊಳೆಯದಿದ್ದರೆ ಹಸುಗಳಲ್ಲಿ ಹಾಲು ಬತ್ತುತ್ತದೆಂದೂ, ಹಲವು ದಿನ ಸಗಣಿ ಬಳಿದದ್ದಾದರೆ ಗಾಯ ವಾಸಿಯಾಗುತ್ತದೆಂದೂ ಆಂಗ್ಲರು ನಂಬಿದ್ದು ಉಂಟು.[2]

ನೀಲಗಿರಿಯ ತೊದವರಿಗೆ ಎಮ್ಮೆ ಪೂಜ್ಯ ಪ್ರಾಣಿ. ಕರ್ಣಾಟಕದಲ್ಲೆಲ್ಲ ಹೋದರೂ ಎಮ್ಮೆಯ ಹೆಸರುಳ್ಳ ಊರುಗಳು ಸಿಗುತ್ತವೆ. ಒಂದಾನೊಂದು ಕಾಲದಲ್ಲಿ ಅಲ್ಲೆಲ್ಲ ತೊದವರಿದ್ದರೋ, ಅಥವಾ ಎಮ್ಮೆಯ ಬಗ್ಗೆ ಕನ್ನಡಿಗರಿಗೆ ಗೌರವವಿತ್ತೋ ತಿಳಿಯದು. ರೈತನಿಗೆ ಎಮ್ಮೆಯೂ ಬಹು ಉಪಯುಕ್ತ ಪ್ರಾಣಿ. ಅದರಿಂದ ಯಥೇಚ್ಛವಾಗಿ ಹಾಲು ಸಿಗುತ್ತದೆ; ಗೊಬ್ಬರ ದೊರೆಯುತ್ತದೆ; ಉಳಲಿಕ್ಕೂ ಅದು ಬರುತ್ತದೆ. ಅದು ಯಮನ ವಾಹನವಾದ್ದರಿಂದಲೋ ಅಥವಾ ರಾಕ್ಷಸಾಕಾರ ಪಡೆದು ದುರ್ಗೆಯಿಂದ ಸಂಹಾರ ಗೊಂಡಿದ್ದರಿಂದಲೋ ಏನೋ ಅದು ಗೋವಿನ ಗೌರವವನ್ನು ಸಂಪಾದಿಸಲಿಲ್ಲ.

ನಾಯಿಯ ನಂತರ ಮನುಷ್ಯನಿಗೆ ತೀರ ಹತ್ತಿರವಾಗಿರುವ ಮತ್ತು ಮುದ್ದಾದ ಪ್ರಾಣಿ ಬೆಕ್ಕು. ಮುಸಲ್ಮಾನರ ಪ್ರಕಾರ ಅದೊಂದು ಸ್ವಚ್ಛವಾದ ಪ್ರಾಣಿ; ಅದನ್ನು ಕೊಂದದ್ದಾದರೆ ದುಃಖ ಸಮನಿಸುತ್ತದೆ. ಕೊತ್ತಿ ಹೊಡೆದ ಪಾಪ ಮುತ್ತತ್ತಿ ಹೊಕ್ಕರೂ ಬಿಡದು ಎಂಬ ಗಾದೆ ಹಿಂದೂಗಳಲ್ಲಿಯೂ ಚಾಲ್ತಿಯಲ್ಲಿದೆ. ಪಾಶ್ಚಾತ್ಯರ ಪ್ರಕಾರ ಅದಕ್ಕೂ ಮಾಟಗಾತಿಯರಿಗೂ ಸಂಬಂಧವುಂಟು. ಕೆಲವು ಕಡೆ ಅದನ್ನು ಭೂತಗಳಿಗೆ ನೈವೇದ್ಯವಾಗಿ ನೀಡುವುದೂ ಉಂಟು. ಮಂತ್ರವಾದಿನಿಯರು ಬೆಕ್ಕಿನ ರೂಪ ತಾಳುವುದೂ, ಅವುಗಳ ಮೇಲೆ ಕುಳಿತು ದುಷ್ಟಕಾರ್ಯಕ್ಕೆ ಹೋಗುವುದೂ ಉಂಟು. ಸಂಸಾರದ ಒಂದು ಭಾಗವಾಗಿರುವ ಬೆಕ್ಕಿನ ಬಗೆಗೆ ಅನೇಕ ನಂಬಿಕೆಗಳು ಹುಟ್ಟಿಕೊಂಡಿವೆ. ಬಾಣಂತಿಯರಿಗೆ ಬೆಕ್ಕಿನ ಮಾಂಸ ಒಳ್ಳೆಯದಂತೆ. ಶುಭಕಾರ್ಯಕ್ಕೆಂದು ಹೋಗುವಾಗ ಬೆಕ್ಕು ಅಡ್ಡ ಬರಬಾರದು. ರೋಗಿಯನ್ನು ತೊಳೆದು, ತೊಳೆದ ನೀರನ್ನು ಬೆಕ್ಕಿನ ಮೇಲೆ ಹಾಕಿ ಹೊರಗೆ ಓಡಿಸಿದರೆ ಕಾಯಿಲೆಯೂ ಅದರ ಜತೆಯಲ್ಲಿ ಹೋಗುತ್ತದೆಂಬುದು

---

[1] *Folklore of Northern India*, by William Crooke, p. 231.

[2] *Encyclopaedia of Superstitions* by E and M. A. Radford, p. 90-91.

ಆಂಗ್ಲರ ತಿಳಿವಳಿಕೆ. ಬೆಕ್ಕು ಸೀತರೆ ಮಳೆ ಬರುತ್ತದೆಂದೂ, ಮನೆಯಲ್ಲಿ ಬೆಕ್ಕು ಸಾಯುವುದು ಅಶುಭವೆಂದೂ, ವಧುವಿನ ಬಳಿ ಬೆಕ್ಕು ಸೀತದ್ದಾದರೆ ಅವಳಿಗೆ ಮುಂದೆ ಶುಭವಾಗುವುದೆಂದೂ, ಕಪ್ಪು ಬೆಕ್ಕು ಸಾಕುವುದು ಶುಭವೆಂದೂ ಇತ್ಯಾದಿಯಾದ ಹಲವಾರು ನಂಬಿಕೆಗಳು ಅವರಲ್ಲಿವೆ.[1]

ಭಾರತೀಯರಿಗೆ ಮಾತ್ರ ಪವಿತ್ರವಾದ ಪ್ರಾಣಿ ಕಪಿ. ಮಾನವನ ಹಿರಿಯ ಸೋದರನಾದ್ದರಿಂದ ಅದಕ್ಕೆ ಇಷ್ಟು ಪ್ರಾಶಸ್ತ್ಯ ಒದಗಿರಬೇಕು. ಪ್ರಾಚೀನ ಪುರಾಣ ಕಾವ್ಯಗಳಲ್ಲಂತೂ ಅದನ್ನು ಕುರಿತ ಉಲ್ಲೇಖಗಳು ಸಾಕಷ್ಟು ಬರುತ್ತವೆ. ರಾಮಾಯಣದಲ್ಲಿ ಆಂಜನೇಯ ಶ್ರೀರಾಮನ ಆತ್ಮಸ್ನೇಹಿತನಾಗಿ, ಅಪಾರ ಚಾಲಕಶಕ್ತಿಯಾಗಿ ಸರ್ವಗೌರವಭಾಜನನಾಗಿದ್ದಾನೆ. ವಾಯುವಿನ ಅವತಾರಮೂರ್ತಿಯಾದ ಅವನು ಮಾನವಲೋಕಕ್ಕೆ ಪ್ರಾಣಸ್ವರೂಪವಂತಿದ್ದಾನೆ. ಆದ್ದರಿಂದ ಕಪಿಹನನ ಮಹಾ ಪಾಪಕರ. ಇಲ್ಲಿ ಕಪಿಗಿರುವ ಪೂಜ್ಯತೆ ಜಗತ್ತಿನಲ್ಲಿ ಬೇರೆಡೆ ಇದ್ದಂತಿಲ್ಲ.[2]

ಮೊತ್ತಮೊದಲು ಆನೆಯನ್ನು ಕಂಡ ಮಾನವನ ಮನಸ್ಸಿನಲ್ಲಿ ಭಯಾನಕವೂ ಅತ್ಯದ್ಭುತವೂ ಆದ ಕಲ್ಪನೆಗಳು ರೂಪುಗೊಂಡಿರಬೇಕು. ಗಾತ್ರ ಶೌರ್ಯ ವಿವೇಕಗಳಲ್ಲಿ ಅತ್ಯುಚ್ಚಸ್ಥಾನದಲ್ಲಿದ್ದ ಅದರ ಬಗ್ಗೆ ಅವನಲ್ಲಿ ಗೌರವ ತಾನಾಗಿಯೇ ಮೂಡಿರಬೇಕು. ಕಾಡಿನಲ್ಲಿ ನಿರ್ಭಯವಾಗಿ ತಿರುಗುತ್ತಿದ್ದ ಆ ಪ್ರಾಣಿಯ ಹಾದಿಯಲ್ಲಿ ಯಾವುದೊಂದು ವಿಘ್ನವೂ ತೊಡಕುತ್ತಿರಲಿಲ್ಲ. ಆದ್ದರಿಂದ ಅದಕ್ಕೆ ವಿಘ್ನೇಶ್ವರ ಎಂಬ ಹೆಸರು ಅನ್ವರ್ಥವಾಗುತ್ತದೆ. ಸೂಕ್ಷ್ಮ ಬುದ್ಧಿ ಮತ್ತು ನಿರ್ಭಯ ಗುಣಗಳಿಂದಾಗಿ ಅದು ಪಾರ್ವತಿಯ ಮಗನಾಗುವ ಯೋಗ್ಯತೆಯನ್ನು ಪಡೆಯಿತು. ಕಾಲಾನಂತರದಲ್ಲಿ ವಿಘ್ನೇಶ್ವರನ ಸುತ್ತ ಹಲವು ಕತೆಗಳೂ ಹುಟ್ಟಿಕೊಂಡದ್ದುಂಟು. ಭೂಮಿಯನ್ನು ಯಾರೋ ಹೊತ್ತಿರಬೇಕೆನ್ನುವ ಕಲ್ಪನೆ ಮೂಡಿದಾಗಲೇ ಆನೆಯ ಚಿತ್ರ ಮಾನವನ ಕಣ್ಮುಂದೆ ನಿಂತಿರಬೇಕು. ಅದನ್ನು ಹಿಡಿದು ಪಳಗಿಸಲು ಸಾಧ್ಯವಾದಾಗ ಯುದ್ಧದಲ್ಲಿ ಬಳಸಲಾಯಿತು; ವಿಜಯದ ಲಾಂಛನವೂ ಆಯಿತು; ಕೊನೆಗೆ ಶಿಲ್ಪಕಲೆಯ ವಸ್ತುವೂ ಆಯಿತು. ಮಾಟಗಾರರ ಯುಕ್ತಿಗೆ ಅದರ ಬಾಲದ ಕೂದಲು ಸಮರ್ಥ ಸಾಧನವಾಯಿತು.

ಮನುಷ್ಯನಿಗೆ ಹಾವಿನಿಂದ ನೇರವಾದ ಪ್ರಯೋಜನ ಇಲ್ಲ. ಚೀನಾದಲ್ಲಿ ಮಾತ್ರ ಕೆಲವು ಹಾವು ಆಹಾರವಸ್ತುವಾಗಿವೆ. ಆದರೂ ಅವು ಮಾನವನ ಗಮನ ಸೆಳೆದಂತೆ ಬೇರೆ ಪ್ರಾಣಿಗಳು ಸೆಳೆದಿಲ್ಲ. ಅದಕ್ಕೆ ಅವುಗಳ ಭಯವೇ ಕಾರಣ. ಪ್ರಾಯಶಃ ಸರ್ಪದಿಂದ ಸತ್ತಿರುವಷ್ಟು ಜನ ಹುಲಿ, ಸಿಂಹ, ಚಿರತೆ ಮೊದಲಾದ ದುಷ್ಟ ಪ್ರಾಣಿಗಳಿಂದ ಸತ್ತಿಲ್ಲ. ಹುಲಿಯಾದರೋ ಹುಲಿಯ ಹೆಜ್ಜೆ ಗೊತ್ತಾಗುತ್ತದೆ. ಸರ್ಪದ ಇರವು ಗೊತ್ತಾಗುವುದಿಲ್ಲ. ಹುಲಿ ಮನುಷ್ಯ ಸಮಾಜದ ನಡುವೆ ಸೇರುವುದಿಲ್ಲ; ಹಾವು ಮನೆಯಲ್ಲಿಯೇ ಇದ್ದು, ಮನೆ

---

1 Ibid, p. 62.

2 ಇಂದಿನ ಮುಂಬಯಿ ಪ್ರಾಂತ್ಯದಲ್ಲಿ ರೂಢಿಯಲ್ಲಿದ್ದ ಹಾವಿನ ಪೂಜಾವಿಧಾನಗಳಿಗೆ *The Folklore of Bombay* by R.E. Enthoven ಈ ಗ್ರಂಥ (ಪುಟ ೨೦೩-೨೩೦)ವನ್ನು ನೋಡಬಹುದು.

ಜನರಿಗೆ ಕಂಟಕವಾಗುತ್ತದೆ. ಅದು ಪೊರೆ ಬಿಡುವುದರಿಂದ, ಅದರ ಮೈ ಆಗಾಗ್ಗೆ ಹೊಸದಾಗುತ್ತದೆ; ಹೊಸದಾಗುವುದರಿಂದ ಅದು ಚಿರಂಜೀವಿ ಎಂದು ಭಾವಿಸಿಕೊಂಡವರೂ ಉಂಟು. ಅದು ಅಪಾಯಕಾರೀ ಪ್ರಾಣಿಯಾದದ್ದರಿಂದಲೇ ಅಂತ ಕಾಣುತ್ತದೆ, ಶಿವನ ಕೊರಳಿಗೆ ಹಾರವಾದದ್ದು, ವಿಷ್ಣುವಿಗೆ ಶಯ್ಯೆಯಾದದ್ದು. ಅದರ ಪ್ರೀತಿಯನ್ನು ಸಂಪಾದಿಸುವ ಸಲುವಾಗಿಯೋ ಎನ್ನುವಂತೆ ಭಾರತೀಯರು ಅವಕ್ಕೆ ಸಾವಿರ ಹೆಡೆಗಳನ್ನು ಸೃಷ್ಟಿಸಿ, ಭೂಮಿಯನ್ನು ಅವರ ಮೇಲೆ ಹೊರಿಸಿದರು. ಕೊನೆಗೆ ನಿಧಿಯನ್ನು ಕಾಯುವ ಭಾರವನ್ನು ಸಹ ಅವಕ್ಕೆ ವಹಿಸಿಕೊಟ್ಟರು. ಸತ್ತವರ ಆತ್ಮಗಳು ಸರ್ಪರೂಪದಲ್ಲಿ ಗೋಚರಿಸುತ್ತವೆಂಬ ನಂಬಿಕೆ ದಕ್ಷಿಣ ಆಫ್ರಿಕಾ, ಇಂಡಿಯಾ ಮತ್ತು ಗ್ರೀಸ್ ದೇಶಗಳಲ್ಲಿ ಪ್ರಬಲವಾಗಿತ್ತು. ಕೆಲವು ಜೀವಂತ ವ್ಯಕ್ತಿಗಳ ಬದುಕಿಗೂ ಸರ್ಪಗಳಿಗೂ ರಹಸ್ಯಾತ್ಮಕವಾದ, ಪರಸ್ಪರ ಸಂಬಂಧವುಂಟೆಂಬ, ಆ ಸರ್ಪಗಳು ಸತ್ತಾಗ ಸಂಬಂಧಪಟ್ಟ ಮನುಷ್ಯರೂ ಸಾಯುತ್ತಾರೆಂಬ ಭಾವನೆ ಪ್ರಾಚೀನ ರೋಮನ್‌ರಲ್ಲಿ, ಸೆಮಿಟಿಕ್ ಜನರಲ್ಲಿ, ಜರ್ಮನರಲ್ಲಿ, ಸೆಲ್ಟ್ಸ್ ಮತ್ತು ಫಿನ್‌ಲೆಂಡ್ ಜನರಲ್ಲಿ ನೆಲಸಿತ್ತು. ಅವು ಭೂಮಿಯೊಳಗೆ ವಾಸಿಸುವುದರಿಂದ ಭೂದೇವತೆಯೇ ಅವುಗಳ ರೂಪದಲ್ಲಿ ಗೋಚರಿಸುತ್ತದೆಂಬ ತಿಳಿವಳಿಕೆ ಕೆಲವು ಜನಾಂಗಗಳಲ್ಲಿದೆ.

ಪಂಜಾಬ್ ಪ್ರಾಂತ್ಯದಲ್ಲೊಂದು ನಾಗ ಸಂಪ್ರದಾಯದ ಬುಡಕಟ್ಟಿದೆ. ಅವರು ವರ್ಷಕ್ಕೊಮ್ಮೆ ಸೆಪ್ಟೆಂಬರ್ ತಿಂಗಳಲ್ಲಿ ಒಂಬತ್ತು ದಿನಗಳ ಕಾಲ ಸರ್ಪವನ್ನು ಪೂಜಿಸುತ್ತಾರಂತೆ. ಕೆಲವರು (ಮಿರಾಸನ್ಸ್) ಆಗಸ್ಟ್ ತಿಂಗಳ ಕೊನೆಯಲ್ಲಿ ಹಿಟ್ಟಿನಿಂದ ಹಾವಿನ ಪ್ರತಿಮೆ ಮಾಡಿ, ಕಪ್ಪು ಮತ್ತು ಕೆಂಪು ಬಣ್ಣಗಳಿಂದಲಂಕರಿಸಿ, ಮೊರದಲ್ಲಿಯೋ ಕುಕ್ಕೆಯಲ್ಲಿಯೋ ಇಟ್ಟುಕೊಂಡು ಪ್ರತಿಯೊಂದು ಮನೆಗೂ ಕೊಂಡೊಯ್ಯುತ್ತಾರೆ. ಮನೆಯನ್ನು ಪ್ರವೇಶಿಸುವಾಗ "ದೇವರು ಸದಾ ನಿಮ್ಮೊಡನಿರಲಿ! ಅನಿಷ್ಟಗಳು ನಿಮ್ಮಿಂದ ದೂರವಿರಲಿ! ನಮ್ಮ ರಕ್ಷಕರ ಮಾತು ನಡೆಯಲಿ!" ಎಂದು ಉದ್ಗಾರ ತೆಗೆಯುತ್ತಾರೆ. ಪ್ರತಿಯೊಂದು ಮನೆಯಲ್ಲಿಯೂ ಕಣಕವೋ ಧಾನ್ಯವೋ ರೂಪಾಯಿಯೊ ಸಿಗುತ್ತದೆ. ಎಲ್ಲ ಮನೆಗಳು ಮುಗಿದನಂತರ ಹಿಟ್ಟಿನ ಹಾವನ್ನು ಹೂತು, ಅದರ ಮೇಲೆ ಸಮಾಧಿಯನ್ನು ನಿರ್ಮಿಸಲಾಗುತ್ತದೆ. ಹೆಂಗಸರು ಒಂಭತ್ತು ದಿನಗಳ ತನಕ ಅಲ್ಲಿ ಪೂಜೆ ನಡೆಸುತ್ತಾರೆ; ಮೊಸರು ನೈವೇದ್ಯವರ್ಪಿಸಿ, ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ಮನೆಯ ಮಕ್ಕಳಿಗೆ ಮೊಸರಿನ ಪ್ರಸಾದವನ್ನು ಹಂಚುತ್ತಾರೆ.[1] ಹಿಂದಿನ ಕಾಲದಲ್ಲಿ ನಾಗಾ ಜನ ಪ್ರತಿನಿತ್ಯ ಹೀಗೆ ನಾಗಪೂಜೆ ಮಾಡುವುದು ಅನೂಚಾನವಾಗಿ ಬಂದ ಪರಿಪಾಠ. ಯೂರೋಪಿನ ರೆನ್ ಎಂಬ ಹಾಡು ಹಕ್ಕಿಯ ಹೆಸರಿನಲ್ಲಿಯೂ ಇಂಥದೇ ಉತ್ಸವಗಳನ್ನು ಆಚರಿಸುವುದುಂಟು. ಯಾರಾದರೂ ಹಾವಿನ ಬಗೆಗೆ ಕೆಟ್ಟ ಮಾತಾಡಿದರೆ ಡಚ್ ಜನ ಸಹಿಸುವುದಿಲ್ಲವಂತೆ.[2]

---

[1] *The Golden Bough* by J. G. Frazer, p. 702

[2] So heartfelt was the veneration of the snakes, that the Dutchmen made it a means of clearing their warehouses of tiresome visitors : *Primitive Culture*, vol. II by E. B. Tylor, p. 233-234.

ಪುರಾಣೇತಿಹಾಸ ಕಾವ್ಯಗಳಲ್ಲಿ ಸರ್ಪ ನಾನಾ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸಿಂಧೂ ನದಿಯ ದಡಗಳ ಮೇಲೆ ಮುದುಕಿಯೊಬ್ಬಳನ್ನು ಜೀವಂತವಾಗಿ ಹೂಳುವ ಮೂಲಕ ಸರ್ಪ ವಂಶವನ್ನು ತೃಪ್ತಿಪಡಿಸುತ್ತಿದ್ದ ಸಂಗತಿಯನ್ನು ಪ್ಲೂಟಾರ್ಕ್ ವಿವರಿಸಿದ್ದಾನೆ. ಕದ್ರುವಿನತೆಯರ ಕತೆಯಲ್ಲಿ, ನಹುಷನ ಜೀವನದಲ್ಲಿ, ಖಾಂಡವದಹನ ಪ್ರಕರಣದಲ್ಲಿ, ಜನಮೇಜಯರಾಯನ ಯಾಗ ಸಂದರ್ಭದಲ್ಲಿ, ಜಾತಕ ಕಥೆ ಕಥಾಸರಿತ್ಸಾಗರ ಪಂಚತಂತ್ರಗಳಲ್ಲಿ, ಕಾಳಿಂಗಮರ್ದನ ಪ್ರಕರಣದಲ್ಲಿ, ಎಲ್ಲೆಡೆಯೂ ನಾಗಪ್ಪನ ಆರ್ಭಟವೇ ಆರ್ಭಟ. ಅದು ಬಾಯಿಂದ ಬೆಂಕಿ ಉಗುಳಿದರೆ ಶತ್ರುಗಳು ಉರಿದು ಹೋಗುತ್ತಾರೆ, ಕಾಡುಗಳು ಸುಟ್ಟು ಹೋಗುತ್ತವೆ; ಅದರ ವಿಷ ಜ್ವಾಲೆಗೆ ಭೂಲೋಕವೇ ಬೆಂದು ಹೋಗುತ್ತದೆ; ಮನುಷ್ಯನನ್ನು ಕೊಲ್ಲುವ ಮತ್ತು ಬದುಕಿಸುವ ಶಕ್ತಿ ಅದಕ್ಕಿದೆ: ಅದು ಗಾಳಿಯಲ್ಲಿ ಹಾರಬಲ್ಲುದು; ಅದು ಮಾನವನ ರೂಪ ಪಡೆಯಬಲ್ಲುದು; ಅದು ಹಸುವಿನ ಮೊಲೆಯಿಂದ ಹಾಲು ಕುಡಿಯುತ್ತದೆ; ಇತ್ಯಾದಿಯಾದ ಸಂಗತಿಗಳು ಜಾನಪದದಲ್ಲಿ ವಿಪುಲವಾಗಿ ದೊರೆಯುತ್ತವೆ. ಹಾವಿನ ಚರ್ಮವನ್ನು ತಲೆಗೆ ಸುತ್ತಿಕೊಂಡರೆ ಎಂದೆಂದಿಗೂ ತಲೆ ನೋವು ಬರುವುದಿಲ್ಲವೆಂಬುದು, ಮದುವೆಯತಂಡ ಚರ್ಚಿಗೆ ಹೋಗುವ ದಾರಿಯಲ್ಲಿ ಹಾವು ಅಡ್ಡವಾದರೆ ವಿವಾಹ ಜೀವನ ಸುಖಕರವಾಗಿರುವುದಿಲ್ಲವೆಂಬುದು, ತುಂಡು ತುಂಡು ಮಾಡಿದರೂ ಸೂರ್ಯ ಮುಳುಗುವತನಕ ಹಾವು ಸಾಯುವುದಿಲ್ಲವೆಂಬುದು ಆಂಗ್ಲರ ತಿಳಿವಳಿಕೆ.[1] ಕೆಲವರು ಹಾವನ್ನು ಅದರ ನಿಜವಾದ ಹೆಸರಿಂದ ಕರೆಯುವುದಿಲ್ಲ. ಮಾವ, ಹಗ್ಗ, ಸತ್ತೆ, ಸವಲಿ ಎಂದು ಒಂದೊಂದು ಕಡೆ ಒಂದೊಂದು ವಿಧವಾಗಿ ಕರೆಯುತ್ತಾರೆ. ಹಾವು ಕಚ್ಚಿದಾಗ ಸತ್ತೆ ಮುಟ್ಟಿತೆಂದೋ, ಹಗ್ಗ ಮುಟ್ಟಿತೆಂದೋ ಹೇಳುತ್ತಾರೆ.

ಹಾವು ಗರುಡನಿಗೆ ಮಣಿಯುತ್ತದೆಂದು ಪ್ರತೀತಿಯುಂಟು. ಅದು ಬರಿಯ ಪ್ರತೀತಿಯಲ್ಲ, ವಾಸ್ತವವೂ ಅಹುದು. ಗರುಡ ಸರ್ಪ-ಭಕ್ಷಕ ಪಕ್ಷಿ. ಹಸ್ತದಲ್ಲಿ ಗರುಡರೇಖೆಯಿದ್ದವರ ಬಳಿ ಹಾವು ಸುಳಿಯುವುದಿಲ್ಲವಂತೆ. ಅಷ್ಟೇ ಅಲ್ಲ, ಅಂಥವರು ಹಸ್ತ ತೋರಿದರೆ ಅದು ಹೆಡೆಯೆತ್ತದೆ ಹಾಗೆಯೇ ನೆಲದ ಮೇಲೆ ಬಿದ್ದಿರುತ್ತದಂತೆ. ಅವನ್ನು ಹಿಡಿದು ಪಳಗಿಸುವ ವ್ಯಕ್ತಿಗೆ ಗಾರುಡಿಗ ಎಂದು ಹೆಸರು. ಗರುಡಮಂತ್ರ ಹೇಳುವವನು ಗಾರುಡಿಗ: ಮಂತ್ರಮಾಟಗಳಿಂದ ಅವನ್ನೊಲಿಸಿಕೊಳ್ಳುವವನೂ ಗಾರುಡಿಗನೇ. ಸಂಗೀತಕ್ಕೆ ಹಾವು ಮರುಳಾಗುತ್ತದಂತೆ. ಪುಂಗಿ ಊದುವುದರ ಮೂಲಕ ಗಾರುಡಿಗ ಅವನ್ನು ಬೇಕಾದ ಹಾಗೆ ಕುಣಿಸುತ್ತಾನೆ. ಹಾವು ಕಚ್ಚಿದಾಗ ಮಂತ್ರದ ಮೂಲಕ ವಿಷವಿಳಿಸುವ ಪರಿಪಾಠವೂ ಹಲವಾರು ಕಡೆ ಉಂಟು.

ನಾಗಪೂಜೆ ಇಂದಿಗೂ ಪ್ರಪಂಚದಲ್ಲಿ ಹಲವು ಕಡೆ ಆಚರಣೆಯಲ್ಲಿದೆ: ಭಾರತದಲ್ಲಂತು ಸಾರ್ವತ್ರಿಕವಾಗಿ ರೂಢಿಯಲ್ಲಿದೆ. ಯಾವ ಊರಿಗೆ ಹೋದರೂ ಅರಳಿಯ ಮರದ ಕೆಳಗೋ ಬೇವಿನಮರದ ಕೆಳಗೋ ನಾಗರಕಟ್ಟೆಗಳನ್ನು ಕಾಣಬಹುದು. ದೇವಾಲಯಗಳಲ್ಲಂತು ಸರ್ಪಶಿಲೆಗಳು ಇದ್ದೇ ಇರುತ್ತವೆ. ನಾಗರಪಂಚಮಿ ಮತ್ತು ಗಣೇಶನ ಹಬ್ಬ

1 *Encyclopaedia of Superstitions* by E. and M. A. Radford, p. 221.

ಗಳಲ್ಲಿ ಸರ್ಪದೇವತೆಯನ್ನು ವಿಶೇಷವಾಗಿ ಪೂಜಿಸುತ್ತಾರೆ, ತನಿಯೆರೆಯುತ್ತಾರೆ. ನೇಪಾಳದಲ್ಲಿ ಗರುಡನಾಗರ ನಡುವೆ ನಡೆದ ಯುದ್ಧದ ವಾರ್ಷಿಕೋತ್ಸವವನ್ನು ಆಚರಿಸುತ್ತಾರಂತೆ. ಕಾಂಗ್ರಾದಲ್ಲಿ ದೀಪಾವಳಿ ಹಬ್ಬದ ನಂತರ ಹಾವುಗಳ ಬೀಳ್ಕೊಡಿಗೆಗಾಗಿಯೇ ಒಂದು ಹಬ್ಬ ಮಾಡುವುದುಂಟು. ಆಗ ಸಗಣಿಯಿಂದ ಮಾಡಿದ ನಾಗಪ್ರತಿಮೆಯನ್ನು ಪೂಜಿಸುತ್ತಾರೆ. ಆ ಹಬ್ಬದನಂತರ ಹಾವೇನಾದರೂ ಕಣ್ಣಿಗೆ ಕಾಣಿಸಿಕೊಂಡದ್ದಾದರೆ, ಅದು ಕೃತಘ್ನಪ್ರಾಣಿಯೆಂದು ತಿಳಿದು ಕೊಂದುಹಾಕುತ್ತಾರೆ. ತಾವು ವಾಸುಕಿಯ ವಂಶಸ್ಥರೆಂದು ಅಗರವಾಲ ಬನಿಯಾ ಜನ ಹೇಳಿಕೊಳ್ಳುತ್ತಾರೆ. ವಾಸುಕಿಯ ಗುರುವಾದ ಆಸ್ತಿಕ ಮುನಿಯ ಗೌರವಾರ್ಥವಾಗಿ ಅವರು ವರ್ಷಕ್ಕೊಮ್ಮೆ ಹಬ್ಬ ಮಾಡುತ್ತಾರೆ. ಸ್ನಾನ ಮಾಡಿ, ಮಡಿಯುಟ್ಟು, ಮನೆಯ ಗೋಡೆಗಳ ಮೇಲೆ ಹಾವನ್ನು ಪ್ರತಿಬಿಂಬಿಸುವ ರೇಖೆಗಳನ್ನು ಬರೆದು, ಪೂಜಿಸುತ್ತಾರೆ; ಆರತಿ ಬೆಳಗುತ್ತಾರೆ. ಮಕ್ಕಳಿಲ್ಲದಿರುವವರು ನಾಗಪ್ರತಿಷ್ಠೆ ಮಾಡಿಸುವುದುಂಟು. ವಿದುರಾಶ್ವತ್ಥದಲ್ಲಿರುವ ಅಶ್ವತ್ಥನಾರಾಯಣ ದೇವಾಲಯದ ಮುಂದಿರುವ ನಾಗಾಶಿಲಾ ಸಮುದಾಯವನ್ನು ನೋಡಿದಾಗ ಈ ಬಗೆಗಿರುವ ಜನರ ನಂಬಿಕೆಯ ತೀವ್ರತೆ ವ್ಯಕ್ತವಾಗುತ್ತದೆ. 'ಯಾವ ಹುತ್ತದಲ್ಲಿ ಎಂಥ ಹಾವಿದೆಯೋ' ಎಂಬ ಗಾದೆಯುಂಟು. ಅಂದರೆ ಹಾವಿಲ್ಲದ ಹುತ್ತವಿಲ್ಲ ಎಂದಾಗುತ್ತದೆ. ನಾಗರಪಂಚಮಿಯಂದು, ಹಾಗೂ ಇತರ ಹಬ್ಬಗಳಲ್ಲಿ ಹಾವು ಕುಡಿಯಲೆಂದು, ಅದಕ್ಕೆ ತೃಪ್ತಿಯಾಗಲೆಂದು ಹುತ್ತಕ್ಕೆ ಹಾಲೆರೆಯುವುದುಂಟು.

ಸೇತುಬಂಧನ ಸಮಯದಲ್ಲಿ ಶ್ರೀರಾಮನಿಗೆ ಸಹಾಯನೀಡಿದ ಕಾರಣಕ್ಕಾಗಿ ಅಳಿಲು, ಗಣೇಶನ ವಾಹನವೆಂದು ಇಲಿ, ಪಿತೃಗಳಿಗೆಂದು ನಿವೇದಿಸಿದ ಪಿಂಡವನ್ನು ಅವರ ಪರವಾಗಿ ತಿನ್ನುವುದರಿಂದ ಕಾಗೆ, ಪಾಶ್ಚಾತ್ಯರಲ್ಲಿ ಪ್ರವಾದಿ ಪಕ್ಷಿ ಎಂಬ ಭಾರತೀಯರಲ್ಲಿ ಅಧ್ಯಾತ್ಮಸಿದ್ಧಿಗೆ ಪ್ರತೀಕವೆನ್ನುವ ಕಾರಣದಿಂದ ಹಂಸ, ಮಧುರವಾದ ಕಂಠದಿಂದ ಕೋಗಿಲೆ, ಮನುಷ್ಯನಂತೆ ಮಾತಾಡಬಲ್ಲುದಾದ್ದರಿಂದ ಗಿಣಿ, ಕಲೆಯ ನಿಧಿಯಾಗಿ ಸರಸ್ವತಿಯ ಮತ್ತು ಷಣ್ಮುಖನ ವಾಹನವಾದ್ದರಿಂದ ನವಿಲು, ವಿಷ್ಣುವಿನ ವಾಹನವಾದ್ದರಿಂದ ಗರುಡ, ಹೀಗೆ ನಾನಾ ಮೃಗಪಕ್ಷಿಗಳು ಮಾನವನ ಗೌರವಕ್ಕೆ ಪಾತ್ರವಾಗಿವೆ; ಅಂತೆಯೇ ಅವುಗಳ ಸುತ್ತ ಹಲವಾರು ನಂಬಿಕೆಗಳೂ ಬೆಳೆದಿವೆ. ಚರಾಚರವಸ್ತುಗಳಿಗೂ ಮಾನವನಿಗೂ ನಿಕಟವಾದ ಸಂಬಂಧವುಂಟು. ಮಾನವ ವಿಶ್ವಕುಟುಂಬಿ, ವಿಶ್ವಭ್ರಾತೃತ್ವ ಅವನ ಧರ್ಮದ ರಹಸ್ಯ. ಸುತ್ತಮುತ್ತಣ ನಿಸರ್ಗ ಹಾಗೂ ಪ್ರಾಣಿವರ್ಗದೊಡನೆ ಪ್ರೇಮ ಸ್ನೇಹಗಳನ್ನು ಬೆಳೆಸಿಕೊಂಡಾಗ ಮಾತ್ರ ಅವನ ಕ್ಷೇಮ ಕಲ್ಯಾಣಗಳು ಸಾಧ್ಯ ಎಂಬ ತತ್ವಗಳು ಮೇಲಿನ ನಿದರ್ಶನಗಳಿಂದ ಹೊರಹೊಮ್ಮುತ್ತವೆ. ವಿಷ್ಣು ಮತ್ಸ್ಯ ಕೂರ್ಮವರಾಹಾದಿ ಅವತಾರಗಳನ್ನೆತ್ತಿದನೆನ್ನುವಲ್ಲಿ ವಿಕಾಸವಾದ ಆಧ್ಯಾತ್ಮಿಕ ತತ್ವಗಳೆರಡೂ ಸಮ್ಮಿಲನಗೊಂಡಿವೆ. ಬ್ರಹ್ಮಸೃಷ್ಟಿಯ ಪ್ರಾಣಿಗಳಿಂದ ತೃಪ್ತನಾಗದೆ ಮಾನವ ಶರಭ ಗಂಡಭೇರುಂಡ ಆದಿಶೇಷ ಮೊದಲಾದ ಪ್ರಾಣಿಗಳನ್ನು ಸೃಷ್ಟಿಸಿಕೊಂಡು ಅವುಗಳಿಗೆ ನಾನಾ ರೀತಿಯಲ್ಲಿ ಗೌರವ ಸಲ್ಲಿಸುವುದುಂಟು.

ಗಿಡಮರಗಳಲ್ಲಿ ಆತ್ಮವಿರುವಂತೆ ಪ್ರಾಣಿಗಳಲ್ಲಿಯೂ ಇದೆ. ಅವು ಸತ್ತನಂತರ ತಮಗೆ ತೊಂದರೆಯುಂಟುಮಾಡಬಾರದೆಂಬ ಭಾವನೆ ಹಾಗೂ ಅವುಗಳ ಬಗೆಗಿನ ಭಯ ಪ್ರಾಣಿ ಪೂಜೆಗೆ ಕಾರಣವಾಗಿರಬೇಕೆಂಬ ಸಂಗತಿ ಸ್ಪಷ್ಟವಾಗುತ್ತದೆ. ಅವುಗಳನ್ನು ತೃಪ್ತಿಪಡಿಸುವ ಸಲುವಾಗಿ ನೈವೇದ್ಯ ನೀಡುತ್ತಾರೆ. ಐನೋ ಜನ (Ainos) ಕರಡಿಯನ್ನು ಕೊಲ್ಲುವಾಗ ಉದ್ಗಾರ ನಮಸ್ಕಾರಗಳ ಮೂಲಕ ಗೌರವ ಸಲ್ಲಿಸುವುದಲ್ಲದೆ, ತಮಗೇನೂ ನಷ್ಟವಾಗದಿರಲೆಂಬ ಆತುರದಿಂದ ಅದರ ತಲೆಯನ್ನು ಮನೆಯ ಹೊರಗಡೆ ಗೋಡೆಗೆ ನೇತು ಹಾಕುತ್ತಾರೆ. ಕೆಲವು ಪ್ರಾಣಿ ಅಥವಾ ಪಕ್ಷಿಗಳು ದೇವರ ಅವತಾರವೆಂದೇ ಎಣಿಕೆಯಾಗಬಹುದು. ಉದಾಹರಣೆಗೆ ಗರುಡ. ಗಿಡಗ, ಕೋಳಿ, ಹಾವು ಮೀನು ಮೊದಲಾದುವು ತಾವು ಪೂಜಿಸುವ ದೇವತೆಗಳ ಮಂದಿರಗಳೆಂದು ಫಿಜಿ ದ್ವೀಪದ ಜನ ಪರಿಭಾವಿಸಿದ್ದರು.[1] ಅಂಥ ಪ್ರಾಣಿಗಳನ್ನವರು ತಿನ್ನುವುದಿಲ್ಲ. ಸತ್ತ ಜನರ ಆತ್ಮ ಹುಲಿಗಳ ದೇಹವನ್ನು ಹೊಕ್ಕಿವೆಯೆಂಬ ಕಾರಣದಿಂದ ಸುಮಾತ್ರಾದ ಮಲೆಯ ಜನ, ಅದನ್ನು ಹಿಡಿಯಲು ಬೋನೊಡ್ಡಿದಾಗ ಅವರ ಕ್ಷಮೆ ಯಾಚಿಸುತ್ತಾರೆ. ಪ್ರಾಣಿಗಳನ್ನು ಕುಲಚಿಹ್ನೆಗಳೆಂದು ಸ್ವೀಕರಿಸುವ ಮೂಲಕವೂ ಕೆಲವರು ಅವುಗಳಿಗೆ ಗೌರವ ಸಲ್ಲಿಸುತ್ತಾರೆ. ಮಾನವನ ಜ್ಞಾನ ವಿಕಾಸಗೊಂಡಂತೆ ಅವು ಪ್ರತೀಕ, ಪ್ರತಿಮೆ, ಸಂಕೇತಗಳಾಗಿ, ನಾಗರಿಕತೆಯ ಇತಿಹಾಸದಲ್ಲಿ ಅಮರವಾದ ಸ್ಥಾನವನ್ನು ಪಡೆಯುತ್ತವೆ.

---

1 *Primitive Culture*, Vol. II, by E. B. Tylor, p. 232.

ದೇಜಗೌ ಕೃತಿಗಳು

ಆಫ್ರಿಕಾ ಯಾತ್ರೆ
ಆಲ್‌ಬರ್ಟ್ ಐನ್‌ಸ್ಟೀನ್
ಋಷಿಕವಿ ರವೀಂದ್ರರು
ಕಡುಗಲಿ ಕುಮಾರರಾಮ
ಕನ್ನಡನಾಡಿನ ಕಲಿ
ಕನ್ನಡಿಗರೇ ಎಚ್ಚರಗೊಳ್ಳಿ
ಕುಮಾರವ್ಯಾಸ-ಒಂದು ಸಾಂಸ್ಕೃತಿಕ ಅಧ್ಯಯನ
ಕುಲಪತಿಯ ದಿನಚರಿ ೧
ಕುಲಪತಿಯ ಪತ್ರಗಳು ೧
ಕುಲಪತಿಯ ಭಾಷಣಗಳು ೧-೬
ಕುವೆಂಪು ದರ್ಶನ ಮತ್ತು ಸಂದೇಶ
ಕುವೆಂಪು ಸಾಹಿತ್ಯ-ಕೆಲವು ಅಧ್ಯಯನಗಳು
ಗೋಪಾಲಕೃಷ್ಣ ಗೋಖಲೆ
ಜಾನಪದ ಅಧ್ಯಯನ
ತೀನಂಶ್ರೀ
ನಮ್ಮ ನೆಹರು
ನಂಜುಂಡ ಕವಿ
ನೂರೆಂಟು ಪುಸ್ತಕಗಳು
ಪ್ರವಾಸಿಯ ದಿನಚರಿ
ಬೆಂಗಳೂರು ಕೆಂಪೇಗೌಡ
ಬೆರಕೆಸೊಪ್ಪು
ಮುನ್ನುಡಿಗಳು ೧
ಮೇಡಂಕ್ಯೂರಿ
ಮೋತಿಲಾಲ್ ನೆಹರೂ
ಮೋತಿಲಾಲ್ ನೆಹರೂ (ವಯಸ್ಕರಿಗಾಗಿ)
ರಾಷ್ಟ್ರಕವಿ ಕುವೆಂಪು
ವಿದ್ಯಾಪೀಠಗಳು
ವಿದೇಶದಲ್ಲಿ ನಾಲ್ಕು ವಾರ
ವಿಷವೃಕ್ಷ ನಾಟಕ
ಶ್ರೀರಾಮಾಯಣದರ್ಶನಂ ವಚನ ಚಂದ್ರಿಕೆ
ಷಡಕ್ಷರದೇವ
ಸರ್ವಜ್ಞ ಕವಿ
ಸಾಹಿತಿಗಳ ಸಂಗದಲ್ಲಿ
ಸಾಹಿತ್ಯಮಾರ್ಗ-೧
ಹೋರಾಟದ ಬದುಕು

ಅನುವಾದಗಳು :
ಅಕ್ಬರ್
ಗುರುನಾನಕ್
ನೆನಪು ಕಹಿಯಲ್ಲ
ಪುನರುತ್ಥಾನ
ಹಮ್ಮು-ಬಿಮ್ಮು
ಭಾರತದ ಜಾನಪದ ಕಥೆಗಳು

ಸಂಪಾದಿತ :
ಕಬ್ಬಿಗರಕಾವಂ
ಕವಿದರ್ಶನ
ಜೈಮಿನಿ ಭಾರತ ಸಂಗ್ರಹ
ಧರ್ಮಾಮೃತ ಸಂಗ್ರಹ
ನಳಚರಿತ್ರೆ
ಪುಣ್ಯಾಸ್ರವ ಚಂಪೂ
ರಾಮಧಾನ್ಯ ಚರಿತ್ರೆ
ರಾಷ್ಟ್ರಕವಿ ಭಾಷಣಗಳು
ಶ್ರೀರಾಮಾಯಣದರ್ಶನಂ ಉಪನ್ಯಾಸಮಾಲೆ
ಹೊಸಗನ್ನಡ ಕಥಾಸಂಗ್ರಹ

ಇತರರೊಡನೆ :
ಅಜಿತತೀರ್ಥಂಕರ ಪುರಾಣತಿಲಕಂ
ಗಿರಿಜಾಕಲ್ಯಾಣ ಮಹಾಪ್ರಬಂಧಂ
ಲೀಲಾವತಿ ಪ್ರಬಂಧಂ
ಸಾಹಿತ್ಯಾರಾಧನೆ

ಬರಲಿವೆ :
ಕನ್ನಡ ಗದ್ಯಶೈಲಿ
ಕುವೆಂಪು ಅವರ ಶಿಕ್ಷಣ ತತ್ತ್ವವಿಚಾರಗಳು
ಜನಪದ ಗೀತಾಂಜಲಿ
ಜಾನಪದ ಸೌಂದರ್ಯ
ಭಾಷಾಂತರ ಕಲೆ
ರುಕ್ಮಾಂಗದಚರಿತೆ

ಇಂಗ್ಲಿಷಿನಲ್ಲಿ

Culture, Education and Society
Oxford Picture Dictionary (with shashikala)



ಡಾ|| ದೇ. ಜವರೇಗೌಡ ಅವರ 'ಜಾನಪದ ಅಧ್ಯಯನ'

ಪ್ರಾಯಶಃ ಜಾನಪದದಷ್ಟು ವಿಶಾಲವೂ, ವ್ಯಾಪಕವೂ, ಸರ್ವಾತ್ಮಕವೂ ಆದ ಮತ್ತೊಂದು ಪದವಿಲ್ಲವೆಂದು ತೋರುತ್ತದೆ.... ಆಧುನಿಕ ಮಾನವನ ಮೂಲಪುರುಷನನ್ನು ಹಿಂದು ಹಿಂದಕ್ಕೆ ಹುಡುಕಿಕೊಂಡು ಹೋದದ್ದಾದರೆ, ಕೊನೆಗೆ ದೃಷ್ಟಿಗೋಚರನಾಗುವವನು ಆದಿಮಾನವ. ಅಂತೆಯೆ ವೈಜ್ಞಾನಿಕ ನಾಗರಿಕತೆಯ ಹಾಗೂ ಅರ್ವಾಚೀನ ಕಲೆಗಳ ತಾಯಿಬೇರುಗಳನ್ನು ಪ್ರಾಚೀನ ಜಾನಪದದಲ್ಲಿ ಗುರುತಿಸಬಹುದು.... ಜೀರ್ಣಗೊಂಡ ವೃಕ್ಷ ಮಣ್ಣುಪಾಲಾದರೂ, ಹೂವು ದೂಳಿನಲ್ಲಿ ದೂಳಾದರೂ ಅದರ ಬೀಜದಿಂದಲೇ ಮುಂದಿನ ಪೀಳಿಗೆ ಅಭಿವೃದ್ಧಿ ಹೊಂದಬೇಕಾಗಿದೆ. ಆದ್ದರಿಂದ ಜಾನಪದ ಶಿಷ್ಟಪದಗಳೆರಡಕ್ಕೂ ಸಮಾನ ಸ್ಥಾನಮಾನಗಳು ಸಲ್ಲಬೇಕಾಗುತ್ತದೆ.... ಜಾನಪದ ಕಲೆಯಿಂದ ಪಿಕಾಸೋ ಅಂಥವರು, ಜಾನಪದ ಕಥೆಗಳಿಂದ ಪುಷ್ಕಿನ್ ಅಂಥವರು ಸ್ಫೂರ್ತಿ ಪಡೆಯುವುದಲ್ಲದೆ, ಅವುಗಳಿಗೆ ಹೊಸರೂಪ ಕಲ್ಪಿಸಬಹುದು.

ತಾಯಿ ತೊಟ್ಟಿಲು ತೂಗುತ್ತ, ಗರತಿ ರಾಗಿ ಬೀಸುತ್ತ, ರಸಿಕ ಗಾಡಿ ಹೊಡೆಯುತ್ತ, ಗಂಡುಹೆಣ್ಣುಗಳು ನಾಟಿ ಹಾಕುತ್ತ, ಸ್ತ್ರೀಯರು ರಾಟೆ ತಿರುಗಿಸುತ್ತ, ಮಕ್ಕಳು ಕುಣಿಯುತ್ತ ಹಾಡುವುದೆಲ್ಲ ಜನಪದಗೀತೆಯಾಗುತ್ತದೆ. ಸಾಮಾನ್ಯಜನ ಚಳಿಗಾಲದಲ್ಲಿ ಬೆಂಕಿಯ ಸುತ್ತ ಕುಳಿತು, ಬೇಸಗೆಯ ಬೆಳುದಿಂಗಳಲ್ಲಿ ಬೀದಿಯ ಪಡಸಾಲೆಗಳ ಮೇಲೆ ನೆರೆದು, ಹಬ್ಬಹರಿದಿನ ಮದುವೆಗಳಲ್ಲಿ ಒಂದೆಡೆ ಕಲೆತು ಹರಟೆ ಹೊಡೆಯುವಾಗ, ಅಂತೆಯೇ ಉತ್ಸಾಹದ ಭರದಲ್ಲಿ ಕುಣಿಯುವಾಗ ಕತೆಗಳ ಲಹರಿ ಉಕ್ಕುತ್ತದೆ; ಗಾದೆಗಳು ಒಗಟುಗಳು ಹೊರಸೂಸುತ್ತವೆ....

ಸಾಹಿತ್ಯಕಲೆಗಳಿಗೂ ಜಾನಪದಕ್ಕೂ ಇರುವ ಸಂಬಂಧ ಅತ್ಯಂತ ಗಾಢವಾದದ್ದು; ಅಷ್ಟೇ ಅಲ್ಲ; ಜಾನಪದ ಸಾಹಿತ್ಯಕ್ಕೂ ಶಿಷ್ಟಸಾಹಿತ್ಯಕ್ಕೂ ನಡುವೆ ಹೊಕ್ಕುಳಬಳ್ಳಿ ನಂಟಿದೆಯೆಂಬ ಸಿದ್ಧಾಂತವನ್ನು ಹೊಸದಾಗಿ ಸ್ಥಾಪಿಸಬೇಕಾಗಿಲ್ಲ.... ಯಾವ ಸಾಹಿತ್ಯಕೃತಿಯನ್ನು ಬಿಚ್ಚಿದರೂ ಅಲ್ಲಿ ಜಾನಪದೀಯಾಂಶಗಳು ಅಲ್ಲಲ್ಲೆ ಮಿನುಗುವುದನ್ನು ಗಮನಿಸಬಹುದು. ಶಿಷ್ಟಸಾಹಿತ್ಯದಲ್ಲಿ ಕಾಣೆಯಾದ ಸಾಹಿತ್ಯದ ಕೆಲವು ಮುಖಗಳನ್ನು ಜಾನಪದದಲ್ಲಿ ಕಾಣಬಹುದಾಗಿದೆ. ಆದ್ದರಿಂದ ಅವೆರಡೂ ಪರಸ್ಪರ ಪೂರಕವೆಂದು ಧಾರಾಳವಾಗಿ ಹೇಳಬಹುದು.

ದೇಜಗೌ

ಪೀಠಿಕೆಯಿಂದ

ಡಿ. ವಿ. ಕ :: ಪ್ರಕಾಶಕರು :: ಮೈಸೂರು-೪

ಬೆಲೆ : ರೂ.